ಮೈಸೂರು ಸ್ಟಾರ್.

ಸೆ ೧೯೧೭ ನೆಯ ಇಸವಿ ಮೇ ತಾ|| ೧೩ ನೆಯ ಭಾನುವಾರ.

ಸಾಮಾಜಿಕ ಶಾಸನ.

ಭಾರತೀಯರಲ್ಲಿ ಮತಜಾತಿಗಳ ಪ್ರಯುಕ್ತವಾದ ಕಟ್ಟಲೆಗಳು ವಜ್ರಲೇಪದಂತೆ ಅಂಟಿಬಂದಿರುತ್ತವೆಯೆಂಬುದು ಜಗತ್ತಿಗೇ ಗೊತ್ತುಂಟು. ಈ ಕಟ್ಟಲೆಗಳಲ್ಲಿ ಹಲವು ಸಮಾಜಹಿತಕ್ಕೆ ಅತ್ಯಂತ ಸಾಧಕವಾಗಿದ್ದರೂ, ಕೆಲಕೆಲವು ಸಮಾಜಾಭ್ಯುದಯಕ್ಕೆ ವಿಘಾತಕಗಳಾಗಿಯೂ ಇಲ್ಲದಿಲ್ಲ. ಅಜ್ಞಜನಭೂಯಿಷ್ಠವಾಗಿರುವ ಈ ದೇಶದಲ್ಲಿ ಅವುಗಳ ಸಾಧಕಬಾಧಕಗಳನ್ನು ಕುರಿತು ವಿಚಾರಿಸಿ, ಕೆಟ್ಟುದನ್ನು ದೂರೀಕರಿಸಿ, ಹಿತವಾದುದನ್ನು ಅಂಗೀಕರಿಸುವವರು ಬಹಳ ವಿರಳ. ಸಮಾಜಸುಧಾರಣಬದ್ಧದೀಕ್ಷಿತರಾದ ದೇಶಭಕ್ತರಿಗೆ ಈ ಕಾರಣದಿಂದಲೇ ಬಿತ್ತಾಸೆಯು ಕಡಿಮೆಯಾಗಿರುವುದು. ಅವರು ತಮ್ಮ ಉದ್ದಿಷ್ಟವಾದ ದೇಶಹಿತದಸಾಧನೆಗೆ ಸರ್ಕಾರದಬೆಂಬಲವನ್ನು ಕೋರುತ್ತಿರುವರು. ಸಾಮ್ರಾಜ್ಯಪ್ರಭುತ್ವದವರಾದರೊ ವಿಧರ್ಮೀಯರಾದುದರಿಂದ ಮತವಿಷಯಗಳ ಪ್ರವೇಶಕ್ಕೆ ಅವರು ಅಷ್ಟಾಗಿ ಗಮನಕೊಡುವುದಿಲ್ಲ. ಸ್ವದೇಶೀಯ ಸಂಸ್ಥಾನಪ್ರಭುತ್ವದವರುಕೂಡ ಮತಜಾತಿ ವಿಷಯವು ದುರ್ಭೇದ್ಯವಾದುದೆಂದು ತಿಳಿದುಕೊಂಡು ಅದರ ಗೋಜಿಗೆ ಹೋಗಲು ಅವರೂ ಹಿಂದೆಗೆಯುತ್ತಾರೆ. ಆದರೆ ಬರೋಡಾ ಸಂಸ್ಥಾನದವರು ಮಾತ್ರ ದೇಶಹಿತಕ್ಕೆ ಸಾಧಕವೆಂದು ತೋರಿದ ಯಾವ ಸಾಮಾಜಿಕವಿಷಯದಲ್ಲೂ ಪ್ರವೇಶಿಸಿ, ಶಾಸನದಮೂಲಕ ಸುಧಾರಣೆಯನ್ನು ಮಾಡುವ ವಿಷಯದಲ್ಲಿ ಹಿಂದೆಗೆಯುವುದಿಲ್ಲ. ಇದಕ್ಕೆ ಮುಂಚೆಯೇ ಆ ಸಂಸ್ಥಾನದಲ್ಲಿ ಬಾಲ್ಯವಿವಾಹನಿರೋಧಕಶಾಸನವೂ, ಪೌರೋಹಿತ್ಯವಿಷಯಕವಾದ ಶಾಸನವೂ ಸಹ ಏರ್ಪಟ್ಟು ಅನುಕೂಲವಾದ ಫಲವನ್ನಿತ್ತಿರುವುವು. ಈಗ ಆ ಪ್ರಭುತ್ವದವರು ಇನ್ನಷ್ಟು ಮುಂದಕ್ಕೂ ಸಮಾಜಸುಧಾರಣವಿಷಯದಲ್ಲಿ ನುಗ್ಗಿ ಮತ್ತೊಂದು ಶಾಸನವನ್ನು ಏರ್ಪಡಿಸಿದ್ದಾರೆ.

ಇದು ಕೇವಲ ಮತಾಚಾರಕ್ಕೆ ಸಂಬಂಧಪಟ್ಟುದು. ಸಮಾಜಾಭ್ಯುದಯಕ್ಕೆ ವಿಘ್ನಕಾರಿಗಳಾಗಿದ್ದುಕೊಂಡು ನಿಷ್ಪ್ರಯೋಜಕಗಳಾಗಿ ಸಮಾಜಮಧ್ಯದಲ್ಲಿ ಬೇರುಬಿಟ್ಟುಕೊಂಡಿರುವ ಕೆಲವು ದುರಾಚರಣೆಗಳನ್ನು ಸಮಾಜದಿಂದ ತೊಲಗಿಸಿಬಿಟ್ಟರೆ ಪ್ರಜಾಭಿವೃದ್ಧಿಗೆ ಅನುಕೂಲವಾಗುವುದೆಂಬುದೇ ಈ ಶಾಸನನಿರ್ಮಾಣದ ಉದ್ದೇಶವಾಗಿರುತ್ತದೆ. ಇದರ ವಿವರವೆಂತೆಂದರೆ—

ಪೂರ್ವದಿಂದ ನಡೆದುಬಂದಿರುವ ಕಟ್ಟಲೆಗಳು ಈಗಣ ಆಚಾರ ಸಂಪ್ರದಾಯಗಳಿಗೆ ಅನುಪಯುಕ್ತವೆಂಬುದಾಗಿಯೂ ಅದರ ವಿಷಯದಲ್ಲಿ ಸುಧಾರಣೆಯು ಅವಶ್ಯಕವೆಂಬುದಾಗಿಯೂ ತೋರಿದಾಗ ನ್ಯಾಯಸ್ಥಾನದಲ್ಲಿ ಈ ನವೀನ ಶಾಸನದಪ್ರಕಾರ ವ್ಯಾಜ್ಯವನ್ನು ತರಬಹುದು. ವ್ಯಾಜ್ಯವನ್ನು ತರಬಹುದಾದ ಆ ಮತಾಚರಣೆಗಳು ೫ ಭಾಗಗಳಾಗಿ ಮಾಡಲ್ಪಟ್ಟಿವೆ. ಹೇಗೆಂದರೆ—೧ ನೆಯದು—ನೀತಿಗೂ ರಾಜ್ಯಾಂಗವಿಧಾನಕ್ಕೂ ಅನುಗುಣವಲ್ಲದೆ ಇರುವ ಆಚಾರ,—ಉದಾಹರಣೆ—(ಮನೆಯಲ್ಲಿಯಾರಾದರೂ ಸತ್ತರೆ ಕುಟುಂಬದವರೆಲ್ಲಾ ಎದೆಯನ್ನು ಕುಟ್ಟಿಕೊಂಡು ಗೋಳಾಡಬೇಕಾದ ಆಚಾರವು ಕೆಲವರಲ್ಲಿದೆ. ಇದಕ್ಕೆ ಮನೆ ಯಜಮಾನನು ಒಪ್ಪದೆಹೋದರೆ ಕುಲದ ಯಜಮಾನನು ದಂಡ ವಿಧಿಸುವನು.) ೨ ನೆಯದು—ಒಂದು ಜಾತಿಗೆ ಸೇರಿದವರು ಶಾಖಾಂತರದಲ್ಲಿ ವಿವಾಹಮಾಡಿಕೊಂಡರೆ ಅದಕ್ಕಾಗಿ ಬಹಿಷ್ಕಾರಾದಿಮೂಲಕ ಕುಲಗುರುವೋ ಮತ್ತೊಬ್ಬನೋ ನಿರ್ಬಂಧಪಡಿಸುವುದು. ೩ ನೆಯದು—ಹವ್ಯಕವ್ಯಗಳು ನಡೆದಾಗ ಆ ಮನೆಯವರು ಹೆಚ್ಚು ವೆಚ್ಚವನ್ನು ಮಾಡಿ ಸಂತರ್ಪಣೆ ಮೇಳ ಮೊದಲಾದುವುಗಳನ್ನು ನಡೆಯಿಸಲಿಲ್ಲವೆಂಬ ಕಾರಣದಿಂದ ಅವರನ್ನು ಕುಲದಿಂದ ದೂರಪಡಿಸುವುದು. ೪ ನೆಯದು—ವಿದೇಶ ಗಮನಮಾಡಿ ಬಂದವರಮೇಲೆ ಅರ್ಥದಂಡವನ್ನು ವಿಧಿಸಿ, ಅದನ್ನು ಅವರು ಕೊಡದಿದ್ದರೆ ಬಹಿಷ್ಕರಿಸುವುದು. ೫ ನೆಯದು—ಮದುವೆಗೆ ಆತುಬಂದ ವಯಸ್ಸಿನವಳಾಗಿದ್ದರೂ ಹೆಣ್ಣನ್ನು ಮದುವೆ ಮಾಡಿಕೊಡಲಿಲ್ಲವೆಂಬ ಕಾರಣದಿಂದ ಆ ಕನ್ಯೆಯ ಪೋಷಕರಿಗೆ ದಂಡ ಬಹಿಷ್ಕಾರ ಮೊದಲಾದುವುಗಳನ್ನು ವಿಧಿಸುವುದು. ಇವೆಲ್ಲಾ ಪ್ರಜಾಭ್ಯುದಯ ವಿಘಾತಕಗಳಾದ ಕೆಟ್ಟ ಕಟ್ಟಲೆಗಳೆಂದು ನಿರ್ಧರಿಸಿ, ಇಂಥ ೫ ಭಾಗಕ್ಕೆ ಸೇರುವ ತಪ್ಪಿತಗಳನ್ನು ಮಾಡಿದವರಮೇಲೆಲ್ಲಾ ದಂಡಾಧಿಕಾರಿಗಳಮುಂದೆ ವ್ಯಾಜ್ಯವನ್ನು ಹೂಡುವುದಕ್ಕೆ ಈ ಶಾಸನದಿಂದ ಅವಕಾಶವು ಕೊಡಲ್ಪಟ್ಟಿದೆ. ಇದರಂತೆ ಈ ತಿಂಗಳಿಂದಲೇ ವ್ಯವಹಾರವು ಆರಂಭಿಸಲ್ಪಡುತ್ತದೆ. ಈ ತಪ್ಪಿತಗಳಿಗಾಗಿ ೬ ತಿಂಗಳವರೆಗೆ ಕಾರಾಗೃಹವಾಸವೂ ಅರ್ಥದಂಡವೂ ಸಹ ವಿಧಿಸಲ್ಪಡುವುವು. ದಂಡಾಧಿಕಾರಿಯ ತೀರ್ಮಾನದಮೇಲೆ ೩೦ ದಿನಗಳೊಳಗಾಗಿ ಚೀಫ್ ಕೋರ್ಟಿನಲ್ಲಿ ಅಪ್ಪೀಲ್ ಮಾಡಿಕೊಳ್ಳಬಹುದು. ಕಟ್ಟಕಡೆಯ ತೀರ್ಮಾನದ ಪ್ರತಿಯು ಆಯಾ ಗ್ರಾಮಗಳ ಮುಖ್ಯಸ್ಥಲದಲ್ಲಿ ಎಲ್ಲರ ತಿಳುವಳಿಕೆಗಾಗಿ ಅಂಟಿಸಲ್ಪಡುವಂತೆ ಏರ್ಪಾಟುಮಾಡಿದ್ದಾರೆ.

ಹವ್ಯಕವ್ಯಗಳಲ್ಲಿ ದುಂದುವೆಚ್ಚವನ್ನು ತಪ್ಪಿಸಬೇಕು, ಸಮುದ್ರಯಾನಕ್ಕೆ ಪ್ರೋತ್ಸಾಹಿಸಬೇಕು ಎಂಬಿತ್ಯಾದಿಯಾದ ನಿರ್ಧಾರಗಳು ಸಮಾಜಸುಧಾರಕರ ಪ್ರತಿಯೊಂದು ಸಂಘಸಂಸ್ಕರಣಸಭೆಗಳಲ್ಲೂ ಮಾಡಲ್ಪಡುತ್ತಲಿವೆ. ಆದರೆ ಅವುಗಳ ಫಲವು ಮಾತ್ರ ವಿಶೇಷವಾಗಿ ಕಂಡುಬರುವುದಿಲ್ಲ. ಅವುಗಳನ್ನನುಮೋದಿಸುವ ನಾಗರಿಕ ಪ್ರಜೆಗಳಿಗೂಕೂಡ ಅಜ್ಞಸಮಾಜದ ನಿರ್ಬಂಧದಿಂದ ಅನುಷ್ಠಾನಕ್ಕೆ ಅವಕಾಶವಿಲ್ಲದೆಹೋಗುತ್ತದೆ. ಮೇಲಿಕಂಡ ಶಾಸನವು ಅಂಥ ನಿರ್ಬಂಧವನ್ನು ತೊಲಗಿಸುವುದಕ್ಕೆ ಪೂರ್ಣ ಸಹಾಯಕವಾದುದೆಂಬುದಕ್ಕೆ ಸಂಶಯವಿಲ್ಲ. ನಿರ್ಬಂಧಶೈಥಿಲ್ಯಕ್ಕೂ ಸ್ವಚ್ಛಂದಕ್ಕೂ ಎಡೆಗುಡುವ ಈ ಶಾಸನವು ಕೇವಲ ಪೂರ್ವಾಚಾರ ಪರಾಯಣರ ಮನಸ್ಸಿಗೆ ಬೇಸರನ್ನುಂಟುಮಾಡುವುದಾಗಿದ್ದರೂ, ಕಾಲದೇಶಸ್ಥಿತಿಗಳನ್ನೂ ಲೋಕಪ್ರಗತಿಯನ್ನೂ ಅರಿಯಬಲ್ಲ ಸುಧಾರಣಾಪ್ರಿಯರಿಗೆಲ್ಲಾ ಈ ಶಾಸನವು ಆಮೋದಪ್ರದವಾಗುವುದೆಂಬುದಕ್ಕೆ ಸಂಶಯವಿಲ್ಲ. ಹೊಸಹೊಸದರಲ್ಲಿ ಇಂಥ ವಿಧಿಗಳು ಭಾರವಾಗಿ ತೋರಿದರೂ, ದಿನಕ್ರಮೇಣ ಇವುಗಳ ಫಲವು ಪ್ರಜಾಸಾಮಾನ್ಯಕ್ಕೆ ವ್ಯಕ್ತವಾಗುತ್ತ ಬರುವಕಾರಣ, ಆಗೂ ಅವುಗಳ ಉತ್ಪಾದಕರೂ ಪ್ರಶಂಸಾ ಪಾತ್ರರಾಗುತ್ತಾರೆ.

ಸ್ವೀಕಾರ, ವಿಮರ್ಶೆ.

ಕನ್ನಡಕೋಗಿಲೆ—ಪ್ರತಿತಿಂಗಳೂ ಇದರ ಸಂಚಿಕೆಗಳು ತಪ್ಪದೆ ನಮ್ಮ ಕೈಸೇರಿರುವುವು. ಈ ನಮ್ಮ ಗಾನಕೋಗಿಲೆಯ ಕೂಜಿತಗಳು ವ್ಯಕ್ತಮಧುರಗಳು. ವಾಚನದಿಂದ ಆ ಬಾಲಭೂಪಾಲಪರ್ಯಂತರಾದ ನಾಡಿಗರನ್ನೆಲ್ಲಾ ಆನಂದಗೊಳಿಸುವಂಥ ಚಿತ್ತಾಕರ್ಷಕ ವಿಷಯಜಾಲದಿಂದ ಕೂಡಿ ಮಂಗಳೂರಿನಿಂದ ಇದು ಹೊರಡುತ್ತಿರುವುದು. ಇದರ ವರ್ಗಣಿ—ಅಂಚೆವೆಚ್ಚವಲ್ಲದೆ ೧|| ರೂ.

ಶುಭೋದಯ—ಇದು ಧಾರವಾಡದಿಂದ ಹೊಸದಾಗಿ ಹೊರಡುತ್ತಿರುವ ವಾರಪತ್ರಿಕೆ. ಇದರ ೨ ಸಂಚಿಕೆಗಳನ್ನು ನಾವು ಆದರದಿಂದ ಸ್ವೀಕರಿಸಿದೆವು. ಇದರ ಸಂಪಾದಕರು ಕರ್ನಾಟಕ ಭಾಷಾಸೇವಕರಿಗೆ ಪರಿಚಿತರಾದ ಮ|| ಕೆರೂರ ವಾಸುದೇವಾಚಾರ್ಯರು. ಆದುಕಾರಣ ಈ ವಾರಪತ್ರಿಕೆಯ ಲೇಖನಗಳ ಶೈಲಿಯನ್ನು ಕುರಿತು ವಿವರಿಸಬೇಕಾಗಿಲ್ಲ. ಇದರಲ್ಲಿ ವೃತ್ತಪತ್ರಿಕೆಗಳ ಮರ್ಯಾದೆಯನ್ನನುಸರಿಸಿ ಸರ್ವವಿಷಯಗಳನ್ನೂ ಮಾರ್ಮಿಕ ರೀತಿಯಿಂದ ಚರ್ಚಿಸುವ ಸಮರ್ಥವಾದ ಲೇಖನಗಳು ಬರುವುವು. ಪತ್ರದಾಕೃತಿಯು ದೊಡ್ಡದು. ಕಾಗದವೂ ಉತ್ತಮವಾದುದು. ಮುದ್ರಣವು ಹುಬ್ಬಳ್ಳಿಯ ಶ್ರೀಕೃಷ್ಣ ಮುದ್ರಾಲಯದುದು. ಆದುಕಾರಣ ಇದು ಸರ್ವಾಂಗಸುಂದರವಾಗಿದೆ. ಇದಕ್ಕೆ ಏರ್ಪಡಿಸಿರುವ ವಾರ್ಷಿಕ ವರ್ಗಣಿಯು ಅಂಚೆವೆಚ್ಚ ಸೇರಿ ೨-೧೪-೦ ದೇಶಬಾಂಧವರ ಪುರಸ್ಕಾರಕ್ಕೆ ಅರ್ಹವಾದ ಈ ನವೀನಬಂಧುವು ಚಿರಾಯುವಾಗಲೆಂದು ಕೋರುವೆವು.

ತುಮಕೂರು ವೃತ್ತಾಂತ—ಡಿಸ್ಟ್ರಿಕ್ಟುಗಳಲ್ಲೆಲ್ಲಾ ಒಂದೊಂದಾಗಿ ವೃತ್ತಪತ್ರಿಕೆಗಳು ನಮ್ಮ ಸಂಸ್ಥಾನದಲ್ಲಿ ಉದಯಗೊಳ್ಳುತ್ತಿರುವುದನ್ನು ನೋಡಿ ಸಂತೋಷಿಸುವೆವು. ಇದಕ್ಕೆಲ್ಲಾ ನಮ್ಮ ಸಂಪದಭ್ಯುದಯಸಮಾಜದ ಪ್ರೋದ್ಬಲವೇ ಬಲುಮಟ್ಟಿಗೆ ಕಾರಣವೆಂದು ತಿಳಿಯುತ್ತೇವೆ. ದೇಶದಲ್ಲಿ ವಿದ್ಯಾಪ್ರಸಾರವು ಹೆಚ್ಚುತ್ತಾ ಬಂದರೆ ತಾಲ್ಲೂಕಿಗೊಂದೊಂದರಂತೆ ವೃತ್ತಪತ್ರಿಕೆಗಳು ಪ್ರಕಟವಾಗುವುದು ಕೂಡ ಅರಿದಲ್ಲ. ಅಂಥ ಸ್ಥಿತಿಯು ಬೇಗನೆ ಬರಬೇಕು. ಈ ತುಮಕೂರುವೃತ್ತಾಂತದಲ್ಲಿ ರಾಜಕೀಯಾದಿ ವಿಷಯಗಳ ಪರ್ಯಾಲೋಚನ, ತಾತ್ಕಾಲಿಕ ಯುದ್ಧವಾರ್ತೆ, ಕೃಷಿವಾಣಿಜ್ಯಾದಿ ವಿಷಯಗಳು, ಆ ಡಿಸ್ಟ್ರಿಕ್ಟು ವಾರ್ತೆಗಳು—ಇವುಗಳೆಲ್ಲಾ ಸಮಂಜಸವಾಗಿ ಬರೆಯಲ್ಪಡುತ್ತಿರುವುವು. ಇದರ ವರ್ಗಣಿ—ಅಂಚೆವೆಚ್ಚ ಸೇರಿ ೧—೧೪—೦.

ಭಕ್ತಿಸಂದೇಶ—ಬೆಂಗಳೂರಿನಿಂದ ಹೊರಡುವ ಈ ಮಾಸಪತ್ರಿಕೆಯಲ್ಲಿ ಹೆಸರಿಗೆ ತಕ್ಕಂತೆ ಭಕ್ತಿಜ್ಞಾನವರ್ಧಕವಾದ ಉಪಯುಕ್ತ ಲೇಖನಗಳು ಬರೆಯಲ್ಪಡುತ್ತಿರುವುವು. ಆಸ್ತಿಕ್ಯವು ಮಸುಳಿಸಿಹೋಗುತ್ತಿರುವಕಾಲದಲ್ಲಿ ಇಂಥ ಪತ್ರಿಕಾಪ್ರಚಾರವು ಆವಶ್ಯಕವು. ಆದರೆ ಮೃಷ್ಟಾನ್ನದಲ್ಲಿ ಬೆರೆದಿರುವ ಶಿಲಾಕಣಗಳಂತಿರುವ ವಾಕ್ಯ ಶಬ್ದಾಕ್ಷರಾದಿ ದೋಷಗಳ ಪರಿಷ್ಕರಣದ ಕಡೆಗೆ ಕರ್ತರು ಗಮನಿಸಬೇಕು. ಇದರ ವರ್ಗಣಿ—ವಿದ್ಯಾರ್ಥಿಗಳಿಗೂ, ಉಪಾಧ್ಯಾಯರಿಗೂ ಸ್ತ್ರೀಯರಿಗೂ ೧|| ರೂ. ಇತರರಿಗೆಲ್ಲಾ ೨ ರೂ.

ಒಳದೇಶದ ವೃತ್ತಾಂತಗಳು.

ನಂಜನಗೂಡಿನಲ್ಲಿ ಕಾಲರಾ ರೋಗವು ಪ್ರಬಲಿಸುತ್ತಿದೆ. ಶ್ರೀರಂಗಪಟ್ಟಣದಲ್ಲೂ ಇದರ ವ್ಯಾಪನೆಯಾಗಿರುತ್ತದೆ.

ರೇಷ್ಮೆ ವ್ಯವಸಾಯದ ಡೈರೆಕ್ಟರಾದ ಮೆ|| ಸೀನರ್ ಮಾರಿಯವರು ಮೈಸೂರು ಸರ್ವಿಸ್ಸನ್ನು ಬಿಟ್ಟು ಹೋಗುವರು. ಸದ್ಯದಲ್ಲಿ ಮ|| ನವರತ್ನಂ ರಾಮರಾಯರು ಆ ಕೆಲಸವನ್ನು ನೋಡಿಕೊಳ್ಳುವರು.

ರಾಜಧಾನಿಯಲ್ಲಿ ಬಿಸಿಲಿನ ತಾಪವು ಅತ್ಯಧಿಕವಾಗಿದೆ. ಮಳೆಯ ಹೆಸರಿಲ್ಲ. ಇದುವರೆಗೆ ಹೊರಗಣಿಂದ ಕಾಲರಾ ತಗಲಿ ಬಂದು ಕೆಲವರು ಇಲ್ಲಿ ಸತ್ತರು. ಈಗ ಇಲ್ಲಿಯ ನಿವಾಸಿಗಳಿಗೇ ಇದು ಅಂಟಿ ಹೆಚ್ಚುತ್ತಿದೆ.

ಮ|| ಕಡಾಂಬಿ ಶ್ರೀನಿವಾಸಯ್ಯಂಗಾರ್ಯರವರು ನಮ್ಮ ಸಂಸ್ಥಾನದ ಇರ್ರಿಗೇಷನ್ ಚೀಫ್ ಇಂಜನಿಯರಾಗಿ ನೇಮಿಸಲ್ಪಟ್ಟಿರುವರು. ಶೀಘ್ರದಲ್ಲಿಯೇ ಅವರು ದಯಮಾಡಿಸಿ ಸದರಿ ಚೀಫ್ ಇಂಜನಿಯರ್ ಕೆಲಸದ ಭಾರ್ಜನ್ನು ತೆಗೆದುಕೊಳ್ಳುವರು.

ಮೈಸೂರು ವಿಶ್ವವಿದ್ಯಾಲಯದ ಸೆನೇಟ್‌ಮೀಟಿಂಗು ಈ ತಿಂಗಳು ತಾ|| ೧೯ ರಲ್ಲಿ ನಡೆಯುವುದಾಗಿದೆ. ಈ ವಿಶ್ವವಿದ್ಯಾಲಯದಲ್ಲಿ ಇಂಜನಿಯರಿಂಗು, ವೈದ್ಯ, ಇವೆರಡು ಶಾಖೆಗಳ ಕಲಾಶಾಲಾಸ್ಥಾಪನೆಗೆ ಸಂಬಂಧಪಟ್ಟ ಮುಖ್ಯವಿಷಯಗಳು ಈ ಮೀಟಿಂಗಿನಲ್ಲಿ ಚರ್ಚಿಸಲ್ಪಡುವುವು.

ಮ|| ಸಿ. ದೇವರಾಜೇ ಅರಸಿನವರು ಮಾಲೂರು ಸಬ್ ಡಿವಿಜನ್ನಿಂದ ದೊಡ್ಡಬಳ್ಳಾಪುರ ಸಬ್ ಡಿವಿಜನ್ನಿಗೂ; ಮೆ|| ಮೇಕ್ರಿಯವರು ಮಾಲೂರು ಸಬ್ ಡಿವಿಜನ್ನಿಗೂ; ಮ|| ಎಂ ವೆಂಕಟನಾರಣಪ್ಪನವರು ಕೋಲಾರ ಡಿಸ್ಟ್ರಿಕ್ಟು ಟ್ರೆಜರಿಗೂ; ಮ|| ಸದಾಶಿವರಾಯರು ಕ್ಲೋಸ್‌ಪೇಟೆ ಸಬ್‌ಡಿವಿಜನ್ನಿನಿಂದ ಮುಜರಾಯಿ ಇಲಾಖಾ ಅ|| ಸೆಕ್ರೆಟರಿಯ ಕೆಲಸಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಯುದ್ಧವ್ಯಯಕ್ಕೆ ಸಾಲವನ್ನು ಕೊಡುವ ವಿಷಯವಾಗಿ ಕಳೆದ ತಾ|| ೬ ನೆಯ ಸೋಮವಾರ ರಾಜಧಾನಿಯ ಟೌನ್‌ಹಾಲಿನಲ್ಲಿ ಸರಾರ್ ಲಕ್ಷ್ಮೀಕಾಂತರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಪುರಪ್ರಮುಖರ ಒಂದು ಸಭೆಗೂಡಿದ್ದಿತು. ಡಿ|| ಕಮಿಷನರಾದ ಮಿ|| ಕರ್ಬಿಯರ್ ಮೆಥಾನರೂ, ಸಭಾಧ್ಯಕ್ಷರೂ, ರಾ|| ಬ|| ಸಿ. ರಂಗಯ್ಯಂಗಾರರೂ, ಮ|| ಎಂ. ವೆಂಕಟಕೃಷ್ಣಯ್ಯನವರೂ, ಮೌಲ್ವಿ ದರ್ವೇಷ್‌ಪೀರ್‌ರವರೂ, ಮ|| ಅಣ್ಣಯ್ಯಪಂಡಿತರೂ, ರೆ|| ಎಚ್. ಸ್ಪೆನ್ಸರ್‌ರವರೂ, ಮೈಸೂರು ಬ್ಯಾಂಕ್ ಏಜಂಟರಾದ ಮ|| ಕೃಷ್ಣಯ್ಯಂಗಾರರೂ, ಮ|| ವರ್ಧಮಾನಯ್ಯನವರೂ ಸಹ ಈಗಣ ಮಹಾಯುದ್ಧದ ಸ್ಥಿತಿಗತಿ, ಇದಕ್ಕಾಗಿ ನಮ್ಮ ಸಾಮ್ರಾಜ್ಯಪ್ರಭುತ್ವದವರು ಪಡುತ್ತಿರುವ ನಷ್ಟಕಷ್ಟಗಳು, ಈ ಸಮಯದಲ್ಲಿ ಅವರಿಗೆ ಭರತಖಂಡದಿಂದ ೧೫೦ ಕೋಟಿ ರೂ. ಗಳನ್ನು ಸಾಲವಾಗಿ ಕೊಡಲು ನಮ್ಮ ಇಂಡ್ಯಾದೇಶವು ಮಾಡಿರುವ ವಾಗ್ದಾನ, ಲೋಕಶಾಂತಿ ಸ್ಥಾಪನೆ ಸತ್ಯನ್ಯಾಯರಕ್ಷಣೆಗಳಿಗಾಗಿ ಹೋರಾಡುತ್ತಿರುವ ಆಂಗ್ಲಪ್ರಭುತ್ವದವರಿಗೆ ಈ ಸಮಯದಲ್ಲಿ ಪ್ರತಿಯೊಬ್ಬ ಭಾರತೀಯನೂ ಯಥೋಚಿತವಾಗಿ ಸಹಾಯಮಾಡಬೇಕಾದ ಅವಶ್ಯಕತೆ, ಅದರಲ್ಲೂ ಈ ಯುದ್ಧವ್ಯಯಕ್ಕೆ ಸಾಲಕೊಡುವುದರಿಂದ ಸ್ವಾಮಿಕಾರ್ಯ ಸ್ವಕಾರ್ಯಗಳೆರಡೂ ಸಾಧಿಸಲ್ಪಡುವ ರೀತಿ—ಇವನ್ನೆಲ್ಲಾ ಕುರಿತು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಹಿಂದೂಸ್ತಾನಿಯಲ್ಲೂ ಉಪನ್ಯಾಸಮಾಡಲ್ಪಟ್ಟುವು. ಕಡೆಗೆ ಸಭೆಯಲ್ಲೇ ಸಾಲದ ಚಂದಾಪಟ್ಟಿಯೆತ್ತಿದಾಗ ೩೪೮೨೦೦ ರೂ. ಗಳವರೆಗೆ ಋಣಪತ್ರಗಳನ್ನು ಕೊಂಡುಕೊಳ್ಳಲು ಒಪ್ಪಿತವಾಯಿತು. ಇದರಲ್ಲಿ ೧ ಲಕ್ಷ ರೂ. ನದನ್ನು ಪ್ರಥಮ ರಾಜಕುಮಾರಿಯವರೂ, ೫೦ ಸಾವಿರ ರೂ. ನದನ್ನು ತೃತೀಯ ರಾಜಕುಮಾರಿಯವರೂ ಪಡೆಯಲು ಅನುಮತಿಸಿರುವರೆಂದು ಸಭಾಧ್ಯಕ್ಷರೇ ತಿಳಿಯಿಸಿದರು. ಉಳಿದ ವಿವರವೆಂತೆಂದರೆ—ಸಭಾಧ್ಯಕ್ಷರು ೫೦೦೦೦, ರೆ|| ಗಳಾದ ಜಿ. ಡಬ್ಲ್ಯು. ಸಾಡೆಯವರೂ, ಎಚ್. ಸ್ಪೆನ್ಸರ್‌ರವರೂ ಸಹ ಅವರ ಸ್ವಂತದ ಕೆಲ ಹಣದೊಡನೆ ಟ್ರಸ್ಟಿನ ಕೆಲ ಹಣವನ್ನು ಸೇರಿಸಿ ೬೯೦೦೦. ಮ|| ಗಳಾದ ವರ್ಧಮಾನಯ್ಯನವರು, ಸಾ|| ತಿಮ್ಮಯ್ಯನವರು, ಕಂಟ್ರಾಕ್ಟರ್ ಮುನಿವೆಂಕಟಪ್ಪನವರು, ಸಹ ತಲೆಗೆ ೧೦೦೦೦. ಮ|| ಎಚ್. ರಂಗಸ್ವಾಮಯ್ಯಂಗಾರರೂ, ಮಿ|| ಡೆನ್ಹಾಂರವರೂ ಸಹ ತಲೆಗೆ ೬೦೦೦, ಮ|| ಎಚ್. ನಂಜುಂಡರಾಜೆ ಅರಸಿನವರು ೫೦೦೦. ವಿನಾರ್, ಹಂಜಾಹುಸೇನ್‌ರವರೂ, ಮ|| ಅಣ್ಣಯ್ಯ ಪಂಡಿತರೂ, ಮ|| ವೈ. ಅಶ್ವತ್ಥನಾರಾಯಣರಾಯರೂ ಸಹ ತಲೆಗೆ ೪೦೦೦. ಮ|| ಬಿ. ಸುಬ್ಬಣ್ಣನವರೂ, ಮ|| ಬಾಪು ಸುಬ್ಬರಾಯರೂ ರಾ|| ಬ|| ಸಿ. ರಂಗಯ್ಯಂಗಾರರೂ ಸಹ ತಲೆಗೆ ೩೦೦೦. ಮ|| ಗಳಾದ ಡಿ|| ಬಸುಮಯ್ಯನವರು, ದಿನಚಂದ್ರಪಂಡಿತರು, ನಾಯಬ್ ನಾರಾಯಣರಾಯರು, ಎಚ್. ಎಸ್. ಲಕ್ಷ್ಮೀನರಸಪ್ಪನವರು, ಎಚ್.ಜಿ. ಆರ್ಡರ್‌ಟನ್‌ರವರು, ಬಿ.ಎಂ. ಶ್ರೀಕಂಠಯ್ಯನವರು, ಮನ್ನಾರ್ ಕೃಷ್ಣಶೆಟ್ಟರು, ರಿಜಮೆಂಟ್‌ದಾರ್ ಕೃಷ್ಣರಾಯರು, ಸಿಟಿ ಕೋಆಪರೇಟೀವ್ ಬ್ಯಾಂಕು-ಇವರೆಲ್ಲಾ ತಲೆಗೆ ೨೦೦೦. ಮ|| ಎಂ. ಡಿ. ಶ್ರೀನಿವಾಸಯ್ಯಂಗಾರರು ೧೨೦೦. ಮ|| ಗಳಾದ ಚಿತ್ರದ ಪದ್ಮಣನವರು, ಅನಂತರಾಜಯ್ಯನವರು, ಎನ್. ಶಿವ್ಯಾಜಿರಾಯರು, ಟಿ. ಕೆ. ಸುಂದರರಾಜಯ್ಯಂಗಾರರು, ವಿ. ತಿರುವೆಂಗಡ ಮೊದಲಿಯಾರರು, ಎಚ್. ಸೀತಾರಾಮಯ್ಯನವರು, ಎಚ್. ಕೃಷ್ಣಸ್ವಾಮಿರಾಯರು, ಹೀರಾನಂದ್ ಬೀರದಾಸಸೇಟರು, ಬಿ. ರಾಮಕೃಷ್ಣರಾಯರು, ಶ್ರೀ ನರಸಿಂಹಶಾಸ್ತ್ರಿಗಳು, ಸಿ. ಎಸ್. ಕುಪ್ಪುಸ್ವಾಮಯ್ಯಂಗಾರರು, ಎಲ್. ಟಿ. ಮಾಸ್ಕರ್‌ಹಾಸ್‌ರವರು ಇವರೆಲ್ಲಾ ತಲೆಗೆ ೧೦೦೦. ೫-೪-೩-೨-೧ ನೂರರಗಟ್ಟಲೆ ಪಡೆದಿರುವವರದೆಲ್ಲಾ ಸೇರಿ ೨೭೦೦. ಬಳಿಕ ಈ ಪಟ್ಟಣದ ಇತರ ಪ್ರಜೆಗಳಿಗೂ ಈ ಸಾಲ ಕೊಡುವುದರ ಪ್ರಯೋಜನವನ್ನು ತಿಳಿಯಪಡಿಸಿ, ಯುದ್ಧಋಣದ ಪತ್ರಗಳನ್ನು ಹೆಚ್ಚಾಗಿ ಕೊಂಡುಕೊಳ್ಳುವಂತೆ ಮಾಡುವುದಕ್ಕೆ ಒಂದು ಕಮಿಟಿಯು ಏರ್ಪಡಿಸಲ್ಪಟ್ಟು ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿದಬಳಿಕ ಸಭೆಯು ಮುಗಿದಿತು.

ರಾಜಬಂಧುವರ್ಗದವರಲ್ಲೂ, ವರ್ತಕಮಂಡಲಿಯವರಲ್ಲೂ, ವಕೀಲರುಗಳಲ್ಲೂ, ಅಧಿಕಾರಿ ವರ್ಗದವರಲ್ಲೂ ಈ ಋಣಪತ್ರಗಳನ್ನು ಕೊಳ್ಳಲು ಬೇಕಾದ ಯೋಗ್ಯತೆಯುಳ್ಳವರು ರಾಜಧಾನಿಯಲ್ಲಿ ಇನ್ನೂ ಅನೇಕರಿರುವುದರಿಂದ, ಅವರೆಲ್ಲರೂ ಸೇವಿಂಗ್ಸ್‌ಬ್ಯಾಂಕ್ ಬಡ್ಡಿಗಿಂತಲೂ ಹೆಚ್ಚಿನ ಬಡ್ಡಿಯನ್ನೀಯುವ ಮತ್ತೂ ಪೂರ್ಣವಾದ ಬರವಸೆಯುಳ್ಳ ಈ ಋಣಪತ್ರಗಳನ್ನು ಕೊಂಡುಕೊಳ್ಳಲು ಹಿಂದೆಗೆಯದೆ ರಾಜಧಾನಿಯ ಗೌರವಕ್ಕೆ ತಕ್ಕಂತೆ ಇಲ್ಲಿ ಕೊಡುವ ಮೊತ್ತದ ಸಂಖ್ಯೆಯನ್ನು ೧೦ ಲಕ್ಷದವರೆಗಾದರೂ ಬೆಳೆಯಿಸುವವರಾಗಲೆಂದು ಕೋರುತ್ತೇವೆ.

ಯುದ್ಧವಾರ್ತೆಯು

(ಪಶ್ಚಿಮರಣರಂಗ).

ಈ ರಂಗದಲ್ಲಿ ಅಪ್ರತಿಮಾನವಾದ ಯುದ್ಧವು ಅಹರ್ನಿಶಿಯೂ ನಡೆಯುತ್ತಿದೆ. ಒಂದೊಂದೆಡೆಯ ಯುದ್ಧವೂ ಅತ್ಯಂತ ಭೀಕರವಾದ ವಿಚಿತ್ರವರ್ಣನೆಗಳಿಂದ ಕೂಡಿರುವುದು. ಇಂಗ್ಲೀಷರೂ ಫ್ರೆಂಚರೂ ಸಹ ಬೇರೆಬೇರೆ ಸ್ಥಲಗಳಲ್ಲಿ ಶತ್ರುಗಳ ಹಿಂಡನ್ ಬರ್ಗ್ ಪಂಗ್ತಿಯನ್ನು ಭೇದಿಸಿಬಿಟ್ಟರು. ಮೇ ತಾ|| ೧ ದಿನದಲ್ಲೇ ಫ್ರೆಂಚರು ೬ ಮೈಲಿಯಗಲದಷ್ಟು ಪ್ರದೇಶವನ್ನು ಶತ್ರುಗಳಿಂದ ವಶಪಡಿಸಿಕೊಂಡರು. ಪ್ರಬಲ ಶತ್ರುಸೈನ್ಯದಿಂದ ಸುರಕ್ಷಿತವಾಗಿರುವ ಇಂಥ ಸ್ಥಲದಲ್ಲಿ ೬ ಮೈಲಿಗಳ ಸ್ಥಲವನ್ನು ಒಂದು ದಿನದಲ್ಲಿ ಆಕ್ರಮಿಸುವುದೆಂದರೆ ಸಾಧಾರಣ ಕಾರ್ಯವಲ್ಲ. ಸೆಂಟ್‌ಕ್ವಿಂಟನ್ನಿಗೆ ದಕ್ಷಿಣದಲ್ಲಿರುವ ಕ್ರೆಯೋನಿನ ಪ್ರಸ್ಥಭೂಮಿಯನ್ನು ಫ್ರೆಂಚರು ಸ್ವಾಧೀನಪಡಿಸಿಕೊಂಡಿರುವುದಲ್ಲದೆ ಅದಕ್ಕೆ ಪೂರ್ವದಲ್ಲಿರುವ ಷಮಿನ್ ಡಿ ದೇಮಿ ಎಂಬ ಪ್ರಸ್ಥಭೂಮಿಯನ್ನೂ ಕೂಡ ವಶಪಡಿಸಿಕೊಂಡರು. ಈ ಪಕ್ಕದಲ್ಲಿ ಎಂದರೆ ಲಾಫಕ್ಸಿನಿಂದ ಕ್ರೆಯೋನಿನವರೆಗಿರುವ ಶತ್ರುಸೇನಾರಕ್ಷಕ ಪಂಗ್ತಿಯನ್ನೆಲ್ಲಾ ಫ್ರೆಂಚರು ವಶಪಡಿಸಿಕೊಂಡಂತಾಯಿತು. ಫ್ರೆಂಚರ ವಶವಾದ ರಕ್ಷಕಸ್ಥಾನಗಳನ್ನು ಮತ್ತೆ ಬಿಡಿಸಿಕೊಳ್ಳುವುದಕ್ಕೆ ಶತ್ರುಗಳು ಅಸಮಸಾಹಸಗಳನ್ನು ಮಾಡಿ ಎಷ್ಟೋ ಹಾನಿಪಟ್ಟರೂ ಒಂದು ಸ್ಥಲವನ್ನಾದರೂ ಫ್ರೆಂಚರು ಬಿಟ್ಟುಕೊಡದೆ ಕಾಪಾಡಿಕೊಂಡು ಮತ್ತೆಮತ್ತೆ ಮುಂದಕ್ಕೆ ಸಾಗುತ್ತಲೇ ಇರುವರು. ಕಳೆದವಾರದಲ್ಲಿ ನಾಲ್ಕೇದಿನಗಳೊಳಗೆ ಫ್ರೆಂಚರು ೯೦೦೦ ಮಂದಿ ಶತ್ರುಗಳನ್ನು ಸೆರೆಹಿಡಿದಿದ್ದಾರೆ. ಕಳೆದ ಎಪ್ರಿಲ್ ತಾ|| ೧೬ ರಿಂದ ಮೇ ತಾ|| ೬ ರವರೆಗೆ ಇವರು ಸೆರೆಹಿಡಿದಿರುವ ಶತ್ರುಸೈನಿಕರ ಸಂಖ್ಯೆಯು ೨೯೦೦೦ ಆಗಿರುವುದೆಂಬುದನ್ನು ಕೇಳಿದರೆ ಫ್ರೆಂಚರ ಜಯಯಾತ್ರೆಯ ಮಹತ್ತ್ವವೂ ಜರ್ಮನರ ಬಲಹೀನತೆಯೂ ಅಪಜಯಲಕ್ಷಣವೂ ಚೆನ್ನಾಗಿ ವ್ಯಕ್ತವಾಗುವುವು. ಜರ್ಮನರು ಈ ಫ್ರೆಂಚ್ ಸೇನಾಮುಖದೊಂದರಲ್ಲೇ ಕಳೆದ ಎಪ್ರಿಲ್ ತಿಂಗಳಲ್ಲಿ ೨ ಲಕ್ಷ ಸೈನ್ಯವನ್ನು ಕಳೆದುಕೊಂಡಿರುವರಂತೆ! ವಾನ್‌ಹಿಂಡನ್ಬರ್ಗರು ಚಾಂಪೇನ್, ಆರ್ಟೋಟಿಯಸ್ ಕಂದಕಗಳಲ್ಲಿದ್ದ ತಮ್ಮ ಸೈನಿಕರನ್ನೆಲ್ಲಾ ಈ ರಣರಂಗದಲ್ಲಿ ವಿನಿಯೋಗಿಸಿ ಯುದ್ಧ ಮಾಡುತ್ತಿರುವರಂತೆ. ಶತ್ರುಗಳ ೧೪೩ ಪಟಾಲಮುಗಳು ಈ ಫ್ರೆಂಚ್ ರಣಮುಖದಲ್ಲೇ ಇವೆ. ಹಿಂಡನ್ಬರ್ಗರ ಮೂಲಸೈನ್ಯದ ಒಟ್ಟು ಸಂಖ್ಯೆ ೪೪. ಎಂದರೆ ೪|| ಲಕ್ಷ. ಈ ಮುಖ್ಯ ಪಟಾಲಮುಗಳಲ್ಲಿ ೩೩ ನ್ನು ಇಷ್ಟರೊಳಗೇ ಅವರು ಯುದ್ಧಕ್ಕೆ ತೊಡಗಿಸಿದ್ದಾರೆ. ಅದರಲ್ಲಿ ಕೆಲಭಾಗವು ರಣದಲ್ಲಿ ನಷ್ಟಪಟ್ಟು ಹಿಂದಿರುಗಿಹೋಗಿದೆ.

ಅತ್ತ ಉತ್ತರದಲ್ಲಿ ಇಂಗ್ಲೀಷ್ ಸೇನಾಮುಖದೊಳಗೂ ಜರ್ಮನರಿಗೆ ಬಹಳ ನಷ್ಟವೇ ಹೊರತು ಸಂತೋಷ ಸಮಾಧಾನಗಳನ್ನು ಹುಟ್ಟಿಸುವ ಸ್ಥಿತಿಯೇ ಇರುವುದಿಲ್ಲ. ನಡೆದಷ್ಟು ದಿವಸ ಮಿತ್ರಮಂಡಲಿಯವರ ಪುರೋಗಮನವನ್ನು ಅವರು ತಡೆಯುವುದೊಂದೇ ಅವರ ಅಮಿತ ಪ್ರಾಣನಷ್ಟಾದಿಗಳಿಗೆ ಪ್ರತಿಫಲವೇ ಹೊರತು ಮತ್ತೇನೂ ಇರುವುದಿಲ್ಲ. ಸ್ಕಾರ್ಪಿನದಿಯ ಬಳಿಯಲ್ಲಿ ಭೀಕರವಾದ ಫಿರಂಗಿಯುದ್ಧವು ಗೊತ್ತುಗುರಿಯಿಲ್ಲದಷ್ಟು ಆಗುತ್ತಿರುವುದು. ಕಳೆದ ವಾರದಲ್ಲಿ ಇಂಗ್ಲೀಷ್ ಸೈನಿಕರು ಸೆಂಟ್‌ಕ್ವಿಂಟನ್ನಿಗೆ ಪಶ್ಚಿಮದಲ್ಲಿದ್ದ ಹಿಂಡನ್‌ಬರ್ಗ್ ರಕ್ಷಕಪಜ್ತಿಯಮೇಲೆ ಬಿದ್ದು ಭೀಕರವಾಗಿ ಕಾದಾಡಿ, ಆ ಸ್ಥಲವನ್ನಾಕ್ರಮಿಸಿ, ರಾತ್ರಿಯೂ ಹಗಲೂ ಅದನ್ನು ಬಿಡಿಸಿಕೊಳ್ಳುವುದಕ್ಕೆ ಶತ್ರುಗಳು ಪ್ರತಿಯುದ್ಧವನ್ನು ಅಪಾರವಾಗಿ ನಡೆಯಿಸಿದರೂ ಬಿಟ್ಟುಕೊಡದೆ ಉಳಿಯಿಸಿಕೊಂಡರು. ಇದರಂತೆಯೇ ಬೇರೆಯ ಸುತ್ತಣ ಪ್ರದೇಶಗಳನ್ನೂ, ಅರ್ರಾಸು-ಕಾಂಬ್ರೈ ಮಾರ್ಗದ ಮಧ್ಯದ ಕೆಲಭಾಗವನ್ನೂ, ಸ್ಕಾರ್ಪಿ ನದಿಯ ದಡದಲ್ಲಿರುವ ಕೆಲವು ಅನುಕೂಲಸ್ಥಲಗಳನ್ನೂ, ಹೀಗೆಯೇ ಬೇರೆಬೇರೆ ಶಾಖೆಗಳಲ್ಲಿ ಕೆಲಕೆಲ ಕಂದಕಗಳನ್ನೂ ಉನ್ನತಸ್ಥಾನಗಳನ್ನೂ ವಶಪಡಿಸಿಕೊಂಡಿದ್ದಾರೆ. ಇವುಗಳೊಳಗೆಲ್ಲಾ ಫ್ರಿಸ್ನೋಯಿಯೆಂಬ ಸ್ಥಲವು ಅತಿ ಮುಖ್ಯವಾದುದು. ಇದನ್ನು ಬಿಟ್ಟುಕೊಡಲಾಗದೆಂದು ಶತ್ರುಗಳು ಬಲು ಮೊಂಡತನದ ಯುದ್ಧವನ್ನು ಮಾಡಿದರು. ಹೊಸಹೊಸ ಸೈನ್ಯಗಳನ್ನು ಅಪಾರವಾಗಿ ತಂದು ಜೋಡಿಸಿದ್ದರು. ಮದ್ದುಗುಂಡುಗಳ ಉಪಯೋಗವು ವಾಚಾಮಗೋಚರವಾಗಿದ್ದಿತು. ಈ ಸ್ಥಲವನ್ನು ಎಡಗಡೆಯಿಂದ ಕೆನಡಾ ದೇಶದ ಸೈನಿಕರೂ, ದಕ್ಷಿಣದಕಡೆಯಿಂದ ಆಸ್ಟ್ರೇಲಿಯಾ ಸೈನಿಕರೂ, ಮಧ್ಯಭಾಗದಿಂದ ಇಂಗ್ಲಾಂಡು, ಸ್ಕಾಟ್ಲಾಂಡು, ಐರ್ಲಾಂಡುಗಳ ಸೈನ್ಯಗಳೂ ಮುತ್ತಿ ಒಂದೇಸಲ ಯುದ್ಧವನ್ನಾರಂಭಿಸಿದರು. ೧೨ ಗಂಟೆಗಳಕಾಲ ಉಭಯಪಕ್ಷದವರೂ ಒಬ್ಬರಮೇಲೊಬ್ಬರು ಫಿರಂಗಿಗಳು ಮಿಷನ್‌ಫಿರಂಗಿಗಳು ತುಪಾಕಿಗಳು ಮೊದಲಾದ ಆಯುಧಗಳಿಂದೆಲ್ಲಾ ಅಗ್ನಿವರ್ಷವನ್ನು ಅಖಂಡವಾಗಿ ಸುರಿಸಿದರು. ಆ ಗ್ರಾಮವೆಲ್ಲಾ ಅಗ್ನಿಯಿಂದ ದಗ್ಧವಾಯಿತು. ಎರಡುಪಕ್ಷದಲ್ಲೂ ನಷ್ಟವು ಸಂಭವಿಸಿತು. ಆದರೆ ಕಡೆಗೆ ಶತ್ರುಗಳಿಗೆ ಅಪಜಯ, ನಮ್ಮವರಿಗೆ ಜಯವಾದುದೇ ಪರ್ಯವಸನ್ನವಾಯಿತು. ಹೀಗೆ ಕಾಲಿಟ್ಟೆಡೆಯಲ್ಲೆಲ್ಲಾ ಮಿತ್ರಮಂಡಲಿಯವರಿಗೆ ಜಯವೂ ತಮಗೆ ಅಪಜಯವೂ ಸಂಘಟಿಸುತ್ತಿರುವುದರಿಂದ ಶತ್ರುಗಳು ಎದೆಗೆಡುವಂತಾಗಿರುತ್ತದೆ. ಅವರ ಪತ್ರಿಕೆಗಳು—"ಜರ್ಮನ್ ಸೇನಾಮುಖಕ್ಕೆ ಪ್ರಬಲವಾದ ಧಕ್ಕೆಯು ಬಡಿದಿದೆ. ಇಂಗ್ಲೀಷ್ ಫ್ರೆಂಚ್ ಸೈನ್ಯಗಳ ನುಗ್ಗಾಟವನ್ನು ತಡೆಯುವುದಕ್ಕೆ ಅತಿಶಯವಾದ ಪ್ರಯತ್ನಗಳನ್ನು ಮಾಡುವುದವಶ್ಯಕ. ಇಂಗ್ಲೀಷರ ಫಿರಂಗಿಗಳ ಅವರ ವಿಮಾನಗಳ ಬಲವನ್ನು ಪ್ರತಿಭಟಿಸುತ್ತಿರುವುದು ಅಸಾಧ್ಯ" ಎಂದು ಬರೆದಿರುತ್ತವೆ. ಇವೆಲ್ಲ ವಿವರದಿಂದ ಇಂಗ್ಲೀಷ್ ಸೇನಾಮುಖದ ಶೌರ್ಯಸಾಹಸಗಳು ವ್ಯಕ್ತವಾಗುತ್ತಿವೆ.

ರಷ್ಯಾರಂಗ.

ಈ ಪೂರ್ವರಂಗದಲ್ಲಿ ಜುಬಿಕ್ನೋವಿಗೆ ದಕ್ಷಿಣದಲ್ಲಿ ಜರ್ಮನರು ಯುದ್ಧವನ್ನಾರಂಭಿಸಿ, ರಷ್ಯನರ ಪ್ರತಿಭಟನದಿಂದ ಸೋತು ಹಿಮ್ಮೆಟ್ಟಿಹೋದರೆಂದು ಪ್ರಕಟವಾಗಿದೆ. ರುಮೇನಿಯಾದಲ್ಲೂ ಒಂದುಕಡೆ ಹಿಮ್ಮೆಟ್ಟಿದರು.

ಬಾಲ್ಕನ್ ರಂಗ.

ಮಾಸಿಡೋನಿಯಾದೊಳಗೆ ಜುಮ್ಮಿಕಾಪ್ರಾಂತದಲ್ಲಿ ಫ್ರೆಂಚ್ ಸೈನ್ಯಗಳೂ, ಗ್ರೀಸಿನ ವೆನಿಜುಲಾಸ್ ಪಕ್ಷದ ಸೈನ್ಯಗಳೂ ಕೂಡಿ ಬಲ್ಗೇರಿಯನ್ ಸೈನ್ಯಗಳಮೇಲೆ ಯುದ್ಧಮಾಡುತ್ತಿವೆ. ಕಳೆದವಾರ ಇವು ಶತ್ರುಗಳನ್ನು ಸೋಲಿಸಿ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿರುತ್ತವೆ.

ಇತರವಿಷಯಗಳು.

ಹಳೆತರದ ಇಂಗ್ಲೀಷ್ ಯುದ್ಧದ ಹಡಗು ಒಂದು ನೀರಿನೊಳಗಿದ್ದ ಸುರಂಗಕ್ಕೆ ಬಡಿದು ಮುಳುಗಿಹೋಯಿತು. ಒಳಗಿದ್ದವರಲ್ಲಿ ಒಬ್ಬ ಉದ್ಯೋಗಿಯೂ ೬೧ ಮಂದಿಗಳೂ ಏನಾದರೋ ಗೊತ್ತಾಗಿಲ್ಲ.

ಅಮೇರಿಕಾದ ರೆಡ್‌ಕ್ರಾಸ್ ಸಂಘದವರು ಫ್ರೆಂಚರ ಸಹಾಯಾರ್ಥವಾಗಿ ವೈದ್ಯಸಹಾಯಾರ್ಥವಾದ ಬಂಡಿಗಳು ೩ ಸಾವಿರವನ್ನೂ, ೭ ಸಾವಿರ ಮಂದಿ ವೈದ್ಯರನ್ನೂ ಕಳುಹಿಸಿಕೊಡುವವರಾಗಿದ್ದಾರಂತೆ.

ಅಮೇರಿಕಾದ ಪ್ರಜೆಗಳು ಮಿತ್ರಮಂಡಲಿಗೆ ಗಂಟೆಗೆ ೬ ಕೋಟಿ ರೂಗಳಂತೆ ಸಾಲವನ್ನು ಕೊಡುತ್ತಿರುವರೆಂದು ತಂತ್ರೀವಾರ್ತೆಗಳು ತಿಳಿಸುತ್ತಿವೆ. ಹೀಗೆ ಸುವರ್ಣವೃಷ್ಟಿಯಾಗುತ್ತಿರುವಾಗ ಮಿತ್ರಮಂಡಲಿಗೆ ಅಸಾಧ್ಯವಾವುದು?

ಫ್ರಾನ್ಸ್ ದೇಶದಲ್ಲಿರುವ ಮಾರ್ಗಗಳನ್ನೂ, ಕಾಲ್ವೆಗಳನ್ನೂ ಸರಿಪಡಿಸಿಕೊಟ್ಟು ಸಹಾಯಮಾಡುವುದಕ್ಕಾಗಿ ಬಹಳ ಬೇಗನೆ ಇಂಜನಿಯರ್ ಪಟಾಲಮುಗಳನ್ನು ಅಲ್ಲಿಗೆ ಕಳುಹಿಸಿಕೊಡಬೇಕೆಂದು ಅಮೇರಿಕಾ ಪ್ರಭುತ್ವದವರಿಂದ ಅಪ್ಪಣೆಮಾಡಲ್ಪಟ್ಟಿದೆ.

ತುರ್ಕಿಯ ಗ್ರಾಂಡ್‌ವಜೀರ್ ತಲ್ಲತ್‌ಪಾಷಾನು ಜರ್ಮನಿಗೂ ಆಸ್ಟ್ರಿಯಾಕ್ಕೂ ಹೋಗಿದ್ದನು. ಎರಡುಕಡೆಯೂ ಆದರ ಸತ್ಕಾರಗಳು ನಡೆದುವು. ಸದ್ಯಃ ತುರ್ಕಿಗೆ ಉಂಟಾಗಿರುವ ನಷ್ಟವನ್ನು ಹೇಳಿಕೊಂಡು ಸೇನಾಸಹಾಯಾದಿಗಳನ್ನು ಕೇಳಿಕೊಳ್ಳುವುದಕ್ಕಾಗಿ ಈ ಪಾಷಾರವರು ದಯಮಾಡಿಸಿದ್ದರೇನೋ!

ಮೇ ತಾ|| ೨ ಕ್ಕೆ ಕಡೆಯಾದ ೧ ವಾರಕಾಲದಲ್ಲಿ ಇಂಗ್ಲೀಷ್ ತೀರಗಳಿಗೆ ಹೊರಗಣಿಂದ ೨೭೧೬ ಹಡಗುಗಳು ಬಂದು ಸೇರಿ, ೨೯೮೦ ಹಡಗುಗಳು ಅಲ್ಲಿಂದ ಪ್ರಯಾಣಮಾಡಿ ಹೋಗಿರುತ್ತವೆ. ಶತ್ರುಗಳಿಂದ ೪೮ ಹಡಗುಗಳೂ ೮ ಅಂಬಿಗರ ದೋಣಿಗಳೂ ಮುಳುಗಿಸಲ್ಪಟ್ಟಿವೆ. ೨೪ ಹಡಗುಗಳು ಸಬ್‌ಮೆರೀನುಗಳ ಹೊಡೆತಕ್ಕೆ ಸಿಕ್ಕಿಯೂ ತಪ್ಪಿಸಿಕೊಂಡು ಹೋಗಿರುತ್ತವೆ.

ಶತ್ರುಗಳ ಸಬ್‌ಮೆರೀನುಗಳ ಗರ್ವವನ್ನಡಗಿಸುವುದಕ್ಕೆ ತಕ್ಕ ಸಾಧನವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ಅಮೇರಿಕಾದ ನೌಕಾದಳದವರು ಪ್ರಯತ್ನಿಸಿದ್ದರಷ್ಟೆ. ಅದು ಫಲಿಸಿತೆಂದೇ ಹೇಳಬಹುದೆಂದು ಆ ದಳದ ಉಪಶಾಖಾ ಸಂಘಾಧ್ಯಕ್ಷರು ಪ್ರಕಟಿಸಿರುವುದನ್ನು ನೋಡಿದರೆ, ಡಾ|| ಎಡಿಸನ್‌ರವರು ಈ ವಿಷಯದಲ್ಲಿ ಕೈಗೊಂಡಿದ್ದ ತಪಸ್ಸು ಫಲಿಸಿರಬೇಕೆಂದು ತೋರುತ್ತದೆ.

ಶತ್ರುವಿಮಾನಗಳು ಸರಿರಾತ್ರಿಯಲ್ಲಿ ಲಂಡನ್ ನಗರದ ಈಶಾನ್ಯಭಾಗದಲ್ಲಿ ಅನೇಕ ಸಿಡಿಮದ್ದುಗಳನ್ನು ಹಾಕಿದುವು. ಅವೆಲ್ಲಾ ಒಂದೇ ಗ್ರಾಮದಲ್ಲಿ ಬಿದ್ದು, ಒಂದು ಕುಟುಂಬದ ಯಜಮಾನನಿಗೆ ಗಾಯವಾಗಿ ಪತ್ನಿಯು ಮೃತಳಾದಳು. ಕೆಲ ಮನೆಗಳಿಗೆ ಅಪಾಯವಾಯಿತು. ಮತ್ತೊಂದುದಿನ ಬೆಳಗಿನಹೊತ್ತು ಅದೇ ಪಟ್ಟಣದ ಈಶಾನ್ಯದ ಎಲ್ಲೆಯಲ್ಲಿ ಹಾಕಿದ ಸಿಡಿಮದ್ದಿನಿಂದ ಒಬ್ಬ ಪ್ರಜೆಗೆ ಮರಣವಾಗಿ ಇಬ್ಬರಿಗೆ ಗಾಯವಾಯಿತು.

ಅಮೇರಿಕಾದ ಕರ್ನಲ್ ರೂಜ್‌ವೆಲ್ಟರವರು ಫ್ರಾನ್ಸ್ ರಂಗದಲ್ಲಿ ಯುದ್ಧಮಾಡಿಸುವುದಕ್ಕಾಗಿ ತಮ್ಮಲ್ಲಿ ಕೂಡಿಸುತ್ತಿರುವ ಸೈನ್ಯಕ್ಕೆ ೨೫ ರಿಂದ ೫೦ ವರ್ಷದೊಳಗಣ ವಯಸ್ಸಿನ ೧೮೦೦೦೦ ಮಂದಿಗಳು ಕೂಡಿದರು. ಇವರೆಲ್ಲರೂ ವ್ಯಾಪಾರಮಾಡಿಕೊಂಡಿದ್ದವರು. ಈ ಸೈನ್ಯವೆಲ್ಲಾ ಸ್ವಯಂಸಹಾಯದಿಂದ ಕೂಡಿರುವುದು. ಅಮೇರಿಕಾವು ಮಿತ್ರಮಂಡಲಿಕಡೆ ಸೇರಿ ಯುದ್ಧಕ್ಕೆ ನಿಂತರೆ ತಾನು ೨ ಲಕ್ಷ ಸೈನ್ಯವನ್ನು ಕೂಡಿಸಿಕೊಡುವೆನೆಂದು ಈ ರೂಜ್‌ವೆಲ್ಟರು ತಮ್ಮ ಪ್ರಭುತ್ವದವರಿಗೆ ಯುದ್ಧಪ್ರಕಟನೆಗೆ ಮುಂಚೆಯೇ ತಿಳಿಸಿಕೊಂಡಿದ್ದರು. ಅದರಂತೆಯೇ ಈಗ ಕಾರ್ಯವನ್ನು ನೆರವೇರಿಸಿರುತ್ತಾರೆ.

ರಷ್ಯಾದಲ್ಲಿ ಶಾಂತಿಪ್ರಿಯಸಂಘದವರು ಈಗಣ ಪ್ರಭುತ್ವದವರ ಯುದ್ಧಪ್ರವೃತ್ತಿಯಲ್ಲಿ ಅಸಹನೆಯನ್ನು ತೋರಿಸುತ್ತಿದ್ದಾರೆ. ಇವರಿಗೆ ಅಂತಃ ಜರ್ಮನರ ಪ್ರೋತ್ಸಾಹವಿದೆಯೋ ಹೇಗೋ ತಿಳಿಯಲಿಲ್ಲ. ಅಧಿಕಾರಪಕ್ಷದವರಿಗೂ ಇವರಿಗೂ ಪೆಟ್ರೋಗ್ರೇಡ್ ಪಟ್ಟಣದ ಬೀದಿಬೀದಿಯಲ್ಲೇ ಕಲಹಗಳು ನಡೆದು ಪ್ರಾಣಹಾನಿಗಳೂ ಆಗುತ್ತಿವೆ. ಅಮೇರಿಕಾದ ಕೂಲಿಕಾರರ ಸಂಘದವರು ಪೆಟ್ರೋಗ್ರೇಡಿನಲ್ಲಿರುವ ಕೂಲಿಕಾರರ ಸೈನ್ಯದ ಕಾರ್ಯನಿರ್ವಾಹಕ ಸಂಘಕ್ಕೆ ಒಂದು ತಂತ್ರೀವಾರ್ತೆಯನ್ನು ಕೊಟ್ಟು, "ಜರ್ಮನರ ಮಾಯೋಪಾಯಗಳು ಫಲಿಸಿದಿರುವಂತೆ ನೀವು ಈಗಣ ಪ್ರಭುತ್ವದವರಿಗೆ ಸಹಾಯಕರಾಗಿರಬೇಕು" ಎಂದು ಅದರಲ್ಲಿ ತಿಳಿಯಪಡಿಸಿದ್ದಾರೆ.

ಭರತಖಂಡದ ವೃತ್ತಾಂತಗಳು.

ಭರತಖಂಡದಲ್ಲೆಲ್ಲಾ ೭೧೧೩ ಯಂತ್ರಾಲಯಗಳಿವೆ. ಇವುಗಳಲ್ಲಿ ೨೦ ಲಕ್ಷ ಮಂದಿ ಕೂಲಿಕಾರರಿದ್ದಾರೆ.

೧೯೧೪ ನೆಯ ವರ್ಷದಲ್ಲಿ ಭರತಖಂಡದೊಳಗೆ ಜ್ವರರೋಗದಿಂದಲೇ ೪೦೯೭೪೫೯ ಮಂದಿಗಳು ಮೃತರಾಗಿರುವರು.

ಭರತ ಖಂಡದಲ್ಲಿ ಪ್ಲೇಗು ಆರಂಭಿಸಿ ೨೦ ವರ್ಷಗಳಾದುವು. ಈ ಕಾಲದಲ್ಲಿ ಆ ರೋಗದಿಂದ ೯೦ ಲಕ್ಷ ಮರಣಗಳಾಗಿರುವುವು.

ಭರತಖಂಡದಲ್ಲಿ ಕೊಡಿಸಲ್ಪಡುತ್ತಿರುವ ಯುದ್ಧ ಋಣಕ್ಕೆ ಕಳೆದ ತಾ|| ೮ ರವರೆಗೆ ೧೮೨೦೭೫೩೦ ರೂ. ಗಳ ವರೆಗೆ ಕೂಡಿದ್ದಿತು.

ಜೂನ್ ತಾ|| ೨೪-೨೫ ರಲ್ಲಿ ಕೋಯಮತ್ತೂರಿನಲ್ಲಿ ಕೂಡುವ ಜಿಲ್ಲಾ ಸಭೆಗೆ ಆನಿಬೆಸೆಂಟಮ್ಮನವರು ಅಧ್ಯಕ್ಷರಾಗಿ ಆರಿಸಿಕೊಳ್ಳಲ್ಪಟ್ಟಿದ್ದಾರೆ.

ಸೀಮೆಗೆ ಹೋಗಿರುವ ಸರ್. ಸತ್ಯೇಂದ್ರಪ್ರಸನ್ನ ಸಿಂಹರವರು ಬರುವ ಜೂನ್ ತಿಂಗಳಲ್ಲಿ ಮರಳಿ ಕಲ್ಕತ್ತಾಕ್ಕೆ ಬಂದು ಸೇರುವರೆಂದು ಪ್ರಕಟವಾಗಿದೆ.

ಭರತಖಂಡದಿಂದ ಸಾಮ್ರಾಜ್ಯಸಭೆಗಾಗಿ ಹೋಗಿದ್ದ ಬಿಕನೀರ್ ಮಹಾರಾಜರು ಮೊದಲಾದವರಿಗೆ ಲಂಡನ್ ಪಟ್ಟಣದ ನಾಗರಿಕತ್ವ ಗೌರವವು ಕೊಡಲ್ಪಟ್ಟಿತು. ಇದೇ ತೆರದ ಗೌರವವು ಅವರಿಗೆ ಎಡಿನ್‌ಬರೋ ಮಾಂಚೆಸ್ಟರ್ ನಗರಗಳಲ್ಲೂ ಕೊಡಲ್ಪಟ್ಟಿತು.

ಸ್ವರಾಜ್ಯಸಾಧನೋದ್ದೇಶದಿಂದ ಭರತಖಂಡದಿಂದ ಸೀಮೆಗೆ ಹೋಗುವ ದೇಶೀಯ ಮಹಾಸಭಾ ಪ್ರತಿನಿಧಿಗಳೊಡನೆ ಈ ಕೆಳಗೆ ಕಾಣಿಸುವ ಮಹಮ್ಮದೀಯ ಪ್ರತಿನಿಧಿಗಳೂ ಹೋಗಲು ಅಖಿಲಭಾರತ ಮಹಮ್ಮದೀಯ ಸಂಘದವರಿಂದ ಆರಿಸಲ್ಪಟ್ಟಿದ್ದಾರೆ. ಯಾರೆಂದರೆ—ಅ|| ಮಹಮ್ಮದಾಬಾದ್ ರಾಜಾಸಾಹೇಬರು, ಅ|| ಮಜರುಲ್‌ಹಕ್‌ರವರು, ಅ|| ಜಿನ್ನಾರವರು.

ಬರೋಡಾದಂತೆ ಇಂದೂರು ಸಂಸ್ಥಾನವೂ ಕೂಡ ಸಮಾಜ ಸುಧಾರಣಸಾಧಕವಾದ ಶಾಸನಗಳನ್ನೇರ್ಪಡಿಸುವುದರಲ್ಲಿ ಆಸಕ್ತವಾಗಿರುತ್ತದೆ. ಬಾಲವಿದ್ಯಾಭ್ಯಾಸವನ್ನು ನಿರ್ಬಂಧವಾಗಿ ನಡೆಯಿಸುವುದಕ್ಕೆ ಶಾಸನವೇರ್ಪಟ್ಟು ಅದನ್ನು ಬೇಗನೆ ಸಂಸ್ಥಾನದಲ್ಲೆಲ್ಲಾ ವ್ಯಾಪನಗೊಳಿಸುವುದಕ್ಕೆ ಪ್ರಬಲವಾದ ಏರ್ಪಾಟುಗಳು ಮಾಡಲ್ಪಡುತ್ತಿವೆ. ಸ್ತ್ರೀಪುನರ್ವಿವಾಹ ವಿಷಯಕವಾದ ಒಂದು ಶಾಸನವೂ, ಭಿನ್ನಜಾತಿ ವಿವಾಹಸ್ವಾತಂತ್ರ್ಯಸಾಧಕ ಶಾಸನವೂ ಈಗ ತಾನೇ ಏರ್ಪಟ್ಟಿವೆ.

ಮಕ್ಕಳು ತಪ್ಪುಮಾಡಿದರೆ ಅವುಗಳ ಕೆನ್ನೆಯಮೇಲೆ ಹೊಡೆಯುವ ಪದ್ಧತಿಯು ಬಹಳವಾಗಿ ರೂಢಿಯಲ್ಲಿದೆ. ಇದು ಬಹಳ ಕೆಟ್ಟಪದ್ಧತಿ. ಒಬ್ಬ ಹುಡುಗನಿಗೆ ಕಿವಿಯಪೋಟು ಎಂಬ ರೋಗವಿದ್ದಿತು. ಆ ಹುಡುಗನಿಗೂ ಮತ್ತೊಬ್ಬನಿಗೂ ಜಗಳ ಬರಲಾಗಿ ಎರಡನೆಯವನು ಈ ಹುಡುಗನ ಕೆನ್ನೆಯಮೇಲೆ ಏಟು ಕೊಟ್ಟುದರಿಂದ ಕೂಡಲೇ ಇವನು ಸತ್ತುಹೋದನು. ಆದುಕಾರಣ ಈ ಪದ್ಧತಿಯುಳ್ಳವರು ಇಂಥ ಉದಾಹರಣೆಗಳಿಂದ ಎಚ್ಚತ್ತುಕೊಳ್ಳಬೇಕು.

ಬೊಂಬಾಯಿಯಲ್ಲಿ ಸ್ಥಾಪಿತವಾಗಿರುವ ಓರಿಯಂಟಲ್‌ಗೌರ್ನಮೆಂಟ್ ಸೆಕ್ಯುರಿಟಿ ಲೈಫ್ ಇನ್‌ಷೂರೆನ್ಸ್ ಕಂಪೆನಿಯ ಪಾಲಿಸಿ ಹೋಲ್ಡರುಗಳಲ್ಲಿ ಕಳೆದ ವರ್ಷ ೮೦೩ ಮಂದಿಗಳು ಮೃತರಾದುದರಿಂದ ಅವರುಗಳಿಗೆಲ್ಲಾ ಒಟ್ಟು ೨೧೫೭೩೦ ರೂ. ಗಳ ಇನ್‌ಷ್ಯೂರ್ ಹಣವು ಸಲ್ಲಿಸಲ್ಪಟ್ಟಿದೆ. ಮೃತರಾದವರಲ್ಲಿ ೭೫ ಮಂದಿಗಳು ಮೂತ್ರಸಂಬಂಧವಾದ ರೋಗ ರಾಜಹುಣ್ಣುಗಳಿಂದ ಸತ್ತಿರುತ್ತಾರೆ. ಅವರಲ್ಲಿ ಹಿಂದೂಗಳು ೫೭, ಯೂರೋಪಿಯನ್ ಯೂರೋಷಿಯನ್ನರು ೧೧, ಪಾರ್ಸಿಯವರು ೩, ಮಹಮ್ಮದೀಯರು ೪ ಮಂದಿಗಳು.

ಲಾರ್ಡ್ ಹಾರ್ಡಿಂಜರವರ ವೈಸ್ರಾಯಗಿರಿಯಲ್ಲಿ ಅವರ ಕುಮಾರನನ್ನು ಆಹುತಿ ತೆಗೆದುಕೊಂಡ ಈ ಹಾಳು ಯುದ್ಧವೇ ಪ್ರಕೃತದ ನಮ್ಮ ವೈಸ್ರಾಯರ ಜ್ಯೇಷ್ಠ ಕುಮಾರರನ್ನೂ ವೀರಸ್ವರ್ಗವನ್ನೇರಿಸಿತೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ. ತೆಸಿಗರ್ ನಾಮಾಂಕಿತರಾದ ಇವರಿಗೆ ೨೧ ವಯಸ್ಸು ಮಾತ್ರವಾಗಿದ್ದಿತು. ಮೆಸಪೊಟೋಮಿಯಾ ರಣರಂಗದಲ್ಲಿ ಇವರಿಗೆ ಕಳೆದಏ|| ೩೦ ರಲ್ಲಿ ಏಟುತಗುಲಿ ಗಾಯವಾಗಿ, ೨-೩ ದಿನ ಚಿಕಿತ್ಸೆಯನ್ನು ಪಡೆಯುತ್ತಿದ್ದು ಗತಿಸಿದರು. ಭಾರತೀಯರೆಲ್ಲರಿಗೂ ಈ ಸುದ್ದಿಯು ಅನುತಾಪಕಾರಿಯಾಗಿರುವುದು.

ಢಕ್ಕಾದ ನವಾಬರು ಬಂಗಾಳಾ ದೇಶರಕ್ಷಕ ಸೈನ್ಯಕ್ಕೆ ತಾವಾಗಿ ಸೇರಿಕೊಂಡರು. ಕಳೆದ ತಿಂಗಳು ತಾ|| ೨೫ ರಲ್ಲಿ ಈ ನವಾಬರು ಸೈನ್ಯಕ್ಕೆ ಸೇರಲು ಹೊರಟಾಗ್ಗೆ ಪುರನಿವಾಸಿಗಳೆಲ್ಲಾ ಇವರನ್ನು ವಿಶೇಷ ಮರ್ಯಾದೆಯಿಂದ ಬೀಳ್ಕೊಟ್ಟರು. ಆಗ್ಗೆ ನವಾಬರು ಉತ್ತರವನ್ನು ಕೊಡುವಾಗ್ಗೆ "ಸಂಸಾರವಿಷಯ ವಾಸನೆಯನ್ನು ಕಡೆದೊಲಗಿಸಿ ರಾಜಸೇವೆಯಲ್ಲಿ ತೊಡಗಿ ಹೋಗುವಂತೆ ಆದುದಕ್ಕಾಗಿ ನನಗೆ ಬಹಳ ಸಂತೋಷವಾಗುತ್ತದೆ" ಎಂದು ಹೇಳಿದರಂತೆ. ಎಷ್ಟೋ ಲಕ್ಷಾಂತರ ರೂ.ಗಳ ಆದಾಯವುಳ್ಳ ಈ ನವಾಬರು ತೋರಿಸಿದ ಈ ರಾಜನಿಷ್ಠಾ ದೇಶಭಕ್ತಿಗಳು ಸಾಮಾನ್ಯ ಪ್ರಜೆಗಳಿಗೆಲ್ಲಾ ಬೋಧಪ್ರದವಾಗಿದೆಯೆಂಬುದಕ್ಕೆ ಸಂಶಯವಿಲ್ಲ.

೧೦೦ ಕ್ಕೆ ವರ್ಷಕ್ಕೆ ೧೭೨ ರೂ.ನಂತೆ ಷರತ್ ಬಡ್ಡಿ ಬರೆದಿದ್ದ ಒಂದು ಪತ್ರದ ಮೇಲೆ ಮಾಯವರಂ ಸಬ್ ಕೋರ್ಟಿನಲ್ಲಿ ವ್ಯಾಜ್ಯವು ಬಂದಿತು. ಇಂಥ ಷರತ್ತು ಸಲ್ಲಲಾರದೆಂದು ಹೇಳಿ ೨೪ ರೂ. ನಂತೆ ಬಡ್ಡಿಯನ್ನು ಕೊಡಲು ಪ್ರತಿವಾದಿಯ ಮೇಲೆ ಜಡ್ಜರು ಡಿಕ್ರಿಯನ್ನು ಕೊಟ್ಟರು. ವಾದಿಯು ಮದ್ರಾಸು ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಿದನು. ಮೋಸ ಬಲವಂತ ಮೊದಲಾದುವುಗಳೊಂದೂ ಇಲ್ಲದೆ ಈ ಷರತ್ತು ಬುದ್ಧಿಪೂರ್ವಕವಾಗಿ ಅಂಗೀಕೃತವಾಗಿದ್ದುದರಿಂದ ಷರತ್ತಿನಂತೆಯೇ ಕೊಡಿಸಬೇಕೆಂದು ವಾದಿಯ ಪರವಾಗಿ ವಾದಿಸಲ್ಪಟ್ಟಿತು. ಅದನ್ನು ಹೈಕೋರ್ಟಿನವರು ಒಪ್ಪಿ ಕೆಳ ಕೋರ್ಟಿನ ತೀರ್ಮಾನವನ್ನು ಹೊಡೆದುಹಾಕಿ ೧೭೨ ರೂ. ನಂತೆಯೇ ಬಡ್ಡಿ ಸಲ್ಲಿಸತಕ್ಕದ್ದೆಂದು ತೀರ್ಮಾನಿಸಿದರು.

ವಿದ್ಯಾರ್ಥಿಗಳು ರಾಜಕೀಯ ವ್ಯವಹಾರ ವಿಷಯದಲ್ಲಿ ಗಮನವಿತ್ತರೆ ಅವರ ವಿದ್ಯಾಭಿವೃದ್ಧಿಗೂ ಸ್ವಾಭಿವೃದ್ಧಿಗೂ ಭಂಗಬರುವುದಾದಕಾರಣ, ಅವರನ್ನು ರಾಜಕೀಯ ವ್ಯವಹಾರ ಸಂಬಂಧದಿಂದ ದೂರೀಕರಿಸಿರುವಂತೆ ಮಾಡಬೇಕೆಂದು ಮದ್ರಾಸು ಪ್ರಭುತ್ವದವರು ಪ್ರಯತ್ನಿಸಿರುತ್ತಾರೆ. ಇದಕ್ಕೆ ವಿದ್ಯಾರ್ಥಿಗಳ ಪೋಷಕರೂ ಬೋಧಕರೂ ಕೂಡ ಸಹಾಯಕರಾಗಬೇಕೆಂದು ಕೋರಿರುತ್ತಾರೆ. ಮತ್ತೂ ಇದಕ್ಕಾಗಿ ಒಂದು ನಿಬಂಧನೆಯನ್ನು ಏರ್ಪಡಿಸಿ ಪ್ರಕಟಿಸಿರುವುದೇನಂದರೆ—ವಿದ್ಯಾರ್ಥಿಗಳು ರಾಜಕೀಯಸಭೆಗೆ ಹೋಗಕೂಡದು. ಅಂಥ ಸಭೆಗಳ ಸಭ್ಯರಾಗಿಯೂ ಸೇರಕೂಡದು. ವಿದ್ಯಾಶಾಖಾಧಿಕಾರಿಗಳಿಗೆ ಅನುಚಿತವೆಂದು ತೋರಿದ ಯಾವ ಪ್ರಯತ್ನದಲ್ಲೂ ವಿದ್ಯಾರ್ಥಿಯು ಸಂಬಂಧಪಡಕೂಡದು. ಈ ನಿಬಂಧನೆಗಳನ್ನು ಶಾಲೆಗಳ ಉಪಾಧ್ಯಾಯರೂ ಕಲಾಶಾಲಾಧ್ಯಾಪಕರೂ ಕಠಿನವಾಗಿ ವ್ಯವಹಾರಕ್ಕೆ ತರಬೇಕು.

ಕಲ್ಕತ್ತಾಪಟ್ಟಣದಲ್ಲಿ ಮೋಹನಲಾಲ್ ಯಾತಿಭಾಯಿ ಎಂಬ ನಗಗಳ ವರ್ತಕನ ಅಂಗಡಿಗೆ ಕಳೆದ ತಾ|| ೭ ರ ರಾತ್ರಿ ೮ ಗಂಟೆಯ ಹೊತ್ತಿನಲ್ಲಿ ಮೋಟಾರಿನಮೇಲೆ ಕುಳಿತುಕೊಂಡು ಬಂದ ೬ ಮಂದಿ ಬಂಗಾಳಿ ತರುಣರಲ್ಲಿ ಮೊದಲು ಮೂವರು ಅಂಗಡಿಯನ್ನು ಪ್ರವೇಶಿಸಿದರು. ಆಗ ಇನ್ನಾರೋ ಇಬರು ಹೆಂಗುಸರು ನಗದ ವಿಷಯದಲ್ಲಿ ಅಂಗಡಿ ಯಜಮಾನನೊಡನೆ ಮಾತನಾಡುತ್ತಿದ್ದರು. ಮೊದಲು ನುಗ್ಗಿದ ಮೂವರು ಬಂಗಾಳಿಗಳು "ತಮಗೆ ಉತ್ತಮವಾದ ಕಂಠಾಭರಣಗಳುಬೇಕು, ತೋರಿಸಿ" ಎಂದು ಅಂಗಡಿಕಾರರಿಗೆ ಹೇಳಲು, ಅಂಗಡಿಯಜಮಾನರಿಬ್ಬರೂ ಕಂಠಹಾರಗಳನ್ನು ಅವರಮುಂದೆ ಇಟ್ಟು ತೋರಿಸುತ್ತಿದ್ದರು. ಕಂಠಹಾರಗಳು ಚೆನ್ನಾಗಿಲ್ಲವೆಂದು ಹೇಳಿ ಅವರು ಇನ್ನೂ ಹಲವನ್ನು ತರಿಸಿ ಮುಂದೆ ಇಡಿಸಿಕೊಂಡು ನೋಡುತ್ತಿದ್ದರು. ಆಗ ಅಂಗಡಿ ಗುಮಾಸ್ತೆಯು ಬರೆಯುತ್ತಾ ಕುಳಿತಿದ್ದನು. ಅಷ್ಟರಲ್ಲಿ ಉಳಿದ ಮೂವರು ಬಂಗಾಳಿಗಳು ಒಳಕ್ಕೆ ನುಗ್ಗಿ ತಮ್ಮಲ್ಲಿದ್ದ ರಿವಾಲ್ವರುಗಳನ್ನು ಹಾರಿಸಿ, ನಗಗಳನ್ನೆಲ್ಲಾ ಗಂಟುಕಟ್ಟಿಕೊಳ್ಳಲುಪಕ್ರಮಿಸಿದುದನ್ನು ಕಂಡು ದಿಗ್ಭ್ರಮೆಗೊಂಡು ಅಂಗಡಿ ಯಜಮಾನರಲ್ಲಿ ಅಣ್ಣನಾದವನು ಟೆಲಿಫೋನಿನ ಮೂಲಕ ಪೊಲೀಸಿಗೆ ಸುದ್ದಿಕೊಡಬೇಕೆಂದು ಯಂತ್ರದ ಬಳಿಗೆ ಹೋಗುತ್ತಿರಲು, ಕಳ್ಳರು ಅವನನ್ನು ಗುಂಡಿನಿಂದ ಸುಟ್ಟು ಕೆಡಹಿದರು. ತಮ್ಮನು ಅಣ್ಣನ ಸಹಾಯಕ್ಕೆ ಬರಲು, ಅವನಿಗೂ ಅದೇಗತಿಯಾಯಿತು. ಆಗ ಗುಮಾಸ್ತನಿಗೂ ಸ್ವಲ್ಪ ಏಟುಬಿದ್ದಿತು. ಅಂಗಡಿ ಆಳನ್ನೂ ಹೆಂಗುಸರನ್ನೂ ಕಳ್ಳರು ಒಂದುಮೂಲೆಗೆ ಸೇರಿಸಿಬಿಟ್ಟು ನಗಗಳ ಮೂಟೆಯನ್ನು ಸಾಗಿಸಿಕೊಂಡು ಮೋಟಾರನ್ನು ಹತ್ತಿ ಪಲಾಯನವಾದರು. ಪೊಲೀಸಿಗೆ ಈ ಸುದ್ದಿಯು ತಿಳಿಯಲು, ಅವರು ಮೋಟಾರುಗಳನ್ನು ಹತ್ತಿ ಎಲ್ಲೆಲ್ಲೂ ಹುಡುಕಿದರು ಕಳ್ಳರು ಸಿಕ್ಕಿಲ್ಲ. ಬಹುಶಃ ೧೦ ಸಾವಿರ ರೂ. ಗಳ ನಗಗಳು ಅಪಹೃತವಾದುವೆಂದು ಎಣಿಸಲ್ಪಟ್ಟಿವೆ.

ವಿದೇಶವೃತ್ತಾಂತಗಳು.

ತತ್‌ಕ್ಷಣವೇ ಜರ್ಮನಿಯಮೇಲೆ ಯುದ್ಧವನ್ನು ಸಾರಬೇಕೆಂದು ಚೀನಾ ಮಂತ್ರಿವರ್ಗದವರು ನಿರ್ಧರಿಸಿದರಂತೆ.

ಯುದ್ಧಾರಂಭದಿಂದ ಗ್ರೇಟ್‌ಬ್ರಿಟನ್ನಿನಲ್ಲಿ ಇದುವರೆಗೆ ೩ ಲಕ್ಷ ಮದುವೆಗಳಾಗಿವೆಯಂತೆ. ಆದರೆ ಇಷ್ಟು ಜನರಲ್ಲಿ ಎಷ್ಟು ಮಂದಿ ದಾಂಪತ್ಯಸುಖವನ್ನನುಭವಿಸುತ್ತಿರುವರೊ?

ಅಮೇರಿಕಾ ದೇಶದ ಎಲ್ಲೆಗೆ ಜರ್ಮನರು ತಮ್ಮ ಸೈನ್ಯವನ್ನು ತಂದು ಸೇರಿಸಿದರೆ ಅವರನ್ನೆಲ್ಲಾ ತಾವು ಸೆರೆಹಿಡಿಯುವುದಾಗಿ ಮೆಕ್ಸಿಕೋ ಪ್ರಭುತ್ವದವರು ಜರ್ಮನರನ್ನು ಎಚ್ಚರಿಸಿದ್ದಾರೆ.

ಅಮೇರಿಕಕ್ಕೆ ಸೇರಿದ ನ್ಯೂಯಾರ್ಕ್ ಪಟ್ಟಣದಲ್ಲಿ ಒಂದು ದೊಡ್ಡ ಪ್ರಾಸಾದವಿದೆ. ಪ್ರಪಂಚದಲ್ಲಿರುವ ಸೌಧಗಳಲ್ಲೆಲ್ಲಾ ಎತ್ತರದಲ್ಲಿ ಇದೇ ದೊಡ್ಡದು. ಇದು ೫೫ ಅಂತಸ್ತುಗಳಿಂದ ಕೂಡಿ ೯೧೬ ಅಡಿಗಳ ಎತ್ತರವುಳ್ಳದಾಗಿದೆ.

ಜಾರ್ಜ್ ಚಕ್ರವರ್ತಿಯವರು ಸ್ವಕುಟುಂಬದಲ್ಲೂ ಮಿತಾಹಾರದೇರ್ಪಾಟನ್ನು ಮಾಡಿರುವುದಲ್ಲದೆ ಪ್ರಜೆಗಳೆಲ್ಲರೂ ಇದುವರೆಗೂ ಸೇವಿಸುತ್ತಿದ್ದ ಆಹಾರ ಪರಿಮಿತಿಯಲ್ಲಿ ಕಾಲುಭಾಗವನ್ನು ಕಡಿಮೆಮಾಡಬೇಕೆಂದು ಆಜ್ಞೆಯನ್ನಿತ್ತಿರುತ್ತಾರೆ.

ಈಗ ಜಪಾನುದೇಶವುಕೂಡ ಮೋಟಾರುಬಂಡಿಯ ನಿರ್ಮಾಣಕ್ಕೆ ಆರಂಭಿಸಿದೆ. ೪ ಮಂದಿಗಳು ಕುಳಿತುಕೊಳ್ಳಬಹುದಾದ ೧೦ ಕುದುರೆಯ ಶಕ್ತಿಯುಳ್ಳ ಮೋಟಾರನ್ನು ಅವರು ನಿರ್ಮಿಸಿ, ವ್ಯಾಪಾರಕ್ಕೆ ಇಟ್ಟಿದ್ದಾರೆ. ಇದರ ಮೇಲಣ ಪೈಪೋಟಿಗೆ ಅಮೇರಿಕಾದವರೂ ನಿಲ್ಲಲಾರರಂತೆ.

ರಷ್ಯಾ ರಾಜಕುಟುಂಬಕ್ಕೆ ೨೧೩೦೮೦೦೦ ಏಕರೆಗಳ ಸ್ವಂತ ಭೂಮಿಯಿರುವುದು. ಇದಲ್ಲದೆ ಬಹಳ ಗಣಿಗಳೂ ಯಂತ್ರಶಾಲೆಗಳೂ ವ್ಯಾಪಾರಸಂಬಂಧವೂ ಇರುವುವು. ಇವೆಲ್ಲವುಗಳಿಂದ ವರ್ಷ ೧ ಕ್ಕೆ ೨೦ ಲಕ್ಷ ಪೌನುಗಳ ಆದಾಯವು ಆ ಕುಟುಂಬಕ್ಕೆ ಬರುವುದು. ಭೂಮಿಯ ಕೃಷಿಯಿಂದ ಕಳೆದೊಂದು ಶತಮಾನದಲ್ಲಿ ಅವರಿಗೆ ೩ ಕೋಟಿ ಪೌನುಗಳ ಆದಾಯವಾಗಿರುವುದು. ನಿನ್ನೆತಾನೇ ಸಿಂಹಾಸನವನ್ನು ಬಿಟ್ಟುಹೋದ ಜಾರ್‌ರವರು ರಷ್ಯಾ ಜಪಾನ್ ಯುದ್ಧವು ಜರುಗಿದಾಗ ಯುದ್ಧದ ಫಂಡಿಗಾಗಿ ೨ ಕೋಟಿ ಪೌನುಗಳನ್ನು ಕೊಟ್ಟರು. ಜಾರ್‌ರವರಿಗೆ ವರ್ಷ ೧ ಕ್ಕೆ ಒಟ್ಟು ೧ ಕೋಟಿ ಪೌನುಗಳ ಆದಾಯವಿರುವುದು.

೧ ಆಣೆ ಬೆಲೆಬಾಳುವ ವಿದ್ಯುಚ್ಛಕ್ತಿಯ ಉಪಯೋಗದಿಂದ ಎಷ್ಟೋ ಕೆಲಸಗಳನ್ನು ಮಾಡಿಸಿಕೊಳ್ಳಬಹುದಂತೆ. ಅವುಗಳಲ್ಲಿ ಕೆಲವುಗಳ ವಿವರವು ಹೇಗೆಂದರೆ—೫ ಸಾವಿರ ಚಾಕುಗಳನ್ನು ಸಾಣೆ ಹಿಡಿಯಬಹುದು. ೮ ಚೀಲಗಳ ಹಿಟ್ಟನ್ನು ಮೃದುವಾಗಿ ಕಲಸಿ ರೊಟ್ಟಿಗೆ ಉಪಯೋಗಿಸುವಂಥ ಮುದ್ದೆಯನ್ನಾಗಿ ಮಾಡಬಹುದು. ಹೊಲೆಯುವ ಯಂತ್ರವನ್ನು ೧೬ ಗಂಟೆಗಳ ಕಾಲ ನಡೆಯಿಸಬಹುದು. ೭೫ ಜತೆ ಜೋಡುಗಳನ್ನು ಶುಭ್ರಗೊಳಿಸಬಹುದು. ಈ ವಿವರವನ್ನು ಕೇಳಿದರೆ ವಿದ್ಯುಚ್ಛಕ್ತಿಯ ಪೂರ್ಣ ಸಹಾಯವುಳ್ಳ ನಮ್ಮ ಮೈಸೂರು ದೇಶದಲ್ಲಿ ಪರಿಶ್ರಮಗಳ ಅಭಿವೃದ್ಧಿಗೆ ಎಷ್ಟು ಅವಕಾಶವಿರುವುದೆಂಬುದನ್ನು ಊಹಿಸಿಕೊಳ್ಳಬಹುದು.

ಗ್ರೇಟ್‌ಬ್ರಿಟನ್ನಿಗೆ ಯುದ್ಧಕ್ಕೆ ಮುಂಚೆ ವರ್ಷ ೧ ಕ್ಕೆ ೨೯೩ ಕೋಟಿ ರೂ. ಗಳ ರಾಜ್ಯಾದಾಯವಾಗುತ್ತಿದ್ದಿತು. ಈಗಲಾದರೊ ಅದು ೮೩೨ ಕೋಟಿ ರೂ. ಗಳಿಗೆ ಏರಿರುತ್ತದೆ. ಯುದ್ಧಕ್ಕೆ ಮುಂಚೆ ಇವರಿಗೆ ಸಾಲವು ೧ ಅರ್ಬುದವೂ ೬೦ ಕೋಟಿಯಿದ್ದಿತು. ಈಗಲಾದರೊ ೫ ಅರ್ಬುದವೂ ೭೮೧ ಕೋಟಿಯಾಗಿದೆ. ಕಳೆದವರ್ಷ ೧|| ಅರ್ಬುದವನ್ನು ಇವರು ಸಾಲಮಾಡಿದರು. ಅಷ್ಟನ್ನೂ ಇತರ ಮಿತ್ರರಾಷ್ಟ್ರದವರಿಗೆ ಸಾಲವಾಗಿ ಕೊಟ್ಟಿರುವರು. ಬರುವವರ್ಷ ಇವರಿಗೆ ೧ ಅರ್ಬುದ ರೂ. ಗಳ ಆದಾಯವೂ, ೩ ಅರ್ಬುದವೂ ೪೫೦ ಕೋಟಿ ರೂ. ಗಳ ವ್ಯಯವೂ ಆಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ೨ ಅರ್ಬುದವೂ ೪೫೦ ಕೋಟಿ ರೂ.ಗಳ ಸಾಲಮಾಡಬೇಕೆಂದು ನಿಶ್ಚಯಿಸಿದ್ದಾರೆ.

ಫಿಲಡೆಲ್ಫಿಯಾದಲ್ಲಿ ಅರಚದಿರುವ ನಾಯಿಯನ್ನೂ ಕೂಗದಿರುವ ಇತರ ಕೆಲ ಪ್ರಾಣಿಗಳನ್ನೂ ಸಾಕುತ್ತಿರುವರಂತೆ. ಪ್ರತಿಯೊಂದು ಪ್ರಾಣಿಗೂ ಧ್ವನಿಮಾಡುವುದಕ್ಕೆ ಸಾಧಕವಾಗಿರುವ ನರಕ್ಕೆ ಶಸ್ತ್ರವನ್ನುಪಯೋಗಿಸಿ ವಿಕಾರಗೊಳಿಸಿದರೆ ಅವುಗಳ ಧ್ವನಿಮಾಡುವ ಶಕ್ತಿಯೇ ನಿಂತುಹೋಗಿಬಿಡುವುದಂತೆ! ಇದೇತರನಾಗಿ ಮಾಡಿದ ಹೇಸರಗತ್ತೆಗಳನ್ನು ಈಗಿನ ರಣರಂಗದಲ್ಲಿ ಸಾಮಾನುಗಳನ್ನು ಹೊರಿಸುವುದಕ್ಕೆ ಉಪಯೋಗಿಸುತ್ತಿರುವರು. ಹೀಗೆ ಶಬ್ದಮಾಡದಿರುವ ಪ್ರಾಣಿಗಳಿದ್ದರೆ ಸೇನಾಶಿಬಿರವು ಇಂಥಕಡೆಯಲ್ಲಿರುವುದೆಂಬ ಸಂಗತಿಯು ಶತ್ರುಗಳಿಗೆ ತಿಳಿಯಲಾರದು. ಈ ವಿಧವಾದ ಪ್ರಯೋಜನವನ್ನು ತಿಳಿದುಕೊಂಡು ಈಗ ಪೆನ್ಸಲ್ವೇನಿಯಾದವರು ಹಾದಿಬೀದಿಯಲ್ಲಿ ತಿರುಗುವ ನಾಯಿಗಳನ್ನೆಲ್ಲಾ ಹಿಡಿದುಕೊಂಡು ಜಂತುಶಾಲೆಗೆ ಕಳುಹಿಸಿ, ಅಲ್ಲಿ ಶಸ್ತ್ರಚಿಕಿತ್ಸೆ ಮಾಡಿಸುತ್ತಿರುವರು.

ಜರ್ಮನರು ಯುದ್ಧರಂಗದಲ್ಲಿ ಮಡಿಯುವ ತಮ್ಮ ಸೈನಿಕರ ಶವಗಳಿಂದಲೂ ಬೇರೊಂದು ತೆರದ ಲಾಭವನ್ನು ಮಾಡಿಕೊಳ್ಳುತ್ತಿರುವರಂತೆ! ಏನೆಂದರೆ—ಈ ಹೆಣಗಳನ್ನು ಆವಿಯ ಯಂತ್ರಗಳಲ್ಲಿ ಹಾಕಿ ೬-೮ ಗಂಟೆಯ ಹೊತ್ತು ಮಗ್ಗಿಸಿದಬಳಿಕ ಆ ಹೆಣಗಳಿಂದ ಹೊರಡುವ ಕೊಬ್ಬು ಮೊದಲಾದ ಸಾರಗಳನ್ನು ಪೀಪಾಯಿಗಳಲ್ಲಿ ತುಂಬಿಟ್ಟು, ಕೊಬ್ಬನ್ನು ಹಂದಿಗಳ ಆಹಾರಕ್ಕೂ ಎಣ್ಣೆಯನ್ನು ಸಾಬೂನು ಮೊದಲಾದುವುಗಳ ನಿರ್ಮಾಣಕ್ಕೂ ಉಪಯೋಗಿಸಿಕೊಳ್ಳುವರಂತೆ! ಈ ಕಾರ್ಯವನ್ನು ಮಾಡುವ ಸ್ಥಲವು ಯಾರಿಗೂ ಗೋಚರವಾಗದಂತೆ ಸರ್ವಗಾವಲು ಇಡಲ್ಪಟ್ಟಿರುವುದಂತೆ. ಮೃತಕಳೇಬರಕ್ಕೆ ಎಷ್ಟೋ ಮರ್ಯಾದೆಯಿಂದ ಸಂಸ್ಕಾರಮಾಡಬೇಕಾದುದು ಕ್ರೈಸ್ತವಿಧಿಯಾಗಿದ್ದರೂ ಜರ್ಮನರು ಇಂಥ ಹೇಯಕೃತ್ಯವನ್ನಾಚರಿಸುವುದಕ್ಕೂ ಹಿಂದೆಗೆಯದಿರುವುದನ್ನು ನೋಡಿದರೆ ಅವರು ಮಾನವಕುಲಕ್ಕೇ ಕಳಂಕವನ್ನು ತಂದಿರುವಂತೆ ಕಾಣುತ್ತದೆ.

ಪತ್ರವ್ಯವಹಾರ.

ಪದಗಂಡ.

ಶಿವಪಥ.

ಹಾನಗಲ್ಲ.

ಶಿಕಾರಿಪುರದ ತಾಲ್ಲೋಕು ವಾರತ್ತೆ.

ಚಿಕ್ಕಮಗಳೂರು ತಾ|| ಚಟ್ಟದ ಮಳಲಿಗ್ರಾಮ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ವೀರಶೈವ ತರುಣ ಸಮ್ಮೇಳನ ದಾವಣಗೆರೆ.

ಅವುಗಳ ನಾಮಗಳು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೩—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

೧೯೧೭ ನೆಯ ಇಸವಿ ಮೇ ತಾ|| ೧೩ ರಿಂದ ೧೯೧೭ ನೆಯ ಮೇ ತಾ|| ೧೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ವೈಶಾಖ ಬ|| ಸಪ್ತಮಿಯಿಂದ ವೈಶಾಖ ಬ|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭೇದಿ
13	ಭಾನು	ಸಪ್ತಮಿ	36-34	ಶ್ರವಣ	35-24	31
14	[1] ಸೋಮ	ಅಷ್ಟಮಿ	30-20	ಧನಿಷ್ಟ	31-8	1
15	ಮಂಗಳ	ನವಮಿ	24-14	ಶತಭಿಷ	26-59	2
16	[2] ಬುಧ	ದಶಮಿ	18-25	ಪೂಭಾ	23-9	3
17	[3] ಗುರು	ಏಕಾ	13-3	ಉಭಾ	19-46	4
18	[4] ಶುಕ್ರ	ದ್ವಾದಶಿ	8-19	ರೇವತಿ	71-1	5
19	[5] ಶನಿ	ತ್ರಯೋ	4-23	ಅಶ್ವಿನಿ	15-8	6

(1) ಅಷ್ಟಮೀತಿಥಿಃ, (ಸೌರರೀತ್ಯಾಕಠಿನ್ಯತಿಥಿಃ) ವಿಷ್ಣುಪದಪುಣ್ಯಕಾಲಃ. (2) ಏಕಾದಶೀತಿಥಿಃ. (3) ಸರ್ವತ್ರೈಕಾದಶೀ, ದ್ವಾದಶೀತಿಥಿಃ. (4) ಪ್ರದೋಷಃ (5) ಮಾಸಶಿವರಾತ್ರಿಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಾರ್ಥಿಗತರಾಜಮಂಡಲಹಿತೈಷಾ | ಘನಸಪಕ್ಷೈತಾವತಾರಾ ಪಕ್ಷಜ್ಞ ನಕ್ಷತ್ರನೋಹರಾಜೀಯಾತ್ ||

ಶ್ರೀಮತ್ಕೃಷ್ಣನೃಪಾಲಸತ್ತ್ವಮಕಲಾಲೀಲಾಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧ್ಯುತ್ಸಾಲವಾಲಂವಲಂ ||

ಸೀಮಾತೀತಯಶಃಪ್ರಕಾಶನಿಭಂ ನಕ್ಷತ್ರಮಾಲಾಕುಲಂ | ಪ್ರೇಮಂಚೆತ್ತ್ರಿಳೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಮೇ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ.

ಎಸ್. ಆರ್. ಕಾಳಿಸವರಾಸ್ತ್ರಿ, ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

ಮದನೋದ್ಭವ ಗುಳಿಗೆ.

ನಪುಂಸಕತ್ವಾರಿ ತೈಲವು.

ಯೋಗ್ಯತಾಪತ್ರಗಳು.

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,

ಶ್ರೀ ಭಾರತ ವನಸ್ಪತಿ ಸಂಗ್ರಹಾಲಯ.

ಮೂರುಕಾಸು!

ಸುವಾಸಿಕ ಹುರುಕಿನ ಔಷಧ.

ಪಚನೋಪನ ಚೂರ್ಣ.

ಶ್ರೀ ಭಾರತ ವನಸ್ಪತಿ ಸಂಗ್ರಹಾಲಯ, ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ವಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸತರಹ ಕಯ್ಯಲ್ಲಿ ಧರಿಸುವ ರಿಸ್ಟುವಾಚು.

ಚರ್ಮದ ಪಟ್ಟಿಸಹಿತ	ನಂ. 1	4.0.0
ಬೆಳ್ಳಿಯದು		6.12.0

ಫಿಕ್ಸೆಡ್ ಲೀವರ್ ವಾಚ್.

ವಿಳಾಸ:—ಜಿ. ಪೆರುಮಾಳ್ ಅಂಡ್ ಕೊ. 28 ಅನುಮಂತರಾಯನ ಕೋಯಿಲ್ ಬೀದಿ, ಪಾರ್ಕ್‌ಟೌನ್, ಮದರಾಸ್.

ಪತ್ರವ್ಯವಹಾರ.

ಪಡಗೂರು.

ಶ್ರೀಮತ್ ನಿರಂಜನ ಪ್ರಭುಗಳವರಾದ ಗುಂಡ್ಲುಪೇಟೆ ತಾ|| ಪಡುಗೂರು ಅಡವೀಮಠದ ಚರಮೂರ್ತಿಸ್ವಾಮಿಗಳವರು ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ಜರುಗಿಸುವ ಉದ್ದಿಶ್ಯ ಒಂದು ನೂರು ಗ್ರಾಮಗಳಿಗೆ ಮೇಲ್ಪಟ್ಟ ಆಶೀರ್ವಾದ ಪತ್ರಿಕೆಯನ್ನು ದಯಪಾಲಿಸಿದ್ದುದರಿಂದ ಪ್ರತಿ ಗ್ರಾಮಗಳೂ, ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ, ಅಲಂಕರಿಸಲ್ಪಟ್ಟ ಮಂಟಪಗಳಲ್ಲಿ ಪುರಾಣ ಶ್ರವಣವೂ ಜಂಗಮೋತ್ಸವದೊಡನೆ ಪುರಾಣೋತ್ಸವವೂ ನಂದಿಧ್ವಜಸಮೇತ ದೇವತೋತ್ಸವವೂ ಆಯಾಯಮನೆಗಳಲ್ಲಿ ಜಂಗಮಾರ್ಚನೆಯೂ ಸಹ ನವವಿಧ ಭಕ್ತಿಯಿಂದ ನೆರವೇರಿದುವು.

ಶಿವಕಥಾ.

ಶ್ರೀರಂಗಪಟ್ಟಣದ ತಾಲ್ಲೋಕ್ ಗಂಜಾಮಿನಲ್ಲಿ ವರ್ತಕಮಂಡಲಿಯವರಿಂದ ವೈಶಾಖ ಶು|| ಏಕಾದಶಿ ದಿನ ನಡೆಸಿದ ಶರಭಲೀಲೆಯೆಂಬ ಕಥೆಯು ಶಿವಕಥಾ ಪ್ರೊಫೆಸರ್ ಮೈಸೂರು ಶಿವಪ್ಪಶಾಸ್ತ್ರಿಗಳವರಿಂದ ನಡೆಸಲ್ಪಟ್ಟಿತು. ವೇ|| ಶಿವಪ್ಪಶಾಸ್ತ್ರಿಗಳು ನಡೆಸಿದ ಕಥೆಯು ಶ್ರವಣಾರ್ಹವಾಗಿಯೂ ಜನಾನುರಂಜನೆಯನ್ನು ಮಾಡತಕ್ಕದ್ದಾಗಿಯೂ ನೀತಿಬೋಧಕವಾಗಿಯೂ ದೈವಭಕ್ತಿಯನ್ನು ನೆಲೆಗೊಳಿಸತಕ್ಕದ್ದಾಗಿಯೂ ಇತ್ತು. ಗಂಜಾಂ ಸುತ್ತುಮುತ್ತಣ ಗ್ರಾಮಗಳಿಂದ ಸಾವಿರಾರು ಜನಗಳು ಬಂದು ಕಥಾಶ್ರವಣಮಾಡಿ ತುಂಬಾ ಆನಂದವನ್ನು ಹೊಂದಿದರು. ಇವರು ವರ್ತಕಮಂಡಲಿಯವರ ಸಮುಚ್ಚಯವನ್ನು ಸಾರ್ಥಕಗೊಳಿಸಿ ಜನಾನುರಂಜಕವಾಗಿ ಕಥೆ ಮಾಡಿದ ವಿಷಯದಲ್ಲಿ ಗಂಜಾಂ ವರ್ತಕಮಂಡಲಿಯವರು ಇವರಿಗೆ ತುಂಬಾ ಕೃತಜ್ಞರಾಗಿರುತ್ತಾರೆ.

ಗಂಜಾಂ ವರ್ತಕಮಂಡಲಿ.

ಹಾಗನಹಳ್ಳಿ.

ಕೃಷ್ಣರಾಜಪೇಟೆ ತಾ|| ಹಾಗನಹಳ್ಳಿಯಲ್ಲಿ ಭೂಕೈಲಾಸಕರೆ ವೇ|| ಗುರುಬಸವಶಾಸ್ತ್ರಿಗಳು ಕೋಟಿಯಯ್ಯನವರು ಪಟೇಲ್ ಚೆನ್ನಪ್ಪನವರು ಅಪ್ಪಾಜಪ್ಪನವರು ಪುಟ್ಟಣ್ಣನವರು ಸಿದ್ಧಲಿಂಗಪ್ಪನವರು ಕ್ಯಾತನಹಳ್ಳಿ ಮಲ್ಲಪ್ಪನವರು ಸಣುವಿನ ಲಿಂಗಣ್ಣನವರು ಇವರ ಪ್ರಮುಖತೆಯಿಂದ ಶ್ರೀ ಬಸವೇಶರಸ್ವಾಮಿಯ ಜಯಂತ್ಯುತ್ಸವವು ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಈ ಉತ್ಸವಕ್ಕಾಗಿ ದೇವಸ್ಥಾನದ ಬಳಿಯಲ್ಲಿ ತಳಿರುತೋರಣ ಚಪ್ಪರ ಮುಂತಾದ ಅಲಂಕಾರಗಳು ಮಾಡಲ್ಪಟ್ಟಿದ್ದುವು. ಈ ಉತ್ಸವಕ್ಕೆ ಸುತ್ತಮುತ್ತಣ ಗ್ರಾಮಗಳಿಂದ ಭಕ್ತಮಾಹೇಶ್ವರರೇ ಮೊದಲಾದ ಜನಗಳು ಐದು ಆರು ಸಾವಿರದವರೆಗೂ ಸೇರಿದ್ದರು. ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಕ್ರಮಪ್ರಕಾರ ರುದ್ರಾಭಿಷೇಕ ಮುಂತಾದ ಪೂಜಾಕಾರ್ಯವು ನೆರವೇರಿಸಲ್ಪಟ್ಟಿತು. ಅನಂತರ ನೆರೆದಿದ್ದ ಜನಕ್ಕೆಲ್ಲಾ ಭೋಜನವು ನಡೆಸಲ್ಪಟ್ಟ ತರುವಾಯ ರಾತ್ರೆ ೮ ಗಂಟೆಗೆ ಶ್ರೀ ಬಸವೇಶ್ವರದೇವಸ್ಥಾನದಲ್ಲಿಯೇ ಸೇರಿದ್ದ ಸಭೆಯಲ್ಲಿ ವೇ|| ಗುರುಬಸವಶಾಸ್ತ್ರಿಗಳು ಶ್ರೀಬಸವೇಶ್ವರನ ಅವತಾರದಿಂದ ಮತಕ್ಕುಂಟಾದ ಮಹೋಪಕಾರವನ್ನು ಕುರಿತು ಉಪನ್ಯಾಸಮಾಡಿದರು. ಅನಂತರ ಶ್ರೀ ಬಸವೇಶ್ವರನ ಉತ್ಸವವು ಮದ್ದು ಮುಂತಾದ ವೈಭವದೊಡನೆ ಜರುಗಿಸಲ್ಪಟ್ಟಿತು. ಚಿಟ್ಟೆಳ್ಳಿ ಗ್ರಾಮದಲ್ಲಿರುವ ದೇವರಗುಡ್ಡಯ್ಯನೆಂಬುವನಿಂದ ಈ ಕಾರ್ಯವು ನಡೆಯಿಸಲ್ಪಟ್ಟಿತು. ಈತನು ವರ್ಣಾಂತರದವನಾದರೂ ಈತನಭಕ್ತಿ ಔದಾರ್ಯ ಮೊದಲಾದುವು ಶ್ಲಾಘನೀಯವಾಗಿವೆ.

ಓರ್ವಪ್ರೇಕ್ಷಕ.

ಶಿಕಾರಿಪುರದ ತಾಲ್ಲೋಕು ಮಾರವಳ್ಳಿ.

ತಾ|| ೨೨-೪-೧೯೧೭ ರಲ್ಲಿ ಸಾಗರರೇಂಜ್ ಅ[illegible] ಇನ್ಸ್‌ಪೆಕ್ಟರ್ ಸಾಹೇಬರವರು ಈ ಊರಿಗೆ ದಯಮಾಡಿಸಿ ಸ್ಕೂ[illegible] ಇನ್ಸ್‌ಪೆಕ್ಟ್ ನಡೆಸಿದರು. ಈದಿನ ಸಾಯಂಕಾಲ ಸ್ಕೂಲಿನಲ್ಲಿ ಮ[illegible]ಗಳಾದ ಕಮಿಟಿ ಮೆಂಬರ್ ವೀರಪ್ಪಗೌಡರು ದೊಡ್ಡವೀರಪ್ಪಗೌಡರು ಶಿವರುದ್ರಪ್ಪನವರು ಬೆಟ್ಟಪ್ಪನವರು, ಸಣ್ಣಮಲ್ಲಪ್ಪನವರು, ಪಟೇಲ್ ಶಿವಪ್ಪನವರು, ಪುಟ್ಟಪ್ಪಗೌಡರು, ಗ್ರಾಮದ ಶಾ|| ರಾಮರಾಯರು, ಕೆಂಡಪ್ಪನವರು ಮುಂತಾದ ಪ್ರಮುಖರುಗಳೂ ಸ್ಕೂಲ್‌ಮಾಸ್ಟರುಗಳೂ ಮತ್ತು ಇತರ ದೊಡ್ಡ ಮನುಷ್ಯರುಗಳೂ ಸೇರಿ ವಿದ್ಯಾಭಿವೃದ್ಧಿ ವಿಷಯದಲ್ಲಿ ಅ|| ಡೆಪ್ಯುಟಿ ಇನ್ಸ್‌ಪೆಕ್ಟರ್ ಸಾಹೇಬರವರಾದ ಮ|| ಮಾಧವರಾಯರವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗನ್ನು ನಡೆಯಿಸಿದರು. ಈ ಮೀಟಿಂಗಿನಲ್ಲಿ ವಿದ್ಯಾಭಿವೃದ್ಧಿ ವಿಷಯದಲ್ಲಿ ಮ|| ರಾ|| ಶಾನುಭೋಗ ರಾಮರಾಯರವರು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಜನಗಳಿಗೆ ತಿಳುವಳಿಕೆ ಬರುವಂತೆ ಮಾಡಿದರು. ಈ ಸಭೆಯಲ್ಲಿ ಶಿವಮೊಗ್ಗಾ ಡಿ||ಎಳ ನಾಮಿಕ್ ಸೂಪರಿಂಟೆಂಡೆಂಟ್ ಸಾಹೇಬರವರಾದ ಮ|| ಸಿದ್ರಾಮಪ್ಪನವರಿಂದ ವಿದ್ಯಾಭಿವೃದ್ಧಿ ವಿಷಯದಲ್ಲಿ ಸೂಚಿಸಲ್ಪಟ್ಟ ಸಂಗತಿಗಳನ್ನು ಸಭೆಯಲ್ಲಿ ಹೆಚ್. ಹಲಗೇಗೌಡರಿಂದ ಓದಿಸಿ ಎಲ್ಲರಿಗೂ ತಿಳಿಸಿದರು. ಶಿವಮೊಗ್ಗಾದಲ್ಲಿ ವೀರಶೈವವಿದ್ಯಾಭಿವೃದ್ಧಿಗೋಸ್ಕರ ಸ್ಟೂಡೆಂಟ್ಸ್‌ಹಾಲ್ ತಯಾರಿಸುವುದಕ್ಕಾಗಿ ಈಗ ಅಲ್ಲಿಲ್ಲಿ ಪ್ರಯತ್ನ ಪಡುತ್ತಲಿರುವುದರಿಂದ ನಾವೂ ನಮ್ಮ ಯೋಗ್ಯತೆಗೆ ಸರಿಯಾಗಿ ಧರ್ಮಕೆಲಸಮಾಡಬೇಕಾಗಿ ತೋರಿದ್ದರಿಂದ ಸದರಿ ಸ್ಟೂಡೆಂಟ್ಸ್‌ಹಾಲಿಗೆ ಚಂದಾ ಹಾಕಲು ಒಪ್ಪಿರುತ್ತೇವೆ. ಮ||ರಾ|| ಹೆಡ್‌ಮಾಸ್ಟರ್ ಮುಂಗೆಪ್ಪಯ್ಯನವರು ೧೦ ರೂಪಾಯಿ ಮ||ರಾ|| ಪಟೇಲ್ ಹೆಚ್.ಎಂ. ವೀರಪ್ಪಗೌಡರು ೧೫ ರೂ. ಗುಳದಳ್ಳಿ ಸ್ಕೂಲ್ ಮಾ|| ಮಲ್ಲಪ್ಪನವರು ೫ ರೂ. ನೊಗ್ಗದಸ್ಕೂಲ್ ಮ|| ಭುಟ್ಟವೀರಪ್ಪನವರು ೧೦ ರೂ. ಈ ಮೇರೆಗೆ ಆ ದಿವಸ ಸದರಿ ವೀರಶೈವ ಸ್ಟುಡೆಂಟ್ಸ್ ಹಾಲಿಗೆ ಸಹಾಯಮಾಡುವದಾಗಿ ಒಪ್ಪಿದ್ದಾರೆ. ಇದೇರೀತಿ ಇನ್ನೂ ಅನೇಕ ಮಹನೀಯರು ಮೇಲ್ಪಟ್ಟವರು ತೋರಿಸಿದ ಧರ್ಮಗುಣದಂತೆ ಇದಕ್ಕೆ ಸಹಾಯಮಾಡುವರಾಗಿ ನಂಬಿದ್ದೇನೆ.

ವಿಧೇಯ.

ವೀರಶೈವ ತರುಣರ ಸಮ್ಮೇಳನ ದಾವಣಗೆರೆ.

ಇದು ಕಳೆದತಿಂಗಳ ತಾ|| ೨೪-೨೮-೨೬ ಈ ಮೂರುದಿನಗಳಲ್ಲಿ ನಡೆದಿತು. ಸಭೆಗೆ ೫೦೦ ಮಂದಿಗಿಂತ ಹೆಚ್ಚಾಗಿಯೇ ತರುಣರು ಬಂದಿದ್ದರು. ಅವರಲ್ಲಿ ೨೦೦ ಮಂದಿಗಳು ಕಾಲೇಜು ಹೈಸ್ಕೂಲುಗಳ ವಿದ್ಯಾರ್ಥಿಗಳಾಗಿದ್ದರು. ಪ್ರಥಮದಿವಸ ಸತ್ಕಾರಕಸಂಘಾಧ್ಯಕ್ಷರ ಸಭಾಧ್ಯಕ್ಷರ ಭಾಷಣಗಳಾದ ಬಳಿಕ, ಆದಿನವೂ ಉಳಿದದಿನವೂ ಅನೇಕ ವಿದ್ಯಾರ್ಥಿಗಳ ಮತ್ತೂ ತರುಣರ ಭಾಷಣಗಳಾದುವು, ಆಯಾ ವಿಷಯಗಳಮೇಲೆ ಈ ಕೆಳಗೆ ಕಂಡ ನಿರ್ಧಾರಗಳು ಮಾಡಲ್ಪಟ್ಟುವು:—

(೧) ಯುರೋಪದಲ್ಲಿ ನಡೆದ ಸಾಂಪ್ರತ ಯುದ್ಧದಲ್ಲಿ ಬ್ರಿಟಿಷರಿಗೂ ಅವರ ಮಿತ್ರಮಂಡಲಿಯವರಿಗೂ ಬೇಗನೆ ಜಯವಾಗಲೆಂದು ಪ್ರಾರ್ಥಿಸತಕ್ಕದ್ದು. (೨) ಧಾರವಾಡ ಬೆಳಗಾಂ ಮತ್ತು ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡಿನ ಪ್ರವರ್ತಕರಿಗೆ ಮತ್ತು ಸ್ವದೇಶಸ್ಥರಿಗೆ ಜಪಾನ ಅಮೇರಿಕಾ ಮುಂತಾದ ಪರದೇಶಗಳಿಗೆ ಶಾಸ್ತ್ರವಿಜ್ಞಾನವನ್ನೂ ಉದ್ಯೋಗಿಕ ಕಲೆಯನ್ನೂ ಸಂಪಾದಿಸಲಿಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಪ್ರತಿಯೊಂದು ಸಂಸ್ಥೆಯವರೂ ಏನಿಲ್ಲೆಂದರೂ ವರ್ಷಕ್ಕೆರಡು ಸ್ಕಾಲರ್ಷಿಪ್ಪುಗಳನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳತಕ್ಕದ್ದು. (೩) ಬೆಳಗಾವಿಯ ಗಿಲಗಂಜಿ ಅರಟಾಳ ಹೈಸ್ಕೂಲಿನ ಮತ್ತು ಬಿಜಾಪೂರದ ನ್ಯೂ ಇಂಗ್ಲೀಷ್ ಸ್ಕೂಲಿನ ಪ್ರೇರೇಪಕರಿಗೂ ವ್ಯವಸ್ಥಾಪಕರಿಗೂ ಅವರ ಸ್ವಾರ್ಥತ್ಯಾಗ ಮತ್ತೂ ಸ್ವದೇಶಾಭಿಮಾನಗಳ ದೆಸೆಯಿಂದ ಅಭಿನಂದಿಸತಕ್ಕದ್ದು. (೪) ಧರ್ಮಪ್ರಸಾರದ ದೆಸೆಯಿಂದ ಸಣ್ಣಸಣ್ಣ ಅಗ್ಗವಾದ ಧಾರ್ಮಿಕ ಪುಸ್ತಕಗಳನ್ನು ಮುದ್ರಿಸಿ ಪ್ರಸಿದ್ಧ ಮಾಡಬೇಕೆಂದು ಶ್ರೀಮತ್ ಮಹಾರಾಜ ಜಗದ್ಗುರು ಚಿತ್ರಕಲ್ಲುದುರ್ಗ, ಗದಗ ಮತ್ತು ಹುಬ್ಬಳ್ಳಿ ಮೂರು ಸಾವಿರ ಹಾನಗಲ್ಲ ಶ್ರೀಗಳವರಿಗೆ ಬಿನ್ನಹ ಮಾಡಿಕೊಳ್ಳತಕ್ಕದ್ದು. (೫) ಶಾಸ್ತ್ರೀಯ ವಿದ್ಯಾಸಂಬಂಧಿಕ ಮೊದಲಾದ ವಿಷಯಗಳನ್ನು ಕುರಿತು ಸಣ್ಣಸಣ್ಣ ಅಗ್ಗವಾದ ಪುಸ್ತಕಗಳನ್ನು ಪ್ರಸಿದ್ಧ ಪಡಿಸಲಿಕ್ಕೆ ಒಂದು ಸ್ವತಂತ್ರವಾದ ಸಂಘವನ್ನು ಸ್ಥಾಪಿಸತಕ್ಕದ್ದು. (೬) ವರ್ತಮಾನಪತ್ರ ಮತ್ತು ಮಾಸಿಕ ಪುಸ್ತಕಗಳಿಗೆ ಸಹಾಯಮಾಡತಕ್ಕದ್ದು. (೭) ಸಾಮಾಜಿಕ ಸುಧಾರಣೆಗಳನ್ನು ಸ್ವಂತ ವರ್ತನದಿಂದ ಪ್ರತಿಯೊಬ್ಬ ತರುಣನೂ ರೂಢಿಯಲ್ಲಿ ತರತಕ್ಕದ್ದು. (೮) ಈ ಸಮ್ಮೇಲನದ ಕೆಲಸವನ್ನು ಮುಂದೆ ಸುಸೂತ್ರವಾಗಿ ಸಾಗಿಸುವುದಕ್ಕೆ ಜಿಲ್ಲಾ ಕಮಿಟಿಗಳನ್ನು ನಿಯಮಿಸತಕ್ಕದ್ದು.

ಚಿಕ್ಕಮಗಳೂರು ತಾ|| ಚಿಟ್ಟದ ಮಳಲಿಗ್ರಾಮ.

ಕಡೂರು ಡಿ|| ಚಿಕ್ಕಮಗಳೂರು ತಾ|| ಆವೃತ್ತಿ ಹೋಬಳಿ ಚಿಟ್ಟದ ಮಳಲಿ ಗ್ರಾಮದಲ್ಲಿ ಪೂರ್ವ ಪದ್ಧತಿಯಂತೆ ಶ್ರೀ ಆಕ್ಕಮ್ಮನವರ ಸುಗ್ಗಿ ಮಹೋತ್ಸವವು ಇದೇ ಏಪ್ರೆಲ್ ತಾ|| ೧೦ ನೆಯ ಶುಕ್ರವಾರ ಉಯ್ಯಾಲೆ ಉತ್ಸವವೂ ೧೮ ನೆಯ ಬುಧವಾರ ಕೆಂಡದರ್ಚನೆಯೂ ೨೧ ನೆಯ ಶನಿವಾರ ಹಗಲು ಸುಗ್ಗಿ ಮೆರವಣಿಗೆ ಮಹೋತ್ಸವವೂ ೨೨ ನೆಯ ಭಾನುವಾರ ಅವಭೃತಸ್ನಾನವೂ ೨೩ ನೆಯ ಸೋಮವಾರ ಶ್ರೀ ಮಹಾಪ್ರಮಥರ ಕೆಂಡದರ್ಚನೆಯೂ ಈ ಮಧ್ಯೆ ಬಾಕಿ ದಿನಗಳಲ್ಲಿ ಚಿಲ್ಲರೆ ಉತ್ಸವಗಳೂ ಸುಗ್ಗಿ ಕುಣಿತಗಳೂ ಮತ್ತು ಕೋಲಾಟಗಳೂ ನಡೆಯಿಸಲ್ಪಟ್ಟುವು. ಈ ಮಹೋತ್ಸವಕ್ಕೆ ಆರ್ವಾಸ್ ಗ್ರಾಮಾಂತರದವರಾದ ಬೈಗೂರು ಬೆರಣಗೋಡು ಗ್ರಾಮಗಳ ಮಹನೀಯರು ನಿವಾಸಿಗಳೊಡಗೂಡಿ ಬಂದಿದ್ದರು. ಸುಮಾರು ೬೦೦.೮೦೦ ಪ್ರಜೆಗಳವುಟ್ಟಿಗೆ ಮುಖ್ಯದಿವಸಗಳಲ್ಲಿ ಸೇರುತ್ತಿತ್ತು. ಪ್ರಜೆಗಳ ಅತಿಥಿ ಸತ್ಕಾರಗಳೆಲ್ಲಾ ಗ್ರಾಮಸ್ಥರ ಸಹಾಯದಿಂದ ಪಟೇಲ್ ಅಣ್ಣಪ್ಪಗೌಡರವರ ಮನೆಯಲ್ಲಿ ಏರ್ಪಡಿಸಲ್ಪಟ್ಟಿತ್ತು. ೨೪ ನೆಯ ಮಂಗಳವಾರ ಶ್ರೀ ಬಸವೇಶ್ವರ ಜಯಂತ್ಯುತ್ಸವವು ನೆರವೇರಿತು. ಪಟೇಲ್ ಅಣ್ಣಪ್ಪಗೌಡರವರ ಮನೆಯ ಚಾವಡಿಯಲ್ಲಿ ಅಲಂಕರಿಸಲ್ಪಟ್ಟ ಮಂಟಪದಲ್ಲಿ ಶ್ರೀ ಬಸವೇಶ್ವರ ಮಹಾಸ್ವಾಮಿಯ ಭಾವಚಿತ್ರದ ಪಟವನ್ನು ಬಿಜಯಂಗೈಸಿ ಗ್ರಾಮದ ವೀರಶೈವ ಮಂಡಲಿಯವರಾದ ಮ|| ಪಟೇಲ್ ಅಣ್ಣಪ್ಪಗೌಡರು ಆಫಿ ಅಸಿಸ್ಟಾಂಟ್ ವೀರಪ್ಪಗೌಡರು. ಮ|| ಶಂಕರೇಗೌಡರು ವೇ|| ಮಠದ ಬಸವಾರಾಧ್ಯರು ಮ|| ವಿ. ಈರೇಗೌಡರು ಮ|| ಗುರುಕಾರ್ ಅಮೃತೇಗೌಡರು ಮತ್ತು ಬೆರಣಗೋಡು ಸ್ಕೂಲ್‌ಮಾಸ್ಟರು ಮ|| ಎಂ. ಡಿ. ಬಸವಯ್ಯನವರು ಸಹ ಕೂಡಿಕೊಂಡು ಪಟೇಲರ ಮನೆಯಿಂದ ಜಯಧ್ವನಿಯೊಡನೆ ಹೊರಟು ಕೆರೆಕೋಡಿಯ ಬಸವೇಶ್ವರಾಲಯದ ಮುಂಭಾಗದಲ್ಲಿ ರಚಿಸಲ್ಪಟ್ಟಿದ್ದ ಪರ್ಣಶಾಲೆಯಲ್ಲಿ ಬಿಜಯಂಗೈಸಿ ಮಂಗಳ ವಸ್ತ್ರೆರೆ ನಡೆದು ಪಾನಕ ಫಲಾಹಾರಾದಿಗಳನ್ನು ಪೂರೈಸಿ ಮ|| ಅಣ್ಣಪ್ಪಗೌಡರವರ ಪುತ್ರ ಶಿವಪ್ಪಗೌಡನೆಂಬುವನು ಬಸವ ನಾಮಾವಳಿ ಬಸವಲಿಂಗನಾಮಾವಳಿ ಸಹ ಘೋಷಿಸಿದನಂತರ ಜಯಘೋಷವುನಡೆದು ಸ್ವಸ್ಥಾನಕ್ಕೆ ಬಿಜಯಂಗೈಸಿದನಂತರ ಮಂಗಳಾರ್ಚನೆಯೂ ಪುಷ್ಪಾಂಜಲಿ ಸಹ ನಡೆಸಿ ಚಾವಡಿಯಲ್ಲಿ ಸಭಾಲಂಕರಿಸಲು ಸಾಯಂಕಾಲ ೫ ಗಂಟೆ ಲಾಗಾಯಿತು ೮ ಗಂಟೆವರೆಗೆ ದೀರ್ಘಕಾಲ ವೀರಶೈವ ಮಹೋನ್ನತಿಯ ವಿಷಯದಲ್ಲಿ ಮ|| ಬೆ|| ಸ್ಕೂಲ್‌ಮಾಸ್ಟರು ಎಂ. ಡಿ. ಬಸವಯ್ಯನವರು ಬಹಳ ರಸಿಕವಾಗಿ ಉಪನ್ಯಾಸವನ್ನು ನಡೆಸಿದರು. ನಮ್ಮ ಶ್ರೀಮದ್ಹಿಂಡಿಯಾ ಚಕ್ರವರ್ತಿ ಸಾರ್ವಭೌಮರವರಿಗೂ ನಮ್ಮನ್ನಾಳುವ ಶ್ರೀಮನ್ ಮಹಾರಾಜಾ ಶ್ರೀ ಕೃಷ್ಣರಾಜೇಂದ್ರ ಒಡೆಯರವರಿಗೂ ಯುವರಾಜರವರಿಗೂ ಸಹ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ಪುಷ್ಪತಾಂಬೂಲವನ್ನು ಹಂಚಿದನಂತರ ಶ್ರೀ ವೀರಶೈವ ಧರ್ಮ ಫಂಡಿಗೆ ಮ|| ರಾ|| ಶ್ರೀ ಪಟೇಲ್ ಅಣ್ಣಪ್ಪಗೌಡರವರು ಅಗ್ರತಾಂಬೂಲದೊಡನೆ ೧ ರೂಪಾಯಿಯನ್ನು ತೆಗೆದು ಇರಿಸಿದನಂತರ ಕರತಾಡನದ ಮೂಲಕ ಸಭಾ ಬರಖಾಸ್ತು ಮಾಡಲಾಯಿತು.

ಚಿಟ್ಟದಮಳಲಿ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ ! ಬಹು ಲಾಭ !

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ



ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅಳಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡವೆರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಸ್ವಾಸ, ಅಡಗ್ನೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ ಜಡ್ಡು, ಗುದ್ದವ್ವನ ಬೇನೆ, ಹುರುಳು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯಪ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗದಿದ್ದರೂ ೧೨೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಅರುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಅಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ, ಹೆಡ್ ಆಫೀಸ
10 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಶಾರೀ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ.

೧೯೧೭ ನೆಯ ಇಸವಿ ಮೇ ತಾ|| ೧೩ ರಿಂದ ೧೯೧೭ ನೆಯ ಮೇ ತಾ|| ೧೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ವೈಶಾಖ ಬ|| ಸಪ್ತಮಿಯಿಂದ ವೈಶಾಖ ಬ|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಶೇದಿ
13	ಭಾನು	ಸಪ್ತಮಿ	36-34	ಶ್ರವಣ	35-24	31
14	[1] ಸೋಮ	ಅಷ್ಟಮಿ	30-20	ಧನಿಷ್ಠ	31-8	1
15	ಮಂಗಳ	ನವಮಿ	24-14	ಶತಭಿಷ	26-59	2
16	[2] ಬುಧ	ದಶಮಿ	18-25	ಪೂಭಾ	23-9	3
17	[3] ಗುರು	ಏಕಾ	13-3	ಉಭಾ	19-46	4
18	[4] ಶುಕ್ರ	ದ್ವಾದಶಿ	8-19	ರೇವತಿ	71-1	5
19	[5] ಶನಿ	ತ್ರಯೋ	4-23	ಅಶ್ವಿನಿ	15-8	6

(1) ಅಷ್ಟಮೀತಿಥಿಃ, (ಸೌರರೀತ್ಯಾ ಕೂಸ್ಯತಿಥಿಃ) ವಿಷ್ಣುಪದಪುಣ್ಯಕಾಲಃ. (2) ಏಕಾದಶೀತಿಥಿಃ. (3) ಸರ್ವತ್ರೈಕಾದಶೀ, ದ್ವಾದಶೀತಿಥಿಃ. (4) ಪ್ರದೋಷಃ (5) ಮಾಸಶಿವರಾತ್ರಿಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾಭಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಕ್ಷಜ್ಞ ನಕ್ಷತ್ರನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪನಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಮೇ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಚಾರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ.) 43

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗಿರುವವು. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅಪುಷಧದ ಸಂಗಡ ಟಪಾಲ್ ಖರ್ಚು ಬೇರೆ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಶಿರ್ಸಿ ಉತ್ತರಕನಡಾ ಡಿ||.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನಸ್ಪತಿ ಸಂಗ್ರಹಾಲಯ.

29 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಪಶುಜೀವನ ಚೂರ್ಣ.

ದನಗಳಿಗಾಗುವ ಮಹಾಮಾರಿ ಕುಂದುಬಾಯಿ ಬೇನೆ ಈ ಪ್ರತಿಯೊಂದು ರೋಗದಮೇಲೆ ಅನುಪಾನಪತ್ರದಿಂದ ಅತ್ಯಂತ ಗುಣಕಾರಿಯಾಗಿರುವುದು ೧೦ ತೊಲೆಯ ಡಬ್ಬಿ ೧ ಕ್ಕೆ ೧೨ ಆಣೆ.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 25

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯುಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್‌ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪ್ರಿಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮನಾತುರಾತಿಗೂ ವೈದ್ಯರ ಸಮಯವನ್ನು ಕಾಯು ನೊರೆಯಿಡುವುದು ನಿಜವಾಗಿಯೂ ತಪ್ಪುವದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಪನು, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಅಕ್ಸಲ್ವಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ನಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ನಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸತರಹ ಕಯ್ಯಲ್ಲಿ ಧರಿಸುವ ರಿಸ್ಟುವಾಚು.

ಈ ನಕ್ಷೆಯಲ್ಲಿ ತೋರುವ ಗಡಿಯಾರವನ್ನು ನಮ್ಮ ಸ್ವಂತ ಅರ್ಡರ್‌ಮೇಲೆ ಸೀಮೆಯಲ್ಲಿ ತಯಾರಿಸಿ ತರಿಸಿರುತ್ತೇವೆ. ಈ ಗಡಿಯಾರದ ಸಾಮಾನುಗಳು ಬಹು ದೃಢವಾಗಿ ಇರುತ್ತೆ. ಪ್ರಪಂಚದಲ್ಲೆಲ್ಲಾ ಅನೇಕ ಗಡಿಯಾರಗಳು ಖರ್ಚಾಗಿ ಇರುತ್ತವೆ. ಇದು ನೋಡುವುದಕ್ಕೆ ರಮಣೀಯವಾಗಿಯೂ ಜೇಬಿನಲ್ಲಿ ಇಡುವುದಕ್ಕೂ ಕೈಯಲ್ಲಿ ಕಟ್ಟುವುದಕ್ಕೂ ಅನುಕೂಲವಾಗಿರುವುದು ಗಂಟೆ ತೋರಿಸುವುದರಲ್ಲಿ ಒಂದು ನಿಮಿಷವಾದರೂ ಹೆಚ್ಚು ಕಮ್ಮಿ ಇಲ್ಲದೆ ನಡೆಯುತ್ತದೆ. ಈ ಗಡಿಯಾರದಲ್ಲಿ ಯಾರೇ ಆಗಲಿ ಗಂಟೆ ಬಹುಬೇಗ ಗುರುತು ಹಿಡಿಯಬಹುದು. ಈ ಗಡಿಯಾರವು ಕೆಯ್ಯಲ್ಲಿ ಕಟ್ಟಿಕೊಂಡರೆ ಎಷ್ಟು ಕಷ್ಟಪಟ್ಟಾಗ್ಗೂ ಕೆಡುವುದಿಲ್ಲ.

ಚರ್ಮದ ಪಟ್ಟಿಸಹಿತ ನಂ. 1	4.0.0
ಬೆಳ್ಳಿಯದು	6.12.0

ಫಿಕ್ಸೆಡ್ ಲೀವರ್ ವಾಚ್.

7 ಬಹುಮಾನಗಳಸಹಿ ಕ್ರಯ 4.0.0

5 ವರುಷಗಳ ಖಾತ್ರಿಯಾದಗ್ಯಾರಂಟಿ ಸಹ.

ಈ ನಕ್ಷೆಯಲ್ಲಿ ಇರುವಂತೆಯೇ ಇರುವ ಈ ಗಡಿಯಾರವು ಒಳ್ಳೇ ಮಜಬೂತಾಗಿಯೂ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಗಾಳಿ, ಧೂಳು ಸೇರದಂತೆ ಹಿಂಭಾಗದ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ನಮ್ಮ ಗಡಿಯಾರವು ಲೋಕಪ್ರಸಿದ್ಧಿಯಾಗುವವರಿಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಶಾಮಂತಿಗೆಯುಪ್ಪು 1, ಸೆಂಟ್‌ಬಾಟಲ್ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಮುಖ ನೋಡಿಕೊಳ್ಳುವ ದಂತದ ಕನ್ನಡಿ 1, ಬಂಗಾರದ ಉಂಗರ 1, ಜುಮ್ಲಾ 7 ಬಹುಮಾನಗಳ ಸಹಿತ ಗಡಿಯಾರ 1 ಕ್ಕೆ ಕ್ರಯ ರೂ. 4.0.0.

ವಿಳಾಸ:—ಜೆ. ಪೆರುಮಾಳ್ ಅಂಡ್ ಕೊ.
12 28 ಅನುಮಂತರಾಯನ ಕೋಯಿಲ್‌ಬೀದಿ
ಪಾರ್ಕ್‌ಟೌನ್, ಮದರಾಸ್.

ಮೈಸೂರು ಸ್ಟಾರ್.

ಸೆ ೧೯೧೭ ನೆಯ ಇಸವಿ ಮೇ ತಾ|| ೨೦ ನೆಯ ಭಾನುವಾರ.

ಮೈಸೂರುದೇಶದ ಗ್ರಾಮಾಭಿವೃದ್ಧಿ.

ದೇಶದಲ್ಲಿ ೧೦೦ ಕ್ಕೆ ೯೦ ಮಂದಿ ಪ್ರಜೆಗಳು ಗ್ರಾಮಾಂತರಗಳಲ್ಲೇ ವಾಸಮಾಡುವವರಾಗಿದ್ದಾರೆ. ಆದರೂ ಯಾವ ಪ್ರಭುತ್ವದವರೂ ಪುರನಗರಗಳ ಅಲಂಕಾರ ಆರೋಗ್ಯ ರಕ್ಷಣಾದಿಗಳಕಡೆಗೆ ಗಮನವಿತ್ತು ಧನವ್ಯಯ ಮಾಡುವುದರಲ್ಲಿ ೧೦೦ ರಲ್ಲಿ ಒಂದು ಪಾಲನ್ನೂ ಗ್ರಾಮಾಂತರಗಳಿಗೆ ಮಾಡುತ್ತಿರುವುದಿಲ್ಲ. ಇದೊಂದು ಪ್ರಭುತ್ವವೈಚಿತ್ರ್ಯ. ಆದರೂ ಇದಕ್ಕೆ ಅಪವಾದವಾಗಿ ಈಗಿನ ನಮ್ಮ ಮೈಸೂರು ಪ್ರಭುತ್ವದವರು ಗ್ರಾಮಾಂತರಗಳನ್ನೂ ಅವುಗಳ ನಿವಾಸಿಗಳನ್ನೂ ಉತ್ತಮಸ್ಥಿತಿಗೆ ತರಿಸುವುದಕ್ಕಾಗಿ ಮಾಡುತ್ತಿರುವ, ಮತ್ತೂ ಅದರಮೇಲೆ ವಿಶೇಷ ಗಮನಕೊಟ್ಟು ಸಾಗಿಸುತ್ತಿರುವ ಏರ್ಪಾಟುಗಳು ಈ ಸಂಸ್ಥಾನಕ್ಕೆ ಅಭೂತಪೂರ್ವವಾಗಿ ಚಿರಸ್ಮರಣೀಯವಾಗಿರುತ್ತವೆ. ಈ ಪ್ರಯತ್ನವಿಶೇಷವು ವಾಗಾಡಂಬರದಲ್ಲಿಯೇ ವಿಕಸಿತವಾಗಿರದೆ ಕಾರ್ಯರೂಪದಿಂದಲೂ ವಿಕಸಿತವಾಗಿರುವುದೆಂಬ ಸಂಗತಿಯು ಈಗತಾನೇ ಸರ್ಕಾರದವರಿಂದ ಪ್ರಕಟಿತವಾಗಿರುವ ೧೯೧೬ ನೆ ಡಿಸೆಂಬರ್ ತಿಂಗಳ ಕಡೆಗೆ ಮುಕ್ತಾಯವಾದ ೩ ತಿಂಗಳ ಕಾಲದ ವಿಶತ್ಸಂಬಂಧವಾಗಿ ನಡೆದಿರುವ ಅಭಿವೃದ್ಧಿಕಾರ್ಯಗಳ ವರದಿಯಿಂದ ವ್ಯಕ್ತವಾಗುತ್ತಿದೆ.

ನಮ್ಮ ಸಂಸ್ಥಾನದಲ್ಲಿ ಇನಾಮತಿಯ ಗ್ರಾಮಗಳಲ್ಲದೆ ಸರ್ಕಾರಿ ಗ್ರಾಮಗಳೇ ೧೬೩೭೯ ಇರುತ್ತಿವೆ. ಕಳೆದ ಡಿಸೆಂಬರ್ ತಿಂಗಳ ಕೊನೆಯಲ್ಲಿ ೧೫೦೦೯ ಗ್ರಾಮಗಳಲ್ಲಿ ಗ್ರಾಮಾಭ್ಯುದಯ ಸಂಘಮೂಲಕವಾದ ಕಾರ್ಯಗಳು ನಡೆದಿರುವುವೆಂದು ಗೊತ್ತಾಗುವುದು. ಇವಿಷ್ಟು ಗ್ರಾಮಗಳಲ್ಲಿರುವ ಪ್ರಜಾಸಂಖ್ಯೆಯು ೪೬|| ಲಕ್ಷವಾಗಿರುವುದರಿಂದ ಅಷ್ಟು ಪ್ರಜೆಗಳು ಎಂದರೆ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯಲ್ಲಿ ¾ ಭಾಗಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಈ ಸಂಘಗಳ ಮೂಲಕವಾದ ಪ್ರಯೋಜನವನ್ನು ಪಡೆಯುತ್ತಲಿರುವರೆಂದು ಸ್ಪಷ್ಟವಾಗುವುದು. ಮೈಸೂರು ದೇಶದ ೮ ಡಿಸ್ಟ್ರಿಕ್ಟುಗಳಲ್ಲೂ ಒಟ್ಟು ಈ ಸಂಘಗಳು ೮೯೯೩ ಇರುವುವು. ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಇವುಗಳ ಪ್ರಸಾರವೂ ಚಟುವಟಿಕೆಯೂ ತೃಪ್ತಿಕರವಾಗಿದ್ದರೂ, ಶಿವಮೊಗ್ಗಾ ಡಿಸ್ಟ್ರಿಕ್ಟು ಮಾತ್ರ ಅವಕ್ಕೆ ವ್ಯತಿರಿಕ್ತವಾಗಿರುವುದು ಶೋಚನೀಯವು. ಏಕೆಂದರೆ-ಯಾವ ಮಲೆನಾಡಿನಲ್ಲಿ ಇತರ ಎಲ್ಲ ಪ್ರದೇಶಗಳಿಗಿಂತಲೂ ಗ್ರಾಮಶುಚೀಕರಣ ಪ್ರಜಾರೋಗ್ಯ ಸಾಧನಾದಿ ಸ್ಥಲಿಕಾಭ್ಯುದಯ ಕಾರ್ಯಗಳು ವಿಶೇಷವಾಗಿ ನಡೆಯಬೇಕಾಗಿವೆಯೋ, ಯಾವ ನಾಡಿನ ಸುಧಾರಣೆಗಾಗಿ ಪ್ರಭುತ್ವದವರ ಒಂದು ಸ್ಕೀಮನ್ನೇರ್ಪಡಿಸಿ, ಅದಕ್ಕಾಗಿ ಬೇರೆ ಧನವ್ಯಯವನ್ನು ಮಾಡಿಯೂ ಮಾಡುತ್ತಲೂ ಇರುವರೋ ಅಂಥ ಡಿಸ್ಟ್ರಿಕ್ಟಿನಲ್ಲೇ ಗ್ರಾಮಾಭ್ಯುದಯ ಕಾರ್ಯಗಳು ತೂಕಡಿಸುತ್ತಿರುವುದು ವಿಚಿತ್ರವೇ ಸರಿ. ಮೈಸೂರು, ಬೆಂಗಳೂರು, ತುಮಕೂರು, ಕೋಲಾರ ಜಿಲ್ಲೆಗಳಲ್ಲೂ ಕೂಡ ಇನ್ನೂ ಅನೇಕ ಸಂಘಗಳು ಸ್ಥಾಪಿಸಲ್ಪಡಬೇಕಾಗಿವೆ. ೧೯೧೬ ನೆ ವರ್ಷದ ಜುಲೈ ತಿಂಗಳಿಂದ ಸೆಪ್ಟಂಬರ್ ಕಡೆಯವರೆಗಿನ ೩ ತಿಂಗಳ ಕಾಲದಲ್ಲಿ ಸಂಸ್ಥಾನದೊಳಗೆಲ್ಲಾ ೩೬೦೨ ಗ್ರಾಮಸಂಘಗಳೂ, ಅದರಿಂದೀಚೆಗೆ ಡಿಸೆಂಬರ್ ಕೊನೆಯವರೆಗಿನ ೩ ತಿಂಗಳ ಕಾಲದಲ್ಲಿ ೩೭೫೨ ಸಂಘಗಳೂ ನೂತನವಾಗಿ ಸ್ಥಾಪಿಸಲ್ಪಟ್ಟಿವೆ.

ಸಂಖ್ಯಾಪ್ರಕಟನದಿಂದಲೂ ಅಚ್ಚುಕಟ್ಟಾದ ಮಾತುಗಳುಳ್ಳ ವರದಿಗಳ ಮೂಲಕವಾಗಿಯೂ, ಈ ಗ್ರಾಮಾಭ್ಯುದಯ ಸಂಘದ ಏರ್ಪಾಟು ದೂರತೋ ರಮಣೀಯವಾಗಿರುವುದೇ ಹೊರತು ಒಳಹೊಕ್ಕು ವಿಚಾರಮಾಡಿದರೆ ಅಷ್ಟು ವೈಲಕ್ಷಣ್ಯವೇನೂ ತೋರುವುದಿಲ್ಲವೆಂದು ಕೆಲಕೆಲರು ಆಡಿಕೊಳ್ಳುತ್ತಿರುವುದನ್ನು ನಾವು ಕೇಳಿರುತ್ತೇವೆ. ಆದರೆ ಈ ಮಾತನ್ನು ಸಂಪೂರ್ಣವಾಗಿ ನಿಜವಾದುದೆಂದೂ ಹೇಳಲಾಗುವುದಿಲ್ಲ; ಪೂರ್ಣವಾಗಿ ಸುಳ್ಳೆಂದೂ ಹೇಳಲಾಗುವುದಿಲ್ಲ. ಡಿಸೆಂಬರ್ ತಿಂಗಳಿಗೆ ಕೊನೆಯಾದ ೬ ತಿಂಗಳ ಕಾಲದಲ್ಲಿ ಈ ಗ್ರಾಮಾಭ್ಯುದಯ ಕಾರ್ಯಗಳ ವೆಚ್ಚಕ್ಕಾಗಿ ಪ್ರಜೆಗಳು ಒದಗಿಸಿಕೊಳ್ಳುವ ಹಣದ ಜತೆಗೆ ಸರ್ಕಾರದವರೂ ೩೩೩೫೯ ರೂ. ಗಳ ಗ್ರಾಂಟನ್ನು ಕೊಡಬೇಕಾಗುವುದೆಂದುನಿರ್ಧರಿಸಿ ಅಪ್ಪಣೆ ಮಾಡಿದ್ದರು. ಆದರೆ ಅದರಲ್ಲಿ ⅟₁₆ ಭಾಗದಷ್ಟು ಹಣವನ್ನೂ ಕೂಡ ಈ ಸಂಘಗಳು ವೆಚ್ಚಮಾಡಲಾರದೆ ಹೋಗಿರುವುವೆಂಬುದನ್ನು ಕೇಳಿದರೆ, ಈ ಸಂಘಗಳಲ್ಲೂ ನಾಮಮಾತ್ರವಾಗಿ ಅನೇಕಾನೇಕವಿರುವುವೆಂಬುದಾಗಿ ಹೇಳಬೇಕಾಗುತ್ತದೆ. ಇಂಥ ಸಂಘಗಳೇ ಇದಿರುಪಕ್ಷದವರ ವಾದಕ್ಕೆ ಉದಾಹರಣಗಳಾಗಿರುತ್ತವೆ. ಆದರೆ ಎಷ್ಟೋ ಸಂಘಗಳ ಕಾರ್ಯವು ಬಹು ಸಮರ್ಪಕವಾಗಿ ಇರುವುದುಂಟೆಂಬ ವಿಷಯಕ್ಕೆ ಕಳೆದ ತಿಂಗಳಲ್ಲಿ ನಮ್ಮ ದಿವಾನರವರು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ನಡೆಯಿಸಿದ ಸಂಚಾರಕಾಲದಲ್ಲಿ ಪ್ರತ್ಯಕ್ಷವಾಗಿಗೋಚರಿಸಿರುವ ಅಭ್ಯುದಯಕಾರ್ಯಗಳೇ ನಿದರ್ಶನಗಳಾಗಿರುತ್ತವೆ.

ನಮ್ಮ ಪ್ರಜೆಗಳಲ್ಲಿ ಸಹಕಾರಭಾವವೂ, ಸರ್ಕಾರದಧಿಕಾರಿಗಳೊಡನೆ ಸಲಿಗೆಯಿಂದ ಸೇರಿ ತಮ್ಮ ಹಿತಕ್ಕೆ ಸಾಧನವಾದ ಕಾರ್ಯಗಳನ್ನು ಮಾಡಿಸಿಕೊಳ್ಳುವ ರೀತಿ ಹೇಗೆಂಬುದೂ, ಅದರ ಅವಶ್ಯಕತೆಯೂ ಉಳ್ಳವರು ಬಹಳ ವಿರಳ. ಗ್ರಾಮಾಭ್ಯುದಯ ಸಂಘಗಳ ಕಾರ್ಯವಾದರೂ ಅಂಥ ತಿಳಿವಿಲ್ಲದ ಅನೇಕಾನೇಕ ಜನರ ಸಹಕಾರವಿಲ್ಲದಿದ್ದರೆ ನಡೆಯಲಾರದು. ಗ್ರಾಮದಲ್ಲಿ ಒಬ್ಬಿಬ್ಬರು ಈ ಸಂಘಗಳ ಪ್ರಯೋಜನವನ್ನು ಅರಿತು ಉತ್ಸಾಹದಿಂದ ಕೆಲಸಮಾಡಬೇಕೆಂದು ಮನಸ್ಸುಳ್ಳವರಾಗಿದ್ದರೂ, ಅವರ ನೆರೆಹೊರೆಯವರ ಒತ್ತಾಸೆಯಿಲ್ಲದಿದ್ದರೆ ಸಾಧ್ಯವಾಗಲಾರರು. ಇದರಮೇಲೆ ಮುಂದಾದವರನ್ನು ಕಂಡರೆ ಅಸಹನೆಪಡುವವರು ಹೆಚ್ಚು. ಅದರ ಮೇಲೂ ಅನೇಕ ಗ್ರಾಮಗಳಲ್ಲಿ ಕಕ್ಷಿಗಳು ಬೇರೆ. ಇವಿಷ್ಟು ವಿರುದ್ಧವಾತಾವರಣದಲ್ಲೂ ನೂತನವಾದ ಗ್ರಾಮಾಭ್ಯುದಯಸಂಘದ ಏರ್ಪಾಟು ಇಷ್ಟುಮಟ್ಟಿಗಾದರೂ ತಲೆಯೆತ್ತಿ ವಿಕಾಸಗೊಳ್ಳುತ್ತಿರುವುದು ಸಾಮಾನ್ಯವಾದ ಕೆಲಸವಲ್ಲ. ಇಷ್ಟು ಕಾರ್ಯಗಳು ನಡೆಯಬೇಕಾದರೆ ಪ್ರಭುತ್ವದ ಅಧಿಕಾರಿಗಳೂ, ಆಯಾ ಸ್ಥಳಿಕ ಪ್ರಜಾಪ್ರಮುಖರೂ ಎಷ್ಟು ಸಾಹಸಗಳನ್ನು ನಡೆಯಿಸಿರಬಹುದೋ ಅದನ್ನು ಊಹಿಸಿಕೊಳ್ಳುವುದೇ ಲೇಸು.

ನಾನಾ ಕಾರಣಗಳಿಂದ ಸಂಘದ ಕಾರ್ಯಗಳಿಗೆ ಸ್ಥಲೀಯ ಜನಗಳ ಒತ್ತಾಸೆಯು ಸಹಕಾರಭಾವದಿಂದ ಆಗದಿದ್ದ ಸಂದರ್ಭದಲ್ಲಿ ದಂಡೋಪಾಯದಿಂದಲಾದರೂ ಮಾಡಿಸಿಕೊಳ್ಳಲು ಅವಕಾಶವಿಲ್ಲದಿದ್ದರೆ ಅಭ್ಯುದಯಕಾರ್ಯಗಳು ಸಫಲವಾಗಿ ಜರುಗಲಾರವೆಂಬುದು, ಅನೇಕ ಗ್ರಾಮಗಳಲ್ಲಿ ಇದೇ ಕಾರ್ಯಕ್ಕಾಗಿ ಪಾಟುಪಟ್ಟು ಬೇಸರುಗೊಂಡಿಹೋಗಿರುವ ಅನೇಕ ಮುಖಂಡರ ಖಚಿತಾಭಿಪ್ರಾಯವಾಗಿದೆ. ಇದನ್ನು ಅವರು ಲಿಖಿತ ಮೂಲಕವಾಗಿಯೂ ಪ್ರತ್ಯಕ್ಷ ವಚನಗಳಿಂದಲೂ ಎಷ್ಟೋಸಲ ಸರ್ಕಾರದವರ ಗಮನಕ್ಕೆ ತಂದಿರುತ್ತಾರೆ. ಒಂದು ತೆರದ ನಿರ್ಬಂಧವನ್ನು ಕಲ್ಪಿಸಿದಲ್ಲದೆ ಈ ಏರ್ಪಾಟು ಸಫಲವಾಗಲಾರದೆಂಬ ನಿಶ್ಚಯವು ಸರ್ಕಾರಕ್ಕೂ ಉಂಟಾಗಿದೆ. ಆದರೆ ಆ ನಿರ್ಬಂಧಕಲ್ಪನೆಗೆ ಪ್ರಜಾಪ್ರತಿನಿಧಿಸಭೆಯಲ್ಲೇ ಅನುಕೂಲಮತಗಳು ಕಡಿಮೆ. ಈ ಕಾರಣದಿಂದಲೂ ಈ ಸಂಘಗಳ ಅಭ್ಯುದಯ ಕಾರ್ಯವು ತಕ್ಕಷ್ಟು ಬೆಳವಣಿಗೆಯುಳ್ಳಿಲ್ಲದೆಹೋಗಿದೆ.

ಆದರೂ ಕೆಲ ಡಿಸ್ಟ್ರಿಕ್ಟುಗಳಲ್ಲಿ ಇತರ ಸ್ಥಲಗಳಿಗೆಲ್ಲಾ ಮಾರ್ಗದರ್ಶಕವೂ ನಾಹುಗೆಯನ್ನು ಹುಟ್ಟಿಸುವುವೂ ಆದ ಅಭ್ಯುದಯಕಾರ್ಯಗಳು ಅನೇಕಾನೇಕವಾಗಿ ನಡೆದಿರುವುದು ಸಂತೋಷಪ್ರದವಾಗಿದೆ. ಅದೇನೆಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕಳೆದಾರುತಿಂಗಳಕಾಲದಲ್ಲಿ ಬಹುಶಃ ೩೫ ಸಾವಿರ ರೂ. ಗಳ "ಅಂದಾಜು" ಬರುವ ಕಾರ್ಯಗಳು ಸರ್ಕಾರದ ಧನಸಹಾಯಾಪೇಕ್ಷೆಯಿಲ್ಲದೆ ಗ್ರಾಮಸಂಘಗಳ ಮೂಲಕವಾಗಿಯೇ ನಡೆಯಿಸಲ್ಪಟ್ಟಿವೆ. ಚಿತ್ರದುರ್ಗ, ಕಡೂರು ಡಿಸ್ಟ್ರಿಕ್ಟುಗಳ ಅನೇಕ ಸಂಘಗಳವರು ಅಭ್ಯುದಯಕಾರ್ಯಗಳ ವೆಚ್ಚಕ್ಕಾಗಿ ಶಾಶ್ವತವಾದ ಒಂದೊಂದು ಫಂಡನ್ನೇ ಏರ್ಪಡಿಸಿ ತಮ್ಮ ಕಾರ್ಯಚಾತಕಶಕ್ತಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಇದು ಪ್ರಶಂಸಾಪಾತ್ರವಾದುದು.

ನಮ್ಮ ಈಗಿನ ಸರ್ಕಾರದವರು ದೇಶದ ಸರ್ವಾಭ್ಯುದಯಕ್ಕೂ ಗ್ರಾಮಾಂತರಗಳೇ ಮೂಲವೆಂಬುದನ್ನೂ ಅವುಗಳ ಉದ್ಧಾರವು ಉಪೇಕ್ಷಣೀಯವಲ್ಲವೆಂಬುದನ್ನೂ ಚೆನ್ನಾಗಿ ಗಮನಿಸಿ, ಅವುಗಳ ಅಭ್ಯುದಯಾರ್ಥವಾಗಿಯೇ ಈ ಸಂಘಗಳ ಏರ್ಪಾಟನ್ನು ಮಾಡಿಟ್ಟಿದ್ದಾರೆ. ಆಯಾ ಸ್ಥಳಿಕಾವಶ್ಯಕತೆಗಳಿಗೆ ಅಲ್ಲಿಯ ಪ್ರಜೆಗಳು ಕೂಡಿಸಿಕೊಳ್ಳುವಷ್ಟು ಹಣವನ್ನು ಸರ್ಕಾರದವರೂ ಸಹಾಯಮಾಡಿಕೊಡುತ್ತಾರೆ. ಇಂಥ ಸಮಯದಲ್ಲಿ ಪ್ರಜೆಗಳು ವಾರಕ್ಕೊಂದು ಅರ್ಧದಿನ ತಂತಮ್ಮ ಸ್ಥಳದ ಹಿತಕ್ಕೆ ಅವಶ್ಯಕವಾದ ಕಾರ್ಯಗಳೇನೇನನ್ನು ಮಾಡಿಕೊಳ್ಳಬಹುದೆಂಬ ವಿಷಯವನ್ನು ಚರ್ಚಿಸುವುದಕ್ಕೂ, ಅವಕಾಶವಾದಾಗ ವೃತ್ತಪತ್ರಿಕೆಗಳನ್ನು ತರಿಸಿಕೊಂಡು ಓದಿ ತಮ್ಮ ವಿವೇಕವನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕೂ, ತಂತಮ್ಮ ಪ್ರಾಚೀನವಾದ ಕೈಕಸಬುಗಳನ್ನೋ, ಕೃಷ್ಯಾದಿ ವೃತ್ತಿಗಳನ್ನೋ ಲಾಭಕರವಾಗುವಂತೆ ಮಾಡಿಕೊಳ್ಳಲು ಸರ್ಕಾರದವರಿಂದ ಏನೇನು ಸಹಾಯವಾಗುವುದೆಂಬುದನ್ನು ತಿಳಿದು ಅದನ್ನು ಪಡೆದುಕೊಳ್ಳುವುದಕ್ಕೂ, ತಮ್ಮ ಮಕ್ಕಳುಮರಿಗಳನ್ನು ವಿದ್ಯಾವಂತರನ್ನಾಗಿ ಮಾಡಿಕೊಳ್ಳುವುದಕ್ಕೂ ಅಲ್ಪಸ್ವಲ್ಪ ಕಾಲವನ್ನೂ ಧನವನ್ನೂ ವಿನಿಯೋಗಿಸುವುದಕ್ಕೂ ಹತ್ತರಂತೆ ತಾವೂ ಗ್ರಾಮಾಭ್ಯುದಯ ಕಾರ್ಯಕ್ಕೆ ಧನಸಹಾಯವನ್ನೋ ದೇಹಶ್ರಮಸಹಾಯವನ್ನೋ ಒದಗಿಸಿಕೊಡುವುದಕ್ಕೂ ಹಿಂಜರಿಯುವುದಾದರೆ ಅಂಥವರು ಆತ್ಮದ್ರೋಹಿಗಳಾಗುವುದಲ್ಲದೆ ನರದ್ರೋಹಿಗಳೂ ಆಗುವರು. ಗ್ರಾಮಾಂತರದ ಪ್ರಜೆಗಳ ಹಿತಕ್ಕಾಗಿ, ಈ ಏರ್ಪಾಟನ್ನು ಮಾಡಿರುವ ಸರ್ಕಾರದವರ ವಿಷಯದಲ್ಲಿ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಸ್ವಲ್ಪವೇ. ಹೀಗಿರುವಾಗ ಗ್ರಾಮಾಂತರದ ಜನರು ತಮ್ಮ ಕರ್ತವ್ಯವನ್ನು ತಪ್ಪದೆ ನೆರವೇರಿಸುವಂತಾದರೆ ಅದನ್ನೇ ಪ್ರಜೆಗಳು ತಮಗೆ ಅರ್ಪಿಸುವ ಮಹಾಕೃತಜ್ಞತೆಯೆಂದು ಸರ್ಕಾರದವರು ಭಾವಿಸಿ ಸಂತೋಷಪಟ್ಟಾರು. ಬಾಗಿಲಿಗೆಬಂದ ಕಾಮಧೇನುವನ್ನು ಬಡಿದಟ್ಟುವಂತೆ ನಮ್ಮ ದೇಶದ ಗ್ರಾಮಾಂತರದವರು ಈ ಏರ್ಪಾಟನ್ನು ಉಪೇಕ್ಷಿಸಿ, ತಮ್ಮ ಹಿತದಮಾರ್ಗಕ್ಕೆ ತಾವೇ ಮುಳ್ಳನ್ನು ಹಾಕಿಕೊಳ್ಳದೆ ವರ್ಷವರ್ಷಕ್ಕೆ ಈ ಸಂಘಗಳ ಕಾರ್ಯವು ವ್ಯಾಪಕಾವಸ್ಥೆಗೆ ಬರುವಂತೆ ಮಾಡಿ ಸೌಖ್ಯಪಡುವವರಾಗಲೆಂದು ಬಯಸುವೆವು.

ಒಳದೇಶದ ವೃತ್ತಾಂತಗಳು.

ಶಿವಮೊಗ್ಗಾ ಡಿ|| ಕಮಿಷನರವರು ೬ ತಿಂಗಳ ರಜಾದಮೇಲೆ ಹೋಗುವರೆಂದು ಶಿವಮೊಗ್ಗಾ ವೃತ್ತಾಂತದಿಂದ ಗೊತ್ತಾಗುತ್ತದೆ.

ಮಿ|| ಮಿರ್ಜಾ ಇಸ್ಮಾಯಿಲ್ ಬಿ. ಎ., ಯವರು ಬರುವ ಜುಲೈ ತಿಂಗಳಿಂದ ಡಿ|| ಕಮಿಷನರುದ್ಯೋಗಕ್ಕೆ ನಿಯಮಿಸಲ್ಪಡುವವರಾಗಿದ್ದಾರೆಂಬ ವರ್ತಮಾನವಿದೆ.

ಮೈಸೂರು ದೇಶದ ಎಲ್ಲ ಮನ್ನಾಜಂಗಲುಗಳಿಂದಲೂ ಹುಲ್ಲನ್ನು ಪ್ರತಿಫಲಕೊಡದೆ ಕತ್ತರಿಸಿಕೊಂಡು ಹೋಗಬಹುದೆಂದು ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

ಕಟ್ಟಕಡೆಗೆ ಧಾರವಾಡದಲ್ಲಿ ಕಲಾಶಾಲಾ ಸ್ಥಾಪನವಾಗುವುದು ನಿಜವಾಗಿ ಬರುವ ಜೂನ್ ತಾ|| ೨೦ ರಿಂದ ಅದರ ಆರಂಭವಾಗುವುದೆಂದು ಕೇಳಿ ಸಂತೋಷಿಸುತ್ತೇವೆ.

ರಾಜಧಾನಿಯ ಮ್ಯುನ್ಸಿಪಲ್ ಕೌನ್ಸಿಲ್ಲಿಗೆ ಇನ್ನು ಹತ್ತುಜನ ಕೌನ್ಸಿಲರನ್ನು ಹೊಸದಾಗಿ ಆರಿಸುವ ಕೆಲಸವು ಬರುವ ಜೂನ್ ತಾ|| ೧೧ ರಿಂದ ೩ ದಿನಗಳವರೆಗೆ ನಡೆಯುವುದು.

ಬರುವ ಜುಲೈ ತಿಂಗಳಿಂದ ನಮ್ಮ ದೇಶದ ಸೆಷನ್ ಕೋರ್ಟುಗಳಲ್ಲಿ ೬ ಜನ ಪಂಚಾಯತರನ್ನಿಟ್ಟುಕೊಂಡು ಸೆಷನ್ ಮೊಖದ್ದಮೆಗಳ ವಿಚಾರಣೆಯನ್ನು ನಡೆಯಿಸತಕ್ಕುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಸೋಸಲೆ ವ್ಯಾಸರಾಯ ಮಠದ ಸ್ವಾಮಿಗಳು ರಾಮೇಶ್ವರಕ್ಕೆ ಹೋಗಿದ್ದು ಪುದುಕೋಟೆಯ ಮಾರ್ಗವಾಗಿ ಈಗ ಶ್ರೀರಂಗದಲ್ಲಿ ಹೋಗಿರುತ್ತಾರೆ. ಅಲ್ಲಿ ಒಂದು ಸಭಾಸ್ಥಾಪನೆಯನ್ನು ಮಾಡಬೇಕೆಂಬ ಪ್ರಯತ್ನದಲ್ಲಿದ್ದಾರೆಂದು ಕೇಳುತ್ತೇವೆ.

ನಮ್ಮ ಸಂಸ್ಥಾನದ ಆಸಿಸ್ಟೆಂಟ್ ರೆಸಿಡೆಂಟರಾದ ಮೇಜರ್ ಟಕರ್ ರವರು ಇಷ್ಟರಲ್ಲೇ ಸೈನ್ಯಶಾಖೆಯ ಕೆಲಸದಮೇಲೆ ಹೋಗುವವರಾಗಿರುವುದರಿಂದ ಅವರ ಸ್ಥಾನಕ್ಕೆ ಮೇಜರ್ ಜೇಮ್ಸ್ ಎಂಬುವರು ಬರುವರೆಂಬ ವಾರ್ತೆಯುಂಟು.

ಯುದ್ಧವಾರ್ತೆಯು

(ಪಶ್ಚಿಮರಣರಂಗ.)

ಇಂಗ್ಲೀಷ್ ಫ್ರೆಂಚ್ ಸೇನಾಮುಖಗಳಮುಂದೆ ಜರ್ಮನರು ಘೋರಯುದ್ಧವನ್ನು ಮಾಡುತ್ತಲೇ ಇದ್ದಾರೆ. ಅವರು ಕಳೆದುಕೊಂಡ ಸ್ಥಾನಗಳನ್ನು ಮತ್ತೆ ಬಿಡಿಸಿಕೊಳ್ಳುವುದಕ್ಕೂ, ಉಳಿಯಿಸಿಕೊಂಡಿರುವ ಸ್ಥಾನಗಳನ್ನು ಬಿಟ್ಟುಕೊಡದಿರುವುದಕ್ಕೂ ಸಹ ಬಹು ನಷ್ಟಕಷ್ಟಗಳನ್ನು ಪಟ್ಟುಕೊಂಡು ಯುದ್ಧಮಾಡುತ್ತಿದ್ದಾರೆ. ಇಂಗ್ಲೀಷರು ಮೊನ್ನೆ ವಾರದಲ್ಲಿ ಶತ್ರುಗಳಿಂದ ಕಿತ್ತುಕೊಂಡಿದ್ದ ಪ್ರೆಸ್ನೋಯಿ ಎಂಬ ಗ್ರಾಮವನ್ನು ಕಳೆದ ವಾರ ಜರ್ಮನರು ಬಿಡಿಸಿಕೊಂಡರು. ಇದಕ್ಕಾಗಿ ಅವರು ಬಹುಮಂದಿ ತಮ್ಮ ಸೈನಿಕರನ್ನು ರಣದೇವತೆಗೆ ಬಲಿಕೊಟ್ಟರು. ಸದ್ಯಕ್ಕೆ ಆ ಗ್ರಾಮವು ಅವರ ವಶದಲ್ಲೇ ಇದೆ. ಬುಲೆಕೋರ್ಟನ್ನೂ ಹಾಗೆಯೇ ಬಿಡಿಸಿಕೊಳ್ಳುವುದಕ್ಕೆ ಶತ್ರುಗಳು ಬಹಳ ಸಾಹಸಪಟ್ಟು, ಸ್ವಲ್ಪ ಭಾಗಕ್ಕೆ ಕಾಲಿಕ್ಕಿದರು. ಆದರೆ ಇಂಗ್ಲೀಷರು ಬಹು ನಷ್ಟದೊಡನೆ ಶತ್ರುಗಳನ್ನು ಹಿಮ್ಮೆಟ್ಟಿಸಿ ಅದನ್ನು ತಾವೇ ಕಾಪಾಡಿಕೊಂಡಿರುವರು. ಇಂಗ್ಲೀಷರು ಬೇರೆಕಡೆ ಕೆಲ ಜಯಗಳನ್ನು ಕಳೆದವಾರ ಪಡೆದಿರುತ್ತಾರೆ. ಸ್ಕಾರ್ಪ್ ನದಿಗೆ ಉತ್ತರ ಭಾಗದಲ್ಲಿ ಇವರು ಮುಂದಕ್ಕೆ ಸರಿದು ಒಂದು ತಿಂಗಳಿಂದಲೂ ಶತ್ರುಗಳು ಬಿಡದೆ ಕಾಪಾಡಿಕೊಂಡಿದ್ದ ರೋಕ್ಸ್ ಎಂಬ ಗ್ರಾಮವನ್ನೂ ಅದರ ಬಳಿಯಲ್ಲಿದ್ದ ಒಂದು ರಾಸಾಯನಿಕ ಕರ್ಮಾಗಾರವನ್ನೂ ವಶಪಡಿಸಿಕೊಂಡಿರುವರು. ಗಾವ್ರೆಲ್ಲಿ ಗ್ರಾಮಕ್ಕೆ ಉತ್ತರದಲ್ಲಿಇನ್ನಷ್ಟು ಮುಂದಕ್ಕೆ ನುಗ್ಗಿಹೋಗಿರುವರು. ಇನೆರಡುಕಡೆಯೂಶತ್ರುಗಳಮೇಲೆ ಬಹು ಭೀಕರವಾದ ಯುದ್ಧವನ್ನು ನಡೆಯಿಸಿಯೇ ಇಂಗ್ಲೀಷರು ಜಯಶಾಲಿಗಳಾಗಿರುವರು. ಬುಲೇಕೋರ್ಟಿಗಾಗಿ ಶತ್ರುಗಳು ಇನ್ನೂ ಮಹಾಯುದ್ಧಗಳನ್ನು ನಡೆಯಿಸುತ್ತಲೇ ಇರುವರು. ಕಾಂಬ್ರೆ-ಅರ್ರಾಸು ಮಾರ್ಗದ ಹತ್ತಿರವೂ ಯುದ್ಧಗಳನ್ನು ನಡೆಯಿಸಿ, ೨ ಗ್ರಾಮಗಳನ್ನೂ ಕೆಲ ಕಂದಕಗಳನ್ನೂ ಇಂಗ್ಲೀಷರು ವಶಪಡಿಸಿಕೊಂಡರು. ಅಲ್ಲದೆ ೧ ಸಾವಿರ ಮಂದಿ ಶತ್ರುಸೈನಿಕರನ್ನೂ ಕೆಲ ಫಿರಂಗಿಗಳನ್ನೂ ಸೆರೆಹಿಡಿದರು.

ಫ್ರೆಂಚ್ ಸೇನಾಮುಖದಲ್ಲಿ ಜರ್ಮನರು ಕ್ರೆಯೋನ್ ಪೀಠಭೂಮಿಯನ್ನು ಮರಳಿ ವಶಪಡಿಸಿಕೊಳ್ಳಬೇಕೆಂದು ಬಹು ಯುದ್ಧಗಳನ್ನು ನಡೆಯಿಸಿದರೂ ಫ್ರೆಂಚರು ಬಿಟ್ಟುಕೊಡಲಿಲ್ಲ. ಇಂಗ್ಲೀಷ್ ಫ್ರೆಂಚ್ ವೈಮಾನಿಕರು ಬಹಳ ಸಾಹಸದ ಕೆಲಸಗಳನ್ನು ಮಾಡಿ ಶತ್ರುಗಳ ಸೇನಾಪಙ್ಕ್ತಿಯ ಹಿಂಗಡೆ ಅವರಯುದ್ಧಸಾಹಿತ್ಯಗಳಮೇಲೆ ಟನ್ನುಗಳಗಟ್ಟಲೆಯ ತೂಕದ ಸಿಡಿಮದ್ದುಗಳನ್ನು ಹಾಕಿ ಬಹಳ ನಷ್ಟಪಡಿಸಿ, ಅವರ ಕಡೆಯ ಅನೇಕ ವಿಮಾನಗಳನ್ನು ಕೆಳಕ್ಕೆ ಕೆಡಹಿ ಹಾಳುಮಾಡಿರುತ್ತವೆ. ಈ ರಂಗದಲ್ಲಿ ಇಂಗ್ಲೀಷರೂ ಫ್ರೆಂಚರೂ ಸಹ ಶತ್ರುಪಙ್ಕ್ತಿಭೇದನಕ್ಕೆ ಆರಂಭಿಸಿದ ಕಳೆದ ಏಪ್ರಿಲ್ ತಾ|| ೯ ರಿಂದ ಮೇ ತಾ|| ೧೯ ರವರೆಗೆ ೪೫೫೦೯ ಮಂದಿ ಶತ್ರುಸೈನಿಕರನ್ನೂ (ಇವರಲ್ಲಿ ೯೭೬ ಮಂದಿಗಳು ಉದ್ಯೋಗಿಗಳು) ೪೪೭ ದೊಡ್ಡ ಫಿರಂಗಿಗಳನ್ನೂ, ೩೯೬ ಕಂದಕದ ಫಿರಂಗಿಗಳನ್ನೂ, ೯೩೪ ಮಿಷನ್ ಫಿರಂಗಿಗಳನ್ನೂ ವಶಪಡಿಸಿಕೊಂಡಿರುವುದಲ್ಲದೆ ಅನೇಕ ಫಿರಂಗಿಗಳನ್ನು ಗುಂಡಿನೇಟುಗಳಿಂದ ಹಾಳ್ಮಾಡಿಯೂ ಇರುತ್ತಾರೆ.

ರಷ್ಯಾ—ತುರ್ಕಿ.

ಎರ್ಜರೂಮಿಗೆ ದಕ್ಷಿಣದಲ್ಲಿ ತುರ್ಕಿ ಸೈನಿಕರಿಗೂ ರಷ್ಯನರಿಗೂ ಅನೇಕ ಯುದ್ಧಗಳು ನಡೆದಿರುತ್ತವೆ. ರಷ್ಯನರು ಮಷ್ ಪಟ್ಟಣವನ್ನು ಬಿಟ್ಟುಕೊಟ್ಟರು. ಮೆಸಪೆಟೋಮಿಯಾದಲ್ಲಿ ದಯಾಲನದಿಯ ಹತ್ತಿರ ಈಗ ಯುದ್ಧವು ನಡೆಯುತ್ತಿದೆ. ರಷ್ಯನರು ಕುರ್ಡ್ ಸೈನಿಕರನ್ನು ಸೋಲಿಸಿ ಅವರ ವಶವಾಗಿದ್ದ ಕೆಲ ಪ್ರದೇಶಗಳನ್ನು ಬಿಡಿಸಿಕೊಂಡರು. ದಯಾಲಾನದಿಗೂ ಷಟಲ್ ಅಹಾಯುಮ್ಗೂ ಮಧ್ಯದಲ್ಲಿ ಇಂಗ್ಲೀಷ್ ಸೈನಿಕರು ತುರ್ಕಿಸೈನ್ಯವನ್ನು ಸಂಧಿಸಿ ಯುದ್ಧಮಾಡಿ ಸೋಲಿಸಿ, ಜೇಬಲ್ ಹೇಮ್ರಿನ್ ಎಂಬ ಪರ್ವತದ ಕಡೆಗೆ ಅವರನ್ನು ಓಡಿಸಿಬಿಟ್ಟರು.

ಬಾಲ್ಕನ್.

ಸರ್ವಿಯನ್ನರೂ, ಇಂಗ್ಲೀಷ್ ಫ್ರೆಂಚ್ ರಷ್ಯನ್ ಗ್ರೀಸ್ ಸೈನಿಕರೂ ಸಹ ಬೇರೆ ಬೇರೆ ಕಡೆಯಲ್ಲಿ ಬಲ್ಗೇರಿಯನ್ನರ ಮೇಲೆ ಯುದ್ಧವನ್ನು ಚುರುಕಾಗಿ ಆರಂಭಿಸಿದ್ದಾರೆ. ಇಟಲಿಯವರು ಪ್ರಬಲವಾಗಿ ಶತ್ರುಗಳಮೇಲೆ ಬಿದ್ದು ಯುದ್ಧಮಾಡಿ ಒಂದೆರಡು ಕಡೆ ಶತ್ರುಗಳ ಸ್ಥಾನಗಳನ್ನು ವಶಪಡಿಸಿಕೊಂಡಿದ್ದಾರೆ.

ಇತರವಿಷಯಗಳು.

೪೫ ವರ್ಷ ವಯಸ್ಸಿನೊಳಗಣ ವಿವಾಹಿತರೂ ಅವಿವಾಹಿತರೂ ಆದ ಪುರುಷರು ೨ ಸ್ವಇಚ್ಛೆಯಿಂದ ಸೇನಾಭಾಗಗಳನ್ನು ಹೊಸದಾಗಿ ಕೂಡಿಸುವುದಕ್ಕೆ ಇಂಗ್ಲೀಷ್ ಯುದ್ಧಕಾರ್ಯಾಲಯದವರು ಪ್ರಕಟನಮಾಡಿದ್ದಾರೆ.

ಕಳೆದವಾರದಲ್ಲಿ ಆಂಗ್ಲದೇಶತೀರಗಳಿಗೆ ಹೊರಗಣಿಂದ ೨೮೭೪ ಹಡಗುಗಳು ಬಂದು ಅಲ್ಲಿಂದ ಹೊರಕ್ಕೆ ೨೯೩೪ ಹಡಗುಗಳು ಪ್ರಯಾಣಮಾಡಿ ಹೋಗಿರುತ್ತವೆ. ಶತ್ರುಗಳಿಂದ ಆ ವಾರದಲ್ಲಿ ೪೬ ಹಡಗುಗಳು ಮುಳುಗಿಸಲ್ಪಟ್ಟವೆ.

ಜರ್ಮನರ ಒಂದು ದೊಡ್ಡ ವಿಮಾನವು ಮೊನಾಸ್ಟಿರಿನ ಚಿಸ್ಮಾದಹತ್ತಿರ ೧೦ ಸಾವಿರ ಅಡಿಯಮೇಲಿಂದ ಕೆಳಕ್ಕೆ ಬಿದ್ದು ನಷ್ಟವಾಯಿತೆಂದೂ ಒಳಗಿದ್ದ ೬ ಮಂದಿ ವೈಮಾನಿಕರೂ ಸತ್ತರೆಂದೂ ರಷ್ಯಾದೇಶದ ವಾಯು ವಾರ್ತೆಯಿಂದ ಗೊತ್ತಾಗಿರುತ್ತದೆ.

ಇಂಗ್ಲೆಂಡ್ ಹಾಲೆಂಡ್ ತೀರಗಳ ಮಧ್ಯದಲ್ಲಿ ಇಂಗ್ಲೀಷರ ಕಾವಲಿನ ಹಡಗುಗಳ ದಳವು ಸಂಚರಿಸುತ್ತಿರುವಾಗ ರಾತ್ರಿಯಹೊತ್ತು ಜರ್ಮನರ ೧೧ ಡಿಸ್ಟ್ರಾಯರ್ ಜಾತಿಯ ಹಡಗುಗಳು ಕಾಣಿಸಿಕೊಂಡುವು. ಇಂಗ್ಲೀಷ್ ಹಡಗುಗಳು ಕೂಡಲೇ ಅವುಗಳಮೇಲೆ ಫಿರಂಗಿಗುಂಡುಗಳನ್ನು ಸುರಿಸುವುದಕ್ಕುಪಕ್ರಮಿಸಲು, ಅವೆಲ್ಲಾ ಹೊಗೆಯ ಮರೆಯಲ್ಲಿ ತಲೆತಪ್ಪಿಸಿಕೊಂಡು ಓಡಿದುವು. ಅವು ಜೇಬ್ರ್ಯುಜ್ಜಿಗೆ ಹೋಗಿ ಸೇರುವವರೆಗೆ ನಮ್ಮ ಹಡಗುಗಳು ಬೆನ್ನಂಟಿ ಓಡಿಸಿಕೊಂಡುಹೋಗಿ ಮರಳಿಬಂದುವು.

ಜರ್ಮನರಲ್ಲಿ ಪ್ರಬಲವಾದ ಯುದ್ಧವನ್ನು ನಡೆಯಿಸುವ ಸಾಮರ್ಥ್ಯವು ಇನ್ನೂ ಕುಗ್ಗಿಲ್ಲವೆಂತಲೂ, ಸೈನಿಕಸಾಧನದ ಕೊರತೆಯಿಂದ ಅವರೇನೂ ಹಣ್ಣಿಗೆಬರುವಹಾಗಿಲ್ಲವೆಂತಲೂ, ಈ ಯುದ್ಧವು ಸೈನಿಕವಿಜಯದಿಂದ ಕೊನೆಮುಟ್ಟುವಹಾಗಿಲ್ಲವೆಂತಲೂ, ಧನದ ಮತ್ತೂ ಇತರ ಸಾಮಗ್ರಿಗಳ ಕೊರತೆಯಿಂದಲೇ ಶತ್ರುಗಳು ಹಣ್ಣಿಗೆ ಬಂದರೆ ಬರಬೇಕಾಗುವುದೆಂತಲೂ, ಇನ್ನೊಂದು ವರ್ಷದವರೆಗೂ ಈ ಮಹಾಯುದ್ಧವು ನಿಲ್ಲಲಾರದೆಂತಲೂ, ಅಮೇರಿಕಾದ ಯುದ್ಧಕಲಾ ವಿಚಕ್ಷಣರು ಅಭಿಪ್ರಾಯಪಟ್ಟಿದ್ದಾರೆ.

ರಷ್ಯಾಕ್ಕೆ ಸೇರಿದ ಕ್ರೋಪೋಟ್ಕಿನ್ ರಾಜಕುಮಾರನು ೪೦ ವರ್ಷಗಳ ಕೆಳಗೆ ಸೈಬೀರಿಯಾದಿಂದ ತಲೆತಪ್ಪಿಸಿಕೊಂಡು ಹೋಗಿ ಆಂಗ್ಲದೇಶದಲ್ಲಿ ವಾಸಮಾಡಿಕೊಂಡಿದ್ದನು. ಈಗಣ ರಷ್ಯಾ ಪ್ರಜಾಪ್ರಭುತ್ವದವರು ಈ ರಾಜಕುಮಾರನನ್ನು ಸಪರಿವಾರವಾಗಿ ಸ್ವದೇಶಕ್ಕೆ ತತ್‌ಕ್ಷಣವೇ ಬರಬೇಕೆಂದು ಆಹ್ವಾನವನ್ನು ಕಳುಹಿಸಿದ್ದಾರೆ. ರಷ್ಯಾರಾಷ್ಟ್ರದಮೇಲೆಲ್ಲಾ ಈತನಿಗೆ ವಿಶೇಷ ಗೌರವವಿರುವುದಂತೆ. ಜಾತೀಯ ಪುನರ್ನಿರ್ಮಾಣಕ್ಕೆ ಈತನಿಂದ ಸಹಾಯವಾಗುವುದೆಂದು ಈಗಣ ಪ್ರಭುತ್ವದವರು ಈತನನ್ನು ಕರೆಯಿಸಿಕೊಳ್ಳುವುದರಲ್ಲಿದ್ದಾರೆ.

ರಷ್ಯಾ ದೇಶದ ಡ್ಯೂಮಾ ಎಂಬ ರಾಜಕೀಯ ಸಭೆಯು ಕಳೆದವಾರದಲ್ಲಿ ಕೂಡಿದ್ದಾಗ್ಗೆ ರೋಡಿಯಾಂಕೋ ರವರು—" ನಮ್ಮ ವಿಜಯವು ಎಷ್ಟು ಘನತರವಾಗಿ ಸಾಗಿದರೆ ನಮ್ಮ ಪ್ರಜಾಪರಿಪಾಲನಾವಿಜಯವೂ ಅಷ್ಟು ಘನವಾಗುವುದು. ಜರ್ಮನರ ಸೈನಿಕಾಧಿಕ್ಯವನ್ನು ಅಡಗಿಸಿಬಿಡದಿದ್ದರೆ ನಮ್ಮ ಶ್ರಮವೆಲ್ಲವೂ ವ್ಯರ್ಥವಾಗುವುದು. ಆಯುಧಸಾಮಗ್ರಿಗಳನ್ನು ವಿಶೇಷವಾಗಿ ಕೂಡಿಸುವುದರಲ್ಲಿ ನಾವು ದೊಡ್ಡ ಪ್ರಯತ್ನವನ್ನು ಮಾಡಬೇಕು. ನಿರಂಕುಶಾಧಿಕಾರವನ್ನು ಮೆಟ್ಟಿ ಕೆಡಹುವುದಕ್ಕಾಗಿಯೇ ರಷ್ಯಾದೇಶವು ಸ್ವಾತಂತ್ರ್ಯವನ್ನವಲಂಬಿಸಿತು. ಆಕ್ರಮಿತ ದೇಶಗಳಿಂದ ಶತ್ರುಗಳನ್ನು ಓಡಿಸುವುದೇ ಮುಖ್ಯವಾದುದು. ಎಷ್ಟು ನಷ್ಟವು ತಟ್ಟಿದರೂ ಸಹಿಸಿಕೊಳ್ಳುವಂತೆ ಮಾಡಬೇಕೆಂದು ನಿರ್ಬಂಧಪಡಿಸುವುದಕ್ಕೆ ಈಗಣ ಪ್ರಭುತ್ವದವರಿಗೆ ಅಧಿಕಾರವಿರುವುದು " ಎಂದು ಹೇಳಿದರು. ಸಭಿಕರೆಲ್ಲರೂ ಇದಕ್ಕೆ ಅನುಮೋದಿಸಿದರು.

ಭರತಖಂಡದ ವೃತ್ತಾಂತಗಳು.

ಕಳೆದ ತಾ|| ೧೬ ರವರೆಗೆ ಭರತಖಂಡದ ಯುದ್ಧಋಣಪತ್ರಗಳು ೧೯೮೯೧೫೬೦೦ ರೂ. ಗಳವು ಅಪೇಕ್ಷಿಸಲ್ಪಟ್ಟಿದ್ದುವು.

ಕಳೆದ ತಾ|| ೧೨ ರ ಬೆಳಗ್ಗೆ ಕಾಂಗ್ರಾ ಜಿಲ್ಲೆಯಲ್ಲಿ ಭೂಕಂಪನವಾಯಿತು. ಇಬ್ಬರು ಭಾರತೀಯರು ಸತ್ತರು. ಬಹಳ ಮನೆಗಳು ಹಾಳಾದುವು.

ಮದ್ರಾಸಿನಲ್ಲಿ ಸ್ತ್ರೀಯರಿಗೋಸ್ಕರವೇ ಒಂದು ವೈದ್ಯಕಲಾಶಾಲೆಯನ್ನು ಪ್ರತ್ಯೇಕವಾಗಿ ಏರ್ಪಡಿಸುವುದಕ್ಕಾಗಿ ಆ ಸರ್ಕಾರದವರು ನಿಶ್ಚಯಿಸಿದ್ದಾರೆ.

ಕಳೆದ ತಾ|| ೫ ಕ್ಕೆ ಕಡೆಯಾದ ೧ ವಾರದ ಕಾಲದಲ್ಲಿ ಭರತಖಂಡದೊಳಗೆಲ್ಲಾ ೬೫೦೮ ಮಂದಿಗೆ ಪ್ಲೇಗುತಗುಲಿ ೫೪೧೬ ಮಂದಿಗಳು ಸತ್ತಿರುತ್ತಾರೆ.

೨೩ ನೆ ಮದ್ರಾಸು ಪ್ರಾಂತಿಕಸಭೆಯು ಗೂಡೂರಿನಲ್ಲಿ ನಮ್ಮ ಹಿಂದಣ ದಿವಾನರಾದ ವಿ.ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ನೆರವೇರಿತು. ಆಗಲೇ ಕೂಡಿದ್ದ ವರ್ಣಾಶ್ರಮಧರ್ಮಸಭೆಗೆ ನಮ್ಮ ಮೈಸೂರಿನ ಸ್ವಾಮಿ ಗೋವಿಂದಾಚಾರ್ಯರು ಅಧ್ಯಕ್ಷರಾಗಿದ್ದರು.

ಈಗಣ ನೂತನ ದೇಶರಕ್ಷಕ ಸೈನ್ಯದಲ್ಲಿ ಇಬ್ಬರು ಸೇನಾ ಸಂಬಂಧವಾದ ಕೆಲಸವನ್ನು ಮಾಡುತ್ತಿರುವಾಗ್ಗೆ ಮಧ್ಯದಲ್ಲಿ ತಮ್ಮ ಅಂಗಿಗಳನ್ನು ಕಾರಣವಿಲ್ಲದೆ ಬಿಚ್ಚಿದರೆಂಬ ತಪ್ಪಿತಕ್ಕಾಗಿ ೨ ದಿನಗಳಕಾಲ ನಿರ್ಬಂಧವಾಸಶಿಕ್ಷೆಯು ಅವರಿಗೆ ವಿಧಿಸಲ್ಪಟ್ಟಿತು. ದೇಶರಕ್ಷಕ ಸೈನ್ಯದಲ್ಲಿ ಮೊಟ್ಟಮೊದಲು ಶಿಕ್ಷಿಸಲ್ಪಟ್ಟವರು ಇವರೇ.

ಕಳೆದವಾರದಲ್ಲಿ ಭರತಖಂಡದ ಹಲವು ಕಡೆಗಳಲ್ಲಿ ಪ್ರಾಂತಿಕ ಸಭೆಗಳೂ ಜಿಲ್ಲಾ ಸಭೆಗಳೂ ಸುಗ್ಗಿಯಾಗಿ ನಡೆದಿರುವುವು. ಬಹುಶಃ ಎಲ್ಲ ರಾಜಕೀಯ ಸಭೆಗಳಲ್ಲೂ ಭರತಖಂಡಕ್ಕೆ ಇಂದೇ ಸ್ವರಾಜ್ಯವು ಸಿದ್ಧಿಸಿಹೋಗಬೇಕೆಂಬ ಅರ್ಥದ ನಿರ್ಧಾರಗಳು ಮಾಡಲ್ಪಟ್ಟುವು. ಆಂಗ್ಲಾಧಿಕಾರಿಗಳೆಲ್ಲಾ ಇಂದೇ ತೊಲಗಿ ಹೋಗಬೇಕೆಂಬರ್ಥದ ಭಾಷಣಗಳನ್ನು ಕೂಡ ಕೆಲರು ಮಾಡಲು ಹಿಂಜರಿದಿಲ್ಲ.

ಕುನೂರಿನ ಒಬ್ಬ ಪೋಸ್ಟ್‌ಮಾಸ್ಟರಾದ ಪರಮೇಶ್ವರಯ್ಯರ್ ಎಂಬುವವನು ಸರ್ಕಾರದ ೨೧೦೦೦ ರೂ. ಗಳನ್ನು ಅಪಹರಿಸಿಕೊಂಡು ಬೊಂಬಾಯಿಯ ಮೂಲಕ ಮೆಸಪೆಟೋಮಿಯಾಕ್ಕೆ ಹೋಗಿಬಿಡಬೇಕೆಂದು ಪ್ರಯತ್ನಿಸಿದ್ದನು. ಪೋಸ್ಟಲ್ ಸೂಪರಿಂಟೆಂಡೆಂಟರು ಈತನನ್ನು ಗೂಡಲೂರಿನಲ್ಲಿ ಹಿಡಿದು ಪೊಲೀಸಿಗೆ ಒಪ್ಪಿಸಿದರು. ಇವನ ವಿಚಾರಣೆಯು ಕೊಯಮತ್ತೂರಿನಲ್ಲಿ ನಡೆಯುತ್ತಿದೆ.

ಹಡಗುಗಳು ಸಾಲದೆ ಇರುವುದರಿಂದ ಇನ್ನುಮುಂದೆ ಸೀಮೆಗೂ ಭರತಖಂಡಕ್ಕೂ ಪಕ್ಷಕ್ಕೆ ಒಂದೊಂದರಂತೆ ಅಂಚೆಯಹಡಗು ಹೋಗುವಂತೆಯೂ ಬರುವಂತೆಯೂ ಇಂಡ್ಯಾ ಸರ್ಕಾರದವರೂ ಸ್ಟೇಟ್ ಸೆಕ್ರೆಟರಿಯವರೂ ಆಲೋಚಿಸಿ ನಿರ್ಧರಿಸಿದ್ದಾರೆ. ಇದುವರೆಗೆ ವಾರಕ್ಕೊಂದೊಂದರಂತೆ ಹೋಗಿಬರುತ್ತಿದ್ದುವು. ಈ ಹೊಸ ಏರ್ಪಾಡಿನಂತೆ ಇಂಗ್ಲಾಂಡಿನಿಂದ ಜೂನ್ ತಿಂಗಳಾರಂಭದಿಂದಲೂ ಭರತಖಂಡದಿಂದ ಆಗಸ್ಟ್ ತಿಂಗಳಾರಂಭದಿಂದಲೂ ಜರುಗುವುದು.

ಭರತಖಂಡದಿಂದ ಸೀಮೆಗೆ ದೇಶೀಯ ಮಹಾಸಭಾ ಪ್ರತಿನಿಧಿಗಳಾಗಿ ಕೆಲರನ್ನು ಕಳುಹಿಸಬೇಕೆಂದು ನಿರ್ಧರವಾಗಿದ್ದಿತಷ್ಟೆ. ಆದರೆ ಸೀಮೆಯಿಂದ ಸರ್ ವಿಲಿಯಂ, ವೆಡರ್ಬರ್ನ್ ರವರು ಅ|| ಬಿ. ಎನ್. ಬಾಸುರವರಿಗೆ ಒಂದು ತಂತ್ರೀ ವಾರ್ತೆಯ ಮೂಲಕ "ಇಂಗ್ಲಾಂಡಿನ ಸಂಗತಿ ಸಂದರ್ಭಗಳು ವ್ಯಕ್ತವಾಗುವವರೆಗೂ ಭಾರತೀಯ ಪ್ರತಿನಿಧಿಗಳ ಪ್ರಯಾಣವನ್ನು ನಿಲ್ಲಿಸುವುದು ಯುಕ್ತವು" ಎಂದು ತಿಳಿಯಿಸಿರುವುದರಿಂದ ಸದ್ಯಃ ಈ ಪ್ರತಿನಿಧಿಗಳ ಪ್ರಯಾಣವು ನಿಂತಂತೆಯೇ.

ಮಹಮದೀಯರಲ್ಲೂ ಇನ್ನುಕೆಲರಲ್ಲೂ ಬಡ್ಡಿಯನ್ನು ತೆಗೆದುಕೊಳ್ಳುವುದು ಪಾಪವೆಂಬವಿಧಿಯಿದೆ. ಈ ಕಾರಣದಿಂದಲೂ ಇತರ ಕಾರಣದಿಂದಲೂ ಬಡ್ಡಿಯ ಒಪ್ಪಿಗೆಯಮೇಲೆ ಯುದ್ಧಋಣದ ಫಂಡಿಗೆ ಹಣವನ್ನು ಕೊಡುವುದಕ್ಕೆ ಹಲವರಿಗೆ ಇಷ್ಟವಿಲ್ಲವೆಂಬ ಸಂಗತಿಯು ಪ್ರಭುತ್ವದವರಿಗೆ ತಿಳಿಯಬರಲು, "ಬಡ್ಡಿಯಿಲ್ಲ" ಎಂದು ಅಂಥವರ ಪತ್ರಗಳಮೇಲೆ ಸರ್ಟಿಫೈ ಮಾಡಿಕೊಡುವುದಕ್ಕೆ ಸರ್ಕಾರದವರು ಏರ್ಪಡಿಸಿದ್ದಾರೆ. ಪತ್ರವನ್ನು ಅವರು ಹಿಂದಿರುಗಿಸಿ ಹಣವನ್ನು ಕೇಳಿದಾಗ ಅಸಲು ಮಾತ್ರವೇ ಕೊಡಲ್ಪಡುವುದು.

ಕ್ರೈಯೋರಾ ಎಂಬ ಒಬ್ಬ ಜಪಾನ್ ವಿದ್ಯಾರ್ಥಿಯು ಸಂಸ್ಕೃತವನ್ನೂ ಬೌದ್ಧವಾಙ್ಮಯವನ್ನೂ ಕಲಿತುಕೊಂಡು ಹೋಗುವುದಕ್ಕಾಗಿ ಜಪಾನ್ ಸರ್ಕಾರದ ವಿದ್ಯಾರ್ಥಿವೇತನವನ್ನು ಪಡೆದು ಈಗ ಕಲ್ಕತ್ತಾಕ್ಕೆ ಬಂದಿರುತ್ತಾನೆ. ಈತನು ತನ್ನಜತೆಗೆ ಬೌದ್ಧತ್ರಿಪಿಟಕ ಎಂದು ಕರೆಯಲ್ಪಡುತ್ತಿರುವ ೩೦ ಸಂಪುಟಗಳ ಗ್ರಂಥವನ್ನು ತೆಗೆದುಕೊಂಡುಬಂದಿದ್ದಾನೆ. ಇವರಲ್ಲಿರುವ ಕಥೆಗಳು ಚೀನಾದವರ ಸಿದ್ಧಾಂತಕ್ಕೆ ಅನುಸಾರವಾಗಿವೆಯಂತೆ. ಇದನ್ನು ಟೋಕಿಯೋ ವಿಶ್ವವಿದ್ಯಾಲಯದವರು ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಬಹುಮಾನವಾಗಿ ಕಳುಹಿಸಿಕೊಟ್ಟಿದ್ದಾರೆ.

ಸಿಲೋನ್ ಪ್ರಭುತ್ವದವರು ೨ ರೂ. ಬೆಲೆಯ ೫ ಲಕ್ಷ ನೋಟುಗಳನ್ನು ಈಗ ಮೊದಲಸಲ ಮುದ್ರಿಸಿ ವ್ಯವಹಾರಕ್ಕೆ ತಂದಿರುವರು. ಕೂಲಿಗಾರರಿಗೆ ಹಂಚಿಕೊಡುವುದಕ್ಕೆ ಇವು ಬಹಳ ಉಪಯೋಗಕರವಾಗಿವೆಯೆಂದು ವ್ಯವಸಾಯಗಾರರು ಒಪ್ಪಿಕೊಂಡರು. ಆ ನೋಟುಗಳಲ್ಲಿ ೩ ಲಕ್ಷವನ್ನು ಬ್ಯಾಂಕುಗಳವರೇ ತೆಗೆದುಕೊಂಡರು. ಉಳಿದುವನ್ನು ಸರ್ಕಾರಿ ಕಚೇರಿಗಳ ಉಪಯೋಗಕ್ಕೆ ಇಟ್ಟುಕೊಂಡರು. ಸಾಮಾನ್ಯವಾದ ಕಾಗದದಮೇಲೆ ಒಂದುಕಡೆ ಇದನ್ನು ಅಚ್ಚುಮಾಡಿದ್ದಾರೆ. ೬ ತಿಂಗಳು ತುಂಬಿದ ಕೂಡಲೇ ಪ್ರಭುತ್ವದವರು ಇವನ್ನೆಲ್ಲಾ ಹಿಂದಕ್ಕೆ ತರಿಸಿಕೊಂಡು ಹೊಸನೋಟುಗಳನ್ನು ಮುದ್ರಿಸಿಕೊಡುವರು. ಬರುವ ವರ್ಷದಲ್ಲಿ ೧ ರೂ. ನ ನೋಟುಗಳನ್ನು ಕೂಡ ವ್ಯವಹಾರಕೆ ತರುವರೆಂಬ ವಾರ್ತೆಯಿದೆ.

ಫರೀದ್‌ಪೂರ್ ಪ್ರಾಂತದಲ್ಲಿ ಒಂದು ತಾಳೆಮರವು ಹಗಲಹೊತ್ತೆಲ್ಲಾ ಗರಿಗಳನ್ನು ಪ್ರಸರಿಸಿಕೊಂಡು ನಿಂತಿದ್ದು ಸಾಯಂಕಾಲವಾಗುತ್ತಲೂ ಭೂಮಿಗೆ ಬಾಗಿ ಸೊಂಕುತ್ತಿರುವುದಂತೆ. ಹೀಗೆ ಪ್ರತಿದಿನವೂ ನಡೆಯುತ್ತಿರುವುದು. ಇದರ ವಿಶೇಷವನ್ನು ಪರೀಕ್ಷಿಸುವುದಕ್ಕಾಗಿ ಪ್ರೊ|| ಜೆ. ಸಿ. ಬೋಸ್‌ರವರು ತಕ್ಕ ಪರಿಕರಗಳೊಡನೆ ೨ ಸಲ ಪರಿಶೋಧಕರನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದರು. ಪತ್ರವೃಕ್ಷದ ಅಂತರ್ಗರ್ಭಿತವಾಗಿರುವ ಶಕ್ತಿಯ ಚಲನವು ಕ್ಷಣಕ್ಷಣಕ್ಕೂ ವಿಕಾರವಾಗುತ್ತಿರುವುದರಿಂದ ಹೀಗಾಗುವುದೆಂದು ಅವರು ಗೊತ್ತುಪಡಿಸಿದರು. ಈ ಮರದಲ್ಲಿ ಆ ಶಕ್ತಿಯು ವಿಕಾರವಾಗಿರುವುದರಿಂದಲೇ ಹೀಗಾಗುತ್ತಿರುವುದು. ಮಾನವಾದಿ ಪ್ರಾಣಿಗಳಿಗಿರುವಂತೆಯೇ ತುರುಗುಲ್ಮಾದಿಗಳಲ್ಲೂ ಚಲನಶಕ್ತಿ ಯುಂಟೆಂಬ ಪ್ರೊ|| ಬಾಸುರವರ ಸಿದ್ಧಾಂತಕ್ಕೆ ಇದು ಸ್ಥೂಲದೃಷ್ಟಾಂತವು.

ಆಗ್ರಾದಲ್ಲಿ ರಂಗಿನ ಗಾಜುಗಳಮೇಲೆ ಬರೆಯುವುದಕ್ಕುಪಯೋಗಿಸುವ ಪೆನ್ಸಿಲ್ಲುಗಳನ್ನು ನಿರ್ಮಿಸುವ ಪರಿಶ್ರಮವು ಆರಂಭಿಸಲ್ಪಟ್ಟಿದೆ. ಶಾಸ್ತ್ರಪರಿಶೋಧನವನ್ನು ನಡೆಯಿಸುವ ಸ್ಥಲದಲ್ಲಿ ಗಾಜಿನ ಬಳಿಗೆಗಳಮೇಲೆ ಬರೆಯುವುದಕ್ಕೆ ಈ ಪೆನ್ಸಿಲ್ಲುಗಳನ್ನು ವಿಶೇಷವಾಗಿ ಉಪಯೋಗಿಸುವರಂತೆ. ಇದುವರೆಗೆ ಇವು ಜರ್ಮನಿ ಆಸ್ಟ್ರಿಯಾ ದೇಶಗಳಿಂದ ಬರುತ್ತಿದ್ದುವು. ಆಗ್ರಾದ ಕಲಾಶಾಲೆಯ ಮುಖ್ಯೋಪಾಧ್ಯಾಯರಾದ ಪ್ರೊ|| ನಾಗುರವರು ತಕ್ಕ ಶೋಧನೆಯಿಂದ ಶಾಶ್ವತವಾಗಿರತಕ್ಕ ರಂಗನ್ನು ಕಂಡು ಹಿಡಿದು ಇದಕ್ಕೆ ಉಪಯೋಗಿಸುತ್ತಿರುವರಂತೆ. ಸಂಯುಕ್ತ ಪ್ರಾಂತಗಳ ಪರಿಶ್ರಮ ಶಾಖಾಧ್ಯಕ್ಷರು ಕೆಲವು ಪೆನ್ಸಿಲ್ಲುಗಳನ್ನು ಲಂಡನ್ನಿಗೆ ಕಳುಹಿಸಿಕೊಟ್ಟರಲು, ಅಲ್ಲಿ ಪರಿಶೋಧನೆಮಾಡಿದವರು "ಇದುವರೆಗೆ ಜರ್ಮನಿಯಿಂದ ಬರುತ್ತಿದ್ದ ಪೆನ್ಸಿಲ್ಲುಗಳಿಗಿಂತ ಇವು ಬಹಳ ಚೆನ್ನಾಗಿವೆ." ಎಂದು ಉತ್ತರ ಕೊಟ್ಟಿರುವರು. ಇವುಗಳ ನಿರ್ಮಾಣಕ್ಕೆ ಬೇಕಾದ ಮೂಲಸಾಮಗ್ರಿಗಳೆಲ್ಲಾ ಆಗ್ರಾದ ಸುತ್ತುಮುತ್ತಣ ಪ್ರದೇಶದಲ್ಲೇ ದೊರೆಯುವುವಂತೆ.

ಭರತಖಂಡದ ನಾನಾಪ್ರಾಂತದ ಕೆಲವು ವರ್ತಮಾನಪತ್ರಿಕಾ ಪ್ರತಿನಿಧಿಗಳು ಸದ್ಯದ ಮೆಸಪೆಟೋಮಿಯಾ ಸ್ಥಿತಿಗತಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಬರುವುದಕ್ಕೆ ಹೋಗಿದ್ದರು. ಇವರಲ್ಲಿ ಹಿಂದೂ ಮುಸಲ್ಮಾನ್ ಯೂರೋಪಿಯನ್ ಜನವರ್ಗದವರೆಲ್ಲಾ ೮-೯ ಜನರಿದ್ದರು. ಸ್ಟೇಟ್‌ಸೆಕ್ರೆಟರಿಯವರ ಅಪ್ಪಣೆಮೇರೆಗೆ ಸೈನ್ಯ ಚಲನ ಯುದ್ಧರಂಗಕಾರ್ಯ ಮೊದಲಾದುವುಗಳನ್ನೆಲ್ಲಾ ಇವರಿಗೆ ಅಲ್ಲಿಯ ಸೈನ್ಯಾಧಿಕಾರಿಗಳು ತೋರಿಸುವುದರಲ್ಲಿ ಸಹಾಯಮಾಡಿ ಬಹಳವಾಗಿ ಗೌರವಿಸಿದರು. ಇವರು ಬಾಗ್ದಾದು ಪಟ್ಟಣಕ್ಕೂ ಹೋಗಿದ್ದರು. ಅದನ್ನು ಇಂಗ್ಲೀಷರು ಹಿಡಿದು ಸ್ವಲ್ಪ ದಿನವೇ ಆಗಿದ್ದರೂ ಅಲ್ಲಿ ಅವರು ಸ್ಥಾಪಿಸಿರುವ ಶಾಂತಿಪರಿಪಾಲನಕ್ರಮ ಮೊದಲಾದುವುಗಳನ್ನು ನೋಡಿ ಆನಂದಿಸಿದರು. ಕಲ್ಕತ್ತಾದ ಇಂಗ್ಲೀಷ್‌ಮನ್, ಮದ್ರಾಸು ಮೇಲ್, ಅಲಹಾಬಾದಿನ ಪಯೋನಿಯರ್ ಪತ್ರಿಕಾ ಪ್ರತಿನಿಧಿಗಳೂ, ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡ್ಯಾ ಪ್ರತಿನಿಧಿಯೂ, ಬೊಂಬಾಯಿ ದೇಶ ಭಾಷಾಪತ್ರಿಕೆಗಳ ಪ್ರತಿನಿಧಿ ಜೋಷಿಯವರು ಸಹ ಯುದ್ಧರಂಗಕ್ಕೂ ಕೂಡ ಹೋಗಿ ನೋಡಿಕೊಂಡು ಬಂದರು. ಮೆಸಪೆಟೋಮಿಯಾದಲ್ಲಿನ ಈಗಿನ ಸ್ಥಿತಿಗತಿಗಳು ಎಲ್ಲ ವಿಧದಲ್ಲೂ ಬಹಳ ತೃಪ್ತಿಕರವಾಗಿವೆಯೆಂದು ಇವರುಗಳು ಅಭಿಪ್ರಾಯಪಟ್ಟಿರುತ್ತಾರೆ.

ನಮ್ಮ ದೇಹಕ್ಕೆ ನಿದ್ರೆಯು ಮುಖ್ಯವು. ನಮ್ಮಲ್ಲಿ ಕೆಲರು ವಿಶ್ರಾಂತಿಗಾಗಿ ದಿನಕ್ಕೆ ೪ ಗಂಟೆಯ ಹೊತ್ತಿನ ನಿದ್ರೆಯು ಸಾಕೆಂದು ವಾದಿಸುತ್ತ ಅದಕ್ಕೆ ನೆಪೋಲಿಯನ್ ಬೋನಾಪಾರ್ಟನ್ನು ಉದಹರಿಸುವರು. ಆತನ ಚರಿತ್ರದಮೂಲಕ ಅವನ ದಿನಚರ್ಯೆಯನ್ನು ಪರಿಶೋಧಿಸಲಾಗಿ, ಆ ಶೂರನು ದಿನ ೧ ಕ್ಕೆ ೬ ಗಂಟೆಗಳಿಂದ ೮ ಗಂಟೆಗಳವರೆಗೂ ನಿದ್ರಿಸುತ್ತಿದ್ದನೆಂತಲೂ, ಒಂದೊಂದುಸಲ ೨-೩ ದಿನಗಳ ಕಾಲ ಅಖಂಡವಾಗಿ ನಿದ್ರೆಯಿಲ್ಲದೆ ಹೋದಾಗ ೩೬ ಗಂಟೆಗಳಹೊತ್ತು ಅಖಂಡವಾಗಿ ಮಲಗಿ ನಿದ್ರಿಸುತಿದ್ದನೆಂತಲೂ ತಿಳಿದುಬರುತದೆ. ಒಂದು ನಿಮಿಷ ಕಾಲವನ್ನಾದರೂ ವ್ಯರ್ಥವಾಗಿ ಕಳೆಯುವುದಕ್ಕೆ ಒಪ್ಪದ ಬೆಂಜಮಿನ್ ಫ್ರಾಂಕ್ಲಿನ್ನನು ಕೂಡ ದಿನಕ್ಕೆ ಕನಿಷ್ಠಪಕ್ಷ ೬ ಗಂಟೆಗಳಕಾಲಕ್ಕೆ ಕಡಿಮೆಯಿಲ್ಲದೆ ನಿದ್ರಿಸುತ್ತಿದ್ದನು. ಈ ಮೇಲ್ಕಂಡ ಮಹಾಪುರುಷರೀರ್ವರೂ ನಿದ್ರೆಗಾಗಿ ಉಪಯೋಗಿಸುತ್ತಿದ್ದ ಕಾಲವು ಸರ್ವಸಾಧಾರಣವಾಗಿ ಸಕಲ ಮನುಷ್ಯರೂ ನಿದ್ರೆಗಾಗಿ ಉಪಯೋಗಿಸಲರ್ಹವಾದ ಕಾಲವೆಂದು ಸ್ಪಷ್ಟವಾಗುತ್ತದೆ. ಮನುಷ್ಯನು ಹೆಚ್ಚುಕಾಲ ಕೆಲಸವಿಲ್ಲದೆ ನಿದ್ರಿಸುವುದು ಕೂಡ ಒಳ್ಳೆಯದಲ್ಲ. ನಮ್ಮಲ್ಲಿ ಬಹುಮಂದಿ ಯುವಕರು ಕಾರ್ಯನಿಯಮವಿಲ್ಲದೆ ಕೆಟ್ಟುಹೋಗುತ್ತಿದ್ದಾರೆ. ಸರಿಯಾದ ಕಾಲದಲ್ಲಿ ಮಲಗಿಕೊಂಡು ಸರಿಯಾದ ಕಾಲದಲ್ಲಿ ಏಳಬೇಕು. ಅಮಿತ ನಿದ್ರೆಯನ್ನೂ ಅಮಿತಕಾರ್ಯತತ್ಪರತೆಯನ್ನೂ ಬಿಡಬೇಕು. ೧೦ ಗಂಟೆಗೆ ಮಲಗಿ ಬೆಳಗಿನ ಉಷಃಕಾಲಕ್ಕೆ ಏಳುವ ಪದ್ಧತಿಯು ಬಹಳ ಒಳ್ಳೆಯದು. ೮-೯ ಗಂಟೆಯ ಹೊತ್ತು ಮಲಗುವ ಅಭ್ಯಾಸವಿರುವವರು ೪ ಗಂಟೆಗಳಕಾಲ ಮಾತ್ರವೇ ನಿದ್ರಿಸುವುದು ಆರೋಗ್ಯಕ್ಕೆ ಹಾನಿಕರವು. ಎಂದು ಒಂದಾನೊಂದು ವೈದ್ಯಪತ್ರಿಕೆಯು ಹೇಳುತ್ತದೆ.

ವಿದೇಶವೃತ್ತಾಂತಗಳು.

ಈಗ ಇಂಗ್ಲೀಷರಿಗೆ ದಿನವೊಂದಕ್ಕೆ ೧೧ ಕೋಟಿಯೂ ೧೭ ಲಕ್ಷ ರೂ. ಗಳು ಯುದ್ಧದ ವೆಚ್ಚಕ್ಕೆ ತಗುಲುತ್ತಿವೆ.

ಜರ್ಮನ್ ಮುಖ್ಯಮಂತ್ರಿಯು ವಿಯನ್ನಾ ಪಟ್ಟಣಕ್ಕೆ ಹೋಗಿ ಅಲ್ಲಿಯ ವಿದೇಶಾಂಗ ಮಂತ್ರಿಯೊಡನೆ ಏನೋ ಆಲೋಚನೆಮಾಡಿಕೊಂಡು ಬಂದರು.

ಅಮೇರಿಕಾದವರು ತಮ್ಮ ವ್ಯಾಪಾರದ ಹಡಗುಗಳಮೇಲೆಲ್ಲಾ ೩ ರಿಂದ ೬ ಅಂಗುಲದವರೆಗಿನ ಬಾಯುಳ್ಳ ಫಿರಂಗಿಗಳು ಕೆಲಕೆಲವನ್ನು ಏರಿಸಿ ಕಳುಹಿಸಬೇಕೆಂದು ನಿರ್ಧರಿಸಿದ್ದಾರೆ.

ಜಾರ್ಜ್ ಸಾರ್ವಭೌಮರವರು ಪತ್ನೀಸಮೇತರಾಗಿ ಕಳೆದವಾರ ಇಂಗ್ಲೆಂಡಿನ ಉತ್ತರಭಾಗಗಳಲ್ಲಿ ಸಂಚರಿಸಿಕೊಂಡು ಅಲ್ಲಿರುವ ಮದ್ದುಗುಂಡುಗಳ ಕರ್ಮಾಗಾರಗಳನ್ನು ಅವಲೋಕಿಸಿ, ಅಲ್ಲಿಯ ಕೆಲಸಗಾರರೊಡನೆಲ್ಲಾ ಬಹು ಪ್ರೀತಿ ವಿಶ್ವಾಸದಿಂದ ಮಾತನಾಡಿ ಉತ್ಸಾಹಪಡಿಸಿ ಬಂದರು.

ಯುದ್ಧಾರಂಭವಾದ ಮೇಲೆ ಆಹಾರ್ಯಪದಾರ್ಥಗಳ ಬೆಲೆಯು ಕೆನಡಾದಲ್ಲಿ ನೂರಕ್ಕೆ ೫ ರಷ್ಟು, ಆಸ್ಟ್ರೇಲಿಯಾದಲ್ಲಿ ೨೫ ರಷ್ಟು, ಇಟಲಿಯಲ್ಲಿ ೩೫ ರಷ್ಟು, ನ್ಯೂಜಿಲಾಂಡಿನಲ್ಲಿ ೨೨ ರಷ್ಟು, ಇಂಗ್ಲಾಂಡಿನಲ್ಲಿ ೯೪ ರಷ್ಟು ಹೆಚ್ಚಿಹೋಗಿವೆ. ಇದಕ್ಕಿಂತಲೂ ಜರ್ಮನಿಯಲ್ಲಿ ಮಿತಿಮೀರಿಹೋಗಿದೆ.

ಗ್ರೀಸ್ ದೇಶದ ೪೦ ಸಾವಿರ ಪ್ರಜೆಗಳು ತಮ್ಮ ಮುಖ್ಯ ನ್ಯಾಯಾಧಿಪತಿಯ ಅಧ್ಯಕ್ಷತೆಯಕೆಳಗೆ ಸಭೆಗೂಡಿ, ಈಗಣ ಗ್ರೀಸ್ ರಾಜರಾದ ಕಾನ್ಸ್ಟಂಟೈನ್‌ರವರನ್ನು ಸಿಂಹಾಸನದಿಂದ ತಳ್ಳಿಹಾಕಬೇಕೆಂತಲೂ, ಅವರ ವಂಶೀಯರಾರಿಗೂ ಪ್ರಭುತ್ವವು ದೊರೆಯದಂತೆ ಮಾಡಬೇಕೆಂತಲೂ ಖಂಡಿತವಾಗಿ ತೀರ್ಮಾನಿಸಿರುವರು.

ಗ್ರೀಕಿನ ಪ್ರಜಾಪ್ರಭುತ್ವದಲ್ಲಿ ನಾಯಕರಾದ ವೆನಿಜುಲಾಸ್‌ರವರನ್ನು ಕೊಲ್ಲುವುದಕ್ಕೆ ಒಂದು ರಹಸ್ಯ ಪ್ರಯತ್ನವು ನಡೆದಿದ್ದಿತು. ಈ ಸಂಬಂಧದಲ್ಲಿ ೯ ಮಂದಿಗಳನ್ನು ಹಿಡಿದು ವಿಚಾರಣೆಮಾಡಿದಾಗ, ಅಥೆನ್ಸ್ ಪಟ್ಟಣದಲ್ಲಿರುವ ರಹಸ್ಯ ಯುದ್ಧಾಧಿಕಾರಿಗಳ ಪ್ರೇರಣೆಯಿಂದ ನಾವು ಇದಕ್ಕೆ ಪ್ರವೃತ್ತರಾಗಿದ್ದೆವೆಂದು ಒಪ್ಪಿಕೊಂಡರು.

ರಷ್ಯಾ ದೇಶದ ಡ್ಯೂಮಾ ಸಭೆಯಲ್ಲಿ ಪ್ರತ್ಯೇಕ ಸಂಧಿಯನ್ನು ಜರ್ಮನರೊಡನೆ ಮಾಡಿಕೊಳ್ಳಲಾಗದು, ಅದು ರಷ್ಯಾಕ್ಕೇ ಅನರ್ಥಕಾರಿ ಎಂಬರ್ಥಕ್ಕೆ ಅನೇಕೋಪನ್ಯಾಸಗಳು ನಡೆದಿರುವುವು. ಅದೇ ಅಭಿಪ್ರಾಯವನ್ನು ಎಲ್ಲ ಪಕ್ಷದ ಪ್ರತಿನಿಧಿಗಳೂ ಅಂಗೀಕರಿಸಿರುವರು. ಕೂಲಿಕಾರರ ಪಕ್ಷದವರೂ ಸಾಂಘಿಕವಾದಿಗಳೂ ಸಹ ಯುದ್ಧವನ್ನು ಮಾಡಿಯೇತೀರಬೇಕೆಂದು ನಿರ್ಧರಿಸಿರುವರು.

ತಟಸ್ಥದೇಶೀಯರು ತಮ್ಮ ರೇವೆಗಳನ್ನು ಬಿಟ್ಟು ತಮ್ಮ ಹಡಗುಗಳನ್ನು ಕದಲಿಸದಂತೆ ನಾವು ಸಬ್ ಮೆರೀನುಗಳ ಮೂಲಕ ಅವರ ಹಡಗುಗಳನ್ನೆಲ್ಲಾ ಕಠಿನತನದಿಂದ ಮುಳುಗಿಸುತ್ತ ಬರಬೇಕು. ಹಾಗಾದರೆ ಅವರ ಹಡಗುಗಳು ಸ್ವಪ್ನದಲ್ಲೂ ಕೂಡ ನಮ್ಮ ಸಬ್ ಮೆರೀನುಗಳ ಯುದ್ಧಸ್ಥಲವಾದ ಸಮುದ್ರಭಾಗಕ್ಕೆ ಬರುವುದಿಲ್ಲವೆಂದು ಜರ್ಮನಿಯಲ್ಲಿರುವ ವಿದ್ಯಾಧಿಕ ಜನಗಳೂ ಕೂಡ ಈಗ ಅಭಿಪ್ರಾಯಪಟ್ಟಿರುವರಂತೆ.

ಎಕ್ಸ್‌ರೇಸಿನ ಮೂಲಕ ಶರೀರಾಂತರ್ಭಾಗದ ಭಾವಚಿತ್ರಗ್ರಹಣವನ್ನು ಕತ್ತಲೆ ಕೋಣೆಯಲ್ಲಿ ಈಗ ಮಾಡುತ್ತಿರುವರು. ಸ್ಕಾಟ್ಲೆಂಡ್ ದೇಶದ ೩೦ ವರ್ಷ ವಯಸ್ಸಿನ ಡಾಕ್ಟರ್ ಜೇಮ್ಸ್ ಷೀರರ್ ಎಂಬುವವನು ಹಗಲುಹೊತ್ತಿನಲ್ಲೇ ಹೊರಗಣ ಬಯಲಿನಲ್ಲೇ ಶರೀರಾಂತರ್ಭಾಗದ ಭಾವಚಿತ್ರವನ್ನು ತೆಗೆಯುವ ವಿಧಾನವನ್ನು ಕಂಡುಹಿಡಿದಿದ್ದಾನಂತೆ. ದೇಹದಿಂದ ಹುಟ್ಟುವ ವಿದ್ಯುಚ್ಛಕ್ತಿಯನ್ನೇ ಇದಕ್ಕೆ ಆತನು ಉಪಯೋಗಿಸಿಕೊಳ್ಳುವನಂತೆ.

ಅಮೇರಿಕಾಕ್ಕೆ ಇಂಗ್ಲೀಷು ಫ್ರೆಂಚ್ ಇಟಲಿಯ ರಾಯಭಾರಿಗಳು ಹೋಗಿರುವರಷ್ಟೆ. ಅಲ್ಲಿಯ ಮುಖ್ಯಪಟ್ಟಣಗಳಲ್ಲೆಲ್ಲಾ ಇವರಿಗೆ ಅಸಾಧಾರಣವಾದ ಸ್ವಾಗತ ವೈಭವಗಳು ನಡೆಯುತ್ತಿರುವುವು. ನ್ಯೂಯಾರ್ಕ್ ಪಟ್ಟಣದಲ್ಲಿ ಕಳೆದವಾರ ನಡೆದ ಸಮಾರಂಭಗಳು ವರ್ಣನಾತೀತವಾಗಿದ್ದುವು. ಫ್ರೆಂಚ್ ರಾಯಭಾರಿಗಳಿಗಾಗಿ ಸ್ತ್ರೀಯರೇ ಒಂದು ನಾಟಕವನ್ನೇರ್ಪಡಿಸಿದ್ದರು. ಅದಿನ ಪ್ರೇಕ್ಷಕರ. ಒಂದೊಂದಾಸನಕ್ಕೆ ೫೦ ಪೌನುಗಳಂತೆ ಟಿಕೆಟ್ಟು ಮಾರಲ್ಪಟ್ಟಿತು.

ಮೆಸಪೆಟೋಮಿಯಾದಲ್ಲಿ ನಮ್ಮವರು ಬಾಗ್ದಾದನ್ನೂ ಸಮಾರಾ ನಿಲ್ದಾಣವನ್ನೂ ವಶಪಡಿಸಿಕೊಂಡರಷ್ಟೆ. ಬಾಗ್ದಾದ್ ಲೋಹಮಾರ್ಗಕ್ಕೆ ಸಮಾರಾ ಎಂಬುದೇ ಕೊನೆಯ ನಿಲ್ದಾಣ. ಇದನ್ನು ತುರುಕರು ಬಿಟ್ಟುಹೋಗುವಾಗ ಕಾಲುಭಾಗದಷ್ಟು ಮಾರ್ಗಗಳನ್ನೂ ಸೇತುಗಳನ್ನೂ ಹಾಳ್ಮಾಡಿಬಿಟ್ಟು ಹೋಗಿದ್ದರು. ಈಗ ನಮ್ಮವರು ಅವನ್ನೆಲ್ಲಾ ಜೀರ್ಣೋದ್ಧಾರಮಾಡಿಸಿದರು. ಸಮಾರಾ ಬಾಗ್ದಾದುಗಳ ಮಧ್ಯದಲ್ಲಿ ಹೊಗೆಬಂಡಿಗಳೂ ಪ್ರಯಾಣಿಕರೂ ತಡೆಯಿಲ್ಲದೆ ತಿರುಗಾಡುತ್ತಿದ್ದಾರೆ.

ಬಾಗ್ದಾದು ಪಟ್ಟಣವು ಇಂಗ್ಲೀಷರ ವಶವಾಗಿ ಇದುವರೆಗಣ ತುರುಕರ ಕ್ರೂರ ಪರಿಪಾಲನವು ತಮಗೆ ತಪ್ಪಿಹೋದುದರಿಂದ ಆ ಪಟ್ಟಣದ ಮತ್ತು ಸುತ್ತಣ ಜಿಲ್ಲೆಗಳ ಪ್ರಜಾಪ್ರಮುಖರು ಇಂಗ್ಲೀಷರ ಕಡೆಯ ಮೆಸಪೆಟೋಮಿಯಾ ಚೀಫ್‌ಪೊಲಿಟಿಕಲ್ ಆಫೀಸರಿಗೂ ಆಂಗ್ಲಚಕ್ರವರ್ತಿಗಳಿಗೂ ತಮ್ಮ ಸಂತೋಷಾತಿಶಯವನ್ನು ತಂತ್ರೀವಾರ್ತೆಯಮೂಲಕ ಬಿನ್ನೈಸಿಕೊಂಡರು. ಅದನ್ನು ಸಾರ್ವಭೌಮರು ಅಂಗೀಕರಿಸಿ, ಪ್ರತ್ಯುತ್ತರವನ್ನು ಕೊಟ್ಟಿರುವುದರಲ್ಲಿ ಬಾಗ್ದಾದಿನಲ್ಲಿರುವ ಪವಿತ್ರವಾದ ಸ್ಥಲಗಳನ್ನೆಲ್ಲಾ ಯಥಾರೀತಿಯಿಂದ ಕಾಪಾಡಿಕೊಂಡು ಬರುತ್ತೇವೆಂದು ಅಭಯದಾನಮಾಡಿರುವರು.

ಲಾರ್ಡ್ ಕರ್ಜನ್‌ರವರು ಲಾರ್ಡುಗಳ ಸಭೆಯಲ್ಲಿ ಆಂಗ್ಲದೇಶದ ನೌಕಾಧಿಕ್ಯವನ್ನು ಕುರಿತು ಮಾತನಾಡುವಾಗ್ಗೆ—೧೯೧೪ ನೆಯ ಜುಲೈ ತಿಂಗಳ ಕೊನೆಯಲ್ಲಿ ಇಂಗ್ಲೀಷರ ಮತ್ತೂ ಅವರಿಗೆ ಸೇರಿದ ಅಧಿನಿವೇಶನಗಳ ಹಡಗುಗಳೆಲ್ಲಾ ಸೇರಿ ೧೦೧೨೪ ಇದ್ದುವೆಂತಲೂ, ಕೇವಲ ಇಂಗ್ಲೀಷರವೇ ೩೯೦೦ ಇದ್ದುವೆಂತಲೂ, ೧೯೧೭ ನೆ ಮಾರ್ಚ್ ತಿಂಗಳ ಕೊನೆಯಲ್ಲಿ ನಮ್ಮ ಹಡಗುಗಳು ೩೫೦೦ ಇದ್ದುವೆಂತಲೂ ಹೇಳಿದರು. ಇದರಿಂದ ಶತ್ರುಗಳ ಸಬ್ ಮೆರೀನುಗಳ ಹಾವಳಿಯು ಅಪರಿಮಿತವಾಗಿದ್ದರೂ ಇಂಗ್ಲೀಷರು ಹೊಸ ಹಡಗುಗಳನ್ನು ಬೇಗಬೇಗನೆ ಕಟ್ಟಿ ಹೇಗೆ ನಷ್ಟಭರ್ತಿ ಮಾಡಿಕೊಳ್ಳುತ್ತಿರುವರೆಂಬುದು ವ್ಯಕ್ತವಾಗುವುದು.

ಜರ್ಮನಿಗೆ ಸೇರಿದ ಬವೇರಿಯಾ ರಾಜ್ಯದ ಮುಖ್ಯಮಂತ್ರಿಯು ತಮ್ಮ ಸಭೆಯಲ್ಲಿ ಮಾತನಾಡುವಾಗ್ಗೆ ಜರ್ಮನರ ಮುನಸ್ಸಿನಲ್ಲಿರುವ ಸಂಧಿವಿಷಯಕವಾದ ಅಭಿಪ್ರಾಯವು ಹೀಗಿರುವುದೆಂದು ಹೇಳಿದನು. ಏನೆಂದರೆ—" ಯುದ್ಧಕ್ಕೆ ಮುಂಚೆ ಜರ್ಮನಿಗೆ ಸೇರಿದ್ದ ಅಧಿನಿವೇಶನಗಳನ್ನೆಲ್ಲಾ ಅವರಿಗೆ ಬಿಟ್ಟುಕೊಡಬೇಕು. ಮೊದಲಿದ್ದಂತೆಯೇ ಪ್ರಪಂಚದ ಎಲ್ಲ ಭಾಗದಲ್ಲೂ ಅವರಿಗೆ ವ್ಯಾಪಾರಸ್ವಾತಂತ್ರ್ಯವು ಇರಬೇಕು. ಯುದ್ಧದ ವೆಚ್ಚ ನಷ್ಟಪರಿಹಾರಗಳಿಗಾಗಿ ಏನನ್ನೂ ಕೇಳಕೂಡದು " ಎಂಬುದಾಗಿ. ಇವು ಎಂದಿಗೂ ನಡೆಯಲಾರವಾದರೂ ಜರ್ಮನರು ಬಾಯ್ಬಿಟ್ಟು ಈಗ ತಾವೇ ಸಂಧಿಮಾತನ್ನಾಡುವ ಸ್ಥಿತಿಗೆ ಬಂದಿರುವರೆಂಬುದು ಇದರಿಂದ ವ್ಯಕ್ತವಾಗುವುದು.

ವರ್ತಮಾನ.

ಹರಪನಹಳ್ಳಿ.

ಸುರಪುರ.

ಶ್ರೀ ವೃಷಭೇಶ್ವರಜಯಂತ್ಯುತ್ಸವವು.

ಮಹಾಶಯರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಅವುಗಳ ನಾಮಗಳು.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
11 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಈ ನಾಲ್ಕು ಔಷಧಗಳನ್ನು ಮಾತ್ರ ನಮ್ಮಲ್ಲೇ ತರಿಸಿಕೊಳ್ಳಿರಿ!!!

ಗುಣದಲ್ಲೂ, ಸುವಾಸನೆಯಲ್ಲೂ, ಸುಲಭ. ಬೆಲೆಯಲ್ಲೂ, ಮತ್ತಾವವೂ ಇವುಗಳನ್ನು ಮೀರಿಸಲಾರವೆಂಬುದನ್ನು ನಿಜವಾಗಿನಂಬಿರಿ. ಹಾಗೂ ಅನುಮಾನವಿರುವವರು ಸ್ಟಾಂಪು ಕಳುಹಿಸಿ ಸ್ಯಾಂಪಲ್ಸ್ ತರಿಸಿ ಪರೀಕ್ಷಿಸಿದರೇ ಲಾದರೂ ದಯವಿಟ್ಟು ಪ್ರೋತ್ಸಾಹಿಸಿರಿ!

ಶ್ರೀಕರಕಸ್ತೂರಿಮಾತ್ರೆ. (ಸುಮಾರು 300 ಮಾತ್ರೆಗೆ) 0.4.0

ಇದರ ಗುಣವನ್ನೂ, ಅಮೋಘವಾದ ವಾಸನೆಯನ್ನೂ, ಎಷ್ಟು ಬರೆದರೂ ಸ್ವಲ್ಪವೆ.

ಆಮೋದಿನಿ. ಸುಮಾರು 150 ಮಾತ್ರೆ 0.4.0

ಬಾಯರುಚಿಗೂ, ಬಾಯಿ ಸುವಾಸನೆಗೂ ಸಂಗೀತಗಾರರಿಗೂ ಸಂಜೀವನ.

ನಾರಿಕೇಳಾಂಜನ. ಬೆಲೆ ಸೀಸೆ 0.4.0

ಅಪೂರ್ವವಸ್ತುವು ಸ್ವಲ್ಪವೂ ಉರಿಯದೆ ಸಮಸ್ತ ನೇತ್ರರೋಗಗಳನ್ನು ಗುಣಪಡಿಸುತ್ತೆ.

ದಂತಧಾವನಚೂರ್ಣ. 30 ದಿನದ ಪೊಟ್ಟಣ 0.1.0

ಇಷ್ಟು ಸುಲಭ ಬೆಲೆಗೆ ಈ ಗುಣ ಈ ಸುವಾಸನೆಯುಳ್ಳದನ್ನು ಯಾರೂ ಕಂಡುಹಿಡಿಯಲಿಲ್ಲ.

ಯಾವ ಐದು ಸೀಸೆ ತರಿಸಿದರೂ ಒಂದು ಇನಾಮು. ೫ ರೂ.ಗೆ ಮೇಲ್ಪಟ್ಟು ತರಿಸಿದರೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು. ಏಜೆಂಟರು ಬೇಕು.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ ನಂಜನಗೂಡು.

ವ್ಯಾಪಾರಸ್ಥರಿಗೆ ಇದು ಒಂದು ದೊಡ್ಡಲಾಭಸಮಯ.

ವಿಳಾಸಕ್ಕೆ ಬೇಗನೆ ರವಾನೆಮಾಡಿರಿ.

ವಿಳಾಸ—ಸೆಕ್ರೆಟರಿ ಟಿ. ಹೆಚ್. ಎಂ. ಅಂಡ್ ಕಂಪೆನಿ.
ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಶಿರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಗಟ್ಟಿಲಸಿದ್ಧ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

೧೯೧೭ ನೆಯ ಇಸವಿ ಮೇ ತಾ॥ ೨೦ ರಿಂದ ೧೯೧೭ ನೆಯ ಮೇ ತಾ॥ ೨೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ವೈಶಾಖ ಬ॥ ಚತುರ್ದಶಿಯಿಂದ ಜ್ಯೇಷ್ಠ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭೇದ
20	1 ಭಾನು	ಚತು	1-26	ಉಪರಿ	57-29	7
21	ಸೋಮ	ಪಾಡ್ಯ	58-13	ಕೃತ್ತಿಕೆ	14-27	8
22	ಮಂಗಳ	ಬಿದಿಗೆ	58-48	ರೋಹಿಣಿ	15-56	9
23	ಬುಧ	ತದಿಗೆ	60	ಮೃಗಶಿರೆ	18-33	10
24	2 ಗುರು	ತದಿಗೆ	1-17	ಆರಿದ್ರಾ	22-22	11
25	3 ಶುಕ್ರ	ಚೌತಿ	4-17	ಪುನರ್ವಸು	27-21	12
26	4 ಶನಿ	ಪಂಚ	8-19	ಪುಷ್ಯ	33-11	13

(1) ಅಮಾ॥ ಸರ್ವತ್ರಾಮಾವಾಸ್ಯಾ. (2) ಕರವೀರವ್ರತಂ. (3) ಚಂದ್ರದರ್ಶನ ಯೋಗ ಸಮಾಗಮ. (4) ಸ್ಕಂದಪಂಚಮಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮುಧಿಗತರಾಜಮಂಡಲಹಿತ್ಕೆಷಾ । ಘನಪಕ್ಷಕೃತಾವತಾರಾ ಪಕ್ಷಜ್ಞ ನಷ್ಟತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚೆತ್ತಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಮೇ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ [illegible]

ಏರ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ.) 44

ಮದನೋದ್ಭವ ಗುಳಿಗೆ.

ನಪುಂಸಕತ್ವಾರಿ ತೈಲವು.

ವಿಳಾಸ—ವೈದ್ಯ. ಜಿ. ಎಲ್. ಜೋಶಿ ಮತ್ತು ಕಂಪೆನಿ.

[ಔಷಧಗಳು ಶಾಸ್ತ್ರೋಕ್ತ]

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

30 ಮೂರುಕಾಸು!

ಸುವಾಸಿಕ ಹುರುಕಿನ ಔಷಧ.

ಪಶುಜೀವನ ಚೂರ್ಣ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

26

ಯೋಗ್ಯತಾಪತ್ರಗಳು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ [illegible]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
2 ಸದ್ವೈದ್ಯಶಾಲಾ ನಂಜನಗೂಡು.

ವ್ಯಾಪಾರಸ್ಥರಿಗೆ ಇದು ಒಂದು ದೊಡ್ಡಲಾಭಸಮಯ.

ವಿಳಾಸ—ಸೆಕ್ರೆಟರಿ ಟಿ. ಹೆಚ್. ಎಂ. ಅಂಡ್ ಕಂಪೆನಿ.
3 ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಲಂಡನ್ ಪಟ್ಟಣದಲ್ಲಿ ಕೂಡಿದ್ದ ಒಂದಾನೊಂದು ಸಭೆಯಲ್ಲಿ ದಕ್ಷಿಣಾಫ್ರಿಕಾದ ಸಂಯುಕ್ತರಾಷ್ಟ್ರಗಳ ಅಧ್ಯಕ್ಷರಾದ ಜನರಲ್ ಸ್ಮಟ್ಸ್ ರವರು ಒಂದು ಉತ್ಕೃಷ್ಟವಾದ ಉಪನ್ಯಾಸಮಾಡುವದರಲ್ಲಿ— ಈಗ ಪೂರ್ವಪದ್ಧತಿಗಳೆಲ್ಲಾ ತಾರುಮಾರಾದುವು. ೧೯ ನೆ ಶತಮಾನದ ಸಂಧಿಪತ್ರ ಒಪ್ಪಂದ ಮೊದಲಾದುವೆಲ್ಲಾ ಈಗ ನೀರುಪಾಲಾದುವು. ವಾಚಾಮಗೋಚರವಾದ ಆಶಾಭಂಗವು ಪ್ರಾಪ್ತವಾಗಿದೆ. ಈಗಣ ಮಹಾಯುದ್ಧದಲ್ಲಿ ೮೦ ಲಕ್ಷ ಜನರು ಹತರಾಗಿರುವರೆಂದು ಲೆಕ್ಕದಿಂದ ಗೊತ್ತಾಗುತ್ತದೆ. ಇದಕ್ಕೂ ಹೆಚ್ಚಿನ ಜನರು ಅಂಗವಿಕಲರಾಗಿ ಯಾವಜ್ಜೀವವೂ ನಿರುಪಯೋಗ್ಯರಾಗಿರುವರು. ಇಂಥ ಮಹಾ ಯುದ್ಧವು ಮತ್ತೆನ್ನೊಂದುಸಲವೇನಾದರೂ ಜರುಗಿದರೆ ಪ್ರಪಂಚವೇ ತಾರುಮಾರಾಗುವುದು. ಇಂಥ ಯುದ್ಧವು ಮುಂದೆಂದೂ ಸಂಭವಿಸದಂತೆ ಮಾಡುವುದು ಅತ್ಯಾವಶ್ಯಕ. ಈಗಣ ಯುದ್ಧದಿಂದ ಬೇಸತ್ತು ಪ್ರತಿಯೊಬ್ಬ ಮನುಷ್ಯನೂ ಸಂಧಿಯ ಕಡೆ ಗಮನಿಸುವಂತೆ ಆಗಿರುತ್ತದೆ. ಯಾವ ಪಕ್ಷದವರ ಮನಸ್ಸಿಗೂ ನೋವಾಗದಂಥ ನಿಬಂಧನೆಗಳುಳ್ಳ ಸಂಧಿಯನ್ನೇರ್ಪಡಿಸುವುದಕ್ಕೆ ಇದು ತಕ್ಕ ಸಮಯ. ಕಾಲಾತೀತವಾಗಕೂಡದು" ಎಂದು ಮುಂತಾಗಿ ಹೇಳಿದುದಲ್ಲದೆ ಇದನ್ನಾಲೋಚಿಸುವುದಕ್ಕೆ ಅಮೇರಿಕಾ ಇಂಗ್ಲೆಂಡುಗಳ ಸಮರ್ಥರಾದ ಕೆಲ ಪ್ರತಿನಿಧಿಗಳುಳ್ಳ ಒಂದು ಸಂಘವು ಏರ್ಪಟ್ಟರೆ ಅನುಕೂಲವೆಂಬ ಮಾತಿಗೆ ಅನುಮತಿಸಿದರು.

ಇಂಗ್ಲೀಷ್ ಮೊದಲಾದ ರಾಯಭಾರಿಗಳು ನ್ಯೂಯಾರ್ಕ್ ಪಟ್ಟಣಕ್ಕೆ ಹೋದಾಗ್ಗೆ ಪ್ರಜೆಗಳು ಬೀದಿಯಲ್ಲಿ ಕಿಕ್ಕಿರಿದು ನಿಂತು ಕರತಾಡನಗಳನ್ನು ಮಾಡಿ ತೋರಿಸಿದ ಉತ್ಸಾಹವು ಅಪರಿಮಿತವಾಗಿದ್ದಿತು. ಪಟ್ಟಣದ ಮೇಯರ್ ರವರು ಪುರಮಂದಿರದಲ್ಲಿ ಈ ಪ್ರತಿನಿಧಿಗಳನ್ನೆಲ್ಲಾ ಸ್ವಾಗತಮಾಡುವಾಗ್ಗೆ ಅಮೇರಿಕಾದವರ ನೌಕಾವ್ಯಾಪಾರಕ್ಕೆ ಅಭ್ಯಂತರವುಂಟಾಗದಂತೆ ಸಮುದ್ರಮಾರ್ಗವನ್ನು ಕಾಪಾಡಿದುದಕ್ಕಾಗಿ ಆಂಗ್ಲನೌಕಾದಳದ ಆಧಿಕ್ಯವನ್ನು ಕುರಿತು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಈ ಸ್ವಾಗತವೈಭವದಿಂದ ಇಂಗ್ಲೀಷ್ ರಾಯಭಾರಿ ಬಾಲ್ಫರ್ ರವರು ಪರವಶರಾಗಿ, ಸ್ವಲ್ಪವೇ ಪ್ರತ್ಯುತ್ತರ ಕೊಟ್ಟುದರಲ್ಲಿ - ಈ ಮಹೋತ್ಸವ ಪ್ರಾಶಸ್ತ್ಯವನ್ನು ಕುರಿತು ಸ್ವಲ್ಪವನ್ನಾದರೂ ಬ್ರಿಟನ್ನಿನವರು ಗ್ರಹಿಸುವವರಾದರೆ ಅವರ ಉತ್ಸಾಹವು ದ್ವಿಗುಣೀಕೃತವಾಗುವುದು" ಎಂದರು. ವಾಲ್ಡ್ರಾರ್ಫ್ ಆಸ್ಟೋರಿಯಾ ಹೊಟೇಲಿನಲ್ಲಿ ಇಂಗ್ಲೀಷ್ ಫ್ರೆಂಚ್ ಪ್ರತಿನಿಧಿಗಳಿಗೆಲ್ಲಾ ಮಾಡಿಸಿದ್ದ ಔತಣವು ಅಭೂತಪೂರ್ವವಾಗಿದ್ದಿತು. ಆಗ ಮೇಯರ್ ರವರು ಭಾಷಣಮಾಡುವಾಗ್ಗೆ— ಇಂಗ್ಲೀಷ್ ಫ್ರೆಂಚ್ ದೇಶಗಳವರು ಪ್ರಪಂಚಕ್ಕೆ ಮಾಡಿದ ಮಹೋಪಕಾರವೇ ಈ ಆಧಿಕ್ಯಕ್ಕೆ ಮೂಲಕಾರಣವು ಎಂದು ಹೇಳಿದರು. - ಫ್ರಾನ್ಸ್ ದೇಶದವರು ನಮ್ಮ ಪರಮಮಿತ್ರರು. ಇಂಗ್ಲೀಷ್ ದೇಶವು ನಮ್ಮ ಜನ್ಮಭೂಮಿ. ಫ್ರಾನ್ಸ್ ದೇಶವು ನಮ್ಮನ್ನು ಆಕರ್ಷಿಸಿ ಆನಂದಪಡಿಸುವ ಸಹೋದರಿಯು" ಎಂಬುದಾಗಿ ಹಿಂದೆ ಲಂಡನ್ನಿನಲ್ಲಿ ಅಮೇರಿಕಾದ ರಾಯಭಾರಿಯಾಗಿದ್ದ ಚೋಟ್ ರವರು ಭಾಷಣಮಾಡಿದರು. ಕಡೆಗೆ ಬಾಲ್ಫರ್ ರವರು ಭಾಷಣಮಾಡುವಾಗ್ಗೆ— "ಮಾನವಸ್ವಾತಂತ್ರ್ಯರಕ್ಷಣೆಗಾಗಿ ಎಲ್ಲಾ ದೇಶದವರೂ ಒಮ್ಮತ್ಯರಾಗಿರಬೇಕಾದ ಸಮಯವು ಪ್ರಾಪ್ತವಾಗಿದೆ. ಸ್ವಾತಂತ್ರ್ಯಪ್ರಿಯರಾದವರೆಲ್ಲರೂ ಹೀಗೆ ಒಗ್ಗಟ್ಟಾಗಿ ಯುದ್ಧಮಾಡದಿದ್ದರೆ ನಾವು ಪ್ರತ್ಯಪ್ರತ್ಯೇಕವಾಗಿ ನಾಶವಾಗಿಹೋಗುವೆವು" ಎಂದು ನುಡಿಯಲು ಸಭಿಕರೆಲ್ಲಾ ಅತ್ಯುತ್ಸಾಹವನ್ನು ವ್ಯಕ್ತಪಡಿಸಿದರು.

ಪತ್ರವ್ಯವಹಾರ.

ಹಿರೇಪೋತಗೇರಿ.

ವಿಜಾಪುರ ಜಿಲ್ಲಾ ಹುನಗುಂದ ತಾ॥ ಪೈಕಿ ಹಿರೇಪೋತಗೇರಿಯಲ್ಲಿ ವೀರಶೈವ ಸಮಾಜದವರು ೩ ವರ್ಷಗಳಿಂದಾಗಾಯಿತು ಶ್ರೀ ಬಸವೇಶ್ವರಜಯಂತ್ಯುತ್ಸವವನ್ನು ಮಾಡುತ್ತಿರುವಂತೆ ಈ ವರ್ಷವಾದರೂ ಸದರಿ ಉತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿದರು. ಸ್ಥಳಿಕ.

ಸೂರಹಳ್ಳಿ.

ನಂಜನಗೂಡು ತಾ॥ ಸೂರಹಳ್ಳಿಗ್ರಾಮದಲ್ಲಿರುವ ಪುರಾತನ ಶ್ರೀ ಬಸವೇಶ್ವರ ದೇವಾಲಯದ ಬಳಿ ಕಳರುತೋರಣ ಚಪ್ಪರ ಕದಳೀ ಸ್ತಂಭಗಳಿಂದಲೂ ಸಾರಣೆ ರಂಗವಲ್ಲಿಗಳಿಂದಲೂ ಅಲಂಕರಿಸಿ ಶಾಸ್ತ್ರೋಕ್ತವಾಗಿ ಪಂಚಾಭಿಷೇಕ ರುದ್ರಾಭಿಷೇಕ ಮುಂತಾದ ಪೂಜೋಪಚಾರಗಳಿಂದ ಮಧ್ಯಾಹ್ನ ೨ ಘಂಟೆವರೆಗೂ ವಾದ್ಯಸಮೇತವಾಗಿ ಭಜನೆಯೂ, ಮತ್ತು ಬಸವ ಸಹಸ್ರನಾಮಾವಳಿಗಳಿಂದ ವೀರಶೈವ ಜನಾಂಗದವರೆಲ್ಲರೂ ಒಟ್ಟಾಗಿ ತುಂಬಾ ಸಂತೋಷದಿಂದ ಭಕ್ತಿಪೂರ್ವಕವಾಗಿ ಪೂಜಾಕಾರ್ಯವು ಮಹಾ ನೈವೇದ್ಯ ಪಾನಕ ಪನ್ನೀರಿಂದಲೂ ಅಲ್ಲಿ ನೆರೆದಿದ್ದ ಭಕ್ತಮಹೇಶ್ವರರಿಗೆ ತೃಪ್ತಿಯಾದೊಡನೆಯೇ ೪ ಗಂಟೆ ಸಮಯದಲ್ಲಿ ಇತರ ಜನಾಂಗದವರ ಪ್ರೋತ್ಸಾಹದಿಂದ ಮೆರವಣಿಗೆಯಾಯಿತು. ಮನೆಮನೆಗಳಲ್ಲಿ ಬಸವನ ಹಬ್ಬವೆಂದು ಹೆಂಗಸರು ಮಕ್ಕಳು ಸಹ ಬಹು ಸಡಗರದಿಂದ ಪೂಜಾಸ್ತುತಿಗಳಿಂದ ಸಂತೋಷಿಸಿದರು. ಮತ್ತು ಅದೇ ಊರಲ್ಲಿರುವ ಮ॥ರಾ॥ ಮಲ್ಲಪಟ್ಟರ ಮಗ ಉಪಾಧ್ಯಾಯ ಬಸವಣ್ಣನವರಿಂದ ರಾತ್ರಿ ಪುರಾಣತ್ರವಣವು ನಡೆಯಿತು. ಮತ್ತು ಸಕ್ಕರೆ ಕೊಬ್ಬರಿ ಚರಪುಗಳನ್ನು ನೆರೆಹೊರೆಗ್ರಾಮಗಳಿಂದ ಬಂದಿದ್ದ ಜನಾಂಗಕ್ಕೂ ಹಂಚಲ್ಪಟ್ಟು ಕಡೆಗೆ ಮಂಗಳಾರತಿಯಾಗಿ ಸರ್ವರೂ ಅಪಾರವಾದ ಸಂತೋಷಪಟ್ಟರು. ರಾತ್ರಿ ೨-೩ ಗಂಟೆಯವರೆಗೂ ಬಹು ಆಸಕ್ತಿಯಿಂದ ಈ ಬಸವೇಶ್ವರ ಜಯಂತಿಯು ನಡೆಯುವದಾಯಿತು. ಇದಕ್ಕೆ ಸೇರಿದ ವೀರಶೈವ ಜನಾಂಗಕ್ಕೆಲ್ಲಾ ಪ್ರೋತ್ಸಾಹಕೊಟ್ಟು ನಡೆಸಿದ ಕಾರ್ಯದರ್ಶಿಗಳಾದ ಶೆಟ್ಟರು ಮಲ್ಲಣ್ಣ ನಂಜಪ್ಪ ದೊಡ್ಡಮಲ್ಲಪ್ಪ ಮುಂತಾದವರಿಗೂ ಗೌಡರ ಕಲ್ಯಾಣಪ್ಪ ಪಟೇಲ್ ಚೆನ್ನಪ್ಪ ಮುಂತಾದ ಈ ಜನಾಂಗದ ಸರ್ವರಿಗೂ ಶ್ರೀ ಬಸವೇಶ್ವರನು ಆಯುರಾರೋಗ್ಯ ಇಷ್ಟಾರ್ಥವಂ ಕೊಟ್ಟು ರಕ್ಷಿಸಲೆಂದು ಚರಮೂರ್ತಿಗಳಾದ ಅನೇಕ ಸ್ಥಳದ ಸ್ವಾಮಿಗಳು ಆಶೀರ್ವದಿಸಿದರೆಂದು ತಿಳಿಸಲು ಸಂತೋಷವಾಗುತ್ತದೆ. ಪ್ರತ್ಯಕ್ಷದರ್ಶಿ.

ಶ್ರೀ ವೃಷಭೇಶ್ವರಜಯಂತ್ಯುತ್ಸವವು.

ತುಮಕೂರು ತಾ॥ ಬೆಳ್ಳಾವಿ ಗ್ರಾಮದಲ್ಲಿ ಇದೇ ಪಿಂಗಳನಾಮಸಂವತ್ಸರದ ವೈಶಾಖ ಶು॥ ತೃತೀಯ ಮಂಗಳವಾರದ ದಿವಸ ಈ ಗ್ರಾಮದ ವೀರಶೈವ ಮಂಡಲಿಯವರೆಲ್ಲರಿಂದಲೂ ಶ್ರೀ ಬಸವೇಶ್ವರಜಯಂತಿಯು ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ತದಂಗಭೂತವಾಗಿ ಮಧ್ಯಾಹ್ನದ ವೇಳೆ ಶ್ರೀ ಕಾರದಸ್ವಾಮಿಯವರ ಗುದ್ದುಗೆಯಲ್ಲಿ ಮಹಾಭಿಷೇಕವೂ, ಶಿವ ಸಹಸ್ರನಾಮ ಪೂಜೆಯೂ ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟುವು. ಮಧ್ಯಾಹ್ನಾನಂತರ ಶ್ರೀ ಸ್ವಾಮಿಗಳ ಗದ್ದುಗೆಯ ಮುಂದಿನ ಅಂಗಣವು ರಸಾಲ ತಳಿರ್ದೋರಣದಿಂದಲೂ, ರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟು ರಮ್ಯತರವಾಗಿ ಮಾಡಲ್ಪಟ್ಟಿತು. ಸ್ವಾಮಿಗೆ ನೀರಾಜನವಾದ ಬಳಿಕ ನೆರೆದಿದ್ದ ಸಮಸ್ತರಿಗೂ ಹೆಸರು ಬೇಳೆ, ಪಾನಕ ತಾಂಬೂಲಾದಿಗಳ ವಿನಿಯೋಗವಾದ ಬಳಿಕ ಪ್ರಸಿದ್ಧಗಾಯಕರಿಂದ ಪಿಟೀಲ್ ತಬಲ, ಹಾರ್ಮೋನಿಯಂ ಮುಂತಾದ ವಾದ್ಯಸ್ವರಗಳೊಡನೆ ಶಿವಕೀರ್ತನರೂಪವಾದ ಗಾಯನಗಳು ಅತ್ಯಂತ ಕರ್ಣಾನಂದಕರವಾಗಿ ಹಾಡಲ್ಪಟ್ಟಿತು. ಪ್ರೇಕ್ಷಕಸಮುದಾಯವು ಸಂಗೀತರಸಾಸ್ವಾದನದಿಂದ ತೃಪ್ತರಾಗಿ ಸ್ತಂಭೀಭೂತಭಾವದಲ್ಲಿದ್ದರು. ಮಂಗಳಾಚರಣಾನಂತರ ಗೀತವು ವಿಸರ್ಜಿಸಲ್ಪಟ್ಟಿತು. ಅಲ್ಲದೆ ರಾತ್ರಿಯಲ್ಲಿ ಶ್ರೀ ವೃಷಭೇಶ್ವರ ಮಹೋತ್ಸವವು ನಂದಿಧ್ವಜ ಪೂರ್ವಕವಾಗಿ ಪೇಟೆಯ ಎಲ್ಲಾ ಭಾಗದಲ್ಲಿಯೂ ನಡೆದು ಪ್ರೇಕ್ಷಕರಿಗೆ ನೇತ್ರಾನಂದವನ್ನಿತ್ತು ಆಹ್ಲಾದವನ್ನುಂಟುಮಾಡಿತು. ಮೇಲ್ಕಂಡ ಮತಕಾರ್ಯದಲ್ಲಿ ತುಂಬಾ ಶ್ರದ್ಧೆಯಿಟ್ಟು ನಡೆಸಿದ ಮ॥ ರಾ॥ ಮುಂಡಿ ನಂದೀಶಪ್ಪನವರಿಗೂ, ಮ॥ ರಾ॥ ಗ. ವಿ. ಚೆನ್ನಪ್ಪನವರಿಗೂ ಉಳಿದ ವೀರಶೈವಮಂಡಲಿಗೂ ಪರಶಿವನು ಇದೇರೀತಿ ಪ್ರೇರಿಸಿ, ಮತಕಾರ್ಯಗಳನ್ನು ನಡೆಸುವಂತೆ ಅನುಗ್ರಹಿಸಿ, ಆಯುರಾರೋಗ್ಯಾದಿಗಳನ್ನು ಕೊಟ್ಟು ಸಲಹಬೇಕಾಗಿ ಬೇಡುತ್ತೇನೆ. ಇದರಂತೆಯೇ ನಮ್ಮ ವೀರಶೈವ ಸಮಾಜಬಾಂಧವರು ಪರಸ್ಪರ ದ್ವೇಷಾಸೂಯಭಾವಗಳನ್ನು ಬಿಟ್ಟು ಮತೀಯರಲ್ಲಿ ಭೇದ ಬುದ್ಧಿಯನ್ನು ದೂರೀಕರಿಸಿ ಪ್ರತಿವರ್ಷದ ವೈಶಾಖಮಾಸದ ಶುದ್ಧ ಪಕ್ಷ ರೋಹಿಣೀ ನಕ್ಷತ್ರಯುಕ್ತವಾದ ತೃತೀಯ ದಿವಸ ಶ್ರೀ ಬಸವೇಶ್ವರಜಯಂತಿಯನ್ನು ಎಲ್ಲಾ ಕಡೆಯೂ ವಿಜೃಂಭಣೆಯಿಂದ ಆಚರಿಸುತ್ತಾ ಬರಬೇಕಲ್ಲದೆ ಸಮಸ್ತ ವಿಷಯಗಳಲ್ಲಿಯೂ ಮತಾಭಿಮಾನವಿಟ್ಟು ಮತದ ಶ್ರೇಯೋಲಾಭವನ್ನು ಕಾರ್ಯಮುಖೇನ ಆಚರಿಸಿ ಕೀರ್ತಿಗೆ ಭಾಜನರಾಗಬೇಕೆಂಬುದೇ ನನ್ನ ಸವಿನಯ ಪ್ರಾರ್ಥನೆಯಾಗಿದೆ.

ಮತಹಿತೈಷಿ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಗಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

'ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಸ್ವಾಸ, ಅಡಗ್ಗೆ, ಇಸ್ತಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದ್ದವ್ವನ ಬೇನೆ, ಹುರುಳು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಜೊತೆ ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರಕಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗಬೇಕೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಮೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
11 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಶೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮೀಷನ್ ಕೊಡುತ್ತೆ.

ಈ ನಾಲ್ಕು ಔಷಧಗಳನ್ನು ಮಾತ್ರಾ ನಮ್ಮಲ್ಲಿ ತರಿಸಿಕೊಳ್ಳಿರಿ!!!

ಗುಣದಲ್ಲೂ, ಸುವಾಸನೆಯಲ್ಲೂ, ಸುಲಭ. ಬೆಲೆಯಲ್ಲೂ, ಮತ್ತಾವುವೂ ಇವುಗಳನ್ನು ಮೀರಿಸಲಾರವೆಂಬುದನ್ನು ನಿಜವಾಗಿ ನಂಬಿರಿ. ಹಾಗೂ ಅನುಮಾನವಿರುವವರು ಸ್ಟಾಂಪು ಕಳುಹಿಸಿ ಸ್ಯಾಂಪಲ್ಸ್ ತರಿಸಿ ಪರೀಕ್ಷಿಸಿದಮೇಲಾದರೂ ದಯವಿಟ್ಟು ಪ್ರೋತ್ಸಾಹಿಸಿರಿ!

ಶ್ರೀಕರಕಸ್ತೂರಿಮಾತ್ರೆ. (ಸುಮಾರು 300 ಮಾತ್ರೆಗೆ) 0.4.0

ಇದರ ಗುಣವನ್ನೂ, ಅಮೋಘವಾದ ವಾಸನೆಯನ್ನೂ, ಎಷ್ಟು ಬರೆದರೂ ಸ್ವಲ್ಪವೆ.

ಅಮೋದಿನಿ. ಸುಮಾರು 150 ಮಾತ್ರೆ 0.4.0

ಬಾಯಾರಿಕೆಗೂ, ಬಾಯಿ ಸುವಾಸನೆಗೂ ಸಂಗೀತಗಾರರಿಗೂ ಸಂಜೀವನ.

ನಾರಿಕೇಳಾಂಜನ. ಬೆಲೆ ಸೀಸೆ 0.4.0

ಅಪೂರ್ವವಸ್ತುವು ಸ್ವಲ್ಪವೂ ಉರಿಯದೆ ಸಮಸ್ತ ನೇತ್ರರೋಗಗಳನ್ನು ಗುಣಪಡಿಸುತ್ತೆ.

ದಂತಧಾವನಚೂರ್ಣ. 30 ದಿವಸ ಪೊಟ್ಟಣ 0.1.0

ಇಷ್ಟು ಸುಲಭ ಬೆಲೆಗೆ ಈ ಗುಣ ಈ ಸುವಾಸನೆಯುಳ್ಳದನ್ನು ಯಾರೂ ಕಂಡುಹಿಡಿಯಲಿಲ್ಲ.

ಯಾವ ಐದು ಸೀಸೆ ತರಿಸಿದರೂ ಒಂದು ಇನಾಮು. ೫ ರೂ.ಗೆ ಮೇಲ್ಪಟ್ಟು ತರಿಸಿದರೆ ಧಾರಾಳವಾದ ಕಮೀಷನ್ ಕೊಡಲ್ಪಡುವುದು. ಏಜಂಟರು ಬೇಕು.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ ನಂಜನಗೂಡು.

ವ್ಯಾಪಾರಸ್ಥರಿಗೆ ಇದು ಒಂದು ದೊಡ್ಡಲಾಭಸಮಯ.

ಹತ್ತಿ, ಅರಳೆ, ಅಡಿಕೆ, ಮೆಣಸು, ಬೆಲ್ಲ, ಮೆಣಸಿನಕಾಯಿ, ತಂಬಾಕು, ಅಕ್ಕಿ, ಬ್ಯಾಳೆ, ರಾಗಿ, ಜೋಳ, ಗೋಧಿ, ಹುಣಸೇಹಣ್ಣು, ಬಿಡ್ಲ, ಹುರುಳಿ, ಯಾಲಕ್ಕಿ, ಲೋಹ ಇನ್ನುಮುಂತಾದ ಯಾವತ್ತು ಪದಾರ್ಥಗಳಿಗೂ, ಇವೇ ವೈಶಾಖಮಾಸದಿಂದ ಫಾಲ್ಗುಣಮಾಸದವರೆಗೂ ತೇಜಿ ಮಂದ ಸಮುಧಾರಣೆ ಉಂಟಾಗುವುದನ್ನು ಗುಣಿಸಿ, ಬರೆದು ಕಳುಹಿಸುತ್ತೇವೆ. ಇದಕ್ಕೆ ಛಾರ್ಜ್ ೨ ರೂಪಾಯಿಗಳನ್ನು ಮನಿಆರ್ಡರ್ ಮೂಲಕ ಈ ಕೆಳಗಿನ ವಿಳಾಸಕ್ಕೆ ಬೇಗನೆ ರವಾನೆಮಾಡಿರಿ.

ವಿಳಾಸ—ಸೆಕ್ರೆಟರಿ ಟಿ. ಹೆಚ್. ಎಂ. ಅಂಡ್ ಕಂಪೆನಿ.
ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಾವಳಿ	೦—೮—೦
ಶಿವಪೂಜಾವಿಧಿ	೦—೮—೦
ಶಿರಿರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ.

೧೯೧೭ ನೆಯ ಇಸವಿ ಮೇ ತಾ॥ ೨೦ ರಿಂದ ೧೯೧೭ ನೆಯ ಮೇ ತಾ॥ ೨೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ವೈಶಾಖ ಬ॥ ಚತುರ್ದಶಿಯಿಂದ ಜ್ಯೇಷ್ಠ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಕೇದ
20	[1] ಭಾನು	ಚತು	1-26	ಉಪರಿ	57-29	7
21	ಸೋಮ	ಪಾಡ್ಯ	58-13	ಕೃತ್ತಿಕೆ	14-27	8
22	ಮಂಗಳ	ಬಿದಿಗೆ	58-48	ರೋಹಿಣಿ	15-56	9
23	ಬುಧ	ತದಿಗೆ	60	ಮೃಗಶಿರ	18-33	10
24	[2] ಗುರು	ತದಿಗೆ	1-17	ಆರಿದ್ರಾ	22-22	11
25	[3] ಶುಕ್ರ	ಚೌತಿ	4-17	ಪುನರ್ವಸು	27-21	12
26	[4] ಶನಿ	ಪಂಚ	8-19	ಪುಷ್ಯ	33-11	13

(1) ಅವಮಃ ಸರ್ವತ್ರಾಮಾವಾಸ್ಯಾ. (2) ಕರವೀರವ್ರತಂ. (3) ಶಾಚಂದ್ರಂಯೋಸ್ಸಮಾಗಮಃ. (4) ಸ್ಕಂದಪಂಚಮಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರ ತಿ ಭಾ ನು ವಾ ರ ಪ್ರ ಕ ಟ ಸ ಲ್ಪ ಡು ವು ದು.

ಮಹಿಶೂರಪುರೀಶಾರಾ ಪರಮಧಿಗತರಾಜನುಂಡಲಹಿತೈಷಾ | ಘನಪಥಕೃತಾವತಾರಾ ಪಕ್ಕಜ್ಜ ನಪೃತ್ತಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೭ ನೆಯ ಇಸವಿ ಮೇ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ.) 44

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಶಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗಿರುವುವು. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ ಟಪಾಲ್ ಖರ್ಚು ಬೇರೆ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಶಿರ್ಶಿ ಉತ್ತರಕನ್ನಡಾ ಡಿ॥.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

30 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಡಬ್ಬಿಗೆ ಮೂರುಕಾಸು. ೧೦೦ ಕ್ಕೆ ೧ ರೂ. ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಡಬ್ಬಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಪಶುಜೀವನ ಚೂರ್ಣ.

ದನಗಳಿಗಾಗುವ ಮಹಾಮಾರಿ ಕುಂದುಬಾಯಿ ಬೇನೆ ಈ ಪ್ರತಿಯೊಂದು ರೋಗದಮೇಲೆ ಅನುಪಾನಪರತ್ವದಿಂದ ಅತ್ಯಂತ ಗುಣಕಾರಿಯಾಗಿರುವುದು. ೧೦ ತೊಲೆಯ ಡಬ್ಬಿ ೧ ಕ್ಕೆ ೧೨ ಆಣೆ.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶ [illegible] ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 26

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೀಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.



ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಕೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಟಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಲಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರಗಳಿಗೆ ರಾಮಬಾಣೌಷಧವು. ಸರ್ವರಿಗೂ ಕೆಮ್ಮು, ನೆಗಡಿ, ಮಲಬಂಧ, ವರಸೆಜ್ವರ, ಶೀತವಾಯು, ಹಲ್ಲುನೋವು, ಆಲಸ್ಯಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅದ್ಭುತಗುಣಗಳಿಂದ ಕೂಡಿದ್ದು) ೩೦ ದಿನಕ್ಕೆ ಆಗುವ ಪೊಟ್ಟಣ ೧ ಆಣೆ. ನಾರಿಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಆಮೋದಿನಿ (ಸುಖಕ್ಕೂ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರುಬೇಕು. ಹೆಚ್ಚು ಔಷಧ ತರಿಸಿದರೆ ಹೆಚ್ಚು ರಿಯಾಯಿತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
2 ಸದ್ವೈದ್ಯಶಾಲಾ ನಂಜನಗೂಡು.

ವ್ಯಾಪಾರಸ್ಥರಿಗೆ ಇದು ಒಂದು ದೊಡ್ಡಲಾಭಸಮಯ.

ಹತ್ತಿ, ಅರಳೆ, ಅಡಿಕೆ, ಮೆಣಸು, ಬೆಲ್ಲ, ಮೆಣಸಿನಕಾಯಿ, ತಂಬಾಕು, ಅಕ್ಕಿ, ಬ್ಯಾಳೆ, ರಾಗಿ, ಜೋಳ, ಗೋಧಿ, ಹುಣಸೇಹಣ್ಣು, ಬಿಡ್ಲ, ಹುರುಳಿ, ಯಾಲಕ್ಕಿ, ಲೋಹ ಇನ್ನುಮುಂತಾದ ಯಾವತ್ತು ಪದಾರ್ಥಗಳಿಗೂ, ಇವೇ ವೈಶಾಖಮಾಸದಿಂದ ಫಾಲ್ಗುಣಮಾಸದವರೆಗೂ ತೇಜಿ ಮಂದ ಸಮುಧಾರಣೆ ಉಂಟಾಗುವುದನ್ನು ಗುಣಿಸಿ, ಬರೆದು ಕಳುಹಿಸುತ್ತೇವೆ. ಇದಕ್ಕೆ ಛಾರ್ಜ್ ೨ ರೂಪಾಯಿಗಳನ್ನು ಮನಿಆರ್ಡರ್ ಮೂಲಕ ಈ ಕೆಳಗಿನ ವಿಳಾಸಕ್ಕೆ ಬೇಗನೆ ರವಾನೆಮಾಡಿರಿ.

ವಿಳಾಸ—ಸೆಕ್ರೆಟರಿ ಟಿ. ಹೆಚ್. ಎಂ. ಅಂಡ್ ಕಂಪೆನಿ.
2 ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಮೈಸೂರು ಸ್ಟಾರ್.

ಸರ್ ೧೯೧೭ ನೆಯ ಇಸವಿ ಮೇ ತಾ|| ೨೭ ನೆಯ ಭಾನುವಾರ.

ಸ್ವರಾಜ್ಯ.

ತತ್‌ಕ್ಷಣವೇ ನಮಗೆ ಸ್ವರಾಜ್ಯಸಿದ್ಧಿಯಾಗಬೇಕೆಂಬ ಲವಲವಿಕೆಯು ಭರತಖಂಡದ ಕೆಲ ವಿದ್ಯಾಧಿಕರಲ್ಲಿ ಪ್ರಬಲವಾಗಿದೆ. ಸಭೆಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಈ ಸಂಬಂಧವಾದ ವಾದೋಪವಾದಗಳೇ ತುಂಬಿರುತ್ತವೆ. "ಥಟ್ಟನೆ ಸ್ವರಾಜ್ಯಸಿದ್ಧಿಯಾಗಿ ರಾಜ್ಯಪರಿಪಾಲನ ಸೂತ್ರವು ನಮ್ಮ ಕೈಗೆ ಬಂದರೆ ದೇಶದ ಬಹಿರಂತಃಪುರೋಭಿವೃದ್ಧಿಯ ಮತ್ತೂ ಸುಧಾರಣೆಗಳ ರೀತಿಯನ್ನೆಲ್ಲಾ ಸ್ವತಂತ್ರವಾಗಿ ಸಾಧಿಸಬಹುದು. ಆಂಗ್ಲಛತ್ರಾಶ್ರಯದ ಕೆಳಗೆ ಅಧಿನಿವೇಶಗಳಿಗಿರುವಂಥ ಸ್ವಪರಿಪಾಲನ ಸ್ವಾತಂತ್ರ್ಯವು ನಮಗೆ ಈಗಲೇ ಲಭಿಸಬೇಕು" ಎಂಬುದೇ ಅವರುಗಳ ವಾದವಾಗಿರುತ್ತದೆ. ಈಗಣ ಆಂಗ್ಲಾಧಿಕಾರಿಗಳ ಅಧಿಕಾರ ನಿರ್ವಾಹಕ್ರಮದಲ್ಲಿ ನಿರಂಕುಶಪ್ರವೃತ್ತಿಯೇ ಪ್ರಬಲವಾಗಿದೆಯೆಂದೂ ಅದು ಈಗಲೇ ನಿರ್ಮೂಲವಾಗಿಹೋಗಬೇಕೆಂದೂ ಅವರು ಆಡುತ್ತಲಿದ್ದಾರೆ. ಇನ್ನೊಂದು ಪಕ್ಷದವರಾದರೋ ತತ್‌ಕ್ಷಣ ಸ್ವರಾಜ್ಯವನ್ನು ಕೋರುವವರಲ್ಲ. ಕಾಲಕ್ರಮದಲ್ಲಿ ಅದು ಆಗಬೇಕಾದುದೆಂತಲೂ, ಸ್ವರಾಜ್ಯನಿರ್ವಾಹಕ್ಕೆ ತಕ್ಕ ಅರ್ಹತೆಯು ಭಾರತೀಯರಿಗೆ ಇನ್ನೂ ಬಂದಿಲ್ಲವೆಂತಲೂ, ವಿದ್ಯಾಧಿಕರಾದ ಕೆಲವೊಂದು ಜನರಿಗೆ ಅದು ವಾಂಛನೀಯವಾಗಿರುವುದೆಂತಲೂ, ಪ್ರಜಾಸಾಮಾನ್ಯಕ್ಕೆ ಅದರ ಗಂಧವೂ ಕೂಡ ಬಡಿದಿಲ್ಲವೆಂತಲೂ, ಸದ್ಯಃ ಸ್ವರಾಜ್ಯಲಾಭವಾದರೆ ಜನರೊಳಗೊಂದು ವಿಶಿಷ್ಟ ವರ್ಗದವರಿಗೆ ಲಾಭವಾಗುವುದೇ ಹೊರತು ಪ್ರಜಾಸಾಮಾನ್ಯಕ್ಕೆ ಅದರಿಂದ ಹಿತವಾಗುವುದಿಲ್ಲವೆಂತಲೂ, ಜಾತಿಮಾತ್ಸರ್ಯ, ಅನೈಕಮತ್ಯ, ಅಜ್ಞಾನ, ಸ್ವಾರ್ಥಪರತೆ ಮೊದಲಾದ ಜಾತೀಯ ಭಾವಧ್ವಂಸಕವಾದ ಗುಣಗಳು ನಮ್ಮಲ್ಲಿಯ ವಿದ್ಯಾಧಿಕ ಜನರಲ್ಲಿಯೂ ಕೂಡ ಇನ್ನೂ ಅಳಿದುಹೋಗದಿರುವಾಗ ಸ್ವಪರಿಪಾಲನ ಸ್ವಾತಂತ್ರ್ಯವು ಇಂಥ ನಮ್ಮ ದೇಶಕ್ಕೆ ಹಿತಕಾರಿಯಾಗಲಾರದೆಂತಲೂ ಮೊದಲಾಗಿ ವಾದಿಸುತ್ತಾರೆ.

ಈಗಣ ರಾಜಕೀಯ ಧೋರಣೆಯ ಕೆಲವೊಂದು ವಿಷಯವನ್ನು ಮಾರ್ಮಿಕವಾಗಿ ವಿಚಾರಮಾಡಿ ನೋಡಿದರೆ ದೇಶದ ಅಭ್ಯುದಯಕ್ಕೆ ಆರ್ಥಿಕಾದಿ ಸ್ವಾತಂತ್ರ್ಯವಿರಬೇಕಾದುದು ಅತ್ಯವಶ್ಯಕವೆಂಬುದನ್ನು ಒಪ್ಪಿಯೇತೀರಬೇಕಾಗುತ್ತದೆ. ಆದರೆ ಪೂರ್ವದ ಭರತಖಂಡದ ಇತಿಹಾಸವನ್ನು ಒಂದು ಕ್ಷಣಕಾಲ ವಿಚಾರಮಾಡಿ ನೋಡುವವರಿಗೆ ಈ ಸ್ವಪರಿಪಾಲನ ಲಾಭದಿಂದ "ಏಂಬ ಚೀಟೋಕ್ತಿಯಂತೆ ಏನೋ ಹಿತವನ್ನು ಸಾಧಿಸುತ್ತೇವೆಂ" ಬುದರಲ್ಲಿ ಇನ್ನೊಂದುತೆರದ ವಿಘಾತಗಳು ದೇಶದಲ್ಲಿ ಎಲ್ಲಿ ಮೂಡುವುವೋ ಎಂದು ಶಂಕೆಯು ಹುಟ್ಟದೆ ಹೋಗುವುದಿಲ್ಲ. ವಿದ್ಯಾಧಿಕ್ಯವೊಂದೇ ರಾಜ್ಯಕಾರ್ಯನಿರ್ವಾಹಕ್ಕೆ ಪರಿಪೂರ್ಣವಾದ ಅರ್ಹತೆಯೆಂದು ಹೇಳಲಾಗುವುದಿಲ್ಲ. ನಿರ್ಮಲಗುಣಾಧಿಕ್ಯವೂ ಆವಶ್ಯಕವಾಗಿ ಬೇಕು. ವಿದ್ಯೆಯನ್ನು ಪ್ರಯತ್ನದಿಂದ ಸಾಧಿಸಬಹುದು. ಗುಣಗಳು ಸಹಜಸಿದ್ಧವಾಗತಕ್ಕವುಗಳು. ಸ್ವಾರ್ಥ, ಪರೋತ್ಕರ್ಷಾಸಹನೆ, ಪರಸ್ಪರ ನೀಚೋಚ್ಚಭಾವನೆ—ಇವುಗಳಿಂದಲೇ ಭರತಖಂಡವು ತನ್ನ ಉತ್ಕರ್ಷವನ್ನು ಕಳೆದುಕೊಂಡು ಪರದಾಸ್ಯದಲ್ಲಿ ಬಿದ್ದುಕೊಂಡಿರುವುದು. ಈಗಣ ನಾಗರಿಕತೆಯನ್ನು ಕಲಿತುಕೊಳ್ಳುತ್ತಿರುವ ವಿದ್ಯಾಧಿಕರಲ್ಲಿಯೂ, ರಾಜ್ಯಾಧಿಕಾರ ಪದವಿಗಳಲ್ಲಿರತಕ್ಕ ಜನರಲ್ಲಿಯೂ, ಸ್ವಜನಾಭಿಮಾನ, ಸ್ವಾರ್ಥಪರತೆ, ಲಂಚಕೋರತನ, ಮೊದಲಾದ ದುರ್ವೃತ್ತಿಗಳಿಗೊಳಗಾಗದವರು ಬಹಳ ಸ್ವಲ್ಪ ಮಂದಿಯೇ ಆಗಿರುತ್ತಾರೆ. ಸಾವಿರಾರು ಸಂಬಳವನ್ನು ತಿನ್ನುತ್ತಿದ್ದರೂ, ತಮ್ಮ ಕರ್ತವ್ಯವನ್ನು ನಿಸ್ಪೃಹತೆಯಿಂದ ಮಾಡಲೊಲ್ಲದೆ ಕಾರ್ಯಾರ್ಥವಾಗಿ ಬಂದ ಬಡಬಗ್ಗರಿಂದೆಲ್ಲಾ ನೂರು ಸಾವಿರಗಟ್ಟಲೆ ಲಂಚವನ್ನು ಘಂಟಾಘೋಷವಾಗಿ ಕೇಳಿ ತೆಗೆದುಕೊಳ್ಳುತ್ತಿರುವ ವಿದ್ಯಾಧಿಕರಾದ ಅಧಿಕಾರಿಗಳು ನಮ್ಮಲ್ಲಿ ಎಷ್ಟೋ ಮಂದಿ ಇರುವರು. ಲಕ್ಷಾಂತರ ರೂ. ಗಳ ವ್ಯಯದಿಂದ ಕಟ್ಟಲ್ಪಟ್ಟಿರುವ ಭವ್ಯವಾದ ವೈದ್ಯಾಲಯ ಮೊದಲಾದ ಧರ್ಮಸ್ಥಲಗಳಲ್ಲಿ ಇಂಥ ಅಧಿಕಾರಿಗಳು ನೆಲಸಿರುವುದು, ಪವಿತ್ರವಾದ ದೇವಾಲಯಗಳನ್ನು ಕಟ್ಟಿಸಿ ಪಿಶಾಚಗಳಿಗೆ ಬೀಡುಮಾಡಿದಂತಾಗಿರುವುದು. ಲಂಚಗೋರತನವೂ ಅಜಿತೇಂದ್ರಿಯತ್ವವೂ ಪ್ರಬಲಿಸಿರುವ ಈಗಣ ಅನೇಕ ವಿದ್ಯಾಧಿಕರಲ್ಲಿ ಸಾಮಾನ್ಯಜನಸೌಹಾರ್ದ, ಗುರುದೈವಭಕ್ತಿ, ಆಸ್ತಿಕ್ಯ ಮೊದಲಾದುವುಗಳು ಶೂನ್ಯವಾಗಿ ಅಹಂಕಾರವು ಮಾತ್ರ ಹೆಚ್ಚಿಕೊಳ್ಳುತ್ತಿರುವುದೆಂಬುದಾಗಿ ಬಂಗಾಳಾ ಪ್ರಾಂತಿಕ ರಾಷ್ಟ್ರೀಯಸಭೆಯ ಅಧ್ಯಕ್ಷರಾಗಿದ್ದ ದಾಸುರವರು ಸ್ಪಷ್ಟವಾಗಿ ಹೇಳಿರುತ್ತಾರೆ. ಆ ಭಾಗವನ್ನು ಈ ಪತ್ರಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಸ್ವರಾಜ್ಯವಾದಿಗಳಲ್ಲಿ ಅಗ್ರೇಸರರಾದವರ ಅಭಿಪ್ರಾಯವೆಲ್ಲಾ ದೇಶದ ಸಾಮಾನ್ಯ ಪ್ರಜೆಗಳನ್ನು ಪ್ರೀತಿಸಿ, ವಿದ್ಯಾವಂತರನ್ನು ಮಾಡಿ, ಅವರನ್ನೆಲ್ಲಾ ಮುಂದಕ್ಕೆ ತಂದಲ್ಲದೆ ನಮ್ಮ ಸ್ವರಾಜ್ಯಸಂಕಲ್ಪವು ಫಲವತ್ತರವಾಗುವುದಿಲ್ಲವೆಂದಾಗಿರುತ್ತದೆ. ಸುರೇಂದ್ರನಾಥ ಬಾನರ್ಜಿಯವರು ಬಂಗಾಳಾ ರಾಷ್ಟ್ರೀಯಸಭೆಯಲ್ಲಿ ಭಾಷಣಮಾಡುವಾಗ್ಗೆ "ಎಷ್ಟು ಕಾಲದವರೆಗೆ ನಾವು ಜನಸಾಮಾನ್ಯದೊಡನೆ ಬೆರೆದು ಅವರ ಸಾಹಾಯ್ಯವನ್ನು ಹೊಂದದೆ ಕೆಲಸಮಾಡುತ್ತಿರುವೆವೋ ಅದುವರೆಗೂ ನಾವು ಸ್ವಪರಿಪಾಲನವನ್ನು ಹೊಂದಲಾರೆವು. ಸ್ವಪರಿಪಾಲನೆಗಾಗಿ ನಾವು ಮಾಡಿಕೊಳ್ಳುವ ಮೊರೆಯೆಲ್ಲಾ ಅರಣ್ಯರೋದನಕ್ಕೆ ಸಮಾನವು" ಎಂದು ಹೇಳಿರುತ್ತಾರೆ. ಶ್ರೀಯುತ ತಿಲಕರವರೂ ಕೂಡ ಹಳ್ಳಿಹಳ್ಳಿಯ ಜನರ ಬಾಯಿಂದೆಲ್ಲಾ ಸ್ವಪರಿಪಾಲನ ಶಬ್ದವು ಉಚ್ಚರಿಸಲ್ಪಡುವಂತಾಗಬೇಕು. ಆಗ ನಮ್ಮ ಕಾರ್ಯಸಿದ್ಧಿಯು ಸುಲಭವಾಗುವುದು ಎಂದು ಹೇಳಿರುತ್ತಾರೆ. ಇತರ ದೇಶಭಕ್ತಾಗ್ರಣಿಗಳ ಅಭಿಪ್ರಾಯವೂ ಹೀಗೆಯೇ ಇದೆ. ಆದರೆ ದೇಶಮಧ್ಯದಲ್ಲಿ ನಡೆಯುತ್ತಿರುವ ಕಾರ್ಯಪರಿಸ್ಥಿತಿಯು ಮಾತ್ರ ಜಾತೀಯತಾಭಿವೃದ್ಧಿಗೆ ಕುಠಾರರೂಪವಾಗಿಯೇ ಇರುತ್ತದೆ. ದಕ್ಷಿಣದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಸಮಸ್ಯೆಯು ಹುಟ್ಟಿ ಪರಸ್ಪರೈಕ್ಯವನ್ನು ದೂರಪಡಿಸುತ್ತಿದೆ. ಸಂಘಸಂಸ್ಕಾರಕರು ಐಕ್ಯವೃದ್ಧಿಗಾಗಿ ನಾನಾ ಸೂಚನೆಗಳನ್ನೂ ಯತ್ನಗಳನ್ನೂ ಮಾಡಿ ಪಾಟುಪಡುತ್ತಿರುವಾಗ ವರ್ಣಾಶ್ರಮಧರ್ಮಸಭೆ ಇತ್ಯಾದಿಗಳು ಹುಟ್ಟಿ ಸ್ಮೃತ್ಯುಕ್ತ ವರ್ಣಾಶ್ರಮಧರ್ಮೋನ್ನತಿಗೂ ಪರಸ್ಪರೋಚ್ಚನೀಚ ಪರಿಕಲ್ಪನೆಗೂ ಹುರಿದುಂಬಿಸುತ್ತಲಿವೆ. ಇದನ್ನು ನೋಡಿ ದೇಶಭಕ್ತರೆಲ್ಲರೂ ಪಶ್ಚಾತ್ತಾಪಪಡುವಂತಾಗಿದೆ. ಗಂಜಾಂ ಜಿಲ್ಲೆಯ ಸಂಘಸಂಸ್ಕರಣ ಸಭೆಯು ಮೊನ್ನೆ ವಾರದಲ್ಲಿ ಕೂಡಿದ್ದಾಗ ಅದರ ಅಧ್ಯಕ್ಷರಾಗಿದ್ದ ಮ|| ಎ. ಮಹಾದೇವಶಾಸ್ತ್ರಿಗಳು ಮಾಡಿದ ಭಾಷಣದಲ್ಲಿ—ಬ್ರಾಹ್ಮಣಾದಿ ವರ್ಣಗಳು ಆಧ್ಯಾತ್ಮಿಕಾಭಿವೃದ್ಧಿಗಾಗಿ ಅವತರಿಸಿದುವೆಂದೂ, ಇದೇ ವೇದಾಭಿಪ್ರಾಯವೆಂದೂ ಬರುಬರುತ್ತ ಆ ವಿಭಾಗಗಳೇ ವೃತ್ತಿಧರ್ಮವನ್ನವಲಂಬಿಸಿ, ಈಗಣ ಪ್ರಾಪಂಚಿಕ ವರ್ಣಗಳಾಗಿ ಪರಿಣಮಿಸಿರುವುವೆಂದೂ, ಆಧ್ಯಾತ್ಮಿಕ ಜೀವನವೂ, ಆಧ್ಯಾತ್ಮಿಕ ವರ್ಣವಿಭಾಗವೂ ಕೂಡ ಜಾತೀಯೈಕ್ಯಕ್ಕೆ ಸಾಧಕವಾಗಿದ್ದುವೆಂದೂ, ಅಲ್ಲಿ ಉಚ್ಚನೀಚಕಲ್ಪನೆಯೇನೂ ಇರಲಿಲ್ಲವೆಂದೂ, ಆ ಆಧ್ಯಾತ್ಮಿಕ ಜೀವನವನ್ನು ಬಿಟ್ಟು ಪ್ರಾಪಂಚಿಕವೃತ್ತಿಗಳಲ್ಲಿ ತೊಡಗಿದಾಗಲೇ ವರ್ಣಸಾಂಕರ್ಯಕ್ಕೆ ಆರಂಭವಾಯಿತೆಂದೂ, ವೈದಿಕಗಳಾದ ವರ್ಣಧರ್ಮಗಳು ಪರಮಾತ್ಮಜ್ಞಾನಸಾಧನೆಗೆ ಸಹಾಯಕಗಳಾಗಿದ್ದುವೆಂದೂ, ಆ ವರ್ಣಧರ್ಮವನ್ನನುಸರಿಸುವುದಕ್ಕೆ ಸತ್ಯ, ಧರ್ಮಜ್ಞಾನ, ಧರ್ಮಾಭಿರತಿ, ಇಂದ್ರಿಯನಿಗ್ರಹ, ಮನೋನಿಶ್ಚಲತೆ, ಇವೈದೂ ಮುಖ್ಯವೆಂದೂ, ಮೋಕ್ಷವನ್ನಪೇಕ್ಷಿಸುವ ಯಾವ ತರಗತಿಯವರಾದರೂ ಈ ಐದು ಮುಖ್ಯಗುಣಗಳನ್ನೂ ಸಂಪಾದಿಸಬೇಕೆಂದೂ, ಇದೇ ಹಿಂದೂಮತದ ವರ್ಣಧರ್ಮದ ಸಾರವೆಂದೂ, ಆ ಆಧ್ಯಾತ್ಮಿಕ ವರ್ಣವಿಭೇದವು ಅಧಿಭೌತಿಕಕ್ಕೆ ತಿರುಗಿ ಪೂರ್ವದ ಪದ್ಧತಿಗಳೆಲ್ಲಾ ಬಹುಮಟ್ಟಿಗೆ ಮಾರ್ಪುಗೊಂಡಿರುವುವೆಂದೂ, ಈಗ ನಾವು ವೇದನಿರ್ಣೀತಧರ್ಮಗಳಿಗೆ ಎಷ್ಟೋ ವ್ಯತಿರೇಕವಾಗಿ ನಡೆಯುತ್ತಿರುವೆವೆಂದೂ, ಜನ್ಮವನ್ನನುಸರಿಸಿ ಜಾತಿನಿರ್ಣಯಮಾಡುವುದು ವೇದಸಂಮತವಲ್ಲವೆಂದೂ, ನಾವು ನಮ್ಮ ವೇದಾರ್ಥವನ್ನು ಮುಖ್ಯವಾಗಿ ಗ್ರಹಿಸಿ ಹಿಂದುಳಿದ ಜನವರ್ಗದವರನ್ನೂ ಸ್ತ್ರೀಯರನ್ನೂ ಮೆಟ್ಟಿ ತುಳಿಯುವುದಕ್ಕೆ ಪ್ರಯತ್ನಿಸದೆ ಅವರನ್ನೆಲ್ಲಾ ಅಭಿವೃದ್ಧಿಗೆ ತರುವುದಕ್ಕೆ ಪ್ರಯತ್ನಿಸಬೇಕೆಂದೂ, ಈಗ ಹುಟ್ಟಿರುವ [illegible] ಸಂಘಸಂಸ್ಕರಣವನ್ನು ಪ್ರತಿಭಟಿಸುವುದೇ ಉದ್ದೇಶವೆಂದೂ, ಆ ಸಭೆಯವರು ಕೇವಲ ಸ್ಮೃತ್ಯುಕ್ತ ವರ್ಣಾಶ್ರಮಧರ್ಮಗಳನ್ನು ಅನುಸರಿಸುವವರೆಂದೂ, ಸ್ಮೃತಿಗಳೂ ಧರ್ಮಶಾಸ್ತ್ರಗಳೂ ಸಹ ಸಮಯೋಚಿತ ಧರ್ಮವಿಧಾಯಕಗಳೇ ಹೊರತು ಶಾಶ್ವತ ಧರ್ಮವಿಧಾಯಕ ಶಾಸ್ತ್ರಗಳಲ್ಲವೆಂದೂ, ಇವು ಆಯಾ ಕಾಲದಲ್ಲಿ ನಮ್ಮವರಿಂದ ಕಲ್ಪಿತವಾದುವುಗಳೆಂದೂ, ವೇದದ ಪ್ರಕಾರ ಸ್ತ್ರೀಯರಿಗೂ ಹಿಂದುಳಿದ ವರ್ಗದವರೆಲ್ಲರಿಗೂ ಸ್ವಾತಂತ್ರ್ಯವನ್ನಿತ್ತು ಪರಿಪೂರ್ಣ ವಿದ್ಯೆಯನ್ನೂ ಜ್ಞಾನವನ್ನೂ ದಾನಮಾಡುವುದು ನಮ್ಮ ಕರ್ತವ್ಯವೆಂದೂ, ಮೊದಲಾಗಿ ವಿಚಾರಪರಿಪ್ಲುತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಇವುಗಳನ್ನೆಲ್ಲಾ ವಿಮರ್ಶಿಸಿದಾಗಲೂ, ಸದ್ಯದ ಭರತಖಂಡದ ಸ್ಥಿತಿಗತಿಯನ್ನು ಪ್ರತ್ಯಕ್ಷವಾಗಿ ಅವಲೋಕಿಸುತ್ತಿರುವಾಗಲೂ, ಐಕ್ಯವೃದ್ಧಿಗೇ ಹೆಚ್ಚು ಅವಕಾಶವಿರುವುದೆಂದು ಕಂಡುಬರುತ್ತಿರುವುದು. ಸಾಮಾನ್ಯ ಜನೋದ್ಧಾರದಕಡೆಗೆ ವಿದ್ಯಾಧಿಕರೂ ಧನಾಢ್ಯರೂ ಗಮನಿಸುವುದು ಶೂನ್ಯವಾಗಿರುವುದು. ನಿಜವಾದ ದೇಶಾಭಿಮಾನದ ಲಕ್ಷಣಗಳು ವಿರಳವಾಗಿರುವುವು. ಜಾತೀಯತೆಯು ಹೆಪ್ಪುಗಟ್ಟುವುದಕ್ಕೆ ಇನ್ನೂ ಬಹಳಕಾಲವು ಬೇಕೆಂದು ಸ್ಪಷ್ಟವಾಗಿರುವುದು. ವಿದ್ಯಾಧಿಕರಲ್ಲಿ ಗುಣಪರಿವರ್ತನೆಯು ಅವಶ್ಯಕವಾಗಿ ಆಗಬೇಕಾಗಿರುವುದು. ಸಾಮಾನ್ಯಜನರಲ್ಲಿ ವಿದ್ಯಾವಿವೇಕ ಸ್ವಾತಂತ್ರ್ಯಗಳು ಬೇರುಬಿಡಬೇಕಾಗಿರುವುದು. ಇದಕ್ಕೆಲ್ಲಾ ನಮ್ಮ ಮಧ್ಯದಲ್ಲೂ ನಮ್ಮ ಮೇಲೂ ಸ್ವಾತಂತ್ರ್ಯ ದೇವತಾ ನಿಜೋಪಾಸಕರೂ, ಸದ್ಗುಣ ವಿಶೇಷಾಂಶ ಭೂಯಿಷ್ಠರೂ ಆದ ಆಂಗ್ಲ ಮಹಾಜನರು ಎಷ್ಟೋಕಾಲ ರಾಜ್ಯಾಧಿಕಾರವನ್ನು ಮಾಡುತ್ತಿರಬೇಕಾಗುವುದು. ಅವರ ಸಾಹಚರ್ಯದಿಂದ ನಮ್ಮಲ್ಲಿ ಲುಪ್ತವಾಗಬೇಕಾಗಿರುವ ಗುಣಗಳು ಅಳಿದು ಅಪೇಕ್ಷಣೀಯಗಳಾದ ಗುಣಗಳು ಪ್ರಾದುರ್ಭವಿಸಿ, ನಿರುಪಾಧಿಕವೂ, ಅನುಪಪ್ಲವವೂ ಆದ ಸ್ವಪರಿಪಾಲನವನ್ನು ನಿರ್ವಹಿಸುವ ಸಾಮರ್ಥ್ಯವು ನಮ್ಮಲ್ಲುಂಟಾಗಬಹುದು. ವಜ್ರಾಂಗವನ್ನು ತೊಟ್ಟುಕೊಳ್ಳುವ ಅಪೇಕ್ಷೆ ಹುಟ್ಟಿದಮಾತ್ರಕ್ಕೇ ಅದನ್ನು ಹೊರುವ ಶಕ್ತಿಯು ದೇಹದಲ್ಲುಂಟಾಗುವಂತೆ ವ್ಯಾಯಾಮಮಾಡಿಕೊಳ್ಳಬೇಕಲ್ಲವೆ?

ಹಿತಬೋಧೆ.

ಬಂಗಾಳಾ ಪ್ರಾಂತದ ರಾಷ್ಟ್ರೀಯಸಭೆಯು ಮೊನ್ನೆ ವಾರದಲ್ಲಿ ಭವಾನೀಪುರದಲ್ಲಿ ಕೂಡಿದ್ದಿತು. ಅದರ ಅಧ್ಯಕ್ಷರಾಗಿದ್ದ ಬ್ಯಾ|| ಸಿ.ಆರ್. ದಾಸುರವರು ಮಾಡಿದ ದೀರ್ಘವಾದ ಭಾಷಣದೊಳಗೆ ಕೆಲವಂಶಗಳು ಆಧುನಿಕ ಸಮಾಜದ ತಿದ್ದುಪಡಿಗೆ ಅವಶ್ಯಕವಾದ ಹಿತಬೋಧಾರೂಪಗಳಾಗಿರುವುದರಿಂದ ಅವನ್ನು ಪ್ರತ್ಯೇಕಿಸಿ, ಇಲ್ಲಿ ಪ್ರಕಟಿಸಿರುತ್ತೇವೆ.—

"ಆಂಗ್ಲಭಾಷೆಯನ್ನು ಕಲಿಯದವನನ್ನು ನೀಚಭಾವದಿಂದ ನೋಡುವ ಹೇಯವಾದ ಪದ್ಧತಿಯು ನಮ್ಮನ್ನು ಅವಲಂಬಿಸಿರುತ್ತದೆ. ಅವರನ್ನು ಮೂಢರೆಂದೂ ವಿದ್ಯಾವಿಹೀನರೆಂದೂ ಕರೆಯುತ್ತಿದ್ದೇವೆ. ಅವರ ಅಜ್ಞಾನವನ್ನು ನೋಡಿ ಆಕ್ಷೇಪಿಸುತ್ತಿದ್ದೆವು. ಆದರೆ, ಅಯ್ಯೋ ಪಾಪ !! ಮೂಢರು ವಿದ್ಯಾವಿಹೀನರು ಎಂದು ನಾವು ಕರೆಯುತ್ತಿರುವ ಅವರಲ್ಲೂ ಕೂಡ ದಯೂರಸವೂ ಸಾನುಭೂತಿಯೂ ಇಲ್ಲದೆಹೋಗಿಲ್ಲ. ಅವರು ದೈವವನ್ನು ಪೂಜಿಸುವರು. ಅತಿಥಿಸತ್ಕಾರವನ್ನು ಮಾಡುವರು. ತಮ್ಮ ನೆರೆಹೊರೆಯ ಸೋದರರ ಕಷ್ಟದಶೆಗಳಲ್ಲಿ ಭಾಗಿಗಳಾಗಿ ತಮ್ಮ ಯಥಾಶಕ್ತಿ ಸಹಾಯಮಾಡುವರು. ಆಂಗ್ಲಭಾಷಾಪರಾಯಣರಾಗಿರುವ ನಮಗಿಂತಲೂ ಅವರಲ್ಲಿ ಧೀಶಕ್ತಿಯೂ ನಾಗರಿಕತೆಯೂ ಹೆಚ್ಚಾಗಿರುವುವು. ನಮ್ಮ ದೇಶೀಯರಾದ ಇವರೊಡನೆ ನಾವು ಯಾವಾಗಲೂ ಹೊಕ್ಕು ಬಳಕೆಯಾಗಿ ಕೂಡಿ ಕೆಲಸಮಾಡಿದುದಿಲ್ಲ. ಅವರಿಗೆ ಯಾವವಿಧವಾದ ಉಪಕಾರವನ್ನೂ ನಾವು ಮಾಡಿದುದಿಲ್ಲ. ಆದರೂ ನಾವು ವಿದ್ಯಾಧಿಕರೆಂದು ಬಿರ್‍ರನೆ ಬೀಗುತ್ತಿರುವೆವು. ಪಾಮರಜನರೊಡನೆ ಬೆರೆದು ಅವರ ಕಷ್ಟಸುಖಗಳನ್ನು ಅರಿತುಕೊಳ್ಳುವ ಪಾಪಕ್ಕೂ ನಾವು ಹುಗಲಿಲ್ಲ. ನಾವು ಧನವಂತರೆಂದೂ, ದೊಡ್ಡ ವಂಶೀಯರೆಂದೂ ಗರ್ವಪಡುತ್ತಿದ್ದೇವೆ. ನಾವು ನಮ್ಮ ಸೋದರರೊಡನೆ ತೋರಿಸಬೇಕಾದ ಧರ್ಮಗಳನ್ನೆಲ್ಲಾ ಮಣ್ಣುಪಾಲುಮಾಡಿದೆವು. ಇನ್ನು ವರ್ಣಾಶ್ರಮಧರ್ಮವಿಷಯವಾಗಿಯೋ ಏನನ್ನೂ ಹೇಳಬೇಕಾದುದೇ ಇಲ್ಲ. ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವಂತೆ ನಮ್ಮ ಸಂಘಗಳಲ್ಲಿಯೂ ವರ್ಣಾಶ್ರಮಧರ್ಮಸೂಚನೆಗಳೇ ಕಂಡುಬರುವುದಿಲ್ಲ. ನಮ್ಮ ಬ್ರಾಹ್ಮಣರು ತಮ್ಮ ವಿಧ್ಯುಕ್ತಧರ್ಮಗಳನ್ನು ಬಿಟ್ಟು ಇತರ ಜೀವನೋಪಾಧಿಗಳನ್ನು ಕಲ್ಪಿಸಿಕೊಳ್ಳುತ್ತಿದ್ದಾರೆ. ಗುಮಾಸ್ತರೂ, ವಕೀಲರೂ, ಜಡ್ಜಿಗಳೂ, ವಾ ಪಾರಿಗಳೂ ಆಗಿ ಪರಿಣಮಿಸುತ್ತಿದ್ದಾರೆ. ಮೂಲಸೂತ್ರಗಳಿಗೆ ಅನಾರ್ಥವನ್ನು ಹೇಳುವುದರಲ್ಲಿ ಇವರು ಸಂಪೂರ್ಣ ಪಂಡಿತರು. ಇವರಿಗೆ ಶಾಸ್ತ್ರಜ್ಞಾನವು ಸ್ವಲ್ಪವೂ ಇಲ್ಲದೆಹೋಗಿರುವುದು ಸರಿಯಷ್ಟೆ. ಅವನ್ನು ಓದಿ ತಿಳಿದುಕೊಳ್ಳುವುದಕ್ಕೂ ಸುದಾ ಪ್ರಯತ್ನಪಡುವುದಿಲ್ಲ. ಬ್ರಾಹ್ಮಣರೂ, ವೈಶ್ಯರೂ, ಕಾಯಸ್ಥರೂ ಸಹ ಪರಸ್ಪರ ಸಮಾನರಾಗಿಯೇ ಇದ್ದಾರೆ. ಹೀಗೆ ಶಾಸ್ತ್ರಜ್ಞಾನ ಗಂಧಲೇಶವೂ ಇಲ್ಲದಿರುವ ಇವರು ತಾವು ಪ್ರಥಮವರ್ಣದವರೆಂದು ಇಷ್ಟು ಬಿರ್‍ರನೆ ಬೀಗುವುದೇತಕ್ಕೆ? ಸಂಘಸಂಸ್ಕರಣಸಂಬಂಧವಾಗಿ ವರ್ಣಾಶ್ರಮಧರ್ಮಗಳಲ್ಲಿರುವ ಒಳ್ಳೆತನ ಕೆಟ್ಟತನಗಳನ್ನು ಕುರಿತು ನಾನು ಈಗ ಪ್ರಸ್ತಾಪಿಸುವುದಿಲ್ಲ. ನಿಮಗೆ ಇಷ್ಟವಿದ್ದರೆ ಹೊಸದಾಗಿ ನಿರ್ಮಾಣಮಾಡಿಕೊಳ್ಳಿರಿ. ಈಗಣ ಸ್ಥಿತಿಗತಿಗಳನ್ನನುಸರಿಸಿ, ಸಂಘಸಂಸ್ಕರಣವನ್ನು ಮಾಡಿಕೊಳ್ಳಿರಿ. ಅಷ್ಟೇ ಹೊರತು ಅನವಶ್ಯಕವಾಗಿಯೂ ಹುರುಳಿಲ್ಲದುದಾಗಿಯೂ ನಾಮರೂಪಗಳಿಲ್ಲದುದಾಗಿಯೂ ಇರುವ ವರ್ಣಾಶ್ರಮಧರ್ಮವಿಷಯವಾಗಿ ಏತಕ್ಕೆ ವ್ಯರ್ಥವಾಗಿ ಪ್ರಯಾಸಪಡಬೇಕು? ಇಲ್ಲದ ಸಲ್ಲದ ಭೇದಗಳನ್ನು ಕಲ್ಪಿಸಿಕೊಂಡು ಒಬ್ಬರೊಬ್ಬರಲ್ಲಿ ಮಿತ್ರಭೇದವನ್ನು ಕಲ್ಪಿಸುವುದಕ್ಕೆ ಏಕೆ ದಾರಿ ಕೊಡುವಿರಿ? ಪೂರ್ವಾಚಾರಪರಾಯಣರಾಗಿಯೂ ನಮ್ಮ ದೇಶದಲ್ಲಿ ನ್ಯಾಯಮಾರ್ಗದೊಳಗೆ ಪ್ರವರ್ತಿಸುವವರಾಗಿಯೂ, ಆಂಗ್ಲಭಾಷಾಜ್ಞಾನವಿಲ್ಲದಿದ್ದರೂ ಎಂಥ ಕಷ್ಟದೆಶೆಯಲ್ಲಿದ್ದರೂ ಎಂಥ ಬಡತನದಲ್ಲಿ ನರಳುತ್ತಿದ್ದರೂ ಸತ್ಯವನ್ನು ಬಿಡದೆ ಅನ್ಯಾಯಕ್ಕೆ ಪ್ರವರ್ತಿಸದೆ ನಡೆಯುತ್ತಿರುವವರು ನಮಗಿಂತಲೂ ದೊಡ್ಡವರೇ ಹೊರತು ಚಿಕ್ಕವರಲ್ಲ. ಆಂಗ್ಲಭಾಷಾಜ್ಞಾನದಿಂದ ನಮಗೆ ಸಂಪ್ರಾಪ್ತವಾಗಿರುವ ಲಂಚಕೋರತನ, ದುಷ್ಟವರ್ತನ ಮೊದಲಾದುವುಗಳು ಅವರನ್ನು ಆಕ್ರಮಿಸಿಲ್ಲ. ನಾವು ಎಷ್ಟು ವಿದ್ಯಾಧಿಕರಾದರೂ ಎಷ್ಟು ಉನ್ನತಪದವಿಯಲ್ಲಿದ್ದರೂ ಆ ಪೂರ್ವಾಚಾರಪರರ ಗುಣಶೀಲ ಮರ್ಯಾದೆ ಸಂಪ್ರದಾಯಗಳ ವಿಷಯದಲ್ಲಿ ನಾವು ಸರಿದೂಗಲಾರೆವು. ನಾವು ಹಿಂದೂಮತದವರೆಂದು ಅಹಂಭಾವಪಡುತ್ತೇವೆ. ಈ ಬಾಹ್ಯಮತಾಹಂಕಾರದಿಂದ ಮೂಲತಃ ಹಿಂದೂಮತವನ್ನೇ ವಿನಾಶಮಾಡಿಕೊಳ್ಳುತ್ತಿದ್ದೇವೆ. ಈಗಳಾದರೂ ದೀಪವಿರುವಾಗಲೇ ಮನೆಯನ್ನು ಚೊಕ್ಕಟಮಾಡಿಕೊಂಡು ನಮ್ಮ ತಪ್ಪುಗಳನ್ನೆಲ್ಲಾ ತಿದ್ದಿಕೊಳ್ಳುವುದು ಅತ್ಯವಶ್ಯಕವು. ನಮ್ಮ ಜಾತಿಯವರ ವಿಷಯವಾಗಿ ನಾವು ನೀಚಭಾವವನ್ನು ತೋರಿಸದೆ ಅವರ ಹೃದಯದಲ್ಲೂ ಭಗವಚ್ಛಕ್ತಿಯಿರುವುದೆಂದು ಭಾವಿಸಿ, ಅವರನ್ನು ಗೌರವದಿಂದ ಉತ್ತಮಸ್ಥಿತಿಗೆ ತರುವುದಕ್ಕೆ ಪ್ರಯತ್ನಿಸಬೇಕು. ಅಲ್ಪನಲ್ಲದ ಬರಿಯ ಭ್ರಮೆಯಿಂದ ಬದಿಗಾದರೆ, ನಾನು ಬ್ರಾಹ್ಮಣ, ಇವನು ಶೂದ್ರ ನನಗಿಂತಲೂ ಇವನು ಕನಿಷ್ಠ, ಎಂದು ಜರಿಯದೆ ಯಾರಾದರೂ ಸರಿ, ಅವನು ಕ್ರೈಸ್ತನಾಗಲೀ, ಚಂಡಾಲನಾಗಲೀ ಅವನನ್ನು ಆದರಿಸಿ, ಬೇಕಾದ ಸೌಕರ್ಯಗಳನ್ನೊದಗಿಸಿಕೊಟ್ಟು, ಸಾಧ್ಯವಾದಷ್ಟು ಸಹಾಯಮಾಡಿ, ಅವರನ್ನು ಅಭಿವೃದ್ಧಿಗೆ ತಂದು, ಉತ್ತಮಮಾರ್ಗಕ್ಕೆ ತಿರುಗಿಸಿ, ಮುಕ್ತಿಯನ್ನು ಪಡೆಯಿರಿ."

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಸೆಂಚುರಿ ಕ್ಲಬ್ಬಿಗೆ ಶ್ರೀಮನ್ಮಹಾರಾಜರವರು ೧೦೦ ರೂ. ನ ಮಾಸಾಶನವನ್ನು ಕೊಡಲಪ್ಪಣೆಮಾಡಿರುವುದಾಗಿ ತಿಳಿಯುತ್ತದೆ.

ರಾಜಧಾನಿಯಲ್ಲಿ ಕಾಲರಾ ರೋಗದ ಉಲ್ಬಣವು ಕಡಿಮೆಯಾಗಿದೆ. ಕುಡಿಯುವ ನೀರಿನಲ್ಲಿ ಆ ರೋಗದ ಕ್ರಿಮಿಗಳಿಲ್ಲವೆಂದು ಆರೋಗ್ಯಶಾಖೆಯವರು ಗೊತ್ತುಮಾಡಿದ್ದಾರೆ. ಕಳೆದ ಶುಕ್ರವಾರ ಸಾಯಂಕಾಲ ಅಲಿಕಲ್ಲಿನಿಂದ ಕೂಡಿ ಒಂದು ಹದ ಬಲವಾದ ಮಳೆಯಾಯಿತು.

ಬೆಂಗಳೂರು ಸಿಟಿ ಒಂದನೆಯ ದರ್ಜೆಯ ಪೋಲೀಸ್ ಇನ್ಸ್‌ಪೆಕ್ಟರಾದ ಮ|| ಸಿ. ಎರಾಡೇರವರು ಕೋಲಾರದ ಚಿನ್ನದ ಗಣಿಯ ಪೋಲೀಸ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರು.

ಬರುವ ಜೂನ್ ತಿಂಗಳ ಲಾಗಾಯಿತು ಶಿವಮೊಗ್ಗ ಹೈಸ್ಕೂಲಿಗೆ ಕಾಲೇಜಿಯೇಟ್ ಕ್ಲಾಸ್ ಬರುವುದಾಗಿಯೂ ಮತ್ತು ಲೋಯರ್ ಸೆಕೆಂಡರಿ ಕ್ಲಾಸನ್ನು ಹೈಸ್ಕೂಲಿನಿಂದ ತಪ್ಪಿಸಿ, ಎ. ವಿ. ಸ್ಕೂಲಿಗೆ ಸೇರಿಸುವುದಾಗಿಯೂ ವರ್ತಮಾನ ಕೇಳುತ್ತೇವೆ.

ಮುಂದಿನ ತಿಂಗಳು ೮ ನೆಯ ತಾ|| ಶುಕ್ರವಾರ ಮೈಸೂರು ರಂಗಚಾರ್ಲು 'ಮೆಮೋರಿಯಲ್ ಹಾಲ್' ಸಭಾಮಂದಿರದಲ್ಲಿ ೩ ನೆಯ ವರ್ಷದ ಕರ್ನಾಟಕಸಾಹಿತ್ಯ ಸಮ್ಮೇಳನವು ನಡೆಯುವುದು. ಶ್ರೀಮದ್ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ. ಸಿ. ಐ. ಇ. ರವರು ಸಭಾ ಸಮಾರಂಭವನ್ನು ಮಾಡುವುದಾಗಿ ತಿಳಿಯಬರುತ್ತದೆ.

ಕಳೆದ ತಾ|| ೧೯ರಲ್ಲಿ ರಾಜಧಾನಿಯಲ್ಲಿ ಸೇರಿದ ಸೆನೇಟ್ ಮೀಟಿಂಗಿನಲ್ಲಿ ನಮ್ಮ ವಿಶ್ವವಿದ್ಯಾಲಯದೊಳಗೆ ಬರುವ ಜುಲೈ ತಿಂಗಳಾರಂಭದಿಂದ ವೈದ್ಯಕಲಾಶಾಲೆಯನ್ನಾರಂಭಿಸುವಂತೆ ತೀರ್ಮಾನಿಸಲ್ಪಟ್ಟಿತು. ಮತ್ತೂ ಇಂಜಿನಿಯರಿಂಗ್, ವ್ಯಾಪಾರ ಇವುಗಳ ಕಲಾಶಾಲೆಯನ್ನೇರ್ಪಡಿಸುವುದಕ್ಕೂ ನಿಶ್ಚಿತವಾಗಿ, ಅವುಗಳ ಪಠ್ಯಕ್ರಮಗ್ರಂಥಕ್ರಮ ಮೊದಲಾದುವುಗಳನ್ನು ಗೊತ್ತುಮಾಡಿ ಸಿದ್ಧಪಡಿಸಬೇಕೆಂದು ತೀರ್ಮಾನಿಸಲ್ಪಟ್ಟಿತು.

ರೆವಿನ್ಯೂ ಕಮಿಷನರ ಆಫೀಸಿನ ಅಸಿಸ್ಟೆಂಟ್ ಕಮಿಷನರರಾದ ಮ|| ಎಂ. ಜಿ. ಕೃಷ್ಣಸ್ವಾಮಿರಾಯರು ೨ ತಿಂಗಳ ಹಕ್ಕಿನ ರಜಾಕಾಲದಲ್ಲಿ ನಂಜನಗೂಡು ಸಬ್ ಡಿವಿಜನ್ ಆಫೀಸರಾದ ಮ|| ಕೃಷ್ಣಸ್ವಾಮಯ್ಯಂಗಾರ್‍ರು ರೆವಿನ್ಯೂ ಕಮಿಷನರ ಆಫೀಸಿಗೂ ಮ|| ರಾಯಲುಶೆಟ್ಟರು ಮೈಸೂರು ಡಿ|| ಖಜಾನೆಯಿಂದ ನಂಜನಗೂಡು ಸಬ್ ಡಿವಿಜನ್ನಿಗೂ ಮ|| ಎಂ. ವೆಂಕಟೇಶಯ್ಯಂಗಾರ್‍ರು ಮೈಸೂರು ಡಿ|| ಖಜಾನೆಗೂ ವರ್ಗಮಾಡಲ್ಪಟ್ಟಿರುತ್ತಾರೆ.

ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿ ಒಂದು ಸ್ಪೆಷಲ್ ಸ್ಕೂಲು ಮುಂದಿನ ತಿಂಗಳಿಂದ ಆರಂಭಿಸಲ್ಪಡುವುದು. ಲೋಯರ್ ಸೆಕೆಂಡರಿ ತರಗತಿಯವರೆಗಾದರೂ ಓದಿದ ರೈತಾಪಿ ಜನರ ಮಕ್ಕಳುಗಳಿಗೆ ಈ ಸ್ಕೂಲಿನಲ್ಲಿ ಸಾಧಾರಣ ಇಂಜನಿಯರಿಂಗ್ ಪಾಠಗಳು ೨ ವರ್ಷಗಳ ಕಾಲ ಕಲಿಸಲ್ಪಡುತ್ತವೆ. ಈ ಮಧ್ಯೆ ನಮ್ಮ ಉದಾರವಾದ ಸರ್ಕಾರದವರು ಹತ್ತು ರೂಪಾಯಿನ ಬಾಬತು ಒಂದು ನೂರು ಸ್ಕಾಲರ್‌ಷಿಪ್ಪನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಮೈಸೂರಿನಲ್ಲಿ ಸ್ಥಾಪಿಸತಕ್ಕ ಸ್ಕೂಲಿಗೆ ೪೦ ವಿದ್ಯಾರ್ಥಿಗಳೂ, ಬೆಂಗಳೂರಿನಲ್ಲಿ ಸ್ಥಾಪಿಸಲಾಗತಕ್ಕ ಸ್ಕೂಲಿಗೆ ೬೦ ವಿದ್ಯಾರ್ಥಿಗಳೂ ತೆಗೆದುಕೊಳ್ಳಲ್ಪಡುವರು.

ನಮ್ಮ ಸಂಸ್ಥಾನದಲ್ಲಿ ಬರುವ ಜುಲೈ ತಿಂಗಳಿಂದ ಆರಂಭಿಸಲ್ಪಡಲಿಕ್ಕಿರುವ ವೈದ್ಯವಿದ್ಯಾಲಯವು ಬೆಂಗಳೂರಿನಲ್ಲಿ ಸ್ಥಾಪಿಸಲ್ಪಡುವುದು. ಮೊದಲನೆಯ ವರ್ಷ ಈ ಶಾಲೆಗೆ ೧೬ ಮಂದಿ ವಿದ್ಯಾರ್ಥಿಗಳು ಸೇರಿಸಿಕೊಳ್ಳಲ್ಪಡುವರು. ವಿಕ್ಟೋರಿಯಾ ವೈದ್ಯಾಲಯದಲ್ಲಿ ಮುಖ್ಯವೈದ್ಯರಾಗಿರುವವರೇ ಈ ಶಾಲೆಯ ಮುಖ್ಯೋಪಾಧ್ಯಾಯರಾಗಿರುವರು. ಈ ಪಾಠಶಾಲೆಯಲ್ಲಿ ಮೈಸೂರು ದೇಶದ ವೈದ್ಯಶಾಖೆಯ ಸಬ್ ಅಸಿಸ್ಟೆಂಟ್ ಸರ್ಜನರನ್ನು ಅಣಿಮಾಡುವುದೇ ಮುಖ್ಯೋದ್ದೇಶವು. ಸ್ವಂತವಾಗಿ ವೈದ್ಯವೃತ್ತಿಯನ್ನವಲಂಬಿಸಬೇಕೆಂದಪೇಕ್ಷೆಯುಳ್ಳವರೂ ಕೂಡ ಈ ಶಾಲೆಗೆ ಅವಕಾಶವಿದ್ದರೆ ಸೇರಿಸಿಕೊಳ್ಳಲ್ಪಡುವರು. ಈ ಪಾಠಶಾಲೆಯನ್ನು ಕ್ರಮೇಣ ವೈದ್ಯಪಟ್ಟಿಗಳನ್ನು ಕೊಡುವ ಕಲಾಶಾಲೆಯನ್ನಾಗಿ ಮಾಡಬೇಕೆಂಬುದು ಸರ್ಕಾರದ ಅಭಿಪ್ರಾಯವಾಗಿದೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಇನ್ನು ೧೦ ಮಂದಿಯನ್ನು ಹೆಚ್ಚಾಗಿ ಆರಿಸುವಿಕೆಯು ಬರುವ ಜೂನ್ ತಾ|| ೧೧ ರಿಂದ ಜರುಗುವುದು. ಅಡ್ವೋಕೇಟರಾದ ಮ|| ಕೆ. ಚಂದ್ರಶೇಖರಯ್ಯ ಬಿ. ಎ., ಬಿ. ಎಲ್. ರವರು ಮ|| ಎ. ರಾಮಣ್ಣನವರು ಮ|| ಎಂ. ಸುಬ್ಬಣ್ಣ, ಬಿ. ಎ., ಬಿ.ಎಲ್. ರವರು ಮಿಷನ್ ಸ್ಕೂಲಿನ ಸಹಾಯೋಪಾಧ್ಯಾಯರಾದ ಮ|| ದೇಶಿಕಾಚಾರ್ ಬಿ. ಎ., ಯವರು, ಮೊದಲಾದ ವಿದ್ಯಾವಂತರು ಆರಿಸಲ್ಪಡುವ ಸ್ಪರ್ಧೆಗೆ ನಿಂತಿರುವರು. ಆಯಾ ಮೊಹಲ್ಲಾದಲ್ಲಿ ಮತವನ್ನು ಕೊಡಲು ಅರ್ಹರಾಗಿರುವ ಜನರು ದೀನಪ್ರಾರ್ಥನೆಗೂ, ದಾಕ್ಷಿಣ್ಯಕ್ಕೂ, ಒಳಗಾಗದೆ, ಮ್ಯುನಿಸಿಪಲ್ ನಿಬಂಧನೆಗಳನ್ನು ಚೆನ್ನಾಗಿ ತಿಳಿದುಕೊಂಡು ಪ್ರಜೆಗಳಿಗುಪಯುಕ್ತವಾದ ವಿಷಯಗಳನ್ನು ಕುರಿತು ಮೀಟಿಂಗಿನಲ್ಲಿ ಅಧಿಕಾರಿಗಳ ದರ್ಶನಕ್ಕೆ ಹೆದರದೆ ಅಥವಾ ದಾಕ್ಷಿಣ್ಯಕ್ಕೆ ಒಳಗಾಗದೆ, ಧೈರ್ಯದಿಂದ ಪ್ರಜಾಹಿತವನ್ನೇ ಮುಖ್ಯಗುರಿಯಾಗಿಟ್ಟುಕೊಂಡು ನಿಷ್ಪಕ್ಷಪಾತತೆಯಿಂದ ಚರ್ಚಿಸುವ ಸಾಮರ್ಥ್ಯವುಳ್ಳ ಪ್ರಜಾಪಕ್ಷಪಾತಿಗಳಾದಾರೆಂಬುದನ್ನು ಮುಂದಾಗಿ ಪರಿಶೀಲಿಸಿ, ಅಂಥವರಿಗೆ ಮಾತ್ರ ತಮ್ಮಮತಗಳನ್ನು ಕೊಟ್ಟು, ಸರ್ಕಾರದವರು ತಮಗೆ ಕೊಟ್ಟಿರುವ ಮತ್ತೂ ಮುಂದೆ ಕೊಡಬಹುದಾದ ಪ್ರಜಾಸ್ವಾತಂತ್ರ್ಯವನ್ನು ಸಾರ್ಥಕಪಡಿಸುವವರಾಗಲೆಂದು ಅಪೇಕ್ಷಿಸುತ್ತೇವೆ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ.)

ತೆರಪಿಲ್ಲದಂತೆ ಈ ರಂಗದಲ್ಲಿ ಯುದ್ಧಕಾರ್ಯಗಳು ಘೋರವಾಗಿ ನಡೆಯುತ್ತಿವೆ. ಕಳೆದವಾರದಲ್ಲಿ ಇಂಗ್ಲೀಷ್ ಸೈನಿಕರು ಬಹಳ ಸಾಹಸದಿಂದ ಹಿಂಡನ್‌ಬರ್ಗ್ ಪಂಗ್ತಿಯಲ್ಲಿ ೧ ಮೈಲಿಯಷ್ಟಗಲದ ಪ್ರದೇಶವನ್ನು ವಶಪಡಿಸಿಕೊಂಡರು. ಶತ್ರುಗಳಿಗೆ ವಿಪರೀತ ನಷ್ಟವನ್ನುಂಟುಮಾಡಿದುದಲ್ಲದೆ ಅನೇಕ ಸೈನಿಕರನ್ನು ಸೆರೆಹಿಡಿದರು. ಫ್ರೆಂಚರೂ ಕೂಡ ಶತ್ರುಗಳ ಕೆಲವು ಕಂದಕಗಳನ್ನು ವಶಪಡಿಸಿಕೊಂಡರು. ಷಾಂಪೇನಿನಲ್ಲಿ ಫ್ರೆಂಚರು ೩ ಮೈಲಿಗಳವರೆಗೆ ವ್ಯಾಪಿಸಿರುವ ಬೆಟ್ಟಗಳನ್ನು ಶತ್ರುಗಳಿಂದ ವಶಪಡಿಸಿಕೊಂಡರು. ಕ್ರಾಯಿನ್ ಪೀಠಭೂಮಿಯನ್ನು ವಶಪಡಿಸಿಕೊಳ್ಳಬೇಕೆಂದು ಶತ್ರುಗಳು ಘೋರ ಯುದ್ಧವನ್ನು ಮಾಡಲು, ಅದನ್ನು ಫ್ರೆಂಚರು ನಿರೋಧಿಸಿ, ಶತ್ರುಗಳ ಎಡಪಕ್ಕದಲ್ಲಿದ್ದ ಅವರ ರಕ್ಷಕಸ್ಥಾನವೊಂದನ್ನು ಇವರೇ ವಶಪಡಿಸಿಕೊಂಡರು. ಇದು ಫ್ರೆಂಚರಿಗೆ ಬಹಳ ಅನುಕೂಲವಾದಸ್ಥಲ.

ಇಟಲಿರಂಗ.

ಇಟಲಿ ಸೈನಿಕರು ಕಳೆದವಾರದಲ್ಲಿ ಶ್ಲಾಘನೀಯವಾದ ಜಯಗಳನ್ನು ಇಸಾಂಜೋ ಗೊರಿಜಿಯಾ ರಂಗಗಳಲ್ಲಿ ಪಡೆದಿರುತ್ತಾರೆ. ಇವರು ಕಳೆದ ಕೆಲತಿಂಗಳುಗಳಿಂದಲೂ ಶತ್ರುಗಳಿಗೆ ಅರಿಯಬರದಂತೆ ಬಹಳ ಸಾಹಸದ ಯುದ್ಧಸನ್ನಾಹಗಳನ್ನು ಮಾಡಿಕೊಂಡಿದ್ದರು. ಮನುಷ್ಯನು ಹತ್ತುವುದೇ ಕಷ್ಟವಾಗಿಯೂ ಒಂದು ಫಿರಂಗಿಯನ್ನು ಇಡುವುದಕ್ಕೂ ಅಸಾಧ್ಯವಾಗಿಯೂ ಇರುವ ೪-೫ ಸಾವಿರ ಅಡಿಗಳ ಎತ್ತರವುಳ್ಳ ಪರ್ವತಶಿಖರಗಳಮೇಲೆಲ್ಲಾ ಮಾರ್ಗಗಳನ್ನು ಕಲ್ಪಿಸಿ, ಅಲ್ಲಿಗೆ ನೂರಾರು ಫಿರಂಗಿಗಳನ್ನು ಸಾಗಿಸಿ, ೧೦ ಸಾವಿರ ಅಡಿಗಳೆತ್ತರದ ಬೆಟ್ಟಗಳಮೇಲೂ ಗುಹೆಗಳಲ್ಲೂ ಕೂಡ ಒಬ್ಬರಿಗೂ ಕಾಣದಂತೆ ಫಿರಂಗಿಗಳನ್ನಿಟ್ಟಿದ್ದು, ಅಲ್ಲೆಲ್ಲಾ ಲೋಹದ ಆವರಣವುಳ್ಳ ಕಂದಕಗಳನ್ನು ನಿರ್ಮಿಸಿಕೊಂಡು ಸಿದ್ಧರಾಗಿದ್ದು ಈಗ ಶತ್ರುಗಳಮೇಲೆ ಮಹಾಯುದ್ಧವನ್ನಾರಂಭಿಸಿದರು. ಪರ್ವತಶಿಖರಗಳಮೇಲಿರುವ ಫಿರಂಗಿಗಳ ಬಾಯಿಂದ ಅವಿಚ್ಛಿನ್ನವಾಗಿ ಸುರಿದ ಅಗ್ನಿವೃಷ್ಟಿಯಿಂದ ಆಸ್ಟ್ರಿಯನ್ನರು ಜರ್ಝರಿತರಾಗಿ ಅವರ ಫಿರಂಗಿದಳವು ನಿಶ್ಶಬ್ದವಾಗಿಹೋಯಿತು. ಅನೇಕ ಶತ್ರುಸ್ಥಾನಗಳು ಇಟಲಿಯವರ ವಶವಾದುವು. ಮಾಂಟೇಸಾಂಟೋವನ್ನು ಹಿಡಿಯಲು ಇಟಲಿಯವರು ಅದನ್ನು ಸಮಿಪಿಸಿ ಸುತ್ತುಗಟ್ಟಿದ್ದಾರೆ. ಇದುವರೆಗೆ ಅವರು ೭೦೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿದ್ದಾರೆ. ಅಲ್ಲದೆ ಅನೇಕಾನೇಕ ನಾನಾಜಾತಿಯ ಫಿರಂಗಿಗಳೂ ವಿಶೇಷವಾಗಿ ಯುದ್ಧಸಾಮಗ್ರಿಗಳೂ ಇವರಿಗೆ ಕೊಳ್ಳೆ ಸಿಕ್ಕಿರುತ್ತವೆ. ಆಸ್ಟ್ರಿಯನ್ನರು ಟ್ರೀಸ್ಟ್ ಪಟ್ಟಣವನ್ನು ಶರವು ಮಾಡುವಂತೆ ಕಾಣುತ್ತದೆ. ಅಲ್ಲಿರುವ ಬ್ಯಾಂಕುಗಳೆಲ್ಲಾ ಮುಚ್ಚಲ್ಪಟ್ಟಿವೆ. ಬೆಲೆ ಬಾಳತಕ್ಕ ಸಾಮಗ್ರಿಗಳನ್ನೆಲ್ಲಾ ಸರ್ಕಾರದವರು ಹೊರಕ್ಕೆ ಸಾಗಿಸಿಕೊಂಡುಹೋಗುತ್ತಿದ್ದಾರೆ.

ಬಾಲ್ಕನ್ ರಂಗ.

ಇಂಗ್ಲೀಷ್ ಸೈನ್ಯಗಳು ಕಾಸ್ಟ್ರಲಿಕ್ಕಿಗೆ ನೈಋತ್ಯದಲ್ಲಿದ್ದ ಶತ್ರುಸ್ಥಾನಗಳನ್ನೆಲ್ಲಾ ವಶಪಡಿಸಿಕೊಂಡುವು. ಸ್ಟ್ರೂಮಾರಂಗದಲ್ಲಿ ಕೀಪ್ರಿ ಎಂಬ ಗ್ರಾಮವನ್ನು ವಶಪಡಿಸಿಕೊಂಡರು. ೩೦೦೦ ಮೈಲಿಗಳವರೆಗೂ ವ್ಯಾಪಿಸಿರುವ ಶತ್ರುಗಳ ಕಂದಕಗಳ ಮುಂದಣ ಸಾಲನ್ನು ವಶಪಡಿಸಿಕೊಂಡರು. ಕೆಲವು ಶತ್ರುಸೈನಿಕರನ್ನು ಸೆರೆ ಹಿಡಿದರು. ಸರ್ವಿಯನ್ನರು ಶತ್ರುಗಳಿಗೆ ಅರಿಯದಂತೆ ಒಬ್ಬೊಬ್ಬರು ಮೂವರಾಗಿ ಹೋಗಿ ಗುಂಪುಕಟ್ಟಿ ಶತ್ರುಗಳಿಗೆ ಕಾಣಿಸಿಕೊಂಡು ಯುದ್ಧಮಾಡಿ ಅವರು ಇವರಮೇಲೆ ಕಲ್ಲುಗುಂಡುಗಳನ್ನು ಉರುಳಿಸಿದರೂ ಹೆದರದೆ ಶತ್ರುಗಳ ಸ್ಥಾನಗಳನ್ನು ವಶಪಡಿಸಿಕೊಳ್ಳುತ್ತಿರುವರು. ಇವರಲ್ಲಿ ನಷ್ಟವಾಗುವುದು ತೀರ ಕಡಿಮೆ. ಶತ್ರುಗಳಿಗೆ ಅಪಾರ ನಷ್ಟವನ್ನುಂಟುಮಾಡುತ್ತಿರುವರು.

ಜಲಯಾನಗಳು.

ಜರ್ಮನರ ಸಬ್‌ಮೆರೀನುಗಳ ಹಾವಳಿಯು ಈಚೆಗೆ ಕಡಿಮೆಯಾಗುತ್ತ ಬರುತ್ತಿದೆ. ಅವರಲ್ಲಿ ಒಟ್ಟು ೩೫ ಸಬ್‌ಮೆರೀನುಗಳಿದ್ದುವೆಂದೂ ಅವುಗಳಲ್ಲಿ ೧೦೦ ರವರೆಗೆ ಇಂಗ್ಲೀಷ್ ನೌಕಾದಳದವರಿಂದ ಮುಳುಗಿಸಲ್ಪಟ್ಟುವೆಂದೂ ಜರ್ಮನ್ ಸಬ್‌ಮೆರೀನಿನ ನಾವಿಕನೊಬ್ಬನು ಹೇಳಿರುವನಂತೆ. ಕಳೆದ ತಾ|| ೬ ರಿಂದ ತಾ|| ೧೫ ರೊಳಗೆ ಇಂಗ್ಲೀಷರು ನಿಸ್ಸಂಶಯವಾಗಿ ಶತ್ರುಗಳ ೧೨ ಸಬ್‌ಮೆರೀನುಗಳನ್ನು ಮುಳುಗಿಸಿರುವರೆಂದು ಒಂದು ಫ್ರೆಂಚ್ ಪತ್ರಿಕೆಯು ಹೇಳಿರುತ್ತದೆ. ಮೇ ತಾ|| ೧೭ ಕ್ಕೆ ಕಡೆಯಾದ ೧ ವಾರದಲ್ಲಿ ಇಂಗ್ಲೀಷ್ ಹಳಗಳಿಗೆ ಹೊರಗಿನಿಂದ ೨೫೮೫ ಹಡಗುಗಳು ಬಂದು ೨೫೫೨ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ೨೩ ಹಡಗುಗಳೂ ೩ ಅಂಬಿಗರ ದೋಣಿಗಳೂ ಶತ್ರುಗಳಿಂದ ಮುಳುಗಿಸಲ್ಪಟ್ಟುವು. ೧೨ ಹಡಗುಗಳು ಸಬ್‌ಮೆರೀನುಗಳೊಡನೆ ಹೋರಾಡಿ ತಪ್ಪಿಸಿಕೊಂಡು ಬಂದಿವೆ. ಫ್ರೆಂಚರ ರೇವುಗಳಿಗೆ ಆ ವಾರದಲ್ಲಿ ೯೫೨ ಹಡಗುಗಳು ಬಂದು ೯೯೧ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ೩ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟುವು. ಅದೇ ವಾರದಲ್ಲಿ ಇಟಲಿ ರೇವುಗಳಿಗೆ ೫೮೦ ಹಡಗುಗಳು ಬಂದು ೫೬೨ ಹೊರಕ್ಕೆ ಹೋಗಿವೆ. ೪ ದೊಡ್ಡ ಹಡಗುಗಳೂ ೭ ಚಿಕ್ಕ ಹಡಗುಗಳೂ ಮುಳುಗಿಸಲ್ಪಟ್ಟಿವೆ. ಇಂಗ್ಲೀಷರಿಗೆ ಸಹಾಯಮಾಡುವುದಕ್ಕಾಗಿ ಅಮೇರಿಕಾ ಪ್ರಭುತ್ವದವರು ತಮ್ಮ ಯುದ್ಧನೌಕಾದಳವನ್ನು ಕಳುಹಿಸಿಕೊಟ್ಟಿರುತ್ತಾರೆ. ಫ್ರೆಂಚರ ೧ ಯುದ್ಧದ ಹಡಗು ನೀರಿನಲ್ಲಿದ್ದ ಸುರಂಗಕ್ಕೆ ಬಡಿದು ಮುಳುಗಿಹೋಯಿತು. ಕೆಲ ಜನರು ಸತ್ತರು. ಕಳೆದ ತಾ|| ೧೫ ರಲ್ಲಿ ಇಂಗ್ಲೀಷರ ಸೈನ್ಯವನ್ನು ತುಂಬಿಕೊಂಡು ಹೋಗುತ್ತಿದ್ದ ಹಡಗನ್ನು ಶತ್ರುಗಳ ಸಬ್‌ಮೆರೀನುಗಳು ಟಾರ್ಪೆಡೋ ಬಡಿತದಿಂದ ಮುಳುಗಿಸಿದುವು. ೧೫೫ ಮಂದಿ ಸೈನಿಕರೂ ಒಬ್ಬ ಉದ್ಯೋಗಿಯೂ ಇನ್ನು ೧೦-೧೨ ಜನರೂ ಸತ್ತರು. ಉಳಿದವರೆಲ್ಲಾ ಬದುಕಿದರು. ಆಡ್ರಿಯಾಟಿಕ್ ಸಮುದ್ರದಲ್ಲಿ ಕಳೆದವಾರ ಆಸ್ಟ್ರಿಯಾದ ಯುದ್ಧನೌಕೆಗಳು ಮಿತ್ರಮಂಡಲಿಯ ಹಡಗುಗಳಮೇಲೆ ಬಿದ್ದು ಯುದ್ಧಮಾಡಿದುವು. ಇಂಗ್ಲೀಷ್ ಫ್ರೆಂಚ್ ಇಟಲಿಯ ಹಡಗುಗಳು ಪ್ರತಿಯುದ್ಧವನ್ನು ಮಾಡಿದುವು. ಶತ್ರುಗಳ ಹಡಗುಗಳನ್ನು ಕಟ್ಟಾರೋವಿನ ಸಮೀಪಕ್ಕೆ ಅಟ್ಟಿಕೊಂಡು ಹೋದುವು. ಅಲ್ಲಿ ಶತ್ರುಗಳ ಹಡಗುಗಳು ವಿಶೇಷವಾಗಿದ್ದುದರಿಂದ ಇವು ಹಿಂದಿರುಗಿ ಬಂದುವು. ಶತ್ರುಗಳ ಹಡಗುಗಳಮೇಲ್ಗಡೆ ಇಟಲಿಯ ವೈಮಾನಿಕರು ಸಿಡಿಮದ್ದುಗಳನ್ನು ಹಾಕಿದರು. ಈ ಯುದ್ಧದಲ್ಲಿ ಶತ್ರುಗಳ ೨ ಹಡಗುಗಳು ಧ್ವಂಸವಾದುವು. ಇಂಗ್ಲೀಷರ ಡಾಟಿಸ್ ನಾಮಕ್ ಎಂಬ ಹಡಗು ಟಾರ್ಪೆಡೊ ಏಟನ್ನುತಿಂದು ದಡಕ್ಕೆ ಬಂದಿತು. ಅದರ ಸೇನಾಪತಿಯು ಮೃತನಾದನು. ಇನ್ನು ೮ ಮಂದಿಗಳು ಸತ್ತರು ; ೭ ಮಂದಿಗೆ ಗಾಯವಾಯಿತು. ಡನ್‌ಕರ್ಕಿಗೆ ಹೋಗುತ್ತಿದ್ದ ಜರ್ಮನರ ಯುದ್ಧನೌಕೆಗಳಮೇಲೆ ಫ್ರೆಂಚರ ಕಾವಲಿನಹಡಗುಗಳು ಬಿದ್ದು ಸ್ವಲ್ಪಹೊತ್ತು ಯುದ್ಧಮಾಡಿದುವು. ಶತ್ರುಗಳ ಹಡಗುಗಳು ನಿಲ್ಲದೆ ಬಹಳ ವೇಗವಾಗಿ ತಮ್ಮ ರೇವೆಯಕಡೆಗೆ ಓಡಿದುವು.

ಭರತಖಂಡದ ವೃತ್ತಾಂತಗಳು.

ಭರತಖಂಡದ ಯುದ್ಧಋಣಕ್ಕೆ ಕಳೆದ ತಾರೀಖು ೨೩ ರವರೆಗೆ ೨೧೮೫೫೮೩೦೦ ರೂ. ಗಳು ಕೊಡಿದ್ದುವು.

ಹೈದರಾಬಾದ್ ನೈಜಾಂರವರು ತಮ್ಮ ಸಂಸ್ಥಾನದಲ್ಲಿ 'ಉಸ್ಮೇನಿಯಾ ಯೂನಿವರ್ಸಿಟಿ' ಎಂಬ ಹೆಸರಿನಿಂದ ಸ್ವತಂತ್ರ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಅಪ್ಪಣೆಮಾಡಿದ್ದಾರೆ.

ಪುದುಕೋಟೆಯ ಸಂಸ್ಥಾನದವರು ತಮ್ಮ ದೇಶದ ವ್ಯವಸಾಯಗಾರರ ಮಕ್ಕಳ ಪುರೋಭಿವೃದ್ಧಿಗಾಗಿ ಆ ದೇಶದಲ್ಲಿ ಒಂದು ವ್ಯವಸಾಯ ಕಲಾಶಾಲೆಯನ್ನು ಸ್ಥಾಪಿಸುವುದಕ್ಕೆ ಅಪ್ಪಣೆಮಾಡಿದ್ದಾರೆ.

ಪಂಜಾಬಿಗೆ ಸೇರಿದ ಡೇರಾ ಇಸ್ಮಾಯಿಲ್‌ಖಾನ್ ಜಿಲ್ಲೆಯಲ್ಲಿರುವ ಟಾಂಕು ಎಂಬ ಪಟ್ಟಣದ ನವಾಬರಿಗೆ ನಿರ್ಬಂಧವಾಸಶಿಕ್ಷೆಯು ವಿಧಿಸಲ್ಪಟ್ಟು ಅವರನ್ನು ಮೆನ್ನೆತಾನೇ ಉದಕಮಂಡಲಕ್ಕೆ ತಂದಿಟ್ಟಿರುತ್ತಾರೆ. ಇವರಿಗೆ ೫೦ ವರ್ಷ ವಯಸ್ಸು.

ಭೋಪಾಲಸಂಸ್ಥಾನದ ಬೇಗಂರವರು ತಮ್ಮ ರಾಜ್ಯದಲ್ಲಿ ಮದ್ಯಪಾನ ಮಾಡುವ ತುರುಕರನ್ನೆಲ್ಲಾ ಹಿಡಿದು ಶಿಕ್ಷಿಸಬೇಕೆಂದು ಒಂದು ಶಾಸನವನ್ನೇರ್ಪಡಿಸಿರುತ್ತಾರೆ. ಹಿಂದೂಸಂಸ್ಥಾನಿಕರೆಲ್ಲಾ ಹಿಂದೂಗಳ ವಿಷಯವಾಗಿಯೂ ಇಂಥ ಶಾಸನವನ್ನೇತಕ್ಕೆ ಏರ್ಪಡಿಸಬಾರದು?

ಬರೋಡಾ ಮಹಾರಾಜರವರು ಕಲಕತ್ತಾದಲ್ಲಿ ಬುದ್ಧದೇವನ ಅಸ್ಥಿಗಳಿಗಾಗಿ ಕಟ್ಟಬೇಕೆಂದಿರುವ ಒಂದು ವಿಹಾರಕ್ಕಾಗಿ ೩ ಸಾವಿರ ರೂ. ಗಳ ಯುದ್ಧಋಣಪತ್ರವನ್ನು ಮಹಾಬೋಧಿ [illegible] ಕೊಟ್ಟಿರುತ್ತಾರೆ. ಇದರಿಂದ ಬರುವ ಬಡ್ಡಿಯನ್ನು ಸಮಾಜದವರು ಉಪಯೋಗಿಸಿಕೊಳ್ಳುವರು.

ಇಂಗ್ಲೆಂಡಿನ ಪ್ರಸಿದ್ಧ ಸಾಬೂನ್ ಕಂಪೆನಿಯವರಾದ ಲೀವರ್ ಬ್ರದರ್ಸ್‌ರವರು ನಮ್ಮ ಭರತಖಂಡದ ಪಶ್ಚಿಮ ಸಮುದ್ರತೀರದಲ್ಲಿ ಘಟಕೋಪರ ಹತ್ತಿರ ಒಂದು ದೊಡ್ಡ ಸಾಬೂನ್ ಕಾರಖಾನೆಯನ್ನು ಸ್ಥಾಪಿಸುವುದರಲ್ಲಿದ್ದಾರೆ. ಇತರ ಕರ್ಮಾಗಾರದ ಸಾಬೂನು ಅಗ್ಗವಾಗಿಯೂ ನಿರ್ಮಲವಾಗಿಯೂ ಇರುವುದಂತೆ.

ಬರುವ ಜೂನ್ ತಾ|| ೪ ನೆಯ ದಿವಸವನ್ನು ಚಕ್ರವರ್ತಿಯವರ ವರ್ಧಂತಿ ದಿವಸವನ್ನಾಗಿ ಗಣಿಸಿ, ಆ ದಿನ ಎಲ್ಲಾ ಕೋರ್ಟು ಆಫೀಸುಗಳಿಗೂ ರಜಾ ಕೊಡಲು ನಿಶ್ಚಿತವಾಗಿದೆ. ಆದರೆ ಆ ಉತ್ಸವಕ್ಕಾಗಿ ವಿನೋದಗಳು ಆಡಂಬರಗಳೊಂದೂ ನಡೆಯುವುದಿಲ್ಲ. ಆಂಗ್ಲಪತಾಕೆಯು ಎತ್ತಿ ಕಟ್ಟಲ್ಪಟ್ಟು ಪದ್ಧತಿಯಂತೆ ಗೌರವವಾದ ಬಿರುದುಗಳು ಯಾರಾರಿಗೆ ಕೊಡಲ್ಪಡುವುವೋ ಅವು ಪ್ರಕಟಿಸಲ್ಪಡುವುವು.

ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಎರ್ನಾಕುಲಮಿನಲ್ಲಿ ಕೊಬರಿಯಿಂದ ಎಣ್ಣೆಯನ್ನು ತೆಗೆಯುವ ಯಂತ್ರಾಗಾರವೊಂದನ್ನು ಇಷ್ಟರಲ್ಲೇ ಟಾಟಾ ಕಂಪೆನಿಯವರು ಸ್ಥಾಪಿಸುವುದರಲ್ಲಿದ್ದಾರೆ. ಇದಕ್ಕೆ ೨೩ ಲಕ್ಷ ರೂ. ಗಳ ಮೂಲಧನವು ಹಿಡಿಯುವುದು. ಇದಕ್ಕೆ ಬೇಕಾದ ಸ್ಥಲವನ್ನು ಆ ಸಂಸ್ಥಾನದವರು ಕೊಡುವರು. ಇನ್ನೂ ಸಾಧ್ಯವಾದ ಕೆಲ ಸಾಹಾಯ್ಯಗಳನ್ನೂ ಮಾಡಿಕೊಡುವರು.

ಬಂಗಾಳಕ್ಕೆ ಸೇರಿದ ಶ್ರೀ ರಾಮಪುರದಲ್ಲಿ ಒಬ್ಬ ಧನಿಕನ ಮಗನಾಗಿರುವ ರಾಮಸಾದ ಚಟರ್ಜಿಯೆಂಬುವನನ್ನು ಒಬ್ಬ ವಕೀಲನ ಮಗಳಾದ ಹೇಮರಾಣಿದೇವಿ ಎಂಬಾಕೆಯು ಮದುವೆಯಾಗಿದ್ದಳು. ಗಂಡನು ಒಂದು ಯಂತ್ರಾಲಯದಲ್ಲಿ ಗುಮಾಸ್ತೆ ಕೆಲಸಕ್ಕೆ ಸೇರಿಕೊಳ್ಳುತ್ತೇನೆಂದು ಹೆಂಡತಿಯೊಡನೆ ಹೇಳಿದಾಗ ಅದನ್ನು ಬೇಡವೆಂದು ಆಕೆಯು ನಿಷೇಧಿಸಿದಳು. ಗಂಡನು ಆ ಮಾತನ್ನು ಲಕ್ಷಿಸದೆ ಹೋಗಿ ಕೆಲಸಕ್ಕೆ ಸೇರಿಕೊಂಡನು, ಹೆಂಡತಿಯು ಮುಳಿಸಿಕೊಂಡು ಸೀಮೆಯೆಣ್ಣೆಯನ್ನು ತನ್ನ ಬಟ್ಟೆಯಮೇಲೆ ಸುರಿದು ಬೆಂಕಿ ಹಚಿ ಕೊಂಡು ಸುಟ್ಟು ದಗ್ಧಳಾದಳು. ಸ್ತ್ರೀಯರ ಹಠಮಾರಿತನವು ಎಷ್ಟು ಕಠಿನವು!

ಭರತಖಂಡದಿಂದ ಯುದ್ಧಸಾಮ್ರಾಜ್ಯಸಭೆಗಾಗಿ ಸೀಮೆಗೆ ಹೋಗಿದ್ದ ಭಾರತೀಯ ಪ್ರತಿನಿಧಿಗಳೆಂಬುವವರಿಗೆ ಅಲ್ಲಿ ವಾರ್ ಕೌನ್ಸಿಲ್ಲಿನಲ್ಲಿ ಪ್ರವೇಶಕ್ಕೆ ಅವಕಾಶ ಕೊಡಲ್ಪಟ್ಟಿದ್ದಿತೇ ಹೊರತು ವಾರ್‌ಕೇಬಿನೆಟ್ಟಿಗೆ ಹೋಗಲು ಅವಕಾಶವೇ ಕೊಡಲ್ಪಟ್ಟಿರಲಿಲ್ಲವೆಂದೂ, ಅತ್ಯಂತ ಮುಖ್ಯವಾದ ಸಾಮ್ರಾಜ್ಯಹಿತಾಹಿತ ಸಂಬಂಧಗಳು ವಾರ್‌ಕೇಬಿನೆಟ್ಟಿನಲ್ಲಿ ಮಾತ್ರವೇ ಚರ್ಚಿಸಲಟ್ಟುವೆಂದೂ, ಭಾರತೀಯರಿಗೆ ಮೇಲೆಮೇಲೆ ಉಪಚಾರಾರ್ಥವಾಗಿ ವಾರ್ ಕೌನ್ಸಿಲಿನಲ್ಲಿ ಪ್ರವೇಶವು ದೊರೆಯುವಂತೆ ಮಾಡಿ ಸಾಮ್ರಾಜ್ಯಸಭೆಯಲ್ಲಿ ಭರತಖಂಡಕ್ಕೂ ಪ್ರಾತಿನಿಧ್ಯವು ಕೊಡಲ್ಪಟ್ಟಿತೆಂಬ ಘೋಷವು ಮಾತ್ರ ಹುಟ್ಟಿಸಲಟ್ಟಿತೆಂದೂ ಮೊದಲಾಗಿ ಅಮೃತಬಜಾರ್ ಪತ್ರಿಕೆಯಲ್ಲಿ ಒಂದು ಲೇಖನವು ಪ್ರಕಟಿತವಾಗಿದೆ.

ರಣಾಂಗಣದಲ್ಲಿ ಏಟುತಿಂದು ಅಂಗವಿಕಲರಾಗಿ ಬಂದಿರುವ ಭಾರತೀಯ ಸೈನಿಕರು ತಮ್ಮ ಯಾವಜ್ಜೀವವೂ ಪರಾಧೀನತೆಯಿಲ್ಲದೆ ಸ್ವತಂತ್ರವಾಗಿ ಯಾವುದಾದರೊಂದು ಕೈಗಾರಿಕೆಯಿಂದ ಜೀವಿಸಿಕೊಂಡು ಹೋಗಲು ಅನುಕೂಲವಾಗುವಂತೆ ಅಂಥವರಿಗೇ ಒಂದು ಪಾಠಶಾಲೆಯು ಬೊಂಬಾಯಿಯ ಬಾಯ್ಕುಲಾದಲ್ಲಿ ಕಳೆದವಾರ ಅಲ್ಲಿಯ ಗೌರ್ನರಮೂಲಕ ಸ್ಥಾಪಿಸಲ್ಪಟ್ಟಿತು. ಇದಕ್ಕೆ ಬೇಕಾದ ಮಂದಿರವನ್ನು ಸರ್ ಡೇವಿಡ್ ಸಾಸೂನ್‌ರವರು ಕೊಟ್ಟಿರು. ಪಶ್ಚಿಮ ತುರ್ಫ್ ಕ್ಲಬ್ಬಿನವರು ೫೦ ಸಾವಿರ ರೂ. ಗಳನ್ನು ಕೊಟ್ಟಿರು. ಇನ್ನೂ ಬೇರೆಬೇರೆ ಸಾಹಾಯ್ಯಗಳು ಒದಗುವುದರಲ್ಲಿವೆ. ಇದಕ್ಕೆ ಮೊಟ್ಟಮೊದಲು ಸೂಚನೆ ಕೊಟ್ಟವರು ಬೊಂಬಾಯಿ ಗೌರ್ನರ ಪತ್ನಿಯವರು. ಈ ಮಂದಿರದಲ್ಲಿ ಹೊಲಿಗೆ, ಚಿತ್ರಗಾರಿಕೆ, ಮರಗೆಲಸ, ವ್ಯವಸಾಯ, ಕೋಳಿ ಸಾಕುವುದು ಮೊದಲಾದವುಗಳು ಕಲಿಸಲ್ಪಡುವುವು. ೨೦೦ ಮಂದಿಗಳು ವಾಸಮಾಡಿಕೊಂಡಿರಬಹುದು. ಈಗಾಗಲೇ ೭೫ ಮಂದಿಗಳವರೆಗೆ ಸೇರಿದ್ದಾರೆ. ಅವರಲ್ಲಿ ಗೂರ್ಖರು, ಪಠಾಣರು, ಪಂಜಾಬಿಗಳು, ಮದ್ರಾಸಿಗಳು ಇವರೆಲ್ಲಾ ಇದ್ದಾರೆ. ಇವರಲ್ಲಿ ೭ ಮಂದಿಗೆ ೨ ಕಾಲುಗಳೂ ಇರುವುದಿಲ್ಲ. ಆದರೆ ಕೃತ್ರಿಮವಾಗಿ ರಚಿಸಿ ಸೇರಿಸಿದ ಕಾಲುಗಳಿಂದ ಇವರು ಸರಾಗವಾಗಿ ನಡೆಯಬಲ್ಲರು.

ವಿದೇಶವೃತ್ತಾಂತಗಳು.

ಕೆನಡಾದೇಶದಲ್ಲಿ ನಿರ್ಬಂಧ ಸೈನಿಕಶಾಸನವನ್ನು ಏರ್ಪಡಿಸುವುದರಲ್ಲಿದ್ದಾರೆ.

ಜರ್ಮನರಲ್ಲಿ ಕಳೆದ ಏಪ್ರಿಲ್ ತಿಂಗಳಲ್ಲಿ ಉಂಟಾದ ಸೇನಾನಷ್ಟದ ಲೆಕ್ಕವನ್ನು ವಾರ್ತಾಸಂಘದವರು ಪ್ರಕಟಿಸಿದ್ದಾರೆ. ಅದರ ಪ್ರಕಾರ ಆ ತಿಂಗಳಲ್ಲಿ ಅವರಿಗೆ ಒಟ್ಟು ೪೨೮೩೪ ಮಂದಿಗಳು ನಷ್ಟವಾಗಿದ್ದಾರೆ. ಇವರಲ್ಲಿ ಮೃತರಾಗಿಯೇ ಹೋದವರು ೧೧೯೬೫ ಇದರಲ್ಲಿ ನೌಕಾದಳದ ನಷ್ಟವು ಸೇರಿಲ್ಲ.

ಇಂಗ್ಲಾಂಡಿನಲ್ಲಿ ಯುದ್ಧಸಾಮಗ್ರಿಗಳಿಗೆ ಉಪಯೋಗಿಸುವುದಕ್ಕೆ ಅಭ್ರಕವು ಬಹಳ ಬೇಕಾಗಿದೆ. ಉತ್ತಮವಾದ ಸರಕಿಗೆ ಹೆಚ್ಚಿನ ಬೆಲೆಯು ದೊರೆಯುವುದು. ಯಾರು ಬೇಕಿದ್ದರೂ ಭರತಖಂಡದಿಂದ ಸೀಮೆಗೆ ಅದನ್ನು ಸ್ವತಂತ್ರವಾಗಿ ಕಳುಹಿಸಿಕೊಟ್ಟು ಮಾರಾಟಮಾಡಿ ಲಾಭಸಂಪಾದಿಸಬಹುದಾಗಿದೆ.

ಫ್ರಾನ್ಸಿನ ರಾಯಭಾರಿಗಳಾಗಿ ಅಮೇರಿಕಾಕ್ಕೆ ಹೋಗಿರುವ ಜನರಲ್ ಜಾಫ್ರೆಯವರು ಅಮೇರಿಕಾದ ಸೈನ್ಯವನ್ನು ಜಾಗ್ರತೆಯಾದಷ್ಟನ್ನು ಫ್ರಾನ್ಸ್‌ದೇಶಕ್ಕೆ ಕಳುಹಿಸಿ, ಅಲ್ಲೇ ಯುದ್ಧಕಾರ್ಯಕ್ಕೆ ಅಣಿಮಾಡಿ, ರಣರಂಗಕ್ಕೆ ಕಳುಹಿಸುವುದರಲ್ಲಿರುವ ಗುಣವನ್ನು ಅಮೇರಿಕಾ ಪ್ರಭುತ್ವದವರಿಗೆ ತಿಳಿಯಪಡಿಸಿದುದರಿಂದ ಅವರು ಅದಕ್ಕೊಪ್ಪಿ, ಈಗ ಪರ್ಶಿಂಗ್ ಎಂಬ ಸೇನಾಪತಿಯ ಕೈಕೆಳಗೆ ೪೦ ಸಾವಿರ ಸೈನ್ಯವನ್ನು ಫ್ರಾನ್ಸಿಗೆ ಕಳುಹಿಸಿಕೊಡಲು ಅಪ್ಪಣೆಮಾಡಿದ್ದಾರೆ.

ಸೈಬೀರಿಯಾದಿಂದಲೂ ಉತ್ತರಪಾರಸೀಕದೇಶದಿಂದಲೂ, ಪಿಕಿನ್, ಟೀನ್ಸ್ಟಿನ್, ಹಾಂಗ್‌ಕಾಂಗ್, ಟೋಕಿಯೋ, ಯೋಕೊಹಾಮಾ, ಷೆಂಘಾಯ್, ತಾಬ್ರಿಜ್ ಮೊದಲಾದ ಕಡೆಯ ತಪಾಲನ್ನೆಲ್ಲಾ ಸಾಗಿಸಿಕೊಂಡು ಹೋಗುತ್ತಿದ್ದ ಒಂದು ಅಂಚೆಯ ಹಡಗು ಶತ್ರುಗಳ ಸಬ್‌ಮೆರೀನಿನಿಂದ ಮುಳುಗಿಸಲ್ಪಟ್ಟು ಎಲ್ಲಾ ಸಮುದ್ರದ ಪಾಲಾಯಿತೆಂದೂ, ಇದು ಶತ್ರುಗಳಿಂದ ಮಾಡಲ್ಪಟ್ಟ ನಷ್ಟವಾದುದರಿಂದ ಅಂಚೆಯ ಶಾಖೆಯವರು ಯಾವ ನಷ್ಟ ಪರಿಹಾರವನ್ನೂ ಯಾರಿಗೂ ಕೊಡುವವರಾಗಿಲ್ಲವೆಂದೂ ಆ ಶಾಖಾಧಿಕಾರಿಗಳು ಪ್ರಕಟಿಸಿದ್ದಾರೆ.

ಹಿಂದಣ ರಷ್ಯಾಚಕ್ರವರ್ತಿಯವರಾದ ಜಾರ್‌ರವರು ಪತ್ನೀಸಮೇತರಾಗಿ ಈಗ ಬಂಧನದಲ್ಲಿದ್ದಾರೆ. ಜಾರ್ಸ್ಕೋಸಿಯಲ್ಲಿರುವ ರಾಜಮಂದಿರದಲ್ಲಿ ಇವರುಗಳು ಸೆರೆಯಾಗಿರುತ್ತ ಆ ಮಂದಿರದ ಸುತ್ತಲೂ ಬಲವಾದ ಕಾವಲು ಇಡಲ್ಪಟ್ಟಿದೆ. ಆ ಮಂದಿರವೆಲ್ಲವೂ ಕೂಡ ಇವರ ಉಪಯೋಗಕ್ಕೆ ಕೊಡಲ್ಪಡದೆ ಮೂರು ಮನೆಗಳು ಮಾತ್ರ ಕೊಡಲ್ಪಟ್ಟಿವೆ. ಕಾವಲುಗಾರನ ಇದಿರಿಗೆ ಈ ದಂಪತಿಗಳು ಮಾತನಾಡಬೇಕೇ ಹೊರತು ಸ್ವತಂತ್ರವಾಗಿ ಯಾವ ಸಂಭಾಷಣೆಯನ್ನೂ ಮಾಡಕೊಡದಾಗಿದೆಯೆಂದು ರಷ್ಯಾದೇಶದ ಒಂದು [illegible]ಯು ಹೇಳುತ್ತದೆ.

[illegible] ಪ್ರಭುತ್ವದವರು ತಮ್ಮ ಉದ್ದೇಶವನ್ನು ವ್ಯಕ್ತಪಡಿಸುವ ಒಂದಾನೊಂದು [illegible]ಯನ್ನು ಮಾಡಿ ಅದರಲ್ಲಿ ಹೀಗೆ ಬರೆದಿರುತ್ತಾರೆ. "...ಪ್ರಜಾಸ್ವಾತಂತ್ರ್ಯ[illegible]ಗಿಯೂ, ಭ್ರಾತೃಭಾವಕ್ಕಾಗಿಯೂ ಪಕ್ಷಪಾತ ಬುದ್ಧಿಯಿಂದ ನಾವು [illegible] ಮಿತ್ರಮಂಡಲಿಯವರನ್ನು ಬಿಟ್ಟು ಪ್ರತ್ಯೇಕಸಂಧಾನವನ್ನು ವಹಿಸಿದೆವು. ವಿ[illegible] ಮಾಡಿಕೊಳ್ಳತಕ್ಕವರಲ್ಲ. ಆದರೆ ಪರದೇಶಾಕ್ರಮಣ[illegible] ಎಷ್ಟುಮಾತ್ರಕ್ಕೂ ಕಾರವೂ ಇಲ್ಲದೆ ಎಲ್ಲರಿಗೂ ಅನುಕೂಲವಾಗಿರತಕ್ಕ ಸಂಧಿಯನ್ನಂದ ಸ್ವೀ[illegible] ವಿಷಯದಲ್ಲಿ ನಾವು ಪ್ರಯತ್ನಿಸುತ್ತೇವೆ. ಪ್ರತಿಯೊಂದು ದೇಶದವರೂ ತಮ್ಮ ಕಾರ್ಯಭಾರವನ್ನು ನಿರ್ವಹಿಸಿಕೊಳ್ಳುವ ಸ್ವಾತಂತ್ರ್ಯವುಳ್ಳವರಾಗಿರಬೇಕು. ರಷ್ಯಾಕ್ಕೂ ಮಿತ್ರಮಂಡಲಿಗೂ ಅಪಜಯವೇನಾದರೂ ಸಂಭವಿಸಿದರೆ ಪ್ರಪಂಚಕ್ಕೆಲ್ಲಾ ಉಪದ್ರವವುಂಟಾಗುವುದಲ್ಲದೆ ಸಂಧಿಯೂ ಕೂಡ ಎಂದಿಗೂ ಜರುಗಲಾರದು."

ಲಂಡನ್ ಪಟ್ಟಣದಲ್ಲಿ ಪ್ರಕಟವಾಗುತ್ತಿರುವ ನೇಷನ್ ಎಂಬ ದಿನಪತ್ರಿಕೆಯ ಕೆಲ ಸಂಚಿಕೆಗಳನ್ನು ಆ ಊರನ್ನು ಬಿಟ್ಟು ಗ್ರೇಟ್‌ಬ್ರಿಟನ್ನಿನ ಮತ್ತಾವಕಡೆಗೂ ಅಂಚೆಯಮೇಲೆ ಕಳುಹಿಸಿಕೊಡಲಾಗದೆಂದು ಪ್ರಭುತ್ವದವರು ಕಟ್ಟಪ್ಪಣೆಮಾಡಿದರು. ಆ ಸಂಚಿಕೆಗಳಲ್ಲಿ ಆಂಗ್ಲಜನರ ಮನಸ್ಸನ್ನು ಕಂದಿಸುವ ಮತ್ತೂ ಶತ್ರುಗಳನ್ನು ಪ್ರೋತ್ಸಾಹಿಸುವ ಮಾತುಗಳಿದ್ದುವೆಂಬುದೇ ಇದಕ್ಕೆ ಕಾರಣ. ಈ ಪತ್ರಿಕೆಯು ಲಿಬರಲ್ ಪಕ್ಷಕ್ಕೆ ಸೇರಿದುದು. ಅಸಹನೆಯಿಂದ ಇಂಥ ಅಪ್ಪಣೆಯು ಈಗಣ ಪ್ರಭುತ್ವದವರಿಂದ ಮಾಡಲ್ಪಟ್ಟದೆಯೆಂದು ಲಿಬರಲ್ ಪಕ್ಷದವರು ಭಾವಿಸಿ ಪಾರ್ಲಿಮೆಂಟಿನಲ್ಲಿ ಇದರ ವಿಷಯವಾಗಿ ದೊಡ್ಡ ಚರ್ಚೆಯನ್ನು ನಡೆಯಿಸುತ್ತಿದ್ದಾರೆ. ದೇಶಾಭಿಮಾನದಿಂದ ಬ್ರಿಟನ್ನಿನಲ್ಲಿ ಪಕ್ಷಾಂಧತೆಯೆಲ್ಲವೂ ಮೂಲೆಗುಂಪಾಗಿ ಸಂಯುಕ್ತ ಮಂತ್ರಿವರ್ಗವು ಏರ್ಪಟ್ಟು ಪ್ರಪಂಚಕ್ಕೇ ಬೆಚ್ಚರಗನ್ನುಂಟುಮಾಡಿ, ಈಗಣ ಯುದ್ಧವನ್ನು ಏಕಮುಖವಾಗಿ ಪಟ್ಟಿನಿಂದ ಸಾಗಿಸುತ್ತಿರುವ ಮಧ್ಯದಲ್ಲಿ, ಮಂತ್ರಿಮಂಡಲದವರು ಇಂಥ ಒಡಕುಗಳಿಗೆ ಅವಕಾಶಕೊಡುವುದು ಅಪಾಯಕರವಲ್ಲವೆ?

ಅಮೇರಿಕಾದ ಪ್ರಜೆಗಳೆಲ್ಲಾ ಯುದ್ಧಕಾರ್ಯದಲ್ಲಿ ಪ್ರವೃತ್ತರಾಗಬೇಕೆಂಬ ವಿಷಯಕ್ಕೆ ಅಲ್ಲಿಯ ಪ್ರಭುತ್ವದವರು ಒಂದು ಪ್ರಕಟನೆಯನ್ನುಮಾಡಿ ಅದರಲ್ಲಿ ಪ್ರೋತ್ಸಾಹಕರವಾದ ಅಭಿಪ್ರಾಯವನ್ನು ಹೀಗೆ ಬರೆದಿರುತ್ತಾರೆ.— "ಈಗ ನಾವು ಯಾರೊಡನೆ ಯುದ್ಧಮಾಡಬೇಕೆಂದು ನಿಶ್ಚಯಿಸಿರುವೆವೋ ಆ ಶತ್ರುಗಳು ಪ್ರಪಂಚವನ್ನೆಲ್ಲಾ ಬಲಾತ್ಕಾರವಾಗಿ ಸ್ವಾಧೀನಪಡಿಸಿಕೊಂಡು ಆಳಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ. ಇಂಥ ತಮ್ಮ ಸಂಕಲ್ಪವನ್ನು ನೆರವೇರಿಸಿಕೊಳ್ಳುವುದಕ್ಕಾಗಿಯೇ ಅವರು ತಮ್ಮ ಸೈನ್ಯವನ್ನೂ ಹಡಗುಗಳನ್ನೂ ಅಭಿವೃದ್ಧಿಪಡಿಸಿಕೊಂಡರು. ಲೋಕಕಂಟಕರಾದ ಆ ಘೋರಶತ್ರುಗಳನ್ನು ನಿರ್ಮೂಲಮಾಡುವುದಕ್ಕಾಗಿ ಅಮೇರಿಕಾ ಪ್ರಜೆಗಳೆಲ್ಲಾ ಯುದ್ಧೋದ್ಯೋಗದಲ್ಲಿ ಕೆಲಸಮಾಡಬೇಕು. ನಾವು ಸಿದ್ಧಮಾಡಬೇ[illegible]

ಕಾದುದು ಸೈನ್ಯವೊಂದೇ ಅಲ್ಲ, ಪ್ರಜೆಗಳೆಲ್ಲಾ ಯುದ್ಧಾಂಗಕಾರ್ಯದಲ್ಲಿ ಪ್ರವೃತ್ತರಾಗಬೇಕು. ಈಗ ಫ್ರಾನ್ಸ್ ದೇಶದಲ್ಲಿ ಸೈನಿಕರು ಮಾತ್ರವೇ ಈ ಯುದ್ಧಕಾರ್ಯದಲ್ಲಿ ತೊಡಗಿಲ್ಲ. ವ್ಯವಸಾಯಗಾರರು ಕೈಕಸಬಿನವರು ಕೂಲಿಕಾರರು ಮೊದಲಾದವರೆಲ್ಲಾ ಸೈನಿಕರೇ ಆಗಿ ತಂತಮ್ಮ ಕೆಲಸಗಳನ್ನು ಮಾಡಿಕೊಡುತ್ತಲಿದ್ದಾರೆ. ನಮ್ಮ ದೇಶದಲ್ಲಿ ಹಾಗೆಯೇ ಆಗಬೇ [illegible]

ಪಟ್ಟಣದಲ್ಲಿ ವಾಂತಿಭೇದಿ ರೋಗವಿರುವಾಗ ಪ್ರಜೆಗಳು ಏನು ಮಾಡುವುದು?

[illegible]

ವಾರು ೧೫ ದಿನಗಳ ತನಕ ಆತನ ಮಲಮೂತ್ರಗಳನ್ನು ಸುಡುತ್ತಲೂ ಇಲ್ಲವೆ ಅವುಗಳ ಮೇಲೆ ಧೃತಿಗಳನ್ನು ಸುರಿಯುತ್ತಲೂ ಇರಬೇಕು. ಇದು ಕೇವಲ ಅವಶ್ಯಕ.

ಮೈಸೂರಿನವರು ಇದನ್ನು ಮಾತ್ರ ಮರೆಯಬೇಡಿ—ಹೆಲ್ತ್ ಆಫೀಸಿಯಲ್ಲಿ ಈತನಗೆರೆ ಸೋಂಕು ಆಸ್ಪತ್ರೆಗೆ ರೋಗಿಯನ್ನು ಅನಾಯಾಸವಾಗಿ ಸಾಗಿಸು [illegible]

ಮೈಸೂರು, ಎ. ಕೆ. ಪಾಣಿ, ಡಿ. ಪಿ. ಎಚ್., 17 ನೇ ಮೇ 1917. ಹೆಲ್ತ್ ಆಫೀಸರ್.

ಪತ್ರವ್ಯವಹಾರ.

[illegible]

ತಮ್ಮ ವಿಧೇಯ ಉಪಾಧ್ಯಾಯರ ಹಿತೈಷಿ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

[illegible]

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಿಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು [illegible]

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,

ಅರ್ಕಶಫಾ ಶೋಧಕ, ಹೆಡ್ ಆಫೀಸ

12 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶತಾರಾ	೦—೮—೦
ಶಿವಪೂಜಾವಿಧಿಃ	೦—೮—೦
ಶಿರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಗಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

೧೯೧೭ ನೆಯ ಇಸವಿ ಮೇ ತಾ|| ೨೭ ರಿಂದ ೧೯೧೭ ನೆಯ ಜುನ್ ತಾ|| ೨ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಜ್ಯೇಷ್ಠ ಶು|| ಷಷ್ಠಿಯಿಂದ ಜ್ಯೇಷ್ಠ ಶು|| ದ್ವಾದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಶೇದಿ
27	ಭಾನು	ಷಷ್ಠಿ	13-3	ಆಶ್ಲೇಷ	39-39	14
28	1 ಸೋಮ	ಸಪ್ತಮಿ	18-9	ಮಖಾ	46-20	15
29	2 ಮಂಗಳ	ಅಷ್ಟಮಿ	23-9	ಪೂಫ	52-30	16
30	3 ಬುಧ	ನವಮಿ	27-38	ಉಫ	58-33	17
31	4 ಗುರು	ದಶಮಿ	31-22	ಹಸ್ತ	60	18
1	5 ಶುಕ್ರ	ಏಕಾದಶಿ	33-55	ಹಸ್ತ	2-52	19
2	ಶನಿ	ದ್ವಾದಶಿ	35-12	ಚಿತ್ತ	6-27	20

(1) ಅಷ್ಟಮೀತಿಥಿಃ (ವಾಕ್ಯರೀತ್ಯಾ ತಿಥಿಃ) ಶ್ರೀರಂಗದಲ್ಲಿ ವಸಂತೋತ್ಸವಾರಂಭಃ. (2) (ವಾಕ್ಯರೀತ್ಯಾ ಅಷ್ಟಮೀತಿಥಿಃ). (3) ನವಮೀತಿಥಿಃ. (4) ದಶಹರದಶಮಿ ವರದಾರಾಜಜಯಂತೀ. (5) ಸರ್ವತ್ರೈಕಾದಶೀ ಚಾಮರಾಜೇಶ್ವರರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಜೂನ್ ತಾರೀಖು ೩ ನೆಯ ಭಾನುವಾರ. (ಸಂಚಿಕೆ ೨೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋ [illegible]

ಎಲ್. ಆರ್. ಕರಿಬಸವಶಾಸ್ತ್ರಿ, ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

ಮದನೋದ್ಭವ ಗುಳಿಗೆ.

[illegible]

ನಪುಂಸಕತ್ವಾರಿ ತೈಲವು.

[illegible]

ವಿಳಾಸ—ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಶಿರ್ ಉತ್ತರಕನ್ನಡ ಡಿ||.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

31 ಮೂಲವ್ಯಾಧಿ!

[illegible]

ಸುವಾಸಿಕ ಹುರುಕಿನ ಔಷಧ.

[illegible]

ವಕ್ರೋಜೀವನ ಚೂರ್ಣ.

[illegible]

ಶ್ರೀ ಭಾರತ ವನೌಷಧಿ ಸಂಗ್ರಹಾಲಯ ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

[illegible]

ಯೋಗ್ಯತಾಪತ್ರಗಳು.

[illegible]

ತಮ್ಮ ಲೋಕಾನುಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂ [illegible]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀ ಕಸ್ತೂರೀ ಮಾತ್ರೆ

[illegible]

ವಿಳಾಸ—ಆಯುರ್ವೇದ ವಿದ್ವಾನ್ ಪಿ. ವಿ. ಪಂಡಿತ್, ಸತ್ಯವೈದ್ಯಶಾಲಾ ನಂಜನಗೂಡು.

ವ್ಯಾಪಾರಸ್ಥರಿಗೆ ಇದು ಒಂದು ದೊಡ್ಡಲಾಭಸಮಯ.

[illegible]

ವಿಳಾಸ—ಸೆಕ್ರೆಟರಿ ಟಿ. ಹೆಚ್. ಎಂ. ಅಂಡ್ ಕಂಪೆನಿ, ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜೂನ್ ತಾ|| ೩ ನೆಯ ಭಾನುವಾರ.

ಉಸ್ಮೇನಿಯಾ ವಿಶ್ವವಿದ್ಯಾಲಯ

(ದೇಶಭಾಷಾಪ್ರಾಮುಖ್ಯ.)

ಹೈದರಾಬಾದ್ ಪ್ರಭುತ್ವದವರು ತಮ್ಮ ಸಂಸ್ಥಾನದಲ್ಲಿ ಸ್ವತಂತ್ರವಾದ ವಿಶ್ವವಿದ್ಯಾಲಯವನ್ನು ಏರ್ಪಡಿಸುವುದಕ್ಕೆ ಅಲ್ಲಿಯ ನೈಜಾಮರವರು ಅಪ್ಪಣೆಮಾಡಿರುವರೆಂಬ ಸಂಗತಿಯನ್ನು ಕಳೆದವಾರದ ಸಂಚಿಕೆಯ ವೃತ್ತಾಂತಪಙ್ತ್ತಿಯಲ್ಲಿ ತಿಳಿಯಿಸಿರುವೆವಷ್ಟೆ. ಈ ಸಂಬಂಧವಾಗಿ ನೈಜಾಮರವರು ಮಾಡಿರುವ ಅಪ್ಪಣೆಯಲ್ಲಿ ಈ ನೂತನ ವಿಶ್ವವಿದ್ಯಾಲಯದ ಅವಶ್ಯಕತೆಯನ್ನೂ ಅವರ ಉದ್ದೇಶವನ್ನೂ ತಿಳಿಯಿಸುವ ಅಭಿಪ್ರಾಯಗಳು ಹೀಗಿರುತ್ತವೆ—"ಪಶ್ಚಿಮ ಪೂರ್ವದೇಶೀಯರುಗಳಾದ ಪ್ರಾಚೀನ ನವೀನ ಜ್ಞಾನಗಳನ್ನು ಒದಗಿಸಿ, ಈಗಣ ವಿದ್ಯಾಭ್ಯಾಸಕ್ರಮದಲ್ಲಿರುವ ಲೋಪಗಳನ್ನು ಹೋಗಲಾಡಿಸಬಲ್ಲ ವಿಶ್ವವಿದ್ಯಾಲಯವೊಂದನ್ನು ಈಗ ನಾವು ಏರ್ಪಡಿಸಬೇಕಾಗಿದೆ. ಹಳೆಯ ಮತ್ತೂ ಈಗಣ ಪದ್ಧತಿಗಳಲ್ಲಿ ಉತ್ತಮವಾದುವುಗಳನ್ನು ಅನುಸರಿಸಿ, ವಿದ್ಯಾರ್ಥಿಗಳ ಶರೀರಬಲವನ್ನೂ ಮಾನಸಿಕಶಕ್ತಿಯನ್ನೂ ಜ್ಞಾನವನ್ನೂ ವಿಕಾಸಗೊಳಿಸುವುದಕ್ಕೂ, ಅವರಲ್ಲಿ ನೈತಿಕಾಭಿವೃದ್ಧಿಪಡಿಸುವುದಕ್ಕೂ ನಾವು ಯತ್ನಿಸಬೇಕು. ಉನ್ನತವಿದ್ಯೆಯನ್ನೆಲ್ಲಾ ಉರ್ದುಭಾಷೆಯಲ್ಲೇ ಕಲಿಸುವುದೂ, ಇಂಗ್ಲಿಷನ್ನು ಒಂದು ಮುಖ್ಯಭಾಷೆಯಾಗಿ ಕಲಿಸುವುದೂ ಸಹ ಈ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶವು. ಆದುಕಾರಣ ನನ್ನ ಪಟ್ಟಾಭಿಷೇಕದ ಜ್ಞಾಪಕಾರ್ಥವಾಗಿ ಇಂಥ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ನಾನು ಸಂತೋಷಪೂರ್ವಕವಾಗಿ ಅನುಮತಿಯನ್ನು ಕೊಟ್ಟಿರುತ್ತೇನೆ" ಎಂದು ನೈಜಾಮರವರು ಅಪ್ಪಣೆ ಕೊಡಿಸಿರುತ್ತಾರೆ.

ನಮ್ಮ ಭರತಖಂಡದೊಳಗೆ ಹೈದರಾಬಾದು ಸಂಸ್ಥಾನವು ಸ್ವದೇಶೀಯ ಸಂಸ್ಥಾನಗಳೊಳಗೆಲ್ಲಾ ಪ್ರಥಮತರಗತಿಯ ಪ್ರಥಮಸ್ಥಾನವನ್ನು ಪಡೆದುಕೊಂಡಿದ್ದರೂ ವಿದ್ಯಾವಿಷಯದಲ್ಲಿ ಅದು ಬಹಳ ಹಿಂದುಳಿದಿರುತ್ತದೆ. ಈಗಣ ನೈಜಾಮರವರು ಪಟ್ಟಕ್ಕೆ ಬಂದಮೇಲೆ ಈ ವಿದ್ಯಾವ್ಯಾಪನೆಯ ಕುಂದನ್ನು ವಿಶ್ವಪ್ರಯತ್ನದಿಂದ ಹೋಗಲಾಡಿಸಬೇಕೆಂಬ ಭಾವವು ಅವರಲ್ಲಿ ಬಲವತ್ತರವಾಗಿ ಬೇರುಬಿಟ್ಟಿರುತ್ತದೆ. ಅವರ ಇಷ್ಟವನ್ನನುಸರಿಸಿ ಪ್ರಜೆಗಳಲ್ಲಿ ವಿದ್ಯಾಪ್ರಸಾರವನ್ನು ಮಾಡುವುದಕ್ಕಾಗಿ ಈಗಣ ಪ್ರಭುತ್ವದವರು ವಿಶೇಷವಾದ ಏರ್ಪಾಟುಗಳನ್ನೂ ಹೆಚ್ಚುಹೆಚ್ಚಾಗಿ ಧನವ್ಯಯವನ್ನೂ ಮಾಡುವುದಕ್ಕುಪಕ್ರಮಿಸಿರುತ್ತಾರೆ. ಈಗಣ ಭರತಖಂಡದ ವಾತಾವರಣ ವೈಲಕ್ಷಣ್ಯದಲ್ಲಿ ವಿಶ್ವವಿದ್ಯಾಲಯಗಳ ಸುಗ್ಗಿಯು ಸುತ್ತಲೂ ಗೋಚರಿಸುತ್ತಲಿದೆ. ಹಿಂದೂ ವಿಶ್ವವಿದ್ಯಾಲಯ, ಢಕ್ಕಾ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಪಾಟ್ನಾ ವಿಶ್ವವಿದ್ಯಾಲಯ, ಮಹಿಳಾ ವಿಶ್ವವಿದ್ಯಾಲಯಗಳು ನವೀನವಾಗಿ ಉದಯಿಸಿರುವುದು ಮಾತ್ರವೇ ಅಲ್ಲದೆ, ಮಹಮ್ಮದೀಯ ವಿಶ್ವವಿದ್ಯಾಲಯವು ಗರ್ಭಾವಸ್ಥೆಯಲ್ಲಿದೆ. ಭಾಷಾಪ್ರಯುಕ್ತ ವಿಶ್ವವಿದ್ಯಾಲಯಗಳನ್ನು ಕುರಿತ ಸೋಂಪಿಯು ಪ್ರಜೆಗಳಿಂದ ಆಹರಿಸಲ್ಪಡುತ್ತಿದೆ. ಇಂಥ ಪ್ರಗತಿಭರದಲ್ಲಿ ಸ್ವದೇಶ ಪ್ರಜಾವಿದ್ಯಾವ್ಯಾಪನೆಗಾಗಿ ಹುರುಪಿನಿಂದ ಕೊಡಗಿರುವ ನೈಜಾಮರವರ ಮನಸ್ಸೂ ಕೂಡ ಸ್ವತಂತ್ರ ವಿದ್ಯಾಪೀಠದ ಸ್ಥಾಪನೆಯ ಕಡೆಗೆ ಎಳೆಯಲ್ಪಟ್ಟುದೇನೂ ಆಶ್ಚರ್ಯವಲ್ಲ. ಅಲ್ಲದೆ ಪರಭಾಷಾಪ್ರಾಮುಖ್ಯದಿಂದ ವಿದ್ಯಾರ್ಜನೆಯಲ್ಲಿ ವ್ಯರ್ಥಭಾರವು ಹೆಚ್ಚಿರುವುದು, ಕೇವಲ ಭಾಷಾಸಾಹಿತ್ಯವೇ ತುಂಬಿತುಳುಕಾಡುತ್ತಿರುವುದು, ಪ್ರಜೆಗಳ ಸ್ವತಂತ್ರ ಜೀವನಕ್ಕೆ ಸಾಧನಸಂಪತ್ತಿಯು ಶೂನ್ಯವಾಗಿರುವುದು—ಇವೇ ಮೊದಲಾದ ಲೋಪಗಳು ಇದುವರೆಗಿನ ವಿದ್ಯಾಪೀಠಗಳ ಬೋಧನಾಧ್ಯಾಪನ ಪದ್ಧತಿಗಳಲ್ಲಿ ತುಂಬಿರುವುವೆಂಬುದು ವಿಜ್ಞರಿಗೆಲ್ಲಾ ಚೆನ್ನಾಗಿ ಗೊತ್ತಾಗಿ, ಈ ಲೋಪವಿದೂರವಾದ ವಿದ್ಯಾಪದ್ಧತಿಯನ್ನು ಹೊಂದಿರುವ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದರ ಅವಶ್ಯಕತೆಯು ಸುತ್ತಲೂ ಕಂಡುಬಂದಿರುವಾಗ, ಕಾಲೋಚಿತವಾಗಿ ಎಚ್ಚರುಗೊಂಡಿರುವ ನೈಜಾಮರವರು ಅದನ್ನು ಗಮನಿಸದಿರುವರೆ? ಆದುಕಾರಣ, ಉಚಿತಸಮಯದಲ್ಲಿ ಅವರು ಕೈಹಿಡಿದ ಈ ಪ್ರಯತ್ನವು ಆ ದೇಶೀಯರಿಗೆ ಉತ್ತಮವಾದ ಫಲವನ್ನು ಕೊಡಲು ಸಮರ್ಥವಾಗುವುದೆಂಬುದಕ್ಕೆ ಸಂಶಯವಿಲ್ಲ.

ಈ ಸಂದರ್ಭದಲ್ಲಿ ಅವರು ತೋರಿಸಿದ ಮತ್ತೊಂದು ವಿಚಾರವು ನವೀನ ವಿಶ್ವವಿದ್ಯಾಲಯ ಸ್ಥಾಪನ ಯಶೋವಿರಾಜಿತವಾದ ಮೈಸೂರು ಸಂಸ್ಥಾನದವರ ವಿಚಾರಕ್ಕಿಂತಲೂ ಒಂದಡಿ ಮುಂದಾಗಿರುವುದು ಸಂತೋಷಕರವು. ನೈಜಾಮರು ತಮ್ಮ ಸ್ವಭಾಷೆಯ ವಿಷಯದಲ್ಲಿ ಆಡಿರುವ ಮಾತುಗಳು ದೇಶಭಾಷಾಪ್ರೇಮಿಗಳಿಗೆಲ್ಲಾ ರೋಮಾಂಚನವನ್ನು ಮಾಡತಕ್ಕುನಾಗಿವೆ. ತಮ್ಮ ವಿಶ್ವವಿದ್ಯಾಲಯದಲ್ಲಿ ಉನ್ನತವಿದ್ಯೆಯೆಲ್ಲಾ ಉರ್ದುಭಾಷೆಯಲ್ಲೇ ನಡೆಯಬೇಕೆಂಬುದು ತಮ್ಮ ಮುಖ್ಯೋದ್ದೇಶವೆಂದು ಅವರು ತಿಳಿಯಿಸಿರುತ್ತಾರೆ. ಉರ್ದುಭಾಷೆಯಲ್ಲಿ ಯಾವ ಶಾಸ್ತ್ರೀಯ ಗ್ರಂಥಗಳೂ ಪರಿಪುಷ್ಟವಾಗಿಲ್ಲವಲ್ಲಾ! ಎಂಬ ಶಂಕೆಯು ಅವರ ಗಾಢಸಂಕಲ್ಪಕ್ಕೆ ವಿಘ್ನವನ್ನೇನೂ ತರಲಿಲ್ಲ. ಆ ವಿಘ್ನಭಯವು ಮೈಸೂರು ಅಧಿಕಾರಿಗಳಿಗೂ ಕೆಲ ವಿದ್ಯಾವಂತರಿಗೂ ಮಾತ್ರವೇ ತುಂಬಿ ತುಳುಕುತ್ತಿದ್ದಿತು. ನವೀನವಿಶ್ವವಿದ್ಯಾಲಯ ಸ್ಥಾಪನೋದ್ದೇಶದಲ್ಲಿ ಸ್ವಭಾಷೆಯ ಉದ್ಧಾರವನ್ನೇ ಮುಖ್ಯೋದ್ದೇಶವನ್ನಾಗಿಟ್ಟುಕೊಂಡು ಇತರರಿಗೆಲ್ಲಾ ಮಾರ್ಗದರ್ಶಕರಾದ ನೈಜಾಮರಿಗೆ ನಾವು ಧನ್ಯವಾದವನ್ನು ಮಾಡದೆ ಇರಲಾರೆವು. ನವೀನ ವಿಶ್ವವಿದ್ಯಾಲಯ ಸ್ಥಾಪನಪ್ರಯತ್ನವನ್ನು ಮಾಡಿದುದರಲ್ಲಿ ಮೈಸೂರು ಹೈದರಾಬಾದುಗಳೆರಡೂ ಒಂದೇಸಮನಾಗಿರುವಲ್ಲಿ ದೇಶಭಾಷಾಪ್ರಾಮುಖ್ಯಕಲ್ಪನೆಯು ಹೈದರಾಬಾದಿನಲ್ಲಿ ಸಾರ್ಥಕವಾಗುವುದಕ್ಕೂ ಮೈಸೂರಿನಲ್ಲಿ ವಿಫಲವಾಗುವುದಕ್ಕೂ ಇರುವ ಕಾರಣವೇನು? ನಮ್ಮ ವಿಚಾರದಲ್ಲಂತು—ಅಲ್ಲಿಯ ಅಧಿಕಾರಿವರ್ಗದಲ್ಲಿ ಹೆಚ್ಚು ಜನರೆಲ್ಲಾ ಸ್ವದೇಶಭಾಷಾ ವ್ಯವಹಾರಿಗಳಾದ ಸ್ವದೇಶೀಯರೇ ಆಗಿರುವುದೂ, ಮೈಸೂರಿನ ಅಧಿಕಾರಿವರ್ಗದಲ್ಲಿ ಹೆಚ್ಚು ಜನರೆಲ್ಲಾ ಆಂಧ್ರದ್ರಾವಿಡಾದಿ ಪರದೇಶೀಯರೇ ಆಗಿರುವುದೂ ಕಾರಣವಾಗಿರಬೇಕೆಂದು ತೋರುತ್ತಿರುವುದು. ಅಲ್ಲದೆ ಬೇರಾವುದಾದರೂ ಸಮಂಜಸವಾದ ಕಾರಣವಿದ್ದರೆ ಬಲ್ಲವರು ಪ್ರಕಟಿಸಿ ಕನ್ನಡಿಗರನ್ನು ಸಮಾಧಾನಪಡಿಸಬಹುದು.

ಮೈಸೂರು ಕೆರೆಗಳ ಜೀರ್ಣೋದ್ಧಾರ.

ಚೆನ್ನಾಗಿ ಬಾಳಿದ ಹಿಂದಣ ತಲೆಯವರು ದೊಡ್ಡದಾಗಿ ಕಟ್ಟಿಸಿದ ಮನೆಗಳನ್ನು ಅವರ ಮುಂದಣ ಪೀಳಿಗೆಯವರು ದುಸ್ಥಾವಸ್ಥೆಗೆ ಬಂದರೆ ಆ ಮನೆಗಳ ಜೀರ್ಣೋದ್ಧಾರದ ಕೆಲಸವನ್ನು ಮಾಡಿಕೊಂಡು ಹೋಗುವುದೂ ಅವರಿಗೆ ದುಸ್ತರವಾಗುವುದುಂಟು. ನಮ್ಮ ಮೈಸೂರು ಸಂಸ್ಥಾನವು ಹಿಂದಣ ಸ್ಥಿತಿಗಿಂತ ಈಗ ಐಶ್ವರ್ಯದಲ್ಲಿ ಮೂರುಪಾಲು ಹೆಚ್ಚಿದ್ದರೂ, ಹಿಂದಣವರು ದೇಶಹಿತಕ್ಕಾಗಿ ರಚಿಸಿದ್ದ ಜಲಾಶಯಗಳನ್ನು ಜೀರ್ಣೋದ್ಧಾರಮಾಡಿಕೊಂಡು ಹೋಗುವುದಕ್ಕೂ ಕೂಡ ಶಕ್ತವಾಗದೆ ಹೋಗಿರುವುದು ವಿಚಿತ್ರತರವಾಗಿದೆ. ಎಷ್ಟೋ ವರ್ಷಗಳಿಂದಲೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಕೆರೆಗಳ ಜೀರ್ಣೋದ್ಧಾರದ ಅವಶ್ಯಕತೆಯನ್ನು ಕುರಿತು ಚರ್ಚೆಗಳು ನಡೆಯುತ್ತಲೇ ಬಂದಿವೆ. ಆಯಾ ಪ್ರಾಂತದ ರೈತರುಗಳುಜೀರೆ ತಂತಮ್ಮ ಸುತ್ತಣ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಮೊರೆಯಿಟ್ಟುಕೊಳ್ಳುತ್ತ ಬಂದಿದ್ದಾರೆ. ಇವುಗಳನ್ನು ಜೀರ್ಣೋದ್ಧಾರಮಾಡಿಸಿದರೆ ಪ್ರಜೆಗಳ ಮತ್ತೂ ದನಕರುಗಳ ಪಾನಕ್ಕೆ ಸಮೃದ್ಧವಾಗಿ ನೀರು ಒದಗುವುದೊಂದು ಪ್ರಯೋಜನವೇ ಅಲ್ಲದೆ ಆ ಕೆರೆಗಳ ಕೆಳಗಣ ಎಷ್ಟೋ ಭೂಮಿಗಳಿಗೆ ನೀರನ್ನೊದಗಿಸುವಮೂಲಕ ಸಸ್ಯಾಭಿವೃದ್ಧಿಯನ್ನೂ ಅದರಮೂಲಕ ಸರ್ಕಾರಕ್ಕೆ ಹೆಚ್ಚು ಕಂದಾಯದ ಲಾಭವನ್ನೂ ಮಾಡಬಹುದು. ಆದುಕಾರಣ ಇವುಗಳ ಜೀರ್ಣೋದ್ಧಾರದ ಅವಶ್ಯಕತೆಯನ್ನು ಸರ್ಕಾರದವರು ಕೂಡ ತಿಳಿಯಲಾರದವರಲ್ಲ. ಅವರು ಸಣ್ಣ ದೊಡ್ಡ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಪ್ರತಿವರ್ಷವೂ ಕ್ಲ್ಪಪ್ತವಾದ ಒಂದಷ್ಟು ಹಣವನ್ನು ವಿನಿಯೋಗಿಸುವುದಕ್ಕೆ ಏರ್ಪಡಿಸಿರುವುದಲ್ಲದೆ, ಕೆರೆಪಂಚಾಯಿತಿಗಳನ್ನು ಏರ್ಪಡಿಸಿ, ಅವುಗಳಮೂಲಕವೂ, ಗ್ರಾಮಾಭಿವೃದ್ಧಿ ಸಂಘಗಳಮೂಲಕವೂ ಈ ಕಾರ್ಯವು ಬೇಗನೆ ನಡೆಯಲೆಂದು ನಿರೀಕ್ಷಿಸಿಕೊಂಡಿದ್ದಾರೆ. ಆದರೂ ಈ ಕಾರ್ಯವು ಸಮರ್ಪಕವಾಗಿ ನಡೆಯುತ್ತಲಿಲ್ಲ. ಕೆರೆಗಳ ಜೀರ್ಣೋದ್ಧಾರಕ್ಕಾಗಿ ಆಯಾ ಸ್ಥಳದ ರೈತರುಸ್ವಲ್ಪ ಧನಸಹಾಯವನ್ನೋ ಕೆಲಸದ ಸಹಾಯವನ್ನೋ ಮಾಡಬೇಕಾಗಿರುತ್ತದೆ. ಉಳಿದ ದೊಡ್ಡದೊಡ್ಡ ಕೆಲಸದ ಭಾರವನ್ನೆಲ್ಲಾ ಸರ್ಕಾರದವರೇ ವಹಿಸುವರು. ಈ ಕೆರೆಗಳ ಜೀರ್ಣೋದ್ಧಾರದ ಕೆಲಸಕ್ಕಾಗಿಯೇ ೨ ಲಕ್ಷ ರೂ. ಗಳನ್ನು ವಿನಿಯೋಗಿಸಲು ಸರ್ಕಾರದವರು ನಿಷ್ಕರ್ಷಿಸಿದ್ದರೂ ಅದರಲ್ಲಿ $\frac{1}{16}$ ಭಾಗದಷ್ಟು ಹಣವು ಮಾತ್ರ ಕಳೆದ ವರ್ಷದಲ್ಲಿ ವೆಚ್ಚಮಾಡಲ್ಪಟ್ಟು, ೬೭ ಕೆರೆಗಳ ಜೀರ್ಣೋದ್ಧಾರವು ಮಾತ್ರ ನಡೆದಿದೆ. ಸಂಸ್ಥಾನದಲ್ಲೆಲ್ಲಾ ಜೀರ್ಣೋದ್ಧಾರಗೊಳ್ಳಬೇಕಾಗಿರುವ ಕೆರೆಗಳು ೧೧೩೫೫ ಇರುವುವೆಂದು ಗೊತ್ತಾಗಿದೆ. ಇಷ್ಟು ಮಂದವಾಗಿ ಜೀರ್ಣೋದ್ಧಾರದ ಕೆಲಸವು ನಡೆಯುತ್ತ ಬಂದರೆ ಎಲ್ಲ ಕೆರೆಗಳ ಜೀರ್ಣೋದ್ಧಾರಕ್ಕೂ ಇನ್ನೂ ೨೦-೩೦ ವರ್ಷಗಳು ಹಿಡಿಯುವುದರಲ್ಲಿ ಸಂಶಯವಿಲ್ಲ. ಹೀಗಾಗುವುದು ಬಹಳ ಅನ್ಯಾಯ. ಸರ್ಕಾರದ ಉದ್ಯೋಗಿಗಳೂ ಪ್ರಜೆಗಳೂ ಕೂಡ ಈ ಭಾಗದಲ್ಲಿ ಮಾಡಬೇಕಾದಷ್ಟು ಮುತವರ್ಜಿಯನ್ನು ಮಾಡುತ್ತಲಿಲ್ಲವೆಂದು ಹೇಳಬೇಕಾಗುತ್ತದೆ. ಇದಲ್ಲದೆ ಇದಕ್ಕೆ ಇನ್ನೂ ಅನೇಕ ಕಾರಣಗಳಿರಬಹುದು. ಈ ಕೆಲಸಕ್ಕೆ ಅನುಭವವುಳ್ಳ ಮೇಸ್ತ್ರಿಗಳು ದೊರೆಯದೆಹೋಗಿರುವುದೂ ಒಂದು ಕಾರಣವೆಂದು ಊಹಿಸಲ್ಪಟ್ಟಿದೆ. ಆ ಲೋಪವನ್ನು ಪರಿಹರಿಸುವುದು ಅವಶ್ಯಕವೆಂದೂ, ಅದರಿಂದಲಾದರೂ ಮುಂದೆ ಕೆರೆಗಳ ಜೀರ್ಣೋದ್ಧಾರದ ಕೆಲಸವು ಚಟುವಟಿಕೆಯಿಂದ ನಡೆಯುವಂತಾದೀತೆಂದೂ ಈ ಕೆಲಸಕ್ಕೆ ರೈತರ ಮಕ್ಕಳನ್ನೇ ಅಣಿಮಾಡಿದರೆ, ಇದಕ್ಕೇ ಅಲ್ಲದೆ ಗ್ರಾಮಾಭ್ಯುದಯಕಾರ್ಯಗಳಿಗೂ ಸಹಾಯವಾದೀತೆಂದೂ ಸರ್ಕಾರದವರು ಯೋಚಿಸಿರುತ್ತಾರೆ. ಅದಕ್ಕಾಗಿಯೇ ಎಂದರೆ ಮೇಸ್ತ್ರಿಗಳನ್ನು ಅಣಿಮಾಡುವುದಕ್ಕಾಗಿಯೇ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಒಂದೊಂದು ಪಾಠಶಾಲೆಗಳನ್ನೇರ್ಪಡಿಸಿ ಅವುಗಳಲ್ಲಿ ಓದುವ ರೈತರ ಮಕ್ಕಳಿಗೆ ೧೦ ರೂ. ನ ೧೦೦ ವೇತನಗಳನ್ನು ಕೊಡುವುದಕ್ಕೆ ಏರ್ಪಡಿಸಿರುತ್ತಾರೆ. ಇಲ್ಲಿ ೨ ವರ್ಷಕಾಲ ಅಭ್ಯಾಸಮಾಡಿ ಮೇಸ್ತ್ರಿ ಕೆಲಸಕ್ಕೆ ಬೇಕಾದಷ್ಟು ಅರ್ಹತೆಯನ್ನು ಪಡೆದುಕೊಳ್ಳಬಹುದಾಗಿದೆ. ದೇಶಭಾಷೆಯಲ್ಲೇ ಅಭ್ಯಾಸವು ನಡೆಯಿಸಲ್ಪಡುವುದು. ಅದಕ್ಕಾಗಿ ಸೇರತಕ್ಕ ವಿದ್ಯಾರ್ಥಿಗಳು ಕನ್ನಡದಲ್ಲಿ ಲೋವರ್ ಸೆಕೆಂಡರಿ ತರಗತಿಯವರೆಗೆ ಓದಿದವರಾಗಿಯಾದರೂ ಇರಬೇಕು. ಇಲ್ಲಿ ಓದಿ ಉತ್ತೀರ್ಣರಾದವರಿಗೆಲ್ಲಾ ಉದ್ಯೋಗವನ್ನು ಕೊಡುವುದಕ್ಕೆ ಸರ್ಕಾರದವರು ಉತ್ತರವಾದಿಗಳಲ್ಲ. ಆದರೆ ಬಹುಶಃ ಅನೇಕಾನೇಕರಿಗೆ ಸಿಕ್ಕದೆಹೋಗುವಹಾಗಿಲ್ಲ. ಇಲ್ಲಿ ಓದಿ ಉತ್ತೀರ್ಣರಾದವರೂ ಸರ್ಕಾರದವರಿಂದ ಅಪೇಕ್ಷಿಸಲ್ಪಟ್ಟರೆ ೨ ವರ್ಷಕಾಲ ಸಂಬಳ ಪಡೆದು ಅವರ ಕೆಲಸವನ್ನು ಮಾಡಿಕೊಡಲು ಬದ್ಧರಾಗಿರಬೇಕು. ಈ ಏರ್ಪಾಟು ಸರ್ಕಾರಕ್ಕೆ ಮಾತ್ರವೇ ಅಲ್ಲದೆ ಗ್ರಾಮಾಂತರಗಳ ರೈತರ ಪುರೋವೃದ್ಧಿಗೆ ಎಷ್ಟೋ ಸಹಾಯಕವೆಂದು ಹೇಳುವಲ್ಲಿ ಅಡ್ಡಿಯಿಲ್ಲ. ನಕಾಸೆಯನ್ನೆತ್ತುವುದು, ಭೂಮಿಯ ಅಳತೆಯನ್ನು ಮಾಡುವುದು ಮೊದಲಾದ ಸಾಮಾನ್ಯತರದ ಇಂಜನಿಯರಿಂಗ್ ವಿದ್ಯೆಯೆಲ್ಲವೂ ಇಲ್ಲಿ ಕಲಿಸಲ್ಪಡುವಕಾರಣ, ರೈತರ ಮಕ್ಕಳು ಅವನ್ನು ಕಲಿತುಕೊಂಡರೆ ತಂತಮ್ಮ ಸ್ಥಳೀಯ ಕಾರ್ಯಗಳನೇಕವನ್ನು ಪರೋಪಾಶ್ರಯವಿಲ್ಲದೆ ತಾವು ತಾವೇ ಮಾಡಿಕೊಂಡು ಹೋಗಬಹುದು. ಹತ್ತಾರುವರ್ಷಗಳಕಾಲ ಈ ಶಾಲೆಗಳು ನಡೆಯುವುದರೊಳಗೆ ಸಾವಿರಾರುಮಂದಿ ಮೇಸ್ತ್ರಿಗಳು ಸಿದ್ಧವಾಗುವುದರಲ್ಲಿಅಭ್ಯಂತರವಿಲ್ಲ. ಅದರಿಂದ ಸರ್ಕಾರದ ಉದ್ದೇಶಸಾಧನೆಗೂ ಪ್ರಜೆಗಳ ಹಿತಸಾಧನೆಗೂ ಬಹಳ ಅನುಕೂಲವಾಗುವುದು. ಈ ಸಮಯವನ್ನು ರೈತ ಜನಗಳು ವ್ಯರ್ಥವಾಗಿ ಹೋಗಗೊಡದೆ ತಂತಮ್ಮ ಮಕ್ಕಳನ್ನು ಈ ಶಾಲೆಗಳಿಗೆ ಸೇರಿಸಿ ವಿದ್ಯಾವಂತರನ್ನು ಮಾಡಿ, ಅದರ ಫಲವನ್ನು ಪಡೆಯಲು ತಪ್ಪಬಾರದೆಂದು ಸೂಚಿಸುತ್ತೇವೆ. ತಮ್ಮ ಲೋಪಗಳ ಪರಿಹಾರಕ್ಕೂ ಹಿತಾವಾಪ್ತಿಗೂ ಮಾತುಮಾತಿಗೂ ಸರ್ಕಾರದವರನ್ನು ಪ್ರಾರ್ಥಿಸುವುದೊಂದೇ ತಮ್ಮ ಕರ್ತವ್ಯವೆಂದು ತಂತಮ್ಮ ಕರ್ತವ್ಯವನ್ನು ಪ್ರಜೆಗಳು ತಿಳಿದುಕೊಳ್ಳುವುದಕ್ಕಿಂತಲೂ ಪಾಲ್ಯಪಾಲಕರೀರ್ವರೂ ನಿರ್ವಂಚನೆಯಿಂದ ಮಾಡುತ್ತಾ ಬಂದರೇನೆಯೇ ಕಾರ್ಯಸಿದ್ಧಿಯಾಗುವುದೆಂಬುದನ್ನು ದೇಶದ ಸಣ್ಣ ದೊಡ್ಡ ಪ್ರಜೆಗಳೆಲ್ಲರೂ ಖಚಿತವಾಗಿ ತಿಳಿದುಕೊಂಡು ಕೆಲಸಮಾಡುತ್ತ ಬಂದರೆ ಸಂಸ್ಥಾನದ ಅಭ್ಯುದಯವು ನಿರೀಕ್ಷಣೆಗಿಂತಲೂ ಅಧಿಕವಾಗಿ ಸಾಗುವುದೆಂಬುದಕ್ಕೆ ಸಂಶಯವಿಲ್ಲ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಈಚೆಗೆ ಕಳೆದ ಮಂಗಳವಾರ ಸಾಯಂಕಾಲವೂ ಗುರುವಾರ ರಾತ್ರಿಯೂ ಬಲವಾದ ಮಳೆಗಳಾದುವು. ಸುತ್ತುಮುತ್ತಣ ಗ್ರಾಮಾಂತರಗಳಲ್ಲೂ ಡಿಸ್ಟ್ರಿಕ್ಟಿನ ಹಲವು ಕಡೆಯೂ ಮಳೆಯಾದ ವರ್ತಮಾನ ಬಂದಿದೆ.

೪ ನೆಯ ತಾರೀಖಿನ ದಿನ ಶ್ರೀಮದಿಂಡಿಯಾ ಸಾರ್ವಭೌಮರವರ ವರ್ಧಂತಿ ಪ್ರಯುಕ್ತವಾದ ರಜಾದಿನವಾದುದರಿಂದ ರಾಜಧಾನಿಯಲ್ಲಿ ಕೂಡುವ ಸಂಪದಭ್ಯುದಯ ಸಮಾಜದ ಅಧಿವೇಶನವು ತಾ|| ೫ ರಿಂದ ಆರಂಭಿಸಲ್ಪಡುವುದು.

ರಾಜಧಾನಿಯ ದೊಡ್ಡಪೇಟೆಯ ಮಹಾಜನರು ಸೇರಿ ಕಳೆದ ಸೋಮವಾರದ ದಿವಸ ಶ್ರೀ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿ ವೇ|| ಶಿವಯ್ಯಶಾಸ್ತ್ರಿಗಳಿಂದ ಶ್ವೇತೋಪಾಖ್ಯಾನ ಕಾಲಕ್ಷೇಪವನ್ನು ಮಾಡಿಸಿದರು. ಸಾವಿರಾರು ಮಂದಿ ಶ್ರೋತೃಗಳು ಸೇರಿದ್ದು ಕರ್ಣಾನಂದವನ್ನು ಹೊಂದಿದರು.

ಶ್ರೀಮನ್ ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜ. ಸಿ. ಎಸ್. ಐ., ರವರ ೩೪ ನೆಯ ವರ್ಷದ ವರ್ಧಂತ್ಯುತ್ಸವವು ಮೊನ್ನೆಯದಿನ ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀಮನ್ಮಹಾರಾಜ ಸಹೋದರರುಗಳುಕುಳಿತಿದ್ದ ದಿವ್ಯಾಶ್ವಗಳ ತಲೆಯಮೇಲೆ ವಿದ್ಯುಚ್ಛಕ್ತಿಯ ದೀಪವನ್ನು ಹೊತ್ತಿಸಿದ್ದುದು ಬಹಳ ನೇತ್ರಾನಂದವನ್ನೂ ಆಶ್ಚರ್ಯವನ್ನೂ ಉಂಟುಮಾಡುತ್ತಿದ್ದಿತು.

ಮ|| ರಾ|| ಟಿ. ಎಸ್. ಸಿದ್ದಪ್ಪನವರು ರಾಜಧಾನಿಯಲ್ಲಿರುವ ತಮ್ಮ ಬಂಗಲೆಯನ್ನು ಮೈಸೂರು ವೀರಶೈವಾಶ್ರಮಕ್ಕಾಗಿ ಬಾಡಿಗೆಯಿಲ್ಲದೆ ಕಳೆದೆರಡು ವರ್ಷಗಳಿಂದಲೂ ಕೊಟ್ಟಿದ್ದುದರ ಕೃತಜ್ಞತೆಗಾಗಿ ಕಳೆದ ಮಂಗಳವಾರ ಮ|| ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಮರಿಮಲ್ಲಪ್ಪನವರ ಹೈಸ್ಕೂಲು ಭವನದಲ್ಲಿ ಒಂದು ವಿನೋದ ಕೂಟವನ್ನೇರ್ಪಡಿಸಿ, ಡಾಕ್ಟರನ್ನು ಗಾನವಿನೋದಾದಿಗಳಿಂದ ಸತ್ಕರಿಸಿ, ಒಂದು ವಿಜ್ಞಾಪನ ಪತ್ರವನ್ನರ್ಪಿಸಿ ಬಹುಮಾನಿಸಿದರು.

ನಂಜನಗೂಡಿನಲ್ಲಿ ಕಾಲರಾವ್ಯಾಧಿಯು ಉಲ್ಬಣವಾಗಿದ್ದಾಗ ಶ್ರೀ ಶಿವಶರಣ ಶಂಕರದಾಸಿಮಯ್ಯನವರ ಹೆಸರಿನ ಹರಕೆಯಮೇಲೆ ಪ್ರತಿದಿನವೂ ಅಲ್ಲಿಯ ವೀರಶೈವರು ಧೂಪದ ಸೇವೆಯನ್ನು ಆರಂಭಿಸಲು ೧ ವಾರದೊಳಗೇ ರೋಗವು ಶಾಂತವಾಯಿತೆಂದೂ, ಅದಕ್ಕಾಗಿ ಕಳೆದ ಸೋಮವಾರ ಸದರಿ ದಾಸಿಮಯ್ಯನವರ ಕಲಶದ ಆರಾಧನೆಯನ್ನು ಸರ್ವರೂ ಅಟ್ಟಹಾಸದಿಂದಲೂ ಭಯಭಕ್ತಿಯಿಂದಲೂ ನಡೆಯಿಸಿದರೆಂತಲೂ, ಸಾವಿರಾರು ಮಂದಿಗಳಿಗೆ ಮೃಷ್ಟಾನ್ನಭೋಜನದ ಗಣಾರಾಧನೆಯು ನಡೆಯಿತೆಂತಲೂ ಅಲ್ಲಿಯ ಸ್ಥಳಿಕರೊಬ್ಬರು ಬರೆದಿರುತ್ತಾರೆ.

ಸಿರ್ಯಾಪಟ್ಟಣಕ್ಕೆ ಸಮೀಪದಲ್ಲಿ ರಾಜಮಾರ್ಗದ ಪಕ್ಕದಲ್ಲಿ ಒಂದು ಕಡೆ ಭೂಗರ್ಭೋದಿತವಾಗಿರುವ ಒಂದು ಶಿಲೆಯನ್ನು ಯಾರೋ ಮಾರ್ಗಸ್ಥ ಸನ್ಯಾಸಿಯೊಬ್ಬನು ಪೂಜಿಸಿ, ಅದನ್ನು ಕನ್ನಂಬಾಡಿಯಮ್ಮನೆಂದು ಕರೆದು ಹೋದನೆಂತಲೂ, ಅಂದಿನಿಂದ ಆ ಮೂರ್ತಿಗೆ ಪೂಜಾಪುರಸ್ಕಾರಗಳು ಜನರಿಂದ ಹೇರಳವಾಗಿ ನಡೆಯುತ್ತಿರುವುವೆಂತಲೂ ೩ ಸಾವಿರ ರೂ.ಗಳ ಮೇಲೆಯೇ ಕಾಣಿಕೆ ಹಣವು ಕೂಡಿರುವುದೆಂತಲೂ ಒಬ್ಬ ಬಾತ್ಮಿದಾರರು ತಿಳಿಯಿಸಿರುತ್ತಾರೆ. ಇಂಥ ದೇವತೆಗಳ ಅನುಗ್ರಹದಿಂದಲಾದರೂ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಧನ ಸಹಾಯವಾಗುತ್ತ ಬರದರೆ ದುಡ್ಡಿಲ್ಲದೆ ನಿಂತಿರುವ ಎಷ್ಟೋ ಲೋಕಲ್ ಬೋರ್ಡು ಕೆಲಸಗಳು ಜರುಗುವುದಕ್ಕೆ ಅವಕಾಶವಾದೀತು.

ನಮ್ಮ ಮೈಸೂರು ದೇಶದ ಕಾಡುಗಳಲ್ಲೂ ಕೊಡಗಿನಲ್ಲೂ ಇರುವ ಶ್ರೀಗಂಧದ ಮರಗಳಿಗೆ ಒಂದು ತೆರದ ರೋಗವು ಪ್ರಾಪ್ತವಾಗಿ ನಮ್ಮ ಸರ್ಕಾರಕ್ಕೆ ಈ ಗಂಧದಮರದ ವ್ಯಾಪಾರದ ಮೂಲಕವಾಗಿ ಬರುತ್ತಿದ್ದ ಆದಾಯದಲ್ಲಿ ಹತ್ತಾರು ಲಕ್ಷ ರೂ.ಗಳ ನಷ್ಟವು ಸಂಭವಿಸುವಂತಾಯಿತು. ಈ ರೋಗನಿದಾನವನ್ನು ಕಂಡು ಹಿಡಿಯುವುದಕ್ಕೂ ನಿವಾರಣೆಗೂ ವ್ಯವಸಾಯ ಶಾಖೆಯ ಡೈರೆಕ್ಟರು ಬಹು ಕಾಲದಿಂದ ಮಾಡುತ್ತ ಬಂದ ಪರಿಶೋಧನೆಯಿಂದ ಇದು ಅಂಟುರೋಗವೆಂಬುದು ನಿಶ್ಚಯವಾಯಿತಂತೆ. ತಕ್ಕ ನಿವಾರಣೌಷಧವು ಮಾತ್ರ ಇನ್ನೂ ಗೊತ್ತಾಗಿಲ್ಲ. ರೋಗ ತಗುಲಿದ ಮರಗಳನ್ನು ಕೂಡಲೇ ನಿರ್ಮೂಲಮಾಡಿ ಉಳಿದ ಗಿಡಗಳಿಗೆ ಅದರ ಸೋಂಕು ತಗುಲದಂತೆ ಮಾಡುವುದೇ ಉಪಾಯವೆಂದು ಡಾ|| ಕೋಲ್ಮನ್‌ರವರು ಹೇಳಿರುತ್ತಾರೆ.

ಯುದ್ಧವಾರ್ತೆಯು

(ಪಶ್ಚಿಮರಣರಂಗ.)

ಭೀಕರ ಯುದ್ಧಗಳಷ್ಟು ಉಭಯ ಪಕ್ಷದವರೂ ನಡೆಯಿಸುತ್ತಿದ್ದರೂ ಸ್ಥಲ ಕ್ರಮಣವು ವಿಶೇಷವಾಗಿ ಸಾಗಲು ಯತ್ನವಿಲ್ಲ. ಎರಡುಕಡೆಯವರೂ ಮೊಂಡತನದ ಯುದ್ಧವನ್ನು ಮಾಡುತ್ತಿದ್ದಾರೆ. ಈ ಬೇಸಗೆಯಲ್ಲಿ ಪರಿಣಾಮದ್ಯೋತಕವಾದ ಮಹಾಯುದ್ಧಗಳು ಈ ರಂಗದಲ್ಲಿ ನಡೆಯಬಹುದೆಂಬ ಸೂಚನೆಗಳು ಕಾಣುತ್ತವೆ. ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಕಳೆದವಾರದಲ್ಲಿ ಶತ್ರುಗಳ ಕೆಲ ಕಂದಕಗಳನ್ನೂ ಉನ್ನತ ಪ್ರದೇಶಗನ್ನೂ ಹಿಡಿದುಕೊಂಡ ವಾರ್ತೆಗಳು ಬಂದಿವೆ. ಎಯ್ಸ್‌ನ್ ಲೋಯಿನ ಹತ್ತಿರದ ಶತ್ರುಗಳ ಬುರುಜುಗಳನ್ನೂ ಚೋವುಕ್ಸಿಗೆ ಪೂರ್ವದಲ್ಲಿದ್ದ ಕಂದಕಗಳನ್ನೂ ಫ್ರೆಂಚರು ವಶಪಡಿಸಿಕೊಂಡಿದ್ದಾರೆ. ತಾ|| ೨೨ ರಿಂದ ೨೫ ರವರೆಗೆ ಫ್ರೆಂಚರು ಶತ್ರುಗಳ ೪ ಪಟಾಲಮ್ಮಿನಲ್ಲಿ ೬ ಸಾವಿರ ಮಂದಿ ಸೈನಿಕರನ್ನು ಸೆರೆಹಿಡಿದಿದ್ದಾರೆ. ಆಲ್ಸೇಸಿನಲ್ಲಿ ಫ್ರೆಂಚರು ಶತ್ರುಗಳ ೨ ನೆ ಪಂಕ್ತಿಗೆ ನುಗ್ಗಿದ್ದಾರೆ. ಇಂಗ್ಲೀಷ್ ಸೈನಿಕರು ಶತ್ರುಗಳ ಕೆಲ ಕಂದಕಗಳನ್ನು ಹಿಡಿದು ಎತ್ತಕಡೆಗೂ ಶತ್ರುಗಳನ್ನು ತಮ್ಮ ಸ್ಥಾನಗಳಿಗೆ ನುಗ್ಗಿ ಬರದಂತೆ ತಡೆದಿದ್ದಾರೆ.

ಇಟಲಿ.

ಇಟಲಿಯವರ ಜಯಯಾತ್ರೆಯು ಉತ್ಸಾಹಕರವಾಗಿ ಸಾಗುತ್ತಲೇ ಇದೆ. ಪ್ರತಿಭಟಿಸಿ ಇಟಲಿಯವರ ನುಗ್ಗಾಟವನ್ನು ತಡೆಯಬೇಕೆಂದು ಆಸ್ಟ್ರಿಯನ್ನರು ತಮ್ಮ ಯಾವತ್ತೂ ಸೈನ್ಯದಲ್ಲಿ $\frac{1}{4}$ ಭಾಗವನ್ನು ಈ ರಂಗಕ್ಕೇ ಕಳುಹಿಸಿಕೊಟ್ಟಿದ್ದಾರೆ. ಅನೇಕಾನೇಕ ದೊಡ್ಡ ಫಿರಂಗಿಗಳನ್ನೂ ವಿಷದ ಫಿರಂಗಿಗಳನ್ನೂ ಕಳುಹಿಸಿ, ಬಹಳ ಭೀಕರವಾದ ಯುದ್ಧಗಳನ್ನು ನಡೆಯಿಸುತ್ತಿದ್ದಾರೆ. ಆದರೂ ಇಟಲಿಯವರ ಯುಕ್ತಿ ಸಾಹಸಗಳ ಯುದ್ಧದಿಂದ ಆಸ್ಟ್ರಿಯನ್ನರು ಬಹಳ ನಷ್ಟಪಟ್ಟು ಪರಾಜಿತರಾಗುತ್ತಿದ್ದಾರೆ. ಐಸಾಂಜೋವಿನ ಹತ್ತಿರ ಇದ್ದ ಮುಖ್ಯಸ್ಥಾನಗಳನ್ನೆಲ್ಲಾ ಇಟಲಿಯವರು ವಶಪಡಿಸಿಕೊಂಡುದರಿಂದ ಜನೋವಾ ಕಾಡಿನ ಬೆಟ್ಟಗಳಿಗೆ ಟಿಂಕಲ್ಲಿ ತಮ್ಮ ನವೀನ ರಕ್ಷಕ ಪಙ್ತ್ತಿಯನ್ನು ಆಸ್ಟ್ರಿಯನ್ನರು ಏರ್ಪಡಿಸಿಕೊಂಡಿದ್ದಾರೆ. ಇಟಲಿಯವರಿಗೆ ಇಂಗ್ಲೀಷರ ಫಿರಂಗಿದಳಗಳು ಬಹಳ ಸಹಾಯಮಾಡಿ ಪ್ರೋತ್ಸಾಹಿಸುತ್ತವೆ. ಕಸ್ತಗ್ನಾಕಟ್ಟಾದಿಂದ ಸಮುದ್ರದವರೆಗೂ ವ್ಯಾಪಿಸಿರುವ ಶತ್ರುಸೇನಾಪಙ್ತ್ತಿಗಳನ್ನು ಇಟಲಿ ಸೈನಿಕರು ಭೇದಿಸಿಬಿಟ್ಟರು. ಅನೇಕಾನೇಕವಾದ ಕಂದಕಗಳೂ ಸುರಕ್ಷಿತಸ್ಥಾನಗಳಾದ ಹಲವು ಬೆಟ್ಟಗಳೂ ಇಟಲಿಯವರ ವಶವಾದುವು. ಈ ಕಾರ್ಸೋ ರಣರಂಗದಲ್ಲಿ ನಡೆದ ಭೀಕರ ಯುದ್ಧದಲ್ಲಿ ಎರಡೇ ದಿನಗಳಲ್ಲಿ ಇಟಲಿಯವರು ೯೦೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿದ್ದಾರೆ. ಇವರಲ್ಲಿ ೩೦೦ ಮಂದಿಗಳು ಸೈನಿಕೋದ್ಯೋಗಿಗಳು. ಮೇ ತಾ|| ೧೪ ರಿಂದ ಜೂಲಿಯನ್ ರಂಗವೊಂದರಲ್ಲೇ ೨೩೬೮೧ ಮಂದಿ ಶತ್ರುಸೈನಿಕರನ್ನು ತಾವು ಸೆರೆಹಿಡಿದಿರುವೆವೆಂದೂ ಅವರಲ್ಲಿ ೬೦೪ ಮಂದಿ ಉದ್ಯೋಗಸ್ಥರೆಂದೂ ಇಟಲಿಯವರು ಪ್ರಕಟಿಸಿದ್ದಾರೆ. ಮೊನ್ನೆ ಗುರುವಾರ ಶುಕ್ರವಾರ ಇವೆರಡು ದಿನಗಳಲ್ಲೇ ಇಟಲಿಯವರು ೧೦೨೪೫ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿರುತ್ತಾರೆ. ಅನೇಕಾನೇಕ ಫಿರಂಗಿಗಳೂ ಮದ್ದುಗುಂಡು ಮೊದಲಾದ ಸಾಮಗ್ರಿಗಳೂ ಸಹ ವಿಶೇಷವಾಗಿ ಇಟಲಿಯವರಿಗೆ ಸಿಕ್ಕಿರುತ್ತವೆ. ಪ್ಲಾವಾ, ಕಾರ್ಸೋ, ಐಸಾಂಜೋ ರಂಗಗಳಲ್ಲೆಲ್ಲಾ ಇನ್ನೂ ಅವ್ಯಾಹತವಾಗಿ ಯುದ್ಧಗಳು ನಡೆಯುತ್ತಲೇ ಇವೆ. ಜೂಲಿಯನ್ ರಂಗದಲ್ಲಿ ಬಹಳ ದುರ್ಭೇದ್ಯಗಳಾಗಿದ್ದ ಶತ್ರುಕಂದಕಗಳೆಲ್ಲಾ ಇಟಲಿಯವರ ವಶವಾದುವು. ಮೋಂಟಿ ಸೆಂಟೊ ಎಂಬ ಪುರವೂ ಇಟಲಿಯವರ ವಶವಾಯಿತು. ಟ್ರೀಸ್ಟಿ ಕಡೆಗೆ ನುಗ್ಗುವುದಕ್ಕೆ ಇಟಲಿಯವರಿಗೆ ಮಾರ್ಗವು ಸ್ವಲ್ಪ ಬಿಡುವಾದಂತಾಯಿತು. ಟ್ರೀಸ್ಟಿ ಜಲಸಂಧಿಗೆ ಇಂಗ್ಲೀಷ್ ಯುದ್ಧನೌಕೆಗಳು ಹೋಗಿ, ಆಸ್ಟ್ರಿಯನ್ನರ ಹಿಂಭಾಗದ ಸೈನ್ಯಗಳಮೇಲೂ ಇತರ ಸ್ಥಳಗಳಮೇಲೂ ಫಿರಂಗಿಗುಂಡುಗಳನ್ನು ಹೊಡೆದು ಟ್ರೀಸ್ಟಿ ಪಟ್ಟಣದ ಪಶ್ಚಿಮದ ಗ್ರಾಮಗಳನ್ನೆಲ್ಲಾ ಧ್ವಂಸಮಾಡಿರುತ್ತವೆ.

ತುರ್ಕಿ.

ಜರೂಸಲೇಮ್ ಮೊದಲಾದ ಪಟ್ಟಣಗಳಲ್ಲಿರುವ ಯೂದ (ಯೆಹೂದಿ) ಜನರನ್ನು ತುರ್ಕಿಯವರು ಹಿಂದೆ ಆರ್ಮೀನಿಯನ್ ಕ್ರೈಸ್ತರನ್ನು ಹಿಂಸೆಪಡಿಸಿದಂತೆ ಈಗ ಹಿಂಸೆಪಡಿಸುತ್ತಿರುವರು. ಆದುಕಾರಣ ತಮ್ಮನ್ನು ಕಾಪಾಡಬೇಕೆಂದು ಪಾಲಸ್ಟೈನ್ ಪಟ್ಟಣದ ಯೂಧರು ಸಾಂಘಿಕ ಮಹಾಸಭೆಯವರಿಗೆ ತಂತ್ರೀವಾರ್ತೆಯಮೂಲಕ ಮೊರೆಯಿಟ್ಟುಕೊಂಡಿರುವರು. ಜಾಫ್ಫಾ ಪಟ್ಟಣವನ್ನು ತುರುಕರು ಯುದ್ಧಾವಶ್ಯಕತೆಗಾಗಿ ತೆರವುಮಾಡುತ್ತಿರುವರು. ಪಾಲಸ್ಟೈನಿನಲ್ಲಿ ಗಾಜಾಕ್ಕೆ ಆಗ್ನೇಯದಿಕ್ಕಿನಲ್ಲಿ ತುರ್ಕಿ ಸೈನ್ಯಗಳು ಬಲವಾಗಿ ಕೂಡಿರುವುವು. ಇಂಗ್ಲೀಷ್ ಸೈನ್ಯಗಳು ಇವಕ್ಕೆ ಅಭಿಮುಖವಾಗಿ ಹೋಗುತ್ತಿರುವುವು.

ಆಕಾಶಯಾನಗಳು.

ಮಿತ್ರಮಂಡಲಿಯವರ ಆಕಾಶಯಾನಗಳು ರಣರಂಗದಲ್ಲಿ ಶತ್ರುಗಳ ಮೇಲೆ ಮಹಾವಿಜಯಕಾರಕವಾದ ಸಾಹಸಕಾರ್ಯಗಳನ್ನು ನಡೆಯಿಸಿ, ಶತ್ರುಗಳಿಗೆ ವಿಪರೀತ ನಷ್ಟವನ್ನು ಮಾಡುತ್ತಿರುವಲ್ಲಿ, ಜರ್ಮನ್ ಸಿಪಾಯರ ವೈಮಾನಿಕರು ನಿರುಪದ್ರವರಾದ ಜನರು ವಾಸಮಾಡುವ ಇಂಗ್ಲೆಂಡ್ ದೇಶದ ಪಟ್ಟಣಗಳಮೇಲೆ ಹಾರಿ ಬಂದು ಸಿಡಿಮದ್ದುಗಳನ್ನು ಹಾಕಿ ನಿರಾಯುಧರಾದ ಪ್ರಜೆಗಳನ್ನು ಕೊಲ್ಲುತ್ತಿರುವರು. ಕಳೆದ ತಾ|| ೨೫ ನೆ ಶುಕ್ರವಾರ ಶತ್ರುಗಳ ಇಂಥ ಒಂದು ಪ್ರಯತ್ನವು ಬಹಳ ನಷ್ಟಪಡಿಸಿರುವುದು. ೧೬ ಶತ್ರುವಿಮಾನಗಳು ಆದಿನ ಸಾಯಂಕಾಲ ಇಂಗ್ಲೆಂಡು ದೇಶದ ಆಗ್ನೇಯಭಾಗಕ್ಕೆ ನುಗ್ಗಿ ಅನೇಕಭಾಗಗಳಮೇಲೆ ಸಿಡಿಮದ್ದುಗಳನ್ನು ಹಾಕಿದುವು. ಇವುಗಳು ಒಂದು ಪಟ್ಟಣದಲ್ಲಿ ಜನಗಳು ಕಿಕ್ಕಿರಿದು ವಾಸಮಾಡುವ ಸ್ಥಲದಲ್ಲಿ ವಿಶೇಷವಾಗಿ ಬಿದ್ದುವು. ಅನೇಕಮಂದಿ ಪ್ರಜೆಗಳು ಸತ್ತರು. ಅಂಗಡಿಗಳೂ ಮನೆಗಳೂ ಬಹಳ ಧ್ವಂಸವಾದುವು. ಬಹುಜನರು ಗಾಯಗೊಂಡರು. ಬೀದಿಗಳಲ್ಲಿ ಬಿದ್ದ ಕೆಲಗುಂಡುಗಳು ನೆಲವನ್ನು ಬಾವಿಯಂತೆ ದೊಗರುಮಾಡಿಬಿಟ್ಟಿದ್ದುವು. ಒಂದು ಪಟ್ಟಣದಲ್ಲಿ ೭೬ ಮಂದಿ ಸತ್ತು ೧೭೪ ಮಂದಿಗೆ ಗಾಯವಾಯಿತೆಂದೂ, ಇನ್ನೊಂದು ಪಟ್ಟಣದಲ್ಲಿ ೫೦ ಸಿಡಿಮದ್ದುಗಳು ಬಿದ್ದುದರಲ್ಲಿ ೩೩ ಮಂದಿ ಸತ್ತು ೪೨ ಮಂದಿಗೆ ಗಾಯವಾಯಿತೆಂದೂ ಪ್ರಕಟವಾಗಿದೆ. ಜನಸಮ್ಮರ್ದವುಳ್ಳ ಒಂದು ಬೀದಿಯ ತುಂಬಾ ಸಿಡಿಮದ್ದಿನೇಟಿನಿಂದ ಸತ್ತ ಹೆಣಗಳು ತುಂಡುತುಂಡಾಗಿ ಬಿದ್ದಿದ್ದುವು. ಬಂಡಿಯ ಕುದುರೆಗಳ ಹೊಟ್ಟೆಯಿಂದ ಕರುಳು ಕಿತ್ತು ಚೆಲ್ಲಿದ್ದಿತು. ರಕ್ತಮಾಂಸಗಳ ಮಯವಾಗಿದ್ದ ಆ ಬೀದಿಯು ಕಟುಕರಂಗಡಿಯಂತೆ ನೋಡುವುದಕ್ಕೆ ಭಯಂಕರವಾಗಿದ್ದಿತು. ಶತ್ರುವಿಮಾನಗಳು ಬಹಳ ಎತ್ತರದಲ್ಲಿ ಹಾರುತ್ತಿದ್ದರೂ ಇಂಗ್ಲೀಷರ ಕಾವಲವಿಮಾನಗಳು ಅವುಗಳಮೇಲೆ ಪ್ರತಿಭಟಿಸಿ ಯುದ್ಧಮಾಡಿದುದರಲ್ಲಿ ಶತ್ರುಗಳ ೩ ವಿಮಾನಗಳು ದಗ್ಧವಾದುವು. ಇಂಗ್ಲೀಷರ ವಿಮಾನಗಳೆಲ್ಲವೂ ಸುರಕ್ಷಿತವಾಗಿ ಬಂದುವು.

ಜಲಯಾನಗಳು.

ಕಳೆದ ತಿಂಗಳು ತಾ|| ೨೪ ಕ್ಕೆ ಕಡೆಯಾದ ವಾರದಲ್ಲಿ ಇಂಗ್ಲೀಷ್ ತೀರಗಳಿಗೆ ಹೊರಗಣಿಂದ ೨೬೬೪ ವರ್ತಕನೌಕೆಗಳು ಬಂದು ೨೭೫೯ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ಆ ವಾರದಲ್ಲಿ ೨೫ ಹಡಗುಗಳೂ, ೩ ಅಂಬಿಗರ ದೋಣಿಗಳೂ ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ. ೯ ಹಡಗುಗಳು ಸಬ್ ಮೆರೀನುಗಳ ಏಟಿಗೆ ಸಿಕ್ಕಿಯೂ ತಪ್ಪಿಸಿಕೊಂಡು ಬಂದಿರುತ್ತವೆ. ಇಟಲಿ ರೇವುಗಳಿಗೆ ಆ ವಾರದಲ್ಲಿ ೪೬೦ ಹಡಗುಗಳು ಬಂದು ೩೪೭ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ಇವರ ಒಂದು ದೊಡ್ಡ ಹಡಗು ಮಾತ್ರ ಗುಂಡಿನೇಟಿನಿಂದ ನಷ್ಟವಾಗಿರುವುದು. ಫ್ರೆಂಚರ ರೇವುಗಳಿಗೆ ಆ ವಾರದಲ್ಲಿ ೯೫೧ ಹಡಗುಗಳು ಬಂದು ೧೦೧೬ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ಇವರ ಮೂರು ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ. ಫ್ರೆಂಚರ ಒಂದು ಅಂಬಿಗರ ದೋಣಿಯು ತನ್ನಲ್ಲಿದ್ದ ೧೪ ಮಂದಿ ನಾವಿಕರೊಡನೆ ಶತ್ರುಗಳ ಒಂದು ಸಬ್‌ಮೆರೀನನ್ನು ಪ್ರತಿಭಟಿಸಿ ಓಡಿಸಿಬಿಟ್ಟಿರುವುದೆಂದು ಫ್ರಾನ್ಸ್ ನೌಕಾದಳಾಧಿಕಾರಿಗಳು ಪ್ರಕಟಿಸಿರುವರು. ಫ್ರೆಂಚ್ ನೌಕಾದಳ ಮಂತ್ರಿಯವರು ಕೂಡ ಶತ್ರುಗಳ ಸಬ್ ಮೆರೀನುಗಳ ಹಾವಳಿಯಿಂದ ತಮಗೆ ಅಂಥ ಬಾಧೆಯೇನೂ ತಟ್ಟಲಾರದೆಂಬ ವಿಷಯದಲ್ಲಿ ಲಾಯಿಡ್ ಜಾರ್ಜ್‌ರವರ ಅಭಿಪ್ರಾಯದಂತೆಯೇ ಅಭಿಪ್ರಾಯಪಟ್ಟಿರುವರು. ಈ ಸಂದರ್ಭದಲ್ಲಿ ಅವರು ಪ್ರತಿಯೊಂದು ತಮ್ಮ ಮಾತಿಗೂ ಲೆಕ್ಕದ ಉದಾಹರಣೆಯನ್ನು ಕೊಟ್ಟಿರುವರು. ಹೇಗೆಂದರೆ—ಮಿತ್ರಮಂಡಲಿಯವರಿಗೆ ಯುದ್ಧಾರಂಭದಲ್ಲಿ ಎಷ್ಟು ಹಡಗುಗಳಿದ್ದುವೋ ೧೯೧೭ ನೆ ವರ್ಷದ ಆರಂಭದಲ್ಲೂ ಅಷ್ಟೇ ಇದ್ದುವು. ೧೯೧೭ ನೆ ವರ್ಷದ ಮೊದಲನೆ ೪ ತಿಂಗಳ ಕಾಲದಲ್ಲಿ ಮಿತ್ರಮಂಡಲಿಯವರ ೨೫ ಲಕ್ಷ ಟನ್ ಭಾರ ಹೊರುವಷ್ಟು ಹಡಗುಗಳನ್ನು ಶತ್ರುಗಳು ಮುಳುಗಿಸಿದರು. ಶತ್ರುಗಳು ಇದೇ ಪ್ರಮಾಣದಿಂದ ಮುಂದೆಯೂ ಮುಳುಗಿಸುತ್ತ ಬಂದರೂ ನಾವು ಹೊಸದಾಗಿ ನಿರ್ಮಿಸಿಕೊಳ್ಳುತ್ತಲಿರುವ ಹಡಗುಗಳು ಆ ನಷ್ಟವನ್ನೆಲ್ಲಾ ಭರ್ತಿಮಾಡುವುವು. ಮಾರ್ಚಿ ತಿಂಗಳಲ್ಲಿ ೪೨ ಲಕ್ಷ ಟನ್ನುಗಳ ಭಾರದ ಸಾಮಗ್ರಿಗಳು ಹೊರಗಣಿಂದ ಫ್ರಾನ್ಸ್ ರೇವುಗಳಿಗೆ ಬಂದಿಳಿದಿರುವುವು. ಏಪ್ರಿಲ್ ತಿಂಗಳಲ್ಲಿ ೪೩ ಲಕ್ಷ ಟನ್ನುಗಳ ಸಾಮಾನು ಬಂದಿರುವುದು. ಜರ್ಮನ್ ರೇವುಗಳಿಗಾದರೋ ನಿಜವಾಗಿಯೂ ಯಾವುದೊಂದು ಸಾಮಗ್ರಿಯೂ ಹೊರಗಣಿಂದ ಹೋಗಿ ಇಳಿಯದಂತೆ ನಾವು ಮಾಡಿರುವೆವು. ನಮ್ಮ ವರ್ತಕ ನೌಕೆಗಳ ಮೇಲಿರುವ ಉದ್ಯೋಗಿಗಳನ್ನೆಲ್ಲಾ ಗೋಲಂದಾಜರನ್ನಾಗಿ ಮಾಡಿರುವೆವು. ಸಮುದ್ರತೀರಗಳಲ್ಲೆಲ್ಲಾ ವೈಮಾನಿಕರ ಮತ್ತೂ ವಿದ್ಯುದ್ವಾರ್ತೆಗಳ ಆಲಯವನ್ನೇರ್ಪಡಿಸಿರುವೆವು. ಬರುವ ಅಕ್ಟೋಬರ್ ತಿಂಗಳ ಕೊನೆಯೊಳಗಾಗಿ ನಮ್ಮ ವ್ಯಾಪಾರಿಹಡಗುಗಳನ್ನೆಲ್ಲಾ ಫಿರಂಗಿ ಸಮೇತವಾದುವುಗಳನ್ನಾಗಿ ಮಾಡುವೆವು" ಎಂದು ಹೇಳಿರುತ್ತಾರೆ. ಮೂರು ವಾರಗಳಿಂದಲೂ ಶತ್ರುಗಳ ಸಬ್‌ಮೆರೀನುಗಳ ಹಾವಳಿಯನ್ನು ಬಹಳಮಟ್ಟಿಗೆ ಕುಗ್ಗಿಸಿದ್ದೇವೆಂದು ಇಂಗ್ಲೀಷ್ ಮುಖ್ಯಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ.

ಕೊಬರಿ.

ಪ್ರಪಂಚದಲ್ಲಿರುವ ಎಲ್ಲ ದೇಶಗಳ ಕೊಬರಿಗಿಂತಲೂ ಅಮೇರಿಕಾಕ್ಕೆ ಸೇರಿದ ಪನಾಮಾ ದೇಶದ ಕೊಬರಿಯು ಉತ್ಕೃಷ್ಟವಾದುದು. ಅಲ್ಲಿಯ ಕೊಬರಿಗಳು ಗಾತ್ರದಲ್ಲಿ ದಪ್ಪವಾಗಿರುವುದು ಮಾತ್ರವೇ ಅಲ್ಲದೆ ಕಾಯನ್ನೊಡೆದಾಗ ಕರಟದಿಂದ ಒಳಗಣ ಕಾಯಿಯು ತನ್ನಷ್ಟಿಗೆ ತಾನೇ ಪ್ರತ್ಯೇಕವಾಗಿಹೋಗುವುದು. ಹೀಗಾಗುವುದರಿಂದ ಕೆಲಸದಲ್ಲಿ ಎಷ್ಟೋ ಭಾಗ ಕಡಿಮೆಯಾಗುವುದು. ಈ ಕೊಬರಿಕಾಯಿಯ ಬೆಲೆಯು ಸಾಮಾನ್ಯವಾಗಿ ೧ ಸಾವಿರಕ್ಕೆ ೬೦ ರಿಂದ ೯೦ ರೂ. ಗಳವರೆಗೂ ಆಗುವುದು. ಇದನ್ನು ಕೊಂಡು ಹೊರಕ್ಕೆ ಸಾಗಿಸುವವರು ಕೊಬರಿಯನ್ನು ಪ್ರತ್ಯೇಕಿಸದೆ ಕರಟದ ಸಮೇತವಾಗಿಯೇ ಸಾಗಿಸುವರು. ಈಗ ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿ ಈ ಕೊಬರಿಯು ಸಾ.ರಕ್ಕೆ ೧೦೦ ರೂ.ಗಳಿಗಿಂತಲೂ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದೆ. ಪನಾಮಾದಲ್ಲೂ ಅದರ ಸುತ್ತುಮುತ್ತಣ ಸ್ಥಳಗಳಲ್ಲೂ ಕೆಂದೆಂಗು ಎಲೆಹಚ್ಚೆಯ ಬಣ್ಣದ ತೆಂಗು ಇವೆರಡು ಜಾತಿಗಳೇ ಹೆಚ್ಚು. ಈಗ ಇನ್ನು ೩-೪ ಜಾತಿಯ ಸಸಿಗಳನ್ನು ವೃದ್ಧಿಪಡಿಸುತ್ತಿದ್ದಾರೆ. ಸುಧಾರಿಸಿದ ರೀತಿಯ ವ್ಯವಸಾಯವಿಲ್ಲದೆ ಸಾಮಾನ್ಯತರದ ವ್ಯವಸಾಯವುಳ್ಳ ಮರಗಳಲ್ಲಿ ತಿಂಗಳೊಂದಕ್ಕೆ ಒಂದೊಂದು ಮರದಲ್ಲಿ ೬ ರಿಂದ ೧೦ ಕಾಯಿಗಳವರೆಗೆ ಎಂದರೆ ವರ್ಷಕ್ಕೆ ೭೨ ರಿಂದ ೧೨೦ ಕಾಯಿಗಳವರೆಗೆ ಫಲಿಸುವುವು. ಅಲ್ಲಿಯ ಕೊಬರಿಗೆ ಗಿರಾಕಿಯೂ ಬೆಲೆಯೂ ತುಂಬಾ ಇರುವುದರಿಂದ ತೆಂಗಿನ ವ್ಯವಸಾಯವು ಬಹಳ ಅಭಿವೃದ್ಧಿದಶೆಯಲ್ಲಿದೆ. ಫೆಡರೇಟೆಡ್ ಮಲಯಾ ರಾಷ್ಟ್ರಗಳಲ್ಲಿ ೧೫೫೬೦೦ ಎಕರೆಯ ತೆಂಗಿನ ತೋಟಗಳಿವೆ. ಫಿಲಿಪೈನ್ ದ್ವೀಪಗಳಲ್ಲಿ ೫೫೦೦೦೦ ಎಕರೆಗಳಿಂದ ೬೨೫೦೦೦ ಎಕರೆಗಳಷ್ಟು ತೆಂಗಿನ ತೋಟಗಳಿವೆ. ಈಗ ಜಾವಾ ದ್ವೀಪದಿಂದಲೂ ಅದರಲ್ಲೂ ಮುಖ್ಯವಾಗಿ ಡಚ್ಚರ ಪೂರ್ವ ಇಂಡ್ಯಾ ದ್ವೀಪಗಳಿಂದಲೂ ಕೊಬ್ಬರಿಯ ಸಾಗಿಸುವಿಕೆಯು ಬಹಳ ವೃದ್ಧಿಯಾಗುತ್ತಿದೆ. ೧೯೧೨ ನೆಯ ವರ್ಷದಲ್ಲಿ ಜಾವಾದ್ವೀಪವೊಂದರಿಂದಲೇ ೧ ಲಕ್ಷ ಟನ್ನುಗಳಿಗಿಂತ ಹೆಚ್ಚಾಗಿಯೇ ಕೊಬರಿಯು ಹೊರಕ್ಕೆ ಮಾರಾಟವಾಗಿ ಹೋಗಿದ್ದಿತು. ಯುದ್ಧಾರಂಭವಾಗುವುದಕ್ಕೆ ಮುಂಚೆ ಭರತಖಂಡದ ಕೊಬರಿಗೂ ವಿದೇಶದ ಗಿರಾಕಿಯು ಹೆಚ್ಚಾಗಿದ್ದುದರಿಂದ ಇದಕ್ಕೂ ಬೆಲೆ ಹೆಚ್ಚಾಗಿದ್ದಿತು. ಜರ್ಮನಿ-ಆಸ್ಟ್ರಿಯಾಗಳಿಗೆ ಇಲ್ಲಿಯ ಕೊಬರಿಯೂ ಅದರ ಎಣ್ಣೆಯೂ ಸಾಗುವುದು ಕಟ್ಟಾದಬಳಿಕ ಇದರ ಬೆಲೆಯು ಬಿದ್ದುಹೋಗಿದ್ದಿತು. ಆದರೆ ಈಚೆಗೆ ಅಮೇರಿಕಾಕ್ಕೂ ಗ್ರೇಟ್‌ಬ್ರಿಟನ್ನಿಗೂ ಭರತಖಂಡದ ಕೊಬರಿಯು ಹೆಚ್ಚುಹೆಚ್ಚಾಗಿ ಸಾಗಲು ಉಪಕ್ರಮಿಸಿರುವುದರಿಂದ ಕೊಬರಿಯ ಬೆಲೆಯು ಮೊದಲಿನಂತೆ ಏರಲುಪಕ್ರಮಿಸಿದೆ. ಪ್ರಪಂಚಕ್ಕೆಲ್ಲಾ ತೆಂಗಿನ ಬೆಳಸಿನಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಫಿಲಿಪೈನ್ ದ್ವೀಪಗಳವರೇ ತಮ್ಮಲ್ಲಿ ಈ ಬೆಳಸು ಇನ್ನೂ ಹೀನಸ್ಥಿತಿಯಲ್ಲಿರುವುದೆಂದೂ ಇದನ್ನು ಹೆಚ್ಚಿಸುವುದಕ್ಕೆ ಇನ್ನೂ ವಿಶೇಷ ಪ್ರಯತ್ನಗಳನ್ನು ಮಾಡಬೇಕೆಂದೂ ಸಂಕಲ್ಪಿಸಿರುವಾಗ, ವಿಶೇಷ ಲಾಭಪ್ರದವಾದ ಈ ಬೆಳಸನ್ನು ಅನುಕೂಲವಾದ ವಾಯುಗುಣವುಳ್ಳ ಭರತಖಂಡದ ನಾನಾ ಪ್ರದೇಶಗಳಲ್ಲಿ ಹೆಚ್ಚುಹೆಚ್ಚಾಗಿ ಮಾಡುವುದು ನಮ್ಮ ವ್ಯವಸಾಯಗಾರರಿಗೆ ಹಿತಕರವೆಂಬುದನ್ನು ಹೇಳಬೇಕಾಗಿಲ್ಲ.

ಇತರವಿಷಯಗಳು.

ಅಮೇರಿಕಾದಲ್ಲಿರುವ ಜರ್ಮನ್ ಪ್ರಜೆಗಳೆಲ್ಲಾ ಈಗಣ ಜರ್ಮನ್ ಕೈಸರರನ್ನು ರಾಜ್ಯಭ್ರಷ್ಟರನ್ನು ಮಾಡಿ ಜರ್ಮನಿಯಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿರುತ್ತಾರೆ.

ಗ್ರೀಸ್ ದೇಶದಲ್ಲಿ ಪ್ರಜಾಪ್ರಭುತ್ವಸ್ಥಾಪನೆಯಾಗುವ ಚಿಹ್ನೆಗಳು ಬಲಪಡುತ್ತಿವೆ. "ಗ್ರೀಸಿನ ಪ್ರಜೆಗಳಿಗೆ ರಾಜ್ಯಾಂಗ ಸ್ವಾತಂತ್ರ್ಯವು ಬೇಕಿದ್ದರೆ ಕಾನ್ಸ್ಟಾಂಟೈನ್ ಪ್ರಭುವನ್ನು ರಾಜ್ಯಪದವಿಯಿಂದ ತೊಲಗಿಸಲೇ ಬೇಕು" ಎಂದು ವೆನಿಜುಲಾಸ್‌ರವರೂ ಅವರ ಪಕ್ಷದವರೂ ಸಹ ಬಹಿರಂಗವಾಗಿ ಸಾರುತ್ತಲಿದ್ದಾರೆ.

ಬ್ರೆಜಿಲ್ ದೇಶದ ಒಂದು ಹಡಗನ್ನು ಜರ್ಮನ್ ಸಬ್‌ಮೆರೀನುಗಳು ಮುಳುಗಿಸಿದುವು. "ನಿರ್ವಾಹವಿಲ್ಲದೆನಾವು ಕತ್ತಿಗಟ್ಟುವ ಹೊತ್ತುಬಂದಿದೆ. ನಮ್ಮ ಸ್ಥಲ ಜಲಸೈನ್ಯವನ್ನೆಲ್ಲಾ ಸಿದ್ಧಮಾಡಬೇಕಾಗಿದೆ" ಎಂದು ಬ್ರೆಜಿಲ್ ದೇಶದ ವಿದೇಶಾಂಗ ಮಂತ್ರಿಯವರು ಹೇಳಿರುತ್ತಾರೆ. ನಾವು ಜರ್ಮನಿಯ ಮೇಲೆ ಯುದ್ಧವನ್ನು ಸಾರಿರುವಾಗ ನಮ್ಮಂತೆಯೇ ನೀವೂ ಇರಬೇಕೆಂದು ಅಮೇರಿಕಾದ ಪ್ರೆಸಿಡೆಂಟರು ಬ್ರೆಜಿಲ್ ಪ್ರಭುತ್ವದವರಿಗೆ ತಿಳಿಯಿಸಿದ್ದಾರೆ. ಆಸ್ಟ್ರಿಯಾ ಚಕ್ರವರ್ತಿಗಳಿಗೂ ಮುಖ್ಯಮಂತ್ರಿ ಮೊದಲಾದ ಕೆಲವರಿಗೂ ಅಭಿಪ್ರಾಯಭೇದವುಂಟಾದುದರಿಂದ ಮಂತ್ರಿವರ್ಗದವರು ರಾಜೀನಾಮೆ ಕೊಟ್ಟರು.

ಜರ್ಮನರು ತಟಸ್ಥ ರಾಷ್ಟ್ರಗಳ ಹಡಗುಗಳನ್ನೆಲ್ಲಾ ಹಿಡಿಯುತ್ತಲೂ ಮುಳುಗಿಸುತ್ತಲೂ ಅವರ ವಿರೋಧವನ್ನೆಲ್ಲಾ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಸ್ಪೈಯಿನ್ನಿನವರ ಕೆಲ ಹಡಗುಗಳನ್ನು ಮುಳುಗಿಸಿದ್ದಕ್ಕಾಗಿ ಕ್ಷಮಾಪಣೆ ಕೇಳಿಕೊಂಡಿದ್ದಾರೆ. ಸ್ವೀಡನ್ನಿನವರ ಕೆಲ ಹಡಗುಗಳನ್ನು ಹಿಡಿದೂ ಕೆಲವನ್ನು ಮುಳುಗಿಸಿಯೂ ಇರುವುದರಿಂದ ಸ್ವೀಡನ್ ಪ್ರಜೆಗಳು ಬಹಳ ಕುಪಿತರಾಗಿ ತಮ್ಮ ಪ್ರಭುತ್ವದವರು ತಾಟಸ್ಥ್ಯವನ್ನು ಬಿಟ್ಟು ಮಿತ್ರಮಂಡಲಿಯ ಕಡೆಗೆ ಸೇರಬೇಕೆಂದೂ ತಪ್ಪಿದರೆ ಪ್ರಜೆಗಳೆಲ್ಲಾ ಪ್ರಭುತ್ವವಾದಿಗಳಾಗುವರೆಂದೂ ಸಭಾಮುಖದಲ್ಲಿ ನಿರ್ಧರಿಸಿರುತ್ತಾರೆ. ಸರ್ಕಾರದವರು ತಮ್ಮ ತಾಟಸ್ಥ್ಯ ಪರಿತ್ಯಾಗವನ್ನು ಪ್ರಕಟಿಸಿರುತ್ತಾರೆ.

ವಿದೇಶವೃತ್ತಾಂತಗಳು.

ಇಟಲಿಯವರು ತಮಗೆ ಸೆರೆ ಸಿಕ್ಕಿರುವ ಆಸ್ಟ್ರಿಯನ್ ಸೈನಿಕರಿಂದ ತಮ್ಮ ಹೊಲಗಳನ್ನುಳಿಸುವ ಕೆಲಸವನ್ನು ಮಾಡಿಸಿಕೊಳ್ಳುತ್ತಲಿದ್ದಾರೆ.

ತನ್ನ ಮಗಳ ಮಗನು ರಣರಂಗಕ್ಕೆ ಹೋಗಿದ್ದು ಸಜೀವನಾಗಿ ಬಂದುದನ್ನು ಕಂಡು ೬೮ ವರ್ಷದ ಅಲಿಸ್ ಬಿಷಪ್ ಎಂಬ ಅಜ್ಜಿಯು ಹಿಡಿಯಲಾರದ ಸಂತೋಷದಿಂದ ಕೂಡಲೇ ಮೃತಪಟ್ಟಳು. ಅತಿಹರ್ಷ ಅತಿದುಃಖ ಅತಿಭಯಗಳು ಮೃತಿಪ್ರದಗಳು.

೨೦ ವರ್ಷಕ್ಕೆ ಮೇಲ್ಪಟ್ಟ ಯುವಕರೆಲ್ಲರೂ ತಪ್ಪದೆ ಸೈನ್ಯಕ್ಕೆ ಸೇರಬೇಕೆಂದು ಕನಡಾ ಪ್ರಭುತ್ವದವರು ಶಾಸನವನ್ನು ಪ್ರಕಟಿಸಿರುವುದಲ್ಲದೆ ದೇಶವನ್ನು ಬಿಟ್ಟು ಹೊರಟುಹೋಗಲು ಪ್ರಯತ್ನಿಸಿದ ಪ್ರಜೆಗಳನ್ನು ದೇಶದ ಎಲ್ಲೆಕಟ್ಟಿನಲ್ಲಿ ಹಿಡಿಯಿಸುವುದಕ್ಕಾಗಿ ಕಾವಲುಗಾರರನ್ನು ನಿಯಮಿಸಿದ್ದಾರೆ.

—ಈ ಮೇಲೆ ಕಂಡ ಲೆಕ್ಕದಲ್ಲಿ ಜರ್ಮನಿಗೆ ಸೇರಿದ ಅಧಿನಿವೇಶಗಳ ಸೇನಾನಷ್ಟವೂ ನೌಕಾದಳದ ನಷ್ಟವೂ ಸೇರಿಲ್ಲ. ಅದು ಬೇರೆ ಇದೆ. ಈ ಲೆಕ್ಕದ ಪ್ರಕಟನೆಯು ಜರ್ಮನ್ ಅಧಿಕಾರಿಗಳಿಂದಲೇ ಮಾಡಲ್ಪಟ್ಟುದು. ಇದು ಸರಿಯಾದ ಲೆಕ್ಕವೆಂದೂ ಇನ್ನಷ್ಟನ್ನು ಅವರು ಮುಚ್ಚುಮರೆ ಮಾಡಿರುವರೆಂದೂ ಕೆಲ ಜರ್ಮನರೇ ಹೇಳುತ್ತಲಿದ್ದಾರೆ.

ಸಮುದ್ರದಲ್ಲಿ ಈಜುತ್ತ ಪ್ರಾಣಾಪಾಯಸ್ಥಿತಿಯಲ್ಲಿದ್ದ ಇಬ್ಬರು ಬಾಲಕರನ್ನು ಬದುಕಿಸುವುದಕ್ಕೆ ಹೋಗಿ ಸೂರತ್ ಜಿಲ್ಲೆಯ ಜಿಲ್ಲಾಜಡ್ಜಿ ಮಿ|| ಎಂ. ಬಿ. ತಯಾಬ್ಜಿಯವರು ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಇವರು ಹಿಂದೆ ಬೊಂಬಾಯಿ ಹೈಕೋರ್ಟು ನ್ಯಾಯಮೂರ್ತಿಗಳಾಗಿದ್ದ ಬದ್ರುದೀನ್ ತಯಾಬ್ಜಿಯವರ ಹಿರಿಯ ಮಕ್ಕಳು. ವಯಸ್ಸು ೫೦ ಆಗಿದ್ದಿತು.

ಮೊನ್ನೆವಾರದಲ್ಲಿ ಜರ್ಮನರ ಯುದ್ಧನೌಕೆಗಳು ಡೋವರ್ ಜಲಸಂಧಿಯಲ್ಲಿ ನಡೆಯಿಸಿದ ಯುದ್ಧವು ಫ್ರಾನ್ಸಿನಿಂದ ಮರಳಿ ಲಂಡನ್ನಿಗೆ ಹೋಗುತ್ತಿದ್ದ ಮುಖ್ಯಮಂತ್ರಿ ಲಾಯಿಡ್ ಜಾರ್ಜರನ್ನು ಹಿಡಿಯುವ ಉದ್ದೇಶದುದೇ ಎಂದು ಊಹಿಸಲ್ಪಟ್ಟಿದೆ. ಜಾರ್ಜರವರು ಗೊತ್ತಾಗಿದ್ದ ದಿನ ಹೊರಡದೆ ಆ ಮರುದಿನ ಬೆಳಗ್ಗೆ ಪ್ರಯಾಣಮಾಡಿದುದರಿಂದ ಶತ್ರುಗಳ ಮನೋರಥವು ಈಡೇರಲಿಲ್ಲ.

ಚೀನಾದೇಶದ ಮುಖ್ಯಮಂತ್ರಿಯಾದ ಟೋಯನ್ ಎಷಿಜೂಯವರು ಜರ್ಮನ್ ಪಕ್ಷಪಾತಿಗಳಾಗಿದ್ದಾರೆಂಬ ಕಾರಣದಿಂದ ಚೀನಾದ ಅಧ್ಯಕ್ಷರು ಅವರನ್ನು ಕೆಲಸದಿಂದ ಬಿಡುಗಡೆ ಮಾಡಿದರು. ಈಗ ಚೀನಾದಲ್ಲಿ ಮಿತ್ರಮಂಡಲಿಯೊಡನೆ ಕೂಡಿ ಯುದ್ಧಮಾಡಬೇಕೆಂಬ ಒಂದು ಪಕ್ಷವೂ ಕೂಡದೆಂಬ ಮತ್ತೊಂದು ಪಕ್ಷವೂ ಉದಯಿಸಿವೆ. ಇವೆರಡಕ್ಕೂ ಸ್ವದೇಶದಲ್ಲೇ ಯುದ್ಧವು ಹತ್ತುವಂತೆ ಕಾಣುತ್ತದೆ. ಚೀನಾದೇಶಕ್ಕೆ ದುರದೃಷ್ಟ ಕೂಪದಿಂದ ಉದ್ಧಾರಗೊಳ್ಳುವ ಕಾಲವು ಇನ್ನೂ ಬಂದಿಲ್ಲ.

ಸೊಳ್ಳೆಗಳನ್ನು ನಿರ್ಮೂಲಮಾಡುವ ವಿಷಯದಲ್ಲಿ ಫ್ರಾನ್ಸ್ ದೇಶದ ಶಾಸ್ತ್ರ ಪರಿಷತ್ತಿಗೆ ಒಂದು ವರದಿಯು ಬಂದಿರುತ್ತದೆ. ಆ ದೇಶದ ಗದ್ದೆಗಳಲ್ಲಿ ಸೊಳ್ಳೆಗಳು ಬಹಳ ಹೆಚ್ಚಿಕೊಂಡಿದ್ದುವು. ಡಾ|| ಓಗೆಂಡೆ ಎಂಬುವರು ಇದಕ್ಕೊಂದುಪಾಯವನ್ನು ಮಾಡಿದರು. ಮೀನುಗಳಿಗೆ ಸೊಳ್ಳೆಗಳ ಭಕ್ಷಣದಲ್ಲಿ ಬಹುಪ್ರೀತಿ. ಕೆಮ್ಮೀನುಗಳನ್ನು ೫೦೦ ನ್ನು ತಂದು ನೀರುನಿಂತಿರುವ ಮಡಿಗಳಲ್ಲಿ ಬಿಟ್ಟರು. ಅವು ೫ ತಿಂಗಳ ಕಾಲದಲ್ಲಿ ೧೦ ಸಾವಿರವಾಗಿ ಸೊಳ್ಳೆಗಳನ್ನೂ ಅವುಗಳ ಮೊಟ್ಟೆಗಳನ್ನೂ ನಿರ್ಮೂಲಮಾಡಿಬಿಟ್ಟುವು.

ಜರ್ಮನ್ ಮುಖ್ಯಮಂತ್ರಿಯು ಆಸ್ಟ್ರಿಯ ಪ್ರಭುತ್ವದವರೊಡನೆ ಸಂಧಿ ವಿಷಯವಾಗಿ ಆಲೋಚನೆ ಮಾಡಿದುದರಲ್ಲಿ ಪೋಲಂಡನ್ನು ಮರಳಿ ರಷ್ಯನರಿಗೆ ಒಪ್ಪಿಸಿಬಿಡುವುದು, ಡಾರ್ಡನಲ್ಸಿನಲ್ಲಿ ಪೂರ್ವದಂತೆ ಎಲ್ಲರ ಹಡಗುಗಳೂ ಸಂಚರಿಸುವುದಕ್ಕೆ ಅವಕಾಶಕೊಡುವುದು, ರಷ್ಯನರಿಗೆ ಸಾಲ ಕೊಡುವುದು, ಈ ವಿಷಯಗಳನ್ನು ನಿರ್ಧರಿಸಿದರೆಂದು ಒಬ್ಬ ಜರ್ಮನ್ ಪತ್ರಿಕನು ಬರೆದಿದ್ದಾನೆ. ಆದರೆ ಜರ್ಮನರ ಮಾತನ್ನು ರಷ್ಯನರು ನಂಬುವಹಾಗಿಲ್ಲ. ಪ್ರತ್ಯೇಕ ಸಂಧಿಮಾಡಿಕೊಳ್ಳಲಾಗದೆಂದು ರಷ್ಯಾ ಮಂತ್ರಿಮಂಡಲದವರೆಲ್ಲಾ ನಿರ್ಧರಿಸಿಕೊಂಡರು.

ಜರ್ಮನಿ ದೇಶದಲ್ಲಿ ಈಗ ಅಲ್ಲಲ್ಲಿ ಅಗ್ನಿ ಪ್ರಮಾದಗಳು ವಿಶೇಷವಾಗಿ ಆಗುತ್ತಿವೆ. ಯಾರು ಈ ಅನಾಹುತಕ್ಕೆ ಕಾರಣರೋ ಗೊತ್ತಾಗಲಿಲ್ಲ. ಬರ್ಲಿನ್ ಪಟ್ಟಣದಲ್ಲಿ ಹಲವು ಅಂಗಡಿಮುಂಗಟ್ಟುಗಳು ದಗ್ಧವಾದುವು. ಅದರ ಸಮೀಪದಲ್ಲಿರುವ ಹಲವು ಕಾಡುಗಳು ಬೆಯ್ಯುತ್ತಿವೆ. ಬೆಳೆದ ಬೆಳಸು ಎಲ್ಲಿ ಹಾಳಾಗುವುದೋ ಎಂದು ಪ್ರಜೆಗಳು ತತ್ತರಿಸುತ್ತಿದ್ದಾರೆ. ಬರ್ಲಿನ್ ಪಟ್ಟಣದ ಹತ್ತಿರದ ಅಲ್ಬರ್ ಷಾಟಿನಲ್ಲಿರುವ ಮದ್ದುಗುಂಡುಗಳ ನಿರ್ಮಾಣದ ಕಾರ್ಖಾನೆಯು ಅಗ್ನಿಪ್ರಮಾದದಿಂದಲೇ ಭಯಂಕರವಾಗಿ ಸಿಡಿದು ಹೊತ್ತಿಕೊಂಡು ಬಹಳ ನಷ್ಟವಾಗಿದೆ.

ಜಪಾನರ ನೌಕಾದಳವು ಹಿಂದೆ ಎಮ್ಡನ್ ಮೊದಲಾದ ಶತ್ರುಗಳ ಕ್ರೂಜರುಗಳ ಹಾವಳಿಯನ್ನು ಅಡಗಿಸುವಾಗ್ಗೆ ಪೂರ್ವಸಮುದ್ರದಲ್ಲಿ ಮಾಡಿದ ಸಹಾಯಮಾತ್ರವೇ ಅಲ್ಲದೆ ಈಗಲೂ ಕೂಡ ಅದು ಕೊಲಂಬೋವಿಗೆ ಪೂರ್ವದಲ್ಲಿರುವ ಹಿಂದೂ ಸಮುದ್ರತೀರದಲ್ಲೂ ದಕ್ಷಿಣಮಹಾಸಮುದ್ರದಲ್ಲೂ ಕಾವಲುಮಾಡುತ್ತಿರುವುವು. ಅಲ್ಲದೆ ಮಧ್ಯಧರಾಸಮುದ್ರಕ್ಕೂ ಕೆಲವು ಜಪಾನ್ಯುದ್ಧದ ಹಡಗುಗಳು ಬಂದು ಮಿತ್ರಮಂಡಲಿಯವರ ನೌಕಾದಳದೊಡನೆ ಕೂಡಿ ಶತ್ರು ನೌಕೆಗಳಮೇಲೆ ಯುದ್ಧಮಾಡುತ್ತಿವೆ. ಮಿತ್ರಮಂಡಲಿಗೆ ಇದರಿಂದ ತುಂಬಾ ಸಹಾಯವಾಗಿದೆ.

ರಷ್ಯಾರಾಜಧಾನಿಯಲ್ಲಿರುವ ಬೆಲ್ಜಿಯಂ ರಾಯಭಾರಿಯಿಂದೆ ಎಂ. ವಾಂಡರ್ ವೆಲ್ಡಿಯವರು ಒಬ್ಬ ಪ್ರತಿಕಾಧಿಪತಿಯೊಡನೆ ಮಾತನಾಡುವಾಗ "ಅರ್ಮೀನಿಯಾ, ಟ್ರೆಯಾಂಟೊ, ಅಲ್ಸೆಸ್, ಲೋರೈನ್ ಮೊದಲಾದುವುಗಳನ್ನು ಆಯಾ ಪ್ರಭುತ್ವದವರಿಗೆ ಮರಳಿ ಸ್ವಾಧೀನಪಡಿಸಿಕೊಡುವುದು ಎಂದಿಗೂ ರಾಜ್ಯಾಕ್ರಮಣ ಕಾರ್ಯವೆನಿಸಿಕೊಳ್ಳುವುದಿಲ್ಲ. ಅವರವರ ರಾಜ್ಯವನ್ನವರಿಗೆ ಕೊಟ್ಟಂತಾಗುತ್ತದೆ. ರಷ್ಯಾದ ಜಾರರಂತೆ ಜರ್ಮನಿಯ ಕೈಸರನೂ, ಆಸ್ಟ್ರಿಯಾದ ಚಾರ್ಲಸ್ಸೂ ಕೂಡ ರಾಜ್ಯಪರಿತ್ಯಾಗವನ್ನು ಮಾಡಿದಲ್ಲದೆ ಸಂಧಿಯಾಗುವಹಾಗಿಲ್ಲ" ಎಂದು ನುಡಿದಿರುವರು.

ಕೆಲ ವರ್ಷಗಳ ಹಿಂದೆ ಭರತಖಂಡದಲ್ಲಿ ವ್ಯವಹಾರಕ್ಕೆ ಬಂದಿರುವ ಕೆಲವು ರೂಪಾಯಿಗಳು ಕೃತ್ರಿಮವಾದುವುಗಳೆಂದು ಗೊತ್ತಾಗಿರುವುವು. ಈಗಣ ವಿಚಾರಣೆಯಲ್ಲಿ ಬೆಳ್ಳಿಯ ಬೆಲೆ ಕಡಿಮೆಯಾಗಿದ್ದಾಗ ಜರ್ಮನಿಯವರು ಈ ರೂ.ಗಳನ್ನು ಮುದ್ರಿಸಿ ಭರತಖಂಡಕ್ಕೆ ಕಳುಹಿ ಲಾಭಸಂಪಾದಿಸಿದರೆಂದು ಯೋಚಿಸಲ್ಪಟ್ಟಿದೆ. ಜರ್ಮನರು ತಮ್ಮ ಪೂರ್ವಾಫ್ರಿಕಾದಲ್ಲಿ ವ್ಯವ

ಹಾರಕ್ಕಿಟ್ಟಿರುವ ರೂ.ಗಳೂ ಭರತಖಂಡದ ರೂ.ಗಳು ಸಹ ತೂಕದಲ್ಲಿ ಆಕಾರ ಮೊದಲಾದುವುಗಳಲ್ಲಿ ಒಂದಕ್ಕೊಂದಕ್ಕೆ ಸರಿಹೋಲುತ್ತವೆ. ಭರತಖಂಡದ ರೂ. ನಂತೆಯೇ ಕಡುವನ್ನು ಏರ್ಪಡಿಸಿ ಜರ್ಮನ್ ದಸ್ಯುಗಳು ಈ ಕಪಟವನ್ನು ನಡೆಯಿಸಿದ್ದರು.

ಯುದ್ಧಾರಂಭದಿಂದ ಕಳೆದ ಮಾರ್ಚಿತಿಂಗಳ ಕೊನೆಯವರೆಗೆ ಜರ್ಮನಿಗೆ ಉಂಟಾಗಿರುವ ಸೇನಾನಷ್ಟದ ಗಣನೆಯು ಹೀಗಿದೆ.—

ರಣರಂಗದಲ್ಲೇ ಸತ್ತವರು ಅಥವಾ ಗಾಯಗೊಂಡುದು	
ಹಿಂದಣಿಂದ ಸತ್ತವರು	೯೬೭೭೬೦
ಅಸ್ವಸ್ಥತೆಗೊಂಡಿದ್ದು ಮೃತರಾದವರು	೬೩೯೨೦
ಸೆರೆಯಾಗಿಹೋದವರು	೨೮೧೯೪೩
ಗೊತ್ತಿಲ್ಲದೆಹೋಗಿರುವವರು	೨೫೦೯೧೫
ದೊಡ್ಡ ಗಾಯಗಳನ್ನು ಹೊಂದಿದವರು	೫೫೨೯೧೧
ಸಾಧಾರಣವಾದ ಗಾಯವನ್ನು ಪಡೆದವರು	೩೦೮೮೦೭
ಅಲ್ಪಸ್ವಲ್ಪ ಗಾಯಗೊಂಡವರು	೧೫೫೦೭೮೬
ಏಟುತಿಂದರೂ ಮರಳಿ ಸೈನ್ಯಕ್ಕೆ ಸೇರಿಕೊಂಡವರು	೨೩೪೯೨೪
ಒಟ್ಟು	೪೨೦೨೯೦೬

ನೋಟೀಸ್.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಜನರಲ್ ಕಮಿಟಿ ಮೀಟಿಂಗ್ 1917 ನೆಯ ಇಸವಿ ಜೂನ್ ತಾ|| 17 ನೆಯ ಭಾನುವಾರ ಸಾಯಂಕಾಲ 4 ಘಂಟೆಗೆ ಸರಿಯಾಗಿ ಮ|| ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಲ್ಲಿರುವ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯಲ್ಲಿ ನಡೆಯಬೇಕೆಂದು ನಿರ್ಧಾರವಾಗಿರುವದರಿಂದ ಜನರಲ್ ಕಮಿಟಿ ಮೆಂಬರುಗಳೆಲ್ಲಾ ಆಕಾಲಕ್ಕೆ ದಯಮಾಡಬೇಕಾಗಿ ಪ್ರಾರ್ಥನೆ.

ಮೀಟಿಂಗಿನಲ್ಲಿನ ವಿಷಯಗಳು.

(1) ಸೆಕ್ರಿಟರಿ ರಿಫೋರ್ಟ್. (2) ಆಡಿಟರುಗಳ ರಿಫೋರ್ಟ್. (3) ಲೆಖ್ಖ-(ಕಳೆದ ಜನರಲ್ ಕಮಿಟಿ ಮೀಟಿಂಗ್ ತಾ|| 28.5.1916 ರಿಂದ ತಾ|| 17.6.1917 ರವರೆಗೆ). (4) 1917 ನೆಯ ಮೈಸೂರು ದಸರಾ ಪ್ರಜಾಪ್ರತಿನಿಧಿಸಭೆಗೆ ಫಂಡ್‌ಸಭೆ ಪರವಾಗಿ-ಮೆಂಬರನ್ನು ಚುನಾಯಿಸುವುದು. (5) ಆಫೀಸ್ ಬೇರರ್ಸ್‌ರನ್ನೂ ಮ್ಯಾನೇಜಿಂಗ್ ಕಮಿಟಿ ಮತ್ತು ಜನರಲ್ ಕಮಿಟಿ ಮೆಂಬರುಗಳನ್ನೂ ಚುನಾಯಿಸುವುದು. (6) ಬೆಂಗಳೂರಿನಲ್ಲಿ ವೀರಶೈವ ಸ್ಟೂಡೆಂಟ್ಸ್ ಹೋಂ ಕಟ್ಟಡದ ವಿಚಾರ. ಮೀಟಿಂಗಿನಲ್ಲಿ ಚರ್ಚಿಸಬೇಕಾದ ಹೊಸ ವಿಷಯಗಳನ್ನು 1917 ಜೂನ್ ತಾ|| 15 ರ ಒಳಗೆ ತಲುಪುವಂತೆ ದಯಮಾಡಿ ಕಳುಹಿಸಬೇಕಾಗಿ ಪ್ರಾರ್ಥನೆ. ಬೆಂಗಳೂರ್.

ಪತ್ರವ್ಯವಹಾರ.

ವೀರಶೈವ ವಿದ್ಯಾವರ್ಧಕ ಫಂಡು ಧಾವಣಗೆರೆ.

ಈ ಫಂಡು ಮೈಸೂರು ಸೀಮೆಯ ವೀರಶೈವ ಬಡವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ ಏರ್ಪಡಿಸಲ್ಪಟ್ಟಿದೆಯಷ್ಟೆ! ಆದರೆ—ಈ ಫಂಡು ಸ್ವಲ್ಪ ಇರ್ವ ಕಾರಣ, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ವಾಸವಾಗಿದ್ದು ಇಂಗ್ಲೀಷ್ ಹೈಸ್ಕೂಲ್ ಅಥವಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರಕೃತ ಧನ ಸಹಾಯಮಾಡಬೇಕೆಂದು ಈ ಫಂಡಿನವರು ತೀರ್ಮಾನಮಾಡಿರುವ ಪ್ರಯುಕ್ತ ಅಂತಹ ವಿದ್ಯಾರ್ಥಿಗಳು ಜೂನ್ ತಿಂಗಳ ಕೊನೆಯೊಳಗಾಗಿ ಫಂಡಿನ ಪ್ರೆಸಿಡೆಂಟರವರಿಗೆ ಸ್ಕಾಲರ್‌ಷಿಪ್ ಬಗ್ಗೆ ಅರ್ಜಿ ಬರೆದುಕೊಳ್ಳತಕ್ಕದ್ದು. ವಿಶೇಷ ಸೂಚನೆ:—ಅರ್ಜಿ ಬರೆದುಕೊಳ್ಳತಕ್ಕವರು ತಮ್ಮ ವಾಸಸ್ಥಳ ತಾಲ್ಲೂಕು ಫೋಸ್ಟ್ ಮೊದಲಾದುವುಗಳನ್ನು ಸ್ಪಷ್ಟವಾಗಿ ಬರೆಯತಕ್ಕದ್ದು.

ಸೆಕ್ರಿಟರಿ,
ವೀರಶೈವ ವಿದ್ಯಾವರ್ಧಕಫಂಡು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಗೆ ತಾ|| ೧೬-೧-೧೯೧೭ ರಿಂದ ತಾ|| ೩೧-೩-೧೯೧೭ ರವರೆಗೆ ಜಮಾಬಂದ ತಪ್ಸೀಲ್.

ಮ|| ರಾ|| ಗಳಾದ ದಾವಣಗೆರೆ ಶಿರಸಪ್ಪನವರ ಮಠದ ಷಡಾಕ್ಷರಪ್ಪಯ್ಯನವರ ಪುತ್ರಿ ಚಿ|| ಸೌ|| ಸರ್ವಮಂಗಳಮ್ಮನನ್ನು ಮೈಸೂರು ಮಠದ ಚನ್ನವೀರಯ್ಯನವರ ಸಹೋದರ ಚಿ|| ರಾ|| ವಿರುಪಾಕ್ಷಯ್ಯನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ಷಡಾಕ್ಷರಪ್ಪಯ್ಯನವರಿಂದ ೧೫ ರೂ. ಚನ್ನವೀರಯ್ಯನವರಿಂದ ೫ ರೂ. ಜುಮ್ಲ ಬಂದದ್ದು ೨೦-೦-೦, ದಾವಣಗೆರೆ ಶ್ರೀ ವೀರಶೈವ ವಿದ್ಯಾವರ್ಧಕ ಫಂಡಿನಿಂದ ವಿದ್ಯಾರ್ಥಿವೇತನದಬಗ್ಗೆ ಬಂದದ್ದು ೧೫-೧೧-೦, ಬೆಂಗಳೂರು ತಾಳಕುಂಟೆ ಶಿವಪ್ಪನವರಿಂದ ವಿದ್ಯಾರ್ಥಿವೇತನದ ಬಗ್ಗೆ ಬಂದದ್ದು ೨-೦-೦, ಮಾಗಡಿ ಪೇಟೆ ಯಜಮಾನ್ ಡಿ. ನಂಜುಂಡಯ್ಯನವರ ಮೂಲಕ ಕಲ್ಯದ ಮಠದ ನಿರಂಜನಪ್ಪನವರ ಕುಮಾರ್ತಿಯನ್ನು ದೇವರ ಹೊಸಹಳ್ಳಿ ನಿಜಗಲ್ ಮಠದ ದೊಡ್ಡ ಕಲ್ಲದೇವರ ಪುತ್ರನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ವಧುವಿನಕಡೆಯಿಂದ ೩ ರೂ. ವರನಕಡೆಯಿಂದ ೨-೦-೦, ಒಟ್ಟು ೫-೦-೦, ಮ|| ಹೊಳೆ ಹೊನ್ನೂರು ಶ್ರೀ ಪುರಾಣಮಠದ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳ ಮೂಲಕ ದಾವಣಗೆರೆ ಮಾಗಾನಹಳ್ಳಿ ದೊಡ್ಡಪ್ಪನವರ ಮಕ್ಕಳ ಲಗ್ನದಲ್ಲಿ ೫ ರೂ.ಮಮ್ಮಕ್ಕಳ ಲಗ್ನದಲ್ಲಿ ೭ ರೂ. ಧರ್ಮಲಗ್ನದಲ್ಲಿ ೮ ರೂ. ಜುಮ್ಲ ಬಂದದ್ದು ೨೦-೦-೦, ಹಾಸನ ಡಿ|| ಆಲೂರು ಸಾಹುಕಾರ್ ಶೀಳಿನ ರುದ್ರಪ್ಪನವರಿಂದ ಇವರ ಮಕ್ಕಳು ಚಿ||ರಾ||ಎ. ಎಸ್. ಮಲ್ಲಪ್ಪನವರಿಗೆ ಹೊಳೆ ನರಸೀಪುರದ ಸೋಮನಹಳ್ಳಿ ಬಸಟ್ಟೆಪ್ಪನವರ ಪುತ್ರಿಯನ್ನು ತಂದು ನಡೆಸಿದ ಲಗ್ನದಲ್ಲಿ ವರನಕಡೆಯಿಂದ ೧೫ ರೂ. ವಧುವಿನಕಡೆಯಿಂದ ೫ ರೂ. ಜುಮ್ಲ ಬಂದದ್ದು ೨೦-೦-೦

ಜುಮ್ಲ ರೂ. ೮೨-೧೧-೦

ಜಿ. ಕೆ. ರುದ್ರಾರ್ಯ, ಅಸಿಸ್ಟೆಂಟ್ ಸೆಕ್ರಿಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ; ಬೆಂಗಳೂರು.

ವಾಚಕಶಾಲೆಯುಮಹೋತ್ಸವ; ಬೆಳಗೋಡು, ಮಂಜರಾಬಾದು ತಾಲ್ಲೋಕು.

ತಾ|| ೩೧-೫-೧೯೧೭ ರಲ್ಲಿ ಈ ಊರಿನ ಕೋ ಆಪರೇಟೀವ್ ಸೊಸೈಟಿ ಕಟ್ಟಡದ ಮುಂಭಾಗದಲ್ಲಿ ತಳಿರುತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಮನೋಹರವಾದ ಚಪ್ಪರವು ಏರ್ಪಟ್ಟು ನೋಟಕರ ಮನಸ್ಸನ್ನು ಆನಂದಗೊಳಿಸುತ್ತಿತ್ತು. ಒಳಭಾಗದಲ್ಲಿ ನಮ್ಮನ್ನು ಆಳುವ ಶ್ರೀಮನ್ ಮಹಾರಾಜರವರ ಛಾಯಾಚಿತ್ರವು ನಾನಾವಿಧವಾದ ಪುಷ್ಪಗಳಿಂದ ಅಲಂಕರಿಸಲ್ಪಟ್ಟಿತ್ತು. ಸ್ಥಳೀಯ ದೊಡ್ಡಮನುಷ್ಯರೂ, ಹೋಬಳಿ ಶೇಕದಾರರವರೂ, ಇತರ ಅಜುಬಾಜು ಮುಖಂಡರೂ ಸೇರಿ ೩೦೦ ಜನಗಳವರೆಗೆ ಸಭೆಸೇರಿತ್ತು. ಈ ಸಂತೋಷಕೂಟವು ಈ ಊರಿನ ಸಾಹುಕಾರ್ ಮತ್ತು ಕಾಫಿ ಪ್ಲಾಂಟರ್ ಆದ ಮ|| ರಾ|| ಜಲಮಲೆ ಬಸಟ್ಟಿಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ವಾಚಕಶಾಲೆಯ ರಿಪೋರ್ಟು ಇಲ್ಲಿನ ಸ್ಕೂಲ್‌ಮಾಸ್ಟರ್ ಮತ್ತು ವಾಚಕಶಾಲೆಯ ಆನರರಿ ಸೆಕ್ರಿಟೆರಿಗಳಾದ ಮ|| ರಾ|| ರಾಮಸ್ವಾಮಯ್ಯನವರಿಂದ ಓದಲ್ಪಟ್ಟಿತು. ಅನಂತರ ವಾಚಕಶಾಲೆಯ ಉಪಯೋಗವನ್ನು ಕುರಿತು ಸಕಲೇಶಪುರದ ವೇ|| ಸೂರ್ಯನಾರಾಯಣಶಾಸ್ತ್ರಿಗಳವರಿಂದಲೂ, ಬೆಳಮೆ ಸ್ಕೂಲ್‌ಮಾಸ್ಟರ್‌ರವರಿಂದಲೂ ಸ್ವಾರಸ್ಯವಾದ ಉಪನ್ಯಾಸಗಳು ಹೇಳಲ್ಪಟ್ಟವು. ಅನಂತರ ಸಭಾಧ್ಯಕ್ಷರೂ ಸಭಿಕರೂ ಸೇರಿ ಈ ವಾಚಕಶಾಲೆಗೆ "ರೀಡಿಂಗ್ ರೂಂ, ಬೆಳಗೋಡು" ಎಂಬದಾಗಿ ನಾಮಕರಣಮಾಡಿದರು. ಅನಂತರ ಸಭಾಧ್ಯಕ್ಷರು ವಾಚಕಶಾಲೆಯ ವಿಷಯವಾಗಿ ರಸಗರ್ಭಿತವಾದ ಉಪನ್ಯಾಸವಾದಮೇಲೆ ಸಭಾಧ್ಯಕ್ಷರಿಗೆ ಹಾರತುರಾಯಿಗಳು ಒಪ್ಪಿಸಲ್ಪಟ್ಟಿತು. ಅನಂತರ ಸರ್ವರಿಗೂ ಅಲ್ಪ ಆಹಾರವೂ ಗಂಧಪುಷ್ಪ ತಾಂಬೂಲಾದಿಗಳೂ ಮಕ್ಕಳಿಗೆ ಸಕ್ಕರೆಯೂ ಹಂಚಲ್ಪಟ್ಟಿತು. ಸ್ಕೂಲ್ ಬಾಲಕ ಬಾಲಿಕೆಯರಿಂದ ಶ್ರೀಮದಿಂಡಿಯಾ ಚಕ್ರವರ್ತಿಗಳ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ಮಂಗಳಗೀತಗಳೂ ಹಾಡಲ್ಪಟ್ಟವು. ಆಮೇಲೆ ಸರ್ವರೂ ಸೇರಿ ಈಗ ನಡೆಯುತ್ತಿರುವ ಘೋರವಾದ ಯುದ್ಧದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಜಯವಾಗಲೆಂದು ದೇವರ ಪ್ರಾರ್ಥನೆಯನ್ನು ಮಾಡಿ ಸಭೆ ಬರಖಾಸ್ತುಮಾಡಿದರು. ಪ್ರತ್ಯಕ್ಷದರ್ಶಿ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಆರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯ ಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಳೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಸ್ವಾಸ, ಅಜಗ್ಯ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲಿಶೂಲಿ, ನಡಶೂಲಿ, ವಾತಶೂಲಿ, ರೇಷ್ಮಿ ಜಡ್ಡು, ಗುದ್ದಪ್ಪನ ಬೇನೆ, ಹುರುಳು ಕಜ್ಜಿ, ಗಜಕರ್ಣ, ದದ್ದು ಇಸಬು, ಛಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂತ ಇದರ ಜೊತೆಗೆ ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರಾಗಿ (೬) ವರ್ಷಗಳಾಗಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧಿವು ಹೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿರಿ ಪ್ರಕಾರ ಬಾಟ್ಲಿಯ ಸೋಲಟ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
13 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

೫ನೇ ತರಗತಿ ರೇಖಾಗಣಿತಾದಿಪಾಠ.

ಬೆಲೆ ೪ ಆಣೆ. ಈ ಪುಸ್ತಕವು ಉಪಯುಕ್ತವಾಗಿ ತೋರುತ್ತದೆ. ಎಂದು ಮೈಸೂರು ಮಹಾರಾಜಾ ಕಾಲೇಜ್ ಸಂಸ್ಕೃತ ಪ್ರೊಫೆಸರ್ ಮ|| ರಾ|| ಎಂ. ಹಿರಿಯಣ್ಣಯ್ಯ ಎಂ.ಎ.ಎಲ್.ಟಿ. ಯವರು ಅಭಿಪ್ರಾಯಪಟ್ಟಿರುತ್ತಾರೆ. 1918 ನೇ ೮. ಟೆಕ್ಸ್ಟ್ ೪ ಆಣೆ, ನೋಟ್ಸು ಮ|| ಎಚ್.ಆರ್. ವೆಂಕಟಸುಬ್ಬಾಚಾರ್ಯರದು ೮ ಆಣೆ. ಸದಾಚಾರಸಂಗ್ರಹ ೪ ಆಣೆ, ಆರೋಗ್ಯಶಾಸ್ತ್ರದ ನೋಟ್ಸು ೧ ಆಣೆ, ಪ್ಲೀಡರ್ ಮಲ್ಲಾರಾಧ್ಯರವರ ವ್ಯವಹಾರದರ್ಪಣ ೧|| ರೂಪಾಯಿ ಅವುಗಳ ನಮೂನೆಗಳುಳ್ಳ ಲೇಖ್ಯತತ್ವ ಪ್ರಕಾಶಿಕೆ ೪ ಆಣೆ, ಇಂಗ್ಲೀಷಿನ ೨ ನೆಯ ಪುಸ್ತಕದ ನೋಟ್ಸು ೨|| ಆಣೆ ೩ನೆಯ ಹೊಸದು ೪ಆಣೆ, ೪ನೆಯದು ೧||ಆಣೆ, ೫ ನೆಯದು ೪ ಆಣೆ, ಮಕ್ಕಳ ಭೂವಿವರಣೆ ೨ಆಣೆ, ಎಸ್ಕಾಭೂವಿವರಣೆ ೭ ಆಣೆ. ೧೦ಕ್ಕೆ ೧ಪ್ರತಿ ಹೆಚ್ಚು ಇಂಗ್ಲೀಷ್ ಕನ್ನಡ ಸ್ಕೂಲ್ ಪುಸ್ತಕಗಳೆಲ್ಲವೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್‌ಸನ್ಸ್
1 ವಿದ್ಯಾನಿಧಿ ಬುಕ್‌ಡಿಪೋ ಮೈಸೂರು.

ತುಮಕೂರು ಡಿ|| ಗುಬ್ಬಿ ತಾ|| ಹಾಗಲ್ವಾಡಿಯಲ್ಲಿರುವ ನೀಲಪ್ಪನವರ ಲಿಂಗಪ್ಪನ ಮೂರನೆ ಮಗ ಮಲ್ಲಿಕಾರ್ಜುನಪ್ಪನು ತಿಳಿಸುವದೇನೆಂದರೆ:—ಲಿಂಗಪ್ಪನವರು ನೀಲಪ್ಪನವರೆಂಠ ಇಬ್ಬರು ಸಹೋದರರು ಇವರು ಒಂದೇ ಗೃಹಕೃತ್ಯದಲ್ಲಿದ್ದು ಭಿನ್ನಮನಸ್ಸುಳ್ಳವರಾಗಿ ಕೆಲವು ದಿವಸಗಳಿಂದ ಖಾತೆದಾರನಾಗಿರತಕ್ಕ ಸದರಿ ನೀಲಪ್ಪನವರು ಉಭಯರಿಗೆ ಸೇರಿದ ಚರ ಸ್ಥಿರಸ್ವತ್ತುಗಳನ್ನು ಪರಾಧೀನಮಾಡತಕ್ಕ ಯೋಚನೆಯಲ್ಲಿರುವಂತೆ ಕಾಣಬರುವದ್ದರಿಂದ ಸದರಿ ಸ್ವತ್ತುಗಳನ್ನ ನನ್ನ ತಂದೆ ಲಿಂಗಪ್ಪನವರಿಗೆ ಹಕ್ಕಿರುತ್ತದೆಂಬುದನ್ನ ಸಮಸ್ತರು ತಿಳುವಳಿಕೆಗೆ ತಂದು ಸದರಿ ಸ್ವತ್ತುಗಳ ಪರಾಧೀನದಲ್ಲಿ ನಮ್ಮ ತಂದೆ ಲಿಂಗಪ್ಪನವರ ಒಪ್ಪಿಗೆ ರುಜುಯಿಲ್ಲದೆ ಯಾರಾದರು ಕ್ರಯ, ಭೋಗ್ಯ, ಆಧಾರ, ಹೊಂದಿಕತ್ತವರು ಊರ್ಜಿತಪಡಿಸಿಕೊಳ್ಳಲಾರರೆಂತ ಈ ಮೂಲಕ ತಿಳಿಸಿಕೊಂಡಿರುತ್ತೇನೆ. ಲಿಂಗಪ್ಪನವರ ಮಗ ಮಲ್ಲಿಕಾರ್ಜುನಪ್ಪ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಕಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವೃಷಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ.

೧೯೧೭ ನೆಯ ಇಸವಿ ಜೂನ್ ತಾ|| ೩ ರಿಂದ ೧೯೧೭ ನೆಯ ಜೂನ್ ತಾ|| ೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಜ್ಯೇಷ್ಠ ಶು|| ತ್ರಯೋದಶಿಯಿಂದ ಜ್ಯೇಷ್ಠ ಬ|| ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷಭ ತೇದಿ
3	ಭಾನು	ತ್ರಯೋ	35-14	ಸ್ವಾತಿ	8-48	21
4	[1] ಸೋಮ	ಚತುರ್ದ	33-55	ವಿಶಾಖ	9-55	22
5	[2] ಮಂಗಳ	ಪೌರ್ಣ	31-10	ಅನೂರಾಧ	9-48	23
6	ಬುಧ	ಪಾಡ್ಯ	28-0	ಜ್ಯೇಷ್ಠ	8-36	24
7	[3] ಗುರು	ಬಿದಿಗೆ	23-37	ಮೂಲ	6-27	25
8	[4] ಶುಕ್ರ	ತದಿಗೆ	18-31	ಪೂಷ	3-32	26
9	[5] ಶನಿ	ಚೌತಿ	12-49	ಶ್ರವಣ	56-13	27

(1) ನಮ್ಮಾಳ್ವಾರ್‌ತಿರುನಕ್ಷತ್ರಂ ಸೌರಶ್ರೀನೃಸಿಂಹಜಯಂತೀ. (2) ಸಾವಿತ್ರೀವ್ರತಂ ಭೂಮಿಪೂರ್ಣಿಮಾ ರೌಚ್ಯಮನುಃ. (3) ತಿಥಿದ್ವಯಂ ವಾಕ್ಯರೀತ್ಯಾ ದ್ವಿತೀಯಾತಿಥಿಃ, ಮಾರಹಳ್ಳೀನೃಸಿಂಹಸ್ವಾಮಿರಥಃ ಕಂಚೀವರದರಾಜಸ್ವಾಮಿರಥಃ. (4) ಸಂಕಷ್ಟಚತುರ್ಥೀ ಚತುರ್ಥೀತಿಥಿಃ (ವಾಕ್ಯರೀತ್ಯಾತಿಥಿದ್ವಯಂ). (5) ಮೇಲುಕೋಟೆಯಲ್ಲಿ ಶ್ರೀಕೃಷ್ಣ ಬ್ರಂಹ ಪರಕಾಲಸ್ವಾಮಿಗಳ ತಿರುನಕ್ಷತ್ರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪತ್ರಚ್ಛಸಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ.೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಜೂನ್ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೨೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ.) 46

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗಿರುವವು. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅಧುಷಧದ ಸಂಗಡ ಟಪಾಲ್ ಖರ್ಚು ಬೇರೆ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಶಿರ್ ಉತ್ತರಕನ್ನಡ ಡಿ||.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

32 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚುಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಪಶುಜೀವನ ಚೂರ್ಣ.

ದನಗಳಿಗಾಗುವ ಮಹಾಮಾರಿ ಕುಂದುಬಾಯಿ ಬೇನೆ ಈ ಪ್ರತಿಯೊಂದು ರೋಗದಮೇಲೆ ಅನುಪಾನಭೇದದಿಂದ ಅತ್ಯಂತ ಗುಣಕಾರಿಯಾಗಿರುವುದು ೧೦ ತೊಲೆಯ ಡಬ್ಬಿ ೧ ಕ್ಕೆ ೧೨ ಆಣೆ.

ಇವುಗಳಲ್ಲದೆ ಅರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 28

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಫ್. ಪ್ರಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕಲ್ಬಾದೇವಿ ರೋಡ್ ಮಲ್ಪಿ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

ಶ್ರೀ ಕರ್ಪೂರ ಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಕು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಲಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರಗಳಿಗೆ ರಾಮಬಾಣೌಷಧವು. ಸರ್ವರಿಗೂ ಕೆಮ್ಮು, ನೆಗಡಿ, ಮಲಬಂಧ, ವರಸೆಜ್ವರ, ಶೀತವಾಯು, ಹಲ್ಲುನೋವು, ಅಲಸ್ಯಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟಿ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅದ್ಭುತಗುಣಗಳಿಂದ ಕೂಡಿದ್ದು) ೩೦ ದಿನಕ್ಕೆ ಆಗುವ ಪೊಟ್ಣ ೧ ಆಣೆ. ನಾರಿಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಅಮೋಘಿನಿ (ಸುಖಕ್ಕೂ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರುಬೇಕು. ಹೆಚ್ಚು ಔಷದ ತರಿಸಿದರೆ ಹೆಚ್ಚು ರಿಯಾಯತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
4 ಸದ್ವೈದ್ಯಶಾಲಾ ನಂಜನಗೂಡು.

ವ್ಯಾಪಾರಸ್ಥರಿಗೆ ಇದು ಒಂದು ದೊಡ್ಡಲಾಭಸಮಯ.

ಹತ್ತಿ, ಅರಳೆ, ಅಡಿಕೆ, ಮೆಣಸು, ಬೆಲ್ಲ, ಮೆಣಸಿನಕಾಯಿ, ಕಡಲೆಕಾಯಿ, ಅಕ್ಕಿ, ಬ್ಯಾಳೆ, ರಾಗಿ, ಜೋಳ, ಗೋಧಿ, ಹುಣಸೇಹಣ್ಣು, ಎಣ್ಣೆ, ಹುರುಳಿ, ಯಾಲಕ್ಕಿ, ಲೋಹ ಇನ್ನುಮುಂತಾದ ಯಾವತ್ತು ಪದಾರ್ಥಗಳಿಗೂ, ಇದೇ ವೈಶಾಖಮಾಸದಿಂದ ಫಾಲ್ಗುಣಮಾಸದವರೆಗೂ ಪೇಟೆ ಧಾರಣೆ ಸಮಧಾರಣೆ ಉಂಟಾಗುವುದನ್ನು ಗುಣಿಸಿ, ಬರೆದು ಕಳುಹಿಸುತ್ತೇನೆ. ಅದಕ್ಕೆ ಛಾರ್ಜ್ ೨ ರೂಪಾಯಿಗಳನ್ನು ಮನಿಆರ್ಡರ್ ಮೂಲಕ ಈ ಕೆಳಗಿನ ವಿಳಾಸಕ್ಕೆ ಬೇಗನೆ ರವಾನೆಮಾಡಿರಿ.

ವಿಳಾಸ—ಸೆಕ್ರಿಟರಿ ಬಿ. ಜೆ. ಎಂ. ಅಂಡ್‌ಕಂಪೆನಿ.
4 ಹರಪನಹಳ್ಳಿ, ಬಳ್ಳಾರಿ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜೂನ್ ತಾ|| ೧೦ ನೆಯ ಭಾನುವಾರ.

ಪೌರಸಾಮಾಜಿಕ ಸಭಾಸಮಾವೇಶವು.

ಕಳೆದ ವರ್ಷವೇ ನಾಮಮಾತ್ರಕ್ಕೆ ರಾಜಧಾನಿಯಲ್ಲಿ ಅವತರಿಸಿದ್ದ ಈ ಸಭೆಯು ಈ ವರ್ಷದಲ್ಲಿ ಮೂರ್ತಸ್ವರೂಪಗೊಂಡು ಪ್ರತಿಷ್ಠಿತವಾದುದನ್ನು ಕಂಡು ನಾವು ಸಂತೋಷಿಸುತ್ತೇವೆ. ಪುರಗ್ರಾಮಗಳಲ್ಲಿ ವಾಸಿಸುವ ಪ್ರಜೆಗಳಲ್ಲಿ ಅವರ ಸಕಲ ವಿಧದ ಪುರೋವೃದ್ಧಿಗೂ ಸಾಧಕಗಳಾದ ಉದ್ಯೋಗತತ್ಪರತೆ, ಸೌಶೀಲ್ಯಪ್ರವರ್ಧನ, ಸಮಾಜಸಂಸ್ಕರಣ, ಇವುಗಳನ್ನು ಸಾಧಿಸಬೇಕೆಂಬುದೇ ಈ ಸಭೆಯ ಮುಖ್ಯೋದ್ದೇಶವು. ಕಳೆದ ೩ ನೆಯ ತಾರೀಖಿನ ದಿನ ರಾಜಧಾನಿಯ ಟವರ್ ಹಾಲಿನಲ್ಲಿ ಕೂಡಿದ್ದ ಈ ಸಭೆಯ ಆರಂಭೋತ್ಸವವನ್ನು ಶ್ರೀಮದ್ಯುವರಾಜರವರು ಮಾಡಿದರು. ಸರ್ ವಿಶ್ವೇಶ್ವರಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸರ್ಕಾರದ ಮುಖ್ಯಾಧಿಕಾರಿಗಳು, ನೂರಾರುಮಂದಿ ವಿದ್ಯಾವತಿಯರಾದ ನಾರೀಮಣಿಯರು, ಪುರಪ್ರಮುಖರು ಮೊದಲಾದ ಅನೇಕ ದೊಡ್ಡಮನುಷ್ಯರುಗಳು ಸಭಾಂಗಣದ ತುಂಬಾ ನೆರೆದಿದ್ದರು. ಮ|| ವಿ. ಪಿ. ನರಸಿಂಹಯ್ಯಂಗಾರರು ಸಭಿಕರನ್ನು ಸ್ವಾಗತಿಸಿ ಭಾಷಣಮಾಡಿದರು. ಶ್ರೀಮದ್ಯುವರಾಜರವರಿಗೆ ಸಮಾಜಸಂಸ್ಕರಣದ ವಿಷಯದಲ್ಲಿ ಎಷ್ಟು ಆದರವಿರುವುದೆಂಬ ಸಂಗತಿಯು ಈಗ್ಗೆ ೩ ವರ್ಷಗಳ ಕೆಳಗೆ ಮದ್ರಾಸಿನಲ್ಲಿ ನಡೆದ ಸಮಾಜಸಂಸ್ಕರಣ ಮಹಾಸಭೆಯಲ್ಲಿ ಅಧ್ಯಕ್ಷಪೀಠವನ್ನಲಂಕರಿಸಿ ಅವರು ಮಾಡಿದ ಭಾಷಣದಿಂದಲೇ ವ್ಯಕ್ತವಾಗಿರುತ್ತದೆ. ಅವರು ಈ ಸಭೆಯಲ್ಲೂ ಪೀಠಿಕಾರೂಪವಾಗಿ ಮಾಡಿದ ಭಾಷಣದಲ್ಲಿ—ಈ ಸಮಾವೇಶವು ಜರುಗಿದುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ದೇಶವು ಇತರ ವಿಧದಲ್ಲಿ ಪುರೋವೃದ್ಧಿಗೊಳ್ಳುವಂತೆಯೇ ಸಾಮಾಜಿಕ ವಿಷಯಗಳಲ್ಲೂ ಅಭಿವೃದ್ಧಿಗೊಳ್ಳುವುದು ಅವಶ್ಯಕವೆಂತಲೂ, ಈ ಸಭಾಸ್ಥಾಪನೆಗೆ ಸಂಸ್ಥಾನದ ದಿವಾನರೇ ಮೂಲಭೂತರೆಂತಲೂ, ಮ|| ಪುಟ್ಟಣ್ಣಶೆಟ್ಟರಂಥ ಅನುಭವಸ್ಥರನ್ನೂ ಅಭಿಮಾನಿಗಳನ್ನೂ ಈ ಸಭೆಯ ಮುಖ್ಯಚಾಲಕತ್ವಕ್ಕೆ ಆರಿಸಿಕೊಂಡಿರುವುದು ಶುಭಪ್ರದವೆಂತಲೂ ಸ್ವಾರ್ಥಪರಿತ್ಯಾಗ ಪರಹಿತಾಚರಣಧುರೀಣರಾದ ಅನೇಕಾನೇಕಮಂದಿಗಳು ಈ ಸಭೋದ್ದೇಶವನ್ನು ಸಫಲಗೊಳಿಸಲು ತೊಡಗದಿದ್ದರೆ ಚರಿತಾರ್ಥವಾಗುವುದಿಲ್ಲವೆಂತಲೂ ಮೊದಲಾಗಿ ಅಪ್ಪಣೆಕೊಡಿಸಿದರು.

ಬಳಿಕ ಸರ್. ವಿಶ್ವೇಶ್ವರಯ್ಯನವರು ತಮ್ಮ ಶ್ಲಾಘನೀಯವಾದ ಭಾಷಣವನ್ನು ಮಾಡಿದರು. ಅದರಲ್ಲಿ ಆದ್ಯಂತವಾಗಿಯೂ ಪ್ರಜೆಗಳ ಪುರೋವೃದ್ಧಿಗೆ ಅತ್ಯವಶ್ಯಕವಾದ ಹಿತಬೋಧೆಗಳು ತುಂಬಿ, ಸ್ವದೇಶಜನೋದ್ಧಾರವಿಷಯವಾಗಿ ಸರ್. ವಿಶ್ವೇಶ್ವರಯ್ಯನವರಿಗೆ ಎಷ್ಟು ನಿಗರ್ವವಾದ ಅಭಿಮಾನವೂ ಆದರವೂ ಇರುವುದೆಂಬುದನ್ನು ಬಹು ಸ್ಪಷ್ಟವಾಗಿ ತಿಳಿಯಿಸುತ್ತಿದ್ದಿತು. ಆ ಭಾಷಣವನ್ನೆಲ್ಲಾ ಸಾಂಗವಾಗಿ ಪ್ರಕಟಿಸಲು ಸ್ಥಲಸಾಲದುದರಿಂದ ಮುಖ್ಯವಾದ ಅಂಶಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿರುತ್ತೇವೆ:—

“ದೇಶಾಭ್ಯುದಯಕ್ಕೆ ಮೊದಲನೆಯ ಸಾಧನವು ಸಕ್ರಮವಾದ ಪ್ರಭುತ್ವವಿಧಾನವು. ಪ್ರಜೆಗಳಲ್ಲಿ ನಾಗರಕತಾದಿ ಸಾಮರ್ಥ್ಯಗಳು ವೃದ್ಧಿಗೊಳ್ಳುತ್ತಬಂದಂತೆ ರಾಜ್ಯಕಾರ್ಯದಲ್ಲಿ ಅವರಿಗೆ ಹೆಚ್ಚುಹೆಚ್ಚು ಪಾಲು ದೊರೆಯುವುದು. ಪ್ರಭುತ್ವವು ಸುಕರವಾಗುವುದು. ೨ ನೆಯದು ಆರ್ಥಿಕವಿಷಯ. ಈ ವಿಷಯದಲ್ಲಿ ನಮ್ಮ ದೇಶವು ಬಹಳ ಹಿಂದೆ ಬಿದ್ದಿದೆ. ಈ ಲೋಪನಿವಾರಣೆಗಾಗಿ ೧೯೧೧ ನೆ ವರ್ಷದಲ್ಲೇ ಒಂದು ಸಂಘವು ಏರ್ಪಟ್ಟು ಕೆಲಸಮಾಡುತ್ತಿದೆ. ೩ ನೆಯ ವಿಷಯವೆಂದರೆ ಪೌರಕಾರ್ಯವು. ಪ್ರತಿಯೊಬ್ಬ ಪ್ರಜೆಯೂ ತನ್ನ ನೆರೆಹೊರೆಯ ಜನರಿಗೆ ತಾನು ಮಾಡಬೇಕಾದ ಕರ್ತವ್ಯಗಳೇ ಪೌರಕಾರ್ಯಗಳು. ೪ ನೆಯದು-ಪ್ರಜೆಗಳ ದಿನಚರ್ಯೆಯೂ, ಆಯಾ ಜನವರ್ಗದ ಕುಟುಂಬಾಚಾರಗಳೂ, ಕಾರ್ಯನಿರ್ವಾಹವೂ, ಪರಸ್ಪರ ಸಹಾಯಕತನಗಳೂ ಇವೇ ಸಾಂಘಿಕಾಚಾರಗಳು. ಇವುಗಳೊಳಗೆ ಪೌರಕಾರ್ಯಗಳೆಂದರೆ-ಪ್ರತಿಯೊಬ್ಬ ಪ್ರಜೆಯೂ ತನ್ನ ಮನೆಮುಂಗಟ್ಟುಗಳನ್ನು ನಿರ್ಮಲವಾಗಿಟ್ಟುಕೊಂಡು, ಸಾಲವಂದಿಗನಾಗದೆ, ತನ್ನಕುಟುಂಬದ ಮಕ್ಕಳಿಗೆಲ್ಲಾ ವಿದ್ಯಾಭ್ಯಾಸಮಾಡಿಸಿ, ಆದಾಯಕರವಾದ ವೃತ್ತಿಗಳಲ್ಲಿ ಅವರನ್ನು ತೊಡಗಿಸಬೇಕು. ಹೀಗೆ ಮಾಡುತ್ತ ಬರುವುದರಿಂದ ದೇಶದಲ್ಲಿ ಸೋಂಬೇರಿಗಳ ಸಂಖ್ಯೆಯು ತಗ್ಗಿ ಅಭ್ಯುದಯಸಾಧಕವಾಗುವುದು. ಪುರಜನರು ನ್ಯಾಯ್ಯವಾಗಿ ವಿಧಿಸಲ್ಪಟ್ಟ ಕಂದಾಯ ಸುಂಕಗಳನ್ನು ಕೊಟ್ಟು ಪೌರಕಾರ್ಯಕ್ಕೆ ಸಹಾಯಮಾಡುವುದೇ ಅಲ್ಲದೆ, ಹಾಗೆ ಕೊಡಿದ ಹಣದ ಸದ್ವಿನಿಯೋಗವಾಗುವುದಕ್ಕಾಗಿ ಸಮರ್ಥರಾದ ತಮ್ಮ ಪ್ರತಿನಿಧಿಗಳನ್ನು ಪೌರಕಾರ್ಯನಿರ್ವಾಹಕ್ಕೆ ಒದಗಿಸುವುದು ಅವರ ಕರ್ತವ್ಯವು. ಮತ್ತೂ ತಂತಮ್ಮ ಸ್ಥಳಗಳಲ್ಲಿ ವೈದ್ಯಾಲಯ ಧರ್ಮಾಲಯ ವಿದ್ಯಾಲಯ ಮೊದಲಾದುವುಗಳ ಸ್ಥಾಪನೆಗೆ ಸಾಧ್ಯವಾದ ಸಹಾಯಗಳನ್ನು ಮಾಡಿ, ಅವುಗಳಲ್ಲಿ ನಡೆಯುವ ಕಾರ್ಯಗಳನ್ನು ಪರಿಶೀಲಿಸುತ್ತಿರಬೇಕು. ಮತ್ತೂ ಪ್ರಯಾಣಸೌಕರ್ಯ, ನೂತನವೃತ್ತಿಪರಿಶೋಧನ, ಕೃಷಿವಾಣಿಜ್ಯಶಿಲ್ಪಾದಿ ಪುರೋವೃದ್ಧಿಮಾರ್ಗಪ್ರೋತ್ಸಾಹ, ಮಿತವ್ಯಯಾದರ, ಮೊದಲಾದುವುಗಳಿಂದ ಆರ್ಥಿಕಾಭಿವೃದ್ಧಿಯನ್ನು ಮಾಡುತ್ತ ಬರಬೇಕು. ಹೀಗೆಯೇ ದೇಶಾಭಿವೃದ್ಧಿ ವಿಷಯದಲ್ಲಿಯೂ ಪ್ರತಿಪ್ರಜೆಯೂ ಸಹಾಯಕರಾಗಬೇಕು. ದೇಶಸಾಮಾನ್ಯಕ್ಕೆ ಉಪಯುಕ್ತವಾಗುವ ಪ್ರತಿಕಾರ್ಯದಲ್ಲಿಯೂ ಅನೇಕಾನೇಕಜನರು ಸಹಾಯಕರಾಗಿ ನಿಲ್ಲಬೇಕು. ಸ್ವಾರ್ಥತ್ಯಾಗಪೂರ್ವಕವಾಗಿ ದೇಶಾಭಿಮಾನವನ್ನು ವಹಿಸಿ, ವಿದ್ಯಾವ್ಯಾಪನೆ ವಿಜ್ಞಾನಪ್ರಸಾರ ಮೊದಲಾದ ದೇಶೋಪಕಾರಕ ಕಾರ್ಯಗಳಲ್ಲಿ ಸರ್ಕಾರಕ್ಕೆ ಸಹಾಯಕರಾಗಿರಬೇಕು. ನಮ್ಮಲ್ಲಿ ಪರಾಧೀನತೆ ವಿನಮ್ರತೆ ಇವುಗಳು ಚೆನ್ನಾಗಿ ಬೇರುಬಿಟ್ಟಿವೆ. ಸಹಕಾರಸಾಮರ್ಥ್ಯವೂ, ಬಹುಜನರೊಡನೆ ಕಲೆತು ಸಾಮರಸ್ಯದಿಂದ ಕೆಲಸಮಾಡುವ ಸಾಮರ್ಥ್ಯವೂ, ಬಹುಜನರನ್ನು ತಮ್ಮ ಕೈಕೆಳಗೆ ಇಟ್ಟುಕೊಂಡು ಕೆಲಸ ತೆಗೆದುಕೊಳ್ಳುವ ನೇರ್ಪೂ, ನಮ್ಮಲ್ಲಿ ಹೆಚ್ಚಬೇಕಾಗಿವೆ. ಇತರರು ಮಾಡಿದ ಸತ್ಕಾರ್ಯಗಳನ್ನು ಶ್ಲಾಘಿಸುವ ಸ್ವಭಾವವು ನಮ್ಮಲ್ಲಿ ಕಡಿಮೆ. ಪ್ರಜಾಸೇವಾಸಕ್ತರಾದ ಜನರನ್ನು ಸಂಕುಚಿತಭಾವದಿಂದಲೂ ಕ್ಷುಲ್ಲಕವಾಗಿಯೂ ವಿರಸನಮಾಡುವ ದುರ್ಭಾವವು ಅಧಿಕವಾಗಿದೆ. ಪಾಠಶಾಲೆಗಳಲ್ಲಿ ಮೊದಲಿನಿಂದ ಬೋಧಿಸುವಿಕೆಯಿಂದಲೂ, ಉಪನ್ಯಾಸಗಳನ್ನು ಕೊಡಿಸುವುದರಿಂದಲೂ, ಸಾಂಘಿಕಕಾರ್ಯಗಳಲ್ಲಿ ಅವಶ್ಯಕವಿಧಾನಗಳನ್ನು ನಿರ್ಬಂಧವಾಗಿ ಅನುಸರಿಸುವಂತೆ ಮಾಡುವುದರಿಂದಲೂ, ನಮ್ಮಲ್ಲಿರುವ ಹೇಯಗುಣಗಳು ದೂರವಾಗಿ, ಸದ್ಗುಣಗಳು ನೆಲಸುವಂತೆ ದಿನಕ್ರಮೇಣ ಮಾಡಿಕೊಳ್ಳಬೇಕು.

ನಮ್ಮ ಸಾಂಘಿಕಾಭಿವೃದ್ಧಿಗೆ ವಿಘ್ನಕಾರಿಗಳಾದ ಕೆಲ ಕೆಲ ಮೂಢಾಚಾರಗಳನ್ನು ದೂರೀಕರಿಸಬೇಕು. ಅಥವಾ ಸಂಸ್ಕರಿಸಿಕೊಳ್ಳಬೇಕು. ವರ್ಣವಿಭೇದಗಳು ನಮ್ಮ ಸರ್ವಾನರ್ಥಕ್ಕೂ ಮೂಲಭೂತಗಳಾಗಿವೆ. ಇದರಿಂದ ಹೆಚ್ಚು ಜನರು ಶಾಶ್ವತವಾದ ನೀಚಸ್ಥಿತಿಯಲ್ಲಿ ಬಿದ್ದುಹೋಗಿದ್ದಾರೆ. ನಮ್ಮ ನಿಮ್ನ ಜಾತಿಯವರ ಸ್ಥಿತಿಯು ನಮ್ಮ ಸಮಾಜಕ್ಕೆ ಕೀರ್ತಿಪ್ರದವಾಗಿಲ್ಲ. ಈ ಅನರ್ಥವು ಬಹುಕಾಲದಿಂದ ಬಂದಿದೆ. ಕ್ರೈಸ್ತ ಮಿಷನರಿಗಳು ಅವರ ಉದ್ಧಾರಕ್ಕೆ ಒಳ್ಳೆ ಪ್ರಯತ್ನಮಾಡುತ್ತಿದ್ದಾರೆ. ನಾವು ಆ ನಿಮ್ನ ಜಾತಿಯವರಿಗೆ ನಷ್ಟಪರಿಹಾರವನ್ನು ಕೊಡಬೇಕಾಗಿದೆ. ಅವರಿಗೆ ವಿದ್ಯೆಯು ಸುಲಭಸಾಧ್ಯವಾಗುವಂತೆ ನಾವು ಮಾಡಬೇಕು. ದುರಾಚಾರಗಳನ್ನು ಬಿಟ್ಟು ಸತ್ಪ್ರವರ್ತಕರಾಗುವಂತೆ ಅವರಿಗೆ ಬೋಧಿಸಿ ದಾರಿಗೆ ತರುವುದಕ್ಕೆ ತಕ್ಕ ಸಂಘಗಳನ್ನು ಏರ್ಪಡಿಸಬೇಕು. ನಮ್ಮಲ್ಲಿರುವ ವಿವಾಹವಿಧಿಗಳು ಸಮಾಜಾಭ್ಯುದಯಕ್ಕೆ ಅಭ್ಯಂತರಕಾರಿಗಳಾಗಿವೆ. ಹೆಚ್ಚಾಗಿ ಆಗುತ್ತಿರುವ ಶಿಶುಮರಣಕ್ಕೆ ಬಾಲ್ಯವಿವಾಹವೇ ಕಾರಣವು. ಮಿತವಾದ ಜನಸಂಖ್ಯೆಯುಳ್ಳ ಜನವರ್ಗ (ಬೆಡಗು) ದೊಳಗೇ ವಿವಾಹಸಂಬಂಧವನ್ನು ಮಾಡಿಕೊಳ್ಳಬೇಕೆಂಬ ನಿರ್ಬಂಧವಿರುವುದರಿಂದ ನಮ್ಮ ಸಂತಾನಗಳು ಬಲಹೀನವಾಗುತ್ತಿವೆ. ಸಮಾನಧರ್ಮಾಚಾರಗಳುಳ್ಳ ಅಂತಶ್ಶಾಖೆಗಳೊಳಗಾದರೂ ವಿವಾಹಸಂಬಂಧಕ್ಕೆ ಅಭ್ಯಂತರವಿಲ್ಲದಂತೆ ಮಾಡಿಕೊಳ್ಳಬೇಕು. ಇದರಿಂದ ಕನ್ಯಾವರಶುಲ್ಕಗಳ ಬಾಧೆಯು ತಪ್ಪುವುದು. ವಿತಂತುವಿವಾಹಕ್ಕೆ (ಮುಖ್ಯವಾಗಿ ಬಾಲ ವಿತಂತುಗಳ ಪುನರ್ವಿವಾಹಕ್ಕೆ) ಇರುವ ಅಡ್ಡಿಯು ತೊಲಗಿಹೋಗಬೇಕು. ಆ ಬಾಲವಿತಂತುಗಳನ್ನು ವಪನಾದಿಗಳ ಮೂಲಕ ವಿಕಾರಗೊಳಿಸುವ ಪದ್ಧತಿಯನ್ನು ಕೂಡಲೇ ನಿಲ್ಲಿಸಿಬಿಡಬೇಕು. ಅನರ್ಥಕಾರಿಯಾದ ದುಂದುವೆಚ್ಚನ್ನು ವಿವಾಹಾದಿ ಕರ್ಮಗಳಲ್ಲಿ ಮಾಡುವುದನ್ನು ತಪ್ಪಿಸಬೇಕು. ಕೆಲರು ಈ ದುಂದುವೆಚ್ಚಗಳಿಗಾಗಿ ಮಾಡಿದ ಸಾಲವನ್ನು ತಮ್ಮ ಮರಣಾವಧಿಯೂ ತೀರಿಸಲಾರದೆ ಸಂಕಟಪಡುತ್ತಿರುವರು. ಶ್ರೀಮಂತರಂತೆ ತಾವೂ ವೈಭವದಿಂದ ಶುಭಕಾರ್ಯಗಳನ್ನು ನಡೆಯಿಸಬೇಕೆಂಬ ಭ್ರಮೆಯಿಂದ ಅನೇಕರು ಸಾಲಕ್ಕೆ ಬಲಿಯಾಗಿ ನರಳುವರು. ಅದುಕಾರಣ ಈ ದುಷ್ಪದ್ಧತಿಯನ್ನು ತಪ್ಪಿಸುವುದಕ್ಕೆ ಬಲವಾದ ಪ್ರಯತ್ನವನ್ನು ಮಾಡಬೇಕು. ನಮ್ಮ ಸ್ತ್ರೀಯರನ್ನು ಗೃಹಕೃತ್ಯಗಳ ಜತೆಗೆ ಚಿತ್ರಕಲೆ ಮೊದಲಾದುವುಗಳಲ್ಲಿ ವಿಚಕ್ಷಣೆಯರನ್ನು ಮಾಡಿ, ಅವರ ಆತ್ಮಶಕ್ತಿಯನ್ನು ವಿಕಾಸಗೊಳಿಸಬೇಕು. ಹೀಗೆ ಮಾಡುವುದರಿಂದ ದುರದೃಷ್ಟವಶಾತ್ ಗಂಡನನ್ನು ಕಳೆದುಕೊಂಡವರುಗಳು ಪರೋಪಾಶ್ರಯವಿಲ್ಲದೆ ಸ್ವತಂತ್ರವಾಗಿ ಜೀವಿಸಿಕೊಂಡು ಹೋಗಬೇಕಾಗಿದ್ದರೆ ಅವರುಗಳಿಗೆ ಅನುಕೂಲವಾಗುವುದು. ಪಾಶ್ಚಾತ್ಯರಂತೆ ಸಾಂಘಿಕ ವಿಷಯದಲ್ಲಿ ಬಾಳುವುದು ನಮಗೆ ಅಪೂರ್ವವಿಷಯವೇ ಆಗಿದೆ. ಸಾಂಘಿಕ ಸಮಾವೇಶಗಳಲ್ಲಿ ಪುರುಷರೂ ಸ್ತ್ರೀಯರೂ ಕಲೆತು ಕೆಲಸಮಾಡುವುದು ಇಲ್ಲವೇ ಇಲ್ಲ. ಬಡಬಗ್ಗ ಜನರಲ್ಲಿ ಮಾತ್ರ ಹೆಂಗುಸರೂ ಗಂಡುಸರೂ ಹೆಚ್ಚಾಗಿ ಒಟ್ಟಿಗೆ ಸೇರಿ ಕೆಲಸಮಾಡುವುದುಂಟು. ಪಾಶ್ಚಾತ್ಯರ ಮನೆಗಳು ಸ್ತ್ರೀಯರಿಗೆ ಸ್ವರ್ಗಭವನವಾಗಿದ್ದರೆ, ಭಾರತೀಯರ ಗೃಹಗಳು ನಮ್ಮ ಹೆಂಗುಸರಿಗೆ ಕಾರಾಗೃಹಗಳೇ ಆಗಿರುತ್ತವೆ. ಉತ್ತರಹಿಂದೂಸ್ಥಾನದಲ್ಲಿ ಗವಸಣಿಗೆಯ ಪದ್ಧತಿಯಿಂದ ಒಂದು ಕುಟುಂಬದ ಸ್ತ್ರೀ ಪುರುಷರು ಕೂಡ ಯೌವನಸ್ಥರಾದ ಬಳಿಕ ಒಬ್ಬರ ಮುಖವನ್ನೊಬ್ಬರು ನೋಡಲೂ ಅವಕಾಶವಿರುವುದಿಲ್ಲ. ಸ್ವಕುಟುಂಬದಲ್ಲಿ ಕೇವಲ ಸಮೀಪದ ಬಂಧುವಾಗಿರುವವರನ್ನು ಅಕಸ್ಮಾತ್ತಾಗಿ ಎಲ್ಲಾದರೂ ಕಂಡರೆ ಗುರುತುಹಿಡಿಯುವುದಕ್ಕೂ ಅವಕಾಶವಿಲ್ಲವೆಂದು ಒಬ್ಬರು ನನ್ನೊಡನೆ ಈ ಗವಸಣಿಗೆಯ ಪದ್ಧತಿಯನ್ನು ಕುರಿತು ಪ್ರಸ್ತಾಪಿಸುವಾಗ ದುಃಖದಿಂದ ನುಡಿದಿರುವರು. ನಮ್ಮಲ್ಲಿರುವ ಮಧ್ಯಮತರಗತಿಗೂ ಬಡಕುಟುಂಬಗಳಿಗೂ ಸೇರಿದ ಸ್ತ್ರೀಯರಿಗೆ ಅವರವರ ಸ್ಥಿತಿಗತಿಗಳಿಗನುಕೂಲವಾದ ಕೆಲ ಕೈಗಾರಿಕೆಗಳನ್ನು ಕಲಿಸಿಕೊಡುವುದು ಅವಶ್ಯಕವು. ಸ್ತ್ರೀಯರಲ್ಲಿ ಎಂಥ ಕಾರ್ಯನಿರ್ವಾಹಸಾಮರ್ಥ್ಯವಿರುವುದೆಂಬುದು ಈಗಣ ಯುದ್ಧದಿಂದ ಸ್ಪಷ್ಟವಾಗಿರುತ್ತದೆ. ಅಂಥ ಶಕ್ತಿಯನ್ನು ನಾವು ವ್ಯರ್ಥಗೊಳಿಸಬಾರದು. ನಮ್ಮ ಪೂಜಾಸ್ಥಾನಗಳನ್ನು ಪವಿತ್ರತಮವನ್ನಾಗಿಡಬೇಕು. ಅವುಗಳಿಂದ ನಮ್ಮ ನೈತಿಕಸಂಪತ್ತಿಯು ಅಭಿವೃದ್ಧಿಗೊಳ್ಳುವಂತಿರಬೇಕು. ಮಠ ಮೊದಲಾದ ಅಂಥ ಸ್ಥಳಗಳಿಗೆ ಪವಿತ್ರಚರಿತ್ರರಾದ ಪ್ರಖ್ಯಾತಪುರುಷರನ್ನೇ ಅಧಿಕಾರಿಗಳನ್ನಾಗಿ ಮಾಡಬೇಕು. ಸಮುದ್ರಯಾನ, ಆಹಾರ ಪಾನೀಯ ಇವುಗಳ ವಿಷಯದಲ್ಲಿದ್ದ ನಿರ್ಬಂಧವು ಸಡಿಲವಾಗುತ್ತಿರುವುದು ಸಂತೋಷಪ್ರದವು. ವಿದ್ಯಾರ್ಜನ ಮೊದಲಾದ ದೇಶಹಿತಕಾರ್ಯಗಳಿಗಾಗಿ ವಿದೇಶಗಳಿಗೆ ಹೋಗಿ ಬಂದ ಯೌವನಸ್ಥರನ್ನು ಅನೇಕರು ನಿರಾತಂಕವಾಗಿ ಸಂಘದಲ್ಲಿ ಸೇರಿಸಿಕೊಳ್ಳುತ್ತಿರುವುದು ಹರ್ಷಪ್ರದವು. ವಿದೇಶವಿದ್ಯಾಭ್ಯಾಸೇಚ್ಛುಗಳಿಗೆ ವೇತನವನ್ನು ಕೊಡಲು ಮೈಸೂರು ಸರ್ಕಾರದವರು ಮಾಡಿರುವ ಏರ್ಪಾಟು ಈ ಸಂಸ್ಕರಣಕ್ಕೆ ಎಷ್ಟೋ ಸಹಾಯಕಾರಿಯಾಗಿದೆ. ದಿನಕ್ರಮೇಣ ದೇಶದ ಅನೇಕಾನೇಕ ಉದ್ಯೋಗಿಗಳೂ ವರ್ತಕರು ಮೊದಲಾದ ಪ್ರಜೆಗಳೂ ವಿದೇಶಗಳಿಗೆ ಹೋಗಿ ಬರುವರು. ಹೀಗೆಯೇ ವಿಚಾರಮಾಡಿದರೆ ನಮ್ಮಲ್ಲಿ ಸಂಸ್ಕಾರಗೊಳ್ಳಬೇಕಾದ ವಿಷಯಗಳನೇಕವಿರುವುವು. ಸಂಸ್ಕಾರಗಳು ಕಾಲಕ್ರಮೇಣ ಅವೇ ನಡೆಯುವುವೆಂದು ಪ್ರಜೆಗಳು ತಟಸ್ಥರಾಗಿರುವುದು ಆತ್ಮವಿನಾಶಕ್ಕೆ ಕಾರಣವು. ಸಂಸ್ಕರಣೋದ್ದೇಶದ ಈ ಸಭೆಯು ಅವತರಿಸಿರುವುದು ಶುಭಸೂಚಕವಾಗಿದೆ. ಇದರ ವಿಷಯದಲ್ಲಿ ಶ್ರೀಮನ್ಮಹಾರಾಜರೂ ಯುವರಾಜರೂ ರಾಜಬಂಧುಗಳೂ ಪ್ರಸಿದ್ಧರಾದ ಪ್ರಜಾಪ್ರಮುಖರನೇಕರೂ ಆದರವುಳ್ಳವರಾಗಿದ್ದಾರೆ. ಈ ಸಭೆಯ ಕಾರ್ಯವು ನಿರಂತರವಾಗಿ ನಡೆಯುವುದಕ್ಕೆ ಸ್ಥಾಯಿಸಂಘವು ಬೆಂಗಳೂರಿನಲ್ಲೋ ಮೈಸೂರಿನಲ್ಲೋ ಸ್ಥಾಪಿಸಲ್ಪಡಬೇಕು. ದೇಶದ ತಾಲ್ಲೂಕು ಗ್ರಾಮ ಮೊದಲಾದುವುಗಳಲ್ಲೆಲ್ಲಾ ಇದರ ಶಾಖಾಸಂಘಗಳು ಸ್ಥಾಪಿತವಾಗಬೇಕು. ಆಯಾ ಸಂಘಗಳು ಮುಂದಣವರ್ಷ ಮಾಡಬೇಕಾದ ಕಾರ್ಯಗಳನ್ನು ನಿರ್ಧರಿಸಿಕೊಂಡು ಹಿಂದೆ ನಡೆಯಿಸಿದ ಕಾರ್ಯಗಳನ್ನು ಪರೀಕ್ಷಿಸುತ್ತಿರಬೇಕು. ಕಾರ್ಯಕ್ಕೆ ಬೇಕಾಗುವ ಧನವನ್ನು ಕೂಡಿಸಿಕೊಳ್ಳಬೇಕು. ವೃತ್ತಪತ್ರಿಕೆಗಳು ಈ ಸಂಘೋದ್ದೇಶ ಪ್ರಸಾರಕ್ಕೆ ಸಹಾಯಮಾಡಬೇಕು. ಶಾಸನಸಭೆಗಳಿಂದಲೂ ಸ್ವಲ್ಪ ಸಹಾಯವು ಇದರ ವಿಷಯದಲ್ಲಿ ಆಗಬಹುದು.”

ಹೀಗೆ ದಿವಾನರ ಭಾಷಣವಾದನಂತರ ಕೆಲ ನಾರೀಮಣಿಯರೂ ಕೆಲ ಮಂದಿ ದೊಡ್ಡಮನುಷ್ಯರೂ ಸಭೋದ್ದೇಶಪೋಷಕವಾಗಿ ಅನೇಕ ಭಾಷಣಗಳನ್ನು ಮಾಡಿದರು. ಕೆಲ ನಿರ್ಧಾರಗಳೂ ಆದುವು. ಈ ಸಭೆಯ ಸ್ಥಾಯಿಸಂಘದ ಕಾರ್ಯಾಲಯವು ರಾಜಧಾನಿಯಲ್ಲಿರಬೇಕೆಂತಲೂ, ಇದಕ್ಕೆ ಶ್ರೀಮದ್ಯುವರಾಜರು ಅಧ್ಯಕ್ಷರಾಗಿಯೂ, ಸರದಾರ್ ಕಾಂತರಾಜ ಅರಸಿನವರು ಉಪಾಧ್ಯಕ್ಷರಾಗಿಯೂ, ಮ|| ಎಂ. ವೆಂಕಟಕೃಷ್ಣಯ್ಯನವರು ಕಾರ್ಯದರ್ಶಿಗಳಾಗಿಯೂ ಇರಬೇಕೆಂದು ನಿರ್ಧಾರಿತವಾಯಿತು. ಸಂಘದವರು ಮುಂದಣ ವರ್ಷದಲ್ಲಿ ಮಾಡಬೇಕಾದ ಕೆಲಸಗಳೆಲ್ಲಾ ಚರ್ಚೆಯಿಂದ ಗೊತ್ತುಮಾಡಲ್ಪಟ್ಟುವು.

ಮೇಲೆ ಕಂಡ ದಿವಾನರ ಭಾಷಣದಲ್ಲಿ ಪ್ರಜೆಗಳು ಗಮನಿಸಿ ಆಚರಿಸಬೇಕಾದ ಪೌರಸಾಂಘಿಕಸಂಸ್ಕರಣ ವಿಷಯಗಳೆಲ್ಲಾ ಸಮಾವೇಶಿತವಾಗಿರುತ್ತವೆ. ಸರ್ಕಾರದಧಿಕಾರನಿರ್ವಾಹಕಾರ್ಯಕ್ಕೆ ಸಂಬಂಧಪಡದ ಇಂಥ ಪ್ರಜಾಸಾಮುದಾಯಿಕ ಸ್ವತಂತ್ರವಿಷಯಗಳಲ್ಲಿ ಪ್ರಜೆಗಳೊಡನೆ ತಾವೂ ಒಬ್ಬರಂತೆ ಸೇರಿ ಕೆಲಸಮಾಡುವುದರಲ್ಲಿ ನಮ್ಮ ಸಂಸ್ಥಾನದ ದಿವಾನರೊಳಗೆಲ್ಲಾ ಸರ್. ವಿಶ್ವೇಶ್ವರಯ್ಯನವರೇ ಮೊದಲನೆಯವರೆಂದು ಹೇಳುವಲ್ಲಿ ಅಭ್ಯಂತರವೇನೂ ಇಲ್ಲ. ಅಧಿಕಾರಪ್ರಯುಕ್ತವಾದ ರಾಜ್ಯಕಾರ್ಯಗಳ ಭಾರವೇ ಅಪಾರವಾಗಿದ್ದರೂ, ಅವುಗಳ ಮಧ್ಯದಲ್ಲಿ ಇಂಥ ಪ್ರಜಾಹಿತೈಕಸಾಧಕವಾದ ವ್ಯಾಕ್ತಿಕವಿಷಯಗಳಿಗೂ ಅವಕಾಶಾವಧಾನಗಳನ್ನು ಕಲ್ಪಿಸಿಕೊಂಡು ಮ|| ವಿಶ್ವೇಶ್ವರಯ್ಯನವರು ಮಾಡುತ್ತಿರುವ ದೇಶಸೇವೆಗಾಗಿ ಮೈಸೂರುದೇಶದವರು ಎಷ್ಟು ಕೃತಜ್ಞರಾಗಿದ್ದರೂ ತೀರದು. ಕೋಟಿಕೋಟಿ ವರಹ ಬಾಳತಕ್ಕ ಅವರ ಉಪದೇಶವಚನಗಳನ್ನು ಸಾರ್ಥಕಪಡಿಸುವುದಕ್ಕೆ ಮುಖ್ಯವಾಗಿ ಅಕ್ಷರಜ್ಞರೂ ಲೋಕಪ್ರಗತಿಜ್ಞಾನಸಂಪನ್ನರೂ ಆದ ಜನರು ನಿರ್ಮತ್ಸರಮತಿ ಸೋದರಪ್ರೀತಿಗಳಿಂದ ದೇಶೀಯರಾದ ಅಜ್ಞಜನರನ್ನೆಲ್ಲಾ ಎಚ್ಚರಿಸುತ್ತ ಬರಬೇಕು. ಸಂಸ್ಕರಣ ಪಂಥದಲ್ಲಿ ತಾವು ಮೊದಲು ಅಡಿಯಿಟ್ಟು, ಇತರರಿಗೆ ಮಾರ್ಗದರ್ಶಕರಾಗಿ, ಸಭೋದ್ದೇಶವನ್ನು ಸಾರ್ಥಕಪಡಿಸಿ, ದೇಶೋದ್ಧಾರಮಾಡಬೇಕಾಗಿರುವುದು.

ಸಾಮ್ರಾಜ್ಯಸಭೆಗೆ ಹೋಗಿದ್ದ ಭರತಖಂಡದ ಪ್ರತಿನಿಧಿಗಳು.

ಬಿಕನೀರ್ ಮಹಾರಾಜರು, ಸರ್ ಜೇಮ್ಸ್ ಮೆಸ್ಟನ್, ಸರ್ ಎಸ್. ಪಿ. ಸಿನ್ಹ-ಈ ಮೂವರೂ ಕಳೆದ ತಿಂಗಳು ತಾ|| ೩೧ ನೆಯ ದಿನ ಸುರಕ್ಷಿತರಾಗಿ ಬೊಂಬಾಯಿ ಪಟ್ಟಣಕ್ಕೆ ಬಂದಿಳಿದರು. ಬಹುಜನ ಪ್ರಮುಖರು ಸಮುದ್ರತೀರದಲ್ಲಿ ಕಾದಿದ್ದು, ಹಡಗು ದಡದಲ್ಲಿ ನಿಂತಕೂಡಲೇ ಅದರೊಳಕ್ಕೆ ಹೋಗಿ ಪ್ರತಿನಿಧಿಗಳಿಗೆ ಪುಷ್ಪಹಾರಾದಿಗಳನ್ನೊಪ್ಪಿಸಿ, ಅಧಿಕವಾಗಿ ಮರ್ಯಾದಿಸಿದರು. ಬಿಕನೀರ್ ಮಹಾರಾಜರು ಅವರ ಸಂಸ್ಥಾನಕ್ಕೂ, ಸರ್ ಮೆಸ್ಟನ್ನರವರು ನೈನಿಟಾಲಿಗೂ, ಸರ್ ಸಿನ್ಹರವರು ಕಲ್ಕತ್ತಾಕ್ಕೂ, ಆ ದಿನವೇ ಪ್ರಯಾಣಮಾಡಿದರು. ಕಳೆದ ತಾ|| ೨ ರಲ್ಲಿ ಸರ್ ಸಿನ್ಹರವರು ಕಲ್ಕತ್ತಾದಲ್ಲಿಳಿದಾಗ್ಗೆ ನಿಲ್ದಾಣದಲ್ಲಿ ಪುರಪ್ರಮುಖರನೇಕರು ಇದಿರ್ಗೊಂಡು ಮರ್ಯಾದಿಸಿದರು. ಸರ್ ಮೆಸ್ಟನ್ನರವರು ತಮ್ಮ ಪಂಜಾಬು ಲೆ|| ಗೌರ್ನರ ಪದವಿಯನ್ನೂ, ಸರ್ ಸಿನ್ಹರವರು ವೈಸ್ರಾಯರ ಕಾರ್ಯಕಾರಿ ಸಭೆಯಲ್ಲಿಯ ಸಭಿಕತ್ವವನ್ನೂ ವಹಿಸಿದರು. ಬೊಂಬಾಯಿಯಲ್ಲಿ ಬಿಕನೀರ್ ಮಹಾರಾಜರು ಟೈಮ್ಸ್ ಆಫ್ ಇಂಡಿಯಾ ಪ್ರತಿನಿಧಿಯೊಡನೆ ಮಾತನಾಡಿದಾಗ್ಗೆ ಹೀಗೆ ಹೇಳಿದರು:—“ಈಗಣ ಯುದ್ಧದಿಂದ ಭಾರತೀಯರಿಗೂ ಆಂಗ್ಲರಿಗೂ ಪ್ರೇಮಾತಿಶಯವು ಹೆಚ್ಚಿತು. ಮೈತ್ರಿಯು ಬಹಳ ದೃಢವಾಯಿತು. ಈಗಣ ಯುದ್ಧದಲ್ಲಿ ಭಾರತೀಯ ಯೋಧರು ತಮ್ಮ ಸಾರ್ವಭೌಮರಿಗೋಸ್ಕರ ದೇಹಾಭಿಮಾನವನ್ನು ತೊರೆದು ಯುದ್ಧಮಾಡುತ್ತಿರುವರು. ಆಂಗ್ಲಜನರೆಲ್ಲರೂ ಇವರನ್ನು ಬಹಳ ಕೊಂಡಾಡುತ್ತಿದ್ದಾರೆ. ಇದುವರೆಗೆ ಯಾವಾಗಲೂ ಆಂಗ್ಲಜನರು ಭಾರತೀಯರನ್ನು ಇಷ್ಟುಮಟ್ಟಿಗೆ ಕೊಂಡಾಡಿದುದಿಲ್ಲ. ಈಗಣ ಯುದ್ಧವು ಜಯಕರವಾಗಿ ಮುಗಿದಕೂಡಲೇ ಭಾರತೀಯರ ಕಷ್ಟಗಳು ಸಕಾಲದಲ್ಲಿ ಫಲಿಸುವುವು. ಆಂಗ್ಲಜನರು ಈಗಣ ಯುದ್ಧಕ್ಕಾಗಿ ಸ್ವಾರ್ಥಪರಿತ್ಯಾಗವನ್ನು ಮಾಡಿ ನಡೆಯಿಸುತ್ತಿರುವ ಮಹತ್ಕಾರ್ಯವು ಊಹಿಸಲಶಕ್ಯವು. ಅವರು ಹಾಗೆ ಯುದ್ಧಸಮುದ್ರದಲ್ಲಿ ಮುಳುಗಿದ್ದರೂ ರಾಜನೀತಿಜ್ಞರಾದ ಆ ಆಂಗ್ಲಜನರು ಭಾರತೀಯರ ವಿಷಯದಲ್ಲಿ ಬಹಳ ವಾತ್ಸಲ್ಯವನ್ನೂ ಅಭಿಮಾನವನ್ನೂ ತೋರಿಸುತ್ತಿದ್ದಾರೆ. ಆಂಗ್ಲಪ್ರಜೆಗಳೆಲ್ಲರೂ ಭಾರತೀಯರ ವಿಷಯದಲ್ಲಿ ಬಹಳ ಸಾನುಭೂತಿಯಿಂದ ಪ್ರವರ್ತಿಸುತ್ತಿದ್ದಾರೆ. ಅಧಿನಿವೇಶಗಳವರು ಭರತಖಂಡವನ್ನು ಆಳುತ್ತಿರುವರೆಂದು ನಮ್ಮಲ್ಲಿ ಕೆಲವರು ಬರಿಯ ಭ್ರಮೆಪಟ್ಟುಕೊಂಡಿದ್ದಾರೆ. ಇಂಥ ಸ್ಥಿತಿಯೇನೂ ಕಾಣಬರುವುದಿಲ್ಲ. ಭರತಖಂಡದ ವಿಷಯದಲ್ಲಿ ಅಧಿನಿವೇಶಗಳ ಮುಖ್ಯಮಂತ್ರಿಗಳು ತೋರಿಸಿದ ಸಾನುಭೂತಿಯೂ ಉತ್ತಮಾಭಿಪ್ರಾಯಗಳೂ ಅಸಾಧಾರಣವಾದುವುಗಳು. ಅಧಿನಿವೇಶಗಳ ಪ್ರತಿನಿಧಿಗಳು ನನಗೂ ನನ್ನಮಿತ್ರರಿಗೂ ಹೃದಯರಂಜಕವಾದ ಸ್ವಾಗತವನ್ನು ಮಾಡಿದರು. ಭರತಖಂಡದ ಪ್ರಜೆಗಳೂ ಸಂಸ್ಥಾನಾಧಿಪತಿಗಳೂ ಸಹ ತಾವು ಈಗ ಮಾಡಿದ ಘನಕಾರ್ಯದಿಂದ ಭರತಖಂಡವನ್ನು ಆಂಗ್ಲಸಾಮ್ರಾಜ್ಯಕ್ಕೆ ಶಿರೋಭೂಷಣವಾಗಿ ಪರಿಣಮಿಸುವಂತೆ ಮಾಡಿದರು. ಭಾರತೀಯರ ದೇಶಾಭಿಮಾನವನ್ನೂ ರಾಜಭಕ್ತಿಯನ್ನೂ ನೋಡಿ ಜರ್ಮನರು ನಿರ್ವಿಣ್ಣರೂ ಹತಾಶರೂ ಆದರು.”

ಸರ್ ಸಿನ್ಹರವರು ಅದೇ ಪತ್ರಿಕಾ ಪ್ರತಿನಿಧಿಯೊಡನೆ ಮಾತನಾಡಿದಾಗ ಹೀಗೆ ಹೇಳಿದರು:—“ಆಂಗ್ಲಸಾಮ್ರಾಜ್ಯಕ್ಕೆ ಸೇರಿದ ಕೆಲ ಅಧಿನಿವೇಶಗಳಲ್ಲಿ ಭಾರತೀಯರಿಗೆ ಬೇರೆಬೇರೆ ತೆರದ ತೊಂದರೆಗಳುಂಟು. ಭರತಖಂಡದ ಪ್ರತಿನಿಧಿಗಳು ಇಂಗ್ಲೆಂಡಿಗೆ ಹೋಗಿ ಬಂದುದರಿಂದ ಆ ತೊಂದರೆಗಳ ವಿಷಯವಾಗಿ ಅಧಿನಿವೇಶಗಳ ಮಂತ್ರಿಗಳೊಡನೆ ಚರ್ಚಿಸಲವಕಾಶವಾಯಿತು. ಮತ್ತೂ ಆ ಚರ್ಚೆಗಳಿಂದ ಅವರು ಇನ್ನು ಮುಂದೆ ಅವೆಲ್ಲವನ್ನೂ ಪರಿಹರಿಸದಿದ್ದರೂ ಕೆಲವನ್ನಾದರೂ ತೊಲಗಿಸಬಹುದೆಂದು ಕಾಣುತ್ತದೆ. ಈಗ ನಡೆದಂಥ ಸಾಮ್ರಾಜ್ಯಸಮಾವೇಶಗಳ ದೆಸೆಯಿಂದ ಮುಂದೆ ಅಧಿನಿವೇಶಗಳಲ್ಲಿರುವ ಭಾರತೀಯರ ತೊಂದರೆಗಳೆಲ್ಲಾ ನಿವೃತ್ತವಾಗಬಹುದು. ಇಂಗ್ಲೆಂಡಿನಲ್ಲಿ ಕೂಡಿದ ಸಾಮ್ರಾಜ್ಯಸಭಾ ಸಮಾವೇಶದಿಂದ ಅಧಿನಿವೇಶಗಳಿಗೂ ಸಾಮ್ರಾಜ್ಯಕ್ಕೂ ವಿಶೇಷ ಲಾಭವುಂಟು. ಎಲ್ಲರೂ ಕೂಡಿ ಪರಸ್ಪರ ಚರ್ಚೆಮಾಡುವುದರಿಂದ ಉಂಟಾಗುವಂಥ ಲಾಭವು ವಿಜ್ಞಾಪನೆಗಳಮೂಲಕ ಸಂಭವಿಸಲಾರದು. ಮುಂದೆ ಜರುಗುವ ಸಾಮ್ರಾಜ್ಯ ಸಮಾವೇಶಗಳಿಗೆ ಭಾರತೀಯ ಪ್ರತಿನಿಧಿಗಳನ್ನು ಕರೆಯಿಸಿಕೊಳ್ಳುವುದಕ್ಕೆ ಆಗಿರುವ ಏರ್ಪಾಟು ಶುಭಪ್ರದವಾದುದು. ಇದು ಉತ್ತಮವಾದ ಮಾರ್ಗದಲ್ಲಿ ಏರ್ಪಡಿಸಲ್ಪಟ್ಟ ಪ್ರಶಸ್ತವಾದ ಕಾರ್ಯವಾಗಿದೆ. ಇಂಥ ಸಮಾವೇಶಗಳಲ್ಲಿ ನಾವೆಲ್ಲರೂ ಕೂಡಿ ಪ್ರಸಂಗಿಸುವುದರಿಂದ ಪರಸ್ಪರ ವಿಶ್ವಾಸವು ದೃಢವಾಗುವುದಲ್ಲದೆ ಭಿನ್ನಾಭಿಪ್ರಾಯಗಳು ದೂರವಾಗುವುವು. ಈಗ ನಡೆದ ಸಮಾವೇಶದ ವಿಷಯವನ್ನು ಪರಿಶೀಲಿಸಿ ನೋಡಿದರೆ ಆ ಸಮಾವೇಶದ ಉದ್ದೇಶವೆಲ್ಲವೂ ಫಲಿಸಿತೆಂತಲೇ ನಾವು ಹೇಳಿಕೊಳ್ಳಬಹುದು. ಈಗಣ ಯುದ್ಧದಲ್ಲಿ ಸಾಮ್ರಾಜ್ಯೋದ್ಧಾರಾರ್ಥವಾಗಿ ಭಾರತೀಯರು ಮಾಡುತ್ತಿರುವ ಸ್ವಾರ್ಥತ್ಯಾಗದಿಂದಲೂ ಇತರ ಕಾರಣಗಳಿಂದಲೂ ಸಹ ಭಾರತೀಯರೆಂದರೆ ಆಂಗ್ಲಜನರು ಬಹಳ ಸಾನುಭೂತಿಯನ್ನೂ ಪ್ರೇಮವನ್ನೂ ತೋರಿಸುತ್ತಿದ್ದಾರೆ.”

ಈ ಮೂವರು ಭಾರತೀಯ ಪ್ರತಿನಿಧಿಗಳೂ ಬೊಂಬಾಯಿಗೆ ಬಂದಿಳಿದ ದಿವಸ ವೈಸ್ರಾಯರವರಿಗೆ ಒಂದು ತಂತಿವಾರ್ತೆಯಮೂಲಕ ತಮ್ಮ ಪ್ರಯಾಣದ ಪರಿಣಾಮವನ್ನು ಕುರಿತು ಹೀಗೆ ತಿಳಿಯಿಸಿಕೊಂಡಿರುತ್ತಾರೆ:—“ನೀವು ನಮ್ಮನ್ನು ಕಳುಹಿಸಿಕೊಟ್ಟಿದ್ದ ಕಾರ್ಯವನ್ನು ಮುಗಿಸಿಕೊಂಡು ನಾವು ಸುರಕ್ಷಿತವಾಗಿ ಬೊಂಬಾಯಿಗೆ ಬಂದು ಸೇರಿರುತ್ತೇವೆ. ನಾವು ನಿಯುಕ್ತವಾದ ಕಾರ್ಯೋದ್ದೇಶದಮೇಲಿದ್ದಾಗ ಶ್ರೀ ಸಾರ್ವಭೌಮರವರು ನಮ್ಮನ್ನು ಆದರಿಸಿದುದೇ ಮೊದಲಾದ ವಿಷಯಗಳು ನಿಮಗೆಲ್ಲಾ ತಿಳಿದೇ ಇದೆ. ಆಂಗ್ಲರಾಜದಂಪತಿಗಳು ನಮ್ಮ ವಿಷಯದಲ್ಲಿ ತೋರಿಸಿದ ಸಾನುಭೂತಿಯಿಂದ

ಭರತಖಂಡವು ಬಹಳ ಗೌರವಪಡಿಸಲ್ಪಟ್ಟಿತು. ಆಂಗ್ಲರಾಜ ದಂಪತಿಗಳೂ, ಸಾಮ್ರಾಜ್ಯಯುದ್ಧಸಭೆಗೆ ಬಂದಿದ್ದ ಅಧಿನಿವೇಶಗಳ ಪ್ರತಿನಿಧಿಗಳೂ ಸಹ ನಮ್ಮನ್ನು ಬಹಳ ಸನ್ಮಾನದಿಂದ ಆದರಿಸಿದರೆಂದು ನಿಮಗೆ ತಿಳಿಯಿಸುವುದಕ್ಕೆ ಸಂತೋಷಿಸುತ್ತೇವೆ. ಆ ಸಭೆಯಲ್ಲಿ ಯುದ್ಧವನ್ನು ಇನ್ನು ಮುಂದೆ ಹೇಗೆ ಘನತರವಾಗಿ ನಿರ್ವಹಿಸಬೇಕೆಂಬ ವಿಷಯವೇ ಮುಖ್ಯವಾಗಿ ಚರ್ಚಿಸಲ್ಪಟ್ಟಿತಾದರೂ ಆಗಾಗ್ಗೆ ಭರತಖಂಡದ ವಿಷಯಕವಾದ ಚರ್ಚೆಗಳೂ ಬಂದಿದ್ದುವು. ಆ ಚರ್ಚೆಯು ನಡೆಯುವಾಗ ಭರತಖಂಡದ ಪ್ರಭುತ್ವದಮೇಲೆ ಬಹಳ ಸ್ನೇಹಭಾವದಿಂದಲೂ, ಭಾರತೀಯ ಪ್ರಜೆಗಳ ವಿಷಯವಾಗಿ ಉತ್ತಮವಾದ ಸಾನುಭೂತಿಯಿಂದಲೂ, ಭರತಖಂಡಕ್ಕೂ ಉಳಿದ ಇತರ ಸಾಮ್ರಾಜ್ಯಭಾಗಗಳಿಗೂ ಇರುವ ಮನಸ್ಸ್ಪರ್ಧೆಯನ್ನು ಅಳಿಸಿ ಮೈತ್ರಿಯನ್ನು ಅಭಿವೃದ್ಧಿಪಡಿಸಬೇಕೆಂಬ ನಿರ್ಮಲವಾದ ಮನೋಭಾವದಿಂದಲೂ ವಾದಪ್ರತಿವಾದಗಳು ಜರುಗಿದುವು. ಈಗಣ ಯುದ್ಧದಲ್ಲಿ ಭಾರತೀಯರು ಮಾಡಿದ ಸಹಾಯವು ಬಹಳ ಕೃತಜ್ಞತಾಪೂರ್ವಕ ಒಪ್ಪಿಕೊಳ್ಳಲ್ಪಟ್ಟಿತು. ಇನ್ನು ಮುಂದೆಯೂ ಹಾಗೆಯೇ ಇವರು ತಮ್ಮ ಶಕ್ತಿವಂಚನೆಯಿಲ್ಲದೆ ಸಹಾಯಮಾಡುವರೆಂದೂ ನಂಬಿಕೊಂಡರು. ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ಅಂತರಂಗಿಕ ಸಭೆಗಳಿಗೆ ಭಾರತೀಯ ಪ್ರತಿನಿಧಿಗಳ ಆಗಮನವು ಸಕಲ ವಿಧದಿಂದಲೂ ಆದರಿಸಲ್ಪಟ್ಟಿದ್ದಿತು. ಇನ್ನು ಮುಂದೆ ಜರುಗುವ ಸಾಮ್ರಾಜ್ಯಸಭೆಗಳೆಲ್ಲದರಲ್ಲೂ ಭರತಖಂಡಕ್ಕೆ ಪ್ರಾತಿನಿಧ್ಯವು ಕೊಡಲ್ಪಡುವುದೆಂದು ಮಾಡಲ್ಪಟ್ಟಿರುವ ತೀರ್ಮಾನವು ನಿಮಗೆಲ್ಲಾ ತಿಳಿದೇ ಇದೆ. ನಾವು ಇಂಡ್ಯಾ ಸ್ಟೇಟ್ ಸೆಕ್ರೆಟರಿಗಳಿಗೆ ಕೇವಲಸಹಾಯಕರಾಗಿ ಮಾತ್ರವೇ ಹೋದವರಾಗಿ ಭಾವಿಸಲ್ಪಡಲಿಲ್ಲ. ಎರಡುವಿಧದ ಎಂದರೆ (ವಾರ್ ಕ್ಯಾಬಿನೆಟ್ಟು, ವಾರ್ ಕೌನ್ಸಿಲು ಎಂಬ) ೨ ಯುದ್ಧಸಭೆಗಳಿಗೂ ಸ್ಟೇಟ್ ಸೆಕ್ರೆಟರಿಯವರೊಡನೆ ಕೂಡಿ ಹೋಗಿದ್ದೆವೆಂಬ ಸಂಗತಿಯನ್ನು ತಿಳಿದುಕೊಳ್ಳುವುದು ನಿಮಗೆ ಆನಂದಕರವಾಗದೆ ಇರಲಾರದು. (ಭರತಖಂಡದ ಪ್ರತಿನಿಧಿಗಳು ವಾರ್ ಕೌನ್ಸಿಲಿಗೆ ಮಾತ್ರವೇ ಸೇರಿಸಲ್ಪಟ್ಟರು ಎಂದು ಮೊದಲಾಗಿ ಅಮೃತಬಜಾರ್ ಪತ್ರಿಕೆಯಲ್ಲಿ ಬಂದಿದ್ದ ಆಕ್ಷೇಪದ ಲೇಖನವು ನಿರಾಧಾರವಾದುದೆಂದು ಇದರಿಂದ ಗೊತ್ತಾಗುತ್ತದೆ.) ಇವೆರಡು ಸಭೆಗಳಲ್ಲೂ ಚರ್ಚೆಗೆ ಬಂದ ಪ್ರತಿಯೊಂದಂಶಗಳ ಸಂಬಂಧವಾಗಿಯೂ ಚರ್ಚಿಸುವುದಕ್ಕೆ ನಮಗೆ ಸಂಪೂರ್ಣವಾದ ಸ್ವಾತಂತ್ರ್ಯವು ಕೊಡಲ್ಪಟ್ಟಿದ್ದಿತು. ಅತ್ಯುತ್ತಮವಾದ ಮರ್ಯಾದೆಯಿಂದಲೂ ಆಲೋಚನೆಯಿಂದಲೂ ನಮ್ಮನ್ನು ಆದರಿಸಿದುದಕ್ಕಾಗಿ ಸ್ಟೇಟ್ ಸೆಕ್ರೆಟರಿ ಮಿ|| ಚೇಂಬರ್ಲೇನರಿಗೆ ನಾವು ಕೃತಜ್ಞರಾಗಿದ್ದೇವೆ.”

ಈ ವಾರ್ತೆಗೆ ವೈಸ್ರಾಯರು ಕೊಟ್ಟ ಉತ್ತರದಲ್ಲಿ—“ನಿಮ್ಮಿಂದ ನನಗೆ ಬಂದ ವಾರ್ತೆಯು ಭರತಖಂಡಕ್ಕೆಲ್ಲಾ ಆಹ್ಲಾದಕರವಾದುದು. ಭರತಖಂಡದ ಸಕಲ ಜನವರ್ಗದವರೂ ನೀವು ಮಾಡಿಬಂದ ಕಾರ್ಯಭಾಗವನ್ನು ಗ್ರಹಿಸಿದಂತೆಯೂ ನೀವು ಹಿಂತಿರುಗಿ ಬಂದುದಕ್ಕಾಗಿಯೂ ತಮ್ಮ ಸಂತೋಷವನ್ನು ನನ್ನ ಮೂಲಕ ನಿಮಗೆ ತಿಳಿಯಪಡಿಸಲು ನನ್ನನ್ನು ಕೋರುವರೆಂದು ನಂಬುತ್ತೇನೆ. ನೀವು ನನ್ನ ಸಂದೇಶವನ್ನು ವಿಶ್ವಾಸಪೂರ್ವಕವಾಗಿಯೂ ಚೆನ್ನಾಗಿಯೂ ನೆರವೇರಿಸಿರುತ್ತೀರಿ.”

ಈ ಲೇಖನ ಪ್ರತಿಲೇಖನಗಳನ್ನು ಭಾರತೀಯ ಪ್ರಜೆಗಳ ತಿಳಿವಳಿಕೆಗಾಗಿ ಇಂಡ್ಯಾ ಸರ್ಕಾರದವರೇ ಪ್ರಕಟಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಕಳೆದವಾರದಲ್ಲಿ ರಾಜಧಾನಿಯಲ್ಲಿ ಮಳೆಯೇನೂ ಆಗಲಿಲ್ಲ. ಆದರೆ ಮೋಡಮುಚ್ಚಿ ಆಗಾಗ್ಗೆ ಸಣ್ಣ ಹನಿಗಳಿದುತ್ತಲಿವೆ. ರಾತ್ರಿಕಾಲ ತಂಗಾಳಿ ಬೀಸಿ ಚಳಿಯಾಗುತ್ತದೆ.

ಹೆಬ್ಬಾಳದ ಪರೀಕ್ಷಾಕ್ಷೇತ್ರದಲ್ಲಿ ನಡೆಯುವ ವ್ಯವಸಾಯವಿಷಯಕ ಪಾಠಗಳನ್ನೆಲ್ಲಾ ಇನ್ನುಮೇಲೆ ದೇಶಭಾಷೆಯಲ್ಲೇ ನಡೆಯಿಸುವುದಕ್ಕೆ ಏರ್ಪಡಿಸಿರುವುದು ಪ್ರಯೋಜಕವಾಗಿದೆ.

ನಮ್ಮ ಮೈಸೂರು ಮಹಾರಾಜಾ ಕಲಾಶಾಲೆಯಿಂದ ಈ ಸಲದ ಬಿ. ಎ., ಆನರ್ಸ್ ಪರೀಕ್ಷೆಗೆ ಹೋಗಿದ್ದ ೬ ಮಂದಿ ವಿದ್ಯಾರ್ಥಿಗಳೂ ತೇರ್ಗಡೆ ಹೊಂದಿರುವ ಸಂಗತಿಯು ಆ ಕಲಾಶಾಲೆಗೆ ಯಶಃಪ್ರದವಾಗಿದೆ.

ಕರ್ನಾಟಕ ಸಾಹಿತ್ಯಪರಿಷತ್ತಿನ ೩ ನೆ ಅಧಿವೇಶನವು ಮ|| ಹೆಚ್.ವಿ. ನಂಜುಂಡಯ್ಯನವರ ಅಧ್ಯಕ್ಷತೆಯಿಂದ ಮೊನ್ನೆಯೂ ನಿನ್ನೆಯೂ ರಾಜಧಾನಿಯ ಟವರ್ ಹಾಲಿನಲ್ಲಿ ನಡೆಯಿತು. ಅದರ ವಿವರವನ್ನು ಮುಂದಣ ಸಂಚಿಕೆಯಲ್ಲಿ ತಿಳಿಸುವೆವು.

ಚಕ್ರವರ್ತಿಯವರ ವರ್ಧಂತಿ ದಿನದಲ್ಲಿ ಕೊಡಲ್ಪಟ್ಟ ಬಿರುದಾವಳಿಗಳೊಳಗೆ ನಮ್ಮ ಸಂಸ್ಥಾನದೊಳಗಣ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ.ಪಿ. ಪುಟ್ಟಣ್ಣಸೆಟ್ಟರವರಿಗೆ ಸಿ. ಐ. ಇ. ಎಂಬ ಪ್ರಶಸ್ತಿಯು ಕೊಡಲ್ಪಟ್ಟಿರುವುದೆಂದು ತಿಳಿಯಿಸುವುದಕ್ಕೆ ಸಂತೋಷಪಡುತ್ತೇವೆ.

ಶ್ರೀಮನ್ಮಹಾರಾಜರವರ ವರ್ಧಂತಿಯು ಪ್ರಯುಕ್ತವಾಗಿ ರಾಜಧಾನಿಗೆ ಬಂದಿದ್ದ ಹಿಂದೂ ಅತಿಥಿಗಳಿಗೂ ಇನ್ನು ಕೆಲ ದೊಡ್ಡಮನುಷ್ಯರಿಗೂ ಸಹ ದಿವಾನರು ಔತಣವನ್ನು ಮಾಡಿಸಿ ಸಂಗೀತಶ್ರವಣಾದಿಗಳಿಂದ ಆನಂದಪಡಿಸಿದರು. ಅದರಂತೆ ಯೂರೋಪ್ಯ ಜನರಿಗೂ ಒಂದು ಔತಣವನ್ನು ಮಾಡಿಸಿದರು.

ನಮ್ಮ ಶ್ರೀಮನ್ಮಹಾರಾಜರವರು ತಮ್ಮ ವರ್ಧಂತಿಗಾಗಿ ರಾಜಧಾನಿಗೆ ದಯಮಾಡಿಸಿದ್ದ ಅತಿಥಿಗಳಿಗೆಲ್ಲಾ ಒಂದು ಔತಣವನ್ನು ಮಾಡಿಸಿದರು. ಮಹಾರಾಜರೂ ಯುವರಾಜರೂ ಸಹ ಅತಿಥಿಗಳೊಡನೆ ಬಹಳ ಸಂತೋಷದಿಂದ ಬೆರೆದು ಸಂಭಾಷಿಸಿ, ಅಲ್ಪಾಹಾರ ವಿನಿಯೋಗಾದಿಗಳಮೂಲಕ ಸರ್ವರನ್ನೂ ಸಂತೋಷಪಡಿಸಿ ಕಳುಹಿಸಿದರು.

ಸಂಪದಭ್ಯುದಯ ಸಮಾಜದ ೬ ನೆಯ ಅಧಿವೇಶನವು ಕಳೆದ ತಾ|| ೫ ರಲ್ಲಿ ದಿವಾನರ ಅಧ್ಯಕ್ಷತೆಯಿಂದ ಆರಂಭಿಸಲ್ಪಟ್ಟಿತು. ಅವರು ಮಾಡಿದ ಆರಂಭಭಾಷಣದಲ್ಲಿ ಈ ಸಮಾಜದ ಕಮಿಟಿಗಳವರು ಕಳೆದ ೬ ವರ್ಷಗಳಿಂದಲೂ ನಡೆಯಿಸಿರುವ ಕೆಲಸಗಳೂ ಮುಂದೆ ಅವರು ನಡೆಯಿಸಲು ಉದ್ದೇಶಿಸಿರುವ ಕಾರ್ಯಗಳೂ ವಿವರಿಸಲ್ಪಟ್ಟಿದ್ದುವು. ಬಳಿಕ ಸಮಾಜದ ಅಂಗಗಳಾದ ವಿದ್ಯಾಭ್ಯಾಸ, ಕೃಷಿ, ಶಿಲ್ಪವಾಣಿಜ್ಯ ಸಂಘಗಳವರು ಕಳೆದವರ್ಷ ನಡೆಯಿಸಿರುವ ಮುಖ್ಯಕಾರ್ಯಗಳ ವರದಿಗಳು ಆಯಾ ಸಂಘಗಳ ಕಾರ್ಯದರ್ಶಿಗಳಿಂದ ಓದಲ್ಪಟ್ಟುವು. ಬಳಿಕ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು, ಮ|| ಗಳಾದ ಎಂ. ವೆಂಕಟಕೃಷ್ಣಯ್ಯನವರು, ಉಸ್ಮಾನ್ ಖಾನ್ ರವರು, ಕೃಷ್ಣಶಾಸ್ತ್ರಿಗಳು, ಎ. ರಾಮಣ್ಣನವರು, ರೆ|| ಥಾಂಸನ್ನರವರು, ವರ್ಧಮಾನಯ್ಯನವರು, ಹೊ|| ಕೃಷ್ಣರಾಯರು-ಇವರೆಲ್ಲಾ ಈ ಸಮಾಜದವರ ಕೃತ್ಯವಿಶೇಷಗಳಲ್ಲಿ ಕಂಡುಬಂದ ಫಲಾತಿಶಯವನ್ನು ಕೊಂಡಾಡಿದರು. ಅವರಲ್ಲಿ ರೆ|| ಥಾಂಸನ್ನರವರು ಮನೆಕೈಗಾರಿಕೆಯ ಏರ್ಪಾಟಿನ ವಿಷಯದಲ್ಲಿರುವ ನ್ಯೂನಾತಿರೇಕಗಳನ್ನು ಕುರಿತು ಖಂಡಿಸಿ ಮಾತನಾಡಿದರು. ಆ ಮರುದಿನದಿಂದ ಸಂಪದಭ್ಯುದಯ ಸಂಬಂಧವಾದ ಚರ್ಚೆಗಳು ೩ ದಿನಗಳವರೆಗೂ ನಡೆದಿರುವುವು.

ಯುದ್ಧವಾರ್ತೆಯು

ಪಶ್ಚಿಮರಂಗದಲ್ಲಿ ಭೂ ಯುದ್ಧಕ್ಕಿಂತ ಆಕಾಶಯುದ್ಧಗಳು ವಿಶೇಷವಾಗಿಯೂ ಅದ್ಭುತವಾಗಿಯೂ ನಡೆಯುತ್ತಿವೆ. ಅದರಲ್ಲಿ ಮಿತ್ರಮಂಡಲಿಯವರ ಕೈಯೇ ಮುಂದಾಗಿದೆ. ಭೂಯುದ್ಧದಲ್ಲಿ ಇಂಗ್ಲೀಷ್ ಸೈನಿಕರು ಒಂದೆರಡು ಶತ್ರುಸ್ಥಾನಗಳನ್ನು ಹಿಡಿದಿದ್ದಾರೆ. ರಷ್ಯಾರಂಗದಲ್ಲಿ ಕೋವೆಲ್ ಕಾರ್ಪೇತಿಯನ್ ಪ್ರಾಂತದಲ್ಲಿರುವ ರಷ್ಯನ್ ಸೈನಿಕರು ಶತ್ರು ಶಿಬಿರಗಳ ಮೇಲೆ ಬಿದ್ದು ಯುದ್ಧಮಾಡಿ ನಷ್ಟಪಡಿಸಿ ಹಿಮ್ಮೆಟ್ಟಿಸಿರುತ್ತಾರೆ. ಇಟಲಿರಂಗದಲ್ಲಿ ಆಸ್ಟ್ರಿಯನ್ನರು ಮಹಾಸೈನ್ಯವನ್ನು ತಂದು ಇಟಲಿಯವರ ಎಲ್ಲ ಸೇನಾಮುಖಗಳ ಮೇಲೂ ಬಿದ್ದು ಫಿರಂಗಿ ಗುಂಡಿನ ವರ್ಷವನ್ನು ಅದ್ಭುತವಾಗಿ ಕರೆದರು. ಆದರೆ ಇಟಲಿಯವರ ಅದ್ಭುತ ಶೌರ್ಯೋತ್ಸಾಹಸಮೇತ ಪ್ರತಿಯುದ್ಧದಿಂದ ಆಸ್ಟ್ರಿಯನ್ನರು ಬಹು ನಷ್ಟಪಟ್ಟು ಹಿಮ್ಮೆಟ್ಟಿದರು. ಇಟಲಿಯವರಿಗೆ ಅನೇಕವಾಗಿ ಶತ್ರುಸಾಮಗ್ರಿಗಳು ದೊರೆದುವು. ಕಪ್ಪು ಸಮುದ್ರದಲ್ಲಿರುವ ರಷ್ಯನ್ ಹಡಗುಗಳು ತುರುಕರ ನೂರಾರು ಸಣ್ಣ ಹಡಗುಗಳನ್ನು ಮುಳುಗಿಸಿರುತ್ತವೆ. ಎರ್ಜರೂಮ್ಮಿಗೆ ದಕ್ಷಿಣದಲ್ಲಿ ಕುರ್ದುಸೈನಿಕರನ್ನು ರಷ್ಯನರು ಬಲವಾಗಿ ಸೋಲಿಸಿ, ಬೆಟ್ಟಗಾಡುಗಳ ಕಡೆಗೆ ಓಡಿಸಿರುತ್ತಾರೆ.

ತುಪ್ಪ.

ಭರತಖಂಡದಲ್ಲಿರುವ ಜನಸಂಖ್ಯೆಯಲ್ಲಿ $\frac{1}{4}$ ಭಾಗದವರು ಮಾತ್ರ ಆಹಾರ್ಯಪದಾರ್ಥಗಳೊಡನೆ ತುಪ್ಪವನ್ನು ಉಪಯೋಗಿಸುತ್ತಾರೆ. ಹಸುಗಳ ಮತ್ತೂ ಎಮ್ಮೆಗಳ ಹಾಲಿನಿಂದ ತೆಗೆದ ಬೆಣ್ಣೆಯನ್ನು ಕಾಯಿಸಿ ವರ್ಷ ೧ ಕ್ಕೆ ೨೬೦೦೦೦ ಟನ್ನುಗಳ ತುಪ್ಪವು ಇಳಿಯಿಸಲ್ಪಟ್ಟು ಪ್ರಜೆಗಳಿಂದ ಉಪಯೋಗಿಸಲ್ಪಡುತ್ತಿದೆ. ಈಗ ತುಪ್ಪದ ಬೆಲೆಯು ಹೆಚ್ಚಿಹೋಗಿರುವುದರಿಂದ ಬಡಕುಟುಂಬಿಗಳು ತುಪ್ಪಕ್ಕೆ ಪ್ರತಿಯಾಗಿ ಬೇರೊಂದು ಅಗ್ಗವಾದ ಪದಾರ್ಥವನ್ನು ಕಲ್ಪಿಸಿ ಉಪಯೋಗಿಸಿಕೊಳ್ಳಬೇಕಾದ ಅವಶ್ಯಕತೆಯು ಪ್ರಾಪ್ತವಾಗಿದೆ. ಬಡವರು ತುಪ್ಪಕ್ಕೆ ಪ್ರತಿಯಾಗಿ ಕೊಬ್ಬರಿಯೆಣ್ಣೆಯನ್ನುಪಯೋಗಿಸುವ ಪದ್ಧತಿಯು ಹೆಚ್ಚುತ್ತ ಬಂದುದರಿಂದ ಕೊಬರಿ ತುಪ್ಪದ ಬೆಲೆಯೂ ಹೆಚ್ಚಿಹೋಗಿದೆ. ಎಳ್ಳೆಣ್ಣೆಯ ಉಪಯೋಗವೂ ಹೆಚ್ಚುತ್ತಲೇ ಇದೆ. ಇದರ ಮೇಲೆ ಕಡಲೆಕಾಯೆಣ್ಣೆ ಕೊಬ್ಬು ಇವುಗಳ ಮಿಶ್ರಣದ ತುಪ್ಪವು ಬೇರೆ ಎಲ್ಲ ಮಾರಕಟ್ಟೆಗಳಲ್ಲೂ ತುಂಬಿಕೊಂಡಿದೆ. ಹೀಗೆ ಮಿಶ್ರಮಾಡಿ ಮಾರಾಟಮಾಡುತ್ತಿರುವ ಹಲವು ತುಪ್ಪಗಳಲ್ಲಿ ಸರಿಯಾದ ತುಪ್ಪವು ಕಾಲುಭಾಗವಿದ್ದರೆ ಉಳಿದ ಮುಕ್ಕಾಲುಭಾಗವೆಲ್ಲಾ ಕೊಬ್ಬು ಮೊದಲಾದ ಇತರ ಪದಾರ್ಥಗಳೇ ಆಗಿರುವುದೂ ಉಂಟು. ಈಗೀಗ ಹತ್ತಿಯ ತುಪ್ಪವು ಬೇರೆ ಬಳಕೆಗೆ ಬರುತ್ತಿದೆ. ತುಪ್ಪವೆಂದು ಭ್ರಮಿಸಿ ಹೆಚ್ಚು ದುಡ್ಡು ಕೊಟ್ಟು ಅರುಚಿಯೂ ಅನಾರೋಗ್ಯಕರವೂ ದುರ್ಗಂಧವೂ ಆದ ಕಡಿಮೆ ತರಗತಿಯ ಆ ಮಿಶ್ರ ತುಪ್ಪವನ್ನು ಕೊಂಡು ತಿನ್ನುವುದಕ್ಕಿಂತಲೂ ಬೆಲೆಯಲ್ಲಿ ಸುಲಭವೂ ನಿರ್ಮಲವೂ ಆರೋಗ್ಯಸಾಧಕವೂ ಆದ ಈ ಹತ್ತಿತುಪ್ಪವನ್ನೇ ಬಡಬಗ್ಗರು ಉಪಯೋಗಿಸುವುದು ಉತ್ತಮವಾಗಿದೆ.

ಭರತಖಂಡದ ವೃತ್ತಾಂತಗಳು.

ಕಳೆದ ತಿಂಗಳು ತಾ|| ೨೮ ಕ್ಕೆ ಕೊನೆಯಾದ ೧ ವಾರಕಾಲದಲ್ಲಿ ಭರತಖಂಡದೊಳಗೆಲ್ಲಾ ೪೪೨೩ ಮಂದಿಗಳು ಪ್ಲೇಗುರೋಗದಿಂದ ಮೃತರಾಗಿರುವರು.

ಬಹು ವರ್ಷಗಳಿಂದ ಇಂದೂರು ಸಂಸ್ಥಾನದ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದ ಮಿ|| ಗಾರ್ಡನ್ ಬ್ರೌನ್ ಸಾಹೇಬರು ಅಕಸ್ಮಾತ್ತಾಗಿ ಕಾಲರಾ ವ್ಯಾಧಿಯಿಂದ ಕಳೆದವಾರ ವಿಧಿವಶರಾದರು.

ಸಾರ್ವಭೌಮರ ವರ್ಧಂತಿ ದಿನದಲ್ಲಿ ಕೊಡಲ್ಪಟ್ಟಿರುವ ಬಿರುದಾವಳಿಗಳೊಳಗೆ ಆರ್ಕಾಟು ಯುವರಾಜರಿಗೆ ಜಿ. ಸಿ. ಎಸ್. ಐ. ಬಿರುದೂ, ಬಂಗಾಳದ ಬ್ಯಾರಿಸ್ಟರಾದ ಎ. ಚೌಧುರಿಯವರಿಗೂ, ಬೊಂಬಾಯಿಯ ಡಿ.ಇ. ವಾಚಾರವರಿಗೂ ಸಹ ನೈಟ್ ಪ್ರಶಸ್ತಿಯೂ ಲಭಿಸಿರುತ್ತವೆ.

ಸಿಂಧು ದೇಶದಲ್ಲಿ ದಿವ್ಯಜ್ಞಾನ ಸಮಾಜದವರ ಮೂಲಕ ಒಂದು ಕಲಾಶಾಲೆಯನ್ನು ಸ್ಥಾಪಿಸುವ ಉದ್ದೇಶದಿಂದ ಒಬ್ಬ ಮಹನೀಯರು ೨೦ ಸಾವಿರ ರೂ.ಗಳನ್ನು ಆ ಸಮಾಜದವರ ವಶಕ್ಕೆ ಕಳುಹಿಸಿಕೊಟ್ಟು ಅವರಿಗೂ ಕೂಡ ತನ್ನ ಹೆಸರನ್ನು ತಿಳಿಯಿಸಲಿಲ್ಲವಂತೆ. ಇದಲ್ಲವೆ ಸಾರ್ಥಕವಾದ ಗುಪ್ತದಾನ?

ವೃದ್ಧಪಿತಾಮಹರೆನಿಸಿಕೊಂಡಿರುವ ದಾದಾಭಾಯಿ ನೌರೋಜಿಯವರಿಗೆ ಕೆಲ ದಿನಗಳಿಂದ ತುಂಬಾ ಅಸ್ವಸ್ಥತೆಯುಂಟಾಗಿದ್ದಿತು. ಸದ್ಯಃ ಪ್ರಾಣಾಪಾಯಭಯವಿಲ್ಲವೆಂದು ಅವರ ಚಿಕಿತ್ಸೆಯಲ್ಲಿರುವ ವೈದ್ಯರು ಈಗ ಅಭಿಪ್ರಾಯಪಟ್ಟಿರುತ್ತಾರೆ. ಇವರನ್ನು ವಾರ್ಸೋವಾ ಗ್ರಾಮದಿಂದ ಬೊಂಬಾಯಿಗೆ ಕರೆತಂದಿಟ್ಟಿರುತ್ತಾರೆ.

ಸಾಮ್ರಾಜ್ಯಶಾಸನಸಭೆಯ ಯೂರೋಪ್ಯ ಸಭಿಕರು ತಮ್ಮಲ್ಲಿ ಕೂಡಿಸಿದ ಚಂದಾಹಣದಿಂದ ಕೈ|| ಗೋಪಾಲಕೃಷ್ಣ ಗೋಖಲೆಯವರ ವಿಗ್ರಹವೊಂದನ್ನು ಮಾಡಿಸಿ ಶಾಸನಸಭಾಮಂದಿರದಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸಿರುವರು. ಈ ವಿಗ್ರಹವು ಬೊಂಬಾಯಿಯ ಪ್ರಸಿದ್ಧ ಭಾರತೀಯ ಶಿಲ್ಪಿಗಳಾದ ಮ|| ಎಂ. ಕೆ. ಮಾತ್ರೆಯವರಿಂದ ಮಾಡಿಸಲ್ಪಡುತ್ತಿದೆ.

ಬೊಂಬಾಯಿ ಗೌರ್ನರಾದ ಲಾರ್ಡ್ ವಿಲ್ಲಿಂಗ್ಡನ್ನರವರ ಅಧಿಕಾರದವಧಿಯು ಮುಗಿಯುತ್ತಬಂದಿತು. ಇನ್ನೆರಡು ವರ್ಷಕಾಲ ಇವರನ್ನೇ ಆ ಪದವಿಯಲ್ಲಿರಿಸಿಕೊಡಬೇಕೆಂದು ಸಾಮ್ರಾಜ್ಯ ಪ್ರಭುತ್ವದವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಬೊಂಬಾಯಿ ಮಹಾಜನರ ಪಕ್ಷದಿಂದ ಸರ್ ಜೇಮ್ಸೆಟ್ಜಿ ಜೀಜೀಭಾಯಿಯವರು ಬಹಳ ಪ್ರಯತ್ನಪಡುತ್ತಿದ್ದಾರೆ.

ಒಂದು ಬಾಲಚುಕ್ಕಿಯು ೧೯೧೬ ನೆ ವರ್ಷದ ಏಪ್ರಿಲ್ ತಿಂಗಳಿಂದ ಕಾಣಿಸಿಕೊಂಡು, ದಿನಕ್ಕೆ ೧೨|| ಲಕ್ಷ ಮೈಲಿಗಳ ವೇಗದಿಂದ ಗಮಿಸುತ್ತ ನಮ್ಮ ಭೂಮಂಡಲದ ಕಡೆಗೆ ಬರುತ್ತಿದೆಯಂತೆ. ಇದು ಈಗ ಬೆಳಗಿನಜಾವದ ೩ ಗಂಟೆಯ ಹೊತ್ತಿನಲ್ಲಿ ದೂರದರ್ಶಕಯಂತ್ರಗಳ ಮೂಲಕ ನೋಡಿದರೆ ಕಾಣಿಸುತ್ತಿರುವುದು. ಮುಂದೆ ಕೆಲವು ತಿಂಗಳುಗಳಲ್ಲಿ ಯಂತ್ರಸಾಹಾಯ್ಯವಿಲ್ಲದೆಯೇ ನೋಡಬಹುದು.

ಮದ್ರಾಸಿನಲ್ಲಿ ಮ|| ಎ. ಸಿ. ಪಾರ್ಥಸಾರಥಿನಾಯುಡುಯವರಿಂದ ಕಳೆದ ೩೩ ವರ್ಷಗಳಾರಭ್ಯ ವಾರಪತ್ರಿಕೆಯಾಗಿಯೂ ಚಾತುರ್ಥಿಕ ಪತ್ರಿಕೆಯಾಗಿಯೂ ನಡೆಯಿಸಲ್ಪಡುತ್ತಿದ್ದ ಆಂಧ್ರಪ್ರಕಾಶಿಕೆಯು ಈ ತಿಂಗಳಾರಂಭದಿಂದ ದಕ್ಷಿಣಇಂಡ್ಯಾಪ್ರಜಾಸಂಘದ ಯಾಜಮಾನ್ಯಕ್ಕೆ ವಹಿಸಲ್ಪಟ್ಟು ಅಂದಿನಿಂದ ಅದು ದಿನಪತ್ರಿಕೆಯಾಗಿ ಪ್ರಕಟವಾಗುತ್ತಿದೆ. ಮ|| ನಾಯುಡುಯವರೇ ಈಗಲೂ ಅದರ ಸಂಪಾದಕರಾಗಿದ್ದಾರೆ.

ಬೊಂಬಾಯಿಯ ಟೈಮ್ಸ್ ಆಫ್ ಇಂಡ್ಯಾ ಪತ್ರಿಕಾ ಕರ್ತರು ಬೆಲ್ಜಿಯನ್ನರ ಸಹಾಯಾರ್ಥವಾಗಿ ಒಂದು ಫಂಡನ್ನು ಕೂಡಿಸುತ್ತಿದ್ದರು. ಅದು ಇದುವರೆಗೆ ೨|| ಲಕ್ಷ ರೂ. ಆಯಿತು. ಇವೆಲ್ಲಾ ಭರತಖಂಡದಲ್ಲಿರುವ ಆ ಪತ್ರಿಕೆಯ ಚಂದಾದಾರರು ಕೊಟ್ಟುದು. ಹೀಗೆ ಸಹಾಯಮಾಡಿದವರಿಗೆಲ್ಲಾ ಪತ್ರಿಕಾ ಕರ್ತರು ವಂದನೆಯನ್ನರ್ಪಿಸಿ ಫಂಡಿನ ಕೆಲಸವನ್ನು ಇಲ್ಲಿಗೆ ಮುಗಿಸಿ ಹಣವನ್ನು ಅಮೇರಿಕಾ ಪ್ರಭುತ್ವದವರ ವಶಕ್ಕೆ ಅರ್ಪಿಸಿರುತ್ತಾರೆ.

ಯುದ್ಧಋಣಾರ್ಥವಾಗಿ ಕಲ್ಕತ್ತಾದಲ್ಲಿ ಏರ್ಪಟ್ಟಿದ್ದ ಲಾಟರಿಯೊಳಗೆ ಬಿ ೧೧೯೬ ನೆ ನಂಬರಿನ ಅದೃಷ್ಟವಂತನಿಗೆ ಸ್ವಲ್ಪ ಹೆಚ್ಚು ಕಡಿಮೆ ೩ ಲಕ್ಷ ರೂ.ಗಳ ಬಹುಮಾನವೂ; ಸಿ. ೪೩೦೮ ನಂ. ಗೆ ೧|| ಲಕ್ಷ ರೂ. ಡಿ. ೨೨೦೬ ನಂ. ಗೆ ೧ ಲಕ್ಷ ರೂ. ಹೀಗೆಯೇ ಇನ್ನೂ ಅನೇಕ ಬಹುಮಾನಗಳು ಬಂದಿರುತ್ತವೆ. ಹೀಗೆ ಬಹುಮಾನ ಪಡೆದ ಕೆಲವರು ಸಂತೋಷಪಡುತ್ತಿರುವಲ್ಲಿ, ನಿರಾಶರಾದ ಎಷ್ಟೋ ಸಾವಿರಾರು ಮಂದಿಗಳು ವಿಚಾರಗ್ರಸ್ತರಾಗಿರುತ್ತಾರಲ್ಲವೆ?

ಕಾಶೀ ಪಟ್ಟಣದ ವಿದ್ವನ್ಮಂಡಲಿಯಲ್ಲಿ ಭೂಷಣಪ್ರಾಯರಾಗಿದ್ದ ಮಹಾಮಹೋಪಾಧ್ಯಾಯ ಪಂಡಿತವರ ಶಿವಕುಮಾರಶಾಸ್ತ್ರಿಗಳವರು ಕಳೆದವಾರದಲ್ಲಿ ಪರಲೋಕಂಗತರಾದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ. ಕಾಶೀ ಪಟ್ಟಣದ ಶ್ರೀ ಜಂಗಮವಾಡೀ ಮಠದ ಅನೇಕ ವೀರಶೈವ ವಿದ್ಯಾರ್ಥಿಗಳು ಇವರಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದರು. ಇವರು ವೀರಶೈವರ ಲಿಂಗಧಾರಣಚಂದ್ರಿಕೆಯೆಂಬ ಗ್ರಂಥಕ್ಕೆ ವ್ಯಾಖ್ಯಾನವನ್ನು ಸಹ ಬರೆದು ವೀರಶೈವ ಮತವಿಷಯದಲ್ಲಿ ತಮಗಿದ್ದ ಸಾನುಭೂತಿಯನ್ನು ಪ್ರದರ್ಶನಮಾಡಿದ್ದರು.

ಕಳೆದ ತಾ|| ೨೫ ರಲ್ಲಿ ಕಾಮನ್ಸ್ ಸಭೆಯೊಳಗೆ ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರು ಮಾತನಾಡುವಾಗ್ಗೆ “ಇನ್ನು ಮುಂದೆ ಕೂಡುವ ಸಾಮ್ರಾಜ್ಯ ಮಂತ್ರಿವರ್ಗ ಸಭೆಗಳಲ್ಲಿ ಅಧಿನಿವೇಶಗಳ ಪ್ರತಿನಿಧಿಗಳ ಜತೆಗೆ ಭರತಖಂಡದ ಪ್ರತಿನಿಧಿಗಳೂ ಸಮಾನಸಭ್ಯರಾಗಿರುವರು. ಈ ಸಭೆಗೆ ಒಬ್ಬ ಸಭಿಕನನ್ನು ಇಂಡ್ಯಾಸರ್ಕಾರದವರು ನಿಯಮಿಸುವರು. ಸ್ಟೇಟ್ ಸೆಕ್ರೆಟರಿಯವರು ಇನ್ನೊಬ್ಬ ಸಭಿಕರಾಗಿರುವರು. ಹೀಗೆ ಇಂಡ್ಯಾಸರ್ಕಾರಕ್ಕೆ ಸಮಾನ ಗೌರವವನ್ನು ಕೊಟ್ಟುದು ದೊಡ್ಡ ಪುರೋವೃದ್ಧಿಯಾಗಿರುತ್ತದೆ. ವಿಶೇಷವಾದ ಪರಿಸ್ಥಿತಿಯೇನಾದರೂ ಉಂಟಾಗದಿದ್ದರೆ ಇನ್ನುಮುಂದೆ ಸಾಮ್ರಾಜ್ಯಮಂತ್ರಿವರ್ಗದಲ್ಲಿ ಭಾರತೀಯರೇ ಭರತಖಂಡದ ಪ್ರತಿನಿಧಿಗಳಾಗಿರುವರು” ಎಂದು ಹೇಳಿರುತ್ತಾರೆ.

ಭರತಖಂಡದಲ್ಲಿ ಆಯಾ ಪ್ರಾಂತದ ವ್ಯವಸಾಯಶಾಖಾ ಮುಖ್ಯಾಧಿಕಾರಿಗಳನ್ನೂ ಅನುಭವಸ್ಥರನ್ನೂ ಬರಮಾಡಿಕೊಂಡು ಸಿಮ್ಲಾ ಪಟ್ಟಣದಲ್ಲಿ ಒಂದು ವ್ಯವಸಾಯಕ ಮಹಾಸಭೆಯನ್ನು ಇದೇ ತಿಂಗಳು ತಾ|| ೧೮ ರಿಂದ ಇಂಡ್ಯಾ ಸರ್ಕಾರದವರು ನಡೆಯಿಸುವವರಾಗಿದ್ದಾರೆ. ಈ ದೇಶದ ವ್ಯವಸಾಯಾಭಿವೃದ್ಧಿಗೆ ಯಾವಯಾವ ತೆರದ ಪ್ರಯತ್ನಗಳನ್ನು ಮಾಡಬೇಕು? ವ್ಯವಸಾಯ ಪಾಠಗಳನ್ನು ಬಾಲತರಗತಿಗಳಿಂದಲೂ ದೇಶಭಾಷೆಯಲ್ಲೇ ಕಲಿಸುವುದು ಪ್ರಯೋಜಕವೆ? ಅಮೇರಿಕಾದಲ್ಲಿನಂತೆಯೂ ಜರ್ಮನಿ ಜಪಾನುಗಳಲ್ಲಿಯಂತೆಯೂ ವ್ಯವಸಾಯ ಶಿಕ್ಷಣವನ್ನು ಈ ದೇಶದಲ್ಲಿ ಕೊಡಿಸುವುದು ಪ್ರಯೋಜಕವೆ? ಓದು ಬರಹ ಬರದ ವ್ಯವಸಾಯಗಾರರಿಗೆ ವ್ಯವಸಾಯಶಿಕ್ಷಣವನ್ನು ಯಾವರೀತಿಯಿಂದ ಕೊಡಬೇಕು? ಇತ್ಯಾದಿ ವಿಷಯಗಳೆಲ್ಲಾ ಚರ್ಚಿಸಲ್ಪಡುವುವು.

ತಿರುಚನಾಪಲ್ಲಿಯಲ್ಲಿ ಕಾಂಡವನಂ ಶೆಟ್ಟಿ ಎಂಬ ದೊಡ್ಡ ಆಭರಣಗಳ ವರ್ತಕನ ಮಗನು ೫-೬ ಸಾವಿರ ರೂ.ಗಳ ನಗಗಳನ್ನು ತೆಗೆದುಕೊಂಡು ಉತ್ತರದೇಶಕ್ಕೆ ಹೋಗಬೇಕೆಂದು ಪ್ರಯಾಣಮಾಡಿ ನಿಲ್ದಾಣಕ್ಕೆ ಬಂದು ನಗಗಳ ಪೆಟ್ಟಿಗೆಯನ್ನು ಇಬ್ಬರು ರೈಲ್ವೆ ಆಳುಗಳ ಕೈಗೆ ಕೊಟ್ಟು ತಾನು ಟಿಕೆಟ್ಟನ್ನು ತೆಗೆದುಕೊಳ್ಳಲು ಹೋಗಿದ್ದು ಬಂದು ನೋಡುವಲ್ಲಿ ಆತನ ಪೆಟ್ಟಿಗೆಯಿರಲಿಲ್ಲ. ಆಳುಗಳನ್ನು ಕೇಳುವಲ್ಲಿ ತಾವು ಅದನ್ನು ಅಲ್ಲೇ ಇಟ್ಟು ಬೇರೊಬ್ಬರ ಪೆಟ್ಟಿಗೆಯನ್ನು ಹೊರುವುದಕ್ಕೆ ಹೋದೆವೆಂದು ಹೇಳಿದರು. ಪೋಲೀಸರಿಗೆ ತಿಳಿಯಿಸಲಟ್ಟಮೇಲೆ ಅವರೂ ಮುಕುವರ್ಜಿಯಿಂದ ಶೋಧಿಸಿದರು. ಫಲವಾಗಲಿಲ್ಲ. ತಂದೆಗೆ ಸಮಾಚಾರವು ತಿಳಿಯಲು ಆತನು ನಿಲ್ದಾಣಕ್ಕೆ ಬಂದು ಆಳುಗಳನ್ನೂ ಪೋಲೀಸರನ್ನೂ ವಿಚಾರಮಾಡಿ, ನಿರಾಶನಾಗಿ, ಮನೆಗೆ ಹೋಗಿ ೧ ಬಟ್ಟಲು ಹಾಲನ್ನು ಕುಡಿದು ಸಂಕಟದಿಂದ ಹಾಗೆಯೇ ಮಲಗಿ ಸ್ವಲ್ಪ ಹೊತ್ತಿನೊಳಗೆ ಪ್ರಾಣಬಿಟ್ಟನು.

ಇಂದೂರು ಸರ್ಕಾರದವರು ತಮ್ಮ ದೇಶದಲ್ಲಿ ನೂತನವಾದ ವಿವಾಹಶಾಸನವೊಂದನ್ನೇರ್ಪಡಿಸಿದರು. ಅದರ ವಿವರವು ಹೇಗೆಂದರೆ—ಪರಸ್ಪರ ವಿವಾಹಮಾಡಿಕೊಳ್ಳಬೇಕೆನ್ನುವ ಸ್ತ್ರೀ ಪುರುಷರುಗಳು ವಿವಾಹಕ್ಕೆ ಮುಂಚೆ ೨ ವಾರಗಳ ಕಾಲವಾದರೂ ಇಂದೂರು ಸಂಸ್ಥಾನದಲ್ಲಿ ವಾಸಮಾಡಿದವರಾಗಬೇಕು. ಅವರು ಭಿನ್ನಜಾತಿ ಭಿನ್ನಮತಗಳಿಗೆ ಸೇರಿದವರಾದರೂ ಚಿಂತೆಯಿಲ್ಲ ಆ ಮದುವೆಯು ಸಲ್ಲುವುದು. ಗಂಡನು ಬದುಕಿರುವಾಗ ಹೆಂಡತಿಯೂ ಹೆಂಡತಿಯು ಬದುಕಿರುವಾಗ ಗಂಡನೂ ಬೇರೆಯವರನ್ನು ಮದುವೆಯಾಗಕೂಡದು. ಹೆಣ್ಣಿಗೆ ೧೪ ವರ್ಷ ಗಂಡಿಗೆ ೧೮ ವರ್ಷಗಳು ತುಂಬಿದಮೇಲೆಯೇ ಮದುವೆಯಾಗಬೇಕು. ವರನಿಗೆ ೨೧ ವರ್ಷವೂ ವಧುವಿಗೆ ೧೮ ವರ್ಷವೂ ತುಂಬುವುದರೊಳಗಾಗಿ ಮದುವೆಯಾಗುವಂತಿದ್ದರೆ ಆ ವಿವಾಹಕ್ಕೆ ಆ ಜಾಯಾಪತಿಗಳ ತಾಯ್ತಂದೆಗಳ ಅಥವಾ ಪೋಷಕರ ಅನುಮತಿಯಿದ್ದೇ ತೀರಬೇಕು. ಅತ್ಯಂತ ಸಮೀಪದ ರಕ್ತಸಂಬಂಧಿಗಳಲ್ಲಿ ವಿವಾಹಸಂಬಂಧವು ಕೂಡದು.

ಬಸವಗಳಿಗೆ ಲಿಂಗಮುದ್ರೆಯನ್ನೊತ್ತಿಬಿಡುವುದು ಹಿಂದೂಗಳಲ್ಲಿ ಒಂದು ಧರ್ಮವಾಗಿದೆಯಷ್ಟೆ. ಇವುಗಳು ಯಾರ ಸೊತ್ತಾಗಿಯೂ ಇರುವುದಿಲ್ಲವೆಂದು ಹೈಕೋರ್ಟಿನ ತೀರ್ಪಾಗಿದೆ. ಇದರಿಂದ ಯಾರುಬೇಕಾದರೂ ಈ ಬಸವಗಳಿಂದ ಕೆಲಸಮಾಡಿಸಿಕೊಳ್ಳುತ್ತಾರೆ. ಮ್ಯುನಿಸಿಪಾಲಿಟಿಯಲ್ಲಿ ಕೆಲವರು ಇವುಗಳನ್ನು ಕಸದ ಬಂಡಿಗಳಿಗೆ ಕಟ್ಟಿ ಎಳೆಯಿಸಿರುವುದುಂಟಂತೆ. ಕಟುಕರು ಇವನ್ನು ಕೊಂದು ಮಾಂಸವನ್ನು ಮಾರಿಕೊಳ್ಳುವುದೂ ಉಂಟಂತೆ. ಈ ಅನ್ಯಾಯಾಚರಣೆಯಮೇಲೆ ಆಕ್ಷೇಪಿಸುವುದಕ್ಕಾಗಲೀ ವ್ಯಾಜ್ಯಮಾಡುವುದಕ್ಕಾಗಲೀ ಆಧಾರವಿಲ್ಲ. ಈ ಬಸವಗಳು ಊರಿನಲ್ಲಿರುವುದರಿಂದ ಹಸುಗಳಿಗೆ ಗರ್ಭ ಕಟ್ಟಿಸುವುದಕ್ಕೆ ಎಷ್ಟೋ ಸಹಾಯವಾಗುವುದು. ಅದುಕಾರಣ ಸರ್ಕಾರದವರು ಇಂಥ ಬಸವಗಳನ್ನು ತಮ್ಮ ವಶಪಡಿಸಿಕೊಂಡು ಪೋಷಿಸಿದರೆ, ಮೇಲೆ ವಿವರಿಸಿರುವಂಥ ತೊಂದರೆಗಳೂ ಅನ್ಯಾಯಾಚರಣೆಗಳೂ ತಪ್ಪುವುವೆಂಬ ವಿಷಯವಾಗಿ ಒಂದು ತೀರ್ಮಾನವನ್ನು ಬರುವ ಸಾಮ್ರಾಜ್ಯಶಾಸನ ಸಭೆಗೆ ತರಬೇಕೆಂದು ಆ|| ಕಾಮಿನೀಕುಮಾರ ಚಂದ್ರರವರು ನಿರ್ಧರಿಸಿಕೊಂಡಿದ್ದಾರೆ.

ವಿದೇಶವೃತ್ತಾಂತಗಳು.

ಅಮೇರಿಕಾದಲ್ಲಿ ಯುದ್ಧಕ್ಕಾಗಿ ೧ ಕೋಟಿ ಪ್ರಜೆಗಳು ಸೈನ್ಯದಲ್ಲಿ ಸೇರಲು ತಮ್ಮ ಹೆಸರನ್ನು ಪಟ್ಟಿಗೆ ಬರೆಯಿಸಿದ್ದಾರೆ. ಇವರಲ್ಲಿ ಮೊದಲು ೫ ಲಕ್ಷ ಜನರನ್ನು ಅಂಗೀಕರಿಸಿಕೊಳ್ಳುವರು.

ನೋಟುಗಳನ್ನು ಚಾರಿಮಾಡುವುದಕ್ಕೆ ೨೦೦ ಕೋಟಿ ರೌಬಲ್ಸು (ಆ ದೇಶದ ನಾಣ್ಯಗಳು) ಆಗಬೇಕೆಂದು ರಷ್ಯಾ ಅರ್ಥಕ ಮಂತ್ರಿಯು ತಮ್ಮ ಪಾರ್ಲಿಮೆಂಟಿಗೆ ಶ್ರುತಪಡಿಸಲು ಸರ್ವರೂ ಏಕಕಂಠ್ಯದಿಂದ ಅದಕ್ಕೆ ಅನುಮತಿಯಿತ್ತರು.

ಅಮೇರಿಕಾದ ಪ್ರೆಸಿಡೆಂಟರನ್ನು ಸೆರೆಹಿಡಿದು ಮೆಕ್ಸಿಕೋದಲ್ಲಿಡುವುದು, ನ್ಯೂಯಾರ್ಕ್, ಬೋಸ್ಟನ್, ವಾಷಿಂಗ್ಟನ್-ಈ ಪಟ್ಟಣಗಳನ್ನು ಹಿಡಿದುಕೊಳ್ಳುವುದು, ಅಷ್ಟರಲ್ಲಿ ಅಮೇರಿಕಾದಲ್ಲಿರುವ ೩ ಲಕ್ಷ ಮಂದಿ ಜರ್ಮನರು ಕೆನಡಾ ದೇಶದಮೇಲೆ ದಂಡೆತ್ತಿಹೋಗುವುದು, ಅದೇ ಸಮಯದಲ್ಲಿ ಕೀಲ ಪಟ್ಟಣದಮೇಲೆ ಹಾಯ್ದು ಇಂಗ್ಲೆಂಡಿನಮೇಲೆ ದಂಡಯಾತ್ರೆ ಮಾಡುವುದು-ಈ ವಿಧವಾದ ರಹಸ್ಯಪ್ರಯತ್ನವು ಅಮೇರಿಕಾದಲ್ಲಿರುವ ಕೆಲ ಜರ್ಮನರಿಂದ ಮಾಡಲ್ಪಟ್ಟಿದ್ದಿತೆಂಬ ವಿಷಯವು ಹೊರಬಿದ್ದು ಈಗ ವಿಚಾರಣೆ ನಡೆಯುತ್ತಿದೆ.

ರಷ್ಯಾ ದೇಶದಲ್ಲಿ ಪ್ರಜೆಗಳಾರಾದರೂ ಮದ್ಯಪಾನಮಾಡಿದರೆ ೧॥ ವರ್ಷ ಕಾರಾಗೃಹವಾಸ ಶಿಕ್ಷೆಗೆ ಪಾತ್ರರಾಗುವರೆಂದೂ, ಕುಡಿದು ಕಳ್ಳತನ ಮೊದಲಾದ ದೌರ್ಜನ್ಯವನ್ನು ನಡೆಯಿಸಿದವರಿಗೆ ೬ ರಿಂದ ೮ ವರ್ಷಗಳ ಕಾಲದವರೆಗೆ ದ್ವೀಪಾಂತರವಾಸಶಿಕ್ಷೆಯು ವಿಧಿಸಲ್ಪಡುವುದೆಂದೂ ಅಲ್ಲಿಯ ಪ್ರಭುತ್ವದವರು ಶಾಸನವನ್ನು ಏರ್ಪಡಿಸಿರುತ್ತಾರೆ. ಭರತಖಂಡಕ್ಕೆ ಇಂಥ ವಿಧಿಯೋಗವು ಈ ಯುಗದಲ್ಲಿ ಬರುವುದುಂಟೆ?

ಚೀನಾದೇಶದಲ್ಲಿ ಮತ್ತೊಂದು ವಿಪ್ಲವವು ಸ್ಫುರಣಗೊಳ್ಳುವಂತೆ ಕಾಣುತದೆ. ಅಲ್ಲಿಯ ಅನೇಕ ರಾಷ್ಟ್ರಗಳ ಗೌರ್ನರುಗಳು ಸ್ವತಂತ್ರಾಧಿಕಾರವನ್ನು ವಹಿಸಿಬಿಟ್ಟಿದ್ದಾರೆ. ಸ್ಥಿತಿಗತಿಗಳನ್ನು ಹೀಗೆಯೇ ಸರಿಯೆಂದು ನಿರ್ಧರಿಸುವುದು ಕಷ್ಟವಾಗಿದೆ. ವಿಪ್ಲವಕಾರಕಪಕ್ಷದವರು ಉತ್ತರಭಾಗದಲ್ಲಿರುವ ಸೈನ್ಯಗಳನ್ನೆಲ್ಲಾ ತಮ್ಮ ವಶಪಡಿಸಿಕೊಂಡಿದ್ದಾರೆ. ಇದು ಪ್ರಜಾಪ್ರಭುತ್ವಪದ್ಧತಿಗೆ ವಿರುದ್ಧವಾದ ಪಕ್ಷವು. ಇದು ಯುವರಾಜನನ್ನು ಮರಳಿ ಚೀನಾ ಸಿಂಹಾಸನಕ್ಕೆ ಕುಳ್ಳಿರಿಸಬೇಕೆಂಬ ಉದ್ದೇಶವುಳ್ಳುದಾಗಿದೆಯಂತೆ.

ಜರ್ಮನ್ ಕೈಜರರು ಅರ್ರಾಸು ಸೇನಾಮುಖದಲ್ಲಿರುವ ತಮ್ಮ ಸೈನ್ಯಕ್ಕೆ ಹೀಗೆ ಉಪದೇಶಮಾಡಿದರಂತೆ.—ಕಡೆಗೆ ನಮ್ಮನ್ನು ಸೋಲಿಸಿಬಿಡುವುದಕ್ಕಾಗಿ ನಮ್ಮ ಶತ್ರುಗಳು ಅಪರಿಮಿತವಾದ ಮದ್ದು ಗುಂಡುಗಳ ಸಹಾಯದಿಂದ ಯುದ್ಧಮಾಡುತ್ತಿದ್ದಾರೆ. ಫ್ರೆಂಚರು ತಮ್ಮ ದೇಶಕ್ಕೆ ಮುಕ್ತಿಯನ್ನುಂಟುಮಾಡಿಕೊಳ್ಳುವುದಕ್ಕಾಗಿ ತಮ್ಮ ಧನ ಪ್ರಾಣಗಳನ್ನು ಸಮರ್ಪಿಸಿ ಯುದ್ಧಮಾಡುತ್ತಿರುವುದನ್ನು ಉದಾರ ಸ್ವಭಾವದ ಜರ್ಮನರೆಲ್ಲರೂ ಗ್ರಹಿಸಬಲ್ಲರು. ಆಂಗ್ಲೇಯರಾದರೊ ನಮ್ಮನ್ನು ನಾಶಮಾಡಿ, ತಾವು ಸಾರ್ವಾಧಿಕ್ಯವನ್ನು ಪಡೆದು ಪ್ರಪಂಚದಲ್ಲಿ ಹೆಸರುವಾಸಿಯನ್ನು ಪಡೆಯಬೇಕೆಂಬ ದುರ್ಬುದ್ಧಿಯಿಂದಲೂ ಸ್ವಾರ್ಥದೃಷ್ಟಿಯಿಂದಲೂ ಮೊಂಡತನದಿಂದಲೂ ಬಿಗಿಪಟ್ಟಿನಿಂದಲೂ ಯುದ್ಧಮಾಡುತ್ತಿದ್ದಾರೆ. ನಾವಾದರೊ ಧರ್ಮಯುದ್ಧವನ್ನು ಮಾಡುತ್ತಿರುವೆವು. ಈ ಯುದ್ಧವು ಯಾವಾಗ ಮುಗಿಯುವುದೋ ದೇವರಿಗೆ ಗೊತ್ತು. ಈ ಯುದ್ಧವು ದೀರ್ಘಕಾಲ ಜರುಗಿದರೂ ನಾವು ಮನಸ್ಥೈರ್ಯದಿಂದ ಹೋರಾಡಬೇಕು. ಸೈನಿಕರ ಜತೆಗೆ ಸಕಲ ಜರ್ಮನ್ ಪೌರಜನಗಳೂ ಕೂಡ ರಣರಂಗಕ್ಕೆ ಬಂದು ಯುದ್ಧಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಈ ಸಂಗತಿಯೆಲ್ಲಾ ಹೀಗಿರಲಾಗಿ ನಮ್ಮ ಸಬ್‌ಮೆರೀನುಗಳು ಶತ್ರುಗಳ ರಕ್ತನಾಳವನ್ನು ಹೀರಿ ಹಿಪ್ಪೆಮಾಡುತ್ತಿವೆ" ಎಂದು ಹೇಳಿ ತನ್ನ ವಿಷಹೃದಯದ ಕಪಟ ಗಂಧವನ್ನು ಮತ್ತೊಂದುಸಲ ಪ್ರಪಂಚಕ್ಕೆ ಬೀರಿದ್ದಾರೆ.

ನಿದ್ರೆಯಲ್ಲಿ ಸಂಚರಿಸುವುದು.

ನಿದ್ರೆಯಲ್ಲಿ ಸಂಚರಿಸುವುದು ಬಹಳವಾಗಿ ಅಪಸ್ಮಾರ ರೋಗಕ್ಕೆ ಸಂಬಂಧಪಟ್ಟುದೆಂದು ಹೇಳಬಹುದಾಗಿದೆ. ಈ ಅಭ್ಯಾಸವುಳ್ಳ ಜನರು ಸಾಮಾನ್ಯವಾಗಿ ಸೋಮಾರಿಗಳಾಗಿರುವರಾದರೂ, ನಿದ್ರೆಯಲ್ಲಿ ಸಂಚರಿಸುವಾಗ್ಗೆ ಮಾತ್ರ ಕಿಟಕಿಯ ಕದಗಳನ್ನು ತೆಗೆಯುವರು, ಅಪಾಯಕರವಾದ ಸೂರಿನಮೇಲಾಗಲಿ ಕಡಿದಾದ ಸ್ಥಳಗಳ ಅಂಚಿನಲ್ಲಾಗಲಿ ತಿರುಗಾಡುವರು. ಅಂದರೆ ತಾವು ಎಚ್ಚರುಗೊಂಡಿರುವಾಗ್ಗೆ ಮಾಡಲಾರದ ಸಾಹಸಕಾರ್ಯಗಳನ್ನೆಲ್ಲಾ ಮಾಡುವರು ಹೀಗೆ ನಿದ್ರೆಯಲ್ಲಿ ಸಂಚರಿಸುವವರನ್ನು ಎಚ್ಚರಗೊಳಿಸಬಾರದು. ಏಕೆಂದರೆ ಹೀಗೆಚ್ಚರಿಸುವುದರಿಂದ ಅನೇಕರಿಗೆ ನಿರಂತರವಾದ ಅಪಸ್ಮಾರ ರೋಗವು ಪ್ರಾಪ್ತವಾಗಿರುವುದು. ಕೆಲ ನಿದ್ರಾಚಾರಿಗಳು ಅತ್ಯಂತ ಸಾಹಸಕಾರ್ಯಗಳನ್ನು ಮಾಡಿರುತ್ತಾರೆ. ಅಂದರೆ ನದಿಗಳಲ್ಲಿ ಈಜುವುದು, ಧಾನ್ಯದ ತೆನೆಯನ್ನು ಬಡಿಯುವುದು, ಕುದುರೆಯಮೇಲೆ ಸ್ವಾರಿಮಾಡುವುದು, ಮತ್ತು ತಾವು ಹಗಲಿನಲ್ಲಿ ಮಾಡುವ ಕಾರ್ಯಗಳನ್ನೆಲ್ಲಾ ಮಾಡುವುದು ಇತ್ಯಾದಿ ಕಾರ್ಯಗಳನ್ನು ಗಾಢನಿದ್ರೆಯಲ್ಲಿರುವಾಗ್ಗೆ ಮಾಡುತ್ತಾರೆ. ರಷ್ಯಾದೇಶದ ಒಬ್ಬ ಬ್ಯಾಂಕಿನವನು ನಿದ್ರೆಯಲ್ಲಿ ಎಣ್ಣೆಯ ವ್ಯಾಪಾರಕ್ಕೆ ತನ್ನ ಆಸ್ತಿಯೆಲ್ಲವನ್ನೂ ವಿನಿಯೋಗಿಸುವಂತೆ ತನ್ನ ದಳ್ಳಾಳಿಗೆ ಕಾಗದವನ್ನು ಬರೆದಿದ್ದನು. ಒಂದು ವಾರದ ತರುವಾಯ ಆತನಿಷ್ಟಪ್ರಕಾರ ವ್ಯಾಪಾರಕ್ಕಾಗಿ ಆಸ್ತಿಯೆಲ್ಲವನ್ನೂ ಉಪಯೋಗಿಸಿದೆ ಎಂದು ದಳ್ಳಾಳಿಯು ಉತ್ತರವನ್ನು ಕೊಟ್ಟನು. ಬ್ಯಾಂಕಿನ ಧಣಿಯು ನಿದ್ರೆಯಲ್ಲಿ ಬರೆದ ಕಾಗದದ ಸ್ಮರಣೆಯಿಲ್ಲದೆ ತನ್ನ ದಳ್ಳಾಳಿಯ ಕಾಗದವನ್ನು ನೋಡಿ ತನಗೆ ವಿಪತ್ತು ಪ್ರಾಪ್ತವಾಯಿತೆಂದು ತಿಳಿದು ದಿಗಿಲುಬಿದ್ದನು. ಆದರೆ ೨ ವರ್ಷ ಕಾಲದಲ್ಲಿ ಆ ಬ್ಯಾಂಕಿನ ಧಣಿಗೆ ೬೫ ಲಕ್ಷ ರೂಪಾಯಿನ ಆದಾಯವು ಪ್ರಾಪ್ತವಾಯಿತು.

ಒಬ್ಬ ಐರ್ಲೆಂಡಿನ ದೊಡ್ಡಮನುಷ್ಯನು ನಿದ್ರೆಯಲ್ಲಿರುವಾಗ್ಗೆ ಒಂದು ನದಿಯಲ್ಲಿ ೨ ಮೈಲಿ ದೂರದವರೆಗೆ ಈಜಿಕೊಂಡು ಹೋಗಿ ದಡವನ್ನು ಸೇರಿದ್ದು ಕೂಡಲೆ ಎಚ್ಚೆತ್ತಾಗ ತಾನು ನಿದ್ರೆಯಲ್ಲಿ ಮಾಡಿದ ಸಾಹಸಕಾರ್ಯದ ಸ್ಮರಣೆಯೇ ಇಲ್ಲದೆ ಮಾರ್ಗದ ಪಕ್ಕದಲ್ಲಿ ಮಲಗಿದ್ದುದು ಅವನಿಗೆ ಗೋಚರವಾಯಿತು. ಒಬ್ಬ ಯೌವನಸ್ಥನಾದ ದೊಡ್ಡಮನುಷ್ಯನು ನಿದ್ರೆಯಲ್ಲಿ ಕುದುರೆಯ ಸ್ವಾರಿಯುಡುಪನ್ನು ಧರಿಸಿಕೊಂಡು ತನ್ನ ಮಲಗುವ ಮನೆಯ ಕಿಟಕಿಯಿಂದ ಕೆಳಕ್ಕಿಳಿದು ಒಂದು ಇಟಿಗೆಯ ಗೋಡೆಯಮೇಲೆ ಹತ್ತಿ ಕುಳಿತುಕೊಂಡು ಅದು ಕುದುರೆಯೆಂದು ಭಾವಿಸಿ ಬಹಳ ವೇಗದಿಂದಸ್ವಾರಿಮಾಡತೊಡಗಿದನು. ಮತ್ತೊಬ್ಬ ಮನುಷ್ಯನು ಭಾವಿಯೊಳಕ್ಕಿಳಿದು ನೀರು ಸೋಕುತ್ತಲೆ ಮೇಲಕ್ಕೆ ಹತ್ತಿ ಬಂದುಬಿಟ್ಟನು. ಬಹಳ ವರ್ಷಗಳ ಹಿಂದೆ ಒಬ್ಬ ದೊಡ್ಡ ಮನುಷ್ಯನು ನಿದ್ರೆಯಲ್ಲಿ ಒಂದು ಶಿಖರದಮೇಲಕ್ಕೆ ಹೋಗಿ ಅಲ್ಲಿ ಒಂದು ಪಕ್ಷಿಯ ಗೂಡನ್ನು ಅಪಹರಿಸಿಕೊಂಡು ಒಂದು ಹಗ್ಗದ ಮೂಲಕ ಕೆಳಗಿಳಿದು ಬಂದನು. ಒಬ್ಬ ದೊಡ್ಡಮನುಷ್ಯನು ರಾತ್ರಿಯ ೧ ಗಂಟೆಯಲ್ಲಿ ನೆರೆ ಮನೆಯವನ ತೋಟಕ್ಕೆ ಹೋಗಿ ದೇವಸ್ಥಾನದಲ್ಲಿರುವಂತೆ ಭಾವಿಸಿಕೊಂಡು ದೇವರ ಪ್ರಾರ್ಥನೆಯನ್ನು ಮಾಡುತ್ತಿದ್ದುದನ್ನು ಜನರು ಕಂಡು ಅವನನ್ನು ಪರೀಕ್ಷಿಸುವಲ್ಲಿ ಅವನಿಗೆಚ್ಚರಿಕೆಯಿಲ್ಲದುದು ಕಂಡುಬಂದಿತು. ಒಬ್ಬ ವಿದ್ಯಾರ್ಥಿಯು ನಿದ್ರೆಯಲ್ಲಿ ಟಿಕುಗುಮ್ಮನಾಟವನ್ನಾಡುತ್ತಿದ್ದುದನ್ನು ತಿಳಿದ ಸಹಪಾಠಿಗಳು ಅವನು ತಿರುಗಾಡುವ ದಾರಿಗಡ್ಡಲಾಗಿ ಹಾಸಿಗೆ ದಿಂಬು ಮೊದಲಾದುವುಗಳನ್ನು ಮಡಗಿದಲ್ಲಿ ಅವನು ಅವನ್ನು ದಾಟಿಕೊಂಡು ಹೋಗುತ್ತಿದ್ದನು. ವಿದ್ಯಾರ್ಥಿಗಳು ನಿದ್ರೆಯಲ್ಲಿ ಕಠಿನವಾದ ಪಾಠಗಳನ್ನು ಬಾಯಿಪಾಠಮಾಡಿ ಲೆಕ್ಕಗಳನ್ನು ಮಾಡುವರು.

ಒಬ್ಬ ವಿದ್ಯಾರ್ಥಿನಿಯು ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಬೇಕೆಂಬ ಸಂಕಲ್ಪದಮೇಲೆ ಬೆಳಗಿನಜಾವದಲ್ಲಿ ಓದುವುದಕ್ಕಾಗಿ ಪುಸ್ತಕಗಳನ್ನು ತನ್ನ ಮಲಗುವ ಮನೆಯಲ್ಲಿಟ್ಟುಕೊಂಡು ಬೆಳಗ್ಗೆದ್ದು ಓದಲಿಕ್ಕೆ ಪ್ರಕ್ರಮಿಸಿದಾಗ ಆ ಪಾಠಗಳೆಲ್ಲವೂ ತನಗೆ ಮೊದಲೇ ಮನನವಾಗಿದ್ದುದನ್ನು ಕಂಡು ಆಶ್ಚರ್ಯಯುಕ್ತಳಾಗಿದ್ದು ಹೀಗೆಯೇ ಕೆಲ ಕಾಲ ನಡೆದು ಬರಲು, ಈ ವಿಚಿತ್ರ ಸಂಗತಿಯನ್ನು ತನ್ನ ತಾಯಿಗೆ ತಿಳಿಯಿಸಿದಳು. ಆಕೆಯು ಇದನ್ನು ಪರೀಕ್ಷಿಸಬೇಕೆಂದು ಒಂದು ರಾತ್ರಿ ಎಚ್ಚರವಾಗಿದ್ದು ನೋಡುವಲ್ಲಿ ಮಗಳು ನಿದ್ದೆಯಲ್ಲಿಯೇ ಎದ್ದು ಕುಳಿತು ಪಾಠಗಳನ್ನೋದಿ ಮರಳಿ ಮಲಗಿಕೊಂಡುದನ್ನು ಕಂಡು ಮಾರನೆಯ ಬೆಳಗ್ಗೆ ಕೇಳುವಲ್ಲಿ ಅದೊಂದು ವಿಷಯವೂ ನನಗೆ ತಿಳಿಯದೆಂದು ಹೇಳಿದಳು.

ಪತ್ರವ್ಯವಹಾರ.

ಮಂಜರಾಬಾದು ತಾ॥ ಬೆಳಗೋಡಿನಲ್ಲಿ ಸ್ಥಾಪಿಸಲ್ಪಟ್ಟ ಪುಸ್ತಕಭಂಡಾರ.

ಬೆಂಗಳೂರು ಎಕನಾಮಿಕ್ ಲೆಕ್ಚರರ್ ಮ॥ ಹೆಚ್. ಕೆ. ಮಲ್ಲಪ್ಪನವರನ್ನು ಈ ಗ್ರಾಮದ ಫ್ರೀ ರೀಡಿಂಗ್‌ರೂಂ ಆನರರಿ ಸೆಕ್ರೆಟರಿಗಳಾದ ಮ॥ ಎಸ್. ರಾಮಸ್ವಾಮಯ್ಯನವರು ವಿದ್ಯಾಭ್ಯಾಸ ಮತ್ತು ವಾಚಕಶಾಲೆ ಪುಸ್ತಕ ಭಾಂಡಾರ ಈ ವಿಷಯಗಳಲ್ಲಿ ಲೆಕ್ಚರ್ ಕೊಡಬೇಕೆಂದು ಕಮಿಟಿ ಮೆಂಬರುಗಳ ಪರವಾಗಿ ಕೇಳಿಕೊಂಡದ್ದರ ಮೇಲೆ ಇದೇ ತಿಂಗಳು ೧ ನೆಯ ತಾ॥ ಶುಕ್ರವಾರ ಸಾಯಂಕಾಲ ಇದೇ ಊರು ಕೋಆಪರೇಟೀವ್ ಸೊಸೈಟಿ ಹಾಲಿನಲ್ಲಿ ಈ ಗ್ರಾಮದ ದೊಡ್ಡಮನುಷ್ಯರೂ ಇತರ ಅಜೂಬಾಜೂ ಗ್ರಾಮಸ್ಥರೂ ಕೂಡಿದ ಒಂದು ದೊಡ್ಡ ಸಭೆ ಸೇರಿಸಲ್ಪಟ್ಟಿತು. ಈ ಸಭೆಯ ಅಗ್ರಾಸನಾಧಿಪತ್ಯವನ್ನು ಮ॥ ರಾ॥ ಹಾಸನದ ಸಾಹುಕಾರ್ ಎ. ಶ್ರೀಕಂಠಪ್ಪನವರು ವಹಿಸಿದ್ದರು. ಲೆಕ್ಚರರ್ ಮ॥ ರಾ॥ ಹೆಚ್. ಕೆ. ಮಲ್ಲಪ್ಪನವರು -ವಿದ್ಯಾಭ್ಯಾಸ, ಕೃಷಿ, ವಾಣಿಜ್ಯ, ಕೈಗಾರಿಕೆ, ವಾಚಕಶಾಲೆ, ಪುಸ್ತಕಭಂಡಾರ, ಗ್ರಾಮದ ಆರೋಗ್ಯ ಆಚಾರ, ಈ ವಿಷಯವಾಗಿ ಬಹಳ ಶ್ಲಾಘನೀಯವಾದ ಉಪನ್ಯಾಸಮಾಡಿದರು. ಇವರ ಉಪನ್ಯಾಸವು ಸಭಿಕರ ಮನಸ್ಸನ್ನು ಆನಂದಗೊಳಿಸಿತು. ಅನಂತರ ಸಭಾಧ್ಯಕ್ಷರು ಈ ಊರು ವಾಚಕಶಾಲೆಗೆ ಲಗತ್ತಾಗಿ ಒಂದು ಪುಸ್ತಕ ಭಾಂಡಾರವನ್ನು ಸ್ಥಾಪಿಸಬೇಕೆಂಬ ವಿಷಯವನ್ನು ಕುರಿತು ಉಪನ್ಯಾಸಮಾಡಿದರು. ಅಲ್ಲದೆ ತಾವೂ ಸಹ ಅದಕ್ಕಾಗಿ ೧೦ ರೂ.ಗಳ ಚಂದಾಹಣವನ್ನು ಕೊಟ್ಟರು. ಅನಂತರ ಉಪನ್ಯಾಸಕರು ಸಹ ೫ ರೂ.ಗಳನ್ನು ದಯಪಾಲಿಸಿದರು. ಸಭಿಕರೆಲ್ಲರೂ ಸಹ ೧೦೦ ರೂ.ಗಳ ವರೆಗೂ ಚಂದಾ ಕೊಡುವುದಾಗಿ ವಾಗ್ದಾನಮಾಡಿದರು. ಅನಂತರ ಸಭಾಧ್ಯಕ್ಷರು ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಜ್ಞಾಪಕಾರ್ಥವಾಗಿ ಈ ಪುಸ್ತಕಭಂಡಾರವನ್ನೂ ಅದಕ್ಕೆ ಒಂದು ಕಟ್ಟಡವನ್ನೂ ಸ್ಥಾಪಿಸಬೇಕೆಂದು ಜನರ ಮನಸ್ಸಿಗೆ ನಾಟುವಂತೆ ಉಪನ್ಯಾಸಮಾಡಿದರು. ಈ ಕಾರ್ಯವು ಮ॥ ರಾ॥ ಹೆಚ್. ಕೆ. ಮಲ್ಲಪ್ಪನವರಿಂದಲೂ ಸಭಾಧ್ಯಕ್ಷರಾದ ಮ॥ ರಾ॥ ಶ್ರೀಕಂಠಪ್ಪನವರಿಂದಲೂ ಸರಾಗವಾಗಿ ನಡೆದದ್ದಕ್ಕಾಗಿ ಸಭಿಕರೆಲ್ಲರೂ ಅವರುಗಳಿಗೆ ತಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು. ಇವೆಲ್ಲ ನಡೆದನಂತರ ಸಭಾಧ್ಯಕ್ಷರಿಗೂ ಉಪನ್ಯಾಸಕರಿಗೂ ಹಾರತುರಾಯಿಗಳು ಒಪ್ಪಿಸಲ್ಪಟ್ಟಮೇಲೆ ಸಭಿಕರೆಲ್ಲರಿಗೂ ಗಂಧಪುಷ್ಪ ತಾಂಬೂಲಾದಿಗಳೂ ಫಲಾಹಾರವೂ ಹಂಚಲ್ಪಟ್ಟವು. ಈ ಸಂತೋಷ ಸಮಯದಲ್ಲಿ ಸರ್ವರೂ ಎದ್ದು ನಮ್ಮನ್ನಾಳುವ ಶ್ರೀಮದಿಂಡಿಯಾ ಚಕ್ರವರ್ತಿಗಳ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ಅನಂತರ ಸಭೆಯು ಧರಖಾಸ್ತಾಯಿತು.

ಪ್ರತ್ಯಕ್ಷದರ್ಶಿ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಟುಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ ಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದವಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೊಲದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ, ಹೆಡ್ ಆಫೀಸ
14 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

೫ ನೇ ತರಗತಿ ರೇಖಾಗಣಿತಾದಿಪಾಠ.

ಬೆಲೆ ೪ ಆಣೆ. ಈ ಪುಸ್ತಕವು ಉಪಯಕ್ತವಾಗಿ ತೋರುತ್ತದೆ. ಎಂದು ಮೈಸೂರು ಮಹಾರಾಜಾ ಕಾಲೇಜ್ ಸಂಸ್ಕೃತ ಪ್ರೊಫೆಸರ್ ಮ॥ ರಾ॥ ಎಂ. ಹಿರಿಯಣ್ಣಯ್ಯ ಎಂ.ಎ.ಎಲ್.ಟಿ. ಯವರು ಅಭಿಪ್ರಾಯಪಟ್ಟಿರುತ್ತಾರೆ. 1918 ನೇ ಕ. ಟೆಕಸ್ಟ್ ೪ ಆಣೆ, ನೋಟ್ಸು ಮ॥ ಎನ್.ಆರ್. ವೆಂಕಟಸುಬ್ಬಾಚಾರ್ಯರದು ೮ ಆಣೆ. ಸದಾಚಾರಸಂಗ್ರಹ ೪ ಆಣೆ, ಆರೋಗ್ಯಶಾಸ್ತ್ರದ ನೋಟ್ಸು ೧ ಆಣೆ, ಪ್ಲೀಡರ್ ಮಲ್ಲಾರಾಧ್ಯರವರ ವ್ಯವಹಾರನಿರ್ಣಯ ೧॥ ರೂಪಾಯಿ ಅವುಗಳ ನಮೂನೆಗಳುಳ್ಳ ಲೇಖ್ಯತತ್ವ ಪ್ರಕಾಶಿಕೆ ೪ ಆಣೆ, ಇಲಾಖೆಯ ೨ ನೆಯ ಪುಸ್ತಕದ ನೋಟ್ಸು ೨॥ ಆಣೆ ೩ನೆಯ ಹೊಸದು ೪ಆಣೆ, ೪ನೆಯದು ೧॥ಆಣೆ, ೫ ನೆಯದು ೪ ಆಣೆ, ಮಕ್ಕಳ ಭೂವಿವರಣೆ ೨ಆಣೆ, ಏಷ್ಯಾಭೂವಿವರಣೆ ೬ ಆಣೆ. ೧೦ಕ್ಕೆ ೧ಪ್ರತಿ ಹೆಚ್ಚು ಇಂಗ್ಲೀಷ್ ಕನ್ನಡ ಸ್ಕೂಲ್ ಪುಸ್ತಕಗಳೆಲ್ಲವೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್ ಸನ್ಸ್
2 ವಿದ್ಯಾನಿಧಿ ಬುಕ್‌ಡಿಪೋ ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಕಾರಾಕ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

೧೯೧೭ ನೆಯ ಇಸವಿ ಜೂನ್ ತಾ॥ ೧೦ ರಿಂದ ೧೯೧೭ ನೆಯ ಜೂನ್ ತಾ॥ ೧೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಜ್ಯೇಷ್ಠ ಬ॥ ಪಂಚಮಿಯಿಂದ ಜ್ಯೇಷ್ಠ ಬ॥ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಭ
10	ಭಾನು	ಪಂಚ	6-50	ಧನಿಷ್ಠ	51-56	28
11	[1] ಸೋಮ	ಷಷ್ಠಿ	0-39	ಉಪರಿ	35-45	28
12	[2] ಮಂಗಳ	ಅಷ್ಟಮಿ	48-23	ಪೂಭಾ	43-43	30
13	[3] ಬುಧ	ನವಮಿ	42-55	ಉಭಾ	40-8	31
14	[4] ಗುರು	ದಶಮಿ	38-1	ರೇವತಿ	37-41	1
15	[5] ಶುಕ್ರ	ಏಕಾದ	34-2	ಅಶ್ವಿನಿ	35-8	2
61	ಶನಿ	ದ್ವಾದಶಿ	30-54	ಭರಣಿ	33-57	3

(1) ವಾಣೀವಿಲಾಸದವರ ವರ್ಧಂತಿ. (2) ಸೌರರೀತ್ಯಾ ವೃಷಭಕೃಷ್ಣ ಅಷ್ಟಮೀತಿಥಿಃ. (3)(ಸೌರರೀತ್ಯಾವೃಷಭಕೃಷ್ಣ ನವಮೀತಿಥಿಃ). (4) (ಸೌರರೀತ್ಯಾ ಶೂನ್ಯತಿಥಿಃ) ಷಡಶೀತಿಪುಣ್ಯಕಾಲಃ. (5) ಸರ್ವತ್ರ ಸಾರ್ವೈಕಾದಶಿ ಸೌರರೀತ್ಯಾಶೂನ್ಯತಿಥಿಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಸ್ಯತ್ತಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೀಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ‖

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಜೂನ್ ತಾರೀಖು ೧೭ ನೆಯ ಭಾನುವಾರ. (ಸಂಚಿಕೆ ೨೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ.) 47

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗಿರುವುವು. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಕೇವಲಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲ್ ಖರ್ಚು ಬೇರೆ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಶಿರ್ಶಿ ಉತ್ತರಕನಡಾ ಡಿ॥.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

33 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು ೧೦೦ ಕ್ಕೆ ೧ ರೂ. ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಪಶುಜೀವನ ಚೂರ್ಣ.

ದನಗಳಿಗಾಗುವ ಮಹಾಮಾರಿ ಕುಂದುಬಾಯಿ ಬೇನೆ ಈ ಪ್ರತಿಯೊಂದು ರೋಗದಮೇಲೆ ಅನುಪಾನಪರತ್ವದಿಂದ ಅತ್ಯಂತ ಗುಣಕಾರಿಯಾಗಿರುವುದು. ೧೦ ತೊಲೆಯ ಡಬ್ಬಿ ೧ ಕ್ಕೆ ೧೨ ಆಣೆ.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆಯುರ್ವೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 29

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವೇಳೆಗೆ ಅಂತಿಗೂ ವೈದ್ಯರ ಸಮಯವನ್ನು ಕಾದು ಕಾಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯಮೇಲೂ ಇರುವುದನ್ನು ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೮೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಬಿ. ಎನ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಲಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರಗಳಿಗೆ ರಾಮಬಾಣೌಷಧವು. ಸರ್ವರಿಗೂ ಕೆಮ್ಮು, ನೆಗಡಿ, ಮಲಬಂಧ, ವರಸೆಜ್ವರ, ಶೀತವಾಯು, ಹಲ್ಲುನೋವು, ಆಲಸ್ಯಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟಿ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅದ್ಭುತಗುಣಗಳಿಂದ ಕೂಡಿದ್ದು) ೩೦ ದಿನಕ್ಕೆ ಆಗುವ ಪೊಟ್ನ ೧ ಆಣೆ. ನಾರಿಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಆಮೋದಿನಿ (ಸುಖಕ್ಕೂ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರುಬೇಕು. ಹೆಚ್ಚು ಔಷಧ ತರಿಸಿದರೆ ಹೆಚ್ಚು ರಿಯಾಯತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
5 ಸದ್ವೈದ್ಯಶಾಲಾ ನಂಜನಗೂಡು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಕಾರಾಕ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜೂನ್ ತಾ|| ೧೭ ನೆಯ ಭಾನುವಾರ.

ಕರ್ನಾಟಕಸಾಹಿತ್ಯಪರಿಷತ್ತು.

ಇದರ ಈ ವರ್ಷದ ಅಧಿವೇಶನವು ರಾಜಧಾನಿಯಲ್ಲಿ ನೆರವೇರಿತು. ಸಭೆಗೆ ಪರಸ್ಥಳದ ಕೆಲಮಂದಿ ಭಾಷಾಭಿಮಾನಿಗಳೂ, ಸ್ಥಳದ ಪಂಡಿತರನೇಕರೂ, ಅಧಿಕಾರಿವರ್ಗದ ಕೆಲರೂ ಇತರ ಮಹಾಜನರೂ ನೆರೆದಿದ್ದರು. ಸಭೆಯ ಆರಂಭೋತ್ಸವವನ್ನು ನೆರವೇರಿಸಿದ ಶ್ರೀಮದ್ಯುವರಾಜರವರೂ, ಅಧ್ಯಕ್ಷರಾದ ಮ|| ಎಚ್. ವಿ. ನಂಜುಂಡಯ್ಯನವರೂ, ಮಾಡಿದ ಭಾಷಣಗಳನ್ನೂ, ಪರಿಷತ್ತಿನ ಕಾರ್ಯದರ್ಶಿಯವರು ಓದಿದ ವರದಿಯ ಅಭಿಪ್ರಾಯವನ್ನೂ ಈ ಸಂಚಿಕೆಯ ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ.

ಪರಿಷತ್ತಿನ ಉದಯವಾಗಿ ೨ ವರ್ಷಗಳು ಮಾತ್ರವೇ ಆಗಿರುವುದಲ್ಲದೆ ಕಳೆದವರ್ಷ ಇದರಿಂದ ನಡೆದಿರುವ ಕಾರ್ಯಗಳು ಸಮರ್ಪಕವಾಗಿಯೇ ಇವೆಯೆಂದು ಪರಿಷತ್ತಿನ ಕಾರ್ಯಕಾರಿಮಂಡಲದ ಪಕ್ಷದಿಂದ ಕಾರ್ಯದರ್ಶಿಗಳು ಅಭಿಪ್ರಾಯ ಕೊಟ್ಟಿರುತ್ತಾರೆ. ತಕ್ಕಷ್ಟು ದೇಶಭಾಷಾಭಿಮಾನವಿಲ್ಲದಿರುವ ಜನರೇ ತುಂಬಿತುಳುಕುತ್ತಿರುವ ನಮ್ಮ ನಾಡಿನಲ್ಲಿ ಇಂಥ ಪರಿಷತ್ತಿನ ಸಂಬಂಧದ ಕಾರ್ಯಗಳು ಎಷ್ಟು ಲೇಶಮಾತ್ರವಾಗಿ ನಡೆದರೂ ಅದನ್ನೇ ದೊಡ್ಡದೆಂದು ಎಣಿಸಿ ತೃಪ್ತಿಪಡಬೇಕಾಗಿದೆಯೇ ಹೊರತು ಪರಿಷತ್ಕಾರ್ಯಗಳು ಅಷ್ಟೇನೂ ಸಮಾಧಾನಕರವಾಗಿ ನಡೆದಿರುವುದಿಲ್ಲ. ಪರಿಷತ್ತಿನ ಕಾರ್ಯಭಾರಗಳು ಮೈಸೂರಿನವರ ಮೇಲೆಯೇ ಹೊತ್ತಿರಬೇಕಾದುದಲ್ಲ. ಇದರ ಸೂತ್ರವನ್ನು ಹೊರನಾಡಿನ ಭಾಷಾಭಿಮಾನಿ ಪಂಡಿತರ ಹಸ್ತಕ್ಕೂ ವಹಿಸಿಕೊಡುವುದು ಅವಶ್ಯಕವೇ ಆಗಿರುವುದು. ಈ ವಿಷಯದಲ್ಲಿ ಮೈಸೂರಿನ ಪರಿಷನ್ಮಂಡಲದವರು ಇದುವರೆಗೆ ತೋರಿಸಿದ ಪ್ರವರ್ತನವು ಧಾರ್‍ವಾಡದ ಕಡೆಯ ಮತ್ತೂ ಮಂಗಳೂರಿನ ಕಡೆಯ ಕನ್ನಡಿಗರ ಮನಸ್ಸಿಗೆ ತೃಪ್ತಿಕರವಾಗಿರುವುದಿಲ್ಲ. ಆದರೆ ಶ್ರೀಮದ್ಯುವರಾಜರವರೂ ಸಭಾಧ್ಯಕ್ಷರೂ ಸಹ ಮಾಡಿರುವ ಭಾಷಣಗಳಲ್ಲಿ ಕನ್ನಡ ನಾಡುಗಳ ಎಲ್ಲಜನರ ಪರಸ್ಪರ ಸಂಬಂಧವೂ ಸಹಾಯವೂ ಹೆಚ್ಚುವುದಕ್ಕಾಗಿ ಆ ಹೊರನಾಡುಗಳಲ್ಲೂ ಇದರ ಅಧಿವೇಶನಗಳನ್ನು ನಡೆಯಿಸಬಹುದೆಂಬ ಸೂಚನೆಯು ಹೊರಬಿದ್ದಿರುವುದರಿಂದ ಇನ್ನುಮೇಲಾದರೂ ಈ ಪರಿಷಚ್ಛಿಶುವಿಗೆ ಹೊರಗಣ ವಾಯುಸೇವನೆಯು ದೊರೆದು ಇದರ ದೇಹಪುಷ್ಟಿಯುಂಟಾಗಲು ಮಾರ್ಗವಾದೀತೆಂದು ಯೋಚಿಸುತ್ತೇವೆ.

ಪರಿಷತ್ತಿನ ಉದ್ದೇಶಸಾಧನೆಗೆ ಧನಸಹಾಯ ವಿದ್ವತ್ಸಹಾಯಗಳು ಮುಖ್ಯಚೈತನ್ಯಗಳೆಂಬುದನ್ನು ಹೇಳಬೇಕಾಗಿಲ್ಲ. ಈಗಲಾದರೊ ಪರಿಷತ್ತಿನ ಬಂಡವಾಳವು ಅಷ್ಟೇನೂ ಸಮರ್ಪಕವಾಗಿರುವುದಿಲ್ಲ. ಕೂಡಿದ ಹಣದಲ್ಲಿ ಹೆಚ್ಚುಪಾಲನ್ನು ಪರಿಷತ್ಪತ್ರಿಕೆಯೇ ನುಂಗಿಬಿಡುತ್ತಿದೆ. ಆದರೆ ಭಾಷಾಭಿಮಾನಿಗಳಾದ ಮಹಶೀಯರನೇಕರು ಮುಂದಾದರೂ ತಮ್ಮ ಉದಾರ ಹಸ್ತಾಶ್ರಯವನ್ನು ಕೊಟ್ಟು ಈ ಭಾಗದಲ್ಲಿರುವ ಕೊರತೆಯನ್ನು ದೂರೀಕರಿಸುವುದರಲ್ಲಿ ಸಂಶಯವಿಲ್ಲ. ಮ|| ಗಳಾದ ಬಿ. ರಾಮರಾಯರು, ಎಂ. ವೆಂಕಟಕೃಷ್ಣಯ್ಯನವರು ಮೊದಲಾದವರುಗಳು ತಂತಮ್ಮ ಒಂದೊಂದು ತಿಂಗಳ ವೇತನವನ್ನು ಪರಿಷನ್ನಿಧಿಗಕ್ಕೆ ಕೊಟ್ಟುಬಿಡಲು ಸಭೆಯಲ್ಲಿ ವಾಗ್ದಾನಮಾಡಿರುವರು. ಇವರುಗಳ ಅಸಾಧಾರಣವಾದ ಭಾಷಾಭಿಮಾನಕ್ಕೆ [illegible] ಅಭಿನಂದನೀಯವಾಗಿದೆ. ಇವರುಗಳ ವರ್ತನವನ್ನು ಅಂಬಾಲಿಸಲು ಇನ್ನೂ ಅನೇಕಾನೇಕರು ಸಿದ್ಧರಾಗಬೇಕಾದುದು ಅತ್ಯವಶ್ಯಕವಾಗಿದೆ. ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಅವರ ಸರ್ಕಾರದವರೂ ಉಚಿತವಾದ ಸಹಾಯವನ್ನು ಇದಕ್ಕೆ ಮಾಡಬೇಕಾದುದು ಧರ್ಮವಾಗಿದೆ. ಅದು ನೆರವೇರುವುದರಲ್ಲೂ ಅಭ್ಯಂತರವಿಲ್ಲ. ಆದರೆ ಸ್ವಾರ್ಥತ್ಯಾಗಿಗಳಾದ ವಿದ್ವಾಂಸರ ಸಹಾಯವು ಮಾತ್ರ ಪರಿಷತ್ತಿಗೆ ಯಾವಾಗಲೂ ದೊರೆದು, ಇದರ ಕಾರ್ಯವು ಸಾರ್ಥಕವಾಗುವ ರೀತಿಯಲ್ಲಿ ನಡೆಯುತ್ತಿದೆಯೆಂಬುದು ಹೊರಕ್ಕೆ ವ್ಯಕ್ತವಾಗಬೇಕು. ಈಗ ಪರಿಷತ್ತಿನವರು ಪ್ರಕಟಿಸುತ್ತಿರುವ ಪತ್ರಿಕೆಯು ಅಷ್ಟೇನೂ ಆಕರ್ಷಕವಾಗಿಲ್ಲವೆಂಬ ಸಂಗತಿಯು, ಕಾರ್ಯದರ್ಶಿಗಳು ಅದರ ವರ್ಗಣಿಗಾಗಿ ಇದುವರೆಗೆ ೫೧ ರೂ. ಗಳು ಮಾತ್ರವೇ ಬಂದಿದೆಯೆಂದು ಹೇಳಿರುವ ಮಾತಿನಿಂದಲೇ ವ್ಯಕ್ತವಾಗಿರುತ್ತದೆ. ಅದರ ವರ್ಗಣಿದಾರರಾದರೂ ಎಷ್ಟುಮಂದಿ ಇರುವರೆಂಬುದು ಹೊರಪಡಲಿಲ್ಲ. ಜನಚಿತ್ತಾಕರ್ಷಕವಾಗುವ ರೀತಿಯಲ್ಲಿ ಇದು ಪ್ರಕಟಿತವಾಗದಿರುವ ಸಂದರ್ಭದಲ್ಲಿ ಇಂಥ ಕೇವಲ ಧನವ್ಯಯಪ್ರಯೋಜಕವಾದ ಪತ್ರಿಕೆಯನ್ನು ಮಾಸಪತ್ರಿಕೆಯನ್ನಾಗಿ ಮಾಡುವುದರಲ್ಲಿ ಫಲವೇನುಂಟು? ಶ್ರೀಮದ್ಯುವರಾಜರವರು ಅಪ್ಪಣೆಕೊಡಿಸಿರುವಂತೆ ನವೀನಶಾಸ್ತ್ರಜ್ಞಾನಾಭಿವೃದ್ಧಿಗೆ ಆವಶ್ಯಕಗಳಾದ ಗ್ರಂಥಗಳನ್ನು ದೇಶಭಾಷೆಗೆ ಪರಿವರ್ತಿಸಿ ಮುದ್ರಿಸಿ ದೇಶೀಯರಿಗೆಲ್ಲಾ ಅವನ್ನು ಸುಲಭವಾದ ಬೆಲೆಗೆ ದೊರೆಯುವಂತೆ ಮಾಡುವುದರಲ್ಲೂ, ವಿಶೇಷಾವಶ್ಯಕವೂ ಪ್ರಯೋಜಕವೂ ಆದ ಉದ್ಗ್ರಾಮದೇಶಭಾಷಾನಿಘಂಟುವನ್ನು ಸಾಧ್ಯವಾದಮಟ್ಟಿಗೂ ತ್ವರೆಯಿಂದ ಪ್ರಕಾಶಪಡಿಸುವುದರಲ್ಲೂ ಧನವ್ಯಯವನ್ನು ಮಾಡುತ್ತ ಬಂದರೆ ಧನಸಹಾಯ ಮಾಡಿದವರಿಗೂ ಮಾಡುವವರಿಗೂ ಎಷ್ಟೋ ಸಮಾಧಾನಕರವಾಗಿದ್ದೀತು.

ಅಂತು ದಿನಗಳಿದಂತೆ ತಮ್ಮ ಕರ್ತವ್ಯದ ಲೋಪಾಲೋಪಗಳನ್ನು ಸಂಪಡಿಸಿಕೊಳ್ಳುವುದರಲ್ಲೂ, ಹೊರನಾಡಿನವರ ಸಯುಕ್ತಿಕವಾದಗಳಿಗೆ ಗೌರವವನ್ನು ಕೊಡುವುದರಲ್ಲೂ ನಮ್ಮ ದೇಶದ ಪರಿಷನ್ಮಂಡಲದವರು ಉದಾರಚಿತ್ತವನ್ನು ವ್ಯಕ್ತಪಡಿಸಿ, ಕನ್ನಡಿಗರೆಲ್ಲರ ಏಕಮುಖಪ್ರಯತ್ನದಿಂದ ಪರಿಷನ್ನಾವೆಯನ್ನು ಉದ್ದಿಷ್ಟವಾದ ತೀರಕ್ಕೆ ಮುಟ್ಟಿಸಿ ಕೃತಾರ್ಥರಾಗಲೆಂದು ಕೋರುವೆವು.

ಬಲಾತ್ಕಾರ ಬಾಲಿಕಾ ವಿದ್ಯಾಭ್ಯಾಸ.

ಕಳೆದ ಸಂಪದಭ್ಯುದಯ ಸಭೆಯಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯಗಳ ಚರ್ಚೆಯು ನಡೆದಾಗ್ಗೆ ಮೈಸೂರು ಮಹಾರಾಜ ಕಲಾಶಾಲೆಯ ಪ್ರಿನ್ಸಿಪಲರಾದ ಮ|| ರಾಮಲಿಂಗರೆಡ್ಡಿಯವರು ಸ್ತ್ರೀವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ನಡೆಯಿಸುವ ಏರ್ಪಾಟಾಗಬೇಕೆಂಬ ವಿಷಯವನ್ನು ಪ್ರತಿಪಾದಿಸಿದರು. ಅದಕ್ಕೆ ಒಬ್ಬರಿಬ್ಬರು ವಿರೋಧಿಸಿ ಮಾತನಾಡಿದರೂ ಹೆಚ್ಚುಜನರ ಅನುಮತಿಯು ದೊರೆದುದರಿಂದ ೬ ವರ್ಷಗಳಿಗೆ ಮೇಲ್ಪಟ್ಟು ೧೦ ವರ್ಷ ವಯಸ್ಸಿನೊಳಗಣ ಬಾಲಿಕೆಯರಿಗೆಲ್ಲಾ ನಿರ್ಬಂಧವಾಗಿ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬುದಾಗಿ ತೀರ್ಮಾನಿಸಲ್ಪಟ್ಟಿತು. ಈ ಏರ್ಪಾಟನ್ನು ದೇಶಾಭ್ಯುದಯಕ್ಕೆ ಅವಶ್ಯಕವೆಂದು ಹೇಳುವಲ್ಲಿ ಅಡ್ಡಿಯಿಲ್ಲ. ಗೌರ್ನ್ಮೆಂಟಿನವರು ಕೂಡ ಬಹುಶಃ ಇದಕ್ಕೆ ಅನುಮೋದನೆಯನ್ನು ಕೊಟ್ಟು ಶಾಸನವನ್ನಾಗೇರ್ಪಡಿಸಲೂ ಬಹುದು. ಆದರೆ ಇಂಥ ಉಪಯುಕ್ತ ಶಾಸನಗಳ ಪ್ರಯೋಜನವನ್ನೆಲ್ಲಾ ಪುರವಾಸಿಗಳ ಸೌಕರ್ಯಕ್ಕೇ ಒದಗಿಸಿ, ಧನಾಭಾವದ ಕಾರಣವನ್ನು ಮುಂದೆ ಮಾಡಿ ಗ್ರಾಮಾಂತರದವರಿಗೆ ಇವುಗಳ ಪ್ರಯೋಜನದ ಶತಾಂಶವೂ ಇಲ್ಲದಂತೆ ಮಾಡುವುದು ಅಧರ್ಮವಾಗಿರುತ್ತದೆ. ಬಲಾತ್ಕಾರ ಬಾಲವಿದ್ಯಾಭ್ಯಾಸಕ್ರಮವು ದೇಶದ ಎಲ್ಲ ಭಾಗಗಳಲ್ಲೂ ಸ್ಥಾಪಿತವಾದ ಬಳಿಕ ಬಾಲಿಕಾ ಬಲಾತ್ಕಾರ ವಿದ್ಯಾಭ್ಯಾಸಕ್ರಮ ಸ್ಥಾಪನೆಗೆ ಗಮನಕೊಡುವುದು ವಿಹಿತವಾಗಿದೆ.

ಒಳದೇಶದ ವೃತ್ತಾಂತಗಳು.

ಬರುವ ತಾ|| ೨೯ ರಲ್ಲಿ ನಿಯಮನಿರ್ಮಾಣಸಭೆಯು ಬೆಂಗಳೂರು ಪಬ್ಲಿಕ್ ಆಫೀಸ್ ಭವನದಲ್ಲಿ ಕೂಡುವುದು.

ಕೋಲಾರ ಡಿಸ್ಟ್ರಿಕ್ಟ್ ಡಿ|| ಕಮಿಷನರ್ ಮೆ|| ಪಿ. ಎಫ್. ಬೌರಿಂಗ್‌ರವರು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ವಾಂತಿಭೇದಿ ರೋಗವು ಸಾಮಾನ್ಯವಾಗಿದೆ. ಕಳೆದ ೨-೩ ದಿನಗಳಿಂದ ಯಾವಾಗಲೂ ಮೋಡಮುಚ್ಚಿ ಜಡಿ ಮಳೆಯು ಸುರಿಯುತ್ತ ಶೀತವನ್ನುಂಟುಮಾಡಿದೆ.

ರಾಜಧಾನಿಗೆ ಪಶ್ಚಿಮದಲ್ಲಿರುವ ಪಡವಾರಹಳ್ಳಿ ಮಾರಗೌಡನಹಳ್ಳಿಗಳಿಗೆ ಸೇರಿದ ಕೆಲ ಭೂಮಿಗಳನ್ನು ತೆಗೆದುಕೊಂಡು, ಅಲ್ಲಿ ರೈಲ್ವೆ ಉದ್ಯೋಗಿಗಳಿಗೂ ಕೆಲಸಗಾರರಿಗೂ ಮನೆ ಸಾಲುಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಹೊಸದಾಗಿ ಸಿ. ಐ. ಇ. ಪ್ರಶಸ್ತಿಯು ದೊರೆದುದರಿಂದ ಬೆಂಗಳೂರು ಪುರವಾಸಿಗಳು ತಮಗುಂಟಾದ ಸಂತೋಷವನ್ನು ಪ್ರದರ್ಶಿಸಿ, ಮ|| ಸೆಟ್ಟರವರನ್ನು ಅಭಿನಂದಿಸುವುದಕ್ಕಾಗಿ ಒಂದು ಸಭೆಯನ್ನು ನೆರವೇರಿಸುವುದರಲ್ಲಿದ್ದಾರೆ.

ಇದುವರೆಗೆ ತುಮಕೂರು ಡಿ|| ಕಮಿಷನರಾಗಿದ್ದ ಮೆ|| ಕೆ. ಚಾಂಡಿಯವರು ಪರಸ್ಪರ ಸಹಾಯಕಸಂಘಗಳ ರಿಜಿಸ್ಟ್ರಾರ್ ಪದವಿಗೆ ತರಲ್ಪಟ್ಟು ಆ ಪದವಿಯಲ್ಲಿದ್ದ ನಾರಾಯಣಯ್ಯಂಗಾರರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡಿ|| ಕಮಿಷನರ ಸ್ಥಾನಕ್ಕೆ ನಿಯಮಿಸಿ, ತುಮಕೂರು ಡಿ|| ಕಮಿಷನರ್ ಪದವಿಗೆ ಮಿ|| ಜಹಿರುದ್ದೀನ್ ಮೆಕ್ಕಿಯವರು ನಿಯಮಿಸಲ್ಪಡುವರೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ತಮ್ಮ ವರ್ಧಂತ್ಯುತ್ಸವ ಸಂತೋಷದಲ್ಲಿ ರಾಜಧಾನಿಯ ಎಲ್ಲ ಪಾಠಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಭಾಗಿಗಳಾಗಲೆಂದು ೨ ಸಾವಿರ ರೂ. ಗಳನ್ನು ಎಲ್ಲ ಪಾಠಶಾಲೆಗಳಿಗೂ ಕೊಟ್ಟಿದ್ದರು. ಕಳೆದ ಸೋಮವಾರ ಎಲ್ಲ ಶಾಲೆಗಳ ಬಾಲಬಾಲಿಕೆಯರಿಂದಲೂ ವಿನೋದದ ಆಟಗಳು ಆಡಿಸಲ್ಪಟ್ಟು ಮರುದಿನ ಅವರಿಗೆಲ್ಲಾ ತಿಂಡಿಗಳು ಹಂಚಲ್ಪಟ್ಟುವು.

ರಾಜಬಂಧುವರ್ಗದ ಬಾಲಿಕೆಯರ ಶಾಲೆಯ ವಿದ್ಯಾರ್ಥಿನಿಯರಿಗೆಲ್ಲಾ ಬಹುಮಾನವನ್ನು ಕೊಡುವ ಸಮಾರಂಭವು ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರ ಭವನದಲ್ಲಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ್ಗೆ ಶ್ರೀಮದ್ಯುವರಾಜರವರೂ ದಯಮಾಡಿಸಿದ್ದರು. ಮ|| ಎಚ್. ನಂಜುಂಡರಾಜ ಅರಸಿನವರು ಆ ಪಾಠಶಾಲೆಯ ಇದುವರೆಗಣ ಅಭಿವೃದ್ಧಿಕ್ರಮವನ್ನು ಕುರಿತು ವರದಿಯನ್ನು ಓದಿದರು. ಒಬ್ಬೊಬ್ಬ ಬಾಲಿಕೆಯರು ಪರಸ್ಪರ ನಡೆಯಿಸಿದ ಸಂಭಾಷಣೆಗಳನ್ನೂ ಹಾಡಿದ ಪದ್ಯಗಳನ್ನೂ ಕೇಳಿ ಮಹಾರಾಜಸಹೋದರರಾದಿಯಾಗಿ ಸರ್ವರೂ ಸಂತೋಷಪಟ್ಟರು. ಅರಸುಗುವರಿಯರ ವಿದ್ಯಾಪ್ರಸಾರಕ್ಕಾಗಿ ಏರ್ಪಡಿಸಲ್ಪಟ್ಟಿರುವ ಈ ಶಾಲೆಯು ಪ್ರಯೋಜಕವಾದ ರೀತಿಯಲ್ಲಿ ಅಭಿವೃದ್ಧಿಹೊಂದುತ್ತಿರುವುದಕ್ಕಾಗಿ ತಮಗಾದ ಸಂತೋಷವನ್ನು ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದರು.

ಯುದ್ಧದ ಸಾಲಕ್ಕಾಗಿ ಕಳೆದ ತಾ|| ೧೩ ರವರೆಗೆ ಮೈಸೂರು ಸಂಸ್ಥಾನದಿಂದೆಲ್ಲಾ ಕೂಡಿರುವ ಒಟ್ಟು ಹಣವು ೪೯೧೨೫೦೦. ಹೈದರಾಬಾದು ನೈಜಾಮರಿಂದ ೭೫ ಲಕ್ಷ. ಬರೋಡಾ ಮಹಾರಾಜರಿಂದ ೩೧೧೫೭೮೦೦. ಗ್ವಾಲಿಯರ್ ಮಹಾರಾಜರಿಂದ ೬೩೨೧೦೦೦ ಭಾವಲ್ಪುರು ನವಾಬರಿಂದ ೪೦ ಲಕ್ಷ. ಉಳಿದ ಸಣ್ಣ ಜಮೀನ್ದಾರರಿಂದ ೧೨೯೪೧೫೮೦೦. ಬೊಂಬಾಯಿ ಮೊದಲಾದ ಎಲ್ಲ ಅಧಿಪತ್ಯಗಳಿಂದಲೂ ಮೇಲೆ ಕಂಡ ಸಂಸ್ಥಾನಗಳವರಿಂದಲೂ ಸಹ ಒಟ್ಟು ಕೂಡಿರುವ ಹಣವು ೩೧೯೬೯೫೫೦೦ ರೂ. ಗಳಾಗಿರುತ್ತವೆ. ಈ ತಿಂಗಳು ತಾ|| ೧೫ ಕ್ಕೆ ಈ ಸಾಲಕ್ಕೆ ಹಣ ಕೊಡುವ ಗಡುವು ಮುಗಿದುಹೋಗುತ್ತದೆ. ಅಷ್ಟರಲ್ಲಿ ಇನ್ನೂ ೧-೨ ಕೋಟಿಗಳು ಸೇರಬಹುದು. ಅಷ್ಟಾದರೆ ಈ ಭರತಖಂಡದಲ್ಲಿ ಯುದ್ಧದ ಸಾಲಕ್ಕಾಗಿ ಪ್ರಜೆಗಳು ತಲೆ ೧ಕ್ಕೆ ೧ ರೂ. ನಂತೆ ಕೊಟ್ಟಂತಾಗುವುದು. ಇದು ಬಹಳ ಕಡಿಮೆಯೆಂತಲೇ ಹೇಳಬಹುದು. ಈ ಮೊತ್ತವು ಭರತಖಂಡದ ಬಡತನಕ್ಕೆ ನಿದರ್ಶಕವಾಗಿರುವುದು ಮಾತ್ರವೇ ಅಲ್ಲದೆ, ಸಾಲಕ್ಕೆ ಹಣ ಕೊಡಲು ಜನರಲ್ಲಿ ತಕ್ಕಷ್ಟು ಧೈರ್ಯವೂ ತಿಳವಳಿಕೆಯೂ ಸಾಲದೆಹೋಗಿರುವುದೂ ಒಂದು ಕಾರಣವಾಗಿರಬೇಕೆಂದು ತೋರುವುದು.

ರಾಜಧಾನಿಯ ಮ್ಯುನಿಸಿಪಾಲಿಟಿಗೆ ಇನ್ನು ೧೦ ಜನ ಕೌನ್ಸಿಲರನ್ನು ಹೆಚ್ಚಾಗಿ ಆರಿಸುವ ವಿಷಯದಲ್ಲಿ ಈ ಸಲ ನಡೆದ ಸ್ಪರ್ಧೆಯು ವಿಶೇಷವಾಗಿದ್ದಿತು. ಆಯಾ ಮೊಹಲ್ಲೆಗಳಿಗೆ ಕೌನ್ಸಿಲರಾಗಲು ನಿಂತಿದ್ದವರು ಅವರಲ್ಲಿ ಜಯಶೀಲರಾದವರ ಹೆಸರುಗಳನ್ನು ಈ ಕೆಳಗೆ ಕೊಟ್ಟಿರುತ್ತೇವೆ. ಚಾಮರಾಜಮೊಹಲ್ಲಾಕ್ಕೆ—ಮ|| ಗಳಾದ (೧) ಬಿ. ಆರ್. ಕೃಷ್ಣಮಾಚಾರರು, (೨) ಎ. ಕೃಷ್ಣರಾಯರು. ಇವರಿಬ್ಬರೂ ಕೃತಾರ್ಥರಾದರು. ಕೃಷ್ಣರಾಜಮೊಹಲ್ಲೆಗೆ—ಮ|| ಗಳಾದ (೧) ಅಡ್ವೋಕೇಟ್ ಸಿ. ನರಸಿಂಹಯ್ಯನವರು, (೨) ವೆ|| ಮಿ|| ಹೈಸ್ಕೂಲ್ ಮಾಸ್ಟರರಾದ ಎನ್. ದೇಶಿಕಾಚಾರ್‍ರು, (೩) ಪ್ಲೀಡರ್ ಎಂ. ಎಸ್. ಕೃಷ್ಣಸ್ವಾಮಿರಾವ್‍ರವರು, (೪) ಕೃಷ್ಣಪ್ಪಾಜಿ ಅರಸಿನವರು, (೫) ಗೋಮಠಂ ಶ್ರೀನಿವಾಸಜೋಯಿಸರು, (೬) ಆಜಿ. ನರಸಿಂಹಾಚಾರ್ ಬಿ. ಎ., ಯವರು. ಇವರಲ್ಲಿ ೧-೨-೩ ನೆಯವರು ಕೃತಾರ್ಥರಾದರು. ದೇವರಾಜಮೊಹಲ್ಲೆಗೆ—(೧) ಹಟ್ಟಿ ರಂಗಯ್ಯಂಗಾರರು, (೨) ಎ. ಸುಬ್ಬಣ್ಣನವರು. ಇವರಲ್ಲಿ ೧ ನೆಯವರು ಕೃತಾರ್ಥರಾದರು. ಲಷ್ಕರ್ ಮೊಹಲ್ಲಾಕ್ಕೆ—ಮ|| ಗಳಾದ (೧) ಅಡ್ವೋಕೇಟ್ ಕೆ. ಚಂದ್ರಶೇಖರಯ್ಯನವರು, (೨) ಥಿಯೋಬಾಲ್ಡ್ ರವರು, ಅಡ್ವೋಕೇಟ್ ಎಂ. ಎನ್. ಸುಬ್ಬಣ್ಣನವರು, ಅಡ್ವೋಕೇಟ್ ವೆಂಕಟರಾಯರು, ಎಂ. ಎನ್. ಸೆಟ್ಟೋಜಿರಾಯರು. ಇವರಲ್ಲಿ ೧-೨ ನೆಯವರು ಕೃತಾರ್ಥರಾದರು. ಮಂಡಿಮೊಹಲ್ಲಾಕ್ಕೆ—ಮಿ|| ಗಳಾದ (೧) ಅಬ್ದುಲ್ ಅಜೀಜ್ ಪಾಷಾ ಸಾಹೇಬರು, ಹಾರ್ಡ್‍ಕರ್ ಸಾಹೇಬರು, ಬಾಲಾರಾಂಸಿಂಗ್‍ರವರು, ರಿಟೈರ್ಡ್ ಸರ್ಕಲ್ ಇನ್ಸ್‍ಪೆಕ್ಟರ್ ಶ್ರೀನಿವಾಸರಾಯರು, ಶ್ರೀಕಂಠಾಚಾರರು, ಆದಿರಾಜಯ್ಯನವರು. ಇವರಲ್ಲಿ ೧-೨ ನೆಯವರು ಕೃತಾರ್ಥರಾದರು.

ಎಡತೊರೆಯ ಸಾ|| ಬಳೆ ಸಿದ್ಧಲಿಂಗಸೆಟ್ಟರ ಸಮೀಪಬಂಧುವಾದ ವೀರಭದ್ರಪ್ಪ ಎಂಬ ವಿದ್ಯಾರ್ಥಿಯು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಎಫ್. ಎ. ತರಗತಿಯಲ್ಲುತ್ತೀರ್ಣರಾಗಿ ಬಿ. ಎ. ತರಗತಿಯಲ್ಲೋದುವವರಾಗಿದ್ದರು. ಇವರು ಕೆಲ ತಿಂಗಳಿಂದಲೂ ಕ್ಷಯಿಯುಪದ್ರವಕ್ಕೆ ಗುರಿಯಾಗಿ ಕೃಶರಾಗುತ್ತಿದ್ದು ಕಳೆದವಾರ ತಮ್ಮ ಸ್ಥಳದಿಂದ ರಾಜಧಾನಿಗೆ ಬಂದಾಗ ರೋಗವು ಉಲ್ಬಣವಾಗಲು, ತಾನು ಇನ್ನು ಉಳಿಯುವ ಆಸೆಯಿಲ್ಲವೆಂದು ತನ್ನ ೧೬ ವರ್ಷ ವಯಸ್ಸಿನ ಹೆಂಡತಿಯಾದ ಗಂಗಮ್ಮ ಎಂಬಾಕೆಯೊಡನೆ ನುಡಿಯಲು, ಪತಿವ್ರತೆಯಾದಾಕೆಯು ಪತಿ ವಿಯೋಗವನ್ನು ಮುಂದೆ ಹೇಗೆ ಸೈರಿಸಿಕೊಂಡಿರಲಿ ಎಂಬ ದುಃಖಭಯಗಳಿಂದ ಸರಿರಾತ್ರಿಯಲ್ಲಿ ಮನೆಯನ್ನು ಬಿಟ್ಟು ಯಾರಿಗೂ ಕಾಣದಂತೆ ಹೋಗಿ ನಲ್ಲಪ್ಪನ ಕಾಣದ ಮಗ್ಗುಲಲ್ಲಿರುವ ಬಾವಿಯಲ್ಲಿ ಬಿದ್ದು ಪ್ರಾಣವನ್ನು ಕಳೆದುಕೊಂಡಳು. ಅಂತ್ಯಾವಸ್ಥೆಯಲ್ಲಿದ್ದ ಪತಿಗೆ ಮರುದಿನ ಪತ್ನಿಯ ಮರಣದ ಸುದ್ದಿಯು ತಿಳಿಯಿತು. ಆತನೂ ಮಧ್ಯಾಹ್ನದಹೊತ್ತಿಗೆ ದೇಹಪರಿತ್ಯಾಗ ಮಾಡಿದನು. ಪತಿ-ಪತ್ನಿಯರೀರ್ವರ ಶವಗಳೂ ಏಕಕಾಲದಲ್ಲಿ ಒಟ್ಟಿಗೆ ಸ್ಮಶಾನಕ್ಕೆ ಸಾಗಿಸಲ್ಪಟ್ಟು ಏಕತ್ರ ಸಮಾಧಿಸಂಸ್ಕಾರ ಮಾಡಲ್ಪಟ್ಟುವು. ಚಿಕ್ಕವಯಸ್ಸಿನವಳಾಗಿದ್ದಾಗ್ಗೂ ತಂದೆಯ ಮನೆಯವರು ಶ್ರೀಮಂತರಾಗಿದ್ದಾಗ್ಗೂ ಪತಿಯಳಿದ ಸ್ತ್ರೀಯ ವೈಧವ್ಯವು ಭೂಭಾರವಾದುದೆಂಬುದನ್ನು ಯೋಚಿಸಿ ಸೌ|| ಗಂಗಮ್ಮನು ತೋರಿಸಿದ ಸ್ವಾರ್ಥತ್ಯಾಗವು ಪರಮ ಪಾತಿವ್ರತ್ಯದ ಲಕ್ಷಣವಾಗಿರುವುದು. ವಿದ್ಯಾವಂತರಾಗುತ್ತಿರುವವರ ಸಂಖ್ಯೆಯು ಬಹಳ ವಿರಳವಾಗಿರುವ ವೀರಶೈವ ಸಮಾಜಕ್ಕೆ ಮ|| ವೀರಭದ್ರಪ್ಪನವರಂಥ ವರ್ಧಿಷ್ಣುಗಳ ಮರಣವು ನಷ್ಟಕರವಾದುದು. ಈ ದಂಪತಿಗಳ ವಿಯೋಗವು ಅವರ ಬಾಂಧವವರ್ಗಕ್ಕೆ ಮಾತ್ರವೇ ಅಲ್ಲದೆ ಸಮಾಜದವರಿಗೆಲ್ಲಾ ವ್ಯಸನಪ್ರದವಾಗಿರುವುದು. ಸ್ಮರಣೀಯರಾದ ಈ ದಂಪತಿಗಳ ನಾಮವನ್ನು ಯಾವುದಾದರೊಂದು ಧರ್ಮಕಾರ್ಯರೂಪದಲ್ಲಿ ಚಿರಸ್ಮರಣೀಯವಾಗುವಂತೆ ಮಾಡುವಲ್ಲಿ ಅವರ ಬಂಧುವರ್ಗದವರು ಯೋಚಿಸುತ್ತಿರುವರೆಂದು ಕೇಳಿ ಅವರ ಉಚಿತಜ್ಞತೆಯನ್ನು ಶ್ಲಾಘಿಸುತ್ತೇವೆ.

ಯುದ್ಧವಾರ್ತೆಯು

(ಪಶ್ಚಿಮರಣರಂಗ)

ಈ ರಂಗದಲ್ಲಿ ಆಂಗ್ಲಸೈನಿಕರು ಕಳೆದವಾರ ಮಹತ್ತರವಾದ ಜಯವೊಂದನ್ನು ಪಡೆದಿರುತ್ತಾರೆ. ಪ್ರಬಲವಾದ ವಿಮಿಗುಡ್ಡವನ್ನು ಸ್ವಾಧೀನಮಾಡಿಕೊಂಡೀಚೆಗೆ ಆದ ಜಯದಲ್ಲಿ ಇದೇ ದೊಡ್ಡದು. ಈಮಧ್ಯೆ ಶತ್ರುಗಳು ಆಂಗ್ಲಸೇನೆಯ ಪುರೋಗಮನವನ್ನು ತಡೆದುಬಿಟ್ಟರೆಂಬ ಸುದ್ದಿಯು ಹರಡಿ ಮಿತ್ರಮಂಡಲಿಯವರು ಇನ್ನು ಮುಂದಕ್ಕೆ ನುಗ್ಗಿಹೋಗುವುದು ಅಸಾಧ್ಯವೆಂದು ಲೋಕವು ಭಾವಿಸುವಂತಾಗಿದ್ದಿತು. ಆದರೆ ಕಳೆದವಾರದ ಇಂಗ್ಲಿಷ್‌ಸೈನಿಕರ ಶೌರ್ಯಾಟೋಪಗಳನ್ನು ನೋಡಲಾಗಿ ಜರ್ಮನರ ಪರಾಜಯವು ದೂರದಲ್ಲಿಲ್ಲವೆಂಬುದು ಎಲ್ಲರಿಗೂ ತೋರುವಂತಾಗಿರುವುದು. ಇಂಗ್ಲೀಷರಿಗುಂಟಾದ ಆ ಮಹತ್ತರವಾದ ಜಯವಾವುದೆಂದರೆ ಮೆಸಯಿನ್ ಎಂಬ ಉನ್ನತವಾದ ಗುಡ್ಡವನ್ನೂ ಅದರ ಬಳಿಯಲ್ಲಿದ್ದ ಗ್ರಾಮಗಳನ್ನೂ ವಶಪಡಿಸಿಕೊಂಡುದೇ ಆಗಿರುತ್ತದೆ. ಜರ್ಮನರು ಈ ಮೆಸಯಿನ್ ಗುಡ್ಡವನ್ನು ಈಗ್ಗೆ ೩೩ ತಿಂಗಳ ಕೆಳಗೆ ವಶಪಡಿಸಿಕೊಂಡು ಅಂದಿನಿಂದ ಇದರ ಸುತ್ತಲೂ ಬಹಳ ಪ್ರಬಲವಾದ ದುರ್ಗಾವಳಿಗಳನ್ನೇರ್ಪಡಿಸಿಕೊಂಡಿದ್ದರು. ಎಲ್ಲಕ್ಕೂ ಮುಂದುಗಡೆ ಮುಳ್ಳಿನ ತಂತಿಗಳ ಬೇಲಿಯ ಕಾಡನ್ನು ೧ ಮೈಲಿಯಗಲಕ್ಕೆ ಸುತ್ತಲೂ ಪರಿಕಲ್ಪಿಸಿದ್ದರು. ಅದರ ಹಿಂದೆ ಸಾವಿರಾರು ಫಿರಂಗಿಗಳನ್ನು ಸಾಲುಸಾಲಾಗಿ ಸಜ್ಜುಗೊಳಿಸಿಟ್ಟಿದ್ದರು. ಅಲ್ಲದೆ ವಿಪರೀತವಾಗಿ ಕಂದಕಗಳ ಸಾಲನ್ನು ತೋಡಿದ್ದರು. ಗುಡ್ಡದ ಮೇಲ್ಗಡೆಯಲ್ಲಿ ಸಿಮೆಂಟಿನಿಂದ ೧೯ ಕೋಟೆಗಳನ್ನು ಕಟ್ಟಿ ಅವುಗಳಲ್ಲೆಲ್ಲಾ ಫಿರಂಗಿಗಳನ್ನು ಸ್ಥಾಪಿಸಿದ್ದರು. ಇಷ್ಟು ರಕ್ಷಣೆಯುಳ್ಳ ಗುಡ್ಡದಮೇಲೆ ಜರ್ಮನ್ ಸೈನ್ಯವು ನಿಂತು ಹಳ್ಳಗಳಲ್ಲಿರುವ ಮಿತ್ರಮಂಡಲಿಯ ಸೈನ್ಯದ ಮೇಲೆ ಯುದ್ಧಮಾಡುತ್ತಿದ್ದುದರಿಂದ, ಈ ಮಿತ್ರಮಂಡಲಿಸೈನ್ಯಕ್ಕೆ ಶತ್ರುಗಳ ಸ್ಥಾನವನ್ನು ಭೇದಿಸುವುದೂ, ಅವರ ಸ್ಥಳಗಳನ್ನು ವಶಪಡಿಸಿಕೊಳ್ಳುವುದೂ ಎಷ್ಟು ಕಠಿನವಾದ ಕಾರ್ಯವಾಗಿದ್ದಿತೆಂಬುದನ್ನು ಹೇಳಬೇಕಾಗಿಲ್ಲ. ಈ ಮೆಸಯಿನ್ ಗುಡ್ಡವು ಶತ್ರುಗಳಿಗೆ ಅತಿ ಮುಖ್ಯವಾದ ರಕ್ಷಣಾಧಾರವಾಗಿಯೂ ಮರ್ಮಸ್ಥಾನವಾಗಿಯೂ ಇದ್ದಿತು. ಇದನ್ನು ಆಧರಿಸಿಕೊಂಡೇ ಮುಂದೆ ಕಲೆಪಟ್ಟಣದಕಡೆಗೆ ಸಾಗಬೇಕೆಂದು ಜರ್ಮನರು ಹವಣಿಸುತ್ತಿದ್ದರು. ಈಪ್ರಸ್ಸಿಗೆ ಉತ್ತರದಲ್ಲಿ ಇಂಗ್ಲಿಷ್ ಸೈನ್ಯದ ಪುರೋಗಮನವನ್ನು ನಿರೋಧಿಸುವುದಕ್ಕೆ ಜರ್ಮನರಿಗೆ ಇದು ಬಹಳ ಸಹಾಯಕಾರಿಯಾಗಿದ್ದಿತು. ಈ ಗುಡ್ಡವು ಶತ್ರುಗಳಿಗೆ ಅಭೇದ್ಯವಾದುದೆಂದು ಜರ್ಮನ್ ಕೈಜರರೂ ಡಂಭವನ್ನು ಕೊಚ್ಚಿಕೊಳ್ಳುತ್ತಿದ್ದರು. ಇಂಥ ಅಭೇದ್ಯವೆನಿಸಿದ್ದ ಮಹಾ ಶತ್ರುಸ್ಥಾನವನ್ನು ಆಂಗ್ಲಸೈನಿಕರು ೨೪ ಗಂಟೆಗಳ ಕಾಲದೊಳಗಾಗಿ ಧ್ವಂಸಮಾಡಿ ವಶಪಡಿಸಿಕೊಂಡುಬಿಟ್ಟರು. ಇದರಿಂದ ಇಂಗ್ಲಿಷ್ ಸೇನಾನಿಗಳ ಯುದ್ಧಕಲಾಕೌಶಲವೂ ಸೈನಿಕರ ಸಮರೋತ್ಸಾಹವೂ ಆ ಯುಧಪಂಕರಗಳ ಬಲವತ್ತರತ್ವವೂ ಚೆನ್ನಾಗಿ ವ್ಯಕ್ತವಾದುವು. ಈ ಗುಡ್ಡಗಳನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶದಿಂದಲೇ ಇಂಗ್ಲಿಷ್ ಸೈನಿಕರು ಬಹಳ ಕಾಲದಿಂದ ಗುಟ್ಟಾಗಿ ಪ್ರಯತ್ನಗಳನ್ನು ಮಾಡಿಕೊಳ್ಳುತ್ತಿದ್ದರು. ಒಂದುವರ್ಷ ಕಾಲದಿಂದಲೂ ಗುಡ್ಡದ ಮೇಲ್ಗಡೆಯ ೧೯ ಕೋಟೆಗಳ ಬುಡಕ್ಕೂ ಸುರಂಗಗಳನ್ನು ಒಳಗೇ ತೋಡಿ ಮದ್ದನ್ನು ಜಡಿಯುತ್ತ ಬಂದರು. ಎಲ್ಲವೂ ಸಜ್ಜಾದ ಬಳಿಕ ಇಂಗ್ಲೀಷ್ ಸೈನಿಕರು ಸುರಂಗಗಳಿಗೆ ಬೆಂಕಿಯನ್ನು ತೋರಿಸಿದ ಕೂಡಲೇ ಹೊತ್ತಿಕೊಂಡು ಪ್ರಳಯಕಾಲಾಗ್ನಿಯೋ ಎಂಬುವಂತೆ ಭೂಗರ್ಭದಿಂದ ಅಗ್ನಿಜ್ವಾಲೆಯನ್ನು ಬೀರಲುಪಕ್ರಮಿಸಿದುವು. ದಿಕ್ತಟಗಳೆಲ್ಲಾ ಮೊಳಗಿಹೋದುವು. ರಾತ್ರಿ ೩ ಗಂಟೆಯ ಹೊತ್ತಿನಲ್ಲಿ ಲಂಡನ್ನಿನಲ್ಲಿ ಮಲಗಿದ್ದ ಮುಖ್ಯಮಂತ್ರಿ ಲಾಯಡ್‍ಜಾರ್ಜ್‌ರವರು ಈ ಶಬ್ದದಿಂದಲೇ ಎಚ್ಚರುಗೊಂಡರಂತೆ! ಅಗ್ನಿಪರ್ವತಸ್ಫೋಟವಾದಂತೆ ಭೂಗರ್ಭವೆಲ್ಲಾ ಬಿರ್ಚಿ ಒಳಗಿಂದ ಕಲ್ಲುಮಣ್ಣು ಗುಂಡುಗಳ ಸಮೇತ ಅಗ್ನಿಕಣಗಳು ಹಾರಿದ ರಭಸಕ್ಕೆ ಶತ್ರುಸೈನ್ಯದಲ್ಲಿ ಹೇಳಲಾಗದಷ್ಟು ಹಾನಿ

ಯಾಯಿತು. ಗುಡ್ಡದ ಸುತ್ತಣ ಭಾಗವೆಲ್ಲಾ ಛಿನ್ನಭಿನ್ನವಾಯಿತು. ಭೂಪ್ರದೇಶವೆಲ್ಲಾ ರೂಪಾಂತರಗೊಂಡುಹೋಯಿತು. ಅಡವಿಯೆಲ್ಲಾ ಜಲಮಯವಾಯಿತು. ಹಳ್ಳಗಳೆಲ್ಲಾ ಸಮಭೂಮಿಯಾದುವು. ಒಂದು ಗುಡ್ಡವು ಮಟ್ಟವಾಗಿ ಮುಳುಗಿಹೋಯಿತು. ಭೂಕಂಪನವೂ ಅದರಿಂದ ವಸ್ತುಸ್ಫೋಟನವೂ ಆಗ ಬಿಂತಮೇಲೂ ಕೂಡ ಎಷ್ಟೋ ಹೊತ್ತಿನವರೆಗೂ ಭೂಮಿಯೊಳಗಿಂದ ಸಣ್ಣಗುಡುಗಿನಂತೆ ಶಬ್ದವು ಕೇಳಬರುತ್ತಲೇ ಇದ್ದಿತು. ಹೀಗೆ ಭೂಗರ್ಭಸ್ಫೋಟವಾಗಿ ನಿಲ್ಲುವ ಹೊತ್ತಿಗೆ ಸರಿಯಾಗಿ ಇಂಗ್ಲಿಷ್ ಪದಾತಿಸೈನ್ಯಗಳು ಶತ್ರುಸ್ಥಾನಗಳ ಮೇಲೆ ನುಗ್ಗಿದುವು. ಇವರ ಫಿರಂಗಿಳು ಅವಿಚ್ಛಿನ್ನವಾಗಿ ಗುಂಡುಗಳ ಮಳೆಯನ್ನು ಶತ್ರುಸ್ಥಾನಗಳಮೇಲೆ ಸುರಿಸುತ್ತ ಬಂದುವು. ಅಂತರಿಕ್ಷದಲ್ಲಿ ಆಂಗ್ಲವಿಮಾನಗಳು ಶತ್ರುಗಳ ಚಲನವಲನಾದಿ ಕಾರ್ಯಗಳನ್ನು ನಿರೀಕ್ಷಿಸುತ್ತಲೂ, ಶತ್ರುಗಳಿಗೆ ಮಿತ್ರಮಂಡಲಿಯ ಕಾರ್ಯಭಾಗವನ್ನು ನೋಡಿಕೊಳ್ಳಲು ಅವಕಾಶ ಕೊಡದಂತೆಯೂ ಮಾಡಿದುವು. ಸ್ವಲ್ಪಕಾಲದೊಳಗಾಗಿ ಇಂಗ್ಲೀಷ್‌ಸೈನ್ಯಗಳು ಶತ್ರುಸೇನಾಪಂಕ್ತಿಯೊಳಗೆ ೯ ಮೈಲಿಯಗಲಕ್ಕೂ ೧ ಮೈಲಿಯುದ್ದಕ್ಕೂ ಇದ್ದ ಸ್ಥಾನವನ್ನು ವಶಪಡಿಸಿಕೊಂಡಿತು. ಅಲ್ಲಿದ್ದ ಶತ್ರುಕಂದಕಗಳೊಳಗೆ ಸಾವಿರಾರು ಜರ್ಮನ್ ಹೆಣಗಳು ಬಿದ್ದು ತುಂಬಿದ್ದುವು. ಈ ಸ್ಥಲದ ಯುದ್ಧದಲ್ಲಿ ೭ ಸಾವಿರಮಂದಿ ಜರ್ಮನ್‌ಸೈನಿಕರೂ, ನೂರಾರು ಫಿರಂಗಿಗಳೂ ಇಂಗ್ಲೀಷರ ವಶವಾದುವು. ಇಂಗ್ಲಿಷರಕಡೆ ಆದ ನಷ್ಟವುಬಹಳ ಸ್ವಲ್ಪ. ಶತ್ರುಗಳ ಕಡೆ ಅಮಿತವಾದ ನಷ್ಟವಾಗಿದೆ. ಅವರ ಕೆಲವು ಪಟಾಲಮ್ಮುಗಳಲ್ಲಿ ಮೂವರು ಮಾತ್ರವೇ ಹತಶೇಷರಾಗಿ ನಿಂತಿದ್ದುದು ಕೂಡ ಗೋಚರಿಸಿತು. ಆ ಬಳಿಕ ಜರ್ಮನರು ಮರುದಿನ ಆ ಸ್ಥಲವನ್ನು ವಶಪಡಿಸಿಕೊಳ್ಳಬೇಕೆಂದು ಬಹಳ ಪ್ರಯತ್ನಪಟ್ಟು ಹತಾಶರಾದರು. ಆಂಗ್ಲಸೈನಿಕರಾದರೊ ಗುಡ್ಡವು ತಮಗೆ ವಶವಾದ ಸ್ವಲ್ಪ ಹೊತ್ತಿನೊಳಗಾಗಿ ಅದರ ಸುತ್ತಲೂ ಆಳವಾದ ಕಂದಕಗಳನ್ನು ತೋಡಿ, ಪ್ರಬಲವಾದ ಸಂರಕ್ಷಕ ದುರ್ಗಗಳನ್ನೇರ್ಪಡಿಸಿ, ಭದ್ರಪಡಿಸಿಕೊಂಡುಬಿಟ್ಟರು. ಈ ಮೆಸಯಿನ್ ಗುಡ್ಡವೂ ಅದರ ಹತ್ತಿರದ ವಿಟ್ಸಯಿಟೆ ಎಂಬ ಪ್ರಸ್ಥಭೂಮಿಯೂ ಸಹ ಇಂಗ್ಲೀಷರಿಗೆ ವಶವಾದುದರಿಂದ, ಈ ಆಂಗ್ಲಸೈನ್ಯದ ಪಕ್ಕದಲ್ಲಿ ಯಾವಾಗಲೂ ಭಲ್ಲೆಯಂತೆ ಕಂಟಕಪಡಿಸುತ್ತಿದ್ದ ಜರ್ಮನರ ಸೂಚೀಮುಖವು ನಿರ್ನಾಮವಾದಂತಾಯಿತು. ಈದರಿಂದ ಇನ್ನುಮೇಲೆ ಇಂಗ್ಲೀಷ್ ಸೇನಾಪಂಕ್ತಿಯು ಈಪ್ರಸ್ಸಿಗೆ ಪಶ್ಚಿಮದಿಂದ ಹಿಡಿದು ದಕ್ಷಿಣದಿಕ್ಕಿಗೆ ಸಮರೇಖೆಯಾಗಿ ನಿಲ್ಲಲು ಅನುಕೂಲವಾಯಿತು. ಇನ್ನುಮುಂದೆ ಈ ದುರ್ಗಾಧಾರದಿಂದ ಆಂಗ್ಲಸೇನೆಯು ಲೆನ್ಸ್-ಲಿಲ್ಲಿ ದುರ್ಗಗಳಮೇಲೆ ಮುತ್ತಿಗೆ ಹಾಕುವುದಕ್ಕೂ ಬಹಳ ಸಹಾಯಕವಾಗುವುದು. ಮತ್ತೂ ಸಮುದ್ರತೀರದಲ್ಲಿರುವ ಜರ್ಮನ್ ಸೈನ್ಯವನ್ನು ಹಿಂದಕ್ಕೆ ದಬ್ಬುವುದಕ್ಕೂ ಈಗಣ ವಿಜಯವು ಮಿತ್ರಮಂಡಲಿಗೆ ಬಹಳ ಸಹಾಯಕಾರಿಯೆಂದುಹೇಳಬಹುದು. ಕಳೆದೆರಡು ವಾರಗಳಿಂದ ಆಂಗ್ಲನೌಕಾದಳವೂ ಕೂಡ ಬೆಲ್ಜಿಯಂ ತೀರದ ಶತ್ರುಸ್ಥಾನವಾದ ಜೀಬ್ರುಗ್ಗನ್ನು ಮುತ್ತಿ ಅದೇ ರೇವಿಗೂ ಅದರಲ್ಲಿದ್ದ ನೌಕೆಗಳಿಗೂ ವಿಮಾನಾಲಯಗಳಿಗೂ ಮದ್ದಿನ ಉಗ್ರಾಣಗಳಿಗೂ ಬಹಳ ನಷ್ಟಪಡಿಸಿರುತ್ತವೆ. ಇನ್ನುಮೇಲೆ ಆ ನೌಕಾದಳದ ಪ್ರತಾಪವೂ ಹೀಗೆಯೇ ಹೆಚ್ಚಬಹುದು. ಜಲಮಾರ್ಗದಿಂದಲೂ ಭೂಮಾರ್ಗದಿಂದಲೂ ಮಿತ್ರಮಂಡಲಿಯವರು ಹೀಗೆಯೇ ಬಿಗಿಪಟ್ಟಿನಿಂದ ಕೆಲಸಮಾಡುವ ಸೂಚನೆಗಳು ತೋರುತ್ತಿವೆ. ಹೀಗಾದರೆ ಬೆಲ್ಜಿಯಂ ದೇಶವನ್ನೂ ಫ್ರಾನ್ಸಿನ ಅವಶಿಷ್ಟಭಾಗವನ್ನೂ ಶತ್ರುಗಳ ಹಸ್ತದಿಂದ ಕಸುಗೊಳ್ಳುವುದಕ್ಕೆ ಈ ವರ್ಷದ ಅಂತ್ಯದವರೆಗೂ ಕಾಲವು ಬೇಕಾಗಲಾರದು. ಹಿಂದೆ ವಿಮಿ ಗುಡ್ಡವನ್ನು ಇಂಗ್ಲೀಷ್ ಸೈನಿಕರು ವಶಪಡಿಸಿಕೊಳ್ಳುವುದಕ್ಕೆ ಅದರಮೇಲೆ ೫೦ ಲಕ್ಷ ಗುಂಡುಗಳನ್ನು ಪ್ರಯೋಗಿಸಿದ್ದರು. ಈ ಮೆಸಯಿನ್ ಗುಡ್ಡವನ್ನು ವಶಪಡಿಸಿಕೊಳ್ಳುವುದಕ್ಕಾದರೊ ೬೦ ಲಕ್ಷ ಗುಂಡುಗಳನ್ನು ಪ್ರಯೋಗಿಸಿರುವರೆಂದು ಲೆಕ್ಕಹಾಕಲ್ಪಟ್ಟಿದೆ. ಈಚೆಗೆ ಇಂಗ್ಲೀಷರು ಆ ಮೆಸಯಿನ್ ಗುಡ್ಡದ ಆಗ್ನೇಯದಿಕ್ಕಿಗೂ ದಕ್ಷಿಣಕ್ಕೂ ಈಶಾನ್ಯಕ್ಕೂ ಸಹ ಮುಂದಕ್ಕೆ ನುಗ್ಗಿ ಶತ್ರುಗಳ ಇನ್ನು ಕೆಲ ಕಂದಕಗಳನ್ನೂ ಸ್ಥಾನಗಳನ್ನೂ ವಶಪಡಿಸಿಕೊಂಡರೆಂಬ ವರ್ತಮಾನ ಬಂದಿದೆ.

ರಷ್ಯಾ ರಂಗದಲ್ಲಿ ಕಾರ್ಪೇತಿಯನ್ ಕಾಡುಗಳಲ್ಲೂ ಪೂರ್ವ ಗಲೀಷಿಯಾದಲ್ಲೂ ಕೆಲವು ಸಣ್ಣ ಯುದ್ಧಗಳು ನಡೆಯುತ್ತವೆ. ರಷ್ಯನ್ ಸೈನ್ಯಗಳು ಚುರುಕಾಗಿ ಕೆಲಸಮಾಡುತ್ತಿವೆ. ಆಸ್ಟ್ರಿಯಾದ ಕೆಲ ಪ್ರತಿನಿಧಿಗಳು ಸಂಧಿಗೋಸ್ಕರವೆಂದು ರಷ್ಯಾಕ್ಕೆ ಹೋಗಿದ್ದರು. ಅವರು ರಷ್ಯನ್ ಸೈನಿಕರಲ್ಲಿ ದುರ್ಬೋಧನೆಯನ್ನು ಮಾಡಿ ಒಡಕು ಹುಟ್ಟಿಸುವರೆಂಬ ಸೂಚನೆ ತೋರಲು, ಅವರನ್ನೆಲ್ಲಾ ರಷ್ಯಾಪ್ರಭುತ್ವದವರು ಹಿಡಿದು ಸೆರೆಯಲ್ಲಿಟ್ಟಿದ್ದಾರೆ.

ಐರ್ಲಂಡಿನ ಸುಪ್ರಸಿದ್ಧ ದೇಶಭಕ್ತರೂ ಶೂರರೂ ಪಾರ್ಲಿಮೆಂಟಿನ ಸಭಿಕರೂ ಆಗಿದ್ದ ಮೇಜರ್ ರೆಡ್ಮಂಡ್‌ರವರು ಮೆಸಯಿನ್ ಗುಡ್ಡದ ಬಳಿಯಣ ಯುದ್ಧದಲ್ಲಿ ಗಾಯಗೊಂಡು ಮೃತರಾದರು. ಚಕ್ರವರ್ತಿಯವರು ಮುಖ್ಯಮಂತ್ರಿಯವರು ಪಾರ್ಲಿಮೆಂಟಿನವರುಗಳೆಲ್ಲಾ ಇವರ ಮೃತಿಗಾಗಿ ಅನುತಾಪಪ್ರದರ್ಶನಮಾಡಿ ಅವರ ದೇಶಭಕ್ತಿ ಶೌರ್ಯೋತ್ಸಾಹಾದಿಗಳನ್ನು ಕೊಂಡಾಡಿರುವರು.

ಇಟಲಿ ರಂಗದಲ್ಲಿ ಆಸ್ಟ್ರಿಯನ್ನರು ೧ ಲಕ್ಷ ಮಂದಿಗಳವರೆಗೆ ತಮ್ಮ ಸೈನಿಕರನ್ನು ಒಂದು ಕಡೆಗೆ ಕೂಡಿಸಿ ಜಾರಿಯಾಕ್ಕೆ ದಕ್ಷಿಣದಲ್ಲಿ ಕೆಲ ಗಜಗಳುದ್ದದ ಕೆಸರಿನ ಭೂಮಿಯನ್ನು ಇಟಲಿಯವರಿಂದ ಕಿತ್ತುಕೊಂಡರು. ಇದು ಅಷ್ಟು ಪ್ರಯೋಜಕವಾದ ಸ್ಥಲವಾಗಿಲ್ಲದುದರಿಂದ ಅದಕ್ಕಾಗಿ ಬಡಿದಾಡಿ ನಷ್ಟಪಡುವುದು ವ್ಯರ್ಥವೆಂದು ತಿಳಿದು ಇಟಲಿಯವರು ಸುಲಭವಾಗಿ ಅದನ್ನು ಬಿಟ್ಟುಕೊಟ್ಟರು. ಮತ್ತೂ ಏಸಿಯಾಗೋ ಪೀಠಭೂಮಿಯಮೇಲಿದ್ದ ಅನೇಕ ಶತ್ರುಸ್ಥಾನಗಳನ್ನು ಇಟಲಿಯವರು ವಶಪಡಿಸಿಕೊಂಡರು. ಓಟಿಕ್‌ಗಾರಾ ಎಂಬ ಬೆಟ್ಟವಾದ್ಯಂತವಾಗಿ ಇಟಲಿಯವರ ವಶವಾಯಿತು. ಇಟಲಿಯವರ ಸಬ್‌ಮೆರೀನು ಆಸ್ಟ್ರಿಯನ್ನರ ಒಂದು ಯುದ್ಧನೌಕೆಯನ್ನು ಮುಳುಗಿಸಿತು.

ಸಾಹಿತ್ಯಪರಿಷತ್ತಿನಲ್ಲಿ ಮ|| ಎಚ್. ವಿ. ನಂಜುಂಡಯ್ಯನವರು ಮಾಡಿದ ಭಾಷಣ.

"ಮಹಾಸ್ವಾಮಿ,—

ಕನ್ನಡಭಾಷೆಯನ್ನೂ, ಸಾಹಿತ್ಯವನ್ನೂ ಪುಷ್ಟಿಗೊಳಿಸಿ, ಅಭಿವೃದ್ಧಿಗೆ ತಂದು, ಈ ದೇಶದ ಯಾವಯಾವ ಪ್ರಾಂತಗಳಲ್ಲಿ ಈ ಭಾಷೆ ಪ್ರಚಾರವಾಗಿದೆಯೋ, ಆ ಪ್ರಾಂತ್ಯದ ಜನರನ್ನೆಲ್ಲ ಕೂಡಿಸಿ, ಅವರಿಗೆ ಭಾಷೆಯಲ್ಲಿ ಪರಸ್ಪರ ಏಕಮತ್ಯವೂ, ಬಳಕೆಯೂ ಮತ್ತಷ್ಟು ಹೆಚ್ಚಾಗುವಂತೆ ಮಾಡುವುದೇ ಕರ್ನಾಟಕ ಸಾಹಿತ್ಯಪರಿಷತ್ತಿನ ಉದ್ದೇಶ. ಈ ಮಹಾಕಾರ್ಯಕ್ಕೆ ದೇಶಾಭಿವೃದ್ಧಿಯಲ್ಲಿ ಆಸಕ್ತರಾದ ಸಕಲ ಜನಗಳೂ ಒಟ್ಟುಗೂಡಿ ಸಹಾಯ ಮಾಡಬೇಕು. ಮೈಸೂರು ದೇಶದಲ್ಲಿ ಇತರ ವಿಷಯಗಳಲ್ಲಿ ಎಷ್ಟೇ ಪುರೋಭಿವೃದ್ಧಿಯಾಗಿದ್ದರೂ ಭಾಷಾವಿಷಯದಲ್ಲಿ ಮಾತ್ರ ದೇಶವು ಬಹಳ ಹಿಂದುಳಿದಿದೆ. ಇಲ್ಲಿ ಈಚೀಚೆಗೆ ನಡೆಯುವ ಭಾಷಾಸಾಹಿತ್ಯಗಳ ಕೆಲಸವೂ, ಆ ಕೆಲಸದ ಗುಣವೂ ತೀರ ಕಡಿಮೆಯಾಗಿರುವುದು ತುಂಬಾ ಶೋಚನೀಯವಾಗಿದೆ. ನಮ್ಮಲ್ಲಿರುವ ಶಕ್ತಿಯನ್ನೆಲ್ಲ ಸದ್ಯಃ ಫಲವಾಗತಕ್ಕ ಅಥವಾ ಅಧಿಕ ಸಂಪಾದನೆಯಾಗತಕ್ಕ ಇತರ ಕಾರ್ಯಗಳಲ್ಲಿ ವಿನಿಯೋಗಿಸುತ್ತಿರುವುದಾಗಿ ಕಾಣುತ್ತದೆ. ರೋಂ ದೇಶದ ಅಗಸ್ಟಸ್ ಚಕ್ರವರ್ತಿಯ ಕಾಲದಲ್ಲಿ ಆ ದೇಶಭಾಷೆಯು ಯಾವಪ್ರಕಾರ ಅಭ್ಯುದಯಸ್ಥಿತಿಯಲ್ಲಿತ್ತೋ, ಅದೇ ಪ್ರಕಾರ ಚಿರಸ್ಮರಣೀಯರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಆಳ್ವಿಕೆಯ ಪ್ರಾರಂಭದಲ್ಲಿ ಕನ್ನಡ ಸಾಹಿತ್ಯವು ಅಭ್ಯುದಯಸ್ಥಿತಿಯನ್ನು ಹೊಂದುವಹಾಗಿತ್ತು. ಆದರೆ, ಆಗಿನ ಪ್ರಯತ್ನಗಳು ಅತ್ಯಲ್ಪಕಾಲದವರೆಗೆ ಮಾತ್ರವೇ ನಡೆದದ್ದರಿಂದ ಅಷ್ಟೇನೂ ಹೆಚ್ಚಿನ ಫಲಗಳು ಗೋಚರಕ್ಕೆ ಬರಲಿಲ್ಲ.

ಈಗಿನ ನಮ್ಮ ಶ್ರೀಮನ್ ಮಹಾರಾಜರವರು ಭಾಷಾಭಿವೃದ್ಧಿಯಲ್ಲಿ ಪೂರ್ವಕಾಲದ ರಾಜಾಧಿರಾಜರುಗಳಂತೆ ತಮ್ಮ ವಂಶದವರಾದ ಚಿಕ್ಕದೇವರಾಯರ ಕಾಲದಿಂದಲೂ ಪರಂಪರೆಯಾಗಿ ಬಂದ ಕ್ರಮವನ್ನು ಅನುಸರಿಸಿ, ಹೆಚ್ಚಿನ ಲಾಭಬರುವ ಇತರ ಸಂಪದಭಿವೃದ್ಧಿ ವಿಷಯಗಳಂತೆಯೇ ವಿದ್ಯಾವಿಷಯಕ್ಕೂ ಅನೇಕ ಪ್ರೋತ್ಸಾಹಗಳನ್ನು ಕೊಡಬೇಕೆಂಬ ಅಭಿಪ್ರಾಯವುಳ್ಳವರಾಗಿರುತ್ತಾರೆ. ಕನ್ನಡ ಮಾತನಾಡತಕ್ಕ ಜನರು ಈ ರಾಜ್ಯದ ಹೊರಗಿರತಕ್ಕ ಪ್ರದೇಶಗಳಲ್ಲಿ ಲಕ್ಷೋಪಲಕ್ಷ ಮಂದಿ ಇರುತ್ತಾರೆ. ಇವರೊಡನೆ ನಮ್ಮ ಜನಗಳೂ ಸೇರಿ, ಒಕ್ಕಟ್ಟಾಗಿ ಕೆಲಸಮಾಡುತ್ತಾ ಸಹಾಯಪಡೆಯಬೇಕು. ಇದರಿಂದ ದೇಶದ ಪ್ರತಿಯೊಂದು ಭಾಗದಲ್ಲಿಯೂ ಇರುವ ಜನರನ್ನು ವಿದ್ಯಾಭಿವೃದ್ಧಿಯ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು. ಮತ್ತು ಇವರಿಗಾಗಿ ಸರಕಾರದ ಗೋಜೇ ಇಲ್ಲದೆ, ಯಾವವಿಧವಾದ ರಾಜಕೀಯೋದ್ದೇಶಗಳನ್ನೂ ಒಳಕೊಳ್ಳದೆ ಇರತಕ್ಕ ಒಂದು ಸಂಘವು ಏರ್ಪಾಟಾಗಬೇಕೆಂದು ಗೊತ್ತಾಯಿತು. ಆ ಪ್ರಕಾರವೇ ಈ ಪರಿಷತ್ತನ್ನು ಮಹಾರಾಜ ಸರ್ಕಾರದವರ ಉದಾರವಾದ ಸಹಾಯದಿಂದ ಸ್ಥಾಪಿಸಲಾಯಿತು.

ಕರ್ನಾಟಕ ಸಾಹಿತ್ಯಾಭಿವೃದ್ಧಿ ವಿಷಯದಲ್ಲಿ ಮೊದಲಿನ ಎರಡು ಸಭೆಗಳು ಬೆಂಗಳೂರಲ್ಲಿ ನಡೆದುವು. ಈ ಮೂರನೆಯ ಸಭೆಯು ಎಂದರೆ, ಕರ್ನಾಟಕ ಸಾಹಿತ್ಯಪರಿಷತ್ತಿನ ಸ್ಥಾಪನೆಯಾದಮೇಲೆ ನಡೆಯತಕ್ಕ ಈ ಎರಡನೆಯ ಸಾಹಿತ್ಯ ಸಮ್ಮೇಳನವು ಶ್ರೀಮನ್ ಮಹಾರಾಜರವರ 34 ನೆಯ ವರ್ಧಂತ್ಯುತ್ಸವದ ಶುಭಕಾಲದಲ್ಲಿ ಈ ಮೈಸೂರು ರಾಜಧಾನಿಯಲ್ಲಿ ಸೇರಿದೆ. ಅದರಿಂದಲೇ, ಶ್ರೀಮದ್ಯುವರಾಜರವರು ಇಲ್ಲಿಗೆ ಬಿಜಯಮಾಡಿಸಿ, ಈ ಸಮ್ಮೇಳನದ ಪ್ರಾರಂಭ ಮಹೋತ್ಸವಕಾಲದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸುವುದಕ್ಕೆ ಅನುಕೂಲವಾಗಿ ಈ ಸಭೆಗೆ ಅಸಾಧಾರಣವಾದ ಗೌರವವನ್ನು ದಯಪಾಲಿಸಿದಂತಾಗಿದೆ.

ಮೊದಲು ಮೊದಲು ಬೆಂಗಳೂರಲ್ಲಿ ಸಮ್ಮೇಳನವು ನಡೆದಾಗ, ಪರಿಷತ್ತಿನ ಉದ್ದೇಶಗಳೇನು? ಅದರಿಂದ ಯಾವಯಾವ ವಿಧವಾದ ಕೆಲಸಗಳು ನಡೆಯಬೇಕು? ಯಾವ ಮಾರ್ಗಗಳಿಂದ ಉದ್ದೇಶವನ್ನು ಸಾಧಿಸಬೇಕು? ಎಂಬ ವಿಷಯಗಳನ್ನು ಕುರಿತು ವಿವರವಾಗಿ ತಿಳಿಸಿದ್ದೆನು. ಅದನ್ನು ಪುನಃ ಇಲ್ಲಿ ಹೇಳುವುದಿಲ್ಲ. ಈ ಪರಿಷತ್ತಿನ ಕೆಲಸವು ತಕ್ಕಮಟ್ಟಿಗಾದರೂ ಚೆನ್ನಾಗಿ ನಡೆಯಬೇಕಾದಲ್ಲಿ, ಹಣದ ಸಹಾಯವು ಒದಗಬೇಕಾದುದು ಮಾತ್ರವೇ ಅಲ್ಲದೆ, ಸಮರ್ಥರೂ, ಪಂಡಿತರೂ ಆದವರ ಉದಾರಾಶ್ರಯವು ಎಡೆಬಿಡದೆ ಮನಃಪೂರ್ವಕವಾಗಿ ದೊರೆಯುತ್ತಿರಬೇಕು. ಸಭೆಗಳನ್ನೂ, ಸಮ್ಮೇಳನಗಳನ್ನೂ ಮಾಡುವುದೂ, ನಿಬಂಧನೆಗಳನ್ನೂ, ತಿದ್ದುಪಾಟುಗಳನ್ನೂ ಮಾಡುವುದೂ, ಇವೇ ಮುಖ್ಯ ಕೆಲಸಗಳಲ್ಲ. ಶ್ರೀಮನ್ ಯುವರಾಜರವರು ಇಲ್ಲಿಗೆ ಬಿಜಯಮಾಡಿಸಿ, ತಮ್ಮ ಆಶ್ರಯವನ್ನು ಇತ್ತು, ಸಭಾ ಸಮಾರಂಭಕಾರ್ಯವನ್ನು ಹಸನ್ಮುಖದಿಂದ ನಡೆಸಿರುವುದನ್ನು ನೋಡಿದರೆ, ಶಾಶ್ವತವಾಗಿ ನಿಲ್ಲತಕ್ಕ ಕೆಲಸಗಳನ್ನು ಮಾಡಲು ಸಮರ್ಥರಾದವರ ಸಹಾಯವನ್ನು ಸಂಪಾದಿಸುವುದಕ್ಕೂ, ಹಣವಂತರಾದ ಪೋಷಕರ ಉದಾರಾಶ್ರಯವನ್ನು ಸಂಪಾದಿಸುವುದಕ್ಕೂ ಬಹಳ ಅನುಕೂಲವಾಗಿದೆ. ಶ್ರೀಮನ್ಯುವರಾಜರವರ ಘನಸಾನ್ನಿಧ್ಯದಿಂದ ಪರಿಷತ್ತಿನ ಸಾಮಾಜಿಕರಿಗೆ ಬಹಳಮಟ್ಟಿಗೆ ಪ್ರೋತ್ಸಾಹವಾಗಿರುವುದಲ್ಲದೆ, ಅವರು ಮತ್ತಷ್ಟು ಚಟುವಟಿಕೆಯಿಂದ ಕೆಲಸಮಾಡಲು ಹುರಿದುಂಬಿಸಿದಂತಾಗಿದೆ. ಸರ್ಕಾರದವರು ಮಾಡಿರುವ ಉದಾರವಾದ ಸಹಾಯವನ್ನು ನೋಡಿದರಕ್ಷದಲ್ಲಿ, ಶ್ರೀಮನ್ ಮಹಾರಾಜರವರಿಗೆ ಪರಿಷತ್ತಿನ ವಿಷಯದಲ್ಲಿ ಎಷ್ಟರಮಟ್ಟಿಗೆ ಪ್ರೀತಿವಿಶ್ವಾಸಗಳಿವೆ ಎಂಬ ಸಂಗತಿಯು ನಿರ್ಧರವಾಗಿ ತಿಳಿದುಬರುತ್ತದೆ. ಇದೇ ಸಹಾಯವು ಮುಂದೆಯೂ ನಡೆದು, ಇನ್ನೂ ಹೆಚ್ಚುವುದೆಂದು ನಂಬಿದೆ. ಶ್ರೀಮನ್ಯುವರಾಜರವರು ಈ ಸಭಾ ಸಮಾರಂಭದ ಅಧ್ಯಕ್ಷಸ್ಥಾನವನ್ನು ಕೃಪೆಯಿಟ್ಟು ಅಂಗೀಕರಿಸಿರುವುದನ್ನು ನೋಡಿದರೆ ಪರಿಷತ್ತಿನ ಉದ್ದೇಶಗಳು ಅವರ ಮೆಚ್ಚಿಕೆಗೆ ಪಾತ್ರವಾಗಿರುವುವೆಂಬ ಸಂಗತಿ ಮಾತ್ರವೇ ಅಲ್ಲದೆ, ಶ್ರೀಮನ್ ಮಹಾರಾಜರವರಿಗೂ ಕೂಡ ಇದರಲ್ಲಿ ಆದರಾಸಕ್ತಿಗಳಿವೆ ಎಂಬ ವಿಷಯವು ಚೆನ್ನಾಗಿ ತಿಳಿಯಬಂದು, ಕನ್ನಡಭಾಷಾ ಸಾಹಿತ್ಯಗಳ ಪುರೋಭಿವೃದ್ಧಿಗೆ ಬಲವಾದ ರಾಜಾಶ್ರಯವು ದೊರೆತಿರುವುದೆಂಬ ಸಂಗತಿಯನ್ನು ದೃಢಪಡಿಸುತ್ತದೆ."

ಶ್ರೀಮದ್ಯುವರಾಜರವರ ಭಾಷಣ.

"ಕನ್ನಡಭಾಷೆಯ ಅಭಿವೃದ್ಧಿಯಲ್ಲಿ ಉದ್ಯುಕ್ತರಾಗಿರುವ ನೀವುಗಳು ನನ್ನನ್ನು ಈ ಕರ್ನಾಟಕ ಸಾಹಿತ್ಯಪರಿಷತ್ತಿನ ಸಭೆಯನ್ನು ಉಪಕ್ರಮಿಸಲು ಬರಮಾಡಿಕೊಂಡು ಸುಖಾಗಮನವನ್ನು ಬಯಸಿರುವುದಕ್ಕಾಗಿ ಬಹಳ ಸಂತೋಷಪಡುತ್ತೇನೆ.

ಸಾಮಾನ್ಯವಾಗಿ ಭರತಖಂಡದಲ್ಲಿ ಆಯಾ ಕಾಲದಲ್ಲಿ ನಡೆದ ವಿದ್ಯಮಾನಗಳಿಂದಲೂ ಇಂಗ್ಲೀಷ್ ವಿದ್ಯಾ ಪ್ರಾಚುರ್ಯದಿಂದಲೂ ಪಶ್ಚಿಮದೇಶದ ಗ್ರಂಥಶಾಸ್ತ್ರಾದಿಗಳಲ್ಲಿ ಉಂಟಾದ ಉತ್ಸಾಹದಿಂದಲೂ ದೇಶಭಾಷೆಗಳ ವ್ಯಾಸಂಗವು ಮಲಿನವಾದದ್ದು ಎಲ್ಲರಿಗೂ ತಿಳಿದೇ ಇದೆ. ಪ್ರಕೃತದಲ್ಲಿ ತಕ್ಕಮಟ್ಟಿಗೆ ಇಂಗ್ಲೀಷ್ ವಿದ್ಯಾವ್ಯಾಸಂಗವು ಇಂಡಿಯಾದೇಶದ ಏಳಿಗೆಗೆ ಅತ್ಯಂತ ಆವಶ್ಯಕವಾಗಿರುವ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಪ್ರಜಾಸಾಮಾನ್ಯಕ್ಕೆ ಶೀಘ್ರವಾಗಿ ಜ್ಞಾನೋದಯವನ್ನುಂಟುಮಾಡಲು ಇಂಗ್ಲೀಷ್ ಭಾಷೆಯು ದೇಶಭಾಷೆಗಳಂತೆ ಉಪಯೋಗವಾಗುವುದಿಲ್ಲ. ಈಗಿನ ನವೀನ ಶಾಸ್ತ್ರಗಳ ಜ್ಞಾನವನ್ನು ಪ್ರಜಾಸಾಮಾನ್ಯಕ್ಕೆ ಉಂಟುಮಾಡಬೇಕಾದರೆ ದೇಶಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿ ಅವುಗಳಲ್ಲಿ ಅವರಿಗೆ ಅಭಿರುಚಿ ಉಂಟಾಗುವಂತೆ ಮಾಡುವುದೇ ಸುಲಭೋಪಾಯವಾಗಿದೆ. ಈ ವಿಷಯವನ್ನು ತಿಳಿದು ನೀವು ಸಂಪದಭ್ಯುದಯ ಸಮಾಜದವರ ಇಷ್ಟಾನುಸಾರವಾಗಿ ಈ ಪರಿಷತ್ತನ್ನು ಏರ್ಪಾಡುಮಾಡಿ, ನವೀನಗ್ರಂಥ ನಿಘಂಟುಗಳ ರಚನೆ ಮತ್ತು ಗ್ರಂಥಕರ್ತರಿಗೆ ಬಹುಮಾನ ಇವೇ ಮೊದಲಾದ ಭಾಷಾಪ್ರೋತ್ಸಾಹಕರವಾದ ಕಾರ್ಯಗಳಲ್ಲಿ ಉದ್ಯುಕ್ತರಾಗಿರುತ್ತೀರಿ. ಈ ಉದ್ದೇಶವನ್ನು ನೆರವೇರಿಸುವುದಕ್ಕಾಗಿಯೇ ಸರ್ಕಾರದವರೂ ಕೂಡ ಪಾಠಶಾಲೆಗಳಲ್ಲಿ ಪಾಠಕ್ರಮಗಳನ್ನು ತಿದ್ದುಪಾಟುಮಾಡಿ ಗ್ರಂಥಕರ್ತರಿಗೂ ಈ ಪರಿಷತ್ತಿಗೂ ಸಹಾಯ ಮಾಡಿರುತ್ತಾರೆ. ಯಾರೇ ಆಗಲಿ ಒಂದು ಜನಾಂಗದವರು ಎನ್ನಿಸಿಕೊಳ್ಳಬೇಕಾದರೆ ಅವರ ದೇಶಭಾಷೆಯೇ ಅದಕ್ಕೆ ಒಂದು ಮುಖ್ಯಕಾರಣವಾಗಿಯೂ ಚಿಹ್ನೆಯಾಗಿಯೂ ಇರುತ್ತದೆ. ಅದರಿಂದ ಪರಸ್ಪರ ಏಕಮತ್ಯವೂ ಸೌಭ್ರಾತೃತ್ವವೂ ಉಂಟಾಗುವುದು ಎಲ್ಲರಿಗೂ ತಿಳಿದೇ ಇದೆ.

ನಮ್ಮ ಕನ್ನಡ ದೇಶದ ಚರಿತ್ರೆಯಲ್ಲಿಯೂ ಪರಂಪರಾಗತವಾದ ಅಭಿಪ್ರಾಯದಲ್ಲಿಯೂ ಸ್ವಾಭಾವಿಕಗುಣಗಳಲ್ಲಿಯೂ ಪ್ರೀತಿಯುಳ್ಳ ಯಾವ ಹಿತೈಷಿಯೂ ಮೇಲ್ಕಂಡ ಸಭೆಯು ಸಕಾಲದಲ್ಲಿ ಹುಟ್ಟಿತೆಂದು ಹೇಳದೆ ಇರಲಾರನು. ಇದುವರೆಗೂ ನೀವು ಮಾಡಿರುವ ಕಾರ್ಯವು ವಿಶೇಷವಾಗಿ ಇಲ್ಲದಿದ್ದಾಗ್ಯೂ, ನೀವು ಉತ್ಸಾಹಭಗ್ನರಾಗಲು ಕಾರಣವಿಲ್ಲ. ನೀವು ಹಿಡಿದಿರುವ ಕಾರ್ಯವು ಮಹತ್ತರವಾದದ್ದು. ಆದಕಾರಣ ಪ್ರಥಮತಃ ನೀವೆಲ್ಲರೂ ಏಕಮನಸ್ಕರಾಗಿ ಸುಲಭೋಪಾಯಗಳನ್ನು ಏರ್ಪಾಡುಮಾಡಿಕೊಂಡು ಪ್ರಾರಂಭಮಾಡಬೇಕಾದರೆ ಸ್ವಭಾವಿಕವಾಗಿ ಸ್ವಲ್ಪಕಾಲ ಬೇಕಾಗಿರುವುದೇನೂ ಆಶ್ಚರ್ಯವಲ್ಲ.

ಸುಲಭವಾದ ಹೊಸಕನ್ನಡದ ಅಭಿವೃದ್ಧಿಗೆ ಕುಂದಿಲ್ಲದಂತೆ ಹಳೆಗನ್ನಡ ರೂಪಗಳನ್ನು ಎಷ್ಟುಮಟ್ಟಿಗೆ ಪುನಃ ಉಪಯೋಗಕ್ಕೆ ತರಬಹುದು. ಕನ್ನಡಭಾಷೆಯು ಉಪಯೋಗದಲ್ಲಿರುವ ಬೇರೆಬೇರೆ ಪ್ರಾಂತ್ಯಗಳಲ್ಲಿ ಅಲ್ಲಲ್ಲಿ ಮಾತ್ರ ವಾಡಿಕೆಯಾಗಿರುವ ಮಾತುಗಳನ್ನು ಹೊಂದುವಹಾಗೆ ಮಾಡಿ ಏಕರೀತಿಯಾಗುವುದಕ್ಕೋಸ್ಕರ ಏನುಮಾಡಬೇಕು; ಹೇಗೆ ಗ್ರಂಥಗಳನ್ನು ಅಭಿವೃದ್ಧಿಪಡಿಸಬಹುದು; ನವೀನವಾದ ಅಭಿಪ್ರಾಯಗಳನ್ನು ತಿಳಿಯಪಡಿಸುವುದಕ್ಕೆ ಈಗ ತಕ್ಕ ಪುಸ್ತಕಗಳು ಇಲ್ಲದೆ ಇರುವ ಕೊರತೆಯನ್ನು ಹೇಗೆ ಹೋಗಲಾಡಿಸಬಹುದು; ಗ್ರಂಥಗಳನ್ನು ಓದುವುದರಲ್ಲಿಯೂ ಬರೆಯುವುದರಲ್ಲಿಯೂ ಜನಗಳಿಗೆ ಆಸಕ್ತಿಯನ್ನು ಹೇಗೆ ಹುಟ್ಟಿಸಿ ಅಭಿವೃದ್ಧಿಪಡಿಸಬೇಕು; ಬರೆದು ಪ್ರಕಟಿಸಿರುವ ಪುಸ್ತಕಗಳಿಗೆ ಗಿರಾಕಿ ಉಂಟಾಗುವುದಕ್ಕೋಸ್ಕರ ಏನು ಪ್ರಯತ್ನಗಳನ್ನು ಮಾಡಬೇಕು; ಇವೇ ಮೊದಲಾದ ವಿಷಯಗಳಿಗೆ ಪರಿಷತ್ತಿನವರು ಮುಂದೆ ವಿಶೇಷ ಗಮನ ಕೊಡುವರೆಂದು ನಂಬುತ್ತೇವೆ.

ಇತರ ಕರ್ನಾಟಕ ದೇಶಗಳಿಂದ ಪ್ರತಿನಿಧಿಗಳು ಬಂದು ಈ ಸಭೆಯಲ್ಲಿ ಸೇರಿರುವುದು ಬಹಳ ಸಂತೋಷಪ್ರದವಾಗಿದೆ. ಈ ಪರಿಷತ್ತಿನ ಉದ್ದೇಶಗಳು ನೆರವೇರುವುದಕ್ಕೆ ಅವರುಗಳ ಸಹಾಯವು ಅಮೂಲ್ಯವು. ಮೈಸೂರು ದೇಶದವರು ಇತರ ಕನ್ನಡ ದೇಶಗಳ ಜನಗಳೊಡನೆ ಸೇರಿ ಪರಸ್ಪರ ಸಂಬಂಧವು ಹೆಚ್ಚುವುದಕ್ಕಾಗಿಯೂ ಆ ದೇಶಗಳ ಜನಗಳ ಅನುಕೂಲ್ಯಕ್ಕಾಗಿಯೂ ಆ ಸ್ಥಳಗಳಲ್ಲಿ ಯುಕ್ತವಾದ ಪ್ರದೇಶಗಳಲ್ಲಿ ಕೆಲವು ವರ್ಷಗಳು ಈ ಸಭೆಯನ್ನು ನಡೆಸಬಹುದೇ ಎಂಬುವ ಅಂಶವನ್ನು ನೀವು ಯೋಚಿಸಬಹುದು.

ಆ ಸ್ಥಳಗಳ ಪ್ರತಿನಿಧಿಗಳ ಸಂಖ್ಯೆಯು ಕಡಿಮೆಯಾಗಿದೆ. ಇದು ದಿನೇ ದಿನೇ ಹೆಚ್ಚಿ ಎಲ್ಲಾ ಕನ್ನಡ ಜನಗಳಿಗೂ ಉಪಯೋಗವಾಗಿರುವ ಈ ಕಾರ್ಯದಲ್ಲಿ ನಾನಾ ಕನ್ನಡ ಪ್ರಾಂತ್ಯಗಳ ಪರಸ್ಪರ ಸಹಾಯವು ಇತಃಪರಃ ವಿಶೇಷವಾಗಿ ಉಂಟಾಗಬೇಕೆಂದು ನಾವು ಹಾರೈಸುತ್ತೇವೆ.

ಈ ಸಭೆಯವರು ಕೈಕೊಂಡಿರುವ ಮಹತ್ಕಾರ್ಯವು ಸಾಂಗವಾಗಿ ನೆರವೇರುವುದಕ್ಕೆ ನೀವು ಹೇಳುವಂತೆ ವಿಶೇಷವಾದ ದ್ರವ್ಯಸಹಾಯವು ಬೇಕಾಗಿರುವುದಲ್ಲದೆ, ತಮ್ಮ ಕಾಲವನ್ನೆಲ್ಲ ಈ ಸಭಾಕಾರ್ಯಕ್ಕೆ ಮನಃಪೂರ್ವಕವಾಗಿ ಉಪಯೋಗಿಸಿ ಉತ್ಸಾಹದಿಂದ ಕೆಲಸಮಾಡುವವರೂ ಬೇಕಾಗಿದೆ. ವರ್ಷಕ್ಕೆ ಒಂದಾವರ್ತಿ ಸಭೆಯು ಸೇರಿ ಒಳ್ಳೆಯ ತೀರ್ಮಾನಗಳನ್ನು ಮಾತ್ರ ಮಾಡಿ ತದನಂತರ ಆ ವರ್ಷದಲ್ಲೆಲ್ಲಾ ನಿರಂತರವಾಗಿ ಕೆಲಸಮಾಡದೆಹೋದರೆ ವಿಶೇಷ ಪ್ರಯೋಜನವುಂಟಾಗಲಾರದು. ಕರ್ನಾಟ ಜನಾಂಗದ ನಡೆನುಡಿಗಳ ವೃದ್ಧಿಸ್ಥಿತಿಯನ್ನು ತೋರ್ಪಡಿಸುವ ಸದ್ಗ್ರಂಥಗಳು ಕನ್ನಡಭಾಷೆಯಲ್ಲಿಯೇ ಇರುತ್ತವೆ. ದೇಶಾಭಿಮಾನಿಗಳಾಗಿಯೂ ವೃದ್ಧಾಚಾರಗಳಲ್ಲಿ ವಿಶ್ವಾಸವುಳ್ಳವರಾಗಿಯೂ ಇರುವ ಯಾರುತಾನೇ ಕನ್ನಡಭಾಷೆಯ ಅಭಿವೃದ್ಧಿಯಲ್ಲಿ ಉದಾಸೀನಮಾಡುತ್ತಾರೆ? ನೀವು ಕೈಕೊಂಡಿರುವ ಕಾರ್ಯವು ಶ್ಲಾಘ್ಯವಾದದ್ದು. ಅದನ್ನು ನೆರವೇರಿಸುವ ವಿಷಯದಲ್ಲಿ ನಿಮಗೆ ಅನೇಕ ತೊಂದರೆಗಳು ಉಂಟಾಗಬಹುದು. ಆದಾಗ್ಯೂ, ನೀವು ಅಧೈರ್ಯಪಡುವುದಕ್ಕೆ ಕಾರಣವಿಲ್ಲ. ಬಂಗಾಳಿ ಮತ್ತು ಮಹಾರಾಷ್ಟ್ರ ಭಾಷೆಗಳು ಕಾಲಾನುಸಾರವಾಗಿ ಅಭಿವೃದ್ಧಿಪಡಿಸಲ್ಪಟ್ಟಿವೆ. ಆಂಧ್ರರೂ ಕೂಡ ತಕ್ಕಮಟ್ಟಿಗೆ ತಮ್ಮ ಭಾಷೆಯನ್ನು ಅಭಿವೃದ್ಧಿಪಡಿಸಿರುತ್ತಾರೆ. ಹೀಗೆ ಇತರ ಪ್ರಾಂತ್ಯಗಳ ಜನಗಳು ಇಷ್ಟುಮಟ್ಟಿಗೆ ಕಾರ್ಯಸಾಧನೆಯನ್ನು ಮಾಡಿಕೊಂಡಿರುವಾಗ ನೀವು ಅವರಂತೆಯೇ ಕ್ರಮವಾದ ಏರ್ಪಾಡನ್ನು ಆಲೋಚಿಸಿಕೊಂಡು ಶ್ರದ್ಧೆಯಿಂದ ಕೆಲಸವನ್ನು ಮಾಡಿದರೆ ನಿಮ್ಮ ಉದ್ದೇಶವು ಸಿದ್ಧಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಮ|| ಎಚ್. ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ನೀವು ಈಗ ಇರಬಹುದಾದ ನ್ಯೂನತೆಗಳಿಗೆ ಗಮನವನ್ನು ಕೊಟ್ಟು ಉತ್ತಮವಾದ ಏರ್ಪಾಡುಗಳನ್ನು ಮಾಡಿಕೊಂಡು ವಿಶೇಷ ದಕ್ಷತೆಯಿಂದ ಕಾರ್ಯಸಾಧನೆ ಮಾಡಲು ಶಕ್ತರಾಗಿ ಈಗಿನ ಮತ್ತು ಮುಂದಿನ ಕನ್ನಡಿಗರ ಶಾಶ್ವತವಾದ ಕೃತಜ್ಞತೆಗೆ ಪಾತ್ರರಾಗುವಿರೆಂಬ ಅಭಿಪ್ರಾಯದಿಂದ ನಾವು ಈ ಪರಿಷತ್ತಿನ ವಾರ್ಷಿಕಸಭೆಯ ಪ್ರಾರಂಭಮಹೋತ್ಸವವನ್ನು ಬೆಳೆಸಿರುತ್ತೇವೆ.

ಬಳಿಕ ಪರಿಷತ್ತಿನ ಗೌ|| ಕಾರ್ಯದರ್ಶಿಗಳಾದ ಮ|| ಪಿ. ಎಸ್. ಅಚ್ಯುತರಾಯರು ಕಳೆದವರ್ಷ ಪರಿಷತ್ತಿನವರು ನಡೆಯಿಸಿರುವ ಕಾರ್ಯಗಳ ವರದಿಯನ್ನೋದಿದರು. ಅದರಲ್ಲಿ ಕಂಡ ಮುಖ್ಯಾಂಶಗಳೇನೆಂದರೆ—ಇಂಥಸಾಹಿತ್ಯಪರಿಷತ್ತುಗಳ ಉದ್ದಿಷ್ಟಕಾರ್ಯಗಳು ಬೇಗನೆಯೂ ಸುಲಭವಾಗಿಯೂ ನೆರವೇರುವವುಗಳಲ್ಲ. ಇದಕ್ಕೆ ವಿಶೇಷವಾಗಿ ದ್ರವ್ಯಸಹಾಯವೂ ಪಂಡಿತಸಹಾಯವೂ ಬೇಕು. ಈ ಪರಿಷತ್ತು ಹುಟ್ಟಿ ೨ ವರ್ಷಮಾತ್ರವೇ ಆಗಿದ್ದರೂ ಇದರಿಂದ ನಡೆದಿರುವ ಕಾರ್ಯವು ಸಮರ್ಪಕವಾಗಿಯೇ ಇದೆ. ದೇಶಭಾಷಾ ಸಂಸ್ಕರಣ, ನೂತನ ಕ್ರಮ ಗ್ರಂಥ ರಚನ, ಪುರಾತನ ಗ್ರಂಥಪ್ರಚಾರ, ಭಾಷಾಕೋಶ ರಚನ-ಇವು ನಾಲ್ಕೇ ಪರಿಷತ್ತಿನ ಉದ್ದೇಶಗಳು. ಕೋಶರಚನೆಗೋಸ್ಕರ ಈಗಾಗಲೇ ೭ ಮಂದಿ ಪಂಡಿತರನ್ನು ಗೊತ್ತುಮಾಡಿ ಸಾಮಾನ್ಯಪದಗಳಿಗೆ ಅವರಿಂದ ಅರ್ಥವನ್ನು ಬರೆಯಿಸಲು ಏರ್ಪಡಿಸಿದೆ. ಮತ್ತು ಇಂಗ್ಲೀಷ್ ಕನ್ನಡ ನಿಘಂಟುವಿನ ರಚನೆಗೆ ಉಪಸಂಘಗಳನ್ನೇರ್ಪಡಿಸಿದೆ. ಪರಿಷತ್ತಿನ ಸಭಿಕರಿಂದ ಬರಬೇಕಾದ ಸಹಾಯ ದ್ರವ್ಯದಲ್ಲಿ ೩೮೨೦ ರೂ. ಶೇಷವು ನಿಂತು ೪೮೧-೧೩-೭ ಮಾತ್ರ ಬಂದಿದೆ. ಮೈಸೂರು ಸರ್ಕಾರದಿಂದ ಪ್ರತಿಮಾಸದಲ್ಲೂ ಒದಗುವ ೧೫೦ ರೂ. ಸಹಾಯ ದ್ರವ್ಯದಿಂದ ಪರಿಷತ್ಕಾರ್ಯಕ್ಕೆ ಬಹಳ ಸಹಾಯವಾಗಿದೆ. ಪರಿಷತ್ತಿಗೆ ಸಂಬಂಧಿಸಿದಂತೆ ಒಂದು ಧರ್ಮಾರ್ಥವಾಚನಮಂದಿರವೂ ಪುಸ್ತಕಭಾಂಡಾಗಾರವೂ ಸ್ಥಾಪಿತವಾಗಿವೆ. ಅನೇಕ ಗ್ರಂಥಕರ್ತರು ಮುದ್ರಿತಾಮುದ್ರಿತಗ್ರಂಥಗಳನ್ನು ಇದಕ್ಕೆ ಕಳುಹಿಸಿಕೊಡುತ್ತಿದ್ದಾರೆ. ಪರಿಷತ್ತಿನಿಂದ ಪ್ರಕಟಿತವಾಗುತ್ತಿರುವ ತ್ರೈಮಾಸಿಕ ಪತ್ರಿಕೆಯಲ್ಲಿ ಬಂದಿರುವ ಲೇಖನಗಳು ಉಪಯುಕ್ತವಾದುವುಗಳು. ಅವುಗಳಲ್ಲಿ ಕೆಲ ಲೇಖನಗಳು ಬೇರೆಬೇರೆ ದೇಶಭಾಗಗಳಲ್ಲಿನ ಭಾಷಾಪ್ರಯೋಗರೀತಿಯನ್ನು ತೋರ್ಪಡಿಸುತ್ತಿವೆ. ಗ್ರಾಂಥಿಕ ಭಾಷಾಪ್ರಯೋಗ ಸಂಸ್ಕರಣಕ್ಕೆ ಒಂದೆರಡು ಲೇಖನಗಳು ಮಾರ್ಗದರ್ಶಕವಾಗಿವೆ. ಕೆಲ ಲೇಖನಗಳು ಅಸಾಧಾರಣ ಶೋಧನಚಾತುರ್ಯ ನಿದರ್ಶಕಗಳಾಗಿವೆ. ಕೆಲ ಲೇಖನಗಳು ಚರಿತ್ರ ನಿರ್ಧಾರಕ್ಕೆ ಸಹಾಯಕಗಳಾಗಿವೆ. ಈ ಪತ್ರಿಕೆಯನ್ನು ಮಾಸಪತ್ರಿಕೆಯನ್ನಾಗಿ ಮಾಡಬೇಕೆಂಬಪೇಕ್ಷೆಯಿದೆ. ಪ್ರಥಮವರ್ಷದ ಈ ಪತ್ರಿಕಾ ಸಂಚಿಕೆಗಳ ಮುದ್ರಣಕ್ಕೆ ಒಟ್ಟು ೭೪೯ ರೂ. ಗಳ ವೆಚ್ಚವಾಗಿದೆ. ಬಂದಿರುವ ವರ್ಗಣಿಯಾದರೊ ೫೧ ರೂ. ಮಾತ್ರ. ಸಾಮಾಜಿಕರಿಂದ ಬಂದಿರುವ ಸಹಾಯದ್ರವ್ಯವು ೩೩೬ ಹೋಗುತ್ತ ಉಳಿದ ೪೧೪ ರೂ. ಗಳನ್ನು ಪರಿಷತ್ತಿನ ಮೂಲದ್ರವ್ಯದಿಂದ ಈ ಪತ್ರಿಕೆಯ ವೆಚ್ಚಕ್ಕೆ ಕೊಡಲಾಗಿರುವುದು. ಮುಂದೆಯೂ ಹೀಗೆಯೇ ಆದರೆ ಪರಿಷತ್ತಿಗೆ ಬಹಳ ತೊಂದರೆಯಾಗುವುದು. ಸುಲಭಶೈಲಿಯಲ್ಲಿ ಲೋಕವ್ಯವಹಾರಜ್ಞಾನಪ್ರಸಾರಸಾಧಕಗ್ರಂಥಗಳನ್ನು ಬರೆಯಿಸಿ ಪ್ರಕಟಿಸಬೇಕೆಂದು ಪರಿಷತ್ತಿನ ಪ್ರಥಮಸಮ್ಮೇಳನದಲ್ಲಿ ನಡೆದ ನಿರ್ಧಾರ ಪ್ರಕಾರಕ್ಕೆ ಗಾರ್‌ಫೀಲ್ಡ್ ರವರ ಚರಿತ್ರೆಯನ್ನು ಪರಿಷತ್ತಿನವರು ಮುದ್ರಿಸಿರುವರು. ಈ ಗ್ರಂಥಪ್ರಕಾಶನವನ್ನು ವೃತ್ತಪತ್ರಿಕೆಗಳು ಶ್ಲಾಘಿಸಿರುವುದಲ್ಲದೆ ಮೈಸೂರು ವಿದ್ಯಾಭ್ಯಾಸಶಾಖೆಯವರು ಇದನ್ನು ಶಾಲೆಗಳಿಗೆ ಪಠ್ಯಪುಸ್ತಕವನ್ನಾಗಿಯೂ ಬಹುಮಾನ ಪ್ರದಾನ ಯೋಗ್ಯಗ್ರಂಥವನ್ನಾಗಿಯೂ ನಿರ್ಧರಿಸಿರುತ್ತಾರೆ. ಪ್ರಾಚೀನ ಗ್ರಂಥೋದ್ಧಾರೋದ್ದೇಶವನ್ನನುಸರಿಸಿ ಚಾವುಂಡರಾಯ ಪುರಾಣವನ್ನು ಮುದ್ರಿಸಲು ಪ್ರಯತ್ನಿಸಲಾಗಿದೆ. ಪರಿಷತ್ತಿನ ಕಾರ್ಯನಿರ್ವಾಹಕ್ಕೆ ಧನಸಹಾಯವು ಅತ್ಯಾವಶ್ಯಕವಾಗಿದೆ. ಈ ನಾಡಿನ ಸಕಲ ತರಗತಿಯ ಜನರ ಧನಸಹಾಯವನ್ನೂ ಪರಿಷತ್ತಿನ ಕಾರ್ಯನಿರ್ವಾಹಕರು ಬಲಿಯು ಪ್ರಾರ್ಥಿಸಿ ಹಾರೈಸುತ್ತಾರೆ."

ಸಂಪದಭ್ಯುದಯ ಸಭೆಯಲ್ಲಿ ನಡೆದ ದಿವಾನರವರ ಭಾಷಣ

ಸಂಪದಭ್ಯುದಯ ಸಭೆಯಲ್ಲಿ ಅಧ್ಯಕ್ಷರಾಗಿದ್ದ ದಿವಾನರು ಮಾಡಿದ ಆರಂಭಭಾಷಣದಲ್ಲಿ ಈ ಸಮಾಜದವರು ಕಳೆದ ವರ್ಷದಲ್ಲಿ ಮಾಡಿದ ಕಾರ್ಯಗಳ ವಿವರವೂ ಮುಂದಣವರ್ಷ ಮಾಡಲುದ್ದೇಶಿಸಿರುವ ಕಾರ್ಯಗಳ ಸ್ವರೂಪವೂ ಸಂಗ್ರಹಿಸಿ ಹೇಳಲ್ಪಟ್ಟಿತು. ಅದರ ಮುಖ್ಯಾಭಿಪ್ರಾಯವನ್ನು ಇಲ್ಲಿ ತಿಳಿಯುತ್ತೇವೆ:—

ಪ್ರಜೆಗಳಲ್ಲಿ ಉದ್ಯೋಗಿಕ ಜ್ಞಾನವಿಕಾಸವನ್ನು ಮಾಡಿ, ಅವರ ಆರ್ಥಿಕ ಸಂಪತ್ತಿಯನ್ನು ಅಭಿವೃದ್ಧಿಗೊಳಿಸಬೇಕೆಂಬುದೇ ಮುಖ್ಯೋದ್ದೇಶವಾಗುಳ್ಳ ಈ ಸಭೆಯು ಕಳೆದಾರುವರ್ಷಗಳಿಂದ ಕೆಲಸಮಾಡುತ್ತಿದೆ. ಯೂರೋಪಿನ ಮಹಾಯುದ್ಧದಿಂದ ವ್ಯಾಪಾರಾದಿಗಳ ಸ್ಥಿತಿಗತಿಗಳಲ್ಲಿ ಬಹಳವಾದ ವ್ಯತ್ಯಾಸಗಳುಂಟಾಗಿದ್ದರೂ, ತಕ್ಕ ಯಂತ್ರಾದ್ಯುಪಕರಣಗಳು ನಮ್ಮ ದೇಶಕ್ಕೆ ಬರದೆ ಇದ್ದರೂ ಈ ಸಮಾಜದ ಉದ್ದಿಷ್ಟಕಾರ್ಯಗಳು ತೃಪ್ತಿಕರವಾಗಿ ವೃದ್ಧಿ ಹೊಂದುತ್ತಲೇ ಇವೆ. ಈ ಸಮಾಜದ ವಾಣಿಜ್ಯ ಪರಿಶ್ರಾಮಿಕ ಶಾಖೆಯ ಕಾರ್ಯಗಳು ಬಹಳ ಸಮಗ್ರವಾಗಿ ಅಭಿವೃದ್ಧಿ ಹೊಂದುವಂತೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನಿಸುತ್ತಿದ್ದಾರೆ. ವ್ಯಾಪಾರಾದಿಗಳ ಪುರೋವೃದ್ಧಿಗೆ ವಿದ್ಯೆಯೇ ಮುಖ್ಯಸಾಧನವೆಂಬುದನ್ನರಿತು ಆ ವಿದ್ಯಾ ಪ್ರಸಾರಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವುದರಲ್ಲಿ ಸರ್ಕಾರದವರು ವಿಶೇಷವಾದ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ. ಸಮಾಜದ ವಿದ್ಯಾಶಾಖೆಯು ಬಹಳ ಗಣನೀಯವಾದ ಕೆಲಸವನ್ನು ಮಾಡುತ್ತಿದೆ. ಈ ಶಾಖೆಯ ಪ್ರಯತ್ನಮೂಲಕವಾಗಿಯೇ ಕಳೆದ ವರ್ಷದಲ್ಲಿ ಸಂಸ್ಥಾನದಲ್ಲೆಲ್ಲಾ ೯೮ ಗ್ರಂಥಭಾಂಡಾಗಾರಗಳು ಸ್ಥಾಪಿಸಲ್ಪಟ್ಟವೆ. ಇವುಗಳಿಗಾಗಿ ೧೦ ಸಾವಿರ ರೂ.ಗಳ ಸಹಾಯದ್ರವ್ಯವು ಕೊಡಲ್ಪಟ್ಟಿದೆ. ಮತ್ತೂ ನಿಮ್ನಜಾತಿಯ ಜನಗಳಿಗೆ ವಿದ್ಯಾರ್ಥಿವೇತನವನ್ನು ಕೊಟ್ಟು ಅವರಲ್ಲಿ ವಿದ್ಯೆಯನ್ನು ಹೆಚ್ಚಿಸುವುದಕ್ಕೂ, ಪ್ರಜಾ ಸಾಮಾನ್ಯದಲ್ಲಿ ಶಿಲ್ಪಾದಿ ಶಾಸ್ತ್ರಜ್ಞಾನವನ್ನು ಹೆಚ್ಚಿಸುವುದಕ್ಕೂ, ಅವರನ್ನು ಸಾಂಕೇತಿಕ ವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡುವುದಕ್ಕೂ ಈ ಶಾಖೆಯವರು ಪ್ರಯತ್ನಪಡುತ್ತಿದ್ದಾರೆ. ಪುರಗ್ರಾಮಾದಿಗಳಲ್ಲೆಲ್ಲಾ ಸ್ಥಾಪಿತವಾಗಿರುವ ಪುಸ್ತಕ ಭಾಂಡಾಗಾರಗಳಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಪರಿಶೀಲಿಸುತ್ತಿರುವುದೂ ಪ್ರತಿ ಗ್ರಾಮ ಪಟ್ಟಣಗಳಲ್ಲಿಯೂ ಉಪನ್ಯಾಸಕರನ್ನು ನಿಯಮಿಸಿ ಅವರ ಮೂಲಕ ಪ್ರಜೆಗಳಲ್ಲಿ ಜ್ಞಾನೋದಯವಾಗುವಂತೆ ಮಾಡುವುದೂ ಸಹ ಈ ವಿದ್ಯಾಶಾಖೆಯವರ ಕರ್ತವ್ಯವಾಗಿದೆ. ಈ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಮಾಡುತ್ತಿರುವ ವೆಚ್ಚವು ವರ್ಷೇವರ್ಷೇ ಬಹಳ ಹೆಚ್ಚುತ್ತಿದೆ. ಇದುವರೆಗೆ ಸರ್ಕಾರದವರು ವಿದ್ಯಾಪ್ರಸಾರಕ್ಕಾಗಿ ವರ್ಷವೊಂದಕ್ಕೆ ೨೩೦೭೨೪೮ ರೂ.ಗಳನ್ನು ವೆಚ್ಚಮಾಡುತ್ತಿದ್ದರು. ಈಗಲಾದರೊ ವರ್ಷಕ್ಕೆ ೨೭೮೫೦೨೪ ರೂ.ಗಳು ವೆಚ್ಚಮಾಡಲ್ಪಡುತ್ತಿವೆ. ಸಂಸ್ಥಾನದಲ್ಲಿ ಪ್ರೈಮರಿ ಪಾಠಶಾಲೆಗಳ ಸಂಖ್ಯೆಯು ಬಹಳ ವೃದ್ಧಿಹೊಂದಿದೆ. ಸಂಸ್ಥಾನದಲ್ಲಿ ಇದುವರೆಗೆ ೪೯೦೦ ಪ್ರೈಮರಿ ಪಾಠಶಾಲೆಗಳಿದ್ದುವು. ಈಗಲಾದರೊ ಅವುಗಳ ಸಂಖ್ಯೆಯು ೫೪೨೩ ಕ್ಕೆ ಹೆಚ್ಚಿದೆ. ಇವುಗಳಲ್ಲಿ ಅಭ್ಯಾಸಮಾಡುತ್ತಿರುವ ಬಾಲಕರ ಸಂಖ್ಯೆಯು ೧೩೯೭೭೨ ರಿಂದ ೨೦೧೮೭೨ ಕ್ಕೆ ವೃದ್ಧಿಯಾಗಿರುತ್ತದೆ. ಬಾಲಿಕೆಯರ ಸಂಖ್ಯೆಯು ಕೂಡ ೨೮೪೦೦ ರಿಂದ ೪೦೨೩೦ ಕ್ಕೆ ವೃದ್ಧಿಗೊಂಡಿರುತ್ತದೆ.

ಈ ಸಮಾಜದ ವ್ಯವಸಾಯ ಸಂಘವು ಸಂಸ್ಥಾನದ ವ್ಯವಸಾಯಶಾಖೆಯೊಡನೆ ಸೇರಿ ಕೆಲಸಮಾಡುತ್ತಿದೆ. ವ್ಯವಸಾಯಕ್ಕೆ ಅನುಕೂಲವಾದ ಗೊಬ್ಬರವನ್ನು ಮಾರುವ ಅಂಗಡಿಗಳನ್ನಿಡುವುದಕ್ಕೂ, ಪರಸ್ಪರ ಸಹಕಾರ ಸಂಘಗಳನ್ನು ಅಲ್ಲಲ್ಲಿಗೆ ಸ್ಥಾಪಿಸುವುದಕ್ಕೂ ಈ ಸಂಘದವರು ಯತ್ನಿಸಿರುತ್ತಾರೆ. ಫಲವೃಕ್ಷಗಳ ವ್ಯವಸಾಯವನ್ನು ಹೆಚ್ಚಿಸುವುದರಲ್ಲೂ ವ್ಯವಸಾಯೋಪಯೋಗಿಯಾದ ನವೀನ ಪರಿಕರಣಗಳ ಉಪಯೋಗವನ್ನು ಹೆಚ್ಚಿಸುವುದರಲ್ಲೂ ಈ ಸಂಘದವರು ಬಹಳ ಚೆನ್ನಾಗಿ ಕೆಲಸಮಾಡಿದ್ದಾರೆ. ರೈತರಿಗೆ ವ್ಯವಸಾಯವಿದ್ಯೆಯನ್ನು ದೇಶಭಾಷೆಯಲ್ಲೇ ಕಲಿಸುವುದಕ್ಕೆ ತಕ್ಕೇರ್ಪಾಟುಗಳನ್ನು ಇವರು ಮಾಡುತ್ತಿದ್ದಾರೆ. ವ್ಯಾಪಾರಾಭಿವೃದ್ಧಿಗೆ ಸಹಾಯಕಗಳಾದ ಕಬ್ಬು, ಕಾಫಿ ಮೊದಲಾದ ಬೆಳೆಸುಗಳ ಅಭಿವೃದ್ಧಿಗೆ ತಕ್ಕ ಏರ್ಪಾಟುಗಳನ್ನು ಮಾಡುತ್ತಿದ್ದಾರೆ. ವ್ಯವಸಾಯ ವಸ್ತುಪ್ರದರ್ಶನಗಳು ಅಲ್ಲಲ್ಲಿ ನಡೆಯುವಂತೆ ಮಾಡುವಲ್ಲಿ ಇವರು ಬಹಳ ಸಹಾಯಭೂತರಾಗಿ ಕೆಲಸಮಾಡುತ್ತಿದ್ದಾರೆ. ಈಗಿನ ಹೊಸತರದ ಬೇಸಾಯದ ಮುಟ್ಟುಗಳ ಉಪಯೋಗದಿಂದ ವ್ಯವಸಾಯಾಭಿವೃದ್ಧಿಯಾಗುವಂತೆ ಮಾಡಲು ಈ ಸಂಘದವರು ಬಹಳಮಟ್ಟಿಗೆ ಪ್ರಯತ್ನಿಸಿ ಕೆಲಸಮಾಡುತ್ತಿದ್ದಾರೆ, ಸಂಸ್ಥಾನದಲ್ಲಿ ೨ ಕಡೆಗಳೊಳಗೆ ವ್ಯವಸಾಯ ಪರಿಶೋಧನ ಕಾರ್ಯಗಳು ರೈತರ ಪ್ರತ್ಯಕ್ಷವಾಗಿ ನಡೆಯುವುದಕ್ಕೆ ಏರ್ಪಡಿಸಲ್ಪಟ್ಟಿವೆ.

ಈ ಸಮಾಜದ ವಾಣಿಜ್ಯ ಪಾರಿಶ್ರಾಮಿಕ ಶಾಖೆಯವರು ಕೂಡ ಚೆನ್ನಾಗಿ ಕೆಲಸಮಾಡುತ್ತಿದ್ದಾರೆ. ಕಾಗದವನ್ನು ನಿರ್ಮಿಸುವುದಕ್ಕೆ ಅವಶ್ಯಕವಾದ ಸಂಪಣವನ್ನು ಮಾಡುವ ಯಂತ್ರಶಾಲೆಗಳನ್ನು ನಿರ್ಮಿಸುವುದಕ್ಕೂ ಹತ್ತಿಯ ಯಂತ್ರಾಲಯಗಳನ್ನು ಸ್ಥಾಪಿಸುವುದಕ್ಕೂ ಆಲೋಚಿಸುತ್ತಿದ್ದಾರೆ. ಸೀಸದ ಕಡ್ಡಿಗಳನ್ನು ನಿರ್ಮಿಸುವ ಕರ್ಮಾಗಾರಕ್ಕೆ ಉಚಿತವಾದ ಸ್ಥಾನವನ್ನು ಗೊತ್ತುಮಾಡುವುದಕ್ಕೂ, ಕಂಕಳ್ಳಿನ ಪರಿಶ್ರಮವನ್ನು ವೃದ್ಧಿಪಡಿಸುವುದಕ್ಕೂ, ಬಣ್ಣಗಳನ್ನು ನಿರ್ಮಿಸುವುದಕ್ಕೂ ಇದಕ್ಕಾಗಿ ಪ್ರತ್ಯೇಕವಾದೊಂದು ಚಿತ್ರವಸ್ತುಪ್ರದರ್ಶನ ಶಾಲೆಯನ್ನು ಏರ್ಪಡಿಸುವುದಕ್ಕೂ ಈ ಸಂಘದವರು ಪ್ರಯತ್ನಿಸಿದ್ದಾರೆ. ಯುದ್ಧಕಾರಣದಿಂದ ಬೇಕಾದ ಯಂತ್ರಸಾಮಗ್ರಿಗಳು ನಮ್ಮ ದೇಶಕ್ಕೆ ಬರಲು ಅವಕಾಶವಿಲ್ಲದಿರುವ ಕಾರಣ ಈ ಮೇಲೆ ಕಂಡ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಇನ್ನೂ ಅವಕಾಶವಿಲ್ಲದೆ ಹೋಗಿದೆ. ವಾಣಿಜ್ಯಾಭಿವೃದ್ಧಿಗಾಗಿ ಒಂದು ವರ್ತಕಸಂಘವು ಕಳೆದವರ್ಷವೇ ಸ್ಥಾಪಿಸಲ್ಪಟ್ಟಿರುವುದು. ಅದರಲ್ಲಿ ೨೧೩ ಮಂದಿ ಸಭಿಕರಿರುವರು ಈ ಸಂಘದವರು ಪ್ರತಿವಾರದಲ್ಲೂ ವಾಣಿಜ್ಯಕ್ಕೆ ಸಂಬಂಧಪಟ್ಟ ಕಾರ್ಯದ ಪಟ್ಟಿಯನ್ನು ಪ್ರಕಟಿಸುತ್ತಿರುವರು. ಈ ಮುಖ್ಯಸಂಘದ ಶಾಖಾಸಂಘಗಳು ಅನೇಕ ಸ್ಥಳಗಳಲ್ಲೇ ಪಟ್ಟಿವೆ. ನಮ್ಮ ದೇಶದ ವರ್ತಕರಿಗೆ ತಕ್ಕ ಸಮಾಚಾರಗಳನ್ನು ತಿಳಿದು ಒದಗಿಸಿಕೊಡುವುದಕ್ಕೆ ಮದರಾಸು ಬೊಂಬಾಯಿಪಟ್ಟಣಗಳಲ್ಲಿ ನಮ್ಮ ಏಜಂಟರುಗಳಿದ್ದಾರೆ. ನಮ್ಮ ಸಂಸ್ಥಾನದಿಂದ ೬ ಮಂದಿಗಳು ಜಪಾನಿಗೆ ಹೋಗಿ ಆ ದೇಶದ ಪರಿಶ್ರಾಮಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುತ್ತಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಈಗ ಉತ್ತಮವಾದ ಗಂಧದೆಣ್ಣೆಯನ್ನೀಸುವ ಕರ್ಮಾಗಾರದಲ್ಲಿ ಕೆಲಸವು ಚೆನ್ನಾಗಿ ನಡೆಯುತ್ತಿದೆ. ಸಾಬೂನು, ಗುಂಡಿ, ಬಣ್ಣ ಇವುಗಳ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಥಮ ಪ್ರಯತ್ನಗಳು ಜಯಪ್ರದವಾಗಿ ಸಾಗಿರುತ್ತವೆ. ಇನ್ನೂ ಅನೇಕ ಯತ್ನಗಳು ಈ ಸಂಘದವರಿಂದ ಮಾಡಲ್ಪಡುತ್ತಿವೆ. ನಮ್ಮ ದೇಶದ ಸಹಕಾರ ಸಂಘಗಳ ಕೆಲಸವು ಜಯಪ್ರದವಾಗಿ ಸಾಗುತ್ತಿದೆ. ಈ ಸಂಘಗಳ ಸಂಖ್ಯೆಯು ಮೊನ್ನೆ ವರ್ಷಕ್ಕಿಂತ ಕಳೆದವರ್ಷದಲ್ಲಿ ೮೦೦ ರಿಂದ ೯೩೪ ಕ್ಕೆ ಹೆಚ್ಚಿದೆ. ಮೂಲಧನ ಆಪದ್ಧನ ಮೊದಲಾದುವುಗಳ ಅಭಿವೃದ್ಧಿಯೂ ಹೀಗೆಯೇ ಕಂಡುಬಂದಿದೆ. ಜಿಲ್ಲಾ ತಾಲ್ಲೂಕುಗಳ ಆರ್ಥಿಕ ಸಂಘಗಳು ಸಂಪದಭ್ಯುದಯ ಮಹಾಸಭೆಗೆ ಬಹಳ ಸಹಾಯವನ್ನು ಮಾಡುತ್ತಿವೆ. ಮಹಾಸಭೆಯು ಮಾಡಿದ ನಿರ್ಧಾರಗಳನ್ನು ವ್ಯವಹಾರಕ್ಕೆ ತರುವ ವಿಷಯದಲ್ಲಿ ಶ್ಲಾಘನೀಯವಾಗಿ ಪ್ರವರ್ತಿಸುತ್ತಿವೆ. ಈ ಕಾರಣದಿಂದಲೇ ವಿದ್ಯಾಪ್ರಸಾರವು ಪ್ರತಿಯೊಂದು ಸಣ್ಣಸಣ್ಣ ಸ್ಥಳಗಳಲ್ಲೂ ಚೆನ್ನಾಗಿ ಅಭಿವೃದ್ಧಿಗೊಳ್ಳುತ್ತಿದೆ. ಅಕ್ಕಿಯ, ಎಣ್ಣೆಯ, ಹಂಚಿನ ನಿರ್ಮಾಣದ ಕರ್ಮಾಗಾರಗಳ ಸ್ಥಾಪನೆಗೆ ಪ್ರಥಮಪರಿಶೀಲನೆಗಳು ನಡೆದಿರುತ್ತವೆ.

ಬರುವ ವರ್ಷದಲ್ಲಿ ಈ ಸಮಾಜದ ಮೂಲಕ ನಡೆಯಬೇಕಾಗಿರುವ ಕಾರ್ಯಗಳೇನೆಂದರೆ—ನಾವು ಇದುವರೆಗೆ ಮಾಡಿದ ಕಾರ್ಯಗಳು ವ್ಯರ್ಥವಾಗಿ ಹೋಗದೆ ಫಲವಂತವಾಗುವಂತೆ ಮಾಡಲು ಪ್ರಯತ್ನಿಸಬೇಕು. ಪರಿಶೋಧನಾರ್ಥವಾಗಿಯೇ ಒಂದು ಸಂಘವನ್ನು ಪ್ರತ್ಯೇಕವಾಗಿ ಸ್ಥಾಪಿಸಿ ಅದಕ್ಕೊಬ್ಬ ಕಾರ್ಯದರ್ಶಿಯನ್ನು ನಿಯಮಿಸಿ ವಿಜ್ಞಾನ ಶಾಸ್ತ್ರಾಭಿಜ್ಞರಾದ ಜನರಿಂದ ಪರಿಶೋಧನೆಯನ್ನು ನಡೆಯಿಸುತ್ತಿರಬೇಕು. ಈ ಸಂಘದವರು ವ್ಯವಸಾಯ ಪರಿಶ್ರಮಾಭಿವೃದ್ಧಿಗಳಿಗಾಗಿ ತಕ್ಕ ಸೂಚನೆಗಳನ್ನು ಕೊಡುತ್ತಿರಬೇಕು. ಈಗ ನಮ್ಮ ಸಂಸ್ಥಾನದಲ್ಲಿರುವ ರಾಸಾಯನ ಪ್ರಯೋಗಶಾಲೆಯನ್ನೇ ಉಪಯೋಗಿಸಿಕೊಂಡು ಬೇಕಾದರೆ ಅದನ್ನೇ ಇನ್ನಷ್ಟು ಅಭಿವೃದ್ಧಿಪಡಿಸಿಕೊಳ್ಳಬಹುದು. ನಮ್ಮ ಸಂಸ್ಥಾನದ ಕಾಡುಗಳ ವಸ್ತುಗಳನ್ನು ಪರಿಶೋಧಿಸುವುದಕ್ಕೆ ತಕ್ಕ ಶಾಸ್ತ್ರಜ್ಞರನ್ನು ನಿಯಮಿಸಿದರೆ ಸರ್ಕಾರದ ಉತ್ಪತ್ತಿಯು ಬಹಳ ಹೆಚ್ಚಬಹುದು. ಪ್ರತಿಯೊಂದು ತಾಲ್ಲೂಕುಗಳಲ್ಲೂ ಸ್ಥಾಯಿಸಂಘಗಳನ್ನೇರ್ಪಡಿಸಿ ಆ ಸ್ಥಳಗಳ ವಿದ್ಯಾದ್ಯಭಿವೃದ್ಧಿಗೆ ತಕ್ಕ ಏರ್ಪಾಟುಗಳನ್ನು ಅವರೇ ಮಾಡಿಕೊಳ್ಳುವಂತೆ ನಿಯಮಿಸಬೇಕು. ದೇಶದ ಸಕಲ ವಿಧದ ಉನ್ನತಿಗೂ ಸಣ್ಣ ಸಣ್ಣ ಹಳ್ಳಿಗಳಿಂದ ಪುರೋವೃದ್ಧಿ ಕಾರ್ಯಗಳು ಆರಂಭಗೊಂಡು ಬಳೆಯಬೇಕು. ಅದಕ್ಕಾಗಿ ಪ್ರತಿಯೊಂದು ಹಳ್ಳಿಗಳಲ್ಲೂ ಈ ಕೆಳಗೆ ಹೇಳುವಂಥ ಪರಿಣಾಮಗಳು ಕಂಡುಬರುವಂತಾಗಬೇಕು:—ಕನಿಷ್ಠಪಕ್ಷ ೧೦೦ ಕ್ಕೆ ೧೦ ಮಂದಿಯಂತಾದರೂ ಶಾಲೆಗಳಿಗೆ ಹೋಗಿ ಓದುವಂತಾಗಬೇಕು. ಆ ಗ್ರಾಮಗಳಲ್ಲಿ ಪಾಠಶಾಲೆಯಿಲ್ಲದಿದ್ದರೆ ಸಮೀಪಗ್ರಾಮದಲ್ಲಿರುವ ಶಾಲೆಗಾದರೂ ಹುಡುಗರನ್ನು ಕಳುಹಿಸಿಕೊಡಬೇಕು. ವಯಸ್ಕರಾದವರಿಗೆ ಓದುಬರೆಹಗಳನ್ನು ಕಲಿಸುವುದಕ್ಕೆ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದು ಪಾಠಶಾಲೆಯಾದರೂ ಇರಬೇಕು. ಬೆಳಸಿನಮೇಲೆ ಗ್ರಾಮಸ್ಥರ ಆರ್ಥಿಕ ಪರಿಸ್ಥಿತಿಯ ಲೆಕ್ಕವನ್ನು ಪ್ರತಿವರ್ಷವೂ ಗೊತ್ತುಮಾಡುತ್ತಿರಬೇಕು. ಪ್ರತಿ ಮನುಷ್ಯನ ಆರ್ಜನೆಯು ವರ್ಷಕ್ಕೆ ೩೦ ರೂ. ಗಳಿಗೆ ಕಡಿಮೆಯಾಗುವಂತಿದ್ದರೆ ಆ ಗ್ರಾಮವು ಬಡತನದಲ್ಲಿದೆಯೆಂದೇ ತಿಳಿಯಬೇಕು. ೩೦೦ ಸಂಖ್ಯೆಗೆ ಕಡಿಮೆಯಿಲ್ಲದ ಜನವಸತಿಯುಳ್ಳ ಪ್ರತಿಯೊಂದು ಹಳ್ಳಿಯಲ್ಲಿಯೂ ಒಬ್ಬ ಕಮ್ಮಾರ ಒಬ್ಬ ಓಜಿಯಂತೆಯಾದರೂ ಇರಬೇಕು. ವ್ಯವಸಾಯದಿಂದ ಜೀವಿಸುವ ಪ್ರತಿಯೊಂದು ಸಂಸಾರವೂ ತನ್ನ ವರಮಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಅದರ ಜತೆಗೆ ಇನ್ನಾವುದಾದರೊಂದು ಕಸುಬನ್ನು ಅವಲಂಬಿಸಿರಬೇಕು. ಮುಂದೆ ಸಂಭವಿಸಬಹುದಾದ ಕ್ಷಾಮ ಮೊದಲಾದ ಬಾಧೆಗಳಿಗೆ ಗುರಿಯಾಗದಂತೆ ಪ್ರತಿ ಬೇಸಾಯಗಾರನೂ ೨ ವರ್ಷಗಳಿಗೆ ತಂತಮ್ಮ ಕುಟುಂಬಕ್ಕೆ ಸಾಕಾಗುವಷ್ಟು ಧಾನ್ಯವನ್ನು ಶೇಖರಿಸಿಟ್ಟುಕೊಂಡೇ ಇರಬೇಕು. ಗ್ರಾಮಾಂತರದ ಜನರು ಸಾಲವಂದಿಗರಾಗದಿರುವಂತೆ ಅವರನ್ನು ಎಚ್ಚರಿಸುತ್ತಿರಬೇಕು. ಪಟ್ಟಣಗಳಲ್ಲೂ ಕೂಡ ನೋಂಬೇರಿತನದ ಹುಟ್ಟನ್ನಡಗಿಸುವ ಪ್ರಯತ್ನಗಳನ್ನು ಮಾಡಬೇಕು. ವಿದ್ಯಾವಿಷಯದಲ್ಲಿ ೧೦ ಕ್ಕೆ ಒಬ್ಬರಂತೆ ಬಾಲಪಾಠಶಾಲೆಗಳಲ್ಲೂ ೫೦ ಕ್ಕೆ ಒಬ್ಬರಂತೆಯಾದರೂ ಮಧ್ಯಮ ಪಾಠಶಾಲೆಗಳಲ್ಲೂ ೩೦೦೦೦ ಕ್ಕೆ ಒಬ್ಬರಂತೆಯಾದರೂ ಕಲಾಶಾಲೆಗಳಲ್ಲೂ ಓದುವಂತಾಗಬೇಕು. ವ್ಯವಸಾಯವನ್ನು ಒಂದಕ್ಕೆ ಒಂದೂವರೆಯಷ್ಟಾದರೂ ಅಭಿವೃದ್ಧಿಪಡಿಸಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ೨-೩ ದೊಡ್ಡ ಪರಿಶ್ರಮಸ್ಥಾಪನೆಗಳೂ, ೧೦-೧೨ ಗೃಹಪರಿಶ್ರಮಗಳೂ ಇರುವಂತೆ ಮಾಡಬೇಕು."

ಪತ್ರವ್ಯವಹಾರ.

ಹೊಸದುರ್ಗ ತಾಲ್ಲೋಕು ಮತ್ತೋಡುಗ್ರಾಮದ ಗ್ರ್ಯಾಂಟ್ ಇನ್ ಯೆಯಿಡ್ ಇಂಗ್ಲೀಷ್ ಸ್ಕೂಲುವಿಷಯ.

ಈ ಗ್ರಾಮದಲ್ಲಿ ಗ್ರ್ಯಾಂಟ್ ಇನ್ ಯೆಯಿಡ್ ಇಂಗ್ಲೀಷ್ ಸ್ಕೂಲು ಗೌರ್ನಮೆಂಟಿನಿಂದ ಮಂಜೂರಾಗಿ ಒಂದು ವರ್ಷವೂ ಹನ್ನೊಂದು ತಿಂಗಳು ಆಯಿತು. ಈ ಸ್ಕೂಲಿಗೆ ಇಂಗ್ಲೀಷ್ "ಟೀಚ್" ಮಾಡಲು ಹೊಸದುರ್ಗ ತಾಲ್ಲೋಕು ಆಫೀಸಿನಲ್ಲಿ ಆಕ್ಟಿಂಗ್ ಕಾನ್‌ಫರೆನ್ಸ್ ಕ್ಲಾರ್ಕ ಆಗಿದ್ದ ಮತ್ತು ಈ ಸ್ಥಳದವರಾದ ಮ|| ಯಲ್ ಸುಂದರಯ್ಯನವರು ನಮ್ಮಗಳ ಕೋರಿಕೆಯಂತೆ ಸ್ಕೂಲ್ಮಾಸ್ಟರಾಗಿ ನೇಮಿಸಲ್ಪಟ್ಟರು. ಇವರು ಕನ್ನಡ ಮತ್ತು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಪ್ಯಾಸುಮಾಡಿರುವುದಲ್ಲದೆ ಮೆಟ್ರಿಕ್ಯುಲೇಷನ್ ಕ್ಲಾಸಿನವರೆಗೂ ವ್ಯಾಸಂಗಮಾಡಿರುವರಾಗಿದ್ದಾರೆ. ಇವರು ಸ್ಕೂಲನ್ನು ಪ್ರಾರಂಭಮಾಡಿದಾಗ ೧೮-೨೦ ಮಂದಿ ಇಂಗ್ಲೀಷ್ ಅಕ್ಷರದ ಗಂಧವೇ ತಿಳಿಯದ ಹುಡುಗರು ಸೇರಿದರು. ಮೂರುನಾಲ್ಕು ತಿಂಗಳಲ್ಲಿ ಅವರುಗಳಿಗೆ ಇಂಗ್ಲೀಷ್ ಅಭ್ಯಾಸಮಾಡಿಸಿ ಅರ್ಹರಾದ ಹುಡುಗರನ್ನು ೨-೩ನೆ ಕ್ಲಾಸಿಗೆ ಸೇರಿಸಿಕೊಂಡರು. ಅನಂತರ ೭-೮ ತಿಂಗಳಲ್ಲಿ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಮಾಡಿದ ಹುಡುಗರನ್ನು ತಮ್ಮ ಸ್ವಬುದ್ಧಿಯಿಂದ ಕಷ್ಟಪಟ್ಟು ತಯಾರ್ಮಾಡಿ ಇಂಗ್ಲೀಷ್ ಲೋವರ್‌ಸೆಕೆಂಡರಿ ಕ್ಲಾಸನ್ನು ಆರಂಭಮಾಡಿ, ಅವರನ್ನು ಈ ವರ್ಷ ಪರೀಕ್ಷೆಗೆ ಅಪ್ಲಿಕೇಷನ್ ಕಳುಹಿಸಿದ್ದರು. ಈ ನಾಲ್ಕು ಜನರಲ್ಲಿ ಇಬ್ಬರು ಹುಡುಗರು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆಂದು ರಿಜಲ್ಟು ಬಂದಿದೆ. ಒಂದು ವರ್ಷ ಹನ್ನೊಂದುತಿಂಗಳಲ್ಲಿ ಇಂಗ್ಲೀಷ್ ಭಾಷಾಜ್ಞಾನವೇ ಇಲ್ಲದ ಹುಡುಗರನ್ನು ಅಷ್ಟು ಅಲ್ಪಕಾಲದಲ್ಲಿ ತಯಾರ್ಮಾಡಿರುವುದನ್ನು ನೋಡಿದರೆ ಇವರಿಗೆ ಇಂಗ್ಲೀಷಿನಲ್ಲಿ ಟೀಚ್ ಮಾಡತಕ್ಕ ಶಕ್ತಿ ಎಷ್ಟು ಚೆನ್ನಾಗಿರುತ್ತದೆಂಬುದು ಸಕಲರಿಗೂ ಗೊತ್ತಾಗಿದೆ.

ಹೀಗೆ ಗ್ರ್ಯಾಂಟ್ ಇನ್ ಎಯಿಡ್ ಸ್ಕೂಲುಗಳಲ್ಲಿ ಮೆಹನತ್ತಿನಿಂದ ಕೆಲಸ ಮಾಡತಕ್ಕ ಮಾಸ್ಟರುಗಳಿಗೆ ಸರ್ಕಾರದವರು ಪಕ್ಕಾ ಸರ್ವೀಸಿಗೆ ಬಡ್ತಿ ಕೊಟ್ಟು ತೆಗೆದುಕೊಳ್ಳುತ್ತಾ ಬಂದರೆ ಈ ಸ್ಕೂಲುಗಳಿಗೆ ಸರಿಯಾದ ಕ್ವಾಲಿಫಿಕೇಷನ್ ಉಳ್ಳಂಥವರು ಬಂದು ಸೇರಿ ಸ್ಕೂಲುಗಳನ್ನು ಅಭಿವೃದ್ಧಿಗೆ ತರಲು ಯಾವ ಅಭ್ಯಂತರವೂ ಇರುವುದಿಲ್ಲ.

ಇಂಗ್ಲೀಷ್ ಮ್ಯಾಸ್ಟರು ಮ|| ಯಲ್. ಸುಂದರಯ್ಯನವರು ಇಷ್ಟು ಅಲ್ಪಕಾಲದಲ್ಲಿ ಈ ಇಂಗ್ಲೀಷ್ ಸ್ಕೂಲನ್ನು ಅಭಿವೃದ್ಧಿಗೆ ತಂದು ಇರುವುದಕ್ಕಾಗಿ ನಾವುಗಳು ಕೃತಜ್ಞರಾಗಿ ಒಂದು ಸಂತೋಷಕೂಟವನ್ನು ಸೇರಿಸಿ ಭಂಗಾರದ ಮೆಡಲನ್ನು ಕೊಡಬೇಕೆಂದು ತೀರ್ಮಾನಮಾಡಿಕೊಂಡಿರುತ್ತೇವೆ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಟುಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಾಗಿದ್ದು ಇದರಲ್ಲಿ ಕೀಳು ದ್ರಾವಣದ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಸ್ವಾಸ, ಅಡಗ್ನೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ ಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಜೊತೆ ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರ ಬಾಟ್ಲಿಯ ಸೋಟಚ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ, ಹೆಡ್ ಆಫೀಸ
15 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಶೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

೫ ನೇ ತರಗತಿ ರೇಖಾಗಣಿತಾದಿಪಾಠ.

ಬೆಲೆ ೪ ಆಣೆ. ಈ ಪುಸ್ತಕವು ಉಪಯುಕ್ತವಾಗಿ ತೋರುತ್ತದೆ. ಎಂದು ಮೈಸೂರು ಮಹಾರಾಜಾ ಕಾಲೇಜ್ ಸಂಸ್ಕೃತ ಪ್ರೊಫೆಸರ್ ಮ|| ರಾ|| ಎಂ. ಹಿರಿಯಣ್ಣಯ್ಯ ಎಂ.ಎ.ಎಲ್.ಟಿ. ಯವರು ಅಭಿಪ್ರಾಯಪಟ್ಟಿರುತ್ತಾರೆ. 1918 ನೇ ಕ. ಟೆಕ್ಸ್ಟ್ ೪ ಆಣೆ, ನೋಟ್ಸು ಮ|| ಎನ್.ಆರ್. ವೆಂಕಟಸುಬ್ಬಾಚಾರ್ಯರದು ೮ ಆಣೆ. ಸದಾಚಾರಸಂಗ್ರಹ ೪ ಆಣೆ, ಆರೋಗ್ಯಶಾಸ್ತ್ರದ ನೋಟ್ಸು ೧ ಆಣೆ, ಪ್ಲೀಡರ್ ಮಲ್ಲಾರಾಧ್ಯರವರ ವ್ಯವಹಾರನಿರ್ಣಯ ೧|| ರೂಪಾಯಿ ಅವುಗಳ ನಮೂನೆಗಳುಳ್ಳ ಲೇಖ್ಯತತ್ವ ಪ್ರಕಾಶಿಕೆ ೪ ಆಣೆ, ಇಲಾಖೆಯ ೨ ನೆಯ ಪುಸ್ತಕದ ನೋಟ್ಸು ೨|| ಆಣೆ ೩ನೆಯ ಹೊಸದು ೪ಆಣೆ, ೪ನೆಯದು ೧||ಆಣೆ, ೫ ನೆಯದು ೪ ಆಣೆ, ಮಕ್ಕಳ ಭೂವಿವರಣೆ ೨ಆಣೆ, ಎಷ್ಯಾಭೂವಿವರಣೆ ೭ ಆಣೆ. ೧೦ಕ್ಕೆ ೧ಪ್ರತಿ ಹೆಚ್ಚು ಇಂಗ್ಲೀಷ್ ಕನ್ನಡ ಸ್ಕೂಲ್ ಪುಸ್ತಕಗಳೆಲ್ಲವೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್‌ಸನ್ಸ್
3 ವಿದ್ಯಾನಿಧಿ ಬುಕ್‌ಡಿಪೋ ಮೈಸೂರು.

೧೯೧೭ ನೆಯ ಇಸವಿ ಜೂನ್ ತಾ|| ೧೭ ರಿಂದ ೧೯೧೭ ನೆಯ ಜೂನ್ ತಾ|| ೨೩ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಜ್ಯೇಷ್ಠ ಬ|| ತ್ರಯೋದಶಿಯಿಂದ ಆಷಾಢ ಶು|| ಚೌತಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿ ಶೇಡಿ
17	1 ಭಾನು	ತ್ರಯೋ	28-55	ಕೃತ್ತಿಕೆ	33-55	4
18	ಸೋಮ	ಚತು	28-9	ರೋಹಿಣಿ	35-0	5
19	2 ಮಂಗಳ	ಅಮಾ	28-36	ಮೃಗಶಿರ	37-36	6
20	ಬುಧ	ಪಾಡ್ಯ	30-24	ಆರಿದ್ರಾ	41-0	7
21	ಗುರು	ಬಿದಿಗೆ	33-20	ಪುನರ್ವಸು	45-45	8
22	ಶುಕ್ರ	ತದಿಗೆ	37-12	ಪುಷ್ಯ	51-25	9
23	3 ಶನಿ	ಚೌತಿ	41-53	ಆಶ್ಲೇಷ	57-47	10

(1) (ಸೌರರೋಹಿಣ್ಯಾಮಿಥುನಸ್ಥ ಕೃಷ್ಣತ್ರಯೋದಶೀತಿಥೀ). (2) ಸರ್ವತ್ರ ಮೌನಾಮಾಸ್ಯಾ ಪಕ್ಷಕಃ. (3) ದೇಶರಾಜೇಅರಸಿನವರ ಕುಮಾರರ ವರ್ಧಂತಿ.

ಮೈಸೂರ್: ವೈ. ತಿರುಮಲೈಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಙ್ಕಜಸಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟಪದೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳೆಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಜೂನ್ ತಾರೀಖು ೨೪ ನೆಯ ಭಾನುವಾರ. (ಸಂಚಿಕೆ ೨೫

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚಾರಿತ್ರ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೭ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಸಕಲ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ.) 48

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗಿರುವುವು. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಔಷಧದ ಸಂಗಡ ಟಪಾಲ್ ಖರ್ಚು ಬೇರೆ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಶಿರ್ ಉತ್ತರಕನಡಾ ಡಿ||.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

34 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚುಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ. ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಪಶುಜೀವನ ಚೂರ್ಣ.

ದನಗಳಿಗಾಗುವ ಮಹಾಮಾರಿ ಕುಂದುಬಾಯಿ ಬೇನೆ ಈ ಪ್ರತಿಯೊಂದು ರೋಗದಮೇಲೆ ಅನುಪಾನಪರತ್ವದಿಂದ ಅತ್ಯಂತ ಗುಣಕಾರಿಯಾಗಿರುವುದು. ೧೦ ತೊಲೆಯ ಡಬ್ಬಿ ೧ ಕ್ಕೆ ೧೨ ಆಣೆ.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 30

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುವಾತಿಗೂ ವೈದ್ಯರ ಸಮಯವನ್ನು ಕಾದು ಮರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.



ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಫ್. ವೈ. ಇನ್ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಇಂಗ್ಲೆಂಡ್ ಕೆಮಿಸ್ಟ್ರಿ ಎಗಿಯೂ ರೋಡ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀ ಕರ್ಪೂರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮಗಳಿಂದ ಸರ್ವರನ್ನೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಲಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರಗಳಿಗೆ ರಾಮಬಾಣೌಷಧವು. ಸರ್ವರಿಗೂ ಕೆಮ್ಮು, ನೆಗಡಿ, ಮಲಬಂಧ, ವರಸೆಜ್ವರ, ಶೀತವಾಯು, ಹಲ್ಲುನೋವು, ಆಲಸ್ಯಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅದ್ಭುತಗುಣಗಳಿಂದ ಕೂಡಿದ್ದು) ೩೦ ದಿನಕ್ಕೆ ಆಗುವ ಪೊಟ್ಟಣ ೧ ಆಣೆ. ನಾರಿಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಅಮೋಘಿನಿ (ಸುಖಕ್ಕೂ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರುಬೇಕು. ಹೆಚ್ಚು ಔಷದ ತರಿಸಿದರೆ ಹೆಚ್ಚು ರಿಯಾಯತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
6 ಸದ್ವೈದ್ಯಶಾಲಾ ನಂಜನಗೂಡು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಕಾರಿಕೆ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜೂನ್ ತಾ|| ೨೪ ನೆಯ ಭಾನುವಾರ.

ಭರತಖಂಡದ ದುರ್ದೈವವು.

೧೦ ವರ್ಷಗಳ ಕೆಳಗೆ ಲಾರ್ಡ್ ಕರ್ಜನ್‌ರವರ ಅಧಿಕಾರ ಸಮಯದಲ್ಲಿ ಭರತಖಂಡದ ರಾಜಕೀಯ ವಾತಾವರಣವು ಪರಿಕ್ಷುಬ್ಧವಾಗಿ ಭಾರತನೌಕೆಯು ಪ್ರಚಂಡವಾದ ತೆರೆಗಳ ಹೊಡೆತದಿಂದ ಹೊಯ್ದಾಡುತ್ತಲಿದ್ದಿತು. ಈಚೆಗೆ ಲಾರ್ಡ್‌ಮಿಂಟೋ ಲಾರ್ಡ್ ಹಾರ್ಡಿಂಜ್‌ರವರುಗಳ ವೈಸ್ರಾಯಿಗಿರಿಯಲ್ಲಿ ಆ ಪರಿಕ್ಷೋಭೆಯೆಲ್ಲಾ ವಿಶೇಷತಃ ಶಾಂತಿಗೊಂಡ ಸಂಗತಿಯು ಸರ್ವತ್ರ ವಿದಿತವಾಗಿದೆ. ಆದರೆ ಇತ್ತೀಚೆಗೆ ಮತ್ತೆ ಪರಿಕ್ಷೋಭೆಯುಂಟಾಗುವ ಸುಳಿವು ಕಾಣುತ್ತಿರುವುದರಿಂದಲೂ, ಮಾನ್ಯ ಗೋಪಾಲಕೃಷ್ಣ ಗೋಖಲೆ, ಪುರುಷಸಿಂಹ ಸರ್. ಪಿ. ಎಂ. ಮೇಥಾರವರಂಥ ಉತ್ತಮ ಕರ್ಣಧಾರರುಗಳು ನಮ್ಮ ಮಧ್ಯದಿಂದಗಲಿ ಹೋಗಿರುವುದರಿಂದಲೂ ಸಹ ಭಾರತ ನೌಕೆಯು ಮತ್ತೊಂದು ಸಲ ತೆರೆಗಳ ಬಡಿದಾಟಕ್ಕೆ ಒಳಗಾಗಿ ಇನ್ನೇನು ಸಂಕಷ್ಟಗಳನ್ನು ತಂದುಕೊಳ್ಳುವುದೋ ಎಂದು ಯೋಚಿಸುವಂತಾಗಿದೆ.

ಭರತಖಂಡದ ಬೊಂಬಾಯಿಯಾಧಿಪತ್ಯದಲ್ಲಿ ಮೂಡಿದ ಸ್ವರಾಜ್ಯಸಾಧನ ಸಂಕಲ್ಪಾಗ್ನಿಯು ಹಾಗೆಹಾಗೆಯೇ ಹೊಗೆಯಾಡುತ್ತಿದ್ದು, ಈಗ್ಗೆ ೧೨ ವರ್ಷಗಳ ಕೆಳಗೆ ಮಾಡಲ್ಪಟ್ಟ ವಂಗವಿಭಂಗದಿಂದ ಬಂಗಾಳಿಗಳೊಳಗೆ ಹುಟ್ಟಿದ ಮಾತ್ಸರ್ಯ ಮಾರುತನ ಸಹಾಯದಿಂದ ಪ್ರಜ್ವಲಿಸುವುದಕ್ಕಾರಂಭಿಸಿ, ಲಾರ್ಡ್‌ಹಾರ್ಡಿಂಜ್‌ರವರ ಆಗಮನಾನಂತರ ವಂಗವಿಭಂಗವು ತಪ್ಪಿಸಲ್ಪಟ್ಟ ಕೂಡಲೇ ಆರೂ ನಂದಿತು. ಸ್ವರಾಜ್ಯ ಸ್ವದೇಶೀ ವಿಷಯಕವಾದ ಚಳವಳಿಗಳೆಲ್ಲವೂ ಅಲ್ಲಿಗೇ ಶಾಂತವಾದುವು. ದೇಶದಲ್ಲೆಲ್ಲೆಲ್ಲಿಯೂ ಶಾಂತಿಯು ನರ್ತನಮಾಡುತ್ತಿದ್ದಿತು. ಈ ಮಧ್ಯೆ ಯೂರೋಪಿನ ಮಹಾಯುದ್ಧವು ಸಂಪ್ರಾಪ್ತವಾಯಿತು. ಆ ಖಂಡವೆಲ್ಲವೂ ಯುದ್ಧಾಗ್ನಿಯ ಬೇಗೆಯಿಂದ ತಳಮಳಗೊಳ್ಳುವಂತಾಯಿತು. ಭರತಖಂಡದ ಯೋಧರು ರಣರಂಗಕ್ಕೆ ಹೋಗಿ ಅಸಾಧಾರಣವಾದ ಶೌರ್ಯವನ್ನು ತೋರಿಸಿ, ಆಂಗ್ಲಸಾಮ್ರಾಜ್ಯಕ್ಕೆ ಸಹಾಯಮಾಡಿದರು. ಶತ್ರುಗಳು ಬೆರಲುಕಚ್ಚಿಕೊಳ್ಳುವಂತಾಯಿತು. ಭಾರತೀಯರನ್ನು ಅಸಡ್ಡೆಯಿಂದ ಕಾಣುತ್ತಿದ್ದವರೆಲ್ಲಾ ತಲೆದೂಗಿ ಕಣ್ದೆರೆಯುವಂತಾಯಿತು. ಗುಣಗ್ರಾಹಿಗಳಾದ ಆಂಗ್ಲಮಹಾಜನರು ಭರತಖಂಡದಮೇಲೆ ಅಸಾಧಾರಣವಾದ ಸಾನುಭೂತಿಯನ್ನು ಪ್ರದರ್ಶಿಸುವಂತಾಯಿತು. ಭರತಖಂಡಕ್ಕೆ ಅಭೂತಪೂರ್ವವಾದ ಯಶಸ್ಸು ಲಭಿಸುವಂತಾಯಿತು. ಆದರೆ ಭರತಖಂಡದ ಸ್ವರಾಜ್ಯಸಾಧನ ಪ್ರೇರಕರು ಈ ಸಂಧಿಯನ್ನು ಸ್ವಾರ್ಥಸಾಧನಕ್ಕೆ ಅನುಕೂಲವೆಂದು ಭಾವಿಸಿದರು. ಭರತಖಂಡವು ಮಾಡಿದ ಸಹಾಯದಿಂದ ಆಂಗ್ಲಮಂತ್ರಿ ಮಂಡಲದವರು ಪರಿತುಷ್ಟರಾಗಿರುವ ಕಾರಣ, ಅವರ ಸಾನುಭೂತಿ ಫಲರೂಪವಾಗಿ ಯುದ್ಧಾನಂತರ ತತ್‌ಕ್ಷಣ ಸ್ವರಾಜ್ಯವನ್ನು ಪಡೆದುಕೊಳ್ಳಬೇಕೆಂದು ಯೋಚಿಸಿದರು. ಇದರಮೇಲೆ ಸಭಾರಂಗಗಳಲ್ಲಿ ಉಪನ್ಯಾಸಮಾಡುವುದಕ್ಕೂ ಪತ್ರಿಕೆಗಳಲ್ಲಿ ಪ್ರಸಂಗಿಸುವುದಕ್ಕೂ ಆರಂಭಿಸಿ, ಜನರಲ್ಲಿ ಆಂದೋಳನವನ್ನು ಹುಟ್ಟಿಸಲು ತೊಡಗಿದರು. ಯೂರೋಪುಖಂಡವು ಯುದ್ಧಕೋಲಾಹಲದಲ್ಲೂ, ನಮ್ಮ ಸಾಮ್ರಾಜ್ಯ ಪ್ರಭುತ್ವವು ಯುದ್ಧಕಾರ್ಯಭಾರ ನಿರ್ವಾಹದಲ್ಲೂ ಮುಳುಗಿ ತದೇಕ ಚಿತ್ತರಾಗಿರುತ್ತಿರುವಲ್ಲಿ, ಭರತಖಂಡದ ಈ ತತ್‌ಕ್ಷಣ ಸ್ವರಾಜ್ಯಾಪೇಕ್ಷಿಗಳು ತಾವ್ರೇಂದು ತೆರದ ಕೋಲಾಹಲವನ್ನು ಇಲ್ಲಿ ಎಬ್ಬಿಸಿದರು. ತಮ್ಮ [illegible]ವನ್ನು ಒಪ್ಪಿಸುವುದಕ್ಕೂ ಹಿಂಗೆಗೆಯದೆ ಸರ್ವರೂ ಸ್ವರಾಜ್ಯಸಾಧನೆಗೆ ನಡುಕಟ್ಟಿ ನಿಲ್ಲಬೇಕೆಂದು ದೇಶೀಯರಿಗೆ ಬೋಧಿಸಿ ಹುರಿದುಂಬಿಸುತ್ತ ಬಂದರು. ಎಲ್ಲೆಲ್ಲೂ ಯಾವ ಸಭೆಗಳಲ್ಲೂ ಸ್ವರಾಜ್ಯದ ಹೊರತು ಮಾತೇ ಇಲ್ಲದಂತೆ ಮಾಡಿದರು. ಭರತಖಂಡದ ಪ್ರಭುತ್ವಕಾರ್ಯನಿರ್ವಾಹ ಮಾಡತಕ್ಕ ಆಂಗ್ಲಾಧಿಕಾರಿಗಳನ್ನು ತೃಣಕ್ಕೆ ಸಮಾನವಾಗಿ ಕಾಣುತ್ತಬಂದರು. ಇವರಧಿಕಾರವು ಕೂಡಲೇ ನಿರ್ಮೂಲವಾಗಬೇಕೆಂದೂ ಹಾರೈಸುವವರಾದರು. ಇಂಥ ತೀಕ್ಷ್ಣವಾದ ಚಳವಳಿಯ ಅನರ್ಥವನ್ನು ತಿಳಿಯಿಸಿಕೊಟ್ಟು ಅದಕ್ಕೆ ಶಾಂತಸ್ವರೂಪವನ್ನು ಕೊಡಸಮರ್ಥರಾದ ಮಿತವಾದಿಪಕ್ಷದ ಪ್ರಜಾಪ್ರಮುಖರ ಸಂಖ್ಯೆಯು ಭರತಖಂಡದ ದುರ್ದೈವದಿಂದ ಕ್ಷೀಣಿಸಿಹೋದ ಕಾರಣದಿಂದ ಸರ್ಕಾರದವರೇ ಈ ತೀಕ್ಷ್ಣಚಲನವಲನಕ್ಕೆ ಪ್ರತಿಕ್ರಿಯೆಯನ್ನು ಮಾಡಬೇಕಾದ ಹೊತ್ತು ಬಂದಿತು. ಬೋಧಕರ ಮತ್ತೂ ಲೇಖಕರ ಸಾಹಸದ ಪರಿಣಾಮವೆಲ್ಲಾ ವಿಶೇಷವಾಗಿ ಅಪಕ್ವವಿವೇಕವುಳ್ಳ ವಿದ್ಯಾರ್ಥಿಗಳ ಮನಸ್ಸಿನಮೇಲೆ ಉಂಟಾಗುವುದಾದಕಾರಣ, ಪ್ರೇರಕರ ಉಪದೇಶ ವಾಗ್ಜಾಲವು ಅವರನ್ನು ಸೆಳೆಯದಿರುವಂತೆ ಮಾಡುವುದಕ್ಕಾಗಿ ಸರ್ಕಾರದವರು ಪ್ರಯತ್ನಿಸಬೇಕಾಯಿತು. ಪತ್ರಿಕಾ ಪ್ರಸಂಗಗಳೂ ವ್ಯಾಖ್ಯಾನಮಾಲೆಗಳೂ ಸಹ ಭರತಖಂಡದ ಮುಕ್ಕಾಲು ಮೂರುವೀಸಪಾಲು ಅನಕ್ಷರಸ್ಥ ಮತ್ತೂ ರಾಜನಿಷ್ಠಪ್ರಜೆಗಳ ಮನಸ್ಸಿನಲ್ಲಿ ಯಾವ ವಿಪರ್ಯಾಸವನ್ನೂ ಮಾಡುವುದಿಲ್ಲವೆಂಬುದನ್ನು ಪ್ರಭುತ್ವದವರು ಚೆನ್ನಾಗಿ ಬಲ್ಲವರಾದಕಾರಣ ಅವರಕಡೆಗೆ ಅಷ್ಟೇನೂ ಈ ವಿಷಯದಲ್ಲಿ ಚಿಂತಿಸಬೇಕಾಗಲಿಲ್ಲ. ಈ ಕಾರಣದಿಂದಲೇ ಮದ್ರಾಸು ಸರ್ಕಾರದವರೂ ಬೊಂಬಾಯಿ ಸರ್ಕಾರದವರೂ ಸಹ ಹಿಂದಣ ಚಳವಳಿಯ ಕಾಲದಲ್ಲಿ ಎಚ್ಚರಿಸಿದ್ದಂತೆ ಈಗಲೂ ವಿದ್ಯಾರ್ಥಿವರ್ಗವು ಸ್ವರಾಜ್ಯಸಾಧನೋದ್ದೇಶಾದಿ ರಾಜಕೀಯ ವಿಷಯಕ ಸಭೆಗಳಿಗೆ ಹೋಗಕೂಡದೆಂಬರ್ಥದ ಕಟ್ಟಪ್ಪಣೆಯನ್ನು ಮೊನ್ನೆತಾನೇ ಪ್ರಕಟಿಸಿದರು. ಪ್ರೇರಕರ ಬೋಧೆಯಿಂದ ಕೋಮಲವಾದ ತರುಣರ ಹೃದಯದಲ್ಲಿ ಒಂದುಸಲ ದುರ್ವಿಚಾರಬೀಜವು ನಡಲ್ಪಟ್ಟರೆ ಅದರ ಪರಿಣಾಮವು ಕಡೆಗೆ ಹೇಗೆ ನಿವಾರಣಾಸಾಧ್ಯವಾಗುವುದೆಂಬ ಸಂಗತಿಯು ಬಂಗಾಳಾದೇಶದ ಅರಾಜಕ ತರುಣರ ನೂತನ ಚರಿತ್ರದಿಂದ ಸರ್ವರಿಗೂ ಗೊತ್ತಾಗಿರುವ ಕಾರಣ, ಇದುವರೆಗೂ ಯಾವುದೊಂದು ಅಶಾಂತಿಯ ಸುಳಿವೂ ಇಲ್ಲದ ಮದ್ರಾಸುಪ್ರಾಂತದಲ್ಲಿ ಮುಂದೆ ಯಾವ ಅಶಾಂತಿಯು ಮೂಡುವಿಕೆಗೂ ಅವಕಾಶವಿಲ್ಲದಂತೆ ಮಾಡಲು ಅಲ್ಲಿಯ ಪ್ರಭುತ್ವದವರು ತೆಗೆದುಕೊಂಡ ಮುಂಜಾಗರೂಕತೆಯು ಅಭಿನಂದನೀಯವೇ ಆಗಿರುತ್ತದೆ. ಆದರೆ ಸ್ವರಾಜ್ಯಸಾಧಕರಿಗೆ ಇದು ಸಹನೆಯನ್ನುಂಟುಮಾಡಲಿಲ್ಲ. ಪ್ರಭುತ್ವದವರ ಈ ಕಾರ್ಯವನ್ನು ನಾನಾವಿಧವಾಗಿ ಅಲ್ಲಗಳೆದುದಲ್ಲದೆ, ಅವರಾಗಿ ಅಸಂತೋಷವನ್ನು ಪ್ರಜೆಗಳಲ್ಲಿ ಹುಟ್ಟಿಸಿ, ಬಂಗಾಳಾ ಅಸಂತುಷ್ಟಿಯ ಪುನರುತ್ಪಾದನೆಯನ್ನು ಮಾಡುವರೆಂದು ಹೇಳಿ, ಪರೋಕ್ಷತಃ ರಾಜದ್ರೋಹಕ್ಕೆ ಪ್ರೇರಣೆಯನ್ನು ಮಾಡುತ್ತ ಬಂದರು. ಇಂಥ ಲೇಖನಗಳ ವೃಷ್ಟಿಯನ್ನು ಕರೆಯುವುದರಲ್ಲಿ ಅನಿಬೆಸಂಟಮ್ಮನವರ ನ್ಯೂಇಂಡಿಯಾ ಪತ್ರಿಕೆಯು ಅಗ್ರೇಸರವಾಯಿತು. ಆ ಅಮ್ಮನಂತೂ ಸ್ವರಾಜ್ಯಸಾಧನೆಯನ್ನು ಮಾಡಿಕೊಡುವುದಕ್ಕೆ ಮುಖ್ಯಸೇನಾನಾಯಕಿಯೇ ಆದಳು. ವಾಗ್ಯುದ್ಧದ ಅತಿರಥ ಮಹಾರಥರಾದ ವಿಂಡಾಳುಗಳನೇಕರು ಆಕೆಯ ಹಿಂಬಾಲಕರಾದರು. ಸ್ವರಾಜ್ಯಸಾಧನೆಗೆ ಇನ್ನೊಂದು ಪ್ರವಿಳೆಯು ದಂಡೇ ಸಿದ್ಧವಾದಂತಾಯಿತು. ಈ ಚಳವಳಿಯು ಈಗ ದಕ್ಷಿಣದೇಶದಲ್ಲಿ ನ್ಯೂಇಂಡಿಯಾ ಪತ್ರಿಕೆಯ ಮೂಲಕ ವಿಶೇಷವಾದುದರಿಂದ ಇದನ್ನು ವಿಕೋಪಕ್ಕೆ ಬರದಂತೆ ಮಾಡುವುದು ಅತ್ಯವಶ್ಯಕವೆಂದು ದೇಶಶಾಂತಿರಕ್ಷಣ ಭಾರವನ್ನು ವಹಿಸಿದ ಪ್ರಭುತ್ವದವರಿಗೆ ತೋಚಿತು. ಅದುಕಾರಣ ಮದ್ರಾಸು ಗೌರ್ನರವರು ಕಳೆದ ತಿಂಗಳು ಉದಕಮಂಡಲದಲ್ಲಿ ನಿಯಮನಿರ್ಮಾಣಸಭೆಯ ಕಾರ್ಯವೆಲ್ಲಾ ಮುಗಿದಬಳಿಕ ಉಪಸಂಹಾರ ಭಾಷಣವನ್ನು ಮಾಡಿದಾಗ್ಗೆ—ಭಾರತೀಯರು ಸ್ವರಾಜ್ಯವನ್ನು ಕೋರುವುದೂ ಅದನ್ನು ಪ್ರಭುತ್ವದವರು ಅನುಕೂಲಪಡಿಸಬೇಕಾದುದೂ ಉಚಿತವೇ ಆದರೂ, ತತ್‌ಕ್ಷಣದಲ್ಲೇ ಅದು ತಮಗೆ ಲಭಿಸಬೇಕೆಂದು ಉಪದ್ವ್ಯಾಪಿ ಪ್ರಯತ್ನಗಳನ್ನೂ ಪ್ರೇರಣೆಗಳನ್ನೂ ಮಾಡಿ ದೇಶದಲ್ಲಿ ಅಶಾಂತಿ ಹುಟ್ಟಿಸುವುದು ಉಚಿತವಲ್ಲವೆಂತಲೂ, ಎಷ್ಟುಮಟ್ಟಿಗೆ ಭರತಖಂಡಕ್ಕೆ ಸ್ವಾತಂತ್ರ್ಯದ ಅಧಿಕಾರಗಳನ್ನು ಅನುಕ್ರಮವಾಗಿ ಕೊಡಬೇಕೋ ಅದನ್ನು ಪ್ರಭುತ್ವದವರು ಆಲೋಚಿಸಿ, ಯುದ್ಧಾನಂತರ ದಯಪಾಲಿಸುವರೆಂತಲೂ, ಅಸಾಧ್ಯವಾದ ಫಲಗಳನ್ನು ಆದರ್ಶವಾಗಿಟ್ಟುಕೊಂಡು ಗದ್ದಲವನ್ನೆಬ್ಬಿಸುವುದು ವಿವೇಕಿಗಳ ಕಾರ್ಯವಾಗಿರಕೂಡದೆಂತಲೂ, ಮಿತಿಮೀರಿ ಅಶಾಂತಿಪ್ರೇರಣ ಕಾರ್ಯಗಳು ನಡೆಯುವುದಾದರೆ ಕಠಿನಶಾಸನಗಳ ಮೂಲಕ ಅವನ್ನು ತಡೆಯಬೇಕಾಗುವುದೆಂತಲೂ ಸೂಚಿಸಿ, ಎಚ್ಚರಿಸಿದರು. ಇಷ್ಟು ಮಾತ್ರಕ್ಕೇ ಅನಿಬೆಸೆಂಟಮ್ಮನೇ ಮೊದಲಾದ ಸ್ವರಾಜ್ಯವಾದಿಗಳು ಪ್ರಜೆಗಳ ಸ್ವರಾಜ್ಯಾಕಾಂಕ್ಷೆಯನ್ನು ಗೌರ್ನರವರು ಹತ್ತೊತ್ತುವ ಉದ್ದೇಶವುಳ್ಳವರೆಂತಲೂ, ದೇಶೀಯ ಪ್ರಮುಖರನ್ನು ನಿಂದಿಸಿದರೆಂತಲೂ, ಅವರ ಭಾಷಣವು ಭರತಖಂಡಕ್ಕೇ ಅಸಮಾಧಾನಕರವಾದುದೆಂತಲೂ, ಹೇಳಿಕೊಂಡು ಅಕಾಂಡತಾಂಡವಕ್ಕೆ ಆರಂಭಿಸಿದರು. ಸರ್, ಸುಬ್ರಹ್ಮಣ್ಯಯ್ಯರಂಥ ವಯೋವೃದ್ಧರೂ ಸಹ ತೊಡೆತಟ್ಟಿ ಸ್ವರಾಜ್ಯಸಾಧನದ ಕಂಕಣಕಟ್ಟಿ ಶಪಥಮಾಡಿದರು. ಶಾಸನನಿರ್ಮಾಣಸಭಿಕರು ಕೆಲವರು ಗೌರ್ನರವರನ್ನು ಖಂಡನೋಕ್ತಿಗಳಿಂದಲೂ ಬೆದರಿಕೆಯ ಮಾತುಗಳಿಂದಲೂ ಜಗ್ಗಿಸುವುದಕ್ಕೆ ತೊಡಗಿದರು. ಸರ್ಕಾರದವರು ಯಾವ ಶಿಕ್ಷೆಯನ್ನು ಮಾಡಿದರೂ ಅದಕ್ಕೆ ಹೆದರದೆ ಪ್ರಜೆಗಳು ತಮ್ಮ ಸಂಕಲ್ಪಸಿದ್ಧಿಗಾಗಿ ಸರ್ವಪ್ರಯತ್ನಗಳನ್ನೂ ಮಾಡಬೇಕೆಂದು ಹುರಿದುಂಬಿಸುವ ಲೇಖನಗಳನ್ನೂ ಭಾಷಣಗಳನ್ನೂ ಹೆಚ್ಚಿಸುತ್ತಲೇ ಬಂದರು. ಅದರಮೇಲೂ ಮದ್ರಾಸು ಗೌರ್ನರವರು ಮತ್ತೊಂದು ಪ್ರಕಟನೆಯನ್ನು ಕಳೆದ ತಾ|| ೧೮ ರಲ್ಲಿಮಾಡಿ, ಅದರಲ್ಲಿ—

“ಆಂಗ್ಲಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಪಡೆಯಬೇಕೆಂದು ಭಾರತೀಯರು ಪಡುವ ಅಭಿಪ್ರಾಯಕ್ಕೂ, ಅದಕ್ಕಾಗಿ ಅವರುಗಳು ನ್ಯಾಯಸಮ್ಮತವಾಗಿ ಮಾಡುವ ಪ್ರಯತ್ನಗಳಿಗೂ ಸರ್ಕಾರದವರು ವಿಮುಖರಾಗಿಲ್ಲ. ವಿದ್ಯೆಯು ಅಭಿವೃದ್ಧಿಗೊಂಡು ದೇಶದಲ್ಲಿ ಐಕಮತ್ಯವು ಹೆಚ್ಚಿದಂತೆ ಕಾಲಕ್ರಮದಿಂದ ಪಡೆಯಬಹುದಾದ ಸ್ವರಾಜ್ಯವನ್ನು ಭಾರತೀಯರು ಪಡೆದುಕೊಳ್ಳುವ ವಿಷಯದಲ್ಲಿ ಅಭ್ಯಂತರವಿಲ್ಲ. ಈ ಸಂಗತಿ ಸಂದರ್ಭಗಳನ್ನೆಲ್ಲಾ ಯೋಚಿಸಿಕೊಳ್ಳದೆ ಯುದ್ಧ ಮುಗಿದಕೂಡಲೇನೆಯೇ ಸರ್ವ ಸ್ವತಂತ್ರಾಧಿಕಾರವುಳ್ಳಸ್ವರಾಜ್ಯವನ್ನು ಕೊಡುವುದಕ್ಕೆ ಪ್ರಭುತ್ವದವರು ಇಷ್ಟಪಡುವರಲ್ಲ. ರಾಜ್ಯವ್ಯವಸ್ಥೆಯಲ್ಲಿ ವ್ಯತ್ಯಾಸವನ್ನು ಮಾಡಬೇಕೆಂದು ಅಪೇಕ್ಷಿಸುವ ಜನರು ಮಾಡುತ್ತಿರುವ ಪ್ರಯತ್ನಗಳನ್ನೂ ಅವುಗಳ ಫಲಿತಾಂಶವನ್ನೂ ಕುರಿತು ಸದ್ಯಃ ಸರ್ಕಾರದವರು ಗಮನಿಸಬೇಕಾಗಿದೆ. ಕೆಲ ವ್ಯಾಖ್ಯಾನಕಾರರೂ ಗ್ರಂಥಕರ್ತರೂ ಸಹ ಈಗಣ ರಾಜ್ಯಪರಿಪಾಲನವನ್ನು ಖಂಡಿಸುತ್ತಲೂ, ದೇಶದ ಕಷ್ಟವನ್ನು ನಿವಾರಿಸುವುದಕ್ಕೆ ಈಗಣ ಪರಿಪಾಲನಾ ವಿಧಾನವನ್ನು ತೊಲಗಿಸಿಬಿಡಬೇಕಾದುದು ಮುಖ್ಯವೆಂದು ಬೋಧಿಸುತ್ತಲೂ, ಅರಿಯದ ಜನರನ್ನು ಪ್ರೇರಿಸಿ ಅಧಿಕಾರಿಗಳಮೇಲೆ ಅವಿನೀತಕರವಾದ ಕೆಲ ನಿಂದಾರೋಪಣೆಗಳನ್ನು ಮಾಡುತ್ತಿದ್ದಾರೆ. ಇದರಿಂದ ಅರಿಯದ ಜನರು ಅಪಾಯಕರವಾದ ಮಾರ್ಗಕ್ಕೆ ಸೆಳೆಯಲ್ಪಡುತ್ತಿದ್ದಾರೆ. ಬಹಿರಂಗವಾಗಿ ಪ್ರಭುತ್ವತಿರಸ್ಕಾರವೂ, ನಿಗೂಢವಾದ ಬೆದರಿಕೆಯೂ ಈ ಪ್ರೇರಕರಿಂದ ಮಾಡಲ್ಪಡುತ್ತಿವೆ. ಇಂಥ ಪ್ರಯತ್ನಗಳು ದೇಶಶಾಂತಿಗೂ ದೇಶಾಭಿವೃದ್ಧಿಗೂ ಭಯಂಕರಗಳಾಗಿ ಪರಿಣಮಿಸುವುವಲ್ಲದೆ, ಯುದ್ಧವಿಷಯದಲ್ಲಿ ತಮ್ಮ ಸರ್ವಶಕ್ತಿಯನ್ನೂ ಒಟ್ಟುಗೂಡಿಸಿ ಉಪಯೋಗಿಸಲು ಅವಕಾಶವಿಲ್ಲದಿರುವಂಥ ಸ್ಥಿತಿಯೂ ಸಂಭವಿಸಬಹುದು. ಇದರಿಂದ ಸ್ವರಾಜ್ಯಸಾಧಕ ಪ್ರಮುಖರಲ್ಲಿ ಪ್ರಜೆಗಳಿಗೆ ನಂಬುಗೆಯೂ ತಪ್ಪಿಹೋಗಬಹುದು. ಇಂಥ ಪ್ರಯತ್ನಗಳು ನಿಲ್ಲಿಸಲ್ಪಡಬಹುದೆಂದು ಇದುವರೆಗೂ ಸರ್ಕಾರದವರು ನಿರೀಕ್ಷಿಸಿದರು. ಅವರ ನಿರೀಕ್ಷಣೆಯು ಸಫಲವಾಗದ ಸಂದರ್ಭದಲ್ಲಿ ರಾಜಭಕ್ತರಾದ ಈ ದೇಶೀಯರ ಆಶಯಗಳಿಗೆ ವಿರುದ್ಧವಾಗಿ ಹಠದಿಂದ ಪ್ರಯತ್ನಮಾಡತಕ್ಕ ಜನರುಗಳ ವರ್ತನವನ್ನು ಇನ್ನು ಮುಂದೆ ಸರ್ಕಾರದವರು ನಿಶ್ಚಲಚಿತ್ತದಿಂದ ನೋಡಿಕೊಂಡು ಸುಮ್ಮನಿರಲಾರರು” ಎಂದು ಹೇಳಿ ಮತ್ತೊಂದುಸಲ ಎಚ್ಚರಿಸಿದರು. ಅಲ್ಲದೆ ಅನಿಬೆಸೆಂಟಮ್ಮನು ಒಂದು ವಾರದೊಳಗೂ ಅವರ ಕಾರ್ಯಗಳಲ್ಲಿ ಸಹಾಯಕರಾಗಿರುವ ಅರಂಡೇಲ್, ವಾಡಿಯಾರವರುಗಳು ೨ ವಾರಗಳೊಳಗಾಗಿಯೂ ಮದ್ರಾಸನ್ನು ಬಿಟ್ಟು ನೀಲಗಿರಿ. ಕೊಯಮತ್ತೂರು, ಬಳ್ಳಾರಿ-ಈ ಜಿಲ್ಲೆಗಳಲ್ಲಾಗಲಿ, ಪಳ್ನಿಬೆಟ್ಟ, ಶಿವರಾಯಬೆಟ್ಟ, ವಿಶಾಖಪಟ್ಟಣ-ಈ ಸ್ಥಳಗಳಲ್ಲೆಲ್ಲಾದರೂ ಸರಿಯೆ ವಾಸಮಾಡಿಕೊಂಡಿರಬೇಕೆಂದೂ, ಈ ಮೂವರೂ ಇತಃಪರಃ ಯಾವ ಸಭೆಯಲ್ಲೂ ಎಂಥ ಉಪನ್ಯಾಸವನ್ನೂ ಮಾಡಕೂಡದೆಂದೂ, ಯಾವ ಸಭೆಯೊಡನೆಯೂ ಸಂಬಂಧವನ್ನಿಟ್ಟುಕೊಂಡಿರಕೂಡದೆಂದೂ, ಯಾವುದೊಂದು ಗ್ರಂಥಗಳನ್ನೂ ಕರಪತ್ರಗಳನ್ನೂ ಸಹ ಪ್ರಕಟಿಸಕೂಡದೆಂದೂ, ದಂಡಾಧಿಕಾರಿಗಳಿಗೆ ಮುಂಚಿತವಾಗಿ ತೋರಿಸದೆ ಯಾವುದೊಂದು ಕಾಗದನನ್ನಾಗಲೀ ತಂತ್ರೀವಾರ್ತೆಯನ್ನಾಗಲೀ ಎಲ್ಲಿಗೂ ಕಳುಹಿಸಕೂಡದೆಂದೂ ಅಪ್ಪಣೆಮಾಡಿ, ಈ ನೋಟೀಸನ್ನು ಆ ಮೂವರಿಗೂ ತಲುಪಿಸಿರುತ್ತಾರೆ.

ಈ ಅಪ್ಪಣೆಯಮೇಲೆ ಅನಿಬೆಸೆಂಟಮ್ಮನು ಕಳೆದ ತಾ|| ೧೮ ರಿಂದ ನ್ಯೂಇಂಡಿಯಾ, ಕಾಮನ್‌ವೀಲು ಎಂಬ ಪತ್ರಿಕೆಗಳ ಪ್ರಕಟವನ್ನುಬಿಟ್ಟುಕೊಟ್ಟರು. ಮೂವರೂ ನೀಲಗಿರಿಯಲ್ಲಿ ವಾಸಮಾಡುವುದಕ್ಕಾಗಿಮೊನ್ನೆಯದಿನ ಹೋದರು.

ಶಾಂತಿಭೂಯಿಷ್ಠವಾಗಿದ್ದ ಮದ್ರಾಸು ಅಧಿಪತ್ಯದಲ್ಲಿ ಇಂಥ ಕಠಿಣಶಾಸನಪ್ರಯೋಗದ ಆರಂಭವಾಗಬೇಕಾಗಿ ಬಂದುದನ್ನೂ ೧-೨-೩ ಸಲ ಸರ್ಕಾರದಿಂದ ಕೊಡಲ್ಪಟ್ಟ ಎಚ್ಚರಿಕೆಯನ್ನೂ ಲಕ್ಷ್ಯಮಾಡದೆ, ಅನಿಬೆಸೆಂಟಮ್ಮನವರು ೭೦ ವರ್ಷದ ಅಪರ ವಯಸ್ಸಿನಲ್ಲಿ ಇಂಥ ನಿರ್ಬಂಧನಿವಾಸಶಿಕ್ಷೆಗೆ ಒಳಗಾಗಬೇಕಾಗಿ ಬಂದುದನ್ನೂ ಕೇಳಿ ದೇಶೀಯರು ವ್ಯಸನಪಡುವಂತಾಗಿರುವುದು. ಜಿಡ್ಡು ನಾರಾಯಣಯ್ಯನವರು ತಮ್ಮ ಮಕ್ಕಳ ವಿಷಯವಾಗಿ ಇದೇ ಅನಿಬೆಸೆಂಟಮ್ಮನವರಮೇಲೆ ವ್ಯಾಜ್ಯವನ್ನು ನಡೆಯಿಸುವುದಕ್ಕೆ ಮುಂಚೆಯೂ ಆ ಕಾಲದಲ್ಲೂ ಅಮ್ಮನವರ ವಿಷಯದಲ್ಲಿ ಭಾರತೀಯ ದೇಶಭಕ್ತರನೇಕರಿಗೆ ಸದಭಿಪ್ರಾಯವಿರಲಿಲ್ಲ. ಆ ವ್ಯಾಜ್ಯವು ಪ್ರಿವಿಕೌನ್ಸಿಲಿನಲ್ಲಿ ಕೊನೆಮುಟ್ಟಿದಬಳಿಕ ಅಮ್ಮನವರ ಅವತಾರವೇ ಬೇರೆಯಾದಂತಾಯಿತು. ಭರತಖಂಡದ ಹಿತಚಿಂತನದ ಕಾಯಕವನ್ನು ಕೊಟ್ಟು ಪತ್ರಿಕಾ ಪ್ರಕಟನರೂಪದಿಂದಲೂ, ಉಪನ್ಯಾಸಪ್ರದಾನದಿಂದಲೂ ರಾಜಕೀಯ ಮಹತ್ವಾಕಾಂಕ್ಷೆಗಳನ್ನು ಭಾರತೀಯರ ಮನಸ್ಸಿನಲ್ಲಿ ಹೆಚ್ಚಿಸುತ್ತ, ಅವರನ್ನು ಹುರಿದುಂಬಿಸುತ್ತ, ಭರತಖಂಡದ ಬಹುಮಂದಿ ವಿದ್ಯಾರ್ಥಿಜನರ ಮನಸ್ಸನ್ನೆಲ್ಲಾ ಸೆಳೆದುಕೊಂಡು, ಅವರೆಲ್ಲರ ಸ್ತೋತ್ರಗಳಿಗೆ ಪಾತ್ರರಾದರು. ಕಡೆಗೆ ಸ್ವರಾಜ್ಯಸಾಧನ ಸಮಿತಿಸ್ಥಾಪನೆಗೆ ಇವರೇ ಮೂಲಕರ್ತ್ರಿಯರಾದರು. ಸರ್ ಸುಬ್ರಹ್ಮಣ್ಯಯ್ಯರೂ ಕೂಡ ಇವರ ಧೀರತೆಗೆ ಮರುಳಾಗಿ, ಸ್ವರಾಜ್ಯಸಾಧನ ಸಮಿತಿಯ ಅಧ್ಯಕ್ಷಪಟ್ಟವನ್ನು ಕಟ್ಟಿಸಿಕೊಂಡರು. ಮೈಸೂರ ದಿವಾನಗಿರಿಯು ತನಗೆ ದೊರೆತಾಗ ಆಂಗ್ಲಜನರನ್ನು ಕುರಿತು ಮಾತನಾಡಬೇಕಾದ ಸಂದರ್ಭದಲ್ಲಿ “ಆಂಗ್ಲಮಹಾಜನರ ಸಹವಾಸ ಸಂಭಾಷಣಾದಿಗಳಲ್ಲಿ ನನಗೆ ನಿಸರ್ಗವಾದ ಪ್ರೀತಿವಿಶ್ವಾಸಗಳುಂಟಾಗಿರುವುದು ನನ್ನ ಸುಕೃತವಿಶೇಷವು” ಎಂದು ಮೊದಲಾಗಿ ಹೇಳಿ, ಆಂಗ್ಲಾಧಿಕಾರಿಗಳ ಪ್ರಶಂಸೆಯನ್ನು ಮಾಡಿದ ವಿ. ಪಿ. ಮಾಧವರಾಯರೇ ಈಗ ಬೆಸೆಂಟಮ್ಮನವರ ಅನುಯಾಯಿಗಳಾಗಿ ನಿಂತು, ಆಂಗ್ಲಾಧಿಕಾರ ನಿರ್ಮೂಲನಾವಶ್ಯಕತೆಯನ್ನು ಸಾಧಿಸುವುದಕ್ಕೆ ಹೇಸದೆಹೋದರು. ಅಮ್ಮನವರ ಸಾಮರ್ಥ್ಯವಿಶೇಷದಿಂದ ಹೀಗೆಯೇ ಎಷ್ಟೋಜನ ಪ್ರಮುಖರು ತತ್‌ಕ್ಷಣಸ್ವರಾಜ್ಯಾಂದೋಳನಕ್ಕೆ ಭಾಗಿಗಳಾದರು. ಇವರ ನ್ಯೂಇಂಡಿಯಾ ಪತ್ರಿಕೆಗೆ ೧೦ ಸಾವಿರ ಮಂದಿ ವರ್ಗಣೆದಾರರಿದ್ದರು. ಇವರು ಈಚೆಗೆ ಜಾತೀಯ ವಿಶ್ವವಿದ್ಯಾಲಯದ ಮೂಲಕ ಜಾತೀಯ ಕಲಾಶಾಲೆಗಳನ್ನು ದೇಶದಲ್ಲೆಲ್ಲಾ ಹಬ್ಬಿಸಿ-ವಿದ್ಯಾಭ್ಯಾಸ ವಿಧಾನವನ್ನೇ ಬೇರ್ಪಡಿಸಿ ಸಾಗಿಸಬೇಕೆಂಬ ಉದ್ದೇಶಗೊಂಡು ಅದಕ್ಕೆಲ್ಲಾ ತಕ್ಕೇರ್ಪಾಟುಗಳನ್ನು ಮಾಡುತ್ತಿದ್ದರು.ಅಂತು ವಾಚಾಲುತನದಲ್ಲೂ, ಹಿಡಿದ ಪಟ್ಟನ್ನು ಸಾಧಿಸುವ ಸಾಮರ್ಥ್ಯದಲ್ಲೂ ಅನಿಬೆಸೆಂಟಮ್ಮನವರು ಅಸಾಧಾರಣರಾದವರು. ಇವರು ಭಾರತೀಯ ವಿದ್ಯಾರ್ಥಿಕರ ಪ್ರಶಂಸಾ ಪ್ರವಾಹಭರಕ್ಕೆ ಸಿಕ್ಕಿ, ದೇಹವಿಸ್ಮೃತಿಗೊಂಡವರಂತೆ ಪ್ರಭುತ್ವದವರಮೇಲೆ ನಿರಂಕುಶವಾದ ಕಠಿನ ಲೇಖನಗಳನ್ನು ಮಿತಿಮೀರಿ ಬರೆಯುವುದಕ್ಕೆ ತೊಡಗಿ, ಕಡೆಗೆ “ಸರ್ವಮತ್ಯಂತಗರ್ಹಿತಂ” ಎಂಬವಚನಕ್ಕೆ ದೃಷ್ಟಾಂತವಾಗಿ ತನಗೆ ತಾವೇ ಅನಿಷ್ಟವನ್ನು ತಂದುಕೊಂಡರು. ಇವರ ಅಧ್ಯಕ್ಷತೆಯಿಂದ ನಡೆಯುತ್ತಿದ್ದ ಥಿಯೋಸಾಫಿಕಲ್ ಸಂಘದ ಕಾರ್ಯಗಳನ್ನು ಜರುಗಿಸುವುದಕ್ಕೂ ಸರ್ಕಾರದವರು ಅವಕಾಶ ಕೊಡುವರೋ ಇಲ್ಲವೋ ತಿಳಿಯದು. ಅತಿವಾದಕ್ಕೆಡೆಗುಡದೆ ತಮ್ಮ ವಿದ್ವತ್ತಾನುಭವಾದಿಗಳನ್ನು ಇವರು ಭರತಖಂಡದವರ ತಿದ್ದುವಿಕೆಗೂ ಪ್ರಭುತ್ವದವರಿಗೆ ಹಿತೋಪದೇಶಮಾಡುವುದಕ್ಕೂ ವಿನಿಯೋಗಿಸಿದ್ದರೆ ಕೈ|| ಗೋಖಲೆಯವರನಂತರ ಅವರ ಸ್ಥಾನವನ್ನು ಇವರು ಪಡೆಯಬಹುದಾಗಿದ್ದಿತು. ಹೀನಭಾಗ್ಯದಿಂದ ಅಂಥ ಯೋಗವು ಇವರಿಗೆ ಲಭಿಸಲಿಲ್ಲ. ಅದಕ್ಕಾಗಿ ವಿಷಾದಿಸಬೇಕಾಗಿರುವುದು. ಅಮ್ಮನವರ ಹಿಂಬಾಲಕರು ಇನ್ನುಮೇಲಾದರೂ ತಮ್ಮ ತೀವ್ರತರಾಂದೋಳನದ ಹುಚ್ಚನ್ನು ಬಿಟ್ಟು ಸಕ್ರಮ ಸ್ವರಾಜ್ಯಸಾಧನೆಗೆ ಶಾಂತಗಳಾದ ಪ್ರಯತ್ನಗಳನ್ನು ಮಾಡುತ್ತಲಿರುವುದು ಶ್ರೇಯಸ್ಕರವು. ಭರತಖಂಡದ ಸ್ಥಿತಿಗತಿಯನ್ನೆಲ್ಲಾ ಆಂಗ್ಲ ಪ್ರಭುತ್ವದವರು ತಿಳಿಯದೆ ಇಲ್ಲ. ಈ ರಾಷ್ಟ್ರದ ೩೫ ಕೋಟಿ ಪ್ರಜೆಗಳಲ್ಲಿ ಸ್ವರಾಜ್ಯವೆಂಬ ಹೆಸರನ್ನು ಕೂಡ ಕೇಳದಿರುವವರೇ ೩೪ ಕೋಟಿ ಜನರಿರುವರೆಂದರೂ ಒಪ್ಪುವಂತಿರುವುದು. ಸ್ವರಾಜ್ಯದ ಆಂದೋಳನವನ್ನು ಮಾಡತಕ್ಕ ಜನರು ಇಷ್ಟು ಕೋಟಿ ಜನರಲ್ಲಿ ಒಂದು ಲಕ್ಷವಾದರೂ ಇರುವರೋ ಇಲ್ಲವೋ. ಈಗಣ ಮಹಾಯುದ್ಧ ಸಂಧಿಯಲ್ಲಿ ಆಂಗ್ಲಮಹಾಜನರ ಸಾನುಭೂತಿಯು ಈ ದೇಶದ ಮೇಲೆ ಉಂಟಾಗುವುದಕ್ಕೆ ಈ ೧ ಲಕ್ಷ ಜನರ ಆಂದೋಳನವು ಲೇಶ ಮಾತ್ರವೂ ಕಾರಣವಾಗಿರದೆ ಯುದ್ಧಾಂಗಣಕ್ಕೆ ಹೋಗಿ ತಮ್ಮ ದೇಹಪ್ರಾಣಗಳನ್ನು ರಾಜಭಕ್ತಿಯಿಂದ ಅರ್ಪಿಸಲು ಸಿದ್ಧರಾದ ಬಹುಶಃ ಅನಕ್ಷರಸ್ಥರೇ ಹೆಚ್ಚಾಗಿರುವ ಭಾರತಯೋಧರ ಶೌರ್ಯಧೈರ್ಯ ಸಾಹಸ ಸಾಹಾಯ್ಯಗಳೇ ಕಾರಣವಾಗಿರುತ್ತವೆಂದು ಹೇಳುವುದರಲ್ಲಿ ಅಭ್ಯಂತರವೇ ಇಲ್ಲ. ಆ ಯೋಧರ ಮೂಲಕವೇ ಭರತಖಂಡದ ಸುಯೋಗ ಶಕವು ಈಗ ಆರಂಭಿಸಿತೆಂದು ಹೇಳಬಹುದು. ಆ ರುಮಿನಮೇಲಣ ಪ್ರೀತಿಯಿಂದ ಆಕಳು ಸೊರಕೊಡುವಂತೆ ಆಂಗ್ಲಮಂತ್ರಿಪ್ರಮುಖರು ಉದಾರಚಿತ್ತವನ್ನು ಭರತಖಂಡದಮೇಲೆ ಈ ಯೋಧರ ಕೃತ್ಯವಿಶೇಷದಿಂದಲೇ ಈಗ ತೋರ್ಪಡಿಸುತ್ತಿರುವರು. ಆದರೆ ನಮ್ಮಲ್ಲಿನ ತೀವ್ರಾಂದೋಳನ ನಿಷ್ಣಾತರಾದ ಗೊಲ್ಲರು ಆಕಳ ಕೆಚ್ಚಲನ್ನೇ ಕೊಯ್ಯುವಂಥ ದುರಾಶೆಗೆ ಬಲಿಯಾಗಿ ಅದರ ಮನಸ್ಸಿಗೆ ರೋಷವನ್ನು ಹುಟ್ಟಿಸುತ್ತಿರುವರು. ಇದರಿಂದ ಬಳಿಯಲ್ಲಿ ನಿಂತಿರುವವರಿಗೆಲ್ಲಾ ಆಕಳ ಒದೆಪೆಟ್ಟೊ ತಿವಿತವೂ ಎಲ್ಲಿ ಲಭಿಸುವುವೋ ಎಂದು ಭಯಪಡುವಂತಾಗಿರುವುದು. ಯುದ್ಧವು ಮುಗಿದ ನಂತರ ಸಾಮ್ರಾಜ್ಯಪ್ರಭುತ್ವದವರು ಭರತಖಂಡಕ್ಕೆ ಉಚಿತವಾದ ಸ್ಥಾನವನ್ನು ಕೊಡುವುದಕ್ಕೆ ಅವರೇ ಸಿದ್ಧರಾಗಿ, ಅದರ ಸೂಚನೆಯನ್ನೂ ಕೂಡ ಮಾಡಿರುವಾಗ, ಅವರ ಮನಃಪ್ರೀತಿಯನ್ನು ಹೆಚ್ಚಿಸಿಕೊಡತಕ್ಕ ರಾಜನಿಷ್ಠೆಯ ಕೃತಿಗಳನ್ನು ಹೆಚ್ಚಿಸುವ ಆಂದೋಳನವನ್ನು ಈ ದೇಶದ ರಾಷ್ಟ್ರಭಕ್ತರೆಂಬ ಪ್ರಮುಖರು ಮಾಡದೆ, ಈ ಯುದ್ಧ ಸಮಯದಲ್ಲಿ ಸ್ವಾರ್ಥದ ತೀವ್ರತರಾಂದೋಳನವನ್ನು ಮಾಡುವುದಕ್ಕೆ ಉಜ್ಜುಗಿಸಿ, ದ್ರವಿಸುತ್ತಿದ್ದ ಹೃದಯವನ್ನೂ ಕೂಡ ಕಠಿನವಾಗುವಂತೆ ಮಾಡಲು ಸಾಧಕರಾಗುವುದು ಭರತಖಂಡದ ದುರ್ದೈವವಲ್ಲವೆ? ಇನ್ನಾದರೂ ನಮ್ಮ ರಾಷ್ಟ್ರೀಯ ಪ್ರಮುಖರಲ್ಲಿ ತೀವ್ರತರಾಂದೋಳನ ಬುದ್ಧಿಯು ಶಾಂತವಾಗಿ, ಹಿತಮಿತಪ್ರವರ್ತನವು ತಲೆಯೆತ್ತಿ, ಭರತಖಂಡದ ಶುಭಾಭ್ಯುದಯಕ್ಕೆ ಸಾಧಕರಾಗಲೆಂದು ಕೋರುವೆವು.

ಒಳದೇಶದ ವೃತ್ತಾಂತಗಳು.

ಶ್ರೀಮದ್ಯುವರಾಜರವರು ಕಳೆದ ಗುರುವಾರದದಿನ ಬೆಂಗಳೂರಿಗೆ ದಯಮಾಡಿಸಿದರು.

ಮ|| ಎಚ್. ವಿ. ನಂಜುಂಡರಾಜ ಅರಸಿನವರೂ, ಮ|| ಎನ್. ಸುಬ್ಬರಾಯರೂ ಸಹ ಬರುವ ಜುಲೈ ತಿಂಗಳಿಂದ ರಿಟೈರ್ಮಾಡಲ್ಪಡುವರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಬಲವಾದ ಮಳೆಯಿಲ್ಲ. ಮೋಡವು ಮುಚ್ಚಿರುತ್ತದೆ. ಜ್ವರ ಆಮಶಂಕೆ ಮೊದಲಾದ ಕ್ಷುದ್ರರೋಗಗಳು ಹೆಚ್ಚಿಕೊಂಡಿವೆ. ವಾಂತಿಭೇದಿ ರೋಗವು ಕಳೆದವಾರದಿಂದ ಸ್ವಲ್ಪ ಉಲ್ಬಣವಾಗಿದೆ.

ತಮ್ಮ ಸಹೋದರರಿಗೆ ವಿಶೇಷವಾಗಿ ಅಸ್ವಸ್ಥತೆಯುಂಟಾಗಿರುವುದೆಂಬ ವರ್ತಮಾನವನ್ನು ಕೇಳಿ ನೀಲಗಿರಿಯಲ್ಲಿದ್ದ ಬರೋಡಾಮಹಾರಾಜರವರು ಮೋಟಾರಿನಮೂಲಕ ಮೈಸೂರಿಗೆ ಬಂದು ಸ್ವದೇಶಕ್ಕೆ ಪ್ರಯಾಣಮಾಡಿದರು.

ಕಳೆದ ೨೦ ನೆಯ ತಾರೀಖಿನ ದಿವಸ ಧಾರ್ವಾಡದಲ್ಲಿ ಕರ್ನಾಟಕ ಕಲಾಶಾಲಾಸ್ಥಾಪನ ಮಹೋತ್ಸವವು ಬೊಂಬಾಯಿ ಗೌರ್ನರವರ ದೇಹಾಸ್ವಸ್ಥತೆಯಮೂಲಕ ಅವರ ಕಾರ್ಯಕಾರಿ ಸಂಘದ ಸಭ್ಯರಾದ ಆ|| ಚೌಬಲ ಕೆ. ಸಿ. ಐ. ಇ. ಯವರಿಂದ ಬಹು ಸಂಭ್ರಮದಿಂದ ನೆರವೇರಿಸಲ್ಪಟ್ಟಿತು.

ಬೆಂಗಳೂರು ಡಿಸ್ಟ್ರಿಕ್ಟ್ ಪತ್ರಿಕೆಯ ೬ ನೆಯ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದೆವು. ಇದರಲ್ಲಿ ಕಳೆದ ಅರ್ಥಸಾಧಕ ಸಭೆಯಲ್ಲಿ ನಡೆದ ಸಂಗತಿಗಳೇ ವಿಶೇಷವಾಗಿರುತ್ತವೆ. ಇದು ಪಕ್ಷಪತ್ರಿಕೆ. ಇದರ ಚಂದಾ—ಅಂಚೆವೆಚ್ಚ ಸೇರಿ ಮೈಸೂರು ದೇಶೀಯರಿಗೆ ೧-೮-೦. ಹೊರಗಣವರಿಗೆ ೨ ರೂ.

ಕಳೆದ ಭಾನುವಾರ ಬೆಳಗ್ಗೆ ರಾಜಧಾನಿಯ ವಿದ್ಯುಚ್ಛಕ್ತಿಯ ಮನೆಯ ಹತ್ತಿರ ಇಟ್ಟಿಗೆಗೂಡಿನ ಚೆನ್ನಮ್ಮ ಎಂಬುವಳನ್ನು ಮಚ್ಚುಕತ್ತಿಯಿಂದ ಹೊಡೆದು ವಿಶೇಷ ಗಾಯಗಾಣಿಸಿದ ಶಂಕರಸಿಂಗ್ ಎಂಬುವನು ಪೊಲೀಸರಿಂದ ಹಿಡಿಯಲ್ಪಟ್ಟು ವಿಚಾರಣೆಯಲ್ಲಿದ್ದಾನೆ. ಚೆನ್ನಮ್ಮನು ಆಸ್ಪತ್ರೆಯಲ್ಲಿ ಆರೋಗ್ಯಗೊಳ್ಳುತ್ತಿದ್ದಾಳೆ.

ಮೈಸೂರು ವಿಶ್ವವಿದ್ಯಾಲಯ ಶಾಸನಸಭೆಯವರು ಇಂಜನಿಯರಿಂಗ್ ವಾಣಿಜ್ಯ-ಇವುಗಳ ಸಂಬಂಧವಾದ ಕಲಾಶಾಲೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಕೊಟ್ಟ ಸೂಚನೆಯನ್ನು ಸರ್ಕಾರದವರು ಅಂಗೀಕರಿಸಿ, ಇಂಜನಿಯರಿಂಗ್ ಕಲಾಶಾಲೆಯನ್ನು ಬೆಂಗಳೂರಿನಲ್ಲೂ, ವಾಣಿಜ್ಯ ತರಗತಿಗಳನ್ನು ಮೈಸೂರಿನಲ್ಲೂ ಸ್ಥಾಪಿಸುವುದಕ್ಕೆ ಅಪ್ಪಣೆಮಾಡಿದ್ದಾರೆ.

ಮೈಸೂರು ಡಿ|| ಕಮಿಷನರಾಗಿರುವ ಮೆ|| ಮೆಥ್ಯೂರವರು ಕನ್ನಂಬಾಡಿ ಜಲಾಶಯದ ಸಂಬಂಧದಲ್ಲಿ ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿ ಕಳುಹಿಸಲ್ಪಟ್ಟು ಸ್ಪೆಷಲ್ ಡ್ಯೂಟಿಯಮೇಲಿರುವ ಮ|| ತ್ಯಾಗರಾಜಯ್ಯರು ಮೈಸೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಾಗಿ ಮಾಡಲ್ಪಡುವರೆಂಬ ವಾರ್ತೆಯಿದ್ದಿತು. ಆದರೆ ಮ|| ಅಯ್ಯರ್‌ರವರು ಜುಲೈ ತಿಂಗಳಿಂದ ೩ ತಿಂಗಳ ಕಾಲ ರಜಾದಮೇಲೆ ಹೋಗುವರೆಂದು ಗೊತ್ತಾಗುತ್ತದೆ.

ತರೀಕೆರೆ ತಾ|| ಬಗ್ಗುವಳ್ಳಿ ಗುರುರಾಯರನ್ನು ಕೊಲೆ ಮಾಡಿದ ಕೇಸಿನಲ್ಲಿ ಸೆಷನ್ ಜಡ್ಜರ ವಿಚಾರಣೆಯೆಲ್ಲಾ ಮುಗಿದು ೧೨ ಮಂದಿ ಅಪರಾಧಿಗಳಲ್ಲಿ ಲಿಂಗೇಗೌಡ, ರಾಚಯ್ಯ, ಬುಡನ್, ಹುಸೇನ್, ಚೆನ್ನಬಸವ, ಫಕೀರ—ಈ ಆರುಮಂದಿಗೆ ಮರಣದಂಡನೆಯೂ, ಮಹಮ್ಮದ್, ಇಮಾಮ್ ಇವರಿಬ್ಬರಿಗೆ ಜೀವಾವಧಿ ಕಾರಾಗೃಹವಾಸಶಿಕ್ಷೆಯೂ, ಚಿಕ್ಕೇಗೌಡ, ಹನುಮೇಗೌಡ, ಲಕ್ಷ್ಮೇಗೌಡ, ಪುರದೇಗೌಡ ಇವರಿಗೆ ನಿರಪರಾಧಿತ್ವವೂ ವಿಧಿಸಲ್ಪಟ್ಟುವು.

ಬಳಗೊಳಕ್ಕೆ ಸಮೀಪದಲ್ಲಿರುವ ಹೊಸಹಳ್ಳಿಯಲ್ಲಿ ಚೆನ್ನಾಚಾರಿಯೆಂಬ ಓಜಿಯು ತನ್ನ ಹೆಂಡತಿ ಮಾವ, ೩ ವರ್ಷದ ೧ ಮಗು—ಇವರುಗಳೊಡನೆ ವಾಸಮಾಡುತ್ತಲಿದ್ದು ಕಳೆದ ತಿಂ|| ೨೨ ನೆ ಸಾಯಂಕಾಲ ಮನೆಯ ಬಾಗಿಲು ಕಿಟಕಿ ಕದಗಳನ್ನೆಲ್ಲಾ ಮುಚ್ಚಿಕೊಂಡು ಕತ್ತಿಯಿಂದ ಹೆಂಡತಿಯನ್ನೂ ಮಾವನನ್ನೂ ಕತ್ತರಿಸಿ ಕೊಂದು, ಹುಡುಗನಿಗೂ ಏಟುಹಾಕಿದ್ದನು. ಅದು ಅಪಾಯಸ್ಥಿತಿಯಲ್ಲಿದ್ದಿತು. ಒಳಕ್ಕೆ ನುಗ್ಗಿ ಮಗುವನ್ನು ಕಾಪಾಡುವುದಕ್ಕೆ ಯಾರಿಗೂ ಧೈರ್ಯವಾಗಲಿಲ್ಲ. ಬಳಗೊಳದ ಪೊಲೀಸ್ ಠಾಣಕ್ಕೆ ಸುದ್ದಿ ಕೊಟ್ಟಮೇಲೆ ಇನ್‌ಸ್ಪೆಕ್ಟರೂ ಜಮೇದಾರರೂ ಸಹ ಅಲ್ಲಿಗೆ ಹೋಗಿ ಗ್ರಾಮದವರ ಸಹಾಯದಿಂದ ಹುಡುಗನನ್ನು ಕಾಪಾಡಿದರು. ಹಂತಕನು ೨ ಕೈಗಳಿಂದಲೂ ಕತ್ತಿಯ ಸಾಮನ್ನು ಮಾಡುತ್ತಿದ್ದನು. ಆದರೂ ಪೊಲೀಸರು ಧೈರ್ಯದಿಂದಲೂ ಎಚ್ಚರಿಕೆಯಿಂದಲೂ ಅವನನ್ನು ಹಿಡಿದು ಸೆರೆಯಲ್ಲಿಟ್ಟು ವಿಚಾರಣೆಗೆ ಗುರಿಪಡಿಸಿರುವರು.

ಹಿಂದುಳಿದ ಜನವರ್ಗದವರನ್ನು ವಿದ್ಯೆಯಲ್ಲಿ ಮುಂದುವರಿಸುವುದಕ್ಕಾಗಿ ಮ|| ಎಂ. ಬಸವಯ್ಯನವರೇ ಮೊದಲಾದವರ ಪ್ರಯತ್ನವಿಶೇಷದಿಂದಲೂ, ಶ್ರೀಮನ್ ಮಹಾರಾಜರವರ ಅನುಗ್ರಹದಿಂದಲೂ ನಮ್ಮ ಸರ್ಕಾರದವರು ಅದಕ್ಕಾಗಿ ೧ ಲಕ್ಷ ರೂ. ಗಳನ್ನು ವ್ಯಯಮಾಡಲು ಅಪ್ಪಣೆಮಾಡಿರುವರಷ್ಟೆ. ಇದರಲ್ಲಿ ೧೫ ಸಾವಿರ ರೂ. ಗಳು ನಿಮ್ನಜಾತಿಯವರ ವಿದ್ಯಾಪ್ರೋತ್ಸಾಹಕ್ಕೆ ವಿಭಾಗಿಸಲ್ಪಟ್ಟು, ಉಳಿದ ಹಣವನ್ನೆಲ್ಲಾ ಲಿಂಗಧಾರಿಗಳು, ಒಕ್ಕಲಿಗರು ಮಹಮ್ಮದೀಯರು ಮೊದಲಾದ ವಿದ್ಯೆಯಲ್ಲಿ ಹಿಂದುಳಿದಿರತಕ್ಕ ಲಕ್ಷಾಂತರ ಪ್ರಜೆಗಳ ಮಕ್ಕಳ ವಿದ್ಯಾಪ್ರೋತ್ಸಾಹಕಾಗಿ ವಿನಿಯೋಗಿಸತಕ್ಕದೆಂದು ವಿದ್ಯಾಭ್ಯಾಸದ ಕಮಿಟಿಯವರೂ ಗೌರ್ನಮೆಂಟಿನವರೂ ಒಪ್ಪಿ ಅಪ್ಪಣೆಮಾಡಿರುವರು. ಬ್ರಾಹ್ಮಣೇತರರು ಅಭಿವೃದ್ಧಿಗೆ ಬರುವುದನ್ನು ನೋಡಿ ಸೈರಿಸಲಾರದ ಕೆಲ ಜನ ಲೋಕದ್ವೇಷಿಗಳು ಈ ಏರ್ಪಾಟಿಗೆ ಅಸೂಯೆಪಟ್ಟು ಸಣ್ಣ ಜನಗಳು ಆಡುವಂಥ ವಿಪ್ರಲಾಪಗಳನ್ನಾಡುತ್ತಿದ್ದಾರೆ. ಸಂಸ್ಥಾನದಲ್ಲಿ ವಿದ್ಯೆಯಲ್ಲಿ ಹಿಂದುಳಿದಿರುವ ಪ್ರಜೆಗಳನ್ನು ಮುಂದಕ್ಕೆ ತರುವುದಕ್ಕೆ ವರ್ಷಕ್ಕೆ ೧೦-೨೦ ಲಕ್ಷ ರೂ. ಗಳನ್ನು ವ್ಯಯಮಾಡಿದರೂ ಸಾಲದು. ಹೀಗಿರುವಲ್ಲಿ ಸಾಮಾನ್ಯವಾದ ೮೫ ಸಾವಿರ ರೂ.ಗಳನ್ನು ಅವರಿಗೆ ಪ್ರತ್ಯೇಕವಾಗಿ ಕೊಟ್ಟುದಕ್ಕೇ ಈ ಜನಗಳು ಇಷ್ಟು ಹೊಟ್ಟೆಕಿಚ್ಚುಪಡುವುದಾದರೆ, ಇವರು ಮಾಡುತ್ತಿರುವ ಸೂರೆಯನ್ನು ನೋಡಿದರೂ ತಟಸ್ಥರಾಗಿರುವ ಆ ಜನರನ್ನೇ ಇವರಿಗಿಂತಲೂ ಗುಣಾಢ್ಯರೆಂದು ಹೇಳಬೇಕಾಗುವುದು. ವಾಗ್ಬ್ರಹ್ಮಿಯಾಗುವುದಕ್ಕಿಂತಲೂ ಕಾರ್ಯಬ್ರಹ್ಮಿಯಾದವನೇ ನಿಜವಾದ ಬ್ರಾಹ್ಮಣನಲ್ಲವೆ?

ಬೆಂಗಳೂರು ಪಟ್ಟಣದಲ್ಲಿ ಮ|| ಜನೋಪಕಾರಿ ದೊಡ್ಡಣ್ಣನವರ ಪಾಠಶಾಲೆಯ ಪ್ರಾಕಾರದಲ್ಲಿ ರಾ|| ಬ|| ಅಣ್ಣಾಸಾಮಿ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಪುರಜನರ ಮಹಾಸಭೆಯೊಂದು ಸೇರಿದ್ದಿತು. ಅಲ್ಲಿಯ ಮ್ಯುನಿಸಿಪಾಲಿಟಿಯವರು ಮನೆ ಮುಂಗಟ್ಟುಗಳ ತೆರಿಗೆಯನ್ನು ಹೆಚ್ಚಿಸುವುದಕ್ಕೆ ಯೋಚಿಸಿರುವುದು, ಈಗಣ ಯುದ್ಧಕಾರಣದಿಂದ ಪದಾರ್ಥಗಳ ಬೆಲೆ ಹೆಚ್ಚಿ ಪ್ರಜೆಗಳ ಜೀವನ ನಿರ್ವಾಹವು ಕಷ್ಟತರವಾಗಿರುವ ಸಂದರ್ಭದಲ್ಲಿ ಅಯುಕ್ತವಾಗಿರುವುದೆಂತಲೂ, ಇದನ್ನು ಶ್ರೀಮನ್ಮಹಾರಾಜರವರಿಗೆ ಬಿನ್ನೈಸಿಕೊಳ್ಳಬೇಕೆಂತಲೂ ಮ|| ಎಂ. ಚಂಗಯಶೆಟ್ಟರಿಂದ ಸೂಚಿಸಲ್ಪಟ್ಟ ನಿರ್ಧಾರವೂ, ಅಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಸಕಲ ಪ್ರಜೆಗಳ ಪ್ರಾತಿನಿಧ್ಯವೂ ಇರಲನುಕೂಲವಾಗುವಂತೆ ಪ್ರತಿಯೊಂದು ಸಂಗಡಗಳ ಪ್ರತಿನಿಧಿಗಳನ್ನೂ ಆರಿಸಿ ಕೌನ್ಸಿಲ್ಲಿನಲ್ಲಿ ಸೇರಿಸುವಂಥ ಏರ್ಪಾಟಾಗಬೇಕೆಂದು ಮ|| ಎಂ.ಬಸವಯ್ಯ ಬಿ.ಎ.,ಬಿ.ಎಲ್., ರವರಿಂದ ಸೂಚಿಸಲ್ಪಟ್ಟ ನಿರ್ಧಾರವೂ, ಈಗಣ ಯುದ್ಧದಲ್ಲಿ ಮಿತ್ರಮಂಡಲಿಗೆ ಜಯವೂ ಬೇಗನೆ ಯುದ್ಧಸಮಾಪ್ತಿಯೂ ಆಗುವಂತೆ ಭಗವತ್ಪ್ರಾರ್ಥನೆಯನ್ನು ಮಾಡಬೇಕೆಂದು ಅಧ್ಯಕ್ಷರಿಂದ ಸೂಚಿಸಲ್ಪಟ್ಟ ನಿರ್ಧಾರವೂ, ಇವೆಲ್ಲ ನಿರ್ಧಾರಗಳನ್ನೂ ಶ್ರೀಮನ್ಮಹಾರಾಜರ ಸನ್ನಿಧಿಗೆ ಕಳುಹಿಸಿಕೊಟ್ಟು ಅವರು ಇದನ್ನು ದಿವಾನರ ಮತ್ತು ಬೆಂಗಳೂರು ಮ್ಯುನಿಸಿಪಾಲಿಟಿಯ ಆ|| ಪ್ರೆಸಿಡೆಂಟರ ಗಮನಕ್ಕೆ ತರುವಂತೆ ಪ್ರಾರ್ಥಿಸಿಕೊಳ್ಳಬೇಕೆಂಬುದಾಗಿ ಮ|| ಸಾ|| ಮುನಿಬಸವಪ್ಪನವರು ಸೂಚಿಸಿದ ನಿರ್ಧಾರವೂ ಸಹ ಸಭಿಕರಿಂದೆಲ್ಲಾ ಅನುಮೋದಿತವಾದುವು.

ಯುದ್ಧವಾರ್ತೆಯು

ಇಂಗ್ಲೀಷ್ ಸೈನಿಕರು ಮೆಸ್ಸೈನ್ ಗುಡ್ಡದಿಂದಾಚೆಗೂ ಶತ್ರುಸ್ಥಾನಗಳ ಮೇಲೆ ನುಗ್ಗಿ ಅನೇಕ ಕಂದಕಗಳನ್ನೂ ಉನ್ನತಸ್ಥಾನಗಳನ್ನೂ ವಶಪಡಿಸಿಕೊಳ್ಳುತ್ತಲೇ ಇದ್ದಾರೆ. ಹಿಂಡನ್‌ಬರ್ಗರ ಸೇನಾಪಙ್ಕ್ತಿಯಲ್ಲಿ ಹಲವುಕಡೆ ಇವರು ಯುದ್ಧವನ್ನು ನಡೆಯಿಸಿ, ಶತ್ರುಗಳನ್ನು ಹಿಮ್ಮೆಟ್ಟಿಸಿ, ಅನೇಕರನ್ನು ಸೆರೆಹಿಡಿದು, ಫಿರಂಗಿಗಳು ಮದ್ದುಗುಂಡುಗಳು ಮೊದಲಾದುವನ್ನು ವಶಪಡಿಸಿಕೊಂಡಿದ್ದಾರೆ. ಜೂನ್ ತಾ|| ೭ ರಿಂದ ೧೪ ರೊಳಗೆ ಎಂದರೆ ೧ ವಾರ ಕಾಲದೊಳಗಾಗಿ ೭೩೪೨ ಮಂದಿ ಸೈನಿಕರನ್ನೂ, ೪೬ ತುಪಾಕಿಗಳನ್ನೂ, ೨೪೨ ಯಂತ್ರದ ಫಿರಂಗಿಗಳನ್ನೂ, ೬೦ ಕಂದಕದ ಫಿರಂಗಿಗಳನ್ನೂ ಇಂಗ್ಲೀಷರು ವಶಪಡಿಸಿಕೊಂಡಿರುವರು. ಈಚೆಗೆ ಇಂಗ್ಲೀಷರು ಬೆಲ್ಜಿಯಂ ದೇಶದಲ್ಲಿಯೂ, ಶತ್ರುಗಳಮೇಲೆ ಯುದ್ಧಮಾಡಿ, ಕೆಲಕಡೆ ಸೋಲಿಸಿರುತ್ತಾರೆ. ವೈಪ್ರೆಸ್ಸಿನಿಂದ ಹಿಡಿದು ಆರ್ಮೆಂಟೀರೀಸಿನವರೆಗೆ ಎಂದರೆ ಸೇನಾಪಙ್ಕ್ತಿಯ ಒಂದು ತುದಿಯಿಂದ ಹಿಡಿದು ಮತ್ತೊಂದು ತುದಿಯವರೆಗೆ ಉದ್ದಕ್ಕೂ ಇಂಗ್ಲೀಷರು ಜರ್ಮನ್ ಸೈನ್ಯಕ್ಕೆ ಲೇಶವೂ ವಿರಾಮಕೊಡದಂತೆ ಯುದ್ಧಮಾಡುತ್ತ, ಅವರೆದೆಯನ್ನು ಬಿರಿಯಿಸಿಬಿಟ್ಟಿದ್ದಾರೆ. ಜರ್ಮನರಿಗೆ ಬಹಳ ನಷ್ಟವಾಗುತ್ತಿದೆ. ಇಂಗ್ಲೀಷ್ ಸೇನಾಮಹತ್ವವೂ ಅವರ ಸೇನಾನಾಯಕರ ಕೌಶಲವೂ ಈಗ ಜರ್ಮನರಿಗೆ ಗೊತ್ತಾದಂತಾಯಿತು. ಇನ್ನು ಅವರು ಫ್ಲಾಂಡರ್ಸಿನಲ್ಲಿ ತಮ್ಮ ನೂತನ ಸೇನಾಪಙ್ಕ್ತಿಯನ್ನು ರಕ್ಷಿಸಿಕೊಳ್ಳಬೇಕಾದರೆ ಅಪಾರವಾಗಿ ಹೊಸಸೈನ್ಯಗಳನ್ನು ತಂದು ಸೇರಿಸಬೇಕು. ಇಲ್ಲವೆ ಪಲಾಯನಸೂಕ್ತವನ್ನೋದಬೇಕು. ಓಡಿಹೋಗುವುದಕ್ಕೂ ದಾರಿ ಕಟ್ಟದಂತಾಗಿದೆ. ಇಂಗ್ಲೀಷರ ಫಿರಂಗಿಗಳ ಬಲ್ಮೆಯನ್ನೂ ಅವರ ಗೋಲಂದಾಜರ ಗುರಿಯನ್ನೂ ಜರ್ಮನರು ಹೊಗಳುತ್ತಲಿದ್ದಾರೆ. ಫ್ರೆಂಚರು ಅಂಕರ್‌ನದಿಯ ಕೆಳಗಿದ ಶತ್ರುಗಳ ಫಿರಂಗಿಸ್ಥಾನಗಳನ್ನೆಲ್ಲಾ ವಶಪಡಿಸಿಕೊಂಡರು. ಪೈಸು, ಮಿರಾಮೌಂಟುವಿನಹತ್ತಿರ ಇದ್ದ ಶತ್ರುಸಂರಕ್ಷಕಸ್ಥಾನಗಳೂ ಇವರ ವಶವಾದುವು. ಸೆರ್ರಿ ಬೆಟ್ಟಕ್ಕೆ ದಕ್ಷಿಣದಲ್ಲಿರುವ ಶತ್ರುಗಳ ಕಂದಕಗಳಲ್ಲಿ ೧೦೦೦ ಗಜಗಳವರೆಗಿನ ಭಾಗವನ್ನು ವಶಪಡಿಸಿಕೊಂಡರು. ಚಾಂಪೇನಿನಲ್ಲಿ ೫೦೦ ಮೀಟರುಗಳವರೆಗೆ ವ್ಯಾಪಿಸಿದ್ದ ಶತ್ರುಗಳ ಮುಖ್ಯ ಕಂದಕಗಳನ್ನು ವಶಪಡಿಸಿಕೊಂಡರು.

ತಮಗೆ ಅಪಜಯವು ಹೆಚ್ಚಾಗುತ್ತ ಬಂದಂತೆ ಶತ್ರುಗಳು ದೌರ್ಜನ್ಯವನ್ನು ನಡೆಯಿಸುವುದು ಹೆಚ್ಚುತ್ತಿದೆ. ಫ್ರೆಂಚರ ರೀಮ್ಸ್ ಪಟ್ಟಣದಮೇಲೆ ಶತ್ರುಗಳು ಗುಂಡುಗಳನ್ನು ಅನಂತಾನಂತವಾಗಿ ಹೊಡೆಯುತ್ತಿದ್ದಾರೆ. ತಾ|| ೧೯ ರಲ್ಲಿ ೨ ಸಾವಿರ ಗುಂಡುಗಳನ್ನು ಹೊಡೆದಿದ್ದಾರೆ. ಊರಿನ ಅನೇಕ ಭಾಗಗಳು ಉರಿದು ಶಿಥಿಲವಾಗಿಹೋದುವು. ಅನೇಕರು ಮಡಿದು ಗಾಯಗೊಂಡು ಇರುವರು.

ಅತ್ತ ಇಂಗ್ಲೆಂಡಿನಕಡೆಗೆ ಶತ್ರುಗಳ ಜಪ್ಲಿನ್ನುಗಳು ಪದೇಪದೇ ಹಾರಿಹೋಗಿ ಸಿಡಿಮದ್ದುಗಳನ್ನು ಹಾಕಿ, ಪುರವಾಸಿಗಳನ್ನು ಗಾಸಿಪಡಿಸುತ್ತಿರುವುದು ಹೆಚ್ಚಾಗಿದೆ. ತಾ|| ೧೩ ರಲ್ಲಿ ಲಂಡನ್ ಪಟ್ಟಣದ ಪೂರ್ವಭಾಗದಲ್ಲಿ ಇವುಗಳು ಹಾಕಿದ ಸಿಡಿಮದ್ದುಗಳಿಂದದ ೧೦೪ ಮಂದಿಗಳು ಸತ್ತರು. ४२३ ಮಂದಿಗೆ ಗಾಯಗಳಾದುವು. ಮರಳಿ ತಾ|| ೧೬ ರ ರಾತ್ರಿ ಇನ್ನೆರಡು ಜಪ್ಲಿನ್ನುಗಳು ಬಂದು ಆಗ್ನೇಯಭಾಗದ ೧ ಪಟ್ಟಣದಲ್ಲಿ ಸಿಡಿಮದ್ದುಗಳನ್ನು ಹಾಕಿದುದರಿಂದ ರಾಜವೀಧಿಯ ಅಂಗಡಿಗಳೆಲ್ಲಾ ಧ್ವಂಸವಾದುವು. ಒಂದು ಸಿಡಿಮದ್ದು ಭೂಮಿಯಮೇಲೆ ಬಿದ್ದು ೯ ಅಡಿಗಳ ಆಳವೂ ೩೦ ಅಡಿಗಳ ಸುತ್ತಳತೆಯೂ ಉಳ್ಳ ದೊಗರನ್ನು ಮಾಡಿದ್ದಿತು. ಈ ಜಪ್ಲಿನ್ನುಗಳ ಮೇಲೆ ಇಂಗ್ಲೀಷು ವೈಮಾನಿಕರೂ ಕಾವಲಿನ ಫಿರಂಗಿದಳದವರೂ ಗುಂಡುಗಳನ್ನು ಹೊಡೆದು ಕೆಲವನ್ನು ಕೆಡಹಿ ನಷ್ಟಪಡಿಸಿರುತ್ತಾರೆ. ಲಂಡನ್ ಪುರವಾಸಿಗಳು ತಮ್ಮ ಪುರಾಧ್ಯಕ್ಷರ ಆಧಿಪತ್ಯದಲ್ಲಿ ಒಂದು ದೊಡ್ಡ ಸಭೆಗೂಡಿ, ನಿರಪರಾಧಿಗಳಾದ ಹೆಂಗುಸರು ಮಕ್ಕಳುಗಳು ಮೊದಲಾದ ಪುರವಾಸಿಗಳಮೇಲೆ ಶತ್ರುಗಳು ತಮ್ಮ ವಿಮಾನಗಳಮೂಲಕ ಸಿಡಿಮದ್ದುಗಳನ್ನು ಹಾಕಿಸಿ ಹಾನಿಪಡಿಸುತ್ತಿರುವುದಕ್ಕೆ ಮುಯ್ಯಾಗಿ ನಮ್ಮ ದೇಶದ ವೈಮಾನಿಕರು ಆ ಶತ್ರುಗಳ ಪಟ್ಟಣಗಳಮೇಲೆ ಹೋಗಿ ಸಿಡಿಮದ್ದುಗಳನ್ನು ಹಾಕುವಂತೆ ಮಾಡಬೇಕೆಂದು ತಮ್ಮ ಪ್ರಭುತ್ವದವರಿಗೆ ವಿಜ್ಞಾಪಿಸಿಕೊಳ್ಳಬೇಕೆಂದು ತೀರ್ಮಾನಿಸಿದರು. ಈಗ ಮಂತ್ರಿಮಂಡಲದವರು ವಿಸ್ಕೌಂಟ್ ಚರ್ಚಿಲ್‌ರವರನ್ನು ವೈಮಾನಿಕ ದಳಾಧ್ಯಕ್ಷರನ್ನಾಗಿ ನಿಯಮಿಸಿದ್ದಾರೆ: ಲಂಡನ್ ಮೊದಲಾದ ಪುರಗಳನ್ನು ಈ ಜಪ್ಲಿನ್ನುಗಳ ಬಾಧೆಯಿಂದ ರಕ್ಷಿಸುವುದಕ್ಕೆ ಪ್ರಬಲವಾದ ಏರ್ಪಾಡುಗಳನ್ನು ಮಾಡಿದ್ದಾರೆ. ಈಗ ಉತ್ತರಸಮುದ್ರದಲ್ಲಿ ಶತ್ರುಗಳ ಅನೇಕ ಜಪ್ಲಿನ್ನುಗಳು ಸಂಚರಿಸುತ್ತಲಿವೆ. ಆಂಗ್ಲನೌಕಾದಳದವರು ಅವುಗಳಲ್ಲೊಂದನ್ನು ಹೊಡೆದು ಕೆಡಹಿದರು. ಯುದ್ಧಾರಂಭವಾದಂದಿನಿಂದ ಕಳೆದ ಮೇ ತಿಂಗಳ ಕೊನೆಯವರೆಗೆ ಇಂಗ್ಲೀಷರು ಶತ್ರುಗಳಪಕ್ಷದ ೭೬೦೬೭ ಮಂದಿಗಳನ್ನು ಸೆರೆಹಿಡಿದಿದ್ದರು. ಅದರಮೇಲೆ ಜೂನ್ ಮಾಸವೊಂದರಲ್ಲೇ ಸೆರೆಹಿಡಿದ ೮ ಸಾವಿರ ಮಂದಿಗಳನ್ನೂ ಸೇರಿಸಿದರೆ ೮೪೦೬೭ ಮಂದಿಗಳಾದರು. ೧೯೧೬ ನೆ ಜುಲೈ ತಿಂಗಳಿಂದ ಇದುವರೆಗೆ ಇಂಗ್ಲೀಷರು ಪಶ್ಚಿಮರಂಗದಲ್ಲಿ ಶತ್ರುಗಳ ४३४ ಫಿರಂಗಿಗಳನ್ನು ವಶಪಡಿಸಿಕೊಂಡಿರುವರು. ಮೆಸಪೊಟೋಮಿಯಾ ರಣರಂಗದಲ್ಲಿ ಇಂಗ್ಲೀಷರು ೧೯೪೦೦ ಮಂದಿ ಶತ್ರುಗಳನ್ನೂ, ಈಜಿಪ್ಟಿನಲ್ಲಿ ೬೭೪೯ ಮಂದಿಗಳನ್ನೂ ಸೆರೆಹಿಡಿದಿರುವರು. ಅಲ್ಲದೆ ಇವೆರಡುಕಡೆಯಲ್ಲೂ ೧೫೦ ಫಿರಂಗಿಗಳನ್ನು ವಶಪಡಿಸಿಕೊಂಡಿರುವರು.

ಇಟಲಿಯವರು ಪೂರ್ವದ ಟ್ರೆಂಟಿನೋದಲ್ಲಿರುವ ಕಾರ್ಸೊ ಕೊಮೆಂಟಿಯೋ ಎಂಬ ಬಲವತ್ತರವಾದ ಶತ್ರುಸ್ಥಾನವನ್ನು ಹಿಡಿದರು; ಅಲ್ಲಿ ಕೆಲ ಫಿರಂಗಿಗಳನ್ನೂ ಹತಶೇಷರಾಗಿದ್ದ ಕೆಲ ಮಂದಿ ಶತ್ರುಸೈನಿಕರನ್ನೂ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ಇಟಲಿಯವರು ಹಿಡಿದರು. ಅರ್ಟೆಗಾವಾದಹತ್ತಿರ ಆಸ್ಟ್ರಿಯನ್ನರು ಮೇಲೆಬಿದ್ದು ಯುದ್ಧಮಾಡಿ ನಷ್ಟಪಟ್ಟು ಹಿಂದೆಗೆದುಹೋದರು. ಆಸ್ಟ್ರಿಯನ್ನರಿಗೆ ಸದ್ಯಃ ರಷ್ಯನ್ನರ ಭಯವಿಲ್ಲದಿರುವುದರಿಂದ ಅವರು ಅತ್ತಕಡೆಯ ತಮ್ಮ ದೊಡ್ಡ ಸೈನ್ಯವನ್ನು ಇಟಲಿಯವರ ಮೇಲೆ ತಿರುಗಿಸಿ ಜಯವನ್ನು ಪಡೆಯಬೇಕೆಂದು ಪ್ರಯತ್ನಿಸಿದ್ದಾರಂತೆ. ಈ ದಾಳಿಯಲ್ಲಿ ಜರ್ಮನರ ಜನರಲ್ ಮೆಕನ್‌ಸೇನನು ಸೇನಾಪತಿಯಾಗಿ ಬರುವನೆಂದು ಸುದ್ದಿಯುಂಟಾಗಿದೆ.

ಗ್ರೀಸ ದೇಶದ ಪ್ರಭುವಾದ ಕಾನ್‌ಸ್ಟಾಂಟೈನ್‌ರಾಜನು ಕಟ್ಟಕಡೆಗೆ ಅನ್ಯಾಮಾರ್ಗವಿಲ್ಲದೆ ತನ್ನ ದೇಶವನ್ನು ತನ್ನ ೨ ನೆಯ ಮಗನಿಗೆ ಒಪ್ಪಿಸುವಂತೆ ಹೇಳಿಬಿಟ್ಟು ಯುವರಾಜನನ್ನು ಕೂಡಿಕೊಂಡು ಪತ್ನೀಸಮೇತನಾಗಿ ಇಂಗ್ಲೀಷ್ ಹಡಗನ್ನು ಹತ್ತಿ ಇಟಲಿಯಮೇಲಿಂದ ಸ್ವಿಟ್ಜರ್ಲಾಂಡ್ ದೇಶಕ್ಕೆ ಹೋಗಿ ಸೇರಿದನು. ಹೋಗುವಾಗ ತನ್ನ ಪ್ರಜೆಗಳನ್ನು ಕುರಿತು—“ನಾನು ಕಾಲೌಚಿತ್ಯಕ್ಕೆ ಬದ್ಧನಾಗಿ ಗ್ರೀಸ್ ದೇಶಕ್ಕಾಗಿ ನಾನು ಮಾಡಬೇಕಾದ ಧರ್ಮವನ್ನು ನೆರವೇರಿಸಿ, ನನ್ನ ಪ್ರಿಯಭೂಮಿಯನ್ನು ನನ್ನ ಮಗನಿಗೆ ಬಿಟ್ಟುಹೋಗುತ್ತೇನೆ. ನೀವು ನನ್ನ ಈ ತೀರ್ಮಾನವನ್ನು ಶಾಂತಭಾವದಿಂದ ಅಂಗೀಕರಿಸಬೇಕೆಂದು ಕೋರುತ್ತೇನೆ. ಇದಕ್ಕೆ ಲೇಶಮಾತ್ರವಾದರೂ ತಪ್ಪಿ ನೀವು ನಡೆದರೆ ಮಹಾ ವಿಪತ್ತು ಸಂಭವಿಸುವುದು.” ಎಂಬುದಾಗಿ ಪ್ರಕಟಿಸಿ ಹೋಗಿರುತ್ತಾನೆ. ಆತನ ಜತೆಯಲ್ಲಿ ೧೦೦ ಮಂದಿ ಅಂಗರಕ್ಷಕರು ಮಾತ್ರ ಹೋದರು. ಈ ಮುಂದೆ ಆ ದೇಶಕ್ಕೆ ಮಿತ್ರಮಂಡಲಿಯ ಪಕ್ಷದವರಾದ ವೆನಿಜುಲಾಸ್‌ರವರು ಮುಖ್ಯಮಂತ್ರಿಯಾಗಿ ಬಂದರೆ ಎಲ್ಲವೂ ಶಾಂತವಾಗಿ ನಡೆದುಹೋಗುವುದು. ತಪ್ಪಿದರೆ ಕಾನ್‌ಸ್ಟಾಂಟೈನ್‌ರಾಜನ ೨ ನೆ ಮಗನಿಗೂ ರಾಜ್ಯಾಧಿಕ್ಯವು ತಪ್ಪಿ ಮಿತ್ರಮಂಡಲಿಯವರ ಇಷ್ಟಾನುಸಾರ ಅಲ್ಲಿ ಪ್ರಜಾಧಿಪತ್ಯವು ಸ್ಥಾಪಿತವಾಗುತ್ತದೆ. ಈಗ ನಡೆದ ರೀತಿಯಿಂದ ಸಾಲೋನಿಕಾದಲ್ಲಿ ಮಿತ್ರಮಂಡಲಿಯರ ಕಾರ್ಯಜಾಲಕ್ಕೆ ನಿಷ್ಕಂಟಕತ್ವವುಂಟಾದಂತಾಯಿತು. ಮಧ್ಯಧರಾ ಸಮುದ್ರದಲ್ಲಿ ಜರ್ಮನರು ಮಾಡುತ್ತಿದ್ದ ಹಾವಳಿಯ ಬುಡವೇ ಕತ್ತರಿಸಿದಂತಾಯಿತು. ಫ್ರೆಂಚರ ಹಡಗುಗಳೂ ಅವರ ಸೈನಿಕರೂ ಇಟಲಿ ಸೈನಿಕರೂ ಗ್ರೀಸಿನ ಅನೇಕ ಪಟ್ಟಣಗಳಲ್ಲಿಳಿದು ವಶಪಡಿಸಿಕೊಂಡಿವೆ. ಫ್ರೆಂಚ್ ಸೈನ್ಯಗಳು ಲಾರಿಸ್ಸಾ ಪಟ್ಟಣಕ್ಕೆ ಸಾಗಿಹೋದಾಗ ಅಲ್ಲಿದ್ದ ಗ್ರೀಕ್ ಜನರಲ್ ಬೇಯಿರಾಸ್‌ರವರು ನಾವೇನೂ ಪ್ರತಿಭಟಿಸುವುದಿಲ್ಲವೆಂದು ನುಡಿದುಬಿಟ್ಟರು. ಆದರೆ ಪದಾತಿಗಳ ಹಿಂದೆ ನಿಂತಿದ್ದ ಗ್ರೀಕ್‌ಕರ್ನಲೊಬ್ಬನು ಫ್ರೆಂಚರಮೇಲೆ ಫಿರಂಗಿ ಗುಂಡುಗಳನ್ನು ಹಾರಿಸುವುದಕ್ಕೆ ಆಜ್ಞೆ ಮಾಡಿದನು. ಫ್ರೆಂಚ್ ಅಶ್ವಸೈನ್ಯಕ್ಕೂ ಆ ಗ್ರೀಕ್ ಪದಾತಿಗೂ ಸ್ವಲ್ಪ ಯುದ್ಧವಾಯಿತು. ಫ್ರೆಂಚರಲ್ಲಿ ೬ ಮಂದಿ ಹತರಾದರು. ೨೦ ಮಂದಿಗೆ ಗಾಯವಾಯಿತು. ಗ್ರೀಕರಲ್ಲಿ ೬೦ ಮಂದಿ ಸತ್ತರು. ಇಬ್ಬರು ಕರ್ನಲುಗಳನ್ನೂ ೫೦ ಮಂದಿ ಉದ್ಯೋಗಸ್ಥರನ್ನೂ, ೨೬೯ ಮಂದಿ ಸೈನಿಕರನ್ನೂ ಫ್ರೆಂಚರು ಸೆರೆಹಿಡಿದರು. ಜನರಲ್ ಬೇಯಿರಾಸ್‌ರವರನ್ನೂ ಸೆರೆಹಿಡಿದರು. ಈಗ ಮಿತ್ರಮಂಡಲಿಸೈನ್ಯಗಳು ಗ್ರೀಸ್ ದೇಶದ ಧಾನ್ಯದ ಕೊಟ್ಟಾರವಾಗಿರುವ ಥೆಸಲಿ ಪಟ್ಟಣವನ್ನು ವಶಪಡಿಸಿಕೊಂಡು ಇನ್ನೂ ಮುಂದಕ್ಕೆ ಸಾಗುತ್ತಿವೆ. ಗ್ರೀಸಿಗೆ ಹೊಸದ ೧ ಪಟ್ಟಕ್ಕೆ ಬಂದಿರುವ ಅಲಗ್ಸಾಂಡ್ರಾ ರಾಜನು “ಸುಪ್ರಸಿದ್ಧ ಪರಿಪಾಲಕರಾದ ನಮ್ಮ ತಂದೆಯವರ ಸಿದ್ಧಾಂತವನ್ನನುಸರಿಸಿಯೇ ನಾನೂ ನಡೆಯುತ್ತೇನೆ” ಎಂದು ಪ್ರಕಟಮಾಡಿರುತ್ತಾನೆ. ಇದು ಮಿತ್ರಮಂಡಲಿಯವರನ್ನೂ ಗ್ರೀಸಿನ ಪ್ರಜಾಪಕ್ಷದವರನ್ನೂ ಮತ್ತೆ ರೇಗಿಸುವಂತಾಗಿದೆ.

ವರ್ತಮಾನಸಂಗ್ರಹ.

ಕರಾಚಿಯಲ್ಲಿ ಬಕರ್ದಾಸ್ ಎಂಬ ಸಿಕ್ ಮತದ ವರ್ತಕನು ಒಬ್ಬ ಆಂಗ್ಲ ಸ್ತ್ರೀಯನ್ನು ಮದುವೆಮಾಡಿಕೊಂಡನು.

ಅನಿಬೆಸೆಂಟಮ್ಮನವರು ನಿರ್ಬಂಧನಿವಾಸಕ್ಕೆ ಒಳಪಡಿಸಲ್ಪಟ್ಟಿರುವುದರಿಂದ ಅವರ ಸಹಾಯಕ್ಕಾಗಿ ಒಂದು ನಿಧಿಯನ್ನೇರ್ಪಡಿಸಬೇಕೆಂದು ಸರ್ ಸುಬ್ರಹ್ಮಣ್ಯಯ್ಯರವರು ದೇಶೀಯರಲ್ಲಿ ಒಂದು ಪ್ರಕಟನೆಯನ್ನು ಮಾಡಿದುದರಮೇಲೆ ಫಂಡು ಕೊಡುವುದಕ್ಕೆ ಆರಂಭವಾಗಿದೆ.

ಅನಿಬೆಸೆಂಟಮ್ಮನವರ ಮೇಲೆ ಮದ್ರಾಸು ದಂಡಾಧಿಕಾರಿಗಳು ತಾ|| ೫ ರಲ್ಲೂ ಮದ್ರಾಸು ಗೌರ್ನರವರು ತಾ|| ೮ ರಲ್ಲೂ ಜಾರಿಮಾಡಿದ ಅಪ್ಪಣೆಯಮೇಲೆ ಪ್ರಿವಿಕೌನ್ಸಿಲ್ಲಿನಲ್ಲಿ ಅಮ್ಮನವರು ಅಪ್ಪೀಲ್‌ಮಾಡಿಕೊಳ್ಳುವುದಕ್ಕೆ ಅಪ್ಪಣೆ ಕೊಡಲ್ಪಟ್ಟಿದೆಯೆಂದು ತಾ|| ೨೦ ರಲ್ಲಿ ಬಂದ ಲಂಡನ್ನಿನ ತಂತ್ರೀವಾರ್ತೆಯಿಂದ ಗೊತ್ತಾಗುತ್ತದೆ.

ರಷ್ಯಾರಾಜಕುಟುಂಬದವರ ಆಭರಣಗಳನ್ನೆಲ್ಲಾ ಸೇರಿಸಿದರೆ ಯೂರೋಪುಖಂಡದ ಎಲ್ಲ ರಾಜರುಗಳಲ್ಲಿ ಅರ್ಧಭಾಗದವರ ಕುಟುಂಬಗಳ ಆಭರಣಗಳನ್ನೆಲ್ಲಾ ಕೂಡಿಸಿದರೆ ಎಷ್ಟಾಗುವುದೋ ಅಷ್ಟಾಗುವುದಂತೆ. ಈಗ ರಷ್ಯಾ ಪ್ರಭುತ್ವದವರು ತಮ್ಮ ರಾಜಕುಟುಂಬದವರ ಆಭರಣಗಳನ್ನೆಲ್ಲಾ ಮಾರಿ ಹಣವನ್ನು ಬೊಕ್ಕಸಕ್ಕೆ ಸೇರಿಸಬೇಕೆಂದಿದ್ದಾರೆ.

ಕಳೆದ ಭಾನುವಾರ ಹಗಲು ೧೦ ಗಂಟೆ ಹೊತ್ತಿನಲ್ಲಿ ಬೊಂಬಾಯಿ ಪಟ್ಟಣದ ಕೋಟೆಯಲ್ಲಿರುವ ಮಾರ್ಕ್ಸ್ ಕಂಪೆನಿಯವರು ಬಾಗಿಲನ್ನು ಹಾಕಿಕೊಂಡು ಹೋಗಿರಲಾಗಿ ಕಳ್ಳರು ಕದಗಳನ್ನೊಡೆದು ನುಗ್ಗಿ ೧ ಲಕ್ಷ ರೂ. ಗೆ ಮಿಗಿಲಾದ ಬೆಲೆಯಾಗುವಷ್ಟು ನಗಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಹಗಲಹೊತ್ತು ಅಂಥ ತುಂಬಿದ ಪಟ್ಟಣದಲ್ಲಿ ಇಂಥ ಕೃತ್ಯವು ನಡೆಯುವುದು ಅದ್ಭುತವಲ್ಲವೆ?

ಯುದ್ಧದ ಸಾಲಕ್ಕಾಗಿ ಪತ್ರಗಳನ್ನು ಕೊಳ್ಳುವ ಗಡುವು ಕಳೆದ ತಾ|| ೧೫ ಕ್ಕೆ ಮುಗಿದುಹೋಯಿತು. ಅಂಚೆ ಮನೆಗಳ ಮೂಲಕವಾಗಿ ಋಣಪತ್ರವನ್ನು ಕೊಳ್ಳುವುದಕ್ಕೆ ಬರುವ ಅಕ್ಟೋಬರ್ ತಾ|| ೧೫ ರವರೆಗೂ ಅವಕಾಶವಿದೆ. ಕಳೆದ ತಾ|| ೧೫ ರವರೆಗೆ ಒಟ್ಟು ३४ ಕೋಟಿಯವರೆಗೆ ಹಣವು ಕೂಡಿತೆಂದು ಪ್ರಕಟವಾಗಿದೆ. ಅದರಲ್ಲಿ ಬೊಂಬಾಯಿಅಧಿಪತ್ಯದಿಂದಲೇ ೧೨ ಕೋಟಿಯಮೇಲೆ ಕೂಡಿದೆ. ತಾ|| ೧೫ ನೆ ದಿನವೊಂದರಲ್ಲೇ ಆ ಅಧಿಪತ್ಯದಲ್ಲಿ ೧ ಕೋಟಿಯೂ ४೦ ಲಕ್ಷ ರೂ. ಗಳು ಕೂಡಿವೆ. ಅಲ್ಲಿಯ ಸ್ತ್ರೀಸಮಾಜದವರೇ ೬೨ ಲಕ್ಷವನ್ನು ಕೂಡಿಸಿರುವರು.

ಅನಿಬೆಸೆಂಟಮ್ಮನವರು ಬಿಟ್ಟುಕೊಟ್ಟ “ನ್ಯೂಇಂಡಿಯಾ” ಎಂಬ ಪತ್ರಿಕೆಯ ಪ್ರಕಟನಕರ್ತೃತ್ವವನ್ನೂ, ಅದನ್ನು ಮುದ್ರಿಸುತ್ತಿದ್ದ ಮುದ್ರಣಾಲಯವನ್ನೂ ಮ|| ಪಂಡರೀನಾಥತೆಲಿಂಗ್ ಎಂ. ಎ. ಬಿ. ಎಲ್. ರವರು ವಹಿಸಿಕೊಂಡರು. ಇವರು ಬೊಂಬಾಯಿ ಹೈಕೋರ್ಟ್ ಜಡ್ಜರಾಗಿದ್ದ ಕೈ|| ಕಾಶೀನಾಥತೆಲಿಂಗ್‌ರವರ ಮಕ್ಕಳು. ಬೊಂಬಾಯಿಯಿಂದ ಪ್ರಕಟವಾಗುತ್ತಿರುವ “ಎಂಗ್‌ಇಂಡಿಯಾ” ಎಂಬ ಪತ್ರಿಕೆಗೆ ಸಂಪಾದಕರು. ಇವರು ೨ ಸಾವಿರ ರೂ. ಗಳ ಹೊಣೆ ಹಣವನ್ನು ಮದ್ರಾಸ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ಕಟ್ಟಿ “ನ್ಯೂಇಂಡಿಯಾ” ಪ್ರಕಾಶಕತ್ವಕ್ಕೆ ಅಪ್ಪಣೆಯನ್ನು ಪಡೆದುಕೊಂಡರು. ಕಳೆದ ಗುರುವಾರದಿಂದ ಈ ಪತ್ರಿಕೆಯು ಯಥಾಪ್ರಕಾರ ಪ್ರಕಟವಾಗುತ್ತಿದೆ, ಅಮ್ಮನವರ “ಕಾಮನ್‌ವೀಲ್” ಎಂಬ ಪತ್ರಿಕೆಯ ಸಂಪಾದಕತ್ವವನ್ನೂ, ಅದು ಅಚ್ಚಾಗುತ್ತಿದ್ದ ವಸಂತಮುದ್ರಾಲಯದ ಕರ್ತೃತ್ವವನ್ನೂ ನೆಲ್ಲೂರಿನ ಮ|| ಬಿ. ರಂಗಾರೆಡ್ಡಿಯವರು ವಹಿಸಿಕೊಂಡು ಈ ಪತ್ರಿಕಾ ಪ್ರಕಟನಕ್ಕೆ ದಂಡಾಧಿಕಾರಿಯ ಅಪ್ಪಣೆಯನ್ನು ಪಡೆದು ಅದನ್ನು ಯಥಾಪ್ರಕಾರ ಪ್ರಕಟಿಸುವರು.

ಮೈಸೂರು ಗೆಜೆಟ್ ಸಂಗ್ರಹ.

೧೯೧೭ ನೆಯ ವರ್ಷದ ದಸರಾ ಕ್ಯಾಲೆಂಡರು.

ಪತ್ರವ್ಯವಹಾರ.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,

ಅರ್ಕಶಫಾ ಶೋಧಕ, ಹೆಡ್ ಆಫೀಸ

16 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಅವುಗಳ ನಾಮಗಳು.

ಶ್ರೀ ನೇ ತರಗತಿ ರೇಖಾಗಣಿತಾದಿಪಾಠ.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್‌ಸನ್ಸ್,

4 ವಿದ್ಯಾನಿಧಿ ಬುಕ್‌ಡಿಪೋ ಮೈಸೂರು.

೧೯೧೭ ನೆಯ ಇಸವಿ ಜುನ್ ತಾ|| ೨೪ ರಿಂದ ೧೯೧೭ ನೆಯ ಜುನ್ ತಾ|| ೩೦ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಷಾಢ ಶು|| ಪಂಚಮಿಯಿಂದ ಆಷಾಢ ಶು|| ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿತೀ
24	ಭಾನು	ಪಂಚ	46-58	ಮಖಾ	60	11
25	ಸೋಮ	ಷಷ್ಠಿ	52-5	ಮಖಾ	4-34	12
26	ಮಂಗಳ	ಸಪ್ತಮಿ	55-33	ಪೂಫ	10-55	13
27	ಬುಧ	ಅಷ್ಟಮಿ	60	ಉಫ	16-47	14
28	ಗುರು	ಅಷ್ಟಮಿ	0-3	ಹಸ್ತ	21-43	15
29	ಶುಕ್ರ	ನವಮಿ	2-35	ಚಿತ್ತ	25-35	16
30	[1] ಶನಿ	ದಶಮಿ	3-58	ಸ್ವಾತಿ	28-13	17

(1) ವಾಗೀಶಬೃಂಹತಂತ್ರ ಪರಕಾಲಸ್ವಾಮಿಗಳ ತಿರುನಕ್ಷತ್ರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರನುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಯಜ್ಞ ನಹ್ಯತ್ತನೋಹರಾಜೀಯತಾ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧುಗ್ನ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

REGISTERED NO M. 124.

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೭ ನೆಯ ಇಸವಿ ಜುಲೈ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೨೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ವಾಪಸ.) 49

ಮದನೋದ್ಭವ ಗುಳಿಗೆ.

ನಪುಂಸಕತ್ವಾರಿ ತೈಲವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಶಿರ್ ಉತ್ತರಕನ್ನಡ ಜಿಲ್ಲೆ.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

35 ಮೂರುಕಾಸು!

ಸುವಾಸಿಕ ಹುರುಕಿನ ಔಷಧ.

ಪಕುಜೀವನ ಚೂರ್ಣ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿರಿ. 31



ಯೋಗ್ಯತಾಪತ್ರಗಳು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀ ಕರ್ಪೂರ ಕಸ್ತೂರಿಮಾತ್ರೆ

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,

7 ಸದ್ವೈದ್ಯಶಾಲಾ ನಂಜನಗೂಡು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜುಲೈ ತಾ|| ೧ ನೆಯ ಭಾನುವಾರ.

ಸೇರಿನಡೆದರೆ ಬಾಳು, ಹೋರಿನಡೆದರೆ ಹಾಳು.

ಯುದ್ಧವು ನಿಂತಕೂಡಲೇ ಭರತಖಂಡಕ್ಕೆ ಸಂಪೂರ್ಣ ಸ್ವಾತಂತ್ರ್ಯವುಳ್ಳ ಸ್ವರಾಜ್ಯವನ್ನು ಪಡೆದುಕೊಳ್ಳಬೇಕೆಂಬ ಆಶೆಯನ್ನಿಟ್ಟುಕೊಂಡಿರುವ ಜನರು, ಅನಿಬೆಸೆಂಟಮ್ಮ ಮೊದಲಾದವರಿಗೆ ಪ್ರವಾಸಶಿಕ್ಷೆ ವಿಧಿಸಲ್ಪಟ್ಟಂದಿನಿಂದೀಚೆಗೆ ತಮ್ಮ ಆಂದೋಳನವನ್ನು ಮತ್ತಷ್ಟು ಪ್ರಬಲಪಡಿಸುವ ಉದ್ದೇಶವುಳ್ಳವರಾಗಿರುವಂತೆ ತೋರುತ್ತದೆ. ಸ್ಟೇಟ್ ಸೆಕ್ರೆಟರಿಗಳವರೆಗೆ ದೂರಿಕೊಂಡರೆ, ಅಥವಾ ತೀವ್ರತರಾಂದೋಳನವನ್ನು ಮಾಡುತ್ತ ಬಂದರೆ, ಅನಿಬೆಸೆಂಟಮ್ಮ ಮೊದಲಾದವರಮೇಲೆ ಮಾಡಲ್ಪಟ್ಟಿರುವ ಅಪ್ಪಣೆಯು "ರದ್ದು" ಮಾಡಲ್ಪಡುವುದೆಂಬುದಷ್ಟೇ ಅವರ ಉದ್ದೇಶವಾಗಿದ್ದರೆ, ಅಥವಾ ಇದೇ ತೆರದ ಆಜ್ಞೆಯು ಮುಂದೆ ಇನ್ನಾರಮೇಲೂ ಮಾಡಲ್ಪಡದೆ ಇರುವಂತಾದರೂ ಆಗಲಿ ಎಂಬುದು ಅವರ ಉದ್ದೇಶವಾಗಿದ್ದರೆ, ಅವು ನೆರವೇರಿದರೆ ಎಲ್ಲರಿಗೂ ಸಮಾಧಾನವೇ. ಇಂಥ ಕಠಿನಶಾಸನಪ್ರಯೋಗಕ್ಕೆ ಅವಕಾಶವಿಲ್ಲದೆ ಇರುವಂತೆ ಆಗಬೇಕಾದುದೇ ದೇಶಾಭಿಮಾನಿಗಳ ಅಪೇಕ್ಷೆಯು. ಸದ್ಯಃ ಈ ಶಾಸನಪ್ರಯೋಗವು ಹಿಂದೆಗೆದುಕೊಳ್ಳಲ್ಪಡುವ ಸ್ಥಿತಿಯು ಪ್ರಾಪ್ತವಾದರೆ ಅದರ ಜತೆಗೆ ಎಲ್ಲತೆರದ ತೀವ್ರತರಾಂದೋಳನಶಕ್ತಿಯೂ ಉಪಸಂಹೃತವಾಗಲೇಬೇಕು. ಹಾಗಾದರೇನೆಯೇ ಶಾಸನಪ್ರಯೋಗಕ್ಕೆ ನಿರವಕಾಶವಾದೀತು. ಆದರೆ ಪ್ರಜಾಪ್ರಮುಖರೆಂದು ಹೇಳಿಸಿಕೊಳ್ಳತಕ್ಕವರು ಪ್ರಭುತ್ವದವರಿಂದ ತಾವು ದೊರಕಿಸಿಕೊಳ್ಳಬೇಕೆಂದು ಉದ್ದೇಶಪಟ್ಟಿರುವ ಯಾವುದೊಂದು ಫಲದ ಪ್ರಾಪ್ತಿಗೂ ತೀವ್ರತರಾಂದೋಳನವನ್ನೇ ಉತ್ಕೃಷ್ಟಸಾಧನವೆಂದು ತಿಳಿದುಕೊಂಡು, ಅದಕ್ಕಾಗಿಯೇ ಪ್ರಜಾ ಸಮುದಾಯದಲ್ಲಿ ಬೋಧಿಸಿ, ಪ್ರೇರಣೆಯನ್ನು ಎದುವರೆಗೆ ಮಾಡುತ್ತಿರುವರೋ ಅದುವರೆಗೂ ಅವರ ಫಲಾವಾಪ್ತಿಯು ಸುಲಭವಾಗುವುದಕ್ಕಿಂತಲೂ ದುರ್ಲಭವೇ ಆಗಬಹುದೆಂದು ನಮಗೆ ತೋರುತ್ತದೆ. ಬಂಗಾಳಾ ವಿಭಜನವು ತೀವ್ರತರಾಂದೋಳನದ ಮೂಲಕ "ರದ್ದು" ಆದುದನ್ನು ಉದಾಹರಣಮಾಡಿ ಕೆಲರು ಸ್ವರಾಜ್ಯಸಾಧನಾದಿ ಪ್ರತಿ ವಿಷಯಕ್ಕೂ ಅದನ್ನೇ ಉತ್ತಮ ಸಾಧನವೆಂದು ಹೇಳುತ್ತಿರಬಹುದು. ವಂಗವಿಭಂಗದ ವಿಷಯಕ್ಕೂ, ಅದನ್ನು "ರದ್ದು" ಪಡಿಸುವಾಗಿದ್ದ ಸನ್ನಿವೇಶಗಳಿಗೂ, ಈಗಣ ಸ್ವರಾಜ್ಯಸಾಧನಾಂದೋಳನಕ್ಕೂ ಈಗಣ ಸಮಯಸನ್ನಿವೇಶಗಳಿಗೂ ಎಷ್ಟೋ ತಾರತಮ್ಯವಿದೆ. ವಂಗವಿಭಂಗವನ್ನು ಮಾಡಿದುದು ಎಷ್ಟು ಸುಲಭವೋ ಅದನ್ನು ಉಪಸಂಹರಿಸುವುದೂ ಅಷ್ಟು ಸುಲಭವೇ ಆಗಿದ್ದಿತು. ಸ್ವರಾಜ್ಯಪ್ರಾಪ್ತಿ ವಿಷಯವಾದರೊ ಕೇಳುವುದು ಸುಲಭವಾಗಿರುವಂತೆ ಅನುಗ್ರಹಿಸುವುದು ಸುಲಭವಾಗಿರುವುದಿಲ್ಲ. ಪಾಲಕರು ಅದಕ್ಕಾಗಿ ದೀರ್ಘಾಲೋಚನೆಗಳನ್ನು ಮಾಡಿ ಔಚಿತ್ಯಾನುಸಾರ ಅನುಗ್ರಹಿಸಿ, ಆ ವರದಾನದಿಂದ ಸ್ವಹಿತ ಪರಹಿತಗಳೆರಡನ್ನೂ ಕಾಪಾಡಿಕೊಳ್ಳಬೇಕಾಗಿರುತ್ತದೆ. ಈಗಣ ಯುದ್ಧಸಮಯದಲ್ಲಾದರೊ ಇಂಥ ಇತರ ಮಹದ್ವಿಷಯಗಳಿಗೆ ವಿಶೇಷಾವಧಾನವನ್ನು ಕೊಡುವುದಕ್ಕೆ ಮಂತ್ರಿಮಂಡಲದವರಿಗೆ ಅವಕಾಶವಿರುವುದಿಲ್ಲ. ಅವರ ಬಿಕ್ಕಟ್ಟಿನ ಸಮಯವನ್ನು ಕೂಡ ಗಮನಿಸದೆ ತೀವ್ರತರಾಂದೋಳನವನ್ನು ಈ ಸಮಯದಲ್ಲಿ ಭಾರತೀಯರು ಮಾಡಿ ಸ್ವಾರ್ಥಪರರೆನ್ನಿಸಿಕೊಳ್ಳುವುದು, ಇದುವರೆಗೆ ಭರತಖಂಡವು ಜಗತ್ತಿಗೆಲ್ಲಾ ವ್ಯಕ್ತಪಡಿಸಿಕೊಂಡು ಬಂದಿರುವ ಅನುಪಮ ರಾಜನಿಷ್ಠೆಗೆ ಅನುಗುಣವಾದ ಕೃತ್ಯವಾಗಿರುವುದಿಲ್ಲ.

ಈಗಣ ಆಂದೋಳನದಲ್ಲಿ ಮತ್ತೊಂದು ಪ್ರಬಲ ದೋಷವಿರುತ್ತದೆ. ಸ್ವರಾಜ್ಯಪ್ರದಾನಾದಿ ಫಲಪ್ರಾಪ್ತಿಯು ನಮಗೆ ಪಾರ್ಲಿಮೆಂಟಿನವರಿಂದ ಆಗುವ ಕಾರಣ ಇಲ್ಲಿಯ ಅಧಿಕಾರಿಗಳ ಅಗ್ರಹಾನುಗ್ರಹಗಳನ್ನು ಕಟ್ಟಿಕೊಂಡು ನಮಗೇನಾಗಬೇಕೆಂಬ ಭಾವವು ಇದರಲ್ಲಿ ನಿಗೂಢವಾಗಿರುತ್ತದೆ. ಈ ಕಾರಣದಿಂದಲೇ ಇಲ್ಲಿಯ ಉನ್ನತಾಧಿಕಾರಿಗಳ ಕೃತ್ಯವಿಶೇಷಗಳನ್ನು ತೃಣದಂತೆ ಕೆಲರು ಅಲಕ್ಷೀಕರಿಸುತ್ತಿದ್ದಾರೆ. ಯದ್ಯಪಿ ಸೀಮೆಯಲ್ಲಿರುವ ಆಂಗ್ಲಮಹಾಜನರ ಮತ್ತು ಮಂತ್ರಿಮಂಡಲದವರ ಅನುಗ್ರಹದಿಂದಲೇ ನಮ್ಮ ಇಷ್ಟಾರ್ಥಪ್ರಾಪ್ತಿಯಾಗಬೇಕಾದುದು ಸಹಜವಾದರೂ, ಅವರ ಅಗ್ರಹಾನುಗ್ರಹಗಳುಂಟಾಗುವುದಕ್ಕೆ ಇಲ್ಲಿಯ ಸ್ಥಲಾಧಿಕಾರಿಗಳ ಅನನುಕೂಲಾನುಕೂಲಾಭಿಪ್ರಾಯಗಳ ಒತ್ತಾಸೆಯಿದ್ದಲ್ಲದೆ ಆಗುವ ಸಂಭವವಿಲ್ಲವೆಂಬುದನ್ನು ಹೇಳಬೇಕಾಗಿಲ್ಲ. ೫ ಸಹಸ್ರ ಮೈಲಿಗಳಿಂದಾಚೆ ಇರುವ ಆಂಗ್ಲಮಹಾಜನರಿಗೆ ಭರತಖಂಡದ ನಿಜಸ್ಥಿತಿಯನ್ನು ನೋಡಿ ತಿಳಿಯುವುದಕ್ಕೆ ಇಲ್ಲಿಯ ಅಧಿಕಾರಿವರ್ಗವೇ ಕಣ್ಣಾಗಿರುತ್ತದೆ. ಇವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಏರ್ಪಾಟುಗಳನ್ನು ಅವರು ಮಾಡುವರೆಂಬುದು ಪೂರ್ಣಾಸಂಭವ. ಏಕೆಂದರೆ—ದೇಶದ ಸ್ಥಿತಿಗತಿಗಳಿಗನುಸಾರವಾಗಿ ರಾಜ್ಯಕಾರ್ಯವನ್ನು ಹೇಗೆ ಸಾಗಿಸಿಕೊಂಡು ಹೋಗಬೇಕೆಂಬ ಯೋಚನೆಯ ಭಾರವು ಇಲ್ಲಿಯ ಅಧಿಕಾರಿಗಳ ತಲೆಯಮೇಲೆ ಹೊತ್ತಿರುತ್ತದೆ. ಈ ವಿಷಯದಲ್ಲಿ ಇವರ ಅಭಿಪ್ರಾಯಗಳಿಗೆ ವ್ಯತಿರಿಕ್ತವಾಗಿ ಅವರು ಏರ್ಪಡಿಸುವುದಾದರೆ ಅದು ವಿಷಮಫಲಪ್ರದವಾದ ಅನೀತಿಯಾಗುತ್ತದೆ. ಹಿಂದೆ ಭರತಖಂಡದ ರಾಜಕೀಯಾಭ್ಯುದಯಗಳಾವುವೂ ಇಲ್ಲಿಯ ಸರ್ವಾಧಿಕಾರಿಗಳ ಪ್ರಯತ್ನಸಹಾಯವಿಲ್ಲದೆ ನಡೆದಿರುವುದಿಲ್ಲ. ಲಾರ್ಡ್ ಮಿಂಟೋರವರು ವಹಿಸದಿದ್ದರೆ ಮಾರ್ಲೆಸಂಸ್ಕರಣಗಳು ತಲೆಯುಕ್ಕುತ್ತಿರಲಿಲ್ಲ. ಲಾರ್ಡ್ ಹಾರ್ಡಿಂಜ್‌ರವರ ಸಾನುಭೂತಿಯಿಲ್ಲದಿದ್ದರೆ ದಕ್ಷಿಣಾಫ್ರಿಕಾ ಭಾರತೀಯರ ಕಷ್ಟನಿವಾರಣವಾಗಲೀ ವಂಗವಿಭಂಗವಾಗಲೀ ಸ್ವರಾಜ್ಯಪ್ರದಾನಕ್ಕೆ ಆಂಗ್ಲಮಹಾಜನರ ಸಾನುಭೂತಿವಚನವಾಗಲೀ ಉಂಟಾಗಲು ಅವಕಾಶವಿರುತ್ತಿರಲಿಲ್ಲ. ಈಗಣ ನಮ್ಮ ವೈಸ್ರಾಯರ ಸಾನುಭೂತಿಯಿಲ್ಲದಿದ್ದರೆ ಯಾವ ವರವೂ ನಮಗೆ ಲಭಿಸಲು ಅವಕಾಶವಿರುವುದಿಲ್ಲ. ಪ್ರಕೃತದಲ್ಲಿ ಅನಿಬೆಸೆಂಟಮ್ಮ ಮೊದಲಾದವರ ಮೇಲೆ ಕಠಿನಶಾಸನ ಪ್ರಯೋಗ ಮಾಡುವುದಕ್ಕಾದರೂ ಸ್ಥಲದ ಗೌರ್ನರಾದ ಪೆಂಟ್ಲೆಂಡ್ ಪ್ರಭುಗಳೊಬ್ಬರ ಪ್ರಯತ್ನವಿಶೇಷವೇ ಕಾರಣವೆಂದು ಹೇಳಲಾಗುವುದಿಲ್ಲ. ಅವರು ವೈಸ್ರಾಯರೊಡನೆಯೂ, ಅವರು ಸ್ಟೇಟ್ ಸೆಕ್ರೆಟರಿಯವರೊಡನೆಯೂ ಆಲೋಚಿಸದೆ ಇಂಥ ಕಾರ್ಯಗಳಲ್ಲಿ ಕೈಹಾಕಿರುವರೆಂದು ಊಹಿಸಲಾಗುವುದಿಲ್ಲ. ಎಂದ ಬಳಿಕ ಪ್ರಕೃತದ ಬಿಕ್ಕಟ್ಟಿನ ಸಮಯದಲ್ಲಿ ಭಾರತೀಯ ವಿದ್ಯಾಧಿಕರು ತೀವ್ರತರಾಂದೋಳನವನ್ನು ಸ್ವಾರ್ಥಕ್ಕಾಗಿ ಮಾಡುತ್ತಿರುವರೆಂಬ ವಿಷಯವು ಆಂಗ್ಲಮಹಾಜನರ ಗಮನಕ್ಕೆ ಬರದೆ ಇದ್ದೀತೆ? ಇಲ್ಲಿಯ ನಮ್ಮ ಮೇಲ್ಪಟ್ಟ ಅಧಿಕಾರಿಗಳ ಮನಸ್ಸನ್ನೂ ಕೆಡಿಸಿಕೊಂಡು, ನಮ್ಮಲ್ಲಿ ಅಭೂತಪೂರ್ವವಾದ ಸಾನುಭೂತಿಯನ್ನು ತೋರಿಸುತ್ತಿದ್ದ ಆಂಗ್ಲಮಂತ್ರಿಮಂಡಲದವರ ಮನಸ್ಸನ್ನೂ ಕೆಡಿಸಿಕೊಳ್ಳುವ ಪ್ರಯತ್ನವನ್ನು ನಾವು ಈಗಣ ಸಮಯದಲ್ಲಿ ಮಾಡುವುದನ್ನು ಅನ್ಯಾಯವೆಂದು ಹೇಳುವುದಕ್ಕಿಂತಲೂ ಅವಿವೇಕವೆಂದೇ ಹೇಳುವುದು ಯುಕ್ತವಲ್ಲವೆ?

ಸಾಮ್ರಾಜ್ಯಯುದ್ಧಸಭೆಗಾಗಿ ಭರತಖಂಡದ ಪ್ರತಿನಿಧಿಗಳಾಗಿ ಹೋಗಿದ್ದ ಸರ್ ಸಿನ್ಹರವರು ಅಲ್ಲಿಂದ ಇಲ್ಲಿಗೆ ಹಿಂತಿರುಗಿ ಬಂದ ಬಳಿಕ ಅಲ್ಲಿಯ ಅನುಭವವನ್ನು ಕುರಿತು ಮಾತನಾಡಿದಾಗ್ಗೆ-ಭಾರತೀಯರ ವಿಷಯದಲ್ಲಿ ಆಂಗ್ಲಜನರಿಗೆ ಈಗ ಉಂಟಾಗಿರುವ ಸಾನುಭೂತಿಯೂ ಸೌಹಾರ್ದವೂ ಹಿಂದೆ ಯಾವಾಗಲೂ ಉಂಟಾಗಿರಲಿಲ್ಲವೆಂದು ಅಪ್ಪಣೆ ಕೊಡಿಸಿರುತ್ತಾರೆ. ಇಂಥ ಫಲವನ್ನು ಭರತಖಂಡಕ್ಕೆ ಯಾರು ಉಂಟುಮಾಡಿಕೊಟ್ಟರು? ವಾಗ್ಯುದ್ಧನಿಪುಣರಾದ ಈ ನಮ್ಮ ದೇಶೋದ್ಧಾರಕರೇನಾದರೂ ಮಾಡಿಕೊಟ್ಟರೆ? ಹಾಗಿದ್ದರೆ ಇದೇ ರಾಷ್ಟ್ರಭಕ್ತರು ಯುದ್ಧಕ್ಕೆ ಮುಂಚೆ ಎಷ್ಟೋ ಕಾಲದಿಂದಲೂ ಇದ್ದರಷ್ಟೆ. ಇಂಥ ಫಲವು ಏತಕ್ಕೆ ಲಭಿಸಲಿಲ್ಲ. ಬರಿಯ ಮಾತಿಗಿಂತಲೂ ಕಾರ್ಯದಲ್ಲಿ ಫಲವು ಹೆಚ್ಚಾಗುವುದು ಸ್ವಭಾವವಾದುದರಿಂದಲೂ, ಹೋರಿನಡೆಯುವುದಕ್ಕಿಂತ ಸೇರಿನಡೆಯುವುದರಲ್ಲಿ ಲಾಭವಿರುವುದರಿಂದಲೂ, ನಮ್ಮ ಹಿಂದಿನ ಸಂಚಿಕೆಯ ಅಗ್ರಲೇಖನದಲ್ಲಿ ವಿವರಿಸಿದಂತೆ ಅನಕ್ಷರಸ್ಥರಾದರೂ, ರಾಜನೀತಿವಿಶಾರದರಲ್ಲದಿದ್ದರೂ, ನಿಷ್ಕಲ್ಮಷವಾದ ಸಾಮ್ರಾಜ್ಯಭಕ್ತಿಯಿಂದ ರಣರಂಗದಲ್ಲಿ ಸಹಾಯಮಾಡಿದ ಭಾರತ ವೀರರ ಕೃತ್ಯವಿಶೇಷವೇ ಭರತಖಂಡಕ್ಕೆ ಈ ಸುಯೋಗವನ್ನು ತಂದುಕೊಟ್ಟಿತು. ಈ ಯೋಗದ ಫಲವು ಯುದ್ಧಾನಂತರದಲ್ಲಿ ಯದ್ರೂಪವಾಗಿ ಪರಿಣಮಿಸುವುದೆಂಬುದನ್ನು ನೋಡುತ್ತ, ಈಗಣ ಮಹಾಯುದ್ಧಕಾರ್ಯದಲ್ಲಿ ಸಾರ್ವಭೌಮರಿಗೆ ಭರತಖಂಡದಿಂದ ಆಗಬಹುದಾದ ಸಹಾಯಗಳನ್ನು ಇನ್ನೂ ವಿಶೇಷವಾಗಿ ಮಾಡಿಸಿ ಕೊಡುವುದರಲ್ಲಿ ನಮ್ಮ ದೇಶದ ವಿದ್ಯಾಧಿಕರು ಬದ್ಧಕಂಕಣರಾಗಿದ್ದರೆ, ಆ ಸಾನುಭೂತಿಯ ಫಲವು ಒಂದಕ್ಕೆ ದ್ವಿಗುಣವಾಗುವ ಸಂಭವವಿದ್ದಿತು. ಅದನ್ನು ಬಿಟ್ಟು, ಭರತಖಂಡವು ಈ ಸಮಯದಲ್ಲಿ ಸಾಮ್ರಾಜ್ಯಪ್ರಭುತ್ವಕ್ಕೆ ಮಾಡಿದ ಸೇವೆಯನ್ನು ಸ್ವರಾಜ್ಯ ಲಾಭರೂಪ ಪ್ರತಿಫಲಕ್ಕಾಗಿ ಮಾರಿಕೊಳ್ಳಲು ಪ್ರಯತ್ನಿಸಿದವರಂತೆ ತೀವ್ರತರಾಂದೋಳನದಮೂಲಕ ಬಲಾತ್ಕರಿಸಿ ಪಡೆದುಕೊಳ್ಳಬೇಕೆಂದು ಯೋಚಿಸಿರುವುದು ಅಲೌಕಿಕವಲ್ಲವೆ?

ನಮ್ಮ ದೇಶೋದ್ಧಾರಕರಿಗೆ ವಾಗ್ಯುದ್ಧದಲ್ಲಿರುವ ನೈಪುಣ್ಯವೂ, ಪ್ರಭುತ್ವದವರಮೇಲೆ ಕಠಿನಟೀಕೆಗಳನ್ನು ಮಾಡಿ ತೀವ್ರತರಾಂದೋಳನವನ್ನು ಮಾಡುವುದರಲ್ಲಿರುವ ಆದರವೂ, ಸೇರಿಬಾಳಿ ಕೆಲಸಮಾಡಿ ಪ್ರಭುತ್ವದವರ ಮನವನ್ನೊಲಿಸಿಕೊಂಡು ಅದರ ಸಿಹಿಯನ್ನು ಆಸ್ವಾದಿಸುವುದರಲ್ಲಿಲ್ಲದಂತಾಗಿರುವುದು ನಮ್ಮ ದೇಶದ ದುರ್ದೈವವು. "ಭರತಖಂಡದವರನ್ನು ಸೈನ್ಯದಲ್ಲಿ ಸೇರಿಸಿಕೊಂಡು ದೊಡ್ಡದೊಡ್ಡ ಉದ್ಯೋಗ ಸ್ಥಾನಗಳನ್ನು ಅವರಿಗೆ ಕೊಡಬೇಕು. ಅವರನ್ನು ಸ್ವಯಂ ಸಹಾಯಕರನ್ನಾಗಿ ತೆಗೆದುಕೊಳ್ಳಬೇಕು" ಎಂದು ಮೊದಲಾಗಿ ನಿರ್ಧಾರವನ್ನು ರಾಷ್ಟ್ರೀಯ ಮಹಾಸಭೆಯಲ್ಲಿ ಎಷ್ಟೋ ವರ್ಷಗಳಿಂದಲೂ ನಮ್ಮ ರಾಷ್ಟ್ರಭಕ್ತರು ಮಾಡುತ್ತಿದ್ದರು. ಆದರೆ ಈಗಣ ಸಂಧಿಯಲ್ಲಿ ನಮ್ಮ ಸರ್ಕಾರದವರು ಆ ಸ್ವಯಂ ಸಹಾಯಕಸೈನ್ಯದ ಏರ್ಪಾಟಿಗೂ ಆಜ್ಞೆಯನ್ನಿತ್ತು ೬ ಸಾವಿರ ಮಂದಿಯನ್ನು ಈ ದೇಶದಲ್ಲೆಲ್ಲಾ ಕೂಡಿಸಿಕೊಡಬಹುದೆಂದು ಪ್ರಕಟಿಸಿದರು. ಆದರೆ ಈ ಇಷ್ಟಾರ್ಥಸಿದ್ಧಿಯಾದಬಳಿಕ ನಮ್ಮ ರಾಷ್ಟ್ರಭಕ್ತರು ಏನುಮಾಡಿದರು? ೪ ತಿಂಗಳಾದರೂ ಕಾಲುಪಾಲು ಮಂದಿಯನ್ನೂ ಇವರಿಂದ ಕೂಡಿಸಿಕೊಡಲಾಗಲಿಲ್ಲ. ತಮ್ಮ ಬಾಯೇ ಭರತಖಂಡದ ಬಾಯಿ, ತಾವೇ ಭರತಖಂಡದ ಪ್ರತಿನಿಧಿಗಳೆಂದು ಹೇಳಿಕೊಳ್ಳುವ ಜನರಿಂದ ಇದಿಷ್ಟು ಕೆಲಸವನ್ನೂ ಮಾಡಿಕೊಡಲಿಕ್ಕಾಗಲಿಲ್ಲವೆಂದರೆ ಇದಕ್ಕಿಂತಲೂ ಹೀನಯವಾದ ಪಟ್ಟವು ಇನ್ನಾವುದಿರುವುದು? ಆದರೂ ಈ ನಮ್ಮ ಮುಖಂಡರು ಈ ಪರಿಣಾಮಕ್ಕೂ ಸರ್ಕಾರದವರ ಕೃತ್ಯಲೋಪವನ್ನೇ ಕಾರಣವನ್ನಾಗಿ ಹೇಳುತ್ತ ತಮ್ಮ ಆಕ್ಷೇಪದ ಕಾಯಕವನ್ನು ಸಾಗಿಸುತ್ತಲೇ ಇರುವರು. ಯುದ್ಧ ಮುಗಿಯುವವರೆಗೆ ಮಾತ್ರವೇ ಈ ಏರ್ಪಾಟೆಂದು ಸರ್ಕಾರದವರು ಸದ್ಯಃ ಮಾಡಿದ್ದರೂ, ಪರೀಕ್ಷಾರ್ಥವಾದ ಈಗಣೇರ್ಪಾಟಿನಲ್ಲಿ ಸರ್ಕಾರದವರ ಮನಸ್ಸಿಗೆ ಸಂತೃಪ್ತಿಕರವಾಗುವಂಥ ರೀತಿಯಲ್ಲಿ ಈ ಸ್ವಯಂ ಸೇವಕರ ಸೇರಿಸುವಿಕೆಯನ್ನು ಮಾಡಿಸಿಕೊಟ್ಟು, ಹಾಗೆ ಸೇರಿದವರು ಕೇವಲ ರಾಜನಿಷ್ಠೆಯಿಂದ ತಮ್ಮ ಮೇಲೆ ಹೊತ್ತ ಕಾರ್ಯವನ್ನು ಮೇಲ್ಪಟ್ಟ ಅಧಿಕಾರಿಗಳ ಮೆಚ್ಚಿಕೆಗೆ ಪಾತ್ರವಾಗುವಂತೆ ನೆರವೇರಿಸಿ, ಈ ಸ್ವಯಂ ಸೇವಕ ಸೇನಾಪದ್ಧತಿಯನ್ನು ಶಾಶ್ವತವಾಗಿ ಸ್ಥಾಪಿಸಿಕೊಡುವಂತೆಯೂ, ಸಂಬಳ ಕಡಿಮೆಯಾಗಿರುವುದು, ವಯಃಪರಿಮಿತಿ ಕಡಿಮೆಯಾಗಿರುವುದು ಮೊದಲಾದ ಲೋಪಗಳನ್ನೆಲ್ಲಾ ಉತ್ತರೋತ್ತರ ಸರ್ಕಾರದವರು ತಾವಾಗಿಯೇ ಪರಿಹರಿಸಿಕೊಡುವಂತೆಯೂ ಮಾಡಿಕೊಳ್ಳಬಹುದಾಗಿದ್ದಿತಲ್ಲವೆ? ಕೊಟ್ಟ ಅವಕಾಶವನ್ನೂ ನಮ್ಮ ಮುಖಂಡರು ಸಾರ್ಥಕಪಡಿಸಿಕೊಳ್ಳದೆ ಹೋದಬಳಿಕ ಉತ್ತರೋತ್ತರ ಇವರ ಮಾತುಗಳಲ್ಲೂ ಪ್ರಾರ್ಥನೆಗಳಲ್ಲೂ ಸರ್ಕಾರದವರು ಎಷ್ಟು ಗೌರವವನ್ನಿಡಬಹುದು! ಸೇರಿ ನಡೆದು ಮೇಲ್ಪಂಕ್ತಿಯವರನ್ನು ಮೆಚ್ಚಿಸಿ ಫಲವನ್ನು ಪಡೆದುಕೊಳ್ಳುವುದರಲ್ಲಿರುವ ಸೌಕರ್ಯವು ನಮ್ಮವರಿಗೆ ರುಚಿಸಿದಾಗ ಭರತಖಂಡದ ಸುದೈವವು ಸನ್ನಿಹಿತವಾಗುವುದು. ಹೋರಿ ನಡೆಯುವುದಕ್ಕಿಂತ ಸೇರಿ ನಡೆವವರ ಬಾಳು ಎಷ್ಟು ಸಮಾಚೀನವಾಗುವುದೆಂಬುದಕ್ಕೆ ಪ್ರಪಂಚದಮೇಲೆ ಪ್ರತಿ ಕ್ಷಣದಲ್ಲೂ ಎಷ್ಟೋ ಉದಾಹರಣೆಗಳು ದೊರೆಯುವುವು. ಆದರೆ ಜಗತ್ತಿಗೆಲ್ಲಾ ಕಾಣುವಂತೆ ಈಗತಾನೇ ನಡೆದಿರುವ ಒಂದಾನೊಂದು ಉದಾಹರಣೆಯನ್ನು ಈ ಸಮಯದಲ್ಲಿ ಕೊಟ್ಟು ಈ ಲೇಖನವನ್ನು ಇಲ್ಲಿಗೆ ಮುಗಿಸುವೆವು.

ಯುದ್ಧಕ್ಕೆ ಮುಂಚೆ ಇಂಗ್ಲೆಂಡ್ ದೇಶದ ಸ್ತ್ರೀಯರು ಪಾರ್ಲಿಮೆಂಟಿನ ಸಭಿಕರನ್ನಾರಿಸುವಾಗ್ಗೆ ಮತವನ್ನು ಕೊಡುವ ಸ್ವಾತಂತ್ರ್ಯವು ತಮಗೂ ಇರಬೇಕೆಂಬುದಾಗಿ ಆ ಅಧಿಕಾರವನ್ನು ಪಡೆದುಕೊಳ್ಳುವುದಕ್ಕಾಗಿ ಪ್ರಯತ್ನಿಸಿ, ಅದಕ್ಕಾಗಿ ತೀವ್ರತರಾಂದೋಳನವನ್ನು ಕೈಕೊಂಡರು. ಪಾರ್ಲಿಮೆಂಟಿಗೆ ಹೋಗಿ ಕುಳಿತುಕೊಂಡು ಕೆಲಸ ನಡೆಯುವುದಕ್ಕೆ ಅಡ್ಡಿಯಾಗುವಂತೆ ಗದ್ದಲಮಾಡಿದರು. ಸಭೆಯಿಂದ ಇವರನ್ನು ಹೊರಕ್ಕೆ ನೂಕಬೇಕೆಂದು ಯತ್ನಿಸಲು, ಸ್ತ್ರೀಯರು ತಾವು ಕುಳಿತಿದ್ದ ಕುರ್ಚಿಗೂ ತಮ್ಮ ಕಾಲಿಗೂ ಸರಪಳಿಗಳನ್ನು ಕಟ್ಟಿಕೊಂಡು ಹೊರಕ್ಕೆ ಸಾಗಿಸಲೇ ಆಗದಂತೆ ಮಾಡುತ್ತಿದ್ದರು. ಮಂತ್ರಿಗಳು ಬೀದಿಯಲ್ಲಿ ಹೋಗುತ್ತಿದ್ದರೆ ಅವರ ತಲೆ ಟೋಪಿಗಳನ್ನು ಹಾರಿಸುತ್ತಲೂ, ಕಾಗದದ ಉಂಡೆಗಳನ್ನು ಅವರಮೇಲೆ ಎಸೆಯುತ್ತಲೂ, ಅವರ ಮನೆ ಕಿಟಿಕಿಗಳ ಗಾಜನ್ನು ಒಡೆದುಹಾಕುತ್ತಲೂ, ಹಾದಿಬೀದಿಗಳಲ್ಲಿ ಸಭೆಗೂಡಿ ತಮ್ಮ ಒಗ್ಗಟ್ಟನ್ನು ಹೆಚ್ಚಿಸಿಕೊಂಡು ಸ್ತ್ರೀ ಸ್ವಾತಂತ್ರ್ಯವು ಬೇಕು ಬೇಕು ಎಂದು ಉದ್ಘೋಷಿಸುತ್ತಲೂ, ನಾನಾವಿಧವಾದ ಹಾವಳಿಗಳನ್ನು ಮಾಡುತ್ತ ಬಂದರು. ಇದನ್ನು ಸೈರಿಸಲಾರದೆ ಸರ್ಕಾರದವರು ಇವರಿಗೆ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು. ಅದಕ್ಕೂ ಇವರು ಹೆದರಲಿಲ್ಲ. ಕಾರಾಗೃಹಗಳಿಗೆ ಹೋಗಿ ಕುಳಿತು ಅಲ್ಲಿ ಆಹಾರವನ್ನೇ ಮುಟ್ಟಲಿಲ್ಲ. ಯಂತ್ರಗಳಮೂಲಕ ಸರ್ಕಾರದವರು ಇವರ ಹೊಟ್ಟೆಗೆ ಅನ್ನಪಾನಗಳನ್ನು ಸೇರಿಸಿದರೆ, ಇವರು ವಮನಮಾಡಿಬಿಡುತ್ತಿದ್ದರು. ಅನ್ನವಿಲ್ಲದೆ ದಿನೇದಿನೇ ಇವರು ಕೃಶರಾಗಿ ಬರುತ್ತಿದ್ದುದನ್ನು ಕಂಡು ಸರ್ಕಾರದವರೇ ಇಂಥವರಿಗೆ ಕಾರಾಗೃಹವಾಸಶಿಕ್ಷೆಯನ್ನು ವಿಧಿಸುವುದರಿಂದ ಫಲವಿಲ್ಲವೆಂದು ಬಿಡಿಸಿಬಿಟ್ಟರು. ಇಷ್ಟಾದರೂ ಸ್ತ್ರೀಯರ ಇಷ್ಟಾರ್ಥವೇನೂ ನೆರವೇರಲಿಲ್ಲ. ಮುಖ್ಯಮಂತ್ರಿ ಮೊದಲಾದನೇಕರಾನೇಕರು ಅವರ ಪ್ರಾರ್ಥನೆಗೆ ವಿರುದ್ಧರಾಗಿಯೇ ಇದ್ದರು. ಅಷ್ಟರಲ್ಲಿ ಯುದ್ಧವು ಪ್ರಾಪ್ತವಾಯಿತು. ಆಗ ಈ ಸ್ತ್ರೀಯರು ಏನು ಮಾಡಿದರು ನೋಡಿದಿರಾ? ಇದೇ ಸಮಯವೆಂದು ತಮ್ಮ ಆಂದೋಳನವನ್ನೇನಾದರೂ ಬಲಪಡಿಸಿದರೆ? ಇಲ್ಲಿಲ್ಲ. ತಮ್ಮ ಸ್ವಾತಂತ್ರ್ಯಪ್ರಾಪ್ತಿಗಾಗಿ ತಮ್ಮ ಪ್ರಭುತ್ವದವರಮೇಲೆ ಹೋರಾಡುವುದಕ್ಕೆ ಇದು ಸಮಯವಲ್ಲವೆಂದು ನಿರ್ಧರಿಸಿದರು. ತಮ್ಮ ಅಂತಸ್ಸ್ಪರ್ಧೆಗಳನ್ನೆಲ್ಲಾ ಬಿಟ್ಟುಕೊಟ್ಟರು. ತಮ್ಮ ಆಂದೋಳನವನ್ನೆಲ್ಲಾ ಮೂಲೆಗೆ ಕಟ್ಟಿಟ್ಟರು. ಯುದ್ಧದಲ್ಲಿ ತಮ್ಮ ದೇಶಕ್ಕೆ ಜಯವನ್ನು ಸಂಪಾದಿಸಿಕೊಡುವುದಕ್ಕೆ ತಮ್ಮ ಕೈಲಾಗುವ ಸಹಾಯಗಳನ್ನೆಲ್ಲಾ ಮಾಡಿಕೊಡುವುದಕ್ಕೆ ಸಿದ್ಧರಾದರು. ರಣರಂಗಕ್ಕೆ ತಮ್ಮನ್ನೂ ಕಳುಹಿಸಿಕೊಟ್ಟರೆ ಶತ್ರುಶಿರಗಳನ್ನು ಚಂಡಾಡುವೆವೆಂದು ತಮ್ಮ ಪ್ರಭುತ್ವದವರನ್ನು ಪ್ರಾರ್ಥಿಸಿದರು. ಅದಕ್ಕೆ ಅವರು ಅಪ್ಪಣೆಕೊಡಲಿಲ್ಲ. ಇದರಿಂದ ಸ್ತ್ರೀಯರು ನಿರಾಶರಾಗದೆ ಯುದ್ಧಕ್ಕೆ ಬೇಕಾದ ಮದ್ದು ಗುಂಡು ಮೊದಲಾದ ಸಾಮಗ್ರಿಗಳನ್ನು ನಿರ್ಮಾಣಮಾಡಿಕೊಡುವುದಕ್ಕೆ ೧೦ ಲಕ್ಷ ಮಂದಿಗಳು ಸಿದ್ಧರಾದರು. ಗಂಡಸರೆಲ್ಲರೂ ರಣರಂಗಕ್ಕೆ ಹೋದುದರಿಂದ ಈ ಹೆಂಗುಸರುಗಳೇ ಅಂಚೆ, ಪೋಲೀಸು, ಟ್ರಾಂವೆ, ರೈಲ್ವೆ ಈ ಇಲಾಖೆಗಳ ಕೆಲಸಗಳನ್ನೂ, ವ್ಯವಸಾಯೋದ್ಯೋಗವನ್ನೂ ನಿರ್ವಹಿಸುತ್ತ ಬಂದರು. ಹೀಗೆ ಇವರು ಮಾಡಿದ ಸೇವೆಯು ಆಂಗ್ಲಮಹಾಜನರ ಮನಸ್ಸನ್ನೆಲ್ಲಾ ಕರಗಿಸಿಬಿಟ್ಟಿತು. ಇವರಿಗೆ ಮೊದಲು ಯಾರು ಅತಿಶಯವಿರುದ್ಧರಾಗಿದ್ದರೋ ಅಂಥ ಮುಖ್ಯಮಂತ್ರಿ ಆಸ್ಕ್ವಿತ್ ಮಹಾಶಯರೇ ಸ್ತ್ರೀಯರಿಗೆ ಮತಸ್ವಾತಂತ್ರ್ಯವನ್ನು ಕೊಟ್ಟೇತೀರಬೇಕೆಂಬ ಬಿಲ್ಲನ್ನು ಪಾರ್ಲಿಮೆಂಟಿನಮುಂದೆ ತಾವೇ ಇಟ್ಟರು. ಇದಕ್ಕೆ ಸಭಿಕರ ಅನುಮತಿಯೂ ದೊರೆಯಿತು. ಇಂಗ್ಲೆಂಡಿನ ಸ್ತ್ರೀಯರು ಹೋರಾಟವನ್ನೇ ತಮ್ಮ ಇಷ್ಟಸಾಧನೆಗೆ ಅನುಕೂಲವಾದುದೆಂದು ತಿಳಿದು ಪ್ರಯತ್ನಿಸುತ್ತಿದ್ದರೆ, ಆಂಗ್ಲಮಹಾಜನರ ಮನಸ್ಸು ಮತ್ತಷ್ಟು ಕಠಿನವಾಗುತ್ತ, ಸ್ತ್ರೀಯರ ಇಷ್ಟಾರ್ಥಪೂರಣವು ಎಂದಾದರೂ ಆಗುವ ಸಂಭವವಿದ್ದಿತೋ ಅಥವಾ ಇರುತ್ತಲೇ ಇರಲಿಲ್ಲವೋ! ಯುದ್ಧಸಂಧಿಯಲ್ಲಿ ಅವರು ತೋರಿಸಿದ ದೂರದರ್ಶಿತೆ, ಶಾಂತಿ, ದೇಶಭಕ್ತಿ, ರಾಜನಿಷ್ಠೆ, ಆಂದೋಳನೋಪಸಂಹಾರ ಈ ರೂಪವಾದ ಸೇವಾಧರ್ಮದಿಂದ ಅವರ ಇಷ್ಟಾವಾಪ್ತಿಯು ಅತ್ಯಂತ ಸುಲಭವಾಗಿ ತಾನೇ ಅವರ ಹಸ್ತಗತವಾಗುವಂತಾಯಿತು. ಶತ್ರುಗಳೂ ಮಿತ್ರರಾದರು.

ಈ ಮೇಲುಪಂಕ್ತಿಯನ್ನು ನಮ್ಮದೇಶದ ಸ್ವರಾಜ್ಯಸಾಧಕರೂ ಅನುಸರಿಸಿದರೆ ಭರತಖಂಡದ ಮೇಲೆ ಈಗ ಆಂಗ್ಲಮಹಾಜನರಿಗೆ ಉದಯಿಸಿರುವ ಅಭೂತಪೂರ್ವ ಸಾನುಭೂತಿಯು ಇಮ್ಮಡಿಸುವಂತಾಗುವುದು. ತನ್ಮೂಲಕ ಭರತಖಂಡದ ಶ್ರೇಯೋಲಾಭವೂ ಸುಲಭವಾಗುವುದು. ಅದುಕಾರಣ ಭಾರತೀಯರೆಲ್ಲರೂ "ಸೇರಿ ನಡೆದರೆ ಬಾಳು, ಹೋರಿ ನಡೆದರೆ ಹಾಳು" ಎಂಬುದರ ತತ್ವವನ್ನು ಚೆನ್ನಾಗಿ ಯೋಚಿಸಿಕೊಂಡು ನಡೆಯುತ್ತ ಬರುವುದು ಅವಶ್ಯಕವೆಂದು ಶ್ರುತಪಡಿಸುವೆವು.

ಅರ್ಥಸಾಧಕಪತ್ರಿಕೆ.

ಈ ಸಲದ ಮೈಸೂರು ಅರ್ಥಸಾಧಕ ಸಭೆಯಲ್ಲಿ ಚರ್ಚಿತವಾದ ವಿಷಯಗಳೊಳಗೆ, ಈ ಸಮಾಜದ ಪಕ್ಷದಿಂದ ಇಂಗ್ಲೀಷ್ ಕನ್ನಡ ಭಾಷೆಗಳಲ್ಲಿ ಪ್ರಕಟಿಸಲ್ಪಡುತ್ತಿರುವ ಅರ್ಥಸಾಧಕಪತ್ರಿಕೆಗಳು ವೃಥಾ ವಿಶೇಷ ಧನವ್ಯಯಸಾಧಕವಾದುವಾದಕಾರಣ ಅವನ್ನು ನಿಲ್ಲಿಸಿಬಿಡಬೇಕೆಂಬ ವಿಷಯವೊಂದಾಗಿದ್ದಿತು. ವಿಚಾರಮಾಡಿ ನೋಡಿದರೆ ಇದು ಉಚಿತವಾದ ಅಭಿಪ್ರಾಯವಾಗಿರುತ್ತದೆ. ಇಂಗ್ಲೀಷ್ ಭಾಷೆಯನ್ನು ತಿಳಿದವರಿಗೆ ಅರ್ಥಸಾಧಕ ವಿಷಯಗಳನ್ನು ತಿಳಿಯುವುದಕ್ಕೆ ಬೇಕಾದಷ್ಟು ಗ್ರಂಥಗಳು ಇರುತ್ತವೆ. ನಮ್ಮ ದೇಶದಲ್ಲಿ ಮುಖ್ಯವಾಗಿ ಕನ್ನಡಿಗರಿಗೆ ವಿಷಯಜ್ಞಾನವಾಗಬೇಕಾದುದು ಅವಶ್ಯಕವಾಗಿರುತ್ತದೆ. ಕನ್ನಡದಲ್ಲಿ ಹೊರಡುತ್ತಿರುವ ಅರ್ಥಸಾಧಕಪತ್ರಿಕೆಯು ಇಂಗ್ಲೀಷ್ ಪತ್ರಿಕೆಗಿಂತ ದೇಶಕ್ಕೆ ಸ್ವಲ್ಪ ಪ್ರಯೋಜಕವಾದುದೆಂದು ಹೇಳುವಲ್ಲಿ ಅಡ್ಡಿಯಿಲ್ಲವಾದರೂ ಅದಕ್ಕಾಗಿ ಮಾಡಲ್ಪಡುತ್ತಿರುವ ವೆಚ್ಚವೂ ಕೂಡ ದುಂದಿನದಾಗಿರುತ್ತದೆ. ಹೀಗಿರುವಾಗ ಇಂಗ್ಲೀಷ್ ಪತ್ರಿಕಾ ಪ್ರಕಟನವನ್ನು ಅವಶ್ಯಕವಾದುದೆಂದು ಹೇಗೆತಾನೇ ಸಮರ್ಥಿಸಬಹುದು? ಸಂಸ್ಥಾನದ ಮುಕ್ಕಾಲುಮೂರುವೀಸಪಾಲು ಜನರೆಲ್ಲಾ ಆಂಗ್ಲಭಾಷಾಜ್ಞಾನವಿಲ್ಲದವರೇ ಆಗಿರುವಾಗ, ಅವರಿಗೆ ತಿಳಿಯಲನುಕೂಲವಾದ ಶಾಸ್ತ್ರೀಯಗ್ರಂಥ, ಚಾರಿತ್ರಕಗ್ರಂಥ ಮೊದಲಾದುವುಗಳು ದೇಶಭಾಷೆಯಲ್ಲಿಲ್ಲದಿರುವಾಗ, ಅಂಥವುಗಳಿಗೆ ಮೊದಲು ಧನವ್ಯಯ ಮಾಡುವುದನ್ನು ಬಿಟ್ಟು, ಗ್ರಂಥಾನುಕೂಲ್ಯವಿರುವ ಆಂಗ್ಲಭಾಷೆಯಲ್ಲೇ ಪಿಷ್ಟಪೇಷಣವನ್ನು ಮಾಡುವಂಥ ಪತ್ರಿಕೆಯ ಪ್ರಕಟನೆಗಾಗಿ ವರ್ಷಕ್ಕೆ ೧೦-೨೦ ಸಾವಿರ ರೂ. ಗಳನ್ನು ವೆಚ್ಚಮಾಡುವುದು ಅನ್ಯಾಯವಲ್ಲವೆ? ಪ್ರಜೆಗಳಿಂದ ಬಂದ ಹಣದಲ್ಲಿ ೧ ಕಾಸನ್ನೂ ದುಂದಿಗೂ ದುರ್ವಿನಿಯೋಗಕ್ಕೂ ಅವಕಾಶವಿಲ್ಲದಂತೆ ವ್ಯಯಮಾಡಬೇಕಾದ ಉತ್ತರವಾದಿತ್ವವುಳ್ಳ ಸರ್ಕಾರದವರು ಈ ಭಾಗದಲ್ಲಿ ಮಾಡುತ್ತಿರುವ ದುಂದಿನ ವೆಚ್ಚವನ್ನು ನಿಲ್ಲಿಸಿಬಿಡಬೇಕಾದುದು ಅತ್ಯಾವಶ್ಯಕವಾಗಿರುವುದು. ಎಕನಾಮಿಕ್ ಜರ್ನಲ್ಲಿನ ಪ್ರಕಟನವನ್ನು ಆ ಪತ್ರಿಕಾ ಸಂಪಾದಕರ ಘನವಾದ ಯೋಗ್ಯತೆಯ ಬಹುಮಾನಕ್ಕೂ ಅವರ ರಕ್ಷಣೆಗೂ ಮಾಡಬೇಕಾದುದಲ್ಲ. ಸಂಪದಭ್ಯುದಯ ಸಮಾಜದ ಪಕ್ಷದಿಂದ ನಡೆಯುತ್ತಿರುವ ಕಾರ್ಯಭಾರಗಳು ದುಂದಿನವೆಂದು ಕೆಲವರು ಮಾಡುತ್ತಿರುವ ವಕ್ರವಾದ ಆಕ್ಷೇಪಗಳಿಗೆ ಈ ಎಕನಾಮಿಕ್ ಜರ್ನಲ್ಲಿನ ಪ್ರಕಟನದಂಥ ಒಂದೆರಡು ವಿಷಯಗಳೇ ಆಧಾರವಾಗಿ ಪರಿಣಮಿಸಲೂಬಹುದಾಗಿದೆ. ಅದುಕಾರಣ ಪ್ರಜಾಮತಕ್ಕೆ ಗೌರವವನ್ನು ಕೊಡುವುದನ್ನೇ ತಮ್ಮ ಘನತೆಯ ಮುಖ್ಯ ಚೈತನ್ಯವಾಗುಳ್ಳ ನಮ್ಮ ದಿವಾನರವರು ಈ ವಿಷಯದಲ್ಲಿ ವಂದಿಮಾಗಧರ ಪ್ರಶಂಸೆಗಳಿಗೆ ಕಿವಿಗೊಡದೆ ನಿಷ್ಪಕ್ಷಪಾತವಾದ ವಿಮರ್ಶೆಗಳಿಗೂ ಪ್ರಜಾಭಿಪ್ರಾಯಕ್ಕೂ ಗಮನಕೊಟ್ಟು ನಿರರ್ಥಕ ವ್ಯಯಭಾರವುಳ್ಳ ಭಾಗಗಳನ್ನು ದೂರೀಕರಿಸುವುದರಲ್ಲಿ ವ್ಯಗ್ರರಾಗದೆ ಇರಲಾರರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತಗಳು.

ಡಿ|| ಕಮಿಷನರ್ ಮ|| ಎ. ಸುಬ್ರಹ್ಮಣ್ಯಯ್ಯರಿಗೆ ಕೊಡಲ್ಪಟ್ಟಿದ್ದ ೩ ತಿಂಗಳ ರಜವು ತಪ್ಪಿಸಲ್ಪಟ್ಟಿದೆ.

ಲೋಕಲ್ ಸೆಸ್ ತೆರುಗೆ ವಿಧಿಸಲ್ಪಟ್ಟಿರುವ ಎಲ್ಲ ವಸ್ತುಗಳ ಮೇಲೂ ರೂಪಾಯಿ ೧ ಕ್ಕೆ ೩ ಕಾಸಿನಂತೆ ರೈಲ್ವೆ ಸೆಸ್ ಎಂಬ ಹೊಸತೆರುಗೆಯು ಈ ದಿವಸದಿಂದ ಮೈಸೂರು ಡಿಸ್ಟ್ರಿಕ್ಟಿನಲ್ಲಿ ವಿಧಿಸಲ್ಪಡಲು ಸರ್ಕಾರದಪ್ಪಣೆಯಾಗಿರುತ್ತದೆ.

ರಾಜಧಾನಿಯಲ್ಲಿ ಮೋಡ ಮುಚ್ಚಿ ಬಲವಾದ ಶೀತವಾಯುವು ಬೀಸುತ್ತಿದೆ. ಮಳೆ ಸಾಲದು. ವಾಂತಿಭೇದಿ ರೋಗವು ರಾಜಧಾನಿಗೆ ಸೇರಿದ ಪಡುವಾರಹಳ್ಳಿಯಲ್ಲಿ ಪ್ರಬಲವಾಗಿದೆ. ರಾಜಧಾನಿಯ ಎಲ್ಲ ಮೊಹಲ್ಲೆಗಳಲ್ಲೂ ಇದರ ಹಾವಳಿಯು ಇದ್ದೇ ಇದೆ.

ಮೈಸೂರು ದೇಶದ ಕೆಲ ವರ್ತಕರನ್ನು ಸಂಗಡ ಕರೆದುಕೊಂಡು ಕಳೆದ ವರ್ಷ ಜಪಾನ್ ದೇಶಕ್ಕೆ ಪ್ರಯಾಣಮಾಡಿ ಹೋಗಿದ್ದ ಮ|| ಪಿ. ಗೋಪಾಲರಾಜ ಅರಸ್ ಬಿ. ಎ. ಬಿ. ಎಲ್. ರವರು ಅಲ್ಲಿಂದ ಹಾಗೆಯೇ ಅಮೇರಿಕಾಕ್ಕೆ ಹೋಗಿದ್ದು ಕಳೆದವಾರ ಬೆಂಗಳೂರನ್ನು ಸೇರಿದರು.

ಮೈಸೂರು ಮ್ಯುನಿಸಿಪಾಲಿಟಿಯಲ್ಲಿ ಅ|| ಮ್ಯಾನೇಜರಾಗಿದ್ದ ಮಿ|| ಸಯ್ಯದ್ ಅಬ್ದುಲ್ ಕಾಲಕ್‌ರವರು ಚಾಮರಾಜನಗರದ ಅಮಲ್ದಾರಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಅಲ್ಲಿನ ಅಮಲ್ದಾರರಾದ ಮ|| ಕೇಶವಾಚಾರ್ಯರು ಅ|| ಕಮಿಷನರಾಗಿ ಮಾಡಲ್ಪಟ್ಟು, ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ೧ ನೆಯ ಕೌನ್ಸಿಲರ್ ಅಧಿಕಾರದವರೆಗೆ ಸರ್ಕಾರದ ಉದ್ಯೋಗವನ್ನು ವಹಿಸಿ. ಉಚಿತವಾದ ಸಾಮರ್ಥ್ಯದಿಂದ ನೆರವೇರಿಸಿ, ವಿಶ್ರಾಂತಿ ವೇತನವನ್ನು ಪಡೆಯುತ್ತ ಈಚೆಗೆ ಮದ್ರಾಸಿನಲ್ಲಿ ವಾಸವಾಗಿದ್ದ ರಾಯ್ ಬಹದ್ದೂರ್ ರಾಜಕಾರ್ಯಪ್ರವೀಣ ಮ|| ಎ. ರಂಗಸಾಮಯ್ಯಂಗಾರರು ಮೊನ್ನೆ ವಾರದಲ್ಲಿ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

ಸರ್ ಕೆ. ಶೇಷಾದ್ರಿ ಅಯ್ಯರವರ ಎರಡನೆಯ ಕುಮಾರರಾಗಿ ಕಡೂರು ಡಿ|| ಕಮಿಷನರ ಉದ್ಯೋಗದಲ್ಲಿದ್ದ ಮ|| ಕೆ. ಎಸ್. ಕೃಷ್ಣಯ್ಯರವರು ಕಳೆದವಾರ ಬೆಂಗಳೂರಿನಲ್ಲಿ ಕಾಲವಶರಾದರೆಂದು ತಿಳಿಯುವುದಕ್ಕೆ ವಿಷಾದಿಸುತ್ತೇವೆ. ಮಧ್ಯವಯಸ್ಸಿನಲ್ಲೇ ಇವರಿಗೆ ಅಂತ್ಯವು ಪ್ರಾಪ್ತವಾಗುವುದಕ್ಕೆ ಇವರನ್ನು ಹಿಡಿದು ಪೀಡಿಸುತ್ತಿದ್ದ ಮಧುಮೂತ್ರ ವ್ಯಾಧಿಯೇ ಕಾರಣವಾಗಿದ್ದಿತೆಂದು ಕೇಳುತ್ತೇವೆ.

ಈ ದಿನದಾರಭ್ಯ ಸರ್ಕಾರದುದ್ಯೋಗದಿಂದ ನಿವೃತ್ತರಾಗುವ ಮ|| ನಗರದ ಸುಬ್ಬರಾಯರ ಸ್ಥಾನಕ್ಕೆ ಅ|| ಕಮಿಷನರ್ ಮ|| ಟಿ. ಧರ್ಮರಾಜ ಶೆಟ್ಟಿಯವರು ಕಾವೇರೀ ಜಲಾಶಯದ ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿಯೂ ಮ|| ಎಚ್. ನಂಜುಂಡರಾಜ ಅರಸಿನವರ ಸ್ಥಾನಕ್ಕೆ ಮೈಸೂರು ಸೈನ್ಯದ ಚೀಫ್ ಕಮ್ಯಾಂಡೆಂಟರ ಆಫೀಸಿನ ಅಸಿಸ್ಟೆಂಟ್ ಮ|| ವಿ. ವೆಂಕಟರಾಯರು ತಮ್ಮ ಕೆಲಸದ ಜತೆಗೆ ಅಮೃತಮಹಲ್ ಇಲಾಖೆಯ ಸೂಪರಿಂಟೆಂಡೆಂಟ್ ಕೆಲಸವನ್ನು ವಹಿಸಿ ನೋಡಿಕೊಳ್ಳುವಂತೆಯೂ ನಿಯಮಿಸಲ್ಪಟ್ಟಿದ್ದಾರೆ.

ಧಾರವಾಡದಲ್ಲಿ ನೂತನವಾಗಿ ಕಲಾಶಾಲೆಯು ಸ್ಥಾಪಿತವಾದುದರ ಸಂತೋಷಾರ್ಥವಾಗಿಯೂ, ಸ್ಮರಣಾರ್ಥವಾಗಿಯೂ, ಸ್ವಜನರ ವಿದ್ಯಾಪ್ರೋತ್ಸಾಹಾರ್ಥವಾಗಿಯೂ ವೀರಶೈವವಿದ್ಯಾರ್ಥಿಗಳಿಗೆ ವೇತನವನ್ನು ಇದರ ಬಡ್ಡಿಯಿಂದ ಕೊಡಬೇಕೆಂದು ಹೇಳಿ ೩೦೦೦ ರೂ.ಗಳನ್ನು ಹಾವೇರಿ ತಾಲ್ಲೂಕಿನ ಸಂಗೂರು ಎಂಬ ಗ್ರಾಮದ ಒಬ್ಬ ವೀರಶೈವ ನಾರೀಮಣಿಯು ಕೊಟ್ಟಿರುವಳೆಂದು ಕೇಳುತ್ತೇವೆ. ಅಬಲೆಯಾದರೂ ಈಕೆಯು ತೋರಿಸಿದ ಉಚಿತಜ್ಞತೆಯು ಪ್ರಬಲವಾಗಿರುವುದಲ್ಲವೇ? ಇಂಥ ನಾರೀಮಣಿಗಳು ಸಮಾಜಕ್ಕೇ ಭೂಷಣಪ್ರಾಯೆಯರು.

ಶ್ರೀಮನ್ಮಹಾರಾಜರವರು ಮೈಸೂರು ವಿಶ್ವವಿದ್ಯಾಲಯಕ್ಕೆ ೪೦೦೦ ರೂ.ಗಳನ್ನು ಕೊಟ್ಟು ಇದರ ಬಡ್ಡಿಯಿಂದ ಹಿಂದಣ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂಡಾಲಿಯವರ ಹೆಸರಿನಮೇಲೆ ಪ್ರತಿತಿಂಗಳಿಗೂ ೧೦ ರೂ. ನಂತೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಭ್ಯಾಸಮಾಡುತ್ತಲೂ, ಮುಂದೆ ಆರ್ಥಿಕ ವಾಣಿಜ್ಯ ಶಾಸ್ತ್ರಗಳನ್ನು ಅಭ್ಯಾಸಿಸತಕ್ಕವನಾಗಿಯೂ ಇರುವ ಹಿಂದುಳಿದ ಜನವರ್ಗಕ್ಕೆ ಸೇರಿದ ಒಬ್ಬ ವಿದ್ಯಾರ್ಥಿಗೆ ಕೊಡತಕ್ಕುದೆಂತಲೂ, ವಾಣಿಜ್ಯಶಾಸ್ತ್ರವನ್ನೋದಿ ಉತ್ತಮೋತ್ತಮರಾಗಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗೆ ಅದೇ ಡಾಲಿಯವರ ಹೆಸರಿನಮೇಲೆ ಒಂದು ಭಂಗಾರದ ಪದಕವನ್ನು ಕೊಡತಕ್ಕುದೆಂತಲೂ ಅಪ್ಪಣೆಮಾಡಿರುತ್ತಾರೆ. ಆರ್ಥಿಕ ವಾಣಿಜ್ಯ ಶಾಸ್ತ್ರಾಭ್ಯಾಸ ಪ್ರೋತ್ಸಾಹದಲ್ಲಿಯೂ ಹಿಂದುಳಿದವರನ್ನು ಮುಂದಕ್ಕೆ ತರಿಸುವ ವಿಷಯದಲ್ಲಿಯೂ ಶ್ರೀಮನ್ಮಹಾರಾಜರವರಿಗಿರುವ ಕೃಪಾಭಿಮಾನಗಳು ಇದರಿಂದ ವ್ಯಕ್ತವಾಗುವುವು.

ರಾಜಧಾನಿಯಲ್ಲಿ ಜನರಲ್ ಆಸ್ಪತ್ರೆ, ಮಹಾರಾಣಿ ಆಸ್ಪತ್ರೆ, ಈದಿಗಾ ಆಸ್ಪತ್ರೆ-ಇವು ಮೂರಲ್ಲದೆ ಲೋಕಲ್ ಡಿಸ್ಪೆನ್ಸರಿಗಳು ನಾಲ್ಕು, ಹಿಂದೂ ಯುನಾನಿ ವೈದ್ಯಶಾಲೆಯೂ, ಆರವನೆ ಆಸ್ಪತ್ರೆಯೂ, ಗ್ರ್ಯಾಂಟ್ ಪಡೆಯುವ ೨-೩ ವೈದ್ಯಾಲಯಗಳೂ, ಇದರಮೇಲೆ ಗೊತ್ತುಗುರಿಯಿಲ್ಲದಷ್ಟು ಹಕೀಮರ ಹಿಂದೂ ವೈದ್ಯರ ಆಲಯಗಳೂ, ಔಷಧಗಳನ್ನು ಮಾರುವ ಕೆಲವು ಅಂಗಡಿಗಳೂ ಸಹ ಇವೆ. ಮ|| ಡಾ|| ಕೃಷ್ಣಸ್ವಾಮಯ್ಯಂಗಾರರವರು ವೀರನಗೆರೆಯ ಲೋಕಲ್ ಡಿಸ್ಪೆನ್ಸರಿಯೊಂದರಲ್ಲೇ ಈಗ ದಿನ ೧ ಕ್ಕೆ ೪೦೦ ಮಂದಿಗಳಿಗೆ ಕಡಿಮೆಯಿಲ್ಲದಷ್ಟು ಜನರು ಚಿಕಿತ್ಸಾರ್ಥವಾಗಿ ಬರುತ್ತಿರುವರು. ಇನ್ನು ಉಳಿದ ವೈದ್ಯಶಾಲೆಗಳಿಗೆಲ್ಲಾ ಎಷ್ಟು ಸಹಸ್ರಮಂದಿ ರೋಗಿಗಳು ಹೋಗುತ್ತಿರಬಹುದು. ಇದನ್ನು ಪರಿಶೀಲಿಸಿದರೆ ನಮ್ಮ ರಾಜಧಾನಿಯು ಕ್ಷುದ್ರ ರೋಗಗಳಿಗೆ ಹೇಗೆ ಆಶ್ರಯವಾಗಿದೆಯೆಂಬುದು ವ್ಯಕ್ತವಾಗುವುದು. ಕನ್ನಂಬಾಡಿ ಜಲಾಶಯ ನಿರ್ಮಾಣದಿಂದ ರಾಜಧಾನಿಯ ಆರೋಗ್ಯಕ್ಕೆ ಭಂಗವುಂಟಾಗಲವಕಾಶವಾಗಿದೆಯೆಂದು ಅನೇಕರು ದಿಗಿಲುಬೀಳುತ್ತಿರುವರು.

ನಮ್ಮ ಸಂಸ್ಥಾನದಲ್ಲೆಲ್ಲಾ ಒಟ್ಟು ೬೧೧ ಮೈಲಿಗಳ ಲೋಹಮಾರ್ಗವು ಸ್ಥಾಪಿಸಲ್ಪಟ್ಟಿರುವುದು. ಇದರ ಸ್ಥಾಪನೆಗಾಗಿ ಒಟ್ಟು ೨೫೫೮೬೫೨೫ ರೂ.ಗಳು ವೆಚ್ಚವಾಗಿರುವುವು. ಕಳೆದ ವರ್ಷ ಲೋಹಮಾರ್ಗಗಳಮೇಲೆ ಮೊದಲನೆ ತರಗತಿಯಲ್ಲಿ ೧೦೪೪೦ ಮಂದಿಗಳೂ ೨ ನೆ ತರಗತಿ ಬಂಡಿಯಲ್ಲಿ ೫೫೬೯೬ ಮಂದಿಗಳೂ, ೩ ನೆ ತರಗತಿ ಬಂಡಿಗಳಲ್ಲಿ ೪೯೦೮೨೯೯ ಮಂದಿಗಳೂ ಪ್ರಯಾಣಮಾಡಿದರು. ಪ್ರಯಾಣಿಕರ ಬಾಡಿಗೆಯ ಮೂಲಕವಾಗಿ ಆ ವರ್ಷ ೧೭೦೫೫೮೫ ರೂ.ಗಳೂ, ಸಾಮಾನುಗಳನ್ನು ಸಾಗಿಸಿದುದರಿಂದ ೧೭೮೨೧೬೪ ರೂ.ಗಳೂ ಒಟ್ಟು ೩೬೬೧೬೨೫ ರೂ.ಗಳೂ ಆದಾಯವಾಯಿತು. ಅದರಲ್ಲಿ ವೆಚ್ಚವಾದುದು ಹೋಗುತ್ತ ೧೮೭೯೦೫೧ ರೂ.ಗಳ ಆದಾಯವಾಗಿರುವುದು. ಬಡ್ಡಿ ಮೊದಲಾದುವನ್ನೆಲ್ಲಾ ಕಳೆದರೆ ನಿರ್ದಿಷ್ಟಾದಾಯವು ೬೩೫೧೪೧ ರೂ.ಗಳು. ಮೊನ್ನೆ ವರ್ಷದಲ್ಲಿ ೪೦೯೨೭೬ ರೂ.ಗಳ ಲಾಭವಾಗಿದ್ದಿತು ಎಂದ ಬಳಿಕ ಮೊನ್ನೆ ವರ್ಷಕ್ಕಿಂತ ನಿನ್ನೆ ವರ್ಷದಲ್ಲಿ ೨೩೫೦೦೦ ರೂ.ಗಳಷ್ಟು ಲಾಭವು ಹೆಚ್ಚಿದಂತಾಯಿತು. ಮೈಸೂರು ಅರಸೀಕೆರೆ ಲೋಹಮಾರ್ಗದ ಕೆಲಸವು ನಿರ್ವಿಘ್ನವಾಗಿ ಸಾಗುತ್ತಿದೆ. ಈ ಮಾರ್ಗದಲ್ಲಿರುವ ಲಕ್ಷ್ಮಣತೀರ್ಥ, ಕಾವೇರಿ, ಹೇಮಾವತೀನದಿಗಳಮೇಲೆ ಸೇತುಗಳನ್ನು ಕಟ್ಟುವ ಕೆಲಸವು ಮುಗಿದಿತು. ಕಂಬಿಗಳು ಹಾಕಲ್ಪಡುತ್ತಿವೆ. ಭಟ್ಕಲ್ ರೇವೆಗೆ ಲೋಹಮಾರ್ಗವನ್ನು ಹಾಕುವ ವಿಷಯವು ಆಲೋಚಿಸಲ್ಪಡುತ್ತಿದೆ.

ಯುದ್ಧವಾರ್ತೆಯು

ಪಶ್ಚಿಮರಣರಂಗದಲ್ಲಿ ಇಂಗ್ಲೀಷರೂ ಫ್ರೆಂಚರೂ ಸಹ ಕಳೆದವಾರದಲ್ಲೂ ಶತ್ರುಗಳ ಕೆಲವು ಸ್ಥಾನಗಳನ್ನು ವಶಪಡಿಸಿಕೊಂಡಿದ್ದಾರೆ. ಎಪೆಹಿ, ಬುಲ್ಲೀಕೋರ್ಟ್, ರಾಕ್ಸ್, ಟಾಸು, ಹೂಜಿ ಈ ಬಳಿಯಣ ಶತ್ರುಕಂದಕಗಳನ್ನು ಇಂಗ್ಲೀಷರು ವಶಪಡಿಸಿಕೊಂಡುದಲ್ಲದೆ ಅನೇಕ ಸೈನಿಕರನ್ನು ಸೆರೆಹಿಡಿದರು. ಈಗ ಇಂಗ್ಲೀಷರು ಲೆನ್ಸ್ ಪಟ್ಟಣದಮೇಲೆ ಬಲವಾಗಿ ಮುತ್ತಿರುತ್ತಾರೆ. ಈ ಪಟ್ಟಣದ ಆಗ್ನೇಯದಿಕ್ಕಿನಲ್ಲಿ ವೀರಾವೇಶದಿಂದ ಕಾದಾಡುತ್ತಿರುವ ಇಂಗ್ಲೀಷ್ ಸೈನ್ಯವು ಸೌಚೆಜ್ ನದಿಯ ಎರಡು ಪಕ್ಕಗಳಲ್ಲೂ ಮುಂದಕ್ಕೆ ನುಗ್ಗಿ ೧|| ಮೈಲಿ ವಿಸ್ತೀರ್ಣವಾದ ಶತ್ರುಸ್ಥಾನವನ್ನೂ ಲಾಕೋಲೆಟ್ ಎಂಬ ಗ್ರಾಮವನ್ನೂ ವಶಪಡಿಸಿಕೊಂಡುವು. ಲೆನ್ಸ್ ಪಟ್ಟಣದ ಸುತ್ತಮುತ್ತ ಇರುವ ಕಂದಕಗಳನ್ನೂ ಬಲದುರ್ಗಗಳನ್ನೂ ಶತ್ರುಗಳು ಬಿಟ್ಟು ಕೋಟೆಯೊಳಕ್ಕೆ ಓಡಿಹೋಗುತ್ತಿದ್ದಾರೆ. ಬಾಯಸ್ ಡಿಯರ್ಮಾಂಟ್ ಎಂಬ ಗ್ರಾಮದ ಪೂರ್ವಭಾಗದಲ್ಲಿ ಇಂಗ್ಲೀಷರು ಮುಂದಕ್ಕೆ ಸಾಗಿಹೋಗಿ ಶತ್ರುಗಳು ನಿಂತಿದ್ದ ಸ್ಥಲದಲ್ಲಿ ಕಾಲುಮೈಲಿಯಗಲದ ಜಾಗವನ್ನು ಹಿಡಿದರು ಅಲ್ಲಿಂದ ಲೆನ್ಸ್ ಪಟ್ಟಣದ ನಿಋತ್ಯಭಾಗದ ಎಲ್ಲೆಕಟ್ಟಿನವರೆಗೆ ಸಾಗಿಹೋಗಿರುವರು. ಕೋಟೆ ಇದಿರಿಗಿದ್ದ ಒಳ್ಳೆ ಅನುಕೂಲಸ್ಥವಾದ ೬೫ ನೆ ನಂ. ಗುಡ್ಡವನ್ನು ಹಿಡಿದರು. ಜರ್ಮನರು ಲೆನ್ಸ್ ಪಟ್ಟಣವನ್ನು ಸ್ವಲ್ಪ ಕಾಲದಲ್ಲೇ ಕಳೆದುಕೊಳ್ಳುವಂತೆ ಕಾಣುತ್ತದೆ. ಏಕೆಂದರೆ ಈ ಪಟ್ಟಣದ ಇದಿರಿಗೆ ಈಗ ನಿಂತಿರುವ ಸ್ಥಾನವು ಒಳ್ಳೆ ಎತ್ತರವಾಗಿದೆ. ಅಲ್ಲಿ ಇಂಗ್ಲೀಷ್ ಸೈನಿಕರು ದೊಡ್ಡದೊಡ್ಡ ಫಿರಂಗಿಗಳನ್ನಿಟ್ಟುಕೊಂಡು ಪಟ್ಟಣದಮೇಲೆ ಗುಂಡಿನ ಮಳೆಯನ್ನು ಸುರಿಸುತ್ತಿದ್ದಾರೆ. ಈ ಪಟ್ಟಣದ ಕೋಟೆಯಲ್ಲೂ ಅದರ ಮಗ್ಗುಲಲ್ಲೂ ಶತ್ರುಗಳು ಪ್ರತಿಭಟಿಸಿ ಯುದ್ಧಮಾಡಿದರೂ ಕಡೆಯಲ್ಲಿ ಸೋತು ಓಡಿಹೋಗದೆ ನಿಲ್ಲುವುದು ಕಷ್ಟವಾಗಿದೆ. ಜರ್ಮನರು ಅದರ ಮಗ್ಗುಲಲ್ಲಿ ಆಗಲೇ ಹಿಮ್ಮೆಟ್ಟಿಹೋಗುತ್ತಿದ್ದಾರೆ. ಅವರ ಹಲವು ಕಂದಕಗಳೂ ಗುಳಿಗಳೂ ಬರಿದಾಗಿವೆ. ಲೆನ್ಸ್ ಕೋಟೆಯು ಮಾತ್ರ ಅವರಿಗೆ ಅತಿ ಪ್ರಮುಖಸ್ಥಾನವಾಗಿದ್ದುದರಿಂದ ಅದನ್ನು ಕಾಪಾಡಿಕೊಳ್ಳಬೇಕೆಂದು ಹೊಸಹೊಸದಾಗಿ ಸೈನ್ಯಗಳನ್ನು ತಂದು ಸೇರಿಸಿ, ಯುದ್ಧಮಾಡುತ್ತ ಬಹಳ ನಷ್ಟಪಡುತ್ತಿದ್ದಾರೆ. ಯಾವಾಗ ಆಕಸ್ಮಿಕವಾಗಿ ಇಂಗ್ಲೀಷರು ಇದನ್ನು ವಶಪಡಿಸಿಕೊಳ್ಳುವರೋ ಎಂಬ ದಿಗಿಲು ಜರ್ಮನರಿಗೆ ಬಲವಾಗಿದೆ.

ಈಗ ಇಂಗ್ಲೀಷ್ ಸೇನೆಯ ಉತ್ತರಭಾಗವು ಬೆಲ್ಜಿಯಮ್ಮಿನ ಆರ್ಮೆಂಟ್ ಪಟ್ಟಣಕ್ಕೆ ೯ ಮೈಲಿಗಳ ದೂರದಲ್ಲಿದೆ. ಫ್ರೆಂಚ್ ಸೈನಿಕರು ಹಾರ್ಟ್ ಬೈಸಿಗೆ ವಾಯುವ್ಯದಿಕ್ಕಿನಲ್ಲಿರುವ ಬೆಟ್ಟದಮೇಲಣ ಶಿಖರದ ದುರ್ಗವನ್ನು ಮುತ್ತಿ ಭಯಂಕರವಾಗಿ ಯುದ್ಧಮಾಡಿ ಕೆಲ ನಿಮಿಷಗಳೊಳಗೆ ಹಿಡಿದುಕೊಂಡರು. ಅಲ್ಲಿ ಅವರು ಉದ್ದೇಶಪಟ್ಟಿದ್ದ ಸ್ಥಾನಗಳೆಲ್ಲಾ ಅವರಿಗೆ ಸಿಕ್ಕಿದಂತಾಯಿತು. ಜರ್ಮನರ ಮೊದಲನೆಸಾಲಿನ ಕಂದಕಗಳೆಲ್ಲಾ ಪೂರ್ಣವಾಗಿ ವಶವಾದಂತಾಯಿತು. ಅಲ್ಲೇ ೩೦೦ ಮಂದಿ ಶತ್ರುಸೈನಿಕರನ್ನೂ ಸೆರೆಹಿಡಿದರು. ಇಂಗ್ಲೀಷ್‌ವೈಮಾನಿಕರು ಅನೇಕ ಯುದ್ಧಗಳನ್ನು ನಡೆಯಿಸಿ, ಶತ್ರುವಿಮಾನಗಳಿಗೆ ಬಹಳ ನಷ್ಟವನ್ನುಂಟುಮಾಡುತ್ತಿದ್ದಾರೆ. ಕಳೆದ ಜನವರಿ ತಾ|| ೧ ರಿಂದ ಇದುವರೆಗೆ ಎಂದರೆ ೬ ತಿಂಗಳ ಕಾಲದಲ್ಲಿ ಮಿತ್ರಮಂಡಲಿಗೆ ಯುದ್ಧದಿಂದಾಗಿರುವ ಜಯದ ವಿವರಣವು ಪ್ರಕಟವಾಗಿದೆ. ಅದರ ಪ್ರಕಾರ ಸೋಮ್ ಅಂಕರ್ ನದಿಯ ಮಧ್ಯದ ಪ್ರದೇಶವೆಲ್ಲಾ ಇಂಗ್ಲೀಷರ ವಶವಾದುದೂ, ವಿಮಿ ಗುಡ್ಡ ಮೆಸ್ಸೈನ್ಸ್ ಗುಡ್ಡ ಮೊದಲಾದುವುಗಳು ವಶವಾದುದೂ ಮೆಸಪೊಟೋಮಿಯಾದಲ್ಲಿ ಬಾಗ್ದಾದು, ಬಸರಾಗಳು ವಶವಾದುದೂ ಇವೆಲ್ಲಾ ಗೊತ್ತಾಗುತ್ತದೆ. ಮತ್ತೂ ಈ ೬ ತಿಂಗಳ ಕಾಲದಲ್ಲಿ ಇಂಗ್ಲೀಷರೂ ಫ್ರೆಂಚರೂ ಸೇರಿ ೭೦ ಸಾವಿರ ಮಂದಿ ಜರ್ಮನರನ್ನು ಸೆರೆಹಿಡಿದಿರುವರು. ೫೦೦ ದೊಡ್ಡ ಫಿರಂಗಿಗಳೂ ಲೆಕ್ಕವಿಲ್ಲದಷ್ಟು ಕಂದಕದ ಫಿರಂಗಿಗಳೂ ಮಿಷಿನ್ ಫಿರಂಗಿಗಳೂ ಇವರಿಗೆ ದೊರೆದಿರುವುವು. ೩ ಲಕ್ಷ ಮಂದಿ ಶತ್ರುಸೈನಿಕರನ್ನು ಪರಿಸಮಾಪ್ತಿಗೊಳಿಸಿರುವರು. ಏಪ್ರಿಲ್ ತಿಂಗಳಾರಂಭದಲ್ಲಿ ಈ ರಂಗದೊಳಗೆ ಮಿತ್ರಮಂಡಲಿಯವರಮೇಲೆ ಶತ್ರುಗಳಕಡೆಯ ೫೨ ಜರ್ಮನ್ ಮೂಲ ಪಟಾಲಮುಗಳು ಯುದ್ಧಮಾಡುತ್ತಿದ್ದುವು. ಜೂನ್ ತಿಂಗಳ ಆರಂಭದಲ್ಲಿ ಅವುಗಳೊಳಗೆ ೧೨ ಪಟಾಲಮುಗಳು ಮಾತ್ರ ಉಳಿದಿದ್ದುವು. ಬಹಳ ಪಟಾಲಮುಗಳು ಮಿತ್ರಮಂಡಲಿಯವರಿಂದ ನಾಶಮಾಡಲ್ಪಟ್ಟುವು. ಕಳೆದ ಏಪ್ರಿಲ ತಿಂಗಳಲ್ಲಿ ಈ ರಂಗದೊಳಗೆಲ್ಲಾ ಶತ್ರುಗಳ ಕಡೆಯ ೧೯೭ ಪಟಾಲಮುಗಳು ಯುದ್ಧಮಾಡುತ್ತಿದ್ದುವು. ಈಗಲೂ ಕೂಡ ಇಂಗ್ಲೀಷ್ ಸೈನ್ಯಕ್ಕೆ ಇದಿರಾಗಿ ಶತ್ರುಗಳ ೫೧ ಪಟಾಲಮುಗಳೂ, ಫ್ರೆಂಚ್ ಸೈನ್ಯಕ್ಕೆ ಇದಿರಾಗಿ ೧೦೨ ಪಟಾಲಮುಗಳೂ ಯುದ್ಧಮಾಡುತ್ತಿವೆ. ರೀಮ್ಸ್-ವೈಪ್ರೆಸ್ಸಿಗೆ ಮಧ್ಯದಲ್ಲಿ ಶತ್ರುಗಳ ವಶದಲ್ಲಿದ್ದ ಮುಖ್ಯ ಸ್ಥಾನಗಳೆಲ್ಲಾ ಈಗ ಮಿತ್ರಮಂಡಲಿಯವರ ವಶದಲ್ಲಿವೆ. ಕಳೆದ ಏಪ್ರಿಲ್ ತಾ|| ೧ ರಿಂದ ಜೂನ್ ತಾ|| ೯ ರವರೆಗೆ ಆಂಗ್ಲಪ್ರಭುತ್ವದವರು ಯುದ್ಧಕ್ಕಾಗಿ ದಿನ ೧ ಕ್ಕೆ ೧೧೬೫೪೦೦೦೦ ರೂ. ಗಳಂತೆ ವೆಚ್ಚಮಾಡುತ್ತಿದ್ದಾರೆ.

ಜರ್ಮನರು ರಷ್ಯಾ ದೇಶದಲ್ಲಿ ಉಂಟಾದ ಸ್ಥಿತಿ ವಿಪರ್ಯಾಸವನ್ನು ಉಪಯೋಗಿಸಿಕೊಂಡು, ಅವರೊಡನೆ ಚತುರುಪಾಯದಿಂದಲೂ ಸಂಧಿಮಾಡಿಕೊಳ್ಳಬಹುದೆಂದು ಯೋಚಿಸಿದ್ದರು. ಅದೆಲ್ಲಾ ವ್ಯರ್ಥವಾದಂತಾಯಿತು. ಪ್ರತ್ಯೇಕ ಸಂಧಿಯು ಜರುಗುವುದಿಲ್ಲವೆಂಬುದು ಸಿದ್ಧವಾಯಿತು. ಈ ಮಧ್ಯದಲ್ಲಿ ಜರ್ಮನರು ರಷ್ಯಾ ರಂಗದಿಂದ ಎಷ್ಟೋ ಸೈನ್ಯಗಳನ್ನು ಪಶ್ಚಿಮರಂಗಕ್ಕೆ ತಂದು ಮಿತ್ರಮಂಡಲಿಯವರನ್ನು ಸೋಲಿಸಬಹುದೆಂದು ತಿಳಿದು ಹಾಗೆಯೇ ಪ್ರಯತ್ನಿಸಿಯೂ ಅಪಜಯವನ್ನೇ ಪಡೆದರು. ಇನ್ನುಮೇಲೆ ರಷ್ಯಾದವರೂ ರುಮೇನಿಯಾದವರೂ ಸಹ ೧-೨ ತಿಂಗಳಲ್ಲೇ ಯುದ್ಧವನ್ನು ಮರಳಿ ಆರಂಭಿಸಬಹುದು. ಆಗ್ಗೆ ಜರ್ಮನರ ಸ್ಥಿತಿಯು ಮತ್ತಷ್ಟು ಶೋಚನೀಯವಾಗುವುದರಲ್ಲಿ ಸಂಶಯವಿಲ್ಲ.

ಇಟಲಿ ಸೈನ್ಯಗಳು ಹಿಡಿದುಕೊಂಡಿರುವ ಸ್ಥಾನಗಳನ್ನು ಮರಳಿ ಬಿಡಿಸಿಕೊಳ್ಳುವುದಕ್ಕೆ ಆಸ್ಟ್ರಿಯನ್ನರು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಗಿ ಅವರು ಬಹಳ ನಷ್ಟಪಟ್ಟು ಹಿಮ್ಮೆಟ್ಟಿದರು. ಇಟಲಿಯವರು ವೇರೋಕ್ಕಿಗೆ ದಕ್ಷಿಣದಲ್ಲಿ ಕಾರ್ಸೋವನ್ನು ದಾಟಿ ಮುಂದಕ್ಕೆ ನುಗ್ಗಿಹೋಗಿದ್ದಾರೆ. ಪಿಸಿಯಾಗೋ-ಟ್ರಿಯಾಂಟೋಗಳ ಮಧ್ಯದಲ್ಲಿ ಟ್ರಿಯಾಂಟೋ ಪರ್ವತದತ್ತರ ನಡೆದ ಯುದ್ಧದಲ್ಲಿ ಇಟಲಿಯವರೇ ಜಯಿಸಿದರು. ಒರ್ಟಿಗಾರಾ ಪರ್ವತಪ್ರಾಂತದಲ್ಲಿದ್ದ ಶತ್ರುಗಳ ಸುರಕ್ಷಿತಸ್ಥಾನಗಳೆಲ್ಲಾ ಇಟಲಿಯವರ ವಶವಾದುವು.

ರಷ್ಯಾದ ಜನರಲ್ ಬ್ರುಸಿಲಾಫ್‌ರವರ ಅಧಿಪತ್ಯದಲ್ಲಿ ರಷ್ಯನ್ ಸೈನ್ಯಗಳು ಯುದ್ಧಸನ್ನದ್ಧವಾಗುತ್ತಿವೆ. ಕೋಸಕ್ ಸೈನಿಕರ ರಣೋತ್ಸಾಹವು ಶ್ಲಾಘನೀಯವಾಗಿದೆ. ಪಾರಸೀಕ ದೇಶದಲ್ಲಿರುವ ರಷ್ಯನ್ ಸೈನ್ಯಗಳು ರಾಯಟಾಕು ಎಂಬ ಸ್ಥಲದಲ್ಲಿದ್ದ ತುರ್ಕಿ ಸೈನ್ಯಗಳನ್ನು ಸೋಲಿಸಿ ೨ ಮೈಲಿ ಹಿಂದಕ್ಕೆ ಓಡಿಸಿದುವು. ಅಸ್ಟಕ್ ಶಿಖರದಹತ್ತಿರ ಹಲವುಕಡೆ ರಷ್ಯನರು ಕುರ್ದ್ ಸೈನಿಕರಮೇಲೆ ಯುದ್ಧಮಾಡಿ ಆ ಶಿಖರದ ಪೂರ್ವಭಾಗದಿಂದ ಅವರನ್ನು ಓಡಿಸಿದುದಲ್ಲದೆ ಬಾರ್ಜಿಕ್ ಸಮ್ಮಿಟ್ ಪ್ರಾಂತದ ಅನೇಕ ಪರ್ವತಶಿಖರಗಳನ್ನು ರಷ್ಯನರು ಆಕ್ರಮಿಸಿದರು.

ಗ್ರೀಸಿನಲ್ಲಿ ಇದುವರೆಗೆ ಮಂತ್ರಿಯಾಗಿದ್ದ ಜೈಮಿಸ್‌ರವರು ರಾಜೀನಾಮೆ ಕೊಟ್ಟರು. ವೆನಿಜುಲಾಸ್‌ರವರು ನೂತನ ಸಂಯುಕ್ತ ಮಂತ್ರಿವರ್ಗವನ್ನೇರ್ಪಡಿಸುವುದಕ್ಕೆ ಈಗಣ ಗ್ರೀಸ್ ಪ್ರಭುವು ಅಂಗೀಕರಿಸಿದುದರಿಂದ ವೆನಿಜುಲಾಸ್‌ರವರು ಏಥೆನ್ಸ್ ಪಟ್ಟಣಕ್ಕೆ ಬಂದರು. ಥೆಸಲಿಯಲ್ಲಿರುವ ೩೫೦ ಮಂದಿ ಪ್ರಜಾಪ್ರತಿನಿಧಿಗಳಲ್ಲಿ ೩೩೬ ಮಂದಿಗಳು ವೆನಿಜುಲಾಸರ ಪಕ್ಷದವರಾಗಿದ್ದಾರೆ. ಇಷ್ಟರಲ್ಲೇ ನೂತನ ಮಂತ್ರಿವರ್ಗವನ್ನು ವೆನಿಜುಲಾಸ್‌ರವರು ಏರ್ಪಡಿಸುವರು. ತಾತ್ಕಾಲಿಕ ಪ್ರಭುತ್ವವು ಏಥೆನ್ಸಿಗೆ ವರ್ಗಾಯಿಸಲ್ಪಡುವುದು. ಮಿತ್ರಮಂಡಲಿಕಡೆಯ ಸೈನ್ಯಗಳು ಸಾಲೋನಿಕಾದಲ್ಲಿ ಮುಖ್ಯಮುಖ್ಯ ಸ್ಥಾನಗಳನ್ನು ವಶಪಡಿಸಿಕೊಳ್ಳುತ್ತಿವೆ.

ಇತರವಿಷಯಗಳು.

ಜರ್ಮನರು ತಾವು ಆಕ್ರಮಿಸಿದ ರುಮೇನಿಯಾ ದೇಶಭಾಗದಲ್ಲಿರುವ ಪ್ರಜೆಗಳಮೇಲೆ ೨೫ ಕೋಟಿ ಫ್ರಾಂಕುಗಳನ್ನು ದಂಡವಾಗಿ ವಿಧಿಸಿರುವರು.

ರಷ್ಯಾದಲ್ಲಿ ಜರ್ಮನರು ಮಾಡಿದ ಕುಟಿಲಪ್ರಯತ್ನಗಳೆಲ್ಲಾ ವ್ಯರ್ಥವಾದುದರಿಂದ ಜರ್ಮನ್ ಸಾಂಘಿಕನಾಯಕನು ತನ್ನ ಆಶಾಭಂಗವನ್ನು ಹೇಳಿಕೊಂಡು, ಮುಂದಣ ಶೀತಕಾಲದಲ್ಲಿ ೪ ನೆ ರಷ್ಯಾ ಯುದ್ಧವು ಕೂಡ ಪ್ರಾಪ್ತವಾಗಬಹುದೆಂದೂ, ಅಂಥ ಯುದ್ಧವು ಜರುಗಲವಕಾಶವಿಲ್ಲದಂತೆ ಮಾಡುವುದಕ್ಕಾಗಿ ಜರ್ಮನಿಯಲ್ಲಿ ಪ್ರಜಾಪ್ರಭುತ್ವದ ಏರ್ಪಾಟಾಗುವುದು ಅವಶ್ಯಕವೆಂತಲೂ ಹೇಳಿರುತ್ತಾನೆ.

ಗ್ರೀಸಿನಲ್ಲಿ ಮಿತ್ರಮಂಡಲಿಗೆ ಅನುಕೂಲ್ಯವು ಹೆಚ್ಚಿದುದರಿಂದ ಬಲ್ಗೇರಿಯಾವು ದಿಗಿಲುಬಿದ್ದಿದೆ. ತಮಗೆ ಅಡ್ರಿಯಾಟಿಕ್ ಸಮುದ್ರದಲ್ಲಿ ನೌಕಾವ್ಯಾಪಾರಕ್ಕೆ ಅವಕಾಶವನ್ನು ಕೊಡಬೇಕೆಂದೂ, ಇನ್ನು ಕೆಲ ಸ್ಥಳಗಳನ್ನು ತಮಗೆ ವಶಪಡಿಸಿಕೊಡಬೇಕೆಂದೂ ಧನಸಹಾಯವನ್ನು ಮಾಡಬೇಕೆಂದೂ ಜರ್ಮನರನ್ನೂ ಆಸ್ಟ್ರಿಯನ್ನರನ್ನೂ ಕೇಳುತ್ತ, ಹಾಗೆ ಮಾಡಿಕೊಡದಿದ್ದರೆ ಮಿತ್ರಮಂಡಲಿಯೊಡನೆ ತಾನು ಪ್ರತ್ಯೇಕ ಸಂಧಿ [illegible] ಬಲ್ಗೇರಿಯಾವು ಜರ್ಮನ-ಆಸ್ಟ್ರಿಯನ್ನರನ್ನು [illegible]

ವರ್ತಮಾನಸಂಗ್ರಹ.

ಕಳೆದ ತಾ|| ೧೬ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ೧೯೪೫ ಮಂದಿಗೆ ಪ್ಲೇಗು ತಗುಲಿ ೧೨೦೪ ಮಂದಿಗಳು ಮೃತಪಟ್ಟಿರುವರು.

ವೃದ್ಧಪಿತಾಮಹ ದಾದಾಭಾಯಿ ನೌರೋಜಿಯವರ ಶರೀರಸ್ಥಿತಿಯು ನಿರಾಶಾ ಜನಕವಾಗಿರುವುದೆಂಬ ಸುದ್ದಿಯು ಭಾರತೀಯರಿಗೆ ಬಹಳ ವ್ಯಸನಕರವಾಗಿದೆ.

ಅಮೇರಿಕಾದಲ್ಲಿ ೨೨ ರಿಂದ ೩೦ ವರ್ಷ ವಯಸ್ಸಿನೊಳಗಿನುವ ತರುಣರು ೧ ಕೋಟಿ ಮಂದಿಗಳು ಯುದ್ಧಕ್ಕೆ ಹೊರಡಲು ಪ್ರಯತ್ನಿಸಿ ಸನ್ನದ್ಧರಾಗಿದ್ದಾರೆ.

ಭರತಖಂಡದಲ್ಲಿ ಪಂಜಾಬಿನೊಳಗೆ ಕಾಗದದ ಪಂಶ್ರಮವನ್ನು ಸ್ಥಾಪಿಸುವುದಕ್ಕೆ ಲಂಡನ್ ಪಟ್ಟಣದಲ್ಲಿ ಕೆಲ ಪ್ರಮುಖರು ಸೇರಿ ಒಂದು ಸಂಘವನ್ನೇರ್ಪಡಿಸಿರುವರು.

ಸ್ಟೇಟ್ ಸೆಕ್ರೆಟರಿಯವರ ಸಭೆಯಲ್ಲಿ ಭೂಪೇಂದ್ರನಾಥ ಬಾಸುರವರೂ ಪ್ರಭಾಶಂಕರಪಟ್ಟಣಿಯವರೂ ಸಹ ಸದ್ಯರಾಗಿ ನಿಯಮಿಸಲ್ಪಟ್ಟಿರೆಂಬ ವಾರ್ತೆಯು ಭಾರತೀಯರಿಗೆ ಸಂತೋಷಪ್ರದವಾಗಿದೆ

ಸ್ವರಾಜ್ಯಸಾಧನ ಸಮಿತಿಯ ಪ್ರಯತ್ನಗಳು ನಿರ್ವಿಘ್ನವಾಗಿ ಸಾಗಿ ನೆರವೇರಿಕೊಂಡು ಹೋಗುವುದಕ್ಕಾಗಿ ಅದರ ಸಹಾಯಕ್ಕೆ ಬೊಂಬಾಯಿಯ ಮ|| ಎಸ್. ಆರ್. ಬೊಮಂಜಿಯವರು ೧ ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ.

ಅಮೇರಿಕಾ ಪ್ರಭುತ್ವದವರು ತಮ್ಮ ಪ್ರಜೆಗಳಿಂದ ಸಾಲವನ್ನು ತೆಗೆಯುವುದಕ್ಕೆ ಪ್ರಕಟಿಸಲಾಗಿ ೩೦೩ ಕೋಟಿ ಡಾಲರುಗಳು ಸ್ವಲ್ಪ ಕಾಲದಲೇ ಕೂಡಿದುವಂತೆ. ಅಲ್ಲಿನವರ ದೇಶಾಭಿಮಾನವೂ ಐಶ್ವರ್ಯಸಮೃದ್ಧಿಯೂ ಹೇಗಿದೆ?

ಗ್ರೀಸಿನಲ್ಲಿ ಎಂ. ವೆನಿಜುಲಾಸ್‌ರವರನ್ನು ಔತಣಕ್ಕೆ ಕರೆದು ಅಲ್ಲಿ ಅವರನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟಿದ್ದ ೧೧ ಮಂದಿಗಳನ್ನು ಹಿಡಿದು ಸೆರೆಯಲ್ಲಿಟ್ಟಿರು. ಅವರಲ್ಲೊಬ್ಬನು ತಾವು ನಡೆಯಿಸಿದ್ದ ಪ್ರಯತ್ನವು ನಿಜವೆಂದು ಒಪ್ಪಿಕೊಂಡನು.

ಮದ್ರಾಸು ಪಟ್ಟಣದಲ್ಲಿ ಒಂದು ಸ್ವದೇಶಿ ಅಂಗಡಿಯನ್ನು ಸ್ಥಾಪಿಸಲ್ ಕೆಲರು ಪ್ರಯತ್ನಪಟ್ಟಿದ್ದಾರೆ. ಅದಕ್ಕೆ ಅನಿಬೆಸಂಟಮ್ಮನವರ ಹೆಸರಿಡಲ್ಪಡುವುದಂತೆ. ಲಾರ್ಡ್ ಪೆಟ್ಲಿಂಡರವರು ಅಮ್ಮನವರಿಗೆ ನಿರ್ಬಂಧವಾಸ ಶಿಕ್ಷೆಯನ್ನು ವಿಧಿಸುವುದರಮೇಲೂ ಹಟಕ್ಕಾಗಿ ಮಾಡುವ ಪ್ರಯತ್ನವಿದಾಗಿರಬೇಕೆಂದು ಕಾಣುತ್ತದೆ.

ಕುಕ್ಕುಕುಡಿಯಲ್ಲಿ ಕೆಲ ಜನರು ಅನಿಬೆಸಂಟಮ್ಮನವರಮೇಲೆ ವಿಧಿಸಲ್ಪಟ್ಟ ಶಾಸನದ ವಿಷಯವಾಗಿ ಖಂಡಿಸಿ ಮಾತನಾಡುವುದಕ್ಕೆ ಸಭೆಗೂಡಿ ಕೆಲಸ ನಡೆಯುತ್ತಿರುವಾಗ್ಗೆ ಪೊಲೀಸ್ ಇನ್ಸ್‌ಪೆಕ್ಟರಾದ ಜಾಫರ್ ಹುಸೇನ್ ಎಂಬುವರು ಸಭೆಯನ್ನು ನಿಲ್ಲಿಸಬೇಕೆಂದೂ ದೇಶರಕ್ಷಕ ಶಾಸನದ ಪ್ರಕಾರ ತಾನು ಈ ಅಧಿಕಾರವನ್ನು ಉಪಯೋಗಿಸಿರುವೆನೆಂದೂ ಹೇಳಿ ಸಭಾಕಾರ್ಯವನ್ನು ನಿಲ್ಲಿಸಿಬಿಟ್ಟರು.

ಭರತಖಂಡದ ದೇಶರಕ್ಷಕ ಸೈನ್ಯಕ್ಕೆ ಸೈನಿಕರನ್ನು ಕೂಡಿಸುವುದಕ್ಕೆ ಸರ್ಕಾರದವರಿಗೆ ಸಹಾಯಕರಾಗಿ ನಿಂತಿದ್ದ ಸಂಯುಕ್ತ ಪ್ರಾಂತದ ಮ|| ಮೋತಿಲಾಲ್ ನೇರು, ತೇಜಬಹದ್ದೂರ್ ಸಪ್ರು, ಮೊದಲಾದ ೫-೬ ಮಂದಿ ಪ್ರಮುಖರು ಮದ್ರಾಸ್ ಗೌರ್ನರವರು ಅನಿಬೆಸಂಟಮ್ಮ ಮೊದಲಾದವರಿಗೆ ವಿಧಿಸಿದ ಶಿಕ್ಷೆಯನ್ನು ಕೇಳಿ ಮುಳಿಸಿಕೊಂಡು ತಮ್ಮ ಪ್ರಯತ್ನವನ್ನು ಬಿಟ್ಟುಬಿಟ್ಟೆವೆಂದು ಪ್ರಕಟಿಸಿದ್ದಾರೆ.

ಬೊಂಬಾಯಿ ಸಮುದ್ರತೀರಕ್ಕೆ ಸ್ವಲ್ಪ ದೂರದಲ್ಲಿ ನಮ್ಮ ಪ್ರಭುತ್ವದವರಿಂದಲೇ ರಕ್ಷಣಾರ್ಥವಾಗಿ ನೀರಿನೊಳಗೆ ಬಿಡಲ್ಪಟ್ಟಿದ್ದ ಸುರಂಗಕ್ಕೆ ಸೀಮೆಯಿಂದ ಇಲ್ಲಿಗೆ ಬರುತ್ತಿದ್ದ ಮಾಂಗೋಲಿಯಾ ಎಂಬ ಅಂಚೆಯ ಹಡಗು ಬಡಿದು ಮುಳುಗಿಹೋಯಿತು. ಒಳಗಿದ್ದ ಅಂಚೆಯ ಚೀಲಗಳು ಕೆಲವು ದೊರೆದಿರುತ್ತವೆ. ಇನ್ನು ಕೆಲಕೆಲವು ದಡಕ್ಕೆ ತೇಲಿ ಬರುತ್ತಿವೆ. ದೋಣಿಗಳಲ್ಲಿ ಸುರಕ್ಷಿತರಾಗಿ ಬಂದ ಪ್ರಯಾಣಿಕರು ಅಲ್ಲಲ್ಲಿ ದಡಕ್ಕೆ ಬಂದಿಳಿದಿರುವರು. ಆದ ನಷ್ಟದ ವಿವರವು ಇನ್ನು ಗೊತ್ತಾಗಿಲ್ಲ.

ಜಿ. ಎಸ್ ಮರಾಠೆ ಎಂಬುವರು ಕೆಲಕಾಲ ಜರ್ಮನಿಗೆ ಹೋಗಿದ್ದು ಸಂಸ್ಕೃತವನ್ನಭ್ಯಸಿಸಿಕೊಂಡು ಮದ್ರಾಸಿಗೆ ಬಂದು ಅದ್ಯಾರಿನ ದಿವ್ಯಜ್ಞಾನ ಸಮಾಜ ಭವನದಲ್ಲಿ ವೇದಾಂತವನ್ನು ಅಭ್ಯಾಸಮಾಡುತ್ತಿದ್ದರಂತೆ. ಇವರ ನಡತೆಯು ಪ್ರಜಾಕ್ಷೇಮಕ್ಕೆ ಭಂಗಕರವಾಗಿರುವುದೆಂದು ಮದ್ರಾಸ್ ಸರ್ಕಾರದವರಿಗೆ ತೋರಿದುದರಿಂದ ೪೮ ಗಂಟೆ ಕಾಲದೊಳಗಾಗಿ ಮದ್ರಾಸಾಧಿಪತ್ಯವನ್ನು ಬಿಟ್ಟು ಹೊರಕ್ಕೆ ಹೋಗಿಬಿಡಬೇಕೆಂದು ಅಪ್ಪಣೆಮಾಡಿ ಹೊರಡಿಸಿದರು. ಇವರಮೇಲೆ ಮೊದಲೊಂದುಸಲ ಸರ್ಕಾರದಿಂದ ಇಂಥ ಅಪ್ಪಣೆಯೇ ಮಾಡಲ್ಪಟ್ಟಿದ್ದು ವಿಚಾರಣಾನಂತರ ಬಿಡಲ್ಪಟ್ಟಿದ್ದರಂತೆ.

ಫ್ರಾನ್ಸಿನ ಮದ್ದುಗುಂಡು ಸಾಮಾನುಗಳ ನಿರ್ಮಾಣಶಾಖೆಯ ಮಂತ್ರಿಯು ರಷ್ಯಾಕ್ಕೆ ಹೋಗಿದ್ದು ಈಗತಾನೇ ಸ್ವದೇಶಕ್ಕೆ ಮರಳಿ ಬಂದು, ರಷ್ಯಾದ ಪ್ರಜೆಗಳೂ ಸೈನಿಕರೂ ಅತ್ಯಂತೋತ್ಸಾಹದಿಂದ ಯುದ್ಧಸನ್ನದ್ಧರಾಗಿದ್ದಾರೆ. ಅವರ ವಿಷಯದಲ್ಲಿ ಅಧೈರ್ಯಪಡಬೇಕಾದುದಿಲ್ಲ. ರಷ್ಯನರು ಜರ್ಮನರೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳುವರೆಂದು ಸ್ವಪ್ನದಲ್ಲೂ ಭಯಪಡಬೇಕಾದುದಿಲ್ಲ. ಸೈನಿಕರು ಮತ್ತೆ ಯುದ್ಧಕ್ಕೆ ಸನ್ನಾಹಮಾಡಿಕೊಳ್ಳುತ್ತಿದ್ದಾರೆ. ಈಗಿನ ಪ್ರಭುತ್ವದ ಅಧಿಕಾರವು ವೃದ್ಧಿಹೊಂದುತ್ತಲಿದೆ. ಬಲವಾದ ಯುದ್ಧವನ್ನು ಅವರು ಇಷ್ಟರಲ್ಲೇ ಆರಂಭಿಸುವರು. ಅವರು ಆರಂಭಿಸಿದ ಕೂಡಲೇ ರುಮೇನಿಯಾದವರೂ ಕೂಡ ಯುದ್ಧಾರಂಭವನ್ನು ನೋಡಿ ಅದ್ಭುತವಾಗಿ ಶತ್ರುಗಳಮೇಲೆ ಹೋರಾಡಲಿಕ್ಕಿರುವರು" ಎಂದು ತಿಳಿಯಿಸಿರುತ್ತಾರೆ.

ಅನಿಬೆಸಂಟಮ್ಮ ಮೊದಲಾದವರಿಗೆ ನಿರ್ಬಂಧವಾಸ ಶಿಕ್ಷೆಯನ್ನು ವಿಧಿಸಿದ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಸರ್ ವಿಲಿಯಂಸ್‌ರವರು ಪ್ರಶ್ನೆ ಮಾಡಲಾಗಿ "ಮದರಾಸು ಪ್ರಭುತ್ವದವರು ೪ ಕೆಲಸವನ್ನು ಮಾಡುವುದು ಅವಶ್ಯಕವಾಗಿದ್ದಿತು. ಅನಿಬೆಸಂಟಮ್ಮನೂ ಆಕೆಯ ಜತೆಗಾರರೂ ಸಹ ದೇಶದಲ್ಲೆಲ್ಲಾ ತೀವ್ರಾಂದೋಳನವನ್ನು ಹುಟ್ಟಿಸತಕ್ಕವರಾಗಿದ್ದರೆಂದು ಭರತಖಂಡದ ಇತರರ ಅಧಿಪತ್ಯ ಪ್ರಭುತ್ವದವರೆಲ್ಲಾ ಒಪ್ಪಿಕೊಂಡು, ಈಗ ವಿಧಿಸಿದ ಶಿಕ್ಷೆಯಿಂದ ಸಂತೃಪ್ತರಾಗಿದ್ದಾರೆ. ಇವರುಗಳು ಮಾಡುತ್ತಿದ್ದ ಆಂದೋಳನವು ಉಪದ್ರವಕರವಾಗಿದ್ದಿತು." ಎಂದು ಸ್ಟೇಟ್ ಸೆಕ್ರೆಟರಿಯವರು ಉತ್ತರವಿತ್ತರು. ಇದರಮೇಲಿಂದ ನಿರ್ಬಂಧ ನಿವಾಸ ಶಿಕ್ಷೆ ವಿಧಿಸುವುದಕ್ಕೆ ಲಾರ್ಡ್‌ಪೆಟ್ಲಿಂಡ್‌ರವರೊಬ್ಬರ ಯತ್ನವೇ ಕಾರಣವಾಗಿರಲಿಲ್ಲವೆಂದು ವ್ಯಕ್ತವಾಗುವುದು.

ಸ್ವೀಕಾರ.

ಕೈ|| ವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ತೆಗೆದ ಅಗ್ರತಾಂಬೂಲದ ಬಗೆಗೆ ಕಳೆದ ಜ್ಯೇಷ್ಠ ಬ|| ೩ ರಲ್ಲಿ ಬೆಂಗಳೂರಲ್ಲಿ ನಡೆದ ಊದುಬತ್ತಿ ಷಾಪ್ ಮ|| ಕಳ್ಳೆಪ್ಪನವರ ಪುತ್ರರ ಲಗ್ನದಲ್ಲಿ ೨ ರೂ. ಇದೇ ಜ್ಯೇಷ್ಠ ಬ|| ೬ ರಲ್ಲಿ ನಡೆದ ಗ್ರಂಥಿಗೆಯಂಗಡಿ ಕೈ|| ಪಾಪಣ್ಣನವರ ಕುವರಿಯವರಲಗ್ನದಲ್ಲಿ ೧ ರೂ. ನೆಲಮಂಗಲ ತಾ|| ಬೆಲಗೂರಲ್ಲಿ ನಡೆದ ಮ|| ಚಿಕ್ಕಣ್ಣಶೆಟ್ಟರ ಅಣ್ಣಂದಿರ ಮಕ್ಕಳು ಮುದ್ದೀರಪ್ಪ ಎಡಿಯೂರಪ್ಪ ಇವರುಗಳ ಲಗ್ನದಲ್ಲಿ ತೆಗೆದ ೧ ರೂ. ಒಟ್ಟು ೪ ರೂ.ಗಳನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಪ. ಪ್ರ.

ಪತ್ರವ್ಯವಹಾರ.

ಶ್ರೀಮತ್ ಮಹಾರಾಜರವರ ವರ್ಧಂತ್ಯುತ್ಸವ.

ಮಂಜ್ರಾಬಾದು ತಾಲ್ಲೋಕು ದೋಣಿಗಾಲ್. ೧-೬-೧೭ ನೆಯ ಶುಕ್ರವಾರ ನಮ್ಮನ್ನಾಳುವ ಘನವಸ್ಪೆದಿದ ಶ್ರೀಮತ್ ಮಹಾರಾಜ ರಾಜಶ್ರೀ ಕೃಷ್ಣರಾಜಒಡೆಯರ್ ಜಿ. ಸಿ. ಎಸ್. ಐ. ಯವರ ೩೪ ನೆಯ ವರ್ಧಂತ್ಯುತ್ಸವವನ್ನು ದೋಣಿಗಾಲ್ ಗ್ರಾಮದಲ್ಲಿ ಕಾಫಿ ಪ್ಲಾಂಟರ್ ಮ|| ರಾ|| ಶಾಂತಮಲ್ಲೇಗೌಡರು ಮ|| ರಾ|| ನಂಜೇಗೌಡರು ವಾದ್ಯ ವೈಭವದಿಂದ ಅನೇಕಜನ ಸಂದಣಿಯಿಂದ ತಳಿರುತೋರಣಗಳಿಂದಲಂಕರಿಸಲ್ಪಟ್ಟಿದ್ದ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ದಯಮಾಡಿಸಿ ಪೂಜೆ ಮಹಾಮಂಗಳಾರತಿ ಆದನಂತರ ಅನಾಥ ಮಕ್ಕಳಿಗೆ ಬಟ್ಟೆ ವಗೈರೆ ದಾನವಾಗಿ ಕೊಟ್ಟು ಅಲ್ಪಾಹಾರದಿಂದ ನೆರೆದಿದ್ದವರನ್ನೆಲ್ಲಾ ತೃಪ್ತಿಪಡಿಸಿ ಶ್ರೀಮನ್ಮಹಾರಾಜರವರ ತಸ್ವೀರನ್ನು ಪೂಮಾಲೆಗಳಿಂದಲಂಕರಿಸಿ ಸರ್ವರೂ ಬಹು ಸಂತೋಷದಿಂದ ಶ್ರೇಯಸ್ಸನ್ನು ಬಯಸಿ ಮ|| ರಾ|| ನಂಜೇಗೌಡರು ಸ್ಮಾರಕ್ಯವಾದ ಒಂದು ಉಪನ್ಯಾಸವನ್ನು ಮಾಡಿ, ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಜ್ಞಾಪಕಾರ್ಥವಾಗಿ ಹೂತೋಟ (Park)ವನ್ನು ಓರ್ಪಡಿಮಾಡಿ ಕೆಲವು ಬೀಜಗಳನ್ನು ಸಹ ಹಾಕಲಾಯಿತು. ಅನಂತರ ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ಸಚಿವ ಶಿರೋಮಣಿ ಶ್ರೀಮತ್ ಸರ್ ಎಂ. ವಿಶ್ವೇಶ್ವರಯ್ಯನವರಿಗೂ ಸರ್ವಶಕ್ತನಾದ ಜಗದೀಶನುಆಯುರಾರೋಗ್ಯ ಐಶ್ವರ್ಯವನಿತ್ತು ಕಾಪಾಡಲೆಂದು ಜಯಘೋಷವಾಗುತ್ತಿರುವಲ್ಲಿ, ಶ್ರೀಮತ್ ಚಕ್ರವರ್ತಿ ಸಾರ್ವಭೌಮರವರಾದ ಐದನೇ ಜಾರ್ಜ್ ಪ್ರಭುಗಳವರಿಗೆ ಶ್ರೀ ದೇವರು ಸುಖಸಂಪತ್ತು ಸಮಾಧಾನಗಳನ್ನೀಯಲೆಂದೂ ಮತ್ತು ಈಗ ನಡೆಯುತ್ತಲಿರುವ ಘೋರಯುದ್ಧದಲ್ಲಿ ಜಯವಾಗಲೆಂದೂ ಏಕಕಂಠತೆಯಿಂದ ಸರ್ವರೂ ಪ್ರಾರ್ಥಿಸಿದರು ಮೇಲೆಕಂಡ ಸಹೋದರರುಗಳಾದ ಮ||ರಾ|| ಶಾಂತಮಲ್ಲೇಗೌಡರು ಮ||ರಾ|| ನಂಜೇಗೌಡರು ಅನಾಥರಲ್ಲಿ ವಿಶ್ವಾಸಪೂರ್ವಕವಾಗಿ ಬಟ್ಟೆಬರೆ ಸಹಾಯಮಾಡಿ ಧರ್ಮಕ್ಕೂ ಮತ್ತು ಕೀರ್ತಿಗೂ ಭಾಜನರಾಗಿರುವುದು ಬಹಳವಾಗಿ ಸ್ಮರಿಸತಕ್ಕವುಗಳಾಗಿವೆ.

ಬಸವೇಗೌಡ ಪ್ರತ್ಯಕ್ಷದರ್ಶಿ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಶಿವಿಶೂಲೆ, ಮೂಗಿನೊಳಗಿನ ಪಿಡೂ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಜೀರ್ಣ, ಅಡ್ಡಲಿಸಿ, ಅತೀಸಾರ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ಪಕಶೂಲಿ, ವಾತಶೂಲಿ, ರೆಕ್ಕೆ ಜಬ್ಬು, ಸುಡ್ಡಪ್ಪಿಜ ಜೇಡ, ಹುರುಳು ಕೆಮ್ಮು, ಸಬಳಿಕ್, ಜಬ್ಬು ಆಯು, ಛಾಯಪ್ರಾಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದಸಂಬು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಅಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರ ಪ್ರಕಾರಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಅಫೀಸ
17 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

೫ ನೇ ತರಗತಿ ರೇಖಾಗಣಿತಾದಿಪಾಠ.

ಬೆಲೆ ೪ ಆಣೆ. ಈ ಪುಸ್ತಕವು ಉಪಯುಕ್ತವಾಗಿ ತೋರುತ್ತದೆ. ಎಂದು ಮೈಸೂರು ಮಹಾರಾಜಾ ಕಾಲೇಜ್ ಸಂಸ್ಕೃತ ಪ್ರೊಫೆಸರ್ ಮ|| ರಾ|| ಎಂ. ಹಿರಿಯಣ್ಣಯ್ಯ ಎಂ.ಎ.ಎಲ್.ಟಿ. ಯವರು ಅಭಿಪ್ರಾಯಪಟ್ಟಿರುತ್ತಾರೆ. 1918 ನೇ ಶ. ಟೆಕಸ್ಟ್ ೪ ಆಣೆ, ನೋಟ್ಸು ಮ|| ಎನ್.ಆರ್. ವೆಂಕಟಸುಬ್ಬಾಚಾರ್ಯರದು ೮ ಆಣೆ. ಸದಾಚಾರಸಂಗ್ರಹ ೪ ಆಣೆ, ಆರೋಗ್ಯಶಾಸ್ತ್ರದ ನೋಟ್ಸು ೧ ಆಣೆ, ಪ್ಲೀಡರ್ ಮಲ್ಲಾರಾಧ್ಯರವರ ವ್ಯವಹಾರನಿರ್ಣಯ ೧|| ರೂಪಾಯಿ ಅವುಗಳ ನಮೂನೆಗಳುಳ್ಳ ಲೇಖ್ಯತತ್ವ ಪ್ರಕಾಶಿಕೆ ೪ ಆಣೆ, ಇಲಾಖೆಯ ೨ ನೆಯ ಪುಸ್ತಕದ ನೋಟ್ಸು ೨|| ಆಣೆ ೩ನೆಯ ಹೊಸದು ೪ಆಣೆ, ೪ನೆಯದು ೧||ಆಣೆ, ೫ ನೆಯದು ೪ ಆಣೆ, ಮಕ್ಕಳ ಭೂವಿವರಣೆ ೨ಆಣೆ, ಎಷ್ಯಾಭೂವಿವರಣೆ ೬ ಆಣೆ. ೧೦ಕ್ಕೆ ೧ಪ್ರತಿ ಹೆಚ್ಚು ಇಂಗ್ಲೀಷ್ ಕನ್ನಡ ಸ್ಕೂಲ್ ಪುಸ್ತಕಗಳೆಲ್ಲವೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್ ಸನ್ಸ್
5 ವಿದ್ಯಾನಿಧಿ ಬುಕ್‌ಡಿಪೋ ಮೈಸೂರು.

೧೯೧೭ ನೆಯ ಇಸವಿ ಜುಲೈ ತಾ|| ೧ ರಿಂದ ೧೯೧೭ ನೆಯ ಜುಲೈ ತಾ|| ೭ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಷಾಢ ಶು|| ಏಕಾದಶಿಯಿಂದ ಆಷಾಢ ಬ|| ಷಡಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿತೇದಿ
1	[1] ಭಾನು	ಏಕಾದ	4-3	ವಿಶಾಖ	29-35	18
2	[2] ಸೋಮ	ದ್ವಾದಶಿ	2-52	ಅನೂ	29-44	19
3	[3] ಮಂಗಳ	ತ್ರಯೋ	0-32	ಜ್ಯೇಷ್ಠ	57-33	20
4	[4] ಬುಧ	ಪೌರ್ಣ	53-17	ಮೂಲ	26-43	21
5	[5] ಗುರು	ಪಾಡ್ಯ	48-0	ಪೂಷಾ	23-55	22
6	[6] ಶುಕ್ರ	ಬಿದಿಗೆ	42-15	ಉಷಾ	20-30	23
7	ಶನಿ	ತದಿಗೆ	36-8	ಶ್ರವಣ	16-30	24

(1) ಸರ್ವತ್ರ ಪ್ರಥಮೈಕಾದಶೀ ಗೋಪದ್ಮವ್ರತಂ ಚಾತುರ್ಮಾಸ್ಯವ್ರತಾರಂಭಃ. (2) ಸೋಮಪ್ರದೋಷಃ ಜಯಸದ್ವಾದಶಿ ಶಾಕವ್ರತಾರಂಭಃ. (3) ಶ್ರೀರಂಗದಲ್ಲಿ ಜ್ಯೇಷ್ಠಾಭಿಷೇಕಃ. (4) ಚಂದ್ರಗ್ರಹಣಂ, ವ್ಯಾಸಪೂಜೆ. (5) ಶ್ರೀನಿವಾಸಪ್ಪಂಪ ಪರಕಾಲಸ್ವಾಮಿ ತಿರುನಕ್ಷತ್ರಂ. (6) ವೇಲುಕೋಟೆಯಲ್ಲಿ ಮಹಾಭಿಷೇಕಃ ಮತ್ತು ಕಲ್ಯಾಣೋತ್ಸವಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗಶರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಪ್ರತ್ಯಕ್ಷಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೇಲಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಜುಲೈ ತಾರೀಖು ೮ ನೆಯ ಭಾನುವಾರ. (ಸಂಚಿಕೆ ೨೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ —ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿ ಗುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ —ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

(ಗುಣವಾಗದಿದ್ದರೆ ಹಣ ಪರತ.) 50

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬೆಕ್ಕೆಗಳು, ಹುಣ್ಣುಗಳು, ಪಿತ್ಥವ ಬಾಧೆಗಳು, ಕಟಿಶೂಲೆ, ವಾತರೋಗವು, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗಿರುವುವು. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲ್ ಖರ್ಚು ಬೇರೆ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ತಿರ್ಥ ಉತ್ತರಕನಡಾ ಡಿ||.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

36 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಪಶುಜೀವನ ಚೂರ್ಣ.

ದನಗಳಿಗಾಗುವ ಮಹಾಮಾರಿ ಕುಂದುಬಾಯಿ ಬೇನೆ ಈ ಪ್ರತಿಯೊಂದು ರೋಗದಮೇಲೆ ಅನುಪಾನಪರತ್ವದಿಂದ ಅತ್ಯಂತ ಗುಣಕಾರಿಯಾಗಿರುವುದು. ೧೦ ತೊಲೆಯ ಡಬ್ಬಿ ೧ ಕ್ಕೆ ೧೨ ಆಣೆ.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು. ಅಂಚೆ ವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 32

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯುಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹಾತುನಾಶಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಫ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಅವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀ ಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೊಂಕುರೋಗಗಳಿಂದಲಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರಗಳಿಗೆ ರಾಮಬಾಣೌಷಧವು. ಸರ್ವರಿಗೂ ಕೆಮ್ಮು, ನೆಗಡಿ, ಮಲಬಂಧ, ವರಸೆಜ್ವರ, ಶೀತವಾಯು, ಹಲ್ಲುನೋವು, ಆಲಸ್ಯಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟಿ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅದ್ಭುತಗುಣಗಳಿಂದ ಕೂಡಿದ್ದು) ೩೦ ದಿನಕ್ಕೆ ಆಗುವ ಪೊಟ್ಟಣ ೧ ಆಣೆ. ನಾರಿಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಆಮೋದಿನಿ (ಸುಖಶ್ಯ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜೆಂಟರುಬೇಕು. ಹೆಚ್ಚು ಔಷದ ತರಿಸಿದರೆ ಹೆಚ್ಚು ರಿಯಾಯತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
8 ಸದ್ವೈದ್ಯಶಾಲಾ ನಂಜನಗೂಡು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಶರವಾದಿ ಗಜಾಂಕುಶತಾರಾ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜುಲೈ ತಾ|| ೮ ನೆಯ ಭಾನುವಾರ.

ದಿವಂಗತ ಡಾ|| ದಾದಾಭಾಯಿ ನೌರೋಜಿಯವರು.

ತಮ್ಮ ಅತುಲಿತವಾದ ಚಿರಕಾಲ ದೇಶಸೇವೆಯಿಂದ ಭಾರತೀಯರೆಲ್ಲರಿಂದಲೂ ವೃದ್ಧಪಿತಾಮಹನೆಂದು ಹೇಳಿಸಿಕೊಂಡು ಭಾರತ ದೇಶಹಿತ ಕಾಂಕ್ಷಿಗಳೆಲ್ಲರಿಗೂ ತಮ್ಮ ಪವಿತ್ರ ಚರಿತ್ರವನ್ನು ಆದರ್ಶವಾಗಿಟ್ಟಿದ್ದ ದಾದಾಭಾಯಿ ನೌರೋಜಿ ಮಹಾಶಯರು ಕಳೆದ ಜೂನ್ ತಿಂಗಳ ಕೊನೆಯ ದಿನದಲ್ಲಿ ಆ ವಾರದ ಕೊನೆಯ ದಿವಸದಲ್ಲಿ ಆ ಹಗಲಿನ ಕೊನೆಯ ಗಂಟೆಯಲ್ಲಿ ಜಗಚ್ಚಕ್ಷುವು ಕಣ್ಮರೆಯಾಗುವ ಪೂರ್ವಕ್ಷಣದಲ್ಲಿ ಭಾರತಭಾನುವು ಅಸ್ತಂಗತನಾಗುವಂತೆ ಇಹಲೋಕ ಯಾತ್ರೆಯನ್ನು ಮುಗಿಸಿಕೊಂಡು ದಿವಂಗತರಾದರೆಂಬ ಸುದ್ದಿಯನ್ನು ಬರೆಯುವುದಕ್ಕೆ ಅತಿಶಯವಾಗಿ ವಿಷಾದಿಸುತ್ತೇವೆ. ಈ ಮಹನೀಯರು ಕಳೆದ ೧ ತಿಂಗಳಿಂದಲೂ ತಮ್ಮ ಸಂಪೂರ್ಣವಾರ್ಧಕಾವಸ್ಥೆಗನುಗುಣವಾದ ನೀರಸಸ್ಥಿತಿಯಲ್ಲಿದ್ದುದರಿಂದ ವಾರ್ಸೋವಾ ಗ್ರಾಮದಿಂದ ಬೊಂಬಾಯಿಗೆ ಕರೆತರಲ್ಪಟ್ಟು ಪ್ರಸಿದ್ಧರಾದ ವೈದ್ಯರ ಚಿಕಿತ್ಸಾಸಹಾಯವನ್ನು ಪಡೆಯುತ್ತಿದ್ದರು. ಆದರೂ ದಿನದಿನಕ್ಕೆ ಅವರ ಪ್ರಕೃತಿಯು ಕೆಡುತ್ತ ಬಂದು, ಈಸಲ ಅವರುಳಿಯುವ ಸಂಭವವಿಲ್ಲವೆಂಬ ನಿರಾಶೆಯನ್ನು ಹುಟ್ಟಿಸಿದ್ದಿತು. ಕಡೆಗೂ ಅಂತ್ಯವು ಸಂಭವಿಸಿತು. ಆ ರಾತ್ರಿಯೇ ಎಲ್ಲಕಡೆಗೂ ಅವರ ಮೃತ್ಯುವಾರ್ತೆಯು ಹರಡಿತು. ಮರುದಿನ ಸಾಯಂಕಾಲಕ್ಕೆ ಅವರ ಅಪರಸಂಸ್ಕಾರವು ನಡೆಯಿತು. ಸ್ಮಶಾನಭೂಮಿಯವರೆಗೆ ಆ ಪುರದ ಪ್ರಮುಖ ಜನರೂ ಸಾಮಾನ್ಯಜನರೂ ಸೇರಿ ಬಹುಶಃ ೨೫ ಸಾವಿರ ಮಂದಿಯವರೆಗೆ ಹೋಗಿದ್ದರು. ಸರ್ ಫೆರೋಜ್‌ಷಾ ಮೇಥಾರವರ ಅಪರಕರ್ಮಕಾಲಕ್ಕೆ ಸೇರಿದ್ದ ಜನಸ್ತೋಮಕ್ಕಿಂತಲೂ ಈಗ ವಿಶೇಷವಾಗಿ ಸೇರಿದ್ದಿತು. ಪುಣೆಯಿಂದ ಮ|| ಬಾಲಗಂಗಾಧರತಿಲಕರೂ ಕೂಡ ಅಗ್ಗೆ ಹೋಗಿದ್ದರು.

ಈ ಮಹನೀಯರು ಭರತಖಂಡದ ಅಭ್ಯುದಯಕ್ಕಾಗಿ ಮಾಡಿದ ಸೇವೆಯ ಮಹತ್ತ್ವವನ್ನೂ ಅವರ ಚರಿತ್ರ ವಿಶೇಷವನ್ನೂ ಅರಿಯದ ವಿದ್ಯಾವಂತರು ಭರತಖಂಡದಲ್ಲಿ ವಿರಳರೆಂದೇ ಹೇಳಬಹುದು. ಇವರ ಚರಿತ್ರವು ಇವರ ಜೀವಿತಕಾಲದಲ್ಲೇ ಅನೇಕ ಭಾಷೆಗಳಲ್ಲಿ ಬರೆಯಲ್ಪಟ್ಟಿರುವುದರಿಂದಲೇ ಇವರ ಜೀವಿತ ಪಾವಿತ್ರ್ಯವು ವ್ಯಕ್ತವಾಗಿರುವುದು. ಇವರು ೧೮೨೫ ನೆಯ ವರ್ಷದಲ್ಲಿ ಬೊಂಬಾಯಿ ಪಟ್ಟಣದಲ್ಲಿ ಜನಿಸಿದವರಾದುದರಿಂದ ಅಂತ್ಯಕಾಲದಲ್ಲಿ ಇವರಿಗೆ ೯೨ ವರ್ಷ ವಯಸ್ಸು. ಇವರ ತಾಯ್ತಂದೆಗಳೀರ್ವರೂ ಪಾರ್ಸಿ ಮತಗುರು ವಂಶೋದ್ಭವರು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ಮಾತೃವಿನ ಕರ್ತವ್ಯಜಾಗರೂಕತೆಯಿಂದ ಪ್ರವರ್ಧಮಾನರಾದ ಸೋದರಮಲ್ಲನೇ ಮೊದಲಾದ ಅನೇಕ ಪ್ರಸಿದ್ಧ ಮಹನೀಯರ ಕೋಟಿಗೆ ಈ ನಮ್ಮ ಪಿತಾಮಹರೂ ಸೇರಿದವರು. ಇವರ ೪ ನೆಯ ವಯಸ್ಸಿನಲ್ಲೇ ಇವರ ತಂದೆಯವರು ಪರಲೋಕವಾಸಿಗಳಾದರು. ತಾಯಿಯು ಹಾಕಿಕೊಟ್ಟ ಉತ್ತಮವಾದ ದಾರಿಯಲ್ಲಿ ಇವರು ಬಾಲ್ಯದಿಂದಲೂ ನಡೆದು ಬೊಂಬಾಯಿಯ ಎಲ್ಫಿನ್‌ಸ್ಟನ್ ಪಾಠಶಾಲೆಯಲ್ಲೂ ಕಲಾಶಾಲೆಯಲ್ಲೂ ಅಭ್ಯಾಸಮಾಡಿ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿ, ಕಡೆಗೆ ತಮ್ಮ ೨೫ ನೆಯ ವಯಸ್ಸಿನಲ್ಲಿ ತಾವು ಓದಿದ ಕಲಾಶಾಲೆಯಲ್ಲೇ ಗಣಿತಶಾಸ್ತ್ರಸಹಾಯೋಪಾಧ್ಯಾಯತ್ವವನ್ನು ವಹಿಸಿ, ಸ್ವಲ್ಪ ಕಾಲದೊಳಗೆ ಅಲ್ಲಿಯ ಮುಖ್ಯೋಪಾಧ್ಯಾಯರೂ ಆದರು. ಈ ಸಮಯದಲ್ಲೇ ಇವರು ದೇಶಸೇವಾಕಾರ್ಯದಲ್ಲಿ ತೊಡಗಿ ಒಂದೆರಡು ಪ್ರತಿಷ್ಠಾಪನೆಗಳನ್ನು ಮಾಡಿದರು. ಪಾರ್ಸಿ ಮರಾಟಿ ಜಾತಿಯ ಬಾಲಿಕೆಯರಿಗೆ ವಿದ್ಯಾಭ್ಯಾಸಮಾಡಿಸುವ ಪಾಠಶಾಲೆಯನ್ನು ಬೊಂಬಾಯಿಯಲ್ಲಿ ಮೊಟ್ಟಮೊದಲು ಸ್ಥಾಪಿಸಿದವರೇ ಇವರು. ಅದುಕಾರಣ ಇವರು ಸ್ತ್ರೀವಿದ್ಯಾಸ್ಥಾಪನಾಚಾರ್ಯರೆಂದು ಹೇಳಿಸಿಕೊಳ್ಳಲು ಅರ್ಹರಾದರು. ಕಟ್ಟಕಡೆಯವರೆಗೂ ಸ್ತ್ರೀ ವಿದ್ಯಾವ್ಯಾಪನೆಯ ವಿಷಯದಲ್ಲಿ ಇವರಿಗೆ ಅತಿಶಯವಾದ ಅಭಿಮಾನವಿದ್ದಿತು. ಅಲ್ಲದೆ ಅದೇ ಕಾಲದಲ್ಲಿ ಇವರು ವಿದ್ಯಾರ್ಥಿ ಸಮ್ಮೇಳನ ಸಂಘವೊಂದನ್ನು ಸ್ಥಾಪಿಸಿದರು. ಸತ್ಯವಾದಿಯೆಂಬ ಅರ್ಥ ಕೊಡುವ ಗುಜರಾತಿ ವೃತ್ತಪತ್ರಿಕೆಯೊಂದನ್ನು ಆರಂಭಿಸಿ ಸಾಮರ್ಥ್ಯದಿಂದ ನಡೆಯಿಸಲುಪಕ್ರಮಿಸಿದರು. ಅನಂತರ ಸ್ವಲ್ಪ ಕಾಲದಮೇಲೆ ಉಪಾಧ್ಯಾಯ ವೃತ್ತಿಯನ್ನು ಬಿಟ್ಟು, ಒಂದು ವರ್ತಕ ಸಂಘದ ಮ್ಯಾನೇಜರ್ ಕೆಲಸವನ್ನು ವಹಿಸಿ ಇಂಗ್ಲೆಂಡಿಗೆ ಪ್ರಯಾಣಮಾಡಿದರು. ಆಗ ಇವರಿಗೆ ೩೧ ವಯಸ್ಸು. ಇವರು ಸೀಮೆಗೆ ವ್ಯಾಪಾರವ್ಯಾಜದಿಂದ ಹೋದರೂ ಭರತಖಂಡದ ಕ್ಷೇಮವನ್ನು ಕೋರಿ ತಪಸ್ಸನ್ನಾಚರಿಸುವುದೇ ಇವರ ಪ್ರಧಾನಕರ್ಮವಾಗಿದ್ದಿತು. ಅಲ್ಲಿಗೆ ಇವರು ಹೋದಕೂಡಲೇ ಐ. ಸಿ. ಎಸ್., ಪರೀಕ್ಷೆಯಲ್ಲಿ ಭಾರತೀಯರನ್ನೂ ಸೇರಿಸಿಕೊಳ್ಳುವಂತೆ ಮಾಡುವುದರಲ್ಲೂ, ಸೀಮೆಯಲ್ಲೂ ಭರತಖಂಡದಲ್ಲೂ ಏಕಕಾಲದಲ್ಲಿ ಆ ಪರೀಕ್ಷೆಯನ್ನು ನಡೆಯಿಸುವಂತೆ ಮಾಡುವುದರಲ್ಲೂ ಬಹಳ ಪರಿಶ್ರಮಮಾಡಿದರು. ಅವುಗಳಲ್ಲಿ ಒಂದು ಸಿದ್ಧಿಸಿತು ಮತ್ತೊಂದು ಸಿದ್ಧಿಸಲಿಲ್ಲ. ಅಲ್ಲಿ ಇಂಡ್ಯಾ ಸಂಘವೆಂಬುದೊಂದನ್ನು ಸ್ಥಾಪಿಸಿದರು. ಅದು ಈಗಲೂ ಭರತಖಂಡದ ಹಿತಾರ್ಥವಾಗಿ ಕೆಲಸಮಾಡುತ್ತಿದೆ. ಬಳಿಕ "ಈಸ್ಟಿಂಡಿಯಾ" ಎಂಬ ಮತ್ತೊಂದು ಸಂಘವನ್ನು ಅಲ್ಲಿ ಸ್ಥಾಪಿಸಿದರು. ಮತ್ತೂ ಲಂಡನ್ ಪಟ್ಟಣದ ಕಲಾಶಾಲೆಯಲ್ಲಿ ಗುಜರಾತಿಯ ಪ್ರೊಫೆಸರರಾಗಿ ಕೆಲಕಾಲ ಕೆಲಸಮಾಡಿದರು. ಸೀಮೆಯ ಕಲಾಶಾಲೆಯಲ್ಲಿ ಉಪಾಧ್ಯಾಯವೃತ್ತಿಯನ್ನು ಪಡೆದ ಭಾರತೀಯರಲ್ಲಿ ಇವರೇ ಮೊದಲನೆಯವರು. ಲಂಡನ್ನಿನಲ್ಲಿ ಇವರು ಇರುವಾಗ ಭರತಖಂಡದ ನಿಜಸ್ಥಿತಿಯನ್ನು ಆಂಗ್ಲಮಹಾಜನರ ಗಮನಕ್ಕೆ ಬರುವಂತೆ ಮಾಡಲು ಅನೇಕವಿಧವಾಗಿ ಪ್ರಯತ್ನಿಸಿದರು. ಅಲ್ಲಿಂದ ಇವರು ಭರತಖಂಡಕ್ಕೆ ೧೮೭೪ ನೆ ವರ್ಷದಲ್ಲಿ ಬಂದಾಗ್ಗೆ ಬರೋಡಾ ಸಂಸ್ಥಾನದ ದಿವಾನಗಿರಿಯನ್ನು ವಹಿಸಿ ೨ ವರ್ಷಕಾಲ ಉತ್ತಮತರವಾಗಿ ನೆರವೇರಿಸಿದರು. ಅನಂತರ ಬೊಂಬಾಯಿಯ ಮ್ಯುನಿಸಿಪಾಲಿಟಿಯಲ್ಲೂ ಬೊಂಬಾಯಿ ನಿಯಮನಿರ್ಮಾಣ ಸಭೆಯಲ್ಲೂ ಸಭಿಕರಾಗಿದ್ದು ಶ್ಲಾಘನೀಯವಾಗಿ ದೇಶಸೇವೆ ಮಾಡಿದರು. ಅನಂತರ ಕೆಲ ಕಾಲದಮೇಲೆ ಮರಳಿ ಇವರು ಸೀಮೆಗೆ ಹೋಗಿ ಪಾರ್ಲಿಮೆಂಟಿನ ಸಭಿಕರಾಗುವುದಕ್ಕೆ ಪ್ರಯತ್ನಿಸಿ ವಿಫಲರಾದರು. ೨ ನೆಯ ಸಲ ೧೮೯೨ ನೆ ವರ್ಷದಲ್ಲಿ ಸೆಂಟರಲ್ ಫಿನ್ಸ್‌ಬರಿಜಿಲ್ಲೆಯ ಪ್ರಜೆಗಳಿಂದ ಆರಿಸಲ್ಪಟ್ಟು ಅವರ ಪ್ರತಿನಿಧಿಯಾಗಿ ಪಾರ್ಲಿಮೆಂಟಿನ ಮೆಂಬರಾದರು. ಪಾರ್ಲಿಮೆಂಟಿನಲ್ಲಿ ಭಾರತೀಯ ಸಭಿಕರಾಗಿ ಮೊಟ್ಟಮೊದಲು ಪ್ರವೇಶಮಾಡಿ ದಾರಿಹಾಕಿಕೊಟ್ಟ ಯಶಸ್ಸು ಈ ಮಹನೀಯರಿಗೇ ಸೇರಿದುದು. ಪರದೇಶದಲ್ಲಿ ಪರಜನಾಂಗದವರ ಮನ್ನಣೆಗೂ ನಂಬುಗೆಗೂ ಪಾತ್ರರಾಗಿ ಅವರ ಮತ "ಓಟು" ಗಳನ್ನು ಸಂಪಾದಿಸಿ, ಪಾರ್ಲಿಮೆಂಟಿನ ಸಭಿಕರಾಗಿ ಏರ್ಪಡುವುದೆಂದರೆ ಸಾಮಾನ್ಯವಾದ ಕೆಲಸವೆ? ಅದನ್ನು ಇವರು ಹೊಸದಾಗಿ ಸಾಧಿಸಬೇಕಾಗಿದ್ದರೆ ಎಷ್ಟು ಪ್ರಯತ್ನಗಳನ್ನು ನಡೆಯಿಸಿರಬಹುದು! ಬಳಿಕ ಇವರು ಪಾರ್ಲಿಮೆಂಟಿನಲ್ಲಿ ಭರತಖಂಡದ ಹಿತಾರ್ಥವಾಗಿ ನಡೆಯಿಸಿದ ಕಾರ್ಯಭಾಗಗಳನ್ನೂ ಸಾಹಸಗಳನ್ನೂ ಇದುವರೆಗೂ ಇನ್ನಾವ ಭಾರತೀಯನೂ ಮಾಡಿರುವುದಿಲ್ಲ. ಪಾರ್ಲಿಮೆಂಟಿನಲ್ಲಿ ಇವರು ಮೊಟ್ಟಮೊದಲು ಮಾಡಿದ ಉಪನ್ಯಾಸವು ಅಲ್ಲಿಯ ಸಭಿಕರನ್ನೆಲ್ಲಾ ಆಶ್ಚರ್ಯಸಮುದ್ರದಲ್ಲಿ ಮುಳುಗಿಸುವಂತೆ ಮಾಡಿತು. ಇವರು ಭರತಖಂಡದ ಆರ್ಥಿಕಸ್ಥಿತಿಯನ್ನೂ ರಾಜ್ಯಕಾರ್ಯಭಾರರೀತಿಯ ಗುಣಾವಗುಣವನ್ನೂ ವಿಮರ್ಶಿಸತಕ್ಕ ಒಂದೆರಡು ಗ್ರಂಥಗಳನ್ನೂ ಬರೆದಿರುವರು. ಪತ್ರಿಕೆಗಳಲ್ಲಿ ಅನಂತಾನಂತವಾದ ಲೇಖನಗಳನ್ನು ಪ್ರಕಟಿಸಿರುವರು. ವೆಲ್ಬಿಕಮಿಷನ್ನಿನ ಉತ್ಪಾದನಕ್ಕೆ ಇವರೇ ಕಾರಣಭೂತರಾಗಿ ಅದರಮುಂದೆ ತಾವೇ ಸಾಕ್ಷ್ಯವನ್ನು ಕೊಟ್ಟು ಭರತಖಂಡದ ಕಷ್ಟಸುಖಗಳನ್ನೆಲ್ಲಾ ವಿಮರ್ಶಿಸಿದರು. ಭರತಖಂಡದ ರಾಷ್ಟ್ರೀಯಮಹಾಸಭೆಯನ್ನು ಬಾಲ್ಯಾರಭ್ಯ ಹಾಲೂಡಿ ವೃದ್ಧಿಗೆ ತಂದ ಮಹಾಶಯರಲ್ಲಿ ಇವರೊಬ್ಬ ಪ್ರಮುಖರು. ೩ ಸಲ ಆ ಸಭೆಯ ಅಧ್ಯಕ್ಷತೆಯ ಬಹುಮಾನವು ಭಾರತೀಯರಿಂದ ಇವರಿಗೆ ಕೊಡಲ್ಪಟ್ಟಿದ್ದಿತು. ಇನ್ನಾರಿಗೂ ಇದು ಹೀಗೆ ಲಭಿಸಿರುವುದಿಲ್ಲ. ವಂಗವಿಭಂಗವಾಗಿದ್ದ ಸಮಯದಲ್ಲಿ ೧೯೦೬ ನೆ ವರ್ಷದಲ್ಲಿ ಕಲ್ಕತ್ತಾದಲ್ಲಿ ಕೂಡಿದ್ದ ರಾಷ್ಟ್ರೀಯ ಸಭೆಯ ಅಧ್ಯಕ್ಷತೆಯನ್ನು ವಹಿಸುವುದಕ್ಕಾಗಿ ಇವರು ಸೀಮೆಯಿಂದ ಬಂದಾಗ ಬೊಂಬಾಯಿಯಲ್ಲೂ ಕಲ್ಕತ್ತಾದಲ್ಲೂ ದಾರಿಯುದ್ದಕ್ಕೂ ಇವರಿಗೆ ಪ್ರಜೆಗಳಿಂದ ತೋರಿಸಲ್ಪಟ್ಟ ಮರ್ಯಾದೆಯು ಅಭೂತಪೂರ್ವವಾಗಿದ್ದಿತು. ಆ ಸಭೆಯಲ್ಲಿ ಉಗ್ರಪಕ್ಷ ಸೌಮ್ಯಪಕ್ಷದ ಮುಂದಾಳುಗಳೆಲ್ಲಾ ನೆರೆದಿದ್ದರು. ಸಕ್ರಮವಾದ ಸ್ವರಾಜ್ಯವನ್ನು ಸಾಧಿಸುವುದೇ ಭಾರತೀಯರ ಆದರ್ಶವಾಗಿರಬೇಕೆಂದು ಆಗ ಇವರು ಸಾರಿ ನುಡಿದರು. ಅಲ್ಲಿಂದೀಚೆಗೆ ಇವರು ಸೀಮೆಗೆ ಹೋಗಲಿಲ್ಲ. ಭೀಷ್ಮನು ಶಸ್ತ್ರಸನ್ಯಾಸವನ್ನು ಮಾಡಿದಂತೆ ಇವರು ರಾಜಕೀಯ ರಂಗದಿಂದ ತಮ್ಮ ಹಜ್ಜೆಯನ್ನು ಉಪಸಂಹರಿಸಿ, ಬೊಂಬಾಯಿಗೆ ಸಮೀಪದಲ್ಲಿರುವ ವಾರ್ಸೋವಾ ಗ್ರಾಮದಲ್ಲಿ ಏಕಾಂತವಾಗಿ ಕಾಲಕಳೆಯುತ್ತ, ಅಲ್ಲೂ ಭಾರತ ಶ್ರೇಯಶ್ಚಿಂತನೆಯನ್ನು ಮಾಡುತ್ತ, ವರ್ಷೇವರ್ಷೆ ತಮ್ಮ ವರ್ಧಂತ್ಯುತ್ಸವವನ್ನು ನಡೆಯಿಸುತ್ತಿದ್ದ ಭಾರತೀಯರಿಗೆ ಮಾರ್ಗದರ್ಶಕವಾದ ಹಿತಬೋಧೆಗಳನ್ನು ಪ್ರಕಟಿಸುತ್ತಲಿದ್ದರು. ಇವರು ಭರತಖಂಡದ ಎಲ್ಲ ಪಕ್ಷದ ಎಲ್ಲ ವರ್ಗದವರ ಗೌರವಕ್ಕೂ ಸಮನಾಗಿ ಪಾತ್ರರಾಗಿದ್ದರು. ಭಾರತೀಯ ದೇಶಾಭಿಮಾನಿಗಳೆಲ್ಲಾ ಇವರನ್ನು ರಾಜಕೀಯ ವಿದ್ಯಾಗುರುಗಳನ್ನಾಗಿ ತಿಳಿದಿದ್ದರು. ಅಲ್ಲದೆ ಮತಿವಂತರಾದ ಆಂಗ್ಲಮಹಾಜನರ ಮನ್ನಣೆಗೂ ಹಾಗೆಯೇ ಪಾತ್ರರಾಗಿದ್ದರು. ಪ್ರತಿಯೊಬ್ಬ ಬೊಂಬಾಯಿ ಗೌರ್ನರೂ ಆಗಾಗ್ಗೆ ಇವರ ಮನೆಗೇ ಹೋಗಿ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುತ್ತಿದ್ದರು. ವೈಸ್ರಾಯಿ ಲಾರ್ಡ್‌ಹಾರ್ಡಿಂಜ್‌ರವರು ಕೂಡ ಒಂದುಸಲ ಇವರ ನಿಲಯಕ್ಕೆ ಹೋಗಿ ದರ್ಶನಕೊಟ್ಟು ಸಂಭಾಷಿಸಿಕೊಂಡು ಬಂದಿದ್ದರು. ಬೊಂಬಾಯಿ ವಿಶ್ವವಿದ್ಯಾಲಯದವರು ಇವರಿಗೆ ಅತ್ಯುಚ್ಚವಾದ ಎಲ್. ಎಲ್. ಡಿ. ಪ್ರಶಸ್ತಿಯನ್ನು ಕೊಟ್ಟು ಮರ್ಯಾದಿಸಿದ್ದರು. ಹೀಗೆ ವಯಸ್ಸಿನಲ್ಲೂ ಜ್ಞಾನದಲ್ಲೂ ಗೌರವದಲ್ಲೂ ದೇಶಸೇವೆಯಲ್ಲೂ ಅತ್ಯುಚ್ಚಪದವಿಯನ್ನು ಪಡೆದು ಭರತಖಂಡದ ಅಭ್ಯುದಯಸಾಧನೆಗಾಗಿ ಬಂದಿದ್ದ ಒಂದು ದೈವಾವತಾರದಂತಿದ್ದ ಈ ವೃದ್ಧಮಹರ್ಷಿಗಳ ವಿಯೋಗವು ಯಾವ ಭಾರತೀಯನಿಗೆತಾನೇ ವ್ಯಸನವನ್ನುಂಟುಮಾಡದಿರುವುದು? ಭಾರತೀಯರ ವಿಷಯವು ಹಾಗಿರಲಿ. ಲಂಡನ್ನಿನ ಎಲ್ಲ ವೃತ್ತಪತ್ರಿಕೆಗಳೂ ಇವರ ಮೃತಿಯಿಂದ ತಮಗಾದ ದುಃಖವನ್ನು ಪ್ರದರ್ಶಿಸಿರುವುವು. ಹೀಗೆ ಪ್ರಪಂಚವೇ ದುಃಖಪಡುತ್ತಿರುವಾಗ ಅವರ ಸ್ವಮತಸ್ಥರಿಗೂ, ಸ್ವಪುತ್ರೀಪೌತ್ರಾದಿ ಬಾಂಧವವರ್ಗದವರಿಗೂ ಎಷ್ಟು ದುಃಖಾತಿರೇಕವುಂಟಾಗಿರಬಹುದು! ಪಾರ್ಸಿ ಜನರೆಲ್ಲರೂ ಇವರನ್ನು ಪುರಾತನ ಋಷಿಗಣಪಜ್ಜುಗೆ ಸೇರಿಸಿ, ಪ್ರಾರ್ಥನೆಮಾಡಲು ಏರ್ಪಡಿಸಿಕೊಂಡಿರುವರಂತೆ! ಭಾರತೀಯರೆಲ್ಲರಿಗೂ ಇವರು ಪೂಜ್ಯರೇ ಸರಿ. ಹುಟ್ಟಿದ ಪ್ರಾಣಿಗೆ ಮರಣವು ಎಂದಾದರೊಂದುದಿನ ಸಿದ್ಧವು. ಇವರು ಗೋಪಾಲಕೃಷ್ಣ ಗೋಖಲೆ ಮೊದಲಾದವರಂತೆ ಅಕಾಲದಲ್ಲೇನೂ ದೈವಾಧೀನರಾಗಲಿಲ್ಲ. ಈ ಮಹನೀಯರು ಪೂರ್ಣವಯಸ್ಸಿನವರೆಗೆ ಬಾಳಿದರು. ಪುರುಷಜನ್ಮದ ಪುರುಷಾರ್ಥದಲ್ಲಿ ಉತ್ತಮಭಾಗವಾದ ದೇಶಸೇವಾರೂಪ ತಪಸ್ಸನ್ನಾಚರಿಸಿ ತಮ್ಮ ಜನ್ಮವನ್ನು ಧನ್ಯವನ್ನಾಗಿ ಮಾಡಿಕೊಂಡು ಅಜರಾಮರವಾದ ಯಶಃಕಾಯವನ್ನು ಭೂತಲದಲ್ಲಿಟ್ಟು, ನಶ್ವರವಾದ ಭೌತಿಕಕಾಯವನ್ನಿಳಿದರು. ಅವರಲ್ಲಿದ್ದ ಶಮದಮಾದಿ ಸಾದ್ಗುಣ್ಯಗಳೂ, ಅಚಲವಾದ ಕಾರ್ಯತತ್ಪರತೆಯೂ, ನಿಶಿತವಾದ ದೇಶಭಕ್ತಿಯೂ, ಸರ್ವಧರ್ಮಸಾಧಕ ದೇಹಾರೋಗ್ಯ ರಕ್ಷಣ ಚತುರತೆಯೂ ನಮ್ಮ ವರ್ಧಿಷ್ಣುಗಳಾದ ದೇಶಪುತ್ರರಲ್ಲೆಲ್ಲಾ ಅಂಶಾಂಶರೂಪವಾಗಿಯಾದರೂ ಪ್ರತಿಫಲಿಸುತ್ತ ಬಂದರೆ ಆ ವೃದ್ಧಪಿತಾಮಹರು ನಮಗಾಗಿ ಮಾಡಿದ ಉಪಕಾರಕ್ಕೆ ಯತ್ಕಿಂಚಿತ್ ಕೃತಜ್ಞತೆಯನ್ನಾದರೂ ನಾವು ಅರ್ಪಿಸಿದಂತಾಗುವುದು. ಭರತಖಂಡದಲ್ಲಿ ಈ ವೃದ್ಧಪಿತಾಮಹರನ್ನು ವಿದ್ಯೆಯಲ್ಲೂ ಮೇಧಾವಿತೆಯಲ್ಲೂ ಮಿಂಚಿಸಿದವರು ಎಷ್ಟೋ ಮಂದಿಗಳಿರಬಹುದು. ಆದರೆ ಅವರಂತೆ ಬಿಗಿಪಟ್ಟಿನಿಂದಲೂ ಸಹನೆಯಿಂದಲೂ ಅಪ್ರಮತ್ತತೆಯಿಂದಲೂ ದೂರಾಲೋಚನೆಯಿಂದಲೂ ದೇಶಸೇವೆಯನ್ನು ಚಿರಕಾಲ ನಡೆಯಿಸಿದವರು ಮತ್ತೊಬ್ಬರಿಲ್ಲ. ಭಾರತಮಾತೆಯ ದುರದೃಷ್ಟದಿಂದ ಒಂದೆರಡು ವರ್ಷಗಳಿಂದೀಚೆಗೆ ಇಂಥ ಪುಣ್ಯಶರೀರಿಗಳಲ್ಲಿ ಪ್ರಮುಖರಾದವರನ್ನೇ ಕಳೆದುಕೊಂಡು ತುಂಬಬಾರದ ನಷ್ಟವನ್ನನುಭವಿಸುವ ದುರ್ಯೋಗವು ನಮಗೆ ಪ್ರಾಪ್ತವಾಯಿತು! ಈ ಶೋಕೆಪ್ಪಿಗೆ ಪ್ರತಿಯಿಲ್ಲ.

ಒಳದೇಶದ ವೃತ್ತಾಂತಗಳು.

ನೀಲಗಿರಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಕಳೆದ ಗುರುವಾರ ಮರಳಿ ರಾಜಧಾನಿಗೆ ದಯಮಾಡಿಸಿದರು.

ರಾಜಧಾನಿಯಲ್ಲಿ ಮಳೆಯ ಲಕ್ಷಣವೇ ಇಲ್ಲ. ರೈತರು ತತ್ತರಿಸುತ್ತಲಿದ್ದಾರೆ. ವಾಂತಿಭೇದಿ ರೋಗವು ಬೇರುಬಿಟ್ಟುಕೊಂಡು ಎಲ್ಲ ಮೊಹಲ್ಲೆಗಳಲ್ಲೂ ಆಹುತಿ ತೆಗೆದುಕೊಳ್ಳುತ್ತಿದೆ.

ಕಳೆದ ಜೂನ್ ತಿಂಗಳ ಧರ್ಮತರಂಗಿಣೀ ಪತ್ರಿಕೆಯಲ್ಲಿ "ಶಿವಶರಣರ ವಚನಗಳು" ಎಂಬ ತಲೆಬರೆಹದಿಂದ ಒಂದು ಪ್ರಶಸ್ತವಾದ ಲೇಖನವು ಪ್ರಕಟಿತವಾಗಿದೆ. ಇದು ಪಠನಯೋಗ್ಯವಾಗಿದೆ.

ಇದೇ ಜುಲೈ ತಿಂಗಳು ತಾ|| ೧ ರಿಂದ ನಮ್ಮ ಸಂಸ್ಥಾನದಲ್ಲಿ ಹೊಸದಾಗಿ ೧೭೦ ಸ್ಥಲಗಳಲ್ಲಿ ಬಾಲಪಾಠಶಾಲೆಗಳು ಸ್ಥಾಪಿಸಲ್ಪಡುವುದರಲ್ಲಿವೆ. ಅಲ್ಲೆಲ್ಲಾ ನಿರ್ಬಂಧ ಪ್ರಾಥಮಿಕ ವಿದ್ಯಾಭ್ಯಾಸಕ್ರಮವನ್ನು ವ್ಯವಹಾರಕ್ಕೆ ತರುವರು.

ದಿವಾನ್ ಬಹದ್ದೂರ್ ಜ್ಞಾನಶರಣ ಚಕ್ರವರ್ತಿಯವರು ಸಂಸ್ಥಾನದ ಫೈನಾನ್ಷಿಯಲ್ ಸೆಕ್ರೆಟರಿಗಳಾಗಿಯೂ, ಮ|| ಎಂ. ಎನ್. ಕೃಷ್ಣರಾಯರು ಗೌರ್ನವೆಂಟ್ ಕಂಟ್ರೋಲರಾಗಿಯೂ ಕಳೆದ ತಾ|| ೨೭ ರಿಂದ ಸ್ಥಿರಗೊಳಿಸಲ್ಪಟ್ಟಿದ್ದಾರೆ.

ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರಿಗೆ ಸಿ. ಐ. ಇ. ಪ್ರಶಸ್ತಿಯು ಲಭ್ಯವಾದುದಕ್ಕಾಗಿ ಬೆಂಗಳೂರು ಮ್ಯುನ್ಸಿಪಲ್ ಉದ್ಯೋಗಿಗಳು ಮ|| ಸೆಟ್ಟರಿಗೆ ಒಂದು ಎಂಟರ್‌ಟೈನ್‌ಮೆಂಟನ್ನು ಕೊಟ್ಟರು. ಪುರಜನರೆಲ್ಲಾ ಲಾಲಬಾಗಿನಲ್ಲಿ ಮ|| ಸೆಟ್ಟರಿಗೆ ಒಂದು ಎಂಟರ್‌ಟೈನ್‌ಮೆಂಟನ್ನು ಕೊಟ್ಟು ತಮ್ಮ ಸಂತೋಷವನ್ನು ವ್ಯಕ್ತಪಡಿಸುವುದಕ್ಕೆ ಏರ್ಪಡಿಸಿಕೊಂಡಿದ್ದಾರೆ. ಮ|| ಸೆಟ್ಟರ ಪತ್ನಿಗೆ ಶಾರದಾ ಸ್ತ್ರೀ ಸಮಾಜದವರು ಒಂದು ವಿಜ್ಞಾಪನಪತ್ರಿಕೆಯನ್ನರ್ಪಿಸಿ ಗೌರವಿಸಿದರು.

ಮೈಸೂರ ಡೆಪ್ಯುಟಿ ಕಮಿಷನರುಗಳಲ್ಲಿ ಮ|| ಗಳಾದ ಪಿ. ಆರ್. ತ್ಯಾಗರಾಜಯ್ಯರ್ ಎಂ. ಎ. ಯವರೂ, ಎ. ಸುಬ್ರಹ್ಮಣ್ಯಯ್ಯರ್ ಬಿ. ಎ. ಯವರೂ ಸಹ ೨ ನೆ ತರಗತಿಯಿಂದ ೧ ನೆ ತರಗತಿಗೂ, ಪಿ. ಎಫ್. ಬೌರಿಂಗ್‌ರವರೂ, ಪಿ. ಎಸ್. ಬಾಲಸುಂದರಂ ಅಯ್ಯರ್ ಬಿ. ಯವರೂ ಸಹ ೩ ನೆ ತರಗತಿಯಿಂದ ೨ ನೆ ತರಗತಿಗೂ ವೃದ್ಧಿಗೊಳಿಸಲ್ಪಟ್ಟಿದ್ದಾರೆ.

"ಹಿತಚಿಂತಕ" ಎಂಬ ಮಾಸಪತ್ರಿಕೆಯ ೫-೬ ನೆ ಸಂಚಿಕೆಗಳು ಅದರ ಕರ್ತರಿಂದ ನಮ್ಮಲ್ಲಿಗೆ ಕಳುಹಿಸಲ್ಪಟ್ಟು ಅವನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಇದು ಬೆಳಗಾಂ ಜಿಲ್ಲೆಯ ಸಂಪಗಾಂವ ತಾಲ್ಲೂಕಿನ ನನಗುಂದಿ ಕೊಪ್ಪದಿಂದ ಪ್ರಕಟಿತವಾಗುತ್ತಿದೆ. ಇದರ ವರ್ಗಣಿ ಅಂಚೆವೆಚ್ಚಸೇರಿ ೧|| ರೂ. ಇದರಲ್ಲಿ ಪಠನಯೋಗ್ಯವಾದ ಐತಿಹಾಸಿಕ ವಿಷಯಗಳೂ, ಧಾರ್ಮಿಕ ನೈತಿಕಾದ್ಯುಯುಕ್ತ ವಿಷಯಗಳೂ ಸರಸವಾಗಿ ಬರೆಯಲ್ಪಡುತ್ತವೆ.

ಪೆನ್ಷನ್ ಅ|| ಕಮಿಷನರಾಗಿದ್ದ ಮ|| ಪಿ. ಶ್ರೀನಿವಾಸರಾಯರು ಕಾಲರಾ ರೋಗದಿಂದ ಚಾಮರಾಜಪೇಟೆಯ ಸ್ವಗೃಹದಲ್ಲಿ ಕಳೆದ ತಾ|| ೩ ರಲ್ಲಿ ಕಾಲವಾದರು. ಅವರ ಪ್ರಾಪ್ತ ವಯಸ್ಕನಾದ ಕೃಷ್ಣಮೂರ್ತಿರಾವ್ ಎಂಬ ಮಗನೂ ಅದೇ ರೋಗದಿಂದ ತಾ|| ೨ ರಲ್ಲಿ ವಿಧಿವಶನಾದನು. ಮ|| ರಾಯರು ಬಹುಕಾಲ ಸಿಟಿ ಮ್ಯಾಜಿಸ್ಟ್ರೇಟರಾಗಿದ್ದಾಗ ಅವರ ಸೌಜನ್ಯಾದಿ ಗುಣಗಳನ್ನು ಹಲವರು ಬಲ್ಲರು. ಮಗನು ಮೈಸೂರು ವಿದ್ಯುಚ್ಛಕ್ತಿ ಕಾರ್ಯಾಲಯದಲ್ಲಿ ಆಪರೇಟರ್ ಕೆಲಸದಲ್ಲಿದ್ದನು. ಏಕಕಾಲದಲ್ಲಿ ಈರ್ವರ ವಿಯೋಗದುಃಖವನ್ನು ಅವರ ಕುಟುಂಬದವರು ಅನುಭವಿಸಬೇಕಾಗಿ ಬಂದುದು ಅತ್ಯಂತ ವಿಷಾದಕರವು.

ಗತಿಸಿದ ರಾವ ಬಹದ್ದೂರ್ ಎ. ರಂಗಸ್ವಾಮಯ್ಯಂಗಾರರು ಬರೆದಿಟ್ಟಿರುವ ಮರಣಶಾಸನದಲ್ಲಿ ೧೨೦೦೦೦ ರೂ.ಗಳನ್ನು ಕೆಲ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸಬೇಕೆಂದು ಬರೆದಿರುವರೆಂತಲೂ, ಅದರಲ್ಲಿ ೩೦ ಸಾವಿರ ರೂ.ಗಳ ಬಡ್ಡಿಯನ್ನು ಗೋಖಲೆಯವರ ಭಾರತ ದೇಶಸೇವಕ ಸಂಘಕ್ಕೆ ತನ್ನ ಕಾರ್ಯವನ್ನು ಅದು ನಡೆಯಿಸುತ್ತಿರುವವರೆಗೂ ಅದಕ್ಕೆ ಕೊಡುತ್ತಿರಬೇಕೆಂದು ಬರೆದಿರುವುದಲ್ಲದೆ, ಬಂಗಾಳಾ ಹರಿದ್ವಾರ ಮೊದಲಾದ ಕಡೆಗಳಲ್ಲಿರುವ ಬ್ರಹ್ಮಚರ್ಯಾಶ್ರಮಗಳ ಸಹಾಯಕ್ಕೆ ಕೆಲ ಹಣದ ಬಡ್ಡಿಯನ್ನೂ, ಬ್ರಾಹ್ಮಣವಿಠಂತುಗಳು ಹೆಂಗೆ, ಕಸೂತಿ, ಮೊದಲಾದ ಸ್ವತಂತ್ರ ಜೀವನಸಾಧಕ ವಿದ್ಯೆಗಳನ್ನಭ್ಯಸಿಸಲು ಸಹಾಯಕವಾಗುವಂತೆ ಕೆಲವು ಹಣದಬಡ್ಡಿಯನ್ನೂ ಅವರಿಗೂ, ತನ್ನ ಬಾಂಧವವರ್ಗದಲ್ಲಿರುವ ಅನುಕಂಪನ್ನರಾದ ಕೆಲರಿಗೆ ಕೊಡಲು ೩೦ ಸಾವಿರ ರೂ.ಗಳನ್ನೂ, ವಿನಿಯೋಗಿಸತಕ್ಕದೆಂದು ಬರೆದು, ಇದಕ್ಕಾಗಿ ಮೂರುಮಂದಿ ಧರ್ಮಕರ್ತರನ್ನು ಗೊತ್ತುಮಾಡಿರುವರೆಂತಲೂ ಕೇಳುತ್ತೇವೆ.

ಮೈಸೂರು ನಿಯಮನಿರ್ಮಾಣ ಸಭೆಯು ಕಳೆದ ತಿಂಗಳು ತಾ|| ೨೮ ರಲ್ಲಿ ಕೂಡಿದಾಗ್ಗೆ ಪಂಚಾಯಿತಿಬಿಲ್ಲು, ಗ್ರಾಮಕೋರ್ಟುಗಳಬಿಲ್ಲು, ಶತ್ರುಗಳೊಡನೆ ವ್ಯಾಪಾರಸಂಬಂಧವಾದಬಿಲ್ಲು ಇವು ಮೂರೂ ಓದಿ ಶಾಸನವಾಗೇರ್ಪಡಿಸಲ್ಪಟ್ಟುವು. ಬಳಿಕ ಸಭಿಕರಿಂದ ಅನೇಕ ವಿಷಯಗಳು ಚರ್ಚಿಸಲ್ಪಟ್ಟುವು. ಮರುದಿನ ಬಜೆಟ್ಟಿನ ವಿಷಯಕವಾಗಿ ಸಭಿಕರಿಂದ ಚರ್ಚೆಗಳೂ ಭಾಷಣಗಳೂ ಮಾಡಲ್ಪಟ್ಟುವು. ಕಡೆಯಲ್ಲಿ ದಿವಾನರು ಉಪಸಂಹಾರ ಭಾಷಣವನ್ನು ಮಾಡಿದಾಗ್ಗೆ ಬಜೆಟ್ಟಿನ ಚರ್ಚೆಯಲ್ಲಿ ಸಭಿಕರೆಲ್ಲರೂ ಗೌರ್ನಮೆಂಟಿನವರ ಅಭಿಪ್ರಾಯದಲ್ಲಿ ಐಕ್ಯಗೊಂಡುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಉಳಿದ ಚರ್ಚೆಗಳನ್ನೆಲ್ಲಾ ಕುರಿತು ಸಂಕ್ಷಿಪ್ತವಾಗಿ ಗೌರ್ನಮೆಂಟಿನ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಹೆಚ್ಚು ವಿವಾದಾಸ್ಪದನಾಗಿ ಚರ್ಚಿತವಾಗಿದ್ದ ಒಂದೆರಡು ವಿಷಯವನ್ನು ಕುರಿತು ಮಾತನಾಡುವಾಗ್ಗೆ—ಭಿನ್ನಾಭಿಪ್ರಾಯಗಳಿಂದ ಸಭೆಯಲ್ಲಿ ಚರ್ಚಿಸುವುದು ತಪ್ಪೇನೂ ಅಲ್ಲವೆಂದೂ, ಆದರೆ ಸ್ವಲ್ಪ ವಿಷಯಗಳಿಗಾಗಿ ಮನಸ್ತಾಪಪಟ್ಟುಕೊಂಡವರಂತೆ ಪರಸ್ಪರ ಕಲಹಗಳನ್ನು ವೃದ್ಧಿಪಡಿಸಿಕೊಳ್ಳುವುದು ಅನರ್ಥಕಾರಿಯೆಂತಲೂ, ದೇಶಹಿತಕಾರ್ಯತತ್ಪರರಾದ ಜನರೇ ದೇಶದಲ್ಲಿ ಸ್ವಲ್ಪ ಸಂಖ್ಯಾಕರಾಗಿರುವಾಗ ಅವರಲ್ಲೇ ಕಲಹಾಸ್ಪದ ಮಾಡಿಕೊಳ್ಳುವುದು ವಿಘಾತಕವೆಂತಲೂ ಮೊದಲಾಗಿ ಭಾಷಣಮಾಡಿದರು.

ಸೀತಾವಿಲಾಸ ಧರ್ಮಶಾಲೆಯಲ್ಲಿ ಆಸ್ಪತ್ರೆಯನ್ನಿಟ್ಟುಕೊಂಡು ಧರ್ಮಾರ್ಥವಾಗಿ ಚಿಕಿತ್ಸೆಮಾಡುತ್ತಿರುವ ಮ|| ಲಕ್ಷ್ಮಣರಾಜುಯವರ ಶಕ್ತಿಯು ಅದ್ಭುತವಾದುದು. ಅಂಗಗಳಲ್ಲಿ ಮೂಳೆಗಳು ಮುರಿದು, ಸಂಧಿಬಂಧಗಳು ಸಡಿಲಹೋಗಿ, ಉಳುಕಿ, ನರಗಳು ಸ್ಥಾನ ತಪ್ಪಿಹೋಗಿರುವಂಥ ಜನರಿಗೆ ಇವರು ಮಾಡುವ ಚಿಕಿತ್ಸೆಯು ಅಮೋಘವಾದುದು. ಈ ಚಿಕಿತ್ಸೆಯು ಯಾವ ಇಂಗ್ಲೀಷ್, ಹಿಂದೂ, ಯುನಾನಿ ಆಸ್ಪತ್ರೆಗಳಲ್ಲೂ ಸಾಧ್ಯವಲ್ಲ. ಸ್ಥಲದವರೇ ಅಲ್ಲದೆ ಪರಸ್ಥಲದ ಬಹುದೂರ ಪ್ರಾಂತದವರೂ ಇಂಥ ಚಿಕಿತ್ಸೆಗಾಗಿ ಇವರಲ್ಲಿಗೆ ಬಂದು ಗುಣಪಟ್ಟು ಹೋಗಿಯೂ ಹೋಗುತ್ತಲೂ ಇರುವರು. ಸಾವಿರಾರುಮಂದಿ ಬಡಬಗ್ಗರಲ್ಲದೆ ಅನೇಕಮಂದಿ ದೊಡ್ಡದೊಡ್ಡ ಅಧಿಕಾರಿಗಳೂ ಸಹ ಇವರ ಚಿಕಿತ್ಸೆಗೊಳಪಟ್ಟಿದ್ದು ಗುಣಹೊಂದಿ ಯೋಗ್ಯತಾಪತ್ರಿಕೆಗಳನ್ನಿತ್ತು ಶ್ಲಾಘಿಸಿಹೋಗಿರುವರು. ಇಂಥ ಉಪಕಾರಿಗಳಿಗೆ ನಮ್ಮ ಮ್ಯುನ್ಸಿಪಾಲಿಟಿಯಿಂದ ಮಾಹೆಯಾನಾ ೧೫ ರೂ. ಮಾತ್ರವೇ ಗ್ರಾಂಟು ಸಲ್ಲುತ್ತಿದೆ. ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳಲ್ಲಿ ಬಹುಜನರು ಮ|| ರಾಜುಯವರ ವೈದ್ಯಶಾಲೆಯ ಉಪಯೋಗವನ್ನು ತಿಳಿಯದೆ ಇಲ್ಲ. ಪ್ರಜೋಪಯೋಗವಾಗಿರುವ ಇವರ ವೈದ್ಯಾಲಯಕ್ಕೆ ಡಿಸ್ಟ್ರಿಕ್ಟ್ ಫಂಡಿನಿಂದಲೂ ಮಾಹೆಯಾನಾ ಉಚಿತ ಸಹಾಯವನ್ನು ಮಾಡುವಂತೆ ಏರ್ಪಡಿಸುವುದು ಅವಶ್ಯಕವಾಗಿರುವುದು.

ಯುದ್ಧವಾರ್ತೆಯು

ಪಶ್ಚಿಮರಣರಂಗದಲ್ಲಿ ಇಂಗ್ಲೀಷ್ ಸೈನಿಕರು ಕಳೆದವಾರದಲ್ಲೂ ಶತ್ರುಗಳ ಕೆಲವು ಸ್ಥಾನಗಳನ್ನು ವಶಪಡಿಸಿಕೊಳ್ಳದೆ ಬಿಟ್ಟಿಲ್ಲ. ಲೆನ್ಸಿನ ಸುತ್ತುಮುತ್ತಲೂ ಭೀಕರ ಯುದ್ಧಗಳಾಗುತ್ತಿವೆ. ಆ ದುರ್ಗವನ್ನೂ ಪಟ್ಟಣವನ್ನೂ ಬಿಟ್ಟುಕೊಡಬಾರದೆಂದು ಶತ್ರುಸೇನಾಪತಿಗಳು ತಮ್ಮ ಸೈನಿಕರನ್ನು ಹುರಿದುಂಬಿಸಿಯೂ, ಬಲಾತ್ಕರಿಸುತ್ತಲೂ ಇದ್ದಾರೆ. ಇಂಗ್ಲೀಷರಾದರೋ ಅದನ್ನು ಹಿಡಿದೇತೀರಬೇಕೆಂದು ಹಠಮಾಡಿದ್ದಾರೆ. ಇಷ್ಟರಲ್ಲೇ ನಾವು ಅದನ್ನು ಹಿಡಿದುಕೊಳ್ಳುತ್ತೇವೆಂದು ಫ್ರೆಂಚರು ಪ್ರಕಟಿಸಿದ್ದಾರೆ. ಇಂಗ್ಲೀಷರ ಗುಂಡಿನೇಟಿನಿಂದ ಪಟ್ಟಣದ ಬಹುಭಾಗವೆಲ್ಲಾ ಹಾಳಾಗಿದೆ. ಹಜ್ಜೆಹಜ್ಜೆಗೆ ಶತ್ರುಗಳು ಯುದ್ಧವನ್ನು ಕೊಡುತ್ತಲೂ ಬಹಳ ಪ್ರಾಣಹಾನಿಯನ್ನು ಹೊಂದುತ್ತಲೂ ಇದಿರಾಳಿಗಳಿಗೂ ನಷ್ಟಪಡಿಸುತ್ತಲೂ ಇದ್ದಾರೆ. ಆದರೂ ಇಂಗ್ಲೀಷರು ತಮಗಾಗುವ ನಷ್ಟವನ್ನು ಸರಕುಗೊಳ್ಳದೆ ಪರಿಸರದ ಕಂದಕಗಳನ್ನೂ ರಕ್ಷಣಸ್ಥಾನಗಳನ್ನೂ ಒಂದರಮೇಲೊಂದರಂತೆ ಹಿಡಿದುಕೊಳ್ಳುತ್ತಲೇ ಇರುವುದಲ್ಲದೆ ಸಾವಿರಾರು ಮಂದಿ ಸೈನಿಕರನ್ನೂ ಅನೇಕ ಫಿರಂಗಿಗಳನ್ನೂ ವಶಪಡಿಸಿಕೊಂಡಿದ್ದಾರೆ. ಶತ್ರುಗಳು ಕ್ರಮೇಣ ಸ್ಥಾನಗಳನ್ನು ಬಿಟ್ಟು ಬಿಟ್ಟು ಹಿಂದಕ್ಕೆ ಹೋಗುತ್ತಿದ್ದಾರೆ. ಲೆನ್ಸ್ ಕೋಟೆಯೂ ಇಷ್ಟರಲ್ಲೇ ನಮ್ಮವರ ಹಸ್ತಗತವಾಗುವುದು ಖಂಡಿತವೆಂದು ಹೇಳಬಹುದಾಗಿದೆ. ಜರ್ಮನರು ಫ್ರೆಂಚ್ ಸೇನಾಮುಖದಲ್ಲಿ ತಮ್ಮ ಯುದ್ಧವನ್ನು ಕಳೆದವಾರದಲ್ಲಿ ಹೆಚ್ಚಾಗಿ ನಡೆಯಿಸಿದರು. ಮ್ಯೂಜು ನದಿಯ ದಡದಲ್ಲಿ ವರ್ಡನ್ನಿನ ಹತ್ತಿರವೂ ಇನ್ನು ಒಂದೆರಡುಕಡೆಯೂ ಹೆಚ್ಚಾದ ಸೈನ್ಯಗಳನ್ನು ಕೂಡಿಸಿಕೊಂಡು ಭೀಕರ ಯುದ್ಧವನ್ನು ಮಾಡಿ, ಫ್ರೆಂಚರ ಒಂದೆರಡು ಕಂದಕಗಳನ್ನು ವಶಪಡಿಸಿಕೊಂಡರು. ಆದರೇನು? ಅದರಲ್ಲರ್ಧಭಾಗವನ್ನು ಫ್ರೆಂಚರು ಮರಳಿ ವಶಪಡಿಸಿಕೊಂಡರು. ಉಳಿದ ಭಾಗದ ಗತಿಯೂ ಹಾಗೆಯೇ ಆಗುವುದರಲ್ಲಿದೆ. ಅಮೇರಿಕಾದ ಸುರಕ್ಷಿತವಾದ ಸೈನ್ಯವು ಫ್ರಾನ್ಸಿಗೆ ಬಂದಿಳಿದು ಯುದ್ಧರಂಗಕ್ಕೆ ಪ್ರವೇಶಿಸಿರುತ್ತದೆ. ಈ ಸೈನ್ಯಗಳನ್ನು ತುಂಬಿಕೊಂಡು ಬರುತ್ತಿದ್ದ ಹಡಗುಗಳಿಗೆ ರಾತ್ರಿಯಹೊತ್ತು ಜರ್ಮನ್ ಸಬ್‌ಮೆರೀನುಗಳು ಅಟ್ಲಾಂಟಿಕ್ ಸಾಗರದಲ್ಲಿ ಎರಡುಕಡೆ ಕಾಣಿಸಿಕೊಂಡು ಅಪಾಯಮಾಡಲಿಕ್ಕೆ ಪ್ರಯತ್ನಿಸಿದುವು. ಆದರೆ ರಕ್ಷಣಾರ್ಥವಾಗಿ ಬರುತ್ತಿದ್ದ ಅಮೇರಿಕನ್ ಯುದ್ಧನಾವೆಗಳ ಫಿರಂಗಿಗುಂಡಿನೇಟಿನಿಂದ ೧ ಸಬ್‌ಮೆರೀನು ಹಾಳಾಯಿತಲ್ಲದೆ ಉಳಿದುವೆಲ್ಲಾ ತಪ್ಪಿಸಿಕೊಂಡು ಹೋದುವು. ಜೂನ್ ತಿಂಗಳೊಂದರಲ್ಲಿ ಇಂಗ್ಲೀಷ್ ಸೈನಿಕರು ಈ ರಂಗದಲ್ಲಿ ೮೬೮೬ ಮಂದಿ ಜರ್ಮನ್ ಸೈನಿಕರನ್ನೂ (ಇವರಲ್ಲಿ ೧೭೫ ಮಂದಿಗಳು ಉದ್ಯೋಗಸ್ಥರು) ೬೭ ತುಪಾಕಿಗಳನ್ನೂ ೨ ದೊಡ್ಡ ಫಿರಂಗಿಗಳನ್ನೂ ೧೦೨ ಕಂದಕದ ತುಪಾಕಿಗಳನ್ನೂ ಅನೇಕ ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡಿದ್ದಾರೆ.

ಪೂರ್ವರಂಗದಲ್ಲಿ ರಷ್ಯನರು ಜನರಲ್ ಬ್ರುಸಿಲಾಫ್‌ರವರ ಯಜಮಾನ್ಯದಿಂದ ತಮ್ಮ ಸೈನ್ಯಗಳನ್ನು ಆಯತ್ತಪಡಿಸಿ, ಶತ್ರುಗಳಮೇಲೆ ಯುದ್ಧವನ್ನಾರಂಭಿಸಿ, ಮೊದಲ ಪೆಟ್ಟಿಗೇ ಹೆಚ್ಚಿನ ವಿಜಯವನ್ನು ಸಂಪಾದಿಸಿದರೆಂಬ ವಾರ್ತೆಯು ಕಳೆದ ವಾರದಲ್ಲಿ ಬಂದಿದೆ. ಗೆಲೀಷಿಯಾದ ಪೂರ್ವಭಾಗದಲ್ಲಿ ಅವರು ಶತ್ರುಗಳ ತಲೆಯನ್ನು ಚೆಂಡಾಡುತ್ತ ಹಿಮ್ಮೆಟ್ಟಿಸುತ್ತಿದ್ದಾರೆ. ಟಾರ್ನಪೋಲಿಗೆ ಪಶ್ಚಿಮದಲ್ಲಿ ೨೦ ಮೈಲಿಗಳ ದೂರದಲ್ಲಿರುವ ಕೋನಿಕಿ ಎಂಬ ಗ್ರಾಮವನ್ನು ಹಿಡಿದರು. ಅದರ ದಕ್ಷಿಣದಲ್ಲಿದ್ದ ಶತ್ರುಗಳ ಕಂದಕಗಳೆಲ್ಲಾ ರಷ್ಯನರ ವಶವಾದುವು. ಪಶ್ಚಿಮದಿಕ್ಕಿನ ಕಾಡು ಇವರ ವಶವಾಯಿತು. ಅಲ್ಲಿ ಜರ್ಮನಿ ಆಸ್ಟ್ರಿಯನ್ ಸೈನ್ಯಗಳೆರಡೂ ಸೇರಿ ಯುದ್ಧ ಕೊಡುತ್ತಿರುವುವು. ಅವರಲ್ಲಿ ೭೮೦೦ ಮಂದಿ ಸೈನಿಕರನ್ನೂ ೧೫೮ ಮಂದಿ ಉದ್ಯೋಗಿಗಳನ್ನೂ ಅನೇಕ ಫಿರಂಗಿಗಳನ್ನೂ ರಷ್ಯನರು ಸೆರೆಹಿಡಿದರು. ಕಾರ್ಪೇತಿಯನ್ ಪರ್ವತಗಳ ಹತ್ತಿರ ರುಮೇನಿಯಾರಂಗದಲ್ಲಿ ರಷ್ಯನರು ಶತ್ರುಗಳ ಹೊಗೆಬಂಡಿ ಸಾಲನ್ನು ನಾಶಪಡಿಸಿದರು. ಲೆಂಬರ್ಗ್ ಪಟ್ಟಣವು ಗೆಲೀಷಿಯಾಕ್ಕೆ ಮುಖ್ಯಸ್ಥಾನವಾದುದರಿಂದ ಅದನ್ನು ವಶಪಡಿಸಿಕೊಳ್ಳುವುದೇ ರಷ್ಯನರ ಉದ್ದೇಶವಾಗಿದೆ. ಅದಕ್ಕಾಗಿ ಅದರಮೇಲೆ ಸಾಗುತ್ತಿದ್ದಾರೆ. ಜೊಚೌಕಿಗೆ ವಾಯವ್ಯದಲ್ಲಿರುವ ಶತ್ರುಗಳ ಕಂದಕಗಳ ೨ ಸಾಲನ್ನು ರಷ್ಯನರು ಹಿಡಿದರು. ಪೊಟಾಟಿಗೆ ದಕ್ಷಿಣದಲ್ಲಿ ಕೆಲ ಕಂದಕಗಳನ್ನೂ ವಿಜ್ಞಿಸ್ಸಿಗೆ ಆಗ್ನೇಯದಲ್ಲಿ ಶತ್ರುಗಳ ಕಂದಕಗಳ ಮುಂದಣ ಸಾಲನ್ನೆಲ್ಲಾ ಸಂಪೂರ್ಣವಾಗಿಯೂ, ೨-೩ ನೆ ಸಾಲುಗಳಲ್ಲಿ ಸ್ವಲ್ಪಭಾಗವನ್ನೂ ಸಹ ಹಿಡಿದುಕೊಂಡರು. ಶತ್ರುಸ್ಥಾನಗಳಮೇಲೆ ರಷ್ಯನರ ವೈಮಾನಿಕರು ಸಿಡಿಮದ್ದುಗಳನ್ನಿಟ್ಟು ನಷ್ಟಪಡಿಸಿದ್ದಾರೆ. ಈಚೆಗೆ ಬಂದಿರುವ ವರ್ತಮಾನದಿಂದ ರಷ್ಯನರು ಪ್ರಜೋವಿಸ್ ಪಟ್ಟಣವನ್ನೂ ಸುರಕ್ಷಿತವಾದ ಒಂದು ಪರ್ವತಸ್ಥಾನವನ್ನೂ ಕೋರಿದುರ್ ಎಂಬ ಗ್ರಾಮವನ್ನೂ ಮೂರುಸಾಲುಗಳ ಕಂದಕಗಳನ್ನೂ ಸಹ ವಶಪಡಿಸಿಕೊಂಡು ಶತ್ರುಗಳನ್ನು ಸ್ಟ್ರಿಪಾನದಿಯ ಕಡೆಯಿಂದಾಚೆಗೆ ಓಡಿಸಿಬಿಟ್ಟರೆಂತಲೂ, ಶತ್ರುಗಳು ಈಗ ಬ್ರಿಜಾನಿ ಪಟ್ಟಣವನ್ನು ಕೂಡ ತೆರವುಮಾಡಿ ಬಿಟ್ಟುಹೋಗುವುದರಲ್ಲಿದ್ದಾರೆಂತಲೂ, ತಾ|| ೧ ರಿಂದ ೩ ದಿನಗಳೊಳಗಾಗಿ ರಷ್ಯನರು ಶತ್ರುಗಳ ೮|| ಸಾವಿರ ಸೈನಿಕರನ್ನೂ ನೂರಾರುಮಂದಿ ಉದ್ಯೋಗಿಗಳನ್ನೂ ಅನೇಕ ಫಿರಂಗಿ ಮೊದಲಾದ ಸಾಮಗ್ರಿಗಳನ್ನೂ ಹಿಡಿದುಕೊಂಡರೆಂತಲೂ ಗೊತ್ತಾಗುತ್ತದೆ. ಹೀಗೆ ಉಂಟಾದ ವಿಶೇಷ ಜಯದಿಂದ ಪೆಟ್ರೋಗ್ರೇಡ್ ಪಟ್ಟಣದಲ್ಲಿ ಸಂತೋಷೋತ್ಸವಗಳು ಅಮಿತವಾಗಿ ನಡೆದುವು. ಅಲ್ಲಿಯ ಸ್ಥಿತಿಗತಿಯೇ ಮಾರ್ಪುಗೊಂಡಿತು. ಪ್ರತಿವಾದಗಳ ಹುಟ್ಟಡಗಿ ದೇಶಾಭಿಮಾನ ಯುದ್ಧಾಭಿನಿವೇಶಗಳ ಹಾಡೇ ಹಾಡಾಯಿತು. ಪುರವೀಥಿಗಳಲ್ಲಿ ಪ್ರಜೆಗಳೆಲ್ಲಾ ರಷ್ಯಾ ಧ್ವಜವನ್ನುತ್ಸವಮಾಡಿದರು. ಈ ವಿಜಯಕ್ಕೆಲ್ಲಾ ಕೆರೆನ್ಸಿಯವರು ಮೂಲಪುರುಷರಾದುದರಿಂದ ಅವರ ಭಾವಪಟವನ್ನು ಪಟ್ಟಣದಲ್ಲಿ ಮೆರೆಯಿಸಿದರು.

ಗ್ರೀಸಿನಲ್ಲಿ ವೆನಿಜುಲಾಸರ ಪಕ್ಷವು ಪ್ರಬಲಿಸಿತು. ಗ್ರೀಸ್ ಸೈನ್ಯವೆಲ್ಲವೂ ಅಲಗ್ಸಾಂಡರ್ ರಾಜರ ವಿಷಯದಲ್ಲಿ ತಮಗೆ ಪೂರ್ಣಭಕ್ತಿಯಿರುವುದೆಂದು ಪ್ರಮಾಣಮಾಡಿತು. ವೆನಿಜುಲಾಸ್‌ರವರನ್ನು ಬಹಳ ಉತ್ಸಾಹ ಭಕ್ತಿಗಳಿಂದ ಸ್ವಾಗತಿಸಿದರು. ಬಲಾತ್ಕಾರವೇನೂ ಇಲ್ಲದೆ ಯಾರು ಬೇಕಿದ್ದರೂ ಸೈನ್ಯಕ್ಕೆ ಸೇರಬಹುದೆಂದು ವೆನಿಜುಲಾಸರು ಪ್ರಕಟಿಸಿದ್ದಾರೆ. ಗ್ರೀಸ್‌ದೇಶವು ಪೂರ್ಣವಾಗಿ ಮಿತ್ರಮಂಡಲಿ ಪಕ್ಷಕ್ಕೆ ಸೇರಿದಂತೆಯೇ ಸರಿ. ಗ್ರೀಸ್ ಸೈನ್ಯಗಳು ಈಗ ಮಿತ್ರಮಂಡಲಿ ಸೈನ್ಯದೊಡನೆ ಸೇರಿ ಬಾಲ್ಕನ್ ರಂಗದಲ್ಲಿ ಶತ್ರುಗಳಮೇಲೆ ಯುದ್ಧಮಾಡುತ್ತಿವೆ. ಜರ್ಮನಿಯಲ್ಲಿರುವ ಗ್ರೀಸ್ ರಾಯಭಾರಿಯು ಸ್ವದೇಶಕ್ಕೆ ಹೊರಡಲು ತನಗೆ ಅಪ್ಪಣೆಚೀಟಿಯನ್ನು ಕೇಳಿರುವನೆಂದು ಪ್ರಕಟವಾಗಿದೆ.

ಶತ್ರುಗಳ ೧೨-೧೪ ವಿಮಾನಗಳು ಮತ್ತೆ ತಾ|| ೪ ರಲ್ಲಿ ಇಂಗ್ಲೆಂಡಿನ ಈಶಾನ್ಯಭಾಗದಿಂದ ನುಗ್ಗಿಹೋಗಿ ಹಾರ್‌ವಿಚ್ ಎಂಬ ಪಟ್ಟಣದಮೇಲೆ ಸಿಡಿಮದ್ದುಗಳನ್ನು ಹಾಕಿದುವು. ೮ ಮಂದಿ ಸತ್ತು ೨೨ ಮಂದಿಗೆ ಗಾಯವಾಯಿತು. ಅಷ್ಟರಲ್ಲಿ ಕಾವಲಿನ ಫಿರಂಗಿಗಳು ಗುಂಡುಗಳನ್ನು ಪ್ರಯೋಗಿಸಲು ಏಟುತಿಂದು ಓಡಿಹೋದುವು. ಇದಕ್ಕೆ ಮುಂಚೆ ತಾ|| ೨-೩ ರಲ್ಲಿ ಇಂಗ್ಲೀಷ್ ವೈಮಾನಿಕರು ಶತ್ರುಗಳ ಬ್ರೂಜಸ್ ರೇವಿಯ ಹತ್ತಿರ ಆಯುಧ ಸಾಮಗ್ರಿಗಳ ಉಗ್ರಾಣಗಳಮೇಲೆ ಹಾರಿಹೋಗಿ ಟನ್ನುಗಟ್ಟಲೆ ಸಿಡಿಮದ್ದುಗಳನ್ನು ಹಾಕಿ ಬಹಳ ನಷ್ಟಪಡಿಸಿ ಬಂದಿದ್ದುವು.

ವರ್ತಮಾನಸಂಗ್ರಹ.

ಕಾಲದ ಸ್ಥಿತಿಗತಿಗಳ ನಿರ್ಬಂಧದಿಂದ ಸ್ಟೇಟ್ ಸೆಕ್ರೆಟರಿಯವರು ಈಗಿನ ಬೊಂಬಾಯಿ ಮದ್ರಾಸು ಗೌರ್ನರುಗಳನ್ನೇ ಅವರ ಅಧಿಕಾರಕಾಲದವಧಿಯು ಮುಗಿದುಬಂದಿದ್ದರೂ, ಇನ್ನು ಕೆಲಕಾಲ ಆ ಪದವಿಯಲ್ಲಿರುವುದಕ್ಕೆ ಸಾರ್ವಭೌಮರ ಅನುಮತಿಯಮೇರೆ ಕೇಳಿಕೊಂಡಿರುವಲ್ಲಿ ಈ ಗೌರ್ನರುಗಳು ಅದಕ್ಕೆ ಸಮ್ಮತಿಸಿರುತ್ತಾರೆ.

ಕಲ್ಕತ್ತಾದ ಅಮೃತಬಜಾರು ಪತ್ರಿಕೆಯಲ್ಲಿ ಅಲ್ಲಿಯ ಹೈಕೋರ್ಟಿನ ಕಾರ್ಯಾಚರಣ ವಿಷಯವಾಗಿ ಬರೆಯಲ್ಪಟ್ಟಿದ್ದ ಒಂದಾನೊಂದು ಲೇಖನವು ದೂಷಣಾವಿಶಿಷ್ಟವಾಗಿದ್ದುದರಿಂದ ಅದರಮೇಲೆ ಸಂಪಾದಕರು, ಡೈರೆಕ್ಟರುಗಳು, ಮುದ್ರಾಪಕರಮೇಲೆಲ್ಲಾ ಅಭಿಯೋಗವು ತರಲ್ಪಟ್ಟಿದ್ದಿತು. ಎಲ್ಲರೂ ನಿರ್ದೋಷಿಗಳೆಂದು ತೀರ್ಮಾನಿಸಲ್ಪಟ್ಟು, ಮುದ್ರಾಪಕರಿಗೆ ಮಾತ್ರ ೩೦೦ ರೂ. ಗಳ ಅರ್ಥದಂಡವು ವಿಧಿಸಲ್ಪಟ್ಟಿತು.

ಸರ್ಕಾರದವರ ಉಪಯೋಗಕ್ಕೇ ಹೊರತು ಸುವರ್ಣವಾಗಲೀ ಸುವರ್ಣ ನಾಣ್ಯವಾಗಲೀ ಭರತಖಂಡಕ್ಕೆ ಹೊರಗಣಿಂದ ಬಂದಿಳಿಯಲಾಗದೆಂದೂ, ಈಗ ಈ ದೇಶದಲ್ಲಿ ವ್ಯವಹಾರದಲ್ಲಿರುವ ಭಂಗಾರದ ಯಾವ ನಾಣ್ಯಗಳನ್ನೂ (ಸೌರನ್ನು) ಯಾರೂ ಕರಗಿಸಕೂಡದು, ಮುರಿಯಕೂಡದು, ನಾಣ್ಯರೂಪವಾಗಿ ಹೊರತು ಮತ್ತಿನ್ನಾವರೂಪದಿಂದಲೂ ಅದನ್ನು ಉಪಯೋಗಿಸಕೂಡದೆಂದೂ, ತಪ್ಪಿದರೆ ಶಿಕ್ಷಿಸಲ್ಪಡುವರೆಂದೂ, ಭರತಖಂಡದ ಸರ್ಕಾರದವರು ಹೊಸದಾಗಿ ಒಂದು ಕಟ್ಟಪ್ಪಣೆಯನ್ನು ಮಾಡಿದ್ದಾರೆ.

ಮ್ಯುನ್ಸಿಪಾಲಿಟಿಯವರು ತಮ್ಮ ಆದಾಯದ ಹಣವನ್ನು ವೆಚ್ಚಮಾಡಿ ಧರ್ಮಪಾಠಶಾಲೆಗಳನ್ನು ಸ್ಥಾಪಿಸಿ, ಅವುಗಳಲ್ಲಿ ನಿರ್ಬಂಧ ವಿದ್ಯಾಭ್ಯಾಸಮಾಡಿಸಿಕೊಳ್ಳುವುದಕ್ಕೆ ಒಂದು ಶಾಸನವನ್ನೇರ್ಪಡಿಸಬೇಕೆಂಬ ವಿಷಯದ ಬಿಲ್ಲನ್ನು ಬೊಂಬಾಯಿ ನಿಯಮನಿರ್ಮಾಣಸಭೆಯ ಮುಂದಿಡುವುದಕ್ಕೆ ಇಂಡ್ಯಾ ಗೌರ್ನಮೆಂಟಿನವರು ಅನುಮತಿಯನ್ನು ಕೊಟ್ಟಿರುತ್ತಾರೆ. ಸಭೆಯಲ್ಲೂ ಇದು ಅನುಮೋದಿತವಾಗಬಹುದು. ಪಂಜಾಬಿನಲ್ಲೂ ಈ ಪದ್ಧತಿಗೆ ಅಂಕುರಾರ್ಪಣವಾಗಿದೆ. ಎಂದಬಳಿಕ ಕೈ|| ಗೋಖಲೆಯವರು ಸೂಚಿಸಿಹೋದ ನಿರ್ಬಂಧ ವಿದ್ಯಾಭ್ಯಾಸದ ಪದ್ಧತಿಗೆ ಆಂಗ್ಲಪರಿಪಾಲಿತ ಭಾರತ ದೇಶಭಾಗದೊಳಗೆ ಈಗತಾನೇ ಚೈತನ್ಯೋದಯವಾಯಿತೆಂದು ಹೇಳಬಹುದು.

ಚೀನಾದೇಶದಲ್ಲಿ ಅಧ್ಯಕ್ಷರಿಗೂ ಸೇನಾಧಿಪತಿಗಳಿಗೂ ಬಹಳ ವೈಷಮ್ಯವು ಹೆಚ್ಚಿ ಕಡೆಗೆ ಮಹಾಯುದ್ಧವು ಹುಟ್ಟುವುದೇನೋ ಎಂಬ ಸಂಶಯವು ತೋರುತ್ತಿದ್ದಿತು. ಸೇನಾಪತಿಗಳು ತಮ್ಮ ಸ್ವಾತಂತ್ರ್ಯವನ್ನು ಪ್ರಕಟಿಸಿಕೊಂಡುಬಿಟ್ಟಿದ್ದರು. ಆದರೆ ಈಚೆಗೆ ಅಲ್ಲಿಂದ ಬಂದ ತಂತ್ರೀವಾರ್ತೆಗಳನ್ನು ನೋಡುವಲ್ಲಿ ಅವೆರಡು ಪಕ್ಷಗಳವರಿಗೂ ಸಂಧಿಯು ನೆರವೇರಿತೆಂತಲೂ, ಅಧ್ಯಕ್ಷರಾಗಿದ್ದ ಅಧಿಕಾರಗಳಲ್ಲಿ ಕೆಲವು ತಪ್ಪಿಸಲ್ಪಟ್ಟುವೆಂತಲೂ, ಶಾಂತಿಯು ಸ್ಥಾಪಿತವಾಯಿತೆಂತಲೂ ಗೊತ್ತಾಯಿತು. ಮತ್ತೀಚೆಗೆ ಬಂದ ವಾರ್ತೆಯಿಂದ ಪ್ರಜಾಪ್ರಭುತ್ವವು ತಪ್ಪಿ ಸುಯನ್‌ಟಂಗ್ ಎಂಬ ೧೬ ವರ್ಷದ ಬಾಲಕನಿಗೆ ಚಕ್ರವರ್ತಿ ಪಟ್ಟವು ಕಟ್ಟಲ್ಪಟ್ಟಿತೆಂದು ಗೊತ್ತಾಗುತ್ತದೆ.

ಆನಿಬೆಸೆಂಟಮ್ಮ ಮೊದಲಾದವರಿಗೆ ಮದ್ರಾಸು ಸರ್ಕಾರದವರಿಂದ ವಿಧಿಸಲ್ಪಟ್ಟ ಶಿಕ್ಷೆಯ ಅಪ್ಪಣೆಯನ್ನು ಖಂಡಿಸುವುದಕ್ಕೆ ಲಾಹೋರು ಪಟ್ಟಣದಲ್ಲಿ ಪುರಜನರ ಸಭೆಯೊಂದು ಕೂಡಿದ್ದಿತು. ಆ ಸಭೆಗೆ ಕಲಾಶಾಲಾ ವಿದ್ಯಾರ್ಥಿಗಳಾರನ್ನೂ ಹೋಗಗೊಡಿಸದಂತೆ ಶಾಲಾಧಿಕಾರಿಗಳಿಗೆ ಒಂದಪ್ಪಣೆಯೂ, ಆ ಸಭೆಯ ನಡವಳಿಕೆಗಳಾವುವನ್ನೂ ಪತ್ರಿಕೆಗಳಲ್ಲಿ ಪ್ರಕಟಿಸದಿರುವಂತೆ ಅಲ್ಲಿಯ ವೃತ್ತಪತ್ರಿಕಾಕರ್ತರುಗಳಿಗೆ ಒಂದಪ್ಪಣೆಯೂ ಪಂಜಾಬು ಸರ್ಕಾರದವರಿಂದ ಕೊಡಲ್ಪಟ್ಟಿದ್ದು, ಈಚೆಗೆ ಅದು ಉಪಸಂಹರಿಸಲ್ಪಟ್ಟಿತು. ದಿಲ್ಲಿ ಪಟ್ಟಣದಲ್ಲಿ ಇಂಥ ಸಭೆಯನ್ನು ಕೂಡಿಸಲು ಪ್ರಜೆಗಳು ಪ್ರಯತ್ನಪಟ್ಟಾಗ ಅಲ್ಲಿಯ ಚೀಫ್ ಕಮಿಷನರು ದೇಶರಕ್ಷಕಶಾಸನದ ಪ್ರಕಾರ ತಡೆಮಾಡಿ ನಿಲ್ಲಿಸಿಬಿಟ್ಟರು.

ಪಶ್ಚಿಮ ತುರ್ಫ್ ಕ್ಲಬ್ಬಿನವರು ಯುದ್ಧದ ಸಾಲದ ಫಂಡಿಗಾಗಿ ಏರ್ಪಡಿಸಿದ್ದ ಲಾಟರಿಗಾಗಿ ೩೬೪೨೧೮೦ ರೂ. ಗಳ ಬೆಲೆಯ ಟಿಕೇಟುಗಳು ಮಾರಲ್ಪಟ್ಟಿರುತ್ತವೆ. ಇದರಲ್ಲಿ ನೂರಕ್ಕೆ ೫ ರಂತೆ ವೆಚ್ಚದ ನಿಮಿತ್ತವಾಗಿ ತೆಗೆದಿಡಲ್ಪಟ್ಟು, ಉಳಿದುದರಲ್ಲಿ ಮೊದಲನೆ ಬಹುಮಾನಕ್ಕೆ ೧೦೦ ಕ್ಕೆ ೨೦ ರಂತೆಯೂ, ೨ ನೆಯದಕ್ಕೆ ೧೦೦ ಕ್ಕೆ ಹತ್ತರಂತೆಯೂ, ೩ ನೆಯದಕ್ಕೆ ೧೦೦ ಕ್ಕೆ ೫ ರಂತೆಯೂ ಯುದ್ಧದಸಾಲದ ದಸ್ತಾವೇಜುಗಳನ್ನು ಕೊಡುವರು. ಒಟ್ಟಿಗೆ ೧೦೦೦ ಬಹುಮಾನಗಳು ಕೊಡಲ್ಪಡುವುವು. ಜುಲೈ ತಾ|| ೨ ನೆಯ ದಿನ ಈ ಲಾಟರಿಯ ಚೀಟಿಗಳನ್ನೆತ್ತಿ ಫಲಿತಾಂಶವನ್ನು ಹೇಳಬೇಕಾಗಿದ್ದಿತು. ಆದರೆ ೧೫೩೧೫ ನೆ ನಂಬರುಳ್ಳ ೨ ಟಿಕೇಟುಗಳು ಕೈತಪ್ಪಿನಿಂದ ಅಸ್ಸಾಮಿನಲ್ಲಿರುವ ಹೇಲಿರವರಿಗೂ, ಬೊಂಬಾಯಿಯ ಸರ್ ಡಿ. ತಾತಾರವರಿಗೂ ಸಹ ಮಾರಲ್ಪಟ್ಟಿದ್ದುದರಮೇಲೆ, ಸರ್ ತಾತಾರವರು ಬೊಂಬಾಯಿ ಹೈಕೋರ್ಟಿನಲ್ಲಿ ದಾವಾಮಾಡಿದಕಾರಣ ಲಾಟರಿ ಫಲಿತಾಂಶವು ತೇಲುವುದಕ್ಕೆ ಅಡ್ಡಿಯಾಯಿತು. ಹೈಕೋರ್ಟಿನವರು ದಾವೆಯನ್ನು ತಿರಸ್ಕರಿಸಿದರು. ತಾ|| ೫ ರಲ್ಲಿ ಲಾಟರಿ ಚೀಟಿಯನ್ನೆತ್ತಿದರು. ೭೭೭೦೮ ನೆ ನಂ. ಟಿಕೆಟ್ಟಿನವರಿಗೆ ಮೊದಲನೆ ಬಹುಮಾನ ೭೨೪೮೫ ರೂ. ದೊರೆಯಿತು. ಉಳಿದ ಅನೇಕಾನೇಕರಿಗೆ ಗೊತ್ತಾಗಿದ್ದ ಮೇರೆಗೆ ಬಹುಮಾನಗಳು ದೊರೆದುವು.

ಮುಖ್ಯಮಂತ್ರಿ ಲಾಯಿಡ್ ಜಾರ್ಜರವರು ಗ್ಲಾಸ್ಗೋ ಪಟ್ಟಣದಲ್ಲಿ ಒಂದು ಅತ್ಯಾವಶ್ಯಕವಾದ ಉಪನ್ಯಾಸವನ್ನು ಕಳೆದ ವಾರದಲ್ಲಿ ಮಾಡಿದರು. ಅದರಲ್ಲಿ ಪ್ರಕೃತ ಯುದ್ಧದ ವಿಷಯವೇ ಮುಖ್ಯವಾಗಿದ್ದಿತು. ಅಗ ರಷ್ಯಾ ವಿಷಯವನ್ನು ಕುರಿತು ಮಾತನಾಡುವಾಗ್ಗೆ—"ರಷ್ಯಾ ಪ್ರಜೆಗಳಿಗೆ ದಿನದಿನಕ್ಕೆ ಸೌಕರ್ಯಗಳು ಹೆಚ್ಚುತ್ತಿವೆ. ಈಗ ಅವರಿಗೆ ದೊರೆದಿರುವ ಪ್ರಭುತ್ವದಂಥ ಉತ್ತಮ ಪ್ರಭುತ್ವವು ಹಿಂದೆಂದೂ ಅವರಿಗೆ ದೊರೆದಿರಲಿಲ್ಲ. ಈಗಣ ರಷ್ಯಾ ಪರಿವರ್ತನದಿಂದ ಯುದ್ಧವು ಸ್ವಲ್ಪ ಆಲಸ್ಯಕ್ಕೆ ಬಿದ್ದಿತು. ಈಗ ರಷ್ಯಾ ದೇಶವು ಬಹಳ ಬಲವತ್ತರವಾಗಿದೆ. ಇನ್ನು ಅವರು ಸಂಪೂರ್ಣವಾದ ದಿಗ್ವಿಜಯವನ್ನು ಪಡೆಯಬಲ್ಲರು" ಎಂದು ಹೇಳಿದುದಲ್ಲದೆ ಜರ್ಮನರ ಸಂಧಿವಿಷಯದಲ್ಲಿ ಮಾತನಾಡಿದಾಗ್ಗೆ—"ಪ್ರಷ್ಯನ್ನರ ಯುದ್ಧಾಭಿನಿವೇಶ ದೌರ್ಜನ್ಯವು ಅಡಗಿಹೋದಲ್ಲದೆ ನಿಷ್ಕಳಂಕವೂ ಶಾಶ್ವತವೂ ಆದ ಸಂಧಿಯು ಜರುಗಲವಕಾಶವಿಲ್ಲ. ಅಂಥ ಸಂಧಿಯಿಂದ ಶಾಶ್ವತ ಶಾಂತಿಯನ್ನು ಪ್ರಪಂಚದಲ್ಲಿ ಸ್ಥಾಪಿಸಬೇಕಾದರೆ ಜರ್ಮನ್ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದೇ ಮುಖ್ಯ ಕರ್ತವ್ಯವು" ಎಂದು ಹೇಳಿದರು.

೧೯೧೫ ನೆಯ ವರ್ಷದಲ್ಲಿ ಮೆಸಪೆಟೋಮಿಯಾದ ಕುಟಲ್ ಅಮಾರಾ ಕೋಟೆಯಲ್ಲಿ ಇಂಗ್ಲೀಷ್ ಸೈನಿಕರು ಸೇರಿದ್ದಾಗ ಕೋಟೆ ಸಹಿತ ತುರುಕರ ವಶವಾಗಿ ಉಂಟಾದ ಅಪಜಯಕ್ಕೆ ಕಾರಣಭೂತರಾರೆಂಬುದನ್ನು ವಿಚಾರಿಸುವುದಕ್ಕೆ ಸೀಮೆಯಲ್ಲಿ ಒಂದು ಸಂಘವು ಏರ್ಪಡಿಸಲ್ಪಟ್ಟಿದ್ದಿತು. ಅವರು ವಿಚಾರಣೆಯನ್ನೆಲ್ಲಾ ನಡೆಯಿಸಿ, ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರು. ಆ ಕಾಲದೊಳಗಿದ್ದ ಭರತಖಂಡದ ವೈಸ್ರಾಯರೂ, ಸರ್ವಸೇನಾಪತಿಗಳೂ, ಸರ್ಜನ್ ಜನರಲರೂ, ಇಂಡ್ಯಾ ಸ್ಟೇಟ್ ಸೆಕ್ರೆಟರಿಯವರೂ, ಯುದ್ಧಸಂಘದವರೂ ಇದಕ್ಕೆ ಕಾರಣಭೂತರೆಂತಲೂ, ಬಳಲಿಹೋಗಿದ್ದ ಸ್ವಲ್ಪ ಸೈನ್ಯವನ್ನು ಕೂಡಿಸಿಕೊಂಡು, ತಕ್ಕಷ್ಟು ಬೆಂಬಲವಿಲ್ಲದಿರುವಾಗ ಬಾಗ್ದಾದು ಪಟ್ಟಣವನ್ನು ಹಿಡಿಯಲು ಮಾಡಿಸಿದ ಪ್ರಯತ್ನದಿಂದಲೇ ಇಂಥ ಅನಾಹುತವು ಪ್ರಾಪ್ತವಾಯಿತೆಂತಲೂ, ಇದಕ್ಕೆ ಮೇಲೆತಿಳಿಸಿದ ಉದ್ಯೋಗಿಗಳ ಅಸಮರ್ಥತೆ, ಅನಾಲೋಚನೆ, ಉದಾಸೀನ್ಯ ಇವುಗಳೇ ಕಾರಣಗಳೆಂತಲೂ ಹೇಳಲ್ಪಟ್ಟಿದೆ. ಇದರಮೇಲೆ ತಮ್ಮ ಸಮಾಧಾನೋಕ್ತಿಗಳೇನೆಂಬುದನ್ನು ಆಗಣ ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರು ಪಾರ್ಲಿಮೆಂಟಿನ ಮುಂದೆ ಇಷ್ಟರಲ್ಲೇ ಹೇಳಬೇಕಾಗಿ ಬಂದಿದೆ. ಪರ್ಯವಸಾನವೇನೋ ನೋಡಬೇಕು.

"ಸಾಮ್ರಾಜ್ಯ ನಿಯಮನಿರ್ಮಾಣ ಸಭೆಗೆ ಮದ್ರಾಸಾಧಿಪತ್ಯದ ಜಮೀಂದಾರರುಗಳ ಪ್ರತಿನಿಧಿಯಾಗಿರುವ ಅ|| ಕೆ. ವಿ. ರಂಗಸ್ವಾಮಿ ಅಯ್ಯಂಗಾರರೂ, ಮದ್ರಾಸು ನಿಯಮನಿರ್ಮಾಣ ಸಭೆಗೆ ಉತ್ತರಜಿಲ್ಲೆಗಳ ಪ್ರತಿನಿಧಿಯಾಗಿರುವ ಅ|| ಕೆ. ಆರ್. ವಿ. ಕೃಷ್ಣರಾವು ಪಂತುಲುಯವರೂ ಕೂಡ ಸ್ವರಾಜ್ಯಸಾಧನ ಸಮಿತಿಯ ವಿಷಯದಲ್ಲಿ ಪೂರ್ಣಾಭಿಮಾನಿಗಳಾಗಿ ಕೆಲಸಮಾಡುತ್ತಿರುವುದಲ್ಲದೆ ಪ್ರಜೆಗಳೆಲ್ಲರೂ ಈ ಪ್ರಯತ್ನದಲ್ಲಿ ಸೇರಿ ಕೆಲಸಮಾಡಬೇಕೆಂದು ಬೋಧಿಸುತ್ತಿದ್ದಾರೆ. ಮತ್ತೂ ಅ|| ರಂಗಸ್ವಾಮಯ್ಯಂಗಾರರು ಯುದ್ಧದ ವೆಚ್ಚಕ್ಕೆ ಪ್ರಜೆಗಳು ಚಂದಾ ಕೊಡುವ ವಿಷಯದಲ್ಲಿ ತಮ್ಮ ಅಸಮ್ಮತಿಯನ್ನು ತಿಳಿಯಿಸಿದ್ದಾರೆ. ಇವರು ಪ್ರಜೆಗಳ ವಿಷಯವನ್ನೆತ್ತಿಕೊಳ್ಳದೆ ಸ್ವಂತವಾಗಿ ಯಾವ ಕೆಲಸವನ್ನಾದರೂ ಮಾಡಿಕೊಳ್ಳಲು ಅಡ್ಡಿಯಿಲ್ಲ. ಆದರೆ ಇವರ ಅಭಿಪ್ರಾಯಗಳು ಜಮೀಂದಾರರುಗಳ ಅಭಿಪ್ರಾಯವೇ ಆಗಿರುವುದೆಂದು ಇತರರು ತಿಳಿದುಕೊಳ್ಳಬಾರದು. ಇವರು ಸ್ವರಾಜ್ಯವಿಷಯವಾಗಿ ಜಮೀಂದಾರರುಗಳೊಡನೆ ಯಾವ ಆಲೋಚನೆಯನ್ನೂ ಮಾಡಿರುವುದಿಲ್ಲ. ಇವರುಗಳು ಪಡುವ ಅಭಿಪ್ರಾಯದಲ್ಲಿ ಜಮೀಂದಾರರು ಏಕೀಭವಿಸದಿರುವುದು ಮಾತ್ರವಲ್ಲದೆ, ಇವರ ವೈಖರಿಯು ತಮಗೆ ಹಾನಿಕರವಾದುದೆಂದು ಯೋಚಿಸಿರುತ್ತಾರೆ. ಸಕಾಲದಲ್ಲಿ ಶಾಸ್ತ್ರೋಕ್ತರೀತಿಯಿಂದ ಸ್ವರಾಜ್ಯವನ್ನು ಪಡೆಯಲು ಜಮೀಂದಾರರು ವಿರೋಧಿಸುವವರಲ್ಲ. ಆದರೆ ಆ ಸ್ವರಾಜ್ಯವನ್ನು ಪಡೆದುಕೊಳ್ಳುತ್ತೇವೆಂದು ಸ್ವರಾಜ್ಯಸಾಧನಸಮಿತಿಯವರು ಈಗ ಅನುಸರಿಸಿರುವ ಮಾರ್ಗವನ್ನು ಜಮೀನ್‌ದಾರರುಗಳು ಅನುಮತಿಸುವುದಿಲ್ಲ" ಎಂದು ಮೊದಲಾಗಿ ಒಂದು ಲೇಖನವನ್ನು ಬರೆದು, ಮದ್ರಾಸು ಆಧಿಪತ್ಯದಲ್ಲಿ ಪ್ರಮುಖರಾದ ಪಿಠಾಪುರದ ರಾಜರು, ವೆಂಕಟಗಿರಿ ರಾಜರು ಮೊದಲಾದ ೬೫ ಮಂದಿ ಜಮೀಂದಾರರುಗಳು ರುಜು ಮಾಡಿ ಪ್ರಕಟಿಸಿರುತ್ತಾರೆ.

ಪತ್ರವ್ಯವಹಾರ.

ಬ|| ರಾಜ ಸಭಾಭೂಷಣ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರವರಿಗೆ ಸಿ. ಐ. ಇ. ಎಂಬ ಘನತರವಾದ ಪ್ರಶಸ್ತಿಯನ್ನು ಬ್ರಿಟಿಷ್ ಸಂಕಾರದವರು ದಯಪಾಲಿಸಿದ್ದಕ್ಕಾಗಿ ವಿಜಾಪುರ ಜಿಲ್ಲಾ ಸಭೆಯ ಪರವಾಗಿ ಒಂದು ಸಾರ್ವಜನಿಕ ಸಭೆಯು ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ರಾ|| ಸಾ|| ಶಿವಲಿಂಗರಾವ್ ದೇಶಮುಖ ಆಲಮೇಲ ಇವರ ಅಧ್ಯಕ್ಷತೆಯಲ್ಲಿ ನೆರೆಸಲ್ಪಟ್ಟಿತ್ತು. ಆಗ ಈ ಬಗ್ಗೆ ಅಭಿನಂದನ ಪತ್ರಗಳು ವೈಸರಾಯ ಸಾಹೇಬರಿಗೂ ಮೈಸೂರು ಮಹಾರಾಜರವರಿಗೂ ದಿ|| ಬ|| ಪುಟ್ಟಣ್ಣಶೆಟ್ಟರ ವರಿಗೂ ಕಳಿಸಿಕೊಡಬೇಕೆಂದು ನಿರ್ಣಯಿಸಲ್ಪಟ್ಟಿತು. ಆಗ ಮಿ|| ಪಿ. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ. ಮಿ|| ವಿ. ಎಸ್. ಕ್ರಿಸ್ತಿ ಬಿ. ಎ. ಮತ್ತು ಅಧ್ಯಕ್ಷರವರ ಸಮಯೋಚಿತ ಭಾಷಣಗಳು ನೆರವೇರಿದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬಪ್ರೇಕ್ಷಕ.

ಬಾಚಹಳ್ಳಿ.

ಕೃಷ್ಣರಾಜಪೇಟೆ ತಾ|| ಸಂತೆ ಬಾಚಹಳ್ಳಿಯಲ್ಲಿ ವೇ|| ಗುರುದೇವಶಾಸ್ತ್ರಿಗಳವರ ಮಗಳಾದ ಸೌ|| ಗೌರಮ್ಮನನ್ನು ಕೀಲಾರದ ನಂಜಪ್ಪನವರ ಮಗ ಚಿ|| ರಾ|| ಸಿದ್ಧಲಿಂಗಪ್ಪನಿಗೂ ವೇ|| ಚಂದ್ರಶೇಖರಶಾಸ್ತ್ರಿಗಳ ಮಗಳು ಚಿ|| ಸೌ|| ಸಿದ್ಧಲಿಂಗಮ್ಮನನ್ನು ಸಂಪಿಗೆ ದೊಡ್ಡ ರೇವಣ್ಣನವರ ಮಗ ಚಿ|| ಶ್ರೀಕಂಠಯ್ಯನಿಗೂ ಕೊಟ್ಟು ೯-೬-೧೯೧೭—೧೩-೬-೧೯೧೭ ಈ ದಿವಸಗಳಲ್ಲಿ ಶಾಸ್ತ್ರೀಯವಾಗಿ ಕನ್ಯಾದಾನ ಮಹೋತ್ಸವಗಳು ನಡೆಸಲ್ಪಟ್ಟವು. ವೇ|| ಸಿದ್ಧಲಿಂಗಶಾಸ್ತ್ರಿಗಳು ಮೊದಲಾದ ಆಗಮಿಕರು ಆರಾಧ್ಯರು ಇಷ್ಟಬಂಧುಗಳು ಹೊನ್ನುಡಿಕೆ ಮೊದಲಾದ ಅನೇಕ ಪೇಟೆ ಮನೆಯ ಪ್ರಮುಖರು ಸ್ಥಳದ ವೇ|| ಸೋಮಶೇಖರಶಾಸ್ತ್ರಿಗಳು ಪಟೇಲ ಬಸಪ್ಪ ಶಿವಬಸವಶೆಟ್ಟರು ನಂಜಪ್ಪನವರು ಸಂಗನಬಸಪ್ಪನವರು ಮೊದಲಾದ ಮುಖಂಡರು ತಮ್ಮಗಳ ಮನಸ್ಸಿನ ವೈಷಮ್ಯವನ್ನು ಬಿಟ್ಟು ಬಹಳ ಅನುರಾಗದೊಡನೆ ಸಭೆಗೂಡಿ ಮುಹೂರ್ತಕಾರ್ಯಗಳನ್ನು ಸಾಂಗವಾಗಿ ನೆರವೇರಿಸಿದ ನಂತರ ಮ|| ರಾ|| ಹೊನ್ನುಡಿಕೆ ಯಜಮಾನ್ ರುದ್ರಪ್ಪನವರು ಮೈಸೂರು ವಿದ್ಯಾಭಿವೃದ್ಧಿ ಫಂಡಿಗೆ ಸಹಾಯಮಾಡೋಣದರಿಂದ ಫಲಪ್ರಯೋಜನವನ್ನೂ ಅದರ ವ್ಯವಸ್ಥೆಯನ್ನೂ ಕೈ|| ವೈ|| ವೀರಸಂಗಪ್ಪನವರಿಂದ ಉಂಟಾಗಿರುವ ಮಠಸುಧಾರಣೆಯ ಜ್ಞಾಪಕಾರ್ಥವಾಗಿ ಅವರ ಹೆಸರಿನ ಫಂಡು ವೃದ್ಧಿಯಾಗುವದಕ್ಕಾಗಿ ಸಹಾಯಮಾಡಿ ಮೈಸೂರು ಸ್ಟಾರ್ ಪತ್ರಿಕೆಗೆ ಉತ್ತೇಜನವನ್ನುಂಟುಮಾಡಬೇಕೆಂಬುವುದನ್ನೂ ವಿವಾಹದಲ್ಲಿ ಕನ್ಯಾದಾನದ ಪುಣ್ಯಫಲವು ಮಹಾಧಿಕವಾಗಿರುವುದಾಗಿಯೂ, ಕನ್ಯಾಶುಲ್ಕಸಂಗ್ರಹದಿಂದ ಪಾಪಾಧಿಕ್ಯವುಂಟಾಗುವುದೆಂತಲೂ ಪ್ರಬಲವಾದ ಆಧಾರದೊಂದಿಗೆ ಇತಿಹಾಸಗಳನ್ನು ಹೇಳಿ, ಸರ್ವರೂ ಐಂಕ್ಯವಾದ ಆಚರಣೆಗಳನ್ನು ಬಿಟ್ಟು ಸದ್ವರ್ತನೆಗಳಲ್ಲಿ ನಡೆಯಬೇಕೆಂದು ಸಹ ಗಂಭೀರವಾದ ಧ್ವನಿ ಭಾಷಣದೊಡನೆ ಉಪನ್ಯಾಸವನ್ನು ಪೂರೈಸಿದರು. ವೇ|| ಸೋಮಶೇಖರಶಾಸ್ತ್ರಿ

ಗಳು ಸಭೆಗೆ ಉಂಟಾದ ಆನಂದವನ್ನೂ ಒಪ್ಪಿಗೆಯನ್ನೂ ಪ್ರದರ್ಶನಮಾಡಿ, ವಿದ್ಯಾಭಿವೃದ್ಧಿ ಫಂಡಿಗೆ ಗಂಡಿನವರಿಂದ ೩ ರೂ. ಯನ್ನೂ, ಹೆಣ್ಣಿನವರಿಂದ ೨ ರೂ. ಯನ್ನೂ ವೀರಸಂಗಪ್ಪನವರ ಫಂಡಿಗೆ ಉಭಯರಿಂದಲೂ ೧ ರೂ. ಯನ್ನೂ ಒಟ್ಟು ೬ ರೂ. ಗಳನ್ನು ತೆಗೆಸಿ ರವಾನೆಬಗ್ಗೆ ಹೊನ್ನುಡಿಕೆಯ ಜಮಾನರವರ ವಶಕ್ಕೆ ಕೊಡಿಸಿದರು. ಅನಂತರ ಸಭೆಗೆ ಹಾರ ಸುಗಂಧಾದಿಗಳನ್ನೂ, ಫಲತಾಂಬೂಲಗಳನ್ನೂ ಕ್ರಮವರಿತು ವಿನಿಯೋಗಿಸಿ, ಸುಮಂಗಲಿಯರ ಮಂಗಳರವಗಳೊಡನೆ ಸಭೆಯನ್ನು ಪೂರ್ತಿಮಾಡಿದರು. ಈ ರೀತಿ ನಮ್ಮ ಮತಸೇವೆಗಾಗಿ ತ್ರಿಕರಣಗಳನ್ನು ದಂಡಿಸುವ ವಾತ್ಸಲ್ಯಶೀಲಿಗೆ ಜಗದೀಶನು ಆಯುರಾರೋಗ್ಯವನ್ನುಂಟುಮಾಡಲೆಂದು ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ.

ಕನ್ನಡ ಪಂಡಿತಪರೀಕ್ಷೆ.

ಈ ವರ್ಷ ಪಂಡಿತಪರೀಕ್ಷೆಗೆ ನಿಯಮಿತವಾಗಿರುವ ಪುಸ್ತಕವೊಂದನ್ನು ಓದಿನೋಡಿರುವಿರಾ? ವೈಧೃತಿಧನಿಷ್ಠಾಪಂಚಕಗಳಿಂದ ಉಪಕ್ರಮವಾಗಿ ಅಮಾವಾಸೆಯಿಂದ ಕೊನೆಗಂಡಿದೆ. "ಕನ್ಯತು, ಹೊಡಚೆಂಡಲು, ಅನರ್ಥ್ಯನ, ಥುಲಾಯಿಸು, ಲಾಡಿ, ಬೊಡ್ಡಿ" ಮುಂತಾದ ಶುದ್ಧ ಶಬ್ದಗಳಿಂದ ಅತ್ಯಂತವೂ ವಿರಾಜಮಾನವಾಗಿದೆ. "ಬಯಸಿಬಯಸಿ ಬಾಳಹೊಕ್ಕರೆ.........ಕ್ಕೆಲಿ ಕಾಸಿಲ್ಲ ಮೈಲಿಬೋಸಿಲ್ಲ......ಅವಳಿಗೆ........ನಿನ್ನಂಥ ಅಗಡುಬೊಮ್ಮ........"ಮುಂತಾದ ಸ್ವರ್ಣ ವಾಕ್ಯಗಳಿಗೆ ನೆಲೆಮನೆಯಾಗಿದೆ. ...

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಳ್ಯತಾವತಾರಾ ...
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂ ...
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಯೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಜುಲೈ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೨೮

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ...

ಎಚ್. ಆರ್. ಶಿವಸ್ವಾಮಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಸತ್ಯಮೇವಜಯತೇ.

ಮದನೋದ್ಭವ ಗುಳಿಗೆ.

ನಪುಂಸಕತ್ವಾರಿ ತೈಲವು.

ಯೋಗ್ಯತಾಪತ್ರಗಳು.

ವಿಳಾಸ—ವೈದ್ಯ. ಜೆ. ಎಲ್. ಜೋಶಿ ಮತ್ತು ಕಂಪೆನಿ,

ಔಷಧಿಗಳು] ಶಾಸ್ತ್ರೋಕ್ತ]

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

37 ಮೂರುಕಾಸು!

ಸುವಾಸಿಕ ಹುರುಕಿನ ಔಷಧ.

ಪಕುಜೀವನ ಚೂರ್ಣ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

33

ಶ್ರೀಕರಕರ್ಪೂರಮಾತ್ರೆ

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
9 ಸದ್ವೈದ್ಯಶಾಲಾ ನಂಜನಗೂಡು.

ಚಿತ್ರದುರ್ಗ ಆರ್ಯಕ್ಷಸ್ಟೂಡೆಂಟ್ಸ್ ಹೋಂ.

ಹುಸೇನ ಸಾಹೇಬ ನೋದೀನ ಸಾಹೇಬ ಮುಲ್ಲಾ,
ಅರ್ಕಶಾಫ ಶೋಧಕ, ಹೆಡ್ ಆಫೀಸ
18 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಅರ್ಕಶಾಫಾ ಅಂದರೆ ಆರೋಗ್ಯಬಿಂದು.

ಅವ್ರಗಳ ನಾಮಗಳು.

೩ ನೇ ತರಗತಿ ರೇವಾಗಣೇಶಾದಿಪಾಠ.

ಷ್ ಕನ್ನಡ ಸ್ಕೂಲ್ ಪುಸ್ತಕಗಳೆಲ್ಲವೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್ ಸನ್ಸ್
6 ವಿದ್ಯಾಸಿಧಿ ಬುಕ್‌ಡಿಪೋ ಮೈಸೂರು.

೧೯೧೭ ನೆಯ ಇಸವಿ ಜುಲೈ ತಾ|| ೮ ರಿಂದ ೧೯೧೭ ನೆಯ ಜುಲೈ ತಾ|| ೧೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಷಾಢ ಬ|| ಚೌತಿಯಿಂದ ಆಷಾಢ ಬ|| ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿ ತೇದಿ
8	[1] ಭಾನು	ಚೌತಿ	29-54	ಧನಿಷ್ಟ	12-28	25
9	[2] ಸೋಮ	ಪಂಚ	23-44	ಶತಭಿಷ	8-17	26
10	[3] ಮಂಗಳ	ಷಷ್ಠಿ	17-46	ಪೂಭಾ	4-17	27
11	[4] ಬುಧ	ಸಪ್ತಮಿ	12-16	ಉಭಾ	0-41	28
12	ಗುರು	ಅಷ್ಟಮಿ	7-23	ಅಶ್ವಿನಿ	54-54	29
13	[5] ಶುಕ್ರ	ನವಮಿ	3-21	ಭರಣಿ	53-25	30
14	[6] ಶನಿ	ದಶಮಿ	0-7	ಅಪರ	57-19	31

(1) ಚತುರ್ಥೀತಿಥಿಃ. (2) ತಿಥಿದ್ವಯಂ ಟೀಕಾಚಾರ್ಯರ ಪುಣ್ಯದಿನ. (3) ಸಪ್ತಮೀತಿಥಿಃ ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವಃ. (4) ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವಃ. (5) (ಸೌರದೀಕ್ಷಾಮಿಥುನಕೃಷ್ಣ ದಶಮೀತಿಥಿಃ.) (6) (ಸೌರದೀಕ್ಷಾಮಿಥುನಕೃಷ್ಣ ಸ್ಮಾರ್ತ ಏಕಾದಶೀತಿಥಿಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಮಾಲೆ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—[illegible]—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಕ್ರಯಾದಿಗಳನ್ನು ಮುಂಗಡವಾಗಿ ಕಳುಹಿಸಬೇಕು ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜುಲೈ ತಾ|| ೧೪ ನೆಯ ಭಾನುವಾರ.

ಲಾರ್ಡ್ ಹಾರ್ಡಿಂಜ್‌ರವರ ಉತ್ತರವು.

ಮೆಸಪೊಟೋಮಿಯಾ ಯುದ್ಧವಿಚಾರಕ ಸಂಘದವರ ವರದಿಯಮೇಲೆ ಲಾರ್ಡ್ ಹಾರ್ಡಿಂಜ್‌ರವರು ಕೊಡಬೇಕಾಗಿದ್ದ ಸಮಾಧಾನವನ್ನು ಪಾರ್ಲಿಮೆಂಟಿನಲ್ಲಿ ಕಳೆದವಾರ ಓದಿ ಹೇಳಿದರು. ಅದು ಬಹುಜನರ ಮನಸ್ಸಿನಲ್ಲಿದ್ದ ಅನೇಕಪ್ರಕಾರವಾದ ಭೀತಿಯನ್ನೂ ಸಂಶಯಗಳನ್ನೂ ಕ್ಷಣಮಾತ್ರದಲ್ಲಿ ನಿಶ್ಶೇಷಮಾಡಿಬಿಟ್ಟದ್ದು ಸಂತೋಷಪ್ರದವು. ಅವರ ಸಮಾಧಾನದಲ್ಲಿ ಹೇಳಲ್ಪಟ್ಟಿರುವ ಮುಖ್ಯವಿಷಯವೇನೆಂದರೆ—ಈ ವರದಿಯನ್ನು ನೋಡಿದರೆ ಭರತಖಂಡವು ಈ ಮಹಾಯುದ್ಧಕ್ಕೆ ತಕ್ಕ ರೀತಿಯಲ್ಲಿ ಸಹಾಯಮಾಡಲಿಲ್ಲವೆಂದು ವ್ಯಕ್ತವಾಗುತ್ತದೆ. ಇದು ಸುಳ್ಳುಮಾತು. ಈ ವರದಿಯಿಂದ ಭಾರತೀಯರು ಪಟ್ಟ ಶ್ರಮವೆಲ್ಲವೂ ಇಂಗ್ಲೆಂಡು ದೇಶದವರಿಂದ ಗಮನಿಸಲ್ಪಡಲಿಲ್ಲವೆಂದು ಅವರುಗಳು ನಿರುತ್ಸಾಹಪಡಲವಕಾಶವಾಗಿರುವುದು. ಭಾರತಸೈನ್ಯವು ಮೆಸಪೊಟೋಮಿಯಾ ಯುದ್ಧಕ್ಕೆ ಮುಂಚೆಯೇ ಫ್ರಾನ್ಸು, ಈಜಿಪ್ಟ್, ಪೂರ್ವಾಫ್ರಿಕಾ ರಣರಂಗಗಳಿಗೆ ಕಳುಹಿಸಲ್ಪಟ್ಟಿದ್ದಿತು. ಈ ರಂಗಗಳಿಗೆಲ್ಲಾ ೮೦ ಸಾವಿರ ಆಂಗ್ಲಸೈನಿಕರೂ ೨೧೦೦೦೦ ಹಿಂದೂ ಸೈನಿಕರೂ ಕಳುಹಿಸಲ್ಪಟ್ಟಿದ್ದರು. ಇದಕ್ಕೆ ಮುಂಚೆ ಯಾವಾಗಲೂ ಭರತಖಂಡದಿಂದ ಹೊರಕ್ಕೆ ೧೮ ಸಾವಿರ ಸೈನ್ಯಕ್ಕಿಂತ ಹೆಚ್ಚಾಗಿ ಕಳುಹಿಸಲ್ಪಟ್ಟದಿಲ್ಲ. ಅಷ್ಟು ಹೆಚ್ಚು ಸೈನ್ಯವು ಇತರ ರಂಗಗಳಿಗೆಲ್ಲಾ ಕಳುಹಿಸಲ್ಪಟ್ಟಬಳಿಕ ಮೆಸಪೊಟೋಮಿಯಾ ಯುದ್ಧವು ಸಂಭವಿಸಿದುದರಿಂದ ಈ ರಂಗಕ್ಕೆ ಚೆನ್ನಾಗಿ ಶಿಕ್ಷೆಯೊಂದಿದ ಸೈನ್ಯವನ್ನು ಹೆಚ್ಚಾಗಿ ಕಳುಹಿಸಿಕೊಡಲು ಅಸಾಧ್ಯವಾಯಿತು. ಆ ಕಾಲದಲ್ಲಿ ಭರತಖಂಡದ ಸೈನ್ಯವೆಲ್ಲಾ ಹೊರಕ್ಕೆ ಹೊರಟುಹೋಗಿ ಟೆರಿಟೋರಿಯಲ್ ಸೈನ್ಯವು ಭರತಖಂಡಕ್ಕೆ ಬರುವವರೆಗೂ ಕೇವಲ ೧೫ ಸಾವಿರ ಸೈನ್ಯವು ಮಾತ್ರವೇ ಈ ದೇಶದಲ್ಲಿ ಉಳಿದಿದ್ದಿತು. ಭಾರತೀಯರ ಭಕ್ತಿಯು ಭಯದಮೇಲೆ ಆಧಾರಪಟ್ಟಿರದೆ ಪ್ರೇಮದಮೇಲೆ ಆಧಾರಮಾಡಿಕೊಂಡಿರುವುದರಿಂದ ಅಲ್ಲಿ ಅಷ್ಟು ಸ್ವಲ್ಪ ಸಂಖ್ಯೆಯಿದ್ದರೂ ಸುರಕ್ಷಿತತೆಯಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಸಾಮ್ರಾಜ್ಯ ಪ್ರಭುತ್ವದವರು ಕೋರಿದ ಸಹಾಯವನ್ನೆಲ್ಲಾ ಇಂಡ್ಯಾ ಪ್ರಭುತ್ವದವರು ನೆರವೇರಿಸುತ್ತಲೇ ಬಂದಿದ್ದಾರೆ. ಯುದ್ಧಾರಂಭಕಾಲದಲ್ಲಿ ಭರತಖಂಡವು ತನ್ನ ಬಲವನ್ನೆಲ್ಲಾ ಸಾಮ್ರಾಜ್ಯಕ್ಕರ್ಪಿಸಿ, ಶಲ್ಯಾವಶಿಷ್ಟವಾಗಿಹೋಗಿದ್ದಿತೆಂದರೆ ಅತಿಶಯೋಕ್ತಿಯಾಗದು. ತಕ್ಕಷ್ಟು ಸೇನಾಸಹಾಯವು ಬರುವವರೆಗೂ ಕುಟ್ ಪಟ್ಟಣದಿಂದಾಚೆಗೆ ಬಾಗ್ದಾದಿನಕಡೆಗೆ ಹೊರಡಬಾರದೆಂದು ಇಂಡ್ಯಾ ಪ್ರಭುತ್ವದವರು ಸೇನಾಪತಿ ನಿಕ್ಸನ್‌ರವರಿಗೆ ತಿಳಿಯಪಡಿಸಿದರೂ ಅವರು ಅದರಂತೆ ಮಾಡದೆ ಮುಂದುವರಿದು ಹೋದರು. ಆ ವಿಷಯವನ್ನು ವಿಚಾರಕಸಂಘದವರು ಗಮನಿಸಿಯೇ ಇಲ್ಲ. ಅದುಕಾರಣ ಕುಟ್ ನಗರದ ಪತನಕ್ಕೆ ಇಂಡ್ಯಾ ಸರ್ಕಾರದವರು ಉತ್ತರವಾದಿಗಳಲ್ಲ. ಬಾಗ್ದಾದ್ ಪಟ್ಟಣವನ್ನು ಹಿಡಿದುಕೊಳ್ಳುವ ವಿಷಯವನ್ನು ಸಾಮ್ರಾಜ್ಯ ಸರ್ಕಾರದವರೇ ಯೋಚಿಸಿ ನಿರ್ಧರಿಸತಕ್ಕದ್ದು ಯುಕ್ತವೆಂದು ಇಂಡ್ಯಾ ಪ್ರಭುತ್ವದವರು ಸ್ಟೇಟ್ ಸೆಕ್ರೆಟರಿಯವರಿಗೆ ತಂತಿಯಮೂಲಕ ತಿಳಿಯಿಸಿಬಿಟ್ಟರು. ಸ್ಟೇಟ್ ಸೆಕ್ರೆಟರಿಯವರು ಮತ್ತೂ ಸೇನಾಪತಿ ನಿಕ್ಸನರು—ಇವರುಗಳೇ ಬಾಗ್ದಾದಿನಮೇಲಣ ಅಭಿಯೋಗವನ್ನು ನಿರ್ಧರಿಸಿದವರು. ಅದರಲ್ಲಿ ಲಾರ್ಡ್ ಹಾರ್ಡಿಂಜ್‌ರವರಿಗೆ ಸಂಬಂಧವೇ ಇರಲಿಲ್ಲ. ವೈದ್ಯಸಹಾಯವಿಷಯದಲ್ಲೂ ಮೇಲ್ವಿಚಾರಣೆಯು ಆ ಶಾಖೆಯ ಮುಖ್ಯಾಧಿಕಾರಿಗಳಿಗೇ ವಹಿಸಲ್ಪಟ್ಟಿದ್ದಿತಲ್ಲದೆ, ಆ ಮುಖ್ಯಾಧಿಕಾರಿಯು ಎಲ್ಲವೂ ಸಮರ್ಪಕವಾಗಿದೆಯೆಂದು ತಿಳಿಯಿಸುತ್ತ ಬಂದುದರಿಂದ ೩ ಸಾವಿರ ಮೈಲಿಯಿಂದಾಚೆ ನಡೆಯುತ್ತಿರುವ ಲೋಪಾಲೋಪವನ್ನು ವೈಸ್ರಾಯರು ಪ್ರತ್ಯಕ್ಷವಾಗಿ ಹೋಗಿ ನೋಡುವುದು ಸಾಧ್ಯವಾಗಿರಲಿಲ್ಲ'' ಇತ್ಯಾದಿ.

ಈ ಸಮರ್ಪಕವಾದ ಉತ್ತರವನ್ನು ಕೇಳಿ ಲಾರ್ಡುಗಳ ಸಭೆಯು ಸಭಿಕರೆಲ್ಲಾ ಸ್ತಬ್ಧರಾದರು. ಲಂಡನ್ ಟೈಮ್ಸ್ ಪತ್ರಿಕೆಯೂ ಕೂಡ ಲಾರ್ಡ್ ಹಾರ್ಡಿಂಜ್‌ರವರು ನಿರ್ದೋಷಿಗಳೆಂದು ಹೇಳಿ ಅವರ ಪರಿಪಾಲನ ನೈಪುಣ್ಯವನ್ನು ಕೊಂಡಾಡಿರುವುದು. ಈ ವಿಷಮ ಯುದ್ಧಸಮಯದಲ್ಲಿ ಭರತಖಂಡದ ಪರಿಪಾಲನವನ್ನು ಅಭೂತಪೂರ್ವವಾಗಿ ನಡೆಯಿಸಿ, ತಮ್ಮ ವೈಸ್ರಾಯಿಗಿರಿಯ ಮಧ್ಯದಲ್ಲಿ ತಮಗೆ ಪತ್ನೀಪುತ್ರರ ವಿಯೋಗವಾದರೂ ಲಕ್ಷಿಸದೆ ಕರ್ತವ್ಯವನ್ನು ಜನಾನುರಂಜಕವಾಗುವಂತೆ ನೆರವೇರಿಸಿ ಭಾರತೀಯರೆಲ್ಲರಿಂದಲೂ ಮೆಚ್ಚುವಡೆದುಹೋದ ಲಾರ್ಡ್ ಹಾರ್ಡಿಂಜ್‌ರವರಮೇಲೆ ಮೆಸಪೊಟೋಮಿಯಾ ವಿಚಾರಕಸಂಘದವರು ಹೊರಿಸಿದ ಅಪವಾದರೂಪವಾದ ಗುದ್ದವು ತೃಣದಂತೆ ನಿವಾರಿತವಾಗದೆ ಹೋಗಲಾರದೆಂದು ಭಾರತೀಯರೆಲ್ಲರೂ ನಿರೀಕ್ಷಿಸುತ್ತಿದ್ದಾರೆ. ಲಾರ್ಡ್ ಹಾರ್ಡಿಂಜ್‌ರವರಂಥ ಪ್ರಜಾಪ್ರಿಯ ವೈಸ್ರಾಯರು ತತ್ಕಾಲದಲ್ಲಿ ಭರತಖಂಡದಲ್ಲಿಲ್ಲದೆ ಇನ್ನಾರಾದರೂ ಇದ್ದರೆ ಜಗದಾಶ್ಚರ್ಯಪಡುವಂಥ ಸಹಾಯವು ಭರತಖಂಡದಿಂದ ಸಾಮ್ರಾಜ್ಯ ಸರ್ಕಾರಕ್ಕೆ ಒದಗುವುದು ಸಾಧ್ಯವಾಗುತ್ತಿದ್ದಿತೋ ಇಲ್ಲವೋ ಹೇಳಲಾಗದು. ಯದ್ಯಪಿ ಭಾರತೀಯರಲ್ಲಿ ನಿಸರ್ಗವಾದ ರಾಜಭಕ್ತಿಯು ಅನುಸ್ಯೂತವಾಗಿ ಬಂದಿದ್ದರೂ ಅದನ್ನು ಸಮಯೋಚಿತವಾಗಿ ಉಪಯೋಗಿಸಿಕೊಳ್ಳತಕ್ಕ ರಾಜತಂತ್ರಜ್ಞರಿದ್ದರೆ ಅದು ಬಹಳ ಫಲಪ್ರದವಾಗುವುದು. ಅದನ್ನು ಲಾರ್ಡ್ ಹಾರ್ಡಿಂಜರು ತಮ್ಮ ಉತ್ತಮರಾಜನೀತಿಜ್ಞತೆಯ ಧೋರಣೆಯಿಂದ ಬಹಳ ಚೆನ್ನಾಗಿ ಉಪಯೋಗಿಸಿಕೊಂಡುದರಿಂದಲೇ ಸಾಮ್ರಾಜ್ಯ ಪ್ರಭುತ್ವಕ್ಕೂ ಫಲವಾಯಿತು; ಭಾರತೀಯರಿಗೂ ಅಭೂತಪೂರ್ವವಾದ ಫಲೋದಯಕ್ಕೆ ಕಾರಣವಾಯಿತು. ಈ ಕಾರಣಗಳಿಗಾಗಿ ಸಾಮ್ರಾಜ್ಯ ಪ್ರಭುತ್ವದವರೂ ಭರತಖಂಡದ ಪ್ರಜೆಗಳೂ ಸಹ ಲಾರ್ಡ್ ಹಾರ್ಡಿಂಜ್‌ರವರ ವಿಷಯದಲ್ಲಿ ಎಷ್ಟು ಧನ್ಯವಾದ ಮಾಡಿದರೂ ತೀರದು. ಹೀಗಿರುವಾಗ ಮೆಸಪೊಟೋಮಿಯಾ ಪಜಯದ ವಿಚಾರಕಸಂಘದವರ ವರದಿಯಲ್ಲಿ ಭರತಖಂಡದ ಸಹಾಯವು ಲೆಕ್ಕಕ್ಕೇ ಬರದಂತಾಗಿ, ಲಾರ್ಡ್ ಹಾರ್ಡಿಂಜ್‌ರವರು ಪಟ್ಟ ಸಾಹಸವೆಲ್ಲಾ ಮಸಿಯಿಕ್ಕಿಹೋಗುವುದೆಂದರೆ, ಅದು ಆ ಪ್ರಭುಗಳಿಗೆ ಮಾತ್ರವೇ ಅಲ್ಲದೆ ಭಾರತೀಯರಿಗೆಲ್ಲಾ ಎಷ್ಟೋ ಸಂತಾಪಕರವಾಗುವುದೆಂಬುದಕ್ಕೆ ಸಂಶಯವಿಲ್ಲ. ಈ ವರದಿಯಮೇಲೆ ಲಾರ್ಡ್ ಹಾರ್ಡಿಂಜ್‌ರವರಿಗೆ ಏನಾದರೂ ಪೆಟ್ಟು ತಟ್ಟುವುದಾದರೆ ಅದು ನಿಜವಾಗಿಯೂ ಭಾರತೀಯರಿಗೆ ಇಮ್ಮಡಿಯಾದ ನೋವನ್ನುಂಟುಮಾಡದಿರಲಾರದು. ಲಾರ್ಡ್ ಹಾರ್ಡಿಂಜ್‌ರವರು ಈಗ ಕೊಟ್ಟಿರುವ ತಮ್ಮ ಉತ್ತರದಲ್ಲಿ "ನನ್ನ ಪ್ರಭುತ್ವದ ಗುಣಾವಗುಣವನ್ನು ಪರೀಕ್ಷಿಸುವುದಕ್ಕೆ ನೀವು ಮಾತ್ರವೇ ಕರ್ತರಲ್ಲ; ನನ್ನ ಭಾರತೀಯ ಸಹೋದರರೂ ಸಹ ಕರ್ತರಾಗಿದ್ದಾರೆ'' ಎಂದು ಆಡಿರುವ ಮಾತು ಅವರಿಗೆ ನಮ್ಮಗಳ ವಿಷಯದಲ್ಲಿ ಅಕುಂಠಿತವಾಗಿರುವ ಗೌರವಾಭಿಮಾನಗಳನ್ನು ಮತ್ತೊಮ್ಮೆ ವ್ಯಕ್ತಪಡಿಸಿರುತ್ತದೆ. ಇಂಥ ಪ್ರಭುಗಳ ರಾಜ್ಯನಿರ್ವಾಹಕ್ರಮದಲ್ಲಿ ಪ್ರಮಾದವಶಾತ್ ಅಲ್ಪಸ್ವಲ್ಪ ದೋಷಗಳೇನಾದರೂ ಸಂಭವಿಸಿದ್ದರೆ, ಉಂಟಾಗಿರುವ ಮಹಾಫಲೋದಯದಮೇಲೆ ದೃಷ್ಟಿಯಿಟ್ಟು ಗಣನೆಗೆ ತರದೆ ಪಾರ್ಲಿಮೆಂಟಿನವರೂ ಮಂತ್ರಿಮಂಡಲದವರೂ ಸಹ ಲಾರ್ಡ್ ಹಾರ್ಡಿಂಜ್‌ರವರ ನಿರ್ದೋಷಿತ್ವವನ್ನು ದೃಢಪಡಿಸುವುದಾದರೆ ಭಾರತೀಯರು ಇದುವರೆಗೆ ಮಹಾಯುದ್ಧಕ್ಕಾಗಿ ಪಟ್ಟ ನಷ್ಟಕಷ್ಟಗಳೆಲ್ಲಾ ಸಾಮ್ರಾಜ್ಯ ಪ್ರಭುತ್ವದವರಿಂದ ಗಮನಿಸಿ ಗೌರವಿಸಲ್ಪಟ್ಟಂತಾಯಿತೆಂದು ತಿಳಿಯುವರು.

ಇಂಡ್ಯಾ ಕೌನ್ಸಿಲು.

ಸೀಮೆಯಲ್ಲಿ ಭರತಖಂಡದ ರಾಜಕೀಯ ವ್ಯವಹಾರ ವಿಷಯಕವಾದ ಮುಖ್ಯ ಸೂತ್ರವನ್ನು ಹಿಡಿದುಕೊಂಡು ಮಂತ್ರಿರೂಪದಲ್ಲಿರುವ ಸ್ಟೇಟ್ ಸೆಕ್ರೆಟರಿಯೆಂಬ ಅಧಿಕಾರಿಗೆ ಮಂತ್ರಾಲೋಚನೆ ಹೇಳುವುದಕ್ಕೆ ಒಂದು ಸಭೆಯಿರುತ್ತದೆ. ಇದಕ್ಕೆ "ಇಂಡ್ಯಾ ಕೌನ್ಸಿಲ್" ಎಂದು ಹೆಸರು. ಈ ಸಭೆಯಲ್ಲಿ ಸ್ಟೇಟ್ ಸೆಕ್ರೆಟರಿಯೇ ಅಧ್ಯಕ್ಷರು. ಅವರಲ್ಲದೆ ಇನ್ನು ೧೬ ಮಂದಿ ಸಭಿಕರಿರುತ್ತಾರೆ. ಅವರಲ್ಲಿ ಒಬ್ಬರು ಉಪಾಧ್ಯಕ್ಷರು. ಇಬ್ಬರು ಅಂಡರ್‌ಸೆಕ್ರೆಟರಿಗಳು. ಉಳಿದವರು ಸಾಮಾನ್ಯಸಭಿಕರು. ಈ ಸಭೆಯು ೧೮೬೭ ನೆ ವರ್ಷದಲ್ಲಿ ಸ್ಥಾಪಿಸಲ್ಪಟ್ಟಿತು. ಭರತಖಂಡದಲ್ಲಿ ಲೆಫ್ಟನೆಂಟ್ ಗೌನರ್ರು, ಹೈಕೋರ್ಟು ಜಡ್ಜ್ ಮೊದಲಾದ ಉನ್ನತಾಧಿಕಾರಿಗಳಾಗಿದ್ದು ವಿಶ್ರಾಂತಿ ಪಡೆದುಹೋದ ಅನುಭವಿಕಜನರೇ ಈ ಸಭೆಯ ಸಭಿಕರಾಗಿರುವುದು ಪದ್ಧತಿ. ಅದುಕಾರಣ ಐರೋಪ್ಯ ಜನರೇ ಇದರ ಸಭಿಕರಾಗಿರುತ್ತಿದ್ದರು. ಆದರೆ ಇತ್ತೀಚೆಗೆ ಸ್ವಲ್ಪಕಾಲದಿಂದ ಈ ಸಭೆಗೆ ಭಾರತೀಯರಲ್ಲಿ ಇಬ್ಬರು ಎಂದರೆ ಒಬ್ಬ ಹಿಂದುವನ್ನೂ ಒಬ್ಬ ಮಹಮ್ಮದೀಯರನ್ನೂ ಸಭ್ಯರಾಗಿ ನಿಯಮಿಸುವ ಏರ್ಪಾಟಾಗಿರುವುದು. ಅದರ ಪ್ರಕಾರ ಈಗ ಮ|| ಸರ್ದಾರ್ ದಳಜಿತ್‌ಸಿಂಗ್‌ರವರೂ, ಸರ್. ಅಬ್ಬಾಸ್ ಅಲಿಬೇಗ್‌ರವರೂ ಆ ಸಭೆಯ ಸಭಿಕರಾಗಿರುವರು. ಇವರಲ್ಲಿ ಸರ್ದಾರ್ ದಳಜಿತ್‌ಸಿಂಗ್‌ರವರು ಕಾಶ್ಮೀರ ಸಂಸ್ಥಾನದ ದಿವಾನ್ ಪದವಿಗೆ ನಿಯಮಿಸಲ್ಪಟ್ಟುದರಿಂದ ಅವರು ತಮ್ಮ ಇಂಡ್ಯಾ ಕೌನ್ಸಿಲರ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟುದರಿಂದ ಆ ಪದವಿಗೆ ಅ|| ಪ್ರಭಾಶಂಕರ ಪಟ್ಟಾಣಿಯವರನ್ನೂ, ಅಧಿಕಾರದವಧಿಯು ಮುಗಿದ ಸರ್. ಅಬ್ಬಾಸ್ ಅಲಿಬೇಗ್‌ರವರ ಸ್ಥಾನಕ್ಕೆ ಅಫ್‌ತಾಬ್ ಅಹಮ್ಮದ್ ಖಾನರವರನ್ನೂ ಪ್ರಭುತ್ವದವರು ಏರ್ಪಡಿಸಿಕೊಂಡಿರುವರು. ಇದಲ್ಲದೆ ಈಗ ಮತ್ತೊಬ್ಬ ಭಾರತೀಯ ಸಭಿಕರನ್ನೂ ಹೆಚ್ಚಾಗಿ ಈ ಕೌನ್ಸಿಲಿಗೆ ಆರಿಸಿಕೊಳ್ಳುವ ಏರ್ಪಾಟನ್ನು ಹೊಸದಾಗಿ ಮಾಡಿರುವರು. ಇದರಿಂದ ಮೂವರು ಭಾರತೀಯರು ಈ ಸಭೆಯಲ್ಲಿ ಸಭಿಕರಾಗಿರುವಂತಾಯಿತು. ಆ ೩ ನೆಯ ಸ್ಥಾನಕ್ಕೆ ಮೊಟ್ಟಮೊದಲನೆಯ ಸಭಾಸದರಾಗಿ ಆರಿಸಲ್ಪಟ್ಟಿರುವವರು ಸಾಮ್ರಾಜ್ಯ ನಿಯಮನಿರ್ಮಾಣಸಭೆಯ ಸಭಿಕರೂ, ಭರತಖಂಡದ ದೇಶಾಭಿಮಾನಿಗಳಲ್ಲಿ ಹೆಸರ್ಪಡೆದವರೂ, ರಾಜಕೀಯ ವಿದ್ಯಾವಿಶಾರದರೂ ಆದ ಅ|| ಭೂಪೇಂದ್ರನಾಥ ಭಾಸುರರವರಾಗಿರುತ್ತಾರೆ. ಇವರು ತತ್‌ಕ್ಷಣದಲ್ಲೇ ಸೀಮೆಗೆ ಹೊರಟುಬರುವುದಕ್ಕೆ ಕೋರಲ್ಪಟ್ಟಿದ್ದರೂ, ಕೆಲ ಅನಿವಾರ್ಯಗಳಿಂದ ಬರುವ ಆಗಸ್ಟ್ ತಿಂಗಳ ಮಧ್ಯಭಾಗದವರೆಗೂ ಭರತಖಂಡವನ್ನು ಬಿಟ್ಟು ಹೊರಡಲಾರದವರಾಗಿರುತ್ತಾರೆ. ತದನಂತರ ಇವರು ಆ ನವೀನಪದವಿಯನ್ನು ಅಂಗೀಕರಿಸುವವರಾಗಿದ್ದಾರೆ.

ಇಂಡ್ಯಾ ಕೌನ್ಸಿಲಿನಲ್ಲಿ ಭಾರತೀಯರ ಸಂಖ್ಯೆಯನ್ನು ಹೆಚ್ಚಿಸಿದರೂ, ಅಪ್ರಸಿದ್ಧರಾದ ಯಾರು ಯಾರನ್ನೋ ತೆಗೆದುಕೊಂಡು ಹೋಗಿ ಸೇರಿಸಿಕೊಳ್ಳುತ್ತಿದ್ದರೆ ವಿಶೇಷ ಫಲವಿಲ್ಲ. ಅ|| ಬಾಸು, ಪಟ್ಟಾಣಿಯವರಂಥ ಅರ್ಹರಾದ ಜನರನ್ನು ಸೇರಿಸಿಕೊಳ್ಳುತ್ತ ಬಂದರೆ ಭರತಖಂಡಕ್ಕೆ ಇಂಡ್ಯಾ ಕೌನ್ಸಿಲಿನಿಂದ ಏನಾದರೂ ಹಿತವಾಗುವ ಸಂಭವವುಂಟು. ನಿಜವಾಗಿ ಭರತಖಂಡಕ್ಕೆ ಶ್ರೇಯಸ್ಸನ್ನುಂಟುಮಾಡಿಕೊಡುವ ದಾರಿಯಾವುದೆಂಬುದನ್ನು ಕುರಿತು ಸ್ಟೇಟ್ ಸೆಕ್ರೆಟರಿಯವರಿಗೆ ಪ್ರಶಸ್ತವಾದ ಆಪ್ತಾಲೋಚನೆಯನ್ನು ಹೇಳಲು ಇಂಥವರು ಸಮರ್ಥರಾಗುತ್ತಾರೆ. ಇಂಥವರನ್ನು ಆರಿಸಿಕೊಂಡ ಪ್ರಭುತ್ವದವರ ಕ್ರಿಯೆಯನ್ನು ನೋಡಿ ಭಾರತೀಯರಾದರೂ ತೃಪ್ತಿಪಡುವರು. ಇಂಡ್ಯಾ ಕೌನ್ಸಿಲನ್ನೇ ಎತ್ತಿಹಾಕಿಬಿಡಬೇಕೆಂದು ಭಾರತೀಯರು ಮಾಡುತ್ತಲಿರುವ ವಾದವಾದರೂ ನಿಂತುಹೋಗುವುದಕ್ಕೆ ಮಾರ್ಗವಾದೀತು. ಸಾಮ್ರಾಜ್ಯ ಯುದ್ಧಸಭೆಯು ನೆರೆದೀಚೆಗೆ ಸ್ಟೇಟ್ ಸೆಕ್ರೆಟರಿಯವರೇ ಮೊದಲಾದ ಆಂಗ್ಲ ಮಹಾಜನರು ಭರತಖಂಡದ ವಿಷಯದಲ್ಲಿ ಹೇಳುತ್ತ ಬಂದಿರುವ ಸಾನುಭೂತಿಯು ಕ್ರಿಯಾರೂಪವಾಗಿ ಈಗಣ ಏರ್ಪಾಟಿನಿಂದ ಮೊಟ್ಟಮೊದಲನೆಯದಾಗಿ ವ್ಯಕ್ತವಾಗಿರುತ್ತದೆ. ಅ|| ಬಾಸುರವರು ಆ ಸಭೆಗೆ ಹೋಗಿ ಸೇರಿದಬಳಿಕ ಇವರ ಆಪ್ತಾಲೋಚನ ಸಾಮರ್ಥ್ಯದಿಂದ ಯುದ್ಧಾನಂತರ ಭರತಖಂಡಕ್ಕೆ ಅನುಗ್ರಹಿಸಲ್ಪಡಲಿಕ್ಕಿರುವ ರಾಜಕೀಯ ಸ್ವರೂಪನಿರ್ಣಯಕ್ಕೆ ವಿಶೇಷ ಸಹಾಯವಾಗದೆ ಇರಲಾರದೆಂದು ಎಣಿಸಬಹುದಾಗಿದೆ.

ಮತ್ತೊಂದು ಭವಿಷ್ಯತ್ತು.

ಈಗಣ ಮಹಾಯುದ್ಧದ ಸಂಬಂಧವಾಗಿ ಇದುವರೆಗೆ ಅನೇಕ ಜೋಯಿಸರ ಭವಿಷ್ಯತ್ತುಗಳು ಪ್ರಕಟಿತವಾಗಿ ಹಾರಿಹೋಗಿರುವುವು. ಈಗ ಜಪಾನಿನ ಪ್ರಸಿದ್ಧ ಪಂಡಿತರೊಬ್ಬರ ಭವಿಷ್ಯತ್ಪುರಾಣವು ಪ್ರಕಟಿತವಾಗಿದೆ. ಇವರ ಹೆಸರು ಯೂಶೋ ಕುಮ್ಮಮೊಟೋ ಎಂಬುದಾಗಿ. ಇವರು ಜ್ಯೋತಿರ್ಗಣಿತಶಾಸ್ತ್ರದಲ್ಲಿ ದೊಡ್ಡ ಪಂಡಿತರು ಮತ್ತೂ ನಾಗಸಾಕಿಯಲ್ಲಿರುವ ವಾಣಿಜ್ಯ ಕಲಾಶಾಲೆಯ ಡೈರೆಕ್ಟರಾಗಿದ್ದು ಬಳಿಕ ಇನ್ನೂ ದೊಡ್ಡದೊಡ್ಡ ಅಧಿಕಾರಪದವಿಗಳನ್ನು ಪಡೆದಿದ್ದವರು. ಇವರು ಈಗಣ ಯೂರೋಪು ಮಹಾಯುದ್ಧವು ಸಂಭವಿಸುವುದೆಂಬುದನ್ನು ೧೯೧೨ ನೆ ವರ್ಷದಲ್ಲೇ ಸೂಚಿಸಿದ್ದರಂತೆ. ಇವರು ಈಗ ಹೇಳಿರುವ ಅದ್ಭುತವಾದ ಕಾಲಜ್ಞಾನವು ಆ ದೇಶದ ಒಂದು ಪತ್ರಿಕೆಯ ವರ್ಷಾದಿ ಸಂಚಿಕೆಯಲ್ಲಿ ಪ್ರಕಟಿತವಾಗಿದೆ. ಅದರ ಮುಖ್ಯ ವಿಷಯಗಳೇನೆಂದರೆ—ಈ ಯುದ್ಧವು ಬರುವ ಆಗಸ್ಟ್- ನವಂಬರ್ ತಿಂಗಳುಗಳ ಮಧ್ಯದಲ್ಲಿ ಕೊನೆಮುಟ್ಟುವುದು. ಆಗಸ್ಟ್ ತಿಂಗಳಿಂದಲೇ ಜರ್ಮನರ ಪರಾಜಯಕ್ಕೆ ಪ್ರಾರಂಭವಾಗುವುದು. ಸಂಧಿಸಭೆಯು ಪ್ಯಾರಿಸ್ಸಿನಲ್ಲೋ ಅಥವಾ ಕೋಪನ್‌ಹೇಗನ್ನಿನಲ್ಲೋ ಕೂಡುವುದು. ಉಭಯಪಕ್ಷದ ಮಂತ್ರಿಮಂಡಲದವರಿಗೆ ಸಂಧಿನಿಬಂಧನೆಯ ವಿಷಯದಲ್ಲಿ ದೀರ್ಘಕಾಲ ಚರ್ಚೆ ನಡೆದು ಕಡೆಗೆ ಸ್ವಿಟ್ಜರ್‌ಲ್ಯಾಂಡ್ ಹಾಲೆಂಡ್ ಮೊದಲಾದ ದೇಶಗಳವರು ಮಧ್ಯಸ್ತಿಗೆಮಾಡುವರು. ಜರ್ಮನಿಯು ಸೋತುಹೋಗುವುದಕ್ಕೆ ಮೊದಲೇ ತುರ್ಕಿಯು ಪರಾಜಿತವಾಗಿ ಪರಾಧೀನವಾಗುವುದು. ಅದಕ್ಕೆ ವಿನಾಶವು ತಪ್ಪುವುದಿಲ್ಲ. ಡಾರ್ಡನಲ್ಸ್ ಮಾರ್ಗವನ್ನು ಸಂಪಾದಿಸುವುದಕ್ಕೆ ರಷ್ಯನರು ಬಹಳ ಪ್ರಯತ್ನಪಡುವರು. ಪೋಲಂಡಿಗೆ ಸ್ವರಾಜ್ಯವು ಕೊಡಲ್ಪಡುವುದೆಂಬ ವಾಗ್ದಾನದಮೇಲೆ ಅದನ್ನು ರಷ್ಯಾದ ವಶಮಾಡುವರು. ಬೆಲ್ಜಿಯಮು ಮತ್ತೆ ಸಂಪೂರ್ಣೈಶ್ವರ್ಯಭರಿತವಾಗುವುದು. ಅಲ್ಸಸ್ಸ್ ಲೋರೈನುಗಳು ಫ್ರಾನ್ಸಿಗೆ ದೊರೆಯುವುವು. ಯುದ್ಧಕ್ಕಾದ ವೆಚ್ಚವನ್ನು ಕೊಟ್ಟರೆ ಕಿಯಚೋವನ್ನು ಜಪಾನರು ಚೀನಾಕ್ಕೆ ಒಪ್ಪಿಸುವರು. ಜಪಾನರ ಸ್ವಾಧೀನದಲ್ಲಿರುವ ದಕ್ಷಿಣಸಮುದ್ರ ದ್ವೀಪಗಳು ಜರ್ಮನಿಗೆ ಕೊಡಲ್ಪಡುವುವು. ಮಿತ್ರಮಂಡಲಿಯವರ ಯುದ್ಧದ ವೆಚ್ಚದ ಹಣವೆಲ್ಲಾ ಪೂರ್ಣವಾಗಿ ಜರ್ಮನಿಯಿಂದ ದೊರೆಯಲಾರದು. ತಮ್ಮ ಆಶೆಯು ಭಂಗವಾದುದರಿಂದ ಯುದ್ಧಾನರ್ಥದ ಭಾರವನ್ನೆಲ್ಲಾ ಜರ್ಮನರು ಕೈಸರಿನ ತಲೆಯಮೇಲೆ ಹೇರುವರು. ಅಲ್ಲಿಯ ಸಾಂಘಿಕವಾದಿಗಳು ರೇಗಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವರು. ಕೈಸರು ಪದಭ್ರಷ್ಟನಾಗುವನು. ಕೈಸರು ಸಬ್‌ಮೆರೀನಿನಲ್ಲಿ ಕುಳಿತು ಅಮೇರಿಕಾಕ್ಕೆ ಹೋಗುತ್ತಿರುವಾಗ್ಗೆ ದಾರಿಯಲ್ಲಿ ಆಂಗ್ಲನೌಕೆಗಳು ಅದನ್ನು ಮುಳುಗಿಸಿಬಿಡುವರು. ಅಲ್ಲೇ ಆತನು ಮೃತನಾಗುವನು. ಜರ್ಮನಿಯಲ್ಲಿ ಕೆಲಕಾಲ ಪ್ರಜಾಪ್ರಭುತ್ವವು ನಡೆದಮೇಲೆ ಪ್ರಭು ಪರಿಪಾಲನಕಾಂಕ್ಷೆಯು ಮತ್ತೆ ಹುಟ್ಟಿ ಕೆಲರು ಯುವರಾಜನ ಪಕ್ಷವನ್ನು ವಹಿಸಿ ಆತನಿಗೆ ಪಟ್ಟಕಟ್ಟುವರು. ಆತನು ಮರಳಿ ಮಹಾಯುದ್ಧವನ್ನು ೧೯೩೦ ನೆ ವರ್ಷದಲ್ಲಿ ಆರಂಭಿಸುವನು. ಆ ಯುದ್ಧಕ್ಕಾಗಿ ಆಂಗ್ಲದೇಶದ ಹಣವೆಲ್ಲವೂ ಹಾಳಾಗುವುದು. ಆಗಲೂ ಜಪಾನು ಮಿತ್ರಮಂಡಲಿ ಪಕ್ಷದಲ್ಲಿರುವುದು. ಜರ್ಮನಿಗೆ ಸಂಪೂರ್ಣವಾದ ವಿನಾಶವು ಪ್ರಾಪ್ತವಾಗುವುದು. ಆ ಬಳಿಕ ಪ್ರಪಂಚದಲ್ಲಿ ಸಂಪೂರ್ಣವಾದ ಶಾಂತಿಯು ನೆಲಸುವುದು" ಎಂಬುದಾಗಿ. ಬರುವ ನವಂಬರ್ ತಿಂಗಳೊಳಗೆ ಯುದ್ಧವು ಕೊನೆಮುಟ್ಟಿದರೆ ಉಳಿದ ವಿಷಯಗಳನ್ನೆಲ್ಲಾ ಈ ಭವಿಷ್ಯತ್ತಿನಪ್ರಕಾರ ನಿಜವಾಗುವುವೆಂದು ಊಹಿಸಲು ಅಭ್ಯಂತರವಿರಲಾರದು. ಬೆಳಗಾದಮೇಲೆ ಅಳಿಯನ ಕುರುಡು ಗೊತ್ತಾಗುವುದಲ್ಲವೆ? ನೋಡಬೇಕು.

ಯುದ್ಧವಾರ್ತೆಯು

(ಪಶ್ಚಿಮರಣರಂಗ.)

ಇಲ್ಲಿರುವ ಇಂಗ್ಲೀಷ್ ಸೇನಾಮುಖವು ಉತ್ತರದಲ್ಲಿ ಬೆಲ್ಜಿಯಂ ದೇಶದ ಸಮುದ್ರತೀರದವರೆಗೆ ವಿಸ್ತರಿಸಲ್ಪಟ್ಟಿತು. ಇದರಿಂದ ಜೀಬ್ರುಗ್ ಮೊದಲಾದ ಸಬ್‌ಮೆರೀನ್ ವಾಸಸ್ಥಲಗಳಮೇಲೆ ಭೂಜಲಮಾರ್ಗಗಳೆರಡರಿಂದಲೂ ದಾಳಿಯಿಟ್ಟು ಧ್ವಂಸಮಾಡುವುದಕ್ಕೆ ಅವಕಾಶವಾಗುವುದು. ಕಳೆದ ಮೂರುತಿಂಗಳಲ್ಲಿ ಫ್ರೆಂಚರು ಶತ್ರುಗಳನ್ನು ಪ್ರತಿಭಟಿಸಲು ನಡೆಯಿಸಿದ ಮಹಾಯುದ್ಧಗಳ ಮತ್ತೂ ಅದರಿಂದಾದ ಫಲಿತಾಂಶದ ವಿಮರ್ಶೆಯು ಈಗಣ ತಂತ್ರೀವಾರ್ತೆಗಳಿಂದ ಬರುತ್ತಿರುವುದನ್ನು ನೋಡಿದರೆ ಫ್ರೆಂಚರಿಗುಂಟಾದ ಅಮಿತ ಪ್ರಾಣನಷ್ಟಗಳು ಎದೆಯನ್ನು ಕರಗಿಸುವಂತಿರುವುವು. ಫ್ರೆಂಚರು ಶತ್ರುಗಳಮೇಲೆ ಮಹಾಯುದ್ಧವನ್ನು ನಡೆಯಿಸಿ ಅವರನ್ನು ಬಹುದೂರ ಹಿಂದಕ್ಕೊತ್ತಬೇಕೆಂದು ಪ್ರಬಲಸನ್ನಾಹಮಾಡಿದ್ದರು. ಆ ಸಮಯದಲ್ಲೇ ರಷ್ಯನರೂ ಮಹಾಯುದ್ಧಾರಂಭಮಾಡುವರೆಂದು ಫ್ರೆಂಚರು ಊಹಿಸಿದ್ದರು. ಹಾಗಾಗಿದ್ದರೆ ಫ್ರೆಂಚರ ಉದ್ದೇಶದಂತೆ ಕಾರ್ಯವೆಲ್ಲವೂ ಸಫಲವಾಗಬಹುದಾಗಿದ್ದಿತು. ಆದರೆ ಶತ್ರುಗಳ ಪುಣ್ಯಕ್ಕೆ ಅಕಾಲಕ್ಕೆ ಸರಿಯಾಗಿ ರಷ್ಯಾದಲ್ಲಿ ರಾಜ್ಯಪರಿವರ್ತನೆಯು ಮೂಡಿತು. ರಷ್ಯಾದ ಸೈನ್ಯಗಳು ಯುದ್ಧಾರಂಭವನ್ನು ಮಾಡಲೇ ಇಲ್ಲ. ಆ ರಂಗಗಳಲ್ಲಿದ್ದ ಶತ್ರುಸೈನ್ಯಗಳಲ್ಲಿ ಬಹುಭಾಗವನ್ನು ಅವರು ಪಶ್ಚಿಮರಂಗಗಳಿಗೆ ತಂದು ತುಂಬಿಸಿದರು. ಇದನ್ನು ಪ್ರತಿಭಟಿಸುವ ಭಾರವೆಲ್ಲಾ ಫ್ರೆಂಚು ಇಂಗ್ಲೀಷು ಸೈನ್ಯಗಳಮೇಲೆ ಬಿದ್ದಿತು. ಇದರಿಂದ ಫ್ರೆಂಚರು ಜರ್ಮನರ ನುಗ್ಗಾಟವನ್ನು ತಡೆಯುವುದರಲ್ಲಿ ಬಹು ಸೈನ್ಯಗಳನ್ನು ಬಲಿಗೊಟ್ಟರು. ಇಂಗ್ಲೀಷರೂ ಕೂಡ ಶತ್ರುಗಳನ್ನು ತಡೆದು ನಿಲ್ಲಿಸಿದುದಲ್ಲದೆ ಅವರನ್ನು ಹಿಂದಕ್ಕೇ ದಬ್ಬಿ ಅನೇಕ ಸ್ಥಾನಗಳನ್ನು ವಶಪಡಿಸಿಕೊಂಡರು. ಫ್ರೆಂಚರೂ ಕೂಡ ಶತ್ರುಗಳ ಎದೆಬಿರಿಯುವಂತೆ ಪರಾಕ್ರಮತೋರಿಸಿದುದಲ್ಲದೆ ಅವರ ಕೆಲ ಮುಖ್ಯಸ್ಥಾನಗಳನ್ನುವಶಪಡಿಸಿಕೊಂಡು, ಇನ್ನು ಪ್ಯಾರಿಸ್ಸಿನ ಕಡೆಗೆ ನುಗ್ಗುವುದು ಅವರಿಗೆಂದಿಗೂ ಸಾಧ್ಯವಿಲ್ಲವೆನ್ನುವಂತೆಮಾಡಿಬಿಟ್ಟರು. ಇದರಿಂದ ಕಳೆದ ೩ ತಿಂಗಳ ಕಾಲದಲ್ಲಿ ಮಿತ್ರಮಂಡಲಿಯವರಿಗೆ ಈ ರಂಗದಲ್ಲಿದ್ದ ಗಂಡವೆಲ್ಲಾ ಕಳೆದುಹೋಯಿತು. ಈಗ ರಷ್ಯಾರಂಗದಲ್ಲಿ ಮಹಾ ಯುದ್ಧಾರಂಭವಾಗಿರುವುದರಿಂದ ಅಲ್ಲಿಗೆ ಇಲ್ಲಿಂದ ಅನೇಕ ಸೈನ್ಯಗಳನ್ನು ಶತ್ರುಗಳು ಸಾಗಿಸಿಕೊಂಡು ಹೋಗಬೇಕಾಗಿಬಂದಿತು. ಇದರಮೇಲೆ ಸಕಾಲಕ್ಕೆ ಫ್ರಾನ್ಸ್ ರಂಗಕ್ಕೆ ಅಮೇರಿಕನ್ ಸೇನಾಸಹಾಯವು ಬಂದೊದಗಿಕೊಂಡಿತು. ಒಟ್ಟು ೨೦ ಲಕ್ಷ ಸೈನ್ಯವನ್ನು ಈ ರಂಗಕ್ಕೆ ಕಳುಹಿಸಿಕೊಡಲು ಅಮೇರಿಕನ್ನರು ನಿಶ್ಚಯಿಸಿದ್ದಾರೆ. ದುರ್ಬಲವಾಗುತ್ತಿರುವ ಶತ್ರುಸೇನಾಪಂಕ್ತಿಯನ್ನು ಈ ನೂತನ ಸೇನಾಸಹಾಯದಿಂದ ಸೋಲಿಸಿ ದೇಶಾಕ್ರಮಣಮಾಡುವುದಕ್ಕೆ ಮಿತ್ರಮಂಡಲಿಯವರಿಗೆ ಅನುಕೂಲ್ಯವು ಹೆಚ್ಚಿದಂತಾಯಿತು. ಈ ಮುಂದಣ ೩ ತಿಂಗಳಲ್ಲಿ ಮರಳಿ ಮಹಾಯುದ್ಧವು ಭೀಕರವಾಗಿ ನಡೆಯುವುದರಲ್ಲಿ ಸಂಶಯವಿಲ್ಲ. ಶತ್ರುಗಳೂ ಕೂಡ ಮತ್ತೊಂದು ಅತ್ಯಂತಭೀಕರಯುದ್ಧಕ್ಕೆ ಸನ್ನಾಹಮಾಡಿಕೊಳ್ಳುತ್ತಿರುವಂತೆ ಕಾಣುತ್ತದೆ. ಈ ಮುಂದಣಯುದ್ಧವೇ ಕಡೆಯ ಯುದ್ಧವಾಗಬಹುದು. ಇಟಲಿ ರಣರಂಗದಿಂದ ಆಸ್ಟ್ರಿಯನ್ನರೂ ತಮ್ಮ ಕೆಲ ಸೈನ್ಯಗಳನ್ನು ಗೆಲೀಷಿಯಾಕ್ಕೆ ಸಾಗಿಸಿಕೊಂಡು ಹೋದುದರಿಂದ ಇಟಲಿಯವರ ಪುರೋಗಮನಕ್ಕೂ ಮುಂದೆ ಸ್ವಲ್ಪ ಅನುವಾಗಬಹುದು. ಕಳೆದವಾರದಲ್ಲೂ ಫ್ರೆಂಚರ ಸೇನಾಮುಖದಲ್ಲಿ ವಿಪರೀತವಾದ ಕದನಗಳನ್ನು ಫಿರಂಗಿಗಳಿಂದ ನಡೆಯಿಸಿಯೂ ಶತ್ರುಗಳು ವಿಫಲರಾದರು. ಫ್ರೆಂಚರು ತಾವು ಕಳೆದುಕೊಂಡಿದ್ದ ಕೆಲವು ಕಂದಕಗಳನ್ನು ಬಿಡಿಸಿಕೊಂಡರು. ಇಂಗ್ಲೀಷರೂ ಒಂದೆರಡು ಸ್ಥಾನಗಳನ್ನು ವಶಪಡಿಸಿಕೊಂಡರು.

ಪೂರ್ವರಂಗ.

ರಷ್ಯನರ ಜಯಯಾತ್ರೆಯು ಗೆಲೀಷಿಯಾದಲ್ಲೂ ರಷ್ಯಾ ದೇಶದಲ್ಲೂ ಸಹ ಬಲವಾಗಿಯೇ ನಡೆಯುತ್ತಿದೆ. ಮೊನ್ನೆ ವಾರದಲ್ಲಿ ರಷ್ಯನವರು ಶತ್ರುಗಳನ್ನು ಸೋಲಿಸಿ ೧೮ ಸಾವಿರ ಸೈನಿಕರನ್ನು ಸೆರೆಹಿಡಿದುದಲ್ಲದೆ ಕಳೆದವಾರದಲ್ಲೂ ಬಹಳ ಸೈನ್ಯವನ್ನೂ ಫಿರಂಗಿ ಮೊದಲಾದ ಇತರ ಸಾಮಗ್ರಿಗಳನ್ನೂ ಅನೇಕವಾಗಿ ವಶಪಡಿಸಿಕೊಂಡಿದ್ದಾರೆ. ಈ ಪ್ರಾಂತದಲ್ಲಿ ರಷ್ಯನರ ಕಾಲ್ಬಲವು ೬ ಮೈಲಿಗಳವರೆಗೂ, ಅಶ್ವಸೈನ್ಯವು ೧೬ ಮೈಲಿಗಳವರೆಗೂ ಮುಂದಕ್ಕೆ ನುಗ್ಗಿಹೋಗಿರುವುವು. ಜರ್ಮನರು ಸ್ವದೇಶದಿಂದ ಕೆಲವು ಹೊಸಪಟಾಲಮುಗಳನ್ನೂ, ಪಶ್ಚಿಮರಣರಂಗದಿಂದ ೭ ಪಟಾಲಮುಗಳನ್ನೂ, ಆಸ್ಟ್ರಿಯನ್ನರು ಕಾರ್ಸೊ ಪ್ರದೇಶದಿಂದಲೂ, ಟ್ರಿಯಂಟೊ ರಂಗದಿಂದಲೂ ತಮ್ಮ ಅನೇಕ ಸೈನ್ಯಗಳನ್ನೂ ಗೆಲೀಷಿಯಾ ರಂಗಕ್ಕೆ ಕಳುಹಿಸಿಕೊಟ್ಟಿದ್ದಾರೆ. ರಷ್ಯಾ ಸೇನೆಯ ಮುಂದೆ ಈ ಶತ್ರುಸೈನ್ಯಗಳೆಲ್ಲಾ ಬಹಳ ಚುರುಕಾಗಿ ಯುದ್ಧಮಾಡುತ್ತಿವೆ. ರಷ್ಯಾ ಯುದ್ಧಮಂತ್ರಿ ಕೆರೆನ್ಸ್ಕಿಯವರ ಸಾಹಸದಿಂದಲೂ, ಜನರಲ್ ಬ್ರುಸಿಲಾಫ್ ಸೇನಾಪತಿಯ ನೈಪುಣ್ಯದಿಂದಲೂ, ಸೈನಿಕರ ವೀರಾವೇಶದಿಂದಲೂ, ರಷ್ಯನರಿಗೆ ಜಯದಮೇಲೆ ಜಯವು ಲಭಿಸುತ್ತಲೇ ಇದೆ. ಬಾಲಿಯಟ್ಜ ಪ್ರಾಂತದಲ್ಲಿ ಜರ್ಮನರು ಬಿಳಿಯ ಬಾವುಟದ ನೈಪ್ತಿ ಮೈತ್ರಿಯನ್ನು ತೋರಿಸಿದರು. ಅವರ ಕಾಪಟ್ಯವನ್ನು ಬಲ್ಲ ರಷ್ಯನರು ಫಿರಂಗಿಗುಂಡುಗಳಿಂದ ಸರಿಯಾಗಿ ಪ್ರತ್ಯುತ್ತರಕೊಟ್ಟರು. ಸ್ಟಾನಿಸ್ಲಾವಿಗೆ ಪಶ್ಚಿಮದಲ್ಲಿ ತೀಕ್ಷ್ಣವಾದ ಯುದ್ಧಗಳು ನಡೆದುದರಲ್ಲಿ ರಷ್ಯನ್ ಜನರಲ್ ಕಾರ್ನಿಲೋಫ್‌ರವರು ಜೆಸ್ಸುಪೋಲು, ಸೀಸೋವು, ಪೇವಲ್ಜಿ, ರೈಬ್ನೋ ಮೊದಲಾದ ಅನೇಕ ಗ್ರಾಮಗಳನ್ನೂ ೭೦೦೦ ಸೈನಿಕರನ್ನೂ ಫಿರಂಗಿಗಳು ತುಪಾಕಿಗಳು ಮೊದಲಾದ ಅನೇಕ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು. ರಷ್ಯನರ ರಾವುತರು ಶತ್ರುಗಳನ್ನು ಲೂಕ್ವಾ ನದಿಯವರೆಗೆ ಓಡಿಸಿಕೊಂಡು ಹೋಗಿ ತರುಬಿದರು. ಯುದ್ಧ ನಡೆಯುವಕಾಲದಲ್ಲಿ ಒಂದೇ ಗ್ರಾಮದಲ್ಲಿ ರಷ್ಯನರಿಗೆ ೫೦೦೦ ಮಂದಿ ಶತ್ರುಸೈನಿಕರು ಸೆರೆಯಾಳುಗಳಾದರು. ಆಗ ಕೆರೆನ್ಸ್ಕಿಯವರು ರಣರಂಗದಲ್ಲೇ ಇದ್ದರು. ಸ್ಟಾನಿಸ್ಲಾವು ಪಟ್ಟಣವನ್ನು ರಷ್ಯನರು ಸಮೀಪಿಸುತ್ತಿದ್ದಾರೆ. ಇದು ಇವರ ವಶವಾದರೆ ಲೆಂಬರ್ಗ್ ಪಟ್ಟಣಕ್ಕೆ ಹೋಗುವ ಲೋಹಮಾರ್ಗವು ಇವರಧೀನವಾಗಿ, ಲೆಂಬರ್ಗನ್ನು ಹಿಡಿದುಕೊಳ್ಳಲು ಅನುಕೂಲವಾಗುವುದು. ಅತ್ತ ರಷ್ಯಾ ದೇಶದಲ್ಲಿ ಬೇರೆ ಸೈನ್ಯಗಳು ಕೋವಲ್‌ಪಟ್ಟಣವನ್ನು ಶತ್ರುಗಳಿಂದ ಬಿಡಿಸಿಕೊಳ್ಳಲು ಸಾಗಿ ಯುದ್ಧಮಾಡುತ್ತಿವೆ. ದಾರಿಯಲ್ಲಿರುವ ಪಿನ್ಸ್ಕ್ ಎಂಬ ಪಟ್ಟಣವನ್ನು ಶತ್ರುಗಳು ಸುಡುತ್ತಿರುವುದರಿಂದ ಅದನ್ನವರು ಬಿಟ್ಟುಹೋಗುವಂತೆ ಕಾಣುತ್ತದೆ. ಹಾಲ್ಸಿಜ್ಜು ಮತ್ತೂ ಕಾರ್ಪೇತಿಯನ್ನುಗಳಿಗೆ ಮಧ್ಯದಲ್ಲಿರುವ ಆಸ್ಟ್ರಿಯನ್-ಜರ್ಮನ್ ಸೇನಾಪಙ್ಕ್ತಿಯನ್ನು ರಷ್ಯನರು ಭೇದಿಸಿ ಹಾಲ್ಸಿಜ್ಜು ಪಟ್ಟಣವನ್ನು ವಶಪಡಿಸಿಕೊಂಡರು.

ಶತ್ರುವಿಮಾನಗಳ ದಾಳಿ.

ಕಳೆದ ೭ ನೆ ತಾ|| ಶನಿವಾರ ಹಗಲು ೯ ಗಂಟೆ ಹೊತ್ತಿನಲ್ಲಿ ಆಕಾಶದಲ್ಲಿ ಮೋಡ ಮುಚ್ಚಿರುವ ಸಮಯದಲ್ಲಿ ಶತ್ರುಗಳ ಬಹುಶಃ ೨೨ ವಿಮಾನಗಳು ಇಂಗ್ಲೆಂಡಿನ ದಕ್ಷಿಣತೀರದಿಂದ ಬಂದು ಥೆನೆಟ್ ಜಿಲ್ಲೆಯಮೇಲೆ ಹಾದು ಎಸೆಕ್ಸ್ ಜಿಲ್ಲೆಗೆ ನುಗ್ಗಿ, ಥೇಮ್ಸ್ ನದಿಯಮೇಲಿಂದ ಲಂಡನ್ ಪಟ್ಟಣಕ್ಕೆ ಈಶಾನ್ಯದಕಡೆಯಿಂದ ನುಗ್ಗಿ ಊರಿನ ಹಲವುಕಡೆ ಹಲವು ಸಿಡಿಮದ್ದುಗಳನ್ನು ಹಾಕಿದುವು. ಸಿಡಿಮದ್ದುಗಳನ್ನು ಹಾಕುವುದಕ್ಕೆ ಮೊದಲು ಅವು ಪಟ್ಟಣಕ್ಕೆ ಬಹಳ ಸಮೀಪದಲ್ಲಿಯೇ ಮೆಲ್ಲಗೆ ಸಾಲುಸಾಲಾಗಿ ಹೋಗುತ್ತಿರಲಾಗಿ ಪುರಜನರು ಅವುಗಳನ್ನು ತಮ್ಮ ದೇಶದ ವಿಮಾನಗಳೆಂದು ತಿಳಿದಿದ್ದರು. ಸಿಡಿಮದ್ದನ್ನು ಹಾಕಿದಕೂಡಲೇ ಶತ್ರುಗಳ ವಿಮಾನಗಳೆಂಬುದು ಗೊತ್ತಾಯಿತು. ಬಳಿಕ ಅವುಗಳು ಭೂಮಟ್ಟದಿಂದ ೧೫ ಸಾವಿರ ಅಡಿಗಳಮೇಲೆ ಗಂಟೆಗೆ ೭೦ ಮೈಲಿಗಳ ವೇಗದಲ್ಲಿ ಓಡಾಡುತ್ತಿದ್ದುವು. ಆಂಗ್ಲವೈಮಾನಿಕದಳವು ಕೂಡಲೇ ಆಕಾಶಕ್ಕೆ ಹಾರಿ ಪ್ರತಿಭಟಿಸಿ ಯುದ್ಧಮಾಡಿತು. ಮತ್ತೂ ಫಿರಂಗಿಗಳ ಗುಂಡುಗಳು ಅವಿಚ್ಛಿನ್ನವಾಗಿ ಅವುಗಳಮೇಲೆ ಹಾರಿಸಲ್ಪಟ್ಟುವು. ಶತ್ರುವಿಮಾನಗಳಲ್ಲಿ ೧೧ ಹಾಳಾದುವು. ಅವುಗಳು ಬಹುಶಃ ೨೦ ನಿಮಿಷಗಳಕಾಲ ಪಟ್ಟಣದಮೇಲೆ ಹಾರಾಡುತ್ತಿದ್ದುವು. ೪ ನಿಮಿಷಗಳ ಕಾಲದಲ್ಲಿ ಸಿಡಿಮದ್ದುಗಳನ್ನೆಲ್ಲಾ ಹಾಕಿದುವು. ಸಿಡಿಮದ್ದು ಬಿದ್ದಕಡೆಯಲ್ಲಿ ಬಹಳ ಕಟ್ಟಡಗಳು ಧ್ವಂಸವಾದುವು. ೩೦ ಮಂದಿ ಗಂಡುಸರೂ, ೮ ಮಂದಿ ಹೆಂಗಸರೂ, ೫ ಮಕ್ಕಳೂ ಸತ್ತರು. ೧೯೨ ಮಂದಿಗೆ ಗಾಯವಾಯಿತು. ಈ ದಾಳಿಯಿಂದ ಇಂಗ್ಲೀಷ್ ಪ್ರಜೆಗಳ ರೋಷವು ಶತ್ರುಗಳ ವಿಷಯದಲ್ಲಿ ಬಹಳ ಹೆಚ್ಚಿತು. ಇದಕ್ಕೆ ಮುಯ್ಯಾಗಿ ಶತ್ರುದೇಶಪಟ್ಟಣಗಳಮೇಲೂ ನಮ್ಮವರು ವಿಮಾನಗಳ ದಾಳಿಯನ್ನು ಮಾಡಬೇಕೆಂದೂ, ಪಟ್ಟಣದ ರಕ್ಷಣೆಗೆ ನಮ್ಮ ವಿಮಾನದಳದವರು ಪೂರ್ಣವಾದ ಏರ್ಪಾಟನ್ನು ಮಾಡಬೇಕೆಂದೂ ಪುರಜನರೂ, ವಾರ್ತಾಪತ್ರಿಕೆಗಳೂ ಬಹಳ ಖಂಡಿತವಾಗಿ ಹೇಳಿರುತ್ತವೆ. ಇದರ ಪರ್ಯಾಲೋಚನೆಗೆ ಒಂದು ರಹಸ್ಯಾಲೋಚನಸಭೆಯನ್ನು ಮಂತ್ರಿಮಂಡಲದವರು ನಡೆಯಿಸುವರಾಗಿದ್ದಾರೆ. ಈಚೆಗೆ ಇಂಗ್ಲೀಷ್ ವೈಮಾನಿಕರೂ ಫ್ರೆಂಚ್ ವೈಮಾನಿಕರೂ ಸಹ ಶತ್ರುಪಟ್ಟಣಗಳಮೇಲೆ ಹೋಗಿ ಟನ್ನುಗಟ್ಟಲೆ ಸಿಡಿಮದ್ದುಗಳನ್ನು ಹಾಕಿ ಭಯಂಕರವಾದ ಬೆಂಕಿಯನ್ನು ಹುಟ್ಟಿಸಿ, ನಾನಾ ಅನರ್ಥಗಳನ್ನೆಸಗಿ ಬಂದಿರುತ್ತವೆ. ಅದರಿಂದಾದ ಅನರ್ಥಗಳಲ್ಲಿ ಶತ್ರುಗಳ ಕ್ರುಪ್ ಕರ್ಮಾಗಾರದಲ್ಲಿ ಕಾಲುಭಾಗವು ಹಾಳಾದುದೊಂದು ದೊಡ್ಡ ವಿಷಯವಾಗಿದೆ.

ಯುದ್ಧರಂಗದಲ್ಲಿ ಮಿತ್ರಮಂಡಲಿ ವೈಮಾನಿಕದಳದಮುಂದೆ ಶತ್ರುವಿಮಾನಗಳ ಆಟವು ಸಾಗುತ್ತಲಿಲ್ಲ. ನಮ್ಮವರ ೧ ವಿಮಾನ ನಷ್ಟವಾದರೆ ಶತ್ರುಗಳವು ೨-೩-೪ ರಷ್ಟು ನಷ್ಟವಾಗಿರುತ್ತವೆ. ಕಳೆದ ಜೂನ್ ತಿಂಗಳೊಂದರಲ್ಲೇ ನಮ್ಮವರು ೫೯೨ ಶತ್ರುವಿಮಾನಗಳನ್ನು ಸುಟ್ಟು ಕೆಳಕ್ಕೆ ಬೀಳಿಸಿಯೂ ಹಾಳ್ಮಾಡಿಯೂ ಇದ್ದಾರೆ. ಪಟ್ಟಣಗಳಮೇಲೆ ಹಾವಳಿಮಾಡಲುಪಕ್ರಮಿಸಿದರೆ ರಣರಂಗದಲ್ಲಿರುವ ಮಿತ್ರಮಂಡಲಿ ವಿಮಾನಗಳು ತಮ್ಮ ಪಟ್ಟಣರಕ್ಷಣೆಗೆ ಹೋಗಿ ರಣರಂಗದಲ್ಲಿ ಅವುಗಳ ಹಾವಳಿ ಕಡಿಮೆಯಾಗಲೆಂದು ಶತ್ರುಗಳು ಯೋಚಿಸಿರುತ್ತಾರೆ. ಇಂಗ್ಲೀಷ್ ನೌಕಾವಿಮಾನದಳದವರು ಕಾನ್‌ಸ್ಟಾಂಟಿನೋಪಲ್ ಪಟ್ಟಣದಮೇಲೂ ತೀರದಲ್ಲಿದ್ದ ಹಡಗುಗಳಮೇಲೂ ಸಿಡಿಮದ್ದನ್ನು ಹಾಕಿ ನಷ್ಟಪಡಿಸಿ ಬಂದಿದ್ದಾರೆ.

ಜಲಯಾನಗಳು.

ಹಳೆತರದ ೧ ಇಂಗ್ಲೀಷ್ ಯುದ್ಧದ ಹಡಗು ಉತ್ತರಸಮುದ್ರದಲ್ಲಿ ಗಣಿಗೆ ತಗುಲಿ ಮುಳುಗಿಹೋಯಿತು. ಕಪ್ಪುಸಮುದ್ರದಲ್ಲಿ ಹಳೆ ಟಾರ್ಪೆಡೋ ಹಡಗೊಂದು ಮುಳುಗಿಹೋಯಿತು. ಕಳೆದ ಜೂನ್ ತಿಂಗಳಲ್ಲಿ ನಾರ್ವೆಯವರ ೮೩ ಹಡಗುಗಳು ಮುಳುಗಿಸಲ್ಪಟ್ಟಿವೆ. ಫ್ರೆಂಚರ ೧ ಸಬ್‌ಮೆರೀನು ಶತ್ರುಗಳ ಸಬ್ ಮೆರೀನಿನಿಂದ ಮುಳುಗಿಸಲ್ಪಟ್ಟಿತು. ಒಳಗಿದ್ದವರಲ್ಲಿ ೯ ಮಂದಿ ಮಾತ್ರ ಉಳಿದು ಬಹು ಜನರು ಸತ್ತರು. ಫ್ರಾನ್ಸ್ ರೇವುಗಳಿಗೆ ಜುಲೈ ತಾ|| ೧ ಕ್ಕೆ ಕಡೆಯಾದ ವಾರದಲ್ಲಿ ೧೯೧೭ ಹಡಗುಗಳು ಹೊರಗಿನಿಂದ ಬಂದು ೧೦೫೪ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ೮ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟುವು. ಮದ್ದಿನ ಸುರಂಗಗಳನ್ನು ಧ್ವಂಸಮಾಡುವ ಇಂಗ್ಲೀಷ್ ಹಡಗೊಂದು ೧೦ ಮಂದಿಗಳ ಸಮೇತ ಮುಳುಗಿ ಹಾಳಾಯಿತು. ಬಾಲ್ಟಿಕ್‌ಸಮುದ್ರದಲ್ಲಿ ಶತ್ರುಗಳ ನೌಕೆಗಳ ಸುಳಿವಾಟವು ಹೆಚ್ಚಾಗಿದೆ. ಅವರು ಜಲಮಾರ್ಗದ ಯುದ್ಧವನ್ನು ರಷ್ಯಾದ ಮೇಲೆ ಆಪಕ್ರಮಿಸುವಂತೆ ಕಾಣುತ್ತಿದೆ.

ಭರತಖಂಡದ ವೃತ್ತಾಂತಗಳು.

ಭರತಖಂಡ ಸರ್ಕಾರದ ಬೊಕ್ಕಸದಲ್ಲಿ ಈಗ ೨೦ ಕೋಟಿ ಬೆಲೆಯ ಬೆಳ್ಳಿಯ ನಾಣ್ಯಗಳಿರುತ್ತವೆ.

ಬರುವ ನವಂಬರ್ ತಾ|| ೫ ರಿಂದ ೧೦ ರವರೆಗೆ ದಿಲ್ಲಿ ಪಟ್ಟಣದಲ್ಲಿ ಭರತಖಂಡದ ಸಂಸ್ಥಾನಿಕರ ಸಭೆಯು ನೆರವೇರುವಂತೆ ವೈಸ್ರಾಯರು ಅಪ್ಪಣೆಮಾಡಿದ್ದಾರೆ.

ದಾದಾಬಾಯಿ ನೌರೋಜಿಯವರ ಮೃತಿಯಿಂದ ತಮಗುಂಟಾದ ವಿಷಾದವನ್ನು ಅವರ ಕುಟುಂಬದವರಿಗೆ ತಿಳಿಯಪಡಿಸಬೇಕೆಂದು ವೈಸ್ರಾಯರು ಬೊಂಬಾಯಿ ಗೌನರ್‌ರವರಿಗೆ ತಂತ್ರೀಮೂಲಕ ಕೋರಿಕೊಂಡಿರುತ್ತಾರೆ.

ಮದ್ರಾಸು ನಿಯಮನಿರ್ಮಾಣ ಸಭೆಯಲ್ಲಿ ಚರ್ಚೆಗೆ ಬಂದಿದ್ದ ವಿಷಯವನ್ನನುಸರಿಸಿ, ಆಯುರ್ವೇದ ವೈದ್ಯರು ಉಪಯೋಗಿಸುವ ಮೂಲಿಕೆಗಳ ಗುಣಾದಿಗಳನ್ನು ಪರೀಕ್ಷಿಸುವುದಕ್ಕಾಗಿ ಮದ್ರಾಸು ಸರ್ಕಾರದವರು ಒಬ್ಬ ಅಸಿಸ್ಟೆಂಟ್ ಸರ್ಜನರನ್ನು ನಿಯಮಿಸಿರುತ್ತಾರೆ.

ಕಲ್ಕತ್ತಾ ಪಟ್ಟಣದಲ್ಲಿ ೪೭೩ ಮುದ್ರಾಶಾಲೆಗಳಿವೆ. ಅವುಗಳಲ್ಲೆಲ್ಲಾ ೧೫ ದೈನಿಕವಾರ್ತಾಪತ್ರಿಕೆಗಳೂ, ೩ ಚಾತುರ್ಥಿಕಪತ್ರಿಕೆಗಳೂ, ೩೭ ವಾರಪತ್ರಿಕೆಗಳೂ, ೭ ಪಕ್ಷಪತ್ರಿಕೆಗಳೂ, ೩೪೨ ಮಾಸಪತ್ರಿಕೆಗಳೂ, ೨೫ ತ್ರೈಮಾಸಿಕ ಪತ್ರಿಕೆಗಳೂ ಅಚ್ಚಾಗಿ ಪ್ರಕಟವಾಗುತ್ತಿವೆ.

ಸರ್ಕಾರಕ್ಕೆ ಸಂಬಂಧಿಸಿದ ಕಲಾಶಾಲೆಗಳಲ್ಲಾಗಲೀ ಪಾಠಶಾಲೆಗಳಲ್ಲಾಗಲೀ ಓದುತ್ತಲಿರುವ ವಿದ್ಯಾರ್ಥಿಗಳೂ, ಪಟ್ಟ ಪರೀಕ್ಷೆಗೆ ಓದುತ್ತಿರುವ ಮತ್ತೂ ಓದಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳೂಕೂಡ ಸ್ವರಾಜ್ಯಸಾಧಕ ಸಂಘಗಳಿಗೆ ಸೇರಕೂಡದೆಂದು ಬಂಗಾಳಾ ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ರಾಜದ್ರೋಹಕರವಾದ ಲೇಖನಗಳಿಂದ ಕೂಡಿಲ್ಲವೆಂದು ಪ್ರಭುತ್ವದವರಿಗೆ ತೋರಿದ ಮತವಿಷಯಕ ಗ್ರಂಥಗಳನ್ನಾಗಲೀ ಉಪನ್ಯಾಸಗಳನ್ನಾಗಲೀ ಅನಿಬೆಸೆಂಟಮ್ಮ ಮೊದಲಾದ ಮೂವರೂ ವಿಕ್ರಯಿಸಿಕೊಳ್ಳುವಲ್ಲಿ ಅಡ್ಡಿಯಿಲ್ಲವೆಂದು ಮದ್ರಾಸ್ ಸರ್ಕಾರದವರು ಈಗತಾನೇ ಅಪ್ಪಣೆಮಾಡಿದ್ದಾರೆ. ಆದರೆ ಅಮ್ಮನವರು ಅದಕ್ಕೆ ಒಪ್ಪಲಿಲ್ಲವೆಂದು ಕೇಳುತ್ತೇವೆ.

ಭಾರತೀಯರನ್ನು ಹೆಚ್ಚು ಹೆಚ್ಚಾಗಿ ಸೈನ್ಯದಲ್ಲಿ ಸೇರಿಸುವುದಕ್ಕಾಗಿ ಇಂಡ್ಯಾ ಪ್ರಭುತ್ವದವರು ಒಂದು ಸಂಘವನ್ನೇರ್ಪಡಿಸಿದ್ದಾರೆ. ಸ್ವದೇಶೀಯ ಸಂಸ್ಥಾನದ ಪ್ರಜೆಗಳೂ ಕೂಡ ಸೇರಿಸಿಕೊಳ್ಳಲ್ಪಡುವರು. ಈ ಸಂಘಕ್ಕೆ ಪಂಜಾಬು ಲೆ|| ಗೌನರ್‌ರೂ, ಗ್ವಾಲಿಯರ್ ಮಹಾರಾಜರು ಬಿಕನೀರ್ ಮಹಾರಾಜರುಗಳೂ, ಅ|| ಸರ್ ಕ್ಲಾಡ್ ಹಿಲ್ ಮೊದಲಾದ ೫ ಮಂದಿ ಯೂರೋಪ್ಯಾಧಿಕಾರಿಗಳೂ ಸಭಿಕರಾಗಿದ್ದಾರೆ.

ಬೊಂಬಾಯಿಯಲ್ಲಿ ಒಬ್ಬ ಯೂರೋಪ್ಯನು, ಸಕಾಲಕ್ಕೆ ಕಾಫಿಯನ್ನು ತಂದುಕೊಡಲಿಲ್ಲವೆಂಬ ಕಾರಣದಿಂದ ತನ್ನ ಬಟ್ಲರನ್ನು ಒದೆದು ಬಳಿಕ ಪಶ್ಚಾತ್ತಾಪಗೊಂಡು ೧೦ ರೂ. ನ ನೋಟನ್ನು ಕೊಟ್ಟು ಬಟ್ಲರಿನ ಕ್ಷಮಾಪಣೆ ಕೇಳಿಕೊಂಡನು. ಆ ಹಣದಿಂದ ಬಟ್ಲರು ಒಂದು ಲಾಟರಿ ಟಿಕೆಟ್ಟನ್ನು ಪಡೆದಿದ್ದನು. ಈಗ ಅವನ ನಂಬರಿಗೆ ೩೬೪೨೫ ರೂ. ಗಳ ಬಹುಮಾನವು ಬಂದಿದೆ. ಬೂಟ್ಸುಕಾಲಿನ ಒದೆಪೆಟ್ಟೇ ಅವನ ಪಾಲಿಗೆ ಲಕ್ಷ್ಮೀ ಪಾದತಾಡನವಾದಂತಾಯಿತು.

ಯುದ್ಧಋಣ ಸಂಬಂಧವಾಗಿ ಬೊಂಬಾಯಿಯಲ್ಲಿ ಏರ್ಪಡಿಸಲ್ಪಟ್ಟಿದ್ದ ಲಾಟರಿಯ ಫಲಿತಾಂಶವೆಲ್ಲಾ ಗೊತ್ತಾಯಿತು. ಮೊಟ್ಟಮೊದಲನೆಯ ಬಹುಮಾನವು ೭ ಲಕ್ಷ ರೂ. ಗಳಿಗೆ ಮೀರಿದ್ದಿತು. ಇದು ಸಿಂಗಪೂರಿನ ನಾಸಿಂ ಎಂಬುವನಿಗೆ ದೊರೆಯಿತು. ೩೬೪೨೧೦ ರೂ.ನ ೨ನೆ ಬಹುಮಾನವು ಬೊಂಬಾಯಿಯ ಒಬ್ಬ ಹಿಂದೂ ವರ್ತಕನಿಗೂ ೨೨೦೦೮೧ ರೂ.ನ ೩ ನೆ ಬಹುಮಾನವು ಬೊಂಬಾಯಿಯ ಒಬ್ಬ ಪಾರ್ಸಿಗುಮಾಸ್ತೆಗೂ ದೊರೆದುವು. ಉಳಿದ ಲಕ್ಷಾಂತರ ರೂ.ಗಳ ನಾನಾ ಪರಿಮಿತಿಯ ಬಹುಮಾನಗಳು ಸಾವಿರದವರೆಗೂ ಹಲವರಿಗೆ ದೊರೆದುವು.

"ಕಲ್ಕತ್ತಾದಲ್ಲಿ ಈ ವರ್ಷದ ಕೊನೆಗೆ ಕೂಡುವ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಗೆ ಅನಿಬೆಸೆಂಟಮ್ಮನವರನ್ನು ಕೋರಿಕೊಳ್ಳಿರಿ. ಅವರು ಬರಲನುವಾಗದಿದ್ದರೆ ಅವರ ಪ್ರತಿನಿಧಿತ್ವೇನ ನನ್ನನ್ನು ಅಧ್ಯಕ್ಷತೆಗೆ ಸ್ವೀಕರಿಸಿದರೆ ನಾನು ನೆರವೇರಿಸುವುದಕ್ಕೆ ಸಿದ್ಧನಾಗಿರುವೆನು." ಎಂದು ಸರ್ ಸುಬ್ರಹ್ಮಣ್ಯಯ್ಯರವರು ಕಾಂಗ್ರೆಸ್ ಸಭೆಗಳವರಿಗೆಲ್ಲಾ ಪತ್ರಿಕಾಮೂಲಕ ಶ್ರುತಪಡಿಸಿಕೊಂಡಿರುತ್ತಾರೆ. ಒಂದೆರಡುಕಡೆಯ ಅಧಿಪತ್ಯಗಳ ಕಾಂಗ್ರೆಸ್ ಸಂಘಗಳವರು ಈ ಮೊದಲೇ ಅಧ್ಯಕ್ಷತೆಗಾಗಿ ಸರ್ ಸುಬ್ರಹ್ಮಣ್ಯಯ್ಯರ ಹೆಸರನ್ನು ಸೂಚಿಸಿಕೊಂಡಿರುತ್ತಾರೆ.

ಹೈದರಾಬಾದಿನ ಕೋಟೀಶ್ವರರಲ್ಲಿ ಅಗ್ರಗಣ್ಯರಾದ ಮೋತೀಲಾಲರವರು ತಮ್ಮ ೮೫ ನೆ ವಯಸ್ಸಿನಲ್ಲಿ ಕಳೆದವಾರ ದೈವಾಧೀನರಾದರು. ಇವರು ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ೧೦ ಕೋಟಿ ರೂ.ಗಳ ಆಸ್ತಿಗಳನ್ನು ಬಿಟ್ಟುಹೋಗಿರುವರು. ಇವರ ತಂದೆಯವರು ಮೃತರಾದಾಗ ಹಂಚಿಕೊಟ್ಟ ಆಸ್ತಿಯಲ್ಲಿ ಇವರ ಭಾಗಕ್ಕೆ ೪೦ ಲಕ್ಷ ರೂ. ನ ಸೊತ್ತು ಬಂದಿದ್ದಿತು. ಇವರು ಅದನ್ನೇ ಅಭಿವೃದ್ಧಿಮಾಡಿ ೧೦ ಕೋಟಿಗೇರಿಸಿದರು. ಇವರ ಬಹಳ ಸೊತ್ತುಗಳು ಬೊಂಬಾಯಿ ಅಧಿಪತ್ಯದಲ್ಲಿರುವುವು. ಇವರಿಗೆ ವರ್ಷಕ್ಕೆ ೨೪ ಲಕ್ಷ ರೂ.ಗಳ ಆದಾಯವಿರುವುದು. ತಮ್ಮ ಕುಲದವರ ಅಭಿವೃದ್ಧಿಗಾಗಿ ಇವರು ೧೦ ಲಕ್ಷ ರೂ.ಗಳನ್ನು ದಾನಮಾಡಿರುವರು.

ಅನಿಬೆಸಂಟಮ್ಮ ಮೊದಲಾದ ಮೂವರೂ ತಾವು ನೀಲಗಿರಿಯಲ್ಲಿ ವಾಸಮಾಡುತ್ತಿರುವ ಭವನದ ಆವರಣದಲ್ಲಿ ೪೮ ಅಡಿಯೆತ್ತರವುಳ್ಳ ಸ್ವರಾಜ್ಯಧ್ವಜವನ್ನು ಕಳೆದ ತಾ|| ೫ ರಲ್ಲಿ ಪ್ರತಿಷ್ಠಾಪಿಸಿದರಂತೆ. ಇದಕ್ಕೆ ಕೆಂಪು ಹಸುರು ಬಣ್ಣದ ಪಟವನ್ನು ಅನಿಬೆಸಂಟಮ್ಮನವರು ಕಟ್ಟಿರುವರು. ಪ್ರತಿದಿನವೂ ಬೆಳಗಿನ ೬ ಗಂಟೆಗೆ ಪಟವು ಕಟ್ಟಲ್ಪಟ್ಟು ಸಾಯಂಕಾಲ ೬ ಗಂಟೆಗೆ ಇಳಿಯಿಸಲ್ಪಡುವುದಂತೆ. ಅವೆರಡುಕಾಲದಲ್ಲೂ ಅನಿಬೆಸಂಟಮ್ಮ ಮೊದಲಾದ ಮೂವರೂ ಅದಕ್ಕೆ ನಮಸ್ಕರಿಸುತ್ತಿರುವರಂತೆ. ರಾತ್ರಿಯಹೊತ್ತು ಧ್ವಜಸ್ತಂಭದ ಮೇಲೆ ಕೆಂಪುಕನ್ನಡಿಯ ದೀಪವು ಹೊತ್ತಿಸಲ್ಪಡುವುದು. ಇದು ಮುಂದೆ ದೊರೆಯುವ ಸ್ವರಾಜ್ಯ ಸ್ವಾತಂತ್ರ್ಯ ಸೂಚಕವಾದ ಧ್ವಜವೆಂದು ನ್ಯೂಇಂಡ್ಯಾಪತ್ರಿಕೆಯು ಹೇಳಿಕೊಂಡಿರುತ್ತದೆ.

ಗಂಗಾನದಿಯ ಮಧ್ಯದಲ್ಲಿ ಅಲ್ಲಲ್ಲಿ ದ್ವೀಪರೂಪವಾಗಿ ಏರ್ಪಟ್ಟಿರುವ ಕೆಲ ಭೂಸ್ವತ್ತುಗಳು ಯಾರಿಗೆ ಸೇರಿದುವು ಎಂಬ ವಿಷಯದಲ್ಲಿ ಇಂಡ್ಯಾ ಸರ್ಕಾರದವರಿಗೂ ಕೆಲ ಜಮೀನ್‌ದಾರರುಗಳಿಗೂ ವ್ಯಾಜ್ಯವು ಹುಟ್ಟಿ ಪ್ರಿವಿ ಕೌನ್ಸಿಲಿಗೆ ಹತ್ತಿ ೧೫ ವರ್ಷಗಳಾಗಿದ್ದರೂ ಸಂಪೂರ್ಣವಾಗಿ ಪರಿಷ್ಕರಿಸುವುದಕ್ಕೆ ತಕ್ಕ ಆಧಾರಗಳು ಇನ್ನೂ ದೊರೆಯದೆ ಹೋದುದರಿಂದ ಪ್ರಿವಿ ಕೌನ್ಸಿಲಿನವರು ಮರಳಿ ವಿಚಾರಣೆಗಾಗಿ ಸಬಾರ್ಡಿನೇಟ್ ಜಡ್ಜರವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಈ ಕಟ್ಟನ್ನು ಅವರು ಕಳುಹಿಸಿಕೊಡುವಾಗ್ಗೆ ಬೇಸರುಪಟ್ಟುಕೊಂಡು, "ಭರತಖಂಡದಲ್ಲಿ ಸಿವಿಲ್ ದಾವಾಗಳು ಬಹಳ ಆಲಸ್ಯವಾಗಿ ವಿಚಾರಣೆಮಾಡಲ್ಪಡುತ್ತಿವೆಯೆಂದು ಈಗ್ಗೆ ೭೦ ವರ್ಷಗಳ ಕೆಳಗೆ ಲಾರ್ಡ್ ಮೋರೀಯವರು ತಿಳಿಯಿಸಿದ್ದರು. ಆ ಅಸಾಮರ್ಥ್ಯವನ್ನು ಇದುವರೆಗೂ ತೊಲಗಿಸಿಕೊಳ್ಳದೆ ಹೋಗಿರುವುದು ಬಹಳ ಶೋಚನೀಯವು" ಎಂದು "ಹಿರಾ" ಬರೆದಿರುತ್ತಾರೆ. ಇದರಮೇಲಾದರೂ ಭರತಖಂಡದ ನ್ಯಾಯಮೂರ್ತಿಗಳು ಎಚ್ಚರೆಯುವರೋ?

ಬಂಗಾಳದ ಗೌನರ್‌ರಾದ ಲಾರ್ಡ್ ರೋನಾಲ್ಡ್‌ಷೆಯವರು ಕಳೆದವಾರದಲ್ಲಿ ಢಕ್ಕಾಪಟ್ಟಣಕ್ಕೆ ಹೋಗಿದ್ದರು. ಅಲ್ಲಿಯ ಪ್ರಜೆಗಳು ಒಪ್ಪಿಸಿದ ವಿಜ್ಞಾಪನ ಪತ್ರಿಕೆಗೆ ಉತ್ತರವನ್ನು ಕೊಡುವಾಗ್ಗೆ-ಸ್ವರಾಜ್ಯವಿಷಯಕವಾಗಿ ಸ್ವಲ್ಪ ಮಾತುಗಳನ್ನಾಡಲುಪಕ್ರಮಿಸಿ "ನೀವು ಆತುರವಾಗಿ ಅಪೇಕ್ಷಿಸುವ ಸ್ವರಾಜ್ಯವನ್ನು ಕುರಿತು ನಾನು ಎಚ್ಚರಿಸುವುದು ಅವಶ್ಯಕವಾಗಿದೆ. ಹಾಗೆ ಮಾಡದಿದ್ದರೆ ನೀವು ಅತ್ಯಾಶೆಯಿಟ್ಟುಕೊಂಡಿದ್ದು ಕಡೆಗೆ ಭಂಗಗೊಳ್ಳಬಹುದು. ೨ ವರ್ಷಗಳ ಕೆಳಗೆ ಬೊಂಬಾಯಿಯಲ್ಲಿ ರಾಷ್ಟ್ರೀಯಮಹಾಸಭಾಧ್ಯಕ್ಷರಾಗಿದ್ದ ಸರ್ ಎಸ್. ಪಿ. ಸಿನ್ಹರವರು ಆಲೋಚನಪೂರ್ವಕವಾಗಿ ಹೇಳಿದ ಸಂಗತಿಗಳನ್ನು ಸ್ವರಾಜ್ಯಕಾಂಕ್ಷಿಗಳೆಲ್ಲರೂ ಜಾಗರೂಕತೆಯಿಂದ ಪರಿಶೀಲಿಸಿದರೆ, ತಮ್ಮ ಗಮ್ಯಸ್ಥಾನವನ್ನು ಸೇರುವುದಕ್ಕೆ ಅನೇಕ ವರ್ಷಗಳ ಕಾಲ ಎಷ್ಟು ಕಷ್ಟಪಡಬೇಕೆಂಬುದು ವ್ಯಕ್ತವಾಗುವುದು. ಯಾವಾಗಲೋ ಒಂದು ದಿವಸ ಈ ದೇಶಕ್ಕೆ ಆಂಗ್ಲಸಾಮ್ರಾಜ್ಯದಲ್ಲಿ ಸ್ವಪರಿಪಾಲನವು ದೊರೆಯುವುದು ನಿಶ್ಚಯ. ಆದರೆ ಅದು ಬಹಳ ಒಪ್ಪದಿಂದ ಬಹುಕಾಲ ನಡೆಯಿಸುವ ಪರಿಶ್ರಮದ ಫಲಿತವಾಗಿ ಲಭಿಸತಕ್ಕದ್ದೇಹೊರತು ಒಂದು ಲೇಖನಿಯನ್ನು ಹಿಡಿದು ಗೀಚಿಬಿಡುವ ಮಾತ್ರದಿಂದಲೇ ತ್ವರಿತವಾಗಿ ಲಭಿಸುವುದೆಂದು ಊಹಿಸಲಾಗದು. ಅದಕ್ಕಾಗಿ ಅವಿರತಾಂದೋಳನವನ್ನು ನಡೆಯಿಸುತ್ತಿರಬೇಕೆಂಬುದು ನನ್ನಭಿಪ್ರಾಯವಲ್ಲ. ತೊಂದರೆಪಟ್ಟು ಅವಸರದಿಂದ ಕಟ್ಟುವ ಕೋಟೆಯು ದೃಢತರವಾಗಿರುವುದಿಲ್ಲ. ಚೆನ್ನಾಗಿ ಆಲೋಚಿಸಿ ಉತ್ಕೃಷ್ಟವಾಗಿ ಹಾಕಿದ ಹದಿಯಮೇಲೆ ಜಾಗರೂಕತೆಯಿಂದ ಮಾಡಲ್ಪಡುವ ದೃಢಪ್ರಯತ್ನದಿಂದಲೇ ಅದು ಸಾಧ್ಯವಾಗತಕ್ಕದು. ಅಂಥ ಆದರ್ಶಕ್ಕಾಗಿ ನೀವು ಮಾಡುವ ಉತ್ತಮಪ್ರಯತ್ನಗಳಿಗೆಲ್ಲಾ ನಾನು ಅತ್ಯುತ್ಸಾಹದಿಂದಲೂ ಪ್ರೇಮಪುರಸ್ಸರವಾಗಿಯೂ ಸಹಾಯಮಾಡುವೆನು" ಎಂದು ಅಪ್ಪಣೆಕೊಡಿಸಿರುವರು.

ವಿದೇಶವೃತ್ತಾಂತಗಳು.

ಅಮೇರಿಕಾ ನೌಕಾದಳದವರು ಸಬ್ ಮೆರೀನುಗಳನ್ನು ಧ್ವಂಸಮಾಡತಕ್ಕ ಒಂದು ತರದ ದೋಣಿಗಳನ್ನು ಸದ್ಯಃ ಒಂದುನೂರನ್ನು ಕಟ್ಟುತ್ತಿದ್ದಾರೆ.

ಅಮೇರಿಕಾ ಪ್ರಭುತ್ವದವರು ೨೨೬೨೫ ವಿಮಾನಗಳನ್ನು ಕಟ್ಟುವುದಕ್ಕೂ ಅದಕ್ಕಾಗಿ ೬೩೯೦೦೦೦೦೦ ಡಾಲರ್ ಹಣವನ್ನು ವೆಚ್ಚಮಾಡುವುದಕ್ಕೂ ಅಪ್ಪಣೆಮಾಡಿದ್ದಾರೆ.

ಚೀನಾಪ್ರಭುತ್ವ ವಿಧಾನವು ವಾರಕ್ಕೊಂದುತೆರನಾಗುತ್ತಿದೆ. ಮೊನ್ನೆ ವಾರದಲ್ಲಿ ಸಿಂಹಾಸನಾಸೀನನಾಗಿದ್ದ ಬಾಲ ಚಕ್ರವರ್ತಿಯು ಕಳೆದ ವಾರದಲ್ಲಿ ಪದಭ್ರಷ್ಟನಾಗಿ ಮಾಡಲ್ಪಟ್ಟನು. ಮರಳಿ ಪ್ರಜಾಪ್ರಭುತ್ವವೇ ಏರ್ಪಟ್ಟಿತು. ಈ ಪ್ರಭುತ್ವಕ್ಕೆ ನಾನ್‌ಕಿಂಗ್ ಪಟ್ಟಣವೇ ರಾಜಧಾನಿಯಾಗಿರುತ್ತದೆ. ಬಾಲ ಚಕ್ರವರ್ತಿಯನ್ನು ಸಿಂಹಾಸನಾಸೀನನನ್ನಾಗಿ ಮಾಡಲು ಕಾರಣಭೂತನಾಗಿದ್ದ ಚಂಗ್‌ಸೇನ್ ಎಂಬ ಸೇನಾಪತಿಯನ್ನು ಎಲ್ಲರೂ ಬಹಿಷ್ಕರಿಸಿದರು. ಅವನ ಮಿತ್ರರೂ ಶತ್ರುಗಳಾದರು. ಪಾಪ! ಆ ಬಾಲಚಕ್ರವರ್ತಿಯು ಇದುವರೆಗೆ ೨ ಸಲ ಸಿಂಹಾಸನಭ್ರಷ್ಟನಾದಂತಾಯಿತು. ಈಗಲೂ ಚೀನಾದ ಸ್ಥಿತಿಯು ಶಾಂತವಾಗಿಲ್ಲ. ರಾಜಪಕ್ಷ ಪ್ರಜಾಪಕ್ಷದ ಸೈನ್ಯಗಳೆರಡಕ್ಕೂ ಯುದ್ಧವಾಗುತ್ತಿದೆ. ಅವೆರಡು ಪಕ್ಷಗಳಲ್ಲದೆ ಇನ್ನೆರಡು ನೂತನಪಕ್ಷಗಳು ಏರ್ಪಟ್ಟಿವೆ.

ರಷ್ಯಾ ಪ್ರಭುತ್ವದವರು ಒಂದು ಸ್ತ್ರೀ ಸೈನ್ಯವನ್ನು ಈಗತಾನೇ ಏರ್ಪಡಿಸಿದ್ದಾರೆ. ಮೊದಲನೆ ಪಟಾಲಮಿನಲ್ಲಿ ೨೦೦ ಮಂದಿಯಿದ್ದಾರೆ. ಇವರೆಲ್ಲಾ ತಲೆ ಕೂದಲನ್ನು ಪುರುಷರಂತೆ ಕ್ರಾಪ್ ಮಾಡಿಸಿಕೊಂಡು ಪುರುಷಸೈನಿಕರ ಉಡುಪುಗಳನ್ನು ಧರಿಸಿ ಕೈಯಲ್ಲಿ ತುಪಾಕಿಗಳನ್ನು ಹಿಡಿದಿರುವರು. ಇವರೆಲ್ಲಾ ಸಾಲಾಗಿ ನಿಂತುಕೊಂಡಾಗ ಮತಗುರುವು ಆಶೀರ್ವದಿಸಿದರು. ಇವರೆಲ್ಲಾ ಆಗಲೇ ರಣರಂಗಕ್ಕೆ ಹೋದರು. ಯೂರೋಪಿನಲ್ಲೆಲ್ಲಾ ಮತ್ತಾವ ರಾಜ್ಯದಲ್ಲೂ ಹೀಗೆ ಸ್ತ್ರೀಯರ ಪಟಾಲಮು ಏರ್ಪಟ್ಟುದಿಲ್ಲ. ರಷ್ಯಾದ ಸ್ತ್ರೀಯರಲ್ಲೂ ಕೂಡ ರಣೋತ್ಸಾಹವು ಹೀಗಿದೆಯೆಂಬುದು ಇದರಿಂದ ವ್ಯಕ್ತವಾಗುವುದು. ಸರ್ಕಾರದವರ ಅಪ್ಪಣೆ ದೊರೆದಿದ್ದರೆ ೩ ವರ್ಷಕ್ಕೆ ಮುಂಚೆಯೇ ಇಂಗ್ಲೆಂಡಿನಲ್ಲಿ ಇಂಥ ಸ್ತ್ರೀ ದಳವು ಸೇರಲವಕಾಶವಿದ್ದಿತು. ಇನ್ನು ಯಾವಯಾವ ಪ್ರಭುತ್ವದವರು ಈ ಯೇರ್ಪಾಟನ್ನನುಸರಿಸುವರೋ ನೋಡಬೇಕು.

ಪತ್ರವ್ಯವಹಾರ.

ದಾವಣಗೆರೆ.

ಮಹಾ ತಪಸ್ವಿಗಳಾದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಬೀಳೂರು ಶ್ರೀ ಗುರುಬಸವಸ್ವಾಮಿಗಳವರು ಶ್ರೀ ಅಥಣಿ ಮೋಟಗಿ ಮಠದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ಚನ್ನಬಸವ ಸ್ವಾಮಿಗಳವರು ಈ ತಿಂಗಳು ೧೧ ನೆಯ ತಾರೀಖಿಗೆ ಇಲ್ಲಿಗೆ ದಯಮಾಡಿಸಿದನಂತರ ಮ|| ರಾ|| ಶೆಟ್ಟರ ಸಿದ್ಧರಾಮಪ್ಪನವರ ಗೃಹದಲ್ಲಿ ಇಲ್ಲಿನ ಬ್ರಂ|| ಶ್ರೀ|| ವೇ|| ಕೆಲಗಿ ಮಠದ ಚಂದ್ರಶೇಖರಶಾಸ್ತ್ರಿಗಳವರಿಂದ ಶ್ರೀ ಸಿದ್ಧರಾಮೇಶ್ವರ ಪುರಾಣವು ನಿರೂಪಿಸಲ್ಪಟ್ಟಿತು. ಅನಂತರ ಇಲ್ಲಿನ ಶ್ರೀ ವಿರಕ್ತಮಠದಲ್ಲಿ ತಾ|| ೧೮ ನೆಯ ದಿವಸ ಮಹಾ ಸಂತರ್ಪಣೆಯು ಬಹು ವಿಜೃಂಭಣೆಯಿಂದ ನಡೆದದ್ದಲ್ಲದೆ ಆ ದಿವಸ ಘನವಾದ ಸಭೆಕೂಡಿ ವೇ|| ಚಂದ್ರಶೇಖರಶಾಸ್ತ್ರಿಗಳವರು, ವೇ|| ಹಿರೇಮಠದ ರುದ್ರಶಾಸ್ತ್ರಿಗಳವರು, ವೇ|| ಬಿದರಿ ಬಸವಲಿಂಗಶಾಸ್ತ್ರಿಗಳವರು, ವೇ|| ಸಂಪಗೆ ಸಿದ್ಧಲಿಂಗಶಾಸ್ತ್ರಿಗಳವರು ಮೊದಲಾದ ವಿದ್ವಾಂಸರುಗಳು ವೀರಶೈವ ಮತಸನಾತನತ್ವ, ಆಚಾರ, ಭಕ್ತಿ ಮೊದಲಾದ ವಿಷಯಗಳ ಮೇಲೆ ಸಶಾಸ್ತ್ರೀಯವಾಗಿ ಉಪನ್ಯಾಸಗಳನ್ನು ಮಾಡಿದರು. ಈ ಉಭಯ ಮಹಾತ್ಮರುಗಳವರು ಇಲ್ಲಿಗೆ ದಯಮಾಡಿಸಿದ್ದರಿಂದ ಇಲ್ಲಿನ ಸಕಲ ವೀರಶೈವ ಮಹಾಜನಗಳು ಅತ್ಯಂತ ಸಂತೋಷಭರಿತರಾಗಿದ್ದಾರೆ. "ಪ್ರತ್ಯಕ್ಷದರ್ಶಿ"

ಧಾರವಾಡ.

ಧಾರವಾಡವು ಬೊಂಬಾಯಿ ಪ್ರಾಂತದ ಕರ್ನಾಟಕದಲ್ಲಿ ಮಧ್ಯಪ್ರದೇಶದಲ್ಲಿದೆಯಷ್ಟೆ. ಇಲ್ಲಿ ಈಗ ಹೊಸದಾಗಿ "ಕರ್ನಾಟಕ ಕಾಲೇಜ್" ಸ್ಥಾಪಿಸಲ್ಪಟ್ಟುದರಿಂದ ಈ ಪಟ್ಟಣದ ಪ್ರಾಮುಖ್ಯತೆಯು ಇನ್ನೂ ಹೆಚ್ಚಿತು. ಇಲ್ಲಿನ ಹಾಳಿರಿ ಸ್ವಾಮಿಯಲ್ಲಿ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಒಂದು ಶಾಖಾಮಠವಿದೆ. ಈ ಮಠಕ್ಕೆ ಮಹಾಪೂಜ್ಯಪಾದರು ದಾವಣಗೆರೆಯ ಶ್ರೀಮನ್ನಿರಂಜನ "ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯಸ್ವಾಮಿಗಳವರನ್ನು ನಿಯಮಿಸಿದಂದಿನಿಂತ ಇಲ್ಲಿ ಅನೇಕ ಸಮಾಜಕಾರ್ಯಗಳು ಜರಿಯುವಪಕ್ರಮಿಸಿವೆ. ಈ ಮಠದಲ್ಲಿ ಪ್ರತ್ಯೇಕ

ಕನಕಪ್ಪಯುರ್ಲಾದ ಧರ್ಮಸಭೆಯು.

ನಗರದಿಬ್ಬರ್ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಚಂದಾ ಕೊಟ್ಟ ಮಹನೀಯರುಗಳ ಪಟ್ಟಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆ, ಬೆಂಗಳೂರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಅವುಗಳ ನಾಮಗಳು.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್‌ಸನ್ಸ್
7 ವಿದ್ಯಾನಿಧಿ ಬುಕ್‌ಡಿಪೋ ಮೈಸೂರು.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
19 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೇವೆ.

೫ ನೇ ತರಗತಿ ರೇಖಾಗಣಿತಾದಿಪಾಠ.

೧೯೧೭ ನೆಯ ಇಸವಿ ಜುಲೈ ತಾ॥ ೧೫ ರಿಂದ ೧೯೧೭ ನೆಯ ಜುಲೈ ತಾ॥ ೨೧ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಷಾಢ ಬ॥ ದ್ವಾದಶಿಯಿಂದ ಶ್ರಾವಣ ಶು॥ ಬಿದಿಗೆವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಲಿಟ ಭೇದಿ
15	1 ಭಾನು	ದ್ವಾದಶಿ	56-22	ರೋಹಿಣಿ	53-53	32
16	2 ಸೋಮ	ತ್ರಯೋ	56-20	ಮೃಗಶಿರ	55-56	1
17	3 ಮಂಗಳ	ಚತು	57-34	ಆರಿದ್ರಾ	59-14	2
18	4 ಬುಧ	ಅಮಾ	60	ಪುನರ್ವಸು	60	3
19	ಗುರು	ಅಮಾ	1-54	ಪುನರ್ವಸು	4-21	4
20	ಶುಕ್ರ	ಪಾಡ್ಯ	5-43	ಪುಷ್ಯ	9-49	5
21	5 ಶನಿ	ಬಿದಿಗೆ	10-20	ಆಶ್ಲೇಷ	15-53	6

(1) ಶ್ರೀವೈಷ್ಣವಾನಾಂ ಮಾಧ್ವಾನಾಂಚೈಕಾದಶೀ ಹರಿವಾಸರಃ (ಸೌರರೀತ್ಯಾಮಿಥುನಕೃಷ್ಣದ್ವಾದಶೀತಿಥಿಃ ವಾಕ್ಯರೀತ್ಯಾಪೂರ್ಣತಿಥಿಃ) ವಾಕ್ಯರೀತ್ಯಾದಕ್ಷಿಣಾಯನಪುಣ್ಯಕಾಲಃ. (2) ಸೋಮಪ್ರದೋಷಃ (ಸೌರರೀತ್ಯಾಪೂರ್ಣತಿಥಿಃ) ದಕ್ಷಿಣಾಯನಪುಣ್ಯಕಾಲಃ. (3) ಮಾಸಶಿವರಾತ್ರಿಃ (ಸೌರರೀತ್ಯಾ ಕಟಿಕೃಷ್ಣಚತುರ್ದಶೀತಿಥಿಃ). (4) ಸರ್ವತ್ರಭೀಮಾಮಾವಾಸ್ಯಾ ಜ್ಯೋತಿರ್ವ್ರತಂ. (5) ಶ್ರಾವಣಶನಿವಾರಃ.

ಮೈಸೂರು: ವೈ. ಬಿರಾಮಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸಹಿತ]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಜುಲೈ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೧೯

ಉತ್ತಮ ವೀರಶೈವ ಗ್ರಂಥಗಳು.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
10 ಸದ್ವೈದ್ಯಶಾಲಾ ನಂಜನಗೂಡು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಅವುಗಳ ನಾಮಗಳು.

ಎಮ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶ್ರೀಕರಕಸ್ತೂರಿಮಾತ್ರೆ

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
20 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೇವೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 34

ಯೋಗ್ಯತಾಪತ್ರಗಳು.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಅಂಚೆವೆಚ್ಚ ಬೇರೆ.

ಮೈಸೂರು ಸ್ಟಾರ್.

೧೯೧೬ ನೆಯ ಇಸವಿ ಜುಲೈ ತಾ|| ೨೩ ನೆಯ ಭಾನುವಾರ.

ನಮ್ಮ "ಮರಾಮ್ಮತ್" ಶಾಖೆಯ ವರದಿ.

೧೯೧೫-೧೬ ನೆಯ ವರ್ಷಕ್ಕೆ ಸಂಬಂಧಪಟ್ಟ ಈ ಶಾಖೆಯ ವರದಿಯು ಮುದ್ರಿತವಾಗಿ ಕಳೆದ ತಿಂಗಳಲ್ಲಿ ನಮ್ಮ ಹಸ್ತಗತವಾಗಿರುವುದು. ಪ್ರಭುತ್ವದ ಎಲ್ಲ ಶಾಖೆಗಳಿಗಿಂತಲೂ ಹೆಚ್ಚು ಹಣವನ್ನು ನುಂಗುವುದರಲ್ಲಿ ಈ ಶಾಖೆಯು ಮೊದಲನೆಯದಾಗಿದೆ. ಈ ಶಾಖೆಯ ಕಾರ್ಯನಿರ್ವಾಹದಲ್ಲಿ ಅತ್ಯಂತ ಚತುರರಾಗಿರುವ ಈಗಣ ನಮ್ಮ ದಿವಾನರ ಕಾಲದಿಂದಲಂತು ಇದರ ಹಬ್ಬುಗೆಯು ಬಹಳವಾಗಿರುತ್ತದೆ. ಲಾಭಕಾರಿಯಾದ ನೂತನ ಪ್ರತಿಷ್ಠಾಪನೆಗಳಿಗಾಗಿ ಕಳೆದ ೫ ವರ್ಷಗಳಿಂದೀಚೆಗೆ ಸರ್ಕಾರದವರು ೩|| ಕೋಟಿ ರೂ. ಗಳನ್ನು ವ್ಯಯಮಾಡಿರುವರೆಂದು ದಿವಾನರು ಮೊನ್ನೆತಾನೇ ನಿಯಮನಿರ್ಮಾಣ ಸಭೆಯಲ್ಲಿ ಅಪ್ಪಣೆಕೊಡಿಸಿರುವರು. ಆ ಪ್ರತಿಷ್ಠಾಪನೆಗಳಿಂದೆಲ್ಲಾ ಸಂಸ್ಥಾನಕ್ಕೆ ಮುಂದೆ ವರ್ಷೋವರ್ಷ ೨೦ ಲಕ್ಷ ರೂ. ಗಳ ವರಮಾನವಾಗುವುದೆಂದೂ ಹೇಳಿರುವರು. ಯದ್ಯಪಿ ಈ ಶಾಖೆಯ ಕಾರ್ಯಗಳಲ್ಲಿ ನೀರಾವರಿ, ವಿದ್ಯುಚ್ಛಕ್ತಿ, ಲೋಹಮಾರ್ಗ, ವಾಟರ್‌ವರ್ಕ್ಸ್-ಈ ಸಂಬಂಧವಾದ ಸ್ಥಾಪನೆಗಳು ನೇರ್ಪಿನಿಂದಲೂ ಸವಿಮರ್ಶಕವಾಗಿಯೂ ಸ್ಥಾಪಿತವಾದರೆ ಶಾಶ್ವತ ಫಲಪ್ರದವಾಗುವುವೆಂಬುದರಲ್ಲಿ ಸಂಶಯವೇ ಇಲ್ಲ. ಅವುಗಳ ಹೊರತು ಕಟ್ಟಡಗಳು, ಸೇತುಗಳು, ಮಾರ್ಗಗಳ ಜೀರ್ಣೋದ್ಧಾರ-ಮೊದಲಾದ ಅನೇಕ ಭಾಗಗಳಿಗೆ ಈ ಶಾಖೆಯಿಂದ ಬಹಳ ಹಣವು ವೆಚ್ಚವಾದರೂ ಅವುಗಳಿಂದ ಪ್ರಜಾಹಿತರೂಪ ಪ್ರಯೋಜನವಲ್ಲದೆ ಬೊಕ್ಕಸಕ್ಕೆ ಧನರೂಪವಾದ ಆದಾಯವೇನೂ ಇರುವುದಿಲ್ಲ. ಸದ್ಯಕ್ಕೆ ಈ ಶಾಖೆಯ ಬಹು ಧನವನ್ನು ಸ್ವಾಹಾಮಾಡುತ್ತಿರುವುದು ಕನ್ನಂಬಾಡಿಯ ಕೃಷ್ಣರಾಜ ಸಾಗರದ ಕಟ್ಟೆಯ ಕೆಲಸವಾಗಿರುತ್ತದೆ. ಪ್ರಸಕ್ತ ವರ್ಷದಲ್ಲಿ ೨೦ ಲಕ್ಷ ರೂ. ಗಳ ಮೇಲೆಯೇ ಅದರ ಸಂಬಂಧವಾಗಿ ವೆಚ್ಚವಾಗಿರುತ್ತದೆ. ವಿದ್ಯುಚ್ಛಕ್ತಿ ಸಮುತ್ಪಾದನಕ್ಕೆ ಈ ಕಟ್ಟೆಯ ಸ್ಥಾಪನದಿಂದ ಬೇಸಗೆಯ ಕಾಲದಲ್ಲೂ ನಿರುಪಾಧಿಕವಾಗಿ ನೀರು ಒದಗುತ್ತಿರುವುದರಿಂದ, ಆ ಭಾಗದ ಆದಾಯವು ಹೆಚ್ಚಲಿಕ್ಕೆ ಮಾರ್ಗವಾಗಿ, ಈಗಾಗಲೇ ಈ ಕಟ್ಟೆಯು ಫಲಪ್ರದವಾಗಿರುತ್ತದೆ. ಭರತಖಂಡದ ಸರ್ಕಾರದವರು ಈ ಕಟ್ಟೆಯ ೨ ನೆ ಭಾಗದ ಕೆಲಸವನ್ನು ಮಾಡಿಸುವುದಕ್ಕೂ ಅಪ್ಪಣೆಯಿತ್ತಿರುವುದರಿಂದ ಮುಂದೆ ಇದನ್ನು ೧೨೦ ಅಡಿಗಳವರೆಗೂ ಎತ್ತರಿಸಲು ನಮ್ಮ ಸರ್ಕಾರದವರಿಗೆ ಅನುಕೂಲವಾದಂತಾಯಿತು. ಆದರೆ ಮದ್ರಾಸಿನವರು ಈ ಅಪ್ಪಣೆಯಮೇಲೂ ಅಪ್ಪೀಲುಮಾಡಿರುವರೆಂದು ವರ್ತಮಾನವಿದೆ. ಅದರ ತೀರ್ಮಾನವು ಹೊರಬೀಳುವವರೆಗೂ ಮೊದಲ ಭಾಗದ ಕೆಲಸವನ್ನೆಲ್ಲಾ ನಮ್ಮ ಸರ್ಕಾರದವರು ಮುಗಿಸಿಕೊಂಡಿರಬಹುದೆಂದು ಕಾಣುತ್ತದೆ. ಈ ಕಟ್ಟೆಯಿಂದ ಮೈಸೂರು ಮೊದಲಾದ ಅದರ ಕೆಳಗಿರುವ ಪುರಗ್ರಾಮಗಳ ಆರೋಗ್ಯಭಾಗ್ಯವು ಹೇಗಿರುವುದೆಂಬುದರ ವಿಚಾರವನ್ನು ಬಿಟ್ಟರೆ, ಇದರ ಆಶ್ರಯದಿಂದ ೧| ಲಕ್ಷ ಎಕರೆ ಭೂಮಿಯು ಗದ್ದೆಯಾಗಿ, ಅವುಗಳಮೂಲಕ ೩-೪ ತಾಲ್ಲೂಕುಗಳ ಪ್ರಜೆಗಳಿಗೆ ಸಂಪದಭಿವೃದ್ಧಿಯಾಗಲೂ, ಬೊಕ್ಕಸಕ್ಕೆ ಹತ್ತಾರು ಲಕ್ಷ ರೂ. ಗಳ ಕಂದಾಯವು ಬರಲೂ ಅವಕಾಶವಾಗುವುದೆಂಬುದರಲ್ಲಿ ಸಂಶಯವಿಲ್ಲ. ಅಲ್ಲದೆ ಕಟ್ಟೆಯ ಮಗ್ಗುಲಲ್ಲಿ ವಿದ್ಯುಚ್ಛಕ್ತಿ ಸಮುತ್ಪಾದನೆಗೂ ಅವಕಾಶಮಾಡಿದರೆ ಅದರಿಂದಲೂ ದೇಶಕ್ಕೂ ಬೊಕ್ಕಸಕ್ಕೂ ಸಹ ಪ್ರಯೋಜನವಾಗಬಹುದು. ಅಲ್ಲದೆ ಶಿವನಸಮುದ್ರದಲ್ಲಿ ಇನ್ನೂ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಬಹಳ ಹೆಚ್ಚಿಸಲೂಬಹುದು.

ವರದಿಗೆ ಸಂಬಂಧಪಟ್ಟ ವರ್ಷದಲ್ಲಿ ೭೩೦೫೪೭೭ ರೂ. ಗಳನ್ನು ಈ ಶಾಖೆಯ ಕಾರ್ಯಗಳಿಗೆ ವೆಚ್ಚಮಾಡಬಹುದೆಂದು ಸರ್ಕಾರದವರು ನಿರ್ಧರಿಸಿ ಅಪ್ಪಣೆಮಾಡಿದ್ದರು. ಇದರಮೇಲೆ ಪ್ರಜೆಗಳಿಂದ ಬೇರೆಬೇರೆ ಕೆಲಸಗಳಿಗಾಗಿ ಕೂಡಿ ಬಂದಿದ್ದ ಹಣವು ಸ್ವಲ್ಪ ಹೆಚ್ಚುಕಡಿಮೆ ಮೂರು ಲಕ್ಷದವರೆಗೂ ಇದ್ದಿತು. ಅಂತೂ ಈ ೭೫ ಲಕ್ಷ ರೂ. ಗಳಲ್ಲಿ ೬೫|| ಲಕ್ಷ ರೂ.ಗಳನ್ನು ಮಾತ್ರ ಆ ಶಾಖೆಯವರು ವೆಚ್ಚಮಾಡಿ, ಇನ್ನು ೭ ಲಕ್ಷ ರೂ. ಗಳಷ್ಟರ ಕೆಲಸವನ್ನು ನಡೆಯಿಸಲಾರದೆ ಉಳಿಯಿಸಿಬಿಟ್ಟಿರುತ್ತಾರೆ. ಹೀಗಾಗಿರುವುದು ಪ್ರಸಕ್ತವರ್ಷದಲ್ಲಿ ಮಾತ್ರವೇ ಅಲ್ಲ. ಇದರ ಹಿಂದಣ ಒಂದೆರಡು ವರ್ಷಗಳಲ್ಲೂ ಒಟ್ಟು ೮ ಲಕ್ಷ ರೂ. ಗಳಷ್ಟು ಹೀಗೆಯೇ ಉಳಿದುಹೋಗಿದ್ದಿತು. ಸೀಮೆಯಿಂದ ಬರಬೇಕಾದ ಸಾಮಗ್ರಿಗಳು ಬರದೆಹೋದುದು, ಕೂಲಿಗೆಲಸದವರು ತಕ್ಕಷ್ಟು ಸಿಕ್ಕದೆಹೋದುದು, ಇತ್ಯಾದಿ ಕೆಲವಂಶಗಳೇ ಇದಕ್ಕೆ ಕಾರಣವೆಂದು ಈ ಶಾಖೆಯ ಮುಖ್ಯೋದ್ಯೋಗಿಗಳು ಹೇಳಿರುತ್ತಾರೆ. ಇದನ್ನು ಸರ್ಕಾರದವರೇ ನಂಬುವುದಿಲ್ಲ. ಕಾಲದ ಸ್ಥಿತಿಗತಿಗಳನ್ನೂ ಶಾಖಾ ಮುಖ್ಯೋದ್ಯೋಗಿಗಳ ಅಭಿಪ್ರಾಯವನ್ನೂ ಪರ್ಯಾಲೋಚಿಸದೆ ಸರ್ಕಾರದವರು ಬಜೆಟ್ಟನ್ನು ಏರ್ಪಡಿಸುವರೆಂದು ಹೇಳಲಾಗದಿರುವಾಗ ಗೊತ್ತುಮಾಡಿಕೊಟ್ಟಷ್ಟು ಹಣವನ್ನು ವೆಚ್ಚಮಾಡಿ ಕೆಲಸ ನಡೆಯಿಸಲಾರದೆ ಹೋದ ದೋಷವು ಶಾಖಾಧಿಕಾರಿಗಳಮೇಲೆ ಹೊರುವುದೇ ಯುಕ್ತವಾಗಿರುತ್ತದೆ. ತಕ್ಕಷ್ಟು ಮುತವರ್ಜಿಯಿಲ್ಲದೆ ಶಾಖಾಕಾರ್ಯಗಳು "ಮುಲ್ಕಿ" ಬೀಳುವುದಾದರೆ ಬಹು ಧನವ್ಯಯದ "ಸಿಬ್ಬಂದಿ" ಯುಳ್ಳ ಈ ಶಾಖೆಗೆ ಎಂದಿಗೂ ಕೀರ್ತಿಯು ಬರಲಾರದು.

ಕೆರೆಗಳ ಜೀರ್ಣೋದ್ಧಾರಸಂಬಂಧವಾಗಿ ಈ ಶಾಖೆಯವರಿಂದ ನಡೆದಿರುವ ಕಾರ್ಯಗಳೂ ಕೂಡ ಸಮಾಧಾನಕರವಾಗಿರುವುದಿಲ್ಲ. ಆ ಭಾಗಕ್ಕಾಗಿ ಪ್ರತ್ಯೇಕಿಸಿಟ್ಟಿದ್ದ ಹಣದಲ್ಲಿಯೂ ಬಹುಭಾಗವು ವೆಚ್ಚವಾಗದೆ ಉಳಿದುಹೋಗಿರುವುದು.

ಈ ವರದಿಯಲ್ಲಿ ಕಂಡ ವಿಶೇಷಗಳೊಳಗೆ ಸಂಸ್ಥಾನವು ಚೀಫ್ ಕಮಿಷನರ ಆಳಿಕೆಯಿಂದ ನಮ್ಮ ಮಹಾರಾಜ ವಂಶದ ಆಳಿಕೆಗೆ ವಹಿಸಲ್ಪಟ್ಟಾರಭ್ಯ ಇದುವರೆಗೆ ಈ ಶಾಖೆಯಮೂಲಕ ವೆಚ್ಚಮಾಡಲ್ಪಟ್ಟಿರುವ ಹಣದ ಪರಿಮಾಣಗಳೆಲ್ಲಾ ಸುವ್ಯಕ್ತವಾಗುವಂತೆ ಮುದ್ರಿಸಲ್ಪಟ್ಟಿರುವುದೊಂದಾಗಿರುವುದು. ಅಲ್ಲದೆ ಈ ಶಾಖೆಯವರು ಕೈಕೊಂಡಿರುವ ಸಾಮಾನ್ಯವಾದ ನೂತನ ಕಾರ್ಯಗಳು ಕೆಲವು ವಿವರಿಸಲ್ಪಟ್ಟಿರುವುವು. ಅವುಗಳೊಳಗೆ ಮೂರು ಕಣಿವೆಯ ಜಲಾಶಯದಕೆಳಗೆ ತಾಕುವಾರು ಪಂಚಿಗೆಯಿಂದ ಭೂಮಿಯನ್ನು ವಿಶೇಷವಾಗಿ ಸಾಗುವಳಿಗೆ ಬರುವಂತೆ ಮಾಡಿರುವ ಏರ್ಪಾಟೂ, ಕೆರೆಗಳ ಕೆಳಗಣ ಭೂಮಿಗಳಿಗೆ ಯದ್ವಾತದ್ವಾ ನೀರನ್ನುಪಯೋಗಿಸಿಕೊಳ್ಳುವ ಪದ್ಧತಿಯನ್ನು ತಪ್ಪಿಸಿ, ಲೆಕ್ಕವನ್ನನುಸರಿಸಿ ಆಳತೆಯಾಗಿ ಪ್ರತಿಭೂಮಿಗೂ ಸಾಕಾಗುವಷ್ಟು ನೀರನ್ನೊದಗಿಸುವ ಏರ್ಪಾಟನ್ನು ಕೆಲಕಡೆ ಮಾಡಿಸಿ ಪರೀಕ್ಷಿಸಲಾಗಿ, ಕೆರೆಗಳಕೆಳಗೆ ಕಡೆಯ ಹಂತದ ಭೂಮಿಗಳಿಗೆ ನೀರೇ ಇಲ್ಲದೆಹೋಗುತ್ತಿದ್ದ ಅವ್ಯವಸ್ಥೆಯು ತಪ್ಪಿ, ಎಲ್ಲ ಭೂಮಿಗಳಿಗೂ ಹದವಾದಷ್ಟು ನೀರು ಒದಗಿದುದಲ್ಲದೆ ಕೆಲಕಡೆ ವರ್ಷಕ್ಕೆ ೨ ಬೆಳೆಸನ್ನು ಮಾಡುವುದಕ್ಕೆ ಸಾಧ್ಯವಾದ ಸಂಗತಿಯೂ ಸಹ ನಿರೂಪಿಸಲ್ಪಟ್ಟಿದೆ. ಈ ಏರ್ಪಾಟಿನ ಸ್ವರೂಪವನ್ನು ಎಲ್ಲ ಕೆರೆಗಳ ಕೆಳಗಣ ವ್ಯವಸಾಯಗಾರರಿಗೂ ತಿಳಿಯಿಸಿಕೊಟ್ಟು ಅದನ್ನನುಸರಿಸುವಂತೆ ಮಾಡಿದರೆ ಬಹಳ ಪ್ರಯೋಜನವಾಗುವುದು. ಸೂಚಿತವಾಗಿರುವ ಹೊಸ ಏರ್ಪಾಟುಗಳೊಳಗೆಲ್ಲಾ ಈ ಶಾಖೆಯ "ವರ್ಕ್‌ಷಾಪನ್ನು" ಬೆಂಗಳೂರು ವಾಟರ್‌ಸಪ್ಲೈ ಡಿವಿಜನ್ನಿನ ಆಶ್ರಯದಿಂದ ತಪ್ಪಿಸಿ, ಪ್ರತ್ಯೇಕಪಡಿಸಿ, ಅದರಲ್ಲಿ ನಾನಾ ತರದ ವ್ಯವಸಾಯದ ಮುಟ್ಟುಗಳನ್ನೂ, ಅನೇಕತೆರದ ಯಂತ್ರೋಪಕರಣಗಳನ್ನೂ, ಆಯುಧಗಳನ್ನೂ, ಪೆಟ್ಟಿಗೆ ಮೊದಲಾದ ಲೋಹಸಾಮಗ್ರಿಗಳನ್ನೂ ನಿರ್ಮಿಸಿ ಕೊಡುತ್ತಿರುವುದೂ, ವಿದ್ಯಾರ್ಥಿಗಳಿಗೆ ಇಲ್ಲಿ ಪ್ರತ್ಯಕ್ಷ ಶಿಲ್ಪಾನುಭವವುಂಟಾಗುವಂತೆ ಅವಕಾಶಮಾಡಿರುವುದೂ, ವಿದ್ಯುಚ್ಛಕ್ತಿಮಾಪನ, ಜಲವ್ಯಯಮಾಪನ (ಮೀಟರು) ಗಳನ್ನು ನಿರ್ಮಿಸಲು ಪ್ರಯತ್ನಿಸಿರುವುದೂ ಸಹ ನಿಜವಾಗಿಯೂ ಪ್ರಶಂಸನೀಯವಾದ ಏರ್ಪಾಟಾಗಿರುತ್ತದೆ. ವಿದೇಶಗಳಿಗೆ ಹೋಗಿ ನಾನಾ ಪರೀಕ್ಷೆಗಳನ್ನಿತ್ತು ಬಿರುದಾಕ್ಷರಗಳ ಮಾಲೆಯನ್ನು ಹೊತ್ತು ಬಂದಿರುವ ನಮ್ಮ ದೇಶದ ಶಿಲ್ಪವಿದ್ಯಾಪಾರಂಗತರೆಲ್ಲರೂ ತಮ್ಮ ಮೇಧಾಶಕ್ತಿಯನ್ನು ಇಂಥ ಕರ್ಮಾಗಾರಗಳಲ್ಲಿ ಉಪಯೋಗಿಸಿ, ಉಪಯೋಗಕರವಾದ ನವೀನ ಯಂತ್ರೋಪಕರಣಗಳನ್ನೇನಾದರೂ ನಿರ್ಮಿಸುವುದಾದರೆ ದೇಶಕ್ಕೆ ಕೀರ್ತಿಯೂ ಲಾಭವೂ ಕೂಡ ಉಂಟಾದೀತು. ನಮ್ಮ ಪದವೀಧರರಲ್ಲಿ ಸರ್ಕಾರದ ಸಂಬಳವೇ ತಮ್ಮ ಪ್ರಾಪ್ಯಸ್ಥಾನವೆಂಬ ಅಲ್ಪತೃಪ್ತಿಯು ತೊಡೆದುಹೋಗಿ ವಿದೇಶೀಯರಂತೆ ನವನವಪರಿಶೋಧನಾದಿಗಳಿಂದ ಜಗದ್ವಿಖ್ಯಾತಿಯನ್ನೂ ಅಪರಿಮಿತೈಶ್ವರ್ಯವನ್ನೂ ಸಂಪಾದಿಸಬೇಕೆಂಬ ಮಹತ್ವಾಕಾಂಕ್ಷೆಗಳುಂಟಾಗುತ್ತ ಬಂದರೆ ಅದೀಗ ನಿಜವಾದ ಸಂತೋಷಸ್ಥಾನವು. ವಿದೇಶ ವಿದ್ಯಾಭ್ಯಾಸಕ್ಕಾಗಿ ಲಕ್ಷಾಂತರ ರೂ. ಗಳನ್ನು ವೇತನಗಳಮೂಲಕ ಸಹಾಯಮಾಡುತ್ತಿರುವ ಸರ್ಕಾರದವರ ಉದ್ದೇಶವಾದರೂ ಸಾರ್ಥಕವಾದೀತು.

ಈ ಶಾಖೆಯವರ ಕಾರ್ಯನಿರ್ವಾಹ ವಿಷಯದಲ್ಲಿ ಪ್ರಜೆಗಳ ದೂರು ನಾನಾವಿಧವಾಗಿರುತ್ತಿರುವುದು. ಅವುಗಳು ಬೇಗಬೇಗನೆ ಪರಿಹಾರಗೊಳ್ಳದಿರುವುದರಿಂದ ಕಷ್ಟವು ಹೆಚ್ಚುತ್ತಿರುವುದು. ಪ್ರಜಾಪ್ರೀತಿಯೂ, ನಿಸ್ಪೃಹತೆಯೂ, ಸತ್ಯಸಂಧತೆಯೂ ಈ ಶಾಖೆಯ ಉದ್ಯೋಗಿಗಳಲ್ಲಿ ಎಷ್ಟು ಅಧಿಕವಾಗುತ್ತ ಬಂದರೆ ಸರ್ಕಾರದವರು ವೆಚ್ಚಮಾಡುವ ಹಣಕ್ಕೆ ಸಮರ್ಪಕವಾದ ಪ್ರತಿಫಲವೂ, ತನ್ಮೂಲಕ ದೇಶದ ಶ್ರೇಯಸ್ಸಿಗೆ ಸಾಧನವೂ ಆಗುವುದರಲ್ಲಿ ಸಂಶಯವಿಲ್ಲ.

ಮೆಸಪೊಟೋಮಿಯಾ ವರದಿಯ ವಿಚಾರ.

ಈ ವರದಿಯಲ್ಲಿ ಕಂಡಪ್ರಕಾರ ಅಪಜಯಕ್ಕೆ ಕಾರಣಭೂತರೆನಿಸಿದ್ದವರನ್ನು ವಿಚಾರಣೆ ನಡೆಯಿಸುವುದಕ್ಕಾಗಿ ಒಂದು ಪ್ರತ್ಯೇಕ ನ್ಯಾಯಸ್ಥಾನವನ್ನೇರ್ಪಡಿಸಲು ಆಂಗ್ಲಪ್ರಭುತ್ವದವರು ಯತ್ನಿಸಿದರು. ಹೀಗೆ ಮಾಡುವುದಕ್ಕೆ ಅನೇಕ ಆಂಗ್ಲಮಹಾಜನರು ಸಮ್ಮತಿಸಲಿಲ್ಲ. ಬಹುಕಾಲ ದೊಡ್ಡದೊಡ್ಡ ಪ್ರಭುತ್ವ ಕಾರ್ಯಗಳನ್ನು ನಿರ್ವಹಿಸಿ ನಂಬುಗೆಪಡೆದ ಪುರುಷಶ್ರೇಷ್ಠರನ್ನು ಯಾವುದೋ ಸಾಮಾನ್ಯವಾದ ಹಳೆಯ ತಪ್ಪಿತಕ್ಕಾಗಿ ನ್ಯಾಯಸ್ಥಾನದ ಮುಂದಕ್ಕೆಳೆದು ವಿಚಾರಮಾಡಿಸಿ ಅಗೌರವಪಡಿಸುವುದು ಉಚಿತವಲ್ಲವೆಂದೂ ಅದು ದೇಶಕ್ಕೆ ಗೌರವಕರವಲ್ಲವೆಂದೂ ಸಹ ಹಿಂದಣ ಮುಖ್ಯಮಂತ್ರಿಯವರಾದ ಮಿ|| ಆಸ್ಕ್ವಿತ್‌ರವರು, ಲಾರ್ಡ್ ಕರ್ಜನ್ನರವರು ಮೊದಲಾದನೇಕರು ಪಾರ್ಲಿಮೆಂಟಿನಲ್ಲಿ ವಾದಿಸಿದರು. ಈ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಬಹಳ ಚರ್ಚೆಗಳು ನಡೆದುವು. ಉದ್ಯೋಗದಲ್ಲಿದ್ದುಕೊಂಡೇ ಈ ಸಂಬಂಧವಾದ ವಿಚಾರಣೆಗೆ ತಕ್ಕ ಉತ್ತರವನ್ನು ಹೇಳುವುದು ಸರಿಯಲ್ಲವೆಂದು ಸ್ಟೇಟ್ ಸೆಕ್ರೆಟರಿ ಮಿ|| ಚೇಂಬರ್ಲೇನ್‌ರವರು ರಾಜೀನಾಮೆಯನ್ನು ಕೊಟ್ಟುಬಿಟ್ಟರು. ಇವರು ಮೊಟ್ಟಮೊದಲು ಸ್ಟೇಟ್‌ಸೆಕ್ರೆಟರಿ ಪದವಿಗೆ ಬಂದಾಗ ಭರತಖಂಡದ ವಿಷಯವಾಗಿ ಸಾನುಭೂತಿಯುಳ್ಳವರಾಗಿಲ್ಲದಿದ್ದರೂ ಕಟ್ಟಕಡೆಗೆ ಸಾಮ್ರಾಜ್ಯ ಯುದ್ಧಸಭೆಯು ನೆರೆದೀಚೆಗೆ ಇವರು ಭರತಖಂಡದಮೇಲೆ ಬಹಳ ಅಭಿಮಾನವನ್ನು ವಾಕ್ಕಿನಿಂದಲೂ ಕಾರ್ಯರೂಪದಿಂದಲೂ ವ್ಯಕ್ತಪಡಿಸಿದ್ದರು. ಭರತಖಂಡಕ್ಕೆ ಅನುಗ್ರಹಿಸುವುದಕ್ಕಿರುವ ರಾಜಕೀಯ ಸ್ವಾತಂತ್ರ್ಯಸಂಬಂಧವಾಗಿಯೂ ಇವರ ಸಾನುಭೂತಿಯು ಫಲಪ್ರದವಾಗುವ ಸಂಭವವಿದ್ದಿತು. ಹೀಗೆ ಸುಮುಖವಾಗಿದ್ದ ಸಮಯದಲ್ಲಿ ಇವರ ಸಹಾಯವನ್ನು ಭರತಖಂಡವು ಕಳೆದುಕೊಂಡುದು ವಿಷಾದಕರವಾಯಿತು. ಆದರೂ ಇವರ ಸ್ಥಾನಕ್ಕೆ ಮಿ|| ಮಾಂಟೆಗ್‌ರವರು ನಿಯಮಿಸಲ್ಪಟ್ಟರೆಂಬ ವಾರ್ತೆಯು ಭಾರತೀಯರ ಮನಸ್ಸನ್ನು ಸಮಾಧಾನಪಡಿಸಿರುತ್ತದೆ. ಹಿಂದೆ ಲಾರ್ಡ್ ಮಾರ್ಲೆಯವರು ಸ್ಟೇಟ್ ಸೆಕ್ರೆಟರಿಯವರಾಗಿದ್ದಾಗ ಈ ಮಾಂಟೆಗ್‌ರವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದರು. ಅದರಿಂದಲೂ ಮತ್ತೂ ಪ್ರತ್ಯಕ್ಷವಾಗಿ ಭರತಖಂಡಕ್ಕೆ ಬಂದು ಹೋಗಿರುವ ಕಾರಣದಿಂದಲೂ ಈ ದೇಶದ ರಾಜಕೀಯ ವಿಷಯದಲ್ಲಿ ಇವರಿಗೆ ವಿಶೇಷ ಪರಿಜ್ಞಾನವುಂಟು. ಮತ್ತೂ ಉದಾರಮತವಾದಿಗಳಾದ ಇವರು ಭರತಖಂಡದ ವಿಷಯವಾಗಿ ಸಾನುಭೂತಿಯನ್ನು ಎಷ್ಟೋಸಲ ಪ್ರದರ್ಶನಮಾಡಿರುವರು. ಆದಕಾರಣ ಪ್ರಸಕ್ತ ಸಮಯಕ್ಕೆ ಇಂಥ ಸ್ಟೇಟ್‌ಸೆಕ್ರೆಟರಿಗಳು ಭರತಖಂಡಕ್ಕೆ ದೊರೆದುದು ವಿಹಿತವೇ ಆಯಿತು. ಲಾರ್ಡ್ ಹಾರ್ಡಿಂಜ್‌ರವರೂ ಕೂಡ ಈ ಸಮಯದಲ್ಲಿ ಮೂರಾವೃತ್ತಿ ರಾಜೀನಾಮೆ ಕೊಟ್ಟಿದ್ದರು. ಆದರೆ ಪ್ರಭುತ್ವದವರು ಅದನ್ನಂಗೀಕರಿಸಿ ಅವರಂಥ ಸಮರ್ಥರ ಸಹಾಯವನ್ನು ಕಳೆದುಕೊಳ್ಳಲು ಅಪೇಕ್ಷಿಸಲಿಲ್ಲ. ಮಿ|| ಚೇಂಬರ್ಲೇನರು ಪಾರ್ಲಿಮೆಂಟಿನಲ್ಲಿ ತಮ್ಮ ಪ್ರತ್ಯುತ್ತರ ಭಾಷಣವನ್ನು ಬಹಳ ಸಮರ್ಥವಾಗಿ ನಡೆಯಿಸಿದರು. ಕಾಮನ್ಸ್ ಸಭೆಯಲ್ಲಿ ಸಭಿಕರ ಆಕ್ಷೇಪಗಳು ಅನಂತಾನಂತವಾಗಿ ಬಂದುದರಿಂದ ಪ್ರತ್ಯೇಕ ನ್ಯಾಯಸ್ಥಾನದಮೂಲಕ ವಿಚಾರ ನಡೆಯಿಸಬೇಕೆಂದು ಪ್ರಭುತ್ವದವರು ಮಾಡಿಕೊಂಡಿದ್ದ ಸಂಕಲ್ಪವು ಉಪಸಂಹರಿಸಲ್ಪಟ್ಟಿತು. ಮೆಸಪೊಟೋಮಿಯಾಪಜಯವಿಚಾರಣೆಗಾಗಿ ಏರ್ಪಟ್ಟಿದ್ದ ಪಂಚಾಯಿತರ ವಿಚಾರಣೆಯನ್ನು ಪ್ರಭುತ್ವದವರು ಈಚೆಗೆ ನಡೆಯಿಸಿದರು. ಇದರ ವಿಷಯವು ಇನ್ನೂ ಕೊನೆಮುಟ್ಟಿಲ್ಲ. ಲಾರ್ಡ್ ಹಾರ್ಡಿಂಜ್‌ರವರ ವಿಷಯದಲ್ಲಿ ತಮಗಿರುವ ಸಂಪೂರ್ಣ ವಿಶ್ವಾಸವನ್ನು ಕುರಿತು ಭರತಖಂಡದ ರಾಜಕೀಯ ಸಂಘಗಳೂ ಸಕಲ ದೇಶೀಯ ಪತ್ರಿಕೆಗಳೂ ಸಹ ಆಂಗ್ಲಮಂತ್ರಿಮಂಡಲಕ್ಕೆ ಶ್ರುತಪಡಿಸಿಕೊಂಡಿರುತ್ತಾರೆ.

ಚಕ್ರವರ್ತಿ ದಂಪತಿಗಳು ರಣರಂಗಕ್ಕೆ ದಯಮಾಡಿಸಿದ್ದುದು.

ನಮ್ಮ ಸಾರ್ವಭೌಮರವರು ಪತ್ನೀಸಮೇತರಾಗಿ ಕಳೆದ ತಾ|| ೩ ರಲ್ಲಿ ಫ್ರಾನ್ಸ್ ದೇಶಕ್ಕೆ ಪ್ರಯಾಣಮಾಡಿದರು. ಅಲ್ಲಿ ಪ್ರಿನ್ಸ್‌ಆಫ್ ವೇಲ್ಸ್‌ರವರು ಮೊದಲಾದನೇಕರು ಸ್ವಾಗತಿಸಿದರು. ರಣಾಂಗಣದಲ್ಲಿ ಇಂಗ್ಲೀಷ್ ಫ್ರೆಂಚ್ ಸೈನಿಕರು ಅಧಿಕೋತ್ಸಾಹದಿಂದ ಮರ್ಯಾದಿಸಿದರು. ಚಕ್ರವರ್ತಿಯವರು ೧ ತಿಂಗಳ ಹಿಂದೆ ಯುದ್ಧನಡೆದಿದ್ದ ಅನೇಕ ಸ್ಥಳಗಳಿಗೆ ಪಾದಚಾರಿಗಳಾಗಿ ಹೋಗಿ ಅದರ ಭಯಂಕರಸ್ವರೂಪವನ್ನೆಲ್ಲಾ ಅವಲೋಕಿಸಿದರು. ಆ ಸಮಯದಲ್ಲಿ ಮುರಿದುಬಿದ್ದಿರುವ ಆಯುಧಗಳು ಅಗ್ನಿಗೋಳಗಳ ತುಣುಕುಗಳು, ತಲೆ ಟೊಪ್ಪಿಗೆಗಳು ಮೊದಲಾದುವನ್ನೆಲ್ಲಾ ದಾಟಿಕೊಂಡು ಹೋಗುತ್ತಿದ್ದರು. ಅವರಿದ್ದ ಸ್ಥಳಕ್ಕೆ ಉತ್ತರದಲ್ಲಿ ಸಮೀಪದೊಳಗೇ ಒಂದುಕಡೆ ಶತ್ರುಗಳು ಫಿರಂಗಿಗುಂಡುಗಳನ್ನು ಹಾರಿಸುತ್ತಿದ್ದರು. ಆಕಾಶದಲ್ಲಿ ಶತ್ರುವಿಮಾನಗಳು ಚಕ್ರವರ್ತಿಯವರ ಮೇಲ್ಗಡೆಗೆ ಬರದಂತೆ ಆಂಗ್ಲ ವಿಮಾನಗಳು ಕಾವಲಾಗಿ ಸಂಚರಿಸುತ್ತಿದ್ದುವು. ಜರ್ಮನರ ಸುರಂಗದಿಂದ ಅಗಾಧವಾಗಿ ಗುಳಿ ಬಿದ್ದಿದ್ದ ಒಂದು ಸ್ಥಳದ ಬಳಿಯಲ್ಲಿ ೧ ಗಂಟೆಯಹೊತ್ತು ನಿಂತು ಪರಾಮರಿಸಿದರು. ಅದಕ್ಕೆ ೧ ಸಾವಿರ ಗಜದ ದೂರದಲ್ಲಿ ಏಸ್‌ಚೇಟಿನಹತ್ತಿರ ಶತ್ರುಗಳು ಗುಂಡುಗಳನ್ನು ಹಾರಿಸುತ್ತಿದ್ದರು. ಶ್ರೀಯವರು ಅಲ್ಲಿಂದ ಒಂದು ಸಣ್ಣ ಹೊಗೆಬಂಡಿಯಲ್ಲಿ ಕುಳಿತು ಎಲೆಕ್ಟ್ರಿಕ್ ದೀಪದ ಬೆಳಕಿನಿಂದ ಕೂಡಿದ್ದ ಸುರಂಗದ ಬಾಗಿಲನ್ನು ನುಗ್ಗಿ ಕಂದಕಗಳನ್ನೂ ಕಣಿವೆಗಳನ್ನೂ ಪರಾಮರಿಸಿಕೊಂಡು ಬಂದರು. ಬಳಿಕ ಇನ್ನು ಕೆಲ ರಣಾಂಗಣಗಳನ್ನು ಅವಲೋಕಿಸಿದರು. ಅಲ್ಲೆಲ್ಲಾ ಇದ್ದ ಆಸ್ಟ್ರೇಲಿಯಾ ನ್ಯೂಜಿಲಾಂಡು ಮೊದಲಾದ ಪಟಾಲಮ್ಮುಗಳನ್ನು ನೋಡಿ, ಅವರ ಉತ್ಸಾಹಪೂರ್ವಕವಾದ ಮರ್ಯಾದೆಯನ್ನು ಸ್ವೀಕರಿಸಿದರು. ಒಂದುದಿನ ಬೆಲ್ಜಿಯಂ ರಾಜರೊಡನೆ ಔತಣದೂಟವನ್ನು ಮಾಡಿದರು. ವಿಮಾನದಳದವರು ಮಾಡುತ್ತಿರುವ ಅದ್ಭುತ ಯುದ್ಧಕ್ರಮಗಳನ್ನು ಅವಲೋಕಿಸಿ ಸಂತೋಷಿಸಿದರು. ನೌಕಾದಳವನ್ನೂ ಪರಾಮರಿಸಿ ಸಂತೋಷಿಸಿದರು. ತಾ|| ೬ ರಲ್ಲಿ ಚಕ್ರವರ್ತಿಯವರು ಸೈನಿಕರ ಯುದ್ಧಾಭ್ಯಾಸವನ್ನು ನೋಡುತ್ತ ನಿಂತಿರುವಾಗ, ಅದಕ್ಕೆ ಮುಂಚೆ ಅವರು ಹೋಗಿ ನಿಂತಿದ್ದು ಬಂದ ಸ್ಥಳದಮೇಲೆ ಶತ್ರುವೈಮಾನಿಕರು ಸಿಡಿಮದ್ದುಗಳನ್ನು ಹಾಕಿದರು. ಆ ಸುದ್ದಿಯು ಆ ಕೂಡಲೇ ಇವರಿಗೆ ತಿಳಿಯಿಸಲ್ಪಟ್ಟಿತು. ಚಕ್ರವರ್ತಿಯವರು ಹೀಗೆ ರಣರಂಗವನ್ನೆಲ್ಲಾ ಪರಾಮರಿಸುತ್ತಿದ್ದಾಗ ಚಕ್ರವರ್ತಿನಿಯವರು ಸೈನಿಕ ವೈದ್ಯಾಲಯಗಳಿಗೆ ಹೋಗಿ ಅಲ್ಲಿ ನಡೆಯುವ ಉಪಚಾರಕ್ರಮಗಳನ್ನವಲೋಕಿಸಿ, ಚಿಕಿತ್ಸೆಗೊಳ್ಳುತ್ತಿದ್ದ ಸೈನಿಕರನ್ನು ಮಾತನಾಡಿಸಿ, ಸಂತೋಷಪಡಿಸುತ್ತಿದ್ದರು. ರಣಾಂಗಣದ ಸಂದರ್ಶನವೆಲ್ಲಾ ಮುಗಿದಬಳಿಕ ಸಾರ್ವಭೌಮರು ಆ ರಂಗದ ಮುಖ್ಯ ದಳಪತಿಯಾದ ಫೀಲ್ಡ್ ಮಾರ್ಷಲ್ ಸರ್ ಡಗ್ಲಸ್‌ಹೇಗ ರವರಿಗೆ "ನೈಟ್‌ಆಫ್ ದಿ ಥಿಜಲ್" ಎಂಬ ಘನತರವಾದ ಪ್ರಶಸ್ತಿಯನ್ನೂ, ಜನರಲ್ ಫಿಟೇಯಿರ್ನ್ ಮೊದಲಾದ ಸೇನಾಪತಿಗಳು ಕೆಲವರಿಗೆ ಇನ್ನು ಕೆಲ ಬಿರುದಾವಳಿಗಳನ್ನೂ ಕೊಟ್ಟು ಗೌರವಿಸಿ, ಸುರಕ್ಷಿತರಾಗಿ ಲಂಡನ್ ಪಟ್ಟಣವನ್ನು ದಂಪತಿಗಳಿಬ್ಬರೂ ಸೇರಿದರು.

ಒಳದೇಶದ ವೃತ್ತಾಂತಗಳು.

ನೀಲಗಿರಿಯಿಂದ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಗುರುವಾರ ರಾಜಧಾನಿಗೆ ದಯಮಾಡಿಸಿತು.

ಮೈಸೂರಿನ ಹೆಲ್ತಾಫೀಸರಾಗಿರುವ ಡಾ|| ಎ. ಕೋದಂಡಪಾಣಿ ಮೊದಲಿಯಾರರಿಗೆ ಬೆಂಗಳೂರು ಸೆಂಟರಲ್ ಜೈಲಿನ ಸೂಪರಿಂಟೆಂಡೆಂಟ್ ಕೆಲಸಕ್ಕೆ ವರ್ಗವಾಗಿದೆ.

ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನವರು ಕೋಲಾರದಿಂದ ಮುಳಬಾಗಲಿನ ಮೇಲೆ ಮದನಪಲ್ಲಿಗೆ ಲೋಹಮಾರ್ಗವನ್ನು ಹಾಕಬೇಕೆಂದು ಯೋಚಿಸಿರುವರು.

ಕೋಲಾರ ಡಿಸ್ಟ್ರಿಕ್ಟ್ ಡಿ|| ಕಮಿಷನರ್ ಗಿರಿಗೆ ವರ್ಗಮಾಡಲ್ಪಟ್ಟಿರುವ ಮ|| ಎ. ಸುಬ್ರಹ್ಮಣ್ಯಯ್ಯರವರು ಜುಲೈ ತಾ|| ೨ ರಿಂದ ೩ ತಿಂಗಳ ರಜವನ್ನು ಪಡೆದುಕೊಂಡಿದ್ದಾರೆ.

ಕಳೆದ ಸೋಮವಾರ ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರ ಹೆತ್ತ ತಾಯಿಯವರು ತಮ್ಮ ೬೦ ನೆ ವಯಸ್ಸಿನಲ್ಲಿ ಕಾಲವಾದರೆಂದು ತಿಳಿಯಿಸಲು ವಿಷಾದಿಸುತ್ತೇವೆ.

ಮ|| ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ರವರು ಕಳೆದ ಫೆಬ್ರವರಿ ತಾ|| ೧ ರಿಂದ ಅ|| ಕಮಿಷನರ್ ಬಿ. ಹೆಡ್ಲೈಲ್ ೫ ನೆ ತರಗತಿಯಿಂದ ೪ ನೆ ತರಗತಿಗೆ ವೃದ್ಧಿಗೊಳಿಸಲ್ಪಟ್ಟಿದ್ದಾರೆ.

ರಾಜಧಾನಿಯಲ್ಲಿ ಇನ್ನೂ ಮಳೆ ಬೀಳಲಿಲ್ಲ. ಪುನರ್ವಸು ಕಳೆದುಹೋಯಿತು. ವಾಂತಿಭೇದಿರೋಗವು ಉಬ್ಬಣಾವಸ್ಥೆಯಲ್ಲಿಯೇ ಇದೆ. ಆಹಾರ್ಯ ಧಾನ್ಯಗಳ ಬೆಲೆಯು ಏರುತ್ತಲಿದೆ. ರೈತರೂ ಬಡಬಗ್ಗರೂ ಚಿಂತಿಸುತ್ತಲಿದ್ದಾರೆ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮುಂದಿನವರ್ಷದ ಸಮ್ಮೇಳನವನ್ನು ಬೊಂಬಾಯಿ ಕರ್ಣಾಟಕದ ಪಟ್ಟಣವಾಗಿ ಧಾರವಾಡದಲ್ಲಿ ನೆರವೇರಿಸಬೇಕೆಂದು ಧಾರವಾಡದ ದೇಶಭಾಷಾಭಿಮಾನಿಗಳು ಕಳೆದವಾರ ೧ ಸಭೆಯಮೂಲಕ ನಿರ್ಧಾರಮಾಡಿರುವರು.

ಮೈಸೂರು ನಿಯಮನಿರ್ಮಾಣ ಸಭಾಸಭಿಕತ್ವ ಕಾಲಾವಧಿಯು ಮುಗಿದ ಮ|| ಬಿ. ನರಸಿಂಗರಾಯರು ಮತ್ತೂ ಮ|| ರಾಮಸ್ವಾಮಿಶೆಟ್ಟರು ಇವರುಗಳ ಸ್ಥಾನಕ್ಕೆ ಬೆಂಗಳೂರಿನ ಮ|| ಅಡ್ವೋಕೇಟ್ ಎಚ್. ಶ್ರೀನಿವಾಸಯ್ಯಂಗಾರರೂ ರಿಟೈರ್ಡ್ ಕೊಡಗು ಸಬ್ ಜಡ್ಜ್ ರಾ|| ಬ|| ಚೆನ್ನಯ್ಯನವರೂ ಸಹ ಸಭಿಕರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮ|| ಸಿ. ದೇವರಾಜೇ ಅರಸಿನವರು ತಾತ್ಕಾಲಿಕವಾಗಿ ಕಡೂರು ಡಿಸ್ಟ್ರಿಕ್ಟ್ ಡಿ|| ಕಮಿಷನರಾಗಿಯೂ, ಮ|| ಬಿ. ವೆಂಕೋಬರಾವ್ ಬಿ. ಎ. ಯವರು ಕೋಲಾರದ ಆಕ್ಟಿಂಗ್ ಡಿ|| ಕಮಿಷನರಾಗಿಯೂ ಮ|| ಎಂ. ಜಿ. ಕೃಷ್ಣಸ್ವಾಮಿರಾವ್ ಬಿ. ಎ. ಯವರು ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಮೈಸೂರು ರೈಲ್ವೆ ಸ್ಟೇಷನ್ ರೋಡಿನಲ್ಲಿರುವ ಮೆಸರ್ಸ್. ಎಚ್. ಜಿ. ಲಿಂಗಣ್ಣ ಅಂಡ್‌ಸನ್ಸ್‌ರವರಲ್ಲೂ ಹಳೆ ಅಗ್ರಹಾರದ ಪನ್‌ಸಾರೆ ಅಂಗಡಿ ಮ|| ಶೆಟ್ಟಿಪ್ಪ ಸಿದ್ದಪ್ಪನವರಲ್ಲೂ ವಾಂತಿಭೇದಿ ರೋಗಕ್ಕೆ ಗುಣಕಾರಿಯಾದ ಔಷಧವು ಧರ್ಮಾರ್ಥವಾಗಿ ಕೊಡಲ್ಪಡುತ್ತಿರುವುದು. ರಾಜಧಾನಿಯ ಎಲ್ಲಾ ಪೊಲೀಸ್ ಠಾಣಗಳಲ್ಲೂ ಈ ರೋಗದ ಔಷಧವು ಇಡಲ್ಪಟ್ಟಿರುವುದು. ಅವಶ್ಯಕತೆಯುಳ್ಳವರೆಲ್ಲಾ ಯಾವ ಸಮಯದಲ್ಲಿ ಬೇಕಾದರೂ ಕೇಳಿ ಪಡೆದುಕೊಳ್ಳಬಹುದು.

ಮೈಸೂರು ಸಂಸ್ಥಾನದಲ್ಲಿ ವ್ಯವಸ್ಥಿತವಾದ ಒಂದು ಕ್ರಮವನ್ನನುಸರಿಸಿ ಮುಖ್ಯ ನಗರಗಳ ಬಡಾವಣೆಗಳಲ್ಲಿ ಹೊಸದಾಗಿ ಮನೆ ಕಟ್ಟಿಕೊಳ್ಳುವ ಸರ್ಕಾರಿ ಸಂಬಳಗಾರರಿಗೆ ೧೨ ತಿಂಗಳ ಸಂಬಳವನ್ನೂ, ಬಡಾವಣೆಗಳ ಏರ್ಪಾಟಿಲ್ಲದ ಸ್ಥಳಗಳಲ್ಲಿ ಮನೆ ಕಟ್ಟಿಕೊಳ್ಳತಕ್ಕವರಿಗೆ ೬ ತಿಂಗಳ ಸಂಬಳವನ್ನೂ ಮುಂಗಡವಾಗಿ ಕೊಡಬಹುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಮದ್ರಾಸು ವಿಶ್ವವಿದ್ಯಾಲಯಕ್ಕೆ ಸೇರಿ ಬ್ರಹ್ಮಜ್ಞಾನ ಸಮಾಜದವರ ಮೇಲ್ವಿಚಾರಣೆಯಿಂದ ನಿರ್ವಹಿಸಲ್ಪಡುತ್ತಿರುವ ಮದನಪಲ್ಲಿ ಆಂಗ್ಲಕಲಾಶಾಲೆಯಲ್ಲಿ ನಮ್ಮ ಮೈಸೂರಿನ ಚೀಫ್ ಇಂಜನಿಯರಾಗಿದ್ದು ರಿಟೈರಾದ ಮ|| ವೈ. ಶ್ರೀನಿವಾಸರಾಯರು ಇಂಜನಿಯರಿಂಗ್ ಉಪಾಧ್ಯಾಯರಾಗಿಯೂ ಓರಿಯಂಟಲ್ ಲೈಬ್ರರಿ ಕ್ಯೂರೇಟರಾಗಿದ್ದು ನಿವೃತ್ತರಾದ ಮ|| ಎ. ಮಹಾದೇವಶಾಸ್ತ್ರಿಗಳು ಸಂಸ್ಕೃತೋಪಾಧ್ಯಾಯರಾಗಿಯೂ ಸೇರಿರುತ್ತಾರೆ.

ರಾಜಧಾನಿಯ ರತ್ನಾವಳಿ ನಾಟಕ ಕಂಪೆನಿಯವರು ಕೊಯಮತ್ತೂರಿನಲ್ಲಿ ತಮ್ಮ ಪ್ರಯೋಗಗಳನ್ನು ನಡೆಯಿಸಿ ಪುರವಾಸಿಗಳನ್ನು ಸಂತೋಷಪಡಿಸುತ್ತಿದ್ದಾರೆ. ಮೊನ್ನೆ ಶನಿವಾರ ಯುದ್ಧದ ಫಂಡಿಗೆ ಒಂದು ದಿನದ ಉತ್ಪತ್ತಿಯನ್ನು ಕೊಡಲು ನಡೆಯಿಸಿದ ನಾಟಕ ಪ್ರದರ್ಶನಕ್ಕೆ ಗೌರ್ನರ ಕಾರ್ಯನಿರ್ವಾಹಕಸಂಘದ ಮೆಂಬರಾದ ಸರ್ ಕಾರ್ಡ್ಯೂರವರು ಕಲೆಕ್ಟರು ಮೊದಲಾದ ಅನೇಕ ಯೂರೋಪ್ಯಾಧಿಕಾರಿಗಳೂ ಸ್ಥಳದ ಪ್ರಮುಖರೂ ಅನೇಕವಾಗಿ ಸೇರಿದ್ದರು. ಆ ದಿನದ ಉತ್ಪತ್ತಿ ೫೦೦ ರೂ.ಗಳು ಯುದ್ಧದ ಫಂಡಿಗೆ ಕೊಡಲ್ಪಟ್ಟುವು.

ನಮ್ಮ ಶ್ರೀಮನ್ಮಹಾರಾಜರವರ ಮಾವಂದಿರವರಾದ ಶ್ರೀಮಾನ್ ಝುಲಾಲಾರಾಮವಿನಯಸಿಹ್ಮರವರ ಮಾತೃಶ್ರೀಯವರು ತಮ್ಮ ೧೦೨ ನೆಯ ವಯಸ್ಸಿನಲ್ಲಿ ಮೊನ್ನೆಯ ಮಂಗಳವಾರ ಕಾಲವಾದರು. ಇವರು ಬಹಳ ಭಕ್ತಿಪರರಾಗಿಯೂ, ಆಚಾರವತಿಯರಾಗಿಯೂ ಇದ್ದರು. ಚಿಕ್ಕ ವಯಸ್ಸಿನಲ್ಲೇ ಜನನಿಯನ್ನು ಕಳೆದುಕೊಂಡ ನಮ್ಮ ಮಹಾರಾಣಿಯವರನ್ನು ಈ ಅಜ್ಜಮ್ಮನವರೇ ತಾಯಿಗಿಂತಲೂ ಹೆಚ್ಚಾಗಿ ಅಕ್ಕರೆಯಿಂದ ಸಾಕಿದವರಾಗಿದ್ದರು. ಇಂಥವರ ವಿಯೋಗದುಃಖವು ಶ್ರೀಮನ್ಮಹಾರಾಣಿಯವರಿಗೂ ಅವರ ಪಿತೃಗಳು ಮೊದಲಾದವರಿಗೂ ಉಂಟಾದುದಕ್ಕಾಗಿ ವಿಷಾದಿಸುತ್ತೇವೆ.

ನಮ್ಮ ಶ್ರೀಮನ್ಮಹಾರಾಜರವರ ಮುಸಾಹೇಬರಾಗಿದ್ದ ಮಿ|| ಮಿರ್ ಕಮೂಲುದ್ದೀನ್ ಅಲ್ಲೀಖಾನರವರು ಕಳೆದ ತಾ|| ೮ ರಲ್ಲಿ ತುಮಕೂರಿನಲ್ಲಿ ವಿಧಿವಶರಾದರು. ಇವರು ಗತಿಸಿದ ಟಿಪ್ಪುಸುಲ್ತಾನರ ದಾಯಾದಿಗಳ ವಂಶೀಯರು. ಇವರು ಮೈಸೂರು ಸಂಸ್ಥಾನದಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದು ನಿವೃತ್ತರಾಗಿದ್ದರು. ಇವರು ವಿದ್ಯಾಭಿವೃದ್ಧಿ ಮೊದಲಾದ ಧರ್ಮಕಾರ್ಯಗಳಿಗೆ ಪ್ರೋತ್ಸಾಹಕವಾಗಿ ದಾನಧರ್ಮಗಳನ್ನು ಮಾಡುತ್ತಿದ್ದರು. ಇವರಿಗೆ ಮೈಸೂರು ಮದ್ರಾಸು ಹೈದರಾಬಾದು ಸರ್ಕಾರಗಳಿಂದ ೬ ಪೆನ್ಷನ್ನುಗಳು ಸಲ್ಲುತ್ತಿದ್ದುವು. ಇವರ ಗಂಡುಮಕ್ಕಳಲ್ಲಿ ಒಬ್ಬರು ಬ್ಯಾರಿಸ್ಟರು ಪರೀಕ್ಷೆ ಕೊಟ್ಟು ಬಂದಿರುತ್ತಾರೆ. ಮತ್ತೊಬ್ಬರು ಈಗ ವಿದ್ಯಾಭ್ಯಾಸಕ್ಕಾಗಿ ಸೀಮೆಗೆ ಹೋಗಿದ್ದಾರೆ.

ಹಿಂದುಳಿದವರ ವಿದ್ಯಾಭ್ಯಾಸಪ್ರೋತ್ಸಾಹಕ್ಕಾಗಿ ಶ್ರೀಮನ್ಮಹಾರಾಜಾ ಸರ್ಕಾರದವರು ೧ ಲಕ್ಷ ರೂ.ಗಳನ್ನು ವ್ಯಯಮಾಡಲು ಅಪ್ಪಣೆಮಾಡಿರುವರಷ್ಟೆ. ಇದರಲ್ಲಿ ೧೫ ಸಾವಿರ ರೂ.ಗಳನ್ನು ನಿಮ್ನ ಜಾತಿಯವರಿಗೂ ಉಳಿದ ೮೫ ಸಾವಿರ ರೂ.ಗಳನ್ನು ಲಿಂಗಧಾರಿಗಳು ಒಕ್ಕಲಿಗರು ಮಹಮ್ಮದೀಯರು ಮೊದಲಾದ ವಿದ್ಯಾಭ್ಯಾಸದಲ್ಲಿ ಹಿಂದುಳಿದಿರುವ ಜನವರ್ಗಗಳ ವಿದ್ಯಾರ್ಥಿಗಳಿಗೂ ಪ್ರೋತ್ಸಾಹಾರ್ಥವಾಗಿ ವಿನಿಯೋಗಿಸತಕ್ಕದೆಂದು ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸಕಮಿಟಿಯವರು ಮಾಡಿದ ನಿರ್ಣಯವನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ. ವಿನಿಯೋಗಕ್ಕಾಗಿ ಒಂದು ಕಮಿಟಿಯನ್ನೇರ್ಪಡಿಸಿದ್ದಾರೆ. ಹಿಂದುಳಿದ ಜನವರ್ಗದ ವಿದ್ಯಾರ್ಥಿಗಳಲ್ಲಿ ಸರ್ಕಾರಿ ವೇತನದ ಸಹಾಯವನ್ನಪೇಕ್ಷಿಸತಕ್ಕವರು ತಮ್ಮ ಬಡತನ ಮೊದಲಾದ ವಿಷಯಗಳಿಗೆ ಮಹಜರಿನೊಡನೆ ಅರ್ಜಿಯನ್ನು ಎಕಾನಮಿಕ್ ಕಾನ್ಫರೆನ್ಸಿನ ಸೆಂಟರಲ್ ಕಮಿಟಿಗೆ ಬರೆದುಕೊಳ್ಳಬಹುದಾಗಿದೆ.

ಬೆಂಗಳೂರು ಪುರವಾಸಿಗಳು ಕಳೆದ ತಾ|| ೧೪ ನೆ ಶನಿವಾರ ಸಾಯಂಕಾಲ ಲಾಲ್‌ಬಾಗಿನಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರಿಗೆ ನೂತನವಾಗಿ ಸಿ. ಐ. ಇ. ಪ್ರಶಸ್ತಿಯು ದೊರೆದುದರ ಸಂಬಂಧವಾಗಿ ತಮಗುಂಟಾದ ಸಂತೋಷವನ್ನು ವ್ಯಕ್ತಪಡಿಸಿ ಗೌರವಿಸುವುದಕ್ಕಾಗಿ ಒಂದು ಸಮಾರಂಭವನ್ನು ನಡೆಯಿಸಿದರು. ಅದಕ್ಕೆ ಆಹ್ವಾನಮಾಡಲ್ಪಟ್ಟಿದ್ದವರಲ್ಲಿ ಆ|| ಬ್ರಿಟಿಷ್ ರೆಸಿಡೆಂಟರು, ಸಂಸ್ಥಾನದ ದಿವಾನರು, ಕೌನ್ಸಿಲರುಗಳು ಮೊದಲಾದ ಅನೇಕ ಮುಖ್ಯಾಧಿಕಾರಿಗಳೂ ಪಟ್ಟಣದ ಎಲ್ಲ ಜನವರ್ಗದ ಪ್ರಮುಖರೂ ಬಂದು ನೆರೆದಿದ್ದರು. ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಉರುದಿನಲ್ಲೂ ಮ|| ಶೆಟ್ಟರ ಗುಣಾತಿಶಯಗಳನ್ನು ವರ್ಣಿಸಿದ್ದ ವಿಜ್ಞಾಪನ ಪತ್ರಿಕೆಗಳು ಬೇರೆಬೇರೆ ಜನರಿಂದ ಓದಲ್ಪಟ್ಟುವು. ಅವುಗಳಲ್ಲಿ ಕನ್ನಡದ ಪತ್ರಿಕೆಯನ್ನು ಯಥಾವತ್ತು ಈ ಪತ್ರಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿದ್ದೇವೆ. ಈ ವಿಜ್ಞಾಪನ ಪತ್ರಗಳೆಲ್ಲಾ ಒಂದು ಭವ್ಯವಾದ ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಲ್ಪಟ್ಟುವು. ಮ|| ಶೆಟ್ಟರು ಪುರವಾಸಿಗಳು ಮಾಡಿದ ಸತ್ಕಾರ ಗೌರವಗಳಿಗಾಗಿ ಪ್ರಶಸ್ತವಾದ ಸರಸವಚನಗಳಿಂದ ವಂದಿಸಿ, ತಮ್ಮ ದೇಹದಾರ್ಢ್ಯವಿರುವವರೆಗೂ ಪ್ರಜಾಸೇವೆಯಲ್ಲೇ ತಮ್ಮ ಕಾಲವನ್ನು ಕಳೆಯುತ್ತಿರುವೆನೆಂದು ಹೇಳಿ, ಸಾಮ್ರಾಜ್ಯ ಪ್ರಭುತ್ವದವರಲ್ಲೂ ಮೈಸೂರು ರಾಜವಂಶೀಯರಲ್ಲೂ ತಮಗಿರುವ ಅಸಾಧಾರಣವಾದ ಭಕ್ತಿ ಗೌರವಗಳನ್ನು ವ್ಯಕ್ತಪಡಿಸಿದರು. ಸಭಿಕರೆಲ್ಲರೂ ಗಾನಸತ್ಕಾರ ಪುಷ್ಪಹಾರ ತಾಂಬೂಲ ಸ್ವೀಕಾರಾದಿಗಳಿಂದ ಸತ್ಕರಿಸಲ್ಪಟ್ಟರು.

ಯುದ್ಧವಾರ್ತೆಯು

(ಪಶ್ಚಿಮರಣರಂಗ.)

ಇಂಗ್ಲೀಷರು ನ್ಯೂಪೋರ್ಟಿಗೆ ಉತ್ತರದಲ್ಲಿರುವ ಮಳಲಗುಡ್ಡೆಯ ಒಂದು ಪ್ರದೇಶವನ್ನು ಫ್ರೆಂಚರ ಅಧೀನದಿಂದ ತಪ್ಪಿಸಿ ತಾವು ಹೊಸದಾಗಿ ವಹಿಸಿಕೊಂಡಿದ್ದರು. ಈ ದೇಶದ ಸ್ಥಿತಿಗತಿಗಳು ಇವರಿಗೆ ಚೆನ್ನಾಗಿ ತಿಳಿದಿರಲಿಲ್ಲ. ಇದು ಸಮುದ್ರಮಟ್ಟಕ್ಕೆ ಆರೇ ಅಡಿಗಳಷ್ಟು ಎತ್ತರವಾದುದು. ಅವಿಸಿಕೊಳ್ಳುವುದಕ್ಕೆ ತಕ್ಕ ರಕ್ಷಣಸ್ಥಾನಗಳೂ ಇರಲಿಲ್ಲ. ಇದನ್ನು ಬಲ್ಲ ಶತ್ರುಗಳು ಕಳೆದ ತಾ|| ೧೦ ರಲ್ಲಿ ಈ ಸ್ಥಳದಮೇಲೆ ಬಹಳ ಭಯಂಕರವಾದ ಯುದ್ಧವನ್ನು ನಡೆಯಿಸಿದರು. ಮೊದಲು ಅಮಿತವಾದ ಫಿರಂಗಿ ಗುಂಡುಗಳನ್ನು ಈಜರ್ ನದಿಯ ಪೂರ್ವಪಡದಲ್ಲಿದ್ದ ಇಂಗ್ಲೀಷರ ಕಂದಕಗಳಿಗೆ ನೇರವಾಗಿ ೬೦೦ ಗಜಗಳ ಪ್ರದೇಶದಲ್ಲಿ ಸುರಿಯಿಸಿ, ಈಜರ್‌ನದಿಯ ಪಶ್ಚಿಮಭಾಗದ ಪ್ರದೇಶವನ್ನೆಲ್ಲಾ ಧೂಳೀಪಟಲಮಾಡಿದರು. ಇಂಗ್ಲೀಷರ ಕಂದಕಗಳೆಲ್ಲಾ ಪುಡಿಪುಡಿಯಾದುವು. ಈ ಸಮಯದಲ್ಲೇ ಶತ್ರುಗಳು ಅಂತರಿಕ್ಷದಿಂದ ಫಿರಂಗಿಗುಂಡುಗಳನ್ನೂ ಸಿಡಿಮದ್ದುಗಳನ್ನೂ ಹಾಕಿ ಬಹಳ ಕೋಲಾಹಲಮಾಡಿದರು. ಸಮುದ್ರ ಮಧ್ಯದಿಂದ ಈಜರ್‌ನದಿಗೆ ಅಡ್ಡವಾಗಿದ್ದ ಸೇತುವನ್ನು ಧ್ವಂಸಮಾಡಿದರು. ಹೊಸಸೈನ್ಯವನ್ನು ಇಂಗ್ಲೀಷರು ತರಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದಂತೆ ಮಾಡಿದರು. ತಮ್ಮ ಕಡೆಗೆ ಮಾತ್ರ ಪ್ರತಿಗಳಿಗೆಯಲ್ಲೂ ಹೊಸ ಸೈನ್ಯಗಳನ್ನು ಜತೆಗೂಡಿಸುತ್ತಲೇ ಇದ್ದರು. ಇಂಗ್ಲೀಷರು ಆ ದಿನವೆಲ್ಲಾ ಫಿರಂಗಿಗಳಿಂದಲೂ ತುಪಾಕಿಗಳಿಂದಲೂ ತಮ್ಮ ಕೈಲಾದಮಟ್ಟಿಗೂ ಭೀಕರವಾಗಿಯೇ ಯುದ್ಧಮಾಡಿದರು. ಶತ್ರುಗಳಿಗೆ ಬಹಳ ನಾಶನಷ್ಟವನ್ನು ಮಾಡಿದರು. ಆದರೂ ಶತ್ರುಗಳ ಸಂಖ್ಯೆಯು ಆ ಬಳಿಯಲ್ಲಿ ಬಹಳ ದೊಡ್ಡದಾಗಿದ್ದುದರಿಂದ ವ್ಯರ್ಥವಾಗಿ ಮೊಂಡ ಯುದ್ಧವನ್ನು ಮಾಡುವುದು ಸರಿಯಲ್ಲವೆಂದು ಆ ಸ್ಥಳವನ್ನು ಶತ್ರುಗಳಿಗೆ ಬಿಟ್ಟುಕೊಟ್ಟು ಹಿಮ್ಮೆಟ್ಟಿಹೋದರು. ಇದರಿಂದ ಈಜರ್ ರಂಗದಲ್ಲಿದ್ದ ಇಂಗ್ಲೀಷ್ ಸೇನಾಪಂಗ್ತಿಯು ೧೪೦೦ ಗಜಗಳಿಗಲ್ಲ ೬೦೦ ಗಜಗಳಷ್ಟು ದೂರ ಹಿಮ್ಮೆಟ್ಟಿಹೋದಂತಾಯಿತು. ಉಳಿದ ಹಲವುಕಡೆಯೂ ಜರ್ಮನರು ಕಳೆದವಾರದಲ್ಲಿ ಮಿತ್ರಮಂಡಲಿ ಸೇನಾಮುಖದಮೇಲೆ ಬಿದ್ದು ಬಹಳ ಯುದ್ಧವನ್ನು ನಡೆಯಿಸಿದ್ದಾರೆ. ಆದರೂ ಇನ್ನೆಲ್ಲೂ ಅವರಿಗೆ ಫಲಲಾಭವುಂಟಾಗಲಿಲ್ಲ. ಫ್ರೆಂಚರು ಕಳೆದ ತಿಂಗಳಲ್ಲಿ ಕಳೆದುಕೊಂಡಿದ್ದ ಸ್ಥಾನಗಳನ್ನೆಲ್ಲಾ ಮರಳಿ ವಶಪಡಿಸಿಕೊಂಡುದಲ್ಲದೆ ೩೦೪ ನೆ ನಂ|| ಗುಡ್ಡದ ಪಶ್ಚಿಮದಲ್ಲಿ ಬಹುದೂರ ಮುಂದಕ್ಕೆ ನುಗ್ಗಿ ಶತ್ರುಗಳು ಬಲಪಡಿಸಿಕೊಳ್ಳುತ್ತಿದ್ದ ಅವರ ಮುಂದಣಸಾಲಿನ ಕಂದಕಗಳನ್ನೆಲ್ಲಾ ವಶಪಡಿಸಿಕೊಂಡರು.

ಪೂರ್ವರಣರಂಗ.

ಗೆಲೀಸಿಯಾದಲ್ಲಿ ರಷ್ಯನರ ಜಯಯಾತ್ರೆಯು ಕ್ರಮವಾಗಿ ಸಾಗುತ್ತಲೇ ಇದೆ. ಹಾಲ್ಲಿಜ್ ಪಟ್ಟಣವು ರಷ್ಯನರ ವಶವಾದುದು ಆ ದೇಶೀಯರಿಗೆಲ್ಲಾ ಬಹಳ ಸಂತೋಷವನ್ನುಂಟುಮಾಡಿದೆ. ಈ ಪಟ್ಟಣವು ಯುದ್ಧಕಾರ್ಯಕ್ಕೆ ಬಹಳ ಪ್ರಾಮುಖ್ಯವನ್ನು ಪಡೆದುದು. ಕಳೆದವರ್ಷ ಇದನ್ನು ಹಿಡಿದುಕೊಳ್ಳಬೇಕೆಂದು ರಷ್ಯನರು ಬಹಳ ದೊಡ್ಡಯುದ್ಧಗಳನ್ನು ನಡೆಯಿಸಿದರೂ ವಿಫಲರಾಗಿದ್ದರು. ಈ ಪಟ್ಟಣವು ರಷ್ಯನರ ವಶವಾದುದರಿಂದ ನೀಸ್ಟರಿನಾರಭ್ಯ ಲೆಂಬರ್ಗಿನವರೆಗೆ ಹೋಗಿರುವ ಲೋಹಮಾರ್ಗವೆಲ್ಲಾ ರಷ್ಯನ್ ಸೈನ್ಯದ ವಶವಾದಂತಾಯಿತು. ಇದರಂತೆಯೇ ಬ್ರೆಜಾನಿ ಪಟ್ಟಣವೂ ಕೂಡ ರಷ್ಯನರ ವಶವಾದರೆ ಲೆಂಬರ್ಗಿನವರೆಗಿರುವ ಮತ್ತೊಂದು ಲೋಹಮಾರ್ಗವೂ ಕೂಡ ಇವರ ಹಸ್ತಗತವಾಗುವುದು. ಆಗ್ಗೆ ಲೆಂಬರ್ಗಿನ ಪತನವು ನಿಷ್ಕಂಟಕವಾಗುವುದು. ರಷ್ಯನರ ಚೂಣಿ ದಳವು ನೀಸ್ಟರ್ ನದಿಯನ್ನು ದಾಟಿ ಲೋಮ್ನಿಟ್ಜಾ ಪ್ರಾಂತಕ್ಕೆ ನುಗ್ಗಿ ಅದನ್ನೂ ಇನ್ನು ಕೆಲ ಗ್ರಾಮಗಳನ್ನೂ ವಶಪಡಿಸಿಕೊಂಡು ಮುಂದಕ್ಕೆ ಸಾಗಿಹೋಗಿರುತ್ತದೆ. ತಾ|| ೮ ರಿಂದ ೧೧ ರೊಳಗಾಗಿ ರಷ್ಯನರು ೧೦ ಸಾವಿರ ಮಂದಿ ಶತ್ರುಸೈನಿಕರನ್ನೂ ೮೦ ಫಿರಂಗಿಗಳನ್ನೂ ಅನೇಕ ಮಿಷನ್ ಫಿರಂಗಿಗಳನ್ನೂ ಹಿಡಿದುಕೊಂಡಿದ್ದಾರೆ. ಹಿಂದೆ ಶತ್ರುಗಳು ಫ್ರೆಂಚರಿಂದ ಕಿತ್ತುಕೊಂಡಿದ್ದ ಕೆಲ ಫಿರಂಗಿಗಳನ್ನೂ ಕೂಡ ಈ ರಂಗದಲ್ಲಿ ಅವರಿಂದ ರಷ್ಯನರು ಕಿತ್ತುಕೊಂಡಿರುತ್ತಾರೆ. ಹಾಲ್ಲಿಜ್ಜಿಗೆ ನೈರುತ್ಯದಿಕ್ಕಿನಲ್ಲಿ ೩೦ ಮೈಲಿ ದೂರದೊಳಗಿರುವ ಕಾಲುಷ್ ಎಂಬ ಪುರವನ್ನು ಕೂಡ ರಷ್ಯನರು ಆಕ್ರಮಿಸಿಕೊಂಡರು. ಈ ಸ್ಥಳವು ಆಸ್ಟ್ರಿಯನ್ನರಿಗೆ ಮುಖ್ಯ ಶಿಬಿರವಾಗಿದ್ದಿತು. ತಾ|| ೧೧ ರಲ್ಲಿ ಶತ್ರುಗಳು ಭೀಕರಯುದ್ಧವನ್ನು ನಡೆಯಿಸಿ ಇದನ್ನು ರಷ್ಯನರಿಂದ ಬಿಡಿಸಿಕೊಂಡಿದ್ದರು. ರಷ್ಯನರು ಕೂಡಲೇ ಶತ್ರುಗಳಮೇಲೆ ವೀರಾವೇಶದ ಯುದ್ಧವನ್ನು ನಡೆಯಿಸಿ ಮರಳಿ ಅದನ್ನು ತಮ್ಮ ವಶಪಡಿಸಿಕೊಂಡುದಲ್ಲದೆ ೮೫೦ ಮಂದಿ ಸೈನಿಕರನ್ನೂ ೧೦ ಮಂದಿ ಉದ್ಯೋಗಿಗಳನ್ನೂ ೫ ದೊಡ್ಡ ಫಿರಂಗಿಗಳನ್ನೂ ೧೧೦ ಮಿಷನ್ ಫಿರಂಗಿಗಳನ್ನೂ ಸಹ ಹಿಡಿದುಕೊಂಡರು. ಈಗ ರಷ್ಯನರು ಆ ಸ್ಥಾನವನ್ನೆಲ್ಲಾ ಭದ್ರಪಡಿಸಿ ಮುಂದಕ್ಕೂ ಸಾಗುತ್ತಿದ್ದಾರೆ. ಈಗ ಗೆಲೀಸಿಯಾದ ಪ್ರಜೆಗಳು ಭಯಕಂಪಿತರಾಗಿ ಆಸ್ಟ್ರಿಯಾ ದೇಶದ ಒಳಭಾಗಕ್ಕೆ ಓಡಿಹೋಗುತ್ತಿರುವರೆಂದು ವಾರ್ತೆ ಬಂದಿದೆ. ಡೋಲಿನಾ ಸ್ಟ್ರಿಜಿ ಪಟ್ಟಣಗಳು ನಿರ್ಜನವಾಗಿವೆಯಂತೆ. ರಷ್ಯನರು ಜುಲೈ ತಾ|| ೧ ರಿಂದ ತಾ|| ೧೩ ರವರೆಗೆ ಶತ್ರುಗಳ ಕಡೆಯ ೮೩೪ ಮಂದಿ ಉದ್ಯೋಗಸ್ಥರನ್ನೂ, ೩೫೮೦೦ ಮಂದಿ ಸೈನಿಕರನ್ನೂ, ೩ ದೊಡ್ಡ ಫಿರಂಗಿಗಳನ್ನೂ, ೨೮ ಕಂದಕ ಫಿರಂಗಿಗಳನ್ನೂ, ೪೦೩ ಮಿಷನ್ ಫಿರಂಗಿಗಳನ್ನೂ, ೪೩ ಮದ್ದಿನ ಗಣಿಗಳನ್ನು ನಾಶಮಾಡುವ ಸಾಧನಗಳನ್ನೂ, ೪೫ ಸಿಡಿಮದ್ದಿನ ಫಿರಂಗಿಗಳನ್ನೂ, ಅಗ್ನಿಜ್ವಾಲೆಯನ್ನು ಎರಚುವ ೩ ಯಂತ್ರಗಳನ್ನೂ, ೨ ವಿಮಾನಗಳನ್ನೂ, ಇನ್ನೂ ಅನೇಕಾನೇಕ ಯುದ್ಧಸಾಮಗ್ರಿಗಳನ್ನೂ ಸಹ ವಶಪಡಿಸಿಕೊಂಡಿರುತ್ತಾರೆ. ರಷ್ಯನರಿಗೆ ಆಗುತ್ತಿರುವ ಜಯಪರಂಪರೆಯನ್ನೂ ತಮ್ಮ ಕಡೆಯವರಿಗೆ ಆಗುತ್ತಿರುವ ಅಪಜಯವನ್ನೂ ಕೇಳಿ ಜರ್ಮನರ ಯುದ್ಧಾಂಗಮಂತ್ರಿಯೂ ಪ್ರಸಿದ್ಧಸೇನಾನಿಯೂ ಆದ ವಾನ್‌ಹಿಂಡನ್‌ಬರ್ಗರೂ ಈವೆನ್‌ಬ್ರಾಫರೂ ಕೂಡ ಈಗ ಪೂರ್ವರಂಗಕ್ಕೆ ಬಂದು ತಾವೇ ಸೇನಾಧಿಪತ್ಯವನ್ನು ವಹಿಸಿರುವರೆಂದು ವರ್ತಮಾನವಿದೆ. ಈಚೆಗೆ ಬಂದಿರುವ ವರ್ತಮಾನದಿಂದ ರಷ್ಯನರು ಕಾಲುಷ್‌ಯನ್ನು ಮರಳಿ ಕಳೆದುಕೊಂಡರೆಂದೂ, ಡುಮಾನಿಯೋ ಎಂಬ ಪಟ್ಟಣವನ್ನು ವಶಪಡಿಸಿಕೊಂಡರೆಂದೂ ಗೊತ್ತಾಗುತ್ತದೆ. ಉತ್ತರದ ರಿಗಾ ರಂಗದಲ್ಲಿ ಜರ್ಮನರು ಯುದ್ಧವನ್ನು ಬಲಪಡಿಸುತ್ತಿದ್ದಾರೆ. ಡ್ವಿನ್ಸ್ಕಿಗೆ ದಕ್ಷಿಣದಲ್ಲೂ ಪ್ರಬಲವಾದ ಯುದ್ಧವು ನಡೆಯುತ್ತಿದೆ.

ತುರ್ಕಿ.

ಹೆಜ್ಜಾಜಿನ ಅರಬ್ಬಿ ಸೈನಿಕರು ಟಾಯ್ಫ್ ಮದೀನಾ ಅಕಾಬಾಗಳ ಮಧ್ಯದಲ್ಲಿರುವ ಒಂದು ತುರ್ಕಿಯವರ ಸ್ಥಳವನ್ನು ವಶಪಡಿಸಿಕೊಂಡುದಲ್ಲದೆ ೬೦೦ ಮಂದಿ ತುರ್ಕಿ ಸೈನಿಕರನ್ನು ಸೆರೆಹಿಡಿದು ೭೦೦ ಮಂದಿ ಸೈನಿಕರನ್ನು ನಾಶಪಡಿಸಿರುತ್ತಾರೆ. ಚಿಕ್ಕ ಫಿರಂಗಿಗಳೆರಡು ಅರಬ್ಬಿಯವರ ವಶವಾಗಿವೆ. ಮೆಸಪೊಟೋಮಿಯಾರಂಗದಲ್ಲಿ ವಿಶೇಷವಾದ ಯುದ್ಧಗಳೇನೂ ನಡೆದಿಲ್ಲ. ಜೂನ್ ತಿಂಗಳಲ್ಲೆಲ್ಲಾ ೭೫ ಮಂದಿ ತುರ್ಕಿ ಸೈನಿಕರು ಸೆರೆಸಿಕ್ಕಿದರು. ಸಮಾರಾದ ಹತ್ತಿರ ಇಬ್ಬರು ಜರ್ಮನ್ ವೈಮಾನಿಕರು ತಮ್ಮ ವಿಮಾನಗಳು ಅಕಸ್ಮಾತ್ತಾಗಿ ಸುಟ್ಟುಹೋದುವೆಂದು ಹೇಳಿಕೊಂಡು ನಮ್ಮವರಿಗೆ ಶರಣಾಗತರಾದರು. ಇನ್ನಿಬ್ಬರು ವೈಮಾನಿಕರು ದುರ್ಬಲರಾಗಿ ಹಿಂದೆ ಬಿಟ್ಟುಹೋಗಿರುವರೆಂದು ಹೇಳಿಕೊಳ್ಳಲು ಅವರನ್ನು ಕರೆತರುವುದಕ್ಕೆ ಇಂಗ್ಲೀಷ್ ಸೈನಿಕರು ಬಂಡಿಗಳನ್ನು ಕಳುಹಿಸಿರುವರು.

ಆಕಾಶಯಾನಗಳು.—ಪಶ್ಚಿಮರಣರಂಗದಲ್ಲಿ ಪ್ರತಿದಿನವೂ ಮಿತ್ರಮಂಡಲಿ ವಿಮಾನಗಳು ಶತ್ರುವಿಮಾನಗಳಮೇಲೆ ಅನೇಕಾನೇಕ ಯುದ್ಧಗಳನ್ನು ನಡೆಯಿಸಿ ಅವರಿಗೆ ಬಹಳ ನಷ್ಟವನ್ನುಂಟುಮಾಡಿರುತ್ತವೆ. ಅಲ್ಲದೆ ಬೆಲ್ಜಿಯಮಿನಲ್ಲಿರುವ ಯುದ್ಧಕಾರ್ಯಾಲಯದಮೇಲೂ, ಲೋಹಮಾರ್ಗಗಳಮೇಲೂ ಜೀಬ್ರುಗ್ ಮೊದಲಾದ ನೌಕಾಶ್ರಯ ಸ್ಥಾನಗಳಮೇಲೂ ಟನ್ನುಗಟ್ಟಲೆ ಸಿಡಿಮದ್ದುಗಳನ್ನು ಹಾಕಿ, ಫಿರಂಗಿ ಗುಂಡುಗಳನ್ನು ಹೊಡೆದು ವಿಪರೀತ ನಷ್ಟಪಡಿಸಿ ಬಂದಿರುತ್ತವೆ.

ಜಲಯಾನಗಳು.—ಜುಲೈ ತಾ|| ೧೬ ಕ್ಕೆ ಕಡೆಯಾದ ವಾರದಲ್ಲಿ ಆಂಗ್ಲತೀರಗಳಿಗೆ ಹೊರಗಣಿಂದ ೨೮೨೪ ಹಡಗುಗಳು ಬಂದು ೨೯೨೦ ಹಡಗುಗಳು ಅಲ್ಲಿಂದ ಹೊರಕ್ಕೆ ಹೋಗಿರುತ್ತವೆ. ಇಂಗ್ಲೀಷರ ೧೮ ಹಡಗುಗಳೂ ೮ ಅಂಬಿಗರ ದೋಣಿಗಳೂ ಸಹ ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ. ಇದನ್ನು ನೋಡಲಾಗಿ ಶತ್ರುಗಳ ಸಬ್‌ಮೆರೀನ್ ಪ್ರತಾಪವು ಎಷ್ಟೋ ಕಡಿಮೆಯಾಗಿರುವುದೆಂದು ತೋರುತ್ತದೆ. ಫ್ರಾನ್ಸ್ ತೀರಗಳಿಗೆ ಹೊರಗಣಿಂದ ೧೦೬೭ ಹಡಗುಗಳು ಬಂದು, ಅಲ್ಲಿಂದ ಹೊರಕ್ಕೆ ೧೦೦೮ ಹಡಗುಗಳು ಹೊರಟಿರುತ್ತವೆ. ಆ ವಾರದಲ್ಲಿ ಫ್ರೆಂಚರ ಮೂರೇ ಹಡಗುಗಳು ಮುಳುಗಿಸಲ್ಪಟ್ಟಿವೆ. ಉತ್ತರಸಮುದ್ರದಲ್ಲಿ ಅನೇಕ ಜರ್ಮನಿ ಹಡಗುಗಳು ಹೋಗುತ್ತಿರುವುದನ್ನು ಇಂಗ್ಲೀಷರ ಕಾವಲಿನ ಡಿಸ್ಟ್ರಾಯರ್ ಹಡಗುಗಳು ಕಂಡು, ಫಿರಂಗಿಗುಂಡಿನೇಟಿನಿಂದ ೨ ನ್ನು ಶಿಥಿಲಗೊಳಿಸಿ, ಇನ್ನು ೪ ನ್ನು ಹಿಡಿದು ಇಂಗ್ಲೀಷ್ ತೀರಗಳಿಗೆ ಸೇರಿಸಿಕೊಂಡುವು. ಉಳಿದುವು ಓಡಿಹೋದುವು.

ಭರತಖಂಡದ ವೃತ್ತಾಂತಗಳು.

ಕಳೆದ ತಾ|| ೭ ಕ್ಕೆ ಕಡೆಯಾದ ೧ ವಾರಕಾಲದಲ್ಲಿ ಭರತಖಂಡದಲ್ಲೆಲ್ಲಾ ೧೮೬೦ ಮಂದಿಗೆ ಪ್ಲೇಗು ತಗುಲಿ ೧೩೨೨ ಮಂದಿ ಸತ್ತಿರುವರು.

ಪಂಜಾಬು ಹೈಕೋರ್ಟಿನಲ್ಲಿ ನ್ಯಾಯಮೂರ್ತಿಗಳಾಗಿದ್ದು ಈಚೆಗೆ ಕಲ್ಕತ್ತಾದಲ್ಲಿ ವಾಸಮಾಡುತ್ತಿದ್ದ ಸರ್ ಪ್ರಫುಲ್ಲಚಂದ್ರ ಚಟರ್ಜಿಯೆಂಬ ವಿಖ್ಯಾತ ಪುರುಷರು ಉಷ್ಣಾಧಿಕ್ಯದಿಂದ ಕಳೆದವಾರ ಗತಿಸಿದರು.

ತಿರುವಾಂಕೂರು ಮಹಾರಾಜರು ತಮಗೆ ಇಷ್ಟರಲ್ಲೇ ನಡೆಯುವ ಷಷ್ಟಿಪೂರ್ತಿಶಾಂತಿ ಸಮಯದಲ್ಲಿ ತಮ್ಮ ಸಂಸ್ಥಾನದ ಮುಖ್ಯೋದ್ಯೋಗಿಗಳಲ್ಲಿ ಕೆಲವರಿಗೆ ಭಂಗಾರದ ಮತ್ತೂ ಬೆಳ್ಳಿಯ ಪದಕಗಳನ್ನು ಮಾಡಿಸಿಕೊಡಲು ಸಂಕಲ್ಪಿಸಿರುತ್ತಾರೆ.

ಬೊಂಬಾಯಿ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಜಾಶಾಂತಿಗೆ ಭಂಗಕರವಾಗುವಂಥ ಕೆಲ ಲೇಖನಗಳು ಬಂದಿರುವುದರಿಂದ ಅಂಥ ಲೇಖನಗಳನ್ನು ಮುಂದೆ ಪ್ರಕಟಿಸಲಾಗದೆಂದು ಬೊಂಬಾಯಿ ಗೌರ್ನರವರು ಆ ಪತ್ರಿಕೆಯ ಸಂಪಾದಕರಾದ ಮಿ|| ಹಾರ್ನಿಮನ್ನರವರಿಗೆ ಅಪ್ಪಣೆಮಾಡಿದ್ದಾರೆ.

ತಿರುಪತಿಯ ಮಹಾಂತರು ಕಂಟ್ರಾಕ್ಟರುಗಳಿಂದ ಲಂಚವನ್ನು ತೆಗೆದುಕೊಂಡರು ಎಂಬುದಾಗಿ ಅವರಮೇಲೆ ನ್ಯಾಯಸ್ಥಾನದಲ್ಲಿ ವ್ಯಾಜ್ಯವು ಹೂಡಲ್ಪಟ್ಟಿದೆ. ದೇವಾಲಯಕ್ಕೆ ಅವರು ಪ್ರವೇಶಿಸದಂತೆ ತಡೆಮಾಡಲ್ಪಟ್ಟಿದ್ದಾರೆ. ತಮ್ಮ ಮೋಟಾರನ್ನು ಒಬ್ಬ ಮುದುಕನಮೇಲೆ ಓಡಿಸಿ ಅಪಾಯಮಾಡಿದರೆಂಬ ವ್ಯಾಜ್ಯವು ಕೂಡ ಇವರಮೇಲೆ ಬಂದಿದೆ.

ಮೊನ್ನೆ ಗುರುವಾರ ರಂಗೂನಿಗೆ ೪೦ ಮೈಲಿಗಳ ದೂರದಲ್ಲಿರುವ ಪೆಗೂ ಪಟ್ಟಣದಹತ್ತಿರ ಭೂಕಂಪನವಾಗಿ ಪ್ರಸಿದ್ಧವಾದ ಒಂದು ದೇವಾಲಯದ ಗೋಪುರದ ಛತ್ರವು ಗಡಗಡನೆ ನಡುಗಿ ಬಿದ್ದುಹೋಯಿತು. ಅದರಲ್ಲಿ ಅಮೌಲ್ಯವಾದ ಅನೇಕ ರತ್ನಗಳು ಕೆತ್ತಲ್ಪಟ್ಟಿದ್ದುವು. ಅವುಗಳು ಕಳ್ಳರ ಪಾಲಾಗದಂತೆ ಪೊಲೀಸರ ಕಾವಲು ಇಡಲ್ಪಟ್ಟಿರುವುದು. ಗೋಪುರದ ಜೀರ್ಣೋದ್ಧಾರಕ್ಕಾಗಿ ಅಲ್ಲಿಯ ಪ್ರಜೆಗಳು ೩ ಲಕ್ಷ ರೂ. ಗಳ ಚಂದಾ ಕೂಡಿಸಿರುವರು.

ದೊಡ್ಡದೊಡ್ಡ ಆಂಗ್ಲ ವರ್ತಕರ ಅಂಗಡಿಗಳು ಭಾನುವಾರದ ದಿವಸ ಮುಚ್ಚಲ್ಪಡುವ ಸಾಂಪ್ರದಾಯವಿರುವುದಷ್ಟೆ. ಈ ಸಂಧಿಯನ್ನು ಸಂಧಿಸಿ ಬೊಂಬಾಯಿ ಪಟ್ಟಣದ ಎಸ್‌ಪ್ಲನೇಡ್ ವೀಥಿಯಲ್ಲಿರುವ ಮಾರ್ಕಸ್‌ಕಂಪೆನಿಗೆ ಕಳ್ಳರು ಹಗಲ ಹೊತ್ತು ನುಗ್ಗಿ ೨ ಲಕ್ಷ ರೂ.ಗೆ ಮೇಲ್ಪಟ್ಟ ಬೆಲೆಯ ನಗಗಳನ್ನು ಅಪಹರಿಸಿರುವರು. ಮತ್ತೊಂದು ಭಾನುವಾರದ ಹಗಲಿನಲ್ಲಿ ಒಂದು ಗಡಿಯಾರದಂಗಡಿಯಲ್ಲಿ ಇನ್ನೊಂದು ಕಳ್ಳತನವನ್ನು ಹೀಗೆಯೇ ನಡೆಯಿಸಿರುವರು.

ಸ್ಟೇಟ್ ಸೆಕ್ರೆಟರಿಯವರ ಕೌನ್ಸಿಲ್ಲಿಗೆ ನೂತನ ಸಭಿಕರಾಗಿ ಆರಿಸಲ್ಪಟ್ಟಿರುವ ಆ|| ಭೂಪೇಂದ್ರನಾಥ ಬಾಸುರವರೇ ಮೊದಲಾದ ಕೆಲವರು ಬಂಗಾಳದ ನೇಷನಲ್ ಬ್ಯಾಂಕಿಗೆ ಡೈರೆಕ್ಟರಾಗಿದ್ದ ಸಮಯದಲ್ಲಿ ಬ್ಯಾಂಕಿಗೆ ೭ ಲಕ್ಷ ರೂ. ಗಳ ನಷ್ಟವು ಸಂಭವಿಸಿರುವುದೆಂದು, ಅವರುಗಳಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ವ್ಯಾಜ್ಯವು ಹೂಡಲ್ಪಟ್ಟಿದೆ. ಆಗಸ್ಟ್ ತಾ|| ೧ ಕ್ಕೆ ವಿಚಾರಣೆಗಿಡಲ್ಪಟ್ಟಿದೆ. ಬಾಸುರವರು ಬಹುಶಃ ಈ ವ್ಯಾಜ್ಯದ ಸಲುವಾಗಿಯೇ ತಮ್ಮ ಸೀಮೆಯ ಪ್ರಯಾಣವನ್ನು ಆಗಸ್ಟ್ ತಿಂಗಳ ಮಧ್ಯದವರೆಗೆ ತಡೆದಿರುವರೆಂದು ಕಾಣುತ್ತದೆ.

ವಿದೇಶವೃತ್ತಾಂತಗಳು.

ಇಂಗ್ಲೆಂಡಿನಲ್ಲಿ ಈಗ ೧ ಸಾವಿರ ಕಾರ್ಖಾನೆಯಗಳಲ್ಲಿ ವಿಮಾನಗಳು ನಿರ್ಮಿಸಲ್ಪಡುತ್ತಿವೆ.

ಕಳೆದ ಜೂನ್ ತಿಂಗಳೊಂದರಲ್ಲೇ ಜರ್ಮನರ ೨೮೦ ವಿಮಾನಗಳು ನಷ್ಟವಾಗಿರುತ್ತವೆ.

ಜರ್ಮನಿಯಲ್ಲೂ ಆಸ್ಟ್ರಿಯಾದಲ್ಲೂ ಸಂಧಿಯನ್ನು ಕೋರುವ ಪ್ರಜೆಗಳ ಸಂಖ್ಯೆಯು ಹೆಚ್ಚುತ್ತಿದೆ.

ಚೀನಾದಲ್ಲಿ ಪ್ರಜಾಪಕ್ಷದ ಸೈನ್ಯಕ್ಕೂ ಚಾನ್‌ಸಂಗಿನಕಡೆಯ ಸೈನ್ಯಕ್ಕೂ ಯುದ್ಧವು ನಡೆದು, ಕಡೆಗೆ ಪ್ರಜಾಪ್ರಭುತ್ವವೇ ಸ್ಥಿರಪಟ್ಟಿತು.

೧೯೧೬ ನೆ ವರ್ಷ ೧ ರಲ್ಲೇ ಆಸ್ಟ್ರಿಯಾ ದೇಶಕ್ಕೆ ಯುದ್ಧದ ಸಾಲವು ೧೩೦೮೦೦೦೦೦ ಪೌನುಗಳಾಗಿರುತ್ತವೆ.

ಜರ್ಮನರು ಬೆಲ್ಜಿಯಮ್ಮಿಗೆ ಸೇರಿದ ಆಂಟ್ವರ್ಪಿನಿಂದ ೩೦೦೦ ಮಂದಿ ಬಾಲಿಕೆಯರನ್ನು ರುಮೇನಿಯಾಕ್ಕೆ ಸಾಗಿಸಿಕೊಂಡು ಹೋದರು.

ಶತ್ರುಗಳಿಗೆ ಸೇರಿದ ಬೊಹೀಮಿಯಾ ರಾಷ್ಟ್ರದಲ್ಲಿ ಒಂದು ಮದ್ದುಗುಂಡಿನ ಕಾರ್ಖಾನೆಯು ಹೊತ್ತಿಕೊಂಡುದರಿಂದ ೫೫ ಮಂದಿ ಸತ್ತರು.

ಕರವಸ್ತ್ರ ಮೊದಲಾದುವುಗಳಿಗೆ ಪ್ರಾಯಶಃ ಬಿಂದಿ ಕಾಗದವನ್ನುಪಯೋಗಿಸುವ ಹೊತ್ತು ಜರ್ಮನಿಯಲ್ಲಿ ಪ್ರಾಪ್ತವಾಗಿದೆ. ಅಲ್ಲಿ ಹತ್ತಿಗೆ ಬಂದಿರುವ ದುರ್ಭಿಕ್ಷವೇ ಇದಕ್ಕೆ ಕಾರಣ.

ಬೆಲ್ಜಿಯಮ್ಮಿಗೆ ಸೇರಿದ ಫ್ಲೆಂಟ್ ಜಿಲ್ಲೆಯಲ್ಲಿರುವ ೧೫ ರಿಂದ ೬೦ ವಯಸ್ಸಿನೊಳಗಿನ ಪ್ರಜೆಗಳನ್ನೆಲ್ಲಾ ಜರ್ಮನರು ತಮ್ಮ ದೇಶಕ್ಕೆ ಕೆಲಸಮಾಡಿಸಿಕೊಳ್ಳಲು ಸಾಗಿಸಿಕೊಂಡು ಹೋಗುತ್ತಿದ್ದಾರೆ.

ಫ್ರೆಂಚ್ ಸೈನ್ಯದಲ್ಲಿ ೮೧ ವರ್ಷದ ಯೋಧನೊಬ್ಬನಿರುವನು. ಅವನನ್ನು ಜರ್ಮನರು ಸೆರೆಹಿಡಿದು ೨|| ವರ್ಷಗಳವರೆಗೆ ಇಟ್ಟುಕೊಂಡಿದ್ದು ಬಿಟ್ಟ ಬಳಿಕ ಅವನು ಮತ್ತೆ ತಮ್ಮ ಸೈನ್ಯಕ್ಕೆ ಸೇರಿಕೊಂಡಿದ್ದಾನೆ.

ಶತ್ರುಗಳ ಒಂದೊಂದು ಸಬ್‌ಮೆರೀನನ್ನು ಮುಳುಗಿಸಿ ಹಾಳ್ಮಾಡಿದವರಿಗೆ ೨೦೦ ಪೌನುಗಳಂತೆ ೫೦೦೦ ಪೌನುಗಳ ಬಹುಮಾನ ಕೊಡುವೆನೆಂದು ಒಬ್ಬ ಅಮೇರಿಕಾದ ಪ್ರಮುಖನು ಫ್ರೆಂಚರಿಗೆ ಬರೆದು ತಿಳಿಯಿಸಿದ್ದಾನೆ.

ಜರ್ಮನಿಯಲ್ಲಿ ಪ್ರಜೆಗಳೊಳಗೆ ಸಂಧಿಯಪೇಕ್ಷೆಯು ಪ್ರಬಲಿಸುತ್ತಿದೆ. ಪಾರ್ಲಿಮೆಂಟಿಗೆ ಪ್ರತಿನಿಧಿಗಳನ್ನು ಆರಿಸುವುದಕ್ಕೆ ಸಾರ್ವಜನಿಕ ಸ್ವಾತಂತ್ರ್ಯವನ್ನಿತ್ತು ಪ್ರಜೆಗಳ ಮನಸ್ಸನ್ನು ತೃಪ್ತಿಪಡಿಸುವುದಕ್ಕೆ ಕೈಜರರು ಪ್ರಯತ್ನಪಟ್ಟಿದ್ದಾರೆ.

ಆಂಗ್ಲ ಚಕ್ರವರ್ತಿಯವರು ತಮ್ಮ ಗೃಹಕುಟುಂಬದ ಹೆಸರಿನಲ್ಲಿ ಹಾನೋವರ್, ಸ್ಟುಲೇ ಎಂಬ ಜರ್ಮನ್ ನಾಮಗಳಿದ್ದುದರಿಂದ ಈಗ ಆ ಹೆಸರುಗಳಲ್ಲಿ ಜುಗುಪ್ಸೆಪಟ್ಟು ವಿಂಡ್ಸರ್ ಎಂಬ ಆಂಗ್ಲನಾಮವನ್ನು ಈಗತಾನೇ ಏರ್ಪಡಿಸಿಕೊಂಡರು.

ಅಮೇರಿಕಾದಲ್ಲಿ ಜರ್ಮನ್ ಗೂಢಚಾರರ ಹಾವಳಿಯು ಹೆಚ್ಚಾಗಿದೆ. ಅವರನ್ನು ಹಿಡಿಯುವುದರಲ್ಲೂ ವಾಯುವಾರ್ತೆಗಳನ್ನು ಪರೀಕ್ಷಿಸಿ ತಟಸ್ಥರಾಷ್ಟ್ರಗಳಿಗೆ ಕಳುಹಿಸಿಕೊಡುವುದರಲ್ಲೂ ಪ್ರಭುತ್ವದವರು ವಿಶೇಷಾವಧಾನವನ್ನು ಕೊಟ್ಟಿದ್ದಾರೆ.

ಜರ್ಮನಿಯಲ್ಲಿ ಇದುವರೆಗೆ ಮುಖ್ಯಮಂತ್ರಿಯಾಗಿದ್ದ ಹೇರ್‌ವಾನ್ ಬೇತ್‌ಮನ್‌ಹಾಲ್ವೆಗ್‌ರವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು. ಡಾಕ್ಟರ್ ಮಿಚೆಲ್‌ರವರು ಮುಖ್ಯಮಂತ್ರಿಗಳಾದರು. ಇನ್ನು ಮೂವರು ಮಂತ್ರಿಗಳೂ ರಾಜೀನಾಮೆ ಕೊಟ್ಟಿದ್ದಾರೆ.

ಅಮೇರಿಕಾದವರು ಫ್ರೆಂಚರಿಗೆ ಈಗ ಮರಳಿ ೩೦ ಕೋಟಿ ಪೌನ್‌ಗಳನ್ನು ನಗದು ಸಾಲವಾಗಿ ಕೊಟ್ಟರು. ಇದುವರೆಗೆ ಫ್ರೆಂಚರು ಅಮೇರಿಕಾದವರಿಗೆ ಕೊಡಬೇಕಾಗಿರುವ ಸಾಲವು ೨೬|| ಕೋಟಿ ಪೌನು ಅಥವಾ ೩೯೭೫೦೦೦೦೦೦ ರೂ. ಗಳಾಗಿರುತ್ತವೆ.

ಕಳೆದ ೧ ವರ್ಷ ಕಾಲದಲ್ಲಿ ೨೬|| ಲಕ್ಷ ಟನ್ನುಗಳ ಭಾರವನ್ನು ಹೊರುವಷ್ಟು ಇಂಗ್ಲೀಷರ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟವು. ೧೦ ಲಕ್ಷ ಟನ್ನುಗಳ ಭಾರದಷ್ಟು ಹಡಗುಗಳನ್ನು ಮಾತ್ರವೇ ೧ ವರ್ಷಕಾಲದಲ್ಲಿ ಮುಳುಗಿಸುವೆವೆಂದು ಶತ್ರುಗಳು ನಿರೀಕ್ಷಿಸಿಕೊಂಡಿದ್ದರು. ಪರ್ಯವಸಾನದಲ್ಲಿ ಅವರ ಉದ್ದೇಶಕ್ಕಿಂತಲೂ ಬಹಳ ಹೆಚ್ಚಾಗಿಯೇ ಕಾರ್ಯಸಾಧನೆ ಮಾಡಿದಂತಾಗಿರುವುದು. ಯುದ್ಧಕ್ಕೆ ಮುಂಚೆ ಇಂಗ್ಲೀಷರಿಗೆ ವರ್ಷ ೧ ಕ್ಕೆ ೬ ಲಕ್ಷ ಟನ್ನುಗಳಷ್ಟು ನಷ್ಟವಾಗುತ್ತಿದ್ದುವು.

ಜಪಾನ್ ದೇಶದಲ್ಲಿ ವರ್ಷ ೧ ಕ್ಕೆ ೧ ಕೋಟಿಯೂ ೧೦ ಲಕ್ಷ ಪೌನುಗಳ ಬೆಲೆಬಾಳುವಷ್ಟು ಕರ್ಪೂರವು ನಿರ್ಗತವಾಗುತ್ತದೆ. ಅದರಲ್ಲಿ ೧೦ ಲಕ್ಷ ಪೌನುಗಳ ಕರ್ಪೂರವು ಭರತಖಂಡಕ್ಕೆ ಬರುತ್ತದೆ. ಉಳಿದುದೆಲ್ಲಾ ಯೂರೋಪು ಅಮೇರಿಕಾ ದೇಶಗಳಿಗೆ ಸಾಗಿಹೋಗುತ್ತದೆ. ಆದರೆ ಜಪಾನಿನಲ್ಲಿ ಆಗುವ ಕರ್ಪೂರವು ಪ್ರಪಂಚಕ್ಕೆಲ್ಲಾ ಸಾಲದು. ಅವರು ಕೆಲ ದೇಶಗಳಿಗೆ ಮಾತ್ರವೇ ಕಳುಹಿಸಿಕೊಡುತ್ತಿದ್ದಾರೆ. ಅದುಕಾರಣ ಇನ್ನು ಕೆಲ ದಿನಗಳೊಳಗಾಗಿ ಕರ್ಪೂರದ ಬೆಲೆಯು ಹೆಚ್ಚಿ ಹೋಗುವುದೆಂದು ತಿಳಿಯಬರುತ್ತದೆ.

ರಷ್ಯಾ ದೇಶದ ವ್ಯಾಪಾರ ಮಂತ್ರಿಶಾಖೆಯವರೂ ಖನಿಜ ಪರಿಶೀಲನ ಶಾಖೆಯವರೂ ಸಹ ಆ ದೇಶದಲ್ಲಿರುವ ಗಣಿಗಳನ್ನೆಲ್ಲಾ ಎಂದರೆ ಆಲ್ಟ್ರಾಯಿ ಪರ್ವತದಲ್ಲಿರುವ ಬಂಗಾರದ ಗಣಿಗಳು, ಕಾಕಸಸ್ ಪರ್ವತದಲ್ಲಿರುವ ತಾಮ್ರದ ಗಣಿಗಳು, ಯೂರಲ್ಸ್ ಪರ್ವತದಲ್ಲಿರುವ ಲೋಹಮಾರ್ಗಗಳು ಮತ್ತು ಸೈಬೀರಿಯಾಗಳಲ್ಲಿರುವ ಕಲ್ಲಿದ್ದಲು ಸೀಮೆಯೆಣ್ಣೆ ಮೊದಲಾದ ಗಣಿಗಳು—ಇವನ್ನೆಲ್ಲಾ ಅಮೇರಿಕಾದವರ ಅಧಿಪತ್ಯಕ್ಕೆ ಒಪ್ಪಿಸಿಬಿಡಲು ನಿರ್ಧರಿಸಿದರು. ರಷ್ಯಾದಲ್ಲಿ ಇದನ್ನು ರೂಢಿಸಲು ಸಿದ್ಧರಾಗಿರುವ ಅಮೇರಿಕನ್ ಸಂಘದವರು ಈಗಣ ರಷ್ಯಾ ಪ್ರಭುತ್ವದವರ ಅನುಮತಿಯಮೇಲೆ ಈ ಕಾರ್ಯಾರ್ಥವಾಗಿ ತಮ್ಮ ದೇಶದಿಂದ ೨೨೫ ಕೋಟಿ ರೂ. ಬೆಲೆಯ ಯಂತ್ರಸಾಮಗ್ರಿಗಳನ್ನು ತರಿಸಿಕೊಳ್ಳಲು ಬರೆದಿರುತ್ತಾರೆ.

ಈಗಣ ಮಹಾಯುದ್ಧವು ಆರಂಭವಾಗುವುದಕ್ಕೆ ಹಿಂದೆ ೧೨೫ ವರ್ಷಗಳ ಕಾಲದಲ್ಲಿ ಪ್ರಪಂಚದಮೇಲೆಲ್ಲಾ ನಡೆದಿರುವ ಯುದ್ಧಗಳಿಗೆಲ್ಲಾ ೨೨೦೦೦೦೦೦೦೦ ಪೌನುಗಳಿಗಿಂತ ಹೆಚ್ಚಾಗಿ ವೆಚ್ಚವಾಗಿರಲಿಲ್ಲ. ಈಗಣ ಮಹಾಯುದ್ಧದಲ್ಲಿ ತೊಡಗಿರುವ ಎಲ್ಲ ರಾಷ್ಟ್ರಗಳವರಿಂದಲೂ ಯುದ್ಧಕ್ಕಾಗಿ ೩|| ವರ್ಷಗಳ ಕಾಲದೊಳಗೆ ಒಟ್ಟು ೬೧೦೦೦೦೦೦೦೦೦ ಪೌನುಗಳು ವೆಚ್ಚಮಾಡಲ್ಪಟ್ಟಿರುವುವೆಂದೂ, ಈಗ ದಿನ ೧ ಕ್ಕೆ ೧೦೫೦೦೦೦೦೦ ಪೌನುಗಳು ವ್ಯಯವಾಗುತ್ತಿರುವುವೆಂದೂ ಲೆಕ್ಕಹಾಕಲ್ಪಟ್ಟಿದೆ. ಇದುವರೆಗೆ ಈಗಣ ಯುದ್ಧಕ್ಕಾಗಿ ಯಾವಯಾವ ದೇಶಗಳು ಎಷ್ಟೆಷ್ಟು ವೆಚ್ಚವನ್ನು ೩|| ವರ್ಷ ಕಾಲದಲ್ಲಿ ಮಾಡಿರುವುವೆಂಬ ಲೆಕ್ಕವು ಕೆಳಗಣ ಪಟ್ಟಿಯಿಂದ ವ್ಯಕ್ತವಾಗುವುದು:—

ದೇಶ	ಒಟ್ಟು ವೆಚ್ಚ	ದಿನ ೧ ಕ್ಕೆ ವೆಚ್ಚ
ಆಂಗ್ಲದೇಶ	14374000000 ಪೌನ್	23500000 ಪೌನ್
ಕೆನಡಾ	400000000	900000
ಇಂಗ್ಲೀಷರ ಇತರ ರಾಷ್ಟ್ರಗಳು	600000000	600000
ಫ್ರಾನ್ಸು	12200000000	18000000
ರಷ್ಯಾ	8500000000	16000000
ಇಟಲಿ	4000000000	7000000
ಬೆಲ್ಜಿಯಂ	490000000	1000000
ಸರ್ವಿಯಾ	330000000	1000000
ರುಮೇನಿಯಾ	250000000	2000000
ಈ ಮೇಲೆ ಕಂಡ ಮಿತ್ರಮಂಡಲಿಯವರ ವೆಚ್ಚವೆಲ್ಲಾ ಒಟ್ಟು	41144000000 ಪೌನ್	70000000 ಪೌನ್
ಜರ್ಮನಿ	14600000000	21000000
ಆಸ್ಟ್ರಿಯಾ	5000000000	11000000
ತುರ್ಕಿ	650000000	1500000
ಬಲ್ಗೇರಿಯಾ	375000000	1500000
ಈ ಮೇಲೆ ಕಂಡ ಶತ್ರುಮಂಡಲಿಯವರ ವೆಚ್ಚವೆಲ್ಲಾ ಒಟ್ಟು	20625000000 ಪೌನ್	35000000 ಪೌನ್
ಶತ್ರುಮಿತ್ರಮಂಡಲಿಯವರ ವೆಚ್ಚವೆಲ್ಲಾ ಸೇರಿದರೆ	61769000000 ಪೌನ್	105000000 ಪೌನ್

ದಿವಾನ್ ಬಹದ್ದೂರ್ ರಾಜಸಭಾಭೂಷಣ.

ಶ್ರೀಮಾನ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಸಿ. ಐ. ಇ., ಇವರ ಸನ್ನಿಧಿಯಲ್ಲಿ

ಬೆಂಗಳೂರು ಪುರಜನರ ವಿಜ್ಞಾಪನೆಗಳು.

ಮಾನ್ಯರೇ,

ಮಹಾ ಘನತೆಯುಳ್ಳ ಶ್ರೀಮದಿಂಡಿಯಾ ಚಕ್ರವರ್ತಿಯವರು ಅತ್ಯಂತ ಶ್ರೇಷ್ಠವೂ ಉನ್ನತವೂ ಆದ ಸಿ. ಐ. ಇ. ಬಿರುದನ್ನು ತಮಗೆ ದಯಪಾಲಿಸಿರುವ ವಿಷಯದಲ್ಲಿ ನಮಗೆಲ್ಲರಿಗೂ ಉಂಟಾಗಿರುವ ಸಂತೋಷಾತಿಶಯವನ್ನೂ ಗೌರವಭಾವವನ್ನೂ ಈ ಮೂಲಕ ಸೂಚಿಸಲು ಆತುರರಾಗಿದ್ದೇವೆ.

ತಾವು ರಾಜಪ್ರಜೆಗಳಿಂದ ಸನ್ಮಾನಿತರಾಗುವುದಕ್ಕೆ ಇದೇನೂ ಪ್ರಾರಂಭವಲ್ಲ. ಇದುವರೆಗೆ ತಾವು ಅನೇಕ ಬಗೆಯ ರಾಜಾನುಗ್ರಹಕ್ಕೂ ಪ್ರಜಾಗೌರವಕ್ಕೂ ಪಾತ್ರರಾಗಿರುವಿರಿ. ಆದರೆ ಸಾಮಾನ್ಯವಾಗಿ ಇಂತಹ ದೊಡ್ಡ ಬಹುಮಾನಗಳು ಜೀವಮಾನದ ಕಾರ್ಯಗಳಿಗೆ ಪ್ರತಿಫಲ ರೂಪವಾಗಿಯೂ ಪರಿಸಮಾಪ್ತಿ ಸೂಚಕವಾಗಿಯೂ ಬರುವುದುಂಟು. ತಮ್ಮ ವಿಷಯದಲ್ಲಾದರೋ ಪ್ರತಿಯೊಂದು ಬಹುಮಾನವೂ ಒಂದು ಹೊಸ ದೇಶಸೇವಾಕಾರ್ಯಕ್ಕೆ ಪ್ರಥಮ ಸೂಚಕವೆಂಬಂತೆ ಪರಿಣಮಿಸಿ, ತಮ್ಮನ್ನು ಮತ್ತಷ್ಟು ಹೆಚ್ಚಾದ ಪ್ರಜೋಪಕಾರದಲ್ಲಿ ಪ್ರೇರೇಪಿಸಿದೆ.

ಈಗ ತಮಗೆ ದೊರೆತಿರುವ ದೊಡ್ಡ ಪ್ರಶಸ್ತಿಯು ಸರ್ಕಾರದ ಉದ್ಯೋಗದಲ್ಲಿದ್ದು ಸರ್ಕಾರಕ್ಕೆ ಮಾಡಿದ ಉಪಕಾರಗಳಿಗಾಗಿ ಬಾರದೆ, ಪ್ರಜಾಪ್ರಮುಖರಾಗಿ ನಿಂತು ಪ್ರಜಾಸೇವೆ ಮಾಡಿದ್ದಕ್ಕಾಗಿ ಬಂದಿದೆ ಎಂಬಂಶವು ನಮ್ಮಗಳಿಗೆ ವಿಶೇಷವಾದ ಆನಂದವನ್ನೂ ಮರ್ಯಾದೆಯನ್ನೂ ಉಂಟುಮಾಡಿದೆ. ತಾವು ಸರ್ಕಾರದ ಉದ್ಯೋಗದಿಂದ ನಿವೃತ್ತರಾದ ಬಳಿಕ ಅನುಸರಿಸಿರುವ ವೃತ್ತಿಯು "ನಿವೃತ್ತಿ" ಯೆಂಬ ಪದಕ್ಕೆ ಹೊಸ ಅರ್ಥವನ್ನು ಕಲ್ಪಿಸಿದೆ. ಇತರರೂ ಉದ್ಯೋಗದಿಂದ "ನಿವೃತ್ತ" ರಾದ ಬಳಿಕ ತಮ್ಮಂತೆ ಪ್ರಜಾಕಾರ್ಯದಲ್ಲಿ "ಪ್ರವೃತ್ತ" ರಾಗಬೇಕೆಂಬುದೇ ನಮ್ಮ ಬಯಕೆ.

ತಾವು ನಮ್ಮ ದೇಶೀಯರ ಯೋಗಕ್ಷೇಮಗಳಿಗಾಗಿ ಮಾಡಿರುವ ಕಾರ್ಯಗಳು ಸರ್ವದಾ ನಮ್ಮ ನೆನಪಿನಲ್ಲಿರುವುವು. ತಮ್ಮ ನಾಮ ಪ್ರಭಾವದಿಂದ ಮೈಸೂರು ಬ್ಯಾಂಕಿಗೆ ಬೇಕಾದ ದ್ರವ್ಯವು ಶೀಘ್ರದಲ್ಲಿ ಲಭಿಸಿ, ಆ ಬ್ಯಾಂಕಿನ ಮೂಲಕ ವರ್ತಕಮಂಡಲಿಗೂ ಇತರರಿಗೂ ವಿಶೇಷ ಲಾಭವುಂಟಾಗಿದೆ. ತಮ್ಮ ಕಾರ್ಯದಕ್ಷತೆಯಿಂದ ಬೆಂಗಳೂರು ಚಿಕ್ಕಬಳ್ಳಾಪುರದ ರೈಲಿನ ಕೆಲಸವು ಸಾಂಗವಾಗಿ ಪೂರ್ತಿಯಾಗಿದೆ. ತಮ್ಮ ಪ್ರೋತ್ಸಾಹದಿಂದ ಮೈಸೂರಿನ ಸ್ಥಳೀಯ ಸ್ವರಾಜ್ಯಸಭೆಯು ಸಮರ್ಪಕವಾಗಿ ನೆರವೇರಿತು. ಮೇಲಾಗಿ, ತಮ್ಮ ಕಾರ್ಯೋತ್ಸಾಹದಿಂದಲೂ ವಿಚಕ್ಷಣೆಯಿಂದಲೂ ಬೆಂಗಳೂರು ಮ್ಯುನಿಸಿಪಾಲಿಟಿಯ ಆಡಳಿತಗಳು ಉತ್ತಮದಶೆಗೆ ಬಂದು, ಪೌರಪ್ರತಿನಿಧಿಗಳಿಗೆ ಜವಾಬ್ದಾರಿಯೂ ಅಧಿಕಾರವೂ ಹೆಚ್ಚಿ, ಜನರಲ್ಲಿ ಸ್ವಪುರಾಭಿಮಾನವೂ ಪೌರಧರ್ಮಬುದ್ಧಿಯೂ ತಲೆದೋರಲು ಮಾರ್ಗವಾಯಿತು. ಮತ್ತು ತಮ್ಮ ದೂರದೃಷ್ಟಿಯಿಂದಲೂ ಸಾಮರ್ಥ್ಯದಿಂದಲೂ ಪುರಾಭಿವೃದ್ಧಿಗೆ ಬೇಕಾದ ಅನೇಕ ಏರ್ಪಾಟುಗಳು ನಿರ್ಧರಿಸಲ್ಪಟ್ಟು, ಸರ್ಕಾರದಿಂದ ಅಂಗೀಕೃತವಾಗಿ, ಜಾರಿಗೆ ಬರುತ್ತಿವೆ. ಈ ರೀತಿಯಾಗಿ ವೇತನವಿಲ್ಲದೆ ಪ್ರಜಾಸೇವೆಯ ಉದ್ಯೋಗವನ್ನು ಕೈಗೊಳ್ಳುವುದಕ್ಕೆ ನಮ್ಮ ಸಂಸ್ಥಾನದಲ್ಲಿ ತಾವು ಮೊದಲನೆಯವರಾಗಿರುವಿರಿ. ಇಷ್ಟೇ ಅಲ್ಲದೆ ಪ್ರಸಿದ್ಧವಾದ ನಮ್ಮ ವಿಕ್ಟೋರಿಯಾ ವೈದ್ಯಶಾಲೆಗೆ ತಾವು ಅತಿಶಯವಾದ ಧರ್ಮವನ್ನು ಮಾಡಿ ತಮ್ಮ ಪ್ರಜಾವಾತ್ಸಲ್ಯವನ್ನು ತೋರಿಸಿರುವಿರಿ.

ಆದರೆ ತಮ್ಮ ಪ್ರಜಾಭಿಮಾನವು ಹೊಸದೇನೂ ಅಲ್ಲ. ತಾವು ರಾಜ್ಯಾಧಿಕಾರಗಳಲ್ಲಿದ್ದಾಗಲೂ ಸಹ ತಮ್ಮ ಪ್ರಜಾಪಕ್ಷಪಾತವು ಪ್ರಸಿದ್ಧವಾಗಿಯೇ ಇತ್ತು. ಸರ್ವ ಸುಲಭರಾಗಿಯೂ, ದಯಾರ್ದ್ರಹೃದಯರಾಗಿಯೂ ಇದ್ದ ತಮ್ಮಲ್ಲಿ ಜನರು ಯಾವಾಗಲೂ ಅನುರಾಗವನ್ನು ತೋರಿಸುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಪಟ್ಟಣದಲ್ಲಿ ಮಾರಿಕಾ ಉಪದ್ರವವು ಆರಂಭಿಸಿದ ಕಾಲದಲ್ಲಿ ತಾವು ತೋರಿಸಿದ ಅಸಮಾನವಾದ ತಾಳ್ಮೆಯೂ ಔದಾರ್ಯವೂ ರೋಗಾವಿಷ್ಟರಾದವರಿಗೆ ಸಮಾಧಾನವನ್ನು ತಂದು ಪ್ರಜಾಕ್ಷೋಭೆಯನ್ನು ಅಡಗಿಸಿದವು. ಇಂತಹ ಸುಗುಣಶಾಲಿಯಾದ ತಾವು ರಾಜೋದ್ಯೋಗದಿಂದ ವಿಶ್ರಾಂತರಾದುದರಿಂದ ಸರ್ಕಾರಕ್ಕೆ ನಷ್ಟವಾದರೂ, ನಮ್ಮ ಸಂಸ್ಥಾನದ ಸಾರ್ವಜನಿಕ ಕಾರ್ಯಗಳಿಗೆ ಪರಮೋತ್ತಮ ಲಾಭವಾಯಿತೆಂಬುದರಲ್ಲಿ ಸಂಶಯವೇನೂ ಇಲ್ಲ. ಒಬ್ಬ ಕವಿಯು—

ಪರಹಿತಕರ್ತಾ ದ್ವೇಷ್ಯತಾಂ ಯಾತಿ ಲೋಕೇ | ಜನಪದ ಹಿತಕರ್ತಾ ತ್ಯಜ್ಯತೇ ಪಾರ್ಥಿವೇನ || ಇತಿ ಮಹತಿ ವಿರೋಧೇ ವಿದ್ಯಮಾನೇ ಸಮಾನೇ | ನೃಪತಿ ಜನಪದಾನಾಂ ದುರ್ಲಭಃ ಕಾರ್ಯಕರ್ತಾ ||

ಎಂದು ಹೇಳಿರುವನು.-ಎಂದರೆ ರಾಜಹಿತವನ್ನೆಣಿಸುವವನು ಪ್ರಜಾದ್ವೇಷಕ್ಕೆ ಗುರಿಯಾಗುತ್ತಾನೆ, ಪ್ರಜಾಹಿತವನ್ನೆಣಿಸುವವನು ರಾಜದ್ವೇಷಕ್ಕೆ ಗುರಿಯಾಗುತ್ತಾನೆ. ಹೀಗೆ ಪರಸ್ಪರ ವಿರೋಧಭಾವವಿರುವಲ್ಲಿ, ರಾಜಪ್ರಜೆಗಳಿರ್ವರ ಹಿತವನ್ನೂ ಸಾಧಿಸಿ ಇಬ್ಬರ ಕೃತಜ್ಞತೆಯನ್ನೂ ಪಡೆಯಬಲ್ಲವರು ಅತಿವಿರಳ. ಅಂತಹವರಲ್ಲಿ ತಾವು ಗಣ್ಯರಾಗಿ ಶೋಭಿಸುತ್ತಿರುವಿರಿ.

ತಮ್ಮ ಉದ್ಯೋಗನಿವೃತ್ತಿಯೆಂಬ ಮೋಡವು ಆಗ ಕತ್ತಲೆಯನ್ನುಂಟುಮಾಡಿತ್ತಾದರೂ, ಅದರಿಂದಲೇ ಈಗ ಅತ್ಯಂತ ಸಂತೋಷಕರವಾದ ವರ್ಷಧಾರೆಯು ನಮಗೆ ಉಪಕಾರರೂಪವಾಗಿಯೂ ತಮಗೆ ಬಹುಮಾನರೂಪವಾಗಿಯೂ ಬರುತ್ತಿದೆ. ಈ ತಮ್ಮ ಉಪಕಾರಗಳು ಇದೇ ರೀತಿಯಲ್ಲಿ ಚಿರಕಾಲ ನಡೆಯುತ್ತಾ, ತಮ್ಮ ಯಶಸ್ಸು ಮತ್ತಷ್ಟು ವೃದ್ಧಿಹೊಂದುತ್ತಾ ಇರುವಂತೆ ಪರಮೇಶ್ವರನು ಅನುಗ್ರಹಿಸಿ, ತಮಗೆ ಆಯುರಾರೋಗ್ಯ ಭಾಗ್ಯಗಳನಿತ್ತು ಕಾಪಾಡಲಿ-ಎಂಬುದೇ ಮೈಸೂರು ದೇಶೀಯರೆಲ್ಲರ ಮನಃಪೂರ್ವಕವಾದ ಪ್ರಾರ್ಥನೆ.

ಮಾನ್ಯರೇ, ಇಂತು ಕೃತಜ್ಞ ಕಾರುಣಿಕಹೃದಯರಾದ
ಬೆಂಗಳೂರು ಪುರಜನರ ವಿಜ್ಞಾಪನೆಗಳು.

ಪತ್ರವ್ಯವಹಾರ.

ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ವಾಚನಾಲಯ, ಹೂಲಿ,
೭ ನೆಯ ವಾರ್ಷಿಕೋತ್ಸವವು.

ಇದೇ ತಾರೀಖು ೯-೭-೧೯೧೮ ರ ಸಾಯಂಕಾಲಕ್ಕೆ ಈ ವಾಚನಾಲಯದ ಮೆಂಬರ್ ಮತ್ತು ಸೆಕ್ರೆಟರಿ ಶ್ರೀ ಸಂಗಯ್ಯನವರು ಮುರಗೋಡ ಇವರು ಆ ಮಂತ್ರಣ ಕೊಟ್ಟ ಪ್ರಕಾರ ಹಳ್ಳಿಯ ಸೊಸೈಟಿ ಚೇರ್ಮನ್ ಮೆಂಬರರೂ ಸ್ಯಾನಿಟರಿ ಮೆಂಬರರೂ ಪಾಟೀಲ ಕುಲಕರ್ಣಿಗಳೂ ಕನ್ನಡ ಶಾಲೆಯ ಹೆಡ್ಮಾಸ್ತರ್ ಮತ್ತು ಅಸಿಸ್ಟೆಂಟ್ ಮಾಸ್ತರ್‌ರವರೂ ಥರಪ್ರಮುಖರೂ ಈ ಮಹನೀಯರೆಲ್ಲಾ ಆಗಮಿಸಿ ಸಂಜೆ ೬ ಗಂಟೆ ಸಮಯಕ್ಕೆ ನವಲಗುಂದದಿಂದಾಗಮಿಸಿದ ಪ್ರಂಥಗ್ರಹ ಹಿರೇಮಠಾಧ್ಯಕ್ಷ ಶ್ರೀ ಪಟ್ಟದ ಬಸವಲಿಂಗ ಮಹಾಸ್ವಾಮಿಗಳವರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿ ಬ್ಬ|| ಹೊಸ ಸ್ವರ್‌ರವರು ವಿದ್ಯೆ ಈ ವಿಷಯದಮೇಲೆ ಉಪನ್ಯಾಸಮಾಡಿದರು. ಮುಂದೆ ಎಸ್. ಎಂ. ಸಿದ್ಧಾಂತಿ ಹಿರೇಮಠ ಇವರು ವಾಚನಾಲಯದಿಂದಾಗುವ ಲಾಭ ಈ ವಿಷಯದಮೇಲೂ, ಚುಳ್ಕಿ ಗ್ರಾಮದಿಂದಾಗಮಿಸಿದ ವೇ|| ಶಿವಯ್ಯಶಾಸ್ತ್ರಿಗಳು "ಜನರ ಸಾನುಭೂತಿ" ಈ ವಿಷಯದ ಮೇಲೂ ಉಪನ್ಯಾಸಮಾಡಿದಮೇಲೆ ಮಂಟೂರ ಮಠಾಧ್ಯಕ್ಷ ಶಿ|| ಸಿದ್ಧಯ್ಯಗವಾಯಿಗಳೂ ಶಿರಸಂಗಿ ಸಂಸ್ಥಾನಗವಾಯಿಗಳಾದ ಶಿ|| ಗುರುಲಿಂಗಯ್ಯನವರೂ ಸಹ ಮಾಡಿದ ಗಾಯನದ ಇಂಪಿನಿಂದಲೂ ರಾ|| ಫಕ್ಕೀರಪ್ಪ ಹೂಗಾರ ಇವರ ತಬಲಾಯಿ ವಾದನದಿಂದಲೂ ಅತಿ ಆನಂದಹೊಂದಿದ ಸಭಿಕರು ನಮ್ಮ ಪಂಚಮಜಾರ್ಜ್‌ರವರಿಗೂ ಅವರ ಮಿತ್ರಮಂಡಲಿಗೂ ವಿಜಯವಾಗಲೆಂದು ಶ್ರೀಮಜ್ಜಗದ್ಗುರು ವಿಶ್ವಾರಾಧ್ಯರ ಸ್ತೋತ್ರಮಾಡಿ ತ್ರಿವಾರ ಜಯಘೋಷದೊಡನೆ ಸಭೆವಿಸರ್ಜನೆಯಾಯಿತು.

ಅಭಿಮಾನಿ.

ಸ್ವೀಕಾರ.

ಕಳೆದ ಲಗ್ನಕಾಲದಲ್ಲಿ ಕೈ|| ವೈ. ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿ ಸಂಕೇತಾಚಿತಪ್ಪಿ ವೇ|| ಗುರುದೇವಶಾಸ್ತ್ರಿಗಳು ಕೀಲಾರದ ನಂಜಪ್ಪನವರಿಂದ ತೆಗೆಸಿದ್ದ ರೂ. ೧, ಅಮ್ಮನಪುಟ್ಟದ ಮ|| ರಾಚಪ್ಪನವರ ಮೊಮ್ಮಗನ ಲಗ್ನದಲ್ಲಿ ರಾಚಪ್ಪನವರಿಂದ ಬಂದದ್ದು ರೂ. ೧, ಹೊನ್ನುಡಿಕೆ ಮ|| ಶೆಟ್ಟರು ಚಿಕ್ಕವೀರಪ್ಪನವರ ಮಗ ರುದ್ರಯ್ಯನವರ ಲಗ್ನದಲ್ಲಿ ಯರಿಯೂರು ನಂಜುಂಡಯ್ಯನವರಿಂದ ಬಂದದ್ದು ರೂ. ೧, ಹೊನ್ನುಡಿಕೆ ಮ|| ಹೊನ್ನಶೆಟ್ಟಪ್ಪನವರ ಮಗ ಗುರುಲಿಂಗಯ್ಯನೆಂಬ ವಟುವಿನ ಶಿವದೀಕ್ಷಾಸಂಸ್ಕಾರದಲ್ಲಿ ತೆಗೆದದ್ದು ರೂ. ೧, ಒಟ್ಟು ೪ ರೂ.ಗಳು, ಹೊನ್ನುಡಿಕೆ ಮ|| ಹೊನ್ನಶೆಟ್ಟಪ್ಪನವರ ಮೂಲಕ; ಮತ್ತು ಹೊಳೆನರಸೀಪುರದಲ್ಲಿರುವ ಮ|| ಬಳ್ಳಾರಿ ವೀರಯ್ಯನವರ ಸಹೋದರ ರುದ್ರಪ್ಪನವರ ಕುಮಾರಿ ಸೌ|| ವೀರಮ್ಮನನ್ನು ಹಾಸನದ ತಾ|| ಸಾಲಗ್ರಾಮದ ಮ|| ಅಡವಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ವಧೂವರರಕಡೆಯಿಂದ ತೆಗೆದ ರೂ. ೧-೪-೮ ಹೊಳೆನರಸೀಪುರದ ಮ|| ಗೆಜ್ಜಳ್ಳಿ ನಾಗಪ್ಪಶೆಟ್ಟರಮೂಲಕ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿದ್ದೇವೆ.

ನೋಟೀಸ್.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯಿಂದ ಸ್ಕಾಲರ್‌ಷಿಪ್ ಯಾ ವಿದ್ಯಾರ್ಥಿವೇತನವನ್ನು ಪಡೆಯಲಪೇಕ್ಷಿಸುವ ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದೆ ಪ್ರೌಢ ವಿದ್ಯಾಭ್ಯಾಸಮಾಡಲು ಚೈತನ್ಯವಿಲ್ಲದಿರುವ ವೀರಶೈವ ವಿದ್ಯಾರ್ಥಿಗಳು ಫಂಡ್ ಸಭೆಗೆ ಧನಸಹಾಯಮಾಡಿರುವ ತಮ್ಮ ಸ್ಥಳೀಯ ದೊಡ್ಡಮನುಷ್ಯರ ಮತ್ತು ಸ್ಕೂಲ್ ಯಾ ಕಾಲೇಜಿನ ಹೆಡ್ಮಾಸ್ತರ ಸರ್ಟಿಫಿಕೇಟ್‌ಗಳೊಡನೆ ಅಪ್ಲಿಕೇಷನ್ನನ್ನು ೧೯೧೮ ನೆಯ ಜುಲೈ ಆಖೈರೊಳಗೆ ತಲಪುವಂತೆ ಹಾಕಿಕೊಳ್ಳತಕ್ಕದ್ದು.

ಜಿ. ಕೆ. ರುದ್ರಾರ್ಯ, ಅಸಿಸ್ಟೆಂಟ್ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ ; ಬೆಂಗಳೂರು.

೫ ನೇ ತರಗತಿ ರೇಖಾಗಣಿತಾದಿಪಾಠ.

ಬೆಲೆ ೪ ಆಣೆ. ಈ ಪುಸ್ತಕವು ಉಪಯುಕ್ತವಾಗಿ ತೋರುತ್ತದೆ. ಎಂದು ಮೈಸೂರು ಮಹಾರಾಜಾ ಕಾಲೇಜ್ ಸಂಸ್ಕೃತ ಪ್ರೊಫೆಸರ್ ಮ|| ರಾ|| ಎಂ. ಹಿರಿಯಣ್ಣಯ್ಯ ಎಂ.ಎ.ಎಲ್.ಟಿ. ಯವರು ಅಭಿಪ್ರಾಯಪಟ್ಟಿರುತ್ತಾರೆ. 1918 ನೇ ಕ. ಟೆಕಸ್ಟ್ ೪ ಆಣೆ, ನೋಟ್ಸು ಮ|| ಎನ್. ಆರ್. ವೆಂಕಟಸುಬ್ಬಾಚಾರ್ಯರದು ೮ ಆಣೆ. ಸದಾಚಾರಸಂಗ್ರಹ ೪ ಆಣೆ, ಆರೋಗ್ಯಶಾಸ್ತ್ರದ ನೋಟ್ಸು ೧ ಆಣೆ, ಪ್ಲೀಡರ್ ಮಲ್ಲಾರಾಧ್ಯರವರ ವ್ಯವಹಾರನಿರ್ಣಯ ೧|| ರೂಪಾಯಿ ಅವುಗಳ ನಮೂನೆಗಳುಳ್ಳ ಲೇಖ್ಯತತ್ವ ಪ್ರಕಾಶಿಕೆ ೪ ಆಣೆ, ಇಲಾಖೆಯ ೨ ನೆಯ ಪುಸ್ತಕದ ನೋಟ್ಸು ೨|| ಆಣೆ ೩ನೆಯ ಹೊಸದು ೪ಆಣೆ, ೪ನೆಯದು ೧||ಆಣೆ, ೫ ನೆಯದು ೪ ಆಣೆ, ಮಕ್ಕಳ ಭೂವಿವರಣೆ ೨ಆಣೆ, ಎಷ್ಯಾಭೂವಿವರಣೆ ೭ ಆಣೆ. ೧೦ಕ್ಕೆ ೧ಪ್ರತಿ ಹೆಚ್ಚು ಇಂಗ್ಲೀಷ್ ಕನ್ನಡ ಸ್ಕೂಲ್ ಪುಸ್ತಕಗಳೆಲ್ಲವೂ ಸುಲಭ ಕ್ರಯಕ್ಕೆ ದೊರೆಯುತ್ತವೆ.

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್ ಸನ್ಸ್
8 ವಿದ್ಯಾನಿಧಿ ಬುಕ್‌ಡಿಪೋ ಮೈಸೂರು.

೧೯೧೮ ನೆಯ ಇಸವಿ ಜುಲೈ ತಾ|| ೨೨ ರಿಂದ ೧೯೧೮ ನೆಯ ಜುಲೈ ತಾ|| ೨೮ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮಸಂವತ್ಸರದ ಶ್ರಾವಣ ಶು|| ತದಿಗೆಯಿಂದ ಶ್ರಾವಣ ಶು|| ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಆಟಿ ತೇದಿ
22	1 ಭಾನು	ತದಿಗೆ	15-21	ಮಖಾ	22-34	7
23	2 ಸೋಮ	ಚೌತಿ	20-23	ಪುಬ	29-3	8
24	3 ಮಂಗಳ	ಪಂಚ	24-55	ಉಥ	35-3	9
25	ಬುಧ	ಷಷ್ಠಿ	28-42	ಹಸ್ತ	29-51	10
26	ಗುರು	ಸಪ್ತಮಿ	31-22	ಚಿತ್ತ	44-28	11
28	4 ಶುಕ್ರ	ಅಷ್ಟಮಿ	32-54	ಸ್ವಾತಿ	47-28	12
29	5 ಶನಿ	ನವಮಿ	34-4	ವಿಶಾಖ	49-7	13

(1) ಚತುರ್ಥೀತಿಥಿಃ (ವಾಕ್ಯರೀತ್ಯಾ ತಿಥಿಃ) (2) ನಾಗರಚೌತಿ (3) ಗರುಡಪಂಚಮಿ, ಚಿತ್ರಸೇನಮಾವ್ರತಂ, ಮಂಗಳಗೌರೀವ್ರತಂ. (4) ದಗ್ಧಯೋಗಃ. (5) ಶ್ರಾವಣಶನಿವಾರಂ, ದಗ್ಧಯೋಗಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಾಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಯಂಸದಾಪುರಿಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೮ ನೆಯ ಇಸವಿ ಜುಲೈ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೩೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶ್ರೀಕರ ಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಲಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರಗಳಿಗೆ ರಾಮಬಾಣೌಷಧವು. ಸರ್ಪರಿಗೂ ಕೆಮ್ಮು, ನೆಗಡಿ, ಮಲಬಂಧ, ವರಸೆಜ್ವರ, ಶೀತವಾಯು, ಹಲ್ಲುನೋವು, ಅಲ್ಸರಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೮ ಆಣೆ ೬ ಸೀಸೆಗೆ ಟಿ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ ೧೭ ರೂಪಾಯಿಗಳು.

ಹಲ್ಲುಪುಡಿ (ಸುಗಂಧ ಬಳ್ಳಿ ಮನೋಹರವಾದ ವಾಸನೆ ಅನ್ಯ ಹಲ್ಲುಗಳಿಂದ ಕೂಡಿದ್ದು) ೩೦ ದಿನಕ್ಕೆ ಆಗುವ ಪ್ಯಾಕ್ ೧ ಆಣೆ. ಸಾಂಪಲ್ ಸೀಸೆ ೧ ಕ್ಕೆ ೪ ಆಣೆ. ಸ್ಪಿರಿಟ್ ಸುಗಂಧ ೧೦೦ ಕ್ಕೆ ೫ ಆಣೆ,

ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಅಮೋದಿನಿ (ಸುಖಿಕ್ಕೊ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರುಬೇಕು. ಹೆಚ್ಚು ಔಷಧ ತರಿಸಿದರೆ ಹೆಚ್ಚು ರಿಯಾಯಿತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
11 ಸದ್ವೈದ್ಯಶಾಲಾ ನಂಜನಗೂಡು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ ಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ದಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಹುಸಂಪರ ಪ್ರಕಾರಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
21 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ
ಪರೀಕ್ಷಿಸಿ ನೋಡಿರಿ. 35

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತುವಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್‌ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗವರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಶರಣಾದಿ ಗಣಾಂಕುಶಮಾಲೆ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—೫—೦
ಪುರಿದಾಸಿ	೦—೪—೦
ಪ್ರೇತಸಂಚಾರ	೦—೨—೦
ಹಳ್ಳಿ ಬುದ್ಧಿ (ಮುತ್ತಿನಹಾರ)	೦—೨—೦
ಗುರುವಂಶಾವಳಿ ರತ್ನಮಾಲೆ	೦—೧—೦

ಅಂಚೆವೆಚ್ಚ ಬೇರೆ.

ಗ್ರಂಥಕರ್ತರಿಂದ ಪುಸ್ತಕಗಳನ್ನು ಕೊಂಡು ಇಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಜುಲೈ ತಾ|| ೨೯ ನೆಯ ಭಾನುವಾರ.

ಮೈಸೂರು ಪೌರಕಾರ್ಯನಿರ್ವಾಹಕಸಂಘಗಳು.

ಇವುಗಳಿಗೆ ಸಂಬಂಧಪಟ್ಟ ೧೯೧೫-೧೬ ನೆಯ ವರ್ಷದ ವರದಿಯು ಈಗತಾನೇ ಪ್ರಭುತ್ವದವರಿಂದ ಪ್ರಕಟಿತವಾಗಿದೆ. ಸಂಸ್ಥಾನದೊಳಗೆಲ್ಲಾ ಆ ವರ್ಷದಲ್ಲಿ ೮೯ ಮ್ಯುನ್ಸಿಪಾಲಿಟಿಗಳಿದ್ದುವು. ಇವುಗಳಿಗೆಲ್ಲಾ ಆ ವರ್ಷದಲ್ಲಿ ೧೩೬೦೮೬೧ ರೂ. ಗಳ ಆದಾಯವೂ, ೧೩೩೨೭೭೪ ರೂ. ಗಳ ವೆಚ್ಚವೂ ಆಗಿದ್ದಿತು. ಅದರ ಹಿಂದಣ ವರ್ಷದಲ್ಲಿ ೧೦೭೪೭೧೬ ರೂ. ಗಳ ಆದಾಯವೂ, ೧೧೯೭೪೩೮ ರೂ.ಗಳ ವ್ಯಯವೂ ಆಗಿದ್ದಿತು.

ಸಂಸ್ಥಾನದ ಪ್ರಜೆಗಳಿಗೆ ಸ್ವಪರಿಪಾಲನ ಸ್ವಾತಂತ್ರ್ಯವನ್ನು ಹೆಚ್ಚಾಗಿ ಕೊಟ್ಟು, ಈ ಸಂಘಗಳಮೂಲಕ ದೇಶೋಪಯೋಗ ಕಾರ್ಯನಿರ್ವಾಹಕಶಕ್ತಿಯನ್ನು ಅವರಲ್ಲಿ ಹೆಚ್ಚಿಸಬೇಕೆಂಬುದು ಶ್ರೀಮನ್ಮಹಾರಾಜರ ಮತ್ತೂ ಅವರ ಘನತರವಾದ ಸರ್ಕಾರದ ಉದ್ದೇಶವಾಗಿರುತ್ತದೆ. ಅದಕ್ಕಾಗಿಯೇ ಈ ಸಂಘಗಳಿಗೆ ಸಂಬಂಧಪಟ್ಟ ವಿಧಿಗಳ ಪುನರ್ನಿರ್ಮಾಣವನ್ನು ಮಾಡುತ್ತಲೂ, ಸ್ಥಳೀಯ ಸರ್ಕಾರಗಳಲ್ಲಿ ಪ್ರಜಾನಿಯುಕ್ತ ಸಭಿಕರ ಸಂಖ್ಯೆಯನ್ನು ಹೆಚ್ಚಿಸುತ್ತಲೂ, ಅನೌದ್ಯೋಗಿಕ ಜನರನ್ನು ಈ ಸಂಘಗಳ ಅಧ್ಯಕ್ಷತೆಗೆ ನಿಯಮಿಸುತ್ತಲೂ ಇರುತ್ತಾರೆ. ಆದರೂ ಈ ಸಂಘಗಳಮೂಲಕ ಸ್ವಸ್ಥಲಗಳಿಗೆ ಮಾಡಿಕೊಳ್ಳಬಹುದಾದ ಪ್ರಯೋಜನದ ರೀತಿಯೂ, ಕರ್ತವ್ಯಜ್ಞಾನವೂ ಪ್ರಜೆಗಳಲ್ಲಿ ಇನ್ನೂ ತಕ್ಕಷ್ಟು ಇಲ್ಲವಾಗಿರುವುದರಿಂದ ಪ್ರಭುತ್ವದವರ ಉದ್ದೇಶವು ಸಂಪೂರ್ಣವಾಗಿ ಸಾರ್ಥಕವಾಗುತ್ತಲಿಲ್ಲ. ಈ ಮ್ಯುನ್ಸಿಪಾಲಿಟಿಗಳಿಗೆ ಕಂದಾಯಗಳನ್ನು ಕೊಟ್ಟು ತಮ್ಮ ಪ್ರತಿನಿಧಿಗಳನ್ನಾರಿಸಲು ಅರ್ಹತೆಯುಳ್ಳವರೆಂದು ಗೊತ್ತುಮಾಡಲ್ಪಟ್ಟ ಜನರು ೧೧೧೪೭೭ ಮಂದಿಗಳಿದ್ದರೂ, ಅವರಲ್ಲಿ ೪೮೦೪ ಮಂದಿಗಳು ಮಾತ್ರವೇ ತಮ್ಮ ಸ್ವಾತಂತ್ರ್ಯಬಾಧ್ಯತೆಗಳನ್ನು ಉಪಯೋಗಿಸಿಕೊಂಡು ಉಳಿದವರೆಲ್ಲಾ ತಟಸ್ಥರಾಗಿದ್ದರೆಂಬುದನ್ನು ಈ ವರದಿಯಮೂಲಕ ತಿಳಿಯಲಾಗಿ ಮೇಲೆ ಹೇಳಿದಂತೆ ನಮ್ಮ ದೇಶದ ಪ್ರಜೆಗಳಲ್ಲಿ ಈ ಸ್ಥಳೀಯ ಸಂಘದ ಕಾರ್ಯಭಾರದ ವಿಷಯದಲ್ಲಿ ಎಷ್ಟು ಔದಾಸೀನ್ಯವೂ ಅಜ್ಞಾನವೂ ಇರುತ್ತಲಿರುವುದೆಂಬುದು ವ್ಯಕ್ತವಾಗುತ್ತದೆ. ತಾವು ಕೊಡುವ ಕಂದಾಯ ಕಾಸುಗಳು ಪ್ರಜೆಗಳಾದ ತಮ್ಮ ಸೌಕರ್ಯಗಳಿಗಾಗಿಯೇ ಸರಿಯಾದ ರೀತಿಯಲ್ಲಿ ವಿನಿಯೋಗಿಸಲ್ಪಡುತ್ತಲಿದೆಯೆ? ಕೂಡಿದ ಹಣದಲ್ಲಿ ತಮ್ಮ ಸ್ಥಳಾನುಕೂಲ್ಯಕ್ಕೆ ತಕ್ಕಂತೆ ಯಾವ ಯಾವ ಸೌಕರ್ಯಗಳನ್ನೂ ಏರ್ಪಾಟುಗಳನ್ನೂ ಮಾಡಬೇಕು? ಎಂಬಿವುಗಳನ್ನೆಲ್ಲಾ ಚರ್ಚಿಸಿ ನಿರ್ಧರಿಸಿ ಆಚರಿಸಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ತಮ್ಮಗಳ ಮಧ್ಯದಲ್ಲಿ ಯಾರು ಸಮರ್ಥರಾಗಿರುವರು? ಯಾರಿಗೆ ತಮ್ಮೆಲ್ಲರ ಪ್ರಾತಿನಿಧ್ಯವನ್ನು ಕೊಟ್ಟರೆ ಕಾರ್ಯಗಳೆಲ್ಲಾ ನಂಬುಗೆಯಿಂದಲೂ ಸಾರ್ಥಕವಾಗಿಯೂ ನೆರವೇರುವುವು ಎಂಬುದನ್ನು ವಿಚಾರಮಾಡಿಕೊಂಡು, ಕಂದಾಯವನ್ನು ತೆರುತ್ತಿರುವ ಪ್ರಜೆಗಳು ಮ್ಯುನಿಸಿಪಲ್ ಕೌನ್ಸಿಲರ ಆರಿಸುವಿಕೆಯಲ್ಲಿ ತಪ್ಪದೆ ಹೋಗಿ, ಸಮರ್ಥರೂ ಯೋಗ್ಯತೆಯುಳ್ಳವರೂ ಆದ ಜನರಿಗೆ ಮತವನ್ನು ಕೊಟ್ಟು, ಅವರುಗಳಮೂಲಕ ತಮ್ಮ ಸ್ಥಳದ ಶುಚೀಕರಣ, ವಿದ್ಯಾಭ್ಯಾಸ, ವೈದ್ಯಸಹಾಯ, ಪಾನೀಯಾನುಕೂಲ್ಯ ಮೊದಲಾದ ಕಾರ್ಯಗಳನ್ನು ನಡೆಯಿಸಿಕೊಳ್ಳದೆಹೋದರೆ, ಪ್ರಭುತ್ವದವರು ಅನುಗ್ರಹಿಸಿಕೊಟ್ಟ ಸ್ವಾತಂತ್ರ್ಯವೂ ವ್ಯರ್ಥವಾಗುವುದಲ್ಲದೆ ಪ್ರಜೆಗಳು ತಮ್ಮ ಹಿತವನ್ನು ತಾವೇ ಹಾಳ್ಮಾಡಿಕೊಂಡಂತೆಯೂ ಆಗುವುದು. ದುಡಿಯುವುದೊಂದೇ ತಮ್ಮ ಕೆಲಸವಾಗಿರುವ ಪಶುಗಳಂತೆ ಪ್ರಜೆಗಳು ಕಂದಾಯ ತೆರುವುದೊಂದನ್ನೇ ತಮ್ಮ ಕಾರ್ಯವನ್ನಾಗಿ ತಿಳಿದು ಕೊಂಡಿರುವುದು ಯೋಗ್ಯವಲ್ಲ.

ಈ ವರದಿಯಲ್ಲಿ ಕಂಡುಬಂದಿರುವ ಮತ್ತೊಂದು ವಿಷಯವನ್ನು ನೋಡಲಾಗಿ, ಸ್ಥಳಿಕ ಸಂಘಗಳ ಸಮ್ಮೇಳನ (ಮೀಟಿಂಗ್) ಕಾಲದಲ್ಲಿ ಪ್ರಜಾನಿಯುಕ್ತರಾದ ಸಭಿಕರು ಸರಿಯಾಗಿ ಬಂದು ಶ್ರದ್ಧೆವಹಿಸಿ ಕೆಲಸಮಾಡುತ್ತಿರುವಂತೆ ಸರ್ಕಾರದ ಉದ್ಯೋಗಿಗಳಾದ ಸಭಿಕರುಗಳು ಬರುವುದು ವಿರಳವೆಂಬುದು ಗೊತ್ತಾಗಿರುವುದು. ಪ್ರಜಾಕಾರ್ಯನಿರ್ವಾಹಕ್ಕಾಗಿ ಸಂಬಳದ ರೂಪವಾದ ಪ್ರತಿಫಲವನ್ನು ಪಡೆಯುತ್ತಿರುವ ಅಧಿಕಾರಿಗಳಿಗಿಂತಲೂ ಗೌರವ್ಯ ಸಭಿಕರುಗಳು ಈ ವಿಷಯದಲ್ಲಿ ಪ್ರಶಂಸಾಪಾತ್ರರಾಗಿ ನಡೆದುಕೊಂಡಿರುವುದು ವಿದಿತವಾಗಿರುತ್ತದೆ. ಆದರೂ ಇಂಥ ಸಭಾಕಾರ್ಯಗಳಲ್ಲಿ ಅಧಿಕಾರಿಗಳ ದಾಕ್ಷಿಣ್ಯ ಭೀತಿ ಮೊದಲಾದವುಗಳಿಲ್ಲದೆ ಸ್ವಬುದ್ಧಿ ಸ್ವಾತಂತ್ರ್ಯಗಳನ್ನುಪಯೋಗಿಸುವಂಥ ಸಭಿಕರು ನಮ್ಮ ಸ್ಥಳಿಕ ಸರ್ಕಾರಗಳಲ್ಲಿ ಹೆಚ್ಚದೆ ಕೇವಲ "ಹಾಜರಾತಿ"ಯಿಂದಲೇ ಸಂಪೂರ್ಣವಾದ ಫಲೋದಯವಾಗಲಾರದು.

ಈ ಸ್ಥಳೀಯ ಸರ್ಕಾರಗಳ ಕಾರ್ಯದ ಪ್ರಯೋಜನಾಂಶವು ಹೆಚ್ಚಿ ಅವು ವೃದ್ಧಿಗೊಳ್ಳಬೇಕಾದರೆ, ಅನೌದ್ಯೋಗಿಕರಾದ ಸಭಿಕರಲ್ಲಿ ಆಂಗ್ಲಭಾಷೆಯನ್ನರಿಯದವರೇ ಹೆಚ್ಚಾಗಿರುವಕಾರಣ, ಅಂಥವರಿಗೆಲ್ಲಾ ಮ್ಯುನ್ಸಿಪಾಲಿಟಿಯ ತತ್ಸನಿಯಮ ಮೊದಲಾದುವುಗಳೆಲ್ಲಾ ಕನ್ನಡದಲ್ಲಿ ತಿಳಿಯುವಂತೆ ಅನುಕೂಲಮಾಡಿಕೊಡಬೇಕು ಎಂದು ಚಿತ್ರದುರ್ಗ ಡಿಸ್ಟ್ರಿಕ್ಟ ಬೋ|| ಕಮಿಷನರು ಕೊಟ್ಟಿರುವ ಸೂಚನೆಯು ಸಂಪೂರ್ಣವಾಗಿ ಗಮನೀಯವಾಗಿದೆ. ಇದರಮೇಲೆ ಗೌರ್ನಮೆಂಟಿನವರು ಕೊಟ್ಟಿರುವ ಅಭಿಪ್ರಾಯದಲ್ಲಿ—"ಮ್ಯುನ್ಸಿಪಾಲಿಟಿಯ ಸಂಬಂಧವಾದ ನಿಯಮಗಳೆಲ್ಲಾ ಕನ್ನಡದಲ್ಲಿ ಅಚ್ಚುಮಾಡಿಸಲ್ಪಟ್ಟಿವೆ. ಈಗ ನೂತನವಾಗಿ ವ್ಯವಹರಣೆಗೆ ತರಬೇಕೆಂದಿರುವ ವಿಧಾನಗಳ ಸ್ವರೂಪವೂ ಕೂಡ ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ಪ್ರಕಟಿಸಲು ಯೋಚಿಸಿದೆ" ಎಂದು ಹೇಳಿರುತ್ತಾರೆ. ಇದು ಯುಕ್ತವಾದ ಏರ್ಪಾಟೇ ಸರಿ. ಆದರೆ ಇಷ್ಟು ಮಾತ್ರವೇ ಸಾಲದು. ಸ್ಥಳೀಯ ಸಂಘಗಳಲ್ಲಿ ನಡೆಯುತಕ್ಕ ಚರ್ಚೆಯನ್ನೆಲ್ಲಾ 'ದೇಶಭಾಷೆಯಲ್ಲೇ ಏತಕ್ಕೆ ನಡೆಯಿಸಕೂಡದು? ಇಂಗ್ಲೀಷನ್ನರಿಯದ ಎಷ್ಟೋ ಜನರು ಈ ಸಭೆಯ ಸಭಿಕರಾಗಿರಬಹುದೇ ಹೊರತು ಕನ್ನಡವನ್ನರಿಯದವರಾರಾದರೂ ಈ ಸಂಘಗಳ ಸಭಿಕರಾಗಿರುವುದುಂಟೆ? ಹೀಗಿರುವಾಗ ಕನ್ನಡದಲ್ಲೇ ಎಲ್ಲ ಚರ್ಚೆಯೂ ನಡೆಯುವಂತಾದರೆ ತಪ್ಪದೆ ಸಭೆಗೆ "ಹಾಜರಾಗುವ" ಅನೌದ್ಯೋಗಿಕ ಸಭಾಸದರುಗಳೆಲ್ಲಾ ಈ ಚರ್ಚೆಗಳಲ್ಲಿ ಹೆಚ್ಚು ಶ್ರದ್ಧೆಯನ್ನು ವಹಿಸಿ ಕೆಲಸಮಾಡಲು ಅನುಕೂಲವಾಗುವುದು. ಮತ್ತೂ ಮೀಟಿಂಗುಗಳಲ್ಲಿ ತಮ್ಮ ಪ್ರತಿನಿಧಿಗಳು ಎಷ್ಟುಮಟ್ಟಿಗೆ ಪ್ರಜಾಹಿತಕಾರ್ಯದಲ್ಲಿ ಶ್ರದ್ಧೆವಹಿಸಿ ಕೆಲಸಮಾಡುವರೆಂಬುದನ್ನು ರೇಟ್‌ಪೇಯರುಗಳು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಂಡು, ಉತ್ತರತ್ರ 'ಚುನಾವಣೆ'ಗಳ ಕಾಲದಲ್ಲಿ ಅರ್ಹತೆಯುಳ್ಳವರಿಗೇ ತಂತಮ್ಮ ಮತಗಳನ್ನು ಕೊಡಲೂ ಅನುಕೂಲವಾಗುವುದು. ಪ್ರಜಾಸಾಮಾನ್ಯದಲ್ಲಿ ಸ್ಥಳಿಕ ಸರ್ಕಾರಗಳ ಕಾರ್ಯಗೌರವದ ಮತ್ತೂ ಫಲಿತಾಂಶದ ಜ್ಞಾನವೂ ಹೆಚ್ಚಲವಕಾಶವಾಗುವುದು. ಆದುಕಾರಣ ಅತ್ಯವಶ್ಯಕವಾದ ಈ ಏರ್ಪಾಟನ್ನು ನಮ್ಮ ಪ್ರಭುತ್ವದವರು ವ್ಯವಹಾರಕ್ಕೆ ತರುವುದಾದರೆ ಅವರ ಘನತರೋದ್ದೇಶವು ಬಹಳಮಟ್ಟಿಗೆ ಸಫಲವಾಗುತ್ತ ಬರುವುದರಲ್ಲಿ ಸಂಶಯವಿಲ್ಲ.

ಒಳದೇಶದ ವೃತ್ತಾಂತಗಳು.

ಅ|| ಸರ್ಜನರಾದ ಡಾ|| ಸಿದ್ದಪ್ಪನವರು ಶ್ರೀರಂಗಪಟ್ಟಣಕ್ಕೂ, ಡಾ|| ಎಂ. ಡಿ. ಶ್ರೀನಿವಾಸಯ್ಯಂಗಾರರು ಸಕಲೇಶಪುರಕ್ಕೂ ವರ್ಗಾಯಿಸಲ್ಪಟ್ಟಿದ್ದಾರೆ.

ವೃತ್ತಾಂತಪತ್ರಿಕೆ, ಮತ್ತೂ ವೆ. ಮಿಷನ್‌ಪ್ರೆಸ್ಸು-ಇವುಗಳ ಸ್ಥಾಪಕರಾದ ರೆ|| ಹೇಗ್ ಸಾಹೇಬರು ಕಳೆದ ತಾ|| ೧೫ ರಲ್ಲಿ ತಮ್ಮ ೬೨ ನೆ ವಯಸ್ಸಿನಲ್ಲಿ ಚೀನಾದೇಶದೊಳಗೆ ವಿಧಿವಶರಾದರೆಂದು ಕೇಳಿ ವಿಷಾದಿಸುತ್ತೇವೆ.

ಇಂಡ್ಯಾ ಸರ್ಕಾರದ ಫಾರಿನ್ ಸೆಕ್ರೆಟರಿಗಳಾದ ಮಿ|| ಉಡ್‌ರವರು ಕಳೆದ ಗುರುವಾರ ಬ್ರಿಟಿಷ್ ರೆಸಿಡೆಂಟರವರೊಡನೆ ರಾಜಧಾನಿಗೆ ದಯಮಾಡಿಸಿ, ರೆಸಿಡೆನ್ಸಿಯಲ್ಲಿಳಿದುಕೊಂಡು, ನಮ್ಮ ಮಹಾರಾಜರವರ ಆತಿಥ್ಯದಲ್ಲಿದ್ದಾರೆ.

ಕಾಫಿಯ ಬೆಲೆಯು ಇಳಿದುಹೋಗಿ ಪ್ಲಾಂಟರುಗಳಿಗೆ ಆಗುತ್ತಿರುವ ನಷ್ಟವನ್ನು ಗಮನಿಸಿ, ಮುಂದಣ ಏಪ್ರಿಲ್ ತಿಂಗಳವರೆಗೂ ಅವರ ಕಂದಾಯದ ಹಣವನ್ನು ಸಲ್ಲಿಸುವುದಕ್ಕೆ ನಮ್ಮ ಸರ್ಕಾರದವರು ಗಡುವನ್ನು ಹೆಚ್ಚಿಸಿಕೊಟ್ಟಿದ್ದಾರೆ.

ಬಹುಕಾಲದಿಂದ ರಾಜಧಾನಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರಾಗಿದ್ದು ನಿಷ್ಪಕ್ಷಪಾತತೆಯಿಂದ ಕೆಲಸಮಾಡಿ, ಸಿಟಿ ಪೊಲೀಸ್ ಸೂಪರಿಂಟೆಂಡೆಂಟ್ ಉದ್ಯೋಗವನ್ನು ನಿರ್ವಹಿಸುತ್ತಿದ್ದ ಮಿ|| ಮೋಕ್ರಿಯವರು ಕೆಲ ದಿನಗಳಿಂದಲೂ ಅಸ್ವಸ್ಥರಾಗಿದ್ದು ಕಳೆದ ಬುಧವಾರ ಕಾಲಾಧೀನರಾದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ.

ರಾಜಧಾನಿಯಲ್ಲಿ ಮಳೆಯಿಲ್ಲ. ಆಹಾರ್ಯವಸ್ತುಗಳ ಬೆಲೆ ಏರುತ್ತಿದೆ. ಕಳ್ಳರ ಹಾವಳಿಯೂ ಹೆಚ್ಚುವಂತೆ ಕಾಣುತ್ತದೆ. ಕಳೆದ ೧ ವಾರದೊಳಗೆ ಲಷ್ಕರ್ ಮೊಹಲ್ಲಾದಲ್ಲಿ ಮೂರು ಮನೆಗಳಿಗೆ ನುಗ್ಗಿ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋಗಿರುತ್ತಾರೆ. ಪೊಲೀಸರ ಕಾವಲನ್ನು ಸಮರ್ಪಕವಾಗಿರುವಂತೆ ಆ ಶಾಖೆಯವರು ಏರ್ಪಡಿಸುವುದು ಅವಶ್ಯಕವಾಗಿದೆ.

ಯುದ್ಧವಾರ್ತೆಯು

(ಪಶ್ಚಿಮರಣರಂಗ.)

ಅವಿಚ್ಛಿನ್ನವಾಗಿ ಭೀಕರಯುದ್ಧಗಳು ಈ ರಂಗದಲ್ಲಿ ವಿಶೇಷವಾಗಿ ನಡೆದಿರುತ್ತವೆ. ಶತ್ರುಗಳ ಮುತ್ತಿಗೆಯೇ ಇನ್ನೂ ಬಲವಾಗಿ ನಡೆಯುತ್ತಿದೆ. ಅವರನ್ನು ಪ್ರತಿಭಟಿಸಿ ಯುದ್ಧಮಾಡಿ, ತಮ್ಮ ಸ್ಥಾನಗಳನ್ನು ಕಾಪಾಡಿಕೊಳ್ಳುವದಕ್ಕೇ ಮಿತ್ರಮಂಡಲಿಯವರಿಗೆ ಸಾಕಾಗಿಹೋಗುತ್ತಿದೆ. ಇದನ್ನು ನೋಡಲಾಗಿ ಶತ್ರುಗಳ ಶಕ್ತಿಯು ಇನ್ನೂ ಬಲವಾಗಿದೆಯೆಂದೇ ಕಾಣುತ್ತದೆ. ಈ ಸ್ಥಿತಿಯನ್ನೂ ಜರ್ಮನಿ ಇಂಗ್ಲೀಷ್ ಮಂತ್ರೀಶ್ವರರು ಮಾಡಿರುವ ಭಾಷಣಗಳನ್ನೂ ಪರಿಶೀಲನೆ ಮಾಡಲಾಗಿ ಯುದ್ಧವು ಈಗಲೇ ಮುಗಿಯುವುದೆಂಬುದರ ಚಿಹ್ನೆಯೇನೂ ಕಾಣುವುದಿಲ್ಲ. ಕಳೆದವಾರದಲ್ಲಿ ನಡೆದಿರುವ ಯುದ್ಧಗಳಲ್ಲಿ ಇಂಗ್ಲೀಷರೂ ಫ್ರೆಂಚರುಗಳೂ ಕೂಡ ತಾವು ಕಳೆದುಕೊಂಡಿದ್ದ ಪ್ರದೇಶಗಳಲ್ಲಿ ಎಷ್ಟೋಭಾಗವನ್ನು ಶತ್ರುಗಳಿಂದ ಬಿಡಿಸಿಕೊಂಡಿದ್ದಾರೆ. ರಣರಂಗದ ವಿಮಾನಯುದ್ಧಗಳು ಕಳೆದವಾರವೂ ವಿಶೇಷವಾಗಿ ನಡೆದುದರಲ್ಲಿ ಜರ್ಮನರ ವಿಮಾನಗಳೇ ಬಹಳ ನಷ್ಟಪಟ್ಟಿರುತ್ತವೆ.

ಪೂರ್ವರಣರಂಗ.

ರಷ್ಯಾದವರು ೨-೩ ವಾರಗಳಲ್ಲಿ ಗೆಲೀಷಿಯಾದಲ್ಲಿ ಪಡೆದುಕೊಂಡ ಜಯಪರಂಪರೆಯು ಜಗದಾಶ್ಚರ್ಯವನ್ನು ಮಾಡಿದ್ದಿತು. ಲೆಂಬರ್ಗ್ ಪಟ್ಟಣವೂ ಇಷ್ಟರಲ್ಲೇ ಅವರಧೀನವಾಗಬಹುದೆಂದೂ ಕಾಣುತ್ತಿದ್ದಿತು. ಜರ್ಮನಿ ಯುದ್ಧಾಂಗಮಂತ್ರಿಯವರೂ ಕೈಸರರೂ ಆ ರಣರಂಗಕ್ಕೆ ಪ್ರತ್ಯಕ್ಷ ಓಡಿಹೋಗಬೇಕಾಗಿ ಬಂದಿತು. ಆದರೆ ದುರದೃಷ್ಟಕ್ಕೆ ಆ ದೇಶದ ಒಳತೋಟಿಯು ಮತ್ತೆ ತಲೆಯೆತ್ತಿತು. "ಲೆನಿನ್" ಎಂಬ ಜರ್ಮನರ ಗೂಢಚಾರಿಯೊಬ್ಬನು ಆ ದೇಶದ ಸೈನಿಕರಲ್ಲೂ ಅತಿವಾದಿಪಕ್ಷದವರಲ್ಲೂ ಮಾಡಿದ ಕಪಟತಂತ್ರದಿಂದ ರಷ್ಯಾದ ಸೈನ್ಯದಲ್ಲಿ ೫ ಪಟಾಲಮ್ಮುಗಳು ಅಧಿಕಾರಿಗಳಮೇಲೆ ತಿರುಗಿಬಿದ್ದರು. ಇವರಲ್ಲಿ ಅವಿಧೇಯರಾಗಿದ್ದವರನ್ನೆಲ್ಲಾ ಪೆಟ್ರೋಗ್ರೇಡಿಗೆ ಹಿಂದಕ್ಕೆ ಕಳುಹಿಸಲಾಗಿ, ಅಲ್ಲಿದ್ದ ವಿಪ್ಲವಕಾರಿಜನರೂ ಇವರೊಡನೆ ಕೂಡಿ ಹಾವಳಿಯನ್ನು ಹೆಚ್ಚು ಮಾಡಿದರು. ಯುದ್ಧವನ್ನು ನಿಲ್ಲಿಸಿಬಿಡಬೇಕೆಂದು ಸಾರುತ್ತ ಆಯುಧಪಾಣಿಗಳಾಗಿ ಬೀದಿಗಳಲ್ಲಿ ತಿರುಗುತ್ತ ಈಗಣ ಪ್ರಭುತ್ವದಮೇಲೆ ಹಗೆಸಾಧಿಸುತ್ತ, ಪ್ರಭುತ್ವದ ಮುಖ್ಯೋದ್ಯೋಗಿಗಳನ್ನು ಸೆರೆಹಿಡಿಯಬೇಕೆಂತಲೂ, ಬೊಕ್ಕಸವನ್ನು "ಲೂಟಿ" ಮಾಡಬೇಕೆಂತಲೂ, ಯುದ್ಧಾಂಗಮಂತ್ರಿಯಾಗಿದ್ದು ಈಗ ಮುಖ್ಯಮಂತ್ರಿಯಾಗಿರುವ ಕೆರೆನ್‌ಸ್ಕಿಯವರನ್ನು ಕೊಂದುಬಿಡಬೇಕೆಂತಲೂ ಇವರುಗಳು ಉದ್ದೇಶಪಟ್ಟಿದ್ದರು. ಅಷ್ಟರಲ್ಲಿ ರಣರಂಗದಲ್ಲಿದ್ದ ಕೆರೆನ್‌ಸ್ಕಿಯವರು ಪೆಟ್ರೋಗ್ರೇಡಿಗೆ ಬಂದು ಪ್ರಭುತ್ವಭಕ್ತಿಸಂಪನ್ನರಾದ ಪೆಟ್ರೋಗ್ರೇಡ್ ಸೈನಿಕರ ಸಹಾಯದಿಂದಲೂ ಕೊಸಾಕ್ಕರ ಭಯದಿಂದಲೂ ಈ ಗದ್ದಲವನ್ನು ಬಹಳಮಟ್ಟಿಗೆ ಅಡಗಿಸಿದರು. ಮಂತ್ರಿವರ್ಗದಲ್ಲಿ ಬದಲಾವಣೆಗಳಾದುವು. ಮುಖ್ಯಮಂತ್ರಿಪದವಿಯನ್ನು ಕೆರೆನ್‌ಸ್ಕಿಯವರೇ ವಹಿಸಬೇಕಾಯಿತು. ಇವರೊಬ್ಬರ ಅತುಲಧೈರ್ಯೋತ್ಸಾಹ ದೇಶಾಭಿಮಾನ ದೂರದರ್ಶಿತೆಗಳೇ ಸದ್ಯಕ್ಕೆ ರಷ್ಯಾದ ಉಲ್ಲೋಲಕಲ್ಲೋಲಸ್ಥಿತಿಯನ್ನು ಶಾಂತಪಡಿಸಬೇಕಾಗಿವೆ. ಇವರು ಮತ್ತೆ ರಣರಂಗಕ್ಕೆ ಹೋಗಿರುವರು. ಗಣಿಯೇರುವವರೂ ದೋಣಿಬಾರಿಸುವವರೂ ಒಬ್ಬರೇ ಆದಂತೆ ಕೆರೆನ್‌ಸ್ಕಿಯವರ ಸದ್ಯಸ್ಥಿತಿಯಾಗಿರುವುದು. ಇಷ್ಟರಲ್ಲೇ ಮಾಸ್ಕೋಪಟ್ಟಣದಲ್ಲಿ ರಾಜ್ಯಾಂಗಪುನರ್ನಿರ್ಮಾಣಕ್ಕೋಸ್ಕರ ಸಕಲ ವರ್ಗದ ಜನರ ಪ್ರತಿನಿಧಿಗಳ ಸಭೆಯೊಂದನ್ನು ಕೂಡಿಸುವುದಕ್ಕೆ ಏರ್ಪಡಿಸಿರುವರು. ಅಂತೂ ಈ ಒಳತೋಟಿಯಿಂದ ಶತ್ರುಗಳಿಗೇನೋ ಬಹಳ ಅನುಕೂಲವಾಯಿತು. ರಷ್ಯಾಸೇನೆಯಲ್ಲಿ ಕಂಡುಬಂದ ಅನೈಕಮತ್ಯ ಅನುತ್ಸಾಹಗಳಿಂದಲೂ ಜರ್ಮನರು ಈಚೆಗೆ ಮಾಡಿದ ವಿಶೇಷ ಪ್ರಯತ್ನಗಳಿಂದಲೂ ಅವರ ಬಲವು ಹೆಚ್ಚಾಗಿ ರಷ್ಯನರು ಹೊಸದಾಗಿ ಪಡೆದುಕೊಂಡಿದ್ದ ಜಯವೆಲ್ಲಾ ಮಣ್ಣುಗೂಡಿಹೋಗುವಂತಾಯಿತು. ರಷ್ಯನ್ ಸೇನಾಪಙ್ಕ್ತಿಯು ಶತ್ರುಗಳಿಂದ ಭೇದಿಸಲ್ಪಟ್ಟಿತು. ಕಾಲುಸ್ಜ್ ಟಾರ್ನಪೋಲು ಸ್ಟಾನಿಸ್ಲಾವು ಪಟ್ಟಣಗಳನ್ನೆಲ್ಲಾ ರಷ್ಯನರು ಕಳೆದುಕೊಂಡು ಬಹುದೂರ ಹಿಮ್ಮೆಟ್ಟಿಹೋಗಬೇಕಾಯಿತು. ಈಗ ಕಾರ್ಪೇತಿಯನ್ ಪರ್ವತಗಳ ಬಳಿಯಿಂದ ಹಿಡಿದು ಪುಟ್ನಾದವರೆಗೆ ರಷ್ಯನರು ಗಟ್ಟಿಯಾಗಿ ನಿಂತು ಶತ್ರುಗಳನ್ನು ಪ್ರತಿಭಟಿಸಿ ಯುದ್ಧಮಾಡುತ್ತಿದ್ದಾರೆ. ಕೆರೆನ್‌ಸ್ಕಿಯವರು ಎಷ್ಟು ಸಾಹಸಶಾಲಿಗಳಾದರೂ ಸೈನಿಕರಲ್ಲಿ ಒಮ್ಮತವೂ ಆಜ್ಞಾನುವರ್ತನಬುದ್ಧಿಯೂ ಇಲ್ಲದಿದ್ದರೆ ಕಾರ್ಯಸಾಧನೆಯಾಗುವುದು ಕಷ್ಟ. ಅಂತೂ ಈಚೆಗೆ ಬಂದಿರುವ ವಾರ್ತೆಗಳಿಂದ ರಷ್ಯನರು ಮತ್ತೆ ೪ ಗ್ರಾಮಗಳನ್ನು ವಶಪಡಿಸಿಕೊಂಡರೆಂದು ಗೊತ್ತಾಗುತ್ತದೆ.

ಮುಖ್ಯಮಂತ್ರಿದ್ವಯದ ಭಾಷಣಗಳು.

ಯುಗಾಂತರಗಳಲ್ಲಿ ನಮ್ಮ ಪೂರ್ವಿಕರು ರಣರಂಗದಲ್ಲಿ ಯುದ್ಧಮಾಡುವಾಗ್ಗೆ ಬಾಣಪ್ರಯೋಗಗಳಿಗೆ ಮುಂಚೆ ಇದಿರಾಳಿನಮೇಲೆ ವಾಗ್ಬಾಣಗಳನ್ನು ಪ್ರಯೋಗಿಸಿ ಒಬ್ಬರನ್ನೊಬ್ಬರು ಮೂದಲಿಸುತ್ತಿದ್ದ ಸಂಗತಿಯನ್ನು ಭಾರತ ರಾಮಾಯಣಾದಿ ಗ್ರಂಥಗಳಿಂದ ಎಲ್ಲರೂ ತಿಳಿದಿರುವರಷ್ಟೆ. ಈಗಣ ಅಧರ್ಮಯುದ್ಧಗಳಲ್ಲಿ ಮರ್ಮಭೇದಕವಾದ ಅಂಥ ರಸವಿಶಿಷ್ಟ ವಚನ ಪ್ರತಿವಚನಗಳ ಗಂಧವೇ ಇಲ್ಲ. ಫಿರಂಗಿ ತುಪಾಕಿಗಳ ಅವಿರತ ಭೋಂಕಾರಗಳಿಂದ ಶಬ್ದಮಯವಾಗಿರುವ ಈಗಣ ರಣರಂಗದಲ್ಲಿ ಅದಕ್ಕೆ ಅವಕಾಶವೂ ಇಲ್ಲ. ಯುದ್ಧಾಂಗಣದಲ್ಲಿ ಕಾದಾಡುವವರು ಸಂಬಳದ ಯೋಧರೇ ಹೊರತು ಪ್ರಭುಗಳೂ ಅಲ್ಲ; ಮಂತ್ರೀಶ್ವರರೂ ಅಲ್ಲ. ಆದರೆ ಪಕ್ಷಪ್ರತಿಪಕ್ಷದ ಪ್ರಭುತ್ವದ ಮಂತ್ರೀಶ್ವರರುಗಳು ತಂತಮ್ಮ ರಾಜಕೀಯ ಸಭಾಂಗಣದಲ್ಲಿ ಪ್ರತಿಸ್ಪರ್ಧಿಗಳನ್ನು ಹಳಿದು ತಮ್ಮವರನ್ನು ಉಬ್ಬಿಸುವ ಅಥವಾ ಪೌರುಷವನ್ನು ಕೊಚ್ಚಿಕೊಳ್ಳುವ ಕೆಲಸವನ್ನು ಮಾತ್ರ ಮಾಡುತ್ತಲಿರುತ್ತಾರೆ. ಕಳೆದ ವಾರದಲ್ಲಿ ಜರ್ಮನರ ಮುಖ್ಯಮಂತ್ರಿಯೂ ಆಂಗ್ಲರ ಮುಖ್ಯಮಂತ್ರಿಯೂ ಈ ಕಾರ್ಯವನ್ನು ಬಲು ಬಿರುಸಿನಿಂದ ಸಾಗಿಸಿದ ವಾರ್ತೆಗಳು ಬಂದಿರುತ್ತವೆ. ಜರ್ಮನಿ ದೇಶದಲ್ಲಿ ಕಳೆದ ೮ ವರ್ಷಗಳಿಂದಲೂ ಮುಖ್ಯಮಂತ್ರಿತ್ವವನ್ನು ವಹಿಸಿ ಬಹಳ ಸಾಮರ್ಥ್ಯದಿಂದ ನೆರವೇರಿಸಿದ ಬೇತ್ಮನ್‌ಹಾಲ್ವೆಗ್ಗರಿಗೂ ಕೈಜರರಿಗೂ ಈಗ ರಾಜಕೀಯ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಬಂದುದರಿಂದ, ಅವರು ರಾಜೀನಾಮೆ ಕೊಡಲಾಗಿ ಅವರ ಸ್ಥಾನಕ್ಕೆ ಡಾಕ್ಟರ್ ಮೈಕೇಲಿಸ್‌ರವರನ್ನು ಕೈಜರರು ನಿಯಮಿಸಿಕೊಂಡರು. ಇವರು ಅಧಿಕಾರಕ್ಕೆ ಬಂದ ೫ ದಿನಗಳೊಳಗಾಗಿ ತಮ್ಮ ರಿಚ್‌ಸ್ಟಾಗ್ ಸಭೆಯಲ್ಲಿ ಒಂದು ಉಪನ್ಯಾಸಮಾಡಿದರು. ಅದರಲ್ಲಿ-ಜರ್ಮನರು ತಮ್ಮ ವಿಜಯಾರ್ಥವಾಗಿ ದೌರ್ಜನ್ಯದಿಂದ ಒಂದು ದಿನವೂ ಯುದ್ಧಮಾಡಲಾರರು. ಉದ್ದಿಷ್ಟಕಾರ್ಯವನ್ನೆಲ್ಲಾ ಸಂಪೂರ್ಣವಾಗಿ ಸಾಧಿಸಿದವರಂತೆ ನಾವು ಶಾಶ್ವತಸಂಧಿಯನ್ನು ಮಾಡಿಕೊಳ್ಳಬೇಕು. ಜರ್ಮನ್‌ಸಾಮ್ರಾಜ್ಯದ ಎಲ್ಲೆಗಳನ್ನೆಲ್ಲಾ ನಮ್ಮ ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ಭೂಜಲಗಳಮೇಲೆಲ್ಲಾ ನಮ್ಮಧಿಕಾರವು ಯಥೇಚ್ಛವಾಗಿರುವಂತೆ ನಿಬಂಧನೆಗಳನ್ನೇರ್ಪಡಿಸಿಕೊಳ್ಳಬೇಕು. ನಾವು ಮರ್ಯಾದೆಯಿಂದ ಸಂಧಿಮಾಡಿಕೊಳ್ಳುತ್ತೇವೆಂದು ಹೇಳಿದರೂ ಶತ್ರುಗಳು ಅಂಗೀಕರಿಸಲಿಲ್ಲ. ಹೀಗಾದಮೇಲೆ ಇನ್ನು ನಾವು ಮತ್ತೆ ಅವರಿಗೆ ಸಂಧಿಸೂಚನೆಯನ್ನು ಮಾಡಲೇಕೂಡದು. ನಮ್ಮ ಶತ್ರುಗಳು ಜಯದ ಆಸೆಯನ್ನು ಸಂಪೂರ್ಣವಾಗಿ ಬಿಟ್ಟು, ನಮ್ಮನ್ನು ಅಡಗಿಸಿಬಿಡುತ್ತೇವೆಂದು ಅವರು ಮಾಡಿಕೊಂಡಿದ್ದ ಸಂಕಲ್ಪವನ್ನು ತ್ಯಜಿಸಿ, ನಮ್ಮೊಡನೆ ಸಂಧಿ ರಾಯಭಾರಕ್ಕೆ ಅಪೇಕ್ಷಿಸಿದಾಗ ನಾವು ಗೌರವದಿಂದ ಅವರೊಡನೆ ಸಂಧಿಪ್ರಸ್ತಾಪವನ್ನು ಮಾಡಬಹುದು. ಅಲ್ಲಿಯವರೆಗೂ ನಾವು ನೆಮ್ಮದಿಯಿಂದಲೂ ಧೈರ್ಯದಿಂದಲೂ ಸುಮ್ಮನಿರಬೇಕು. ನಮ್ಮಲ್ಲಿ ಈ ಜುಲೈ ತಿಂಗಳಿಂದಲೂ ಆಹಾರ್ಯದ ಕೊರತೆಯೇನೋ ಬಹಳ ಸಂಕಟಕರವಾಗಿದೆ. ಆದರೆ ಇದು ಬೇಗನೆ ನಿವಾರಿತವಾಗಬಹುದು. ಜರ್ಮನರು ಆಹಾರಾರ್ಥವಾಗಿ ಕಳೆದವರ್ಷ ಪಾಡುಪಟ್ಟುದಿಲ್ಲ. ಈ ವಿಷಯದಲ್ಲಿ ನಾವು ಇಂಗ್ಲೆಂಡಿನವರಿಗಿಂತಲೂ ಬಹಳ ಅದೃಷ್ಟಶಾಲಿಗಳು. ನಾವು ಹೊಸ ಜರ್ಮನಿ ದೇಶವನ್ನು ನಿರ್ಮಿಸಬೇಕು. ಶತ್ರುಗಳು ಅಂದುಕೊಳ್ಳುತ್ತಿರುವಂತೆ ಭೀತಿಯೆಂಬುದನ್ನು ಕಾಣದ ಜರ್ಮನಿ ದೇಶವನ್ನು ಏರ್ಪಡಿಸಬೇಕು. ನೀತಿ ದೈವಭಕ್ತಿಗಳಿಂದ ಕೂಡಿದ ಜರ್ಮನಿ ದೇಶವನ್ನು ಹೊಸದಾಗಿ ಏರ್ಪಡಿಸಬೇಕು. ನಮ್ಮಲ್ಲಿ ನಾವು ಪರಸ್ಪರ ವೈಷಮ್ಯವನ್ನು ಬಿಟ್ಟು ಐಕಮತ್ಯದಿಂದ ಶತ್ರುಗಳಮೇಲೆ ಯುದ್ಧಮಾಡಬೇಕು. ಇಂಗ್ಲಾಂಡಿನವರು ನಮ್ಮ ಹಡಗುಗಳನ್ನು ಸಮುದ್ರದಮೇಲೆ ಸಂಚರಿಸದಂತೆ ತಡೆಮಾಡಿದುದರಿಂದ ನಾವು ಸಬ್‌ಮೆರೀನುಗಳ ಯುದ್ಧವನ್ನಾರಂಭಿಸಬೇಕಾಯಿತು. ಆದುಕಾರಣ ಅದು ಅಂತರ್ಜಾತೀಯ ನಿಬಂಧನೆಗಳಿಗೆ ವಿರುದ್ಧವಾದುದಲ್ಲ. ಯುದ್ಧವನ್ನು ಬೇಗನೆ ಮುಗಿಯಿಸುವಂತೆ ಮಾಡಬೇಕಾದುದು ಅಗತ್ಯ. ಅಮೇರಿಕಾದವರು ಯುದ್ಧಕ್ಕೆ ನಿಂತುದರಿಂದ ನಾವು ಭಯಪಡಬೇಕಾದುದೇನೂ ಇಲ್ಲ. ಅಮೇರಿಕಾದಿಂದ ರಣರಂಗಕ್ಕೆ ಸೈನ್ಯವನ್ನು ಸಾಗಿಸುವಷ್ಟು ಹಡಗುಗಳು ಶತ್ರುಗಳಲ್ಲಿಲ್ಲವೇ ಇಲ್ಲ. ಫ್ರೆಂಚರೂ ಇಂಗ್ಲೀಷರೂ ತಮ್ಮ ಸೈನ್ಯಗಳಿಗೇ ತಕ್ಕಷ್ಟು ಆಹಾರವನ್ನು ಒದಗಿಸಲಾರದವರಾಗಿದ್ದಾರೆ. ಜರ್ಮನರು ತಾವಾಗಿ ಯುದ್ಧವನ್ನು ಯಾವಾಗಲೂ ಕೋರಿದವರಲ್ಲ. ತಮ್ಮ ಅಧಿಕಾರವನ್ನು ವಿಜೃಂಭಿಸಿಕೊಳ್ಳಲಿಕ್ಕೂ ಅವರು ಪ್ರಯತ್ನಪಟ್ಟವರಲ್ಲ. ಗೌರವವಾದ ಸಂಧಿಯು ಸಂಭವಿಸಿದ ಮರುದಿನವೇ ಯುದ್ಧವನ್ನು ಅವರು ನಿಲ್ಲಿಸಿಬಿಡುವರು. ಜರ್ಮನಿಯನ್ನು ನಾಮಾವಶೇಷಮಾಡಬೇಕೆಂಬ ಉದ್ದೇಶದಿಂದ ಮಿತ್ರಮಂಡಲಿಯವರು ಎಲ್ಲಿಯವರೆಗೆ ಭಯಪಡಿಸುತ್ತಲಿರುವರೋ ಅಲ್ಲಿಯವರೆಗೂ ಜರ್ಮನಿಯು ಯುದ್ಧಮಾಡುತ್ತಲೇ ಇರುವುದು" ಎಂದು ಮೊದಲಾಗಿ ಹೇಳಿ, ಬಹಳ ಬಡಾಯಿಯನ್ನು ಕೊಚ್ಚಿಕೊಂಡು ತಮ್ಮ ಸಭಿಕರನ್ನೂ ದೇಶೀಯರನ್ನೂ ಉಬ್ಬಿಸಿರುವರು.

ಇದಕ್ಕೆ ಆಂಗ್ಲ ಮುಖ್ಯಮಂತ್ರಿಯವರಾದ ಲಾಯಿಡ್‌ಜಾರ್ಜ್‌ರವರು ಚಪೇಟಿಕೆಗೆ ಸಮಾನವಾದ ಉತ್ತರವನ್ನು ಬಲು ಸೊಗಸಾಗಿ ಕ್ವೀನ್ಸ್ ಭವನದಲ್ಲಿ ಬೆಲ್ಜಿಯಂ ಸ್ವಾತಂತ್ರ್ಯ ದಿನೋತ್ಸವ ಸಂದರ್ಭದಲ್ಲಿ ಹೇಳಿರುವರು. ಹೇಗೆಂದರೆ—ಜರ್ಮನ್ ಮುಖ್ಯಮಂತ್ರಿ ಮೈಕೇಲಿಸ್‌ರವರು ಸಂಧಿವಿಷಯವಾಗಿ ಆಡಿರುವ ಮಾತು ಬಹಳ ಜಾಣತನದಿಂದ ಕೂಡಿದೆ. ಯುದ್ಧಪರ್ಯವಸಾನವನ್ನು ಇದಿರುನೋಡುತ್ತಾ ಉಪನ್ಯಸಿಸುವಂತೆ ಜರ್ಮನ್ ಮುಖ್ಯಮಂತ್ರಿಯವರು ಭಾಷಣಮಾಡಿದ್ದಾರೆ. ಅವರ ಉಪನ್ಯಾಸವು ಎಲ್ಲಕ್ಕೂ ಅಪ್ಪಯಿಸುವುದು. ಇದನ್ನು ಮಿತ್ರಮಂಡಲಿಯವರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಜರ್ಮನಿ ಎಲ್ಲೆಕಟ್ಟನ್ನು ಕಾಪಾಡಿಕೊಳ್ಳಬೇಕೆಂದು ಅವರಾಡಿರುವ ಮಾತುಗಳು ಫ್ರಾನ್ಸಿನ ಅಲ್ಸೇಸ್ ಲೋರೈನುಗಳಿಗೂ ಅನ್ವಯಿಸುತ್ತವೆ. ಇಂಥ ವಾಕ್ಯಗಳನ್ನವಲಂಬಿಸಿಯೇ ೧೯೧೪ ರಲ್ಲಿ ಯೂರೋಪುಖಂಡವನ್ನು ರಕ್ತದ ಮಡುವಿನಲ್ಲಿ ಮುಳುಗಿಸುವುದಕ್ಕೆ ಜರ್ಮನರು ಆರಂಭಿಸಿದ್ದರು. ಇಂಥ ಅವರ ಉದ್ದೇಶವನ್ನು ನಾವು ಬೇಗನೆ ನಿರ್ಮೂಲಮಾಡದಿದ್ದರೆ ಜರ್ಮನರು ನಿರ್ಭಯವಾಗಿ ಬೆಲ್ಜಿಯಮ್ಮನ್ನು ತಮ್ಮ ದೇಶಕ್ಕೆ ಸೇರಿಸಿಕೊಂಡುಬಿಡುವರು. ಅಲ್ಲದೆ ಕೋರ್ಲಾಂಡನ್ನೂ ಕೂಡ ವಶಪಡಿಸಿಕೊಳ್ಳುವರು. ಮತ್ತೂ ಇನ್ನೊಂದುಸಲ ಯೂರೋಪನ್ನೆಲ್ಲಾ ಭಯಂಕರ ರಕ್ತಪ್ರವಾಹದಲ್ಲಿ ಮುಳುಗಿಸಿ ಒಂದು ಪುರುಷಾಂತರದಲ್ಲಿ ಯೂರೋಪನ್ನೆಲ್ಲಾ ನಾವು ರೂಪಗಳಿಲ್ಲದಂತೆ ತೊಡೆದುಬಿಡುವರು. ಜರ್ಮನ್ ಮಂತ್ರಿಯವರ ಉಪನ್ಯಾಸವನ್ನು ಕೇಳಲಾಗಿ ಅವರು ಕಟ್ಟಕಡೆಯವರೆಗೂ ಯುದ್ಧಮಾಡುವುದಕ್ಕೆ ನಿಶ್ಚಯಿಸಿಕೊಂಡಿರುವಂತೆ ಕಾಣುತ್ತದೆ. ಬೆಲ್ಜಿಯಮ್ಮಿನ ವಿಷಯವಾಗಿ ಅವರು ಏನನ್ನೂ ಸೂಚಿಸಿಲ್ಲ. ಅವರ ಉಪನ್ಯಾಸವೆಲ್ಲಾ ಬೆಲ್ಜಿಯಮ್ಮಿನ ಹಿತಕ್ಕೆ ಬಹಳ ವಿರುದ್ಧವಾಗಿಯೇ ಇದೆ. ಅವರು ವೆಟ್ಜ್, ಸ್ಟ್ರಾಸ್‌ಬರ್ಗುಗಳನ್ನು ಅಧೀನಪಡಿಸಿಕೊಂಡು, ಲೀಜನ್ನು ವಶಮಾಡಿಕೊಂಡು, ಬೆಲ್ಜಿಯಮ್ಮಿನಲ್ಲಿ ಜರ್ಮನರಿಗೆ ಆರ್ಥಿಕಸೌಕರ್ಯವನ್ನುಂಟುಮಾಡಿಕೊಳ್ಳುವುದಕ್ಕಾಗಿ ಆಂಟ್ವರ್ಪಿನಲ್ಲಿ ಪ್ರಭುತ್ವಪರಿಪಾಲನವನ್ನು ಪ್ರವೇಶಗೊಳಿಸಬೇಕೆಂದಿದ್ದಾರೆ. ಆದರೆ ಬೆಲ್ಜಿಯಮ್ಮಿಗೆ ಸ್ವೇಚ್ಛಾಸ್ವಾತಂತ್ರ್ಯವನ್ನು ಉಂಟುಮಾಡಿಕೊಡುವುದಕ್ಕೆ ಮಿತ್ರಮಂಡಲಿಯವರು ಕಂಕಣಕಟ್ಟಿಕೊಂಡಿದ್ದಾರೆ. ಬೆಲ್ಜಿಯಮ್ಮು ಸ್ವತಂತ್ರ ರಾಜ್ಯವಾಗಿ ಪರಿಣಮಿಸಲೇಬೇಕು. ಜರ್ಮನ್ ಮಂತ್ರಿಯ ಉಪನ್ಯಾಸದಿಂದಲಾದರೋ—ಅವರು ಬೆಲ್ಜಿಯಮ್ಮಿಗೆ ಸ್ವಾತಂತ್ರ್ಯವನ್ನು ಕೊಡುವುದು ಸುಳ್ಳು; ಯೂರೋಪಿನಲ್ಲಿ ಶಾಂತಿಸ್ಥಾಪಿತವಾಗುವುದೆಂಬುದು ಬರಿಯ ಭ್ರಮೆ; ಎಂಬ ವಿಷಯವು ವ್ಯಕ್ತವಾಗಿರುವುದು. ಯೂರೋಪುಖಂಡವು ತನ್ನ ಪುತ್ರರ ರಕ್ತವನ್ನು ರಣರಂಗಕ್ಕೆ ಸುಮ್ಮನೆ ಧಾರೆಯೆರೆಯುತ್ತಲಿಲ್ಲ. ತನ್ನ ಮಾಯೋಪಾಯದಿಂದ ಜರ್ಮನ್ ಪ್ರಜೆಗಳನ್ನು ಮೋಸಗೊಳಿಸುವುದಕ್ಕಾಗಿ ಜರ್ಮನ್ ಮಂತ್ರಿಯು ಪ್ರಯತ್ನಿಸಿದ್ದಾರೆ. ಅವರ ಉದ್ದೇಶಗಳೆಲ್ಲಾ ಕೊನೆಸಾಗುವುದಿಲ್ಲ. ಭಯಂಕರವಾಗಿದ್ದ ೬ ವಾರಗಳು ಕಳೆದುಹೋದುವು. ಸಬ್‌ಮೆರೀನುಗಳ ಹಾವಳಿಯನ್ನು ನಾವು ಅಡಗಿಸುತ್ತಿದ್ದೇವೆ. ಜರ್ಮನಿಯಿಂದ ಬಾಗ್ದಾದಿಗೆ ಲೋಹಮಾರ್ಗವನ್ನು ಹಾಕಬೇಕೆಂದಿದ್ದ ಜರ್ಮನರ ಉದ್ದೇಶವು ವಿಫಲವಾಯಿತು. ಜಪ್ಪಿಲ್ಲಿನುಗಳ ಗತಿಯೇನಾಗುವುದೋ! ಜರ್ಮನರ ಸಬ್‌ಮೆರೀನುಗಳ ದೌರ್ಜನ್ಯದಿಂದ ನಾವು ಬಹುಕಾಲ ಬದುಕಲಾರೆವೆಂದು ಸುದ್ದಿಯಿರುವುದು! ಮೈಕೇಲಿಸ್‌ರವರು ಈಗತಾನೇ ಮಂತ್ರಿಪದವಿಗೆ ಬಂದಿದ್ದಾರೆ. ಆದರೆ ಈ ಆರಂಭಕಾಲದಲ್ಲೇ ನಾವು ಅವರಿಗೆ ನಮ್ಮ ಉದ್ದೇಶಗಳೆಲ್ಲಾ ಬರಿಯ ಭ್ರಮೆಯೆಂತಲೂ ಅವೊಂದೂ ಕೊನೆಸಾಗಲಾರವೆಂತಲೂ ಹೇಳಬೇಕಾಗಿದೆ. ನಾವು ಸ್ವದೇಶದಲ್ಲೇ ವಿಸ್ತಾರವಾಗಿ ಆಹಾರ್ಯಧಾನ್ಯಗಳನ್ನು ಬೆಳೆಯುತ್ತಿದ್ದೇವೆ. ನಮ್ಮ ಹಡಗುಗಳು ಮೊದಲಿನಷ್ಟು ಈಗ ಸಮುದ್ರದಲ್ಲಿ ಮುಳುಗುತ್ತಲಿಲ್ಲ. ನಮ್ಮಲ್ಲಿ ಹೊಸ ಹಡಗುಗಳು ಬಹಳ ಹೆಚ್ಚಾಗಿ ನಿರ್ಮಿಸಲ್ಪಡುತ್ತವೆ. ೧೯೧೬ ನೆ ವರ್ಷದಲ್ಲಿ ಕಟ್ಟಿದ ಹಡಗುಗಳಿಗೆ ೪ ಪಾಲು ಹೆಚ್ಚಾಗಿ ೧೯೧೭ ರಲ್ಲಿ ಕಟ್ಟಿರುವೆವು. ನಾವು ಸ್ವಭಾವವಾಗಿ ಮುಂದಗಮನವುಳ್ಳವರು. ಆದರೂ ನಾವು ಕೆಲಸವನ್ನು ಆರಂಭಿಸಿದರೆ ನಮ್ಮನ್ನು ಯಾರೂ ಹಿಂದುಹಾಕಲಾರರು. ನಮ್ಮ ಸಾಮರ್ಥ್ಯವನ್ನೂ ಮನೋಧೈರ್ಯವನ್ನೂ ಪರಿಶ್ರಮವನ್ನೂ ಜರ್ಮನರು ಇನ್ನೂ ಸರಿಯಾಗಿ ಗ್ರಹಿಸಲಾರದೆಹೋದರು. ನಮ್ಮನ್ನು ಅವರು ತಿಂಡಿಯಿಲ್ಲದೆ ಹೊರಳಾಡುವಂತೆ ಮಾಡುವರಂತೆ! ನಾನು ಮುಖ್ಯಮಂತ್ರಿಯಾದುದರಿಂದ ವಸ್ತುಸ್ಥಿತಿಯನ್ನು ಮರೆಮಾಚದೆ ಹೇಳಬೇಕಾಗುತ್ತದೆ. ನಮ್ಮ ಆಹಾರ ಪರಿಶೀಲನಾಧಿಕಾರಿಯ ಮತ್ತೂ ನೌಕಾ ವ್ಯಾಪಾರಾಧಿಕಾರಿಯ ಸಾಮರ್ಥ್ಯದಿಂದ ನಮಗೆ ಆಹಾರ್ಯವಸ್ತು ಸೌಕರ್ಯಗಳು ಬಹಳ ಚೆನ್ನಾಗಿವೆ. ನಮಗೆ ಆಹಾರವು ಸಾಲದಿರುವಂತೆ ಶತ್ರುಗಳು ಎಂದಿಗೂ ಮಾಡಲಾರರು. ನಮ್ಮಲ್ಲಿ ವ್ಯವಸಾಯಾಭಿವೃದ್ಧಿ ಪ್ರಯತ್ನವು ಚೆನ್ನಾಗಿ ನಡೆಯುತ್ತಿದೆ. ೧೯೧೮ ನೆ ವರ್ಷದಲ್ಲಿ ನಾವು ಆಹಾರವಿಷಯವಾಗಿ ಸ್ವಲ್ಪವೂ ಚಿಂತೆಯಿಲ್ಲದಂತೆ ಇರಬಲ್ಲೆವು. ಪ್ರಪಂಚದಲ್ಲೆಲ್ಲಾ ಸ್ವಾತಂತ್ರ್ಯವು ಸ್ಥಾಪಿತವಾಗುವವರೆಗೂ ನಾವು ಕೈಯಲ್ಲಿ ಆಯುಧವನ್ನು ಹಿಡಿದು ಕಾಯುತ್ತಲೇ ಇರುವೆವು. ಅಮೇರಿಕನ್ನರಿಗೆ ಸೈನ್ಯವನ್ನು ಕಳುಹಿಸುವುದಕ್ಕೆ ತಕ್ಕಷ್ಟು ಹಡಗುಗಳೇ ಇಲ್ಲವೆಂದು ಜರ್ಮನ್ ಮಂತ್ರಿಯು ಉಪಹಾಸಮಾಡಿರುತ್ತಾರೆ. ಯುದ್ಧಾರಂಭಕಾಲದಲ್ಲಿ ಇಂಗ್ಲೀಷರಿಗೆ ಸೈನ್ಯವೇ ಇಲ್ಲವೆಂದು ಆಗಲೂ ಜರ್ಮನರು ಹೀಗೆಯೇ ಆಡುತ್ತಿದ್ದರು. ಈಗ ನಮ್ಮ ಸ್ಥಿತಿ ಹೇಗಿದೆ? ಯುದ್ಧವನ್ನು ಎಷ್ಟುಕಾಲದವರೆಗೂ ನಡೆಯಿಸುವಂತಾಗಿದೆ. ನವನವ ಸೈನ್ಯಗಳನ್ನು ಇಂಗ್ಲೀಷರು ಕೂಡಿಸುತ್ತಲೇ ಇದ್ದಾರೆ. ಪ್ರಪಂಚದಮೇಲಿರುವ ಎಲ್ಲಾ ನೌಕಾದಳಕ್ಕಿಂತಲೂ ದೊಡ್ಡದಾದ ನೌಕಾದಳವು ಈಗಲೂ ಇಂಗ್ಲೀಷರಲ್ಲಿದೆ. ಮೂರು ವರ್ಷಗಳಿಂದಲೂ ಯುದ್ಧವು ನಡೆಯುತ್ತಿರುವುದರಿಂದ ಇಂಗ್ಲೀಷರು ಎಷ್ಟೋ ಬಳಲಿಹೋಗಿದ್ದರೂ ಹೊಸಹೊಸ ಹಡಗುಗಳನ್ನು ಸಾವಿರಾರುಗಟ್ಟಲೆ ನಿರ್ಮಿಸುತ್ತಲೇ ಇದ್ದಾರೆ. ಹೀಗಿರುವಲ್ಲಿ ಇಂಗ್ಲೆಂಡಿಗಿಂತ ಎರಡುಭಾಗ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿ, ಎಂದಿಗೂ ಕೊರತೆಗೊಳ್ಳದಷ್ಟು ಸಹಜವಸ್ತು ಸಂಪತ್ತಿಯುಳ್ಳ ಅಮೇರಿಕಾದವರೇ ಹಿಂದೆಗೆಯುವರು? ಡಾ|| ಮೈಕೇಲಿಸ್‌ರವರು ಮಾತ್ರ ಯುದ್ಧವು ಮುಗಿಯುವವರೆಗೂ ಬದುಕಿದ್ದರೆ ಅವರು ತಮ್ಮ ಈಗಣ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳದೆ ಇರಲಾರರೆಂದು ನಾನು ಹೇಳಬೇಕಾಗುತ್ತದೆ. ಆಗ ಇವರು ಮತ್ತೊಂದು ವಿಧವಾಗಿ ಉಪನ್ಯಾಸಮಾಡುವರು. ಅದಕ್ಕಾಗಿ ನಾವೆಲ್ಲರೂ ಕಾದುಕೊಂಡಿರುತ್ತೇವೆ. ಮತ್ತು ಅದಕ್ಕಾಗಿಯೇ ಯುದ್ಧಮಾಡುತ್ತಲಿದ್ದೇವೆ.

ಮಾತೃದೇಶದ ಸ್ವಾತಂತ್ರ್ಯರಕ್ಷಣೆಗಾಗಿ ಜರ್ಮನರು ಯುದ್ಧಮಾಡುತ್ತಿರುವರೆಂದು ಈಗತಾನೇ ಒಂದು ಜರ್ಮನ್ ಪತ್ರಿಕೆಯು ಬರೆಯಲಾರಂಭಿಸಿದೆ. ಇದು ಎಂದಿಗೂ ನಿಜವಲ್ಲ. ಸ್ವೇಚ್ಛಾವೃತ್ತಿಯುಳ್ಳ ಜರ್ಮನಿಯೆಂಬರೆ ನಮಗೆಲ್ಲರಿಗೂ ಇಷ್ಟವೇ. ಜರ್ಮನರ ಸ್ವೇಚ್ಛಾವೃತ್ತಿಗೆ ಶತ್ರುಗಳು ಅವರ ಪರಿಪಾಲಕರೇ ಹೊರತು ಬೇರೊಬ್ಬರಲ್ಲ. ಸ್ವೇಚ್ಛಾವೃತ್ತಿಯುಳ್ಳ ಜರ್ಮನರೊಡನೆ ನಾವು ಸಂಧಿಮಾಡಿಕೊಳ್ಳುವುದಕ್ಕೆ ಇಚ್ಛೈಸುತ್ತೇವೆ. ಆದರೆ ನಿರಂಕುಶಾಧಿಕಾರದಿಂದ ಪ್ರಬಲಿಸುತ್ತಲಿರುವ ಜರ್ಮನರೊಡನೆ ಸಂಧಿಮಾಡಿಕೊಳ್ಳುವುದು ಮಾತ್ರ ಅಸಂಭವವು. ಅದನ್ನು ನಾವು ಅಂಗೀಕರಿಸುವುದಿಲ್ಲ. ಸ್ವೇಚ್ಛಾವೃತ್ತಿಯುಳ್ಳ ಪ್ರಜಾಪ್ರಭುತ್ವವಾದಿಗಳಿಗೂ ಸಾಂಗ್ರಾಮಿಕ ನಿರಂಕುಶಾಧಿಕಾರಿಗಳಿಗೂ ಈಗ ಪ್ರಪಂಚದಲ್ಲಿ ಯುದ್ಧವು ನಡೆಯುತ್ತಿದೆ. ಇದೇ ಪರಮರಹಸ್ಯವು. ಮಾನವ ಸ್ವಾತಂತ್ರ್ಯನಿಮಿತ್ತವಾಗಿ ಹೋರಾಡುತ್ತಲಿರುವ ಮಿತ್ರಮಂಡಲಿಯವರೊಡನೆ ನಿರಂಕುಶಾಧಿಕಾರವುಳ್ಳ ಜರ್ಮನರು ಯುದ್ಧಮಾಡುತ್ತ ಹತರಾಗುತ್ತಿದ್ದಾರೆ. ಸ್ವದೇಶ ಸ್ವೇಚ್ಛಾ ಸ್ವಾತಂತ್ರ್ಯರಕ್ಷಣೆಗಾಗಿ ಬೆಲ್ಜಿಯಂ, ಫ್ರಾನ್ಸು, ರಷ್ಯಾ ದೇಶಗಳ ಸೈನಿಕರು ತಮ್ಮ ಪ್ರಾಣಗಳನ್ನು ಬಲಿಕೊಡುತ್ತಿದ್ದಾರೆ. ಪ್ರತಿಯೊಬ್ಬ ಆಂಗ್ಲೇಯ ಅಮೇರಿಕನ್ ಪೋರ್ಚುಗೀಸ್ ಸೈನಿಕನೂ ಕೂಡ ಇತರರ ಜತೆಗೆ ತಾವೂ ಅಂತರ್ಜಾತೀಯ ಸ್ವಾತಂತ್ರ್ಯನಿಮಿತ್ತವಾಗಿಯೂ ನ್ಯಾಯಕ್ಕಾಗಿಯೂ ಯುದ್ಧಮಾಡುತ್ತಿರುವೆವೆಂದು ಗ್ರಹಿಸುತ್ತಲಿದ್ದಾನೆ." ಹೀಗೆಂದು ಲಾಯಿಡ್ ಜಾರ್ಜರವರು ದಯೆದಾಕ್ಷಿಣ್ಯವಿಲ್ಲದಂತೆ ಜರ್ಮನ್ ಮಂತ್ರಿಯ ಕುಯುಕ್ತಿಯ ಭಾಷಣವನ್ನೆಲ್ಲಾ ಖಂಡಿಸಿ ಮಾತನಾಡಿರುತ್ತಾರೆ. ಇದನ್ನು ಆಂಗ್ಲದೇಶ ಪತ್ರಿಕೆಗಳೆಲ್ಲಾ ಹೇಳಿಕೊಂಡು ಲಾಯಿಡ್ ಜಾರ್ಜರನ್ನು ಕೊಂಡಾಡುತ್ತಿವೆ.

ಇತರವಿಷಯಗಳು.

ಮರಳಿ ಯುದ್ಧವ್ಯಯಕ್ಕಾಗಿ ೬೫ ಕೋಟಿ ಪೌನುಗಳ ಸಾಲವನ್ನು ಮಾಡಲು ಇಂಗ್ಲೀಷ್‌ಪಾರ್ಲಿಮೆಂಟಿನ ಅನುಮತಿಯನ್ನು ಬೊನರ್ಲಾರವರು ಕೇಳಿ ಪಡೆದರು.

ಕಳೆದ ವಾರದಲ್ಲಿ ಮತ್ತೆ ಶತ್ರುಗಳ ೧೬ ವಿಮಾನಗಳು ಲಂಡನ್ ಪಟ್ಟಣದಮೇಲಕ್ಕೆ ಹಗಲಹೊತ್ತಿನಲ್ಲೇ ಬಂದುವು. ಕೂಡಲೇ ಎಚ್ಚರಿಕೆಯ ಗುಂಡುಗಳು ಹಾರಿಸಲ್ಪಟ್ಟುದರಿಂದ ಪ್ರಜೆಗಳೆಲ್ಲಾ ಸುರಕ್ಷಿತಸ್ಥಲಗಳ್ಗೆ ಸೇರಿದರು. ಮತ್ತೂ ಆಂಗ್ಲವಿಮಾನಗಳು ಥಟ್ಟನೆ ೧೦ ಸಾವಿರ ಅಡಿಯಮೇಲಕ್ಕೆ ಆಕಾಶದಲ್ಲಿ ಹಾರಿ ಶತ್ರುವಿಮಾನಗಳಮೇಲೆ ಯುದ್ಧಕ್ಕೆ ಆರಂಭಿಸಿದುದರಿಂದಅವು ತಲೆತಪ್ಪಿಸಿಕೊಂಡು ಓಡಿದುವು. ಶತ್ರುವಿಮಾನಗಳು ಲಂಡನ್ನಿನಕಡೆಗೆಬರುವಾಗ್ಗೆ ದಾರಿಯಲ್ಲಿ ಒಂದೆರಡು ಗ್ರಾಮಗಳಮೇಲೆ ಸಿಡಿಮದ್ದುಗಳನ್ನಿಟ್ಟುದರಿಂದ ೧೧ ಮಂದಿ ಸತ್ತು ೨೬ ಮಂದಿಗಳು ಗಾಯಗೊಂಡರು.

ಭರತಖಂಡದ ವೃತ್ತಾಂತಗಳು.

ಕಳೆದ ತಾ ೧೮ ರವರೆಗೆ ಭರತಖಂಡದ ಯುದ್ಧನಿಧಿಕ್ಕೆ 47096283 ರೂ. ಗಳು ಕೂಡಿದ್ದುವು.

ಕಳೆದ ತಾ|| ೧೬ ರವರೆಗೆ ಭರತಖಂಡದ ದೇಶರಕ್ಷಕ ಸೈನ್ಯಕ್ಕೆ ೧೭೪೦ ಮಂದಿಗಳು ಸೇರಿರುವರು.

ಆನಿಬೆಸೆಂಟಮ್ಮನವರ ಸಹಾಯಾರ್ಥವಾಗಿ ಕೂಡಿಸಲ್ಪಡುತ್ತಲಿರುವ ಫಂಡಿಗೆ ಕಳೆದ ತಾ|| ೨೪ ರವರೆಗೆ ೨೮೩೩೩-೯-೬ ರೂ.ಗಳು ಕೂಡಿದ್ದುವು.

ಜುಲೈ ತಾ|| ೧೪ ಕ್ಕೆ ಕಡೆಯಾದ ೧ ವಾರಕಾಲದಲ್ಲಿ ಭರತಖಂಡದಲ್ಲೆಲ್ಲಾ ೨೩೩೦ ಮಂದಿಗೆ ಪ್ಲೇಗು ತಗುಲಿ ೧೬೧೬ ಮಂದಿಗಳು ಮೃತರಾದರು.

ಕಳೆದ ಜೂನ್ ತಿಂಗಳೊಂದರಲ್ಲಿ ಅಮೇರಿಕಾದಿಂದ ಹೊರಕ್ಕೆ 6812400 ಔನ್ಸುಗಳ ತೂಕದ ಬೆಳ್ಳಿಯು ಸಾಗಿಹೋಯಿತು. ಅದರಲ್ಲಿ ಹೆಚ್ಚು ಭಾಗವು ಭರತಖಂಡಕ್ಕೂ ಚೀನಾದೇಶಕ್ಕೂ ಸಾಗಿಬಂದಿದೆ.

ಭರತಖಂಡದ ಒಂದು ವರ್ತಕಸಂಘದವರು ಬರ್ಮಾದ ಕಾಡುಗಳಲ್ಲಿ ಕಾಗದದ ನಿರ್ಮಾಣಕ್ಕೆ ಉಪಯೋಗಿಸುವ ಬಿದಿರನ್ನು ಕಡಿದು ತೆಗೆದುಕೊಳ್ಳಲಿಕ್ಕೆ ೫ ವರ್ಷ ಕಾಲದವರೆಗೆ ಗುತ್ತಿಗೆ ಪಡೆದುಕೊಂಡಿದ್ದಾರೆ.

ಮದ್ರಾಸಿನಲ್ಲಿ ಶ್ವಾಸಕಾಸ ರೋಗ ಚಿಕಿತ್ಸಾರ್ಥವಾಗಿ ಒಂದು ವೈದ್ಯಶಾಲೆಯನ್ನು ಕಟ್ಟಲು ಅಲ್ಲಿಯ ಗೌರ್ನರವರಿಂದ ಶಂಕುಸ್ಥಾಪನ ಮಹೋತ್ಸವವು ನಡೆಯಿಸಲ್ಪಟ್ಟಿತು.

ಬೊಂಬಾಯಿಯ ಚೀನಾಬಜಾರ್ ರೋಡಿನಲ್ಲಿ ೪೦ ವರ್ಷ ವಯಸ್ಸುಳ್ಳ ಒಬ್ಬ ಚಿತ್ರಗಾರನು ವಿಶೇಷವಾಗಿ ಕುಡಿದು ಪ್ರಜ್ಞೆತಪ್ಪಿ ಬೀದಿಯಲ್ಲಿ ಉರುಳಾಡುತ್ತಿದ್ದನು. ಅವನ ಮೇಲೆ ಒಂದು ಮೋಟಾರು ಬಂಡಿ ಹರಿದುಹೋಯಿತು. ಕುಡಿಕನಿಗೆ ದೀರ್ಘನಿದ್ರೆಯೇ ಸಂಭವಿಸಿತು. ರಕ್ತಮಯವಾಗಿ ಬಿದ್ದಿದ್ದ ಶವವನ್ನು ಪೊಲೀಸರು ಕಂಡು ಮುಂದಣ ಕೆಲಸಮಾಡಿದರು.

೬೦ ಮಂದಿಗಳನ್ನು ಕುಳ್ಳಿರಿಸಿಕೊಂಡು ಹೋಗಬಹುದಾಗಿದ್ದ ದೋಣಿಯಲ್ಲಿ ದುಡ್ಡಿನಾಸೆಗಾಗಿ ೧೭೦ ಮಂದಿಯನ್ನು ಕುಳ್ಳಿರಿಸಿಕೊಂಡು ಒಬ್ಬ ಅಂಬಿಗನು ಗಂಗಾನದಿಯನ್ನು ದಾಟುತ್ತಿರುವಾಗ ಹೆಚ್ಚು ತೂಕದಿಂದ ದೋಣಿಯು ಮುಳುಗಿಹೋಯಿತು. ೨೦ ಮಂದಿ ಮಾತ್ರ ಈಜಿಕೊಂಡು ದಡವನ್ನು ಸೇರಿದರು. ಉಳಿದವರು ಮೃತರಾದರು. ಪೊಲೀಸರಿಗೆ ೪೮ ಹೆಣಗಳು ಸಿಕ್ಕಿದುವು. ಅಂಬಿಗನಿಗೂ, ದೋಣಿಯ ಗುತ್ತಿಗೆದಾರನಿಗೂ ಸಬ ದಂಡಾಧಿಕಾರಿಗಳು ಒಂದೊಂದುವರ್ಷ ಕಠಿನಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ಈಗಣ ಯುದ್ಧದಿಂದ ವಿದೇಶೀಯ ವಸ್ತುಗಳು ಭರತಖಂಡಕ್ಕೆ ಬರುವುದು ಕಡಿಮೆಯಾಗಿಹೋಗಿರುವುದರಿಂದ ಈ ದೇಶದ ವಸ್ತುಗಳಿಂದಲೇ ಇಲ್ಲಿ ಕಾಲಕ್ಷೇಪಮಾಡಬೇಕಾಗಿ ಬಂದಿದೆ. ಈ ಕಾರಣದಿಂದಲಾದರೂ ದೇಶೀಯ ಕೃಷಿ ಶಿಲ್ಪವಾಣಿಜ್ಯಾದಿಗಳು ತಲೆಯೆತ್ತಿದರೆ ಸಂತೋಷವೇ. ಇಲ್ಲಿಯ ಪರಿಶ್ರಮಾಭಿವೃದ್ಧಿಗಾಗಿ ನಾನಾ ಪ್ರಯತ್ನಗಳು ಮಾಡಲ್ಪಡುತ್ತಿವೆಯಷ್ಟೆ. ಅವುಗಳಲ್ಲಿ ಬೊಂಬಾಯಿ, ಕಲ್ಕತ್ತಾ ಪಟ್ಟಣಗಳಲ್ಲಿ ಏರ್ಪಟ್ಟಿರುವ ಸ್ವದೇಶೀಯ ವಸ್ತುಪ್ರದರ್ಶನಾಲಯಗಳು ಸೇರಿರುತ್ತವೆ. ಅವುಗಳಂತೆ ಮದ್ರಾಸಿನಲ್ಲೂ ಒಂದು ಪ್ರದರ್ಶನಶಾಲೆಯನ್ನು ಬರುವ ಡಿಸೆಂಬರ್ ತಿಂಗಳಲ್ಲಿ ಏರ್ಪಡಿಸಬೇಕೆಂದು ಕಳೆದ ತಾ|| ೧೮ ರಲ್ಲಿ ಮದ್ರಾಸು ಪಟ್ಟಣದಲ್ಲಿ ಗೌರ್ನರವರ ಅಧ್ಯಕ್ಷತೆಯಿಂದ ಕೂಡಿದ್ದ ಒಂದು ಸಭೆಯಲ್ಲಿ ನಿರ್ಧರಿಸಲ್ಪಟ್ಟಿತು. ಮುಖ್ಯವಾಗಿ ಈ ಪ್ರದರ್ಶನಾಲಯದಲ್ಲಿ ನಿತ್ಯೋಪಯೋಗ್ಯಗಳಾದ ಸ್ವದೇಶೀಯ ಆಹಾರ್ಯಪಾನೀಯ ವಸ್ತುಗಳೂ, ಗೃಹೋಪಕರಣ ಸಾಮಗ್ರಿಗಳೂ, ಭಾರತೀಯರ ಕಲಾನೈಪುಣ್ಯವನ್ನೂ, ಪರಿಶ್ರಮನೈಪುಣ್ಯವನ್ನೂ ವ್ಯಕ್ತಪಡಿಸುವ ಎಲ್ಲ ತೆರದ ಕೈಗಾರಿಕೆಯ ಯಂತ್ರಗಾರಿಕೆಯ ಸಾಮಗ್ರಿಗಳೂ ಶೇಖರಿಸಲ್ಪಡುವುವು.

ರಾಜಕೀಯ ನಿರ್ಬಂಧವಾಸಕ್ಕೊಳಗಾಗಿರುವ ಆನಿಬೆಸೆಂಟಮ್ಮನವರ ಪಕ್ಷದಲ್ಲಿ ವಾದಿಸುವುದಕ್ಕೂ ಸ್ವರಾಜ್ಯಸಾಧನ ವಿಷಯಕವಾಗಿ ಕೃಷಿಮಾಡುವುದಕ್ಕೂ ಸಹ ಬ್ಯಾರಿಸ್ಟರುಗಳಾದ ಬಾಪ್ಟಿಸ್ಟಾರವರೂ ಅಯ್ಯರವರು ಸಹ ಮೊನ್ನೆ ವಾರದಲ್ಲಿ ಬೊಂಬಾಯಿಯಿಂದ ಸೀಮೆಗೆ ಪ್ರಯಾಣಮಾಡಿದರು. ಆ ಸಮಯದಲ್ಲಿ ಭಾಷಣಗಳೂ ಔತಣದೂಟವೂ ನಡೆದುವು. ಅಗ್ಗೆ ಹಿಂದುಗಳು, ಮಹಮ್ಮದೀಯರು, ಪಾರ್ಸಿಗಳು, ಆಂಗ್ಲೇಯರು, ಬ್ರಾಹ್ಮಣರು, ಬ್ರಾಹ್ಮಣೇತರರು ಮೊದಲಾದ ಅನೇಕಮಂದಿ ಪ್ರಮುಖರೂ ನಾರೀಮಣಿಯರೂ ಸೇರಿದ್ದರು. ಇವರೆಲ್ಲರಿಗೂ ಸಹಪಙ್ಕ್ತಿ ಭೋಜನವಾಯಿತು. ಶ್ರೀಯುತ ಬಾಲಗಂಗಾಧರತಿಲಕರೂ ಸಹ ಕೂಡಿ ಭೋಜನಮಾಡಿದರು. ಸಾತ್ವಿಕಾಹಾರಗಳ ಅಡುಗೆಯು ಆಂಗ್ಲಪದ್ಧತಿಯಪ್ರಕಾರ ಮಾಡಿಸಲ್ಪಟ್ಟಿದ್ದಿತು. ಸ್ವರಾಜ್ಯಸಾಧನೆಗಾಗಿ ದೇಶೀಯೈಕ್ಯವನ್ನು ಸಾಧಿಸುವುದಕ್ಕಾಗಿ ಮುಖಂಡರುಗಳು ತಮ್ಮ ಕುಲಜಾತ್ಯಾಚಾರಗಳ ಕಟ್ಟನ್ನು ಕಿತ್ತುಹಾಕುವುದಕ್ಕೂ ಹಿಂದೆಗೆಯುತ್ತಲಿಲ್ಲವೆಂಬುದು ಇದರಿಂದ ಗೊತ್ತಾಗುತ್ತದೆ. ಕಾರ್ಯ ಸಾಧಿಸಿದನಂತರವೂ ಇಂಥ ಬುದ್ಧಿಯೇ ಇರುವುದಾದರೆ ದೇಶಕ್ಕೆ ಕ್ಷೇಮವೇ ಸರಿ.

ಚಂಗಲ್ಪಟ್ಟು ಜಿಲ್ಲಾ ಮಧುರಾಂತಕ ತಾಲ್ಲೂಕಿಗೆ ಸೇರಿದ ತಿರುಮುಕೂಡಲು ಗ್ರಾಮದಲ್ಲಿರುವ ವೆಂಕಟೇಶ್ವರ ದೇವಾಲಯದ ಗೋಡೆಯ ಕಲ್ಲಿನಮೇಲಿರುವ ಒಂದು ಶಾಸನವು ಕ್ರಿ.ಶ. ೧೦೬೭ ನೆ ವರ್ಷದಲ್ಲಿ ವೀರರಾಜೇಂದ್ರ ಚೋಳನಿಂದ ಹಾಕಿಸಲ್ಪಟ್ಟುದು. ಇದರಲ್ಲಿ ದೇವತಾ ಕಾರ್ಯಕ್ಕೆ ಮಾಡಲ್ಪಟ್ಟ ದಾನಗಳು ವಿವರಿಸಲ್ಪಟ್ಟಿರುವುವಲ್ಲದೆ ಪಾಠಶಾಲೆಯಲ್ಲಿ ಓದುವ ವಿದ್ಯಾರ್ಥಿಗಳ ಆರೋಗ್ಯ ಸಂರಕ್ಷಣಾರ್ಥವಾಗಿ "ಆತುರಾಲಯವು, ಸಂಸ್ಥಾಪಿಸಲ್ಪಟ್ಟು, ಅದರಲ್ಲಿ ೧೫ ಮಂದಿ ರೋಗಿಗಳ ಚಿಕಿತ್ಸೆಗೆ ತಕ್ಕಷ್ಟು ವಸತಿ ಮೊದಲಾದ ಅನುಕೂಲ್ಯಗಳು ಕಲ್ಪಿಸಲ ಪಡಬೇಕೆಂತಲೂ, ಅದರಲ್ಲಿ ಒಬ್ಬ ಕಾಯಚಿಕಿತ್ಸಕನೂ, ಒಬ್ಬ ಶಲ್ಯಚಿಕಿತ್ಸಕನೂ; ಇಬ್ಬರು ಪರಿಚಾರಕ ಪುರುಷರೂ, ಇಬ್ಬರು ಪರಿಚಾರಕ ಸ್ತ್ರೀಯರೂ, ಒಬ್ಬ ಸೇವಕಪುರುಷನೂ, ಒಬ್ಬ ದ್ವಾರಪಾಲಕನೂ ಇರಬೇಕೆಂತಲೂ, ಅವರಿಗೆಲ್ಲಾ ಇಷ್ಟಿಷ್ಟು ಸಂಬಳಗಳನ್ನು ಕೊಡಬೇಕೆಂತಲೂ ಬರೆಯಲ್ಪಟ್ಟಿರುವುದಲ್ಲದೆ, ಅಲ್ಲಿ ಇಡಬೇಕಾದ ನಾನಾವಿಧ ಲೇಹ್ಯ ರಸಾಯನ ತೈಲ ಘುಟಿಕಾ ಘೃತವರ್ತಿ ಮೊದಲಾದುವುಗಳ ಪರಿಮಿತಿ ಮೊದಲಾದುವುಗಳೆಲ್ಲಾ ವಿವರಿಸಲ್ಪಟ್ಟಿವೆಯಂತೆ. ಇದರಿಂದ ಸುಮಾರು ೯೦೦ ವರ್ಷಗಳಿಗೆ ಭರತಖಂಡದಲ್ಲಿ ವಿದ್ಯಾರ್ಥಿಗಳ "ಹಾಸ್ಪಿಟಲು" ಎಷ್ಟು ವ್ಯಾಪಕಾವಸ್ಥೆಯಲ್ಲಿದ್ದಿತೆಂಬುದು ವ್ಯಕ್ತವಾಗುವುದು. ಮತ್ತು ಕಡಪ ಜಿಲ್ಲೆಯ ನಂದಲೂರು ಸೌಮ್ಯನಾಥದೇವಾಲಯದ ಒಂದು ಶಾಸನದಲ್ಲಿ ಇಸುಬೋಲು ಎಂಬ ಗ್ರಾಮದ ನಿವಾಸಿಗಳು ಸಾಂಕ್ರಾಮಿಕವಾದ ಮಹಾಮಾರೀಜ್ವರಕ್ಕೆ ಹೆದರಿ ಪೆರಂಗಂಡೂರು ಎಂಬ ಗ್ರಾಮದಲ್ಲಿ ಗುಡಿಸಲನ್ನು ಕಟ್ಟಿಕೊಂಡು ವಾಸಿಸುತ್ತಿದ್ದರೆಂಬ ಸಂಗತಿಯು ಬರೆಯಲ್ಪಟ್ಟಿರುವುದಂತೆ. ಇದು ಕ್ರಿ. ಶ. ೧೧೯೧ ನೆಯ ವರ್ಷದಲ್ಲಿ ಬರೆಯಲ್ಪಟ್ಟುದು. ಇದರಿಂದ ಪ್ಲೇಗಿನ ಹಾವಳಿಯು ಆಗ್ಗೂ ಇದ್ದಿತೆಂತಲೂ, ಊರುಬಿಟ್ಟು ಗುಡಿಸಲನ್ನು ಕಟ್ಟಿಕೊಳ್ಳುವುದು ಹೊಸದೇನೂ ಅಲ್ಲವೆಂತಲೂ ವ್ಯಕ್ತವಾಗುವುದು.

ಮೊಟ್ಟಮೊದಲು ಭರತಖಂಡದ ಸೈನ್ಯವು ಫ್ರಾನ್ಸ್ ರಣರಂಗಕ್ಕೆ ಹೋದಾಗ್ಗೆ ಆ ಸೈನ್ಯವು ಸರ್ ಜೇಮ್ಸ್ ವಿಲ್ಕಾಕ್ಸ್ ಎಂಬ ದಳಪತಿಯ ಆಧಿಪತ್ಯದಿಂದ ನಡೆಯಿಸಲ್ಪಡುತ್ತಿದ್ದಿತು. ಪಂಜಾಬಿನ ದೇಶಭಕ್ತರಾದ ಸಂತ್ ನಿಹಾಲ್ ಸಿಂಗ್‌ರವರು ಕಳೆದ ಏಪ್ರಿಲ್ ತಿಂಗಳಲ್ಲಿ ಸೀಮೆಯೊಳಗೆ ಸರ್ ವಿಲ್ಕಾಕ್ಸರನ್ನು ಕಂಡು ಭಾರತ ಸೈನ್ಯದ ಯೋಗ್ಯತೆಯ ವಿಷಯವನ್ನು ಕುರಿತು ಕೆಲವು ಪ್ರಶ್ನೆಮಾಡಲಾಗಿ ಅವರು ಕೊಟ್ಟ ಉತ್ತರವು ಭಾರತೀಯರಿಗೆಲ್ಲಾ ಪ್ರೋತ್ಸಾಹಕರವೂ ಸಂತೋಷಕರವೂ ಆಗಿರುವುದು. ಅದೇನೆಂದರೆ—"ಭಾರತೀಯರು ಧೈರ್ಯವಂತರಾದರೂ ಯೂರೋಪುಸೈನಿಕರನ್ನು ಪ್ರತಿಭಟಿಸಿ ಯುದ್ಧಮಾಡುವರೆಂಬ ಧೈರ್ಯವು ಮೊದಲು ನನಗಿರಲಿಲ್ಲ. ಆದರೆ ಇವರು ಬಹುದೂರ ಸಮುದ್ರಪ್ರಯಾಣಮಾಡಿ ಆಲಸಿ ಬಂದಿದ್ದರೂ, ನೀರುತುಂಬಿದ್ದ ಕಂದಕಗಳಲ್ಲಿ ನಿಂತು ಮಂಜಿನ ಬಾಧೆಯನ್ನು ಸೈರಿಸಿಕೊಂಡು ತಕ್ಕಷ್ಟು ಉತ್ತಮವಾದ ಗುಂಡು ಆಯುಧ ಮೊದಲಾದುವುಗಳ ಸಹಾಯವಿಲ್ಲದಿದ್ದರೂ ಜರ್ಮನರಮೇಲೆ ಬಹು ಶೌರ್ಯಕರವಾಗಿ ಹೋರಾಡಿದುದನ್ನು ನೋಡಿ ನನ್ನ ಸಂಶಯವೆಲ್ಲಾ ದೂರವಾಯಿತು. ನ್ಯೂಷಾಪೆಲ್ಲಿನಹತ್ತಿರ ಇವರು ಮಾಡಿದ ಯುದ್ಧದ ವಿವರಣವು ಪ್ರಪಂಚವಿರುವವರೆಗೂ ಸರ್ವರಿಂದಲೂ ಆಶ್ಚರ್ಯಸಂತೋಷಗಳಿಂದ ಓದಲ್ಪಡುತ್ತಿರುವುದು. ಪ್ಯಾರಿಸ್ಸಿನಕಡೆಯಿಂದ ಶತ್ರುಗಳನ್ನು ಹಿಮ್ಮೆಟ್ಟಿಸಿದ-ಕಲೆ ಪಟ್ಟಣವನ್ನು ಶತ್ರುಗಳ ಭೀತಿಯಿಂದ ರಕ್ಷಿಸಿದ ಗೌರವವು ಈ ಸೈನಿಕರಿಗೇ ಸೇರಿದುದು. ಘರ್ವಾಲ್ ಸೈನಿಕರಲ್ಲಿ ಅತ್ಯುತ್ತಮವಾದ ವಿಕ್ಟೋರಿಯಾ ಕ್ರಾಸ್ ಬಿರುದನ್ನು ಇಬ್ಬರೂ, ಇನ್ನು ಕೆಲ ಬಿರುದುಗಳನ್ನು ಅನೇಕರೂ ಪಡೆದಿರುತ್ತಾರೆ. ಸಿಕ್, ಪಠಾಣ, ಡೋಗ್ರಾ, ಮರಾಠ ಮೊದಲಾದ ಸೈನಿಕರೂ ಹಾಗೆಯೇ ಶೌರ್ಯವಂತರಾಗಿ ಯುದ್ಧಮಾಡಿ ವಿಖ್ಯಾತರಾಗಿರುವರು. ಭಾರತೀಯರಿಗೆ ತಕ್ಕ ಸೈನಿಕ ಶಿಕ್ಷಣವನ್ನು ಕೊಟ್ಟರೆ ಎಂಥ ಮಹತ್ಕಾರ್ಯವನ್ನಾದರೂ ಮಾಡಬಲ್ಲರೆಂಬುದಕ್ಕೆ ಗೂರ್ಖಾ ಸೈನ್ಯವನ್ನು ನ್ಯೂಷಾಪೆಲ್ಲಿನ ಹತ್ತಿರ ಬಹಳ ನೇರ್ಪಿನಿಂದ ನಡೆಯಿಸಿ ವಿಕ್ಟೋರಿಯಾ ಕ್ರಾಸ್ ಬಿರುದನ್ನು ಪಡೆದ ನೇಪಾಳದ ರಾಮಯೋಧ ಸಿಂಗೇ ಉದಾಹರಣರೂಪನು. ಯಾವ ಆಂಗ್ಲೇಯನೂ ಈತನಂತೆ ನೈಪುಣ್ಯದಿಂದಲೂ ಧೈರ್ಯದಿಂದಲೂ ತನ್ನ ಸೈನ್ಯವನ್ನು ನಡೆಯಿಸಲಾರನೆಂದು ಹೇಳಬಹುದು. ಭರತಖಂಡದಲ್ಲಿ ಈಗ ಸ್ವಚ್ಛಂದಸೈನ್ಯವನ್ನೇರ್ಪಡಿಸುವುದಕ್ಕೆ ಹಾಕಿರುವ ಪದ್ಧತಿಯನ್ನು ೩೬ ತಿಂಗಳ ಹಿಂದೆಯೇ ಮಾಡಿದ್ದರೆ ಬಹಳ ಪ್ರಯೋಜನವಾಗುತ್ತಿದ್ದಿತು. ಭಾರತೀಯರಿಗೆ ಕ್ರಮಕ್ರಮವಾಗಿ ಸೈನಿಕ ಶಿಕ್ಷಣವನ್ನು ಕೊಟ್ಟು ಸೈನಿಕೋದ್ಯೋಗಗಳನ್ನೂ ಅವರಿಗೆ ಕೊಡಬಹುದು. ಆದರೆ ಇದನ್ನು ತತ್‌ಕ್ಷಣವೇ ಕೊಡಲಾಗದು. ಕಾಲಕ್ರಮದಲ್ಲಿ ಭಾರತೀಯರು ಸೈನ್ಯದಲ್ಲಿ ಉನ್ನತೋದ್ಯೋಗಗಳನ್ನು ಪಡೆಯಬಲ್ಲರು."

ವಿದೇಶವೃತ್ತಾಂತಗಳು.

ರುಮೇನಿಯಾದ ಸೈನ್ಯವು ಫ್ರೆಂಚರ ಯುದ್ಧಶಿಕ್ಷಣೆಯ ಪ್ರಕಾರ ಸಂಪೂರ್ಣವಾಗಿ ತಯಾರಾಗಿ, ಸಮಗ್ರವಾದ ಯುದ್ಧಸಾಮಗ್ರಿಯೊಡನೆ ಮತ್ತೆ ಯುದ್ಧಕ್ಕೆ ಹೊರಡಲು ಸನ್ನದ್ಧವಾಗಿದೆ.

ಸಯಾಮ್‌ದೇಶವು ಜರ್ಮನಿಯಮೇಲೆ ಯುದ್ಧವನ್ನು ಪ್ರಕಟಿಸಿತು. ೧೯೮೬೫ ಟನ್ನುಗಳ ಭಾರವುಳ್ಳ ಜರ್ಮನ್ ವ್ಯಾಪಾರಿ ಹಡಗುಗಳನ್ನು ಆ ದೇಶದವರು ವಶಪಡಿಸಿಕೊಂಡುದಲ್ಲದೆ ಕೆಲ ಮಂದಿ ಜರ್ಮನರನ್ನೂ ಸೆರೆಹಾಕಿರುವರು.

ಜಪಾನರು ಈಗ ಮೋಟಾರುಬಂಡಿಗಳನ್ನು ವಿಶೇಷವಾಗಿ ನಿರ್ಮಿಸುವುದಕ್ಕೆ ಉಪಕ್ರಮಿಸಿ, ಅಮೇರಿಕಾದವರ ಬೆಲೆಗಿಂತಲೂ ಅಗ್ಗವಾಗಿ ಮಾರುತ್ತಲಿದ್ದಾರೆ. ೪ ಮಂದಿಗಳು ಕುಳಿತುಕೊಳ್ಳಬಹುದಾದ ೧೦ ಕುದುರೆಗಳ ಶಕ್ತಿಯುಳ್ಳ ಮೋಟಾರುಬಂಡಿಗಳು ಈಗ ಜಪಾನಿನಿಂದ ಮಾರಾಟಕ್ಕೆ ಬಂದಿರುತ್ತವೆ.

ತಮ್ಮ ಕೈಕೆಳಗಣ ಉದ್ಯೋಗಿಗಳಲ್ಲಿ ಒಬ್ಬರಾದ ಲಾರ್ಡ್‌ಹಾರ್ಡಿಂಜ್‌ರವರ ವಿಷಯದಲ್ಲಿ ಅನ್ಯಾಯವು ನಡೆಯಿಸಲ್ಪಡುವುದಾದರೆ ತಾವು ಸಹಿಸಲಾರೆವೆಂತಲೂ ತಾವೂ ರಾಜೀನಾಮೆಯನ್ನು ಕೊಟ್ಟುಬಿಡುವೆವೆಂತಲೂ ವಿದೇಶಾಂಗಮಂತ್ರಿಯವರಾದ ಬಾಲ್ಫರ್‌ರವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಗ್ರೀಸಿನ ಪೂರ್ವದ ರಾಜರಾದ ಕಾನ್‌ಸ್ಟಾಂಟೈನರ ಪದ್ಧತಿಯನ್ನು ಲೇಶಮಾತ್ರವೂ ಅನುಸರಿಸಲಾಗದೆಂದೂ, ಅದನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದೂ ಮಂತ್ರೀಶರಾದ ಎಂ. ವೆನಿಜುಲಾಸ್‌ರವರು ಈಗಣ ಗ್ರೀಸ್‌ಪ್ರಭುವನ್ನು ಕುರಿತು ಬಹಿರಂಗವಾಗಿ ಹೇಳಲು, ಅದಕ್ಕೆ ಅನುಮತಿಯ ಉತ್ತರವನ್ನು ಇದುವರೆಗೂ ಕೊಟ್ಟಿಲ್ಲ. ರಾಜ್ಯಾಂಗಸಭೆ ಕೂಡುವುದಕ್ಕೂ ಪ್ರಭುವು ಅಪ್ಪಣೆಕೊಟ್ಟಿಲ್ಲ.

ಮೊನ್ನೆದಿನ ಪ್ಯಾರಿಸ್‌ಪಟ್ಟಣದಲ್ಲಿ ಮಿತ್ರಮಂಡಲಿಯವರ ಒಂದು ಆಲೋಚನಸಭೆಯು ಕೂಡುವುದರಲ್ಲಿದ್ದಿತು. ಅದಕ್ಕೆ ಅಮೇರಿಕಾಕ್ಕೂ ಆಹ್ವಾನವನ್ನು ಕಳುಹಿಸಿರುವಲ್ಲಿ ಯುದ್ಧದಲ್ಲಿ ನೇರವಾಗಿ ತಮ್ಮ ದೇಶಕ್ಕೆ ಸಂಬಂಧವಿಲ್ಲದಿರುವ ಕಾರಣದಿಂದ ಈ ಸಭೆಗೆ ನಮ್ಮ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕಾದುದು ಅನವಶ್ಯಕವೆಂದೂ ಇದು ಸ್ಥಿರವಾದ ರಾಜಕೀಯ ಪದ್ಧತಿಯಲ್ಲವೆಂದೂ ಪ್ರೆಸಿಡೆಂಟ್ ವಿಲ್ಸನ್‌ರವರು ಅಪ್ಪಣೆಕೊಟ್ಟಿರುತ್ತಾರೆ.

ಮೆಸಪಟೋಮಿಯಾ ವರದಿಯ ಸಂಬಂಧವಾಗಿ ಮುಂದೆ ವಿಚಾರಣೆ ನಡೆಯಿಸುವುದನ್ನು ನಿಲ್ಲಿಸಿಬಿಡುವುದಕ್ಕೆ ಪ್ರಭುತ್ವದವರು ನಿಶ್ಚಯಿಸಿದರೆಂತಲೂ, ಸೈನಿಕರೆಲ್ಲರೂ ಸೈನಿಕಸಭೆಯವರಿಂದ ಯಥಾಪ್ರಕಾರ ವಿಚಾರಣೆಗೊಳಿಸಲ್ಪಟ್ಟು ಶಿಕ್ಷಿಸಲ್ಪಡುವರೆಂತಲೂ, ಲಾರ್ಡ್‌ಹಾರ್ಡಿಂಜ್‌ರವರ ರಾಜೀನಾಮೆಯು ಅಂಗೀಕರಿಸಲ್ಪಡಲಿಲ್ಲವೆಂತಲೂ ಪಾರ್ಲಿಮೆಂಟಿನಲ್ಲಿ ಬೊನರ್ಲಾರವರು ತಾ|| ೧೯ ರಲ್ಲಿ ಹೇಳಿರುವರು.

ಪತ್ರವ್ಯವಹಾರ.

ಮಂಜ್ರಾಬಾದು ತಾಲ್ಲೋಕು ದೋಣಿಗಾಲ್; ಒಂದು ಸಂತೋಷಕೂಟವು.

ರಾಜಸಭಾಭೂಷಣ ದಿ॥ ಬ॥ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರಿಗೆ ಅತ್ಯಂತಾ ಮೌಲ್ಯವಾದ ಸಿ. ಐ. ಇ. ಎಂಬ ಬಿರುದು ಶ್ರೀಮಚ್ಚಕ್ರವರ್ತಿ ಸಾರ್ವಭೌಮರವರಿಂದ ಲಭ್ಯವಾದ ಸಂತೋಷಕರವಾದ ವಾರ್ತೆಯನ್ನು ತಿಳಿದು 20-7-1917 ರಲ್ಲಿ ಕಾಫಿಪ್ಲಾಂಟರು, ಡಿಸ್ಟ್ರಿಕ್ಟ್ ಬೋರ್ಡು ಮತ್ತು ಪ್ರಜಾಪ್ರತಿನಿಧಿ ಮುಂತಾದುವುಗಳ ಮೆಂಬರು, ಮ॥ ಡಿ. ನಂಜೇಗೌಡರ ಅಧ್ಯಕ್ಷತೆಯಿಂದ ದೋಣಿಗಾಲ್ ಗ್ರಾಮದಲ್ಲಿ ಒಂದು ವಿನೋದಕೂಟವನ್ನು ನಡಿಸಿ ಶ್ರೀಮತ್ ಶೆಟ್ಟರವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನು ಕಳುಹಿಸಲಾಯ್ತು. ಸಿವಿಕ್ ಮತ್ತು ಸೋಷಿಯಲ್ ಸಂಬಂಧವಾಗಿ ನೆರೆದಿದ್ದ ಸಭಿಕರನ್ನು ಕುರಿತು ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಜನರ ಮನಸ್ಸನ್ನು ಸಂತೋಷಪಡಿಸಿ ಸಭಾ ಬರಖಾಸ್ತುಮಾಡಲಾಯಿತು.

ಶ್ರೀಮತ್ ಶೆಟ್ಟರವರಿಗೆ ಕಳುಹಿಸಿದ ವಿಜ್ಞಾಪನಪತ್ರಿಕೆ.

ಶ್ರೀಮತ್ ದಿ॥ ಬ॥ ಕೆ.ಪಿ. ಪುಟ್ಟಣ್ಣಶೆಟ್ಟಿ ಸಿ.ಐ.ಇ., ಯವರ ದಿವ್ಯಸನ್ನಿಧಾನಕ್ಕೆ ಮಂಜ್ರಾಬಾದು ತಾ॥ ದೋಣಿಗಾಲ್ ಕಾಫಿಪ್ಲಾಂಟರ್ ಡಿ. ನಂಜೇಗೌಡನು ಮಾಡುವ ಅನೇಕ ವಿಜ್ಞಾಪನೆಗಳು. ಮಹಾಸ್ವಾಮಿ—ತಾವು ನಮ್ಮ ಮೈಸೂರು ಸಂಸ್ಥಾನದ ಘನತರವಾದ ಅನೇಕಾನೇಕ ದೊಡ್ಡದೊಡ್ಡ ಪದವಿಯನ್ನಲಂಕರಿಸಿ ಅನಂತರ ಉಪಮಂತ್ರಿಗಳಾಗಿ ಪ್ರಜಾಸಾಮಾನ್ಯದಲ್ಲಿ ಕೇವಲ ನಿಸ್ಪೃಹರೂ, ನಿಷ್ಪಕ್ಷಪಾತಿಗಳೂ, ದಯಾರ್ದ್ರಹೃದಯರೂ ಆಗಿ ರಾಜ್ಯಭಾರವನ್ನು ನಡೆಸಿಕೊಂಡು ಬಂದುದು ಶ್ರೀಮತ್ ಮಹಾರಾಜರವರ ಮೆಚ್ಚಿಕೆಗೆ ಪಾತ್ರವಾಗಿ ರಾಜಸಭಾಭೂಷಣವೆಂಬ ಅತ್ಯಂತ ಘನತರವಾದ ಬಿರುದನ್ನು ತಾವು ಅಲಂಕರಿಸಿದ್ದಕ್ಕೆ ನನಗೂ ಮತ್ತು ನಮ್ಮ ಸಂಸ್ಥಾನದ ಪ್ರಜೆಗಳಿಗೂ ಉಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಪುನಃ ಅತ್ಯಂತ ಘನತೆಯನ್ನು ಹೊಂದಿದ ಶ್ರೀಮತ್ ಸಾರ್ವಭೌಮರವರಿಂದ ದಿವಾನ್ ಬಹದ್ದೂರ್ ಎಂಬ ಗೌರವಯುಕ್ತವಾದ ಬಿರುದು ತಮಗೆ ಲಭಿಸಿದ್ದು ನಮ್ಮಗಳ ಪುಣ್ಯೋದಯವೆಂದು ಭಾವಿಸಿಕೊಂಡು ಸಂತೋಷದಿಂದಿರುವ ಸಮಯದಲ್ಲಿ ಅತ್ಯಂತ ಶ್ರೇಷ್ಠವೂ ಉನ್ನತವೂ ಆದ ಸಿ.ಐ.ಇ., ಎಂಬ ಬಿರುದನ್ನು ತಮಗೆ ದಯಪಾಲಿಸಿರುವ ವಿಷಯದಲ್ಲಿ ನಮ್ಮಗಳೆಲ್ಲರಿಗೂ ಉಂಟಾಗಿರುವ ಸಂತೋಷಾತಿಶಯವನ್ನೂ ಗೌರವಭಾವವನ್ನೂ ತಮ್ಮಲ್ಲಿ ಅರಿಕೆಮಾಡಲು ತುಂಬಾ ಸಂತೋಷಪಡುತ್ತೇನೆ. ಈ ದಿವಸ ಇದೇ ದೋಣಿಗಾಲ್ ಗ್ರಾಮದಲ್ಲಿ ನಾನು ಮತ್ತು ನನ್ನ ಅಣ್ಣನವರಾದ ಕಾಫಿಪ್ಲಾಂಟರ್ ತೀ॥ ಡಿ॥ ಶಾಂತಮಲ್ಲೇಗೌಡರು ಪುರಜನರೊಡನೆ ತಳಿರುತೋರಣಗಳಿಂದ ಬಹು ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿದ್ದ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ವಾದ್ಯವೈಭವದೊಡನೆ ಹೋಗಿ ಒಂದು ಸಂತೋಷಕೂಟವನ್ನು ನಡಿಸಿ ತಮ್ಮ ಗುಣಕಥನವನ್ನು ಮಾಡಿ ತಮ್ಮಲ್ಲಿ ನಮಗಿರುವ ರಾಜಭಕ್ತಿ ವಿನಯ ವಿಶ್ವಾಸಗಳನ್ನು ಪ್ರದರ್ಶಿಸಿ ಮಹೋದಯರೂ ಮಹಾಭಿಮಾನಿಗಳೂ ಆಗಿರುವ ತಮಗೆ ಶ್ರೀಮಚ್ಚಕ್ರವರ್ತಿ ಸಾರ್ವಭೌಮರವರು ಅತ್ಯಂತ ಅಮೂಲ್ಯವಾದ ಸಿ.ಐ.ಇ., ಎಂಬ ಬಿರುದನ್ನು ದಯಪಾಲಿಸಿ ಕೊಟ್ಟಿದ್ದಕ್ಕಾಗಿ ಬಹು ಸಂತೋಷದಿಂದ ಸಾರ್ವಭೌಮರವರಿಗೂ ನಮ್ಮನ್ನಾಳುವ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹುದ್ದೂರ್ ಜಿ.ಸಿ.ಎಸ್.ಐ. ಯವರಿಗೂ ಮತ್ತು ತಮಗೂ ಸಹ ಆಯುರಾರೋಗ್ಯ ಐಶ್ವರ್ಯವನ್ನಿತ್ತು ಕಾಪಾಡಲೆಂದು ಶ್ರೀಬಸವೇಶ್ವರಸ್ವಾಮಿಗೆ ಮಹಾ ಮಂಗಳಾರತಿ ವೇಳೆಯಲ್ಲಿ ಪ್ರಾರ್ಥಿಸೋಣವಾಯಿತು. ನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳನ್ನಿತ್ತು ಶ್ರೇಯಃಪ್ರಾರ್ಥನೆ ಮಾಡುತ್ತ ಸಭಾ ಬರಖಾಸ್ತಾಯ್ತು. ಪ್ರತ್ಯಕ್ಷದರ್ಶಿ.

ಯಮ್ಮಿಗನೂರು ಗುಡಿಕಲ್ಲು ವೃತ್ತಾಂತ.

ಯಮ್ಮಿಗನೂರು ಗ್ರಾಮಕ್ಕೂ ಗುಡಿಕಲ್ಲು ಗ್ರಾಮಕ್ಕೂ, ಶಿವಮೊಗ್ಗಾ ಡಿ॥ ಚೆನ್ನಗಿರಿ ತಾ॥ ಸಂತೆ ಬನ್ನೂರು ಜವಳಿ ಅಂಗಡಿ ಹರಪನೂರು ಹಿರೇಮಠದ ಶಿವಕುಮಾರಸ್ವಾಮಿ ಶರ್ಮ ಎಂಬುವರು ವರ್ಷಂಪ್ರತಿ ಎರಡು ಮೂರು ಸಾರಿ ಜವಳೀ ಖರೀದಿಗಾಗಿ ಆಗಮಿಸುತ್ತಲೇ ಇರುವುದುಂಟು. ಪ್ರತಿಸಂವತ್ಸರವೂ ಪರೀಕ್ಷೆ ನಡೆಸುವ ಪದ್ಧತಿ ಪ್ರಕಾರ ಇದೇ ಸಂವತ್ಸರದ ಶ್ರಾವಣಮಾಸ ಪ್ರತಿಪದ ಶುಕ್ರವಾರ ಗುಡಿಕಲ್ಲು ಹಿರೇಮಠದ ಗ್ರಾಂಟು ಸ್ಕೂಲಿನಲ್ಲಿ ಅಧ್ಯಯನಮಾಡತಕ್ಕ ವಿದ್ಯಾರ್ಥಿಗಳನ್ನು ಪರೀಕ್ಷೆಮಾಡಿಸಬೇಕಾಗಿ ಗುಡಿಕಲ್ಲು ಪುರನಿವಾಸಿಗಳಾದ ನಮ್ಮಗಳ ಅಭಿಪ್ರಾಯದಂತೆ ಪ್ರಾರ್ಥಿಸಲಾಗಿ, ಎಮ್ಮಿಗನೂರಿಂದ ದಯಮಾಡಿಸಿದ ಸ್ವಾಮಿಗಳನ್ನು ತಳಿರ್ತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿರುವ ಗುಡಿಕಲ್ಲು ಪೋಸ್ಟ್ ಮಾಸ್ಟರೂ ಮತ್ತು ಅಧ್ಯಾಪಕರೂ ಆದ ಶ್ರೀ ಓಹಿಲಾರ್ಯರ ಹಿರೇಮಠದಲ್ಲಿ ಉನ್ನತಾಸನದಲ್ಲಿ ರಾರಾಜಿಸುತ್ತಿರುವ ಶೃಂಗಾರ ಮಂಟಪಮಧ್ಯದಲ್ಲಿ ಸಭಿಕರಾಗಿ ನೆರೆದಿದ್ದ ಮಾಹೇಶ್ವರರು ಹಸ್ತಲಾಘವವನ್ನಿತ್ತು ದೇದೀಪ್ಯಮಾನವಾಗಿರುವ ಉಚ್ಚಾಸನದಲ್ಲಿ ಮುಹೂರ್ತಗೊಳಿಸಿದ ತರುವಾಯ ಗುಡಿಕಲ್ಲು ಆನರರಿ ಮ್ಯಾಜಿಸ್ಟ್ರೇಟ್ ಗೌಡಪ್ಪಗೌಡರು ಎದ್ದುನಿಂತು ಅಲ್ಲಿ ಟನ್ನಸ್ವರದಿಂದ ನಮ್ಮಗಳ ಕೋರಿಕೆಯನ್ನು ಸಫಲಗೊಳಿಸುವುದಕ್ಕಾಗಿ ದಯಮಾಡಿಸಿರುವ ಗುರುವರ್ಯರನ್ನ ಈ ತರುಣ ಮತ್ತು ಪ್ರೌಢವಿದ್ಯಾರ್ಥಿಗಳ ಪರೀಕ್ಷಾ ಪ್ರಾರಂಭ ಮಹೋತ್ಸವಕಾರ್ಯಕ್ಕೆ ಶಿವಕುಮಾರಸ್ವಾಮಿಶರ್ಮರವರು ಸಭಾಧ್ಯಕ್ಷರಾಗಬೇಕೆಂತ ಬೇಡಿಕೊಂಡದ್ದಕ್ಕೆ ಹಿರೇಮಠದ ಶ್ರೀ ಓಹಿಲಾರ್ಯರು ಒಪ್ಪಿಗೆಯನ್ನು ಕೊಟ್ಟರು. ಶಾನುಭೋಗ ರಾಘವಪ್ಪನವರು ಮತ್ತು ಸ್ಟಾರ್ ಪತ್ರಿಕೆಯ ಚಂದಾದಾರರಾದ ಸಾಹುಕಾರ್ ನಂಜಪ್ಪನವರೇ ಮೊದಲಾದ ಸರ್ವ ಸಭಿಕರೂ ತಥಾಸ್ತು ಎಂದು ಕರತಾಡನ (ಚಪ್ಪಾಳೆ) ಪೂರ್ವಕ ಅನುಮೋದಿಸಿದರು. ಯಮ್ಮಿಗನೂರು ಮಹಾಜನಗಳೂ ಸಹ ಕರತಾಳನಮಾಡಿದರು. ಅನಂತರ ಸಭಾಧ್ಯಕ್ಷರಾದ ಶಿವಕುಮಾರಸ್ವಾಮಿಗಳವರು ಎದ್ದುನಿಂತು ವಿದ್ಯಾವಿಷಯದ ಮೇಲೂ ಪರೀಕ್ಷಾ ಎಂಬುವುದರ ಮೇಲೂ ಬಾಲಕರು ನಡೆಯತಕ್ಕ ಕರ್ತವ್ಯಕರ್ಮದ ಮೇಲೂ ಸಭಿಕರಿಗೆ ಈ ಕೆಳಗೆ ಕಂಡಂತೆ ಹೃದಯಂಗಮವಾಗಿ ಹಿತೋಪದೇಶಮಾಡಿದರು.

॥ಶ್ಲೋಕ॥ ವಿದ್ಯಾನಾಮನರಸ್ಯರೂಪಮಧಿಕಂ ಪ್ರಚ್ಛನ್ನ ಗುಪ್ತಂಧನಂ। ವಿದ್ಯಾಭೋಗಕರೀಯಶಸ್ಸುಖಕರೀ ವಿದ್ಯಾಗುರೂಣಾಂಗುರುಃ ॥ ವಿದ್ಯಾಬಂಧುಜನೋವಿದೇಶಗಮನೇ ವಿದ್ಯಾಪರಾದೇವತಾ । ವಿದ್ಯಾರಾಜಸು ಪೂಜ್ಯತೇನಹಿಧನಂ । ವಿದ್ಯಾವಿಹೀನಃಪಶುಃ ॥ ವಿದ್ಯಾದದಾತಿವಿನಯಂ । ವಿನಯಾದ್ಯಾತಿಪಾತ್ರತಾಂ । ಪಾತ್ರತ್ವಾದ್ಧನಮಾಪ್ನೋತಿ। ಧನಾದ್ಧರ್ಮಂತತಸ್ಸುಖಂ ॥೨॥ ವೇದಾಂತ ಜನ್ಯಂ ಯದ್‌ಜ್ಞಾನಂ ವಿದ್ಯೇತಿಪರಿಕೀರ್ತಿತಂ ॥೩॥ ಎಂಬಂತೆ ಪರೀಕ್ಷೆ ಎಂಬುವದೂ ಕೂಡ ಅಹಂಪೂರ್ವ ಮಹಂಪೂರ್ವ ಪೂರ್ವೋಽಹಂ ಪೂರ್ವೋಽಹಂ ಬಾಲಕಾಃ ಸಂಸ್ಕೃತಂ ಜ್ಞಾತ್ವಾ ಎಂಬ ಪಾಣಿನ್ಯಾಚಾರ್ಯರ ವಾಕ್ಯದಂತೆ ವಿದ್ಯಾರ್ಥಿಗಳು ಎ. ಬಿ. ಕ್ಲಾಸಿಗೆ ಚೆನ್ನಾಗಿ ಕಲಿತು ಮುಂದಿನ ಕ್ಲಾಸಿಗೆ ಹೋಗಿ ಸೇರಬೇಕೆಂತಲೂ ಒಂದು ಎರಡನೆ ತರಗತಿಯ ವಿದ್ಯಾರ್ಥಿಗಳು ಮೂರುನಾಲ್ಕನೆ ತರಗತಿಗೆ ಚೆನ್ನಾಗಿ ಕಲಿತು ನಾನು ಜಾಗ್ರತೆ ತಾನು ಜಾಗ್ರತೆ ಸೇರಬೇಕೆಂತಲೂ ತಿಳಿದು ತರುಣವಿದ್ಯಾರ್ಥಿಗಳು ಪ್ರೌಢ ಇಯತ್ತೆಗಳಿಗೆ ಸೇರುತ್ತಾರೆ. ಮತ್ತು ಪರೀಕ್ಷಾ ಶಬ್ದಾರ್ಥವು ಸುತ್ತಲೂ ಚೆನ್ನಾಗಿ ನೋಡಿ ಶಿಕ್ಷಿಕನಾಗೆಂಬರ್ಥವು ಇದೇ ಶಬ್ದಾರ್ಥವನ್ನೇ ಪಂಡಿತರು ಇನ್ನೂ ಅತಿಶಯವಾಗಿ ಹೇಳಿರುತ್ತಾರೆ. ಅಲ್ಲದೆ ಕೆಲವರು ವಿದ್ಯಾ ಎಂಬುವುದಕ್ಕೆ ಜೀವನೋಪಾಯ (ಹೊಟ್ಟೆ ಹೊರಕೊಳ್ಳುವ) ವಿದ್ಯೆಯೇ ವಿದ್ಯೆಯೆಂದು ತಿಳಿದುಕೊಂಡಿರುತ್ತಾರೆ. “ವಿಃ ಶಕ್ತಿಃ ಪರಮಾತ್ಮನೋಃ” ಎಂಬ ನಿರುಕ್ತಿಯಂತೆ ಲಿಂಗಾಂಗ ಸಾಮರಸ್ಯರೂಪವಾದ ತತ್ವಮಸಿ ಮಹಾವಾಕ್ಯವನ್ನು ಪ್ರತಿಪಾದಿಸುವದೇ ವಿದ್ಯಾಶಬ್ದಕ್ಕೆ ನೈಸರ್ಗಿಕಾರ್ಥವೆಂತಲೂ ಅಪ್ಪಣೆಕೊಡಿಸಿದ ನಂತರ, ಸದಸದ್ವಿವೇಕ ವಿಚಕ್ಷಣರಾದ ಪಂಡಿತರು ಇನ್ನೂ ಅತಿಶಯವಾಗಿ ಅಪ್ಪಣೆಕೊಡಿಸಬಹುದು. ಆದರೆ ನಾನು ಸರ್ವಜ್ಞನಲ್ಲ ಕಿಂಚಿಜ್ಞನು. ನನ್ನ ಅಲ್ಪಮತಿಗೆ ತೋಚಿದಷ್ಟು ಹೇಳುತ್ತೇನೆ. ॥ಶ್ಲೋಕ॥ ತತ್ಪದೇನೋಚ್ಯತೆಲಿಂಗಂ । ತ್ವಂಪದೇನಾಂಗಮೀರಿತಂ । ಅನಯೋರೈಕ್ಯಭಾವೋಯಂ । ಸಂಬಂಧೇಽಸಿಪದೇನಚ ॥ ಎಂಬ ಆಗಮವಚನದಂತೆ ಈ ಮಹಾವಾಕ್ಯಾರ್ಥವನ್ನೆಲ್ಲಾ ಜಿಜ್ಞಾಸುಗಳು ಸದ್ಗುರುವನ್ನು ಹೊಂದಿ ದ್ವಾದಶಾಂತ ವರ್ಷಪ್ರಯತ್ನಗಳಲ್ಲಿಲ್ಲದ ಹೊರತು ಲಭಿಸತಕ್ಕದ್ದಲ್ಲವೆಂತ ಅಪ್ಪಣೆಕೊಡಿಸಿದನಂತರ ಅಧ್ಯಕ್ಷರ ಸ್ನೇಹಿತರಾದ ದಾವಣಗೆರೆಯಲ್ಲಿರುವ ಧನುರ್ಧಾರಿ ಪತ್ರಿಕಾ ಎಡಿಟರ್ ಮಂಜಪ್ಪನವರು ಉಪಾಯನಪೂರ್ವಕ ಅರ್ಪಿಸಿದ ಸ್ವಕರ್ತವ್ಯ ಸಿದ್ಧಾಂತ, ಬುದ್ಧಿಯ ಮಾತು, ಸುಖ, ಎಂಬುವ ಪುಸ್ತಕಗಳನ್ನು ಮೊದಲು ಸಭಾಸದರಿಗೆ ಕೊಡಲು ವಿಶೇಷ ಶ್ರದ್ಧಾಭಕ್ತಿಯಿಂದ ಅಂಗೀಕರಿಸಿದರು. ತರುವಾಯ ಬಾಲಾನಾಂಸುಖಬೋಧಾಯ । ಏತದ್ಗ್ರಂಥಮುದಾಹೃತಂ ॥ ಎಂಬದಾಗಿ ಬಾಲಕರಿಗೆ ಆಶೀರ್ವದಿಸಿ, ಪ್ರಥಮತಃ ತರುಣ ವಿದ್ಯಾರ್ಥಿಗಳಿಗೂ ತಲಾ ಒಂದೊಂದರಂತೆ ಪ್ರೆಸಿಡೆಂಟರ ಸ್ವಹಸ್ತದಿಂದ ಹಂಚಲ್ಪಟ್ಟುವು. ಅನಂತರ ಕೈಲಾಸವಾಸಿ ಲೋಕಮಾನ್ಯರಾದ ಮೈಸೂರು ಯಜಮಾನ್ ವೈ. ವೀರಸಂಗಪ್ಪನವರು ವೀರಶೈವ ಜಗತ್ತಿಗೆ ಮಾಡಿದ ಮಹೋಪಕಾರದಿಂದ ದ್ವಿತೀಯ ಶಂಭುವೆನಿಸಿದ ಬಸವೇಶ್ವರಾವತಾರವೆಂತ ಹೇಳಿದರೂ ಲಿಖಿಸಿದರೂ ಅನ್ವರ್ಥಕವಾಗುತ್ತೇ ಹೊರತು ನಿರರ್ಥಕವಾಗುವುದಿಲ್ಲ. ಹ್ಯಾಗಂದರೆ ಮತಸ್ಥಾಪನಾಚಾರ್ಯರಾದ ನೀಲಕಂಠ ಶಿವಾಚಾರ್ಯ ತೋಂಟದಾರ್ಯ ಪ್ರಭೃತಿಗಳಿಂದ ವಿರಚಿತವಾದ ಉದ್ಗ್ರಂಥಗಳನ್ನು ದಿವಾಂಧರಂತೆ ಕನಸುಮನಸಿನಲ್ಲಿಯೂ ಕಾಣದ ನಾವು ಇವರ ಕಾಲದಲ್ಲಿ ಶಿರಸಾಧರಿಸಿ ನೋಡಿ ಕೃತಕೃತ್ಯರಾಗಿ ತಾಳ್ವಿಕೆಸಿದೆವು. ಮತಸ್ಥಾಪನಾಚಾರ್ಯರು ಆದ್ದರಿಂದಲೇ ಸ್ವಕೀಯ ಮಹಾಕಾವ್ಯಗಳಲ್ಲಿ ॥ಶ್ಲೋಕ॥ ಯದಾಯದಾಹಿಧರ್ಮಸ್ಯಹಾನಿರ್ಭವತಿ ಭೂತಲೆ । ತದಾತದಾವತಾರೋಽಯಂ । ಗಣೇಶಾನಾಂಮಹೀತಲೆ ॥೧॥ ಎಂಬುವ ಗ್ರಂಥಾರ್ಥದಂತೆ ಈ ಮತದಲ್ಲಿರುವ ನ್ಯೂನಾತಿರೇಕಗಳನ್ನೂ ಮಾಲಿನ್ಯವನ್ನೂ ಹೋಗಲಾಡಿಸುವದಕ್ಕಾಗಿ ಅವತರಿಸಿದ ಶಿವಶರಣರಾಗಿದ್ದು ಗತಿಸಿದ ಚಿರಸ್ಮರಣೀಯರೂ ಸ್ಥೈರ್ಯ ಧೈರ್ಯ ಶೌರ್ಯ ಔದಾರ್ಯಾದಿ ಸದ್ಗುಣಗಳಿಂದ ಭರಿತರೂ ಆದ ಮಹಾಪುರುಷರನ್ನು ಪುನಃ ಮತದಲ್ಲಿ ಕೇಳಲೂ ಕಾಣಲೂ ನೋಡಲೂ ದುರ್ಲಭವಲ್ಲವೆ? ಅವರು ಸ್ಥಾಪಿಸಿದ ಸ್ಟಾರ್ ಪತ್ರಿಕೆಯನ್ನು ಅವರ ಮಕ್ಕಳು ನಡೆಸುತ್ತಿರುವದು ಸರ್ವಜನ ವಿದಿತವಾಗಿರುತ್ತದೆ ಎಂದು ಅಪ್ಪಣೆಕೊಡಿಸಿದ ನಂತರ ನಮ್ಮನ್ನಾಳುವ ಸಾರ್ವಭೌಮ ಜಾರ್ಜ್ ಪ್ರಭುಗಳವರಿಗೆ ಪ್ರಳಯಸ್ವರೂಪವಾದ ಈಗಿನ ಪ್ರಚಂಡಮಹಾಯುದ್ಧದಲ್ಲಿ ಪ್ರಪಂಚಕ್ಕೆ ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರು ಜಯವನ್ನುಂಟುಮಾಡಲಿ ಎಂದು ಪ್ರೆಸಿಡೆಂಟರು ಕೋರಿ “ಜಯನಮಃಪಾರ್ವತೀಪತೆಹರಹರಮಹಾದೇವ” ಎನ್ನುತ್ತಲೇ ಸರ್ವಸಭಾಸದರೂ ತ್ರಿವಾರ ಜಯನಿನಾದವನ್ನು ಉದ್ಘೋಷಿಸಿ ಸಭಿಕರಿಗೂ ಪ್ರೇಕ್ಷಕರಿಗೂ ಪರಿಮಳ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಅನಂತರ ಪ್ರೆಸಿಡೆಂಟರ ಅಪ್ಪಣೆಯಂ ಪಡೆದು ತಮ್ಮತಮ್ಮ ಗೃಹಗಳಿಗೆ ತೆರಳಿದಕೂಡಲೇ ಸಭೆಯು ಬರಖಾಸ್ತಾಯಿತು.

ಒಬ್ಬ ಪ್ರೇಕ್ಷಕ.

ಮೈಸೂರು ಸಂಪದಭ್ಯುದಯ ಸಮಾಜ.

ವಿದ್ಯಾಭ್ಯಾಸದ ಕಮಿಟಿ.

ಇಸ್ತಿಹಾರ್‌ನಾಮೆ ನಂ. ೮೨ ಮಿಸ್.—

ವಿದ್ಯಾಭ್ಯಾಸದಲ್ಲಿ ಹಿಂದಾದ ಜಾತಿಯವರಿಗೋಸ್ಕರವಾಗಿ ಮೈಸೂರ್ ಸರ್ಕಾರದಿಂದ ಏರ್ಪಾಡಾಗಿರುವ ವಿದ್ಯಾರ್ಥಿವೇತನಗಳು.

ಇದರಿಂದ ತಿಳಿಯಪಡಿಸುವುದೇನೆಂದರೆ:-ವಿದ್ಯಾಭ್ಯಾಸದಲ್ಲಿ ಹಿಂದಾದ ಜಾತಿಯವರಿಗೆ ಯೂನಿವರ್ಸಿಟಿ ತರಗತಿಗಳಲ್ಲಿ ಪಡೆಯತಕ್ಕ ವಿದ್ಯಾರ್ಥಿವೇತನಗಳು ಯೂನಿವರ್ಸಿಟಿ ಆಲೋಚನಾ ಸಭೆಯವರಿಂದ ಕೊಡಲ್ಪಡುತ್ತವೆ. ಮತ್ತು ಇದಕ್ಕಾಗಿ ಬರೆದುಕೊಳ್ಳುವ ದರಖಾಸ್ತುಗಳನ್ನು ಮೈಸೂರ್ ಯೂನಿವರ್ಸಿಟಿ ರಿಜಿಸ್ಟ್ರಾರ್‌ರವರಿಗೆ ರವಾನಿಸುತಕ್ಕದ್ದು.

ಪ್ರೀಕೊಲೀಜಿಯೇಟ್ ತರಗತಿ ಅಂದರೆ ಹೈಸ್ಕೂಲಿಗಳ ಯೂನಿವರ್ಸಿಟಿ ಎಂಟ್ರೆನ್ಸ್ ತರಗತಿಯಲ್ಲಿ ಕೊಡಲ್ಪಡತಕ್ಕ ವಿದ್ಯಾರ್ಥಿವೇತನಗಳು ಮೈಸೂರು ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಸೆಂಟ್ರಲ್ ಕಮಿಟಿಯವರಿಂದ ಕೊಡಲ್ಪಡುತ್ತವೆ. ಅಪೇಕ್ಷೆಯುಳ್ಳವರು ತಾವು ಓದುತ್ತಿರುವ ಅಥವಾ ಓದಿದ ಪಾಠಶಾಲೆಯ ಹೆಡ್ಮಾಸ್ಟರ ಮುಖಾಂತ್ರ ವಿಧಾಯಕವಾದ ಫಾರಂನಲ್ಲಿ ದರಖಾಸ್ತುಗಳನ್ನು ಕಳುಹಿಸಬೇಕು. ಬೆಂಗಳೂರಿನಲ್ಲಿರುವ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಸೆಂಟ್ರಲ್ ಕಮಿಟಿಯ ಸೆಕ್ರೆಟರಿಯವರಿಗೆ ದರಖಾಸ್ತುಮಾಡಿ ನಮೂನೆಗಳನ್ನು ಪಡೆಯಬಹುದು.

ಹೈಸ್ಕೂಲು ತರಗತಿಗಳಲ್ಲಿ ಕೊಡಲ್ಪಡುವ ವಿದ್ಯಾರ್ಥಿವೇತನಗಳು ಡಿಸ್ಟ್ರಿಕ್ಟ್ ಕಮಿಟಿಯವರಿಂದ ಕೊಡಲ್ಪಡುತ್ತವೆ. ಅಪೇಕ್ಷೆಯುಳ್ಳವರು ತಾವು ಓದುತ್ತಿರುವ ಅಥವಾ ಓದಿದ ಪಾಠಶಾಲೆಯ ಹೆಡ್ಮಾಸ್ಟರ್ ಮುಖಾಂತ್ರ ವಿಧಾಯಕವಾದ ನಮೂನೆಗಳಲ್ಲಿ ದರಖಾಸ್ತುಗಳನ್ನು ಕಳುಹಿಸಬೇಕು. ಆಯಾ ಡಿಸ್ಟ್ರಿಕ್ಟ್ ಕಮಿಟಿಗಳ ಪ್ರೆಸಿಡೆಂಟರುಗಳಿಗೆ ದರಖಾಸ್ತುಮಾಡಿ ನಮೂನೆಗಳನ್ನು ಪಡೆಯಬಹುದು.

ಇಂಗ್ಲೀಷು ಅಥವಾ ವರ್ನಾಕ್ಯುಲರ್ ಲೋವರ್ ಸೆಕೆಂಡರಿ ಪಾಠಶಾಲೆಯ ೪ ಮತ್ತು ೫ ನೆ ಸ್ಟಾಂಡರ್ಡುಗಳಲ್ಲಿ ಕೊಡಲ್ಪಡುವ ವಿದ್ಯಾರ್ಥಿವೇತನಗಳು ತಾಲ್ಲೂಕು ಪ್ರೋಗ್ರೆಸ್ ಕಮಿಟಿಗಳಿಂದ ಕೊಡಲ್ಪಡುತ್ತವೆ. ಅಪೇಕ್ಷೆಯುಳ್ಳವರು ತಾವು ಓದುತ್ತಿರುವ ಅಥವಾ ಓದಿದ ಪಾಠಶಾಲೆಯ ಹೆಡ್ಮಾಸ್ಟರ್ ಮುಖಾಂತ್ರ ವಿಧಾಯಕವಾದ ನಮೂನೆಗಳಲ್ಲಿ ದರಖಾಸ್ತುಗಳನ್ನು ಕಳುಹಿಸಬೇಕು. ಆಯಾ ತಾಲ್ಲೂಕು ಪ್ರೋಗ್ರೆಸ್ ಕಮಿಟಿಗಳ ಛೇರ್ಮನ್‌ಗಳಿಗೆ ದರಖಾಸ್ತುಮಾಡಿ ನಮೂನೆಗಳನ್ನು ಪಡೆಯಬಹುದು. ವಿಧಾಯಕವಾದ ನಮೂನೆಗಳಲ್ಲಿ ಬರೆಯದೆ ಮತ್ತು ಸರಿಯಾದ ಅಧಿಕಾರಿಗಳ ಮುಖಾಂತ್ರ ರವಾನಿಸಲ್ಪಡದ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

ಷರಾ.—ಅಪೇಕ್ಷೆಯುಳ್ಳವರಿಗೆ ದರಖಾಸ್ತು ನಮೂನೆಗಳು ವಿದ್ಯಾಲಯಗಳ ಹೆಡ್ಮಾಸ್ಟರ್ ಬಳಿ ಸಹ ದೊರೆಯುತ್ತವೆ.

ವಿ. ಸುಬ್ರಹ್ಮಣ್ಯಯ್ಯರ್ ಸೆಕ್ರಟರಿ
ಸೆಂಟ್ರಲ್ ವಿದ್ಯಾಭ್ಯಾಸದ ಕಮಿಟಿ.

ಹೊಸಪುಸ್ತಕಗಳು. ಬೆಲೆಸುಲಭ.

ಶಾನುಭೋಗರುಗಳೇ ಇಲ್ಲಿನೋಡಿರಿ !!

ಈಗಿನ ಹೊಸತರದ ಬಾರಾ ನಮೂನೆ ಫಾರಂಗಳು ಉತ್ತಮವಾದ ಫುಲಿಸ್ಕೇಪ್ ಕಾಗದದಲ್ಲಿ ತಯಾರಿಸಿರುವುದು ದಸ್ತು ೧ ಕ್ಕೆ ಅವ್ವಲ್ ೬ ಆಣೆ, ೫ ಆಣೆ, ದುಯಂ, ೪ ಆಣೆ.

ವ್ಯವಹಾರನಿರ್ಣಯ (ಕನ್ನಡಾ ಲಾ)	೧—೮—೦
ನ್ಯಾಯದರ್ಪಣ ಡಿ.	೧—೮—೦
ಶ್ರೀಮತ್ ಕಾಶಿ, ಪ್ರಯಾಗ ಗಯಾತೀರ್ಥಕ್ಷೇತ್ರ ಮಹಾತ್ಮ್ಯವು	೧—೦—೦
ಆಶ್ವಲಾಯನ ಪೂರ್ವಪ್ರಯೋಗ	೨—೦—೦
ಕನ್ನಡ ೫ ನೇ ತರಗತಿ ರೇಖಾಗಣಿತ	೦—೪—೦
ಇಂಗ್ಲಿಷಿನ ೩ ನೇ ಪುಸ್ತಕದ ನೋಟ್ಸು	೦—೪—೦
೧೯೧೮ ಕನಡ ಟೆಕ್ಸ್ಟು ನೋಟ್ಸು	೦—೮—೦
ಲೇಖತತ್ವ ಪ್ರಕಾಶಿಕೆ (ಅರ್ಜಿಯ ನಮೂನೆಗಳುಳ್ಳದ್ದು)	೦—೪—೦
ಆರೋಗ್ಯಪ್ರಶ್ನೋತ್ತರ	೦—೧—೦

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್ ಸನ್ಸ್
9 ವಿದ್ಯಾನಿಧಿ ಬುಕ್‌ಡಿಪೋ, ಮೈಸೂರು.

೧೯೧೭ ನೆಯ ಇಸವಿ ಜುಲೈ ತಾ॥ ೨೯ ರಿಂದ ೧೯೧೭ ನೆಯ ಆಗಸ್ಟ್ ತಾ॥ ೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಶ್ರಾವಣ ಶು॥ ದಶಮಿಯಿಂದ ಶ್ರಾವಣ ಬ॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಲಿಟ ಕೇದ
29	ಭಾನು	ದಶಮಿ	32-0	ಅನೂರಾಧ	49-28	14
30	[1] ಸೋಮ	ಏಕಾದ	29-41	ಜ್ಯೇಷ್ಠ	48-46	15
31	ಮಂಗಳ	ದ್ವಾದಶಿ	26-20	ಮೂಲ	46-57	16
1	[2] ಬುಧ	ತ್ರಯೋ	22-2	ಪೂಷಾ	44-18	17
2	[3] ಗುರು	ಚತುರ್ದ	17-14	ಉಷಾ	40-56	18
3	[4] ಶುಕ್ರ	ಪೌರ್ಣ	11-25	ಶ್ರವಣ	37-1	19
4	[5] ಶನಿ	ಪಾಡ್ಯ	5-26	ಧನಿಷ್ಠ	53-54	20

(1) ಸರ್ವತ್ರೈಕಾದಶಿ ದಗ್ಧಯೋಗಃ. (2) ತಿಥಿದ್ವಯಂ ಕೇಶಾಂಚಿತ್ಪಕ್ಷೇ ಯಜುರುಪಾಕರ್ಮ. (3) ಪೂರ್ಣಿಮಾತಿಥಿಃ. (4) ಋಗ್ಯಜುರುಪಾಕರ್ಮ ಗಾಯತ್ರೀಜಪಃ ಹಯಗ್ರೀವಜಪಃ ವರಮಹಾಲಕ್ಷ್ಮೀವ್ರತಂ ಅಧಿಶುಕ್ರವಾರ. (5) ಶ್ರಾವಣಶನಿವಾರಂ ರಾಘವೇಂದ್ರಸ್ವಾಮಿ ಪುಣ್ಯಕಾಲಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀತಾಲಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವಕಾರಾ ಪಶ್ಯಜ್ಞ ನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದುಗ್ಧ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ರಲೆಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

REGISTERED NO M. 124.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರ, ಸೆಳತ, ಶೀತವಾಯು, ಹಲ್ಲುನೋವು, ಅಲಸ್ಯಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟಿ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ ಕ್ಕೆ ೯ ರೂ. ೨ ಆಣೆ ೧೦೦ ಕ್ಕೆ ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅಮೃತಬಳ್ಳಿಗಳಿಂದ ಕೂಡಿದ್ದು) ೩೦ ದಿವಸಕ್ಕೆ ಆಗುವ ಪೊಟ್ಟಣ ೧ ಆಣೆ. ನಾಂಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಅನೋದಿನಿ (ಸುಖಶಸ್ತ್ರ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರುಬೇಕು. ಹೆಚ್ಚು ಔಷದ ತರಿಸಿದರೆ ಹೆಚ್ಚು ರಿಯಾಯಿತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
12 ಸದ್ವೈದ್ಯಶಾಲಾ ನಂಜನಗೂಡು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲಿಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರವಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೇರು ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
22 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಶೇರು ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 36

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯುಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನೋಕುಮಾಕಿಗೂ ವೈದ್ಯರ ಸಮಯವನ್ನು ಕಾದು ನೋಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲೋನೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೪೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಚ್. ವೈ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಚ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕಟ ಸಲ್ಲಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳ ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಶರಣಾದಿ ಗಜಾಂಕುಶಶತಾಲಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—೩—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಅಗಸ್ಟ್ ತಾ॥ ೫ ನೆಯ ಭಾನುವಾರ.

ನಮ್ಮ ಸಂಸ್ಥಾನದ ಜೀವವಿಮೆಯೇರ್ಪಾಟು.

ಪ್ರಜಾಹಿತಕ್ಕಾಗಿ ನಮ್ಮ ಸಂಸ್ಥಾನದಲ್ಲಿ ಮಾಡಲ್ಪಟ್ಟಿರುವ ಅನೇಕವಾದ ಏರ್ಪಾಟುಗಳೊಳಗೆ ಜೀವವಿಮೆಯೇರ್ಪಾಟೂ ಒಂದಾಗಿರುತ್ತದೆ. ಸಂಸ್ಥಾನದ ಫೈನಾನ್ಷಿಯಲ್ ಸೆಕ್ರೆಟರಿಯವರಾದ ಮ॥ ಜ್ಞಾನಶರಣ ಚಕ್ರವರ್ತಿಯವರ ಪ್ರಯತ್ನವಿಶೇಷದಿಂದ ಈ ಯೇರ್ಪಾಟು ವ್ಯಾಪಕಾವಸ್ಥೆಗೆ ಬರುತ್ತಲಿದೆ. ಸರ್ಕಾರದಧಿಕಾರಿಗಳಿಗೆ ಮಾತ್ರವೇ ಉಪಯುಕ್ತವಾಗುವಂತೆ ಬಹುಕಾಲದಿಂದ ಇದ್ದ ಜೀವವಿಮೆಯೇರ್ಪಾಟನ್ನು ಪ್ರಜಾಸಾಮಾನ್ಯಕ್ಕೂ ಉಪಯುಕ್ತವಾಗುವಂತೆ ಮಾಡಿಟ್ಟಿರುವುದಲ್ಲದೆ, ಸಂಸ್ಥಾನದ ಹೊರಗಡೆ ಅನೇಕವಾಗಿರುವ ಇಂಥ ಜೀವವಿಮೆಯ ಸಂಘಗಳಲ್ಲಿ ಏರ್ಪಡಿಸಲ್ಪಟ್ಟಿರುವ ಪಾಲಸಿ ಹಣದ ಪರಿಮಾಣಕ್ಕಿಂತಲೂ, ಇಲ್ಲಿ ಕೊಡಬೇಕಾದ ಪರಿಮಾಣವು ಕಡಿಮೆಯಾಗಿರುವಂತೆ ಸೌಲಭ್ಯವನ್ನು ಕಲ್ಪಿಸಿರುವುದಲ್ಲದೆ, ಪಾಲಸಿದಾರರುಗಳು ಹೊರಗಣ ಕಂಪೆನಿಗಳಿಗೆ ಸೇರುವುದರಿಂದ ಸಂಸ್ಥಾನದ ಪ್ರಜೆಗಳ ಹಣವು ಹೊರಕ್ಕೆ ಹೋಗುತ್ತಿದ್ದುದು ತಪ್ಪಿ, ಆ ಹಣವೆಲ್ಲಾ ಇನ್ನು ಮುಂದೆ ಇಲ್ಲೇ ನಿಲ್ಲುವುದಕ್ಕೆ ಅವಕಾಶವಾಗುವಂತೆಯೂ ಮಾಡಲ್ಪಟ್ಟಿದೆ. ತಂತಮ್ಮ ಮಕ್ಕಳುಮರಿಗಳ ಹೆಸರಿನಮೇಲೆ ಅವರುಗಳ ಇಷ್ಟಿಷ್ಟನೆ ವಯಸ್ಸಿನಲ್ಲಿ ವಿಮೆಯ ಹಣವನ್ನು ಪಡೆಯುವ ಒಪ್ಪಂದದಿಂದ, ಅಥವಾ ಮನೆಯಜಮಾನ ಮೊದಲಾದವರು ತಂತಮ್ಮ ಇಷ್ಟನೆ ವಯಸ್ಸಿನಲ್ಲಿ ಅಥವಾ ಮರಣಾನಂತರ ಕ್ಲಪ್ತವಾದ ವಿಮೆಯ ಹಣವನ್ನು ಪಡೆಯಬೇಕೆಂಬ ಒಪ್ಪಂದದಿಂದ, ಪ್ರತಿತಿಂಗಳಲ್ಲಿ ಅಥವಾ ಮೂರುತಿಂಗಳಿಗೊಂದುಸಲ, ಇಲ್ಲವೆ ೬ ತಿಂಗಳಿಗೊಂದುಸಲ, ಗೊತ್ತಾಗಿರುವಷ್ಟು ಹಣವನ್ನು ಸಲ್ಲಿಸುತ್ತ ಬಂದರೆ, ತಮ್ಮ ಮುಪ್ಪಿನಕಾಲದಲ್ಲಿ ಉಪಯೋಗಕ್ಕೆ ಅಥವಾ ತಮ್ಮ ಜೀವಿತಾನಂತರ ತಮ್ಮ ಆಶ್ರಿತರ ಸಹಾಯಕ್ಕೆ ಇಲ್ಲವೆ ತಂತಮ್ಮ ಮಕ್ಕಳುಗಳ ವಿದ್ಯಾಭ್ಯಾಸ ಮದುವೆ ಮುಂಜಿ ಮೊದಲಾದುವುಗಳ ವೆಚ್ಚಕ್ಕೆ ಹಣವು ಒದಗುವಂತೆ ಮಾಡಿಕೊಳ್ಳಬಹುದು. ನಮ್ಮ ಸರ್ಕಾರದ ಬೊಕ್ಕಸವೇ ಇದಕ್ಕೆ ಹೊಣೆಯಾಗಿರುವುದರಿಂದ ಇಲ್ಲಿ ಹಾಕಲ್ಪಡುವ ಹಣಕ್ಕೆ ಅಥವಾ ನಿಬಂಧನೆಯುಪ್ರಕಾರ ಸಲ್ಲಬೇಕಾದ ವಿಮೆಯ ಹಣಕ್ಕೆ ಯಾವ ಲೋಪವೂ ಎಂದಿಗೂ ಬರುವುದಿಲ್ಲ. ಆದುಕಾರಣ ಇಂಥ ಏರ್ಪಾಟನ್ನು ಪ್ರಜಾಸಾಮಾನ್ಯಕ್ಕೂ ಅನುಕೂಲಪಡಿಸಿಕೊಟ್ಟಿರುವ ನಮ್ಮ ಸರ್ಕಾರದವರು ಪ್ರಜೆಗಳ ವಂದನೆಗೆ ಪಾತ್ರರಾಗಿರುತ್ತಾರೆ.

೧೯೧೬ ನೆ ಸರ್ಕಾರಿ ವರ್ಷದಕಡೆಯವರೆಗೂ ಈ ಜೀವವಿಮೆಯ ಏರ್ಪಾಟು ಪ್ರಜಾಸಾಮಾನ್ಯಕ್ಕೂ ಮಾಡಲ್ಪಟ್ಟಿರಲಿಲ್ಲ. ಸರ್ಕಾರದ ಉದ್ಯೋಗಿಗಳಿಗೆಮಾತ್ರ ಸಂಬಂಧಪಟ್ಟು ಇರುತ್ತಿದ್ದಿತು. ಅಲ್ಲಿಂದೀಚೆಗೆ ಪ್ರಜೆಗಳೆಲ್ಲರಿಗೂ ಅನುಕೂಲಿಸುವಂತೆ ಮಾಡಲ್ಪಟ್ಟಿತು. ಸರ್ಕಾರದವರಿಂದ ಪ್ರಕಟಿಸಲ್ಪಟ್ಟಿರುವ ೧೯೧೬ ನೆ ವರ್ಷದ ಜೀವವಿಮೆಯೇರ್ಪಾಟಿನ ವರದಿಯನ್ನು ಪರಿಶೀಲಿಸಲಾಗಿ ವರ್ಷೇವರ್ಷೇ ಪಾಲಸಿದಾರರುಗಳ ಸಂಖ್ಯೆಯು ಹೆಚ್ಚುತ್ತ ಬಂದಿದೆಯೆಂಬುದು ಗೊತ್ತಾಗುತ್ತದೆ. ೧೯೧೩-೧೪ ನೆ ವರ್ಷದಲ್ಲಿ ಒಟ್ಟು ೧೨೩೦ ಮಂದಿ ಪಾಲಸಿದಾರರುಗಳು ಇದ್ದರು. ೧೯೧೪-೧೫ ರಲ್ಲಿ ಆ ಸಂಖ್ಯೆಯು ೧೬೨೩ ಆಯಿತು. ೧೯೧೫-೧೬ ನೆ ವರ್ಷದಲ್ಲಾದರೊ ಆ ಸಂಖ್ಯೆಯು ೨೦೭೮ ರವರೆಗೆ ಹೆಚ್ಚಿತು. ವರದಿಗೆ ಸಂಬಂಧಪಟ್ಟ ವರ್ಷದಲ್ಲಿ ವೆಚ್ಚಕಳೆದು ಈ ಸಂಬಂಧವಾಗಿ ಉಳಿದಿದ್ದ ಹಣವು ೩೬೧೧೭೩೧ ರೂ. ಗಳಾಗಿದ್ದುವು. ಅದರ ಹಿಂದಣವರ್ಷದಲ್ಲಿ ೩೨೬೩೦೬೨ ರೂ. ಗಳಾಗಿದ್ದುವು. ೧೯೧೬ ನೆ ವರ್ಷದ ಪಾಲಸಿದಾರರುಗಳೊಳಗೆ ೬೨ ಮಂದಿಗೆ ೫೫ ನೆ ವಯಸ್ಸು ಪ್ರಾಪ್ತವಾಗಿದ್ದಿತು. ಅವರಲ್ಲಿ ೩೭ ಮಂದಿಗೆ ಗೊತ್ತಾದಷ್ಟು ವಿಮೆಯ ಹಣವು ಸಲ್ಲಿಸಲ್ಪಟ್ಟಿತು. ಉಳಿದವರಿಗೆ ಮುಂದಣವರ್ಷದಲ್ಲಿ ಸಲ್ಲಿಸಲ್ಪಡುವುದು. ಒಟ್ಟಿಗೆ ಜೀವವಿಮೆ ಮಾಡಿಕೊಂಡಿದ್ದ ಪಾಲಸಿದಾರರುಗಳೊಳಗೆಲ್ಲಾ ಆ ವರ್ಷದಲ್ಲಿ ಮೃತರಾದವರು ೮೫ ಮಂದಿಗಳು. ಅವರಲ್ಲಿ ೧೭ ಮಂದಿಗಳು ಪ್ಲೇಗಿನಿಂದ ಮೃತರಾದವರು. ಸಂಸ್ಥಾನದಲ್ಲಿ ಜೀವವಿಮೆಯೇರ್ಪಾಟು ಸ್ಥಾಪಿಸಲ್ಪಟ್ಟಂದಿನಿಂದ ಇದುವರೆಗೂ ಪಾಲಸಿದಾರರಲ್ಲಿ ಮೃತಪಟ್ಟವರು ೧೧೫೦ ಮಂದಿಗಳಾಗಿರುತ್ತ, ಅವರ ಸಂಬಂಧಿಗಳಿಗೆ ೮೮೬೩೪೮-೧೪-೮ ರೂ. ಗಳು ಸಲ್ಲಿಸಲ್ಪಟ್ಟಿರುತ್ತವೆ. ಪ್ರಸಕ್ತ ವರ್ಷದಲ್ಲಿ ಈ ಜೀವವಿಮೆಯ ಕಾರ್ಯಗಳಿಗಾಗಿ ಅದರ ಆದಾಯದಲ್ಲಿ ನೂರಕ್ಕೆ ೩-೧೨ ರಂತೆ ವೆಚ್ಚವು ತಗುಲಿರುತ್ತದೆ. ಇದರ ಹಿಂದಣ ವರ್ಷದಲ್ಲಿ ಈ ವೆಚ್ಚವು ನೂರಕ್ಕೆ ೨-೬೦ ಮಾತ್ರವಾಗಿದ್ದಿತು. ಜೀವವಿಮೆ ಮಾಡಿಸಿಕೊಂಡ ಜನರ ದೇಹಾರೋಗ್ಯ ಪರೀಕ್ಷೆಮಾಡಿಸಲು ವೈದ್ಯರಿಗೆ ಕೊಡಬೇಕಾದ ಹಣವು ಹೆಚ್ಚಿಕೊಂಡುದರಿಂದಲೇ ಪ್ರಸಕ್ತ ವರ್ಷದಲ್ಲಿ ವೆಚ್ಚವು ಇಷ್ಟು ಹೆಚ್ಚಲು ಕಾರಣವಾಯ್ತೆಂದು ಹೇಳಲ್ಪಟ್ಟಿದೆ. ಈ ಸಂಘಕ್ಕೆ ಸಂಬಂಧಪಟ್ಟ ರಿಜರ್ವ್ ಫಂಡು ಹಿಂದಣವರ್ಷದಲ್ಲಿ ನೂರಕ್ಕೆ ೩೪.೫೮ ರಷ್ಟಿದ್ದುದು ಪ್ರಸಕ್ತ ವರ್ಷದಲ್ಲಿ ೩೫.೩೨ ಕ್ಕೆ ವೃದ್ಧಿಯಾಗಿರುವುದು ತೃಪ್ತಿಕರವಾಗಿದೆ. ಈ ಲೆಕ್ಕಗಳೆಲ್ಲಾ ಕೇವಲ ಸರ್ಕಾರದುದ್ಯೋಗಿಗಳಾದ ಪ್ರಜೆಗಳ ಜೀವವಿಮೆಗೆ ಮಾತ್ರವೇ ಸಂಬಂಧಪಟ್ಟುದಾಗಿರುತ್ತದೆ ೧೯೧೬-೧೭ ನೆ ವರ್ಷದ ಲೆಕ್ಕದಲ್ಲಿ ಸಾಮಾನ್ಯ ಪ್ರಜೆಗಳಿಗೆ ಸಂಬಂಧಪಟ್ಟ ಜೀವವಿಮೆಯ ವಿವರಣವು ವ್ಯಕ್ತವಾಗಲಿಕ್ಕಿರುತ್ತದೆ. ಬರುವ ವರ್ಷದಲ್ಲಿ ಪ್ರಕಟಿತವಾಗುವ ಆ ವರದಿಯಿಂದ ನಮ್ಮ ಸಂಸ್ಥಾನದ ಜೀವವಿಮೆಯೇರ್ಪಾಟು ಪ್ರಜಾಸಾಮಾನ್ಯಕ್ಕೂ ಎಷ್ಟು ಆಕರ್ಷಕವಾಗಿ ಪರಿಣಮಿಸಿದೆಯೆಂಬುದೂ, ಇಂಥ ಏರ್ಪಾಟುಗಳ ಪ್ರಯೋಜನವನ್ನು ನಮ್ಮ ದೇಶದ ಜನರು ಎಷ್ಟುಮಟ್ಟಿಗೆ ಪಡೆದುಕೊಳ್ಳಲು ಅಭಿರುಚಿಯುಳ್ಳವರಾಗಿರುವರೆಂಬುದೂ ವ್ಯಕ್ತವಾಗುತ್ತವೆ.

ಬೊಂಬಾಯಿಯ ಭಾರತೀಯ ಮಹಮ್ಮದೀಯ ಸಭೆ.

ಭರತಖಂಡದ ಎಲ್ಲ ಪ್ರಾಂತಗಳ ರಾಷ್ಟ್ರೀಯ ಮಹಾಸಭಾಸ್ಥಾಯಿ ಸಂಘಗಳವರೂ ಮಹಮ್ಮದೀಯ ಸಂಘದವರೂ ಸಹ ಬಹುಶಃ ೬೦ ಮಂದಿಗಳು ಗೊತ್ತಾಗಿದ್ದ ವೇಳೆಗೆ ಬೊಂಬಾಯಿ ಪಟ್ಟಣದಲ್ಲಿ ಕಳೆದ ತಿಂಗಳು ತಾ॥ ೨೯-೩೦ ರಲ್ಲಿ ಬಾಬು ಸುರೇಂದ್ರನಾಥ ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಸಭೆಗೆ ಪ್ರಾಂತಿಕಸಂಘ ಪ್ರತಿನಿಧಿಗಳ ಹೊರತು ಪತ್ರಿಕಾ ಪ್ರತಿನಿಧಿಗಳನ್ನೇ ಆಗಲಿ ಇತರ ಯಾವ ಪುರಜನರನ್ನೇ ಆಗಲಿ ಬರಗೊಟ್ಟಿರಲಿಲ್ಲ. ೨ ದಿನಗಳಲ್ಲೂ ಸಭಿಕರು ಚರ್ಚೆನಡೆಯಿಸಿದಬಳಿಕ, ರಾಜಕೀಯ ಸ್ವಾತಂತ್ರ್ಯಸಾಧನೆಗೆ ಸಾತ್ವಿಕನಿರೋಧಪದ್ಧತಿಯನ್ನು ಆಚರಿಸುವುದು ವಿಹಿತವೆ? ಅಥವಾ ಇನ್ನೇನನ್ನು ಮಾಡಬಹುದು? ಎಂಬ ವಿಷಯವಾಗಿ ದೇಶೀಯ ಮಹಾಸಭೆಯವರೂ ಮುಸ್ಲಿಂ ಲೀಗಿನವರೂ ಆಲೋಚಿಸಿ, ೬ ವಾರಗಳೊಳಗಾಗಿ ತಮ್ಮ ಸಿದ್ಧಾಂತವನ್ನು ಮಹಾಸಭಾಕಾರ್ಯದರ್ಶಿಗಳಿಗೆ ತಿಳಿಯಿಸಬೇಕೆಂತಲೂ, ಅವರು ಆ ಸೂಚನೆಗಳನ್ನು ಮಹಾಸಭಾಸ್ಥಾಯಿಸಂಘ ಸಭಿಕರುಗಳಿಗೆಲ್ಲಾ ತಿಳಿಯಪಡಿಸಿದಬಳಿಕ, ಅಕ್ಟೋಬರ್ ತಿಂಗಳ ಮೊದಲನೆ ವಾರದಲ್ಲಿ ಅಲಹಾಬಾದಿನೊಳಗೆ ಮತ್ತೆ ದೇಶೀಯ ಮಹಾಸಭಾಸ್ಥಾಯಿಸಂಘಗಳವರೂ, ಮುಸ್ಲಿಂಲೀಗಿನ ಸ್ಥಾಯಿ ಸಂಘದವರೂ ಸಹ ಸೇರಿ ಸಭೆ ನಡೆಯಿಸಬೇಕೆಂತಲೂ ನಿರ್ಧಾರಮಾಡಿದುದಲ್ಲದೆ, ಮದ್ರಾಸ್ ಗೌರ್ನಮೆಂಟಿನವರು ನಿರ್ಬಂಧವಾಸಶಿಕ್ಷೆ ವಿಧಿಸಿದ ವಿಷಯವಾಗಿ ಆಕ್ಷೇಪಿಸುವುದಕ್ಕೆ ಬಂಗಾಳಾದಲ್ಲಿ ಕೂಡಿಸಬೇಕೆಂದಿದ್ದ ಸಭೆಯನ್ನು ಸರ್ಕಾರದವರು ನಿಲ್ಲಿಸಿಬಿಟ್ಟುದಕ್ಕಾಗಿ ಅಸಮಾಧಾನ ಪ್ರದರ್ಶನ, ಉಪನ್ಯಾಸ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲಿಕ್ಕಾಗಿ ಬಂಗಾಳಾದವರೆಲ್ಲಾ ವಿಧಿವಿರುದ್ಧವಲ್ಲದ ಚಳವಳಿಯನ್ನು ಮಾಡುವುದು, ಹಾರ್ಡಿಂಜ್ ಪ್ರಭುಗಳಮೇಲೆ ಮೆಸಪೊಟೋಮಿಯಾ ವರದಿಯ ಮೂಲಕವಾಗಿ ಬಂದ ದೂರಿಗಾಗಿ ಭಾರತೀಯರಿಗೆ ಉಂಟಾಗಿರುವ ಆಗ್ರಹದ ಪ್ರದರ್ಶನ, ಈ ವರ್ಷದಲ್ಲಿ ಕಲ್ಕತ್ತಾದೊಳಗೆ ರಾಷ್ಟ್ರೀಯಮಹಾಸಭೆ ಸೇರಿದ ದಿವಸವೇ ಭರತಖಂಡದ ಎಲ್ಲ ಪ್ರಾಂತಗಳ ಜಿಲ್ಲೆಗಳ ಸಭೆಗಳನ್ನೂ ಅಲ್ಲಲ್ಲೇ ಕೂಡಿಸಿ, ರಾಜಕೀಯಾಪೇಕ್ಷೆಗಳನ್ನು ಒಮ್ಮುಖವಾಗಿ ಪ್ರಕಟಿಸುವುದು, ದೇಶೀಯ ಮಹಾಸಭೆಯವರೂ ಮುಸ್ಲಿಂಲೀಗಿನವರೂ ಮಾಡಿರುವ ತೀರ್ಮಾನವನ್ನನುಸರಿಸಿ ಆ॥ ಮಾಳವ್ಯ, ಸರ್ ಚಂದ್ರಾವರ್ಕರ್, ಮ॥ ಸಮರ್ಥ ಈ ಮೂವರೂ ಒಂದು ವಿಜ್ಞಾಪನಪತ್ರವನ್ನು ಸಿದ್ಧಮಾಡಿ ಪಾರ್ಲಿಮೆಂಟಿಗೆ ಕಳುಹಿಸಿಕೊಡಬೇಕು,—ಇತ್ಯಾದಿ ನಿರ್ಧಾರಗಳನ್ನೂ ಮಾಡಿದುದಲ್ಲದೆ, ಭರತಖಂಡದ ಸರ್ಕಾರಕ್ಕೂ ಸ್ಟೇಟ್ ಸೆಕ್ರೆಟರಿಗಳಿಗೂ ತಂತಿಯಮೂಲಕ ಈ ನಾಲ್ಕು ವಿಷಯಗಳನ್ನು ವಿಜ್ಞಾಪಿಸಿಕೊಳ್ಳತಕ್ಕದೆಂದೂ ನಿರ್ಧರಿಸಿದರು. ಏನೆಂದರೆ ೧ ಆಂಗ್ಲಸಾಮ್ರಾಜ್ಯದಲ್ಲಿ ಭರತಖಂಡಕ್ಕೆ ಸ್ವಪರಿಪಾಲನವನ್ನು ಕೊಡುವೆವೆಂದು ಸಾಮ್ರಾಜ್ಯಪ್ರಭುತ್ವದವರು ವಾಗ್ದಾನಮಾಡಬೇಕು. ಅಂಥ ಪದವಿಯನ್ನು ಬೇಗನೆ ಪಡೆಯುವುದಕ್ಕೆ ತಕ್ಕ ಪ್ರಯತ್ನಗಳನ್ನು ನಡೆಯಿಸಬೇಕೆಂದು ಅಧಿಕಾರಿಗಳಿಗೆ ಅಪ್ಪಣೆ ಮಾಡಬೇಕು. ೨—ದೇಶೀಯ ಮಹಾಸಭೆಯವರೂ ಮಹಮ್ಮದೀಯ ಮಹಾಸಭೆಯವರೂ ಸಹ ಒಪ್ಪಿ ನಿರ್ಧರಿಸಿರುವ ರಾಜಕೀಯ ಸಂಸ್ಕಾರಗಳನ್ನು ಯುದ್ಧ ಮುಗಿದನಂತರ ಭರತಖಂಡದಲ್ಲಿ ವ್ಯವಹಾರಕ್ಕೆ ತರಬೇಕು. ೩—ಭರತಖಂಡದ ಸರ್ಕಾರದವರು ಮುಂದೆ ಈ ದೇಶದಲ್ಲಿ ಏರ್ಪಡಿಸುವುದಕ್ಕಿರುವ ಸಂಸ್ಕರಣಗಳ ರೀತಿಯನ್ನು ಮುಂದಾಗಿ ಪ್ರಕಟಿಸಿ ಅವುಗಳ ವಿಷಯವಾಗಿ ಪ್ರಜಾಭಿಪ್ರಾಯವನ್ನು ತಿಳಿದುಕೊಳ್ಳಬೇಕು. ೪—ಈ ದೇಶದ ಅಧಿಕಾರಿಗಳು ಆರಂಭಿಸಿರುವ ನಿರ್ಬಂಧಶಿಕ್ಷಾ ಪದ್ಧತಿಯನ್ನು ತಪ್ಪಿಸಿಬಿಡುವುದು ಆವಶ್ಯಕವು. ಸನ್ಮಾ॥ ಆನಿಬೆಸೆಂಟಮ್ಮನೇ ಮೊದಲಾದ ಮೂವರ ನಿರ್ಬಂಧವಾಸಶಿಕ್ಷೆಯನ್ನು ತಪ್ಪಿಸಲು ಅಪ್ಪಣೆಮಾಡಬೇಕು ಎಂಬುವಾಗಿ. ಇದಲ್ಲದೆ ಆ॥ ಮದನಮೋಹನಮಾಳವ್ಯ, ಜಿಹ್ನಾ, ವಜೀರ್‌ಹುಸೇನ್, ತೇಜಬಹದ್ದೂರ್ ಸಪ್ರು, ಸಿ.ಪಿ. ರಾಮಸ್ವಾಮಯ್ಯರು, ಈ ಆರು ಮಂದಿಗಳನ್ನು ದೇಶೀಯ ಮಹಾಸಭಾಪ್ರತಿನಿಧಿತ್ವೇನ ಸೀಮೆಗೆ ಕಳುಹಿಸಿಕೊಡಬೇಕೆಂದು ಮತ್ತೊಂದು ನಿರ್ಧಾರವೂ ಸಹ ಮಾಡಲ್ಪಟ್ಟಿತೆಂದು ಪ್ರಕಟವಾಗಿದೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ಮಳೆಗಾರಂಭವಾಗಿದೆಯೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ನೀಲಗಿರಿಗೆ ದಯಮಾಡಿಸಿದರು.

ರಾಜಧಾನಿಯಲ್ಲಿ ಕಳೆದ ಗುರುವಾರ ಉತ್ತರಭಾಗದ ಕಡೆಯಲ್ಲಿ ಸ್ವಲ್ಪ ಮಳೆಯಾಯಿತು. ವಾಂತಿಭೇದಿ ರೋಗವು ಸ್ವಲ್ಪ ಇಳಿತರವಾಗಿದೆ.

ರಾಜಧಾನಿಯ ನೈಋತ್ಯಭಾಗದಲ್ಲಿ ಸ್ಥಾಪಿಸಲ್ಪಡುವ ಗಂಧದ ಯೆಣ್ಣೆ ಕಾರ್ಖಾನೆಯ ಕಟ್ಟಡವೆಲ್ಲಾ ಕಟ್ಟಿ ಮುಗಿದು ಯಂತ್ರ ಸಾಮಗ್ರಿಗಳು ಜೋಡಿಸಲ್ಪಡುತ್ತಿವೆ.

ಈಗಣ ಶ್ರೀ ಪರಕಾಲಸ್ವಾಮಿಗಳು ಲೌಕಿಕ ವೈದಿಕ ವಿದ್ಯಾಭ್ಯಾಸಮಾಡುತ್ತಿರುವ ೧೧೧ ಮಂದಿ ಬ್ರಾಹ್ಮಣವಿದ್ಯಾರ್ಥಿಗಳಿಗೆ ಅಶನವಸನಾದಿ ಸಾಹಾಯ್ಯವನ್ನು ಮಾಡುತ್ತಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಗ್ರಾಮಾಂತರಗಳಲ್ಲಿ ಜನನಮರಣಗಳ ಲೆಕ್ಕವು ಸಮರ್ಪಕವಾಗಿ ಎತ್ತಲು ಅನುಕೂಲವಾದ ವಿಧಿಯೊಂದನ್ನು ನಮ್ಮ ಗೌರ್ನಮೆಂಟಿನವರು ಏರ್ಪಡಿಸಲು ಪ್ರಯತ್ನಿಸಿ, ಅದರ ವಿವರವನ್ನು ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ.

ಇದುವರೆಗೂ ಸರ್ಕಾರಿ ಮುದ್ರಾಲಯದ ಸೂಪರಿಂಟೆಂಡೆಂಟರಾಗಿದ್ದ ಮಿ॥ ಸಿ. ಎಚ್ ಏಟ್ಸ್‌ರವರು ಈ ತಿಂಗಳು ತಾ॥ ೧೫ ರಿಂದ ನಿವೃತ್ತರಾಗುವ ಕಾರಣ, ಆ ಸ್ಥಾನಕ್ಕೆ ಮ॥ ಬಿ. ಡಿ. ರಾಮಚಂದ್ರ ಮೊದಲಿಯಾರರು ನಿಯಮಿಸಲ್ಪಡುವರೆಂದು ಕೇಳುತ್ತೇವೆ.

ರಾಜಧಾನಿಯ ಫಲಪುಷ್ಪಗಳ ಪ್ರದರ್ಶನವು ಬರುವ ತಾ॥ ೧೧-೧೨ ರಲ್ಲಿ ಟವನ್‌ಹಾಲಿನಲ್ಲಿ ನಡೆಯುವುದು. ಮೊದಲದಿನ ಪ್ರೇಕ್ಷಕರಾದ ದೊಡ್ಡವರಿಗೆ ೮ ಆಣೆ ಚಿಕ್ಕವರಿಗೆ ೨ ಆಣೆ; ಮರುದಿನ ೩ ಆಣೆ, ೧ ಆಣೆಯಂತೆ ಪ್ರವೇಶಧನವು ಗೊತ್ತುಮಾಡಲ್ಪಟ್ಟಿರುವುದು.

ಬೆಂಗಳೂರು ಶಂಕರ ಮಠದಲ್ಲಿ ವೈದಿಕ ಧರ್ಮ ಬಹುಮಾನಸಭೆಯು ಕಳೆದ ತಾ॥ ೨೯ ರಲ್ಲಿ ಮ॥ ಎಚ್. ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ವೇದಾಧ್ಯಯನ ಧರ್ಮಾಚರಣೆ ಮೊದಲಾದ ವಿಷಯಗಳಲ್ಲಿ ಪರೀಕ್ಷೆಕೊಟ್ಟು ಉತ್ತೀರ್ಣರಾದವರಿಗೆ ಬಹುಮಾನಗಳು ಕೊಡಲ್ಪಟ್ಟುವು. ವೈದಿಕಮತೋದ್ಧಾರಕ್ಕಾಗಿ ಹಿಂದೂಜನರೆಲ್ಲರೂ ಐಕಮತ್ಯದಿಂದ ಕೆಲಸಮಾಡಬೇಕೆಂದು ಅಧ್ಯಕ್ಷರು ಒಂದು ಉಪನ್ಯಾಸಮಾಡಿದರು.

ಮೈಸೂರು ಕೆಮಿಕಲ್ ವರ್ಕ್ಸ್ ಅಧಿಪತಿಗಳಾದ ಮಿ॥ ಕೆ.ಟಿ. ಗವರ್ಧ್‌ರವರು ತಾವು ಪ್ರಕಟಿಸುವುದಕ್ಕಿರುವ ಡೈರೆಕ್ಟರಿಯಲ್ಲಿ ಭರತಖಂಡದ ಸ್ವದೇಶೀಯ ಕರ್ಮಾಗಾರಗಳು, ಸ್ವದೇಶೀಯ ವ್ಯಾಪಾರ ಸಂಘಗಳು, ಅಂಗಡಿಗಳು ಮೊದಲಾದುವುಗಳ ವಿಳಾಸವನ್ನೆಲ್ಲಾ ಕ್ರೋಡೀಕರಿಸಿ ಪ್ರಕಟಿಸಿ ಸರ್ವರಿಗೂ ತಿಳಿಯುವಂತೆ ಮಾಡಬೇಕೆಂದು ಪ್ರಯತ್ನಿಸಿದ್ದಾರೆ. ಯಾರು ತಿಳಿಯಿಸಿಕೊಟ್ಟರೂ, ಅದನ್ನು ಸಂಗ್ರಹಿಸಿ ಪ್ರತಿಫಲಾಪೇಕ್ಷೆಯಿಲ್ಲದೆ ಪ್ರಕಟಿಸುವರು.

ಸೂಲಗಿತ್ತಿಯರನ್ನೂ ಉಪಚಾರಿಣಿಯರನ್ನೂ ತಯಾರುಮಾಡುವ ಏರ್ಪಾಡೊಂದನ್ನು ನಮ್ಮ ಸೀನಿಯರ್ ಸರ್ಜನ್‌ರವರು ಮಾಡಿಸಿರುತ್ತಾರೆ. ಬೆಂಗಳೂರು ಮುಖ್ಯ ವೈದ್ಯಶಾಲೆಗಳಲ್ಲಿಯೂ ಮೈಸೂರು ವೈದ್ಯಾಲಯಗಳಲ್ಲೂ ಈ ಶಿಕ್ಷಣವು ೨ ವರ್ಷಕಾಲ ಕೊಡಲ್ಪಡುವುದು. ಸದ್ವರ್ತನೆಯುಳ್ಳ ೧೮ ವರ್ಷಕ್ಕೆ ಮೇಲ್ಪಟ್ಟ ೨೫ ವಯಸ್ಸಿನೊಳಗಣ ಹೆಂಗುಸರು ಸೀನಿಯರ್ ಸರ್ಜನರಿಗೆ ಬರೆದು ಸೇರಿಕೊಳ್ಳಬಹುದು. ಪರೀಕ್ಷೆಯಲ್ಲುತ್ತೀರ್ಣರಾದವರಿಗೆ ೨೦ ರೂ.ಗೆ ಕಡಿಮೆಯಿಲ್ಲದೆ ಸಂಬಳಸಿಕ್ಕುವುದು. ಈ ಪ್ರಯತ್ನವು ಬಹಳ ಆವಶ್ಯಕವಾಗಿದ್ದಿತೆಂಬುದಕ್ಕೆ ಸಂಶಯವಿಲ್ಲ.

ಬೆಂಗಳೂರಿನ ಸಕ್ರಾಜ ಪದ್ಮಾಜಿ ಎಂಬ ಮಾರ್ವಾಡಿ ವರ್ತಕರು ೩ ಸಾವಿರ ರೂ.ಗಳ ಬೆಲೆಯ ಬೆಳ್ಳಿಯ ಎರಡು ಪಾರ್ಸಲ್ಲುಗಳನ್ನು ರೈಲ್ವೆಯ ಮೂಲಕ ಗದಗಿಗೆ ಕಳುಹಿಸಲು, ಅವು ಮಾರ್ಗಮಧ್ಯದಲ್ಲಿ ಮಾಯವಾದುವು. ವರ್ತಕರು ಕಂಪೆನಿಯಮೇಲೆ ವ್ಯಾಜ್ಯಹೂಡಿರಲು ಅದಕ್ಕೆ ನಾವು ಹೊಣೆಗಾರರಲ್ಲವೆಂದು ಕಂಪೆನಿಯವರು ಪ್ರತ್ಯುತ್ತರಕೊಟ್ಟದ್ದರು. ನ್ಯಾಯಾಧೀಶರಾದರೊ ಆ ನಷ್ಟವನ್ನು ಕಂಪೆನಿಯವರು ಕೊಟ್ಟೇತೀರಬೇಕೆಂದು ತೀರ್ಮಾನಹೇಳಿದರು. ಅದರಮೇಲೆ ರೈಲ್ವೆ ಕಂಪೆನಿಯವರು ಮದ್ರಾಸು ಹೈಕೋರ್ಟಿನಲ್ಲಿ ಅಪ್ಪೀಲ್ ಮಾಡಿರಲಾಗಿ ಅಲ್ಲೂ ಕೆಳ ಕೋರ್ಟಿನ ತೀರ್ಮಾನವೇ ಅಂಗೀಕರಿಸಲ್ಪಟ್ಟಿತು.

ಯುದ್ಧವಾರ್ತೆಯು

ಪಶ್ಚಿಮರಣರಂಗ:—ಕಳೆದ ಜುಲೈ ತಿಂಗಳ ಕಡೆಯವರೆಗೆ ಕೊನೆಯಾದ ೧ ವರ್ಷಕಾಲದಲ್ಲಿ ಸಂಭವಿಸಿರುವ ಯುದ್ಧಪರಿಣಾಮವು ಈ ರೀತಿಯಲ್ಲಿ ಲೆಕ್ಕಹಾಕಲ್ಪಟ್ಟಿರುವುದು—ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡೂ ಆ ಕಾಲದಲ್ಲಿ ೧೬೦೦೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿರುವರು. ಅವರಲ್ಲಿ ೩೫೫೯ ಮಂದಿಗಳು ಉದ್ಯೋಗಸ್ಥರು. ಮತ್ತೂ ೯೪೮ ತುಪಾಕಿಗಳನ್ನೂ, ೮೫೦ ಕಂದಕಗಳ ಫಿರಂಗಿಗಳನ್ನೂ, ೨೫೦ ಮಿಷನ್ ಫಿರಂಗಿಗಳನ್ನೂ ವಶಪಡಿಸಿಕೊಂಡಿರುವರು. ಅಲ್ಲದೆ ಶತ್ರುಗಳು ಬಹಳ ಚೆನ್ನಾಗಿ ಬಲಪಡಿಸಿಕೊಂಡಿದ್ದ ೧೦೦ ಮೈಲಿಗಳಗಲದ ರಣಕ್ಷೇತ್ರವನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಂಡಿರುವರು. ಕಳೆದ ತಿಂಗಳ ಕೊನೆಯಿಂದ ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡೂ ಮರಳಿ ಶತ್ರುಗಳಮೇಲೆ ಮಹಾಯುದ್ಧವನ್ನಾರಂಭಿಸಿರುವರು. ಇವರ ಅನಂತಾನಂತ ಫಿರಂಗಿಗಳ ಸಿಡಿಗರ್ಜನೆಯು ೩೦ ಮೈಲಿಗಳವರೆಗೂ ಭೂಮಿಯನ್ನು ಅದಿರಿಹೋಗುವಂತೆ ಮಾಡಿತು. ಶತ್ರುಗಳ ಕಂದಕಗಳೆಲ್ಲಾ ಧೂಳೀಪಟಲವಾದುವು. ಇವಕ್ಕೆ ಪ್ರತಿಯಾಗಿ ಶತ್ರುಗಳು ಫಿರಂಗಿಗುಂಡುಗಳನ್ನು ಹಾರಿಸಿದರೂ ಅವು ಅಷ್ಟು ಪ್ರಬಲವಾಗಿರಲಿಲ್ಲ. ಇದರಮೇಲೆ ಮಿತ್ರಮಂಡಲಿಯವರು ವೈಮಾನಿಕಯುದ್ಧಗಳನ್ನೂ ಪದಾತಿಯುದ್ಧಗಳನ್ನೂ ಅಖಂಡವಾಗಿ ಸಾಗಿಸುತ್ತಲಿರುವರು. ಲೀಸಿಗೆ ಉತ್ತರದಲ್ಲಿ ಯಾವಯಾವ ಸ್ಥಳಗಳನ್ನು ಹಿಡಿದುಕೊಳ್ಳಬೇಕೆಂದು ಮಿತ್ರಮಂಡಲಿಯವರು ಸಂಕಲ್ಪಿಸಿಕೊಂಡಿದ್ದರೋ ಅವನ್ನೆಲ್ಲಾ ಹಿಡಿದು ದೊಡ್ಡ ಜಯವನ್ನು ಪಡೆದರು. ಎಂದರೆ ಬಿಕ್ಸ್‌ಚೂಟಿ, ಸ್ಟೀನ್‌ಸ್ಟ್ರಾಟ್, ವೆರ್ಲೋರೆನ್ ಮೊದಲಾದ ಕೆಲವು ಗ್ರಾಮಗಳನ್ನೂ, ಒಂದು ಸೇತುವನ್ನೂ, ಶತ್ರುಸಂರಕ್ಷಕವಾಗಿದ್ದ ಒಂದು ಕಾಡನ್ನೂ. ಬಲವಾದ ಕೆಲ ಕಂದಕಗಳನ್ನೂ, ಬಹಳ ಮಂದಿ ಶತ್ರುಸೈನಿಕರನ್ನೂ ಸೆರೆಹಿಡಿದಿರುವರು. ಈ ಯುದ್ಧದಲ್ಲಿ ೩೫೦೦ ಮಂದಿಗೆ ಕಡಿಮೆಯಿಲ್ಲದಷ್ಟು ಶತ್ರುಸೈನಿಕರು ಸೆರೆಸಿಕ್ಕಿರುವುದಲ್ಲದೆ ಬಹುಮಂದಿಗಳು ಕೊಲ್ಲಲ್ಪಟ್ಟಿದ್ದಾರೆ. ರಣರಂಗವೆಲ್ಲಾ ಶವಮಯವಾಗಿದ್ದಿತು. ಇದರಿಂದ ಮಿತ್ರಮಂಡಲಿ ಸೇನಾಪಙ್ಕ್ತಿಯು ೧೫ ಮೈಲಿಯಷ್ಟಗಲಕ್ಕೆ ಎಷ್ಟೋ ದೂರ ಮುಂದಕ್ಕೆ ಸಾಗಿದಂತಾಯ್ತು. ರೊಯಿರೀಗೆ ದಕ್ಷಿಣದಲ್ಲಿ ಫ್ರೆಂಚರು ಯುದ್ಧವನ್ನುನಡೆಯಿಸಿದುದರಲ್ಲೂ ಅವರಿಗೇ ವಿಶೇಷ ಜಯವಾಗಿ ಅನೇಕಮಂದಿ ಶತ್ರುಸೈನಿಕರೂ ಅವರ ಅನೇಕ ಸಾಮಗ್ರಿಗಳೂ ಸಿಕ್ಕಿರುತ್ತವೆ.

ಪಶ್ಚಿಮರಣರಂಗದಲ್ಲಿ ಕಳೆದ ಮೇ ತಿಂಗಳು ತಾ॥ ೪ ರಿಂದಲೂ ಜರ್ಮನ್ ಯುವರಾಜನು ಫ್ರೆಂಚ್ ಸೇನಾಪಙ್ಕ್ತಿಯನ್ನು ಭೇದಿಸಬೇಕೆಂದು ಮಾಡಿದ ಮಹಾಪ್ರಯತ್ನವು ೨ ನೆ ವರ್ಡನ್ ಯುದ್ಧದಂತೆ ಪರಿಣಮಿಸಿತೆಂದು ಹೇಳಲ್ಪಟ್ಟಿದೆ. ಇದಕ್ಕಾಗಿ ಜರ್ಮನರು ಬಹುಶಃ ೫೦ ಯುದ್ಧಗಳನ್ನು ಬಹಳ ಸಾಹಸದಿಂದ ಮಾಡಿದರು. ರೀಮ್ಸ್ ಮತ್ತೂ ಸೋಯಿಜನ್ಸ್ ಪಟ್ಟಣಗಳ ಮಧ್ಯದಲ್ಲಿ ಈ ಯುದ್ಧಗಳು ನಡೆದುವು. ಜರ್ಮನರ ದಳಗಳಲ್ಲಿ ಬಹಳ ಹೆಸರಾಂತ ಬೇಡನ್ ಪಟಾಲಮು ೧, ಬವೇರಿಯನ್ ಪಟಾಲಮು ೧, ವೆಸ್ಟ್‌ಫೇಲಿಯ ಪಟಾಲಮುಗಳು ೩, ಪ್ರಷ್ಯನ್ ಪಟಾಲಮುಗಳು ೩—ಈ ಎಂಟು ಪಟಾಲಮುಗಳಲ್ಲದೆ ೧ ಲಕ್ಷ ಸೈನಿಕರುಳ್ಳ ೨ ಜರ್ಮನ್ ಸೈನ್ಯಗಳು ಸಹ ಸೇರಿ ಕೆರ್ನಿಯಿಂದ ಹಿಡಿದು ಕಾಲಿಫೋರ್ನಿಯಾ ಪೀಠಭೂಮಿಯವರೆಗೆ ಜುಲೈ ತಾ॥ ೧೯ ರಿಂದ ೪ ದಿನಗಳವರೆಗೆ ಬಹಳ ಶೌರ್ಯದಿಂದ ಕಾದಾಡಿದರು. ಕ್ರೆಯೋನಿ ಪೀಠಭೂಮಿಯಲ್ಲಿ ಫ್ರೆಂಚರು ನೆಲಸಿರುವುದರಿಂದ ತಮ್ಮ ಸೈನ್ಯಗಳ ಚಲನವಲನವೆಲ್ಲಾ ಅವರಿಗೆ ತಿಳಿದುಹೋಗುವುದಾದಕಾರಣ, ಅದನ್ನು ಕಿತ್ತುಕೊಳ್ಳಬೇಕೆಂಬುದೇ ಶತ್ರುಗಳ ಅತ್ಯಂತ ಮುಖ್ಯೋದ್ದೇಶ. ಇಷ್ಟು ಮಹಾಪ್ರಯತ್ನಗಳನ್ನು ಮಾಡಿದರೂ ಜರ್ಮನರು ಪಡೆದುಕೊಂಡ ಲಾಭವೆಂದರೆ ಫ್ರೆಂಚರ ಸೈನ್ಯದ ಪ್ರಥಮಪಙ್ಕ್ತಿಯಲ್ಲಿ ಒಂದುಕಡೆ ಸ್ವಲ್ಪಮಾತ್ರ ಆಕ್ರಮಿಸಿದುದು. ಇದಕ್ಕಾಗಿ ಅವರು ಕಳೆದುಕೊಂಡ ಸೈನ್ಯವು ಅಪಾರವಾಗಿದ್ದಿತು. ಇಲ್ಲಿ ಫ್ರೆಂಚರು ನಡೆಯಿಸಿದ ಪ್ರತಿ ಯುದ್ಧದ ಸಾಮರ್ಥ್ಯವು ಅತ್ಯಂತ ವರ್ಣನೀಯವಾಗಿದ್ದಿತು. ಅದರಿಂದಲೇ ಅವರು ತಮ್ಮ ಸೇನಾಪಙ್ಕ್ತಿಯ ಭೇದನೆಗೆ ಅವಕಾಶಕೊಡದೆ ಸಂರಕ್ಷಿಸಿಕೊಂಡರು. ಅಷ್ಟು ಮಾತ್ರವೇ ಅಲ್ಲದೆ ಶತ್ರುಗಳು ೪ ದಿನಗಳಿಂದ ಮಹಾಕಷ್ಟಕಷ್ಟಗಳನ್ನನುಭವಿಸಿ ಗೆದ್ದುಕೊಂಡಿದ್ದ ಸ್ಥಳವನ್ನು ಫ್ರೆಂಚರು ತಮ್ಮ ನವೀನ ಯುದ್ಧಕೌಶಲಪದ್ಧತಿಯಿಂದ ಅತಿ ಭೀಕರವಾಗಿ ಹೋರಾಡಿ ೧ ಗಂಟೆಯೊಳಗಾಗಿ ಮರಳಿ ವಶಪಡಿಸಿಕೊಂಡರು. ಈ ಸಮಯದಲ್ಲೂ ಶತ್ರುಗಳಕಡೆ ಸಾವಿರಾರು ಸೈನಿಕರು ಲಯವಾದರು. ಬಹು ಪ್ರಸಿದ್ಧವಾದ ಶತ್ರುಗಳ ಬ್ರೆಂಡನ್‌ಬರ್ಗ್ ಪಟಾಲಮು ಮಟ್ಟವಾಗಿಹೋಯಿತು. ಅವರ ನಷ್ಟಕ್ಕೆ ಫ್ರೆಂಚರಿಗಾದ ನಷ್ಟವನ್ನು ಹೋಲಿಸಿದರೆ ಇವರದು ಬಹಳ ಸ್ವಲ್ಪವೆಂದು ಗೊತ್ತಾಗುವುದು.

ರಷ್ಯಾ—ಶತ್ರುಗಳ ನುಗ್ಗಾಟವು ಕಡೆಗೆ ರಷ್ಯನರನ್ನು ಕಿರ್ಲಿಬಾಬಾದಿಂದ ಆಚೆಗೂ ಒತ್ತಿಬಿಟ್ಟಿತು. ಈಗ ಜರ್ಮನ್ ಸೈನ್ಯಗಳು ರಷ್ಯಾದೇಶದೊಳಕ್ಕೂ ನುಗ್ಗಿವೆ. ಸ್ಕೋರ್ನಾರ್ತ್ಕೋ ಪ್ರಾಂತದಲ್ಲಿ ರಷ್ಯನರು ೨೦೦೦ ಮಂದಿ ಶತ್ರುಸೈನಿಕರನ್ನೂ ಅನೇಕ ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡು, ೨೦೦೦ ಮಂದಿಗಳನ್ನು ಯುದ್ಧಕ್ಕೆ ಅನರ್ಹರಾಗುವಂತೆ ಮಾಡಿ ಶತ್ರುಗಳ ಅನೇಕ ಸ್ಥಳಗಳನ್ನು ಧ್ವಂಸಮಾಡಿದರೆಂಬ ವಾರ್ತೆಬಂದಿದೆ. ಆದರೆ ಅವರು ಹೀಗೆ ಜಯಸಂಪಾದನೆಮಾಡಿದುದು ಒಂದುಕಡೆಯಲ್ಲಾದರೆ ಸೋತು ಓಡುತ್ತಿರುವುದೇ ಹಲವುಕಡೆಯಲ್ಲಾಗಿದೆ. ಗೆಲೀಷಿಯಾದಲ್ಲಿ ಶತ್ರುಗಳಿಗೆ ವಶವಾದ ಸ್ಥಾನಗಳಲ್ಲಿ ಕೋಯ್ಲಿಗೆ ಸಿದ್ಧವಾದ ಪೈರುಗಳುಳ್ಳ ಮುಖ್ಯಸ್ಥಳಗಳು ಅನೇಕವಾಗಿರುವುದರಿಂದ, ಶತ್ರುಗಳಿಗೆ ಅನುಕೂಲವಾಯಿತು. ರಣಮುಖದಲ್ಲಿ ರಷ್ಯಾದವರಿಗೆ ಅವರ ಸೈನ್ಯಗಳೇ ಮಾಡಿದ ದ್ರೋಹಾಚರಣೆಯಿಂದ ಬಹಳ ಅಪಜಯವು ಪ್ರಾಪ್ತವಾದರೂ ಅಲ್ಲಿಗೆ ಹೋಗಿರುವ ಇಂಗ್ಲೀಷರ ಫಿರಂಗಿ ಮೋಟಾರುಗಳು ಬಹಳ ಸಹಾಯಮಾಡುತ್ತಲಿವೆ. ೧೦ ದಿನಗಳ ಕಾಲದ ಯುದ್ಧದಲ್ಲಿ ಶತ್ರುಗಳು ೬೦ ಮೈಲಿಯಷ್ಟು ದೂರ ಮುಂದಕ್ಕೆ ಸಾಗಿ ರಷ್ಯನರನ್ನು ಸೋಲಿಸಿ ಓಡಿಸಿಬಿಟ್ಟಿದ್ದಾರೆ. ಪ್ರಭುತ್ವದ ಸ್ಥಿರವಾದ ಕಾರ್ಯಕ್ರಮಗಳು ಇನ್ನೂ ನೆಲೆಯಾಗಲಿಲ್ಲ. ಸಂಯುಕ್ತ ಮಂತ್ರಿವರ್ಗವನ್ನೇರ್ಪಡಿಸುವ ವಿಷಯದಲ್ಲಿ ಮುಖ್ಯಮಂತ್ರಿ ಕೆರೆನ್ಸ್ಕಿಯವರೇ ಮೊದಲಾದವರುಗಳು ಬಹಳ ಸಾಹಸಮಾಡುತ್ತಿದ್ದಾರೆ. ಇಷ್ಟರಲ್ಲೇ ರಷ್ಯಾದಲ್ಲಿನ ದ್ರೋಹಿಗಳೆಲ್ಲಾ ದಂಡೋಪಾಯದಮೂಲಕ ಅಡಗಿಸಲ್ಪಡುವರೆಂದೂ, ರಷ್ಯಾವು ಮೊದಲಿನಂತೆ ಶತ್ರುಗಳಮೇಲೆ ಮುತ್ತಿಗೆಯನ್ನಾರಂಭಿಸಲು ಸಮರ್ಥವಾಗುವುದೆಂದೂ ವರ್ತಮಾನಗಳು ಬರುತ್ತಲಿವೆ.

ರುಮೇನಿಯಾ.—ರುಮೇನಿಯಾ ದೇಶದ ಸೈನಿಕರು ಶತ್ರುಗಳಮೇಲೆ ಯುದ್ಧಮಾಡುತ್ತ ತಮ್ಮ ಶೌರ್ಯವನ್ನು ಚೆನ್ನಾಗಿ ವ್ಯಕ್ತಪಡಿಸುತ್ತಿದ್ದಾರೆ. ೧೬॥ ಮೈಲಿಗಳದೂರ ಶತ್ರುಗಳನ್ನು ಹಿಂದಕ್ಕಟ್ಟಿ ಹತ್ತಾರು ಗ್ರಾಮಗಳನ್ನೂ ಸಾವಿರಾರು ಮಂದಿ ಶತ್ರು ಸೈನಿಕರನ್ನೂ ಫಿರಂಗಿ ಮೊದಲಾದ ಅನೇಕಾನೇಕ ಯುದ್ಧ ಸಾಮಗ್ರಿಗಳನ್ನೂ ವಶಪಡಿಸಿಕೊಂಡಿರುತ್ತಾರೆ. ಇನ್ನೂ ಮುಂದಕ್ಕೆ ಸಾಗುತ್ತಲೇ ಇದ್ದಾರೆ. ಜರ್ಮನರು ರಷ್ಯಾದಲ್ಲಿನಂತೆ ರುಮೇನಿಯಾದಲ್ಲೂ ಸೈನ್ಯದೊಳಗೆ ದುರ್ಬೋಧನೆಯನ್ನು ಮಾಡಿ ತಿರುಗಿಬೀಳಿಸಬೇಕೆಂದು ಬಹಳ ಪ್ರಯತ್ನಪಟ್ಟರು. ಆದರೆ ಅವರ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ರಷ್ಯಾದವರ ಉಡುಪುಗಳನ್ನು ಧರಿಸಿಕೊಂಡು ರುಮೇನಿಯಾದವರ ಮಧ್ಯದಲ್ಲಿದ್ದ ೫೦ ಮಂದಿ ಜರ್ಮನರನ್ನು ಕಳೆದವಾರ ಸೆರೆ ಹಿಡಿದು ವಿಚಾರಣೆ ನಡೆಯಿಸಿ ಎಲ್ಲರನ್ನೂ ತುಪಾಕಿಯಿಂದ ಸುಟ್ಟುಹಾಕಿದರು.

ಜಲಯಾನಗಳು.—ಇಂಗ್ಲೀಷರ ಏರಿಯಾಡ್ನೇ ಎಂಬ ಯುದ್ಧದ ಹಡಗು ಶತ್ರುಗಳ ಟಾರ್ಪೆಡೋ ಏಟಿನಿಂದ ಮುಳುಗಿಹೋಯಿತು. ೩೮ ಮಂದಿ ಸತ್ತರು. ಪೂರ್ವದೇಶಗಳ ಅಂಚೆಯನ್ನೆಲ್ಲಾ ಸಾಗಿಸಿಕೊಂಡು ಸೀಮೆಗೆ ಹೋಗುತ್ತಿದ್ದ ಒಂದು ಅಂಚೆ ಹಡಗು ಕಳೆದ ತಾ॥ ೨೫ ನೆಯ ದಿನ ಮಧ್ಯಧರ ಸಮುದ್ರದಲ್ಲಿ ಶತ್ರುಗಳಿಂದ ಮುಳುಗಿಸಲ್ಪಟ್ಟಿತು. ಇದು ಜುಲೈ ತಾ॥ ೬ ರಲ್ಲಿ ಬೊಂಬಾಯಿಯನ್ನು ಬಿಟ್ಟು ಹೊರಟು ತಾ॥ ೨೫ ರಲ್ಲಿ ಮಾಲ್ಟಾ ಶೀವಯಿಂದ ಹೊರಟಿದ್ದಿತು. ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡು ಸಿಲೋನ್, ಚೈನಾ, ಸೈಪ್ರಸ್ಸು, ಏಡೆನ್, ಈಜಿಪ್ಟ್, ಸ್ಟ್ರೇಟ್ಸ್‌ಸೆಟಿಲ್ಮೆಂಟ್ಸ್, ಪೂರ್ವಾಫ್ರಿಕಾ, ಜಾಂಜಿಬಾರ್, ಮೊರೀಸ್ ಮೊದಲಾದ ಅನೇಕ ಸ್ಥಳಗಳ ಅಂಚೆಗಳೆಲ್ಲಾ ಇದರಲ್ಲಿದ್ದುವು. ಜುಲೈತಿಂಗಳ ಕಡೆಯ ವಾರದಲ್ಲೆಲ್ಲಾ ಇಂಗ್ಲೀಷ್ ರೇವುಗಳಿಗೆ ಹೊರಗಣಿಂದ ೨೭೯೭ ಹಡಗುಗಳು ಬಂದು ೨೮೭೬ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ೨೧ ವ್ಯಾಪಾರಿ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟವೆ.

ಭರತಖಂಡದ ವೃತ್ತಾಂತಗಳು.

ಕಳೆದವಾರದಲ್ಲಿ ಲಕ್ನೋಪಟ್ಟಣದೊಳಗೆ ಪ್ರತಿದಿನವೂ ಬಹಳ ದೊಡ್ಡ ಮಳೆಯಾಗುತ್ತಿದ್ದಿತು.

ಜುಲೈ ತಾ॥ 30 ರವರೆಗೆ ಭರತಖಂಡದ ಯುದ್ಧ ಋಣಕ್ಕೆ 476340063 ರೂ. ಗಳು ಕೂಡಿದ್ದುವು.

ಭರತಖಂಡದಲ್ಲಿ ವ್ಯವಹಾರಕ್ಕೆ ತರುವುದಕ್ಕಾಗಿ ೧ ಮತ್ತೂ ೨॥ ರೂ. ಗಳ ನೋಟುಗಳನ್ನು ನಿರ್ಮಿಸಿ ಇಲ್ಲಿಗೆ ಕಳುಹಿಸಿಕೊಡುವುದಕ್ಕೆ ಇನ್ನು ಕೆಲ ತಿಂಗಳುಗಳು ಹಿಡಿಯುವುವೆಂದು ಪಯೋನಿಯರ್ ಪತ್ರಿಕೆಯುಹೇಳುತ್ತದೆ.

ಹೈದರಾಬಾದು ಸಂಸ್ಥಾನದಿಂದ ಯುದ್ಧಸಹಾಯಾರ್ಥವಾಗಿ ಇದುವರೆಗೆ ೧೨೦೦೦೦೦೦ ರೂ.ಗಳು, ಯುದ್ಧದ ಸಾಲಕ್ಕಾಗಿ ೧೧೪೦೦೦೦೦ ಒಟ್ಟು ೨೩೪೦೦೦೦೦ ರೂ.ಗಳು ಕೊಡಲ್ಪಟ್ಟಿರುವುವೆಂದು ಪ್ರಕಟವಾಗಿದೆ.

ಜಬ್ಬಲ್‌ಪೂರ್ ನಿಲ್ದಾಣದ ಬಳಿಯಲ್ಲಿ ಇದಿರುಬದಿರಾಗಿ ಬಂದ ಎರಡು ಹೊಗೆಬಂಡಿಗಳು ಡಿಕ್ಕಿಹೊಡೆದುದರಿಂದ ೨೩ ಮಂದಿ ಪ್ರಯಾಣಿಕರೂ ಕೆಲಮಂದಿ ರೈಲ್ವೆ ಉದ್ಯೋಗಿಗಳೂ ಸತ್ತರು. ೪೦ ಮಂದಿಗೆ ಗಾಯಗಳಾದುವು.

ಕಳೆದ ಮಂಗಳವಾರದ ಗಡುವಿಟ್ಟು ಆ ದಿನ ಇಷ್ಟು ರೂ. ಗಳನ್ನು ನಮಗೆ ತಂದುಕೊಡದಿದ್ದರೆ ನಿಮಗೆ ಅಪಾಯವನ್ನು ಮಾಡುವೆವು ಎಂಬುದಾಗಿ ಕೆಲವು ಹೆಸರಿಲ್ಲದ ಕಾಗದಗಳು ಕಲ್ಕತ್ತಾ ಪಟ್ಟಣದ ಕೆಲವರಿಗೆ ಬರೆಯಲ್ಪಟ್ಟಿವೆ.

ಬೊಂಬಾಯಿಯ ಶಿಲ್ಪಿಗಳಾದ ಮ॥ ಮಾತ್ರೆಯವರಿಂದ ನಿರ್ಮಿಸಲ್ಪಡುವ ಆನಿಬೆಸೆಂಟಮ್ಮನವರ ಅಮೃತಶಿಲಾವಿಗ್ರಹವನ್ನು ಮದ್ರಾಸ್ ಸಮುದ್ರತೀರದಲ್ಲೊಂದುಕಡೆ ಸ್ಥಾಪಿಸಲು ಪ್ರಯತ್ನ ನಡೆದಿದೆಯೆಂದು ಸರ್ ಸುಬ್ರಹ್ಮಣ್ಯಯ್ಯರವರು ಪ್ರಕಟಿಸಿದ್ದಾರೆ.

ಬರುವ ಸೆಪ್ಟಂಬರ್ ತಾ॥ ೨೦ ರಿಂದ ತಮ್ಮ ಸಂಸ್ಥಾನದಲ್ಲಿ ಬಲಾತ್ಕಾರ ಬಾಲವಿದ್ಯಾಭ್ಯಾಸ ಪದ್ಧತಿಯನ್ನು ಸ್ಥಾಪಿಸುವುದಕ್ಕಾಗಿ ಕೊಲ್ಲಾಪುರದ ಮಹಾರಾಜರು ೧ ಲಕ್ಷ ರೂ. ಗಳನ್ನು ಹೆಚ್ಚಾಗಿ ವಿದ್ಯಾಶಾಖೆಗೆ ವೆಚ್ಚ ಮಾಡಲು ಅಪ್ಪಣೆಮಾಡಿದ್ದಾರೆ.

ಕಳೆದ ತಿಂಗಳು ತಾ॥ ೨೧ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ೨೯೪೧ ಮಂದಿಗೆ ಪ್ಲೇಗು ತಗುಲಿ ೨೦೫೦ ಮಂದಿಗಳು ಸತ್ತಿರುವರು. ಇದನ್ನು ನೋಡಲಾಗಿ ಈಗ ಮತ್ತೆ ವಾರವಾರಕ್ಕೆ ಪ್ಲೇಗಿನ ಹಾವಳಿಯು ಹೆಚ್ಚುತ್ತಿರುವಂತೆ ಕಾಣುತ್ತದೆ.

ಈ ವರ್ಷ ಬೆಂಗಳೂರಿನಲ್ಲಿ ಕೂಡಿದ್ದ ಶಾಸ್ತ್ರೀಯ ಸಭೆಯು ಬರುವ ವರ್ಷದ ಜನವರಿ ತಿಂಗಳ ತಾ॥ ೯-೧೦-೧೧ ರಲ್ಲಿ ಲಾಹೋರು ಪಟ್ಟದಲ್ಲಿ ಕೂಡುವುದು. ಅನೇಕ ಮಂದಿ ನಾನಾಶಾಸ್ತ್ರಜ್ಞರು ಅಲ್ಲಿಗೆ ಹೋಗುವರು. ಮೈಸೂರಿನಿಂದ ಡಾ॥ ಕೋಲ್ಮನ್‌ರವರು ಹೋಗುವವರಾಗಿದ್ದಾರೆ.

ಲಕ್ನೋ ಜಿಲ್ಲೆಗೆ ಸೇರಿದ ಮೊಹರ್ ದೇಶದ ಮಹಮ್ಮದೀಯರೆಲ್ಲಾ ಅಲ್ಲಿಯ ಜಮೀನ್ದಾರರ ಅಧ್ಯಕ್ಷತೆಯಿಂದ ಸಭೆಗೂಡಿ, ಮಹಮ್ಮದೀಯ ಜನವರ್ಗದವರು ಇನ್ನೂ ವಿದ್ಯಾವಿಷಯದಲ್ಲಿ ಬಹಳ ಹಿಂದುಳಿದಿರುವುದರಿಂದ ಸ್ವರಾಜ್ಯಕಾಂಕ್ಷೆಯೂ ತತ್ಸಾಧನ ಪ್ರಯತ್ನಗಳೂ ನಮಗೆ ತಕ್ಕುವಲ್ಲವೆಂದು ನಿರ್ಧರಿಸಿರುವರು.

ಇಂಟರ್ಮೀಡಿಯಟ್ ತರಗತಿಯ ಶಾಲೆಗಳಲ್ಲಿ ಪಾಠವನ್ನು ದೇಶಭಾಷೆಯಲ್ಲಿ ನಡೆಯಿಸುವುದು ಒಳ್ಳೆಯದೊ? ಆಂಗ್ಲಭಾಷೆಯಲ್ಲೇ ನಡೆಯಿಸುವುದು ಒಳ್ಳೆಯದೊ? ಎಂಬುದನ್ನು ವಿಚಾರಿಸಿ ನಿರ್ಧರಿಸುವುದಕ್ಕಾಗಿ ಒಂದು ಚಿಕ್ಕ ಸಭೆಯನ್ನು ಇದೇ ತಿಂಗಳು ೨ ನೆ ವಾರದಲ್ಲಿ ನೆರವೇರಿಸಲು ಇಂಡ್ಯಾ ಸರ್ಕಾರದವರು ನಿರ್ಧರಿಸಿರುವರು.

ಬೊಂಬಾಯಿಯ ಸ್ವರಾಜ್ಯಸಾಧನಸಮಿತಿಯವರು ಕಳೆದ ತಿಂಗಳು ತಾ॥ ೨೯ ರಲ್ಲಿ ಆ॥ ಜಿನ್ನಾರವರ ಅಧ್ಯಕ್ಷತೆಯಿಂದ ಆನಿಬೆಸೆಂಟಮ್ಮ ಮೊದಲಾದವರ ನಿರ್ಬಂಧವಾಸಶಿಕ್ಷೆಯನ್ನು ನಿಷೇಧಿಸುವುದಕ್ಕಾಗಿ ಒಂದು ಸಭೆಯನ್ನು ಕೂಡಿಸಿರಲು, ಪ್ರಜೆಗಳು ಮಾಡುತ್ತ ಬಂದ ಗದ್ದಲದಿಂದ ಕಾರ್ಯ ನಡೆಯಿಸಲಾರದೆ ನಿಲ್ಲಿಸಿಬಿಡಬೇಕಾಗಿ ಬಂದಿತು.

ಮದ್ರಾಸಿನ ನ್ಯೂ ಇಂಡಿಯಾ ಪತ್ರಿಕೆಯ ಕಾರ್ಯಾಲಯದ ಕೆಲಸದಲ್ಲಿದ್ದ ವಿಷ್ಣು ರಘುನಾಥಕರಂದಿಕರ್ ಎಂಬ ಮರಾಠಾ ಬ್ರಾಹ್ಮಣನನ್ನು ೨ ದಿನಗಳೊಳಗೆ ಮದ್ರಾಸಾಧಿಪತ್ಯವನ್ನು ಬಿಟ್ಟು ಹೊರಕ್ಕೆ ಹೊರಟುಹೋಗಬೇಕೆಂದು ಮದ್ರಾಸು ಸರ್ಕಾರದವರು ದೇಶರಕ್ಷಕಶಾಸನದ ಪ್ರಕಾರ ಕಳೆದ ತಾ॥ ೨೮ ರಲ್ಲಿ ಅಪ್ಪಣೆಮಾಡಿ, ಹೊರಡಿಸಿಬಿಟ್ಟರು.

ಇದೇ ಆಗಸ್ಟ ತಾ॥ ೩೦ ರಲ್ಲಿ ಇಂಗ್ಲೆಂಡಿಗೆ ಪ್ರಯಾಣಮಾಡಲಿಕ್ಕಿರುವ ಆ॥ ಭೂಪೇಂದ್ರನಾಥ ಬಾಸುರವರ ಗೌರವಾರ್ಥವಾಗಿ ಇದೇ ತಿಂಗಳು ತಾ॥ ೪ ರಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಒಂದು ಔತಣವು ನಡೆಯಿಸಲ್ಪಟ್ಟಿತು. ಇವರು ಬೊಂಬಾಯಿಗೆ ಹೋದಾಗ್ಗೆ ಅವರು ಪ್ರಯಾಣಮಾಡುವ ಹಡಗಿನಲ್ಲೇ ಒಂದು ಔತಣವನ್ನು ಮಾಡುವುದಕ್ಕೆ ಬೊಂಬಾಯಿಯ ಪುರಪ್ರಮುಖರು ನಿರ್ಧರಿಸಿಕೊಂಡಿದ್ದಾರೆ.

ಬೊಂಬಾಯಿ ಪಟ್ಟಣದ ಪಾರ್ಸಿ ಜನರು ಒಂದುಕಡೆ ಸೇರಿ ಸ್ವರಾಜ್ಯಸಾಧನ ವಿಷಯವಾಗಿ ತಮ್ಮ ವಿರುದ್ಧಾಭಿಪ್ರಾಯವನ್ನು ರಹಸ್ಯವಾಗಿ ಚರ್ಚಿಸಿಕೊಳ್ಳುತ್ತಿರುವಾಗ ಒಬ್ಬ ಹಿಂದುವು ಅಲ್ಲಿಗೆ ಹೋಗಿ ವಾಗ್ವಾದವಾಡಲಾಗಿ ಪರಸ್ಪರ ಬೈಗುಳಗಳು ನಡೆದು, ಹಿಂದುವು ಸೋಡಾಸೀಸೆಯಿಂದ ಹೊಡೆಯಲಾಗಿ ಏಟುತಿಂದು ಗಾಯಗೊಂಡ ಪಾರ್ಸಿಯವರು ಆತನಮೇಲೆ ವ್ಯಾಜ್ಯವನ್ನು ಹೂಡಿದ್ದರು. ಅಪರಾಧಿಯು ಯುದ್ಧದ ಫಂಡಿಗೆ ೧೦ ರೂ. ಚಂದಾ ಕೊಡಲೊಪ್ಪಿದುದರಿಂದ ವ್ಯಾಜ್ಯವನ್ನು ಉಪಸಂಹರಿಸಿಕೊಂಡರು.

ಪ್ರಯಾಗದಲ್ಲಿ ನಡೆಯುವ ಕುಂಭಮೇಳೋತ್ಸವಕ್ಕೆ ಲಕ್ಷಾಂತರ ಯಾತ್ರಾರ್ಥಿಗಳು ಸೇರುವುದು ಪದ್ಧತಿಯಷ್ಟೆ. ಇದಕ್ಕಾಗಿ ರೈಲ್ವೆ ಕಂಪೆನಿಯವರು ಎಷ್ಟೋ ಸ್ಪೆಷಲ್ ಟ್ರೈನುಗಳನ್ನು ಬಿಡುತ್ತಿದ್ದರು. ಆದರೆ ಈಗ ಕಲ್ಲಿದ್ದಲೂ ಪ್ರಯಾಣಿಕರ ಬಂಡಿಗಳೂ ಸಮೃದ್ಧವಾಗಿಲ್ಲದಿರುವ ಕಾರಣ ಸ್ಪೆಷಲ್‌ಬಂಡಿ ಮೊದಲಾದ ಏರ್ಪಾಟನ್ನು ಮಾಡಲಾರೆವೆಂದು ಈಸ್ಟಿಂಡಿಯಾ ಕಂಪೆನಿಯವರು ಮುಂದಾಗಿ ಸೂಚನೆ ಕೊಟ್ಟಿರುವುದರಿಂದ ತೀರ್ಥಯಾತ್ರಿಕರು ಕುಂಭಮೇಳಕಾಲದ ತಂತಮ್ಮ ಪ್ರಯಾಣವನ್ನು ನಿಲ್ಲಿಸಿಬಿಡುವುದು ಯುಕ್ತವೆಂದು ಮಧ್ಯಪ್ರಾಂತದ ಸರ್ಕಾರದವರು ಪ್ರಕಟಿಸಿದ್ದಾರೆ.

ಬಂಗಾಳಾದ ಈಗಣ ಗೌರ್ನರಾದ ಲಾರ್ಡ್ ರೋನಾಲ್ಡ್‌ಷೇಯವರು ಬಹಳಮಟ್ಟಿಗೆ ಪ್ರಜಾರಂಜಕರಾಗಿ ಪರಿಣಮಿಸುತ್ತಿದ್ದಾರೆ. ಕೈಕೆಳಗಣ ಅಧಿಕಾರಿಗಳಮೇಲೆಯೇ ವಿಶ್ವಾಸವಿಡದೆ ಸ್ವತಃ ಗ್ರಾಮಾಂತರಗಳಿಗೂ ಹೊಲಗಳಿಗೂ ಹೋಗಿ ರೈತರ ಸ್ಥಿತಿಗತಿಗಳನ್ನು ಪ್ರತ್ಯಕ್ಷ ವಿಚಾರಣೆಗಳಿಂದ ತಿಳಿದುಕೊಳ್ಳುತ್ತಿದ್ದಾರೆ. ಹಳ್ಳಿಗಾಡ ಜನರು ತಮ್ಮ ಗೌರ್ನರು ತಮ್ಮ ಮನೆಬಾಗಲಿಗೆ ಬಂದರೆಂಬ ಸಂತೋಷದಿಂದ ಕೋಳಿಮೊಟ್ಟೆಗಳನ್ನೂ, ಕಾಯಿಪಲ್ಯಗಳನ್ನೂ ಕಾಣಿಕೆಯಾಗಿ ಅತಿ ವಿಶ್ವಾಸದಿಂದ ಸಮರ್ಪಿಸಲು, ಅವನ್ನು ಗೌರ್ನರವರು ಪ್ರೀತಿಯಿಂದಂಗೀಕರಿಸಿ ಮನ್ನಿಸಿ, ರೈತರನ್ನು ಬಹಳ ಸಂತೋಷಪಡಿಸುತ್ತಿರುವರು.

ವಾಯುವ್ಯದ ಎಲ್ಲೆಯಲ್ಲಿ ಮಹಸುಂದರೆಂಬ ಜನರ ಗುಂಪುಗಳು ಆಗಾಗ್ಗೆ ಬಂದು ಆ ಸುತ್ತಿನ ಪ್ರಜೆಗಳಮೇಲೂ ಪ್ರಯಾಣಿಕರಮೇಲೂ ಕೊಲೆ ಸುಲಿಗೆ ಮೊದಲಾದ ಹಾವಳಿಗಳನ್ನು ನಡೆಯಿಸುತ್ತಿದ್ದುದರಿಂದ ಆ ಪರ್ವತನಿವಾಸಿಗಳಮೇಲೆ ನಮ್ಮ ದೇಶದ ಸೈನಿಕರು ಕಳೆದ ೧೯೧೬ ನೆಯ ವರ್ಷದಿಂದಲೂ ಆಗಾಗ್ಗೆ ಯುದ್ಧವನ್ನು ನಡೆಯಿಸುತ್ತಿದ್ದರು. ಕಟ್ಟಕಡೆಗೆ ಅವರು ಸೋತು ಬೇಸತ್ತು ಮೊನ್ನೆತಾನೇ ಇಂಡ್ಯಾ ಸರ್ಕಾರದವರೊಡನೆ ಸಂಧಿಯನ್ನು ಮಾಡಿಕೊಂಡು ಆ ಪ್ರಾಂತದಲ್ಲಿ ಯಾವ ಹಾವಳಿಯೂ ಇಲ್ಲದಂತೆ ಸುರಕ್ಷಿತವಾಗಿರಿಸುವ ವಿಷಯದಲ್ಲಿ ಹೊಣೆಯನ್ನು ಹೊತ್ತುಕೊಂಡುದರಿಂದ ಇತಃಪರಃ ಆ ಪ್ರಾಂತವು ಶಾಂತವಾಗಿದ್ದೀತೆಂದು ನಿರೀಕ್ಷಿಸಬಹುದಾಯಿತು.

ಕಳೆದ ತಾ॥ ೨೬ ರಲ್ಲಿ ಪುನಾ ಪಟ್ಟಣದೊಳಗೆ ಬೊಂಬಾಯಿ ನಿಯಮನಿರ್ಮಾಣ ಸಭೆಯು ಗೌರ್ನರವರ ಅಧ್ಯಕ್ಷತೆಯಲ್ಲಿ ಕೂಡಿದ್ದಾಗ್ಗೆ ಆ॥ ವಿ.ಜೆ. ಪಟೇಲ್ ರವರು ಪುರಪಾಲಕ ಸಂಘಗಳ ಅಧೀನದಲ್ಲಿರುವ ಪಾಠಶಾಲೆಗಳಲ್ಲಿ ನಿರ್ಬಂಧವಾಗಿ ವಿದ್ಯಾಭ್ಯಾಸ ಮಾಡಿಸುವ ವಿಷಯಕವಾದ ಬಿಲ್ಲನ್ನು ಚರ್ಚೆಗೆ ತಂದರು. ಇದರ ವಿಮರ್ಶೆಗೆ ಬೇರೊಂದು ಸಬ್‌ಕಮಿಟಿಯನ್ನೇರ್ಪಡಿಸಿದರು. ಅಧ್ಯಕ್ಷರು ಈ ಬಿಲ್ಲಿಗೆ ತಮ್ಮ ಸಾನುಭೂತಿಯನ್ನು ತೋರಿಸಿದುದಲ್ಲದೆ, ಇದು ಯುದ್ಧಸಮಯವಾದುದರಿಂದ ಹಣದ ತೊಂದರೆಯು ಬಹಳವಾಗಿದೆ. ಯುದ್ಧ ಮುಗಿದಬಳಿಕ ಈ ವಿಷಯವಾಗಿ ನಿದಾನವಾಗಿ ಆಲೋಚಿಸಿ ಕೆಲಸಮಾಡಬೇಕಾಗುತ್ತದೆ. ಇದರ ಸಂಬಂಧವಾಗಿ ಬೊಂಬಾಯಿ ಸರ್ಕಾರದವರು ಮಾತ್ರವೇ ಅಲ್ಲದೆ ಇಂಡ್ಯಾ ಸರ್ಕಾರದವರೂ ಇತರ ಎಲ್ಲ ಪ್ರಾಂತಿಕ ಸರ್ಕಾರಗಳವರೂ ಕೂಡ ಪರ್ಯಾಲೋಚಿಸುವರೆಂದು ಅಪ್ಪಣೆಕೊಡಿಸಿದರು.

ಆನಿಬೆಸೆಂಟಮ್ಮ ಮೊದಲಾದವರಿಗೆ ವಿಧಿಸಲ್ಪಟ್ಟಿರುವ ನಿರ್ಬಂಧನಿವಾಸಶಿಕ್ಷೆಯನ್ನು ನಿಷೇಧಿಸುವುದಕ್ಕಾಗಿ ಕಲ್ಕತ್ತಾದಲ್ಲಿ ಸರ್ ಸಬಿಹಾರಿಘೋಷ್‌ರವರ ಅಧ್ಯಕ್ಷತೆಯಿಂದ ಒಂದು ಸಭೆ ಜರುಗುವುದಕ್ಕಿದ್ದಿತು. ಆದರೆ ಬಂಗಾಳಾ ಸರ್ಕಾರದ ಕಾರ್ಯದರ್ಶಿಯವರೂ ಪೋಲೀಸ್ ಕಮಿಷನರೂ ಸಹ ಸಭಾಪ್ರಮುಖರು ಎಂದರೆ ಜೆ. ಚೌಧುರಿ, ಸಿ. ಆರ್. ದಾಸು ಮೊದಲಾದ ಕೆಲವರನ್ನು ಸಂಧಿಸಿ, ಬೇರೊಂದು ಸರ್ಕಾರದವರು ನಡೆಯಿಸಿರುವ ಕಾರ್ಯವನ್ನು ಖಂಡಿಸುವುದಕ್ಕಾಗಿ ಉದ್ದೇಶಿಸಲ್ಪಟ್ಟಿರುವ ಈ ಸಭೆಯನ್ನು ನಡೆಯಿಸಿ ಕೊಡುವುದಕ್ಕೆ ಬಂಗಾಳಾ ಸರ್ಕಾರದವರಿಗೆ ಇಷ್ಟವಿರುವುದಿಲ್ಲ. ಈ ಸಂಗತಿಯನ್ನು ನಮ್ಮ ಮೂಲಕ ನಿಮಗೆ ತಿಳಿಯಪಡಿಸಲು ಸರ್ಕಾರದವರು ನಿಯಮಿಸಿದ್ದಾರೆ. ಇದರಮೇಲೂ ಮೀರಿ ನಡೆದರೆ ಸರ್ಕಾರದವರು ತಮಗಿರುವ ಅಧಿಕಾರವನ್ನು ಉಪಯೋಗಿಸಿ ತಕ್ಕ ಪ್ರತೀಕಾರವನ್ನು ಮಾಡುವರು ಎಂದು ತಿಳಿಯಿಸಿದರು. ಸಭೆಯು ನಿಂತುಹೋಯಿತು.

ಪ್ಲೇಗಿನ ನಿರೋಧಕ್ಕಾಗಿ ಇಲಿಗಳ ಯಜ್ಞವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇನ್ನೂ ಆಚರಿಸಲ್ಪಡುತ್ತಲಿದೆ. ಬದುಕಿರುವ ಇಲಿಗಳನ್ನು ಹಿಡಿದು ತಂದವರಿಗೆ ಒಂದೊಂದಕ್ಕೆ ೬ ಕಾಸುಗಳಂತೆ ಇನಾಮು ಕೊಡಲು ಏರ್ಪಡಿಸಿರುವರು. ಕಲ್ಕತ್ತಾ ಪಟ್ಟಣದಲ್ಲಿ ಕಳೆದ ೧ ವರ್ಷದಲ್ಲಿ ಹೀಗೆ ೧೩೮೩೮೬ ಇಲಿಗಳು ಹಿಡಿತರಲ್ಪಟ್ಟದ್ದು ಸಾಯಿಸಲ್ಪಟ್ಟುವು. ಅಷ್ಟಕ್ಕೂ ೩೩೭೪ ರೂ. ಗಳನ್ನು ಅಲ್ಲಿಯ ಮ್ಯುನಿಸಿಪಾಲಿಟಿಯವರು ಬಹುಮಾನಕೊಟ್ಟಿರುವರು. ಅಲ್ಲದೆ ಬೀದಿಯಲ್ಲಿ ಸತ್ತುಬಿದ್ದ ಇಲಿಗಳು ೪೦೨೧೩೦. ಬೊಂಬಾಯಿ ಪಟ್ಟಣದಲ್ಲಿ ಇದೇ ಕೆಲಸಕ್ಕೆ ಆ ವರ್ಷದಲ್ಲಿ ಆಗಿರುವ ವೆಚ್ಚವು ೩೩೫೯೦ ರೂ. ಗಳು. ಹಿಡಿದು ತಂದಿದ್ದ ಇಲಿಗಳ ಸಂಖ್ಯೆ ೯೪೪೩೩೪೬. ಮದರಾಸಿನಲ್ಲಿ ವೆಚ್ಚವು ೬೦೦೯ ರೂ.ಗಳು. ಬಂದಿದ್ದ ಇಲಿಗಳ ಸಂಖ್ಯೆ ೧೩೪೮೬೨೧ ಎಂದು ಲೆಕ್ಕಹಾಕಲ್ಪಟ್ಟಿದೆ. ಇಷ್ಟಾದರೂ ಈ ಕಾರ್ಯದಿಂದ ಆಗಿರುವ ಫಲಿತಾಂಶವು ಮಾತ್ರ ತೃಪ್ತಿಕರವಾಗಿಲ್ಲವೆಂದು ತಿಳಿದುಬಂದಿದೆ.

ತಿರುಚನಾಪಲ್ಲಿಯಲ್ಲಿ ಕಳೆದ ತಿಂಗಳು ತಾ॥ ೨೦ ರಲ್ಲಿ ಒಂದು ನಾಟಕವಾಡಲ್ಪಡುತ್ತಿರುವಾಗ್ಗೆ ಅಲ್ಲಿರುವ ೮೦ ನೆ ನಂ॥ ಪದಾತಿ ಕರ್ನಾಟಕ ಸೈನ್ಯದಲ್ಲಿ ಸೇರಿರುವ ಜನರಲ್ಲಿ ೫೦-೬೦ ಮಂದಿಗಳು (ಇವರಲ್ಲಿ ಬಹುಜನರು ಮಾಪಿಳ್ಳೆಗಳು ಮರಿಯೋಗಳು) ಕಡಮೆ ತರಗತಿಯ ಟಿಕೆಟ್ಟನ್ನು ಪಡೆದು ನಾಟಕಶಾಲೆಗೆ ನುಗ್ಗಿ ಹೆಚ್ಚಿನ ತರಗತಿಯಲ್ಲಿ ಹೋಗಿ ಕುಳಿತುಕೊಳ್ಳಲು ಕಂಟ್ರಾಕ್ಟರಿಗೂ ಅವರಿಗೂ ಮಾತುಕತೆಗಳೂ ಪ್ರಹಾರಗಳೂ ನಡೆದುವು. ಸೈನಿಕರು ನಾಟಕಶಾಲೆಯ ವಿದ್ಯುಚ್ಛಕ್ತಿ ದೀಪಗಳನ್ನೆಲ್ಲಾ ಆರಿಸಿಬಿಟ್ಟರು. ಒಳಗಿದ್ದ ಹೆಂಗುಸರು ಮಕ್ಕಳು ಮೊದಲಾದವರೆಲ್ಲಾ ಬಹಳ ಭಯಪಟ್ಟರು. ಪ್ರೇಕ್ಷಕರಿಗೂ ಸೈನಿಕರಿಗೂ ಬಹಳ ಏಟುಗಳು ಬಿದ್ದುವು. ಬಹಳ ಗದ್ದಲವಾಯಿತು. ಸೈನಿಕರು ಬೀದಿಗೆ ಹೊರಟು ಪೋಲೀಸು ಠಾಣದ ಬೀದಿಯಲ್ಲಿದ್ದ ಮ್ಯುನಿಸಿಪಲ್ ದೀಪಗಳನ್ನೆಲ್ಲಾ ಆರಿಸಿಬಿಟ್ಟು ಚಿಲ್ಲರೆ ಅಂಗಡಿ ಮಿಠಾಯಿ ಅಂಗಡಿಗಳಿಗೆ ನುಗ್ಗಿ ದುಡ್ಡನ್ನೂ ಬೇಕಾದ ಸಾಮಗ್ರಿಗಳನ್ನೂ ದೋಚಿಕೊಂಡರು. ಪೋಲೀಸು ಇನ್ಸ್‌ಪೆಕ್ಟರು ಮೊದಲಾದವರು ಬಂದರೂ ಸೈನಿಕರ ಸಂಖ್ಯೆ ಹೆಚ್ಚಾಗಿದ್ದುದರಿಂದ ಅವರನ್ನು ಹಿಡಿಯಲಾರದೆ ಹೋದರು. ಕಡೆಗೆ ಡಿ॥ ಸೂಪರಿಂಟೆಂಡೆಂಟರು ಬಂದು ಪ್ರಜಾಸಹಾಯದಿಂದಲೂ ಪೋಲೀಸರ ಜತೆಯಿಂದಲೂ ಸಿಕ್ಕಿದಷ್ಟು ಮಂದಿ ಸೈನಿಕರನ್ನು ಹಿಡಿದರು ಈ ಅವಾಂತರದಲ್ಲಿ ೪ ಮಂದಿ ಸತ್ತಿರುವರು. ಇನ್ನು ಕೆಲರಿಗೆ ಗಾಯಗಳಾಗಿರುವುವು. ಆ ದಿನ ೯ ಗಂಟೆಯಮೇಲೆ ಬಾರಕ್ಸನ್ನು ಬಿಟ್ಟು ಹೋಗಿದ್ದವರ ವಿಚಾರಣೆಯನ್ನೆಲ್ಲಾ ಸೈನ್ಯಶಾಖೆಯವರು ನಡೆಯಿಸುತ್ತಿರುವರು.

ವಿದೇಶವೃತ್ತಾಂತಗಳು.

ಚೀನಾದಲ್ಲಿ ವಿಪ್ಲವವು ಇನ್ನೂ ಅಡಗಿಲ್ಲ.

ಸಯಾಂದೇಶವು ಆಸ್ಟ್ರಿಯಾ ಹಂಗೇರಿ ದೇಶದಮೇಲೂ ಕೂಡ ಯುದ್ಧವನ್ನು ಪ್ರಕಟಮಾಡಿತು.

ಯುದ್ಧಾರಂಭವಾದಾಗಿನಿಂದ ಇದುವರೆಗೆ ಶತ್ರುಗಳ ವಿಮಾನಗಳ ದಾಳಿಯು ಇಂಗ್ಲೀಷ್ ದ್ವೀಪಗಳಮೇಲೆ ೭೮ ಆವೃತ್ತಿ ನಡೆಯಿಸಲ್ಪಟ್ಟಿರುವುದು.

ಆಂಗ್ಲದೇಶದವರು ಇದುವರೆಗೆ ತಮ್ಮ ೩೦೦೦ ವ್ಯಾಪಾರಿ ಹಡಗುಗಳನ್ನು ಸಾಯುಧಗಳನ್ನಾಗಿ ಮಾಡಿರುವರು. ಪ್ರತಿವಾರದಲ್ಲೂ ಇಂಥ ಹಡಗುಗಳ ಸಂಖ್ಯೆಯು ಹೆಚ್ಚುತ್ತಲೇ ಇರುವುದು.

ಜರ್ಮನರಕಡೆಯಿಂದ ಲಂಚವನ್ನು ತಿಂದು ರಷ್ಯಾಸೈನಿಕರಲ್ಲೂ ಪ್ರಜೆಗಳಲ್ಲೂ ದುರ್ಬೋಧೆಯಿಂದ ವಿಪ್ಲವವನ್ನುಂಟುಮಾಡಿದ್ದ ಲೆಂನಿನ್ ಎಂಬ ದೇಶದ್ರೋಹಿಯನ್ನು ರಷ್ಯಾ ಪ್ರಭುತ್ವದವರು ಫಿನ್‌ಲ್ಯಾಂಡಿನಲ್ಲಿ ಹಿಡಿದರು. ಆದರೆ ಆತನು ವೇಷಾಂತರದಿಂದ ತಲೆ ತಪ್ಪಿಸಿಕೊಂಡು ಜರ್ಮನಿಗೆ ಓಡಿಹೋದನೆಂದು ವಾರ್ತೆ ಬಂದಿದೆ.

ಯುದ್ಧವನ್ನಾರಂಭಿಸಿದ ಈ ಮೊದಲನೆಯ ವರ್ಷದಲ್ಲಿ ಯುದ್ಧಕ್ಕಾಗಿ ತಮಗೆ ೩೨೨೫೦೦೦೦೦೦ ರೂ. ಗಳ ವೆಚ್ಚವು ಹಿಡಿಯುವುದೆಂದೂ, ಇದಲ್ಲದೆ ಮಿತ್ರಮಂಡಲಿಯವರಿಗೆ ಕೊಡುವ ಸಾಲವು ೧೯೫ ಕೋಟಿ ರೂ. ಗಳು ಪ್ರತ್ಯೇಕವಾಗಿ ಆಗುವುವೆಂದೂ ಅಮೇರಿಕಾದ ಕೋಶಾಧ್ಯಕ್ಷರು ಅವರ ಪಾರ್ಲಿಮೆಂಟಿನಲ್ಲಿ ತಿಳಿಯಿಸಿರುತ್ತಾರೆ.

ಜಪಾನಿನವರು ಮಿತ್ರಮಂಡಲಿಯವರ ವಿಷಯದಲ್ಲಿ ತಮಗಿರುವ ಅಭಿಮಾನವನ್ನು ಬರಿಯ ಉಪಚಾರೋಕ್ತಿಯಿಂದ ಮಾತ್ರವೇ ತಿಳಿಯಿಸದೆ ಇಂಗ್ಲೀಷ್, ಫ್ರಾನ್ಸ್, ರಷ್ಯಾ, ಇಟಲಿ, ಬೆಲ್ಜಿಯಂ-ಇವಿಷ್ಟುದೇಶಗಳಿಗೂ ತಲಾ ೩೬ ಸಾವಿರ ಪೌನುಗಳಂತೆಯೂ, ರುಮೇನಿಯಾ ಸರ್ವಿಯಾ ದೇಶಗಳಿಗೆ ತಲಾ ೬ ಸಾವಿರ ಪೌನುಗಳಂತೆಯೂ, ಯುದ್ಧದಲ್ಲಿ ಗಾಯಗೊಂಡವರ ಉಪಚಾರ ನಿಮಿತ್ತವಾಗೆಂದು ಕೊಡಲು ನಿರ್ಧರಿಸಿರುವರು.

ಜರ್ಮನಿಯಲ್ಲಿ ಒಬ್ಬ ಧನಿಕನು ತನ್ನ ಪತ್ನಿಗೆ ಸ್ವಲ್ಪವೇ ಧನವನ್ನಿಟ್ಟು ಕೈಜರರಿಗೆ ೨೦ ಲಕ್ಷ ಮಾರ್ಕು ಎಂದರೆ ೧೫ ಲಕ್ಷ ರೂ.ಗಳನ್ನು ಕೊಟ್ಟುಬಿಡತಕ್ಕದೆಂದು ಮರಣಶಾಸನವನ್ನು ಬರೆದಿಟ್ಟು ಸತ್ತನು. ಹೆಂಡತಿಯು ಇದು ಅನ್ಯಾಯವೆಂದು ಹೇಳಿ ಕೈಜರರಮೇಲೆ ಹೈಕೋರ್ಟಿನಲ್ಲಿ ವ್ಯಾಜ್ಯವನ್ನು ಹೂಡಲಾಗಿ, ಆ ಮರಣಶಾಸನವು ಸಲ್ಲತಕ್ಕುದಲ್ಲವೆಂದು ಹೇಳಿ, ಚಕ್ರವರ್ತಿಯವರು ಆಕೆಗೆ ಹಣವನ್ನು ಕೊಟ್ಟುಬಿಡತಕ್ಕದೆಂದು ತೀರ್ಮಾನಮಾಡಿದರು.

ಆನಿಬೆಸೆಂಟಮ್ಮ ಮೊದಲಾದವರ ನಿರ್ಬಂಧವಾಸ ಶಿಕ್ಷೆಯ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಮರಳಿ ಸ್ನೋಡನ್ ಎಂಬ ಸಭಿಕರು ಮಾಡಿದ ಪ್ರಶ್ನೆಗೆ ಸ್ಟೇಟ್ ಸೆಕ್ರೆಟರಿಯವರ ಪಕ್ಷವಾಗಿ ಮಿ॥ ಪ್ರ್ಯಾಟ್‌ರವರು ಕೊಟ್ಟ ಉತ್ತರದಲ್ಲಿ—"ಆಕೆಯು ಸರ್ಕಾರದವರ ಶಾಸನಗಳಿಗೆ ಅಪಾರ್ಥವನ್ನು ಮಾಡಿ ಪ್ರಜೆಗಳಿಗೆ ಅಪೋಹವನ್ನುಂಟುಮಾಡುತ್ತಿದ್ದುದರಿಂದಲೂ, ಸರ್ಕಾರದವರ ಸದುದ್ದೇಶಗಳನ್ನು ದುರುದ್ದೇಶಗಳೆಂದು ಪ್ರಜೆಗಳಿಗೆ ಬೋಧಿಸುತ್ತಿದ್ದುದರಿಂದಲೂ ಆಕೆಗೆ ಅಂಥ ಶಿಕ್ಷೆ ವಿಧಿಸಲ್ಪಟ್ಟಿತೇ ಹೊರತು ಆಕೆಯ ಅಭಿಪ್ರಾಯವು ಕೆಟ್ಟದೆಂಬ ಕಾರಣದಿಂದಲ್ಲ." ಎಂಬುದಾಗಿ ತಿಳಿಯಿಸಲ್ಪಟ್ಟಿತು.

ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿರುವ ಜೇಮ್ಸ್ ಬಟ್ಲರ್ ಎಂಬುವರು ಸಾಕಿದ ಡೈರೆಕ್ಟರ್ ಎಂಬ ೧೦ ವರ್ಷದ ಕುದುರೆಯು ವಾಯುವೇಗದಿಂದ ಓಡುವುದರಲ್ಲಿ ಜಗತ್ಪ್ರಸಿದ್ಧವಾಗಿದೆ. ಇದು ಪ್ರಪಂಚಕ್ಕೆಲ್ಲಾ ಮೇಟಿಯಾಗಿ ೧೨ ಸಲ ಪ್ರಸಿದ್ಧವಾದ ಪಂದ್ಯಗಳಲ್ಲಿ ಗೆದ್ದಿರುತ್ತದೆ. ವೇಗವಾಗಿ ಓಡುವುದರಲ್ಲಿ ಸದ್ಯಃ ಇದನ್ನು ಮೀರಿಸುವ ಕುದುರೆಯು ಜಗತ್ತಿನಲ್ಲೇ ಇಲ್ಲವಂತೆ. ಇದನ್ನು ಬಟ್ಲರ್‌ರವರು ಈಗ್ಗೆ ೩ ವರ್ಷಗಳ ಕೆಳಗೆ ೩೫೦೦೦ ಡಾಲರಿಗೆ (ಬಹುಶಃ ೧ ಲಕ್ಷದಮೇಲೆಯೇ ಆಯಿತು.) ಈ ಕುದುರೆಯು ಒಂದುಸಲ ೫೫॥ ಸೆಕೆಂಡಿನಲ್ಲಿ (೧ ನಿಮಿಷವೂ ಆಗಲಿಲ್ಲ.) ಅರ್ಧ ಮೈಲಿ ದೂರವನ್ನೋಡಿದ್ದಿತು.

ಈಗಣ ಯುದ್ಧದಲ್ಲಿ ಇಂಗ್ಲೀಷ್ ದೇಶದ ಪಕ್ಷದಲ್ಲಿ ಎಷ್ಟು ಲಕ್ಷ ಮಂದಿಗಳು ಕೆಲಸಮಾಡುತ್ತಿರುವರೆಂಬುದನ್ನು ಮುಖ್ಯಮಂತ್ರಿ ಲಾಯಿಡ್ ಜಾರ್ಜರವರು ವರ್ಣಿಸುವ ಸಂದರ್ಭದಲ್ಲಿ- ನೌಕಾದಳದಲ್ಲಿ ೫ ಲಕ್ಷ ಮಂದಿ ಸೈನಿಕರೂ, ಭೂದಳದಲ್ಲಿ ೫೦ ಲಕ್ಷ ಮಂದಿಗಳೂ ಸೇರಿ ಕೆಲಸಮಾಡುತ್ತಿರುವರು. ಅಲ್ಲದೆ ಆಂಗ್ಲ ಸಾಮ್ರಾಜ್ಯಕ್ಕೆ ಸೇರಿದ ಅಧಿನಿವೇಶಗಳಿಂದ ಬಂದಿರುವ ಸೈನ್ಯವು ೧೦ ಲಕ್ಷವು. ಮತ್ತೂ ಕಲ್ಲಿದ್ದಲ ಗಣಿಗಳಲ್ಲಿ ೨೦ ಲಕ್ಷ ಮಂದಿಗಳೂ ಮದ್ದುಗುಂಡುಗಳ ನಿರ್ಮಾಣ ಮೊದಲಾದ ಕೆಲಸಗಳಲ್ಲಿ ಹೆಂಗುಸರು ಮಕ್ಕಳು ಗಂಡಸರು ಮೊದಲಾದವರೆಲ್ಲಾ ಸೇರಿ ೪೦ ಲಕ್ಷ ಮಂದಿಗಳೂ ಕೆಲಸಮಾಡುತ್ತಿರುವರು.

ಪ್ಯಾರಿಸ್ಸಿನಲ್ಲಿ ಮಿತ್ರಮಂಡಲಿಯವರೆಲ್ಲಾ ಬಾಲ್ಕನ್ನಿನ ವಿಷಯವಾಗಿ ಆಲೋಚಿಸುವುದಕ್ಕೆ ಕೂಡಿದ್ದ ಸಭೆಯಕಾರ್ಯವೆಲ್ಲಾ ಮುಗಿಯಿತು. ಇದರಿಂದ ಮಿತ್ರಮಂಡಲಿಯವರ ಮೈತ್ರಿಯು ಮತ್ತಷ್ಟು ದೃಢಪಡಿಸಲ್ಪಟ್ಟಿತು. ಜಾತೀಯ ಸ್ವಾತಂತ್ರ್ಯದ ರಕ್ಷಣೆಗಾಗಿ ಬಾಲ್ಕನ್ ಸಂಸ್ಥಾನಗಳ ಸ್ವಾತಂತ್ರ್ಯವನ್ನು ಮುಖ್ಯವಾಗಿ ಕಾಪಾಡುವುದಕ್ಕೆ ಮೊದಲಿಗಿಂತಲೂ ಹೆಚ್ಚಿನ ದೃಢಸಂಕಲ್ಪವೂ ಐಕ್ಯವೂ ಉಂಟುಮಾಡಿಕೊಳ್ಳಲ್ಪಟ್ಟಿತು. ಜರ್ಮನರ ನಿರಂಕುಶಾಧಿಕಾರದಿಂದ ಇದುವರೆಗೆ ನಡೆದಿರುವಂಥ ವಿದೇಶಾಕ್ರಮಣವು ಮುಂದೆಂದಿಗೂ ನಡೆಯದಂತೆ ಮಾಡಬೇಕೆಂಬ ತಮ್ಮಗಳ ಮುಖ್ಯೋದ್ದೇಶವು ನೆರವೇರುವವರೆಗೂ ಮಿತ್ರಮಂಡಲಿಯವರಾರೂ ಶಸ್ತ್ರವನ್ನು ಕೆಳಕ್ಕಿಡಕೂಡದೆಂದು ತೀರ್ಮಾನಿಸಲ್ಪಟ್ಟಿತು.

ಫ್ರೆಂಚ್ ಶಾಸ್ತ್ರಜ್ಞನೊಬ್ಬನು ಜಗತ್ತಿನಲ್ಲಿ ಯಾವಯಾವ ವೃತ್ತಿಯವರಲ್ಲಿ ಹುಚ್ಚು ಎಷ್ಟೆಷ್ಟುಮಟ್ಟಿಗೆ ಹಿಡಿಯುವುದೆಂಬುದನ್ನು ಈ ಕೆಳಗೆ ಕಂಡಂತೆ ವಿವರಿಸಿರುತ್ತಾನೆ.—ಭೂದಳಸೈನ್ಯಗಳಲ್ಲಿ ಕೆಲಸಮಾಡುವವರೊಳಗೆ ೧ ಲಕ್ಷಕ್ಕೆ ೧೯೯ ಮಂದಿಗಳು ಹುಚ್ಚರಾಗುವರು. ಚಿತ್ರಗಾರರು ವಕೀಲರು ಪಾದರಿಗಳು, ವೈದ್ಯರು, ಪಂಡಿತರು, ಸರ್ಕಾರದಧಿಕಾರಿಗಳು-ಇವರಲ್ಲೆಲ್ಲಾ ಲಕ್ಷಕ್ಕೆ ೧೭೭ ಮಂದಿಗಳು (ಇವರಲ್ಲಿ ಮೊದಮೊದಲು ಹೇಳಲ್ಪಟ್ಟ ಹೆಸರಿನವರಿಗಿಂತ ಕಡೆಕಡೆಯ ಹೆಸರಿನ ಉದ್ಯೋಗಿಗಳಲ್ಲಿ ಸ್ವಲ್ಪಸ್ವಲ್ಪ ಕಡಿಮೆಯಾಗಿರುವುದು.) ಪಂಚಾಂಗಕರು ಕೂಲಿಗಾರರು ಮೊದಲಾದವರಲ್ಲಿ ಲಕ್ಷಕ್ಕೆ ೧೨೫ ಮಂದಿಗಳು. [illegible] ಕೆಲಸಗಾರರಲ್ಲಿ ಲಕ್ಷಕ್ಕೆ [illegible] ವ್ಯಾಪಾರಿಗಳಲ್ಲಿ ಲಕ್ಷಕ್ಕೆ ೫೨ ಮಂದಿಗಳು.

ಪತ್ರವ್ಯವಹಾರ.

ಗೋರೀಬಿದನೂರು ತಾಲ್ಲೂಕು ನಾಮಗೊಂಡ್ಲು ವಿ. ಎ. ಬಾಯ್ಸ್ ಸ್ಕೂಲ್ ಉಪಾಧ್ಯಾಯರ ಸಂಘ.

[illegible]

ಚಿಂತಾಮಣಿ ತಾ॥ ಮುಂಗಾನಹಳ್ಳಿ ಹೋಬಳಿ ಕೋಟೆಬೀದಿಯಲ್ಲಿ ಶ್ರೀ ವೆಂಕಟೇಶಮಿತ್ತರು ಮುಂಗಾನಹಳ್ಳಿ ಜಾತ್ರೆ ಕಾಲದಲ್ಲಿ ನಡೆದ ಹೋಬಳಿ ಕಾನ್ಫರೆನ್ಸ್ ಮತ್ತು ಎಗ್ಜಿಬಿಷನ್.

[illegible]

ರಾಯಪ್ಪನವರಿಗೂ ಶ್ರೀ ವೆಂಕಟರಮಣಸ್ವಾಮಿಯವರು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥನೆ. ಪ್ರತ್ಯಕ್ಷದರ್ಶಿ.

ಮೈಸೂರು ಸಂಪದಭ್ಯುದಯ ಸಮಾಜ

ವಿದ್ಯಾಭ್ಯಾಸದ ಕಮಿಟಿ.

ಇಸ್ತಿಹಾರ್‌ನಾಮೆ ನಂ. ೮೦ ಮಿಸ್.—

ವಿದ್ಯಾಭ್ಯಾಸದಲ್ಲಿ ಹಿಂದಾದ ಜಾತಿಯವರಿಗೋಸ್ಕರವಾಗಿ ಮೈಸೂರ್ ಸರ್ಕಾರದಿಂದ ಏರ್ಪಾಡಾಗಿರುವ ವಿದ್ಯಾರ್ಥಿವೇತನಗಳು.

ಇದರಿಂದ ತಿಳಿಯಪಡಿಸುವುದೇನೆಂದರೆ:-ವಿದ್ಯಾಭ್ಯಾಸದಲ್ಲಿ ಹಿಂದಾದ ಜಾತಿಯವರಿಗೆ ಯೂನಿವರ್ಸಿಟಿ ತರಗತಿಗಳಲ್ಲಿ ಪಡೆಯತಕ್ಕ ವಿದ್ಯಾರ್ಥಿವೇತನಗಳು ಯೂನಿವರ್ಸಿಟಿ ಆಲೋಚನಾ ಸಭೆಯವರಿಂದ ಕೊಡಲ್ಪಡುತ್ತವೆ. ಮತ್ತು ಇದಕ್ಕಾಗಿ ಬರೆದುಕೊಳ್ಳುವ ದರಖಾಸ್ತುಗಳನ್ನು ಮೈಸೂರ್ ಯೂನಿವರ್ಸಿಟಿ ರಿಜಿಸ್ಟ್ರಾರವರಿಗೆ ರವಾನಿಸತಕ್ಕದ್ದು.

ಪ್ರೀಕೊಲೀಜಿಯೇಟ್ ತರಗತಿ ಅಂದರೆ ಹೈಸ್ಕೂಲಿಗಳ ಯೂನಿವರ್ಸಿಟಿ ಎಕ್ಸ್‌ಟೆನ್ಸ್ ತರಗತಿಯಲ್ಲಿ ಕೊಡಲ್ಪಡತಕ್ಕ ವಿದ್ಯಾರ್ಥಿವೇತನಗಳು ಮೈಸೂರು ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಸೆಂಟ್ರಲ್ ಕಮಿಟಿಯವರಿಂದ ಕೊಡಲ್ಪಡುತ್ತವೆ. ಅಪೇಕ್ಷೆಯುಳ್ಳವರು ತಾವು ಓದುತ್ತಿರುವ ಅಥವಾ ಓದಿದ ಪಾಠಶಾಲೆಯ ಹೆಡ್ಮಾಸ್ಟರ ಮುಖಾಂತ್ರ ವಿಧಾಯಕವಾದ ಫಾರಂನಲ್ಲಿ ದರಖಾಸ್ತುಗಳನ್ನು ಕಳುಹಿಸಬೇಕು. ಬೆಂಗಳೂರಿನಲ್ಲಿರುವ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಸೆಂಟ್ರಲ್ ಕಮಿಟಿಯ ಸೆಕ್ರೆಟರಿಯವರಿಗೆ ದರಖಾಸ್ತು ಮಾಡಿ ನಮೂನೆಗಳನ್ನು ಪಡೆಯಬಹುದು.

ಹೈಸ್ಕೂಲು ತರಗತಿಗಳಲ್ಲಿ ಕೊಡಲ್ಪಡುವ ವಿದ್ಯಾರ್ಥಿವೇತನಗಳು ಡಿಸ್ಟ್ರಿಕ್ಟ್ ಕಮಿಟಿಯವರಿಂದ ಕೊಡಲ್ಪಡುತ್ತವೆ. ಅಪೇಕ್ಷೆಯುಳ್ಳವರು ತಾವು ಓದುತ್ತಿರುವ ಅಥವಾ ಓದಿದ ಪಾಠಶಾಲೆಯ ಹೆಡ್ಮಾಸ್ಟರ್ ಮುಖಾಂತ್ರ ವಿಧಾಯಕವಾದ ನಮೂನೆಗಳಲ್ಲಿ ದರಖಾಸ್ತುಗಳನ್ನು ಕಳುಹಿಸಬೇಕು. ಆಯಾ ಡಿಸ್ಟ್ರಿಕ್ಟ್ ಕಮಿಟಿಗಳ ಪ್ರೆಸಿಡೆಂಟರುಗಳಿಗೆ ದರಖಾಸ್ತು ಮಾಡಿ ನಮೂನೆಗಳನ್ನು ಪಡೆಯಬಹುದು.

ಇಂಗ್ಲೀಷು ಅಥವಾ ವರ್ನಾಕ್ಯುಲರ್ ಲೋವರ್ ಸೆಕೆಂಡರಿ ಪಾಠಶಾಲೆಯ ೪ ಮತ್ತು ೫ ನೆ ಸ್ಟ್ಯಾಂಡರ್ಡುಗಳಲ್ಲಿ ಕೊಡಲ್ಪಡುವ ವಿದ್ಯಾರ್ಥಿವೇತನಗಳು ತಾಲ್ಲೂಕು ಪ್ರೋಗ್ರೆಸ್ ಕಮಿಟಿಗಳಿಂದ ಕೊಡಲ್ಪಡುತ್ತವೆ. ಅಪೇಕ್ಷೆಯುಳ್ಳವರು ತಾವು ಓದುತ್ತಿರುವ ಅಥವಾ ಓದಿದ ಪಾಠಶಾಲೆಯ ಹೆಡ್ಮಾಸ್ಟರ್ ಮುಖಾಂತ್ರ ವಿಧಾಯಕವಾದ ನಮೂನೆಗಳಲ್ಲಿ ದರಖಾಸ್ತುಗಳನ್ನು ಕಳುಹಿಸಬೇಕು. ಆಯಾ ತಾಲ್ಲೂಕು ಪ್ರೋಗ್ರೆಸ್ ಕಮಿಟಿಗಳ ಛೇರ್ಮನ್ನರುಗಳಿಗೆ ದರಖಾಸ್ತು ಮಾಡಿ ನಮೂನೆಗಳನ್ನು ಪಡೆಯಬಹುದು. ವಿಧಾಯಕವಾದ ನಮೂನೆಗಳಲ್ಲಿ ಬರೆಯದೆ ಮತ್ತು ಸರಿಯಾದ ಅಧಿಕಾರಿಗಳ ಮುಖಾಂತ್ರ ರವಾನಿಸಲ್ಪಡದ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

ಷರಾ.—ಅಪೇಕ್ಷೆಯುಳ್ಳವರಿಗೆ ದರಖಾಸ್ತು ನಮೂನೆಗಳು ವಿದ್ಯಾಲಯಗಳ ಹೆಡ್ಮಾಸ್ಟರ್ ಬಳಿ ಸಹ ದೊರೆಯುತ್ತವೆ.

ವಿ. ಸುಬ್ರಹ್ಮಣ್ಯಯ್ಯರ್ ಸೆಕ್ರೆಟರಿ
೨ ಸೆಂಟ್ರಲ್ ವಿದ್ಯಾಭ್ಯಾಸದ ಕಮಿಟಿ.

ನೋಟೀಸ್.

ಜಗಲೂರು ತಾಲ್ಲೂಕು ಕಲ್ಲೇದೇವರ ಪುರದ ವಾಸಸ್ಥರಾದ ಮಠದ ನೀಲಕಂಠಪ್ಪನವರ ಮಗ ಶಿವರುದ್ರಪ್ಪನು ಇದರಿಂದ ತಿಳಿಯಪಡಿಸಿರುವುದೇನಂದರೆ.—

ನನ್ನ ಅವಿಭಕ್ತ ಅಣ್ಣ ಪೌತಿ ಕಲ್ಲಪ್ಪನವರ ಮಗ ರೇವಣ್ಣನು ಗೃಹಕೃತ್ಯದಲ್ಲಿ ಸರಿಯಾಗಿ ಇರದೆ ಕೆಟ್ಟ ಜನಗಳ ಸಹವಾಸಕ್ಕೆ ಸೇರಿ ಜೂಜಾಡುತ್ತ ಸೊತ್ತುಗಳನ್ನ ಹಾಳುಮಾಡುತ್ತಾ ಪೋಲಿಯಾಗಿ ತಿರುಗುತ್ತಾ ಇರುತ್ತಾನೆ ಆದ್ದರಿಂದ ಇವನಿಗೆ ಯಾರೂ ಸಾಲಗಳನ್ನು ಕೊಟ್ಟು ಕಳದುಕೊಳ್ಳಬೇಡಿ ಎಂದು ಈ ಮೂಲಕ ತಿಳಿಯಿಸಿರುತ್ತೇನೆ. ಶಿವರುದ್ರಪ್ಪ.

ಹೊಸಪುಸ್ತಕಗಳು. ಬೆಲೆಸುಲಭ.

ಶಾನುಭೋಗರುಗಳೇ ಇಲ್ಲಿನೋಡಿರಿ !!

ಈಗಿನ ಹೊಸತರಹ ಬಾಬಾ ನಮೂನೆ ಫಾರಂಗಳು ಉತ್ತಮವಾದ ಫುಲಿಸ್ಕೇಪ್ ಕಾಗದದಲ್ಲಿ ತಯಾರಿಸಿರುವುದು ದಸ್ತು ೧ ಕ್ಕೆ ಅವ್ವಲ್ ೬ ಆಣೆ, ೫ ಆಣೆ, ದುಯಂ, ೪ ಆಣೆ.

ವ್ಯವಹಾರನಿರ್ಣಯ (ಕನ್ನಡಾ ಲಾ)	೧—೮—೦
ನ್ಯಾಯದರ್ಪಣ ಡಿ.	೧—೮—೦
ಶ್ರೀಮತ್ ಕಾಶಿ, ಪ್ರಯಾಗ ಗಯಾತೀರ್ಥಕ್ಷೇತ್ರ ಮಹಾತ್ಮವು	೧—೦—೦
ಆಶ್ವಲಾಯನ ಪೂರ್ವಪ್ರಯೋಗ	೨—೦—೦
ಕನ್ನಡ ೫ ನೇ ತರಗತಿ ರೇಖಾಗಣಿತ	೦—೪—೦
ಇಲಾಖೆಯ ೩ ನೇ ಪುಸ್ತಕದ ನೋಟ್ಸು	೦—೪—೦
೧೯೧೪ ಕನದ ಟೆಕ್ಸ್ಟು ನೋಟ್ಸು	೦—೮—೦
ಲೇಖಕತ್ವ ಪ್ರಕಾಶಿಕೆ (ಅರ್ಜಿಯ ನಮೂನೆಗಳುಳ್ಳದ್ದು)	೦—೪—೦
ಆರೋಗ್ಯಪ್ರಶ್ನೋತ್ತರ	೦—೧—೦

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್ ಸನ್ಸ್
10 ವಿದ್ಯಾನಿಧಿ ಬುಕ್‌ಡಿಪೋ, ಮೈಸೂರು.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

38 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚುಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

೧೯೧೩ ನೆಯ ಇಸವಿ ಆಗಸ್ಟ್ ತಾ॥ ೫ ರಿಂದ ೧೯೧೩ ನೆಯ ಆಗಸ್ಟ್ ತಾ॥ ೧೧ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೫ ನೆಯ ಶ್ರೀಮತ್ಪ್ರಮಾದೀಚ ನಾಮಸಂವತ್ಸರದ ಶ್ರಾವಣ ಬ॥ ತದಿಗೆಯಿಂದ ಶ್ರಾವಣ ಬ॥ ನವಮಿವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಆಟ ತೇದಿ
5	ಭಾನು	ತದಿಗೆ	52-58	ಶತಭಿಷ	28-37	21
6	ಸೋಮ	ಚೌತಿ	47-2	ಪೂಭಾ	24-30	22
7	[1] ಮಂಗಳ	ಪಂಚ	41-25	ಉಭಾ	20-49	23
8	ಬುಧ	ಷಷ್ಠಿ	36-33	ರೇವತಿ	17-35	24
9	[2] ಗುರು	ಸಪ್ತಮಿ	32-24	ಅಶ್ವಿನಿ	15-7	25
10	[3] ಶುಕ್ರ	ಅಷ್ಟಮಿ	29-10	ಭರಣಿ	13-28	26
11	[4] ಶನಿ	ನವಮಿ	27-2	ಕೃತ್ತಿಕೆ	12-51	27

(1) ಮಂಗಳಗೌರೀವ್ರತಂ ದಗ್ಧಯೋಗಃ. (2) ಜನ್ಮಾಷ್ಟಮೀ ಬಹುಳವ್ರತಂ. (3) ಆದಿಶುಕ್ರವಾರಂ. (4) ಶ್ರಾವಣಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪತ್ರಜ್ಞನಕ್ಷತ್ರನೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮುಂಚತ್ಪ್ರಿಯಂಸದಾಪುರಿಗೆ ಗೌರೀಕಾಮುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ಗ ೧೯೧೩ ನೆಯ ಇಸವಿ ಆಗಸ್ಟ್ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ ೩೨

REGISTERED NO. M. 124.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಪ್ಯಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇವರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶ್ರೀಕರಕಸ್ತೂರಿಮಾತ್ರೆ

ಬಿಳಿ ಕಸ್ತೂರಿ, ಚಿನ್ನದರೇಖು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರ, ಶೀತವಾಯು, ಹಲ್ಲುನೋವು, ಆಲಸ್ಯಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅದ್ಭುತಗುಣಗಳಿಂದ ಕೂಡಿದ್ದು) ೩೦ ದಿನಕ್ಕೆ ಆಗುವ ಪುಡಿ ೧ ಆಣೆ. ನಾರಿಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ

ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಆಮೋದಿನಿ (ಸುಖಶಯ್ಯ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಪಟ್ಟಿ ಟಿರುಬೇಕು. ಹೆಚ್ಚು ಔಷದ ತರಿಸಿದರೆ ಹೆಚ್ಚು ರಿಯಾಯತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
13 ಸದ್ವೈದ್ಯಶಾಲಾ ನಂಜನಗೂಡು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇಸ್ತಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರವಲಿಶೂಲಿ, ನಡಶೂಲಿ, ವಾತಶೂಲಿ, ರಕ್ತಪಿತ್ತ, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರದಿ ಮುಟ್ಟದೋಷ, ಹೆಂಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರವಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗವಿದ್ದರೂ ೧೬೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೋಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
23 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 37

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ ಬರ್ಮಾ, ಸಿಲೋನ್, ಮಲೆಮಸ್ಸೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹಾಮಹಾಶಿಗೂ ವೈದ್ಯರ ಸಮಯವನ್ನು ಕಾದು ನೋಡಿಯುದುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟತನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.



ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಚ್. ಮೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಚ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ನಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಳೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳ ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶಕಾರಿಕೆ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—೫—೦
ಹಂದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಕಾಶಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ನೆಯ ಇಸವಿ ಆಗಸ್ಟ ತಾ|| ೧೨ ನೆಯ ಭಾನುವಾರ.

ದೇಶಭಾಷೆಯಿಂದ ಶಾಸ್ತ್ರೀಯೋಪನ್ಯಾಸಗಳು.

ಲೌಕಿಕ ಸಂಪತ್ಸಾಧನೆಗೆ ಪ್ರಾಕೃತಿಕ ಶಾಸ್ತ್ರವಿಜ್ಞಾನವು ಮುಖ್ಯಸಾಧನವೆಂಬ ಸಂಗತಿಯು ಪಾಶ್ಚಾತ್ಯ ದೇಶಗಳ ಅಭಿವೃದ್ಧಿಮರ್ಮವನ್ನು ವಿಚಾರಮಾಡುವವರಿಗೆಲ್ಲಾ ಚೆನ್ನಾಗಿ ಗೊತ್ತಾಗುವುದು. ನಾವೂ ನಮ್ಮ ದೇಶವೂ ಐಹಿಕಸಂಪತ್ತಿನಲ್ಲಿ ಪಾಶ್ಚಾತ್ಯರಂತೆ ಆಗಬೇಕಾದರೆ ಅವರಲ್ಲಿರುವ ಶಾಸ್ತ್ರೀಯ ವಿಜ್ಞಾನಾಭಿವೃದ್ಧಿಯನ್ನು ನಮ್ಮಲ್ಲೂ ಮಾಡಿಕೊಳ್ಳಬೇಕಾದುದು ಪರಮಾವಶ್ಯಕವು. ಭರತಖಂಡದಲ್ಲಿ ಈಚೆಗೆ ಪ್ರಚಾರದಲ್ಲಿ ಬಂದಿರುವ ವಿದ್ಯಾಭ್ಯಾಸ ಪದ್ಧತಿಯಲ್ಲಿ ಕೇವಲ ಸಾರಸ್ವತ ವಿಷಯಕ್ಕೆ ಪ್ರಾಮುಖ್ಯವು ಕಲ್ಪಿಸಲ್ಪಟ್ಟಿತೇ ಹೊರತು ವಿಜ್ಞಾನಾಭಿವೃದ್ಧಿಗೆ ತಕ್ಕ ಅನುಕೂಲ್ಯವು ಒದಗಿಸಲ್ಪಡಲಿಲ್ಲ. ಬರುಬರುತ್ತ ಆ ಲೋಪವು ದೇಶೀಯರ ಮನಸ್ಸಿಗೆಲ್ಲಾ ಹೊಳೆಯುತ್ತ ಬಂದುದರಿಂದ ದೇಶೀಯರನ್ನು ಪ್ರಾಕೃತಿಕಶಾಸ್ತ್ರ ವಿಜ್ಞಾನಕುಶಲರನ್ನಾಗಿ ಮಾಡಿಸಬೇಕೆಂದು ಈಗ ವಿಶೇಷವಾದ ಚಳವಳಿಯನ್ನು ಮಾಡಲುಪಕ್ರಮಿಸಿರುತ್ತಾರೆ. ಇಂಥ ವಿಜ್ಞಾನಾವಾಪ್ತಿಗೆ ಸಾಧಕಗಳಾದ ಗ್ರಂಥಗಳು ಸದ್ಯಃ ಕಾಲದಲ್ಲಿ ರಾಜಭಾಷೆಯಲ್ಲಿರುವಮಟ್ಟಿಗೆ ದೇಶಭಾಷೆಗಳಲ್ಲಿರುವುದಿಲ್ಲ. ಪ್ರಜಾಸಾಮಾನ್ಯಕ್ಕೂ ರಾಜಭಾಷಾಜ್ಞಾನವು ಇರುವುದಿಲ್ಲ. ೧೦೦೦ ಮಂದಿಗಳಲ್ಲಿ ೫-೬ ಮಂದಿಗಳು ಇಂಗ್ಲೀಷನ್ನು ಬಲ್ಲವರಿರಬಹುದು. ಅದುಕಾರಣ ಅಂಥ ವಿಜ್ಞಾನಪ್ರಾಪ್ತಿಯು ಸಾಮಾನ್ಯ ಪ್ರಜೆಗಳಿಗೆಲ್ಲಾ ಉಂಟಾಗುವುದು ದುರ್ಘಟಸಂಭವವಾಗಿಯೇ ಇರುತ್ತದೆ. ಎಲ್ಲ ಪ್ರಜೆಗಳಲ್ಲೂ ವಿಜ್ಞಾನವ್ಯಾಪನೆಯನ್ನುಂಟುಮಾಡಬೇಕಾದರೆ ದೇಶಭಾಷೆಯು ಮುಖ್ಯಸಾಧನವೇ ಹೊರತು ಅನ್ಯಭಾಷೆಯು ಆಗಲಾರದು. ಈ ಕಾರಣದಿಂದಲೇ ಸದ್ಯಃ ಭರತಖಂಡದಲ್ಲಿ ಯಾವ ಮೂಲೆಯಲ್ಲೂ ಯಾವ ಸಂಘಗಳಲ್ಲೂ ಯಾವ ಸಭೆಗಳಲ್ಲೂ ದೇಶಭಾಷಾಮೂಲಕ ವಿದ್ಯಾಭ್ಯಾಸ ನಡೆಯಿಸಬೇಕೆಂಬ ಸಮಸ್ಯೆಯೇ ಪ್ರಮುಖತ್ವವನ್ನು ವಹಿಸಿ ನಿಂತಿರುತ್ತದೆ. ಜಪಾನರು ಕೋಟಿಗಟ್ಟಲೆ ರೂ. ಗಳನ್ನು ವ್ಯಯಮಾಡಿ ಪಾಶ್ಚಾತ್ಯ ವಿಜ್ಞಾನಸರ್ವಸ್ವವನ್ನೆಲ್ಲಾ ತಮ್ಮ ದೇಶಭಾಷಾಗ್ರಂಥಗಳಲ್ಲಿ ಕ್ರೋಢೀಕರಿಸಿಕೊಂಡು ಸ್ವದೇಶಕ್ಕೆ ಅಕ್ಷಯವಾದ ಮಹಾನಿಧಿಯನ್ನು ಕಲ್ಪಿಸಿಕೊಂಡರು. ಈಗ ಆ ದೇಶದ ಯಾವೊಬ್ಬ ವರ್ಧಿಷ್ಣುವೂ ವಿಜ್ಞಾನಸಾಧನೆಗಾಗಿ ಪರಭಾಷೆಯ ಗ್ರಂಥದ ಹಾದಿಯನ್ನು ನಿರೀಕ್ಷಿಸಬೇಕಾಗಿಯೇ ಇರುವುದಿಲ್ಲ. ಜಪಾನರ ಆ ಪ್ರಯತ್ನವಿಶೇಷವನ್ನು ಉದಾಹರಣವಾಗಿ ತೆಗೆದುಕೊಂಡರೆ, ಪಾಶ್ಚಾತ್ಯ ವಿಜ್ಞಾನತತ್ವ ಗ್ರಂಥಗಳನ್ನು ಮಾತೃಭಾಷೆಯಲ್ಲಿ ಪರಿವರ್ತಿಸಿಕೊಳ್ಳುವುದು ಸಾಹಸಿಗಳಾದ ದೇಶಭಾಷಾಪ್ರೇಮಿಗಳಿಗಾರಿಗೂ ಅಸಾಧ್ಯವೆಂದು ತೋರಲಾರದು. ದೇಶಭಾಷಾವಿಷಯಕವಾದ ಪ್ರಸ್ತಾವವು ಬಂದಾಗಲೆಲ್ಲಾ ಶಾಸ್ತ್ರೀಯ ಗ್ರಂಥಗಳನ್ನು ಸ್ವದೇಶಭಾಷೆಯಲ್ಲಿ ಪರಿವರ್ತಿಸಬೇಕಾದ ಅವಶ್ಯಕತೆಯನ್ನು ಕುರಿತು ನಾವು ಬತ್ತೊತ್ತಿ ಹೇಳುತ್ತಲೇ ಬಂದಿರುತ್ತೇವೆ.

ಸದ್ಯಕ್ಕೆ ನಮ್ಮ ಮೈಸೂರು ದೇಶವು ವಿಶೇಷಾಂಶದಿಂದ ಸ್ವಪರಿಪಾಲನ ಸ್ವಾತಂತ್ರ್ಯವನ್ನು ಪಡೆದುಕೊಂಡಿದೆಯೆಂದೇ ಹೇಳಬಹುದಾದುದರಿಂದ ಸ್ವದೇಶಭಾಷೆಗೆ ಪ್ರಾಮುಖ್ಯವನ್ನು ಕೊಡಲು ಯಾರ ಪ್ರತಿ ಬಂಧಕವೂ ಇರುವುದಿಲ್ಲ. ಇಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವೂ ಕೂಡ ಏರ್ಪಟ್ಟಿರುವುದರಿಂದ ಸ್ವದೇಶಭಾಷೆಯ ಉದ್ಧಾರಕ್ಕೆ ದಿನಕ್ರಮೇಣ ದಾರಿಯಾಗುವುದೆಂಬ ನಿರೀಕ್ಷಣೆಯೂ ಇದೆ. ನಮ್ಮ ಪ್ರಭುತ್ವದವರ ಗಮನವಾದರೂ ಅತ್ತಕಡೆಗೆ ಉಂಟಾಗಿದೆಯೆಂಬುದಕ್ಕೆ ಅನೇಕೋದಾಹರಣೆಗಳು ಸಿಕ್ಕುತ್ತಿವೆ. ಕಳೆದ ಸಂಪದಭ್ಯುದಯ ಸಮಾಜದ ಸಮಾವೇಶ ಕಾಲದಲ್ಲಿ ಹೊರಬಿದ್ದ ವಿಷಯಗಳೊಳಗೆ ಶಾಸ್ತ್ರೀಯ ವಿಷಯಗಳನ್ನು ಕನ್ನಡದಲ್ಲಿ ಬರೆಯಿಸಲು ವಿದ್ಯಾಭ್ಯಾಸ ಶಾಖಾಸಂಘದವರು ಪ್ರಯತ್ನಿಸಿರುವರೆಂಬ ವಿಷಯವು ಮಂತ್ರಿವರ್ಯರ ಮುಖವಚನದಿಂದ ಹೊರಬಿದ್ದಿದ್ದಿತು. ಈಗಳಾದರೊ ಸರ್ಕಾರದವರು ಶಾಸ್ತ್ರೀಯ ವಿಜ್ಞಾನಪ್ರಸಾರ ವಿಷಯವಾಗಿ ಕೊಟ್ಟಿರುವ ಒಂದಾನೊಂದು ಅಪ್ಪಣೆಯು ಸ್ವದೇಶಭಾಷಾಪ್ರೇಮಿಗಳಾದ ದೇಶಾಭಿಮಾನಿಗಳ ಮನಸ್ಸನ್ನೆಲ್ಲಾ ಆನಂದಪಡಿಸಲು ಸಾಧಕವಾಗಿರುತ್ತದೆ. ಅದೇನೆಂದರೆ —

ಪಾರಿಶ್ರಾಮಿಕಶಾಸ್ತ್ರ, ಶಿಲ್ಪಶಾಸ್ತ್ರ, ವ್ಯವಸಾಯಶಾಸ್ತ್ರ, ಭೂಗರ್ಭಶಾಸ್ತ್ರ, ಜ್ಯೋತಿಶ್ಶಾಸ್ತ್ರ, ರಾಸಾಯನಿಕಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ, ಶಾರೀರಕಶಾಸ್ತ್ರ, ಜಂತುಶಾಸ್ತ್ರ, ವನಸ್ಪತಿಶಾಸ್ತ್ರ ಮೊದಲಾದುವುಗಳಲ್ಲಿ ಚೆನ್ನಾಗಿ ಪಂಡಿತರಾಗಿಯೂ, ದೇಶಭಾಷೆಯಲ್ಲಿ ಪ್ರೇಮವುಳ್ಳವರಾಗಿಯೂ, ಮೈಸೂರು ಸರ್ಕಾರದ ಉದ್ಯೋಗಗಳಲ್ಲಿರುವವರಾಗಿಯೂ ಇರುವ ಕೆಲವು ಮಂದಿ ಪದವೀಧರರಾದ ವಿದ್ಯಾವಂತರುಗಳು ಬೆಂಗಳೂರಲ್ಲಿ ಒಂದು ಸಂಘವನ್ನೇರ್ಪಡಿಸಿಕೊಂಡು ದೇಶಭಾಷೆಯಮೂಲಕ ಸ್ವದೇಶೀಯರಲ್ಲಿ ಶಾಸ್ತ್ರೀಯ ವಿಜ್ಞಾನವನ್ನು ಪ್ರಸಾರಮಾಡಬೇಕೆಂಬ ಶ್ಲಾಘನೀಯವಾದ ಸಂಕಲ್ಪವನ್ನು ಮಾಡಿ ಅದಕ್ಕಾಗಿ ಕೆಲ ದಿನಗಳಿಂದಲೂ "ವಿಜ್ಞಾನ" ಎಂಬ ಹೆಸರಿನ ಮಾಸಿಕಪತ್ರಿಕೆಯನ್ನು ಬೆಂಗಳೂರಿನಿಂದ ಪ್ರಕಟಿಸುತ್ತಲಿದ್ದಾರೆ. ಇವರ ಪ್ರಯತ್ನವಿಶೇಷದಿಂದಲೇ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸ ಶಾಖಾಸಂಘದವರು ಸರ್ಕಾರಕ್ಕೆ ಸಹಾಯೋಕ್ತಿಯನ್ನು ಬರೆದು, ಈ ಸಂಘದ ಸಭಿಕರುಗಳು ದೇಶಭಾಷೆಯಲ್ಲಿ ಪ್ರಕೃತಕ್ಕೆ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಕೆಲಕೆಲವು ಉಪನ್ಯಾಸಗಳನ್ನು ಮಾಡುವಂತೆಯೂ, ಆ ಉಪನ್ಯಾಸಗಳನ್ನು ಅಚ್ಚುಮಾಡಿ ಪ್ರಕಟಿಸುವಂತೆಯೂ ಅಪ್ಪಣೆಮಾಡಿಸಿರುವರು. ಈ ಉಪನ್ಯಾಸಕರು ಇದಕ್ಕಾಗಿ ಸಂಬಳವನ್ನೇನೂ ಪ್ರತ್ಯೇಕವಾಗಿ ಪಡೆಯುವಹಾಗಿಲ್ಲ. ಬಂಡಿಬಾಡಿಗೆ ಮೊದಲಾದ ಪ್ರಯಾಣಸೌಕರ್ಯವನ್ನೂ, ಉಪನ್ಯಾಸಕಾಲಕ್ಕೆ ಅವಶ್ಯಕವಾದ ಉಪಕರಣದ್ರವ್ಯಗಳನ್ನೂ ಇವರಿಗೆ ಸರ್ಕಾರದವರು ಒದಗಿಸಿಕೊಡುವರು. ಈ ಸಂಘದವರು ಅಚ್ಚುಮಾಡಿಸುವ ಪ್ರತಿಯೊಂದು ಉಪನ್ಯಾಸಗಳಿಗೂ ವೆಚ್ಚಕ್ಕಾಗಿ ನೂರುನೂರು ರೂ. ಗಳಂತೆ ಸಹಾಯಮಾಡುವುದಲ್ಲದೆ ಪ್ರತಿಯೊಂದರ ೭೦೦ ಪ್ರತಿಗಳನ್ನು ಕೊಂಡುಕೊಳ್ಳುವಂತೆ ವಿದ್ಯಾಭ್ಯಾಸಶಾಖೆಯವರಿಗೆ ಅಪ್ಪಣೆಕೊಡಿಸಿರುವರು. ಈ ಉಪನ್ಯಾಸಾನುಕೂಲ್ಯಕ್ಕಾಗಿ ಅವಶ್ಯಕವಾದ ಸೌಕರ್ಯಗಳನ್ನು ಆಯಾಸ್ಥಲಗಳ ಸರ್ಕಾರದಧಿಕಾರಿಗಳು ಮಾಡಿಕೊಡಬೇಕೆಂದೂ ಆಜ್ಞಾಪಿಸಿರುವರು. ಈ ಪ್ರಯತ್ನವಿಶೇಷಕ್ಕಾಗಿ ವಿದ್ಯಾಭ್ಯಾಸಶಾಖೆಯವರ ವಶಕ್ಕೆ ೫೦೦೦ ರೂ. ಗಳನ್ನು ಪ್ರತ್ಯೇಕವಾಗಿಸರ್ಕಾರದವರು ಕೊಡಿಸಿರುವರು.

ದೇಶಭಾಷಾಭಿವೃದ್ಧಿ-ವಿಜ್ಞಾನವ್ಯಾಪನೆ-ಇವೆರಡನ್ನೂ ಸಾಧಿಸಬಲ್ಲ ಈ ಪ್ರಯತ್ನವಿಶೇಷವನ್ನು ಮಾಡಿದುದಕ್ಕಾಗಿ ವಿಜ್ಞಾನಪ್ರಸಾರಕಸಮಿತಿಯವರೂ ವಿದ್ಯಾಭ್ಯಾಸ ಶಾಖಾಸಂಘದವರೂ ಪ್ರಜಾರಂಜನೈಕ ಪರಾಯಣರಾದ ನಮ್ಮ ಸರ್ಕಾರದವರೂ ಸಹ ವಂದ್ಯರಾಗಿರುತ್ತಾರೆ. ಶಾಸ್ತ್ರೀಯ ಜ್ಞಾನಸಾಧನೆಗೆ ಕೇವಲ ಗ್ರಂಥಚಿಂತನಮಾತ್ರವೇ ಸಾಕಾಗುವುದಿಲ್ಲ. ಅದಕ್ಕೆ ಪ್ರತ್ಯಕ್ಷ ಪ್ರಯೋಗಾನುಭವವೂ ಅಂಗವಾಗಿದ್ದೇತೀರಬೇಕು. ಈಗಣ ಉಪನ್ಯಾಸದ ಏರ್ಪಾಟಿನಿಂದ ಪ್ರತ್ಯಕ್ಷ ಪ್ರಯೋಗಾನುಭವವು ಸ್ವಲ್ಪಮಟ್ಟಿಗೆ ಪ್ರಜೆಗಳಿಗೆ ತಿಳಿಯಲು ಸಾಧಕವಾಗಬಹುದು. ಇದರ ಲಾಭವನ್ನು ವರ್ಧಿಷ್ಣುಗಳಾದ ಪ್ರಜೆಗಳು ಅವಶ್ಯಕವಾಗಿ ಪಡೆದುಕೊಳ್ಳುವವರಾಗಬೇಕು. ಕಿವಿಯಲ್ಲಿ ಉಪನ್ಯಾಸಗಳನ್ನು ಕೇಳುತ್ತಿದ್ದಾಗಮಟ್ಟಿಗೆ ಅದರ ವಾಸನೆಯಿದ್ದು, ಸಭೆಯಿಂದೆದ್ದ ಕೂಡಲೇ ಅಳಿದುಹೋಗಲವಕಾಶವಿಲ್ಲದಂತೆ ಆಯಾ ಉಪನ್ಯಾಸಗಳನ್ನು ಕನ್ನಡದಲ್ಲೇ ಅಚ್ಚುಮಾಡಿಸಿ ಪ್ರಕಟಿಸುವುದಕ್ಕೂ ಏರ್ಪಡಿಸಿರುವುದು ಪ್ರಶಸ್ತವಾಗಿರುತ್ತದೆ. ಇಂಥ ಉಪನ್ಯಾಸಪುಸ್ತಕಗಳನ್ನು ದೇಶಭಾಷಾ ಪಾಠಶಾಲೆಗಳಲ್ಲಿ ಸಣ್ಣಂದಿನಿಂದ ಪಠ್ಯಪುಸ್ತಕಗಳಾಗೇರ್ಪಡಿಸುವಂತೆ ಮಾಡಿದರೆ ಪ್ರಯೋಜನವು ಇನ್ನೂ ಹೆಚ್ಚುವುದು. ಅದರಿಂದ ವಿಜ್ಞಾನಾಂಕುರವು ಬಾಲ್ಯದಿಂದಲೂ ಅಭಿವೃದ್ಧಿಗೊಳ್ಳಲು ಅವಕಾಶವಾಗುವುದು. ದೇಶಭಾಷೆಯ ವಿಜ್ಞಾನ ಶಾಸ್ತ್ರಭಾಂಡಾಗಾರಾಭಿವೃದ್ಧಿಗೆ ಸಾಂಗವಾಗಿ ಪ್ರತಿಶಾಸ್ತ್ರಗಳೂ ಪರಿವರ್ತಿತವಾಗಬೇಕಾದುದು ಅವಶ್ಯಕವಾಗಿರುವಕಾರಣ ಅದು ಉಪೇಕ್ಷಿಸಲ್ಪಡತಕ್ಕುದಾಗಿಲ್ಲ. ಸದ್ಯಃ ನಮ್ಮ ದೇಶದ ಪ್ರಜೆಗಳಲ್ಲಿ ವಾಚನಾಭಿರುಚಿ ಕಡಿಮೆ. ಈಗಣ ವಿದ್ಯಾಪ್ರಸಾರ ಮಹಾಪ್ರಯತ್ನದಿಂದ ದಿನಕ್ರಮೇಣ ದೇಶೀಯರಲ್ಲಿ ವಿದ್ಯಾವ್ಯಾಪನೆಯು ವಿಶೇಷವಾಗಿ ನಡೆದು, ತನ್ಮೂಲಕ ವಾಚನಾಭಿರುಚಿಯೂ ವೃದ್ಧಿಗೊಳ್ಳುವುದರಲ್ಲಿ ಸಂಶಯವಿಲ್ಲ. ಅಂಥ ಕಾಲಕ್ಕೆ ದೇಶಭಾಷೆಯ ಗ್ರಂಥಗಳ ಅವಶ್ಯಕತೆಯು ಹೆಚ್ಚಿಯೇ ಹೆಚ್ಚುವುದು. ಅದುಕಾರಣ ಈಗಣ ನವೀನ ಪ್ರಯತ್ನವನ್ನು ಆ ಮಹಾಪ್ರಯತ್ನಕ್ಕೆ (ಶಾಸ್ತ್ರೀಯಗ್ರಂಥ ಪರಿವರ್ತನ) ಆರಂಭಾಂಕುರರೂಪವನ್ನಾಗಿ ನಿಶ್ಚಯಿಸಬೇಕಾದುದೇ ಏಹಿತವು. ಕಲಿತ ವಿದ್ಯೆಗೆ ಸರ್ಕಾರದವೇತನ ಪ್ರಾಪ್ತಿಯ ಮೂಲಕ ಆತ್ಮೋದರ ಪೋಷಣೆಮಾಡಿಕೊಳ್ಳುವುದನ್ನೇ ಪರಮಾರ್ಥವೆಂದು ತಿಳಿದುಕೊಂಡಿರುವ ಅನಂತಾನಂತ ಜನರ ಮಧ್ಯದಲ್ಲಿ, ನಮ್ಮ ದೇಶದ ವಿಜ್ಞಾನಪ್ರಸಾರಕ ಸಮಿತಿಯ ಶಾಸ್ತ್ರೀಯಜ್ಞಾನಸಂಪನ್ನ ವಿಬುಧವರ್ಯರು ಕತ್ತಲೆಯೊಳಗಣ ತಾರಗೆಗಳಂತಿದ್ದು ತಮ್ಮ ಈ ಸ್ತುತ್ಯದೇಶಸೇವಾರೂಪ ಪ್ರಯತ್ನದಮೂಲಕ ನೂತನವಾದ ಮೇಲ್ಪಂತಿಯನ್ನು ಹಾಕಿ ಕೊಟ್ಟು ದೇಶೀಯರ ಧನ್ಯವಾದಕ್ಕೆ ಪಾತ್ರರಾಗಿರುವರು. ಈ ಮಹನೀಯರುಗಳು ಏತಾವನ್ಮಾತ್ರವನ್ನೇ ತಮ್ಮ ಉದ್ದೇಶದ ಪರಮಾವಧಿಯನ್ನಾಗಿ ಮಾಡಿಕೊಳ್ಳದೆ, ದೇಶಭಾಷೆಗೆ ಶಾಶ್ವತವಾದ ಸಂಪುಷ್ಟಿಯು ಶಾಸ್ತ್ರೀಯ ಗ್ರಂಥಗಳ ಮೂಲಕ ಉಂಟಾಗುವಂತೆ ಮಾಡಿ, ತಮ್ಮ ಯಶಸ್ಸನ್ನು ಚಿರಕಾಲ ಸ್ಥಾಯಿಯಾಗುವಂತೆ ಮಾಡಿಕೊಳ್ಳುವವರಾಗಲೆಂದೂ, ಅಂಥ ಪ್ರಯತ್ನಗಳಿಗೆ ನಮ್ಮ ವಿದ್ಯಾಭ್ಯಾಸಶಾಖೆಯವರೂ ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರದವರೂ ಅವಶ್ಯಕವಾದ ಸಾಹಾಯ್ಯಗಳನ್ನೊದಗಿಸಿಕೊಟ್ಟು ದೇಶಭಾಷೋದ್ಧಾರವನ್ನು ಮಾಡಿದ ಯಶಸ್ಸಿಗೆಭಾಗಿಗಳಾಗಬೇಕೆಂದೂ ಶ್ರುತಪಡಿಸುವೆವು.

ಒಳದೇಶದ ವೃತ್ತಾಂತಗಳು.

ಧಾರವಾಡ ಪ್ರಾಂತದಲ್ಲೂ ಮಳೆಯಿಲ್ಲದೆ ರೈತರು ವ್ಯಸನಗ್ರಸ್ತರಾಗಿರುವರೆಂದು ಕೇಳುತ್ತೇವೆ.

ಕೋಲಾರಡಿಸ್ಟ್ರಿಕ್ಟಿನಲ್ಲಿ ಮಳೆಯು ತಕ್ಕಮಟ್ಟಿಗೆ ನಡೆದಿರುವುದರಿಂದ ರಾಗಿಯ ಪೈರು ಚೆನ್ನಾಗಿರುವುದೆಂದು ಕೇಳುತ್ತೇವೆ.

ಶ್ರೀಮನ್ ಮಹಾರಾಜರವರು ಸಪರಿವಾರರಾಗಿ ನೀಲಗಿರಿಯಿಂದ ರಾಜಧಾನಿಗೆ ಕಳೆದ ಭಾನುವಾರದ ದಿವಸ ದಯಮಾಡಿಸಿದರು.

ಪ್ಲೇಗ್ ರೋಗವು ರಾಜಧಾನಿಯಲ್ಲಿ ಇನ್ನೂ ಶಮನವಾಗಲಿಲ್ಲ. ಎಲ್ಲ ಮೊಹಲ್ಲೆಗಳಲ್ಲೂ ಅದರ ಹಾವಳಿಯು ಇದ್ದೇ ಇದೆ. ಮಳೆಯು ಬಿದ್ದಿಲ್ಲ.

ಬೆಂಗಳೂರಿನಲ್ಲಿ ಈಗ ನಾಟಕಾಭಿನಯಮಾಡುತ್ತಲಿರುವ ಬೊಂಬಾಯಿಯ ಪ್ರಸಿದ್ಧ ಬಾಲಿವಾಲಾ ಕಂಪೆನಿಯವರು ರಾಜಧಾನಿಗೂ ಬರುವವರಾಗಿದ್ದಾರೆಂದು ಕೇಳುತ್ತೇವೆ.

ಮೈಸೂರ್ಯರ ಛಾಂಕ್ ಸೆಕ್ರಿಟರಿಯವರು ರಾಜಧಾನಿಗೆ ದಯಮಾಡಿಸಿದ್ದುದು ಶ್ರೀಮನ್ ಮಹಾರಾಜರವರನ್ನು ಸಂಸ್ಥಾನಿಕರ ಸಭಾಸಮಾವೇಶಕ್ಕೆ ಆಹ್ವಾನಿಸುವುದಕ್ಕಾಗಿಯೇ ಎಂತಲೂ, ಅದರಮೇಲೆ ನಮ್ಮ ಮಹಾರಾಜರವರು ಬರುವ ನವಂಬರ್ ತಿಂಗಳಲ್ಲಿ ಆ ಸಭೆಗಾಗಿ ದಿಲ್ಲಿ ಪಟ್ಟಣಕ್ಕೆ ದಯಮಾಡಿಸುವವರಾಗಿದ್ದಾರೆಂತಲೂ ಕೇಳುತ್ತೇವೆ.

ಸಂಸ್ಥಾನದಲ್ಲಿ ಈ ವರ್ಷ ಮಳೆಯು ಸರಿಯಾಗಿ ನಡೆಯದೆ ಬಹಳ ಚಿಂತೆಯನ್ನುಂಟುಮಾಡಿದೆ. ಹಲವುಕಡೆ ಜೋಳದ ಪೈರು ಆಗಲೇ ಇಲ್ಲ. ರಾಗಿಯನ್ನು ಬಿತ್ತುವುದಕ್ಕೂ ಮಾರ್ಗವಿಲ್ಲದೆ ರೈತರು ಕೊರಗುತ್ತಲಿದ್ದಾರೆ. ದನಗಳ ಮೇವಿಗೂ ಅಭಾವವುಂಟಾಗುತ್ತಲಿದೆ. ಜೋಳದಕಡ್ಡಿಯ ಬೆಲೆಯು ಒಂದಕ್ಕೆ ಮೂರರಷ್ಟಾಗಿದೆ. ಹಾಲು ಮೊಸರು ಬೆಣ್ಣೆಗಳ ಬೆಲೆಯು ಒಂದಕ್ಕೆರಡರಷ್ಟಾಗಿದೆ.

ರಾಜಧಾನಿಯ ಆಗ್ನೇಯದಿಕ್ಕಿನಲ್ಲೂ ದಕ್ಷಿಣದಲ್ಲೂ ಚಾಮುಂಡಿಬೆಟ್ಟದ ಅಡಿಯಲ್ಲಿರುವ ಕುರುಚುಗಾಡಾಗಿದ್ದ ಭಾಗಗಳೆಲ್ಲಾ ಸ್ಟೇಟ್ ಫಾರೆಸ್ಟಾಗಿ ಮಾಡಲ್ಪಟ್ಟಿದೆಯೆಂದು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿದೆ. ಅಟವೀಶಾಖೆಯ ನಿಬಂಧನೆಗಳ ಪ್ರಕಾರ ಇನ್ನುಮುಂದೆ ಆ ಭಾಗಗಳಲ್ಲೆಲ್ಲಾ ಪ್ರಜೆಗಳು ದನಗಳನ್ನು ಮೇಯಿಸುವುದು ಸೊಪ್ಪು ಸೆದೆ ಸೌದೆಗಳನ್ನು ಕಡಿಯುವುದು ಮೊದಲಾದ ಯಾವ ಕೆಲಸವನ್ನೂ ಮಾಡದಂತಾಯಿತು. ರಾಜಧಾನಿಯ ಪ್ರಜೆಗಳ ದನಕರುಗಳು ಹೊರಕ್ಕೆ ಹೋಗಿ ನಿಂತು ಬಾಯಾಡಿ ಬರುವುದಕ್ಕೆ ಸ್ಥಳವೇ ಇಲ್ಲದಂತಾಯಿತು.

೫೦೦ ರೂ.ಗಳಿಗೆ ಕಡಿಮೆಯಿಲ್ಲದ ಬೇರೀಜುಳ್ಳ ಗ್ರಾಮದ ಇನಾಮತಿದಾರರು ಪ್ರಜಾಪ್ರತಿನಿಧಿಸಭೆಯ ಸಭಾಸ್ತರರಾಗಲು ಅರ್ಹರೆಂದಿದ್ದ ನಿಯಮವನ್ನು ತಪ್ಪಿಸಿ, ೩೦೦ ರೂ.ಗಳಿಗೆ ಕಡಿಮೆಯಿಲ್ಲದ ಬೇರೀಜುಳ್ಳ ಇನಾಮಗ್ರಾಮವುಳ್ಳವರು ಅರ್ಹರೆಂದು ಮಾಡಬೇಕೆಂದೂ, ಇನಾಂದಾರನು ತನ್ನ ಗ್ರಾಮವಿರುವ ತಾಲ್ಲೂಕಿನಲ್ಲೇ ವಾಸಮಾಡುವವನಾಗಿರಬೇಕೆಂಬ ನಿಬಂಧನವನ್ನು ತಪ್ಪಿಸಬೇಕೆಂದೂ ಸಹ ಪ್ರಜಾಪ್ರತಿನಿಧಿಸಭೆಯಲ್ಲಿ ಅರಿಕೆ ಮಾಡಿಕೊಳ್ಳಲ್ಪಟ್ಟಿದ್ದಿತು. ಅದರಮೇಲೆ ಗೌರ್ನಮೆಂಟಿನವರು ಡಿ|| ಕಮಿಷನರುಗಳ ಅಭಿಪ್ರಾಯವನ್ನು ತರಿಸಿಕೊಂಡು, ವರ್ಷಕ್ಕೆ ೩೦೦ ರೂ. ಬೇರೀಜಿನ ೧ಅಥವಾ ಹೆಚ್ಚು ಇನಾಂಗ್ರಾಮಗಳುಳ್ಳವರು ಪ್ರಜಾಪ್ರತಿನಿಧಿಸಭಾಸಭಿಕರಾಗಿ ಆರಿಸಲ್ಪಡಲು ಅರ್ಹರಾಗಿರುತ್ತಾರೆಂದು ಅಪ್ಪಣೆಮಾಡಿ ೨ ನೆ ವಿಷಯವನ್ನು ಅಂಗೀಕರಿಸದೆ ಹೋಗಿರುತ್ತಾರೆ.

ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಐಸೊಲೇಷನ್ ಆಸ್ಪತ್ರೆಯು ಇದ್ದರೂ ಇಲ್ಲದಂತೆಯೇ. ಅದರಲ್ಲಿರುವ ಏರ್ಪಾಟು ಜನ ಚಿತ್ತಾಕರ್ಷಕವಾಗಿಲ್ಲವೆಂದೂ ನಿರ್ಗತಿಕರಾಗಿ ಅಸಹಾಯರಾಗಿರುವ ಸಾಂಕ್ರಾಮಿಕ ವ್ಯಾಧಿಗ್ರಸ್ತರು ಮಾತ್ರ ಅಲ್ಲಿಗೆ ಹೋಗಬೇಕಾಗಿದೆಯೇ ಹೊರತುಅಲ್ಲಿ ತಕ್ಕ ಉಪಚಾರಗಳೂ ಸಕ್ರಮವಾದ ಚಿಕಿತ್ಸೆಗಳೂ ನಡೆಯುವುವೆಂಬಕುತೂಹಲದಿಂದ ವ್ಯಾಧಿಗ್ರಸ್ತರೆಲ್ಲರೂ ಹೋಗುವ ಸ್ಥಿತಿಯಲ್ಲಿಲ್ಲವೆಂತಲೂ ಜನರು ಆಡಿಕೊಳ್ಳುತ್ತಿದ್ದಾರೆ. ಪ್ಲೇಗ್ ರೋಗಗ್ರಸ್ತರಿಗೆ ಔಷಧವನ್ನು ರಕ್ತನಾಳಕ್ಕೆ ಸೇರಿಸುವ ಇಲ್ಲಿನ ಯಂತ್ರದ ಸೂಜಿಯು, ಮ್ಯುನಿಸಿಪಲ್ ಪ್ರೆಸಿಡೆಂಟರ ಕುಮಾರಿಗೆ ಉಪಯೋಗಿಸಲು ತೆಗೆದುಕೊಂಡು ಹೋದಾಗ ಅದು ಅನುಪಯೋಗ್ಯವಾದ ಸ್ಥಿತಿಯಲ್ಲಿದ್ದಿತೆಂದು ಕೇಳುತ್ತೇವೆ. ಹೀಗಿದ್ದರೆ ಅಲ್ಲಿಯ ಸ್ಥಿತಿಯು ಎಷ್ಟು ಶೋಚನೀಯವಾಗಿರಬಹುದು. ಇದಕ್ಕೆ ಮೇಲ್ವಿಚಾರಕರೇ ಇಲ್ಲವೆ? ಹೊರಗಣಿಂದ ಬಂದವರಿಗೆ ಬೆರಳೆತ್ತಿ ತೋರಿಸುವುದಕ್ಕೆ ಮಾತ್ರವೇ ಈ ವೈದ್ಯಶಾಲೆ ಯಿರುವುದಾದರೆ ಪ್ರಯೋಜನವೇನು? ಇದರ ಕಟ್ಟಡಗಳಿಗೂ ಪ್ರತಿತಿಂಗಳಲ್ಲೂ ಆಗುತ್ತಿರುವ ವ್ಯಯಕ್ಕೂ ತಕ್ಕ ಪ್ರಯೋಜನವಾಗುವಂತೆ ಅಧಿಕಾರಿಗಳು ಮಾಡದಿರುವುದು ಬಹಳ ಅನ್ಯಾಯವು.

ಈಗಣ ನಮ್ಮ ಶ್ರೀಮನ್ಮಹಾರಾಜರವರ ಪ್ರಭುತ್ವಕ್ರಮದಲ್ಲಿ ಸರ್ವಪ್ರಜಾರಂಜನ ಪರಾಯಣತ್ವವು ತುಂಬಿ ತುಳುಕುತ್ತಿದೆ. ಅಂತೆಯೇ ಅವರ ರಾಜಾಸ್ಥಾನದಲ್ಲೂ ಮತಭೇದಾಸಹನೆಗೆಡೆಯಿಲ್ಲದೆ ವಿದ್ಯಾಪಕ್ಷಪಾತವು ತೋರಿಸಲ್ಪಡುತ್ತಿರುವುದು ಅಭಿನಂದನೀಯವಾಗಿದೆ. ಪೂರ್ವದಿಂದಲೂ ಕನ್ನಡ ನಾಡಿನಲ್ಲಿ ಮತತ್ರಯವರಂತೆಯೇ ಜೈನಪಂಡಿತರೂ ವೀರಶೈವಪಂಡಿತರೂ ವಿಖ್ಯಾತರಾಗಿದ್ದುಕೊಂಡು, ದೇಶಭಾಷಾಸೇವೆಯನ್ನು ಮಾಡಿ, ರಾಜಮರ್ಯಾದೆಗೆ ಪಾತ್ರರಾಗುತ್ತಾ ಬಂದಿರುತ್ತಾರೆ. ಈಗ ಕಾಲವೈಪರೀತ್ಯದಿಂದ ಮತತ್ರಯದಲ್ಲಿರುವಷ್ಟು ವಿದ್ಯಾವ್ಯಾಪಕತೆಯು ಇತರರಲ್ಲಿರುವುದಿಲ್ಲವಾದರೂ ವಿರಳವಾಗಿಯಾದರೂ ಇದೆ. ಅಷ್ಟನ್ನಾದರೂ ಪ್ರೋತ್ಸಾಹಿಸುವುದು ಸರ್ವಪ್ರಜಾಸಮದರ್ಶನರಾದ ಪ್ರಭುಗಳಿಗೆ ಕರ್ತವ್ಯವೆಂದೆಣಿಸಿ, ನಮ್ಮ ಮಹಾರಾಜರವರು ವೀರಶೈವಮತದ ಮತ್ತೂ ಜೈನಮತದ ಪಂಡಿತರನ್ನು ಆಸ್ಥಾನ ವಿದ್ವತ್ಪಙ್ತಿಗೆ ಸೇರಿಸಿ ಬಹುಮಾನಿಸುತ್ತಲಿದ್ದಾರೆ. ವೀರಶೈವರಲ್ಲಿ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳು ಇದಕ್ಕೆ ಮುಂಚೆಯೇ ಆಸ್ಥಾನ ಮಹಾವಿದ್ವತ್ಪಙ್ತಿಗೆ ಸೇರಿಸಲ್ಪಟ್ಟಿದ್ದರು. ಈಗ ವೇ|| ಎಚ್. ಆರ್. ಕರಿಬಸವಶಾಸ್ತ್ರಿಗಳೂ ಸಹ ಆಸ್ಥಾನ ವಿದ್ವಚ್ಛ್ರೇಣಿಗೆ ಸೇರಿಸಲ್ಪಟ್ಟುದು ಸಂತೋಷಪ್ರದವಾಗಿದೆ.

ಯುದ್ಧವಾರ್ತೆಯು

ಪಶ್ಚಿಮರಣರಂಗ:—ಕಳೆದ ಜುಲೈ ತಾ|| ೩೧ ರಿಂದಲೂ ಈ ರಂಗದಲ್ಲಿ ಮಿತ್ರಮಂಡಲಿಯ ಸೈನ್ಯಗಳು ತಮ್ಮ ಅವಸ್ಕಂದನವನ್ನು ಬಲಪಡಿಸಿ ಶತ್ರುಸ್ಥಾನಗಳನ್ನು ಆಕ್ರಮಿಸುತ್ತಲಿವೆ. ಇಂಗ್ಲೀಷರು ತಮ್ಮ ಎಡಗಡೆಯಲ್ಲಿರುವ ಫ್ರೆಂಚ್ ಸೈನಿಕರೊಡನೆ ವೈಪ್ರೆಸ್ಸಿಗೆ ಉತ್ತರದಲ್ಲೂ ದಕ್ಷಿಣದಲ್ಲೂ ಇರುವ ಕೆಲವು ಜರ್ಮನ್ ಸ್ಥಾನಗಳನ್ನು ಹಿಡಿದು, ಕೆಲವುಕಡೆ ೨ ಮೈಲಿಗಳ ದೂರ ಮುಂದಕ್ಕೆ ನುಗ್ಗಿಹೋಗಿರುವರು. ಹಾಲಿಬೇಕಿಗೆ ಸಮೀಪದಲ್ಲಿರುವ ಸ್ಥಳಗಳೂ ಕೂಡ ಇಂಗ್ಲೀಷರ ವಶವಾದುವು. ಉತ್ತರದಲ್ಲಿ ಫ್ರೆಂಚರು ಬಿಕ್ಸ್ ಚೂಟ್ ಎಂಬುದನ್ನು ವಶಪಡಿಸಿಕೊಂಡು ಜರ್ಮನರ ಕಂದಕದ ೩ ನೆ ಸಾಲಿಗೆ ಅಭಿಮುಖವಾಗಿ ನುಗ್ಗುತ್ತಿದ್ದಾರೆ. ಇಂಗ್ಲೀಷರು ಹಿಡಿದುಕೊಂಡಿದ್ದ ಅನೇಕ ಸ್ಥಳಗಳೊಳಗೆ ಸೆಂಟ್ ಜೂಲಿಯನ್ನನ್ನು ಪ್ರತಿ ಯುದ್ಧದಿಂದ ಜರ್ಮನರು ವಶಪಡಿಸಿಕೊಂಡರು. ಆದರೆ ಇಂಗ್ಲೀಷರು ಮತ್ತೆ ಯುದ್ಧವನ್ನು ನಡೆಯಿಸಿ ಅದನ್ನು ಆಕ್ರಮಿಸಿಕೊಳ್ಳುವುದರಲ್ಲಿದ್ದಾರೆ. ಈಗ ಈ ರಣರಂಗದಲ್ಲಿ ಅತಿವೃಷ್ಟಿಯಾಗಿ ಭೂಮಿಯೆಲ್ಲಾ ನೀರಿನ ಪ್ರವಾಹದ ಮತ್ತು ಕೆಸರಿನ ಮಯವಾಗಿದೆ. ಆದರೂ ಉಭಯಪಕ್ಷದ ಫಿರಂಗಿಗಳ ಯುದ್ಧವು ಮಹಾ ಪ್ರಳಯಸೂಚಕವಾಗಿ ನಡೆಯುತ್ತಿದೆ. ಜರ್ಮನರು ೧೩ ಪಟಾಲಮ್ಮುಗಳನ್ನು ಅನಂತಾನಂತ ಫಿರಂಗಿಗಳಸಮೇತ ಇಂಗ್ಲೀಷರಮೇಲೆ ನುಗ್ಗಿಸಿ ಬಹು ಭಯಂಕರವಾಗಿ ಯುದ್ಧಮಾಡಿದರು. ಅವರ ಶಕ್ತಿಗೆ ಮಿಗಿಲಾದ ಫಿರಂಗಿಗಳು ಇಂಗ್ಲೀಷರಲ್ಲಿದ್ದ ಕಾರಣದಿಂದ ಶತ್ರುಗಳ ಪಟಾಲಮ್ಮುಗಳಲ್ಲಿ ಬಹಳ ನಷ್ಟವುಂಟಾಗಿ ಹತಶೇಷರು ದಿಕ್ಕಾಪಾಲಾದರು. ಈ ರಂಗದಲ್ಲಿ ಮಿತ್ರಮಂಡಲಿಯ ಬಳಿಯಲ್ಲಿರುವ ಫಿರಂಗಿಗಳ ಪ್ರತಾಪದಿಂದ ಶತ್ರುಗಳು ಈಜರ್ ನದಿಯಮೇಲಿದ್ದ ತಮ್ಮ ೨ ಸಾಲು ಕಂದಕಗಳನ್ನೂ ಬಿಟ್ಟುಕೊಟ್ಟು ಹಿಮ್ಮೆಟ್ಟಿಹೋಗಬೇಕಾದುದೇನೂ ಆಶ್ಚರ್ಯವಲ್ಲ. ಜುಲೈ ತಿಂಗಳಲ್ಲೆಲ್ಲಾ ಇಂಗ್ಲೀಷರು ಈ ರಂಗದಲ್ಲಿ ೮೦೩೯ ಮಂದಿ ಶತ್ರುಸೈನಿಕರನ್ನೂ ೮ ದೊಡ್ಡ ಫಿರಂಗಿಗಳನ್ನೂ ೫೩ ಮಿಷನ್ ಫಿರಂಗಿಗಳನ್ನೂ ಹಿಡಿದುಕೊಂಡರು. ಜುಲೈ ತಾ|| ೩೧ ರಿಂದೀಚೆಗೆ ೬೦೦೦ ಕ್ಕೆ ಮೇಲ್ಪಟ್ಟ ಶತ್ರುಸೈನಿಕರನ್ನು ಈ ರಂಗದಲ್ಲಿ ಇಂಗ್ಲೀಷರು ಸೆರೆಹಿಡಿದ್ದಾರೆ. ಶತ್ರುಗಳು ತಮ್ಮ ಸೈನ್ಯಗಳನ್ನು ಬಹಳ ಗುಂಪುಗುಂಪಾಗಿ ತಂದು ಮಿತ್ರಮಂಡಲಿ ದಳಗಳಮೇಲೆ ನುಗ್ಗಿಸುತ್ತಿದ್ದಾರೆ. ಆದರೇನು? ಅಷ್ಟೂ ಅವರಿಗೆ ನಷ್ಟವೇ ಹೆಚ್ಚಾಗುತ್ತಿದೆ. ಅವರು ೧೯೧೯ ನೇ ವರ್ಷಕ್ಕೆ ಆಣೆಯಾಗುವಂಥ ಚಿಕ್ಕವಯಸ್ಸಿನ ಸೈನಿಕರನ್ನೂ ರಂಗಕ್ಕೆ ತಂದು ಮೇಲೆಮೇಲೆ ನುಗ್ಗಿಸುತ್ತಿದ್ದಾರೆ. ಸೆರೆಸಿಕ್ಕಿರುವ ಜರ್ಮನ್ ಸೈನಿಕರ ಅವಸ್ಥೆಯನ್ನು ನೋಡಲಾಗಿ, ಅವರಿಗೆ ಹೊಟ್ಟೆತುಂಬಾ ಕೂಳೂ ಸಿಕ್ಕುತ್ತಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಇಂಗ್ಲೀಷರಿಗೆ ಸೆರೆಸಿಕ್ಕಿದಬಳಿಕ ಅವರಿಗೆ ದೊರೆಯುತ್ತಿರುವ ಆಹಾರಸಮೃದ್ಧಿಯನ್ನು ಕಂಡು, ಜರ್ಮನರಿಗಿಂತ ಇಂಗ್ಲೀಷರೇ ಆಹಾರ್ಯಸಮೃದ್ಧಿಯುಳ್ಳವರಾಗಿರುವರೆಂದು ಬಾಯ್ಬಿಟ್ಟು ಅವರುಗಳು ಹೇಳುತ್ತಲಿದ್ದಾರೆ. ಮಿತ್ರಮಂಡಲಿಯವರಿಗೆ ಈ ರಂಗದಲ್ಲಿ ದೇಶಾಕ್ರಮಣಕ್ಕಿಂತಲೂ ಶತ್ರುಸೇನಾನಷ್ಟವೇ ಮುಖ್ಯ ಲಕ್ಷ್ಯವಾಗಿರುತ್ತದೆ. ಕಳೆದುಕೊಂಡ ಸ್ಥಾನಗಳನ್ನು ಮರಳಿ ವಶಪಡಿಸಿಕೊಳ್ಳಬೇಕೆಂದು ಶತ್ರುಗಳು ಭೀಷಣವಾದ ಯುದ್ಧವನ್ನು ನಡೆಯಿಸಿ ಬಹಳ ನಷ್ಟಪಡುತ್ತಿರುವುದು ಇಂಗ್ಲೀಷರಿಗೂ ಫ್ರೆಂಚರಿಗೂ ಇಷ್ಟವೇ ಆಗಿದೆ. ಅದುಕಾರಣ ಈ ರಂಗದಲ್ಲಿ ಅಹರ್ನಿಶಿಯೂ ತೆರಪಿಲ್ಲದೆ ಭೀಕರ ಯುದ್ಧಗಳು ನಡೆಯುತ್ತಿವೆ. ಫ್ರೆಂಚ್ ಸೈನ್ಯಗಳು ಬೆಲ್ಜಿಯಮ್ಮಿನಲ್ಲಿ ಬಹಳ ವೀರಾವೇಶದ ಯುದ್ಧವನ್ನು ನಡೆಯಿಸುತ್ತಿವೆ. ಇಂಗ್ಲೀಷ್ ಫ್ರೆಂಚ್ ಸೈನ್ಯಗಳೆರಡೂ ಈ ರಂಗದಲ್ಲಿ ಮಾಡುತ್ತಿರುವ ಎತ್ತುಗಡಿಯಿಂದ ಜರ್ಮನರಿಗೆ ಬೆಲ್ಜಿಯಂ ಸಮುದ್ರತೀರದಲ್ಲಿ ನಿಲ್ಲಲು ತಾಣವಿಲ್ಲದಂತೆ ಆಗುವ ಹೊತ್ತು ಬರುವುದರಲ್ಲಿದೆ. ಆಸ್ಟೆಂಡ್ ಮೊದಲುಗೊಂಡು ಜೀಬ್ರುಗ್ಗಿನವರೆಗೂ ಇರುವ ಪ್ರದೇಶದ ಹಿಂಗಡೆಯಲ್ಲಿ ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ನಿಲ್ಲುವ ಸ್ಥಿತಿಯುಂಟಾಗಿದೆ. ಈಗ ಬೆಲ್ಜಿಯಂ ರಂಗದಲ್ಲಿ ಮಿತ್ರಮಂಡಲಿಯವರ ಅವಸ್ಕಂದನವು ಸಾಗುತ್ತಿರುವಂತೆಯೇ ಇನ್ನು ಕೆಲ ಕಾಲ ನಡೆದರೆ ಮೇಲೆ ಕಂಡ ಸ್ಥಿತಿಯು ಬೇಗನೆ ಸಂಭವಿಸಬಹುದು. ೧೯೧೬ ನೆ ವರ್ಷದಲ್ಲಿ ಜರ್ಮನರು ಈ ರಂಗದ ಯುದ್ಧಗಳಲ್ಲಿ ಎಷ್ಟು ಸೇನಾನಷ್ಟವನ್ನು ಮಾಡಿಕೊಳ್ಳುತ್ತಿದ್ದರೋ ಅದಕ್ಕೆರಡರಷ್ಟನ್ನು ಈಗ ಮಾಡಿಕೊಳ್ಳುತ್ತಿದ್ದಾರೆ.

ರಷ್ಯಾರಂಗ.—ಈ ರಂಗದ ಸ್ಥಿತಿಯು ಇನ್ನೂ ಉತ್ಸಾಹಕರವಾಗಿಲ್ಲ. ರಷ್ಯನ್ ಸೈನ್ಯಗಳು ಇನ್ನೂ ಪೂರ್ಣವಾಗಿ ವಿಶ್ವಾಸಾರ್ಹವಾಗಿಲ್ಲ. ಅವುಗಳಲ್ಲಿ ವ್ಯಾಪಿಸಿರುವ ಸಂಧಿಯ ಭ್ರಾಂತಿಯನ್ನೂ, ಜರ್ಮನರ ಮಾತಿಗೆ ಮರುಳಾಗಿ ದೇಶಕ್ಕೆ ಅಧೋಗತಿಯನ್ನು ತಂದಿಕ್ಕಿಕೊಳ್ಳುತ್ತಿರುವ ದುರದೃಷ್ಟವನ್ನೂ ನಿರೋಧಿಸಿ ಅವರನ್ನೆಲ್ಲಾ ದಾರಿಗೆ ತಂದುಕೊಳ್ಳಬೇಕೆಂದು ಕೆರೆನ್ಸ್ಕಿಯವರು ಮಾಡಿದ ಸಾಹಸವೆಲ್ಲಾ ವ್ಯರ್ಥವಾಗುತ್ತ ಬಂದುದರಿಂದ ಅವರು ತಮ್ಮ ಮುಖ್ಯಮಂತ್ರಿತ್ವಕ್ಕೆ ರಾಜೀನಾಮೆಕೊಟ್ಟರು. ಆದರೆ ಅದು ಅಂಗೀಕೃತವಾಗಲಿಲ್ಲ. ಸರ್ವಸೇನಾನಾಯಕರಾಗಿದ್ದ ಜನರಲ್ ಬ್ರುಸಿಲಾಫರವರೂ ಕೂಡ ರಾಜೀನಾಮೆಕೊಟ್ಟರು. ಇವರೇ ಈಗ್ಗೆ ೧ ತಿಂಗಳ ಹಿಂದೆ ಗೆಲೀಷಿಯಾದಲ್ಲಿ ಅದ್ಭುತವಾದ ಜಯಪರಂಪರೆಯನ್ನು ಸಂಪಾದಿಸಿದ್ದವರು. ಹೀಗೆ ದೇಶಕ್ಕೆ ಕಣ್ಣಾಗಿದ್ದ ಕೆರೆನ್ಸ್ಕಿ ಬ್ರುಸಿಲಾಫಂಬ್ಬರೂ ಅಧಿಕಾರ ಮುಖ್ಯಸೂತ್ರಗಳನ್ನು ಬಿಟ್ಟು ದೂರವರ್ತಿಗಳಾದ ಬಳಿಕ ಇನ್ನು ರಷ್ಯಾವನ್ನು ಈಗಣ ಮಹಾ ದುಸ್ಥಿತಿಯಲ್ಲಿ ಉದ್ಧರಿಸುವ ಶಕ್ತರಾರು? ಈ ಚಿಂತೆಯು ರಷ್ಯಾದೇಶದ ಎಲ್ಲ ಪಕ್ಷದ ಪ್ರಮುಖರಿಗೂ ಹೊಳೆದುದು ದೈವಕೃಪೆಯು. ತಂತಮ್ಮ ಅಂತರಂಗಿಕ ಕಲಹಗಳನ್ನೇ ಮುಂದುಮಾಡಿ ಕುಳಿತುಕೊಂಡರೆ ದೇಶವು ಪಾತಾಳಗಾಮಿಯಾಗುವುದೆಂಬುದನ್ನು ಅವರುಗಳು ಅರಿತುಕೊಂಡರು. ಈ ರಾಜಕೀಯ ಶಕ್ತಿ ನಾಯಕರಲ್ಲಿ ಏಕಮತ್ಯವಿಲ್ಲದ ಕಾರಣದಿಂದಲೇ ಕೆರೆನ್ಸ್ಕಿಯವರು ರಾಜೀನಾಮೆ ಕೊಡಬೇಕಾಗಿ ಬಂದಿದ್ದಿತು. ಈಗ ಅವರೆಲ್ಲಾ ತಮ್ಮ ತಪ್ಪುಗಳನ್ನು ತಿಳಿದುಕೊಂಡು ಕೆರೆನ್ಸ್ಕಿಯವರಸಾಮರ್ಥ್ಯದಿಂದಲ್ಲದೆ ಸೇನಾ ಪುನರ್ನಿರ್ಮಾಣವೂ ದೇಶರಕ್ಷಣೆಯ ಆಗುವುದು ಸಾಧ್ಯವಲ್ಲವೆಂಬುದನ್ನು ನಿರ್ಧರಿಸಿ, ಕೆರೆನ್ಸ್ಕಿಯವರ ರಾಜೀನಾಮೆಯನ್ನು ಅಂಗೀಕರಿಸದೆ, ತಮ್ಮ ಶಕ್ತಿಭೇದಗಳನ್ನೆಲ್ಲಾ ಕಟ್ಟಿಟ್ಟು, ರಾಜ್ಯೋದ್ಧಾರಕ್ಕಾಗಿಯೇ ಗಮನಿಸುವೆವೆಂದು ಹೇಳಿಕೊಂಡಕಾರಣ, ಕೆರೆನ್ಸ್ಕಿಯವರು ಮತ್ತೆ ಪ್ರಧಾನಮಂತ್ರಿತ್ವವನ್ನು ಸ್ವೀಕರಿಸಿಕೊಂಡರು. ಈಗ ಹೊಸದಾಗಿ ಯುದ್ಧಮಂತ್ರಿ ವರ್ಗವನ್ನೂ ನೌಕಾಮಂತ್ರಿವರ್ಗವನ್ನೂ ಅವರು ಏರ್ಪಡಿಸಿದರು. ತಮಗೆ ಯಾರೂ ವಿರುದ್ಧವಾಗಿ ಪ್ರವರ್ತಿಸದಿದ್ದ ಪಕ್ಷದಲ್ಲಿ ತಾವೂ ಸರ್ವಸೇನಾಧಿಪತ್ಯವನ್ನು ವಹಿಸುವೆವೆಂದು ಹೇಳಿ ಕಾರ್ನಿಲಾಫ್‌ರವರು ಮುಖ್ಯಸೇನಾಧಿಪತ್ಯವನ್ನು ವಹಿಸಿರುವರು. ಶತ್ರುಪಕ್ಷವನ್ನು ವಹಿಸಿಯೂ, ಹಿಂದಣ ರಷ್ಯಾ ಚಕ್ರವರ್ತಿಯವರೊಡನೆ ಕಾಗದಪತ್ರಗಳನ್ನು ರಹಸ್ಯವಾಗಿ ನಡೆಯಿಸುತ್ತ ದುರಾಲೋಚನೆ ಮಾಡುತ್ತಲೂ, ಸರ್ಕಾರದ ಉದ್ಯೋಗದಲ್ಲೇ ಇದ್ದ ಅನೇಕ ಮಂದಿಗಳನ್ನು ಈಗಣ ಪ್ರಭುತ್ವದವರು ಸೆರೆಹಿಡಿದುಹಾಕಿರುವರು. ದ್ರೋಹಿಗಳಾದ ಸೈನಿಕರಿಗೂ ಸೈನ್ಯಾಧಿಕಾರಿಗಳಿಗೂ ತಕ್ಕ ಶಿಕ್ಷೆಗೇರ್ಪಾಟುಮಾಡಿರುವರು. ರಷ್ಯಾ ರಣರಂಗದ ಸ್ಥಿತಿಯೂ ಸ್ವಲ್ಪ ಸುಮುಖವಾದಂತೆ ಕಾಣುತ್ತಿದೆ. ಇದುವರೆಗೆ ಕಳೆದುಕೊಂಡ ಪ್ರದೇಶಗಳು ಹೋಗುತ ಉಳಿದುದನ್ನು ರಕ್ಷಿಸಿಕೊಳ್ಳುವುದರಲ್ಲಿ ರಷ್ಯನ್ ಸೈನ್ಯಗಳು ವ್ಯಗ್ರವಾಗಿರುವುದಲ್ಲದೆ, ಕೆಲವುಕಡೆ ಮತ್ತೆ ಯುದ್ಧ ನಡೆಯಿಸಿ, ಮುಂದಕ್ಕೆ ಸಾಗುತ್ತಲೂ ಇವೆ. ಜರ್ನೋವಿಟ್ಜಿಗೆ ವಾಯವ್ಯದಲ್ಲಿರುವ ಅನೇಕ ಪರ್ವತಪಙ್ತಿಗಳನ್ನು ರಷ್ಯನರು ಆಕ್ರಮಿಸಿದ್ದಾರೆ. ಟೋಪಿರವೀಸ್ ಕಡೆಗೆ ಶತ್ರುಗಳನ್ನು ಓಡಿಸಿದ್ದಾರೆ. ಕೋಟ್ಸ್ ಪ್ರಾಂತದಲ್ಲಿ ಶತ್ರುಗಳು ೫೫ ಮೈಲಿಗಳಷ್ಟು ದೂರ ಹಿಂದಕ್ಕೆ ನೂಕಲ್ಪಟ್ಟರೆಂದು ಒಂದು ವಾರ್ತೆಯು ಹೇಳುತ್ತಿದೆ. ಮತ್ತೂ ರಷ್ಯಾ ಸೈನ್ಯಗಳು ೫೨೦ ಮಂದಿ ಶತ್ರುಸೈನಿಕರಸಮೇತ ಡಾಲ್ ಕೋಜು ಎಂಬ ಊರನ್ನು ಹಿಡಿದುಕೊಂಡರೆಂದೂ ಗೊತ್ತಾಗುತ್ತದೆ. ರಷ್ಯನರ ಸೇನಾ ಪುನರ್ನಿರ್ಮಾಣವು ಸಂಪೂರ್ಣವಾಗಿ ಸಾಗಿದರೆ ಮರಳಿ ಅವರು ಜಯಪರಂಪರೆಯನ್ನು ಪೂರ್ವದಂತೆಯೇ ಪಡೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಅಮೇರಿಕನ್ನರ ಸಹಾಯವು ಪಶ್ಚಿಮರಂಗಕ್ಕೆ ಒದಗುವುದರೊಳಗಾಗಿಯೇ ಈ ಪೂರ್ವರಂಗದ ಯುದ್ಧವನ್ನು ಸಂಧಿಮೂಲಕವಾಗಿಯೋ ಅಥವಾ ಪೂರ್ಣ ಜಯದಿಂದಲೋ ಮುಗಿಯಿಸಿಕೊಳ್ಳಬೇಕೆಂಬ ಆತುರವು ಜರ್ಮನರಿಗೆ ವಿಶೇಷವಾಗಿದೆ. ದೈವಸಂಕಲ್ಪವು ಹೇಗಿದೆಯೋ ನೋಡಬೇಕು. ಶತ್ರುಗಳು ಕಿಂಪೋಲುಂಗಿನಕಡೆಯ ತಮ್ಮ ದಾಳಿಯನ್ನು ಮುಂದಕ್ಕೆ ಸಾಗಿಸುತ್ತ ಬ್ರಿಸ್ಟ್ರಿಟ್ಜಾವನ್ನೂ ಕೂಡ ದಾಟಿಹೋದರು. ಜರ್ಮನರಿಗೆ ಒಡಿಸ್ಸಾ ಎಂಬ ತೀರಪಟ್ಟಣವನ್ನು ಹಿಡಿದುಕೊಳ್ಳಬೇಕೆಂಬ ಆಸೆಯು ಬಹಳವಾಗಿದೆ. ಅದಕ್ಕಾಗಿ ಅವರು ಹಾಮಿನಿಟ್ಜಿನಕಡೆಗೆ ಬಹಳ ಸೈನ್ಯಗಳನ್ನು ಸಾಗಿಸುತ್ತಿದ್ದಾರೆ. ರಷ್ಯಾ ರಾಜ್ಯದಲ್ಲಿ ೧೫೦ ಮಂದಿ ಸ್ತ್ರೀಯರ ಒಂದು ನೌಕಾದಳವೂ ಕೂಡ ಏರ್ಪಡಿಸಲ್ಪಟ್ಟಿದೆ.

ತುರ್ಕಿ—ಜರ್ಮನ್ ದಳವಾಯಿಯಾದ ಫಾಲ್ಕನ್‌ಹೇನನು ಗಾಜಾದ ಹತ್ತಿರ ಇರುವ ತುರ್ಕಿ ರಣರಂಗಕ್ಕೆ ಹೋಗಿ ಪರಿಶೀಲಿಸಿಕೊಂಡು ಬಂದನಂತೆ. ಸಿರಿಯಾ ಪ್ರಾಂತದ ಯುದ್ಧವನ್ನು ಕುರಿತು ತುರ್ಕಿ ಸೈನ್ಯಾಧಿಪತಿಗಳು ಬಹಳ ಶ್ರದ್ಧೆಯಿಂದ ಆಲೋಚಿಸುತ್ತಿರುವರು. ಈಗ ತುರ್ಕಿಯ ಬಹಳ ಸೈನ್ಯಗಳು ಸ್ಮಾಲೇಪಿನ ಹತ್ತಿರ ಕೂಡಿಸಲ್ಪಡುತ್ತಿವೆ. ಇವನ್ನು ಗಾಜಾದಕಡೆಗೋ ಅಥವಾ ಮೆಸಪಟೋಮಿಯಾದ ಕಡೆಗೋ ಕಳುಹಿಸುವರೆಂದು ಕಾಣುತ್ತದೆ.

ಚಕ್ರವರ್ತಿ ಸಂದೇಶಗಳು.

ಯುದ್ಧಾರಂಭವಾಗಿ ಮೂರು ವರ್ಷಗಳು ಮುಗಿದು ೪ ನೆ ವರ್ಷವು ಕಾಲಿಕ್ಕಿದೆಯಷ್ಟೆ. ಈ ವರ್ಷಾರಂಭದಲ್ಲಿ ಜರ್ಮನ್ ಚಕ್ರವರ್ತಿಯವರು ತಮ್ಮ ಸೈನಿಕರಿಗೂ ಪ್ರಜೆಗಳಿಗೂ ಒಂದು ಸಂದೇಶವನ್ನು ಪ್ರಕಟಮಾಡಿರುವರು. ನಮ್ಮ ಆಂಗ್ಲ ಸಾರ್ವಭೌಮರೂ ಕೂಡ ಒಂದು ಸಂದೇಶವನ್ನು ಪ್ರಜೆಗಳಿಗೋಸ್ಕರ ಪ್ರಕಟಿಸಿಮಾಡಿರುವರು. ಅವೆರಡನ್ನೂ ಅವಲೋಕಿಸುವವರಿಗೆ ಕೈಜರರ ಡಂಭನಂಚನಾಚಾತುರ್ಯಗಳೂ, ಜಾರ್ಜ್ ಸಾರ್ವಭೌಮರವರ ಸೌಜನ್ಯವೂ ವ್ಯಕ್ತವಾಗಿ, ಕೈಜರನನ್ನು ಕಲಿಯುಗದ ದುರ್ಯೋಧನನನ್ನಾಗಿಯೂ, ಜಾರ್ಜ್‌ನೃಪತಿಗಳನ್ನು ಕಲಿಯುಗದ ಧರ್ಮರಾಯನನ್ನಾಗಿಯೂ ಊಹಿಸಲು ಅವಕಾಶಕೊಡದೆ ಇರಲಾರದು. ಅದುಕಾರಣ ಅವೆರಡು ಸಂದೇಶಗಳ ಅಭಿಪ್ರಾಯವನ್ನು ಈ ಕೆಳಗೆ ಪ್ರಕಟಿಸಿದ್ದೇವೆ.—ಆಗಸ್ಟ್ ತಾ|| ೧ ರಲ್ಲಿ ಕೈಜರರು ತಮ್ಮ ಭೂಜಲಸೈನಿಕರನ್ನು ಕುರಿತು ಪ್ರಕಟಿಸಿರುವ ಅಪ್ಪಣೆಯೇನೆಂದರೆ—"ಯುದ್ಧವು ೪ ನೆ ವರ್ಷವನ್ನು ಪ್ರವೇಶಿಸಿದೆ. ನಮ್ಮ ಶತ್ರುಗಳ ಸಂಖ್ಯೆಯು ಹೆಚ್ಚಿತೇ ಹೊರತು ಅವರಿಗೆ ವಿಜಯಪ್ರಾಪ್ತಿಯಾಗುವ ಚಿಹ್ನೆಗಳೇನೂ ಕಾಣುವುದಿಲ್ಲ. ಕಳೆದವರ್ಷ ನೀವು ರುಮೇನಿಯಾ ದೇಶವನ್ನು ಅಣಗಿಸಿ, ಈಗ ರಷ್ಯಾದೇಶವನ್ನು ಅಣಗಿಸುತ್ತಿದ್ದೀರಿ. ಇವೆರಡು ದೇಶಗಳವರೂ ಪರರಿಗಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಈಗ ಜೀವಚ್ಛವಗಳಾಗಿದ್ದಾರೆ. ಮೆಸಿಡೋನಿಯದಲ್ಲಿ ನಮ್ಮ ಸೈನ್ಯಗಳು ಶತ್ರುಗಳ ದಾಳಿಯನ್ನು ತಡೆದು ಪಶ್ಚಿಮರಂಗದಲ್ಲಿ ಜರುಗಿದ ಮಹಾಯುದ್ಧಗಳಲ್ಲಿ ಜಯವನ್ನು ಪಡೆದಿರುತ್ತವೆ. ಜರ್ಮನ್‌ಸೈನ್ಯಗಳು ಅಚಲವಾಗಿವೆ. ಯುದ್ಧದ ಭಯವು ತಮ್ಮ ಜನ್ಮದೇಶಕ್ಕೆ ಸ್ವಲ್ಪವೂ ಇಲ್ಲದಂತೆ ನಮ್ಮ ಸೈನ್ಯಬಲವು ಕಾಪಾಡುತ್ತಲಿದೆ. ನಮ್ಮ ನೌಕಾದಳವು ಶತ್ರುಗಳ ಸಮುದ್ರಾಧಿಪತ್ಯಕ್ಕೆ ಕೊರತೆಯನ್ನುಂಟುಮಾಡಿ ಅವರು ಪ್ರಾಣವನ್ನು ಮುಷ್ಟಿಯಲ್ಲಿ ಹಿಡಿದುಕೊಂಡು ಜಪಮಾಡುವಂತೆ ಎಸಗಿದೆ. ಜನ್ಮದೇಶಕ್ಕೆ ಬಹುದೂರದಲ್ಲಿ ತನಗಿಂತಲೂ ಸಂಖ್ಯೆಯಲ್ಲಿ ದೊಡ್ಡದಾಗಿರುವ ಶತ್ರು ಸೈನ್ಯದೊಡನೆ ಪ್ರತಿಭಟಿಸಿ ಜರ್ಮನ್ ಸೈನ್ಯವು ಅಧಿನಿವೇಶವನ್ನು ರಕ್ಷಿಸುತ್ತಲಿದೆ. ನಮಗೆ ೧೯೧೮ ನೆ ವರ್ಷದಲ್ಲಿ ವಿಜಯವು ಕೈಸೇರುವುದು. ಕಡೆಯವರೆಗೂ ಯುದ್ಧಮಾಡಿ ವಿಜಯವನ್ನು ಪಡೆದುಕೊಳ್ಳಬೇಕೆಂಬುದೇ ನಮ್ಮ ದೃಢನಿಶ್ಚಯವು. ನಮ್ಮನ್ನು ಸುಮ್ಮನಿರಗೊಡಿಸದೆ ಶತ್ರುಗಳುನಮ್ಮೊಡನೆ ಯುದ್ಧಕ್ಕೆ ಕಾಲುಚಾಚಿ ನಮ್ಮನ್ನು ರಣರಂಗಕ್ಕೆ ಸೆಳೆಯುತ್ತಿದ್ದರು. ಇನ್ನುಮುಂದೆ ನಾವೆ ಆತ್ಮರಕ್ಷಣೆಗಾಗಿ ಅಚಲಮನಸ್ಸಿನಿಂದಲೂ ದೃಢಸಾಹಸಗಳಿಂದಲೂ ಯುದ್ಧಮಾಡಬೇಕು. ನಾವು ಅಜೇಯರು. ಯುದ್ಧದಲ್ಲಿ ಜಯಲಕ್ಷ್ಮಿಯು ನಮಗೇ ಅಧೀನಳಾಗುವಳು. ರಣರಂಗದಲ್ಲಿ ಧರ್ಮದೇವತೆಯು ನಮ್ಮ ಪಕ್ಷಕ್ಕೇ ನಿಲ್ಲುವಳು."

ಕೈಜರರು ತಮ್ಮ ಪ್ರಜೆಗಳಿಗಾಗಿ ಕೊಟ್ಟಿರುವ ಸಂದೇಶದಲ್ಲಿ ಹೇಳಿರುವುದೇನೆಂದರೆ—"ನಾವು ಕಳೆದ ೩ ವರ್ಷಗಳಿಂದಲೂ ಅಹರ್ನಿಶಿಯೂ ಗಾಢಯುದ್ಧದಲ್ಲಿ ನಿಮಗ್ನರಾಗಿರುವೆವು. ಇನ್ನೂ ಯುದ್ಧವು ಅಭಿವೃದ್ಧಿಗೊಳ್ಳುತ್ತಿದೆ. ನಮ್ಮ ಶತ್ರುಗಳು ನಮ್ಮನ್ನು ಬಲಹೀನರನ್ನಾಗಿಯೂ, ಅಧಿಕಾರಭ್ರಷ್ಟರನ್ನಾಗಿಯೂ ಮಾಡಿ, ತಮ್ಮ ಪಾದಾಕ್ರಾಂತರನ್ನಾಗಿ ಮಾಡಿಕೊಳ್ಳಬೇಕೆಂದು ಸಂಕಲ್ಪಿಸಿಕೊಂಡಿದ್ದಾರೆ. ಆದರೆ ಅವರ ಕೋರಿಕೆಯು ಕೊನೆಮುಟ್ಟುವುದಿಲ್ಲ. ನಮ್ಮ ನಮ್ಮಲ್ಲಿದ್ದ ಸಂಧಿನಿಬಂಧನೆಗಳನ್ನು ಅವರು ನಿರಾಕರಿಸಿದರು. ಆದರೆ ಜರ್ಮನರು ರಣರಂಗದ ಮಹಾರುದ್ರರು ಎಂಬ ವಿಷಯವು ಅವರಿಗೆ ಗೊತ್ತಿಲ್ಲದೆ ಹೋಯಿತು. ಪ್ರಪಂಚದಲ್ಲೆಲ್ಲಾ ಜರ್ಮನರು ಯೋಧಾಗ್ರೇಸರರೆಂಬುದನ್ನು ಅವರು ಅರಿಯದೆ ಹೋದರು. ಇವರನ್ನು ಅವರು ಹಳಿದ ಮಾತ್ರದಿಂದಲೇ ಜರ್ಮನರ ಕೀರ್ತಿಗೆ ಲೇಶವೂ ಕಳಂಕವುಂಟಾಗಲಾರದು. ಜರ್ಮನಿಯು ನಿಶ್ಚಲವಾಗಿಯೂ ಅಜೇಯವಾಗಿಯೂ, ಸಂಪೂರ್ಣವಾದ ಜಯನಿಷ್ಠೆಯಿಂದ ಯುದ್ಧವನ್ನು ಸಾಗಿಸುತ್ತಿದೆ. ಶತ್ರುಗಳು ಇನ್ನೂ ಯುದ್ಧವನ್ನು ನಿಲ್ಲಿಸದೆ ಸಾಗಿಸುತ್ತ ಬಂದರೆ ಅವರು ನಮಗಿಂತಲೂ ವಿಶೇಷವಾದ ನಷ್ಟಕಷ್ಟಗಳಿಗೀಡಾಗುವರು."

ನಮ್ಮ ಜಾರ್ಜ್ ಸಾರ್ವಭೌಮರವರು ಲಂಡನ್ ಪುರಾಧ್ಯಕ್ಷರಿಗೆ ಆಗಸ್ಟ್ ತಾ|| ೪ ರಲ್ಲಿ ಕಳುಹಿಸಿರುವ ಸಂದೇಶದ ಅಭಿಪ್ರಾಯವೇನೆಂದರೆ—"ಯುದ್ಧಾರಂಭವಾಗಿ ೩ ವರ್ಷಗಳು ಮುಗಿದುವು. ಈ ಮೂರು ವರ್ಷಗಳಲ್ಲೂ ಆಂಗ್ಲ ಸಾಮ್ರಾಜ್ಯದ ಪ್ರತಿಯೊಂದು ಮನೆಯಲ್ಲೂ ಉಂಟಾಗಿರುವ ನಷ್ಟಗಳಿಂದ ಪ್ರತಿ ಕುಟುಂಬದವರ ಮನಸ್ಸುಗಳೂ ಮತ್ತಷ್ಟು ಏಕಮತ್ಯವನ್ನೂ ದೃಢನಿಶ್ಚಲತೆಯನ್ನೂ ಹೊಂದಿರುತ್ತವೆ. ಅವರೆಲ್ಲರೂ ಈಗ ನ್ಯಾಯ-ಸ್ವಾತಂತ್ರ್ಯ-ಭೂತದಯೆ-ಇವುಗಳ ಪವಿತ್ರಸೂತ್ರಗಳನ್ನು ಕಾಪಾಡುವುದಕ್ಕೆ ಬದ್ಧಕಂಕಣರಾಗಿದ್ದಾರೆ. ಇದಕ್ಕಾಗಿಯೇ ನಾವು ಯುದ್ಧಮಾಡುತ್ತಿದ್ದೇವೆ. ದೈವಸಹಾಯದಿಂದ ನಾವು ವಿಜಯಶಾಲಿಗಳಾಗುವೆವೆಂದು ನಂಬುತ್ತೇವೆ."

ಭರತಖಂಡದ ವೃತ್ತಾಂತಗಳು.

ನೀಲಗಿರಿಯಲ್ಲಿ ನಿರ್ಬಂಧಾವಾಸದಲ್ಲಿರುವ ಆನಿಬೆಸೆಂಟಮ್ಮನವರಿಗೆ ದೇಹವು ಅಸ್ವಸ್ಥವಾಗಿ ಅನ್ನನಿದ್ರೆಗಳು ಸೇರದಿವೆಯೆಂದು ಕೇಳುತ್ತೇವೆ.

ದೇಶರಕ್ಷಕ ಸೈನ್ಯಕ್ಕೆ ಮದ್ರಾಸು ಅಧಿಪತ್ಯದಲ್ಲೇ ಕಳೆದ ತಾ|| ೨೮ ರವರೆಗೆ ೧೦೯೭ ಮಂದಿ ಸೇರಿರುವರು. ಇವರಲ್ಲಿ ಬ್ರಾಹ್ಮಣರೇ ೫೫೫ ಮಂದಿಗಳಿರುವರು.

ಕಲ್ಕತ್ತಾ ನಗರದ ವಿದ್ಯಾರ್ಥಿಗಳಲ್ಲಿ ೨೩೫ ಮಂದಿ ಹಿಂದುಗಳೂ, ೧೧೨ ಮಂದಿ ಮಹಮ್ಮದೀಯರೂ ಸಹ ಕಳೆದ ಸೋಮವಾರದವರೆಗೆ ದೇಶರಕ್ಷಕ ಸೈನ್ಯಕ್ಕೆ ಸೇರಿರುತ್ತಾರೆ.

ಭರತಖಂಡದಲ್ಲಿ ಈಗ ವಾರವಾರಕ್ಕೆ ಪ್ಲೇಗಿನಿಂದಾಗುವ ಮರಣಗಳ ಸಂಖ್ಯೆಯು ಹೆಚ್ಚುತ್ತಿದೆ. ಕಳೆದೊಂದುವಾರಕಾಲದಲ್ಲಿ ೪೫೩ ಮಂದಿಗೆ ರೋಗವು ತಗುಲಿ ೩೩೩೮ ಮಂದಿಗಳು ಸತ್ತಿರುವರು.

ಸರ್ ಡಿ. ಇ. ವಾಚಾರವರು ಬೊಂಬಾಯಿ ಪ್ರಾಂತದ ರಾಷ್ಟ್ರೀಯ ಸಂಘದ ತಮ್ಮ ಅಧ್ಯಕ್ಷ ಪದವಿಗೆ ರಾಜೀನಾಮೆಯನ್ನು ಕೊಟ್ಟಿದ್ದರು. ಆದರೆ ಅವರ ಮಿತ್ರರ ಕೆಲರ ಪ್ರಾರ್ಥನೆಯ ಮೇರೆ ಮತ್ತೆ ಅದನ್ನಂಗೀಕರಿಸಿದರೆಂದು ಪ್ರಕಟವಾಗಿದೆ.

ಭರತಖಂಡದಲ್ಲಿ ಪೋರ್ಚುಗೀಸರಿಗೆ ಸೇರಿರುವ ಗೋವಾ ಮೊದಲಾದ ಸ್ಥಳಗಳಿಗೆ ಸ್ವಪರಿಪಾಲನವನ್ನು ಅನುಗ್ರಹಿಸಿದರೆಂದು ತಿಳಿಯಬರುತ್ತದೆ. ಈ ಯೇರ್ಪಾಟಿನಿಂದ ಅಲ್ಲಿಯ ನಿವಾಸಿಗಳಿಗಿದ್ದ ಹಲವು ತೊಂದರೆಗಳು ನಿವೃತ್ತವಾಗುವುವೆಂದು ಎಣಿಸಲ್ಪಟ್ಟಿದೆ.

ಬಂಗಾಳದಲ್ಲಿ ಒಂದು ಅಶ್ವಸೈನ್ಯವನ್ನು ಹೊಸದಾಗಿ ಕೂಡಿಸುವುದಕ್ಕೆ ಏರ್ಪಾಟಾಗಿದೆ. ಇದರಲ್ಲಿ ಸೇರುವುದಕ್ಕೆ ಈಗಾಗಲೇ ಅನೇಕಮಂದಿ ಜಮೀನ್ದಾರರೂ, ಪಂಡಿತರೂ, ವೈದ್ಯರೂ, ಬಾರಿಸ್ಟರುಗಳೂ ಸಹ ೧೦೦ ಅರ್ಜಿಗಳನ್ನು ಬರೆದುಕೊಂಡಿದ್ದಾರೆ.

ದಿವ್ಯಜ್ಞಾನ ಸಮಾಜಕ್ಕೆ ಸೇರಿದ ಸಭ್ಯರು ಭರತಖಂಡದಲ್ಲಿ ೬೦೦೦ ಅಮೇರಿಕಾದಲ್ಲಿ ೬೬೦೦ ಆಂಗ್ಲದೇಶದಲ್ಲಿ ೨೬೦೦ ನೆದರ್ಲೆಂಡ್ಸಿನಲ್ಲಿ ೨೫೦೦ ಫ್ರಾನ್ಸಿನಲ್ಲಿ ೧೩೦೦, ಸ್ಕಾಂಡಿನೇವಿಯಾದಲ್ಲಿ ೧೦೦೦, ಇಟಲಿಯಲ್ಲಿ ೩೦೦ ದಕ್ಷಿಣಾಫ್ರಿಕಾದಲ್ಲಿ ೨೭೦, ಮಂದಿಗಳು ಇರುವರಂತೆ.

ಬಂಗಾಳದಲ್ಲಿ ಸ್ವದೇಶೀಯೋಪನ್ಯಾಸಕನಾದ ಲಿಯಾಖತ್ ಹುಸೇನ್ ಎಂಬಾತನು ಪ್ರಜೆಗಳನ್ನು ಸೈನ್ಯಕ್ಕೆ ಸೇರಬಾರದೆಂದು ಬೋಧಿಸುತ್ತಿದ್ದುದರಿಂದ ಢಕ್ಕಾದಹತ್ತಿರ ಹಿಡಿಯಲ್ಪಟ್ಟು ದೇಶರಕ್ಷಕ ಶಾಸನದ ಪ್ರಕಾರ ೨ ವರ್ಷಗಳ ಕಠಿನಕಾರಾಗೃಹವಾಸಶಿಕ್ಷೆಗೆ ಗುರಿಯಾದನು.

ಮರ್ಚೆಂಟ್ ಪ್ರಿನ್ಸ್ ಎಂಬ ವ್ಯಾಪಾರಿ ಹಡಗಿನಮೇಲೆ ಸುರೇಂದ್ರನಾಥ ಮಜುಂದಾರ್ ಎಂಬ ವಂಗದೇಶೀಯರು ೪ ನೆಯ ಇಂಜನಿಯರ ಉದ್ಯೋಗಕ್ಕೆ ನಿಯಮಿಸಲ್ಪಟ್ಟರು. ಇಂಗ್ಲೀಷ್ ಹಡಗುಗಳಮೇಲೆ ಇಂಥ ದೊಡ್ಡ ಉದ್ಯೋಗವನ್ನು ಪಡೆದ ಭಾರತೀಯರಲ್ಲಿ ಇವರೇ ಮೊದಲನೆಯವರು.

ಕಳೆದ ತಾ|| ೪ ನೆ ಶನಿವಾರಕ್ಕೆ ಯುದ್ಧಾರಂಭವಾಗಿ ೩ ವರ್ಷಗಳು ತುಂಬಿ ೪ ನೆ ವರ್ಷದ ಪ್ರವೇಶವಾದುದರಿಂದ ಆ ದಿವಸ ಮಿತ್ರಮಂಡಲಿಯವರ ಜಯವನ್ನು ಕೋರಿ ಭರತಖಂಡದ ಎಲ್ಲ ಮುಖ್ಯ ಪಟ್ಟಣಗಳ ಸಕಲ ಮತದವರ ದೇವಾಲಯಗಳಲ್ಲೂ ದೇವತಾಪೂಜಾ ಪ್ರಾರ್ಥನಾದಿಗಳು ನಡೆಯಿಸಲ್ಪಟ್ಟವೆ.

ಒಬ್ಬ ಸಿರಿಯನ್ ಕ್ರೈಸ್ತ ಯುವತಿಯು ಕಳೆದ ವರ್ಷದ ಬಿ. ಎ. ಆನರ್ಸ್ ಪರೀಕ್ಷೆಯಲ್ಲಿ ಮದ್ರಾಸು ಅಧಿಪತ್ಯಕ್ಕೆಲ್ಲಾ ಮೊದಲನೆಯವಳಾಗಿ ತೇರ್ಗಡೆ ಹೊಂದಿರುತ್ತಾಳೆ. ಈಕೆಯನ್ನು ತಿರುನಲ್ವೇಲಿ ಮಹಾರಾಜಾ ಕಲಾಶಾಲೆಯ ಉಪಾಧ್ಯಾಯನೀಪತ್ತಕ್ಕೆ ೧೫೦ ರೂ. ಸಂಬಳದಮೇಲೆ ಏರ್ಪಡಿಸಿಕೊಂಡರು.

ಮೆಸಪಟೋಮಿಯಾ ರಣರಂಗದಿಂದ ಠಾಕೂರ್‌ದಾಸ್ ಎಂಬ ಸೈನಿಕನು ಆರೋಗ್ಯಾರ್ಥವಾಗಿ ರಂಗೂನಿಗೆ ಕಳುಹಿಸಲ್ಪಟ್ಟಿರಲು ಅಲ್ಲಿಯ ವೈದ್ಯರು ಇನ್ನುಮುಂದೆ ಈತನು ಸೈನಿಕನಾಗಿರುವುದಕ್ಕೆ ಶಕ್ತನಾಗಿಲ್ಲವೆಂದು ಹೇಳಲು, ಆ ಸಿಪಾಯಿಯು ಅಧೈರ್ಯಪಟ್ಟು ಕ್ಷೌರಿಕರ ಕತ್ತಿಯಿಂದ ಕೊರಳನ್ನು ಕತ್ತರಿಸಿಕೊಂಡನಂತೆ.

ದಕ್ಷಿಣ ಬೀಹಾರಿನಲ್ಲಿ ಅತಿವೃಷ್ಟಿಯಾಗಿ ಹಳ್ಳಿಗಳು ಮೊದಲಾದುವೆಲ್ಲಾ ನೀರಿನಲ್ಲಿ ಮುಳುಗಿಹೋಗಿವೆ. ಲೋಹಮಾರ್ಗಗಳೆಲ್ಲಾ ಕೊಚ್ಚಿ ಹೋಗಿ ವ್ಯಾಪಾರವು ಕಟ್ಟಾಗಿದೆ. ದಕ್ಷಿಣದೇಶದವರು ಮಳೆಮಳೆಯೆಂದು ಹಂಬಲಿಸಿಕೊಳ್ಳುತ್ತಿರುವಾಗ ಉತ್ತರದೇಶದವರು ಜಲಸಮಾಧಿಗೊಳ್ಳುವ ಹೊತ್ತು ಬಂದಿರುವುದು ದೈವಿಕವಿಚಿತ್ರವಲ್ಲವೆ?

ವೈಸ್ರಾಯರು ಬರುವ ಅಕ್ಟೋಬರ್ ತಿಂಗಳು ತಾ|| ೨೯ ರಲ್ಲಿ ಕರಾಚಿಗೆ ಪತ್ನೀಸಮೇತರಾಗಿ ಬಂದು ನವಂಬರ್ ತಾ|| ೧ ರವರೆಗೆ ಅಲ್ಲೇ ಇರುವರೆಂತಲೂ, ಡಿಶಂಬರ್ ತಿಂಗಳ ಕ್ರಿಸ್ತಮಸ್ ಹಬ್ಬವನ್ನು ಅವರು ಬೊಂಬಾಯಿಯಲ್ಲಿ ಕಳೆಯುವರೆಂತಲೂ, ಡಿಶಂಬರ್ ತಾ|| ೨೨ ಕ್ಕೆ ಬೊಂಬಾಯಿಗೆ ಬರುವರೆಂತಲೂ ಪ್ರಕಟವಾಗಿದೆ.

ಅಲಿಘರ್ ಪ್ರಾಂತದಲ್ಲಿ ಒಬ್ಬನು ೩೫ ನೆ ನಂ|| ಸಿಕ್ ಪಟಾಲಮ್ಮಿಗೆ ಸೇರಿಕೊಂಡನು. ಆತನ ಪತ್ನಿಯು ಸೈನ್ಯಾಧಿಕಾರಿಯ ಬಳಿಗೆ ಹೋಗಿ, ತಾನೂ ಗಂಡನ ಜತೆಗೆ ರಣರಂಗಕ್ಕೆ ಹೋಗಿ ಯುದ್ಧಮಾಡುವೆನೆಂದೂ, ತನ್ನನ್ನೂ ಸೈನ್ಯಕ್ಕೆ ಸೇರಿಸಿಕೊಳ್ಳಬೇಕೆಂದೂ ಕೇಳಿಕೊಂಡಳು. ಆದರೆ ಅಧಿಕಾರಿಗಳು ಅದಕ್ಕೆ ಅನುಮತಿ ಕೊಡಲಿಲ್ಲ.

ಸರ್ ರತಂಜಿತಾತಾರವರು ಸೀಮೆಯಲ್ಲಿ ದಾರಿದ್ರ್ಯನಿವಾರಕ ಮಾರ್ಗವನ್ನು ಗೊತ್ತುಪಡಿಸುವ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ ೨೧ ಸಾವಿರ ರೂ.ಗಳನ್ನು ೫ ವರ್ಷಗಳವರೆಗೆ ವೇತನದ ಬಗೆಗೆ ಕೊಡಲು ವಾಗ್ದಾನಮಾಡಿರುವುದಕ್ಕಾಗಿ ಲಂಡನ್ ವಿಶ್ವವಿದ್ಯಾಲಯದ ಸೆನೇಟ್ ಸಭೆಯವರು ತಾತಾರವರಿಗೆ ವಂದನೆಯನ್ನರ್ಪಿಸಿರುತ್ತಾರೆ.

ಗ್ವಾಲಿಯರ್ ಪ್ರಾಂತದಲ್ಲಿ ಹೆಚ್ಚುಮಳೆ ಸುರಿದು ಲೋಹಮಾರ್ಗಗಳೂ ಸೇತುಗಳೂ ಕಿತ್ತುಹೋಗಿ ಹೊಗೆಬಂಡಿಗಳ ತಿರುಗಾಟಕ್ಕೆ ವಿಘ್ನವಾಗಿದೆ. ಬಿಕನೀರ್ ಮಹಾರಾಜರಿಗೆ ಜನರಲ್ ಎಂಬ ಕೃಷ್ಣಗರ್ ಮಹಾರಾಜರಿಗೆ ಲೆಫ್ಟಿನೆಂಟ್ ಕರ್ನಲ್ ಎಂಬ ಜೋಧಪುರದ ಮಹಾರಾಜರಿಗೆ ಮೇಜರ್ ಎಂಬ ಗೌರವಾಂಕನಗಳು ಕೊಡಲ್ಪಟ್ಟಿವೆ.

ಬೊಂಬಾಯಿನ ಲ್ಯಾಮಿಂಗ್ಟನ್ ಬೀದಿಯಲ್ಲಿ ಒಂದು ಮನೆಯ ಮೂರನೆಯ ಅಂತಸ್ತಿನಲ್ಲಿ ವಾಸವಾಗಿದ್ದ ಪಾರ್ವತೀಬಾಯಿಯೆಂಬಾಕೆಯಮೇಲೆ ಬತ್ತಾವಿವಾನು ಒಂದು ವಾರಂಟನ್ನು ತಂದಿರಲು, ಅವನ ಕೈಗೆ ಸಿಕ್ಕಬಾರದೆಂದು ಆಕೆಯು ಮನೆ ಬಾಗಿಲನ್ನು ಹಾಕಿಕೊಂಡು ಕಿಟಕಿಯಿಂದ ಕೆಳಕ್ಕೆ ದುಮಿಕಿದಳು. ಪಟನಿಂದ ಸ್ಮೃತಿತಪ್ಪಿದ ಆಕೆಯನ್ನು ವೈದ್ಯಶಾಲೆಗೆ ಸಾಗಿಸಲು, ಅಲ್ಲಿ ಮೃತಳಾದಳು.

ಬೊಂಬಾಯಿಯ ಒಬ್ಬ ಮಹಮ್ಮದೀಯ ಬಾಲಕನು ಕಳೆದ ಜೂನ್ ತಿಂಗಳಲ್ಲಿ ಒಂದು ಹುಚ್ಚುನಾಯಿಯಿಂದ ಕಡಿಯಲ್ಪಟ್ಟನು. ಅದರಮೇಲೆ ಕಸೋಲಿಗೆ ಹೋಗಿ ೧೫ ದಿವಸಗಳವರೆಗಿದ್ದು ಚಿಕಿತ್ಸೆಯನ್ನು ಪಡೆದು ಬಂದನು. ಆದರೂ ಕಳೆದ ವಾರದಲ್ಲಿ ಒಂದುರಾತ್ರಿ ಆತನು ಹುಚ್ಚುನಾಯಿಯಂತೆ ಅರಚಿಕೊಂಡು ಮರುದಿನ ಮೃತನಾದನು. ವಿಷಚಿಕಿತ್ಸೆ ಮಾಡಿಸಿಕೊಂಡು ಬಂದವರಿಗೂ ಹೀಗೆ ಮೃತ್ಯು ಸಂಭವಿಸುವುದಾದರೆ ಆ ಚಿಕಿತ್ಸೆಯ ಫಲವೇನು?

ರಣರಂಗದಲ್ಲಿ ಹತರಾದ ಹಿಂದೂ ಸೈನಿಕರ ಸಂಬಂಧಿಗಳಿಗೆ ಮೇರಿ ಚಕ್ರವರ್ತಿನಿಯವರ ಭಾವಪಟಗಳು ಬಹುಮಾನಾರ್ಥವಾಗಿ ಕೊಡುವುದಕ್ಕಾಗಿ ಸೀಮೆಯಿಂದ ಭರತಖಂಡಕ್ಕೆ ಬಂದಿರುತ್ತವೆ. ಇವನ್ನು ವೈಸ್ರಾಯರ ಪತ್ನಿಯವರು ಹಂಚುವರು. ರಣರಂಗದಲ್ಲಿ ಅರ್ಥಪ್ರಾಣಗಳನ್ನು ಅರ್ಪಿಸಿದ ಹಿಂದವ ವೀರರ ಪ್ರತಾಪವನ್ನು ವರ್ಣಿಸುವ ಬರೆವಣಿಗೆಯನ್ನು ಚಕ್ರವರ್ತಿನಿಯವರು ಪ್ರತಿ ಭಾವಚಿತ್ರದ ಕೆಳಗೂ ಬರೆದಿರುವರು. ಈ ಪಟಗಳ ಜತೆಗೆ ಚಕ್ರವರ್ತಿನಿಯವರು ರಣನಿಹತರಾದವರ ವಿಷಯದಲ್ಲಿ ತಮ್ಮ ಸಾನುಭೂತಿಯನ್ನು ತೋರಿಸಿ ಬರೆದ ಲೇಖನಗಳು ಆಯಾ ದೇಶಭಾಷೆಯಲ್ಲಿ ಮುದ್ರಿಸಿ ಕಳುಹಿಸಲ್ಪಡುವುವು.

ಈಗ್ಗೆ ೪|| ಸಾವಿರ ವರ್ಷಗಳ ಕೆಳಗೆ ಜನರು ಗ್ರಂಥಗಳನ್ನು ಮಣ್ಣಿನ ಇಟ್ಟಿಗೆಗಳಮೇಲೆ ಅಕ್ಷರಗಳನ್ನು ಕೆತ್ತುವುದರ ಮೂಲಕ ಬರೆದಿಡುತ್ತಿದ್ದರು. ಬಳಿಕ ಕೆಲಕಾಲಾನಂತರ ಭೂರ್ಜಪತ್ರಗಳಮೇಲೂ, ಅನಂತರ ತಾಳೆವಾಲೆಗಳ ಮೇಲೂ ಬರೆದಿಡುವುದನ್ನು ಏರ್ಪಡಿಸಿಕೊಂಡಿದ್ದು, ಅದರಮೇಲೆ ಕಾಗದವನ್ನು ನಿರ್ಮಿಸುವುದಕ್ಕೆ ಆರಂಭಿಸಿದರೆಂದು ಕಾಣುತ್ತದೆ. ಮಣ್ಣಿನ ಇಟ್ಟಿಗೆಗಳಮೇಲೆ ಬರೆದಿರುವ ಪ್ರಾಚೀನ ಗ್ರಂಥಗಳು ಕೆಲವು ಈ ಮಧ್ಯೆ ಚಾಲ್ಡಿಯಾ ಪ್ರಾಂತದಲ್ಲಿ ದೊರೆತಿರುವುವಂತೆ. ಇಂಥ ಲಕ್ಷಾಂತರ ಇಟ್ಟಿಗೆಗಳು ಭೂಗರ್ಭದಲ್ಲಿ ದೊರೆತಿರುವುವು. ಅವುಗಳಲ್ಲಿರುವ ಗ್ರಂಥಗಳು ಭಿನ್ನಭಿನ್ನ ವಿಷಯಕಗಳಾಗಿರುವುವು. ಇದರಿಂದ ಆ ಪುರಾತಕಾಲದ ಭಾಷೆ, ಲಿಪಿ, ವ್ಯವಹಾರ, ನೀತಿ, ರೀತಿ ಮೊದಲಾದನೇಕ ವಿಷಯಗಳನ್ನು ತಿಳಿದುಕೊಳ್ಳಲು ಅವಕಾಶವಾಗಿದೆ.

ಮದ್ರಾಸು ಅಧಿಪತ್ಯದಲ್ಲಿರುವ ಹಿಂದೂ ಕ್ರೈಸ್ತ ನಾಡಾರುಗಳ ಸಂಘದವರೂ, ದಕ್ಷಿಣ ಇಂಡ್ಯಾ ಹಿಂದೂ ಕ್ರೈಸ್ತರೂ ಸಹ ಮದ್ರಾಸ್ ಗೌರ್ನರಿಗೆ ಒಂದು ವಿಜ್ಞಾಪನಪತ್ರವನ್ನು ಬರೆದುಕೊಂಡು, - ಸ್ವರಾಜ್ಯವಾದಿಗಳು ಸ್ವಪರಿಪಾಲನ ವಿಷಯವಾಗಿ ಮಾಡುತ್ತಿರುವ ಈಗಣ ಪ್ರಯತ್ನಗಳು ದೇಶವನ್ನು ಮತ್ತಷ್ಟು ದುರವಸ್ಥೆಗೆ ಎಲ್ಲಿ ತರುವುವೋ ಎಂಬ ಭಯವುಂಟಾಗುತ್ತಿದೆ. ಆ ಸ್ವರಾಜ್ಯವಾದಿಗಳ ಬೇಡುವಿಕೆಯಕಡೆಗೆ ಆಂಗ್ಲಪ್ರಭುತ್ವದವರು ಗಮನಿಸಿ ಪರ್ಯಾಲೋಚಿಸುವುದಾದರೆ, ಯುದ್ಧ ಮುಗಿದಬಳಿಕ ಒಂದುವೇಳೆ ಸ್ವರಾಜ್ಯವನ್ನೇನಾದರೂ ಕೊಡುವುದಾದರೆ, ನಮ್ಮ ನಾಡಾರುಗಳು ಬಹುಕಾಲದಿಂದಲೂ ಎಂದರೆ ಪಾಂಡ್ಯರಾಜರ ಕಾಲದಿಂದಲೂ ನಡೆದುಬಂದ ಪ್ರಾಚೀನ ರಾಜ್ಯವಾದ ತಿರುನಲ್ವೇಲಿ, ಮಧುರೆ, ರಾಮನಾಥ ಈ ಭಾಗಗಳಿಂದ ಕೂಡಿದ ದೇಶವನ್ನು ನಮ್ಮ ವಶಕ್ಕೆ ಒಪ್ಪಿಸಿದರೆ, ನಾವು ನೆಮ್ಮದಿಯಾಗಿ ಆಂಗ್ಲಛತ್ರಾಶ್ರಯದ ಕೆಳಗೆ ಆ ದೇಶಪಾಲನೆಯನ್ನು ಸಾಗಿಸಿಕೊಂಡು ಹೋಗುವೆವು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

ಮೈಸೂರ್ ಗೆಜೆಟ್ ಸಂಗ್ರಹ.

ತುಮಕೂರು ಡಿವಿಜನ್ ಎಕ್ಸಿಕ್ಯುಟೀವ್ ಇಂಜನಿಯರ್ ಮ॥ ಪಿ. ಕೃಷ್ಣಯ್ಯಂಗಾರ್ ಎಲ್.ಸಿ. ಇ.-ಇವರಿಗೆ ಮೂರು ತಿಂಗಳ ಹಕ್ಕಿನ ರಜವೂ ೯ ತಿಂಗಳ ಫರ್ಲೋ ರಜವೂ ಕೊಡಲ್ಪಟ್ಟಿದೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಅಸಿಸ್ಟೆಂಟ್ ಇಂಜನೀರ್ ಮ॥ ಎನ್. ಜಿ. ಕೃಷ್ಣಯ್ಯಂಗಾರ್, ಎಲ್. ಸಿ. ಇ.-ಅವರನ್ನು ತುಮಕೂರು ಡಿವಿಜನ್ನಿಗೂ, ಕೃಷ್ಣರಾಜಸಾಗರ ಕೆಲಸದಲ್ಲಿರುವ ಸಬ್ ಅ॥ ಇಂಜನೀರ್ ಮ॥ ಸಿ. ರಂಗಸ್ವಾಮಿ ಅಯ್ಯಂಗಾರ್, ಬಿ. ಎ., ಬಿ.ಇ.-ಅವರನ್ನು ಚಿತ್ರದುರ್ಗ ಡಿಸ್ಟ್ರಿಕ್ಟಿಗೂ ವರ್ಗಮಾಡಿದೆ.

೧೯೧೭ ನೆಯ ಆಗಸ್ಟು ೧೫ ನೆಯ ತಾರೀಖಿನಿಂದ ಮೆ॥ ಸಿ. ಎಚ್. ಬಿನ್ಸ್‌ರವರು ಕೆಲಸದಿಂದ ನಿವೃತ್ತರಾಗುವುದರಿಂದ ಗೌರ್ನಮೆಂಟ್ ಪ್ರೆಸ್ ಸ್ಟೇಷನರಿಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರಾದ ಮ॥ ಡಿ.ಬಿ. ರಾಮಚಂದ್ರಮೊದಲಿಯಾರ್ರವರನ್ನು ಗೌರ್ನಮೆಂಟ್ ಪ್ರೆಸ್ ಮತ್ತು ಸ್ಟೇಷನರಿಗಳ ಸೂಪರಿಂಟೆಂಡೆಂಟರಾಗಿಯೂ, ಸ್ಟಾಂಪ್ ಇಲಾಖೆಯ ಎಕ್ಸ್ ಅಫಿಸಿಯೋ ಸೂಪರಿಂಡೆಂಟರಾಗಿಯೂ, ಕೆಲಸಮಾಡುವಂತೆ ನೇಮಕಮಾಡಿದೆ.

ಸೀನಿಯರ್ ಸರ್ಜನರ ಪರ್ಸನಲ್ ಅಸಿಸ್ಟೆಂಟರಾದ ಡಾ॥ ಎಸ್. ವಿ. ರಾಮಸ್ವಾಮಯ್ಯಂಗಾರ್, ಎಂ. ಡಿ.-ಅವರು ೧೯೧೭ ನೆಯ ಜೂನ್ ೩೦ ರಲ್ಲಿ ಮಂಜೂರಾದ ರಜದಲ್ಲಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವವರೆಗೆ ಅಸಿಸ್ಟೆಂಟ್ ಸರ್ಜನ್‌ರಾದ ಮ॥ ವಿ. ಅಬ್ಬಯ್ಯನಾಯುಡು, ಎಲ್. ಎಂ. ಎಸ್. ರವರು ತಮ್ಮ ಕೆಲಸದೊಂದಿಗೆ ಸೀನಿಯರ್ ಸರ್ಜನ್‌ರವರ ಪರ್ಸನಲ್ ಅಸಿಸ್ಟೆಂಟರಾಗಿಯೂ ಕೆಲಸಮಾಡುವಂತೆ ನೇಮಕಮಾಡಿದೆ.

ಎಕ್ಸಿಕ್ಯುಟೀವ್ ಇಂಜನಿಯರ್ ಮ॥ ಜೆ. ಫೋರ್ ಎ.ಎಂ.ಐ.ಸಿ.ಇ. ಇವರನ್ನು ವಾಟರ್ ಸಪ್ಲೈಯಿಂದ ಸ್ಯಾನಿಟರಿ ಡಿವಿಜನ್ನಿಗೂ, ಹಾಸನದಲ್ಲಿ ಎಕ್ಸಿಕ್ಯುಟೀವ್ ಇಂಜನೀಯರಾಗಿ ಕೆಲಸಮಾಡುತ್ತಿರುವ ಮ॥ ಎಸ್. ಶ್ರೀನಿವಾಸಯ್ಯರ್. ಬಿ.ಎ.,ಬಿ.ಇ. ಅವರನ್ನು ವಾಟರ್ ಸಪ್ಲೈ ಡಿವಿಜನಿಗೂ, ಕೃಷ್ಣರಾಜಸಾಗರ IV ನೆಯ ಅಕ್ಕೀ ಹೆಬ್ಬಾರ ಡಿವಿಜನ್ನಿನ ಹಂಗಾಮಿ ಎಕ್ಸಿಕ್ಯುಟೀವ್ ಇಂಜನಿಯರಾದ ಮ॥ ಆರ್. ಡಬ್ಲ್ಯು. ಸ್ಮಾಲ್‌ವೆಲ್‌ರವರನ್ನು ಹಾಸನ ಡಿವಿಜನ್ನಿಗೂ ವರ್ಗಮಾಡಿದೆ.

ಇದರಡಿ ಕಾಣಿಸಿರುವಂತೆ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿಯು ಮಾಡಲ್ಪಟ್ಟಿದೆ.—

ಮ॥ ಕೆ. ಶೇಷಗಿರಿರಾಯರು, ಸಾಗರದಿಂದ ಶಿಕಾರಿಪುರಕ್ಕೆ; ಮ॥ ಎಂ. ನರಸಿಂಹಯ್ಯಂಗಾರ್, ಬಿ. ಎ., ಯವರು ಚನ್ನಗಿರಿಯಿಂದ ಮೈಸೂರಿಗೆ; ಮ॥ ಸಿ. ಕೃಷ್ಣಮೂರ್ತಿಶಾಸ್ತ್ರಿಗಳು ಮೈಸೂರಿಂದ ಬೌರಿಂಗ್‌ಪೇಟೆಗೆ; ಮ॥ ಎಸ್. ಸುಬ್ರಹ್ಮಣ್ಯಯ್ಯರವರು ಬೌರಿಂಗ್‌ಪೇಟೆಯಿಂದ ಚಾಮರಾಜನಗರಕ್ಕೆ; ಮ॥ ಎನ್. ನಾರಾಯಣರಾವ್ ಬಿ. ಎ., ಯವರು ಚಾಮರಾಜನಗರದಿಂದ ದಾವಣಗೆರೆಗೆ; ಮ॥ ಎನ್. ರಾಮರಾಯರು ದಾವಣಗೆರೆಯಿಂದ ಬೇಲೂರಿಗೆ; ಮ॥ ಸಿ. ಲಕ್ಷ್ಮಣರಾಯರು ಬೇಲೂರಿನಿಂದ ತುರುವೇಕೆರೆಗೆ; ಮ॥ ಎಚ್. ಕೃಷ್ಣಮೂರ್ತಿರಾವ್, ಬಿ. ಎ., ಯವರು ತುರುವೇಕೆರೆಯಿಂದ ಮಾಲೂರಿಗೆ; ಮ॥ ಜಿ. ಎಸ್. ಚೆನ್ನಮಲ್ಲಸೆಟ್ಟರು ಮಳವಳ್ಳಿಯಿಂದ ಮಂಡ್ಯಕ್ಕೆ; ಮ॥ ಎಸ್. ನರಸಿಂಹಯ್ಯಂಗಾರ್, ಬಿ. ಎ., ಯವರು ಮಂಡ್ಯದಿಂದ ಹೊಳೇನರಸೀಪುರಕ್ಕೆ; ಮ॥ ಸಿ. ಶ್ರೀನಿವಾಸಮೂರ್ತಿ, ಬಿ. ಎ., ಯವರು ಹೊಳೇನರಸೀಪುರದಿಂದ ನಾಗಮಂಗಲಕ್ಕೆ; ಮ॥ ಎ.ಕೆ. ವೆಂಕಟರಮಣಸೆಟ್ಟರು ನಾಗಮಂಗಲದಿಂದ ಅರಸೀಕೆರೆಗೆ; ಮ॥ ಬಿ. ನರಸಿಂಹಯ್ಯಂಗಾರ್ಯರು ಅರಸೀಕೆರೆಯಿಂದ ನೆಲಮಂಗಲಕ್ಕೆ; ಮ॥ ಎಂ. ಶ್ರೀನಿವಾಸಯ್ಯಂಗಾರ್, ಬಿ. ಎ., ಯವರು ನೆಲಮಂಗಲದಿಂದ ಮಳವಳ್ಳಿಗೆ ವರ್ಗವಿಟ್ಟಿರುತ್ತಾರೆ.

ಸ್ವೀಕಾರ.

ಕಳೆದ ಜ್ಯೇಷ್ಠ ಶು॥ ೧೨ ರಲ್ಲಿ ಜಗಳೂರು ತಾ॥ ದೋಣೆಹಳ್ಳಿ ಮಠದ ಶ್ರೀ ತಿಪ್ಪೆಸ್ವಾಮಿಗಳವರ ಮನೆಯಲ್ಲಿ ನಡೆದ ಲಗ್ನದಲ್ಲಿ ಕೈ॥ ವೈ॥ ವೀರಸಂಗಪ್ಪನವರ ಅಗ್ರತಾಂಬೂಲಕ್ಕಾಗಿಯೂ, ಸ್ಟಾರ್ ಪತ್ರಿಕೆಯ ಸಹಾಯಕ್ಕಾಗಿಯೂ, ವಧೂವರರ ಕಡೆಯಿಂದ ತೆಗೆಯಲ್ಪಟ್ಟ ೨ ರೂ.ಪಾಯಿಗಳು ಚಿತ್ರಕಲ್ ದುರ್ಗದ ನಾರ್ಮಲ್‌ಸ್ಕೂಲ್ ವಿದ್ಯಾರ್ಥಿ ಮ॥ ಶಿ. ರಾಚೋಟಯ್ಯನವರ ಮೂಲಕ ಸಂದಿರುತ್ತದೆ. ಪ. ಪ್ರ.

ಪತ್ರವ್ಯವಹಾರ.

ತಾ॥ ೨೧-೭-೧೯೧೭ ನೆಯ ಶನಿವಾರ ಬಸವಣ್ಣದೇವರ ದೇವಸ್ಥಾನದಲ್ಲಿ ನಡೆಯಿಸಿದ ನಗರಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘದ ೭ ನೆಯ ಮ್ಯಾನೇಜಿಂಗ್ ಕಮಿಟಿಯ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರಿ:—೧. ಮ॥ ಜಿ. ಯಂ. ಕಾಡಪ್ಪನವರು ವೈಸ್‌ಪ್ರೆಸಿಡೆಂಟ್. ೨. ಮ॥ ಗದ್ದಿಬಸಪ್ಪನವರು ಸೆಕ್ರೆಟರಿ. ೩. ಮ॥ ನಲ್ಲೂರು ಹಾಲಪ್ಪನವರು. ೪. ಮ॥ ನಿರಿಗೆಶಾಲಪ್ಪಗೌಡರು. ೫. ಚೀಲಶೆಟ್ಟಿ ಹಾಲಪ್ಪನವರು. ೬. ಮ॥ ಕೆ. ಸಿದ್ಧರಾಮಪ್ಪನವರು. ೭. ಮ॥ ದುಮ್ಮಿ ಪಂಚಾಕ್ಷರಪ್ಪನವರು. ೮. ಮ॥ ಕೋರಿ ವೀರಪ್ಪನವರು. ೯. ಮ॥ ಸಜ್ಜನ ಶಿವಲಿಂಗಪ್ಪನವರು. ೧೦. ಮ॥ ಮೂರುಸಾವಿರ ಚೆನ್ನವೀರಪ್ಪನವರು.

ಗೈರ್‌ಹಾಜರಿ:—೧. ಮ॥ ಲಕ್ಷ್ಮೇಶ್ವರದ ಅಡವಪ್ಪಶೆಟ್ಟರು ಪ್ರೆಸಿಡೆಂಟರು. ೨. ಮ॥ ಹಾರ್ನಳ್ಳಿ ಚನ್ನಪ್ಪನವರು. ೩. ಮ॥ ನೇಮತಿ ರೇವಣಸಿದ್ಧಯ್ಯನವರು. ೪. ಮ॥ ದೊಡ್ಡಗೊಪ್ಪೇನಹಳ್ಳಿ ಶಿವಪ್ಪಗೌಡರು. ೫. ಮ॥ ಕೋರಿ ಹಾಲಪ್ಪನವರು ಶಿವಮೊಗ್ಗ. ೬. ಮ॥ ಸುರಹೊನ್ನೆ ಹಾಲಪ್ಪನವರು ಶಿರಾಳಕೊಪ್ಪ. ೭. ಮ॥ ಹರಿಹರದ ಚನ್ನಬಸಪ್ಪನವರು ಶಿವಮೊಗ್ಗ. ೮. ಬೀರೂರು ರುದ್ರಪ್ಪನವರು ಶಿವಮೊಗ್ಗ. ೯. ಮ॥ ದೊಡ್ಡಮನೆ ಗುರುಪಾದಪ್ಪನವರು ಶಿವಮೊಗ್ಗ.

೧. ತಾರೀಖು ೫-೧೧-೧೯೧೬ ರಲ್ಲಿ ನಡೆದ ಒಂದನೆಯ ಕಮಿಟಿ ಪ್ರೊಸೀಡಿಂಗ್ಸ್:-ಓದಿ ಒಪ್ಪಲ್ಪಟ್ಟಿತು.

೨. ಒಂದನೆಯ ಆಡಿಟ್‌ರಿಪೋರ್ಟು (Audit Report)—ಆಡಿಟರ ರಿಪೋರ್ಟು ಓದಿದ್ದನ್ನು ಕೇಳಲಾಯಿತು. ಮತ್ತು ಅವರು ಸೂಚಿಸಿರುವ ನ್ಯೂನತೆಗಳನ್ನು ಸರಿಮಾಡಬೇಕೆಂದು ಸಭೆಯವರು ನಿರ್ಧರಿಸಿರುತ್ತಾರೆ.

೩. ಸರ್ಕಾರದ ಗ್ರ್ಯಾಂಟ್ ಮೊಬಲಗು:—ಗೌರ್ನಮೆಂಟಿನವರು ನಾವು ಕಟ್ಟಲು ಏರ್ಪಾಡುಮಾಡಿರುವ ವಿದ್ಯಾರ್ಥಿ ನಿಲಯಕ್ಕೆ ಮೂರರಲ್ಲಿ ಒಂದು ಭಾಗ ಕೊಡುವಂತೆ ನಿರ್ಣಯಿಸಿರುವದನ್ನು ಕೇಳಿದ್ದಾಯಿತು. ಇದಕ್ಕೆ ನಾವು ಕೃತಜ್ಞರಾಗಿದ್ದೇವೆ. ಆದಾಗ್ಯೂ ಮೂರರಲ್ಲಿ ಒಂದು ಭಾಗವು ಸಾಲದೆ ಇರುವುದರಿಂದಲೂ, ಇತರರಿಗೆಲ್ಲಾ ಖರ್ಚಿನಲ್ಲಿ ಗವರ್ನಮೆಂಟಿನವರು ಅರ್ಧಭಾಗ ಕೊಟ್ಟಿರುವುದರಿಂದ ನಾವುಗಳು ತಿರಿಗಿ ಸರ್ಕಾರಕ್ಕೆ ಅರ್ಧ ಕೊಡುವಹಾಗೆ ಪ್ರಾರ್ಥನೆ ಮಾಡಬೇಕು. ಜರೂರಿದ್ದರೆ ಡೆಪ್ಯುಟೇಷನ್ ಕಳುಹಿಸಬೇಕೆಂದು ನಿರ್ಧರಿಸಲ್ಪಟ್ಟಿತು.

೪. ಸಂಘದ ಬಾಬತು ಕಟ್ಟಡವನ್ನು ಖುದ್ದಿನಿಂತು ಮಾಡಿಸಲು ತಕ್ಕ ಸಹಾಯವನ್ನು ಮಾಡಿಸಿದಲ್ಲಿ ನಾವು ಮಾಡಿಸುವುದಾಗಿ ಮ॥ ನೇಮತಿ ರೇವಣಸಿದ್ಧಯ್ಯನವರು ತಾ॥ ೧೩-೭-೧೯೧೭ ರಲ್ಲಿ ಬರೆದುಕೊಂಡ ಅಪ್ಲಿಕೇಷನ್:—ಸಭಿಕರೆಲ್ಲರೂ ಮ॥ ರೇವಣಸಿದ್ಧಯ್ಯನವರು ಹೇಳುವುದಕ್ಕೆ ಒಪ್ಪಿ ಅವರು ತಾವಾಗಿ ಈ ರೀತಿ ಸಮಾಜಸೇವೆಗಾಗಿ ಬಂದದ್ದಕ್ಕೆ ತಮ್ಮ ವಂದನೆಗಳನ್ನು ಅವರಿಗೆ ತಿಳಿಸಿರುತ್ತಾರೆ.

೫. ಚನ್ನಗಿರಿ ತಾ॥ ಇಟ್ಟಿಗೆ ಗ್ರಾಮದವಾಸಿ ತಿಮ್ಮಪ್ಪನವರ ಮಗ ಹೆಚ್. ರಾಮಪ್ಪನು ತನಗೆ ಸ್ಕಾಲರ್‌ಷಿಪ್ಪನ್ನು ಕೊಡಬೇಕಾಗಿ ತಾ॥ ೭-೬-೧೭ ರಲ್ಲಿ ಬರೆದುಕೊಂಡ ಅರ್ಜಿಯನ್ನು ಕಮಿಟಿಯವರ ಶಿಫಾರಸ್ಸಿನಿಂದ ಅಮಲ್ದಾರ್ರವರಿಗೆ ಕಳುಹಿಸಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ.

೬. ಕಟ್ಟಡವಾಗುವ ಕಡೆ ಈಗ ಕೊಂಡಿರತಕ್ಕ ನಾಟಾ ವಗೈರೆ ಸಾಮಾನುಗಳನ್ನೂ ಮುಂದೆ ಕೊಳ್ಳತಕ್ಕ ಕೊಂಡ ನಾಟಾಗಳನ್ನೂ ಇಡಲಿಕ್ಕೆ ಒಂದು ಸ್ಟೋರ್ ರೂಂ.-ಇದಕ್ಕಾಗಿ ಮ॥ ಕಾಡಪ್ಪನವರು ಬಹು ದೊಡ್ಡ ಮನಸ್ಸಿನಿಂದ ಕಟ್ಟಡಕ್ಕೆ ಬೇಕಾದ ಸಾಮಾನು ಕೊಡಲು ಒಪ್ಪಿದ್ದಾರೆ. ಕಟ್ಟುವ ಕರ್ಚು ಮಾತ್ರ ಫಂಡಿನಿಂದ ತೆಗೆದುಕೊಳ್ಳಬೇಕು. ಇದಕ್ಕಾಗಿ ಕಮಿಟಿಯವರು ಕಾಡಪ್ಪನವರಿಗೆ ವಂದನೆ ತಿಳಿಸಿರುತ್ತಾರೆ.

೭. ಜಗದ್ಗುರು ಶ್ರೀ ಮುರುಘ ಸ್ವಾಮಿಗಳು ಈ ಕಾರ್ಯಕ್ಕೆ ಸಹಾಯ ಮಾಡಲು ವಾಗ್ದಾನಮಾಡಿರುವುದು ಕಮಿಟಿಯವರಿಗೆ ಬಹು ಆನಂದವನ್ನು ಉಂಟುಮಾಡಿದೆ. ಇದಕ್ಕೆ ಮಹಾಸ್ವಾಮಿಗಳಿಗೆ ಕಮಿಟಿಯವರು ಬಹು ನಮ್ರತೆಯಿಂದ ತಮ್ಮ ವಂದನೆಯನ್ನು ತಿಳಿಯಿಸುವುದಲ್ಲದೆ, ಮಹಾಸ್ವಾಮಿಗಳು ಜಾಗ್ರತೆ ಸಹಾಯಮಾಡಬೇಕೆಂದು ಕಮಿಟಿಯವರು ಪ್ರಾರ್ಥನೆ ಮಾಡಬೇಕೆಂದು ನಿರ್ಧರವಾಯಿತು.

೮. ಎಲ್ಲಾ ಮಠಾಧಿಪತಿಗಳನ್ನೂ ಸಹಾಯಮಾಡಲು ಕಮಿಟಿಯವರು ಬೇಡಬೇಕೆಂದು ನಿರ್ಧರವಾಯಿತು.

೯. ಶಿರಗಿರಿ ಮಠದ ಸ್ವಾಮಿಗಳು ಈ ಕಾರ್ಯಕ್ಕೆ ಮ॥ ಲಿಂಗದಹಳ್ಳಿ ಈಶ್ವರಪ್ಪಗೌಡರ ಮೂಲಕ ಸಹಾಯಮಾಡಲು ಒಪ್ಪಿರುವುದಕ್ಕಾಗಿ ಕಮಿಟಿಯವರು ಅವರಿಗೆ ವಂದನೆಯನ್ನು ತಿಳಿಯಿಸಿರುತ್ತಾರೆ.

೧೦. ಹೊಸಮೆಂಬರುಗಳ ಚುನಾವಣೆ:—(೧) ಮ॥ ಜಿ. ರುದ್ರಪ್ಪನವರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು ಶಿವಮೊಗ್ಗ, (೨) ಮ॥ ಗುಬ್ಬಯ್ಯನವರು ಡಿಸ್ಟ್ರಿಕ್ಟ್ ಎಜ್ಯುಕೇಷನ್ ಇನ್ಸ್‌ಪೆಕ್ಟರವರ ಆಫೀಸ್ ಅಕೌಂಟೆಂಟರು.

೧೧. ಕಮಿಟಿಯವರು ಕಟ್ಟಡದ ಕೆಲಸವನ್ನು ಜಾಗ್ರತೆಯಲ್ಲಿಯೇ ಪ್ರಾರಂಭ ಮಾಡಬೇಕಾಗಿರುವುದರಿಂದ ವಾಗ್ದಾನಮಾಡಿರುವ ಮಹನೀಯರುಗಳನ್ನೆಲ್ಲಾ ಜಾಗ್ರತೆಯಾಗಿ ಹಣ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳತಕ್ಕದ್ದು. ಜಿ. ಎಂ. ಕಾಡಪ್ಪ; ಪ್ರೆಸಿಡೆಂಟ್.

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕಸಂಘಕ್ಕೆ ಚಂದಾ ವಸೂಲುಮಾಡಲು ಈ ಕೆಳಗೆ ಕಂಡ ಮಹನೀಯರು ರಸೀದಿ ಪುಸ್ತಕಗಳನ್ನು ಪಡೆದಿರುತ್ತಾರೆ.

೧. ಶ್ರೀ॥ ಅನಂತಪುರ ಮಠದ ಶ್ರೀಗಳವರು ಅನಂತಪುರ, ೨. ಮ॥ ಯನ್. ಪಿ. ಕೆ. ಹಾಲಪ್ಪ, ಬಿ. ರುದ್ರಪ್ಪನವರುಗಳು ಶಿವಮೊಗ್ಗ, ೩. ಮ॥ ಪಟೇಲ್ ಗುರುಮಯ್ಯನವರು, ಹೊರಬೈಲು, ೪. ಮ॥ ಜಿ. ಯಂ. ಕಾಡಪ್ಪನವರು, ಶಿವಮೊಗ್ಗ, ೫. ಮ॥ ಕೇಡಗಾರು ಹಾಲಪ್ಪನವರು, ಶಿವಮೊಗ್ಗ, ೬. ಮ॥ ಬೀರೂರು ಗುರುಪಾದಪ್ಪನವರು ಶಿವಮೊಗ್ಗ, ೭. ಮ॥ ದುಮ್ಮಿ ಪಂಚಾಕ್ಷರಪ್ಪನವರು ಶಿವಮೊಗ್ಗ, ೮. ಮ॥ ಕೆ. ಶಂಕರನಾರಾಯಣರಾಯರವರು ಶಿವಮೊಗ್ಗ, ೯. ಶ್ರೀ॥ ಕೆರೆಕೋಡಿಮಠದ ಗುರುಲಿಂಗಯ್ಯನವರು ಸಾಗರ, ೧೦. ಮ॥ ಪಟೇಲ್ ಕೆ. ಹಾಲಪ್ಪನವರು ನಲ್ಲೂರು, ೧೧. ಮ॥ ಲಕ್ಷ್ಮೇಶ್ವರದ ಅಡವಪ್ಪಶೆಟ್ಟರು ಹೊಡ್ಡಿಗೆರೆ, ೧೨ ಮ॥ ಸುರಹೊನ್ನೆ ಹಾಲಪ್ಪನವರು, ಸಿರಾಳಕೊಪ್ಪ.

ಇವರುಗಳಿಗೆ ಎಲ್ಲಾ ವಿದ್ಯಾಭಿಮಾನಿಗಳೂ, ಮತಾಭಿಮಾನಿಗಳೂ, ತಮ್ಮ ಕಡೆ ಬಂದಾಗ ಯಥೋಚಿತವಾಗಿ ಸಹಾಯಮಾಡಬೇಕಾಗಿ ಈ ಮೂಲಕ ಕೋರಿದೆ.

ಕೆ. ಹಾಲಪ್ಪ.
ಸೆಕ್ರೆಟರಿ,ಗೆಗೊಸ್ಕರ.

ನೋಟೀಸ್.

ಜಗಲೂರು ತಾಲ್ಲೂಕು ಕಲ್ಲೇದೇವರ ಪುರದ ವಾಸಸ್ಥರಾದ ಮಠದ ವೀರಶಂಕರಪ್ಪನವರ ಮಗ ಶಿವರುದ್ರಪ್ಪನು ಇದರಿಂದ ತಿಳಿಯಪಡಿಸಿರುವುದೇನೆಂದರೆ.—ನನ್ನ ಅವಿಭಕ್ತ ಅಣ್ಣ ಪಾ॥ ಕಲ್ಲಪ್ಪನವರ ಮಗ ರೇವಣ್ಣನು ಸ್ವಕೃತ್ಯದಲ್ಲಿ ಸರಿಯಾಗಿ ಇರದೆ ಕೆಟ್ಟ ಜನಗಳ ಸಹವಾಸಕ್ಕೆ ಸೇರಿ ಜೂಜಾಡುತ್ತ ಸೊತ್ತುಗಳನ್ನ ಹಾಳುಮಾಡುತ್ತಾ ಪೋಲಿಯಾಗಿ ತಿರುಗುತ್ತಾ ಇರುತ್ತಾನೆ ಆದ್ದರಿಂದ ಇವನಿಗೆ ಯಾರೂ ಸಾಲಗಳನ್ನು ಕೊಟ್ಟು ಕಳದುಕೊಳ್ಳಬೇಡಿ ಎಂದು ಈ ಮೂಲಕ ತಿಳಿಯಸಿರುತ್ತೇನೆ. ಶಿವರುದ್ರಪ್ಪ.

ಹೊಸಪುಸ್ತಕಗಳು. ಬೆಲೆಸುಲಭ.

ಶಾನುಭೋಗರುಗಳೇ ಇಲ್ಲಿನೋಡಿರಿ !!

ಈಗಿನ ಹೊಸತರಹೆ ಬಾಬಾ ನಮೂನೆ ಫಾರಂಗಳು ಉತ್ತಮವಾದ ಫುಲಿಸ್ಕೇಪ್ ಕಾಗದದಲ್ಲಿ ತಯಾರಿಸಿರುವುದು ದಸ್ತು ೧ ಕ್ಕೆ ಅವ್ವಲ್ ೬ ಆಣೆ, ೫ ಆಣೆ, ದುಯಂ, ೪ ಆಣೆ.

ವ್ಯವಹಾರನಿರ್ಣಯ (ಕನ್ನಡಾ ಲಾ)	೧—೮—೦
ನ್ಯಾಯದರ್ಪಣ ಡಿ.	೧—೮—೦
ಶ್ರೀಮತ್ ಕಾಶಿ, ಪ್ರಯಾಗ ಗಯಾತೀರ್ಥಕ್ಷೇತ್ರ ಮಹಾತ್ಮ್ಯ	೧—೮—೦
ಆಶ್ವಲಾಯನ ಪೂರ್ವಪ್ರಯೋಗ	೨—೦—೦
ಕನ್ನಡ ೫ ನೇ ತರಗತಿ ರೇಖಾಗಣಿತ	೦—೪—೦
ಇಲಾಖೆಯ ೩ ನೇ ಪುಸ್ತಕದ ನೋಟ್ಸು	೦—೪—೦
೧೯೧೮ ಕನಡ ಟೆಕ್ಸ್‌ನೋಟ್ಸು	೦—೮—೦
ಲೇಖಕತತ್ವ ಪ್ರಕಾಶಿಕೆ (ಅರ್ಜಿಯ ನಮೂನೆಗಳುಳ್ಳದ್ದು)	೦—೪—೦
ಆರೋಗ್ಯಪ್ರಶ್ನೋತ್ತರ	೦—೧—೦

ವಿಳಾಸ—ಹೆಚ್. ವೆಂಕಟರಾಮಯ್ಯ ಅಂಡ್‌ಸನ್ಸ್
11 ವಿದ್ಯಾನಿಧಿ ಬುಕ್‌ಡಿಪೋ, ಮೈಸೂರು.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

39 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ. ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆ ವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

೧೯೧೭ ನೆಯ ಇಸವಿ ಆಗಸ್ಟ ತಾ॥ ೧೨ ರಿಂದ ೧೯೧೭ ನೆಯ ಆಗಸ್ಟ ತಾ॥ ೧೮ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಶ್ರಾವಣ ಬ॥ ದಶಮಿಯಿಂದ ಅಧಿಕ ಭಾದ್ರಪದ ಶು॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಘಟಿಕ
12	ಭಾನು	ದಶಮಿ	26-5	ರೋಹಿಣಿ	13-25	28
13	1 ಸೋಮ	ಏಕಾ	26-22	ಮೃಗಶಿರ	15-11	29
14	2 ಮಂಗಳ	ದ್ವಾದಶಿ	27-58	ಆರಿದ್ರಾ	18-12	30
15	3 ಬುಧ	ತ್ರಯೋ	30-45	ಪುನರ್ವಸು	22-24	31
16	4 ಗುರು	ಚತು	34-39	ಪುಷ್ಯ	27-40	1
17	5 ಶುಕ್ರ	ಅಮಾ	39-18	ಆಶ್ಲೇಷ	33-43	2
18	ಶನಿ	ಪಾಡ್ಯ	44-30	ಮಖಾ	40-16	3

(1) ಸರ್ವತ್ರೈಕಾದಶೀ. (2) ಸೌರಶ್ರಾವಣಬಹುಳಕೃಷ್ಣದ್ವಾದಶೀತಿಥಿ। ಮಂಗಳಗೌರೀವ್ರತಂ. (3) ಮಾಸಶಿವರಾತ್ರಿ। ಸೌರಶ್ರಾವಣಬಹುಳಕೃಷ್ಣತ್ರಯೋದಶೀತಿಥಿ. (4) ವಿಷ್ಣುಪದಪುಣ್ಯಕಾಲ। ಅಮೃತಸಿದ್ಧಿಯೋಗ। (5) ಸರ್ವತ್ರಾಮಾವಾಸ್ಯಾ ಅಧಿಶುಕ್ರವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀಶಾಲಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವಕಾರಾ ಪರ್ವಜ್ಞನಕ್ಷತ್ರಮೋಹರಾಜೀಯತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಾಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಲಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ‖

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಆಗಸ್ಟ ತಾರೀಖು ೧೯ ನೆಯ ಭಾನುವಾರ. (ಸಂಚಿಕೆ ೩೩

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸೌಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಕು, ಲೋಹಭಸ್ಮಗಳಿಂದ ಸರ್ವರೂ ಮೋಹಿಸುವಂತೆಯೂ, ಶೀಘ್ರದಲ್ಲಿ ಗುಣಕೊಡುವಂತೆಯೂ ತಯಾರಿಸಲ್ಪಟ್ಟಿರುವುದು.

ತಾಂಬೂಲದೊಡನೆ ೪-೫ ಮಾತ್ರೆಗಳನ್ನು ಉಪಯೋಗಿಸಿದರೆ ಬಾಯಿ ಎಷ್ಟೋಹೊತ್ತು ಸುವಾಸನೆಯಾಗಿರುವುದು ಮಾತ್ರವೇ ಅಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಕಾಲರಾ ಪ್ಲೇಗು ಮೊದಲಾದ ಸೋಂಕುರೋಗಗಳಿಂದಲಾಗಲೀ ಕೆಟ್ಟನೀರು ಹವಾಗಳಿಂದಲಾಗಲೀ ಪ್ರಯಾಣದಿಂದ ಉಂಟಾಗುವ ಆಯಾಸದಿಂದಾಗಲೀ, ದೇಹವು ಸ್ವಲ್ಪವೂ ಕೆಡದೆ ಆರೋಗ್ಯವಾಗಿರುವುದು. ಮಕ್ಕಳ ಅಜೀರ್ಣಭೇದಿ, ಕೆಮ್ಮು, ಮಂದಜ್ವರ, ಎಳವು, ಹೊಟ್ಟೆ ಉಬ್ಬರ, ಶೀತವಾಯು, ಹಲ್ಲುನೋವು, ಅಲ್ಸರಗಳಿಗೆ ಸಂಜೀವನವು. ಸುಮಾರು ೩೦೦ ಮಾತ್ರೆಯ ಸೀಸೆ ೪ ಆಣೆ ೬ ಸೀಸೆಗೆ ಟ. ಖ. ಸೇರಿ ೧ ರೂ. ೮ ಆಣೆ. ೧೨ ಕ್ಕೆ ೨ ರೂ. ೧೨ ಆಣೆ. ೨೫ಕ್ಕೆ ೫ ರೂ. ೫೦ ಕ್ಕೆ ೯ ರೂ. ೮ ಆಣೆ ೧೦೦ ಕ್ಕೆ೧೭ ರೂಪಾಯಿಗಳು.

ಹಲ್ಲುಪುಡಿ (ಗುಲಾಬಿ ಬಣ್ಣ ಮನೋಹರವಾದ ವಾಸನೆ ಅದ್ಭುತಗುಣಗಳಿಂದ ಕೂಡಿದ್ದು) ೩೦ ದಿವಸಕ್ಕೆ ಆಗುವ ಪೊಟ್ಟಣ ೧ ಆಣೆ. ನಾರಿಕೇಳಾಂಜನ ಸೀಸೆ ೧ ಕ್ಕೆ ೪ ಆಣೆ. ಜ್ವರದ ಮಾತ್ರೆ ೧೨೦ ಕ್ಕೆ ೮ ಆಣೆ, ಭೇದಿ

ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಅಮೋಘಿನಿ (ಸುಖಕಂಠ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರು ಬೇಕು. ಹೆಚ್ಚು ಔಷದ ತರಿಸಿದರೆ ಹೆಚ್ಚು ರಿಯಾಯತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
14 ಸದ್ವೈದ್ಯಶಾಲಾ ನಂಜನಗೂಡು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.
ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳ ಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಇಟ್ಟುಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವದಿಲ್ಲ. ಇದು ಅಕಳವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡವರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಸ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆಜಡ್ಡು, ಗುದ್ದಪ್ಪನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು, ಇಸಬು, ಘಾಯಪ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರದಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರವಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ.ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನನ್ನ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಹಸಂದರಿ ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
24 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 38

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ ಬರ್ಮ, ಸಿಲೋನ್, ಮಾರಿಷಸ್, ಗೋವಾ, ಫಿಜೀ ಐಲೆಂಡ್, ಈಸ್ಟ್‌ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ! ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಪಂತಕೂವಾಕಿಗೂ ವೈದ್ಯರ ಸಮಯವನ್ನು ಕಾದು ನೋಡಿಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಸಾರ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಂಹೀನತೆ, ಕೆಟ್ಟತನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕಣಗಲ್ಬಂಗ ಕೆಮಿಸ್ಟ್ರು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೦—[illegible]—೦
ಪರವಾದಿ ಗಜಾಂಕುಶತಾರಾವಳಿ	೦—[illegible]—೦
ಶಿವಪೂಜಾ[illegible]	೦—[illegible]—೦
ಚಾರುಶೀಲೆ[illegible]	೦—[illegible]—೦
ಹಂದಾ[illegible]	೦—[illegible]—೦
ವ್ರತಪಂಚಕ	೦—[illegible]—೦
ಷಟ್ಸ್ಥಲ[illegible] (ಮುಕ್ತಿಸಾಧನ)	೦—[illegible]—೦
ಗುರುಕರುಣ[illegible]	೦—[illegible]—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಕಾಶಕರುಗಳಿಗೆ [illegible]

ಮೈಸೂರು ಸ್ಟಾರ್.

೧೯೧೭ನೆಯ ಇಸವಿ ಆಗಸ್ಟ ತಾ|| ೧೯ ನೆಯ ಭಾನುವಾರ.

ಕಾಗದದ ನಿರ್ಮಾಣ.

ನಮ್ಮ ಭರತಖಂಡದವರು ಪಾಶ್ಚಾತ್ಯರ ಸಂಸರ್ಗಕ್ಕಿಂತ ಪೂರ್ವದಿಂದಲೂ ಕಾಗದವನ್ನು ಒರಟೊರಟಾಗಿ ನಿರ್ಮಿಸಿಕೊಳ್ಳುತ್ತಲೇ ಇದ್ದರು. ಈಚೆಗೆ ಪರದೇಶಗಳಿಂದ ಪ್ರಶಸ್ತಗಳಾದ ಕಾಗದಗಳು ಬಂದಿಳಿಯುವುದಕ್ಕೆ ಆರಂಭವಾದುದರಿಂದ ಈ ದೇಶದ ಹಳೆತರದ ಕಾಗದಗಳ ಅಭಿಲಾಷೆಯೂ, ನಿರ್ಮಾಣಾವಶ್ಯಕತೆಯೂ ಅಳಿದುಹೋದುವು. ಈಗ ನಮ್ಮ ದೇಶಕ್ಕೆ ವರ್ಷೇವರ್ಷೆ ೭೫ ಸಾವಿರ ಟನ್ನುಗಳ ತೂಕದಷ್ಟು ಕಾಗದವು ಬೇಕಾಗುತ್ತಿದೆ. ಇದರಲ್ಲಿ ಬಹು ಭಾಗವೆಲ್ಲಾ ಪರದೇಶಗಳಿಂದ ಬರುವುದೇ ಆಗಿರುತ್ತದೆ. ಪಾಶ್ಚಾತ್ಯದೇಶಗಳ ಯಂತ್ರಗಳನ್ನು ತರಿಸಿಕೊಂಡು ನಮ್ಮ ದೇಶದಲ್ಲೂ ಕೆಲವುಕಡೆ ಕಾಗದದ ನಿರ್ಮಾಣವು ನಡೆಯುತ್ತಿದೆ. ಹೀಗೆ ಕೆಲಸಮಾಡುತ್ತಿರುವ ಯಂತ್ರಾಲಯಗಳು ನಮ್ಮ ಭರತಖಂಡದಲ್ಲೆಲ್ಲಾ ೯ ಮಾತ್ರನೇ ಇರುತ್ತವೆ. ಇವುಗಳಿಂದೆಲ್ಲಾ ವರ್ಷ ೧ ಕ್ಕೆ ಯುದ್ಧಾರಂಭವಾಗುವುದಕ್ಕೆ ಮುಂಚೆ ೨೫ ಸಾವಿರ ಟನ್ನುಗಳ ತೂಕದಷ್ಟು ಕಾಗದವು ಮಾತ್ರ ನಿರ್ಮಿಸಲ್ಪಡುತ್ತಿದ್ದಿತು. ಯುದ್ಧದ ದೆಸೆಯಿಂದ ಪರದೇಶಗಳ ಕಾಗದವು ಬರುವುದು ಕಡಿಮೆಯಾದುದರಿಂದಲೂ, ಬೆಲೆಯು ಹೆಚ್ಚಿಕೊಂಡುದರಿಂದಲೂ ಸಹ ನಮ್ಮ ದೇಶದ ಯಂತ್ರಾಲಯಗಳಲ್ಲಿ ಮೊದಲಿಗಿಂತ ೫ ಸಾವಿರ ಟನ್ನುಗಳಷ್ಟು ಹೆಚ್ಚಾಗಿ ನಿರ್ಮಿಸಲ್ಪಡಲಾರಂಭವಾಯಿತು. ಎಂದರೆ ಈಗ ವರ್ಷ ೧ ಕ್ಕೆ ೩೦ ಸಾವಿರ ಟನ್ನುಗಳಷ್ಟು ಕಾಗದವು ನಮ್ಮ ದೇಶದಲ್ಲೇ ನಿರ್ಮಿತವಾಗುತ್ತಿರುವುದು. ನಮ್ಮ ದೇಶಕ್ಕೆ ಬೇಕಾಗುತ್ತಿರುವ ಕಾಗದದಲ್ಲಿ ಸ್ವಲ್ಪ ಹೆಚ್ಚುಕಡಿಮೆ ¼ ಭಾಗದಷ್ಟು ಕಾಗದವನ್ನು ನಾವು ನಿರ್ಮಿಸಿಕೊಳ್ಳುತ್ತಿರುವೆವೆಂದು ಹೇಳಬಹುದು. ಉಳಿದ ಕಾಗದಕ್ಕೆಲ್ಲಾ ನಾವು ಪರದೇಶದವರ ಕೈಯನ್ನು ಕಾದುಕೊಂಡು, ಅದಕ್ಕಾಗಿಯೇ ಒಂದೂಕಾಲು ಕೋಟಿ ರೂ.ಗಳಿಗೆ ಕಡಿಮೆಯಿಲ್ಲದೆ ಪರದೇಶದವರಿಗೆ ವರ್ಷೇವರ್ಷೆ ಕೊಡುತ್ತಿರುವೆವು. ಅಲ್ಲದೆ ನಮ್ಮ ದೇಶದ ಯಂತ್ರಾಲಯಗಳಿಗೆ ಕಾಗದದ ನಿರ್ಮಾಣಕ್ಕೆ ಬೇಕಾದ ಮರದ ಸರಿ ಮೊದಲಾದ ದ್ರವ್ಯಗಳು ಪರದೇಶಗಳಿಂದಲೇ ಬರಬೇಕಾಗಿರುವುದರಿಂದ ಅವಕ್ಕೂ ಬೆಲೆ ಕೊಟ್ಟೇ ತರಿಸಿಕೊಳ್ಳಬೇಕಾಗುತ್ತಿರುವುದು. ಇದರಿಂದ ನಮ್ಮ ದೇಶದಲ್ಲಿ ಕಾಗದದ ನಿರ್ಮಾಣವು ನಡೆಯುತ್ತಿದ್ದರೂ ಅದರಿಂದ ಬರುವ ಆದಾಯದಲ್ಲಿ ಅಧಿಕಭಾಗವು ವಿದೇಶಗಳಿಗೆ ಹೋಗಲು ಅವಕಾಶವಿರುವುದು. ಯುದ್ಧಾರಂಭವಾದ ಬಳಿಕ ವಿದೇಶಗಳಿಂದ ಕಾಗದದ ಸರಿ ಮೊದಲಾದುವುಗಳು ಬರುವುದು ಕಡಿಮೆಯಾದುದರಿಂದ, ಕಾಗದದ ನಿರ್ಮಾಣಕ್ಕೆ ಅವಶ್ಯಕವಾದ ಮರದ ಸರಿ ಮೊದಲಾದುವುಗಳನ್ನು ಈ ದೇಶದ ಮೂಲವಸ್ತುಗಳಿಂದಲೇ ನಿರ್ಮಿಸಿಕೊಳ್ಳುವುದಕ್ಕೆ ನಮ್ಮ ದೇಶೀಯರು ಪ್ರಯತ್ನಿಸಿದರು. ಅದು ಫಲಕಾರಿಯೂ ಆಯಿತು. ಹತ್ತಾರುವರ್ಷಗಳಿಂದ ಭರತಖಂಡದ ಸರ್ಕಾರದವರು ಈ ದೇಶದಲ್ಲೂ ಬರ್ಮಾದಲ್ಲೂ ಕಾಗದದ ನಿರ್ಮಾಣಕ್ಕೆ ಉಪಯೋಗಿಸುವ ಮರಗಳು ದೊರೆಯುತ್ತವೆಯೆಂಬುದನ್ನು ಪರೀಕ್ಷೆಮಾಡಿಸಿ, ದೊರೆಯುವ ಜಾತಿಗಳನ್ನು ಗೊತ್ತುಮಾಡಿ ಪ್ರಕಟಿಸಿದರು. ನಮ್ಮ ಮೈಸೂರು ಸರ್ಕಾರದವರೂ ಸಹ ಇಂಥ ಪರಿಶೋಧನೆಯನ್ನು ಚೆನ್ನಾಗಿ ನಡೆಯಿಸಿರುವರು. ನಮ್ಮ ದೇಶದ ಕಾಡುಗಳಲ್ಲಿ ಯಥೇಚ್ಛವಾಗಿ ದೊರೆಯುವ ಬಿದಿರಿನಿಂದ ಕಾಗದವನ್ನು ನಿರ್ಮಿಸಬಹುದೆಂದು ಗೊತ್ತುಮಾಡಿರುವರು. ನಮ್ಮ ಭರತಖಂಡದಲ್ಲಿ ಸ್ಥಾಪಿತವಾಗಿ ನಡೆಯುತ್ತಿರುವ ಕಾಗದದ ಯಂತ್ರಾಲಯಗಳಲ್ಲೆಲ್ಲಾ ದೊಡ್ಡದೆನಿಸಿಕೊಂಡಿರುವ ತಿತ್ತಘರ್‌ನ ಯಂತ್ರಾಲಯಕ್ಕೆ ಈ ದೇಶದ ಬಿದಿರನ್ನು ಕಳುಹಿಸಿ, ಅದರ ಸರಿಯಿಂದ ಮಾಡಿಸಿದ ಕಾಗದವನ್ನು ತರಿಸಿನೋಡಿ ಪ್ರಶಸ್ತವಾಗಿ ಇಳಿಯುವುದೆಂದು ಗೊತ್ತುಮಾಡಿರುವರು. ಬಂಗಾಳಾ ಮೊದಲಾದ ಕಡೆಗಳಲ್ಲಿರುವ ಕಾಗದದ ಯಂತ್ರಾಲಯಗಳವರು ಬರ್ಮಾದ ಕಾಡುಗಳಲ್ಲೂ, ಛೋಟಾನಾಗಪುರ, ಬಂಗಾಳ, ನೇಪಾಳ, ಸಂಯುಕ್ತಪ್ರಾಂತ ಮೊದಲಾದ ಸ್ಥಳಗಳಲ್ಲಿರುವ ಕಾಡುಗಳಲ್ಲೂ ದೊರೆಯುವ ಶಾಬಾಯಿ, ಬಾಬರು, ಮೊದಲಾದ ಕೆಲವು ಜಾತಿಯ ಗಿಡಗಳ ದಂಟುಗಳಿಂದಲೂ, ಹಳೆಬಟ್ಟೆ, ಗೋಣೆತಾಟಿನ ಚಿಂದಿ, ಸೆಣಬಿನ ಚೂರು, ಹಳೆ ಕಾಗದಗಳು ಮೊದಲಾದ ಅನೇಕ ವಸ್ತುಗಳನ್ನು ಕಾಗದದ ಸರಿಗಾಗಿ ಉಪಯೋಗಿಸಿಕೊಳ್ಳುತ್ತಿರುವರು. ಬರ್ಮಾದ ಕಾಡುಗಳಲ್ಲೂ ಇದಕ್ಕೆ ಉಪಯೋಗಿಸುವ ಮರಗಳು ದೊರೆಯುವುವೆಂದು ಗೊತ್ತಾಗಿರುವುದು. ನಮ್ಮದೇಶದವರು ನಡೆಯಿಸಿದ ಪರೀಕ್ಷೆಯಿಂದ ಈ ದಕ್ಷಿಣದೇಶದ ಕಾಡುಗಳಲ್ಲೂ ಅಪರಿಮಿತವಾಗಿ ಮರಗಳು ದೊರೆಯುವುವೆಂಬುದು ಸ್ಥಿರವಾಗಿರುವುದು. ಪಶ್ಚಿಮತೀರದ ಕಾಡುಗಳಲ್ಲಿ ವಿಪರೀತವಾಗಿ ದೊರೆಯುವ "ಪೆವಾನಾ" ಎಂಬ ಒಂದು ಜಾತಿಯ ಗಿಡಗಳಿಂದಲೂ, ಹತ್ತಿಯ ಗಿಡದ ದಂಟುಗಳಿಂದಲೂ ಸಹ ಕಾಗದದ ಸರಿಯನ್ನು ಮಾಡಿಕೊಳ್ಳಬಹುದೆಂದು ಶಾಸ್ತ್ರಜ್ಞರು ಗೊತ್ತುಮಾಡಿರುವರು. ದೇಶದ ಎಲ್ಲಕಡೆಯಲ್ಲೂ ಸಮೃದ್ಧವಾಗಿ ದೊರೆಯುವ ಈ ಮೂಲವಸ್ತುಗಳ ಆಧಾರದಿಂದ ಕಾಗದದ ಯಂತ್ರಾಲಯಗಳನ್ನು ಎಲ್ಲ ಕಡೆಯಲ್ಲೂ ಸ್ಥಾಪಿಸಿ ನಡೆಯಿಸುವುದಕ್ಕಾರಂಭಿಸಿದರೆ, ನಮ್ಮ ದೇಶಕ್ಕೆ ಬೇಕಾಗುವ ಕಾಗದಗಳನ್ನೆಲ್ಲಾ ನಮ್ಮ ದೇಶದಲ್ಲೇ ನಿರ್ಮಿಸಿಕೊಳ್ಳುವುದು ಅಸಾಧ್ಯವೇನೂ ಅಲ್ಲವೆಂದು ವ್ಯಕ್ತವಾಗುವುದು. ಮೂಲವಸ್ತುಸಮೃದ್ಧಿಯು ನಮ್ಮಲ್ಲೇ ಇರುವುದರಿಂದ ಸರಿಯನ್ನು ಪರದೇಶಗಳಿಂದ ತರಿಸಿಕೊಳ್ಳಬೇಕಾಗುವುದೇ ಇಲ್ಲ. ಮೂಲದ್ರವ್ಯಗಳಿಂದ ಕಾಗದದ ಸರಿಯನ್ನು ಮಾಡಿಕೊಳ್ಳುವುದಕ್ಕೆ ಬೇಕಾಗುವ ಕೆಲವು ರಾಸಾಯನಿಕ ದ್ರವ್ಯಗಳನ್ನು ಮಾತ್ರ ಹೊರಗಣಿಂದ ತರಿಸಿಕೊಳ್ಳಬೇಕಾಗಬಹುದು. ಆದರೆ ಜಪಾನರು ಅಂಥ ವಸ್ತುಗಳನ್ನೂ ತಾವೇ ನಿರ್ಮಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿರುವುದರಿಂದ, ದಿನಕ್ರಮೇಣ ನಾವೂ ಕೂಡ ಹಾಗೆಯೇ ಮಾಡಿ, ಆ ವಸ್ತುಗಳ ವಿಷಯದಲ್ಲೂ ಪರಾವಲಂಬನೆಯನ್ನು ತಪ್ಪಿಸಿಕೊಳ್ಳುವುದು ಸಾಧ್ಯವಾಗಬಹುದು.

ಕಾಗದವು ನಿತ್ಯೋಪಯೋಗ್ಯ ವಸ್ತುವಾಗಿರುವುದರಿಂದ ಅದರ ನಿರ್ಮಾಣವು ಅತ್ಯವಶ್ಯಕವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಬರುಬರುತ್ತ ಕಾಗದ ವ್ಯವಹಾರವು ದೇಶದಲ್ಲಿ ಹೆಚ್ಚುತ್ತಿರುವಕಾರಣ, ಅದಕ್ಕೆ "ಗಿರಾಕಿಯು" ಕಡಿಮೆಯಾಗುವುದೆಂಬ ಭಯವೇ ಇಲ್ಲ. ಈ ಯುದ್ಧಕಾಲದಲ್ಲಿ ಕಾಗದದ ನಿರ್ಮಾಣವು ವಿಶೇಷ ಲಾಭಕಾರಿಯಾಗಿರುವುದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಯುದ್ಧ ಮುಗಿದಮೇಲಾದರೂ ಸ್ವದೇಶಕ್ಕೆ ಬೇಕಾದಷ್ಟು ಕಾಗದವನ್ನೆಲ್ಲಾ ಈ ದೇಶದಲ್ಲೇ ನಿರ್ಮಿಸಿಕೊಂಡು, ಹಡಗಿನ ಬಾಡಿಗೆ ಮೊದಲಾದುವುಗಳ ಭಾರವೊಂದೂ ಇಲ್ಲದಿರುವ ಕಾರಣದಿಂದ ಪರದೇಶದ ಕಾಗದಗಳಿಗಿಂತ ಅಗ್ಗವಾಗಿ ಇಲ್ಲಿಯ ಕಾಗದಗಳನ್ನು ಮಾರಬಹುದಾದಕಾರಣ ಈ ದೇಶದ ಎಲ್ಲ "ಗಿರಾಕಿ" ಗಳೂ ಅದಕ್ಕೇ ಎರಗುವುವು. ಅಗ್ಗವಾಗಿ ಸ್ವದೇಶದ ಕಾಗದಗಳೇ ದೊರೆಯುತ್ತಿರುವುದಾದರೆ ಪರದೇಶದ ಕಾಗದಗಳನ್ನು ಯಾರುತಾನೇ ಅಪೇಕ್ಷಿಸುವರು? ಇವೆಲ್ಲ ಕಾರಣಗಳಿಂದ ಈ ದೇಶದಲ್ಲಿ ಕಾಗದದ ಪರಿಶ್ರಮವು ಜಯಕರವಾಗಿ ಸಾಗುವುದೆಂಬುದಕ್ಕೆ ಸಂಶಯವಿಲ್ಲ. ಧೈರ್ಯದಿಂದಲೂ ದೇಶಾಭಿಮಾನದಿಂದಲೂ ಧನಿಕರುಗಳು ಬಂಡವಾಳವನ್ನು ಹಾಕಿ ಯಂತ್ರಾಲಯಸ್ಥಾಪನೆಗಳಿಗೆ ತೊಡಗುವುದೊಂದೇ ಅವಶ್ಯಕವಾಗಿರುವುದು.

ನಮ್ಮ ದೇಶದ ಸಂಪದಭ್ಯುದಯ ಸಮಾಜದ ವಾಣಿಜ್ಯಮಿಕ ಶಾಖೆಯವರು ಈ ದೇಶದಲ್ಲಿ ಒಂದು ಕಾಗದದ ಯಂತ್ರಾಲಯಸ್ಥಾಪನೆಗೆ ಏರ್ಪಾಟುಮಾಡುವುದರಲ್ಲಿರುವರೆಂದು ಕೇಳುತ್ತೇವೆ. ನಮ್ಮ ಸರ್ಕಾರದವರು ಬೊಂಬಾಯಿಯಿಂದ ಮ|| ಧ್ರುವ ಎಂಬ ತದ್ವಿಷಯಜ್ಞರನ್ನು ಕರೆಯಿಸಿ, ಪರಿಶೋಧನಮಾಡಿಸಿದುದರಲ್ಲಿ ವರ್ಷ ೧ ಕ್ಕೆ ೫ ಸಾವಿರ ಟನ್ನುಗಳ ತೂಕದಷ್ಟು ಕಾಗದವನ್ನು ನಿರ್ಮಿಸುವ ಯಂತ್ರೋಪಕರಣಗಳಿಗೆ ೮ ಲಕ್ಷ ರೂ ಗಳೂ, ಯಂತ್ರಾಲಯನಿರ್ಮಾಣಕ್ಕೆ ೧ ಲಕ್ಷವೂ, ೬ ತಿಂಗಳವರೆಗೆ ಕೆಲಸ ನಡೆಯಿಸುವುದಕ್ಕೆ ೪ ಲಕ್ಷ ರೂ. ಗಳ ಬಂಡವಾಳವೂ ಬೇಕಾಗುವುದೆಂದೂ, ಇಷ್ಟು ಬಂಡವಾಳದಿಂದ ಕೆಲಸಮಾಡಿದರೆ ಟನ್ನು ೧ ಕ್ಕೆ ೩೬೦ ರೂ. ಗಳಪ್ರಕಾರ ಲಾಭ ಬರುವುದೆಂದೂ, ತಡಸ ಗ್ರಾಮದಲ್ಲಿ ಈ ಯಂತ್ರಾಲಯವನ್ನು ಸ್ಥಾಪಿಸಬಹುದೆಂದೂ, ಬಂಡವಾಳಕ್ಕೆ ವೆಚ್ಚಮಾಡಿದ ಹಣವೆಲ್ಲಾ ಸ್ವಲ್ಪಕಾಲದೊಳಗೇ ಉತ್ಪನ್ನವಾಗಿಹೋಗುವುದೆಂದೂ, ಅಭಿಪ್ರಾಯಕೊಟ್ಟಿರುವುದಾಗಿಯೂ, ಇಂಡ್ಯಾ ಸರ್ಕಾರದ ತದ್ವಿಷಯಜ್ಞರಾದ ಆಂಗ್ಲಶಾಸ್ತ್ರಜ್ಞರೊಬ್ಬರು ಶಿವಮೊಗ್ಗೆಯಲ್ಲಿ ಈ ಯಂತ್ರಾಲಯವನ್ನು ಸ್ಥಾಪಿಸಬಹುದೆಂದೂ, ೧೯ ಲಕ್ಷ ರೂ. ಗಳ ಮೂಲದ್ರವ್ಯವನ್ನು ಯಂತ್ರಾದಿಗಳಿಗಾಗಿ ಕೊಟ್ಟು, ವರ್ಷಕ್ಕೆ ೪ ಲಕ್ಷದಂತೆ ವೆಚ್ಚಮಾಡಿದರೆ ವೆಚ್ಚಕಳೆದು ವರ್ಷಕ್ಕೆ ೬ ಲಕ್ಷದಂತೆ ಲಾಭ ಬರುವುದೆಂದೂ ವರದಿಮಾಡಿರುವುದಾಗಿಯೂ ನಮ್ಮ ಸರ್ಕಾರದ ಒಡಲಾದ ಅರ್ಥಸಾಧಕಪತ್ರಿಕೆಯು ಹೇಳಿರುವುದು. ಹೀಗಿದ್ದ ಪಕ್ಷದಲ್ಲಿ ನಮ್ಮ ಸರ್ಕಾರದವರು ಈ ಯಂತ್ರಾಲಯ ಸ್ಥಾಪನೆಯನ್ನು ಮಾಡುವುದು ಅವಶ್ಯಕವೇ ಆಗಿರುವುದು.

ತಿತ್ತಘರ್‌ನ ಕಾಗದದ ಯಂತ್ರಾಲಯದವರು ತಮ್ಮ ತಿತ್ತಘರ್‌ನ ಮತ್ತೂ ಕಾಂಕಿನಾರಿನ ೨ ಯಂತ್ರಾಲಯಗಳಿಂದಲೂ ಈಗ ವರ್ಷಕ್ಕೆ ೧೫ ಸಾವಿರ ಟನ್ನುಗಳಷ್ಟು ಕಾಗದವನ್ನು ನಿರ್ಮಾಣಮಾಡುತ್ತಲಿದ್ದಾರೆ. ರಾಣಿಗಂಜಿನಲ್ಲಿರುವ ಬಂಗಾಳಾ ಕಾಗದದ ಯಂತ್ರಾಲಯದಲ್ಲಿ ವರ್ಷಕ್ಕೆ ೬೨೦೦ ಟನ್ನುಗಳಷ್ಟು ನಿರ್ಮಿಸಲ್ಪಡುತ್ತಿರುವುದಂತೆ ಲಕ್ನೋ ಮೊದಲಾದ ಉಳಿದ ಕಡೆಯಲ್ಲಿರುವ ಯಂತ್ರಾಲಯಗಳಲ್ಲೆಲ್ಲಾ ೨-೩ ಸಾವಿರ ಟನ್ನುಗಳಂತೆ ಮಾತ್ರ ಉತ್ಪನ್ನವಾಗುತ್ತಿದೆ. ನಮ್ಮ ದೇಶದ ಯಂತ್ರಾಲಯದಲ್ಲಿ ೫೦೦೦ ಟನ್ನುಗಳಷ್ಟು ಉತ್ಪನ್ನವಾಗುವುದಾದರೆ ಈ ದೇಶದ ಕಾಗದದ ಯಂತ್ರಾಲಯಗಳಲ್ಲಿ ಇದು ೩ ನೆ ಸ್ಥಾನವನ್ನು ಪಡೆದಂತಾಗುವುದು. ಗಂಧದೆಣ್ಣೆಯ ಯಂತ್ರಾಲಯಪ್ರಯತ್ನದಲ್ಲಿ ಈಗಾಗಲೇ ಫಲಪ್ರಾಪ್ತಿಯನ್ನು ಚೆನ್ನಾಗಿ ಪಡೆಯುತ್ತಲೂ, ಕಬ್ಬಿಣದ ಯಂತ್ರಾಲಯಸ್ಥಾಪನ ಯತ್ನದಲ್ಲಿ ಪ್ರವಿಷ್ಟರೂ, ಆಗಿರುವ ನಮ್ಮ ಸರ್ಕಾರದವರು ಲಾಭಕರವೂ ಅತ್ಯಾವಶ್ಯಕವೂ ಆಗಿರುವ ಈ ಕಾಗದದ ಪರಿಶ್ರಮವನ್ನೂ ಆರಂಭಮಾಡಿಸುವುದಾದರೆ ದೇಶೀಯರಿಗೆ ಸಹಾಯವೂ, ಬೊಕ್ಕಸಕ್ಕೆ ಲಾಭವೂ, ಸಂಪದಭ್ಯುದಯ ಸಮಾಜಕ್ಕೆ ಒಂದು ವಿಜಯವೂ ಪ್ರಾಪ್ತವಾಗುವುವು.

ಒಳದೇಶದ ವೃತ್ತಾಂತಗಳು.

ಕಳೆದ ಗುರುವಾರದಿಂದ ರಾಜಧಾನಿಯಲ್ಲೂ ಸುತ್ತುಮುತ್ತಣ ಗ್ರಾಮಾಂತರಗಳಲ್ಲೂ ಮಳೆಗಾರಂಭವಾಗಿ ಹುಯ್ಯುತ್ತಿದೆ.

ಮ|| ಕೆ.ಆರ್. ಶೇಷಾಚಾರ್ ಬಿ.ಎ., ಬಿ.ಇ., ಯವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರರಾಗಿ ನಿಯಮಿಸಲ್ಪಟ್ಟಿದ್ದಾರೆ.

ಬರುವ ಸೆಪ್ಟಂಬರ್ ತಾ|| ೧ ರಿಂದ ಮೈಸೂರು-ಹಾಸನ-ಅರಸೀಕೆರೆ ಲೋಹಮಾರ್ಗದಲ್ಲಿ ಸಾಮಾನುಬಂಡಿಗಳು ಬಿಡುವುದಕ್ಕೆ ಆರಂಭವಾಗುವುದು.

ನಮ್ಮ ದಿವಾನರವರು ಕಳೆದವಾರ ಪಾವಗಡ ಪೆನುಗೊಂಡೆ, ಕೊರಟಗೆರೆ, ಮದ್ದಗಿರಿ ತುಮಕೂರು ಈ ಮಾರ್ಗವಾಗಿ ಸಂಚಾರಮಾಡಿ ಸ್ಥಿತಿಗಳನ್ನು ಪರಾಮರಿಸಿಕೊಂಡು ಬಂದರು.

ದಿ|| ಬಹದ್ದೂರ್ ರಾಜಮಂತ್ರಪ್ರವೀಣ ಸಿ. ಶ್ರೀಕಂಠೇಶ್ವರಯ್ಯ ಬಿ. ಎ., ಬಿ. ಎಲ್. ರವರು ಜುಲೈತಿಂಗಳಾರಭ್ಯ ೫೦೦ ರೂ.ಗಳ ಪೆನ್ಷನ್ನಿನಮೇಲೆ ಉದ್ಯೋಗನಿವೃತ್ತಿಗೊಳಿಸಲ್ಪಟ್ಟಿರುತ್ತಾರೆ.

ಕಡೂರು ಡಿಸ್ಟ್ರಿಕ್ಟ್ ಡಿ|| ಕಮಿಷನರು ರಜಾಗಮೇಲೆ ವಿಕ್ಟೋರಿಯಾ ವೈದ್ಯಶಾಲೆಯಲ್ಲಿ ಚಿಕಿತ್ಸೆಗೊಳ್ಳುತ್ತಿದ್ದರಷ್ಟೆ. ಇವರು ಮರಳಿ ೩ ತಿಂಗಳ ರಜಾವನ್ನು ಪಡೆದು ಆರೋಗ್ಯಾರ್ಥವಾಗಿ ಮದ್ರಾಸಿಗೆ ಹೋಗಿ [illegible]ವರೆಂದು ಕೇಳುತ್ತೇವೆ.

ನಮ್ಮ ಸಂಸ್ಥಾನದ ಚೀಫ್ ಎಲೆಕ್ಟ್ರಿಕ್ ಇಂಜನಿಯರಾದ [illegible] ಫೋರ್ಬ್ಸ್‌ರವರು ಭೋಪಾಲ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಕಾರ್ಯಗಳ ಏರ್ಪಾಟಿಗೋಸ್ಕರ ಅಲ್ಲಿಯ ಬೇಗಂರವರ ಪ್ರಾರ್ಥನೆಯ ಮೇರೆ ೩ ತಿಂಗಳ [illegible]ಗೆ ನಮ್ಮ ಗೌರ್ನಮೆಂಟಿನಿಂದ ಕಳುಹಿಸಿಕೊಡಲ್ಪಡುವವರಾಗಿದ್ದಾರೆ.

ದೊಡ್ಡಕೆರೆಯಲ್ಲಿ ಕಳೆದವಾರದಲ್ಲಿ ಮೂರುಮಂದಿಗಳು ಬಿದ್ದು ಮೃತರಾಗಿರುವರೆಂದು ಕೇಳುತ್ತೇವೆ. ಇವರಲ್ಲಿ ಒಬ್ಬನು ವೀರಶೈವತರುಣ[illegible] ಕೆರೆಗೆ ಹೊಸದಾಗಿ ಕಟ್ಟಿಸಿರುವ ಕಲ್ಲಿನ ಸೋಪಾನಗಳು ಬಹಳ ಕಡಿದಾಗಿರುವುದರಿಂದ ಅದು ಅಪಾಯಕರವಾಗಿರುವುದೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಕಟ್ಟಿಸಿದ ಅಧಿಕಾರಿಗಳು ಮುಂದಾಲೋಚನೆ ಮಾಡಿದ್ದರೆ ಚೆನ್ನಾಗಿದ್ದಿತು.

ಕಳೆದ ತಾ|| ೧೧-೧೨ ರಲ್ಲಿ ರಾಜಧಾನಿಯೊಳಗೆ ನಡೆದ ಫಲಪುಷ್ಪಾದಿಗಳ ಪ್ರದರ್ಶನವು ಹಿಂದಣ ಎಲ್ಲ ಪ್ರದರ್ಶನಗಳಿಗಿಂತಲೂ ಪ್ರೇಕ್ಷಣೀಯವಾಗಿದ್ದಿತು. ಶ್ರೀಮನ್ಮಹಾರಾಜರೂ ರಾಣೀವಾಸದವರೂ ಸಹ ಬಂದು ಅವಲೋಕಿಸಿ, ಉತ್ಕೃಷ್ಟವಾಗಿದ್ದ ಕೆಲವು ಫಲಾದಿಗನ್ನು ಕೊಂಡುಕೊಂಡರು. ಪ್ರದರ್ಶನೀಯವಾಗಿದ್ದ ಅನೇಕ ವಸ್ತುಗಳು ಬಹುಮಾನಗಳನ್ನು ಪಡೆದುಕೊಂಡುವು. ಪ್ರೇಕ್ಷಕ ಜನಸ್ತೋಮವು ಮಾತ್ರ ವಿಶೇಷವಾಗಿರಲಿಲ್ಲ.

ರೆ|| ಕಮಿಷನರ ಆಫೀಸಿನಲ್ಲಿರುವ ಅ|| ಕಮಿಷನರ್ ಮ|| ಎ[illegible] ಕೃಷ್ಣಸ್ವಾಮಯ್ಯಂಗಾರರು ನಂಜನಗೂಡು ಸಬ್‌ಡಿವಿಜನ್ ಛಾರ್ಜಿಗೆ ಹೋಗುವುದಕ್ಕೆ ಕಳುಹಿಸಲ್ಪಟ್ಟಿರುತ್ತಾರೆ. ನಂಜನಗೂಡು ಸಬ್‌ಡಿವಿಜನ್ ಛಾರ್ಜಿನಲ್ಲಿರುವ ಮ|| ಟಿ. ರಾಯಲುಚೆಟ್ಟಿಯವರು ಮರಳಿ ಮೈಸೂರು ಡಿಸ್ಟ್ರಿಕ್ಟ್ ಟ್ರೆಷರಿ ಛಾರ್ಜಿಗೂ, ಮ|| ಸಿ. ಕುಪ್ಪಸ್ವಾಮಯ್ಯಂಗಾರರು ಮೈಸೂರು ಸಬ್‌ಡಿವಿಜನ್ನಿನಿಂದ ರೆ|| ಕಮಿಷನರ್ ಆಫೀಸಿನ ಕೆಲಸಕ್ಕೆ ತಾತ್ಕಾಲಿಕವಾಗಿ ಮ|| ಎಂ. ಕೃಷ್ಣಸ್ವಾಮಿರಾಯವರು ಬರುವವರೆಗೂ ನಿಯಮಿಸಲ್ಪಟ್ಟಿರುತ್ತಾರೆ.

ಯುದ್ಧವಾರ್ತೆಯು

ಪಶ್ಚಿಮರಣರಂಗ:—ಮಿತ್ರಮಂಡಲಿಯವರು ಸಾವಕಾಶವಾಗಿಯೂ ನಿದಾನವಾಗಿಯೂ ತೊಂದರೆಪಡದೆ ಹೆಚ್ಚು ನಷ್ಟಮಾಡಿಕೊಳ್ಳದೆ ಜಾಗರೂಕತೆಯಿಂದ ಯುದ್ಧಮಾಡುತ್ತಿದ್ದಾರೆ. ಇದೇ ಅವರ ಯುದ್ಧಕೌಶಲ. ಸಮಯಸಾಧಿಸಿ ಸರ್ವಾರಂಭದಿಂದ ಆಸ್ಕಂದನವನ್ನಾರಂಭಿಸಿ ಉದ್ದೇಶವನ್ನು ಸಾಧಿಸಿಕೊಂಡು, ಬಳಿಕ ಕೆಲ ದಿನ ಉಪಶಾಂತಿಗೊಂಡು, ಆ ಸಮಯದಲ್ಲಿ ತಾವು ವಶಪಡಿಸಿಕೊಂಡ ಸ್ಥಾನಗಳನ್ನೆಲ್ಲಾ ಬಲಪಡಿಸಿಕೊಳ್ಳುವರು. ಬೆಲ್ಜಿಯಮ್ಮಿನಲ್ಲಿ ಫ್ರೆಂಚರು ಮುಂದುಮುಂದಕ್ಕೆ ಒತ್ತಿಕೊಂಡು ಹೋಗುತ್ತಲೇ ಇರುವರು. ಲೆನ್ಸಿಗೆ ದಕ್ಷಿಣದಲ್ಲಿ ಇಂಗ್ಲೀಷರು ಮುಂದಕ್ಕೆ ನುಗ್ಗುತ್ತಲಿರುವರು. ವೆಸ್ಟ್‌ಹಾಕ್ ಎಂಬ ಗ್ರಾಮವನ್ನು ಇವರು ಸಂಪೂರ್ಣವಾಗಿ ವಶಪಡಿಸಿಕೊಂಡರು. ಸುತ್ತಮುತ್ತಣ ಕೆಲ ಸ್ಥಳಗಳೂ ಇವರ ವಶವಾದುವು. ಫ್ರೆಂಚರೂ ಬಿಕ್ಸ್‌ಷೂಟಿಗೆ ಪೂರ್ವದಲ್ಲೂ ಉತ್ತರದಲ್ಲೂ ವಾಯವ್ಯದಲ್ಲೂ ಮುಂದಕ್ಕೆ ಸಾಗುತ್ತಿರುವರು. ವೈಪ್ರಸ್ಸಿಗೆ ಸುತ್ತಲೂ ಇರುವ ಅನೇಕ ಸ್ಥಳಗಳನ್ನು ಇಂಗ್ಲೀಷರು ಹಿಡಿದರು. ಅವನ್ನು ಬಿಡಿಸಿಕೊಳ್ಳುವುದಕ್ಕೆ ಶತ್ರುಗಳು ಬಹಳ ಯುದ್ಧಗಳನ್ನು ನಡೆಯಿಸಿದರು. ಅದನ್ನೆಲ್ಲಾ ಇವರು ವ್ಯರ್ಥಪಡಿಸಿದರು. ಜುಲೈ ತಾ|| ೩೧ ರಿಂದೀಚೆಗೆ ಜರ್ಮನರು ರಣರಂಗದಿಂದ ತಮ್ಮ ೧೦ ಪಟಾಲಮ್ಮುಗಳನ್ನು ಹಿಂದಕ್ಕೆ ಕರೆಯಿಸಿಕೊಂಡಿರುವರು. ಇದರಿಂದ ಅವುಗಳಲ್ಲಿ ಎಷ್ಟು ನಷ್ಟವುಂಟಾಗಿ ಸೋತುಹೋಗಿರಬೇಕೆಂಬುದು ವ್ಯಕ್ತವಾಗುವುದು. ರಣರಂಗದಲ್ಲಿ ಫ್ಲಾಂಡರ್ಸಿನೊಳಗೆ ಇಂಗ್ಲೀಷರು ೫೦ಂಗಜಗಳಷ್ಟು ದೂರ ತಮ್ಮ ಸೇನಾಪಙ್ಕ್ತಿಯನ್ನು ಮುಂದಕ್ಕೆ ಸಾಗಿಸಿರುವರು. ಶತ್ರುಸೇನಾಪಙ್ಕ್ತಿಯ ಹಿಂದೆ ४೦ ಮೈಲಿಗಳವರೆಗೂ ಇಂಗ್ಲೀಷ್ ವೈಮಾನಿಕರು ಹೋಗಿ ಲೋಹಮಾರ್ಗ ಮೊದಲಾದುವುಗಳಮೇಲೆ ಟನ್ನುಗಟ್ಟಲೆ ಸಿಡಿಮದ್ದುಗಳನ್ನು ಹಾಕಿ ಬಹಳ ನಷ್ಟಪಡಿಸಿ ಬಂದಿವೆ. ಸೆಂಟ್‌ಕ್ವೆಂಟಿನ್ನಿನ ಬಳಿಯಲ್ಲಿದ್ದ ಕೆಲ ಮುಖ್ಯ ಠಾಣೆಗಳನ್ನು ಮಿತ್ರಮಂಡಲಿಯವರು ವಶಪಡಿಸಿಕೊಂಡರು. ಶತ್ರುಗಳು ತಾವು ಕಳೆದುಕೊಂಡ ಸ್ಥಾನಗಳನ್ನು ವಶಪಡಿಸಿಕೊಳ್ಳುವುದಕ್ಕೂ ಉಳಿದಿರುವ ಸ್ಥಾನಗಳನ್ನು ರಕ್ಷಿಸಿಕೊಳ್ಳುವುದಕ್ಕೂ ಅಸಂಖ್ಯಾತವಾದ ಫಿರಂಗಿಗಳಿಂದಲೂ ಅನೇಕ ಪಟಾಲಮ್ಮುಗಳಿಂದಲೂ ಭಯಂಕರಯುದ್ಧಗಳನ್ನು ಅನುಪಮಾನವಾಗಿ ನಡೆಯಿಸುತ್ತಿದ್ದಾರೆ. ಇದರಿಂದ ಅವರ ಕಡೆಯಲ್ಲಿ ಆಗುತ್ತಿರುವ ಸೇನಾಪ್ರಳಯವು ವಾಚಾಮಗೋಚರವಾಗುತ್ತಿದೆ. ಕಳೆದ ವಾರದಲ್ಲಿ ಫ್ಲಾಂಡರ್ಸಿನಲ್ಲೆಲ್ಲಾ ಮಿತ್ರಮಂಡಲಿಯವರ ಗುಂಡಿನೇಟುಗಳಿಂದ ಸುರಿದ ಅಗ್ನಿವೃಷ್ಟಿಯು ರಣರಂಗವನ್ನೆಲ್ಲಾ ಶತ್ರುಗಳ ಶವಗಳಿಂದ ತುಂಬಿಸಿಬಿಟ್ಟಿದ್ದುದರ ವರ್ಣನೆಯನ್ನು ತಂತ್ರೀವಾರ್ತೆಗಳಿಂದ ತಿಳಿಯಲಾಗಿ, ಇಷ್ಟು ನಾಶವು ಜರ್ಮನರಿಗೆ ಹಿಂದೆ ಯಾವ ರಣರಂಗದಲ್ಲೂ ಆಗಿರಲಿಲ್ಲವೆಂದು ಊಹಿಸಬೇಕಾಗುತ್ತದೆ. ಇಂಗ್ಲೀಷ್ ವೈಮಾನಿಕರು ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದು ಶತ್ರುಗಳ ಅಪರಿಮಿತವಾದ ಸೈನ್ಯವು ಒಂದು ಕಡೆಯಿಂದ ಬರುತ್ತಿದ್ದುದನ್ನು ಕಂಡುಹಿಡಿದು, ಕೆಳಗಿದ್ದ ತಮ್ಮ ಸೈನಿಕರಿಗೆ ಸಂಜ್ಞೆಮಾಡಿ ತಿಳಿಯಿಸಿಬಿಡಲಾಗಿ, ಆ ಎಕ್ಕಿಗೆ ಅನೇಕ ಫಿರಂಗಿಗಳನ್ನು ತಿರುಗಿಸಿ ಉನ್ನತವಾದ ಸ್ಥಳದಿಂದ ಗುಂಡುಗಳನ್ನು ಅಸಂಖ್ಯಾತವಾಗಿ ಹೊಡೆಯುತ್ತ ಬಂದುದರಿಂದ ಶತ್ರುಸೇನೆಯಲ್ಲಿ ಅಭೂತಪೂರ್ವವಾದ ನಷ್ಟವು ಸಂಭವಿಸಿತೆಂದು ಗೊತ್ತಾಗುತ್ತದೆ.

ರಷ್ಯಾರಂಗ—ಕಳೆದ ಕೆಲ ದಿನಗಳಿಂದಲೂ ರಷ್ಯನರು ಹಿಮ್ಮೆಟ್ಟಿಹೋಗುವುದು ಕಡಿಮೆಯಾಯಿತು. ಇಷ್ಟರೊಳಗೇ ಜರ್ಮನರು ೯೦ ಮೈಲಿಗಳಷ್ಟು ದೂರ ಮುಂದಕ್ಕೆ ಸಾಗಿಹೋಗಿರುವರು. ಶತ್ರುಗಳು ಬಹಳ ಲಂಚವನ್ನು ರಷ್ಯನ್ ಸೈನ್ಯಗಳಿಗೆ ಹಂಚಿ ಅವರಲ್ಲಿ ವಿಪ್ಲವವನ್ನೂ ಯುದ್ಧವಿಮುಖತೆಯನ್ನೂ ಉಂಟುಮಾಡುವ ಪ್ರಯತ್ನವನ್ನು ಇನ್ನೂ ಬಿಟ್ಟಿಲ್ಲ. ಆದರೆ ಈಗಣ ರಷ್ಯನ್ ಮುಖ್ಯ ಸೇನಾಪತಿ ಕಾರ್ನಿಲಾಫ್‌ರವರ ಭೀಷ್ಮಪ್ರತಿಜ್ಞೆ ಕಠಿನಾಜ್ಞೆಗಳಿಂದಲೂ, ಪ್ರೋತ್ಸಾಹದಿಂದಲೂ ರಷ್ಯಾಸೈನ್ಯದಲ್ಲಿ ಪೂರ್ವದ ದುಃಸ್ಥಿತಿಯು ಬಹುಮಟ್ಟಿಗೆ ನಿವಾರಿತವಾಗಿ ಹುರಿದುಂಬಿರುವುದು ವ್ಯಕ್ತವಾಗುತ್ತಿದೆ. ಒಡೆಸ್ಸಾಪಟ್ಟಣವನ್ನು ರಷ್ಯನರು ಬಿಡುವುಮಾಡುತ್ತಿರುವರೆಂದು ಶತ್ರುಗಳು ಹುಟ್ಟಿಸಿದ್ದ ಸುದ್ದಿಯು ನಿರಾಧಾರವಾದುದು. ರಷ್ಯನರು ತಮ್ಮ ಸ್ಥಾನಗಳನ್ನು ಕಾಪಾಡಿಕೊಂಡು ಶತ್ರುಗಳನ್ನು ಮುಂದಕ್ಕೆ ನುಗ್ಗಗೊಡದೆ ತಡೆದಿದ್ದಾರೆ. ಬ್ರಾಡಿಯಹತ್ತಿರ ಶತ್ರುಗಳ ಮುತ್ತಿಗೆಯನ್ನೆಲ್ಲಾ ರಷ್ಯನರು ವ್ಯರ್ಥಪಡಿಸಿದರು. ಬುಕ್ಕೊವಿನ ಹತ್ತಿರ ರಷ್ಯನ್ ಸೈನ್ಯಗಳು ಶತ್ರುಗಳಮೇಲೆ ಮಹಾಯುದ್ಧವನ್ನು ನಡೆಯಿಸಿ, ಹಿಂದಕ್ಕೆ ದೊಬ್ಬುತ್ತಿವೆ.

ರುಮೇನಿಯರಂಗ.—ಜರ್ಮನರ ಜನರಲ್ ವಾನ್‌ಮೆಕನ್ಸೇನನು ಬಹಳ ಭಯಂಕರವಾಗಿ ಫೋಕ್ಸಾನಿಗೆ ಉತ್ತರದಲ್ಲಿ ಯುದ್ಧವನ್ನು ನಡೆಯಿಸುತ್ತಿದ್ದಾನೆ. ಈತನ ಸೈನ್ಯವನ್ನು ರಷ್ಯಾ ರುಮೇನಿಯಾ ಸೈನ್ಯಗಳಿಂದ ಪ್ರತಿಭಟಿಸಿ ಕಾಯುತ್ತಿವೆ. ಫೋಕ್ಸಾನಿಗೆ ಉತ್ತರದಲ್ಲಿ ಶತ್ರುಗಳು ರಷ್ಯಾ ರುಮೇನಿಯಾ ಸೈನ್ಯಗಳನ್ನು ೯ ಮೈಲಿಗಳಷ್ಟು ದೂರ ಹಿಂದಕ್ಕೆ ಓಡಿಸಿರುತ್ತಾರೆ. ಮೆರಿಶೆಸ್ಕಿ ಲೋಹಮಾರ್ಗದ ಹತ್ತಿರ ರಷ್ಯಾರುಮೇನಿಯಾ ಸೈನ್ಯಗಳು ಶತ್ರುಗಳಮೇಲೆ ಪ್ರತಿ ಯುದ್ಧವನ್ನು ನಡೆಯಿಸಿ, ೧೨೦೦ ಮಂದಿಗಳನ್ನು ಸೆರೆ ಹಿಡಿದು, ಹಠ ಶೇಷರನ್ನು ಹಿಂದಕ್ಕೋಡಿಸಿ, ಬುಜಲೋ ನದಿಗೆ ಉತ್ತರದಲ್ಲಿರುವ ಸ್ಥಳವನ್ನು ಹಿಡಿದುಕೊಂಡರು. ಓಕ್ನಾಗೊ ಜೇಟ ಪ್ರಾಂತದಲ್ಲಿ ಶತ್ರುಗಳನ್ನು ಹಿಂದಕ್ಕೆ ತರುಬಿ, ಆಸುತ್ತನಲ್ಲಿದ್ದ ಕೆಲವು ಬೆಟ್ಟಗಳನ್ನು ರಷ್ಯಾರುಮೇನಿಯಾ ಸೈನ್ಯಗಳು ಹಿಡಿದುಕೊಂಡುವು. ಪ್ಲಾನಿಕೋದ ಹತ್ತಿರ ಪ್ರತಿ ಯುದ್ಧವನ್ನು ಮಾಡಿ ಶತ್ರುಗಳನ್ನು ತಡೆದು, ೬೦೦ ಮಂದಿಗಳನ್ನು ಸೆರೆಹಿಡಿದರು. ಆಬೂದುಲೋಹಮಾರ್ಗದಲ್ಲಿ ಮತ್ತೊಂದು ಸ್ಥಳವನ್ನೂ ೫೦೦ ಮಂದಿ ಶತ್ರುಸೈನಿಕರನ್ನೂ ಹಿಡಿದುಕೊಂಡರು.

ಆಕಾಶಯಾನಗಳು.—ಕಳೆದ ಸೋಮವಾರದಿನ ಸಾಯಂಕಾಲ ೨೦ ಶತ್ರುವಿಮಾನಗಳು ಇಂಗ್ಲೆಂಡಿನಮೇಲೆ ಹಾರಿಬಂದು ಸೌತೆಂಡ್ ಮೇಲೆ ४೦ ಸಿಡಿಮದ್ದುಗಳನ್ನು ಹಾಕಿದುದರಿಂದ ೩೨ ಮಂದಿ ಸತ್ತರು. ४೩ ಮಂದಿಗೆ ಗಾಯವಾಯಿತು. ಇಂಗ್ಲೀಷ್‌ಕಾವಲಿನ ವಿಮಾನಗಳೂ ಫಿರಂಗಿಗಳೂ ಅಷ್ಟರಲ್ಲಿ ಶತ್ರುವಿಮಾನಗಳಮೇಲೆ ಗುಂಡುಗಳನ್ನು ಹೊಡೆದು ನಷ್ಟಪಡಿಸಿ ಚದರಿಸಿ ಓಡಿಸಿಬಿಟ್ಟುವು. ಇಂಗ್ಲೀಷ್ ವೈಮಾನಿಕರು ಶತ್ರುಗಳ ४ ವಿಮಾನ ಶಾಲೆಗಳಮೇಲೆ ಬಹಳ ಸಿಡಿಮದ್ದುಗಳನ್ನು ಹಾಕಿ ನಷ್ಟಪಡಿಸಿ ಬಂದಿರುತ್ತವೆ. ಯುದ್ಧರಂಗದ ವಿಮಾನಯುದ್ಧಗಳಲ್ಲಿ ಬಹಳ ಶತ್ರುವಿಮಾನಗಳು ಹಾಳಾಗಿರುತ್ತವೆ.

ಜಲಯಾನಗಳು.—ಅಮೇರಿಕಾದವರ ಕಂಪಾನಾ ಎಂಬ ೧ ಹೊಗೆಹಡಗು ಶತ್ರುಗಳಿಂದ ಮುಳುಗಿಸಲ್ಪಟ್ಟಿತು. ಆಯುಧ ಸಮೇತರಾದ ४ ಮಂದಿ ಸೈನಿಕರನ್ನೂ ಹಡಗಿನ ಕೇಪ್ಟನ್ನನ್ನೂ ಶತ್ರುಗಳು ಸೆರೆಹಿಡಿದು ಸಬ್‌ಮೆರೀನಿನಮೇಲೆ ಸಾಗಿಸಿಕೊಂಡು ಹೋದರು. ಜರ್ಮನರ ನೌಕಾದಳವು ಕೀಲ್ ಕಾಲ್ವೆಯಲ್ಲಿ ಅವಿತುಕೊಂಡಿರುವುದೇ ಹೊರತು ಈಚೆಗೆ ಬಂದು ಯುದ್ಧಕೊಡುವುದಿಲ್ಲ. ಅವರ ಸಬ್‌ಮೆರೀನುಗಳು ಮಾತ್ರ ದರೋಡೆ ಮಾಡುತ್ತಿವೆ. ಅದಕ್ಕಾಗಿ ನಮ್ಮ ನೌಕಾದಳವೇ ಶತ್ರುಗಳ ರೇವಿಗೆಹೋಗಿ ಅವರ ಹಡಗುಗಳಮೇಲೆ ಬಿದ್ದು ಈಚೆಗೆ ಸೆಳೆದು ಧ್ವಂಸಮಾಡುವುದು ಯುಕ್ತವೆಂದು ವಿನ್‌ಸ್ಟನ್ ಚರ್ಚಿಲ್‌ರವರು ಹೇಳುತ್ತಿದ್ದಾರೆ. ಇದನ್ನು ಸರ್ಕಾರದವರೂ ಅಂಗೀಕರಿಸುವಂತೆ ಕಾಣುತ್ತಿದೆ. ಇದನ್ನು ನೋಡಲಾಗಿ ಇನ್ನು ಮುಂದೆ ದೊಡ್ಡದೊಡ್ಡ ಜಲಯುದ್ಧಗಳು ನಡೆಯಬಹುದು. ಮಿತ್ರಮಂಡಲಿಯವರ ಹಡಗುಗಳನ್ನು ಸಬ್‌ಮೆರೀನುಗಳಿಂದ ಮುಳುಗಿಸಿಬಿಡುವ ಮಾತ್ರದಿಂದಲೇ ಅವರು ಆಹಾರಾಭಾವದಿಂದ ಶರಣಾಗತರಾಗುವಸ್ಥಿತಿಗೆ ಬರುವರೆಂದು ಜರ್ಮನರು ತಿಳಿದುಕೊಂಡಿದ್ದರು. ಅದು ಬರಿಯ ಭ್ರಮೆಯೆಂಬುದು ಇದುವರೆಗಣ ಅನುಭವದಿಂದ ಅವರಿಗೆ ಗೊತ್ತಾಗಿರಬಹುದು. ಈಚೆಗೆ ಅವರ ಸಬ್‌ಮೆರೀನುಗಳ ಹಾವಳಿಯೂ ಕೂಡ ಮಿತ್ರಮಂಡಲಿಯವರ ಪ್ರಯತ್ನ ವಿಶೇಷದಿಂದ ಕುಗ್ಗಿಹೋಗುತ್ತಿದೆ. ಆಗಸ್ಟ್ ತಾ|| ೬ ಕ್ಕೆ ಕಡೆಯಾದ ಒಂದು ವಾರಕಾಲದಲ್ಲಿ ಇಂಗ್ಲೀಷ್ ತೀರಗಳಿಗೆಹೊರಗಣಿಂದ ೨೬೭೩ ಹಡಗುಗಳು ಬಂದು, ೨೮೯೬ ಹಡಗುಗಳು ಅಲ್ಲಿಂದ ಹೊರಕ್ಕೆ ಹೋಗಿರುತ್ತವೆ. ಶತ್ರುಗಳಿಂದ ೨೩ ಹಡಗುಗಳು ಮಾತ್ರ ಮುಳುಗಿಸಲ್ಪಟ್ಟಿವೆ. ಇಟಲಿ—ರೇವುಗಳಿಗೆ ತಾ|| ೫ ಕ್ಕೆ ಕಡೆಯಾದ ವಾರದಲ್ಲಿ ಹೊರಗಣಿಂದ ४೮೭ ಹಡಗುಗಳು ಬಂದು ಅಷ್ಟೇ ಹಡಗುಗಳು ಹೊರಕ್ಕೆಹೋಗಿರುತ್ತವೆ. ೨ ಹೊಗೆ ಹಡಗುಗಳು ಒಂದು ಚಿಕ್ಕ ನೌಕೆಯೂ ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ. ಅದೇ ವಾರದಲ್ಲಿ ಫ್ರೆಂಚ್ ರೇವುಗಳಿಗೆ ೯४೮ ಹಡಗುಗಳು ಬಂದು ೬೩४ ಹಡಗುಗಳು ಹೊರಕ್ಕೆ ಹೋಗಿರುತ್ತವೆ. ४ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ.

ಭರತಖಂಡದ ವೃತ್ತಾಂತಗಳು.

ಬಂಗಾಳಾದಲ್ಲಿ ಹೊಸದಾಗಿ ಏರ್ಪಟ್ಟಿರುವ ಅಶ್ವಸೈನ್ಯಕ್ಕೆ ಇದುವರೆಗೆ ೨೦೦೦ ಮಂದಿಗಳು ಸೇರಿರುವರು. ಇದಕ್ಕೆ ಮೈಸೂರು ರಾಜಬಂಧುವರ್ಗದವರೊಬ್ಬರು ಸೇರಿರುತ್ತಾರೆಂದು ಕೇಳುತ್ತೇವೆ.

ರಾ|| ಬ|| ರುದ್ರಗೌಡ ಚೆನ್ನವೀರಗೌಡ ಆರಟಾಳ ಐ. ಎಸ್. ಓ. ರಿಟೈರ್ಡ್ ಡಿ|| ಕಲೆಕ್ಟರ್ ಇವರು ಬೆಳಗಾಂ ಜಿಲ್ಲೆಯ ಡಿಸ್ಟ್ರಿಕ್ಟ್‌ಬೋರ್ಡ್ ಚೇರ್ಮನ್ನರಾಗಿ ನಿಯಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಿಸುತ್ತೇವೆ.

ನೀಲಗಿರಿಯಲ್ಲಿ ಅನಿಬೆಸಂಟಮ್ಮನವರು ವಾಸಮಾಡಿಕೊಂಡಿರುವ ಬಂಗಲೆಯ ಆವರಣದಲ್ಲಿ ಸ್ಥಾಪಿಸಿಕೊಂಡಿರುವ ಸ್ವರಾಜ್ಯ ಧ್ವಜವನ್ನು ತೆಗೆದುಬಿಡಬೇಕೆಂದು ಮದ್ರಾಸ್ ಸರ್ಕಾರದವರು ಅಪ್ಪಣೆಮಾಡಿರುವರೆಂದು ಕೇಳುತ್ತೇವೆ.

ಗಯಾಕ್ಷೇತ್ರದಲ್ಲಿ ಅತಿವೃಷ್ಟಿ ಅತಿಪ್ರವಾಹಗಳ ದೆಸೆಯಿಂದ ಪುರವಾಸಿಗಳೆಲ್ಲಾ ಮನೆ ಮಾರುಗಳನ್ನು ಕಳೆದುಕೊಂಡು ಪರಿತಪಿಸುತ್ತಲಿದ್ದಾರೆ. ಅವರ ಸಹಾಯಾರ್ಥವಾಗಿ ಸರ್ಕಾರದವರೂ ಧರ್ಮಾತ್ಮ ಪ್ರಜೆಗಳೂ ಫಂಡನ್ನು ಕೂಡಿಸುತ್ತಿದ್ದಾರೆ.

ವೈಸ್ರಾಯರು ಪತ್ನೀಸಮೇತರಾಗಿ ಈ ತಿಂಗಳ ಕೊನೆಯಲ್ಲಿ ದಿಲ್ಲಿ ಪಟ್ಟಣಕ್ಕೆ ಹೋಗುವರು. ಅಕ್ಟೋಬರ್ ತಿಂಗಳಲ್ಲಿ ಕ್ವೆಟ್ಟಾ-ಕರಾಚಿ ಪಟ್ಟಣಗಳಿಗೂ, ನವಂಬರಿನಲ್ಲಿ ಬಿಕನೀರ್ ಸಂಸ್ಥಾನಕ್ಕೂ, ಡಿಸಂಬರ್ ತಿಂಗಳಲ್ಲಿ ಕಲ್ಕತ್ತಾ ಬೊಂಬಾಯಿ ಪಟ್ಟಣಗಳಿಗೂ ಹೋಗುವರು.

ಭರತಖಂಡದಲ್ಲಿ ೧ ರೂ. ಬೆಲೆಯ ನೋಟುಗಳನ್ನೂ ೨|| ರೂ.ಬೆಲೆಯ ನೋಟುಗಳನ್ನೂ ನಿರ್ಮಿಸಬೇಕೆಂಬ ಪ್ರಯತ್ನವು ಬಹುದೂರದವರೆಗೂ ನೆರವೇರಿದೆ. ಭರತಖಂಡದಲ್ಲಿ ವ್ಯವಹಾರದಲ್ಲಿರುವ ನಾಣ್ಯಗಳ ಸ್ಥಿತಿಯ ವೈಷಮ್ಯವನ್ನು ಕುರಿತು ಇನ್ನೇನೇನನ್ನು ಮಾಡಬೇಕೆಂಬ ವಿಷಯವಾಗಿ ಸ್ಟೇಟ್ ಸೆಕ್ರೆಟರಿಯವರು ಪರ್ಯಾಲೋಚಿಸುತ್ತಲಿರುವರು.

ನ್ಯೂ ಇಂಡ್ಯಾ ಪತ್ರಿಕೆಯಲ್ಲಿ ಪ್ರಕಟಿತವಾಗಿರುವ ಕೆಲ ಲೇಖನಗಳು ಪ್ರೆಸ್ ಕಾನೂನಿನಪ್ರಕಾರ ಆಕ್ಷೇಪಾರ್ಹವಾಗಿರುವಕಾರಣ ಅದರ ಸಂಪಾದಕರಾದ ಕಾಶೀನಾಥ ತಿಲಾಂಗರು ಸರ್ಕಾರದಲ್ಲಿ ಹೊಣೆಯಾಗಿಟ್ಟಿದ್ದ 2000 ರೂ. ಗಳು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟುವು. ಆ ಪತ್ರಿಕೆಯ ಸಂಚಿಕೆಗಳು ಎಲ್ಲಿ ದೊರೆದರೂ ಸರ್ಕಾರದ ವಶಪಡಿಸಿಕೊಳ್ಳಲ್ಪಡುವುವೆಂದು ಅಪ್ಪಣೆ ಮಾಡಲ್ಪಟ್ಟಿದೆ.

ಮರಾಟಾಬ್ರಾಹ್ಮಣರಾದ ಶಿವರಾಮು ಮಹದೂಪರಾಂಜಪೆ ಎಂಬುವವರು ಪ್ರಜಾಶಾಂತಿಗೆ ಭಂಗಕರವಾಗುವಂತೆ ನಡೆದುಕೊಂಡರೆಂಬ ಕಾರಣದಿಂದ ದೇಶರಕ್ಷಕ ಶಾಸನದಪ್ರಕಾರ ಅವರ ಇನ್ನು ಮುಂದೆಮತ್ತೊಂದ ಪ್ಪಣೆ ಕೊಡುವವರೆಗೂ ಯಾವುದೊಂದು ಸ್ಥಳದಲ್ಲೂ ಬಹಿರಂಗೋಪನ್ಯಾಸವನ್ನು ಕೊಡಲಾಗದೆಂಬ ಅಪ್ಪಣೆಯನ್ನು ಗೌರ್ನರವರು, ಪೊಲೀಸ್ ಇನ್ಸ್‌ಪೆಕ್ಟರವರಮೂಲಕ ತಿಳಿಯಪಡಿಸಿರುತ್ತಾರೆ.

ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷತೆಗೆ ಯಾರನ್ನು ಸೂಚಿಸಬೇಕೆಂಬ ವಿಷಯಕ್ಕೆ ಬೊಂಬಾಯಿ ಅಧಿಪತ್ಯದ ಕಾಂಗ್ರೆಸ್ ಕಮಿಟಿಯವರು ಕಳೆದ ತಾ|| ೧೩ ರಲ್ಲಿ ಮೀಟಿಂಗ್ ನಡೆಯಿಸಿದರು. ಓಟುಗಳನ್ನು ತೆಗೆದಾಗ ಅ|| ಮಹಮ್ಮದಾಬಾದಿನ ರಾಜಾಸಾಹೇಬರಿಗೆ ४೨ ಅನಿಬೆಸಂಟಮ್ಮನವರಿಗೆ ೩४ ಪಂಡಿತ ಮದನಮೋಹನ ಮಾಳವ್ಯರಿಗೆ ೩ ಶ್ರೀಯುತರುಗಳಾದ ತಿಲಕ ಗಂಧಿ, ಮಜರುಲ್‌ಹಕ್ ಇವರುಗಳಿಗೆ ಒಂದೊಂದರಂತೆ ಓಟುಗಳು ದೊರೆದುವು.

ಯುದ್ಧದ ದೆಸೆಯಿಂದ ಪ್ರಪಂಚದಲ್ಲಿ ಕಲ್ಲಿದ್ದಲ ಬೆಲೆಯು ಮೊದಲೇ ಹೆಚ್ಚಿಹೋಗಿದೆ. ಈ ಕಾರಣದಿಂದ ಹೊಗೆಬಂಡಿಗಳ ಓಡಾಟವೂ ಕಡಿಮೆಯಾಗಿದೆ. ಇದರಮೇಲೆ ದುರ್ಭಿಕ್ಷದಲ್ಲಿ ಅಧಿಕಮಾಸವೆಂಬಂತೆ ಬಂಗಾಳದಲ್ಲಿ ಆಗಿರುವ ಅತಿವೃಷ್ಟಿಯಿಂದ ಅಲ್ಲಿಯ ಜೇರಿಯಾ ಜಿಲ್ಲೆಯಲ್ಲಿ ಪ್ರಸಿದ್ಧವಾಗಿರುವ ಕಲ್ಲಿದ್ದಲ ೬ ಗಣಿಗಳ ತುಂಬಾ ನೀರು ತುಂಬಿ ಕುಸಿದು ಮುಚ್ಚಿಹೋದುವು. ಇದರಿಂದ ಭರತಖಂಡದಲ್ಲಿ ಕಲ್ಲಿದ್ದಲ ಬೆಲೆಯು ಮತ್ತಷ್ಟು ಹೆಚ್ಚಿಹೋಗುತ್ತಿದೆ.

ಅ|| ಬ್ಯಾರಿಸ್ಟರ್ ಮಜರುಲ್ ಹಕ್‌ರವರಿಗೆ ಗತಿಸಿದ ಬೊಂಬಾಯಿ ಹೈಕೋರ್ಟ್ ಜಡ್ಜ್ ಬದ್ರುದ್ದೀನ್ ತಯಾಬ್ಜಿಯವರ ೨ ನೆ ಕುಮಾರಿಯನ್ನು ಕೊಟ್ಟು ಹೈದರಾಬಾದಿನಲ್ಲಿ ಮೊನ್ನೆವಾರ ಮದುವೆಯು ವಿಜೃಂಭಣೆಯಿಂದ ನಡೆಯಿತು. ಹಕ್‌ರವರು ನೂತನಪತ್ನೀಸಮೇತರಾಗಿ ನೀಲಗಿರಿಗೆ ಹೋಗಿದ್ದು ಅನಿಬೆಸಂಟಮ್ಮನವರನ್ನು ಕಂಡು ಮಾತನಾಡಿಕೊಂಡು ಬಂದು ಅವರ ದೇಹದ ನಿರ್ಬಲತೆ ಅಸ್ವಸ್ಥತೆ ಈ ವಿಷಯಗಳನ್ನು ಕುರಿತು ನ್ಯೂ ಇಂಡಿಯಾ ಪತ್ರಿಕೆಗೆ ಬರೆದಿರುತ್ತಾರೆ.

ನೀಲಗಿರಿಯ ವಾಸದಿಂದ ಅನಿಬೆಸೆಂಟಮ್ಮನವರ ಆರೋಗ್ಯಕ್ಕೆ ಕುಂದುಂಟಾಗಿರುವುದೆಂದು ತಿಳಿದುಬಂದಕಾರಣ ನಿರ್ಬಂಧನಿವಾಸಕ್ಕಾಗಿ ನಿರ್ದೇಶಿಸಿರುವ ಸ್ಥಾನಗಳೊಳಗೆ ಇನ್ನಾವದರಲ್ಲಿಯಾದರೂ ಅವರೂ ಅವರ ಜತೆಗೇ ಇರಬೇಕೆಂದು ಅಪೇಕ್ಷಿಸುವುದಾದರೆ ಆರುಂಡೇಲ್ ವಾಡಿಯಾರವರುಗಳೂ ಹೋಗಿ ಇರಬಹುದೆಂದು ಮದ್ರಾಸ್ ಸರ್ಕಾರದವರು ಈಚೆಗೆ ಅಪ್ಪಣೆಮಾಡಿರುವರೆಂತಲೂ, ಅದರಮೇಲೆ ಅಮ್ಮನವರು ಕೊಯಮುತ್ತೂರಿನಲ್ಲಿ ವಾಸಮಾಡಿಕೊಂಡಿರುವುದಕ್ಕೆ ಉದ್ದೇಶಪಟ್ಟಿರುವರೆಂತಲೂ ಕೇಳುತ್ತೇವೆ.

ರಚ್ಚೆ ಮಾಡುವ ಮಕ್ಕಳಿಗೆ ನಿದ್ರೆ ಹಿಡಿಯಲೆಂದು ಕೆಲ ಹೆಂಗುಸರು ಅವುಗಳಿಗೆ ಅಫೀಮನ್ನು ನೆಕ್ಕಿಸುವ ದುರಭ್ಯಾಸವನ್ನಿಟ್ಟುಕೊಂಡಿದ್ದಾರೆ. ಬೊಂಬಾಯಿಯಲ್ಲಿ ಇದೇ ಅಭ್ಯಾಸದ ಒಬ್ಬ ಮಹಮ್ಮದೀಯ ಸ್ತ್ರೀಯು ಕಳೆದ ೧೫ ದಿನಗಳಿಂದ ತನ್ನ ೧|| ತಿಂಗಳ ಮಗುವಿಗೆ ಈ ಅಭ್ಯಾಸವನ್ನಿಟ್ಟಿದ್ದು ಒಂದುದಿನ ರಾತ್ರಿ ಯಥಾಪ್ರಕಾರವಾಗಿ ಅಫೀಮನ್ನು ಕೊಟ್ಟು ಮಲಗಿಸಿದಳು. ಬೆಳಗಾದರೂ ಮಗುವು ಎಚ್ಚರುಗೊಳ್ಳಲಿಲ್ಲ. ವೈದ್ಯಶಾಲೆಗೆ ಸಾಗಿಸಿದರು. ಕಡೆಗೆ ಅದು ದೀರ್ಘನಿದ್ರೆಯನ್ನೇ ಮಾಡಿಬಿಟ್ಟಿತೆಂಬ ವಿಷಯವು ವ್ಯಕ್ತವಾಯಿತು. ಅಜ್ಞರಾದ ಹೆಂಗುಸರ ಈ ದುರಭ್ಯಾಸವು ಮಕ್ಕಳಪ್ರಾಣಕ್ಕೇ ಶತ್ರುವಾದುದೆಂಬುದನ್ನು ತಿಳಿದುಕೊಳ್ಳಬೇಕು.

ಬಾಬು ಸುರೇಂದ್ರನಾಥ ಬಾನರ್ಜಿಯವರೇ ಮೊದಲಾದ ೫-೬ ಮಂದಿ ಪ್ರಮುಖರು ಬಂಗಾಳಾ ಗೌರ್ನರವರನ್ನು ಕಂಡು, ಅನಿಬೆಸಂಟಮ್ಮ ಮೊದಲಾದವರ ನಿರ್ಬಂಧವಾಸ ಶಿಕ್ಷೆಯ ಖಂಡನಕ್ಕಾಗಿ ಸಭೆಗೂಡಿಸಲು ಮಹಾಜನರು ಮಾಡಿಕೊಂಡಿದ್ದ ಪ್ರಯತ್ನಕ್ಕೆ ಬಂಗಾಳಾ ಸರ್ಕಾರದವರು ಅಡ್ಡಿಯನ್ನು ಮಾಡಿದ ವಿಷಯವಾಗಿ ಪ್ರಸ್ತಾಪಿಸುವಲ್ಲಿ—ಜುಲೈ ತಾ|| ೧೧ ರಲ್ಲಿ ಪ್ರಜೆಗಳು ನಡೆಯಿಸಿದ ಒಂದು ಸಭೆಯಲ್ಲಿ ಪ್ರಜಾಕ್ಷೇಮಕ್ಕೂ ಶಾಂತಿಗೂ ಭಂಗಕರವಾದ ಉಪನ್ಯಾಸವು ನಡೆಯಿಸಲ್ಪಟ್ಟಿತೆಂದೂ, ಅಂಥ ಉಪನ್ಯಾಸಗಳನ್ನು ಮಾಡುವ ಸಭೆಯನ್ನು ನಡೆಯಿಸಲವಕಾಶಕೊಡುವುದು ಸರ್ಕಾರದವರಿಗೆ ಇಷ್ಟವಿಲ್ಲವೇ ಹೊರತು ವಿಧಿವಿರುದ್ಧವಲ್ಲದೆ ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಚರ್ಚಿಸಿಕೊಳ್ಳುವ ಎಲ್ಲ ಸಭೆಗಳನ್ನೂ ನಿಲ್ಲಿಸಿಬಿಡುವುದು ಸರ್ಕಾರದ ಉದ್ದೇಶವಲ್ಲವೆಂದೂ, ನೀವು ಶಾಂತವಚನಗಳಿಂದ ಸಭಾಕಾರ್ಯವನ್ನು ನಡೆಯಿಸಿಕೊಳ್ಳುತ್ತೇವೆಂದು ಈಗ ಹೇಳಿಕೊಂಡಿರುವ ಕಾರಣ, ಆ ಸಭೆಯನ್ನು ನೆರವೇರಿಸಿಕೊಳ್ಳಬಹುದೆಂದೂ ಹೇಳಿ ಉತ್ತರವಿತ್ತರು.

ದಕ್ಷಿಣದೇಶದ ಸಂಗೀತಗಾರರಲ್ಲಿ ಬಹಳ ಹೆಸರಾಗಿದ್ದ ಕೊಯಮುತ್ತೂರು ತಾಯಿಯೆಂಬ ವೇಶ್ಯಾರತ್ನವು ಕಳೆದ ತಾ|| ೮ ರಲ್ಲಿ ವಿಧಿವಶಳಾದಳೆಂಬುದನ್ನು ಕೇಳಿ ವಿಷಾದಿಸುತ್ತೇವೆ. ಸಂಗೀತ ವಿದ್ಯಾವಿಶಾರದೆಯಾಗಿದ್ದ ಈಕೆಯು ಹಾಡುಗಾರಿಕೆಯಲ್ಲಿ ಪ್ರತ್ಯಕ್ಷ ಶಾರದೆಯೇ ಎನಿಸಿಕೊಂಡಿದ್ದಳು. ಸ್ಪೆನ್ಸರ್ ಕಂಪೆನಿಯವರು ಈಕೆಯ ರಾಗಾಲಾಪನೆ, ಪಲ್ಲವಿ, ಕೃತಿ, ಜಾವಡಿ, ಭಕ್ತಿರಸಪ್ರಧಾನವಾದ ಪದ್ಯಾವಳಿಗಳು ಮೊದಲಾದನೇಕವನ್ನು ಗ್ರಾಮೋಫೋನ್ ರಿಕಾರ್ಡುಗಳಲ್ಲಿ ಸಂಗ್ರಹಿಸಿ ಎಷ್ಟೋ ಸಹಸ್ರಾರು ರೂ.ಗಳನ್ನು ಆಕೆಗೆ ಕೊಟ್ಟಿರುವರು. ಈಕೆಯ ಸುಸ್ವರಕಂಠದಿಂದ ಬರುವ ಹಾಡುಗಾರಿಕೆಯನ್ನು ಪ್ರತ್ಯಕ್ಷವಾಗಿ ಕೇಳಿದ ರಸಜ್ಞರು ಅವೇ ಆಲಾಪನೆ ಮೊದಲಾದುವುಗಳನ್ನು ಅಷ್ಟು ಇಂಪಾಗಿ ಇನ್ನಾರೂ ಹಾಡಲಾರರೆಂದು ಒಪ್ಪಿಕೊಳ್ಳುತ್ತಿದ್ದರು. ಆಕೆಯು ತಮಿಳಿನಲ್ಲಿ ಹಾಡುತ್ತಿದ್ದ ಅತ್ಯಂತ ಭಕ್ತಿರಸಾದ್ರ್ರವಾದ ಹಾಡುಗಳು ಎಂಥ ಕಲ್ಲೆದೆಯನ್ನೂ ಕರಗಿಸಿಬಿಡುತ್ತಿದ್ದುವು. ಆಕೆಯ ಮೃತಿಯಿಂದ ದಕ್ಷಿಣದೇಶವು ಅಪೂರ್ವವಾದ ಸ್ತ್ರೀರತ್ನವೊಂದನ್ನು ಕಳೆದುಕೊಂಡಂತಾಯಿತು.

ಸೀಮೆಯಲ್ಲಿರುವ ಇಂಡ್ಯಾ ಸ್ಟೇಟ್ ಸೆಕ್ರೆಟರಿಗಳಿಗೆ ಅಂಡರ್ ಸೆಕ್ರೆಟರಿಗಳಾಗಿ ಲಾರ್ಡ್ ಐಲಿಂಗ್ಟನ್‌ರವರು ಇರುವರು. ಇವರು ಹಿಂದೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಪ್ರೆಸಿಡೆಂಟರಾಗಿದ್ದುದರಿಂದ ಭರತಖಂಡದ ಸ್ಥಿತಿಗತಿಗಳನ್ನೆಲ್ಲಾ ಕಣ್ಣಾರ ನೋಡಿ ಹೋಗಿರುವರು. ಈಗಣ ಸ್ಟೇಟ್‌ಸೆಕ್ರೆಟರಿಯವರಾದ ಮಿ|| ಮಾಂಟೆಗ್‌ರವರೂ ಸಹ ಈ ದೇಶವನ್ನು ನೋಡಿ ಹೋದವರೇ ಆಗಿರುವರು. ಲಾರ್ಡ್ ಐಲಿಂಗ್ಟನ್‌ರವರು ಕಳೆದ ಆಕ್ಸ್‌ಫರ್ಡ್ ಪಟ್ಟಣದಲ್ಲಿ ವಿದ್ಯಾರ್ಥಿಗಳನ್ನು ಕುರಿತು ಒಂದುಪನ್ಯಾಸಮಾಡುವಾಗ್ಗೆ ಅಧಿಕಾರಸಂಬಂಧವಾಗಲ್ಲದೆ ಸ್ವಕೀಯಾಭಿಪ್ರಾಯವಾಗಿ ಮಾತನಾಡುತ್ತ ಭರತಖಂಡಕ್ಕೆ ಇಷ್ಟರಲ್ಲೇ ಆಂಗ್ಲಪ್ರಭುತ್ವದವರು ರಾಜಕೀಯ ಸಂಸ್ಕರಣರೂಪವಾಗಿ ಅನುಗ್ರಹಿಸುವುದಕ್ಕಿರುವ ವರಗಳ ದಿಗ್ದರ್ಶನವನ್ನು ಮಾಡುವ ಕೆಲವು ವಚನಗಳನ್ನಾಡಿದರು. ಅದರ ಪ್ರಕಾರ ಗೊತ್ತಾಗುವ ಸಂಸ್ಕರಣಗಳೇನೆಂದರೆ—ಪುರಪಾಲಕ ಸಂಘಗಳಿಗೆ ಸ್ಥಾನಿಕ ವ್ಯವಹಾರಗಳನ್ನು ಚರ್ಚಿಸುವುದಕ್ಕೆ ಅವಕಾಶಕೊಟ್ಟು, ಕಂದಾಯ ಶೌಂಗೆಗಳನ್ನು ವಿಧಿಸುವ ವಿಷಯದಲ್ಲಿ ಸ್ವಲ್ಪ ಅಧಿಕಾರವನ್ನು ಹೆಚ್ಚಿಸುವುದು. ಪ್ರಾಂತಾಧಿಕಾರಿಗಳಾದ ಗೌರ್ನರುಗಳ ಸಹಾಯಕ್ಕೆ ४ ಮಂದಿ ರಾಜ್ಯಾಂಗ ಸಭಿಕರಿದ್ದು ಅವರಲ್ಲಿ ಇಬ್ಬರು ಯೂರೋಪ್ಯರಾಗಿಯೂ, ಇಬ್ಬರು ಭಾರತೀಯರಾಗಿಯೂ ಇರುವಂತೆ ಮಾಡುವುದು. ಸ್ಥಾನಿಕ ಪ್ರಭುತ್ವಗಳನ್ನು ಅಧಿಕಾರಿವರ್ಗದಿಂದ ತಪ್ಪಿಸಿ, ಅವುಗಳಲ್ಲಿ ಕೆಲವನ್ನು ಪ್ರಜಾಪ್ರತಿನಿಧಿಗಳಿಗೊಪ್ಪಿಸಿ, ಅವರು ಪ್ರಭುತ್ವಕ್ಕೆ ಸಹಾಯಕರಾಗಿರುವಂತೆ ಮಾಡುವುದು. ಪ್ರಾಂತಿಕ ಸರ್ಕಾರಗಳಿಗೆ ಕೆಲವು ವಿಷಯಗಳಲ್ಲಿ ಸ್ವಾತಂತ್ರ್ಯವನ್ನು ಹೆಚ್ಚಿಸಿ, ಆ ಭಾಗಗಳಲ್ಲಿ ಇಂಡ್ಯಾ ಸರ್ಕಾರದವರ ಅಧಿಕಾರಪ್ರವೇಶವನ್ನು ತಪ್ಪಿಸುವುದು. ನಿಯಮನಿರ್ಮಾಣ ಸಭಾಸಭಿಕರಾಗಿ ಆರಿಸಲ್ಪಡುವ ಪ್ರಜಾಪ್ರತಿನಿಧಿಗಳು ಆಯಾ ಜನವರ್ಗ ವಿಭೇದವನ್ನೂ, ಸಾಧ್ಯವಾದಕಡೆ ಜನವರ್ಗದ ಸಂಖ್ಯಾಪ್ರಮಾಣಕ್ಕೆ ತಕ್ಕಂತೆಯೂ ಆರಿಸಲ್ಪಡುವುವು. ಶಾಸನನಿರ್ಮಾಣ ಸಭೆಯು ಕಾಲಕ್ರಮದಿಂದ ಉದಾರರೂಪವಾಗಿ ಮಾಡಲ್ಪಡುವುದು ಇತ್ಯಾದಿ.

೧೯೧೫ ನೆ ವರ್ಷದಲ್ಲಿ ಪಂಜಾಬಿನ ೧೫ ಮಂದಿ ಚಿಕ್ಕ ವಯಸ್ಸಿನ ಮಹಮ್ಮದೀಯ ವಿದ್ಯಾರ್ಥಿಗಳು ವಿಪ್ಲವಾಪೇಕ್ಷಿಗಳ ದುರ್ಬೋಧನೆಯಿಂದ ಆಂಗ್ಲಜನರಮೇಲೆ ಹಗೆ ಸಾಧಿಸಿ ದಂಡೆತ್ತಿ ಬರಬೇಕೆಂದು ತಾವು ಓದುತ್ತಿದ್ದ ಲಾಹೋರು ಕಲಾಶಾಲೆಯನ್ನು ಬಿಟ್ಟು ಓಡಿಹೋದರು. ಇಂಥ ತಪ್ಪಿತ ಮಾಡಿದವರಿಗೆ ಮರಣದಂಡನೆಯೋ ದ್ವೀಪಾಂತರವಾಸಶಿಕ್ಷೆಯೋ ಆಗಿ ಅವರ ಆಸ್ತಿಗಳನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವುದುಂಟು. ಈ ಓಡಿಹೋದ ವಿದ್ಯಾರ್ಥಿಗಳು ಕಾಬೂಲಿಗೆ ಹೋದರು. ಅಲ್ಲಿಯ ಅಮೀರರು ಇವರನ್ನು ಹೋಗಗೊಡದೆ ಸೆರೆಯಿಡಿಸಿದರು. ಅಲ್ಲಿ ಒಬ್ಬನು ಸತ್ತನು. ಬಳಿಕ ಅಮೀರರು ಸ್ವಲ್ಪ ಕಾಲದಮೇಲೆ ಇವರನ್ನು ಬಂಧನದಿಂದ ಬಿಡಿಸಿ, ಇವರ ನಡೆಯನ್ನು ನೋಡಿಕೊಂಡಿರುವುದಕ್ಕೆ ಕಾವಲಿನವರನ್ನು ನಿಯಮಿಸಿದ್ದರು. ಇವರು ಹೇಗೋ ಕಣ್ತಪ್ಪಿಸಿ ಆಫ್ಘಾನಿಸ್ಥಾನದ ಎಲ್ಲೆಯನ್ನು ಮೀರಿ ಹೊರಕ್ಕೆ ಓಡಿಹೋದರು. ಅಲ್ಲಿ ರಷ್ಯನ್ ಸೈನಿಕರು ಇವರನ್ನು ಹಿಡಿದು ಭರತಖಂಡಕ್ಕೆ ಸಾಗಿಸಿ ಆಂಗ್ಲಪ್ರಭುತ್ವದವರ ವಶಮಾಡಿದರು. ಬಳಿಕ ಇವರು ಸೆರೆಯಲ್ಲಿಡಲ್ಪಟ್ಟರು. ಅಷ್ಟರಲ್ಲಿ ಇವರು ಹಲವುವಿಧದ ನಷ್ಟಕಷ್ಟಗಳನ್ನು ಪಟ್ಟು ಬಂದಿದ್ದುದರಿಂದ ತಮ್ಮ ತಪ್ಪಿಗಾಗಿ ತಾವೇ ಪಶ್ಚಾತ್ತಾಪಪಟ್ಟುಕೊಳ್ಳುವ ಸ್ಥಿತಿಗೆ ಬಂದರು. ತಮ್ಮ ಅಪರಾಧಕ್ಕೆ ಕ್ಷಮಾಪಣೆಯನ್ನು ಕೇಳಿಕೊಂಡರು. ಇವರ ಪಕ್ಷವಾಗಿ ಹಲವು ಮಂದಿ ದೊಡ್ಡಮನುಷ್ಯರು ಲೆ|| ಗೌರ್ನರರೊಡನೆ ಪ್ರಾರ್ಥಿಸಿಕೊಂಡರು. ಅವರ ವಚನಗಳನ್ನೂ, ಹುಡುಗರು ಲೋಕಸ್ವಭಾವವನ್ನರಿಯದೆ ದುರುಳರ ಮಾತಿಗೆ ಮೋಸಹೋಗಿದ್ದುದನ್ನೂ ಗಮನಿಸಿ, ಸರ್ಕಾರದವರು ಅವರ ತಪ್ಪನ್ನು ಕ್ಷಮಿಸಿ ಅಪ್ಪಣೆಮಾಡಿದುವೇನೆಂದರೆ—ಇವರುಗಳು ಮುಂದೆ ಸತ್ಪ್ರವರ್ತನೆಯಲ್ಲಿರುವ ವಿಷಯಕ್ಕಾಗಿ ಅವರ ಬಂಧುಗಳು ಕೆಲವು ಹಣವನ್ನು ಸರ್ಕಾರಕ್ಕೆ ಕಟ್ಟಬೇಕು. ಇವರುಗಳು ತಮ್ಮ ಗ್ರಾಮಗಳನ್ನು ಬಿಟ್ಟು ಹೊರಕ್ಕೆ ಹೋಗಕೂಡದು. ತಾವು ಓದುತ್ತಿದ್ದ ಕಲಾಶಾಲೆಗೆ ಮರಳಿ ಸೇರಿ ಅಭ್ಯಾಸಮಾಡಕೂಡದು. ಈ ನಿರ್ಬಂಧವನ್ನೆಲ್ಲಾ ಸರ್ಕಾರದವರು ತಪ್ಪಿಸುವವರೆಗೂ ಇವರುಗಳು ಯಾವ ಸರ್ಕಾರಿ ಉದ್ಯೋಗಕ್ಕೂ ಸೇರಕೂಡದು, ಎಂಬುದಾಗಿ.

ವಿದೇಶವೃತ್ತಾಂತಗಳು.

ಕಳೆದ ಜುಲೈ ತಿಂಗಳೊಂದರಲ್ಲೇ ನಾರ್ವೆಯವರ ೩೩ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ.

ಚೀನಾದವರು ಮಿತ್ರಮಂಡಲಿಯವರಲ್ಲಿ ಸಾಲ ತೆಗೆಯುವುದಕ್ಕೂ ಸೈನ್ಯವನ್ನು ಹೆಚ್ಚಿಸುವುದಕ್ಕೂ ಪ್ರಯತ್ನಿಸಿದ್ದಾರೆ.

ಚೀನಾದೇಶದ ಈಗಣ ಅಧ್ಯಕ್ಷರು ತಮ್ಮ ಮಂತ್ರಿವರ್ಗದವರೊಡನೆ ಆಲೋಚಿಸಿ, ಜರ್ಮನಿಯಮೇಲೂ, ಆಸ್ಟ್ರಿಯಾದಮೇಲೂ ಯುದ್ಧವನ್ನು ಪ್ರಕಟಿಸಿದ್ದಾರೆ.

ಶತ್ರುಗಳಿಗೆ ಸಂಪೂರ್ಣವಾಗಿ ಅಥವಾ ವಿಶೇಷ ಭಾಗವಾಗಿ ಸೇರಿರುವ ಅಥವಾ ಶತ್ರುಪ್ರಭುತ್ವದವರಿಂದ ಕೊಡಲ್ಪಟ್ಟಿರುವ, ಇಲ್ಲವೆ ಶತ್ರುಗಳ ಸೌಕರ್ಯಾರ್ಥವಾಗಿ ಪ್ರಯಾಣಮಾಡುತ್ತಿರುವ ತಟಸ್ಥದೇಶಗಳ ಎಲ್ಲ ಹಡಗುಗಳನ್ನೂ ಮುಳುಗಿಸಿಬಿಡತಕ್ಕುದೆಂದು ಜರ್ಮನಿ ಕೈಜರರು ಅಪ್ಪಣೆಮಾಡಿದ್ದಾರೆ.

ಕಳೆದ ಜೂನ್ ತಿಂಗಳಲ್ಲಿ ಜರ್ಮನ್ ಕೈಜರರು ಒಂದು ಸೇನೆಯನ್ನು ಪರಾಮರಿಸಿಕೊಂಡು ಮೋಟಾರಿನಮೇಲೆ ಕುಳಿತು ಹೋಗುತ್ತಿದ್ದಾಗ ಆ ಸೈನ್ಯದ ಯೋಧನೊಬ್ಬನು ಕೈಜರಮೇಲೆ ಸಿಡಿಮದ್ದನ್ನೆಸೆದನು. ಅದು ಸಾರಥಿಗೆ ಬಡಿದುದರಿಂದ ಆತನೂ ಮತ್ತೊಬ್ಬನೂ ಸತ್ತರು. ಕೈಜರರಿಗೆ ಸ್ವಲ್ಪ ಗಾಯ ಮಾತ್ರ ಆಯಿತು.

ಆಂಗ್ಲಪ್ರಭುತ್ವದವರು ಸೀಮೆಯಲ್ಲಿ ಯುದ್ಧ ಮುಗಿದನಂತರ ಕೂಲಿಜನರ ವಾಸಕ್ಕಾಗಿ ೧೦ ಲಕ್ಷ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಯೋಚಿಸಿ, ಅದಕ್ಕಾಗಿ ಒಂದು ಸಂಘವನ್ನೇರ್ಪಡಿಸಿದ್ದಾರೆ. ಈ ಮನೆಗಳನ್ನೆಲ್ಲಾ ಕಟ್ಟುವುದಕ್ಕೆ ೨೫ ಕೋಟಿ ಪೌನುಗಳು ಮುಟ್ಟುವುವು. ಸದ್ಯಕ್ಕೆ ಕನಿಷ್ಠಪಕ್ಷ ೫ ಲಕ್ಷ ಮನೆಗಳನ್ನಾದರೂ ಕಟ್ಟಿಸಬೇಕೆಂದು ಗೊತ್ತುಮಾಡಿ ಈ ಕೂಡಲೇ ೧ ಲಕ್ಷ ಮನೆಗಳನ್ನು ಕಟ್ಟಿಸಲು ಪ್ರಯತ್ನಿಸಿದ್ದಾರೆ.

ಜರ್ಮನಿ ದೇಶದ ಮ್ಯಾನ್‌ಹೇಮು ಪಟ್ಟಣದಲ್ಲಿ ಒಂದುಕಡೆ ೬೦೦೦ ಮಂದಿ ಪ್ರಜೆಗಳು ಸೇರಿದ್ದರು. ಅಲ್ಲಿ ಹೆನ್‌ಸೀಡಿಮ್ಯಾನ್ ಎಂಬ ಉಪನ್ಯಾಸಕರು ನಮ್ಮ ದೇಶದಲ್ಲೆಲ್ಲಾ ಶಾಂತಿಯು ಸ್ಥಾಪಿತವಾಗಬೇಕಾದರೆ ಈಗಣ ಜರ್ಮನ್ ಪ್ರಭುತ್ವಕ್ಕೆ ಪ್ರತಿಯಾಗಿ ಪ್ರಜಾಪ್ರಭುತ್ವವು ಸ್ಥಾಪಿತವಾಗಬೇಕು. ಎಂದು ಮೊದಲಾಗಿ ಹೇಳಿ ಸಭಿಕರು ಸಂತೋಷದಿಂದ ಕರತಾಡನಮಾಡಿ ತಮ್ಮ ಅನುಮೋದನೆಯನ್ನು ವ್ಯಕ್ತಪಡಿಸಿದರು. ಎಸ್ಸೆನ್ ಪಟ್ಟಣದಲ್ಲಿ ಒಂದುಕಡೆ ೮ ಸಾವಿರ ಪ್ರಜೆಗಳು ಸೇರಿ ಕೂಡಲೇ ಸಂಧಿಯಾಗಬೇಕೆಂಬ ವಿಷಯವನ್ನು ವ್ಯಕ್ತಪಡಿಸಿದರು. ಹೀಗೆ ಆ ದೇಶದಲ್ಲಿ ಈಗಣ ಪ್ರಭುತ್ವದವರ ಚರ್ಯೆಯ ವಿಷಯದಲ್ಲಿ ಅಸಮಾಧಾನಗಳು ಹೆಚ್ಚುತ್ತಿವೆ.

ಜಪಾನರು ಈಜಿಪ್ಟಿನೊಡನೆ ತಮ್ಮ ವ್ಯಾಪಾರವನ್ನು ವೃದ್ಧಿಪಡಿಸಿಕೊಳ್ಳುತ್ತಲಿದ್ದಾರೆ. ಅಲೆಗ್ಸಾಂಡರಿಯಾ ಪಟ್ಟಣದಲ್ಲಿ ತಮ್ಮ ಕಡೆಯ ರಾಯಭಾರಿಯಾಗಿ ಒಬ್ಬ ಆಂಗ್ಲೇಯರನ್ನು ಏರ್ಪಡಿಸಿಕೊಂಡಿದ್ದಾರೆ. ಈಗಣ ಹೊಸ ಸುಲ್ತಾನರ ಪ್ರಭುತ್ವವನ್ನು ಜಪಾನರು ಅಭಿನಂದಿಸಿರುತ್ತಾರೆ. ಹಿಂದೆ ತುರ್ಕಿಯವರಿಗೂ ಜಪಾನರಿಗೂ ರಾಜಕೀಯ ವ್ಯವಹಾರಸಂಬಂಧವೇನೂ ಇಲ್ಲ. ತುರ್ಕಿಯ ಹಿಂದಣ ಸುಲ್ತಾನರಾಗಿದ್ದ ಅಬ್ದುಲ್ ಹಾಮಿದ್‌ರವರು ಒಂದಾನೊಂದು ಸಲ ಜಪಾನರ ಮೈತ್ರಿಯು ತಮಗಿರಬೇಕೆಂದು ಯೋಚಿಸಿ, ಆರ್ಟೋಗ್ರುಲ್ ಎಂಬ ಹೆಸರಿನ ತುರ್ಕಿ ಯುದ್ಧದ ಹಡಗನ್ನು ಕೆಲ ಮಂದಿ ಉದ್ಯೋಗಸ್ಥರೊಡನೆ ಹಿಂದಣ ಜಪಾನ್ ಚಕ್ರವರ್ತಿಯವರ ಬಳಿಗೆ ಕಳುಹಿಸಿಕೊಟ್ಟಿದ್ದರು. ಆ ರಾಯಭಾರಿಗಳು ಹೋಗಿ ತಮ್ಮ ಕಾರ್ಯವನ್ನೆಲ್ಲಾ ಸುಮುಖವಾಗಿ ಮಾಡಿಕೊಂಡು ಹಿಂದಿರುಗಿ ಸ್ವದೇಶಕ್ಕೆ ಬರುತ್ತಿರುವಾಗ ಅವರ ಹಡಗು ಬಹಳ ಹಳೆಯದಾಗಿಯೂ ಮರದಿಂದ ಮಾಡಲ್ಪಟ್ಟುದಾಗಿಯೂ ಇದ್ದಕಾರಣ ಹಿಂದೂ ಮಹಾಸಮುದ್ರದಲ್ಲಿ ಒಂದು ಬಂಡೆಗೆ ಬಡಿದು ಒಡೆದು ಒಳಗಿದ್ದ ಜನರ ಸಮೇತ ಮುಳುಗಿಹೋಯಿತು. ಇದು ಅಪಶಕುನ ಸ್ವರೂಪವೆಂದು ತಿಳಿದುಕೊಂಡು ತುರ್ಕಿ ಸುಲ್ತಾನರು ಜಪಾನರೊಡನೆ ರಾಜಕೀಯ ಸಂಬಂಧವನ್ನೇ ಬಿಟ್ಟುಬಿಟ್ಟಿದ್ದರು. ಈಗ ಅವರೀರ್ವರಲ್ಲಿ ರಾಜಕೀಯ ಸಂಬಂಧವೂ ಮೈತ್ರಿಯೂ ಬೆಳೆಯಲಾರಂಭವಾಗಿರುತ್ತವೆ.

ನೋಟೀಸ್.

ಹೊಸಪುಸ್ತಕಗಳು. ಬೆಲೆಸುಲಭ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

ಸುವಾಸಿಕ ಹುರುಕಿನ ಔಷಧ.

ಕಾಲರಾಪಿಲ್ಸ್.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

೧೯೧೭ ನೆಯ ಇಸವಿ ಆಗಸ್ಟ್ ತಾ|| ೧೯ ರಿಂದ ೧೯೧೭ ನೆಯ ಆಗಸ್ಟ್ ತಾ|| ೨೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಅಧಿಕ ಭಾದ್ರಪದ ಶು|| ಬಿದಿಗೆಯಿಂದ ಅಧಿಕ ಭಾದ್ರಪದ ಶು|| ಸಪ್ತಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ತೇದಿ
19	ಭಾನು	ಬಿದಿಗೆ	49-33	ಪೂಭ	46-52	4
20	ಸೋಮ	ತದಿಗೆ	54-24	ಉಭ	53-6	5
21	ಮಂಗಳ	ಚೌತಿ	58-23	ಹಸ್ತ	58-42	6
22	ಬುಧ	ಪಂಚ	60	ಚಿತ್ತ	60	7
23	ಗುರು	ಪಂಚ	0-41	ಚಿತ್ತ	2-33	8
24	ಶುಕ್ರ	ಷಷ್ಠಿ	2-19	ಸ್ವಾತಿ	5-45	9
25	ಶನಿ	ಸಪ್ತಮಿ	2-39	ವಿಶಾ	7-40	10

ಪತ್ರವ್ಯವಹಾರ.

ಪ್ರಕಟನೆ.

REGISTERED NO. M 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಠ್ಯಜ್ಞನಪೃತ್ತನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಳಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೀಯಂಸದಾಪೂರೆಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦]

[ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಆಗಸ್ಟ್ ತಾರೀಖು ೧೯ ನೆಯ ಭಾನುವಾರ. (ಸಂಚಿಕೆ ೩೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ...

ಎಸ್. ಆರ್. ಶಿವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶ್ರೀಕಂಠಕಸ್ತೂರಿಮಾತ್ರೆ

ಮಾತ್ರೆ ೫೦ ಕ್ಕೆ ೪ ಆಣೆ. ಹುಳುಕಡ್ಡಿ ಔಷಧ ೪ ಆಣೆ. ತಲೆನೋವಿಗೆ ಅಮೃತ ೬ ಆಣೆ. ಬಾಲಸಂಜೀವಿನಿ ೪ ಆಣೆ. ಅನೋದಿನಿ (ಸುಖಕ್ಕೂ, ಸಂಗೀತಗಾರರಿಗೂ) ೧೫೦ ಮಾತ್ರೆ ೪ ಆಣೆ. ಏಜಂಟರುಬೇಕು. ಹೆಚ್ಚು ಔಷದ ತರಿಸಿದರೆ ಹೆಚ್ಚು ರಿಯಾಯತಿ.

ವಿಳಾಸ—ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್,
15 ಸದ್ವೈದ್ಯಶಾಲಾ ನಂಜನಗೂಡು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣ ಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತೆಗೆದುಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹದದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚಿಜಡು, ಗುದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ...

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 39

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲಿಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವೇಳೆಕುಮಾಳಿಗೂ ವೈದ್ಯರ ಸಮಯವನ್ನು ಕಾದು ನೋಡಿಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಲ್. ಎ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಫಿಸಿಷ್ಯ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಮೈಸೂರು ಸ್ಟಾರ್.

೧೯೧೭ನೆಯ ಇಸವಿ ಆಗಸ್ಟ್ ತಾ|| ೨೬ ನೆಯ ಭಾನುವಾರ.

ರಾಮರಾಜ್ಯವೂ ಕ್ಷಾಮರಾಜ್ಯವೂ ಯಾರಿಂದಾಗುವುದು?

ಭರತಖಂಡಕ್ಕೆ ಸ್ವರಾಜ್ಯವು ಅನುಗ್ರಹಿಸಲ್ಪಟ್ಟರೆ ಇದು ಸ್ವಾರಾಜ್ಯವಾಗುವುದೆಂದು ಅನೇಕರು ಆಶಿಸುತ್ತಲಿದ್ದಾರೆ. ಅದ [illegible]

[illegible]

ಮಾನ್ಯವು ಎಷ್ಟು ಉತ್ತರವಾದಿತ್ವವುಳ್ಳದೂ ಭಾರಭೂತವಾದುದೂ ಎಂಬುದನ್ನು ಗಮನಿಸದೆ ಇರುವುದಕ್ಕಾದೀತೆ? ಹಿರಿಯ ಕಿರಿಯರ ಮಧ್ಯೆ ಮನಸ್ತಾಪಬಂದರೆ ಹಿರಿಯವನೇ ಸೈರಿಸಿಕೊಂಡು ಕಿರಿಯರ ಮನಸ್ತಾಪೋನ್ಮೂಲನಕ್ಕಾಗಿ ಸೋತುಹೋಗಬೇಕಾದುದು ಲೋಕಧರ್ಮವಲ್ಲವೆ? ಹೀಗಿರುವಾಗ ತನ್ನ ಅನ್ಯಾಯಾಚರಣೆಯು ಬಹಿಃ ಪ್ರಕಾಶವಾದಮೇಲೂ ಹಿರಿಯನು ತನ್ನ ಹಠವನ್ನೇ ಸಾಧುವೆಂದು ಸಾಧಿಸುತ್ತ, ಅದರಮೇಲೆ ಕಿರಿಯರ ಏಳ್ಗೆಯನ್ನು ಕಂಡು ಅಸೂಯೆಪಡುತ್ತ ಅವರ ಮನಸ್ತಾಪದ ಅಭಿವೃದ್ಧಿಗೆ ಹೆಚ್ಚು ದಾರಿ ಮಾಡುವುದು ಹಿರಿಯನ ಗೌರವಕ್ಕೂ ಹಿತಕ್ಕೂ ಸಾಧಕವೇ? ಎಂದಿಗೂ ಅಲ್ಲ. ಹಿಂದಣ ಚರಿತ್ರೆಯನ್ನು ನೆನಸಿಕೊಂಡು ಬೆಚ್ಚುಬೀಳುವ ಜನರಲ್ಲಿ ಆ ಬೆಚ್ಚನ್ನು ಬಿಡಿಸಿ [illegible]

[illegible]

ಳಕ ಸಂಧಿ ನಡೆಯಿಸಿಯೂ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದು ಯೋಚಿಸಿ ವಿಫಲರಾದ ಜರ್ಮನರು ಈ ಪೋಪರವರ ಮೂಲಕ ಸಂಧಿ ಪ್ರಯತ್ನವನ್ನು ನಡೆಯಿಸಿರುವರೆಂದು ಲೋಕವು ಯೋಚಿಸಿರುತ್ತಿದೆ.

ಸದ್ಯಃ ಜರ್ಮನರಿಗೆ ಸಂಧಿಯು ಅವಶ್ಯಕವಾಗಿದೆ. ಅವರಿಗೆ ಮುಂದೆ ಜಯವಾಗುವ ನಿರೀಕ್ಷಣೆಯಿಲ್ಲ. ಬಲವು ಕುಗ್ಗುತ್ತಿದೆ. ಮನಸ್ಸನ್ನೀಯ ಬಿಡುತ್ತಿರುವ ಸ್ವದೇಶೀಯರಲ್ಲಿ ಮರಳಿ ಪೂರ್ವದಂತೆ ಯುದ್ಧಾಭಿನಿವೇಶವನ್ನು ಹೆಚ್ಚಿಸುವುದು ಕಷ್ಟಸಾಧ್ಯವಾಗಿದೆ. ಆದುಕಾರಣ ಹೇಗಾದರೂ ಮಾಡಿ ತಾವು ಜಯಶೀಲರೆನಿಸಿಕೊಂಡಿರುವ ಈ ಸಮಯದಲ್ಲೇ ಸಂಧಿಮಾಡಿಕೊಂಡರೆ ನಂಟೂ ಗಂಟೂ ಉಳಿದುಕೊಳ್ಳುವುದೆಂಬುದು ಅವರ ಯೋಚನೆ. ಅದಕ್ಕಾಗಿಯೇ ನಾನಾ ತಳತಂತ್ರಗಳನ್ನು ಮಾಡುತ್ತಿರುವರು. ಈ ಸಂಧಿಯ ತ್ನವೂ ಅದರಲ್ಲೊಂದಾಗಿರುವುದು. ಈ ವಿಷಯದಲ್ಲಿ ಆಂಗ್ಲದೇಶೀಯರು ಉದಾಸೀನರಾಗಿರುವರು. ಅಮೇರಿಕಾದವರೂ ಇದಕ್ಕೆ ಮನಸ್ಸು ಕೊಡಲಿಲ್ಲ. ಫ್ರೆಂಚ್-ಇಟಲಿ-ರಷ್ಯಾ ದೇಶಗಳವರೂ ತಿರಸ್ಕಾರವನ್ನೇ ವ್ಯಕ್ತಪಡಿ [illegible]

[illegible]

ಸ್ಟೇಟ್ ಸೆಕ್ರೆಟರಿಯವರ ಸಾನುಭೂತಿ.

[illegible]

ಕೃಷ್ಣ ಜಗದ್ಗುರುಗಳ ಸಂಧಿಪ್ರಯತ್ನ.

[illegible]

ಮತ್ತೊಂದುವರ.

[illegible]

ಯುದ್ಧವಾರ್ತೆಯು

ಪಶ್ಚಿಮರಣರಂಗ:—ಈ ರಂಗದಲ್ಲಿ ಮಿತ್ರಮಂಡಲಿಯವರಿಗೇ ಅನುಕೂಲವಾದ ಜಯಪ್ರಾಪ್ತಿಗಳಾಗುತ್ತಿವೆ. ಮತ್ತೊಂದು ಮಹಾವಿಕ್ರಂದನವನ್ನು ಇಂಗ್ಲೀಷ್ ಫ್ರೆಂಚ್‌ರುಗಳು ಆರಂಭಿಸಿ, ಕಳೆದವಾರ ಸಂಕಲ್ಪಸಿದ್ಧಿಯನ್ನು ಮಾಡಿಕೊಂಡಿದ್ದಾರೆ. ಲಾಂಗ್‌ಮಾರ್ಕ್‌ಂಬ ಸ್ಥಳವನ್ನು ಮಿತ್ರಮಂಡಲಿಯವರು ವಶಪಡಿಸಿಕೊಂಡುದರಿಂದ ಉತ್ತರಬೆಲ್ಜಿಯಮ್ಮಿನಲ್ಲಿ ಇವರಿಗೆ ಅತ್ಯನುಕೂಲವಾದ ಸ್ಥಳವು ಸಿಕ್ಕಿದಂತಾಯಿತು. ಲೆನ್ಸ್ ಪಟ್ಟಣದಲ್ಲಿ ಪೂರ್ವದಿಕ್ಕಿನ ಸ್ವಲ್ಪ ಭಾಗವು ಇವರ ವಶವಾಯಿತು. ಇನ್ನು ಕೆಲ ಕಾಲ [illegible]

[illegible]

ಗಳು ಮಾಲ್ಡೇವಿಯಾದಲ್ಲಿರುವ ಜರ್ಮನ್ ಸೈನ್ಯಗಳನ್ನು ತಡೆದುಬಿಟ್ಟಿವೆ. ಸಿರೆತಿನ ಸುತ್ತುಮುತ್ತಣ ಪ್ರದೇಶಗಳಲ್ಲಿ ದೊಡ್ಡ ಯುದ್ಧವು ನಡೆಯುತ್ತಿದೆ. ಓಕ್ನಾ, ಓನೆಸ್ತಿ ಮುಖದಲ್ಲಿ ಶತ್ರುಗಳ ನುಗ್ಗಾಟವು ಬಹಳ ಬಲವಾಗಿದೆ. ಅಲ್ಲಿ ರುಮೇನಿಯನ್ನರು ಹಿಮ್ಮೆಟ್ಟಬೇಕಾಯಿತು. ಫೋಸ್ಕಾನಿ-ಅಜುವಾ ಲೋಹಮಾರ್ಗದ ಪೂರ್ವಭಾಗಕ್ಕೆ ಹಿಮ್ಮೆಟ್ಟಿದರು.

ಆಕಾಶಯಾನಗಳು:—ರಣರಂಗದಲ್ಲಿ ವಿಪರೀತವಾಗಿ ವಿಮಾನಯುದ್ಧಗಳು ನಡೆದಿರುತ್ತವೆ. ಮಿತ್ರಮಂಡಲಿ ವಿಮಾನಗಳು ಶತ್ರುಸ್ಥಲಗಳಮೇಲೆ ಬಹಳ ಸಿಡಿಮದ್ದುಗಳನ್ನು ಹಾಕಿ ಅನರ್ಥಪಡಿಸಿ ಬಂದಿವೆ. ಜರ್ಮನರ ಜಪ್ಲಿನ್ನುಗಳು ಕಳೆದ ತಾ|| ೨೧ ರಲ್ಲಿ ಮತ್ತೊಂದುಸಲ ಇಂಗ್ಲೆಂಡಿನ ಕೆಲ ಭಾಗಗಳಿಗೆ ಬಂದು ಕೆಲ ಸಿಡಿಮದ್ದುಗಳನ್ನು ಹಾಕುವಷ್ಟರಲ್ಲಿ ಇಂಗ್ಲೀಷರ ಫಿರಂ [illegible]

[illegible]

ಭರತಖಂಡದ ವೃತ್ತಾಂತಗಳು.

[illegible]

ಯುದ್ಧದಲ್ಲಿ ಗಾಯಗೊಂಡ ಇಂಗ್ಲೀಷು ಸೈನಿಕರನ್ನೂ, ಭಾರತೀಯ ಸೈನಿಕರನ್ನೂ ಕುಳ್ಳಿರಿಸಿಕೊಂಡು ಹೋಗುತ್ತಿದ್ದ ಒಂದು ಹೊಗೆಬಂಡಿಯು ಸಿಕಿಂದರಾಬಾದಿಗೆ ೧೫೦ ಮೈಲಿಗಳ ದೂರದಲ್ಲಿರುವ ಒಂದು ನಿಲ್ದಾಣದಲ್ಲಿ ನಿಂತಿದ್ದ ಸಾಮಾನುಬಂಡಿಗೆ ಇದಿರಾಗಿ ನುಗ್ಗಿದುದರಿಂದ ಅದರೊಳಗಿದ್ದ ಗ್ಯಾಸಿನ ಪೆಟ್ಟಿಗೆಗೆ ಬೆಂಕಿ ಹೊತ್ತಿಕೊಂಡು ಭಯಂಕರವಾಗಿ ಉರಿಯಲುಪಕ್ರಮಿಸಿತು. ಅನೇಕ ಮಂದಿ ಸೈನಿಕರಿಗೆ ಏಟುಬಿದ್ದಿತು. ಕೆಲರು ಸತ್ತರು.

ಕಾಶಿಯ ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕಸಭೆಯು ಬರುವ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಬಹುಶಃ ತಾ|| ೨೯ ರಲ್ಲಿ ಕೂಡುವುದಾಗಿದೆ. ಆಗ ನವರಾತ್ರಿಯ ಮಹೋತ್ಸವಗಳು ನಡೆಯುವ ಕಾಲವಾದುದರಿಂದ, ಅದಕ್ಕೆ ಚಾನ್ಸಲರಾದ ನಮ್ಮ ಮೈಸೂರು ಮಹಾರಾಜರವರು ಸಭೆಗೆ ದಯ [illegible]

[illegible]

ಪತ್ರವ್ಯವಹಾರ.

ಧಾರ್ಮಿಕ ಕಾರ್ಯದಲ್ಲಿ ಅನುಕರಣೀಯಪದ್ಧತಿ.

ಸ್ವಸ್ತಿಶ್ರೀ ವಿಜಯಾಭ್ಯುದಯ ನೃಪಶಾಲೀವಾಹನಶಕ ೧೮೩೯ ನೆ ಪಿಂಗಳನಾಮ ಸಂ॥ ಶ್ರಾವಣ ಶು॥ ಷಷ್ಟಿ ಬುಧವಾರ ಚಿತ್ರದುರ್ಗ ತಾ॥ ಪೈಕಿ ಭೀಮಸಮುದ್ರದ ಪಟೇಲರು ಶ್ರೀಮಂತ ಕೆಂಚವೀರಪ್ಪಗೌಡರ ಮಕ್ಕಳು ಮಲ್ಲಪ್ಪನವರೂ ಇತರ ಅನುಜರುಗಳೂ ಸಹ ಸ್ಥಾಪನೆಗೊಳಿಸಿರುವ ಹೊಳಲ್ಕೆರೆ ತಾ॥ ಕಸಬ ಹೊಳಲ್ಕೆರೆ ಪಟ್ಟಣಕ್ಕೆ ಸೇರಿದ ಬೈರನಹಾಗಿಲ ಮಠದ ಚರಂತ ದೇವರ ಸಿದ್ಧಲಿಂಗಸ್ವಾಮಿಗಳ ಗದ್ದುಗೆಯಲ್ಲಿ ೩೮ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವು ನಡೆದು ಸಪ್ತಮಿ ಗುರುವಾರ ಮಧ್ಯಾಹ್ನ ೧೧ ಗಂಟೆಗೆ ತದಂಗ ಭೂತವಾದ ಗಣಾರಾಧನೆಯೂ ಅದೇ ಸಾಯಂಕಾಲ ೪ ಗಂಟೆಯಲ್ಲಿ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರಸ್ವಾಮಿಗಳವರ ಶಾಖಾನುವರ್ತಿಗಳಾದ ಈ ಸ್ಥಳದ ಒಂಟಿಕಂಭದ ಮಠದ ನಿರಂಜನಮೂರ್ತಿ ವಿರೂಪಾಕ್ಷಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಈ ಗುರುಕಾರ್ಯಕ್ಕೆ ಆಗಮನ ಮಾಡಿಸಿದ ಚನ್ನಗಿರಿ ತಾ॥ ಪೈಕಿ ಸಂತೆಬನ್ನೂರು ವೇ॥ ಪಟ್ಟಾಧ್ಯಕ್ಷರು ದಿ. ತಾ॥ ಪೈಕಿ ಹೋದಿಗ್ಗೆರೆ ಪಟ್ಟಾಧ್ಯಕ್ಷರೂ, ಈ ಸ್ಥಳದ ಹಾಲಪ್ಪದೇವರ ಮಠದ ಎಂ. ಚರಮೂರ್ತಿಗಳೂ ರಾಮಗಿರಿ ಮು॥ ಚರಮೂರ್ತಿಗಳೂ ಈ ಸ್ಥಳದ ಇನ್ನೂ ಅನೇಕ ಗ್ರಾಮಾಂತರಗಳ ಭಕ್ತ ಮಾಹೇಶ್ವರರುಗಳೂ ನೆರೆದಿದ್ದರು. ವೇ॥ ಸಂತೆಬನ್ನೂರ ಪಟ್ಟಾಧ್ಯಕ್ಷರು ಆಚಾರ ವಿಷಯದಲ್ಲಿ ಸಪ್ರಮಾಣವಾಗಿ ಭಾಷಣಮಾಡಿದರು. ತದನಂತರ ಹೋದಿಗ್ಗೆರೆ ಪಟ್ಟಾಧ್ಯಕ್ಷರು ದೀಕ್ಷಾ ಸಂಸ್ಕಾರ ಹೊಂದಿದ ವಟುಗಳಿಂದ ಬರತಕ್ಕ ಮಹಂತರ ಕಾಣಿಕೆಯ ವಿಷಯದಲ್ಲಿ ಪದ್ಧತಿಯಮೇರೆಗೆ ವಿಭಾಗಿಸಿಕೊಳ್ಳದೆ ಸದ್ವಿನಿಯೋಗಕ್ಕೆ ಉಪಯೋಗಿಸಬೇಕೆಂದು ಸೂಚಿಸಿದರು. ಇದೇ ವಿಷಯವನ್ನು ಕುರಿತು ಹೊಳಲ್ಕೆರೆ ಗಡ್ಡದದೇವರಮಠದ ಮಹದೇವಯ್ಯನವರು ವಿದ್ಯಾವಿಷಯದಲ್ಲಿ ಭಾಷಣಮಾಡಿದ್ದಲ್ಲದೆ ಈ ಮಹಂತ ಕಾಣಿಕೆಯನ್ನು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಕಳುಹಿಸುವುದು ಯೋಗ್ಯವೆಂದು ಸಭೆಯವರಿಗೆಲ್ಲಾ ಉತ್ತೇಜನ ಹುಟ್ಟುವಂತೆ ಸೂಚಿಸಿದರು. ಸಭಾಧ್ಯಕ್ಷರು ಅನುಮೋದಿಸಿದ ಮೇರೆಗೆ ಎಲ್ಲರೂ ಒಪ್ಪಿ ವಸೂಲಾಗಿರತಕ್ಕ ೫೦ ರೂ.ಗಳನ್ನು ಫಂಡಿನ ಸೆಕ್ರೆಟರಿಗಳವರ ಆಫೀಸಿಗೆ ರವಾನಿಸಲು ಹೋದಿಗ್ಗೆರೆ ಪಟ್ಟಾಧ್ಯಕ್ಷರ ವಶಕ್ಕೆ ಕೊಡಲ್ಪಟ್ಟಿತು. ಇಂತಹ ಸಂಘ ಮಹತ್ಕಾರ್ಯಗಳನ್ನು ನಮ್ಮ ವೀರಶೈವ ಜನಾಂಗದಲ್ಲಿ ನಡೆಯತಕ್ಕ ಮಹನೀಯರುಗಳೆಲ್ಲಾ ಇದರಂತೆಯೇ ನಡೆಸತಕ್ಕದ್ದೆಂದು ಬಿನ್ನವಿಸುತ್ತೇವೆ. ಈ ಸಮಾರಂಭವನ್ನು ಮೇಲ್ಕಂಡ ಗೌಡರವರು ನಡೆಸಿದ್ದಕ್ಕಾಗಿ ಅವರ ಕುಟುಂಬ ವರ್ಗದವರಿಗೆಲ್ಲಾ ಜಗದೀಶನ ಕೃಪೆಯಿಂದ ಅಷ್ಟೈಶ್ವರ್ಯಗಳು ಸಂಪತ್ತು ಹೆಚ್ಚಲೆಂದು ತ್ರಿವಾರ ಜಯಘೋಷದೊಡನೆ ಸಭೆಯು ಭಂಗವಾಯಿತು. -ಮಠಸೇವಕ.-

---

ಧಾರವಾಡದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ಕಾಲೇಜಿನ ಧನನಿಧಿಗೆ ಡೆಪ್ಯುಟಿ ಕಲೆಕ್ಟರ್ ಉದ್ಯೋಗದಿಂದ ನಿವೃತ್ತರಾಗಿರುವ ರಾವ್ ಬಹದ್ದೂರ್ ರುದ್ರಗೌಡ ಅರಟಾಳ ಏ. ಎಸ್. ಓ., ಯವರು ವೀರಶೈವರಿಂದ ಎತ್ತಿರುವ ಚಂದಾಹಣದ ವಿವರ:—

1. ಚಿತ್ರಕಲ್ ದುರ್ಗದ ಶ್ರೀ॥ ಜಗದ್ಗುರು ಮುರುಘ ರಾಜೇಂದ್ರ ಮಹಾಸ್ವಾಮಿಗಳವರು	5001
2. ವಂಟಮುರಿಯ ಶ್ರೀಮಂತ ಲಕ್ಷ್ಮಣಗೌಡ ಬಸವಪ್ರಭು ಬ್ಯಾರಿಸ್ಟರ್ ಅಟ್ ಲಾಯವರು	7000
3. ಚಿಕ್ಕೋಡಿ ತಾ॥ ಕುರ್ಲಿಯ ರಾವ್ ಸಾಹೇಬ ಮಲ್ಲಪ್ಪ ಸಂಗಪ್ಪ ಸಿಂತ್ರೆಯವರು	18000
4. ಗದಗಿನ ರಾವ್ ಸಾಹೇಬ್ ವೀರಪ್ಪ ಅನ್ನದಾನಪ್ಪ ಮನ್ನಿಯವರು	5000
5. ಚಿಕ್ಕೋಡಿ ತಾ॥ ಸದಲಗಿಯ ದಿವಾ॥ ರುದ್ರಪ್ಪ ಚೆನ್ನವೀರಪ್ಪ ಹಾಲಪ್ಪನವರ ಇವರು	5000
6. ಚಿಕ್ಕೋಡಿ ತಾ॥ ಎಕ್ಸಂಬೆಯ ಮು॥ ಚೆನ್ನಬಸಪ್ಪ ಮಲ್ಲಪ್ಪ ಕಡಲಿಯವರು	5000
7. ಮುರುಗೋಡು ಮಹಲ್ ಚಚಡಿಯ ನಾಯಕ್ ಬಹದ್ದೂರ್ ದೇಸಾಯಿ ಸರದಾರ್ ವೀರಭದ್ರಪ್ಪ ಗುರುಪ್ಪನವರು	3000
8. ಕರಜಗಿ ತಾ॥ ದೇವಿಹೊಸೂರಿನ ರಾವ್ ಸಾಹೇಬ್ ಚೆನ್ನಬಸಪ್ಪ ಪಂಚಪ್ಪಶೆಟ್ಟಿ ಕುರುಬಗೊಂಡ ಇವರು	2000
9. ಹುಕ್ಕೇರಿ ತಾ॥ ಬೆಲ್ಲದ ಬಾಗೆವಾಡಿಯ ಮು॥ ಸಾತಪ್ಪ ಚೆನ್ನಬಸಪ್ಪ ಶೆಟ್ಟಿ ಇವರು	2000
10. ಸಂಪಗಾವ ತಾ॥ ಬೈಲಹೊಂಗಲದ ಮು॥ ಶಿವಲಿಂಗಪ್ಪ ಚಿನ್ನಪ್ಪ ಮೆಟಗುಡ್ಡ ಇವರು	2000
11. ಧಾರವಾಡ ಡಿ॥ ನವಲಗುಂದದ ಮು॥ ಗುರುಪಾದಪ್ಪ ದೊಡ್ಡಪ್ಪ ಹಸಬಿ ಇವರು	2000
12. ಚಿಕ್ಕೋಡಿ ತಾ॥ ಸದಲಗಿಯ ಮು॥ ಸಾತಪ್ಪ ಗುರಪ್ಪ ಹಾಲಪ್ಪನವರ ಇವರು	1500
13. ರಾಣಿಬೆನ್ನೂರು ತಾ॥ ಚೌಡದಾನಪುರದ ಶ್ರೀ ವಿರೂಪಾಕ್ಷ ಒಡೆಯರು	1200
14. ಬಾಗಲಕೋಟೆಯ ಮು॥ ರುದ್ರಪ್ಪ ಮುರುಘಪ್ಪ ಗೂಗವಾಡ ಇವರು	1001
15. ಬಾಗಲಕೋಟೆಯ ಮು॥ ಭಟ್ಟಬಸಪ್ಪ ಲಿಂಗಪ್ಪನವರು	1001
16. ಗೋಕಾಕ ತಾ॥ ಅಂಕಲಗಿಯ ಮು॥ ಈರಪ್ಪ ದಾನಪ್ಪ ಗುಟ್ಟಿಗೋಳ ಇವರು	1000
17. ಬೆಳಗಾಂ ಡಿ॥ ಅರಳಿಕಟ್ಟಿಯ ಮು॥ ಹೋಳಬಸಪ್ಪ ಶರಪ್ಪ ಸಂಗೊಳ್ಳಿ ಇವರು	1000
18. ಮುರುಗೋಡು ಮಹಲ್ಗೆ ಸೇರಿದ ಕಲ್ಲೂರಿನ ಶ್ರೀಮಂತ ಚಂದ್ರಪ್ಪ ಬಸವಂತರಾವ್ ದೇಸಾಯಿ ಇವರು	1000
19. ಸೌದತ್ತಿಯ ಮು॥ ಗುರುಪಾದಪ್ಪ ಹಂಪಣ್ಣ ಹಂಪಣ್ಣನವರ ಇವರು	1000
20. ಕರಜಗಿ ತಾ॥ ಹಂದಿಗನೂರಿನ ಸರದಾರ್ ಬುಳ್ಳಪ್ಪ ಉರ್ಫ್ ಬಾಬಾಸಾಹೇಬ್ ಬಸವಂತರಾವ್ ಮಾಮಲೆ ಇವರು	1000
21. ಬೆಳಗಾಂ ಡಿ॥ ಕಿನಬುರ್ಗಿಯ ಮು॥ ಸಿದ್ಧನಗೌಡ ಬಸವಂತಪ್ಪ ಪಾಟೀಲ ಇವರು	600
22. ಬಾಗಲಕೋಟೆಯ ಮು॥ ಮಹಂತಪ್ಪ ರುದ್ರಪ್ಪ ಶವಶೆಟ್ಟಿ ಇವರು	550
23. ಬೆಳಗಾಂ ಡಿ॥ ಗೋಕಾಕಿನ ಶ್ರೀ ದುಂಡಯ್ಯ ಶಿವಲಿಂಗಯ್ಯ ನಂದಿ ಇವರು	501
24. ಅಥಣಿ ತಾ॥ ಸವದಿಯ ಮು॥ ರಾಚಗೌಡ ಸಂಗನಗೌಡ ಪಾಟೀಲ ಇವರು	500
25. ಅಥಣಿ ತಾ॥ ಕಣ್ಣಾಲದ ಮು॥ ಗಂಗನಗೌಡ ಬಸವನಗೌಡ ಪಾಟೀಲ ಇವರು	500
26. ಅಥಣಿ ತಾ॥ ಕಕ್ಕಮರಿಯ ಮು॥ ರಾಮೇಗೌಡ ಹೊನ್ನಪ್ಪಗೌಡ ಪಾಟೀಲ ಇವರು	500
27. ಸಂಪಗಾವ್ ತಾ॥ ನೇಸರ್ಗಿಯ ರಾವ್ ಸಾಹೇಬ್ ಶಿವಲಿಂಗಪ್ಪ ಬಸವಲಿಂಗ ಮಹಂತಶೆಟ್ಟಿ ಇವರು	500
28. ಸಂಪಗಾವ್ ತಾ॥ ತುರುಮುರಿಯ ಮು॥ ಬಸವನಗೌಡ ರಾಚಗೌಡ ಪಾಟೀಲ ಇವರು	500
29. ಗೋಕಾಕ್ ತಾ॥ ಯಾದವಾಡದ ಮು॥ ಚೆನ್ನಬಸಪ್ಪ ಬಸೆಟ್ಟೆಪ್ಪ ಲಕ್ಕಶೆಟ್ಟಿ ಇವರು	500
30. ಧಾರವಾಡ ಡಿ॥ ಹಂಗರ್ಕಿಯ ಮು॥ ಕರಿಬಸಪ್ಪ ಅಯ್ಯಪ್ಪ ದೇಸಾಯಿ ಇವರು	500
31. ಗೋಕಾಕ್ ತಾ॥ ಸುಣಧೋಳಿಯ ಮು॥ ಲಿಂಗಪ್ಪ ಶಿವರಾಯಪ್ಪ ಅಂಗಡಿ ಇವರು	500
32. ಸವದತ್ತಿಯ ಮು॥ ಗುರುಲಿಂಗಪ್ಪ ಹಂಪಣ್ಣ ಹಂಪಣ್ಣನವರ ಇವರು	500
33. ನವಲಗುಂದ ತಾ॥ ಅಣ್ಣಿಗೇರಿಯ ಶ್ರೀಮಂತ ಶಂಕರಪ್ಪ ಫಕೀರಪ್ಪ ದೇಸಾಯಿ ಇವರು	500
34. ರೋಣ ತಾ॥ ಸೂಡಿಯ ರಾ॥ ಸಾ॥ ಅಡಿವೆಪ್ಪ ಚೆನ್ನವೀರಪ್ಪ ಶೆಟ್ಟರ ಅಂಗಡಿ ಇವರು	500
35. ಚಿಕ್ಕೋಡಿ ತಾ॥ ಎಕ್ಸಂಬೆಯ ಮು॥ ಶ್ರೀ ಪಾದಪ್ಪ ಬಾಬಾ ಹುಕ್ಕೇರಿ ಇವರು	500
36. ಸಂಪಗಾವ ತಾ॥ ದೊರಿನಗ್ಗಿ ನಹಾಳಿನ ಮು॥ ದಾನಪ್ಪಗೌಡ ಬಸವನಗೌಡ ಇನಾಂದಾರ್ ಇವರು	500
37. ಗೋಕಾಕ್ ತಾ॥ ಯಾದವಾಡದ ಮು॥ ಶ್ರೀನಿವಾಸ ದೇವಪ್ಪ ಕಸಬಾ ಪಾಟೀಲ ಇವರು	500
38. ಧಾರವಾಡ ಡಿ॥ ಹಾರೋಬೆಳವಡಿಯ ಮು॥ ಶಂಕರಗೌಡ ಮಲ್ಲನಗೌಡ ಪೋಲೀಸ್ ಪಾಟೀಲ ಇವರು	400
39. ಧಾರವಾಡ ಡಿ॥ ಹಾರೋಬೆಳವಡಿಯ ಮು॥ ರುದ್ರಗೌಡ ಚೆನ್ನಪ್ಪಗೌಡ ಮುಲ್ಕಿ ಪಾಟೀಲ ಇವರು	400
40. ಸಂಪಗಾವ ತಾ॥ ಬೈಲಹೊಂಗಲದ ಮು॥ ತೋಟಪ್ಪ ಪರಪ್ಪ ಮೆಟಗುಡ್ಡ ಇವರು	400
41. ನವಲಗುಂದದ ತಾ॥ ಕಾಳವಾಡದ ಮು॥ ವೀರಪ್ಪ ಸೊಲಭಪ್ಪ ಅಕ್ಕಿ ಇವರು	400
42. ಬೆಳಗಾವಿಯ ವೈಜಯಪ್ಪ ಅಡಿವೆಪ್ಪ ಅನಗೋಳ್ಕರ ಇವರು	300
43. ಬಿಜಾಪುರ ಡಿ॥ ಹುನುಗುಂದದ ಮು॥ ದೊಡ್ಡಪ್ಪ ಬಸಪ್ಪ ನಾಗರಾಳ ಇವರು	300
44. ಧಾರವಾಡ ತಾ॥ ಮನ್ಸೂರುಗಟ್ಟಿಯ ಮಲ್ಲಪ್ಪಗೌಡ ಉರ್ಫ್ ಅಪ್ಪಾಸಾಹೇಬ್ ಕುಮಾರಗೌಡ ದೇಸಾಯಿ	300
45. ಹುಕ್ಕೇರಿ ತಾ॥ ಸಂಕೇಶ್ವರದ ಮು॥ ಶಂಕರಗೌಡ ಸಿದ್ಧನಗೌಡ ಪಾಟೀಲ ಇವರು	300
46. ಹುಕ್ಕೇರಿ ತಾ॥ ಅಮ್ಮಣಗಿಯ ಮು॥ ಬಾಳಪ್ಪ ಆಲಗೌಡ ಪಾಟೀಲ ಇವರು	300
47. ಪರಸಗಡ ತಾ॥ ತಿಗ್ಗೊಳ್ಳಿಯ ಮು॥ ಶಿವನಗೌಡ ಅಯ್ಯನಗೌಡ ಇವರು	300
48. ಹುಕ್ಕೇರಿ ತಾ॥ ಬೆಲ್ಲದಬಾಗೇವಾಡಿಯ ಮು॥ ಶ್ರೀಶೈಲಪ್ಪ ಮಹಂತಪ್ಪ ಕತ್ತಿ ಇವರು	300
49. ಮುರುಗೋಡು ಮಹಲ್ಗೆ ಸೇರಿದ ಮರಕುಂಬಿಯ ಮು॥ ರಾಯನಾಯಿಕ್ ಮಾರ್ತಾಂಡನಾಯಿಕ್ ಪಾಟೀಲ ಇವರು	250
50. ಸಂಪಗಾವ ತಾ॥ ಬೈಲ್ವಾಡದ ಮು॥ ಶಿವಬಸಪ್ಪ ಶಿವಲಿಂಗಪ್ಪ ಪಾಟೀಲ ಇವರು	250
51. ಚಿಕ್ಕೋಡಿ ತಾ॥ ನಿಪ್ಪಾಣಿಯ ಮು॥ ಗುರುಮಲ್ಲಪ್ಪ ರುದ್ರಪ್ಪ ಕೋಟಿವಾಲೆ ಇವರು	250
52. ಸಂಪಗಾವ ತಾ॥ ದೇವಲಾಪುರದ ಮು॥ ವೀರಭದ್ರಪ್ಪ ಸಿದ್ಧರಾಮಪ್ಪ ಕಾಗಿ ಇವರು	200
53. ಅಥಣಿ ತಾ॥ ತೇಲ್ಸಂಗದ ಮು॥ ಅಣ್ಣಪ್ಪ ಗೌಡಪ್ಪ ಗಡಗಿ ಇವರು	200
54. ಬಾಗಲಕೋಟೆಯ ಮು॥ ಚೆನ್ನಮಲ್ಲಪ್ಪ ಗುರುಪಾದಪ್ಪ ನಿಡಗುಂದಿ ಇವರು	200
55. ಹುಕ್ಕೇರಿ ತಾ॥ ಸಂಕೇಶ್ವರದ ಮು॥ ತಮ್ಮಪ್ಪ ಶಿವಪ್ಪ ನೇಸರಗಿ ಇವರು	200
56. ಹುಕ್ಕೇರಿ ತಾ॥ ಹರಗಾಪುರದ ಮು॥ ರುದ್ರಗೌಡ ಉರ್ಫ್ ಅಣ್ಣಾಗೌಡ ಸಿದ್ಧನಗೌಡ ಪಾಟೀಲ ಇವರು	200
57. ಚಿಕ್ಕೋಡಿ ತಾ॥ ಅಕೋಳದ ಮು॥ ಶಿವಲಿಂಗಪ್ಪ ಮಲ್ಲಪ್ಪ ಸದಲಗಿ ಇವರು	200
58. ಸಂಪಗಾವ ತಾ॥ ದಶನೂರಿನ ಮು॥ ಮಹಾರುದ್ರಪ್ಪ ಮುದಿವಾಳಪ್ಪ ಉಪ್ಪಿನ ಇವರು	200
59. ಬೆಳಗಾವಿಯ ಮು॥ ಮರೆಪ್ಪ ಪಂಡಿತಪ್ಪ ಭೋಜಣ್ಣನವರ	200
60. ಸಂಪಗಾವ ತಾ॥ ಬೈಲಹೊಂಗಲದ ಮು॥ ಚೆನ್ನಬಸಪ್ಪ ಮಲ್ಲಪ್ಪ ಮೆಟಗುಡ್ಡ ಇವರು	200
61. ಸಂಪಗಾವ ತಾ॥ ಬೈಲಹೊಂಗಲದ ಮು॥ ಚಿನ್ನಪ್ಪ ಭಾವಪ್ಪ ಮೂಗಿ ಇವರು	200
62. ಬೆಳಗಾಂ ಡಿ॥ ಸಂಪಗಾವಿಯ ಮು॥ ಬಸವಲಿಂಗಪ್ಪ ಚೆನ್ನಬಸಪ್ಪ ಮುಂಗೌಡರ ಇವರು	200
63. ಮರಗೋಡಿನ ಮು॥ ಬಸವನಗೌಡ ಪರ್ವತಗೌಡ ಪಾಟೀಲರು	200
64. ಧಾರವಾಡ ಡಿ॥ ಹಲ್ಯಾಳದ ಚೆನ್ನಬಸವಗೌಡ ಬಸನಗೌಡ ಪಾಟೀಲರು	200
65. ಸಂಪಗಾವ ತಾ॥ ಕೊರಗಂದದ ಮು॥ ಲಿಂಗನಗೌಡ ವೀರನಗೌಡ ಪಾಟೀಲರು	200
66. ಸಂಪಗಾವ ತಾ॥ ಚಾಲಿಕೊಪ್ಪದ ಮು॥ ಫಕೀರಪ್ಪ ಸಿದ್ಧರಾಮಪ್ಪ ಬೋಳಶೆಟ್ಟರ ಇವರು	200

[ಸಶೇಷ].

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

41 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ್.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 1

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

೧೯೧೭ ನೆಯ ಇಸವಿ ಆಗಸ್ಟ್ ತಾ॥ ೨೬ ರಿಂದ ೧೯೧೭ ನೆಯ ಸೆಪ್ಟಂಬರ್ ತಾ॥ ೧ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀನುತ ಪಿಂಗಳನಾಮಸಂವತ್ಸರದ ಅಧಿಕ ಭಾದ್ರಪದ ಶು॥ ಅಷ್ಟಮಿಯಿಂದ ಅಧಿಕ ಭಾದ್ರಪದ ಶು॥ ಪೌರ್ಣಿಮೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ಕೇದಿ
26	ಭಾನು	ಅಷ್ಟಮಿ	1-43	ಉಪರಿ	58-16	11
27	ಸೋಮ	ದಶಮಿ	56-52	ಜ್ಯೇಷ್ಠ	7-54	12
28	[1] ಮಂಗಳ	ಏಕಾದ	52-41	ಮೂಲ	6-22	13
29	[2] ಬುಧ	ದ್ವಾದ	47-36	ಪೂಷಾ	3-56	14
30	[3] ಗುರು	ತ್ರಯೊ	42-0	ಉಷಾ	0-48	15
31	ಶುಕ್ರ	ಚತು	36-0	ಧನಿಷ್ಟ	53-10	16
1	ಶನಿ	ಪೌರ್ಣ	29-47	ಶತಭಿಷ	48-55	17

(1) ಸ್ಮಾರ್ತಾನಾಮೇಕಾದಶೀ. (2) ಶ್ರೀವೈಷ್ಣವಾನಾಂ ಮಾಧ್ವಾನಾಂಚೈಕಾದಶೀ. (3) ಸೌರಜಗುರುಪಾಳಮ್ಯ.

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಕಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪತ್ರಿಕ್ಷ ನಕ್ಷತ್ರನೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂ ವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂ ಚಿತ್ತರಿಯಂ ಸದಾಪೂರೆಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಸೆಪ್ಟಂಬರ್ ತಾರೀಖು ೨ ನೆಯ ಭಾನುವಾರ. (ಸಂಚಿಕೆ ೩೪

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಶಂಕರಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ ಂವರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳೀ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

42 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ್.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ಸಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊಂಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿಪ್ರಕಾರಬಾಟ್ಲಿಯ ಸೋಬತ ಸಿಗುವದು. ತಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದಿನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
26 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಶೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಶನ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 40

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾತಮನಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗನೇಬೇನೆ, ಬಲಹೀನತೆ, ಕೆಟ್ಟಹಸಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿ ಗಜಾಂಕುಶತಾರಾಳಿ	೦—[illegible]—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—[illegible]—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಸೆಪ್ಟಂಬರ್ ತಾ॥ ೨ ನೆಯ ಭಾನುವಾರ.

ಹಿಂದುಳಿದವರಿಗೆ ಸಹಾಯಮಾಡಿದರೆ ಅಸೂಯೆಯೇತಕ್ಕೆ ?

ಬ್ರಾಹ್ಮಣ-ಬ್ರಾಹ್ಮಣೇತರ ಎಂಬ ಭೇದದ ಮೂಲಕವಾದ ವಾಗ್ವಾದಗಳು ಮದ್ರಾಸು ಅಧಿಪತ್ಯದಲ್ಲಿ ಪ್ರಬಲಿಸುತ್ತಲಿವೆ. ನಮ್ಮ ಮೈಸೂರು ದೇಶದಲ್ಲಿ ಅಂಥ ವಿಭೇದಕ್ಕೂ ವಾಗ್ವಾದಕ್ಕೂ ಅವಕಾಶವಿಲ್ಲದಿದ್ದರೂ, ವಿದ್ಯಾವಿವೇಕಗಳಲ್ಲಿ ಹಿಂದುಳಿದ ಪ್ರಜೆಗಳ ವಿದ್ಯಾಭಿವೃದ್ಧಿ ಪ್ರೋತ್ಸಾಹಕ್ಕಾಗಿ ಕನಿಕರದಿಂದ ೧ ಲಕ್ಷ ರೂ. ಗಳನ್ನು ನಮ್ಮ ಸರ್ಕಾರದವರು ಅನುಗ್ರಹಿಸಿರುವುದನ್ನು ಕಂಡು ಅಸೂಯೆಪಟ್ಟು ಕೆಲವರು ಮಾಡುತ್ತಿರುವ ಕೂಗು, ಈ ದೇಶದಲ್ಲೂ ಪ್ರಜೆಗಳೊಳಗೆ ಬ್ರಾಹ್ಮಣ-ಬ್ರಾಹ್ಮಣೇತರ ವಿಭೇದಮೂಲಕವಾದ ಅನರ್ಥಕ್ಕೆ ಎಲ್ಲಿ ಆಸ್ಪದವನ್ನು ಕೊಡುವುದೋ ಎಂದು ದೇಶಾಭಿಮಾನಿಗಳು ಚಿಂತೆಪಡುವಂತಾಗಿರುತ್ತದೆ. ಅದೂರದರ್ಶಿಗಳಾದ ಸಾಮಾನ್ಯ ಜನರು ಅಂಥ ಪ್ರಲಾಪಮಾಡಿಕೊಳ್ಳುತ್ತಿದ್ದರೆ ಅದಕ್ಕಾಗಿ ವಿವೇಕಿಗಳಾರೂ ಚಿಂತಿಸಬೇಕಾಗಿಲ್ಲ. ಯುಕ್ತಾಯುಕ್ತ ವಿಮರ್ಶನ ವಿಚಕ್ಷಣರಾದ ಪತ್ರಿಕಾಕರ್ತರಂಥ ವಿವೇಕಿಗಳು ಇಂಥ ದುರ್ವಾದಕ್ಕೆ ಅವಕಾಶಕೊಡುವುದೆಂದರೆ ಅದು ವಿಷಾದಸ್ಥಾನವಲ್ಲವೆ? ಮೈಸೂರಿನ ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಲ್ಲಿ ೨-೩ ತಿಂಗಳಿಂದೀಚೆಗೆ ಬ್ರಾಹ್ಮಣೇತರರಿಗೆ ೧ ಲಕ್ಷ ರೂ. ಸಹಾಯದ್ರವ್ಯವು ದೊರೆತ ವಿಷಯವಾಗಿ ಅಸಮಾಧಾನಪಟ್ಟು ಮತ್ಸರಿಸುವಂಥ ಲೇಖನವಿಲ್ಲದ ಸಂಚಿಕೆಯೇ ವಿರಳವಾಗುತ್ತಿದೆ. ಇದು ಶೋಚನೀಯವಾದುದು. ಅದರೊಳಗೂ ಮೈಸೂರಿನ ನ್ಯಾರೋಜಿಯವರೆಂದು ಹೇಳಿಸಿಕೊಳ್ಳುವ ಸ್ಥಿತಿಗೆ ಏರುತ್ತಿರುವ ಮ॥ ಎಂ. ವೆಂಕಟಕೃಷ್ಣಯ್ಯನವರ ಹಸ್ತಾವಲಂಬನೆಯಲ್ಲಿರುವ ಈ ಪತ್ರಿಕೆಗಳಲ್ಲಿ ಇಂಥ ಪರಾಭ್ಯುದಯಾಸಹಿಷ್ಣು ಲೇಖನಗಳೂ, ಐಕಮತ್ಯ ವಿನಾಶಸಾಧಕ ವಾಗ್ವಾದಗಳೂ, ಭೇದಬುದ್ಧಿ ಸಮುತ್ಪಾದಕ ವಿಮರ್ಶೆಗಳೂ ಬರುತ್ತಿರುವುದು ಮತ್ತಷ್ಟು ಶೋಚನೀಯವು. "ಸರ್ವೇಜನಾಸ್ಸುಖಿನೋಭವಂತು" ಎಂದು ತಮ್ಮ ದೈನಿಕ ದೈವೋಪಾಸನೆಯ ಕಾಲದಲ್ಲಿ ಪ್ರಾರ್ಥಿಸುವ ಜನವರ್ಗದವರು ತಮ್ಮ ನುಡಿಗೂ ನಡೆಗೂ ಸಂಬಂಧವೇ ಇಲ್ಲದಂತೆ ಇಂಥ ಕೃತ್ಯಗಳಿಂದ ಮಾಡಿಕೊಳ್ಳುವುದು ಪರಮಶೋಚನೀಯವು.

ಮೈಸೂರು ಪ್ರಜೆಗಳಲ್ಲಿ ಮುಕ್ಕಾಲು ಮೂರುವೀಸಪಾಲು ಜನರೆಲ್ಲಾ ವಿದ್ಯೆಯಲ್ಲಿ ಹಿಂದುಳಿದ ಜನವರ್ಗದವರೇ ಆಗಿರುತ್ತಾರೆ. ಇದನ್ನು ಯಾರು ತಾನೇ ಕಾಣರು? ಭರತಖಂಡದಲ್ಲಿ ಬ್ರಾಹ್ಮಣರ ಹೊರತು ಉಳಿದ ಜನವರ್ಗದವರೆಲ್ಲಾ ವಿದ್ಯಾಸಂಪತ್ತಿನಲ್ಲಿ ಹಿಂದೆಬಿದ್ದಿರುವರೆಂಬ ಸಂಗತಿಯು ಜನಜನಿತವಾದ ವಿಷಯವು.

...

ದೆಂಬ ಬಿರುದಾವಳಿಯನ್ನು ಪಡೆದುಕೊಂಡಿರುವುದು. ಮ॥ ಎಂ. ಬಸವಯ್ಯ ಬಿ.ಎ., ಬಿ.ಎಲ್., ರವರು ಮೊದಲಾದ ಕೆಲರು ನ್ಯಾಯವಾದ ಕಾರಣಗಳನ್ನು ತೋರಿಸಿ, ಇದ್ದ ಸ್ಥಿತಿಯನ್ನು ಸರ್ಕಾರದವರ ಗಮನಕ್ಕೆ ತಂದು, ಹಿಂದುಳಿದ ಜನರ ಉದ್ಧಾರದ ವಿಷಯದಲ್ಲಿ ಪ್ರಭುತ್ವದವರಿಗೆ ಮರುಕಹುಟ್ಟಿ, ಸಹಾಯ ಮಾಡುವಂತೆ ಮಾಡಿದುದಕ್ಕಾಗಿ ಅವರುಗಳಿಗೆ ಬ್ರಹ್ಮದ್ವೇಷಿಗಳು, ಬ್ರಹ್ಮಯಜ್ಞದೀಕ್ಷಿತರು ಮೊದಲಾದ ಕಿತಾಪುಗಳು ಈ ಲೋಕೋದ್ಧಾರಕರುಗಳಿಂದ ಅನುಗ್ರಹಿಸಲ್ಪಟ್ಟಿರುವುವು. ೧ ಲಕ್ಷ ರೂ. ಗಳನ್ನು ಅವರು ಸೂರೆಮಾಡಿಕೊಂಡಿರುವರೆಂದು ಭೂಮ್ಯಂತರಿಕ್ಷಗಳು ಒಂದಾಗುವಂತೆ ಗೋಳಿಡುತ್ತಿರುವರು. ಇಂಥ ಅಸೂಯಾಂಧವಚನಗಳ ಯೋಗ್ಯತೆಯನ್ನು ವಿಚಾರಪರರಾದ ವಾಚಕರೇ ಅರಿಯಬಲ್ಲರಾದುದರಿಂದ, ಸಂಕುಚಿತ ಮನಸ್ಕರೂ ನಿಜಬ್ರಾಹ್ಮಣ ಯೋಗ್ಯತೆಗೇ ಕಳಂಕ ತರತಕ್ಕವರೂ ಆದ ಒಬ್ಬಿಬ್ಬ ಲೇಖಕರ ಇಂಥ ವಚನಗಳ ಖಂಡನೆಯಮೂಲಕ ಬ್ರಾಹ್ಮಣ ಸಾಮಾನ್ಯದ ಮನಸ್ಸಿಗೆ ಬೇಸರನ್ನು ತರುವ ಕೆಲಸವನ್ನು ಮಾಡಲು ನಾವು ಇಷ್ಟಪಡಲಾರೆವು. ರಾಜಬಂಧುವರ್ಗದವರ ವಿದ್ಯಾಭಿವೃದ್ಧಿಗೆ ಪ್ರತ್ಯೇಕ ಪ್ರಯತ್ನ ನಡೆದಿರುವುದನ್ನೇ ಸೈರಿಸಲಾರದವರು ಇತರ ಸಾಮಾನ್ಯ ಪ್ರಜೆಗಳ ಉದ್ಧಾರದ ವಿಷಯಕವಾದ ಪ್ರಯತ್ನಕ್ಕೆ ಅಸೂಯೆಪಡುವುದರಲ್ಲಿ ಆಶ್ಚರ್ಯವೇನುಂಟು?

ತಮ್ಮ ದೇಶದ ಪರಿಪಾಲನಾಧಿಕಾರವನ್ನು ಆಂಗ್ಲಜನರ ಕೈತಪ್ಪಿಸಿ, ತಾವೇ ಆಳಿಕೊಳ್ಳಬೇಕೆಂದು ಭಾರತೀಯ ವಿದ್ಯಾಧಿಕಜನರು ಪ್ರಯತ್ನಿಸುತ್ತಿರಬಹುದು, ಮೈಸೂರು ದೇಶದ ಸಿವಿಲ್ ಸರ್ವೀಸ್ ಪರೀಕ್ಷೆಯ ಪ್ರವೇಶಕ್ಕೆ ಮೈಸೂರು ದೇಶದವರಿಗೆ ಮಾತ್ರವೇ ಅವಕಾಶವಿರಬಹುದು, ಆದರೆ ಮೈಸೂರು ದೇಶದ ಬ್ರಾಹ್ಮಣೇತರ ಪ್ರಜಾಸಾಮಾನ್ಯಕ್ಕೆ ಮೈಸೂರು ಪ್ರಭುತ್ವೋದ್ಯೋಗ ನಿರ್ವಾಹದಲ್ಲಿ ಪಾಲುಗಾರಿಕೆಯಿರಬಾರದೆ? ಅದರ ಸಂಪಾದನೆಗಾಗಿ ಅವರು ಪ್ರಭುತ್ವದವರಲ್ಲಿ ಮೊರೆಯಿಟ್ಟುಕೊಳ್ಳಬಾರದೆ? ಹಿಂದುಳಿದ ಜನವರ್ಗದವರಲ್ಲಿ ಪ್ರಾಪಂಚಿಕ ವಿಷಯಪ್ರಗತಿ ಜ್ಞಾನಸಂಪನ್ನರು ಸಾವಿರಕ್ಕೆ ಒಬ್ಬರಂತೆಯೂ ಇಲ್ಲ. ಅಂಥ ಜ್ಞಾನವಿದ್ದರೂ ಒಳಗಿದ್ದುದನ್ನು ಹೊರಕ್ಕೆ ಆಡಿ ತೋರಿಸಬಲ್ಲವರು ೧೦ ಸಾವಿರಕ್ಕೊಬ್ಬರೂ ಇಲ್ಲ. ತಮ್ಮ ಕಷ್ಟನಿಷ್ಠುರಗಳ ನಿವೃತ್ತಿಗೆ ಬಾಧ್ಯರಾದ ಸರ್ಕಾರದವರ ಮುಂದೆ ಯುಕ್ತಿಯುಕ್ತವಾದದಿಂದ ದೂರಿಕೊಂಡು ಪರಿಹಾರಮಾಡಿಕೊಳ್ಳಬಲ್ಲ ಸಮರ್ಥರು ಲಕ್ಷಕ್ಕೊಬ್ಬರಂತೆಯೂ ಇದ್ದಾರೆಯೋ ಇಲ್ಲವೋ! ಹೀಗಿರುವ ಅವರುಗಳ ಸ್ಥಿತಿಯನ್ನು ನೋಡಿ ಮುಂದಾದವರು ಅವರಿಗೆ ಸರ್ವತೋಪರಿ ಸಹಾಯಮಾಡಿ ತಮ್ಮ ಘನತೆಯನ್ನು ಕಾಪಾಡಿಕೊಳ್ಳುವ ಮೂಲಕ ಅನನ್ಯ ಸಾಧಾರಣವಾದ ಪ್ರಯೋಜನವನ್ನು ಪಡೆಯುವುದನ್ನು ಬಿಟ್ಟು, ತಮಗೆ ದೊರೆದ ಸಂಧಿಯಲ್ಲಿ ತಮ್ಮ ಸಹೋದರ ಪ್ರಜಾವರ್ಗದ ಉದ್ಧಾರಕ್ಕಾಗಿ ಅವಶ್ಯಕವಾದ ಸೂಚನೆಗಳನ್ನು ಸರ್ಕಾರದ ಗಮನಕ್ಕೆ ತಂದ ಮ॥ ಬಸವಯ್ಯನವರೇ ಮೊದಲಾದವರನ್ನು ವಾಚಾಮಗೋಚರವಾಗಿ ನಿಂದಿಸುವುದಕ್ಕೆ ...

...

ವ ನಮ್ಮ ಸಂಸ್ಥಾನದಲ್ಲಿ ಪರಸ್ಪರ ಮಾತ್ಸರ್ಯವರ್ಧನ ಸಾಧಕಗಳಾದ ಇಂಥ ಲೇಖನಗಳು ವೃತ್ತಪತ್ರಿಕೆಗಳಲ್ಲಿ ಅಖಂಡವಾಗಿ ಬರದಿರುವಂತೆ ಮಾಡುವುದು ದೇಶಾಭಿಮಾನಿಗಳೆನಿಸಿಕೊಳ್ಳುವವರಿಗೆ ಕರ್ತವ್ಯವಲ್ಲವೆ? ಆ ಕರ್ತವ್ಯಜ್ಞಾನವನ್ನು ಅವರು ಯಾವ ಕಾರಣದಿಂದಲೋ ಮರೆತಿದ್ದರೆ ಸರ್ಕಾರವಾದರೂ ಎಚ್ಚರಿಸುವುದು ಆವಶ್ಯಕವು.

ಒಳದೇಶದ ವೃತ್ತಾಂತಗಳು.

ಮೈಸೂರು ಡಿಸ್ಟ್ರಿಕ್ಟು ಹೆಲ್ತ್ ಆಫೀಸರಾದ ಮ॥ ಜೆ. ಪಿ. ಕರ್ರಿಯವರು ರಾಜಧಾನಿಯ ಹೆಲ್ತಾಫೀಸರಾಗಿ ಪ್ರಕೃತಕ್ಕೆ ನಿಯಮಿಸಲ್ಪಟ್ಟಿರುವರು.

ಅಮಲ್ದಾರರುಗಳಾದ ಮ॥ ಪಿ. ಎಸ್. ಪೂರ್ಣಯ್ಯನವರು ಸೊರಬದಿಂದ ದೇವನಹಳ್ಳಿಗೂ, ಮ॥ ಟಿ. ಕೆ. ಲಕ್ಷ್ಮಣಯ್ಯರ್‌ರವರು ದೇವನಹಳ್ಳಿಯಿಂದ ಸೊರಬಕ್ಕೂ ವರ್ಗಮಾಡಲ್ಪಟ್ಟಿದ್ದಾರೆ.

ಭರತಖಂಡದ ಸರ್ಕಾರದವರು ದೇಶರಕ್ಷಕಶಾಸನವನ್ನು ಎದುವರೆಗೆ ವ್ಯವಹಾರದಲ್ಲಿಟ್ಟಿರುವರೋ ಅದುವರೆಗೂ ಮೈಸೂರುದೇಶದಲ್ಲೂ ಆ ಶಾಸನವು ವ್ಯವಹಾರದಲ್ಲಿಡಲ್ಪಡುವುದೆಂದು ನಮ್ಮ ಸರ್ಕಾರದವರು ಪ್ರಕಟಿಸಿದ್ದಾರೆ.

ರಾಜಧಾನಿಯಲ್ಲಿ ಮೋಡ ಕವಿದುಕೊಂಡು ತುಂತುರುಹನಿಯು ಮಾತ್ರ ಬೀಳುತ್ತಿದ್ದು ಮೊನ್ನೆ ಕೊಂಚ ಮಳೆಯಾಯಿತು. ಶಾಂತಿಭೇರಿಯುಪದ್ರವ ಶಮನವಾಗಿ ಪ್ಲೇಗು ತಲೆದೋರಿ ಅಗ್ರಹಾರದಕಡೆ ಇಲಿಗಳು ಸಾಯುತ್ತಿರುವುದಾಗಿಯೂ ಮಂಡಿಯಲ್ಲಿ ೧-೨ ಮರಣಗಳಾದುದಾಗಿಯೂ ವರ್ತಮಾನವಿದೆ.

ರಾಜಧಾನಿಯ ಲಷ್ಕರ್ ಮೊಹಲ್ಲಾ ಸೀಬಯ್ಯನ ಗಲ್ಲಿಯ ಬಳಿಯ ಕಚರಾತೊಟ್ಟಿಯಲ್ಲಿ ಆಗತಾನೇ ಹುಟ್ಟಿ ಕತ್ತಿನ ಹಿಸುಕಾಟದಿಂದ ಸತ್ತುಹೋಗಿದ್ದ ಶಿಶುವೊಂದು ಹಾಕಲ್ಪಟ್ಟಿದ್ದಿತು. ಇದಕ್ಕೆ ಕಾರಣಭೂತರನ್ನು ಪೋಲೀಸ್ ಶಾಖೆಯವರು ಪರಿಶೋಧಿಸುತ್ತಿರುವರು. ವಿಧವಾವಿವಾಹವಿರೋಧಿ ನಸ್ತ್ಯಸ್ಯಂತು.

ಬರುವ ನವರಾತ್ರಿಯ ಕಾಲದಲ್ಲಿ ಪದ್ಧತಿಯಂತೆ ಮೈಸೂರಿನಲ್ಲಿ ನಡೆ ...

...

ಯುದ್ಧವಾರ್ತೆಯು

...

ದರು. ಬೆಲ್ಜಿಯಂ ಸಮುದ್ರತೀರಕ್ಕೆ ಆನಿಕೊಂಡಿರುವ ಈ ಫ್ಲಾಂಡರ್ಸ್ ಭಾಗವು ಮಿತ್ರಮಂಡಲಿಯವರ ವಶವಾದರೆ ಬೆಲ್ಜಿಯಮ್ಮಿನ ಆಸೆಯನ್ನು ಶತ್ರುಗಳು ಬಿಡಲೇಬೇಕು. ...

ಭರತಖಂಡದ ವೃತ್ತಾಂತಗಳು.

...

ವಿದೇಶವೃತ್ತಾಂತಗಳು.

...

ಪತ್ರವ್ಯವಹಾರ.

ವೀರಶೈವ ಮಹಾಜನಗಳಿಗೆ ವಿನಯಪೂರ್ವಕವಾದ ಮನವಿ.

ಅಯ್ಯಾ ಮತಬಾಂಧವರೇ, ಅವಾಗಲೂ ಇಲ್ಲದ ಸ್ವಸ್ಥದಲ್ಲಿ ಸ್ವಯಂಸೇವಕರಾಗುವ ಹಕ್ಕು ಹಿಂದೂಗಳಿಗೆ ಈಗತಾನೇ ಆಂಗ್ಲೇಯ ಸರ್ಕಾರದವರಿಂದ ಅನುಗ್ರಹಿಸಲ್ಪಟ್ಟಿರುವುದಷ್ಟೆ. ಇಂಥಾ ಸುಸಮಯವನ್ನು ಕಳೆದುಕೊಳ್ಳದೆ ನಮ್ಮ ಸಮಾಜಬಾಂಧವರು ಆದಷ್ಟು ಬೇಗನೆ ಈ ಕಾರ್ಯಕ್ಕೆ ನೆರವಾಗಲೆಂದು ನಂಬುತ್ತೇನೆ ನಾವೂ ಸಾಧ್ಯವಾದಷ್ಟು ನಮ್ಮ ಸಮಾಜದವರಲ್ಲಿ ಸಮರ್ಥರಾದವರನ್ನು ಸೇರಿಸಿ ಒಂದು ಪಂಗಡವಾಗೇರ್ಪಡಿಸಿ ನಮ್ಮ ರಾಜಭಕ್ತಿಯನ್ನು ಸಮರ್ಪಿಸಬೇಕಾಗುತ್ತದೆ. ತನ್ಮೂಲಕ ದೇಶಸೇವೆಯನ್ನೂ ಕೂಡ ಮಾಡಿದಂತಾಗುತ್ತದಲ್ಲವೆ? ಹಾಗಲ್ಲದೆಹೋದರೆ ಹಿಂದುಗಳು ಅಂದರೆ ಹಿಂದುಳಿದವರೆಂಬ ಅರ್ಥವು ನಮಗೆ ಸಾರ್ಥಕವೇ ಸರಿ. ಆದರೆ ನಮ್ಮ ಸಮಾಜದವರಲ್ಲಿ ಆವ ಮಹತ್ಕಾರ್ಯಗಳನ್ನು ಮಾಡಲೂ ಔತ್ತರೇಯರೇ ಅಗ್ರೇಸರರೆಂದರೆ ಅತಿಶಯೋಕ್ತಿಯಾಗಲಾರದು. ಈ ಕಾರ್ಯವೂ ಕೂಡ ಅವರಿಂದಲೇ ಆರಂಭಿಸಲ್ಪಟ್ಟಿರುವುದು. (ಕಳೆದ ಸ್ಟಾರ್ ಸಂಚಿಕೆಯನ್ನು ನೋಡಿ) ಜಗದ್ಧಿತಾರ್ಥವಾದ ಈ ಸಮೂಹಕ್ಕೆ ಸರ್ವರೂ ಸೇರತಕ್ಕದ್ದು ಅತ್ಯವಶ್ಯಕ. ಸಂರಕ್ಷಕ ಸೈನ್ಯಕ್ಕೆ ಪ್ರಕೃತಕ್ಕೆ ೬ ಸಾವಿರ ಮಂದಿಯಾದರೆ ಸಾಕೆಂದು ಸರ್ಕಾರದವರಿಂದಪ್ಪಣೆಯಾದಂತೆ ತಿಳಿಯಬರುತ್ತದೆ. ನಮ್ಮ ದೇಶದಲ್ಲಿ ಕೇವಲ ಅಲ್ಪಸಂಖ್ಯೆಯುಳ್ಳ ಅಂದರೆ ೩೫ ಲಕ್ಷ ವೀರಶೈವರಲ್ಲಿ ಸಾಧಾರಣ ಸಹಸ್ರಕ್ಕೊಬ್ಬರಂತೆಯಾದರೂ ಸೇರಿದರೆ ೩೫೦೦ ಮೇಲಿನಸಂಖ್ಯೆಯು ಅರ್ಧಭಾಗಕ್ಕಿಂತಲೂ ಇವರೇ ಅಧಿಕರಾಗಿರುತ್ತಾರೆ. ಅದುಕಾರಣ ಇದಕ್ಕಿರುವ ಅಲ್ಪಾವಧಿಯೊಳಗಾಗಿ ನಮ್ಮ ಮತದವರು ಮುಂದುವರಿಯುವವರಾಗಲೆಂದು ಕೋರುತ್ತೇನೆ. ವೀರಶೈವ ಜನಾಂಗದಮೇಲೆ ಆಂಗ್ಲಪ್ರಭುಗಳಿಗಿರುವ ಅಭಿಮಾನವು ಅತಿಶಯವಾದದ್ದೇ ಇರುತ್ತದೆ. ಅದಕ್ಕೆ ದೃಷ್ಟಾಂತಗಳು ಅನಂತವಾಗಿವೆ. ಅದರಲ್ಲೂ ನಮ್ಮ ಔತ್ತರೇಯ ಬಂಧುಗಳಾದ ರಾವ್ ಬಹದ್ದೂರ್ ರುದ್ರಗೌಡ ಚೆನ್ನವೀರಗೌಡ ಆರಟಾಳ ಸಾಹೇಬ್ ಇವರಿಗೂ ಮೈಸೂರು ದೇಶೀಯರಾದ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಚೆಟ್ಟರವರಿಗೂ ಸಾರ್ವಭೌಮರವರಿಂದನುಗ್ರಹಿಸಲ್ಪಟ್ಟಿರುವ ಅಮೋಘವಾದ ಬಿರುದಾಂಕನಗಳೇ ನಿದರ್ಶನವಾಗಿವೆ. ಆದುದರಿಂದ ತತ್ಸಮಾಜಕರಾದ ನಾವೆಲ್ಲರೂ ನಮಕಪ್ಪಿ ಸಿಂಹ ನಮ್ಮ ಸಾಮ್ರಾಜ್ಯಸರ್ಕಾರದವರ ಸೇವೆಯನ್ನು ಮಾಡಿ ನಮ್ಮ ಸಮಾಜಗೌರವವನ್ನು ಕಾಪಾಡಿಕೊಳ್ಳಬೇಕಾಗಿರುವುದು.

ಇತಿ ಸಮಾಜಕಿಂಕರ, ಚೆಟ್ಟಿ ಕಲಿವೀರಪ್ಪ, ಬೀಳಗೋಡು.

ಧಾರವಾಡದಲ್ಲಿ ಸ್ಥಾಪಿತವಾಗಿರುವ ಕರ್ನಾಟಿಕ್ ಕಾಲೇಜಿನ ಧನನಿಧಿಗೆ ಡೆಪ್ಯುಟಿ ಕಲೆಕ್ಟರ್ ಉದ್ಯೋಗದಿಂದ ನಿವೃತ್ತರಾಗಿರುವ ರಾವ್ ಬಹದ್ದೂರ್ ರುದ್ರಗೌಡ ಆರಟಾಳ ಬಿ. ಎಸ್. ಸಿ., ಯವರು ವೀರಶೈವರಿಂದ ಎತ್ತಿರುವ ...

(ಕಳೆದವಾರದ ಶೇಷ.)

ನಗರ ಡಿವಿಜನ್ ವೀರಶೈವ ವಿದ್ಯಾವರ್ಧಕಸಂಘಕ್ಕೆ ಚಂದಾ ವಸೂಲುಮಾಡಲು ಈ ಕೆಳಗೆಕಂಡ ಮಹನೀಯರು ರಸೀತಿ ಪುಸ್ತಕಗಳನ್ನು ಪಡೆದಿರುತ್ತಾರೆ.

"೨ ನೇ ಲೀಸ್ಟು"

ಮ॥ ಕೋರಿ ಅಡಿವಪ್ಪಶೆಟ್ಟರು ಸಾಗರ, ಇವರಿಗೂ ಎಲ್ಲಾ ವಿದ್ಯಾಭಿಮಾನಿಗಳೂ, ಮತಾಭಿಮಾನಿಗಳೂ ತಮ್ಮಕಡೆ ಬಂದಾಗ ಯಥೋಚಿತವಾಗಿ ಸಹಾಯಮಾಡಬೇಕಾಗಿ ಈ ಮೂಲಕ ಕೋರಿದೆ. ಕೆ. ಹಾಲಪ್ಪ,

ಸೆಕ್ರಟರಿಗಳಿಗೋಸ್ಕರ.

ನಗರಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘದ ಫಂಡಿಗೆ ಚಂದಾಕೊಟ್ಟ ಮಹನೀಯರುಗಳ ತಪ್ಸೀಲುಪಟ್ಟಿ.

ಈವರೆಗೆ ಪತ್ರಿಕೆಯಲ್ಲಿ ಪ್ರಚುರಪಡಿಸಿದ್ದು	೧೩೨೮೧—೧೨—೩
ಮ॥ ಸುರಹೊನ್ನೆ ಹಾಲಪ್ಪನವರು, ಶಿರಾಳಕೊಪ್ಪ	೧೦೦—೦—೦
ಮ॥ ಚೆನ್ನಮಲ್ಲಪ್ಪನವರು ಹೆಡ್ಮಾಸ್ಟರ್, ಡಿ	೧೦—೦—೦
ಮ॥ ಕುಪೇಲೂರ್ ಚೆನ್ನಬಸಪ್ಪನವರು, ಡಿ	೧೦೦—೦—೦
ಮ॥ ಭೋಗಿ ಚೆನ್ನಬಸಪ್ಪನವರು, ಡಿ	೨೦೨—೦—೦
"ಟಿಕೆಟ್‌ಬಾಬತು"	
ಮ॥ ಜಿ. ಯಂ. ಮಹಾಲಿಂಗಪ್ಪನವರು, ಶಿವಮೊಗ್ಗ	೧೬—೮—೦
ಮ॥ ಜಿ. ಯಂ. ಚೆನ್ನಬಸಪ್ಪನವರು. ಡಿ	೧೦—೨—೦
ಮ॥ ಯು. ಸುಬ್ಬರಾವ್ ನಾಯಕರು, ಡಿ	೪—೦—೦
ಮ॥ ಬಿ. ರುದ್ರಪ್ಪನವರು, ಶಿವಮೊಗ್ಗ	೪—೦—೦
"ರುಸಂಡಬ್ಬಿ ಬಾಬತು"	
ಮ॥ ವೀರಪ್ಪನವರು ಸುಬ್ಬರಾವ್ ನಾಯಕರವರ ಮಂಡಿ ಶಿವಮೊಗ	೯—೪—೯
ಮ॥ ಪಟ್ಟಣಶೆಟ್ಟಿ ವೀರಪ್ಪನವರು ಶಿವಮೊಗ್ಗ	೦—೧೨—೩
ಮ॥ ಜಿ. ಯಂ. ಕಾಡಪ್ಪನವರು ಶಿವಮೊಗ್ಗ, (ಜವಳಪ್ರಸ್ತದಕಾಲದಲ್ಲಿ)	೧—೦—೦
ಜಮ್ಲಾ	೧೩೭೬೩೩—೭—೩

ಜಿ॥ ಎಂ॥ ಕಾಡಪ್ಪ, ಟ್ರೆಜರರ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 2

ಮದನೋದ್ಭವ ಗುಳಿಗೆ.

ನಪುಂಸಕತ್ವಾರಿ ತೈಲವು.

೧೯೧೭ ನೆಯ ಇಸವಿ ಸೆಪ್ಟಂಬರ್ ತಾ॥ ೨ ರಿಂದ ೧೯೧೭ ನೆಯ ಸೆಪ್ಟಂಬರ್ ತಾ॥ ೮ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಅಧಿಕ ಭಾದ್ರಪದ ಬ॥ ಪಾಡ್ಯಮಿಯಿಂದ ಅಧಿಕಭಾದ್ರಪದ ಬ॥ ಅಷ್ಟಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ತೇದಿ
2	[1] ಭಾನು	ಪಾಡ್ಯ	23-36	ಪೂಭಾ	44-39	18
3	ಸೋಮ	ಬದಿಗೆ	17-44	ಉಭಾ	40-47	19
4	ಮಂಗಳ	ತದಿಗೆ	12-15	ರೇವತಿ	36-28	20
5	ಬುಧ	ಚೌತಿ	7-20	ಅಶ್ವಿನಿ	34-41	21
6	[2] ಗುರು	ಪಂಚ	3-14	ಭರಣಿ	56-14	22
7	ಶುಕ್ರ	ಸಪ್ತಮಿ	57-19	ಕೃತ್ತಿಕೆ	32-0	23
8	[3] ಶನಿ	ಅಷ್ಟಮಿ	56-23	ರೋಹಿಣಿ	32-13	24

(1) ತಿಥಿದ್ವಯಂ (ವಾಕ್ಯರೀತ್ಯಾಪ್ರಥಮಾತಿಥಿಃ). (2) ಶ್ರೀ ಪ್ರಸನ್ನ ಕೃಷ್ಣಸ್ವಾಮಿರಥಃ (3) ಸರ್ವತ್ರ ಶ್ರೀಕೃಷ್ಣಜಯಂತೀ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ... ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪುರಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

REGISTERED NO. M. 124.

ಸಂಪುಟ ೩೦) ವೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಸೆಪ್ಟಂಬರ್ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೩೬

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ...

ಗ್ರಂಥಪ್ರಸಾರಕಮಂಡಲಿ, ವೈಸೂರು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

ಮೂರುಕಾಸು!

ಸುವಾಸಿಕ ಹುರುಕಿನ ಔಷಧ.

ಕಾಲರಾಪಿಲ್ಸ್.

ವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆಯುರ್ವೇಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಅರ್ಕಶಫಾ ಅಂದರೆ ಆರೋಗ್ಯಬಿಂದು.



ಅವುಗಳ ನಾಮಗಳು.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ.

ಅರ್ಕಶಫಾ ಕೋಥಳ, ಹೆಡ್ ಆಫೀಸ

ಮುಕ್ಕಾಮ ತಡಸ, ಬೆಳಗಾಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾನುಯತರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 41

ಯೋಗ್ಯತಾಪತ್ರಗಳು.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ವೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಸೆಪ್ಟಂಬರ್ ತಾ|| ೯ ನೆಯ ಭಾನುವಾರ.

ದೇಶಭಾಷೋದ್ಧಾರಯತ್ನ.

ಮೈಸೂರುದೇಶದಲ್ಲಿ ದೇಶಭಾಷೋದ್ಧಾರಕ್ಕೆ ತಕ್ಕಮಟ್ಟಿನ ಪ್ರಯತ್ನಗಳು ಈಚೆಗೆ ನಡೆಯುತ್ತಿರುವುವೆಂಬುದನ್ನು ಅನೇಕರು ಬಲ್ಲರು. ಭಾಷೋದ್ಧಾರಕ್ಕೆ ಭಾಷಾಸಂಸ್ಕರಣಕ್ಕಿಂತಲೂ ಗ್ರಂಥಲೋಪಗಳನ್ನು ಪರಿಹರಿಸುವುದು ಮುಖ್ಯಕಾರ್ಯವು. ಕರ್ಣಾಟಕ ವಾಙ್ಮಯದಲ್ಲಿ ಸಾಹಿತ್ಯಗ್ರಂಥಗಳಿಗೆ ಕೊರತೆಯೇನೂ ಇಲ್ಲ. ಚಾರಿತ್ರಿಕ ವೈಜ್ಞಾನಿಕಾದಿ ಗ್ರಂಥಗಳು ಮಾತ್ರ ಬಹಳ ವಿರಳವಾಗಿವೆ. ಆಧುನಿಕ ಕಾಲದಲ್ಲಿ ದೇಶದ ಐಹಿಕ ಸಂಪದಭಿವೃದ್ಧಿಗೆ ಸಾಧಕಗಳಾಗಿಯೂ, ಪ್ರಪಂಚಜ್ಞಾನವನ್ನು ಒದಗಿಸ ತಕ್ಕವಾಗಿಯೂ ಇರುವ ಗ್ರಂಥಗಳಂತೂ ಇಲ್ಲವೇ ಇಲ್ಲವೆಂದು ಹೇಳಬಹುದು. ಈ ಲೋಪದ ಪರಿಹಾರವನ್ನು ಮಾಡುವುದು ಅತ್ಯವಶ್ಯಕವೆಂಬ ಸಂಗತಿಯನ್ನು ನಾವು ಆಗಿಂದಾಗ್ಗೆ ಪ್ರಸ್ತಾಪಿಸುತ್ತಲೇ ಬಂದಿರುತ್ತೇವೆ. ಕನ್ನಡಿಗರೊಳಗೆ ಗ್ರಂಥರಚನೆಯಲ್ಲಿ ತೊಡಗಿರುವ ಆಧುನಿಕರ ಪ್ರವೃತ್ತಿಯಾದರೊ ಕಥೆಗಳು, ನಾಟಕಗಳು, ನಾವಲ್ಲುಗಳು, ಇತ್ಯಾದಿ ಜನಮನೋ ರಂಜಕಗಳಾದ ಗ್ರಂಥಗಳ ರಚನೆಯಕಡೆಗೆ ಹೆಚ್ಚಾಗಿದೆಯೇ ಹೊರತು ಭಾಷೆಯ ವೈಜ್ಞಾನಿಕ ಗ್ರಂಥ ದಾರಿದ್ರ್ಯವನ್ನು ನಿವಾರಣೆಮಾಡುವ ಕಡೆಗಿಲ್ಲ. ಒಂದುವೇಳೆ ಇದ್ದರೂ ಶಾಸ್ತ್ರೀಯಾದಿ ಗ್ರಂಥಗಳ ವಾಚನಾಭಿರುಚಿಯು ದೇಶೀಯರಲ್ಲಿ ವಿರಳವಾಗಿರುವಕಾರಣ, ಆ ಪ್ರಯತ್ನವು ನಿಷ್ಫಲವಿರುತ್ತಾಹಕರವೆಂದು ತೋರಿ ಮಾನಸಿಕ ಮಾಡಬೇಕಾಗಿ ಬರುತ್ತಿದೆ. ಲೋಕಹಿತೈಕ ಪ್ರಯೋಜನ ದೃಷ್ಟಿಯಿಂದ ಗ್ರಂಥರಚನೆ ಮಾಡುವಷ್ಟು ಉದಾರಬುದ್ಧಿಯೂ ಸ್ವಾರ್ಥತ್ಯಾಗವೂ ಶಕ್ತಿಯೂ ಈಗಣ ವಿದ್ವಜ್ಜನರಲ್ಲಿಲ್ಲವೆಂಬುದು ಕಂಡೇಇದೆ. ಹೀಗಿರುವುದರಿಂದ ಭಾಷಾಮಾತೆಯ ಪರಿಪೋಷಣ ಭಾರವನ್ನು ಕೇವಲ ವಿದ್ಯಾವಂತರ ತಲೆಯಮೇಲೆಯೇ ಹೊರಿಸಿಬಿಟ್ಟು, ಉಳಿದ ಆ ತಾಯಿಮಕ್ಕಳೆಲ್ಲಾ ಕೈಯೊದರಿಕೊಂಡು ಕುಳಿತಿರುವುದು ತರವೆ? ವಿದ್ಯಾವಂತರು ತಮ್ಮ ಜ್ಞಾನಸಹಾಯವನ್ನೂ, ಧನಿಕರು ಧನಸಹಾಯವನ್ನೂ ಪ್ರಭುಗಳು ಸಕಲ ವಿಧದ ಪ್ರೋತ್ಸಾಹವನ್ನೂ ಮಾಡಿ ಭಾಷಾಜನನಿಯನ್ನು ಉದ್ಧರಿಸಿ ಕೃತಕೃತ್ಯರಾಗಬೇಕು.

ದೇಶಭಾಷೋದ್ಧಾರ ವಿಷಯದಲ್ಲಿ ಪ್ರಜಾವರ್ಗದವರಿಂದ ನಡೆಯಬಹುದಾದ ಪ್ರಯತ್ನಗಳು ನಮ್ಮ ನೆರೆಯ ಧಾರವಾಡ ಪ್ರಾಂತದವರಲ್ಲಿರುವಷ್ಟು ನಮ್ಮಲ್ಲಿಲ್ಲ. ಅವರು ಒಂದು ಸಂಘವನ್ನು ಕಾಲುಶತಮಾನಕ್ಕೆ ಹಿಂದೆಯೇ ಸ್ಥಾಪಿಸಿ ಅದರಮೂಲಕ ಗ್ರಂಥರಚಯಿತೃಗಳಿಗೆ ಪ್ರೋತ್ಸಾಹವಿತ್ತು, ಅವರಿಂದ ಬರೆಯಿಸಿದಗ್ರಂಥಗಳನ್ನು ಪ್ರಕಟಿಸಿ, ಸಾಧ್ಯವಾದಮಟ್ಟಿಗೆ ಭಾಷಾಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ನಮ್ಮಲ್ಲಿ ಅಂಥ ಸಾಂಘಿಕ ಪ್ರಯತ್ನ ಪ್ರಸಕ್ತಿಯೇ ಇಲ್ಲ. ಅದರೆ ಇತ್ತೀಚೆಗೆ ಸಾಹಿತ್ಯಪರಿಷತ್ತು ಹೇಗೆಹೇಗೋ ನಮ್ಮಲ್ಲಿ ಉದಯಗೊಂಡು ಅಂಬೆಗಾಲಿಕ್ಕುತ್ತಿದೆ. ಇದರ ಮೂಲಕ ಭಾಷಾಪೋಷಣೆಯನ್ನು ಮಾಡಿಕೊಳ್ಳುವ ಕರ್ತವ್ಯಭಾರವಾದರೂ ಭಾಷಾಪುತ್ರರ [illegible] ಬಿದ್ದಿರುವುದು. ಈ ಪರಿಷತ್ತಿನ ಕಳೆದ ವಾರ್ಷಿಕ [illegible]ದಲ್ಲಿ ನಮ್ಮ ಶ್ರೀಮದ್ಯುವರಾಜರವರು ಅಪ್ಪಣೆಕೊಡಿಸಿದ [illegible]ಗಳು ಭಾಷಾಭಿಮಾನಿಗಳಿಗೆಲ್ಲಾ ಉಲ್ಲಾಸಕರವಾಗಿದ್ದುವು. ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರದವರಿಗೂ ದೇಶಭಾಷೋದ್ಧಾರ ವಿಷಯದಲ್ಲಿರುವ ಅಭಿಮಾನಾತಿಶಯವು ವ್ಯಕ್ತವಾಗಿರುವುದು. ಕಳೆದ ಅರ್ಥಸಾಧಕ ಸಭಾಸಮಾವೇಶಕಾಲದಲ್ಲಿ ಅದರ ಅಧ್ಯಕ್ಷಪೀಠವನ್ನಲಂಕರಿಸಿದ್ದ ದಿವಾನರವರು ಮಾಡಿದ ಭಾಷಣದಲ್ಲಿಯೂ ಕೂಡ ಅರ್ಥಸಾಧಕಸಭೆಯ ವಿದ್ಯಾಶಾಖಾಸಂಘದವರು ದೇಶಭಾಷೋದ್ಧಾರಕ್ಕಾಗಿ ಸಂಕಲ್ಪಿಸಿರುವ ಪ್ರಯತ್ನಗಳು ತಿಳಿಯಿಸಲ್ಪಟ್ಟು ಭಾಷಾಭಿಮಾನಿಗಳ ಸಂತೋಷವನ್ನೂ ಆಸೆಯನ್ನೂ ಮತ್ತಷ್ಟು ಹೆಚ್ಚಿಸಿರುವುವು. ಕರ್ಣಾಟಕ ಸಾಹಿತ್ಯಪರಿಷತ್ಪ್ರಾರಂಭಕ್ಕೆ ಅದಕ್ಕೆ ಧಾತ್ರಿಯಂತಿರುವ ಮ|| ಎಚ್.ವಿ. ನಂಜುಂಡಯ್ಯನವರು ನಮ್ಮ ಮೈಸೂರು ವಿಶ್ವವಿದ್ಯಾಲಯದ ಮುಖ್ಯ ಸೂತ್ರಧಾರಿಗಳಾಗಿರುವುದರಿಂದ ಅವರು ಈ ವಿದ್ಯಾಪೀಠದಲ್ಲಿ ದೇಶಭಾಷೋದ್ಧಾರಕ್ಕೆ ವಿಶಿಷ್ಟತರವಾದ ಮಾರ್ಗವಾವುದನ್ನಾದರೂ ಸ್ಥಾಪಿಸಲು ತಕ್ಕ ಯೋಜನೆಯನ್ನು ಮಾಡದೆ ಹೋಗಲಾರರೆಂದು ಅನೇಕರು ಮಾಡಿಕೊಂಡಿದ್ದ ನಿರೀಕ್ಷಣೆಯು ವ್ಯರ್ಥವಾಗಲಿಲ್ಲವೆಂಬುದಕ್ಕೆ ತಕ್ಕ ಸೂಚನೆಯು ಈಗ ಗೋಚರವಾಗಿರುವುದು ಅನ್ನಷ್ಟು ಸಂತೋಷಪ್ರದವು.

ಅರ್ಥಸಾಧಕ ಸಭೆಯವರ ಒತ್ತಾಸೆಯಿಂದ ಬೆಂಗಳೂರು ವಿಜ್ಞಾನಪ್ರಚಾರಿಣೀಸಮಿತಿಯವರು ಕೈಕೊಂಡಿರುವ ದೇಶಹಿತ ಕಾರ್ಯ ಕಲಾಪವನ್ನು ಕುರಿತು ಹಿಂದೆ ನಾವು ಪ್ರಸ್ತಾಪಿಸಿಯೇ ಇರುತ್ತೇವೆ. ಆ ಸಮಿತಿಯವರು ಗೊತ್ತುಮಾಡಿಕೊಂಡಿದ್ದ ಶಾಸ್ತ್ರೀಯೋಪನ್ಯಾಸಪ್ರದಾನ ಕಾರ್ಯವು ಕಳೆದ ತಿಂಗಳಕೊನೆಯಿಂದ ಬೆಂಗಳೂರಿನಲ್ಲಿ ಆರಂಭಿಸಲ್ಪಟ್ಟಿರುತ್ತದೆ. ದೇಶಹಿತ ಸಾಧಕಗಳಾದ ನವನವಾರಂಭಗಳಿಗೆ ಜೀವಾತುಗಳಾಗಿರುವನಮ್ಮ ದಿವಾನರವರು ಆ ಉಪನ್ಯಾಸ ಸಭೆಯಲ್ಲಿ ಅಧ್ಯಕ್ಷಪೀಠವನ್ನಲಂಕರಿಸಿದ್ದು ಉಪನ್ಯಾಸಕ ಸಮಿತಿಯವರಿಗೂ, ಶ್ರೋತೃಪ್ರಜಾವರ್ಗಕ್ಕೂ ಪ್ರೋತ್ಸಾಹಗೊಳಿಸಿದುದಲ್ಲದೆ, ಆ ಸಮಯದಲ್ಲಿ ಶ್ಲಾಘನೀಯವಾದ ಉಪನ್ಯಾಸವೊಂದನ್ನು ಮಾಡಿ ವಿಜ್ಞಾನವ್ಯಾಪನೆಯ ಪ್ರಯೋಜನವನ್ನೂ ಪಾಶ್ಚಾತ್ಯ ರಾಷ್ಟ್ರಗಳು ಅದರ ಬಲದಿಂದಲೇ ಪ್ರಪಂಚದಲ್ಲಿ ಮುಂದಾಗಿರುವುದನ್ನೂ ವಿವರಗೊಳಿಸಿ, ನಮ್ಮ ದೇಶದ ವಿಜ್ಞಾನ ಪ್ರಚಾರಕ ಸಮಿತಿಯವರ ಸ್ವಾರ್ಥತ್ಯಾಗಪೂರ್ವಕವಾದ ಪ್ರಯತ್ನವಿಶೇಷವನ್ನು ಕೊಂಡಾಡಿ, ಅದು ಸಫಲವಾಗಲೆಂದು ಕೋರಿ, ಉಪನ್ಯಾಸಗಳನ್ನು ಶ್ರದ್ಧೆಯಿಂದ ಕೇಳುವುದರಮೂಲಕ ದೇಶದ ಪ್ರಜೆಗಳು ಅಮೋಘವಾದ ಫಲವನ್ನುಂಟುಮಾಡಿಕೊಳ್ಳಬೇಕಾದ ಅವಶ್ಯಕತೆಯನ್ನೂ ಅಪ್ಪಣೆಕೊಡಿಸಿದರು. ಬೆಂಗಳೂರಿನಲ್ಲಿ ಈ ಉಪನ್ಯಾಸಗಳು ಮುಗಿದಬಳಿಕ ಮೈಸೂರಿನಲ್ಲೂ ನಡೆಯುವುವು. ಬೆಂಗಳೂರಿನ ಸಭೆಯ ನಡವಳಿಕೆಯನ್ನು ಕೇಳುವಲ್ಲಿ ಈ ಪ್ರಯತ್ನವು ಜನಚಿತ್ತಾಕರ್ಷಕವಾಗಿಯೂ ಸಾರ್ಥಕವಾಗಿಯೂ ಪರಿಣಮಿಸಿರುವುದೆಂದು ವ್ಯಕ್ತವಾಗಿರುವುದು. ರಾಜಧಾನಿಯಲ್ಲೂ ಹಾಗೆಯೇ ಆಗುವುದರಲ್ಲಿ ಸಂಶಯವಿಲ್ಲ. ಇವೆರಡುಕಡೆಯ ಫಲಿತಾಂಶವುವ್ಯಕ್ತವಾದನಂತರ ಸಮಿತಿಯವರು ಉಳಿದ ಡಿಸ್ಟ್ರಿಕ್ಟುಗಳ ಮುಖ್ಯಸ್ಥಲ ಮೊದಲಾದುವುಗಳಲ್ಲೂ ಉಪನ್ಯಾಸಗಳ ಏರ್ಪಾಟನ್ನು ಮಾಡದಿರಲಾರರು. ಈ ಸಮಿತಿಯವರ ಮೂಲಕ ನಡೆಯುವಕಾರ್ಯವೂ ಕೂಡ ದೇಶಭಾಷಾಸೇವೆಯ ಒಂದು ಅಂಗವೇ ಆಗಿರುವುದೆಂಬುದನ್ನು ಹೇಳಬೇಕಾಗಿಲ್ಲ.

ಮೈಸೂರು ವಿಶ್ವವಿದ್ಯಾಲಯದವರು ಮಾಡಿರುವ ನೂತನ ಪ್ರಯತ್ನವೂ ಕೂಡ ದೇಶಭಾಷಾಸೇವೆಯ ಒಂದು ಮುಖ್ಯಾಂಶವೇ ಆಗಿರುವುದು. ಏಕೆಂದರೆ—ಎಲ್ಲಿ ಅಗಾಧವಾದ ಗುಳಿಯು ಬಿದ್ದಿರುವುದೋ ಅದನ್ನು ಮುಚ್ಚಿ ಸರಿಪಡಿಸುವ ಪ್ರಯತ್ನಕ್ಕೇ ಅವರು ಮೊದಲು ಕೈಹಾಕಿರುವರು. ಎಂದರೆ—ನಮ್ಮ ಭಾಷಾಜನನಿಯಲ್ಲಿ ಯಾವತೆರದ ಗ್ರಂಥಗಳ ಕೊರತೆಯಿದ್ದಿತೋ ಅದರ ಪರಿಹಾರಕ್ಕೇ ಅವರು ಗಮನಕೊಟ್ಟಿರುವರು. ಇದಕ್ಕಾಗಿ ಅವರು ಕೈಕೊಂಡಿರುವ ಉಪಾಯವೇನೆಂದರೆ—ಕರ್ಣಾಟಕ ಭಾಷೆಯಲ್ಲಿ ಪಾಂಡಿತ್ಯವುಳ್ಳವರುಗಳು ಮೈಸೂರಿನ ಚರಿತ್ರೆ, ಭೂಗೋಳಶಾಸ್ತ್ರ, ಪ್ರಾಚೀನ ಭರತಖಂಡದ ಚರಿತ್ರೆ, ವಿದ್ಯಾಭ್ಯಾಸ ವಿಷಯ, ಅರ್ಥಶಾಸ್ತ್ರ, ಶಿಲ್ಪವಿದ್ಯೆ, ಇತ್ಯಾದಿ ವಿಷಯಕವಾಗಿ ಸುಲಭವಾಗಿಯೂ ಸಂಗ್ರಹವಾಗಿಯೂ ಇರುವ ಭಾಷಾಶೈಲಿಯಿಂದಲೂ ಕಾಲೋಚಿತವಾದ ವಿಮರ್ಶೆಯಿಂದಲೂ ಯುಕ್ತಿಯುಕ್ತವಾದಗಳಿಂದಲೂ ಕೂಡಿ ಬರೆಯತಕ್ಕ ಗ್ರಂಥಗಳಿಗೆ ಪ್ರತಿಯೊಂದಕ್ಕೂ ೫೦೦ ರೂ.ಗಳಿಂದ ೧೦೦೦ ರೂ.ಗಳ ವರೆಗಣ ಮೂರು ಬಹುಮಾನಗಳನ್ನು ಕೊಡುವುದಕ್ಕೂ, ಇಂಗ್ಲೆಂಡು ಚರಿತ್ರೆ, ಪ್ರಾಪಂಚಿಕ ಚರಿತ್ರೆ, ಪಾಶ್ಚಾತ್ಯ ರಾಜಕೀಯಶಾಸನ ಕ್ರಮ-ಇವೇ ಮೊದಲಾದ ಲೋಕೋಪಯೋಗಿ ವಿಷಯಗಳನ್ನು ಆಂಗ್ಲಗ್ರಂಥಗಳ ಆಧಾರದಮೇಲೆ ಯುಕ್ತಿಯುಕ್ತವಾಗಿ ಕನ್ನಡದಲ್ಲಿ ಬರೆದ ಗ್ರಂಥಗಳಿಗೂ ಸಹ ಪ್ರತಿಯೊಂದಕ್ಕೂ ೫೦೦ಕ್ಕೆ ಕಡಿಮೆಯಿಲ್ಲದೆ ೧೦೦೦ ರೂ.ಗೆ ಹೆಚ್ಚಿಲ್ಲದಿರುವಂಥ ಮೂರು ಬಹುಮಾನಗಳನ್ನು ಕೊಡುವುದಕ್ಕೂ ಏರ್ಪಡಿಸಿದ್ದಾರೆ. ಈ ಗ್ರಂಥಗಳೆಲ್ಲಾ ಲಕ್ಷಣಬದ್ಧವಾದ ಸರಳಭಾಷೆಯಿಂದ ಸಂಗ್ರಹವಾಗಿ ಬರೆಯಲ್ಪಟ್ಟುದಾಗಿರಬೇಕು. ದೇಶಕಾಲವರ್ತಮಾನ ಸ್ಥಿತಿಗನುಸರಿಸಿದ ವಿಷಯ ಪ್ರತಿಪಾದನೆಯುಳ್ಳವಾಗಿರಬೇಕು. ಹೀಗೆ ಬರೆಯಲ್ಪಟ್ಟು ಬಂದ ಗ್ರಂಥಗಳಲ್ಲಿ ಉತ್ತಮವಾಗಿ ತೋರಿದುವಕ್ಕೆ ಮಾತ್ರವೇ ಮೇಲೆಕಂಡ ಬಹುಮಾನವು ದೊರೆಯುವುದು. ಬರೆಯಲ್ಪಟ್ಟ ಗ್ರಂಥಗಳ ಮೂಲಪ್ರತಿಗಳು ಏಪ್ರಿಲ್ ತಿಂಗಳು ತಾ|| ೩೦ ರೊಳಗಾಗಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರರ ಬಳಿಗೆ ಕಳುಹಿಸಲ್ಪಡಬೇಕು. ಈ ವಿಷಯವಾಗಿ ಹೆಚ್ಚಿಗೆ ತಿಳಿಯಬೇಕಾದವರು ಅವರಿಗೇ ಬರೆದು ತಿಳಿದುಕೊಳ್ಳಬಹುದು. ಬಹುಮಾನಕ್ಕೆ ಅರ್ಹವೆಂದು ಸಿದ್ಧಾಂತಿತವಾದ ಗ್ರಂಥಗಳಲ್ಲಿಯ ನ್ಯೂನಾತಿರೇಕಗಳನ್ನು ಸರಿಪಡಿಸುವ ಅಧಿಕಾರವನ್ನು ವಿಶ್ವವಿದ್ಯಾಲಯದವರು ಇಟ್ಟುಕೊಂಡಿರುವರು.

ನಮ್ಮ ವಿಶ್ವವಿದ್ಯಾಲಯದವರು ದೇಶಭಾಷೋದ್ಧಾರಕ್ಕೆ ಈ ನೂತನ ಪ್ರೋತ್ಸಾಹಕ್ರಮವನ್ನೇರ್ಪಡಿಸಿದುದಕ್ಕಾಗಿ ಅವರು ಭಾಷಾಭಿಮಾನಿಗಳೆಲ್ಲರಿಂದಲೂ ವಂದ್ಯರಾಗಿರುತ್ತಾರೆ. ತಕ್ಕ ಪ್ರೋತ್ಸಾಹವಿಲ್ಲವೆಂದೂ ಸಹಾಯವಿಲ್ಲವೆಂದೂ ಒಳಗೊಳಗೇ ಕೊರಗುತ್ತಿದ್ದ ನಮ್ಮದೇಶದ ಪಂಡಿತವರ್ಯರುಗಳು ಈ ಸುಸಂಧಿಯಲ್ಲಿ ಮುಂದಕ್ಕೆ ಬಂದು, ತಂತಮ್ಮ ಜ್ಞಾನಶಕ್ತಿಯನ್ನು ಮೇಲೆಹೇಳಿದ ನೂತನ ಗ್ರಂಥಗಳ ರಚನೆಯಲ್ಲಿ ವಿನಿಯೋಗಿಸಿ ದೇಶಹಿತವನ್ನೂ ಆತ್ಮಲಾಭವನ್ನೂ ಸಹ ಮಾಡಿಕೊಂಡು, ಭಾಷಾಸೇವೆಯ ಮಹಾ ಪ್ರಯೋಜನದ ಮೂಲಕ ಶಾಶ್ವತ ಕೀರ್ತಿಯನ್ನು ಸಂಪಾದಿಸಿಕೊಂಡು, ಇಂಥ ಪ್ರೋತ್ಸಾಹವನ್ನು ಮತ್ತಷ್ಟು ಹೆಚ್ಚಿಸಿ ಶಾಶ್ವತಗೊಳಿಸಬೇಕೆಂಬ ಬುದ್ಧಿಯನ್ನು ಗೌರ್ನಮೆಂಟಿನವರಿಗೆ ಉಂಟುಮಾಡಿಕೊಡದೆ ಇರಲಾರರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಟ್ಟಣದಲ್ಲಿ ಪ್ಲೇಗುರೋಗವು ತಲೆದೋರಿರುವುದೆಂದು ಕೇಳುತ್ತೇವೆ.

ಮೈಸೂರು ರೈಲ್ವೆ ಸೆಕ್ರೆಟರಿಯವರ ಆಫೀಸು ಬರುವ ನವಂಬರ್ ತಿಂಗಳಿಂದ ರಾಜಧಾನಿಗೆ ತರಲ್ಪಡುವುದು.

ಕಾಕನಕೋಟೆ ಕಾಡಿನಲ್ಲಿ ಆನೆ ಖೆಡ್ಡಾದ ಏರ್ಪಾಟು ಬರುವ ನವಂಬರ್ ತಿಂಗಳಲ್ಲಿ ನಡೆಯಲು ಗೊತ್ತಾಗಿರುವುದು.

ಮೈಸೂರು ಮಹಾರಾಜ ಕಾಲೇಜಿನ ಚರಿತ್ರೆ ಮತ್ತು ಸಂಪಚ್ಛಾಸ್ತ್ರ ಇವುಗಳ ಬೋಧಕತ್ವಕ್ಕೆ ಶ್ರೀಮತಿ ಅಭಯಾಂಬಾಳ್ ಬಿ.ಎ., ಯವರು ನಿಯಮಿಸಲ್ಪಟ್ಟಿರುತ್ತಾರೆ.

ಮ|| ಡಿ. ಎಂ. ನರಸಿಂಗರಾಯರು ಬಿಟ್ಟ ಗೌರ್ನಮೆಂಟ್ ಜನರಲ್ ಸೆಕ್ರೆಟರಿ ಕೆಲಸಕ್ಕೆ ಮ|| ಸಿ. ಎಸ್. ಬಾಲಸುಂದರಂ ಅಯ್ಯರವರು ನಿಯಮಿಸಲ್ಪಟ್ಟಿರುತ್ತಾರೆ.

ಮ|| ಡಿ. ಎಂ. ನರಸಿಂಗರಾಯರವರು ಸಭಾಸಂಸ್ಥಾನದ ಮಂತ್ರಿಪದವಿಯನ್ನು ವಹಿಸಿಕೊಳ್ಳುವುದಕ್ಕಾಗಿ ಬರುವ ತಾ|| ೧೩ ರಲ್ಲಿ ಬೆಂಗಳೂರಿಂದ ಪ್ರಯಾಣಮಾಡುವವರಾಗಿದ್ದಾರೆ.

ಇದೇ ತಿಂಗಳು ತಾ|| ೧೯ ಮತ್ತು ೨೦ ರಲ್ಲಿ ಗೌರೀ ಗಣೇಶನ ಹಬ್ಬವಾದ ಪ್ರಯುಕ್ತ ಅವೆರಡು ದಿನಗಳಲ್ಲೂ ಸರ್ಕಾರದ ಎಲ್ಲ ಕೋರ್ಟು ಕಚೇರಿಗಳೂ ಪಾಠಶಾಲೆಗಳೂ ಮುಚ್ಚಲ್ಪಡುವುವು.

ಬರುವ ತಾ|| ೨೮ ರಲ್ಲಿ ನಿಯಮನಿರ್ಮಾಣ ಸಭೆಯು ಬೆಂಗಳೂರಿನಲ್ಲಿ ಕೂಡುವುದು. ಪುರಪಾಲಕಸಂಘ ಶಾಸನವಿಷಯವಾಗಿಯೂ, ಗ್ರಾಮಾಭಿವೃದ್ಧಿ ಶಾಸನ ವಿಷಯವಾಗಿಯೂ ಚರ್ಚೆಗಳು ನಡೆಯುವುವು.

ಬೆಂಗಳೂರು ದಂಡಿನಲ್ಲಿ ೫ ಮಂದಿ ಸೈನಿಕೋದ್ಯೋಗಿಗಳು ತಮ್ಮ ಸೈಕಲ್ಲುಗಳಿಗೆ ದೀಪವಿಲ್ಲದೆ ರಾತ್ರಿಹೊತ್ತು ನಡೆಯಿಸಿದ ತಪ್ಪಿತಕ್ಕಾಗಿ ಮ್ಯಾಜಿಸ್ಟ್ರೇಟರಿಂದ ತಲೆಗೆ ೫ ರೂ.ನಂತೆ ಅರ್ಥದಂಡ ವಿಧಿಸಲ್ಪಟ್ಟರು.

ನಂಜನಗೂಡಿನಿಂದ ಕೆಂಗೇರಿವರೆಗಣ ಲೋಹಮಾರ್ಗದ ಆಡಳಿತವೆಲ್ಲಾ ಬರುವ ವರ್ಷದಾರಭ್ಯ M.S.M. ರೈಲ್ವೆ ಕಂಪೆನಿಯವರ ಕೈತಪ್ಪಿ ನಮ್ಮ ಸರ್ಕಾರದವರ ವಶಕ್ಕೆ ತೆಗೆದುಕೊಳ್ಳಲ್ಪಡುವುದೆಂದು ಕೇಳುತ್ತೇವೆ.

ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ ಲೈಟ್ ರೈಲ್ವೆ ಹಾಕುವುದಕ್ಕೆ ಗೌರ್ನಮೆಂಟಿನ ಅನುಮೋದನೆಯು ದೊರೆತಿರುವುದು. ಬರುವ ಅಕ್ಟೋಬರ್ ತಿಂಗಳಿಂದ ಸರ್ವೆ ಕೆಲಸ ಮೊದಲಾದುವುಗಳಿಗೆ ಉಪಕ್ರಮವಾಗುವುದು.

ಬರುವ ನವರಾತ್ರಿಯ ಕಾಲದಲ್ಲಿ ರಾಜಧಾನಿಯಲ್ಲಿ ಪರಸ್ಪರ ಸಹಾಯಕಸಂಘಗಳ ೭ ನೆ ಮಹಾಸಭೆಯು ನಡೆಯಲು ಏರ್ಪಾಟಾಗಿರುವುದು. ಸಭೆಯ ವೆಚ್ಚಕ್ಕೆ ೨|| ಸಾವಿರ ರೂ.ಗಳು ಹಿಡಿಯಬಹುದೆಂದೂ, ಈ ಹಣವನ್ನು ಸಂಸ್ಥಾನದ ಎಲ್ಲ ಪರಸ್ಪರ ಸಹಾಯಸಂಘಗಳ ಚಂದಾಮೂಲಕ ಕೂಡಿಸತಕ್ಕುದೆಂದೂ ನಿರ್ಧರವಾಗಿದೆ.

ಈ ತಿಂಗಳು ತಾ|| ೧ ರಿಂದ ಮೈಸೂರು—ಹಾಸನ—ಅರಸೀಕೆರೆ ಲೋಹಮಾರ್ಗದಲ್ಲಿ ಸಾಮಾನುಗಳ ಬಂಡಿಯು ನಡೆಯಿಸಲ್ಪಡುತ್ತಿರುವುದಷ್ಟೆ. ಈ ಮಾರ್ಗದಲ್ಲಿರುವ ಮೈಸೂರು, ಬೆಳಗುಳ, ನಾಗರಕಟ್ಟೆ, ಎಡತೊರೆ, ಹೊಸಅಗ್ರಹಾರ, ಅಕ್ಕಿಹೆಬ್ಬಾಳು, ಮಂದಗೆರೆ, ಹೊಳೆನರಸೀಪುರ, ಮಾವಿನಕೆರೆ, ಅಂಬುಗ, ಹಾಸನ, ದುದ್ದ, ಭಾಗೇಶಪುರ, ಹಾರನಹಳ್ಳಿ, ಅರಸೀಕೆರೆ-ಈ ನಿಲ್ದಾಣಗಳಲ್ಲಿ ಸಾಮಾನನ್ನು ಸಾಗಿಸಲೂ ಕೊಡಲೂ ಏರ್ಪಡಿಸಲ್ಪಟ್ಟಿರುವುದು.

ನಮ್ಮ ದೇಶದಿಂದ ಜಪಾನಿಗೆ ಹೋಗಿದ್ದ ೬ ಮಂದಿಗಳಲ್ಲಿ ಹಿಂದೆ ನಿಂತಿದ್ದ ರಾಜಧಾನಿಯ ಮ|| ರಂಗಯ್ಯನವರು ಕಳೆದ ತಿಂಗಳ ಕೊನೆಯಲ್ಲಿ ಭರತಖಂಡವನ್ನು ಸೇರಿದರು. ಇವರು ರಾಮೇಶ್ವರ ಯಾತ್ರೆಯನ್ನೂ ಕುಂಭಕೋಣ ಚಿದಂಬರ ಮೊದಲಾದ ಕ್ಷೇತ್ರಗಳ ಯಾತ್ರೆಯನ್ನೂ ಮಾಡಿಕೊಂಡು ರಾಜಧಾನಿಗೆ ಬರುವವರಾಗಿರುವರು. ಇವರು ದೇವಾಂಗ ಕುಲಸ್ಥರು. ಜಪಾನಿನಲ್ಲಿದ್ದ ಕಾಲದಲ್ಲಿ ನೂಲಿಗೆ ಬಣ್ಣ ಕಟ್ಟುವುದು ನೆಯ್ಗೆಯ ಕುಶಲತೆ ಮೊದಲಾದುವುಗಳನ್ನು ತಿಳಿದುಕೊಂಡು ಬಂದಿರುವರು.

ಯುದ್ಧವಾರ್ತೆಯು

ಪಶ್ಚಿಮರಣರಂಗ—ರಷ್ಯಾ ರಂಗ ಹೊರತಾಗಿ ಉಳಿದ ಎಲ್ಲ ರಂಗಗಳ ವಾರ್ತೆಯೂ ಮಿತ್ರಮಂಡಲಿಯವರ ಗೆಲುವನ್ನೇ ಸೂಚಿಸುತ್ತಿವೆ. ಪಶ್ಚಿಮ ರಂಗದಲ್ಲಿ ಜರ್ಮನರು ತಮ್ಮ ವಿಪರೀತ ಸೈನ್ಯಗಳನ್ನು ಬಲಿಯಿಕ್ಕುತ್ತಲೇ ಇದ್ದಾರೆ. ಕಳೆದ ವಾರದಲ್ಲಿ ಬಂದಿರುವ ವಾರ್ತೆಗಳೊಳಗೆ ಚೆಮಿನ್‌ಡೇಸ್ ಡಮ್ಸ್‌ನ ಬಳಿಯಣ ಯುದ್ಧವಿವರಣವು ಮಹತ್ತರವಾಗಿದೆ. ಈ ಬಳಿಯಲ್ಲಿ ಫ್ರೆಂಚ್ ಸೈನ್ಯಗಳು ೫ ತಿಂಗಳಿಂದ ಕಾದಾಡುತ್ತಿವೆ. ಕಳೆದ ವರ್ಷ ವರ್ಡನ್ನಿನ ಯುದ್ಧವು ಎಷ್ಟು ಭಯಂಕರವಾಗಿ ಸಾಗಿತೋ ಇಲ್ಲಿಯ ಯುದ್ಧವೂ ಹಾಗೆಯೇ ಸಾಗಿತು. ವರ್ಡನ್ ರಂಗದಷ್ಟೇ ಈ ರಂಗವೂ ವಿಸ್ತಾರವಾಗಿದ್ದಿತು. ಮೇ ತಾ|| ೫ ರಿಂದ ಆಗಸ್ಟ್ ತಾ|| ೨೦ ರವರೆಗೂ ಜರ್ಮನರು ಈ ಬಳಿಯಣ ರಂಗದಲ್ಲಿ ಫ್ರೆಂಚರಮೇಲೆ ತಮ್ಮ ೪೯ ಪಟಾಲಮ್ಮುಗಳನ್ನು ನುಗ್ಗಿಸಿ ಯುದ್ಧಮಾಡಿದರು. ವರ್ಡನ್ ರಂಗದಲ್ಲಿ ಆದ್ಯಂತವಾಗಿ ೨೫ ಪಟಾಲಮ್ಮುಗಳನ್ನು ವಿನಿಯೋಗಿಸಿದ್ದರು. ವರ್ಡನ್ ರಂಗದಲ್ಲಿ ಫ್ರೆಂಚರು ೫೮೬೩ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿದ್ದರು. ಈ ರಂಗದಲ್ಲಾದರೊ ೮೫೬೨ ಮಂದಿಯನ್ನು ಸೆರೆಹಿಡಿದಿರುವರು. ಇದರಮೇಲೆ ಮೃತರಾಗಿಯೂ ಗಾಯಗೊಂಡು ಅಂಗವಿಕಲರಾಗಿ ನಿರುಪಯೋಗಿಗಳಾಗಿಯೂ ಹೋದ ಸೈನಿಕರು ಅಪರಿಮಿತರಾಗಿರುವರು. ಇದನ್ನು ನೋಡುವಲ್ಲಿ ವರ್ಡನ್ ರಂಗಕ್ಕಿಂತ ಚೆಮಿಂಡೇಸ್‌ಡೆಮ್ಸ್ ರಂಗದಲ್ಲೇ ಜರ್ಮನರಿಗೆ ಹೆಚ್ಚು ನಷ್ಟವಾಗಿರುವುದೆಂಬುದು ಸ್ಪಷ್ಟವಾಗುತ್ತದೆ. ಈ ರಂಗದಲ್ಲಿ ಜರ್ಮನರು ೧೦೭ ದಿನಗಳ ಕಾಲದಲ್ಲಿ ೪೦ ಆವೃತ್ತಿ ಫ್ರೆಂಚರಮೇಲೆ ಬಿದ್ದು ಕಾದಾಡಿದರು. ಆದರೂ ಅಪರಿಮಿತವಾದ ನಷ್ಟವನ್ನು ಜರ್ಮನರು ಅನುಭವಿಸಬೇಕಾಯಿತೇ ಹೊರತು ಫ್ರೆಂಚರು ಬೇಸರುಗೊಳ್ಳಲೂ ಇಲ್ಲ, ಒಂದು ಹೆಜ್ಜೆಯನ್ನು ಹಿಮ್ಮೆಟ್ಟಲೂ ಇಲ್ಲ. ಬೆಲ್ಜಿಯಮ್ಮಿನಲ್ಲಿ ಫ್ರಾನ್ಸ್ ಮತ್ತೂ ಬೆಲ್ಜಿಯಂ ಸೈನ್ಯಗಳು ಬ್ರೀಗಾರ್ಟ್ ಮತ್ತೂ ಬಿಕ್ಸ್‌ಕೋಟು ರಂಗಗಳಲ್ಲಿ ಬಲವಾಗಿ ಫಿರಂಗಿ ಕಾಳಗವನ್ನು ಮಾಡಿರುತ್ತಾರೆ. ಎಯ್ಸನ್ ನದಿಯ ಹತ್ತಿರ ನಡೆಯಿಸಿದ ಯುದ್ಧದಲ್ಲಿ ಮಿತ್ರಮಂಡಲಿಯವರು ಉದ್ದೇಶಪಟ್ಟಿದ್ದ ಸ್ಥಾನಗಳನ್ನೆಲ್ಲಾ ವಶಪಡಿಸಿಕೊಂಡರು. ಹಾರ್ಟಬೀಸಿನ ಬಳಿಯಲ್ಲೂ ಷಾಂಪೇನಿನಲ್ಲೂ ಕೆಲ ಕಂದಕಗಳನ್ನು ವಶಪಡಿಸಿಕೊಂಡರು. ಇಂಗ್ಲೀಷ್ ಸೈನಿಕರೂ ಕೂಡ ಅವ್ಯಾಹತವಾಗಿ ಯುದ್ಧವನ್ನು ನಡೆಯಿಸುತ್ತ ಕೆಲ ಶತ್ರುಸ್ಥಾನಗಳನ್ನು ಹಿಡಿದಿದ್ದಾರೆ. ಕಳೆದ ಆಗಸ್ಟ್ ತಿಂಗಳಿನಲ್ಲೆಲ್ಲಾ ಇಂಗ್ಲೀಷರು ೧೮೨೯೬ ಮಂದಿ ಶತ್ರುಸೈನಿಕರನ್ನೂ ಉದ್ಯೋಗಿಗಳನ್ನೂ ೩೮ ಫಿರಂಗಿಗಳನ್ನೂ ೨೦೦ ಮಿಷನ್ ಫಿರಂಗಿಗಳನ್ನೂ ೭೩ ಕಂದಕಗಳ ಫಿರಂಗಿಗಳನ್ನೂ ಹಿಡಿದುಕೊಂಡಿದ್ದಾರೆ.

ರಷ್ಯಾರಂಗ—ಇಲ್ಲಿಯ ಸ್ಥಿತಿಗತಿಗಳು ಇನ್ನೂ ಶೋಚನೀಯವಾಗಿಯೇ ಇವೆ. ತಕ್ಕಷ್ಟು ಸೈನ್ಯಸಹಾಯವು ನಮಗೆ ಒದಗಿ ರಿಗಾ ಸಿಂಧುಶಾಖೆಯನ್ನು ನಾವು ಕಾಪಾಡಿಕೊಳ್ಳದಿದ್ದರೆ ಶತ್ರುಗಳಿಗೆ ಪೆಟ್ರೋಗ್ರೇಡಿನ ಮೇಲೆ ನುಗ್ಗಿ ಹೋಗುವುದು ಸುಲಭವಾಗುವುದೆಂದು ರಷ್ಯನ್ ಜನರಲ್ ಕಾರ್ನಿಲಾಫ್‌ರವರು ಮೊನ್ನೆವಾರದಲ್ಲಿ ಮಾಸ್ಕೋಪಟ್ಟಣದ ಸಭೆಯಲ್ಲಿ ಹೇಳಿದ್ದರಷ್ಟೆ. ಅದು ಈಗ ಜ್ಞಾಪ್ತಿಗೆ ಬರುವಂತಾಗಿದೆ. ಆದರೆ ಇಷ್ಟು ಬೇಗನೆ ರಿಗಾಪಟ್ಟಣವು ಶತ್ರು ವಶವಾಗಿ ಹೋಗುವುದೆಂದು ಎಣಿಸುವಂತಿರಲಿಲ್ಲ. ರಿಗಾಕ್ಕೆ ಪಶ್ಚಿಮದಲ್ಲಿ ೧೮ ಮೈಲಿಗಳದೂರದೊಳಗೆ ಶತ್ರುಗಳು ಡ್ವಿನಾನದಿಯನ್ನು ದಾಟಿದರು. ಅತ್ತಕಡೆಯಿಂದ ಶತ್ರುಗಳ ಒತ್ತಾಟವು ಬಲವಾಗಲಾಗಿ ಅದನ್ನು ತಡೆದುಕೊಳ್ಳಲಾರದೆ ರಷ್ಯನರು ಆ ಪಟ್ಟಣದಲ್ಲಿದ್ದ ಕೋಟೆಗಳನ್ನೆಲ್ಲಾ ಧ್ವಂಸಮಾಡಿ ಸೈನ್ಯವನ್ನೆಲ್ಲಾ ಹೊರಕ್ಕೆ ಸಾಗಿಸಿಕೊಂಡು ಪಟ್ಟಣವನ್ನು ಬಿಟ್ಟುಕೊಟ್ಟು ಈಶಾನ್ಯದಕಡೆಗೆ ಹಿಮ್ಮೆಟ್ಟಿಹೋಗುತ್ತಿರುವರು. ಶತ್ರುಗಳು ರಿಗಾತೀರದಲ್ಲಿರುವ ಗ್ರಾಮಗಳನ್ನೆಲ್ಲಾ ಗುಂಡಿನೇಟಿನಿಂದ ಧ್ವಂಸಪಡಿಸುತ್ತಿರುವರು. ಈಗ ಶತ್ರುಗಳು ರಿಗಾಕ್ಕೂ ಪೆಟ್ರೋಗ್ರೇಡಿಗೂ ಇರುವ ಲೋಹಮಾರ್ಗವನ್ನು ಸ್ವಾಧೀನಪಡಿಸಿಕೊಳ್ಳುವ ಉದ್ಯಮದಲ್ಲಿದ್ದಾರೆ. ರಿಗಾಪಟ್ಟಣವನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ ಮುಖ್ಯಸೇನಾನಾಯಕರಾಗಿದ್ದ ಬವೇರಿಯಾ ಯುವರಾಜರಾದ ಲಿಯೋಪಾಲ್ಡ್‌ರವರನ್ನು ಕೈಸರ್‌ರವರು ಬಹಳ ಹೊಗಳಿ, ದೈವಸಹಾಯದಿಂದ ನೀವು ಇನ್ನೂ ಜಯಶಾಲಿಗಳಾಗಿ ಮುಂದಕ್ಕೆ ನುಗ್ಗಿರಿ ಎಂದು ಪ್ರೋತ್ಸಾಹಿಸಿದ್ದಾರೆ. ಈ ರಿಗಾ ಪತನವನ್ನು ನೋಡಿದಮೇಲಾದರೂ ರಷ್ಯಾಸೈನಿಕರಲ್ಲೂ ಪ್ರಜೆಗಳಲ್ಲೂ ಸಮರೋತ್ಸಾಹವು ಹುರಿದುಂಬಿ ಶತ್ರುಮರ್ದನಕ್ಕೆ ತಕ್ಕ ಸನ್ನಾಹವಾದೀತೋ ಹೇಗೋ ನೋಡಬೇಕು. ಜರ್ಮನರು ರಿಗಾ ಸಿಂಧು ಶಾಖೆಯಲ್ಲಿ ತಮ್ಮ ನೌಕಾದಳವನ್ನು ಸೇರಿಸುತ್ತಿರುವರೆಂದು ಸುದ್ದಿಯಿದೆ.

ಇಟಲಿ ರಂಗ—ಇಟಲಿಯವರು ಟ್ರೀಸ್ಟೆಯಿಟಿಗೆ ಪೂರ್ವದಲ್ಲಿ ಇನ್ನೂ ಮುಂದಕ್ಕೆ ಸಾಗುತ್ತಿದ್ದಾರೆ. ಇಟಲಿಯವರ ಕೈಯು ಬಲವಾಗಿರುವುದನ್ನು ಕಂಡು ಶತ್ರುಗಳು ತಮ್ಮ ಸೈನ್ಯಗಳನ್ನು ರುಮೇನಿಯಾ ರಂಗದಿಂದ ಇಲ್ಲಿಗೆ ಕರೆಯಿಸಿಕೊಳ್ಳುತ್ತಿದ್ದಾರೆ. ಜರ್ಮನರು ಕೂಡ ಆಸ್ಟ್ರಿಯನ್ನರಿಗೆ ಸಹಾಯಾರ್ಥವಾಗಿ ಸೈನ್ಯವನ್ನು ಕಳುಹಿಸಿಕೊಡುತ್ತಿದ್ದಾರೆ. ಇಟಲಿಯವರ ಉಲ್ಬಣದಿಂದ ಶತ್ರುಗಳ ಉಳಿದರಂಗದ ಸೇನಾಶಕ್ತಿಯು ಕುಗ್ಗಲು ಅವಕಾಶವಾಗುತ್ತಿದೆ. ಇದರಿಂದ ರುಮೇನಿಯಾದವರಮೇಲೆ ಶತ್ರುಗಳು ಮಾಡುತ್ತಿದ್ದ ಆಕ್ರಮಣಶಕ್ತಿಯೂ ಕುಗ್ಗುವುದರಲ್ಲಿ ಅಭ್ಯಂತರವಿಲ್ಲ. ಆಗ್ಗೆ ರುಮೇನಿಯಾದವರು ಮಾಲ್ಡೇವಿಯಾವನ್ನು ಶತ್ರುಗಳ ಬಾಧೆಯಿಂದ ಕಾಪಾಡಿಕೊಳ್ಳುವರೆಂಬುದಕ್ಕೆ ಸಂಶಯವಿಲ್ಲ. ಈಗ ರುಮೇನಿಯನ್ನರು ಮಾಲ್ಡೇವಿಯಾದಲ್ಲಿ ಬಹಳ ತೀಕ್ಷ್ಣವಾಗಿ ಶತ್ರುಗಳನ್ನು ಪ್ರತಿಭಟಿಸುತ್ತಿದ್ದಾರೆ. ಇಟಲಿ ವೈಮಾನಿಕರು ಟ್ರೀಸ್ಟ ಪಟ್ಟಣದಮೇಲೆ ಹಲವುಬಾರಿ ಸಿಡಿಮದ್ದುಗಳನ್ನು ಸುರಿಸಿರುತ್ತಾರೆ. ಆಗಸ್ಟ್ ತಿಂಗಳ ಕೊನೆಯವರೆಗೆ ಇಟಲಿಯವರ ಸೆರೆಮನೆಯಲ್ಲಿ ೨೬೫೫೧ ಮಂದಿ ಶತ್ರುಸೈನಿಕರೂ ಉದ್ಯೋಗಿಗಳೂ ಸೇರಿಸಲ್ಪಟ್ಟಿದ್ದರು. ಈಚೆಗೆ ಇವರು ಬೆಯ್ನಸಿಜ್ಜಾ ಸೀಠಭೂಮಿಯನ್ನು ವಶಪಡಿಸಿಕೊಂಡರು. ಮತ್ತೂ ಟ್ರೀಸ್ಟ ಪಟ್ಟಣದ ರಕ್ಷಣೆಗೆ ಶತ್ರುಗಳಿಗೆ ಬಹು ಅನುಕೂಲವಾಗಿದ್ದ ೨೦೦೦ ಅಡಿಯೆತ್ತರವುಳ್ಳ ಮಾಂಟಿಸ್ಯಾನ್ ಗೇಬ್ರಿಯಲ್ ಎಂಬ ಬೆಟ್ಟವನ್ನೂ ಕೂಡ ವಶಪಡಿಸಿಕೊಂಡರು. ಇದು ಗೋರಿಜಿಯಾಕ್ಕೆ ಈಶಾನ್ಯದಲ್ಲಿ ೪ ಮೈಲಿಗಳ ದೂರದೊಳಗಿದೆ. ಬಹಳ ಜಾಗರೂಕತೆಯಿಂದ ಏರ್ಪಡಿಸಲ್ಪಟ್ಟ ರಕ್ಷಣೆಗಳಿಂದ ಇದು ಭದ್ರವಾಗಿದ್ದಿತು. ಕಾರ್ಸೋರಂಗದಲ್ಲಿ ಈಗ ಇಟಲಿಯವರಮೇಲೆ ಜರ್ಮನಿ ಆಸ್ಟ್ರಿಯಾಸೈನ್ಯಗಳೆರಡೂ ಯುದ್ಧಮಾಡುತ್ತಿವೆ.

ಆಕಾಶಯಾನಗಳು.—ಶತ್ರು ವಿಮಾನಗಳು ಕಳೆದವಾರದಲ್ಲಿ ಇಂಗ್ಲೆಂಡಿಗೆ ಸೇರಿದ ಕೆಂಟ್ ಜಿಲ್ಲೆಯ ಮೇಲಕ್ಕೆ ಬಂದು ಕೆಲ ಸಿಡಿಮದ್ದುಗಳನ್ನು ಹಾಕಿದುವು. ನಷ್ಟವು ಬಹಳ ಸ್ವಲ್ಪವಾಗಿ ಆಯಿತು. ಡೋವರ್ ಪಟ್ಟಣದ ಮೇಲೆ ಒಬ್ಬ ವೈಮಾನಿಕನು ಹಾಕಿದ ಸಿಡಿಮದ್ದಿನಿಂದ ಒಬ್ಬನು ಸತ್ತು ೬ ಮಂದಿಗೆ ಗಾಯವಾಯಿತು. ಮತ್ತೊಂದು ದಿನದ ರಾತ್ರಿಯೂ ಶತ್ರುವಿಮಾನಗಳು ಬಂದು ಅನೇಕ ಸ್ಥಲಗಳಮೇಲೆ ಸಿಡಿಮದ್ದುಗಳನ್ನು ಹಾಕಿದುವು. ಇಂಗ್ಲೀಷ್ ವಿಮಾನಗಳು ಅಟ್ಟಿಕೊಂಡು ಹೋಗಲು ಶತ್ರುಗಳು ಓಡಿಹೋದರು. ಇನ್ನೊಂದುದಿನ ರಾತ್ರಿ ಬೆಳದಿಂಗಳಲ್ಲೇ ಶತ್ರುವಿಮಾನಗಳು ಬಂದು ಲಂಡನ್ ಜಿಲ್ಲೆಯಮೇಲೂ ಉಳಿದಕಡೆಯೂ ಹಾಕಿದ ಸಿಡಿಮದ್ದುಗಳಿಂದ ಅನೇಕ ಜನರು ಸತ್ತಿರುವರೆಂದೂ ಕೆಲವು ಸೈನಿಕ ನಷ್ಟವು ಕೂಡ ಉಂಟಾಗಿರುವುದೆಂದೂ ವರ್ತಮಾನಬಂದಿದೆ. ವಿವರಣವು ಇನ್ನೂ ವ್ಯಕ್ತಪಟ್ಟಿಲ್ಲ. ಈಸಲ ಶತ್ರುಗಳು ಹಾಕಿದ ಸಿಡಿಮದ್ದುಗಳು ಬಹಳ ದೊಡ್ಡವಾಗಿದ್ದುವು. ಒಂದುಕಡೆ ಸಿಡಿಮದ್ದಿನ ಘಾತದಿಂದ ಭೂಮಿಯು ೪೦ ಅಡಿಯಷ್ಟು ಆಳಬಿದ್ದಿದ್ದಿತು. ಇಂಗ್ಲೀಷರ ನೌಕಾವಿಮಾನಗಳು ಕಳೆದಭಾನುವಾರ ರಾತ್ರಿ ಶತ್ರುಗಳ ನೌಕಾ ನಿರ್ಮಾಣ ಸ್ಥಲಗಳ ಮತ್ತೂ ಸಬ್‌ಮೆರೀನುಗಳಿರುವ ಸ್ಥಲಗಳಮೇಲೆ ಹೋಗಿ ಸಿಡಿಮದ್ದುಗಳನ್ನು ಹಾಕಿ ಸುಟ್ಟರು. ಬ್ರೂಜಸ್ಸಿನ ಹತ್ತಿರ ಲೋಹಮಾರ್ಗಗಳಮೇಲೆ ಇವರು ಹಾಕಿದ ಸಿಡಿಮದ್ದುಗಳಿಂದ ದಳ್ಳುರಿಯು ಕಾಣಿಸಿಕೊಂಡು ಬಹಳ ಸಾಮಗ್ರಿಗಳು ಸುಟ್ಟುಹೋದುವು. ಇನ್ನು ಕೆಲ ವಿಮಾನಶಾಲೆಗಳೂ ಕೂಡ ನಮ್ಮವರಿಂದ ಸುಡಲ್ಪಟ್ಟುವು.

ಭರತಖಂಡದ ವೃತ್ತಾಂತಗಳು.

ಆನಿಬೆಸೆಂಟಮ್ಮನವರು ಅರುಂಡೇಲ್‌ವಾಡಿಯಾರವರ ಜತೆಗೆ ನೀಲಗಿರಿಯಿಂದ ಕೊಯಮುತ್ತೂರಿಗೆ ಬಂದು, ಮ|| ಎಸ್. ಎಸ್. ರಾಮಸ್ವಾಮಿಯವರ ಬಂಗಲೆಯಲ್ಲಿ ವಾಸಮಾಡಿಕೊಂಡಿದ್ದಾರೆ.

ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೆಗ್‌ರವರು ಇನ್ನೆರಡು ತಿಂಗಳು ಕಳೆದಬಳಿಕ ಶೀತಕಾಲದಲ್ಲಿ ಭರತಖಂಡಕ್ಕೆ ಬಂದು ಮುಂದಣ ಬೇಸಗೆ ಹುಟ್ಟುವುದರೊಳಗಾಗಿ ಲಂಡನ್ನನ್ನು ಸೇರುವರೆಂದು ಸೀಮೆಯ ಒಂದು ಪತ್ರಿಕೆಯು ಹೇಳಿರುತ್ತದೆ.

ಕೊಯಮುತ್ತೂರಿನಲ್ಲಿ ಬ್ರಾಹ್ಮಣೇತರ ರಾಷ್ಟ್ರೀಯ ಜಿಲ್ಲಾ ಸಭೆಯು ಕಳೆದ ತಿಂಗಳಲ್ಲಿ ನೆರವೇರಿದಂತೆ ಗೋದಾವರಿ ಜಿಲ್ಲೆಯ ಬ್ರಾಹ್ಮಣೇತರ ಸಭೆಯನ್ನು ಬರುವ ಮಹಾನವಮಿಯ ಕಾಲದಲ್ಲಿ ಕಾಕಿನಾಡದಲ್ಲಿ ಜರುಗಿಸಲು ಏರ್ಪಾಟು ನಡೆದಿದೆ.

ಮದ್ರಾಸಿನಲ್ಲಿ ಕಟ್ಟಿಸಲ್ಪಡಲಿಕ್ಕಿರುವ ಮೇರಿರಾಜ್ಞಿಯವರ ಹೆಸರಿನ ಸ್ತ್ರೀ ಕಲಾಶಾಲಾಭವನಕ್ಕಾಗಿ ೧ ಲಕ್ಷ ರೂ. ಗಳನ್ನು ಕೊಡುವೆನೆಂದು ಜಯಪುರದ ಮಹಾರಾಜರು ತಿಳಿಯಿಸಿದುದನ್ನು ಮದ್ರಾಸು ಗೌರ್ನರವರು ಸಂತೋಷಪೂರ್ವಕವಾಗಿ ಅಂಗೀಕರಿಸಿರುತ್ತಾರೆ.

ಬೊಂಬಾಯಿಯಲ್ಲಿ ಜಾತೀಯಸಭಾಸಂಘದವರು ಕಳೆದ ಭಾನುವಾರ ಸರ್ ನಾರಾಯಣಚಂದ್ರವಾರ್ಕರ್ ರವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದು, ಭರತಖಂಡಕ್ಕೆ ಸ್ಟೇಟ್ ಸೆಕ್ರೆಟರಿಯವರು ಈಗ ದಯಮಾಡಿಸುವವರಾಗಿರುವಕಾರಣ, ಇಂಥ ಸಮಯದಲ್ಲಿ ಸಾತ್ವಿಕನಿರೋಧಪದ್ಧತಿಯನ್ನು ಅವಲಂಬಿಸುವುದು ಸರಿಯಲ್ಲ; ಕೆಲ ಕಾಲದಮಟ್ಟಿಗೆ ಅದನ್ನು ಅವಲಂಬಿಸದಿರುವುದೇ ಒಳ್ಳೆಯದೆಂದು ತೀರ್ಮಾನಿಸಿದರು.

ಬೊಂಬಾಯಿಯಿಂದ ಸೀಮೆಗೆ ಹೋಗುತ್ತಿದ್ದ ಮಾಟಿಯಾನಾ ಎಂಬ ಹಡಗಿನಲ್ಲಿ ಪ್ಲೇಗುರೋಗವು ಕಾಣಿಸಿಕೊಂಡು ಜುಲೈ ತಾ|| ೧೪ ರಿಂದ ೨೮ ರೊಳಗಾಗಿ ೯ ಮಂದಿಗೆ ಸೋಂಕಿತು. ಅವರಲ್ಲಿ ೪ ಮಂದಿಗಳು ಸತ್ತರು. ಇದೇ ಆಗಸ್ಟ್ ತಾ|| ೧೩ ರಲ್ಲಿ ಈ ಹಡಗು ಗ್ರೇವ್‌ಸೆಂಡ್ ತೀರದಲ್ಲಿ ನಿಂತಿತು. ಒಳಗಿದ್ದ ೪ ಮಂದಿ ರೋಗಗ್ರಸ್ತರನ್ನು ವೈದ್ಯಶಾಲೆಗೆ ಸಾಗಿಸಿದರು. ಅಲ್ಲಿ ಒಬ್ಬನು ಸತ್ತನು.

ಕಲ್ಕತ್ತಾದಲ್ಲಿ ಒಬ್ಬ ಶ್ರೀಮಂತನ ಮನೆಯಲ್ಲಿ ೭೦ ಬೀಗದಕೈಗಳಿದ್ದ ಗೊಂಚಲು ಕೆಲ ದಿನಗಳ ಮುಂಚೆ ಕಳವಾಗಿದ್ದಿತು. ಈಚೆಗೆ ಒಂದುದಿನ ಮನೆಯವರು ಕಬ್ಬಿಣದ ಮತ್ತೂ ಮರದ ಪೆಟ್ಟಿಗೆಗಳನ್ನು ತೆರೆದು ನೋಡುವಲ್ಲಿ ಒಳಗಿದ್ದ ೧ ಲಕ್ಷ ರೂ. ಬೆಲೆಯ ನಗನಾಣ್ಯಗಳೆಲ್ಲಾ ಅಪಹೃತವಾಗಿರುವುದೆಂದು ಗೊತ್ತಾಯಿತು. ಪೆಟ್ಟಿಗೆಯ ಬೀಗಗಳು ಹಾಕಿದಂತೆಯೇ ಇದ್ದುವು. ಪೋಲೀಸರು ಕಳ್ಳರನ್ನು ತಡಕುತ್ತಿದ್ದಾರೆ.

ಬಂಗಾಳಾ ದೇಶದ ನಾನಾ ಜನವರ್ಗಸಂಘಗಳ ಪ್ರಮುಖರಲ್ಲಿ ನೂರು ಮಂದಿಗಳವರೆಗೆ ಅಲ್ಲಿಯ ಗೌರ್ನರ ಬಳಿಗೆ ಹೋಗಿ, ವ್ಯಾಪಾರಿಗಳು ತುಪ್ಪದಲ್ಲಿ ಬೇರೆಬೇರೆ ವಸ್ತುಗಳನ್ನು ಮಿಶ್ರಮಾಡಿ ಮಾರುತ್ತಿರುವುದನ್ನು ತಪ್ಪಿಸುವುದಕ್ಕೆ ತಕ್ಕ ಏರ್ಪಾಟನ್ನು ಮಾಡಬೇಕೆಂದು ಪ್ರಾರ್ಥಿಸಿದರಾಗಿ, ಈ ವಿಷಯದಲ್ಲಿ ನಿಯಮನಿರ್ಮಾಣ ಸಭೆಯೊಳಗೆ ಚರ್ಚಿಸುವುದಕ್ಕೆ ಒಂದು ತೀರ್ಮಾನವನ್ನು ಇಡುವೆನೆಂದು ಗೌರ್ನರವರು ಉತ್ತರಕೊಟ್ಟು ಕಳುಹಿಸಿದರು.

ಕೊಯಮುತ್ತೂರಿನಲ್ಲಿ ಆನಿಬೆಸೆಂಟಮ್ಮನವರು ಸ್ಥಾಪಿಸಿಕೊಂಡಿದ್ದ ಸ್ವರಾಜ್ಯಧ್ವಜವನ್ನು ಕಿತ್ತು ಸರ್ಕಾರದವರು ಸಾಗಿಸಿಕೊಂಡು ಹೋದ ವಿಷಯವಾಗಿ ವ್ಯಾಜ್ಯವು ಹೂಡಲ್ಪಟ್ಟು ವಿಚಾರಣೆ ನಡೆಯುತ್ತಿದೆ. ಕೊಯಮುತ್ತೂರು ಮೊದಲಾದ ಇನ್ನು ಕೆಲವು ಕಡೆ ಕೆಲಜನರು ತಂತಮ್ಮ ಮನೆಗಳಮೇಲೆ ಸ್ವರಾಜ್ಯಧ್ವಜವನ್ನು ಸ್ಥಾಪಿಸಿಕೊಂಡಿದ್ದರು. ಹಾಗೆ ಕಟ್ಟಲಾಗದೆಂದು ಸ್ಥಲಿಕಾಧಿಕಾರಿಗಳು ಅಪ್ಪಣೆಕೊಟ್ಟು ಅದನ್ನೆಲ್ಲಾ ತಡೆದುಬಿಟ್ಟಿರುತ್ತಾರೆ.

ಈಗಣ ಕೊಲ್ಲಾಪುರದ ಶ್ರೀ ಶಂಕರಾಚಾರ್ಯ ಮಠದ ಸ್ವಾಮಿಗಳು (ಡಾಕ್ಟರ್ ಕುರ್ತಕೋಟಿ ಮಹಾಭಾಗವತರು ಪಿ. ಎಚ್. ಡಿ. ; ಎಫ್. ಆರ್. ಎಸ್. ಐ. ; ಎಂ. ಆರ್. ಎ. ಎಸ್.,) "ಫಿಲಾಸಫಿ ಅಂಡ್ ರಿಲಿಜನ್" ಎಂಬ ಹೆಸರಿನ ಮಾಸಪತ್ರಿಕೆಯನ್ನು ಬರುವ ದೀಪಾವಳಿ ಹಬ್ಬದಿಂದ ಪ್ರಕಟಿಸಲುದ್ಯುಕ್ತರಾಗಿದ್ದಾರೆ. ಇದಕ್ಕೆ ಚಂದಾ ಹಣವು ಅಂಚೆ ವೆಚ್ಚ ಸೇರಿ ೪ ರೂ. ಹೆಚ್ಚು ವರ್ಗಣಿದಾರರು ಕೊಡಿದರೆ ೩ ರೂ. ನ್ನು ಮಾಡಬೇಕೆಂಬ ಯೋಚನೆಯೂ ಇರುವುದಂತೆ.

ಎತ್ತಿನ ಬಂಡಿಯನ್ನು ಹೊಡೆಯುವವರು ರಾತ್ರಿಯಹೊತ್ತು ಮೂಕಿಯಮೇಲೆ ಮಲಗಿ ನಿದ್ರಿಸುತ್ತಿರುವುದುಂಟು. ಇದು ಅಪಾಯಕರ. ಕಳೆದ ವಾರ ಕೊಲಂಬೊ ಪಟ್ಟಣದಲ್ಲಿ ಒಬ್ಬ ೧೨ ವರ್ಷದ ಬಾಲಕನು ಹೀಗೆಯೇ ಮೂಕಿಯಮೇಲೆ ಮಲಗಿಕೊಂಡು ಬಂಡಿಯನ್ನು ನಡೆಯಿಸುತ್ತಿದ್ದಾಗ ಒಂದುಕಡೆ ಚಕ್ರವು ಹಳ್ಳಕ್ಕೆ ಇಳಿದಾಗ ಎತ್ತು ಬೆದರಿದಕಾರಣ ಮೂಕಿಯು ವ್ಯತ್ಯಸ್ತವಾಗಿ, ಮೇಲಿದ್ದ ಹುಡುಗನು ಕೆಳಕ್ಕೆ ಬಿದ್ದು, ಅವನಮೇಲೆ ಚಕ್ರವು ಹರಿದುದರಿಂದ ಮೃತಪಟ್ಟನು.

ಬಾಬು ಭೂಪೇಂದ್ರನಾಥ ಬಾಸುರವರು ತಮ್ಮ ಇಂಡ್ಯಾ ಕೌನ್ಸಿಲ್ ಸಭ್ಯತ್ವವನ್ನು ವಹಿಸುವುದಕ್ಕಾಗಿ ಸೀಮೆಗೆ ಹೋಗಲು ಬೊಂಬಾಯಿಗೆ ಬಂದಿದ್ದರು. ಆದರೆ ಅವರು ಹಡಗನ್ನು ಹತ್ತುವುದಕ್ಕೆ ಮುಂಚೆಯೇ ನೀವು ಈಗ ಸೀಮೆಗೆ ಬರಬೇಕಾದವಶ್ಯಕತೆಯಿಲ್ಲವೆಂಬುದಾಗಿ ಸ್ಟೇಟ್ ಸೆಕ್ರೆಟರಿಯವರು ತಂತೀವಾರ್ತೆಯನ್ನು ಕೊಟ್ಟು, ಬೊಂಬಾಯಿ ಗೌರ್ನರವರ ದ್ವಾರಾ ಬಾಸುರವರಿಗೆ ತಿಳಿಯಪಡಿಸಿದುದರಿಂದ ಅವರು ಪ್ರಯಾಣವನ್ನು ನಿಲ್ಲಿಸಿಬಿಟ್ಟರು. ಸಾಹೇಬ್ ಜಾದಾರವರು ಮಾತ್ರ ಸೋಮವಾರದದಿನ ಪ್ರಯಾಣಮಾಡಿದರೆಂದು ಪ್ರಕಟವಾಗಿದೆ.

ಜಿಲ್ಲಾ ಬೋರ್ಡುಗಳಿಗೆ ಅನಧಿಕಾರಿ ಜನರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಬೊಂಬಾಯಿ ಸರ್ಕಾರದವರು ಪ್ರಯತ್ನಿಸಿರುವಂತೆಯೇ ಮದ್ರಾಸು ಸರ್ಕಾರದವರೂ ಯತ್ನಿಸಿರುತ್ತಾರೆ. ಸದ್ಯಃ ಅವರು ೪ ಜಿಲ್ಲೆಗಳಿಗೆ ಇಂಥ ಅನುದ್ಯೋಗಿಕಾಧ್ಯಕ್ಷರನ್ನು ನಿಯಮಿಸಿ, ಆ ಅಧ್ಯಕ್ಷರುಗಳು ತಮ್ಮ ಕರ್ತವ್ಯಗಳನ್ನು ತೃಪ್ತಿಕರವಾಗಿ ನೆರವೇರಿಸಲು ಸಹಾಯವಾಗುವಂತೆ ಸರ್ಕಾರದಧಿಕಾರದಲ್ಲಿರುವ ಜನರನ್ನು ಉಪಾಧ್ಯಕ್ಷರನ್ನಾಗಿ ನಿಯಮಿಸಿಕೊಡುವರು. ಇಂಥ ಅಧ್ಯಕ್ಷರ ಕಾರ್ಯಗಳು ಸಂತೃಪ್ತಿಕರವಾಗಿ ನಡೆದಿರುವುದು ವ್ಯಕ್ತವಾಗುತ್ತ ಬಂದರೆ ಉಪಾಧ್ಯಕ್ಷ ನಿಯೋಜನವನ್ನು ಮುಂದೆ ತಪ್ಪಿಸಿಬಿಡುವರು.

ದಕ್ಷಿಣ-ಇಂಡ್ಯಾ ಪ್ರಜಾಪಕ್ಷವಾಗಿ ರಾ|| ಬ|| ಪಿಟ್ಟಿ ತ್ಯಾಗರಾಯ ಶೆಟ್ಟಿಯವರು ಸ್ಟೇಟ್ ಸೆಕ್ರೆಟರಿಯವರಿಗೆ ತಂತಿಯಮೂಲಕವಾಗಿ ಹೀಗೆ ತಿಳಿಯಪಡಿಸಿರುತ್ತಾರೆ—"ಮದ್ರಾಸು ಜಾತೀಯ ಮಹಾಸಂಘದವರೂ ಸರ್ ಸುಬ್ರಹ್ಮಣ್ಯಯ್ಯರೂ ಸಹ ನಿಮಗೆ ಕಳುಹಿಸಿಕೊಟ್ಟಿರುವ ತಂತೀವಾರ್ತೆಯಲ್ಲಿ ಬಹಳ ಕಡಿಮೆಯ ಸಂಖ್ಯೆಯುಳ್ಳ ಬ್ರಾಹ್ಮಣವರ್ಗದವರ ಅಭಿಪ್ರಾಯ ಮಾತ್ರವೇ ಇರುತ್ತದೆ. ನಾವುಗಳು ಆ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಅಭಿಪ್ರಾಯವುಳ್ಳವರಾಗಿರುವುದು ಮಾತ್ರವೇ ಅಲ್ಲದೆ ಆಂಗ್ಲ ಪ್ರಭುತ್ವಾಧಿಕಾರವನ್ನೂ ಅವರ ಪರಿಪಾಲನಾ ವಿಧಾನವನ್ನೂ ಅನುಮೋದಿಸುವವರಾಗಿದ್ದೇವೆ. ಪ್ರಜೆಗಳಲ್ಲಿ ಬಹು ಸಂಖ್ಯಾಕರು ಸ್ವರಾಜ್ಯವಾದಿಗಳಲ್ಲ, ಮತ್ತೂ ಆನಿಬೆಸೆಂಟಮ್ಮನವರ ಶಿಷ್ಯರೂ ಅಲ್ಲ."

ಕಳೆದ ತಾ|| ೫ ರಲ್ಲಿ ಸಿಮ್ಲಾದಲ್ಲಿ ಸಾಮ್ರಾಜ್ಯಶಾಸನ ಸಭೆಯು ಕೂಡಿದ್ದಾಗ ಆನಿಬೆಸೆಂಟಮ್ಮ ಮೊದಲಾದವರ ಬಂಧವಿಮೋಚನವನ್ನು ಕುರಿತು ಆ|| ಜಿನ್ನಾರವರು ಪ್ರಶ್ನೆಮಾಡಿದಾಗ "ಯುದ್ಧ ಮುಗಿಯುವವರೆಗೂ ರಾಜಕೀಯಾಂದೋಳನದಲ್ಲಿ ಅಕ್ರಮವೂ ದೌರ್ಜನ್ಯೋಪೇತವೂ ಆದ ಪದ್ಧತಿಗಳನ್ನು ಇವರು ಅವಲಂಬಿಸುವುದಿಲ್ಲವೆಂಬುದಾಗಿ ಭರತಖಂಡದ ಪ್ರಭುತ್ವದವರಿಗೆ ತೃಪ್ತಿಯುಂಟಾಗುವುದಾದರೆ ಆನಿಬೆಸೆಂಟಮ್ಮ ಮೊದಲಾದವರಿಗೆ ವಿಧಿಸಿರುವ ನಿರ್ಬಂಧನಿವಾಸಶಿಕ್ಷೆಯನ್ನು ತೊಲಗಿಸುವುದಕ್ಕೆ ಮದ್ರಾಸು ಸರ್ಕಾರದವರಿಗೆ ಇಂಡ್ಯಾ ಸರ್ಕಾರದವರು ಅಪ್ಪಣೆನೀಡಲು ಸಿದ್ಧರಾಗಿರುವರು" ಎಂದು ಸರ್ಕಾರದ ಪಕ್ಷದಿಂದ ಉತ್ತರವು ಕೊಡಲ್ಪಟ್ಟಿತು. ಇದು ಆನಿಬೆಸೆಂಟಮ್ಮ ಮೊದಲಾದ ನಿರ್ಬಂಧಿತರ ವಿಷಯದಲ್ಲಿ ಸುಮುಖವಾದ ಚಿಹ್ನೆಯೇ ಆಗಿರುತ್ತದೆ.

ಬಾಬು ಭೂಪೇಂದ್ರನಾಥ ಬಾಸುರವರು ಸೀಮೆಗೆ ಪ್ರಯಾಣಮಾಡುವುದಕ್ಕಾಗಿ ಬೊಂಬಾಯಿಗೆ ಬಂದಾಗ್ಗೆ ಕಳೆದ ಭಾನುವಾರ ಅಲ್ಲಿಯ ಪುರಜನರು ಅವರಿಗೆ ಒಂದು ಔತಣವನ್ನು ಮಾಡಿದರು. ಆಗಣ ಕಾಲದಲ್ಲಿ ಬಾಸುರವರು ಉಪನ್ಯಾಸಮಾಡುವಾಗ್ಗೆ—ರಾಷ್ಟ್ರಕಾರ್ಯತತ್ಪರರಾದ ವಯೋಧಿಕರೂ ಯುವಕರೂ ಸಹ ದೂರದೃಷ್ಟಿಯಿಂದ ಏಕಮತ್ಯವುಳ್ಳವರಾಗಿ ಪ್ರವರ್ತಿಸಬೇಕೆಂದೂ, ಕ್ರಮಕ್ರಮವಾಗಿ ನಾವು ಅಭಿವೃದ್ಧಿಗೊಳ್ಳಲು ಪ್ರಯತ್ನಿಸಬೇಕೆಂದೂ, ಬೇರಂಕೆಗಾಗಿಯೇ ಬಗ್ಗಿಹೋಗುವ ಪ್ರಭುತ್ವವನ್ನು ನಾವು ಎಲ್ಲಿಯೂ ಕಂಡು ಕೇಳಿಲ್ಲವೆಂದೂ, ಹಗೆಸಾಧಿಸುವುದು, ದೇಹಬಲದಿಂದ ಕಾರ್ಯಸಾಧನೆ ಮಾಡುವುದು—ಇತ್ಯಾದಿ ಯೋಚನೆಗಳನ್ನು ಸಂಪೂರ್ಣವಾಗಿ ದೂರೀಕರಿಸಬೇಕೆಂದೂ, ಹಾಗಲ್ಲದೆ ನಾವು ಯಮ್ಕಂಚನ್ಯಾತ್ರವಾಗಿ ತಪ್ಪುದಾರಿಯಲ್ಲಿ ನಡೆದುಬಿಟ್ಟರೂ ಭರತಖಂಡದಮೇಲೆ ಆಂಗ್ಲಪ್ರಭುತ್ವದವರಿಗೆ ಇದುವರೆಗೆ ಉಂಟಾಗಿದ್ದ ಸದ್ಭಾವವು ಕ್ಷೀಣವಾಗಿ ಹೋಗುವುದೆಂದೂ, ವಿದ್ಯಾಭಿವೃದ್ಧಿ ಸಂಘಸಂಸ್ಕರಣ ಮೊದಲಾದ ಕಾರ್ಯಗಳು ಈ ದೇಶದಲ್ಲಿ ವಿಶೇಷವಾಗಿ ನಡೆಯಬೇಕಾಗಿರುವುದೆಂದೂ ಮೊದಲಾಗಿ ಸದುಪದೇಶವನ್ನು ಮಾಡಿದರು.

ಬಂಗಾಳದ ದೇಶಭಕ್ತಮುಖಂಡರಲ್ಲಿ ಇತ್ತಂಡವು ಸಮೆದಿಲ್ಲ. ಅಮೃತಬಜಾರ್ ಪತ್ರಿಕೆಯ ಸಂಪಾದಕರಾದ ಮೋತಿಲಾಲ್‌ಘೋಷರೇ ಮೊದಲಾದವರು ಒಂದು ಕಡೆಯೂ, ಬಂಗಾಲಿ ಪತ್ರಿಕೆಯ ಸಂಪಾದಕರಾದ ಸುರೇಂದ್ರನಾಥ ಬಾನರ್ಜಿಯವರೇ ಮೊದಲಾದವರು ಒಂದುಕಡೆಯೂ ಇದ್ದಾರೆ. ಈ ಸಲದ ರಾಷ್ಟ್ರೀಯ ಮಹಾಸಭೆಯು ಕಲ್ಕತ್ತಾದಲ್ಲಿ ಕೂಡುವುದಾಗಿದೆ. ಅದರ ಆಹ್ವಾನ ಸಂಘದ ಸಭಿಕರು ಕಳೆದ ವಾರದಲ್ಲಿ ಸಭೆಗೂಡಿದಾಗ್ಗೆ ಭಿನ್ನಮತಗಳ ಕೋಲಾಹಲವಾಗಿ ಸಭಾಕಾರ್ಯವು ರಸಾಭಾಸಗೊಂಡಿತು. ರಾಷ್ಟ್ರೀಯ ಮಹಾಸಭೆಗೆ ಅಧ್ಯಕ್ಷರನ್ನು ಆರಿಸುವ ವಿಷಯದಲ್ಲೂ ಹಿಂದೆ ಭಿನ್ನಾಭಿಪ್ರಾಯವೇ ವ್ಯಕ್ತವಾಯಿತು. ಆನಿಬೆಸೆಂಟಮ್ಮನವರನ್ನು ಅಧ್ಯಕ್ಷರನ್ನಾಗಾರಿಸಲು ೩೦ ಮತಗಳು ದೊರೆಯಲು, ಅದನ್ನು ಸಾಗಗೊಡಿಸಬಾರದೆಂದು ಹಲವರು ಪ್ರತಿಭಟಿಸಿ, ಮಹಮ್ಮದಾಬಾದ್ ರಾಜನನ್ನು ಅಧ್ಯಕ್ಷರನ್ನಾಗಿ ಆರಿಸಲು ೩೪ ಮತಗಳು ದೊರೆಯುವಂತೆ ಮಾಡಿದರು. ಅತ್ಯುಗ್ರ ಸೌಮ್ಯಪಕ್ಷಗಳೂ, ಸ್ವರಾಜ್ಯಸಮಿತಿ ಮತ್ತೂ ತದ್ವಿರುದ್ಧಭಾವಗಳೂ ಸಹ ಬಂಗಾಳದ ನಾಯಕರಲ್ಲಿ ಇನ್ನೂ ಪ್ರಬಲವಾಗಿ ಇರುವುದೇ ಇದಕ್ಕೆ ಕಾರಣವು.

ವಿದೇಶವೃತ್ತಾಂತಗಳು.

ಚೀನಾದವರು ಜರ್ಮನರಮೇಲೆ ಯುದ್ಧಪ್ರಕಟನೆಮಾಡಿದುದಕ್ಕಾಗಿ ಜಾರ್ಜ್ ಸಾರ್ವಭೌಮರು ಚೀನಾದ ಅಧ್ಯಕ್ಷರಿಗೆ ಅಭಿನಂದನದ ತಂತೀವಾರ್ತೆಯನ್ನು ಕಳುಹಿಸಿದ್ದರು.

ರಷ್ಯಾದೇಶದಲ್ಲಿ ರಾಜಕೀಯ ವಿಪ್ಲವವನ್ನು ಹಬ್ಬಿಸುವ ರಹಸ್ಯಪ್ರಯತ್ನಗಳಿಗೆ ಮೂಲಭೂತರಾಗಿದ್ದ ಪ್ರಖ್ಯಾತರಾದ ನಾಯಕರನೇಕರನ್ನು ಹಿಡಿಯಿಸಿ ವಿಚಾರಣೆ ನಡೆಯಿಸುತ್ತಿರುವರು.

ಜರ್ಮನಿಯಲ್ಲಿ ಕೂಲಿಕಾರ ಪಕ್ಷದವರು ಸಣ್ಣ ಸಣ್ಣ ಕರಪತ್ರಗಳನ್ನು ಪ್ರಕಟಿಸಿ ವಿಪ್ಲವವನ್ನು ಉಂಟುಮಾಡುವೆವೆಂದು ಪ್ರಯತ್ನಿಸಿರುವರು. ಸರ್ಕಾರದವರು ಅವರಲ್ಲಿ ಕೆಲ ಪ್ರಮುಖರನ್ನು ಹಿಡಿದಿದ್ದಾರೆ.

ರಷ್ಯಾ ದೇಶದಲ್ಲಿ ಮತ್ತೊಂದು ದೊಡ್ಡ ಕರ್ಮಾಗಾರವು ಅಗ್ನಿಪ್ರಮಾದದಿಂದ ದಗ್ಧವಾಯಿತು. ಕೋಟ್ಯಂತರ ರೂ. ಗಳ ಸೊತ್ತು ನಷ್ಟಪಟ್ಟಿತು. ಸಾವಿರಾರು ಪ್ರಾಣಹಾನಿಗಳೂ, ಸಾವಿರಾರು ಮಂದಿಗೆ ಗಾಯಗಳೂ ಆಗಿರುವುವು. ಯಾರೋ ದುರುದ್ದೇಶದಿಂದ ಇದಕ್ಕೆ ಬೆಂಕಿಯಿಟ್ಟಿರಬೇಕೆಂದು ಊಹಿಸಲ್ಪಟ್ಟಿದೆ.

ಸ್ಟಾಕ್‌ಹೋಮಿನಲ್ಲಿ ಸಂಧಿ ವಿಷಯವಾಗಿ ಶತ್ರು ಮಿತ್ರಮಂಡಲಿ ದೇಶಗಳ ಕಾರ್ಮಿಕ ಸಾಂಘಿಕ ಪ್ರತಿನಿಧಿಗಳೆಲ್ಲಾ ಸೇರಿ ಚರ್ಚಿಸಬೇಕೆಂದಿದ್ದ ಪ್ರಯತ್ನವು ದಿನದಿನಕ್ಕೆ ನೀರಸವಾಗಿ ಹೋಗುತ್ತಿದೆ. ಶತ್ರುದೇಶ ಪ್ರತಿನಿಧಿಗಳೊಡನೆ ಕೂಡಿ ಈ ವಿಷಯವನ್ನು ಆಲೋಚಿಸುವುದು ಉಚಿತವಲ್ಲವೆಂದೂ ಮಿತ್ರಮಂಡಲಿದೇಶದವರೇ ಬೇರೆ ಸಭೆಗೂಡಿ ಯೋಚಿಸಬೇಕೆಂದೂ ಅಭಿಪ್ರಾಯವು ವೃದ್ಧಿಯಾಗುತ್ತಿದೆ.

ಅಮೇರಿಕಾದ ಅಧ್ಯಕ್ಷರು ರಷ್ಯಾ ಪ್ರಭುತ್ವದವರಿಗೆ ಒಂದು ಸಂದೇಶವನ್ನು ಕಳುಹಿಸಿ, ತಾವು ಯಾವಾಗಲೂ ರಷ್ಯನರನ್ನು ಕೈಬಿಡುವುದಿಲ್ಲವೆಂದೂ, ಬೇಕಾದ ಸಹಾಯವನ್ನು ಮಾಡಿಕೊಡುವೆವೆಂದೂ ಅಭಯದಾನವನ್ನು ಮಾಡಿರುವರು. ಇದಕ್ಕೆ ರಷ್ಯನರು ಕೊಟ್ಟ ಪ್ರತ್ಯುತ್ತರದಲ್ಲಿ ಅಮೇರಿಕಾದವರ ವಿಷಯದಲ್ಲಿ ರಷ್ಯನರಿಗೆಲ್ಲಾ ಸಂಪೂರ್ಣವಾದ ವಿಶ್ವಾಸವಿರುವುದೆಂದು ತಿಳಿಯಿಸಲ್ಪಟ್ಟಿರುವುದು.

ಅಮೇರಿಕಾದವರು ಈಗ ತಮ್ಮ ಯುದ್ಧದ ನಿಮಿತ್ತವಾಗಿ ಧನಿಕರ ಮೇಲೆ ಯುದ್ಧಕಾಲದ ಸುಂಕವೆಂಬುದನ್ನು ಹೊಸದಾಗಿ ವಿಧಿಸಲು ಏರ್ಪಡಿಸುವುದರಲ್ಲಿದ್ದಾರೆ. ವರ್ಷಕ್ಕೆ ೧ ಲಕ್ಷಕ್ಕೆ ಮೀರಿದ ಆದಾಯವುಳ್ಳ ಕೋಟೀಶ್ವರರುಗಳಮೇಲೆ ಮಾತ್ರವೇ ಇದು ವಿಧಿಸಲ್ಪಡುವುದು. ಈ ಶಾಸನದಪ್ರಕಾರ ಶ್ರೀಮಂತರುಗಳು ತಮ್ಮ ಆದಾಯದಲ್ಲಿ ೧೦೦ ಪೌನಿಗೆ ೭೭ ಪೌನಿನಷ್ಟನ್ನು ಸರ್ಕಾರಕ್ಕೆ ಕಂದಾಯವಾಗಿ ಕೊಡಬೇಕಾಗುವುದು.

ಎಷ್ಟುಕಾಲದಿಂದ ಜರ್ಮನ್ ಕೈಸರರು ಇಂಗ್ಲೆಂಡ್ ಫ್ರಾನ್ಸ್‌ದೇಶಗಳ ಆಕ್ರಮಣಕ್ಕಾಗಿ ಸಾಧಿಸಿಕೊಂಡಿದ್ದರೆಂಬ ಸಂಗತಿಗಳು ಈಗ ಒಂದೊಂದಾಗಿ ಬಯಲಿಗೆ ಬರುತ್ತಿವೆ. ರಷ್ಯಾ ಜಪಾನ್ ಯುದ್ಧವು ನಡೆದ ೧೯೦೪ ನೆ ವರ್ಷದಲ್ಲೇ ಫ್ರೆಂಚರೂ ರಷ್ಯನರೂ ಜರ್ಮನರೂ ಸಹ ಕೂಡಿ ಇಂಗ್ಲೆಂಡಿನಮೇಲೆ ಕಾರ್ಯಭಾಗ ನಡೆಯಿಸಬೇಕೆಂಬ ವಿಷಯವಾಗಿ ಕೈಸರರು ಫ್ರೆಂಚರೊಡನೆಯೂ ರಷ್ಯನರೊಡನೆಯೂ ಪತ್ರವ್ಯವಹಾರವನ್ನು ನಡೆಯಿಸಿ ವಿಫಲರಾಗಿದ್ದ ಸಂಗತಿಯು ಈಗ ಹೊರಬಿದ್ದಿದೆ.

ದುರದೃಷ್ಟವಂತರಾದ ಸರ್ಬಿಯನ್ನರಿಗೆ ಸಹಾಯಮಾಡಬೇಕೆಂದು ಮಿತ್ರಮಂಡಲಿಯವರನ್ನು ಸರ್ಬಿಯಾ ಪತ್ರಿಕೆಗಳು ಬೇಡುತ್ತಿವೆ. ಸರ್ಬಿಯಾ ದೇಶವೆಲ್ಲಾ ಬಹಳ ವಿಷಾದಕರಸ್ಥಿತಿಯಲ್ಲಿದೆ. ಅಲ್ಲಿಯ ಬೆಳಸನ್ನೆಲ್ಲಾ ಶತ್ರುಗಳು ಸ್ವಾಧೀನಪಡಿಸಿಕೊಂಡರು. ತಿನ್ನುವುದಕ್ಕೆ ವಾರಕ್ಕೆ ೧ ರೊಟ್ಟಿ ದೊರೆಯುವುದೂ ಕಷ್ಟವಾಗಿದೆ. ಹಾಲಿಲ್ಲದೆ ಸಾವಿರಾರು ಮಕ್ಕಳು ಮೃತವಾಗುತ್ತಿವೆ. ನಿರ್ಬಂಧವಾಸದಲ್ಲಿರುವ ೮೦ ಸಾವಿರ ಮಂದಿ ಸರ್ಬಿಯನ್ನರೂ ಸೆರೆಹಿಡಿಯಲ್ಪಟ್ಟ ಸರ್ಬಿಯನ್ನರೂ ಸಹ ಆಸ್ಟ್ರಿಯಾದಲ್ಲಿ ಮೃತರಾದರು.

ಜರ್ಮನ್ ಚಕ್ರವರ್ತಿಯು ಈಜರ್ ರಂಗದಲ್ಲಿರುವ ತಮ್ಮ ಸೈನಿಕರನ್ನು ಪ್ರೋತ್ಸಾಹಿಸುವಾಗ "ಶತ್ರುಗಳಿಗೆ ತಕ್ಕ ಪರಾಭವವು ಪ್ರಾಪ್ತವಾಗುವವರೆಗೂ ನಾವು ಯುದ್ಧಮಾಡುವೆವು. ನಮಗೆ ಮುಖ್ಯವಾದ ಮತ್ತು ಅಸಹ್ಯಕರವಾದ ಶತ್ರುವು ಇಂಗ್ಲಾಂಡ್ ದೇಶವೇ: ಅದು ಪ್ರಪಂಚದಮೇಲೆಲ್ಲಾ ಜರ್ಮನಿಯಮೇಲೆ ಅಸೂಯೆಯನ್ನು ವ್ಯಾಪನಗೊಳಿಸುತ್ತಿದೆ. ತನ್ನ ಮಿತ್ರರನ್ನು ಯಾವಾಗಲೂ ನಮ್ಮಮೇಲೆ ಹೋರಾಡಲು ಹುರಿದುಂಬಿಸುತ್ತಿದೆ. ಅದುಕಾರಣ ನಾವು ಎಷ್ಟು ಕಷ್ಟವನ್ನಾದರೂ ಸೈರಿಸಿಕೊಂಡು ಧ್ವಂಸಗೊಳಿಸಬೇಕಾದ ಶತ್ರುವೆಂದರೆ ಇಂಗ್ಲೆಂಡ್‌ದೇಶವೇ ಆಗಿರುತ್ತದೆ" ಎಂದು ಹೇಳಿರುವರಂತೆ. ಅನ್ಯಾಯವಾಗಿ ಇಂಗ್ಲಾಂಡಿನಮೇಲೆ ಇಷ್ಟು ಕ್ರೋಧವನ್ನು ತೊಟ್ಟು ಮನಮುಳನೆ ಕುದಿಯುತ್ತಿರುವ ಕೋಟಲೆಯಿಂದ ಕೈಸರರು ಯಾವ ಫಲವನ್ನು ಪಡೆಯುವರೋ ನೋಡಬೇಕು.

ಪುರುಷರಲ್ಲಿ ಸ್ತ್ರೀಯರಮೇಲಿರತಕ್ಕ ಪ್ರೇಮವನ್ನು ಕಂಡು ಹಿಡಿಯುವುದಕ್ಕೆ ಸಾಧಕವಾದ ಯಂತ್ರವೊಂದನ್ನು ಅಮೇರಿಕಾ ದೇಶದ ಶಾಸ್ತ್ರಜ್ಞನೊಬ್ಬನು ಕಂಡುಹಿಡಿದಿರುವನು. ಇದಕ್ಕೆ ಪ್ರೇಮಪರಿಶೋಧಿನೀ ಯಂತ್ರವೆಂದು ಹೇಳಬಹುದು. ಇದು ಒಂದು ಕಡಗದಂತೆ ಇರುವುದು. ಸ್ತ್ರೀಪುರುಷರಾರುಬೇಕಾದರೂ ಮುಂಗೈಗಳಿಗೆ ಧರಿಸಿಕೊಳ್ಳಬಹುದು. ಈ ಕಡಗದೊಳಗೆ ಒಂದು ಕಾಗದವೂ, ವಿದ್ಯುಚ್ಛಕ್ತಿಯಿಂದ ನಡೆಯುವ ಒಂದು ಸೂಜಿಯೂ ಇರುವುವು. ಮುಂಗೈಯ ನಾಡಿಯು ಅದಿರಿದಂತೆಲ್ಲಾ ಈ ಸೂಜಿಯು ಚಲಿಸುತ್ತ ಆ ಕಾಗದದಮೇಲೆ ಚುಚ್ಚಿ ಚುಚ್ಚಿ ಗುರುತುಮಾಡುವುದು. ಪ್ರೇಮಾಸ್ಪದರಾದ ಸ್ತ್ರೀಪುರುಷರು ಸಮೀಪದಲ್ಲಿದ್ದರಾಗಲೀ ಆಲಿಂಗನಾದಿಗಳನ್ನು ಮಾಡಿಕೊಳ್ಳುವಾಗಾಗಲೀ ಅವರುಗಳ ನಾಡಿಯು ವೇಗವಾಗಿ ಚಲಿಸುತ್ತಿರುವುದೆಂಬುದು ಅನೇಕರಿಗೆ ಗೊತ್ತೇ ಇದೆ. ಅದುದರಿಂದ ಅಮೇರಿಕಾದ ಸ್ತ್ರೀಯರು ತಮ್ಮನ್ನು ಪ್ರೇಮಿಸುವ [illegible]

ನಿಜವಾದ ಪ್ರೇಮವು ಎಷ್ಟುಮಟ್ಟಿಗಿರುವುದೆಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳುವುದಕ್ಕಾಗಿ ಅವರ ಕೈಗೆ ಈ ಯಂತ್ರದ ಕಡಗವನ್ನು ತೊಡಿಸಿ, ತಮ್ಮ ಜತೆಯಲ್ಲಿ ನಾಟಕಾದಿಗಳ ಅವಲೋಕನಕ್ಕೆ ಕರೆದುಕೊಂಡು ಹೋಗುವರು. ಕಡೆಗೆ ಅವರುಗಳು ಮನೆಗೆ ಹೋಗುವಾಗ ಸ್ತ್ರೀಯು ಆ ಪುರುಷನ ಹಸ್ತದಲ್ಲಿರುವ ಕಡಗವನ್ನು ಬಿಚ್ಚಿಕೊಂಡು, ಅದರಲ್ಲಿ ಸೂಜಿಯು ಎಷ್ಟುಮಟ್ಟಿಗೆ ಕೆಲಸಮಾಡಿರುವುದೆಂಬುದನ್ನು ನೋಡಿ, ಅದರಮೇಲೆ ಪುರುಷನಿಗೆ ತನ್ನಮೇಲೆ ಎಷ್ಟುಮಟ್ಟಿಗೆ ಪ್ರೇಮವಿರುವುದೆಂಬುದನ್ನೂ ಅವನ ಮನಸ್ಸು ಎಷ್ಟುಮಟ್ಟಿಗೆ ತನ್ನಲ್ಲಿ ತಗುಲಿಕೊಂಡಿರುವುದೆಂಬುದನ್ನೂ ತಿಳಿದುಕೊಳ್ಳುವಳಂತೆ! ಇದರಿಂದ ನಾಡಿಯ ವೇಗವೇನೋ ತಿಳಿಯಬಹುದು. ನಾಡಿಯ ವೇಗಕ್ಕೆ ಗಾಢಾನುರಾಗವೊಂದೇ ಕಾರಣವಾಗಿರುವುದಿಲ್ಲ. ಹೀಗಿರುವಾಗ ಈ ನಾಡೀಗತಿಯಿಂದ ಯಂತ್ರದಮೂಲಕ ಮಾನಸಿಕಕಾರ್ಯವಾದ ಪ್ರೇಮದ ಆಳತೆಯನ್ನು ತಿಳಿಯುವೆವೆಂಬುದು ಭ್ರಮೆಯಲ್ಲವೆ?

ಪೋಪರು ಸಂಧಿವಿಷಯವಾಗಿ ಬರೆದಿದ್ದ ಪತ್ರಿಕೆಗೆ ಅಮೇರಿಕಾದ ಅಧ್ಯಕ್ಷರು ಶ್ಲಾಘನೀಯವಾದ ಉತ್ತರವನ್ನು ಕೊಟ್ಟಿರುತ್ತಾರೆ. ಅದರಲ್ಲಿ- "ಈಗಣ ಯುದ್ಧವು ಪ್ರಪಂಚವನ್ನೆಲ್ಲಾ ನಾವೇ ಆಕ್ರಮಿಸಿಕೊಳ್ಳಬೇಕೆಂಬ ದುರಾಶೆಯಿಂದ ಬಹುಕಾಲದಾರಭ್ಯ ರಹಸ್ಯವಾಗಿ ಮಾಡಲ್ಪಡುತ್ತ ಬಂದಿದ್ದ ಸನ್ನಾಹದೊಡನೆ ಜರ್ಮನರಿಂದ ಆರಂಭಿಸಲ್ಪಟ್ಟಿದೆ. ಅವರು ನ್ಯಾಯಾನ್ಯಾಯ ದಯಾದಾಕ್ಷಿಣ್ಯಗಳೊಂದನ್ನೂ ಲಕ್ಷಿಸಲಿಲ್ಲ. ಅವರಿಂದ ಎಲ್ಲ ಖಂಡಗಳೂ ರಕ್ತಸಿಕ್ತವಾದುವು. ಆ ರಕ್ತವಾದರೊ ಸೈನಿಕರದು ಮಾತ್ರವೇ ಅಲ್ಲ. ಯಾವ ಪಾಪಕ್ಕೂ ಹೋಗದ ಹೆಂಗುಸರು ಮಕ್ಕಳು ಮೊದಲಾದವರ ರಕ್ತವೆಲ್ಲಾ ನಿಷ್ಕಾರಣವಾಗಿ ದೇಶದಲ್ಲೆಲ್ಲಾ ಹರಿಯಿಸಲ್ಪಟ್ಟಿರುವುದು. ಈಗ ಶತ್ರುಗಳು ದಿಗ್ಭ್ರಮೆಯಿಂದ ನಿಂತು ನೋಡುತ್ತಿದ್ದಾರೆ. ಆದರೆ ಅವರು ಇನ್ನೂ ಪರಾಜಯ ಹೊಂದಿಲ್ಲ. ಈಗ ಅವರು ಪ್ರಪಂಚದಮೇಲಿರುವ ½ ಭಾಗದ ಪ್ರಜೆಗಳಿಗೆಲ್ಲಾ ಶತ್ರುಗಳಾಗಿದ್ದಾರೆ. ಈ ಕೃತ್ಯವು ಜರ್ಮನ್ ಪ್ರಜೆಗಳದಲ್ಲ. ಅವರ ದಯಾವಿಹೀನವಾದ ಪ್ರಭುವಿನದೇ ಆಗಿರುತ್ತದೆ. ಅವನಾಡಿಸಿದಂತೆ ಪ್ರಪಂಚವೆಲ್ಲಾ ಆಡುವ ಸ್ಥಿತಿಗೆ ಬರದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಪೋಪರು ಹೇಳಿದಂತೆ ನಾವು ನಡೆದುಕೊಂಡುಬಿಟ್ಟರೆ ಜರ್ಮನರ ಸೈನಿಕವಿಜೃಂಭಣೆಗೆ ಮತ್ತಷ್ಟು ಅವಕಾಶವನ್ನು ನಾವೇ ಕೊಟ್ಟವರಾಗುವೆವು. ಅದುಕಾರಣ ಜರ್ಮನಿಗೆ ವಿರುದ್ಧವಾಗಿ ಶಾಶ್ವತವಾದ ಅಂತರ್ಜಾತೀಯ ಮಿತ್ರತ್ವವನ್ನು ಸ್ಥಾಪಿಸಬೇಕಾಗಿದೆ. ಸಂಧಿಯು ಯಾವುದನ್ನಾಧಾರಮಾಡಿಕೊಂಡಿರಬೇಕು? ಜರ್ಮನರ ಪುನರ್ವಿಜೃಂಭಣೆಯನ್ನೇ? ಅಥವಾ ಸಂಧಿಯ ಮಾತಿನ ಗೌರವದಮೇಲೆಯೆ? ಶಾಶ್ವತ ಸಂಧಿಯು ನ್ಯಾಯ ನಿಷ್ಪಕ್ಷಪಾತತೆ ಮಾನವಸ್ವಾತಂತ್ರ್ಯಗಳಮೇಲೆ ಆಧಾರಪಟ್ಟುಕೊಂಡಿರಬೇಕು. ನಾವು ಜರ್ಮನ್ ಪ್ರಭುತ್ವದವರ ಮಾತನ್ನು ಹೊಣೆಯಾಗಿ ನಂಬಲಾರೆವು. ಜರ್ಮನ್ ಪ್ರಜೆಗಳು ಮನೋವಾಕ್ಕಾಯದಿ ಅದನ್ನು ವ್ಯಕ್ತಪಡಿಸುವವರೆಗೂ ನಾವು ನಂಬಲಾರೆವು. ಇದುವರೆಗೆ ಜರ್ಮನ್ ಪ್ರಭುತ್ವದವರ ದಾರುಣ ಕರ್ಮಗಳಿಂದ ಜರುಗಿದ ಈಗಣ ಯುದ್ಧದಿಂದ ಉಂಟಾದ ನಷ್ಟಕ್ಕೆಲ್ಲಾ ಪರಿಹಾರವು ಬರಬೇಕು. ಮುಂದೆ ಅಂತರ್ಜಾತೀಯ ಕಲಹಗಳನ್ನು ನಿವೃತ್ತಿಗೊಳಿಸುವುದಕ್ಕೆ ಶರೀರಬಲವನ್ನುಪಯೋಗಿಸಿಕೊಳ್ಳುವುದಕ್ಕೆ ಪ್ರತಿಯಾಗಿ ನ್ಯಾಯಸ್ಥಾನಬಲವಿರುವಂತಾಗಬೇಕು. ಇದಲ್ಲದೆ ಜರ್ಮನ್ ಪ್ರಭುತ್ವದವರು ಸಂಧಿಸೂತ್ರಗಳನ್ನು ತಾವಾಗಿ ತಿಳಿಯಿಸದಿರುವಾಗ ಆ ನಿಬಂಧನೆಗಳನ್ನು ಕುರಿತು ಆಲೋಚಿಸುವುದಕ್ಕೆ ಅವಕಾಶವೇ ಇಲ್ಲ" ಇತ್ಯಾದಿ. ಈ ಲೇಖನವನ್ನು ಫ್ರೆಂಚ್ ಇಂಗ್ಲೀಷ್ ಅಮೇರಿಕಾ ದೇಶದ ಪತ್ರಿಕೆಗಳೆಲ್ಲಾ ಬಹಳವಾಗಿ ಕೊಂಡಾಡಿರುತ್ತವೆ.

ಪತ್ರವ್ಯವಹಾರ.

ನೆಲಮಂಗಲ ತಾಲ್ಲೂಕು ಬೇಗೂರು.

ತಾ॥ 23-8-1917 ನೆಯ ಗುರುವಾರ ಮಧ್ಯಾಹ್ನ ಇಲ್ಲಿನ ಗ°. ಎ.ವಿ. ಬಾಯ್ಸ್‌ಸ್ಕೂಲಿನಲ್ಲಿ ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ರವರ ಭಾವಚಿತ್ರದ ಪ್ರತಿಷ್ಠಾ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಮಧ್ಯಾಹ್ನ 3 ಘಂಟೆ ಸಮಯದಲ್ಲಿ ಮೇಲೆ ಕಂಡ ಭಾವಚಿತ್ರವನ್ನು ಸಮಸ್ತ ಮರ್ಯಾದೆಗಳೊಡನೆ ಗ್ರಾಮದಲ್ಲಿ ಮೆರವಣಿಗೆ ಮಾಡಿಕೊಂಡು ಸ್ಕೂಲಿಗೆ ಬಂದನಂತರ ಮಹೋತ್ಸವವು ಸಂಗೀತವು ನೆರವೇರಿತು. ಸ್ಕೂಲ್ ಕಮಿಟಿ ಮೆಂಬರುಗಳೂ, ಇತರ ದೊಡ್ಡಮನುಷ್ಯರೂ ಸಭೆಯನ್ನಲಂಕರಿಸಿದ್ದರು. ಸ್ಕೂಲ್ ಹೆಡ್ಮಾಸ್ಟರ್ ಮ॥ ರಾ॥ ಡಿ. ನಂಜುಂಡಯ್ಯನವರು ಸ್ಕೂಲ್ ರಿಪೋರ್ಟನ್ನು ಓದಿದರು. ಅನಂತರ ಮ॥ ರಾ॥ ಅಸಿಸ್ಟೆಂಟ್ ಮಾಸ್ಟರ್ ಎಸ್. ವೆಂಕಟನರಸಯ್ಯನವರು ವಿದ್ಯೆಯ ಆವಶ್ಯಕತೆಯ ವಿಷಯದಲ್ಲಿಯೂ, ಮ॥ ರಾ॥ ಪಿ. ನರಸಿಂಗರಾಯರವರು ರಾಜಭಕ್ತಿ ವಿಚಾರದಲ್ಲಿಯೂ ಉಪನ್ಯಾಸಗಳನ್ನು ಮಾಡಿದರು. ಸ್ಕೂಲ್ ಕಮಿಟಿ ಮೆಂಬರು ಮ॥ ರಾ॥ ಬಿ. ವಾಸುದೇವರಾಯರವರು ಸ್ಕೂಲ್ ಅಭಿವೃದ್ಧಿ ವಿಚಾರದಲ್ಲಿಯೂ ಮ॥ ರಾ॥ ಬಿ. ಚಿಕ್ಕಣ್ಣಶೆಟ್ಟರವರು ಮ॥ ರಾ॥ ಶಾ॥ ಡಿ. ವಿ. ಅಣ್ಣಯ್ಯಪ್ಪನವರು ಸಹ ಮಹಾರಾಜರವರ ಪ್ರಜೆಗಳ ಕರ್ತವ್ಯವನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸಮಾಡಿದನಂತರ ಮಹಾರಾಜರವರ ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಯನ್ನು ನಡೆಯಿಸಿ ಮಂಗಳವನ್ನು ಹಾಡಿ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳನ್ನು ಕೊಟ್ಟನಂತರ ಸಭೆಯು ಬರಖಾಸ್ತಾಯಿತು. ವಿದ್ಯಾಭಿಮಾನಿ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಶೆಟ್ಟಿಹಳ್ಳಿ.

ಈ ಗ್ರಾಮವು ಹೈರೋಡ್ ಪಕ್ಕದಲ್ಲಿರುತ್ತದೆ. ಇಲ್ಲಿ ವಾರ್ನಾಕ್ಯುಲರ್ ಎ. ವಿ. ಸ್ಕೂಲ್ ಸ್ಥಾಪಿತವಾಗಿ ಸುಮಾರು 7 ವರ್ಷವಾಗುತ್ತ ಬಂದಿತು. ಆಗಿನಿಂದಲೂ ಅಭಿವೃದ್ಧಿ ಸ್ಥಿತಿಯಲ್ಲಿಯೇ ಇರುತ್ತದೆ. ಈಗಸ್ಕೂಲಿನಲ್ಲಿ 60.66 ಹುಡುಗರವರೆಗೂ ಇರುತ್ತಾರೆ. ಗ್ರಾಮಸ್ಥರು ತಯಾರುಮಾಡಿರತಕ್ಕ ಕಟ್ಟಡದಲ್ಲಿ ಸ್ಥಳ ಸಾಲದೆ 15.20 ಹುಡುಗರವರೆಗೂ ಊರಿನಲ್ಲಿರುತ್ತಾರೆ. ಈ ಗ್ರಾಮದ ಸುತ್ತಲೂ ½—¾ ಮೈಲಿ ದೂರ 3.4 ಗ್ರಾಮಗಳಿರುತ್ತವೆ. ಅಲ್ಲಿಂದಲೂ ಬರುವವರಾಗಿದ್ದಾರೆ. ಹೊಸ ಕಟ್ಟಡಕ್ಕಾಗಿ ಗ್ರಾಮಸ್ಥರು 3 ವರ್ಷದಲ್ಲಿಯೆ (300) ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಿರುತ್ತಾರೆ. ಈಗಿನ ತಾ॥ ಅಮಲ್ದಾರ್ ರಾಮಚಂದ್ರನಾಯುಡುರವರು ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಕಟ್ಟಿಸಬೇಕೆಂದು ಪ್ರಯತ್ನಮಾಡಿದ್ದರು. ಈ ಗ್ರಾಮಸ್ಥರಿಗೂ ಇಷ್ಟವಿರಲಿಲ್ಲ. ಈ ಸಮಯಕ್ಕೆ ಸರಿಯಾಗಿ ಇನ್ಸ್‌ಪೆಕ್ಟರು ರೇಂಜ್ ಅ॥ ಡೆ॥ ಇ॥ ಸಾಹೇಬರವರು ಇಲ್ಲಿಗೆ ದಯಮಾಡಿ ಈಗ ಏರ್ಪಡಿಸಿದ್ದ ಕಟ್ಟಡವು ಈ ಗ್ರಾಮಕ್ಕೆ ಸಾಲದು ಎಂಬುದಾಗಿ ಗ್ರಾಮಸ್ಥರಿಂದ ಒಂದು ಎಕರೆ ಜಮೀನ್

ಬಿಡಿಸಿಕೊಂಡು ಇಲ್ಲಿಗೆ ಲಾಯಕ್ಕಾಗಿ 2½-3 ಸಾವಿರ ರೂಪಾಯಿವರೆಗಿನ ವೆಚ್ಚದಿಂದ ಹೊಸಕಟ್ಟಡವನ್ನು ತಯಾರುಮಾಡಿಸಿಕೊಡುತ್ತೇವೆಂದು ವಾಗ್ದಾನಮಾಡಿರುತ್ತಾರೆ. ಇದಕ್ಕಾಗಿ ನಾವೆಲ್ಲರೂ ವಂದಿಸುತ್ತೇವೆ. ಈಗ ಬಂದಿರತಕ್ಕ ಹೆಡ್ಮಾಸ್ಟರ್ ಜಿ. ವೀರಪ್ಪನವರು ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಾರೆ. ಕಟ್ಟಡವು ತಯಾರಾಗುವವರೆಗೂ ಬೇರೆ ಸ್ಥಳದಲ್ಲಿ ಕೆಲವು ಕ್ಲಾಸ್ ಮಾಡಬೇಕೆಂದು ಸಾಹೇಬರು ಅಪ್ಪಣೆಕೊಡಿಸಿದರು. ಇದಕ್ಕಾಗಿ ಚೇರ್ಮನ್ ಜಿ. ನರಸೇಗೌಡರು ತಾವು ಕಟ್ಟಿಸತಕ್ಕ ಹೊಸಬಿಲ್ಡಿಂಗಿನಲ್ಲಿ ಒಂದು ಭಾಗವನ್ನು ಕೊಡುತ್ತೇವೆಂದು ಹೇಳಿರುತ್ತಾರೆ. ಅದಕ್ಕಾಗಿ ನಾವು ವಂದಿಸುತ್ತೇವೆ. ಎಸ್. ಲಿಂಗಪ್ಪ.

ಧಾರವಾಡದಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ಕಾಲೇಜಿನ ಧನನಿಧಿಗೆ ಡೆಪ್ಯುಟಿ ಕಲೆಕ್ಟರ್ ಉದ್ಯೋಗದಿಂದ ನಿವೃತ್ತರಾಗಿರುವ ರಾವ್‌ಬಹದ್ದೂರ್ ರುದ್ರಗೌಡ ಆಲೂರ ಐ. ಎಸ್. ಓ., ಯವರು ವೀರಶೈವರಿಂದ ಎತ್ತಿರುವ ಚಂದಾಹಣದ ವಿವರ.—

(ಕಳೆದವಾರದ ಶೇಷ.)

139. ಚಿಕ್ಕೋಡಿ ತಾ॥ ನಿಪ್ಪಾಣಿಯ ಮ॥ ಬಾಳಪ್ಪ ಈಶ್ವರಪ್ಪ ಶೆಂದಿಗಿ ಇವರು 75
140. ಹುಕ್ಕೇರಿ ತಾ॥ ಪಾಚ್ಛಾಪುರದ ಶ್ರೀ ಚೆನ್ನಬಸವಯ್ಯ ಸೊಲಬಯ್ಯ ವಸ್ತ್ರದ ಇವರು 75
141. ಸಂಪಗಾವದ ಮ॥ ಮುದ್ದಪ್ಪ ಅಪ್ಪಯ್ಯಪ್ಪ ಚಾಲಗಿಯವರು 75
142. ಸಂಪಗಾವದ ಮ॥ ಕಲ್ಲಪ್ಪ ಶಿವಲಿಂಗಪ್ಪ ಹೊಗರ್ತಿಯವರು 75
143. ಸಂಪಗಾವ ತಾ॥ ಮೊಹರೆದ ಮ॥ ಶಿವಲಿಂಗಪ್ಪ ಬಸಯ್ಯ ನಾಯಕ ಪಾಟೀಲರು 75
144. ಸಂಪಗಾವ ತಾ॥ ಅರವಳ್ಳಿಯ ಮ॥ ಶಿವಪಂಚಲಿಂಗಪ್ಪ ಪರಪ್ಪ ಪಾಟೀಲರು 75
145. ಡಿಟೋ ಗ್ರಾಮದ ಮ॥ ಬಸವನಗೌಡ ಮುದ್ದಪ್ಪ ಪಾಟೀಲರು 75
146. ಮುರುಗೋಡಿನ ಮ॥ ಮಹಂತಪ್ಪ ರಾಚಪ್ಪ ಕರಡಿಗುದ್ದಿ ಇವರು 75
147. ಪರಸಗಡ ತಾ॥ ಯಾದವಾಡದ ಮ॥ ಚೆನ್ನಮಲ್ಲಪ್ಪ ಬಸಪ್ಪ ಯಾದವಾಡ ಇವರು 75
148. ಪರಸಗಡ ತಾ॥ ಮುರಗೋಡಿನ ಮ॥ ಬಸವಂತಪ್ಪ ಕುರುಬೆಟ್ಟ ಇವರು 75
149. ಮುರ್ಗೋಡಿನ ಮ॥ ಶಿವಲಿಂಗಪ್ಪ ಶಿವಬಸಪ್ಪ ಮೊಬರದ ಇವರು 75
150. ಪರಸಗಡ ತಾ॥ ಮುರುಗೋಡಿನ ಮ॥ ಚೆನ್ನಮಲ್ಲಪ್ಪ ಸಿದ್ದಪ್ಪ ಮುಂಗೋಜಿಯವರು 75
151. ಮುರ್ಗೋಡಿನ ಮ॥ ಪರ್ವತಪ್ಪ ಶಿವಲಿಂಗಪ್ಪ ವಂಟ್ಮುರಿ ಇವರು 75
152. ಮುರ್ಗೋಡಿನ ಶ್ರೀ ಬಸವಲಿಂಗಯ್ಯ ಸಿದ್ಧರಾಮಯ್ಯ ಹಿರೇಮಠ ಇವರು 75
153. ಮುರ್ಗೋಡುಮಹಲ್ ಯರಗತ್ತಿಯ ಮ॥ ಗುರುಲಿಂಗಪ್ಪ ಬಸಪ್ಪ ಪಟ್ಟದ ಇವರು 60
154. ಬಾಗಲಕೋಟೆಯ ಮ॥ ಬಸವಲಿಂಗಪ್ಪ ಗೋಲಪ್ಪ ಕಡಿವಾಳ ಇವರು 50
155. ಬಾಗಲಕೋಟೆಯ ಮ॥ ಬಸವಲಿಂಗಪ್ಪ ತೋಟಪ್ಪ ದೇವಗಾಂವ ಇವರು 50
156. ಬಾಗಲಕೋಟೆಯ ಮ॥ ಸಿದ್ದಪ್ಪ ಹಾವಪ್ಪ ವೀರಶೆಟ್ಟರು 50
157. ಬಾಗಲಕೋಟೆಯ ಮ॥ ಚೆನ್ನಪ್ಪ ವಿರೂಪಾಕ್ಷಪ್ಪ ಜಿಗಜಿನ್ನಿ ಇವರು 50
158. ಬಾಗಲಕೋಟೆಯ ಮ॥ ವೀರಬಸಪ್ಪ ಬಸಪ್ಪ ಮೊಕಾಶಿಯವರು 50
159. ಬಾಗಲಕೋಟೆಯ ಮ॥ ಅಯ್ಯಪ್ಪ ರಾಚಪ್ಪ ಬ್ಯಾಳಿ ಇವರು 50
160. ಹುಕ್ಕೇರಿ ತಾ॥ ಘೊಡಗೇರಿಯ ಮ॥ ಲಗಮಪ್ಪ ಲಿಂಗಪ್ಪ ಮುಗಳಿ ಇವರು 50
161. ಡಿಟೋ ಗ್ರಾಮದ ಮ॥ ಶಿವಪ್ಪ ದೊಡ್ಡಪ್ಪ ತಿಗಡಿಯವರು 50
162. ಸಂಪಗಾವದ ಮ॥ ರಾಜಶೇಖರ ಶಿವಲಿಂಗಪ್ಪ ನಂದಿಯವರು 50
163. ಸಂಪಗಾವ ತಾ॥ ಯಡಾಳದ ಮ॥ ಗುರುಸಿದ್ದಪ್ಪ ಗುರುಬಸಪ್ಪ ಪಾಟೀಲರು 50
164. ಮುರುಗೋಡಿನ ಶ್ರೀ॥ ಫಕೀರಸ್ವಾಮಿ ಪರದೇಶಸ್ವಾಮಿ ಹಿರೇಮಠ ಇವರು 50
165. ಮುರಗೋಡ್‌ಮಹಲ್ ಮುದವಾಡದ ಶ್ರೀಮಂತ ಅಣ್ಣಾಸಾಹೇಬ್ ವೀರಬಸಪ್ಪನಾಯಕರು 50
166. ಬಿಜಾಪುರ ತಾ॥ ತೊಣಸಿಹಾಳದ ಮ॥ ಶಿವನಗೌಡ ಅಯ್ಯನಗೌಡ ಪಾಟೀಲರು 50
167. ಅಥಣಿಯ ಮ॥ ಸೊಲಬಪ್ಪ ಸಂಗನಬಸಪ್ಪ ಮಂಗಸೂಲಿ ಪ್ಲೀಡರ್‌ರವರು 50
168. ಸಂಪಗಾವ ತಾ॥ ತಿಗಡಿಯ ಮ॥ ಶಿವಬಸಪ್ಪ ಮಲ್ಲಪ್ಪ ನೇರಡಿಯವರು 50
169. ಮುರ್ಗೋಡುಮಹಲ್ ಚಿಕ್ಕೊಪ್ಪದ ಮ॥ ಬಸಪ್ಪ ನರಸಪ್ಪ ನರಸಣ್ಣನವರು ಇವರು 50
170. ಧಾರವಾಡ ಡಿ॥ ಹಾನಗಲ್ಲಿನ ಮ॥ ಲಿಂಗಪ್ಪ ಬಸಪ್ಪ ಕೂಬಿಹಾಳ ಇವರು 50
171. ಹುಕ್ಕೇರಿ ತಾ॥ ಕೇತಾರದ ಮ॥ ಧೂಳಪ್ಪ ಸಿದ್ದಪ್ಪ ಅಂಕಲಗುಡ ಇವರು 25
172. ಹುಕ್ಕೇರಿ ತಾ॥ ಪಾಚ್ಛಾಪುರದ ಮ॥ ಶಿವಪುತ್ರಪ್ಪ ಗುರುಸಿದ್ದಪ್ಪಶೆಟ್ಟಿ ಇವರು 25
173. ಹುಕ್ಕೇರಿ ತಾ॥ ಘೊಡಗೇರಿಯ ಮ॥ ಸಿದ್ದಪ್ಪ ಶಿವಪ್ಪ ವರ್ಜಿ ಇವರು 25
174. ಡಿಟೋಗ್ರಾಮದ ಮ॥ ಬಾಳಪ್ಪ ಶಾಂತವೀರಪ್ಪ ರಾಜೀನವರ ಇವರು 25
175. ಡಿಟೋಗ್ರಾಮದ ಮ॥ ಸಿದ್ದಪ್ಪ ಕೊಣಪ್ಪ ಅಣ್ಣಾರಿ ಇವರು 25
176. ಸಂಪಗಾವದ ಮ॥ ನಾಗಪ್ಪ ಬಸವಂತಪ್ಪ ಬಂಗಿಯವರು 25
177. ಸಂಪಗಾವದ ಮ॥ ಚೆನ್ನಬಸಪ್ಪ ಮಹಾರುದ್ರಪ್ಪ ಪಾಟೀಲರು 25
178. ಸಂಪಗಾವದ ಮ॥ ಕಲ್ಲಪ್ಪ ಚೆನ್ನಮಲ್ಲಪ್ಪ ಶೆಟ್ಟರ ಇವರು 25
179. ಪರಸಗಡ ತಾ॥ ಮುರ್ಗೋಡು ಮ॥ ಬಸಪ್ಪ ಸೋಮಪ್ಪ ಹುಕ್ಕೇರಿಯವರು 25
180. ಪರಸಗಡ ತಾ॥ ಸಪ್ಪದಾಳದ ಮ॥ ವೀರಭದ್ರಪ್ಪ ಚೆನ್ನವೀರಪ್ಪ ಪಾಟೀಲರು 25
181. ಪರಸಗಡ ತಾ॥ ಮುರ್ಗೋಡಿನ ಮ॥ ಮಲ್ಲಪ್ಪ ಬಸಪ್ಪ ಪದ್ಮಣ್ಣನವರ ಇವರು 25
182. ಪರಸಗಡ ತಾ॥ ಚಿಕ್ಕೊಪ್ಪದ ಮ॥ ವೀರಪ್ಪ ಚೆನ್ನವೀರಪ್ಪ ಕುಲಕರ್ಣಿಯವರು 25
183. ಪರಸಗಡ ತಾ॥ ಉಗರಗೋಳದ ಮ॥ ಮಲ್ಲನಗೌಡ ಚನ್ನಯ್ಯನಗೌಡ ಪಾಟೀಲರು 25
184. ಆಲೂರು ಹಾನಗಲ್ಲಿನ ಮ॥ ಪುಟ್ಟಪ್ಪ ಗಿರಿಯಪ್ಪ ಪಾವಲಿಯವರು 25
185. ಹಾನಗಲ್ ತಾ॥ ಆಲೂರಿನ ಮ॥ ಧುಂಡಪ್ಪ ಬಸಪ್ಪ ತುಪ್ಪದ ಇವರು 25
186. ಡಿಟೋ ಗ್ರಾಮದ ಮ॥ ಚನ್ನವೀರಪ್ಪ ಗಂಗಪ್ಪಶೆಟ್ಟರ ಇವರು 25
187. ಸಂಪಗಾವ ತಾ॥ ಬೂದಿಹಾಳದ ವೇ॥ ಕಾಶೀನಾಥಶಾಸ್ತ್ರಿ ಶಿವಯ್ಯಸ್ವಾಮಿ ಇವರು 25
188. ಮುರುಗೋಡಿನ ಮ॥ ಗಿರಿಮಲ್ಲಪ್ಪ ಮಲ್ಲಪ್ಪ ಗೊರವರ ಇವರು 15

ಚಂದಾಹಣವನ್ನೆತ್ತುವುದಕ್ಕಾಗಲಿ, ಇದರ ಲೆಕ್ಕವನ್ನಿಡುವುದಕ್ಕಾಗಲಿ ಮತ್ತೂ ಪತ್ರವ್ಯವಹಾರವನ್ನು ನಡಿಸುವುದಕ್ಕಾಗಲಿ ಒಟ್ಟು ಶೇಖರವಾದ ಹಣದಲ್ಲಿ ಒಂದು ಕಾಸೂ ಉಪಯೋಗಿಸಲ್ಪಟ್ಟಿಲ್ಲವು. ಈ ಹಣದಲ್ಲಿ 99,000 ಶೇಕಡ 3½ ರೂ. ಬಡ್ಡಿ ಬರುವ ಸರ್ಕಾರಿಯ ಪ್ರೋನೋಟು ಕೊಳ್ಳಲ್ಪಟ್ಟು ಆದೂ ನಗದು 1000 ರೂ. 1917 ನೆಯ ಮಾರ್ಚಿ ಕಡೆಯಲ್ಲಿ ಸರ್ಕಾರಕ್ಕೆ ವಹಿಸಲ್ಪಟ್ಟಿತು.

ಬೆಳಗಾಂ 25-7-1917 } ಆರ್. ಸಿ. ಆಲೂರ್.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 3

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ॥.

೧೯೧೭ ನೆಯ ಇಸವಿ ಸೆಪ್ಟೆಂಬರ್ ತಾ॥ ೯ ರಿಂದ ೧೯೧೭ ನೆಯ ಸೆಪ್ಟೆಂಬರ್ ತಾ॥ ೧೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಅಧಿಕ ಭಾದ್ರಪದ ಬ॥ ನವಮಿಯಿಂದ ಅಧಿಕ ಭಾದ್ರಪದ ಬ॥ ಚತುರ್ದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಸಿಂಹ ತೇದಿ
9	ಭಾನು	ನವಮಿ	56-43	ಮೃಗಶಿರೆ	33-43	25
10	ಸೋಮ	ದಶಮಿ	58-16	ಆರಿದ್ರಾ	36-25	26
11	ಮಂಗಳ	ಏಕಾದ	60	ಪುನರ್ವಸು	40-22	27
12	[1] ಬುಧ	ಏಕಾದ	1-44	ಪುಷ್ಯ	45-21	28
13	ಗುರು	ದ್ವಾದ	5-36	ಆಶ್ಲೇಷ	51-17	29
14	[2] ಶುಕ್ರ	ತ್ರಯೋ	10-17	ಮಖಾ	57-42	30
15	ಶನಿ	ಚತು	15-25	ಪುಭ	60	31

(1) ಸರ್ವತ್ರೈಕಾದಶೀ. (2) ಚತುರ್ದಶೀತಿಥಿಃ ಮಾಸಶಿವರಾತ್ರಿಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತ್ಕೃತಾ । ಘನಪಥಕೃತಾವತಾರಾ ಪಕ್ಕಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಾಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮುಂಚೆತ್ರಿಲೆಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಸೆಪ್ಟೆಂಬರ್ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೩೭

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ವೀರಶೈವ ಧರ್ಮಶಿರೋಮಣಿಃ.—ಬೆಲೆ ೧-೩-೦ ವೀರಶೈವ ಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಸಂಸ್ಕೃತಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ್ಕಂದಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶಿವಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

44 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚುಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ. ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ೩ ಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಅವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆ ವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನನ್ನ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಶಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಸ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ ಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರದಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ; ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಶೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಯ ಐದು ಆಣೆ ತೊಲದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಬೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಟಿಕ ಸಿಗುವದು. ತಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
28 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಶನ್ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 42

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋರೆಯುದುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಲ್. ಎಂ ಇನ್ಸ್‌ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಲ್. ಆಫ್ ಸ್ಯಾನಿಟರಿ ಇನ್ಸ್‌ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದ್ದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳ ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶಕಾರಾಳ	೦—೮—೦
ಶಿವಪೂಜಾವಿಧಿಃ	೦—೮—೦
ಛಾರುಶೀಲೆಚರಿತ್ರೆ	೦—೫—೦
ಹಂದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಪಂಚರೇಶ್ವರಶತಕಂ	೦—೧—೦

ಅಂಚೆಯುಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲಾ ನಮ್ಮಲ್ಲಿ ದೊರೆಯುತ್ತವೆ.

ಸೂಚನೆ.

ಪದ್ಧತಿಯ ಪ್ರಕಾರ ಗಣೇಶನ ಹಬ್ಬದುದ್ದೇಶದಿಂದ ಬರುವ ಸೆಪ್ಟಂಬರ್ ತಾ|| ೨೩ ನೆಯ " ಮೈಸೂರ್ ಸ್ಟಾರ್ " ಸಂಚಿಕೆಯು ಹೊರಡುವುದಿಲ್ಲವು.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಸೆಪ್ಟಂಬರ್ ತಾ|| ೧೬ ನೆಯ ಭಾನುವಾರ.

ವೈಸಾ್ರಯರ ಉಪನ್ಯಾಸವು.

...

ಅಧಿವೇಶ ರಾಜ್ಯಗಳಲ್ಲಿ ಭಾರತೀಯರ ಸ್ಥಿತಿಗತಿಯು ಸ್ವಲ್ಪಮಟ್ಟಿಗೆ ಉತ್ತಮಗೊಳಿಸಲ್ಪಟ್ಟಿದು. ಇವಲ್ಲದೆ ಆಯುಧಶಾಸನ ವಿಷಯದಲ್ಲಿ ಜಾತಿಭೇದವನ್ನು ಗಮನಿಸುವುದಿಲ್ಲನೆಂದು ವೈಸಾ್ರಯರು ಈ ಸಂದರ್ಭದಲ್ಲಿ ಹೇಳಿರುವುದು ಕೂಡ ಗಮನೀಯವಾಗಿದೆ. ಬಳಿಕ ೩ ನೆಯ ಕಾರ್ಯದ ಸ್ವರೂಪ ವಿವರಣವನ್ನು ಕುರಿತು ವೈಸಾ್ರಯರು ಹೇಳಿದುದರಲ್ಲಿ ಪ್ರಸಕ್ತಸಮಯದ ಅತಿ ಮುಖ್ಯ ವಿಷಯವೊಂದಿದ್ದಿತು. ಅವುದೆಂದರೆ—ಭರತಖಂಡದ ಆದರ್ಶವನ್ನು ಕುರಿತು ಅವರು ಮಾತನಾಡಿದುದು ಭರತಖಂಡವನ್ನು ಆಂಗ್ಲಸಾಮ್ರಾಜ್ಯದಲ್ಲಿ ಒಂದು ಮುಖ್ಯ ಭಾಗವನ್ನಾಗಿ ಮಾಡಿ, ಆಂಗ್ಲಪ್ರಭುತ್ವಕ್ಕೆ ಅಧೀನವಾದ ಸ್ವಪರಿಪಾಲನವನ್ನು ಕೊಡುವುದೇ ಪ್ರಭುತ್ವದವರ ಆಶಯವೆಂದು ಸ್ಪಷ್ಟವಾಗಿ ಹೇಳಿದರು. ಈ ಆದರ್ಶವನ್ನು ಸೇರುವುದಕ್ಕೆ ಮೂರು ದಾರಿಗಳನ್ನು ಕೂಡ ವೈಸಾ್ರಯರು ಅಪ್ಪಣೆಕೊಡಿಸಿದರು. ೧ ನೆಯದು—ಸ್ಥಾನಿಕ ಸ್ವಪರಿಪಾಲನಕ್ರಮವನ್ನಭಿವೃದ್ಧಿಗೊಳಿಸುವುದು. ೨ ನೆಯದು—ಭಾರತೀಯರನ್ನು ಸರ್ಕಾರದ ದೊಡ್ಡದೊಡ್ಡ "ಜವಾಬ್ದಾರಿ" ಯುಳ್ಳ ಉದ್ಯೋಗಗಳಿಗೆ ನಿಯಮಿಸುವುದು. ೩ ನೆಯದು—ನಿಯಮನಿರ್ಮಾಣ ಸಭೆಯ ಸಾಮರ್ಥ್ಯವನ್ನು ಬಲಪಡಿಸುವುದು. ಹೀಗೆ ಮುಖ್ಯವಾದ ಮೂರು ದಾರಿಗಳ ದಿಗ್ದರ್ಶನವನ್ನು ಅವರು ಮಾಡಿದರು. ...

... ಹದಲ್ಲಿ ಅಭಿವೃದ್ಧಿಗೊಂಡು ಚೆನ್ನಾಗಿ ಫಲಿಸುವುದೆಂದೂ ಅಪ್ಪಣೆಕೊಡಿಸಿದರು. ತದನಂತರ ತಮ್ಮ ಅಂತ್ಯೋಕ್ತಿಯಲ್ಲಿ ಭಾರತೀಯ ಪ್ರಮುಖರಿಗೆಲ್ಲಾ ಒಂದು ವಿಜ್ಞಾಪನೆಯನ್ನು ಮಾಡುವುದಕ್ಕೆ ತೊಡಗಿ, ಹಿಂದಿನ ಏರ್ಪಾಟುಗಳೆಲ್ಲಾ ಬದಲಾವಣೆಗೊಂಡು ನವೀನ ರೀತಿಗಳು ಏರ್ಪಡುತ್ತಿರುವ ಈ ಸಮಯದಲ್ಲಿ ಭಾರತೀಯ ಪ್ರಮುಖರು ನಮ್ಮಲ್ಲಿ (ಪ್ರಭುತ್ವದವರಲ್ಲಿ) ನಂಬುಗೆಯುಳ್ಳವರಾಗಬೇಕು. ಅವರೂ ನಾವೂ ಕೂಡ ಒಂದೇ ಕಾರ್ಯದಲ್ಲಿ ನಿಮಗ್ನರಾಗಿ ಶ್ರಮಪಡುತ್ತಿದ್ದೇವೆ. ಭರತಖಂಡವನ್ನಭಿವೃದ್ಧಿಗೊಳಿಸುವುದೇ ನಮ್ಮಿಬ್ಬರಿಗೂ ಮುಖ್ಯ ಲಕ್ಷ್ಯವಾಗಿದೆ. ನಮ್ಮ ಕರ್ತವ್ಯಗಳು ಬಹಳ ಕಷ್ಟಸಂವೇಷ್ಟಿತವಾಗಿವೆ. ಅದುಕಾರಣ ಕಾರ್ಯನಿರ್ವಾಹವು ಬಹಳ ಜಾಗರೂಕತೆಯಿಂದ ನಡೆಯಬೇಕಾಗಿದೆ. ರಾಜಕೀಯ ವ್ಯವಹಾರ ಪರಿಷ್ಕಾರವು ಪಾಲ್ಯಪಾಲಕರ ಅನ್ಯೋನ್ಯ ವಿಶ್ವಾಸದಿಂದಲೂ ಸಕಾರಣವಾಗಿಯೂ ಆಗಬೇಕಾಗಿದೆ. ಅದುಕಾರಣ ಉಭಯಪಕ್ಷದವರೂ ಮಿತ್ರತ್ವದಿಂದ ಕೂಡಿ ಧರ್ಮಮಾರ್ಗವನ್ನನುಸರಿಸಿ ಉಚಿತವಾದುದಾವುದೋ ಅದನ್ನು ಮಾಡಲು ತೀರ್ಮಾನಿಸಬೇಕು. ಭರತಖಂಡದ ರಾಜ್ಯಾಂಗ ವಿಷಯಗಳನ್ನು ಸಂಸ್ಕರಿಸಬೇಕಾದುದು ಯುಕ್ತವೂ ಆವಶ್ಯಕವೂ ಆಗಿದ್ದರೂ ಸತ್ರಮುಖ್ಯದಲ್ಲಿ ಇದಕ್ಕಿಂತಲೂ ಮಿಗಿಲಾದ ಸಮಸ್ಯೆಯು ಸಾಮ್ರಾಜ್ಯಪ್ರಭುತ್ವದವರಿಗೆ ಯುದ್ಧರಂಗದಲ್ಲಿ ಸಿದ್ಧಾರ್ಥವಾಗಬೇಕಾಗಿದೆ. ...

ಮೈಸೂರು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರು.

...

ಒಳದೇಶದ ವೃತ್ತಾಂತಗಳು.

...

ಯುದ್ಧವಾರ್ತೆಯು

...

ವಿದ್ಯೆಯಲ್ಲಿ ಮುಂದಾದವರ ಹಿಂದಾದವರುಗಳ ಲೆಕ್ಕದ ಪಟ್ಟಿ.

... ಶ್ರಮಪಟ್ಟು ಸಂಗ್ರಹಿಸಿದ ಲೆಕ್ಕದ ಪಟ್ಟಿಯು ಈ ದೇಶದ ನಾನಾ ಪ್ರಜೆಗಳಲ್ಲಿರುವ ವಿದ್ಯಾವಂತರ ವಿದ್ಯಾಭ್ಯಾಸಿಗಳ ಮತ್ತೂ ಅನಕ್ಷರಸ್ಥರ ಸಂಖ್ಯೆಗಳನ್ನೆಲ್ಲಾ ವಿಶದಪಡಿಸಿರುವುದಾದಕಾರಣ ಉಪಯೋಗಕರವಾದ ಆ ಪಟ್ಟಿಯನ್ನು ಮಾತ್ರ ಉದ್ಧರಿಸಿ ಇಲ್ಲಿ ಪ್ರಕಟಿಸಿರುತ್ತೇವೆ:—

	ಒಟ್ಟು	ಬ್ರಾಹ್ಮಣರು	ಕ್ಷತ್ರಿಯರು	ವೈಶ್ಯರು	ಲಿಂಗಾಯತರು	ಜೈನರು	[illegible]	[illegible]	ಬ್ರಾಹ್ಮಣರ ಹೊರತು ಇತರ ಹಿಂದುಗಳು	ಮುಸಲ್ಮಾನರು	ಕ್ರೈಸ್ತರು
ಜನಸಂಖ್ಯೆ ...	57,05,359	1,94,875	37,927	26,497	7,29,431	17,310			51,46,038	3,14,494	46,54[illegible]
1. ಕಾಲೇಜು ತರಗತಿಗಳು ...	930	779	21	11	24	2	38	1	97	24	14
2. ಟ್ರೈನಿಂಗ್ ಕಾಲೇಜು ...	6	6	...	...	...	...	...	...	...	...	...
3. ಹೈಸ್ಕೂಲ್ ತರಗತಿಗಳು ...	5,045	3,331	103	150	294	35	728	...	1,310	134	127
4. ಎ.ವಿ. ಸ್ಕೂಲು ತರಗತಿಗಳು...	23,860	8,480	496	1,337	2,263	247	7,223	418	11,984	2,284	570
5. ಉಪಾಧ್ಯಾಯರನ್ನು ತರಬೇತು ಮಾಡುವ ಸ್ಕೂಲ್‌ಗಳು ...	258	175	1	1	22	...	26	1	51	30	2
6. ಕೈಗಾರಿಕೆ ಸ್ಕೂಲುಗಳು ...	1,252	226	13	49	36	2	65	...	630	153	227
7. ವ್ಯಾಪಾರದ ಸ್ಕೂಲುಗಳು ...	347	210	3	18	11	4	18	...	99	2	21
8. ಎಂಜಿನಿಯರಿಂಗ್ ಸ್ಕೂಲುಗಳು	198	163	...	5	2	...	3	...	25	6	3
9. ವ್ಯವಸಾಯದ ಸ್ಕೂಲುಗಳು ..	29	21	3	...	...	...	3	...	6	2	...
10. ಬಾಲಶಿಕ್ಷಣಾ ಸ್ಕೂಲುಗಳು ...	1,80,115	26,101	1,858	4,323	35,294	951	78,723	5,423	1,26,572	20,615	1,862

ಮುಖ್ಯ ಜನಾಂಗಗಳಲ್ಲಿ ಮಾತೃಭಾಷೆಯಲ್ಲಿ ಮತ್ತು ಇಂಗ್ಲೀಷಿನಲ್ಲಿ ಅಕ್ಷರಸ್ಥರು (1914-15 ರಲ್ಲಿ)

	ಮಾತೃಭಾಷೆಯಲ್ಲಿ 100 ಕ್ಕೆ	ಇಂಗ್ಲೀಷಿನಲ್ಲಿ 10,000 ಕ್ಕೆ
1. ಬ್ರಾಹ್ಮಣರು ...	42	750
2. ಕ್ಷತ್ರಿಯರು ...	17	200
3. ವೈಶ್ಯರು ...	31	100
4. ಲಿಂಗಾಯತರು ...	9	10
5. ಒಕ್ಕಲಿಗರು ...	3	6
6. ಕ್ರೈಸ್ತರು ...	25	900
7. ಮಹಮ್ಮದೀಯರು ...	12	60
8. ಬ್ರಾಹ್ಮಣರ ಹೊರತು ಇತರ ಎಲ್ಲಾ ಹಿಂದುಗಳು	4	15

ಈ ಎರಡು ಪಟ್ಟಿಗಳ ಮೂಲಕ ನಮ್ಮ ಪ್ರಜಾಸಮೂಹದ ಒಂದೆರಡು ಜನಾಂಗದವರು ಮಾತ್ರ ವಿದ್ಯೆಯಲ್ಲಿ ಎಲ್ಲಾ ಜನಾಂಗದವರಿಗಿಂತಲೂ ಮುಂದುವರಿದಿರುವರೆಂದು ಗೊತ್ತಾಗುತ್ತದೆ. ಆದರೆ ಕ್ರೈಸ್ತಮತದವರು ಮುಂದುವರಿದಿರುವುದಕ್ಕೆ ಆಂಗ್ಲೇಯ ಮಿಷನರಿಗಳ ಮಹನಿಯ ಅವರ ವಿಶ್ವಾಸವೇ ಕಾರಣ. ಈ ವಿಷಯದಲ್ಲಿ ಇನ್ನೂ ಸ್ಪಷ್ಟವಾದ ತಿಳುವಳಿಕೆ ಬಗ್ಗೆ ಮ... ಜನಾಂಗದ ಮತ್ತೂ ಹಿಂದುಳಿದಿರುವ ಅನೇಕ ಜನಾಂಗಗಳ ಜನಸಂಖ್ಯೆಯನ್ನು ಸರಿಸಮನಾಗಿಟ್ಟು ಕೊಂಡರೆ ಈ ಎರಡು ಜನಾಂಗಗಳವರ ಅಭಿವೃದ್ಧಿಗೂ ಇರತಕ್ಕ ತಾರತಮ್ಯವನ್ನು ಕೆಳಗಿನ ಪಟ್ಟಿಯು ತೋರಿಸುತ್ತದೆ.

	ಶಾಲೆಗಳಲ್ಲಿ ಓದುತ್ತಿರುವವರ ಸಂಖ್ಯೆ: ಮುಂದುವರಿದಿರುವವರು	ಶಾಲೆಗಳಲ್ಲಿ ಓದುತ್ತಿರುವವರ ಸಂಖ್ಯೆ: ಹಿಂದುಳಿದಿರುವವರು	ತಾರತಮ್ಯ
ಜನಸಂಖ್ಯೆ	1,94,870	55,10,489	1—28
1. ಬಾಲಶಿಕ್ಷಣಾ ಸ್ಕೂಲುಗಳು	16,692	1,22,427	3.8—1
2. ಮಿಡಲ್ ಸ್ಕೂಲ್ ತರಗತಿಗಳು	3,692	12,223	8—1
3. ಎ. ವಿ. ಸ್ಕೂಲ್ ,,	8,766	15,938	15—1
4. ಹೈಸ್ಕೂಲ್ ,,	3,439	1,750	55—1
5. ಕಾಲೇಜು ,,	780	151	146—1

ಭರತಖಂಡದ ವೃತ್ತಾಂತಗಳು.

ಸೆಪ್ಟಂಬರ್ ತಾ|| ೭ ರವರೆಗೆ ಯುದ್ಧ ...

...

ಮದ್ರಾಸು ಆಧಿಪತ್ಯದ ಬರಂಪುರದ ತಾಲ್ಲೂಕಿನ ರೆವಿನ್ಯೂ ಇನ್ಸ್‌ಪೆಕ್ಟರ ಪತ್ನಿಯಾದ ಜಗ್ಗಮ್ಮ ಎಂಬಾಕೆಯು ಕಳೆದ ತಾ|| ೧ ರಲ್ಲಿ ಬಾವಿಗೆ ಬಿದ್ದು ಪ್ರಾಣವನ್ನು ಕಳೆದುಕೊಂಡರು. ಈಕೆಯು ತನ್ನ ಪತಿಯೊಡನೆ ಯಾವುದೋ ಗ್ರಾಮಕ್ಕೆ ಹೋಗಿದ್ದಾಗ ಒಬ್ಬ ಜೋಯಿಸನು -ನೀನು ಇನ್ನು ಸ್ವಲ್ಪ ಕಾಲದೊಳಗೇ ಪುತ್ರಶೋಕವನ್ನನುಭವಿಸುತ್ತೀಯೆ- ಎಂದು ಹೇಳಿದ್ದನಂತೆ. ಇದರಿಂದ ವ್ಯಾಕುಲಚಿತ್ತಳಾಗಿದ್ದ ಈಕೆಯು ತನ್ನ ಊರಿಗೆ ಬಂದನಂತರ ತನ್ನ ತಾಯಿಗೊಂದು ಕಾಗದವನ್ನೂ ಪೊಲೀಸಿನವರಿಗೆ ಒಂದು ಕಾಗದವನ್ನೂ ಬರೆದು, ಬಾವಿಕಟ್ಟೆಯಮೇಲಿಟ್ಟು ಎದೆ ಗುಂಡಿಗೆಯನ್ನು ಕಲ್ಲುಮಾಡಿಕೊಂಡು ಆತ್ಮಹತ್ಯ ಮಾಡಿಕೊಂಡಳು. ಈಕೆಯ ವಯಸ್ಸು ೨೨ ಮಾತ್ರವೇ ಆಗಿದ್ದಿತು. ಅದಕ್ಕೆ ಮುಂಚೆ ಈಕೆಯು ತನ್ನ ಇಬ್ಬರು ಗಂಡುಮಕ್ಕಳನ್ನು ಕಳೆದುಕೊಂಡು ದುಃಖವನ್ನನುಭವಿಸಿದವಳಾಗಿದ್ದುದರಿಂದಲೂ, ಈಗ ಮತ್ತೊಂದು ಅಂಥ ವಿಯೋಗದುಃಖವನ್ನು ಅನುಭವಿಸಬೇಕಾಗುವುದೆಂಬ ಭವಿಷ್ಯತ್ತನ್ನು ಕೇಳಿದುದರಿಂದಲೂ ಪುತ್ರಶೋಕವನ್ನು ಅನುಭವಿಸುವುದಕ್ಕೆ ಹೆದರಿ ಹೀಗೆ ಮಾಡಿಕೊಂಡಳು. ವಿದ್ಯಾವತಿಯಾಗಿದ್ದರೂ ಈಕೆಯು ಜೋಯಿಸರ ಮಾತಿಗೆ ಹೆದರಿ ಇಂಥ ಆತ್ಮಹತ್ಯರೂಪ ಪಾಪಾಚರಣೆಗೆ ಮನಸ್ಸು ಮಾಡಿದುದು ವಿಷಾದಕರವಲ್ಲವೇ? ದೇಶದಮೇಲೆ ಉದರಭರಣಾರ್ಥವಾಗಿ ಅನೇಕರು ಬೆಳಗಿನಜಾವದ ಬುಡುಬುಡಕೆಯವರಾಗಿಯೂ ಕಾಲಜ್ಞಾನಿಗಳಾಗಿಯೂ, ಜೋಯಿಸರಾಗಿಯೂ, ಮಂತ್ರವಾದಿಗಳಾಗಿಯೂ, ಬಂದು, ಭಯಗ್ರಸ್ತರ ಮತ್ತೂ ವಿಪನ್ನರ ಮುಂಗಡೆಯಲ್ಲಿ ಅನೇಕ ಕಲ್ಪನಾ ವಚನಗಳನ್ನು ಹೇಳಿ ಭಯಕರಂಗವನ್ನುಂಟುಮಾಡಿ, ಕಟ್ಟು ತಪ ಮೊದಲಾದುವುಗಳನ್ನು ಮಾಡಿ ರಕ್ಷಿಸುವೆವೆಂದು ಹೇಳಿ ದುಡ್ಡನ್ನು ಕಿತ್ತು ತಮ್ಮ ದಗ್ಧೋದರವನ್ನು ತುಂಬಿಕೊಳ್ಳುತ್ತಿರುವರು. ಒಂದೊಂದು ಸಮಯದಲ್ಲಿ ಭೀರುಗಳ ಅವಸ್ಥೆಯು ಮೇಲೆಕಂಡ ಜಗ್ಗಮ್ಮನ ಕೃತ್ಯದಂತೆ ಪರಿಣಮಿಸುವುದುಂಟು. ಇಂಥ ಬೂಟಾಟಿಗಾರರಾದ ಮಾಯಾವಿಗಳ ಸುಳ್ಳು ಬುರುಡೆಗೆ ವಿವೇಕಿಗಳು ಗಮನಕೊಡಬೇಕಾದುದು. ವೃಥಾಭಯೋತ್ಪಾದಕರಾದ ಇಂಥ ಮಾಯಾವಿಗಳನ್ನು ಸರ್ಕಾರದವರಾದರೂ ಹಿಡಿದು ದಂಡಿಸುವುದು ಅವಶ್ಯಕವು.

ವಿದೇಶವೃತ್ತಾಂತಗಳು.

ಸೀಮೆಯಲ್ಲಿ ಮಾರಕಟ್ಟೆನೊಳಗೆ ಬೆಳ್ಳಿಯ ಬೆಲೆಯು ಏರುತ್ತಲೇ ಇದೆ.

ಜಪಾನರಿಗೆ ಹಡಗುಗಳನ್ನು ಕಟ್ಟುವುದಕ್ಕೆ ಬೇಕಾದ ಉಕ್ಕು ಮೊದಲಾದ ಲೋಹಗಳನ್ನು ತಾವು ಒದಗಿಸಿಕೊಡುವುದಕ್ಕೆ ಅಮೇರಿಕಾದವರು ನಿರ್ಧರಿಸಿದ್ದಾರೆ.

ಲಂಡನ್‌ಪಟ್ಟಣದಲ್ಲಿ ದೊಡ್ಡ ಬಿರುಗಾಳಿ ಮಳೆಗಳಿಂದ ಅನೇಕಾನರ್ಥಗಳಾದುವು. ಸಿಡಿಲು ಬಡಿದು ಬಹಳ ಮನೆಗಳು ಹಾಳಾದುವು. ಟ್ರಫಾಲ್ಗರ್ ಚೌಕದಲ್ಲೆಲ್ಲಾ ದೊಡ್ಡ ಸರೋವರದಂತೆ ನೀರು ನಿಂತಿದ್ದಿತು.

ಫ್ರಾನ್ಸಿನಲ್ಲಿ ಮಂತ್ರಿವರ್ಗದೊಳಗಣ ಕೆಲರು ರಾಜೀನಾಮೆಕೊಟ್ಟುದರಿಂದ ಮುಖ್ಯಮಂತ್ರಿ ರಿಬ್ಬಟ್‌ರವರು ಬೇರೊಂದು ನೂತನಮಂತ್ರಿಮಂಡಲವನ್ನು ಏರ್ಪಡಿಸುವುದರಲ್ಲಿದ್ದಾರೆ.

ಪೋಪರವರು ಕೊಟ್ಟ ಸಂಧಿಸೂಚನೆಗೆ ಅಮೇರಿಕಾದ ಅಧ್ಯಕ್ಷರು ಕಳುಹಿಸಿರುವ ಉತ್ತರವು ತಮಗೆ ಸಮ್ಮತವಾಗಿರುವುದೆಂದೂ ತಾವೂ ಕೂಡ ಅದೇರೀತಿಯಾಗಿ ಉತ್ತರವನ್ನು ಕಳುಹಿಸುವೆವೆಂದೂ ಇಂಗ್ಲೆಂಡಿನವರಿಂದ ಅಮೇರಿಕಾದವರಿಗೆ ತಿಳಿಯಿಸಲ್ಪಟ್ಟಿರುವುದು.

ಪತ್ರವ್ಯವಹಾರ.

ತಾ|| ೯-೮-೧೯೧೭ ನೆಯ ಗುರುವಾರ ಮ|| ರಾ|| ಕಾಡಪ್ಪನವರ ಮನೆಯಲ್ಲಿ ನಡೆದ ಮಿರ್ಜಿ ವೀರಶೈವವಿದ್ಯಾವರ್ಧಕಸಂಘದವರು ನಡೆಯಿಸಿದ ೩ ನೆ ಮ್ಯಾನೇಜಿಂಗ್ ಕಮಿಟಿಯ ಮೀಟಿಂಗ್ ಪ್ರೊಸೀಡಿಂಗ್ಸ್.

1. ಹಿಂದಿನ ಮೀಟಿಂಗಿನ ನಡವಳಿಕೆಗಳನ್ನು ಓದಿ ಕಾಯಂಮಾಡಲಾಯಿತು. 2. ಸಕ್ಸಿಡೆಂಟ್ಸ್ ಹೋಮು ಕಟ್ಟಡಕ್ಕೆ ಗೋವಿಂದರಾಜ ಮೊದಲಿಯಾರು ಮೇಸ್ತ್ರಿಯವರು ಕೊಟ್ಟಿರುವ ಟೆಂಡರುಗಳನ್ನು [illegible] ರೇಟುಗಳೊಡನೆ ಪರಸ್ಪರ ಹೋಲಿಸಿ ನೋಡಿದ್ದಾಯಿತು. ಮೇಸ್ತ್ರಿಯು ಕೊಡುವ ರೇಟುಗಳು ಎಲ್ಲಾ ಐಟಮ್ಮುಗಳಲ್ಲಿಯೂ ಹೆಚ್ಚು ಅನುಕೂಲವಾಗಿರುವದರಿಂದಲೂ ಸದರಿಯವರಿಂದ ಸ್ವಂತ ಮನೆಯನ್ನು ಮಾಡಿಸಿ ಅನುಭವವುಳ್ಳ ಮ|| ಪಂಚಾಕ್ಷರಪ್ಪನವರೂ ಸದರಿ ಕಂಟ್ರಾಕ್ಟನ್ನೇ ಶಿಫಾರಸ್ಸು ಮಾಡುವದರಿಂದಲೂ ಸದರಿಯವರಿಗೆ ಕಂಟ್ರಾಕ್ಟ್ ಕೊಡಲು ನಿರ್ಧರವಾಯಿತು. 3. ಲೀಗಲ್ ಅಡ್ವೈಸರೊಡನೆ ಸೆಕ್ರಟೆರಿಯವರು ಪರ್ಯಾಲೋಚಿಸಿ ಸದರಿ ಕಂಟ್ರಾಕ್ಟುದಾರನಿಂದ ಸೆಕ್ರಟೆರಿಯವರು ಕ್ರಮವಾದ ಅಗ್ರಿಮೆಂಟ್ ಬರೆಯಿಸತಕ್ಕದ್ದು. 4. ಸದರಿ ಕಂಟ್ರಾಕ್ಟುದಾರರು ಜಮಾಯಿಸಿದ ಸಾಮಾನುಗಳ ಅಂದಾಜು ಮೊಬಲಗಿನಲ್ಲಿ ಮತ್ತು ನಡೆಸಿದ ಕೆಲಸಗಳ ಆಗುವಡಿನ ಅಂದಾಜು ಮೊಬಲಗಿನಲ್ಲಿ ¾ ಭಾಗ ಹಣವನ್ನು ಟ್ರೆಜರರು ತಮ್ಮ ಜವಾಬ್ದಾರಿಮೇಲೆ ಕೊಡಲು ಅಧಿಕಾರವುಳ್ಳವರಾಗಿರುತ್ತಾರೆ. 5. ಪ್ರತಿ ಮಾಹೆಯಲ್ಲಿ ಮ್ಯಾನೇಜಿಂಗ್ ಕಮಿಟಿ ಮುಂದೆ ಟ್ರೆಜರರು ಸದರಿ ಕಂಟ್ರಾಕ್ಟದಾರನಿಗೆ ಕೊಟ್ಟ ಮೊಬಲಗಿನ ತಪ್ಸೀಲು ಲೆಖ್ಖಗಳನ್ನು ಇಟ್ಟು ಕಮಿಟಿಯವರ ಸ್ಯಾಂಕ್ಷನ್ನನ್ನು ಹೊಂದತಕ್ಕದ್ದು. 6. ಕಟ್ಟಡದ ಕೆಲಸಗಳನ್ನು ನೋಡಿಕೊಳ್ಳುವುದಕ್ಕೂ ಸದರಿ ಲೆಖ್ಖಗಳನ್ನು ಇಡುವುದಕ್ಕೂ ಒಬ್ಬ ಗುಮಾಸ್ತನನ್ನು ೧೨-೧೫ ರೂಪಾಯಿ ಸಂಬಳದಮೇಲೆ ನೇಮಕಮಾಡಿಕೊಳ್ಳತಕ್ಕದ್ದು. ಛೇರ್ಮನ್ನರಿಗೆ ವಂದನೆಗಳನ್ನು ಅರ್ಪಿಸಿ ಸಭೆಯನ್ನು ಮುಗಿಸಿದ್ದಾಯಿತು.

ಜಿ. ಎಂ. ಕಾಡಪ್ಪ.

ಶ್ರೀಮದ್ವೀರಶೈವ ವಿದ್ಯಾಭಿವರ್ಧಕಸಭಾ, ಚಿಟ್ಟದಪುರ,

ವೀರರಾಜೇಂದ್ರಪೇಟೆ ದೊಡ್ಡಮಠದ ಶ್ರೀ ಶ್ರೀ ನಿರಂಜನ ಚರವರ್ಯ ಮಹಾಂತಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ೨೩-೮-೧೯೧೭ ನೆಯ ಗುರುವಾರ ಚಿಟ್ಟದಪುರದ ಮಠದಲ್ಲಿ ಒಂದು ಸಭೆಯು ನಡೆಯಿಸಲ್ಪಟ್ಟಿತು. ಮೈಸೂರು, ಹಾಸನ, ಕೊಡಗು, ಧಾರವಾಡ, ಈ ಪ್ರಾಂತ್ಯಗಳಿಂದ ಅನೇಕರು ಸಭೆಗೆ ದಯಮಾಡಿಸಿದ್ದರು. ಸಭಾಕಾರ್ಯಕರ್ತೃಗಳಲ್ಲೊಬ್ಬರು ತಮ್ಮ ಪ್ರಾಂತದ ವೀರಶೈವ ಬಾಲಕರು ವಿದ್ಯಾರ್ಜನೆ ಮಾಡಬೇಕಾದರೆ ಯಾವಯಾವ ಅನುಕೂಲಗಳನ್ನು ಕಲ್ಪಿಸಿ ಕೊಡಬೇಕೆಂಬುದನ್ನು ಪರ್ಯಾಲೋಚಿಸುವುದು ಸಭೆಯ ಮುಖ್ಯೋದ್ದೇಶವೆಂದು ಹೇಳಿದರು. ಕನ್ನಡ ಕಾಲೇಜಾಸರೆಂದೆನಿಸಿ ಆಸ್ಥಾನಕವಿಗಳಾಗಿದ್ದ ವೇ|| ಬಸವಪ್ಪಶಾಸ್ತ್ರಿಗಳ ಮಕ್ಕಳು ಮಹದೇವಶಾಸ್ತ್ರಿಗಳು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ ವಿಷಯದಲ್ಲಿ ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಹುಣಸೂರು ತಾ|| ಅಮಲ್ದಾರರಾದ ಮ|| ಪುಟ್ಟಲಿಂಗಪ್ಪನವರು ವಿದ್ಯೆಯಲ್ಲಿ ನಮ್ಮ ಜನರು ಎಷ್ಟು ಹಿಂದುಳಿದಿರುತ್ತಾರೆಂಬುದನ್ನೂ ವಿದ್ಯೆಯಲ್ಲಿ ಹಿಂದುಳಿದ ಜನಾಂಗಗಳಿಗೆ ತಮ್ಮ ಘನತೆಯನ್ನು ಹೊಂದಿದ ಸರ್ಕಾರದವರು ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಿ ವಿದ್ಯಾಪ್ರೋತ್ಸಾಹಮಾಡುತ್ತಲಿದ್ದಾರೆಂಬುದನ್ನೂ ವಿಶದವಾಗಿ ಸರ್ವರ ಮನಸ್ಸಿನಲ್ಲಿ ನಾಟುವಂತೆ ಹೇಳಿದರು. ವೇ|| ಸುತ್ತೂರು ಶಾಂತವೀರಶಾಸ್ತ್ರಿಗಳು ಮ|| ಗಳಾದ ಹಾಡ್ಯದ ಹುಂಚಣ್ಣನವರು, ರಾವಂದೂರು ಚನ್ನಪ್ಪನವರು, ಬಿ. ಸುಬ್ಬಣ್ಣನವರು ನಮ್ಮ ಜನರು ಕನ್ನಡ ಇಂಗ್ಲೀಷ್ ಮತ್ತು ಸಂಸ್ಕೃತ ವಿದ್ಯೆಗಳಲ್ಲಿ ಎಷ್ಟರಮಟ್ಟಿಗೆ ಹಿಂದೆಬಿದ್ದಿರುತ್ತಾರೆಂಬ ವಿಷಯದಲ್ಲೂ ಇಂಗ್ಲೀಷ್ ವಿದ್ಯೆಯಿಂದ ಎಷ್ಟು ಪ್ರಯೋಜನವಿರುತ್ತೆಂಬುದನ್ನೂ ಕುರಿತು ಯುಕ್ತಿಯುಕ್ತವಾದ ಉಪನ್ಯಾಸಗಳನ್ನು ಮಾಡಿದರು. ನಮ್ಮ ವೀರಶೈವ ಬಾಲಕರಲ್ಲನೇಕರಿಗೆ ವಿದ್ಯಾಭ್ಯಾಸವೇ ಇಲ್ಲವಾಗಿರುವುದರಿಂದ ಅವರಿಗೆ ಪ್ರೈಮರಿ ವಿದ್ಯಾಭ್ಯಾಸವನ್ನಾದರೂ ಮಾಡಿಸುವುದು ಅತ್ಯಗತ್ಯವೆಂದು ಅನೇಕರಿಗೆ ತಿಳಿದುಬಂದದ್ದರಿಂದ ಸಭಿಕರಲ್ಲನೇಕರು ತಮ್ಮ ಪ್ರಾಂತಗಳಲ್ಲಿರತಕ್ಕ ಬಾಲಕರಿಗೆ ವಿದ್ಯಾಪ್ರೋತ್ಸಾಹವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಒಂದು ನಿಧಿಯನ್ನು ಏರ್ಪಡಿಸಬೇಕೆಂತಲೂ ಆ ನಿಧಿಗೆ ಪಿರ್ಯಾಪಟ್ಟಣದಲ್ಲಿ ಸ್ಥಾಪಿತವಾಗಿರುವ ಮಹಾದೇವ ಸಂಸ್ಕೃತಪಾಠಶಾಲಾ ಫಂಡನ್ನು ಸೇರಿಸಿಕೊಳ್ಳಬೇಕೆಂತಲೂ ಗ್ರಾಮಾಂತರಗಳಲ್ಲಿ ಚಂದಾ ವಸೂಲುಮಾಡಬೇಕೆಂತಲೂ ನಿರ್ಧರಿಸಿದರು. ಅದಕ್ಕೆ ಬಹುಜನರು ಒಪ್ಪಿ ಅಲ್ಲಿಯೇ ಕೆಲವರು ಚಂದಾಕೊಟ್ಟದ್ದೂ ಅಲ್ಲದೆ ಮುಂದೆ ತಮ್ಮ ಗ್ರಾಮಗಳಿಂದ ಚಂದಾ ವಸೂಲ್ಮಾಡಿ ಕಳುಹಿಸುವುದಾಗಿಯೂ ಒಪ್ಪಿದರು. ಈ ಮೇರೆ ವಸೂಲಾದ ಹಣವನ್ನು ಪಿರ್ಯಾಪಟ್ಟಣದಲ್ಲಿನ ಫಂಡಿಗೇನೇ ಸೇರಿಸಿ ಅದರ ವೃದ್ಧ್ಯಂಶದಿಂದಲೂ ವ್ಯಾಪಾರಸ್ಥರು ತಮ್ಮ ಆದಾಯದಲ್ಲಿ ಕೊಡಲೊಪ್ಪಿರುವ ಹಣದಿಂದಲೂ, ಪಿರ್ಯಾಪಟ್ಟಣದಲ್ಲಿ ಪಠಶಾಲೆದಿಂದ ಬಂದು ಸಂಸ್ಕೃತ, ಕನ್ನಡ, ಇಂಗ್ಲೀಷ್‌ಭಾಷೆಯಲ್ಲಿ ಯಾವುದನ್ನಾದರೂ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವುದರ ಮೂಲಕ ಪ್ರೋತ್ಸಾಹಮಾಡಬೇಕೆಂತಲೂ, ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿದರೆ ಅವರ ಉಪಯೋಗಾರ್ಥವಾಗಿ ಒಂದು ಬೋರ್ಡಿಂಗ್ ಹೋಂ ಸ್ಥಾಪಿಸಬೇಕೆಂತಲೂ ನಿರ್ಣಯಿಸಿದರು. ಅಧ್ಯಕ್ಷರವರು ಇಂಥಾ ಸಭೆಗಳನ್ನು ಮಾಡುವುದರಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಹೃದಯಂಗಮವಾಗುವಂತೆ ಭಾಷಣವನ್ನು ಮಾಡಿದರು. ಪಿರ್ಯಾಪಟ್ಟಣದಲ್ಲಿ ಏರ್ಪಡಿಸಿರುವ ಸಂಗೀತಪಾಠಶಾಲೆಯ ವಿದ್ಯಾರ್ಥಿಗಳು ಗಾನರೂಪವಾಗಿ ಗುರುಸ್ತೋತ್ರವನ್ನೂ, ನಮ್ಮ ಘನವನ್ನು ಹೊಂದಿದ ಮಹಾರಾಜರವರ ಮತ್ತು ಯುವರಾಜರವರ ಶ್ರೇಯಃಪ್ರಾರ್ಥನೆಯನ್ನೂ ಮಾಡಿದರು. ಸಭಿಕರಿಗೆ ಗಂಧಪುಷ್ಪತಾಂಬೂಲಗಳನ್ನರ್ಪಿಸಿ ಅಧ್ಯಕ್ಷರಿಗೆ ವಂದಿಸಿ ಸಭೆಯು ಮುಕ್ತಾಯಮಾಡಲ್ಪಟ್ಟಿತು. ಈ ರೀತಿಯಾದ ವಿದ್ಯಾಪ್ರೋತ್ಸಾಹಕ್ಕೆ ಚಿಟ್ಟದಪುರ ಮಠದ ಶ್ರೀ ಶ್ರೀ ನಿರಂಜನ ಚರವರ್ಯರಾದ ಚಿಕ್ಕವೀರಸ್ವಾಮಿಗಳವರೇ ವಿಶಿಷ್ಟ ಕಾರ್ಯಭಾರವನ್ನೂ ವಹಿಸಿ ಸಮರ್ಪಕವಾದ ಏರ್ಪಾಡು ಮಾಡಿಸಿದ್ದರು. ಇಂಥ ಮಹಾತ್ಮರು ಈ ಪ್ರಾಂತ್ಯದಲ್ಲಿ ಉದಯಿಸಿದ್ದರಿಂದಲ್ಲವೇ ಈ ಮಠದ ಏಳಿಗೆಗೂ ಭಕ್ತರ ಅಭಿವೃದ್ಧಿಗೂ ಕಾರಣವಾಗಿದೆ? ಇಂತಹ ಶ್ರೀಗಳವರೂ ಭಕ್ತ ಸಮೂಹವೂ ಚಿರಕಾಲ ಸಂಪತ್ತಿನಿಂದ ಕೂಡಿದವರಾಗಿ ಈ ಮೇರೆ ಪರೋಪಕಾರ ನಿರತರಾಗಿರಲೆಂದು ಶ್ರೀ ಪರಶಿವಮೂರ್ತಿಯನ್ನು ಅನನ್ಯಭಾವದಿಂದ ಪ್ರಾರ್ಥಿಸಿ ಲೇಖನವನ್ನು ಮುಗಿಸುತ್ತೇನೆ.

ಒಬ್ಬ ಮಠಸೇವಕ.

ಶ್ರೀ ಶಿವಯೋಗಮಂದಿರದ ವೃತ್ತಾಂತ.

ಇಲ್ಲಿ ಹವೆಯು ಚೆನ್ನಾಗಿದ್ದು ಹಿಂಗಾರಿ ಪೈರಿಗೆ ಅನುಕೂಲವಾದ ಮಳೆಯು ಬಿದ್ದಿರುವುದು. ಮತ್ತು ಈಗ ಹಾನಗಲ್ಲ ಶ್ರೀಗಳವರ ಮುಕ್ಕಾಮು ಸೊಲ್ಲಾಪುರದಲ್ಲಿರುವದು. ಅಲ್ಲಿಯ ಧರ್ಮಾಭಿಮಾನಿಗಳು ಈ ಸಂಸ್ಥೆಯ ವೃದ್ಧಿಗೋಸುಗ ಭಿಕ್ಷೆಯನ್ನು ಮಾಡಿಕೊಡಲು ಪ್ರಯತ್ನಿಸಿರುವರೆಂದು ತಿಳಿಯಿಸಲು ಸಂತೋಷವಾಗುತ್ತದೆ. ಈ ಶ್ರಾವಣಮಾಸದಲ್ಲಿ ದರವರ್ಷದ ಪದ್ಧತಿಯಂತೆ ಮುದಗಲ್ಲ (ವ್ಯಾಕರ್ನಾಳ) ಶ್ರೀಗಳವರ ಪೂಜಾ ಸಮಾರಂಭವು ವಿಧ್ಯುಕ್ತವಾಗಿ ಜರುಗಿಸಲ್ಪಟ್ಟಿತು. ನಿತ್ಯದಲ್ಲಿಯೂ ಶ್ರೀ ಶಿವಯೋಗ ಸಾಧಕರುಗಳಲ್ಲಿ ಹಗಲು ಮೂರು ಘಂಟೆಗೆ ವ್ಯಾಸೋಕ್ತ ಪ್ರಭುಲಿಂಗಲೀಲೆಯ ಶ್ರವಣವೂ ವಟುಗಳ ಬಳಿಯಲ್ಲಿ ಸಾಯಂಕಾಲದ ೩ ಘಂಟೆಗೆ ಶ್ರೀ ಬಸವರಾಜ ವಿಜಯಪುರಾಣ ಶ್ರವಣವೂ ನಡೆಯುತ್ತಿತ್ತು. ಈ ಮಾಸದಲ್ಲಿ ಶ್ರೀಮನ್ನಿರಂಜನ ಗುಳ್ಳೇದಗುಡ್ಡದ ಒಪ್ಪತ್ತಿನ ಮಹಾಸ್ವಾಮಿಗಳವರೂ ಶ್ರೀಮದ್ಘನಲಿಂಗ ಚಕ್ರವರ್ತಿಗಳಾದ ಹನಬರಟ್ಟಿ ಮ್ಯಾಗೇರಿ ಶ್ರೀಗಳವರೂ, ತಮ್ಮ ಶಿಷ್ಯಮಂಡಳಿಯೊಡನೆ ಇಲ್ಲಿಗೆ ದಯಮಾಡಿಸಿ ದರ್ಶನಾಶೀರ್ವಾದಗಳನ್ನು ಕೊಟ್ಟದ್ದಕ್ಕಾಗಿ ಆನಂದಿಸುತ್ತೇವೆ. ಈ ಕಾಲದಲ್ಲಿ ಹಾವೇರಿ, ಬ್ಯಾಹಟ್ಟಿ, ಸವದತ್ತಿ, ಇಟ್ಟಗಿ ಬಾದಾಮಿ, ನರಗುಂದ, ಹುಬ್ಬಳ್ಳಿ, ಗದಗ, ಬೆಟಗೇರಿ, ಮುಳಗುಂದ, ಚೊಳಚಗುಡ್ಡ, ಅತ್ತಿಗಟ್ಟಿ, ಕಲ್ಲಫುಟ್ಟಗಿ, ನವಲಗುಂದ, ಶಿರೂರ, ಗುಳೇದಗುಡ್ಡ, ಬಾಗಲಕೋಟೆ, ವಿಜಾಪೂರ, ಹಂಪಿ, ಹಲಗಲಿ, ರಾಮದುರ್ಗ, ಅಥಣಿ, ಮುಂತಾದ ಪ್ರಾಂತಗಳ ಜನರು ಇಲ್ಲಿಗೆ ಬಂದು ಶ್ರೀಗಳನ್ನೂ, ವಟುಗಳನ್ನೂ ನೋಡಿ ಸಂತೋಷಭರಿತರಾಗಿ ದರ್ಶನಾಶೀರ್ವಾದಗಳನ್ನು ಹೊಂದಿ ಹೋದರು. ಇದರಂತೆ ಇನ್ನುಳಿದ ಮಹನೀಯರೂ ಮತ್ತು ಧರ್ಮಾಭಿಮಾನಿಗಳೂ ತಮ್ಮ ಅನುಕೂಲಕಾಲದಲ್ಲಿ ಇಲ್ಲಿಗೆ ಬಂದು ಸಂಸ್ಥೆಯ ಅಭಿವೃದ್ಧಿಯ ವಿಷಯದಲ್ಲಿ ಯತ್ನಿಸುವರೆಂದು ನಂಬಿದ್ದೇವೆ. ಶಿ. ಮು|| ಗುರುಸಂಗಯ್ಯನವರು ವಕ್ಕುದ ಸಾ|| ಗಜೇಂದ್ರಗಡ ವೀರಯ್ಯನವರು ಇಟ್ಗಿ ಮ|| ರಾ|| ಶಿವಪ್ಪನವರು ಜಗಳೂರ ಸಂಗನಬಸಪ್ಪನವರು ಗದಗಿನ ಸಾ|| ಚವಡಿ ಅಯ್ಯಪ್ಪನವರು ಬ್ಯಾಳಿ ಸಾ|| ಬಾಗಲಕೋಟೆ ಮಲ್ಲನಗೌಡರು ಪಾಟೀಲ ಬೂದಿಹಾಳ ರೇವಣಸಿದ್ದಪ್ಪನವರು ಚಿತ್ತವಾಡಗಿ ಸಾ|| ಶಿರೂರ ಇವರು ಕೆರಡೀಗುಡ್ಡ ಮತ್ತು ವಿಜಾಪುರದ ಕೆಲವು ಭಕ್ತರೂ ಇಲ್ಲಿಗೆ ಬಂದು ತಮ್ಮ ಆರಾಧನೆಯ ನೇಮವನ್ನು ನೆರವೇರಿಸಿದರು. ಮತ್ತು ಹುಬ್ಬಳ್ಳಿಯ ಪಾವಟೆ ವಿರೂಪಾಕ್ಷಪ್ಪನವರು ನೇಮತಿ ರಾಚಪ್ಪನವರು ಸಾ|| ಮುಂಡರಗಿ ಮದ್ರಾಸಿನ ಗುರುಬಸವ ಅಂಡ್ ಕಂಪೆನಿಯ ಮಾನೇಜರರಾದ ಚನ್ನವೀರಪ್ಪನವರು ಗುತ್ತಲದ ಚಿಕ್ಕಿ ಪರಪ್ಪನವರು ಮುಂತಾದ ಸದ್ಭಕ್ತರು ತೃಪ್ತಿದಕೆಯಿಂದ ಮನಿಯಾರ್ಡರ ದ್ವಾರಾ ಹಣ ಕಳುಹಿಸಿದ್ದರಿಂದ ಅವರ ಇಚ್ಛಾನುಸಾರ ಆರಾಧನೆಗಳು ಜರುಗಿಸಲ್ಪಟ್ಟವು. ಮ|| ರಾ|| ವೃಷಭಪ್ಪನವರು ಹಳ್ಳಿಕೇರಿ ಸಬ್ ಓವರ್ಸೀಯರ ಹಾನಗಲ್ಲ ಇವರು ಈ ಸಂಸ್ಥೆಯ ಒಂದು ದಿವಸದ ವೆಚ್ಚವನ್ನು ಕೊಡುತ್ತೇವೆಂದು ಒಪ್ಪಿದ ಪ್ರಕಾರ ೩೦ ರೂಪಾಯಿಗಳನ್ನು ಇದೇ ಮಾಸದಲ್ಲಿ ಕಳಿಸಿರುವರು. ಇದರಂತೆ ಈ ಮೊದಲೇ ಹೇಳಿಗೆ ಸೇರಿನಂತೆ ಒಪ್ಪಿಕೊಂಡ ಮ|| ರಾ|| ರಾ|| ಭಾಪುಗೌಡರು ಚನಕೊಪ್ಪ ಇವರು ೧೦ ಚೀಲ ಗೋಧಿಯನ್ನೂ ಮ|| ರಾ|| ಪ್ರಭುಗೌಡರು ಅಡ್ನೂರ ಪರ್ವತಗೌಡರು ತುಪ್ಪದ ಕುರಹಟ್ಟಿ ಇವರು ತಾವು ಕೊಡಲೊಪ್ಪಿದ ಧಾನ್ಯದ ಕಿಮ್ಮತ್ತು ಮಾಡಿ ೩೦ ರೂ.ಗಳನ್ನೂ ಕಳುಹಿಸಿರುವರು. ಇದಲ್ಲದೆ ತೊಂಡಿಹಾಳದಲ್ಲಿಯ ಸದ್ಭಕ್ತರು ಈ ಸಂಸ್ಥೆಯ ಏಳ್ಗೆಯ ಬೆಸೆಯಿಂದ ತಮ್ಮ ಊರಲ್ಲಿ ೧೩೨೨ ರೂ.ಗಳನ್ನು ಭಿಕ್ಷೆ ಕೂಡಲು ಒಪ್ಪಿ ೧೦೦೧ ರೂ.ಗಳನ್ನು ರೋಖವಸೂಲಕೊಟ್ಟಿರುವರು ಬೀಳಗಿಯ ವೀರಪ್ಪನವರು ನಿಡಗುಂದಿ ಮುಳಗುಂದದ ಚಂದ್ರಶೇಖರಯ್ಯನವರು ತಡೇದಮಠ ಇವರು ತಮ್ಮ ಭಿಕ್ಷದ ಬಾಬತು ೨೫-೭೬ ರೂ.ಗಳನ್ನು ಲಕ್ಷ್ಮೇಶ್ವರದ ತಟ್ಟಿ ದೊಡ್ಡಬಸಪ್ಪನವರು ೧೧೧ ರೂ.ಗಳನ್ನು ಕಳುಹಿಸಿರುವರು ತಿಗಟಿ ಗೊಣಗೇರಿ ಇವರು ೧೦೫ ರೂ.ಗಳನ್ನು ಗೊಬ್ಬುರ ಗುಂಪೇರಿಸಂಗಿ ಲಿಂಗನಗೌಡರು ೧೦೦ ರೂ. ಗಳನ್ನು ಕಾಣಿಕೆಯಾಗಿ ಕಳುಹಿಸಿರುವರು. ಇವಲ್ಲದೆ ವಿಜಾಪೂರ ಗೋರ್ಜಹೊಸೂರ ಬೋಗಿನಹಾಳ ಅಲದೂರ ಹುಲಗಿ ಹುಲಿಕೇರಿ ಗುಲ್ಬರ್ಗ ಮುಂತಾದ ಗ್ರಾಮಗಳ ಕೆಲ ಧರ್ಮಾಭಿಮಾನಿಗಳು ಕಾಣಿಕೆರೂಪವಾಗಿ ಹಣವನ್ನು ಕಳಿಸಿದ್ದಾರೆ. ಮತ್ತು ಹುಬ್ಬಳ್ಳಿ ಮನಿಯಾರ್ಡರ ದ್ವಾರದಿಂದ ಕಳುಹಿಸಿರುವರು. ಹುನಗುಂದ ಖ್ಯಾಡ, ಸೂರಕೋಡ ಲಕ್ಷ್ಮೇಶ್ವರ ಹೊಸಹಳ್ಳಿ ಹಿರೇಪೋತಗೇರಿ ಹಿರೇಮ್ಯಾಗೇರಿ ಹೂಲಗೇರಿ ಮುದ್ದೇಬಿಹಾಳ ಕೋಳಿವಾಡ, ಸಿರಸಂಗಿ, ಕಲವಡಿ, ಕುಂಟೋಜಿ ಗೋಳಸಂಗಿ ಮೆಣಸಿಗಿ ಮುಂತಾದ ಗ್ರಾಮಗಳ ಭಕ್ತರು ಲಗ್ನಾದಿ ಕಾರ್ಯಗಳಲ್ಲಿ ಕಾಣಿಕೆಯ ರೂಪದಿಂದ ಹಣವನ್ನು ಕಳಿಸಿರುವರು. ವೇ|| ಮಲ್ಲಿಕಾರ್ಜುನ ಶಾಸ್ತ್ರಿಗಳು ಶಿವಣಗಿ ಇವರು ಮುದ್ದೇಬಿಹಾಳ ಸದ್ಭಕ್ತರಿಗೆ ಪುರಾಣಶ್ರವಣ ಮಾಡಿಸಿ ಅವರಿಂದ ಶ್ರೀ ಶಿವಯೋಗಮಂದಿರಕ್ಕೆ ೨೦ ರೂ.ಗಳನ್ನು ಕಳುಹಿಸಿಕೊಟ್ಟಿದ್ದಾರೆಂದು ತಿಳುಹಿಸಲು ಸಂತೋಷವಾಗುತ್ತದೆ.

ಇದೇ ಶ್ರಾವಣಮಾಸದ ಬ|| ಪ್ರತಿಪದೆ ೪ ನೆ ಆಗಸ್ಟ್ ೧೯೧೭ ನೆ ದಿವಸ ನಮ್ಮ ದಯಾಳು ಸಾರ್ವಭೌಮ ಸರ್ಕಾರದವರು ಯುದ್ಧದಲ್ಲಿ ತೊಡಗಿದ ೪ ನೆಯ ವರ್ಷದ ಪ್ರಾರಂಭದ ದಿವಸವಾದದ್ದರಿಂದ ಅವರಿಗೂ ಅವರ ಮಿತ್ರಮಂಡಲಿಯವರಿಗೂ ಜಯವಾಗಲೆಂದು ಪೂಜಾಪ್ರಾರ್ಥನೆಗಳು ಮಾಡಲ್ಪಟ್ಟವು. ಶಿವಬಸಪ್ಪಾ ಆದಪ್ಪಾ ಮಾಗಿ ವ್ಯವಸ್ಥಾಪಕ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲಿಗರಿಗೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವೇದ,ಶಾಸ್ತ್ರ ಮತ್ತು ಚರಿತ್ರೆಗಳ ಆಧಾರದಿಂದ "ಕುರುಬರಜಾತಿ" ನಡಾವಳಿ, ಆಚಾರಗಳ, ಇವರಲ್ಲಿ ರಾಜ್ಯಧರ್ಮ ಸ್ಥಾಪಕರಾದ ಪೂರ್ವಿಕರ ಸಂಗತಿಗಳ ೧೯೨ ಪುಟದ ದೊಡ್ಡ ಪುಸ್ತಕ ಅಚ್ಚಾಗುತ್ತಲಿದೆ. ಈ ನವರಾತ್ರಿಯೊಳಗಾಗಿ ಬರುವ ಆರ್ಡರುಗಳಿಗೆ ಮಾತ್ರ ೧೨ ಆಣೆ! (ಹಾಸಲು ಬೇರೆ) ಮುಂದೆ ಹೆಚ್ಚಾಗುವದು.

ವಿಳಾಸ—ಎಂ. ಎನ್. ಲಿಂಗಪ್ಪ ಎಡಿಟರ್,
ಬೆಂಗಳೂರುಸಿಟಿ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 4

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೭ ನೆಯ ಇಸವಿ ಸೆಪ್ಟಂಬರ್ ತಾ|| ೧೬ ರಿಂದ ೧೯೧೭ ನೆಯ ಸೆಪ್ಟಂಬರ್ ತಾ|| ೨೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಅಧಿಕ ಭಾದ್ರಪದ ಬ|| ಅಮಾವಾಸ್ಯೆಯಿಂದ ನಿಜಭಾದ್ರಪದ ಶು|| ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತೇದಿ
16	1 ಭಾನು	ಅಮಾ	20-36	ಪೂಫ	4-26	1
17	ಸೋಮ	ಪಾಡ್ಯ	25-18	ಉಫ	10-40	2
18	2 ಮಂಗಳ	ಬಿದಿಗೆ	29-20	ಹಸ್ತ	16-13	3
19	3 ಬುಧ	ತದಿಗೆ	32-16	ಚಿತ್ರ	20-53	4
20	4 ಗುರು	ಚೌತಿ	34-6	ಸ್ವಾತಿ	24-20	5
21	5 ಶುಕ್ರ	ಪಂಚ	34-27	ವಿಶಾಖ	26-35	6
22	ಶನಿ	ಷಷ್ಠಿ	33-41	ಅನೂ	27-35	7

(1) ಸರ್ವತ್ರಮಾವಾಸ್ಯಾ. (2) ಕಲ್ಕಿಜಯಂತಿ, ಸಾಮಗೋಪಾಕರ್ಮ. (3) ಸ್ವರ್ಣಗೌರೀವ್ರತಂ. (4) ಸಿದ್ಧಿವಿನಾಯಕವ್ರತಂ. (5) ಋಷಿಪಂಚಮಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವಕಾರಾ ಸರ್ವಜ್ಞಸದ್ವೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲಿಂಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲವಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೀಯಂಸದಾಪೂರೆಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೨-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೭ ನೆಯ ಇಸವಿ ಸೆಪ್ಟಂಬರ್ ತಾರೀಖು ೩೦ ನೆಯ ಭಾನುವಾರ. (ಸಂಚಿಕೆ ೩೯

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

45 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚುಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ. ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆ ವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ



ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಹಿಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ನೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿಜಡ್ಡು, ಗುದ್ದನ್ನನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ನೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಜೊತೆ ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚ ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚ ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತವೆ. ಇದಕ್ಕೆ ವಿ. ಪಿ. ಖರ್ಚ ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚ ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಜೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಸೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ, ಹೆಡ್ ಆಫೀಸ
39 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ್ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 43

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಹುಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟತನಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚ ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚ ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚ ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಿಲೆಯ ಜ್ವರ, ಪಿತ್ತಸಂಬಂಧನಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ಹಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳ ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಕಾರಾ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆ ಇಸವಿಯ ಸೆಪ್ಟಂಬರ್ ತಾ|| ೩೦ ನೆಯ ಭಾನುವಾರ.

ನಿರ್ಬಂಧವಿಮೋಚನೆ.

ಅನಿಬೆಸೆಂಟಮ್ಮನೇ ಮೊದಲಾದವರ ನಿರ್ಬಂಧವಿಮೋಚನೆಯ ವಿಷಯವಾಗಿ ವೈಸ್ರಾಯರು ಸಾಮ್ರಾಜ್ಯ ನಿಯಮನಿರ್ಮಾಣ ಸಭೆಯಲ್ಲಿ ಮಾಡಿದ ವಾಗ್ದಾನವನ್ನು ಹಿಂದಣ ಸಂಚಿಕೆಯಲ್ಲಿ ತಿಳಿಯಿಸಿದ್ದೆವಷ್ಟೆ. ಪ್ರಜೆಗಳು ಅದನ್ನು ಕೇಳಿದಕೂಡಲೇ ಅಮ್ಮನವರು ಮೊದಲಾದ ಮೂವರ ಬಂಧವಿಮೋಚನವಾಗುವುದು ತಡವಾಗುವುದಿಲ್ಲವೆಂದು ತಿಳಿದು ಉತ್ತರಕ್ಷಣದಿಂದಲೇ ಸಂತೋಷಪಡುತ್ತಿದ್ದರು. ಸಾಮ್ರಾಜ್ಯಪ್ರಭುತ್ವದವರ ಉದಾರಚಿತ್ತವನ್ನು ಕುರಿತು ಧನ್ಯವಾದವನ್ನು ಮಾಡುವುದಕ್ಕುಪಕ್ರಮಿಸಿದ್ದರು. ನಿರ್ಬಂಧವಿಮೋಚನೆಯು ಕಾರ್ಯರೂಪದಲ್ಲಿ ಆಗುವುದಕ್ಕೆ ಮುಂಚೆಯೇ ಆಯಿತೆಂಬ ವಾರ್ತೆಗಳು ಊರೂರಿನಲ್ಲೂ ಕಾಗದಪತ್ರಗಳಲ್ಲೂ ಹರದಾಡುತ್ತಿದ್ದುವು. ಇದನ್ನೆಲ್ಲಾ ಕೇಳಿ ಮುಗ್ಧರಾಗಿಹೋದರೋ ಅಥವಾ ಪ್ರಜಾಭಿಪ್ರಾಯವನ್ನು ಸನ್ಮಾನಿಸುವುದಕ್ಕೋ ಎಂಬಂತೆ ಇಂಡ್ಯಾ ಗೌರ್ನಮೆಂಟಿನವರು ಅನಿಬೆಸೆಂಟಮ್ಮ-ಅರುಂಡೇಲ್-ವಾಡಿಯಾ ಎಂಬ ಈ ಮೂವರನ್ನೂ ನಿರ್ಬಂಧನಿವಾಸಶಿಕ್ಷೆಯಿಂದ ವಿಮುಕ್ತಿಗೊಳಿಸುವ ಅಪ್ಪಣೆಯನ್ನು ಮದ್ರಾಸು ಸರ್ಕಾರದವರ ಮೂಲಕವೇ ಕಳೆದ ತಾ|| ೧೭ ನೆ ಸೋಮವಾರ ಸರಿರಾತ್ರಿಯಲ್ಲಿ ಮುಟ್ಟಿಸಿದರು. ಮರುದಿನದಿಂದ ಎಲ್ಲ ಕಡೆಗೂ ಈ ಸುದ್ದಿಯು ಹಬ್ಬಿತು. ಅಂದಿನಿಂದ ಎಲ್ಲೆಲ್ಲೂ ಸಂತೋಷೋತ್ಸವಗಳು ಹಲವು ಪರಿಯಾಗಿ ನಡೆದೂ ನಡೆಯುತ್ತಲೂ ಇರುವುವು. ಕೊಯಮತ್ತೂರಿನಿಂದ ಮದ್ರಾಸಿಗೆ ಇವರುಗಳು ಬಂದಾಗ್ಗೆ ಪುರಜನರು ಇವರ ಸ್ವಾಗತಕ್ಕಾಗಿ ಮಾಡಿದ್ದ ಏರ್ಪಾಟುಗಳು ಅನನ್ಯ ಸಾಧಾರಣವಾಗಿದ್ದುವು. ರಾಜಾಧಿರಾಜರುಗಳಿಗೂ ಇಂಥ ಮನಃಪೂರ್ವಕವಾದ ಸ್ವಾಗತವು ನಡೆಯುವುದು ಅಪೂರ್ವವೆನಿಸುವಂತಿದ್ದುವು. ಅಮ್ಮನವರು ಕುಳಿತಿದ್ದ ರಥವನ್ನು ಹಿಂಬಾಲಿಸಿ ೫೦ ಮೋಟಾರುಗಳೂ, ೨೦೦ ಕುದುರೆಬಂಡಿಗಳೂ, ಮುಂದೆ ೫೦ ಭಜನೆಯ ಕೂಟಗಳೂ ಹೊರಟಿದ್ದುವೆಂಬುದನ್ನೂ, ಉತ್ಸವವು ನಿಲ್ದಾಣದಿಂದ ಆದ್ಯಾರಿನವರೆಗೆ ಹೋಗಿ ಮುಟ್ಟುವುದಕ್ಕೆ ೨ ಗಂಟೆಗಳ ಹೊತ್ತು ಹಿಡಿಯಿತೆಂಬುದನ್ನೂ, ಅಮ್ಮನವರ ಬಂಡಿಯಮೇಲೆ ನವರತ್ನಗಳು ಎರಚಲ್ಪಟ್ಟುವು ಎಂಬುದನ್ನೂ ಕೇಳುವಲ್ಲಿ ಉತ್ಸವದ ವೈಭವವು ಎಷ್ಟುಮಟ್ಟಿಗಿದ್ದಿತೆಂಬುದನ್ನು ಊಹಿಸಿಕೊಳ್ಳಬಹುದು. ಅಮ್ಮನವರು ದೇಶೀಯರ ಪ್ರೀತಿ ವಿಶ್ವಾಸಗಳಿಗೆ ಎಷ್ಟುಮಟ್ಟಿಗೆ ಪಾತ್ರರಾಗಿರುವರೆಂಬುದನ್ನು ಈ ಸಂದರ್ಭವು ಬಲುಮಟ್ಟಿಗೆ ಸರ್ವರಿಗೂ ನಿದರ್ಶನಮಾಡಿಕೊಟ್ಟಿರುವುದು. ಭರತಖಂಡದ ಹಿತಕ್ಕಾಗಿ ಕೆಲಸಮಾಡಲು ನಡುಕಟ್ಟಿ ನಿಂತಿರುವ ಆಕೆಯವರಿಗೂ ಅವರ ಅನುಚರರಿಗೂ ಈಗ ಉಂಟಾದ ನಿರ್ಬಂಧವಿಮೋಚನಕ್ಕಾಗಿ ಭಾರತೀಯರೆಲ್ಲರೂ ಸಂತೋಷಿಸುವುದು ಯುಕ್ತವೇ ಆಗಿರುತ್ತದೆ.

ಹಿಂದೆ ಸಾಮ್ರಾಜ್ಯಶಾಸನ ಸಭೆಯಲ್ಲಿ ವೈಸ್ರಾಯರು ನಿರ್ಬಂಧಿತರ ವಿಮೋಚನೆಯ ವಿಷಯವಾಗಿ ಮಾತನಾಡುವಾಗ್ಗೆ—"ಯುದ್ಧ ಮುಗಿಯುವವರೆಗೂ ತೀವ್ರತರವಾದ ಯಾವ ರಾಜಕೀಯಾಂದೋಳನವನ್ನೂ ನಡೆಯಿಸುವುದಿಲ್ಲವೆಂದು ಸರ್ಕಾರದವರಿಗೆ ಭರವಸೆಯುಂಟುಮಾಡಿಕೊಡುವುದಾದರೆ ಅವರುಗಳು ಬಿಡಲ್ಪಡುವರು" ಎಂದು ಅಪ್ಪಣೆಕೊಡಿಸಿದ್ದರಷ್ಟೆ. ಈಗಳಾದರೊ ನಿರ್ಬಂಧಿತರುಗಳು ಬಿಡುಗಡೆ ಹೊಂದುವಾಗ್ಗೆ ಯಾವ ನಿಯಮನಿರ್ಬಂಧಗಳಿಗೂ ಬದ್ಧರಾಗಿ ಮಾಡಲ್ಪಡದೇನೆಯೇ ಬಿಡಲ್ಪಟ್ಟರೆಂದು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುವುದು. ಯಾವುದೊಂದು ಭರವಸೆಯನ್ನೂ ಇವರುಗಳಿಂದ ತೆಗೆದುಕೊಳ್ಳದೆ ಇಂಡ್ಯಾ ಸರ್ಕಾರದವರು ಹೀಗೆ ಮಾಡಿದುದು ಅನುಚಿತವೆಂದು ಮೊದಲಾಗಿ ಈ ದೇಶದ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಬೊಬ್ಬಿಡುತ್ತಿರುವುದಲ್ಲದೆ, ಇಂಡ್ಯಾ ಸರ್ಕಾರದವರು ಹೀಗೆ ಮಾಡಿದುದರಿಂದ ಮದ್ರಾಸ್ ಗೌರ್ನರವರ ದರ್ಪಕ್ಕೆ ನ್ಯೂನತೆಯನ್ನು ತಂದಂತಾಗಿರುವುದೆಂದೂ, ಲಾರ್ಡ್ ಪೆಂಟ್ಲೆಂಡ್‌ರವರು ಆತ್ಮಗೌರವರಕ್ಷಣೆಗಾಗಿ ಉದ್ಯೋಗಪರಿತ್ಯಾಗವನ್ನು ಮಾಡುವುದೇ ಕರ್ತವ್ಯವೆಂದೂ, ಇನ್ನು ಮುಂದೆ ದೇಶದಲ್ಲಿ ಅಶಾಂತಿಯು ಪ್ರಬಲಿಸಿದರೆ ಅದಕ್ಕೆ ಸ್ಥಳಿಕ ಪ್ರಭುತ್ವದವರು ಉತ್ತರವಾದಿಗಳಾಗಬೇಕಾದುದಿಲ್ಲವೆಂದೂ ಮೊದಲಾಗಿ ಆಡುತ್ತಿರುವುವು. ಅಲ್ಲದೆ ಈ ದೇಶದಲ್ಲಿರುವ ಯೂರೋಪ್ಯ ಸಂಘದವರೂ ಆಂಗ್ಲೋ ಇಂಡಿಯನ್ ಸಂಘಗಳವರೂ ಕೂಡ "ಯಾವ ನಿಯಮನಿರ್ಬಂಧಗಳಿಗೂ ಒಳಪಡಿಸದೆ ಇವರುಗಳನ್ನು ಬಿಡುವುದು ಭರತಖಂಡದ ಸರ್ಕಾರಕ್ಕೆ ದೌರ್ಬಲ್ಯವನ್ನುಂಟುಮಾಡುವುದು. ಇವರ ವಿಮೋಚನವು ತಮಗೆಲ್ಲಾ ಅಸಮ್ಮತವು" ಎಂದು ಮೊದಲಾಗಿ ತಂತ್ರೀವಾರ್ತೆಯನ್ನು ಕೊಟ್ಟು ಸ್ಟೇಟ್ ಸೆಕ್ರೆಟರಿಯವರಮೇಲೂ ವೈಸ್ರಾಯರಮೇಲೂ ಅನೇಕ ವ್ಯಾಖ್ಯಾನಗಳನ್ನು ಮಾಡಿ ವಾಗ್ಬಾಣಗಳನ್ನು ತೂರುತ್ತಿರುವರು. ಯಾವ ನಿರ್ಬಂಧಕ್ಕೂ ಗುರಿಪಡಿಸದೆಯೇ ತಮ್ಮನ್ನು ಬಂಧವಿಮೋಚನೆ ಮಾಡಿಸಿರುವರೆಂದು ಅನಿಬೆಸೆಂಟಮ್ಮನವರು ಮದ್ರಾಸಿನ ತಮ್ಮ ಅನುಚರರಿಗೆ ತಂತ್ರೀವಾರ್ತೆಯನ್ನು ಕೊಟ್ಟಿದ್ದರಂತೆ. ಆದರೆ ಇಂಡ್ಯಾ ಪ್ರಭುತ್ವದವರು ಸಾಮ್ರಾಜ್ಯಶಾಸನ ಸಭೆಯಲ್ಲಿ ೧ ಪಕ್ಷದ ಕೆಳಗೆ ತಾವಾಡಿದ್ದ ಮಾತಿಗೇ ಈಗ ವಿರುದ್ಧವಾಗಿ ನಡೆದು ಈ ಮೂರ್ತಿತ್ರಯದ ಬಂಧವಿಮೋಚನೆಯನ್ನು ಮಾಡಿಸಿರುವರೆಂದು ಊಹಿಸುವುದು ಸುಲಭವಾಗಿರಲ್ಲ. ಕಳೆದ ತಾ|| ೨೧ ರಲ್ಲಿ ಕೂಡಿದ್ದ ಸಾಮ್ರಾಜ್ಯ ಶಾಸನ ಸಭೆಯಲ್ಲಿ ನಡೆದ ಪ್ರಶ್ನೋತ್ತರಗಳಿಂದ ಈ ವಿಷಯವು ನಿಸ್ಸಂಶಯವಾಗಿ ವ್ಯಕ್ತಪಟ್ಟಿತು. ಹೇಗೆಂದರೆ—ಅನಿಬೆಸೆಂಟಮ್ಮ ಮೊದಲಾದವರು ಸರ್ಕಾರದವರಿಗೆ ಯಾವ ವಾಗ್ದಾನವನ್ನಾದರೂ ಮಾಡಿ ಬಂಧವಿಮುಕ್ತರಾದರೆ ? ಹೇಗೆ ? ಎಂದು ಸರ್ ಹ್ಯೂ. ಬ್ರೇಯವರು ಪ್ರಶ್ನೆಮಾಡಲಾಗಿ, ಸ್ಟೇಟ್ ಸೆಕ್ರೆಟರಿಯವರು ಈ ದೇಶಕ್ಕೆ ಬಂದು ಹೋಗುವಾಗ್ಗೆ ಈ ದೇಶದ ರಾಜಕೀಯ ವಾತಾವರಣವನ್ನು ಶಾಂತಿಕರವಾಗಿರುವಂತೆ ಮಾಡಿಡುವುದರಲ್ಲಿ ಪ್ರಭುತ್ವದವರಿಗೆ ತಾನು ಸಹಕಾರಿಣಿಯಾಗಿರುವೆನೆಂದು ಅನಿಬೆಸೆಂಟಮ್ಮನು ವೈಸ್ರಾಯರಿಗೆ ತಂತ್ರೀವಾರ್ತೆಯನ್ನು ಕಳುಹಿಸಿದರೆಂದೂ, ಅಲ್ಲದೆ ಮಾತುಬಾರಿಗಳಾದ ಕೆಲ ದೊಡ್ಡಮನುಷ್ಯರುಗಳು ಕೂಡ ಇಂಥ ವಾಗ್ದಾನವನ್ನೇ ಮಾಡಿರುವರೆಂಬದಾಗಿಯೂ ಸರ್ಕಾರದ ಪಕ್ಷದಿಂದ ವಿಲಿಯಂ. ವಿನ್ಸೆಂಟ್‌ರವರು ಉತ್ತರವನ್ನು ಕೊಟ್ಟರು. ಈ ಕಾರಣದಿಂದ ಇಂಡ್ಯಾ ಪ್ರಭುತ್ವದವರು ತಮ್ಮ ನುಡಿಗೆ ಮಸಿಯನ್ನು ತಾವೇ ಹಚ್ಚಿಕೊಳ್ಳುವಂಥ ಕೆಲಸವನ್ನು ಮಾಡಿಲ್ಲವೆಂದು ದೃಢಪಟ್ಟಿರುತ್ತದೆ. ಅನಿಬೆಸೆಂಟಮ್ಮನವರು ಕೂಡ ನ್ಯೂ ಇಂಡಿಯಾದ ಸಂಪಾದಕತ್ವವನ್ನು ಮರಳಿ ವಹಿಸಿದ ದಿನ ಪ್ರಥಮಲೇಖನವನ್ನು ಬರೆದಿರುವುದರಲ್ಲಿ ಈ ವಾಗ್ದಾನಕ್ಕೆ ಅವರು ಬದ್ಧರಾಗಿ ನಡೆದುಕೊಳ್ಳುವ ರೀತಿಯೇ ವ್ಯಕ್ತಪಟ್ಟಿರುತ್ತದೆ. ವಿದ್ಯಾರ್ಥಿಗಳನ್ನು ಕುರಿತು ಅವರು ಈ ಲೇಖನದಲ್ಲಿ ಮಾಡಿರುವ ಉಪದೇಶವೊಳಗೆ—"ನೀವು ಕಾರ್ಯನಿರ್ವಾಹಕ್ಕೆ ತೊಡಗಬೇಡಿರಿ. ನಿಮ್ಮ ತೊಂದರೆಯನ್ನು ಪ್ರಭುತ್ವದವರಿಗೆ ವಿಜ್ಞಾಪಿಸಿಕೊಳ್ಳಿರಿ. ಪ್ರತ್ಯೇಕ ಸಭೆಗೂಡಿಸುವುದನ್ನು ಮಾಡಬೇಡಿರಿ. ಅದು ರಾಜಕೀಯಾಂದೋಳನವಾಗುವುದು" ಎಂದು ಮೊದಲಾಗಿ ಉಪದೇಶಿಸಿದ್ದಾರೆ. ಅಮ್ಮನವರ ಈ ಧೋರಣೆಯು ಸರ್ಕಾರದವರು ಶಾಸನಸಭೆಯಲ್ಲಿ ಹೇಳಿರುವ ಸಂಗತಿಯನ್ನು ದೃಢಪಡಿಸುತ್ತಿದೆ. ದೇಶದಲ್ಲಿ ಯಾವುದೊಂದು ಚಳವಳವೂ ಇಲ್ಲದೆ ಶಾಂತಸ್ಥಿತಿಯಲ್ಲಿರುವಂತಾಗಬೇಕೆಂಬ ಮುಖ್ಯೋದ್ದೇಶದಿಂದಲೇ ಪ್ರಭುತ್ವದವರು ಈ ಸಂದರ್ಭದಲ್ಲಿ ತಮ್ಮ ಉದಾರಚಿತ್ತವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಮಾಡುವುದರಲ್ಲಿ ಭಾರತೀಯ ಪ್ರಮುಖರ ರಾಜಭಕ್ತಿ ವಿಶ್ವಾಸ ಘನತೆಗಳನ್ನೂ ವಾಗ್ದಾನಗಳನ್ನೂ ನಂಬಿರುತ್ತಾರೆ. ಅಂಥ ಅವರ ನಿರೀಕ್ಷಣೆಯನ್ನು ಸಾರ್ಥಕಪಡಿಸಿ, ಅದರ ಮಹೋನ್ನತ ಫಲವನ್ನು ಭರತಖಂಡವು ಅನುಭವಿಸುವಂತೆ ಮಾಡುವುದು ಭಾರತೀಯರೆಲ್ಲರಕರ್ತವ್ಯವೂ ಆಗಿದೆ.

ಮಿ|| ಅರುಂಡೇಲ್‌ರವರು ತಮ್ಮ ಬಂಧವಿಮೋಚನ ಸಂದರ್ಭದಲ್ಲಿ ಕೊಯಮತ್ತೂರು ನಿವಾಸಿಗಳು ತಮ್ಮನ್ನಭಿನಂದಿಸುವುದಕ್ಕೆ ಕೂಡಿಸಿದ್ದ ಸಭೆಯಲ್ಲಿ ಭಾಷಣಮಾಡುವಾಗ್ಗೆ—"ನಮ್ಮನ್ನೇನೋ ಸರ್ಕಾರದವರು ಬಿಟ್ಟರು. ಆದರೆ ಹೋರಾಟವು ಇಲ್ಲಿಗೆ ಕೊನೆಗಂಡಿತೆಂದು ಊಹಿಸಬಾರದು. ನಿಜವಾಗಿ ಹೋರಾಟವು ಈಗ ಪ್ರಾರಂಭವಾಗಿದೆಯೆಂಬುದನ್ನು ಗಮನಿಸಬೇಕು. ಇದುವರೆಗೆ ನಡೆದ ಚರ್ಯೆಯಿಂದ ನಮ್ಮಲ್ಲಿ ಬಲವಿದೆಯೆಂಬುದು ಗೊತ್ತಾಯಿತು. ಮುಂದೆ ಭರತಖಂಡದ ಸ್ತ್ರೀಪುರುಷರೆಲ್ಲರೂ ತಮ್ಮ ಯಾವಚ್ಛಕ್ತಿಯನ್ನೂ ವಿನಿಯೋಗಿಸಿ ಕೆಲಸಮಾಡಬೇಕು. ....ಬಿಸೆಂಟಮ್ಮನವರನ್ನು ಮುಂದಿಟ್ಟುಕೊಂಡು ಆಂದೋಳನವನ್ನು ನಡೆಯಿಸಬೇಕು" ಎಂದು ಮೊದಲಾಗಿ ಹೇಳಿ ತೀವ್ರಾಂದೋಳನಕ್ಕೆ ಮತ್ತೆ ಹುರಿದುಂಬಿಸುವಂತೆ ತೋರ್ಪಟ್ಟುಕೊಂಡಿದ್ದಾರೆ. ಇಂಥ ಅಭಿಪ್ರಾಯಗಳು ಈಗ್ಗೆ ಉಪಾದೇಯಗಳಲ್ಲ. ಭರತಖಂಡದ ಸ್ಥಿತಿಗತಿಗಳನ್ನೂ ಬಿನ್ನಪಗಳನ್ನೂ ಭಾರತ ಪ್ರತಿನಿಧಿಗಳಿಂದ ತಿಳಿದುಕೊಳ್ಳುವ ಮಹೋದ್ದೇಶದಿಂದಲೇ ಸ್ಟೇಟ್ ಸೆಕ್ರೆಟರಿಯವರು ಇಲ್ಲಿಗೆ ಬರುವವರಾಗಿರುವಾಗ ವೃಥಾ ತೀಕ್ಷ್ಣವಾದಗಳನ್ನೂ ತೀವ್ರತರಾಂದೋಳನಗಳನ್ನೂ ಸಾತ್ವಿಕ ನಿರೋಧಾದಿ ಚಲನವಲನಗಳನ್ನೂ ಸಭಾ ಕೋಲಾಹಲಗಳನ್ನೂ ಮಾಡುತ್ತ ಈ ಬಹಿರಾಡಂಬರಗಳಿಂದ ಕಾರ್ಯವಿಘಾತವನ್ನು ಮಾಡಿಕೊಳ್ಳುವುದೇತಕ್ಕೆ ? ಅದರಿಂದ ಇಂಡ್ಯಾ ಪ್ರಭುತ್ವದವರ ನಿರೀಕ್ಷಣೆಯೂ ವ್ಯರ್ಥವಾಗಿ, ಅವರ ಸಾನುಭೂತಿಯನ್ನೂ ತಪ್ಪಿಸಿಕೊಂಡಂತಾಗುವುದಲ್ಲದೆ, ಆಂಗ್ಲೋ ಇಂಡಿಯನ್ನರ ಹಾಡಿಗೆ ಶ್ರುತಿಗೂಡಿಸಿಕೊಟ್ಟು ನಮ್ಮ ಅನರ್ಥವನ್ನು ನಾವೇ ಮಾಡಿಕೊಂಡಂತೆಯೂ ಆಗುವುದು. ಅದುಕಾರಣ, ಪ್ರಕೃತದಲ್ಲಿ ಯಾವ ರಾಜಕೀಯಾಂದೋಳನಾಡಂಬರಗಳೂ ಇಲ್ಲದೆ ದೇಶವು ಶಾಂತಸ್ಥಿತಿಯಲ್ಲಿರುವಂತೆ ಮಾಡಿ, ಸ್ಟೇಟ್ ಸೆಕ್ರೆಟರಿಯವರ ಮುಂದೆ ತಮ್ಮ ಅವಶ್ಯಕತೆಗಳನ್ನೆಲ್ಲಾ ಅರುಹುಕೊಳ್ಳುವ ಭಾರವನ್ನು ತಮ್ಮ ಪ್ರಮುಖರಮೇಲೆ ಹೊರಿಸಿ, ಭಾರತಾಧಿವಾಸಿಗಳೆಲ್ಲರೂ ಶಾಂತಚಿತ್ತದಿಂದಿರುವುದೇ ಭರತಖಂಡದ ಹಿತಸಾಧನದ ಮಾರ್ಗವಾಗಿರುವುದು.

ಪ್ರತ್ಯೇಕಪ್ರಾತಿನಿಧ್ಯ.

ಬರುವ ಅಕ್ಟೋಬರ್ ತಿಂಗಳಲ್ಲಿ ಮತ್ತೆ ಪಾರ್ಲಿಮೆಂಟು ಕೂಡುವುದರಿಂದ ತಾವು ಭರತಖಂಡದಲ್ಲಿ ವೈಸ್ರಾಯರೊಡನೆ ಸೇರಿ ಏನೇನನ್ನು ಮಾಡಲು ಉದ್ದೇಶಿಸಿರುವೆವೆಂಬುದನ್ನು ಅದರ ಸಭಾಸದರೊಡನೆ ತಿಳಿಯಿಸಿ, ಅವರಭಿಪ್ರಾಯವನ್ನೂ ತೆಗೆದುಕೊಂಡು, ಬಳಿಕ ಸ್ಟೇಟ್ ಸೆಕ್ರೆಟರಿಯವರು ಭರತಖಂಡಕ್ಕೆ ದಯಮಾಡಿಸುವವರಾಗಿದ್ದಾರೆ. ಇಲ್ಲಿಗೆ ಬಂದಾಗ್ಗೆ ಪ್ರಜೆಗಳು ಅಚರಿಸಬೇಕಾದ ವಿಷಯವನ್ನು ಕುರಿತು ಈಗಾಗಲೇ ಅವರು ಒಂದು ಪ್ರಕಟನೆಯನ್ನು ಭರತಖಂಡದ ಪ್ರಭುತ್ವದವರ ಮೂಲಕ ಮಾಡಿಸಿದ್ದಾರೆ. ಅದರಲ್ಲಿ ಕಂಡಿರುವ ಪ್ರಕಾರ ಸ್ಟೇಟ್ ಸೆಕ್ರೆಟರಿಯವರು ಈಗಣ ಯುದ್ಧದ ಕಾರಣದಿಂದ ಸೀಮೆಯನ್ನು ಬಿಟ್ಟು ಭರತಖಂಡದಲ್ಲಿ ಹೆಚ್ಚು ದಿವಸಗಳವರೆಗೆ ನಿಲ್ಲುವುದು ಸಾಧ್ಯವಲ್ಲ. ಆಗಸ್ಟ್ ತಾ|| ೨೦ರಲ್ಲಿ ಅವರು ಪ್ರಕಟಿಸಿರುವ ರಾಜಕೀಯ ವಿಷಯಗಳನ್ನು ಕುರಿತು ಪ್ರಜೆಗಳೊಡನೆ ಅವರು ಸ್ವೇಚ್ಛೆಯಿಂದ ಚರ್ಚಿಸುವರು. ಸ್ಥಾನಿಕ ಪ್ರಭುತ್ವಗಳವರ ಅಭಿಪ್ರಾಯಗಳನ್ನೂ ಇನ್ನುಳಿದ ಸಂಘಗಳ ಅಭಿಪ್ರಾಯಗಳನ್ನೂ ಅವರು ಕೇಳಿಕೊಳ್ಳುವರು. ವಿವಾದಾಂಶಗಳಲ್ಲಿ ಮುಖ್ಯವಾದುವುಗಳನ್ನು ಆರಿಸಿಕೊಂಡು ಪ್ರಜೆಗಳು ಸಿದ್ಧರಾಗಿರಬೇಕು. ಉಳಿದ ವಿಷಯಗಳ ಸಂಬಂಧವಾಗಿ ಯಾವ ವಿಜ್ಞಾಪನೆಗಳನ್ನೂ ಅವರು ಕೇಳುವುದಿಲ್ಲ. ರಾಜಕೀಯ ಸಂಸ್ಕರಣ ವಿಷಯವಾಗಿ ಪ್ರಜೆಗಳು ಮಾಡಿಕೊಳ್ಳಬೇಕಾದ ವಿಜ್ಞಾಪನೆಗಳನ್ನು ವೈಸ್ರಾಯರ ಮೂಲಕವಾಗಿ ಕಳುಹಿಸಿಕೊಡಬೇಕು. ಬಳಿಕ ಅವರೂ ವೈಸ್ರಾಯರೂ ಸೇರಿಯೇ ಆ ವಿಷಯಗಳನ್ನು ಲಾಲಿಸುವರು. ಆ ಸಂದರ್ಭದಲ್ಲಿ ಪ್ರತಿನಿಧಿಗಳಿಗೆ ತಕ್ಕ ಉತ್ತರಗಳನ್ನು ಆ ಕೂಡಲೇ ಕೊಡುವವರಾಗಿಲ್ಲ. ಅದುಕಾರಣ ಪ್ರಜಾಪ್ರಮುಖರು ತಮ್ಮ ವಿಜ್ಞಾಪನೆಗಳನ್ನು ಸಮರ್ಪಿಸಿದ ಬಳಿಕ ಅವಶ್ಯಕವಿದ್ದರೆ ತಮ್ಮಲ್ಲೇ ಕೆಲಮಂದಿಗಳನ್ನಾರಿಸಿ ಸ್ಟೇಟ್ ಸೆಕ್ರೆಟರಿಯವರನ್ನು ಕಂಡು ಸಂಭಾಷಿಸಲು ಏರ್ಪಡಿಸಿಕೊಳ್ಳಬಹುದು. ಸ್ಟೇಟ್ ಸೆಕ್ರೆಟರಿಯವರೊಡನೆ ಮಾತನಾಡಲು ಅಪೇಕ್ಷಿಸತಕ್ಕವರೂ ವಿಜ್ಞಾಪನೆಯನ್ನರ್ಪಿಸಲಿಚ್ಛೆಪಡುವವರೂ ಸಹ ತಮ್ಮ ಉದ್ದೇಶಗಳನ್ನು ಮೊದಲೇ ಆಯಾ ಸ್ಥಾನಿಕ ಪ್ರಭುತ್ವದವರಿಗೆ ತಿಳಿಯಿಸಿಕೊಳ್ಳಬೇಕಾಗಿದೆ. ಬಳಿಕ ಆ ಪ್ರಭುತ್ವದವರು ಇಂಥ ವಿಷಯಗಳನ್ನೆಲ್ಲಾ ಕ್ರೋಡೀಕರಿಸಿ ಇಂಡ್ಯಾ ಸರ್ಕಾರಕ್ಕೆ ಕಳುಹಿಸಿಕೊಡುವರು. ಅವರು ಸ್ಟೇಟ್ ಸೆಕ್ರೆಟರಿಯವರಿಗೆ ಮುಟ್ಟಿಸುವರು. ಸಾಧ್ಯವಾದಮಟ್ಟಿಗೆ ಪ್ರತಿನಿಧಿಗಳೆಲ್ಲರ ವಿಜ್ಞಾಪನೆಗಳೂ ಕೇಳಲ್ಪಡುವುವು. ಪ್ರತಿಯೊಂದು ಪ್ರಜಾವರ್ಗದವರೂ ತಂತಮ್ಮ ಮನೋಭೀಷ್ಟಗಳನ್ನು ತಿಳಿಯಪಡಿಸಿಕೊಳುವುದಕ್ಕೆ ಅವಕಾಶವು ಕೊಡಲ್ಪಡುವುದು. ಸಾಧ್ಯವಾದಮಟ್ಟಿಗೆ ಅಂಥ ವಿಜ್ಞಾಪನೆಗಳನ್ನೆಲ್ಲಾ ಬೇಗಬೇಗನೆ ಕಳುಹಿಸಿಕೊಟ್ಟರೆ ಅವುಗಳ ಮುಖ್ಯವಿಷಯಗಳನ್ನು ಚೆನ್ನಾಗಿ ಪರಿಶೀಲಿಸಿಕೊಳ್ಳುವುದಕ್ಕೆ ಪ್ರಭುತ್ವದವರಿಗೆ ಅನುಕೂಲವಾಗುವುದು" ಎಂದು ಪ್ರಕಟಿಸಲ್ಪಟ್ಟಿದೆ. ಅದುಕಾರಣ, ಭರತಖಂಡದ ಪ್ರಜಾಪ್ರಮುಖರು ದೇಶಹಿತಕ್ಕಾಗಿ ಯಾವ ಯಾವ ರಾಜಕೀಯ ಸಂಸ್ಕರಣಗಳನ್ನು ರೂಡಿಸಿಕೊಳ್ಳಬೇಕೆಂದು ಕುತೂಹಲಪಡುತ್ತಿರುವರೋ ಅವನ್ನೆಲ್ಲಾ ಕ್ರುತಪಡಿಸಿ ಚರ್ಚಿಸಿ ಸಫಲಗೊಳಿಸಿಕೊಳ್ಳುವುದಕ್ಕೆ ಇದು ಅತ್ಯನುಕೂಲ ಸಂಧಿಯಾಗಿರುವುದು. ಇಂಥ ಸಮಯವನ್ನು ಉಂಟುಮಾಡಿಕೊಡಲು ಕಾರಣಭೂತರಾದ ನಮ್ಮ ವೈಸ್ರಾಯರೂ ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟೊಗ್‌ರವರೂ ಸಹ ಭಾರತೀಯರ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಸುಸಂಧಿಯನ್ನು ವ್ಯರ್ಥಗೊಳಿಸದಂತೆ ಉಪಯೋಗಮಾಡಿಕೊಳ್ಳಲು ಭಾರತೀಯ ಪ್ರಜಾಪ್ರಮುಖರು ಸಿದ್ಧರಾಗಿರುವರೆಂಬುದಕ್ಕೆ ಸಂಶಯವಿಲ್ಲ.

ಈಗಣ ಸಂದರ್ಭವು ಭರತಖಂಡದ ರಾಜಕೀಯ ಸಂಸ್ಕರಣದ ಒಂದು ನೂತನ ಶಕಾರಂಭಕಾಲವಾಗಿರುತ್ತದೆ. ದೇಶದ ಸರ್ವಾಂಗ ಪರಿಪುಷ್ಟಿಯೂ ಅಪೇಕ್ಷಿತವಾಗಿರುವಾಗ ಸಕಲ ಜನವರ್ಗದ ಪುರೋಭಿವೃದ್ಧಿಯೂ ಅಪೇಕ್ಷಣೀಯವಾದುದೆಂಬುದನ್ನು ಹೇಳಬೇಕಾಗಿಲ್ಲ. ಸ್ವಾರ್ಥಧುರಂಧರತೆಯು ಹಬ್ಬಿ ಬಳೆಯುತ್ತಿರುವ ಈಗಣ ಕಾಲದಲ್ಲಿ ಪ್ರತಿಯೊಂದು ಪ್ರಜಾವರ್ಗದವರೂ ತಂತಮ್ಮ ಅಭ್ಯುನ್ನತಿಗಾಗಿ ತಾವೇ ವಿಶೇಷಪ್ರಯತ್ನಗಳನ್ನು ನಡೆಯಿಸದೆ ಪರರನ್ನು ನಂಬಿ ಕುಳಿತುಕೊಳ್ಳುವುದು ಜಾಣತನವಾಗುವುದಿಲ್ಲ. ಹಿಂದುಳಿದ ಜನವರ್ಗದವರೆಲ್ಲರೂ ತಮ್ಮ ವ್ಯಾಪಕತೆಗೂ ಉನ್ನತಿಗೂ ತಕ್ಕ ಮಾರ್ಗಗಳನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಮುಂದಾದವರು ತಮ್ಮ ಅಭ್ಯುನ್ನತಿಗಾಗಿ ಪಡುತ್ತಿರುವ ಸಾಹಸಗಳಿಗೆ ದ್ವಿಗುಣತ್ರಿಗುಣವಾಗಿ ಇವರುಗಳು ಪ್ರಯತ್ನಪಡದಿದ್ದರೆ ತಲೆಯೆತ್ತಿಕೊಳ್ಳುವುದು ಸಾಧ್ಯವಲ್ಲ. ಹಿಂದುಳಿದವರನ್ನು ಮುಂದಕ್ಕೆ ತರದಿದ್ದರೆ ದೇಶದ ಸರ್ವಾಂಗ ಪರಿಪುಷ್ಟಿಯಾಗುವುದಿಲ್ಲವೆಂಬುದನ್ನು ಪ್ರಭುತ್ವದವರೂ ಸಿದ್ಧಾಂತಮಾಡಿರುತ್ತಾರೆ. ಭರತಖಂಡದ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರುಗಳ ಕೂಡ ಹಿಂದುಳಿದ ಜನವರ್ಗದವರುಗಳಿಗೆ ಕೆಲ ವಿಶಿಷ್ಟ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಅವಶ್ಯಕವೆಂದು ತಮ್ಮ ವರದಿಯಲ್ಲಿ ಕಾಣಿಸಿರುತ್ತಾರೆ. ಇದಕ್ಕಾಗಿಯೇ ಈಗಾಗಲೇ ಬೊಂಬಾಯಿ ಮದ್ರಾಸು ಮೊದಲಾದ ಕೆಲ ಸರ್ಕಾರಗಳವರೂ ನಮ್ಮ ಪ್ರಜಾಪ್ರಿಯ ಮೈಸೂರು ಪ್ರಭುತ್ವದವರೂಸಹ ಇಂಥ ಸೌಕರ್ಯಕಲ್ಪನೆಯಲ್ಲಿ ತತ್ಪರರಾಗಿರುತ್ತಾರೆ. ಮಹಮ್ಮದೀಯರು ಸ್ಥಾನಿಕ ಪ್ರಭುತ್ವಗಳಲ್ಲೂ ನಿಯಮನಿರ್ಮಾಣಸಭೆಗಳಲ್ಲೂ ತಮ್ಮ ಜನವರ್ಗದವರಿಗೆ ಪ್ರತ್ಯೇಕ ಪ್ರಾತಿನಿಧ್ಯದ ಸ್ವಾಮ್ಯರಬೇಕೆಂದು ಹೇಳಿ ಸಾಧಿಸಿಕೊಂಡೂ, ಕೊಳ್ಳುತ್ತಲೂ ಇದ್ದಾರೆ. ಗಣ್ಯಗಳಾಗಿರುವ ಪ್ರಜಾವರ್ಗಗಳ ಪ್ರಾತಿನಿಧ್ಯವೆಲ್ಲಾ ಸಾಂಗವಾಗಿದ್ದಹೊರತು ಪ್ರಾಂತಿಕ ನಿಯಮನಿರ್ಮಾಣಸಭೆಗಳಾಗಲೀ ಸಾಮ್ರಾಜ್ಯಶಾಸನಸಭೆಯೇ ಆಗಲಿ ಪ್ರಜಾಪ್ರಭುತ್ವಕ್ಕೆ ನೆಲೆಯೆನಿಸಿಕೊಳ್ಳಲಾರವು. ಅದುಕಾರಣವೇ ಕೈ|| ಗೋಪಾಲಕೃಷ್ಣ ಗೋಖಲೆಯವರೂ ಕೂಡ ಲಿಂಗಾಯತರು ಮೊದಲಾದ ಜನವರ್ಗದವರಿಗೆಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದು ಅವಶ್ಯಕವೆಂಬ ಅಭಿಪ್ರಾಯವನ್ನು ತಮ್ಮ ನವೀನರಾಜಕೀಯ ಸಂಸ್ಕರಣ ಪ್ರಣಾಳಿಕೆಯಲ್ಲಿ ವ್ಯಕ್ತಪಡಿಸಿರುವರು. ಪ್ರತ್ಯೇಕಪ್ರಾತಿನಿಧ್ಯದ ಅವಶ್ಯಕತೆಯು ಈಗ ಸ್ಥಾನಿಕಪ್ರಭುತ್ವಗಳಲ್ಲೂಅಭಿವ್ಯಕ್ತವಾಗಿರುವುದು. ಬೊಂಬಾಯಿ ಅಧಿಪತ್ಯದಲ್ಲಿ ನಮ್ಮ ವೀರಶೈವ ಜನವರ್ಗವು ಅಧಿಕ ಸಂಖ್ಯಾಕವಾಗಿಯೂ ಪ್ರಮುಖವಾಗಿಯೂ ಇರುವುದರಿಂದ ನ್ಯಾಯವಾಗಿ ದೊರೆಯಬೇಕಾದ ಪ್ರತ್ಯೇಕ ಪ್ರಾತಿನಿಧ್ಯದ ಸ್ವಾಮ್ಯವನ್ನು ಪಡೆದುಕೊಳ್ಳುವುದಕ್ಕಾಗಿ ಅವರು ಪ್ರಯತ್ನಿಸುವುದು ಅವಶ್ಯಕವಾಗಿರುವುದು. ಆಪ್ರಾಂತದ ವೀರಶೈವ ಪ್ರಮುಖರು ಕೂಡಲೇ ಜಾಗರೂಕತೆಗೊಂಡು ಈಗಣ ಸಮಯವನ್ನು ವ್ಯರ್ಥಗೊಳಿಸಿಕೊಳ್ಳದೆ ಸಫಲಮಾಡಿಕೊಳ್ಳುವವರಾಗಲೆಂದು ಸೂಚಿಸುವೆವು.

ಗತಿಸಿದ ಕೆ.ಎಸ್. ದೊರೆಸಾಮಯ್ಯರ್‌ರವರು.

ದಿವಂಗತರಾದ ಸರ್ ಕೆ. ಶೇಷಾದ್ರಿ ಅಯ್ಯರವರಜ್ಯೇಷ್ಠಪುತ್ರರಾದ ಮ|| ಕೆ. ಎಸ್. ದೊರೆಸಾಮಯ್ಯರ್‌ರವರು ಕಳೆದ ತಾ|| ೨೩ ನೆ ಭಾನುವಾರ ಬೆಂಗಳೂರಿನಲ್ಲಿರುವ ತಮ್ಮ "ಕುಮಾರೋದ್ಯಾನ" ವೆಂಬ ಭವನದಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ. ಇವರು ತಮ್ಮ ತಂದೆಯವರ ಕಾಲದಲ್ಲೇ ಮೈಸೂರು ಸಂಸ್ಥಾನದಲ್ಲಿ ಅಸಿಸ್ಟೆಂಟ್ ಕಮಿಷನರುದ್ಯೋಗಕ್ಕೆ ಸೇರಿ ಅಭಿವೃದ್ಧಿಗೊಳ್ಳುತ್ತ ಬಂದು ಈಗ ರೆವಿನ್ಯೂ ಕಮಿಷನರ್ ಪದವಿಯನ್ನು ಸಾಮರ್ಥ್ಯದಿಂದ ನಿರ್ವಹಿಸುತ್ತಿದ್ದರು. ಮರಣಕಾಲದಲ್ಲಿ ಇವರಿಗೆ ೫೧ ವಯಸ್ಸಾಗಿದ್ದಿತು. ಇವರ ತಮ್ಮಂದಿರಾದ ಕೃಷ್ಣಯ್ಯರ್‌ರವರು ಡೆಪ್ಯುಟಿ ಕಮಿಷನರುದ್ಯೋಗದಲ್ಲಿದ್ದು ವೃತರಾಗಿ ಮೂರುತಿಂಗಳುಗಳು ಮಾತ್ರವೇ ಆಗಿರುವುವು. ಇಷ್ಟು ಅಲ್ಪಕಾಲದೊಳಗೆ ಮತ್ತೊಂದು ವಿಯೋಗದುಃಖವು ಕೂಡ ಆ ಕುಟುಂಬದವರಿಗೆ ಉಂಟಾದುದು ವಿಷಾದಕರವು. ತಮ್ಮ ಸಹೋದರರಂತೆ ಮ|| ದೊರೆಸಾಮಯ್ಯರೂ ಕೂಡ ಅತಿಮೂತ್ರವ್ಯಾಧಿಗೆ ತುತ್ತಾಗಿದ್ದರೆಂದು ಕೇಳಿದೆವು. ಇವರಿಗೆ ಪುತ್ರಸಂತಾನವಿಲ್ಲ. ಒಬ್ಬ ಕುಮಾರಿಯೂ ಸಣ್ಣವಯಸ್ಸಿನ ಮೊಮ್ಮಗನೂ ಪತ್ನಿಯೂ ಇರುವರು. ದಿವಾನ್ ಸರ್ ವಿಶ್ವೇಶ್ವರಯ್ಯನವರೇ ಮೊದಲಾದ ಅಧಿಕಾರಿಗಳನೇಕರು ವೃತರ ಮನೆಗೆ ಹೋಗಿದ್ದು ಆದಿನ ತಮ್ಮ ಅನುತಾಪವನ್ನು ಅವರ ಕುಟುಂಬದವರಿಗೆ ತಿಳಿಯಿಸಿಬಂದರು.

ಒಳದೇಶದ ವೃತ್ತಾಂತಗಳು.

ಕೋಲಾರ ಡಿ|| ಕಮಿಟಿಯವರು ಕೂಡ ಒಂದು ವೃತ್ತಪತ್ರವನ್ನು ಪ್ರಕಟಿಸಲು ಪ್ರಯತ್ನಿಸಿರುವರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಮಳೆಯು ಅನುಕೂಲವಾಗಿ ಆಗುತ್ತಿದೆ. ನಿಂತಿರುವ ಬೆಳಸುಗಳಿಗೆ ಮಳೆ ಹೆಚ್ಚಾಗಿದೆ. ಪ್ಲೇಗುರೋಗವು ತಲೆಯಿಕ್ಕಿದೆ. ವ್ಯಾಪನೆಯು ವಿಶೇಷವಾಗಿಲ್ಲ.

ಬೆಂಗಳೂರಿನ ಸಮೀಪದಲ್ಲಿ ಭೂಗರ್ಭದೊಳಗೆ ಮೊನಾಸೈಟ್, ಸಾಮರಸ್‌ಕೈಟ್ ಎಂಬ ೨ ತೆರದ ಲೋಹಗಳು ವಿಶೇಷವಾಗಿ ದೊರೆಯುವುವೆಂದು ಗೊತ್ತಾಗಿರುವುದು.

ಡಿ|| ಕಮಿಷನರುಗಳಾದ ಮ|| ಜಹಿರುದೀನ್ ಮೆಕ್ಕೆಯವರು ತುಮಕೂರಿನಿಂದ ಚಿತ್ರದುರ್ಗಕ್ಕೂ, ಮ|| ಎ. ಸುಬ್ರಹ್ಮಣ್ಯಯ್ಯರ್‌ರವರು ತುಮಕೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಳೆದ ಏಪ್ರಿಲ್ ತಿಂಗಳಲ್ಲಿ ರಾಜಧಾನಿಯಲ್ಲಿ ಕೂಡಿದ್ದ ಪ್ರಜಾಪ್ರತಿನಿಧಿಸಭೆಯ ವಿದ್ಯಮಾನಗಳನ್ನೆಲ್ಲಾ ಕನ್ನಡದಲ್ಲಿ ಸರ್ಕಾರದವರು ಒಂದು ಗ್ರಂಥರೂಪವಾಗಿ ಪ್ರಕಟಿಸಿದ್ದಾರೆ. ಇದರ ಬೆಲೆ ೧ ರೂಪಾಯಿ.

ನವರಾತ್ರಿಯ ಮಹೋತ್ಸವಕ್ಕಾಗಿ ರಾಜಧಾನಿಗೆ ಬರುವ ಅತಿಥಿಸತ್ಕಾರದಮೇಲ್ವಿಚಾರಣೆಗಾಗಿ ಪದ್ಧತಿಯಂತೆ ಮ|| ಬಿ. ನಾರಾಯಣಸ್ವಾಮಯ್ಯಂಗಾರ್ ಬಿ. ಎ. ಬಿ. ಎಲ್. ರವರು ನಿಯಮಿಸಲ್ಪಟ್ಟಿದ್ದಾರೆ.

ಬರುವ ನವರಾತ್ರಿಯಕಾಲದಲ್ಲಿ ರಾಜಧಾನಿಯೊಳಗೆ ಕೂಡುವ ಪರಸ್ಪರ ಸಹಾಯಕಸಂಘಗಳ ಮಹಾಸಭೆಯ ಅಧ್ಯಕ್ಷತೆಯನ್ನು ರಾ|| ಬ|| ಎಂ. ಶ್ಯಾಮರಾವ್ ಎಂ. ಎ. ಯವರು ವಹಿಸುವವರಾಗಿದ್ದಾರೆಂದು ಕೇಳುತ್ತೇವೆ.

ಬೆಂಗಳೂರಲ್ಲಿರುವ ಹುಚ್ಚರ ವೈದ್ಯಶಾಲೆಯಲ್ಲಿರುವವರೊಳಗೆ ೩೭ ಮಂದಿಗಳು ವಾಂತಿಭೇದಿ ರೋಗಗ್ರಸ್ತರಾಗಿ ೨೧ ಮಂದಿಗಳು ಸತ್ತಿರುವರು. ವೈದ್ಯಶಾಲೆಯಲ್ಲೇ ಸಾಂಕ್ರಾಮಿಕ ರೋಗಕ್ಕೆ ಇಷ್ಟು ಮಂದಿಗಳು ತುತ್ತಾಗಿರುವುದು ಆಶ್ಚರ್ಯವೇ ಸರಿ.

ಗಣೇಶನ ಹಬ್ಬಕ್ಕಾಗಿ ರಾಜಧಾನಿಗೆ ದಯೆಮಾಡಿಸಿದ್ದ ಶ್ರೀಮನ್ಮಹಾರಾಜರವರು ಕಳೆದ ಸೋಮವಾರ ಮರಳಿ ಬೆಂಗಳೂರಿಗೆ ದಯಮಾಡಿಸಿದರು. ವಾಣೀವಿಲಾಸ ಸನ್ನಿಧಾನದ ಮಹಾಮಾತೃಶ್ರೀಯವರೂ ಕೂಡ ಕಳೆದ ಬುಧವಾರ ಬೆಳಗ್ಗೆ ಬೆಂಗಳೂರಿಗೆ ದಯಮಾಡಿಸಿದರು.

ಪ್ರೊ|| ಸಿ. ರಾಮಲಿಂಗರೆಡ್ಡಿಯವರು ವಿದ್ಯಾಭ್ಯಾಸಶಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರ ಸಹಾಯಕೋದ್ಯೋಗಿಗಳಾಗಿ ನಿಯಮಿಸಲ್ಪಟ್ಟಿರುವ ಕಾರಣ ಮೈಸೂರು ಮಹಾರಾಜಾಕಾಲೇಜಿನ ಪ್ರಿನ್‌ಸಿಪಾಲ್ ಉದ್ಯೋಗಕ್ಕೆ ಪ್ರೊ|| ಸುಬ್ಬರಾವ್‌ರವರು ನಿಯಮಿಸಲ್ಪಟ್ಟಿರುವರು.

ಮೈಸೂರು ಜನರಲ್ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿದ್ದ ಮ|| ಎಸ್. ಸುಬ್ಬರಾವ್‌ರವರು ಮೈಸೂರು ಡಿ|| ಮೆಡಿಕಲ್ ಆಫೀಸರಾಗಿಯೂ, ಡಿ|| ಮೆಡಿಕಲ್ ಆಫೀಸರಾಗಿದ್ದ ಮಿ|| ಮಹಮ್ಮದ್ ಉಸ್ಮಾನ್‌ರವರು ಜನರಲ್ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಸತ್ಯವಾದಿ ಎಂಬ ಒಂದು ವಾರಪತ್ರಿಕೆಯು ಮೈಸೂರು ರಾಯಲ್ ಮುದ್ರಾಲಯದಲ್ಲಿ ಅಚ್ಚಾಗಿ ಕಳೆದ ವಾರದಿಂದ ಪ್ರಕಟಿತವಾಗುತ್ತಿದೆ. ಇದರ ಪ್ರಥಮ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದೆವು. ಇದರ ಚಂದಾ ವರ್ಷ ೧ ಕ್ಕೆ ೩ ರೂ. ಗಳಾಗಿರುತ್ತದೆ. ಇದರಲ್ಲಿ ರಾಜಕೀಯ ಸಾಮಾಜಿಕಾದಿ ವಿಷಯಕ ಲೇಖನಗಳು ಬರೆಯಲ್ಪಡುವುವು.

ಜಗಳೂರು ತಾಲ್ಲೂಕಿನಲ್ಲಿ ಹೆಚ್ಚುಭಾಗದ ಪ್ರಜೆಗಳೆಲ್ಲರೂ ಲಿಂಗಾಯತರಾಗಿರುವರೆಂದೂ ಅಲ್ಲಿ ಸೇಕಡಾ ೩ ರಂತೆ ಬಾಲಕರೂ, ಸೇಕಡಾ || ದಂತೆ ಬಾಲಿಕೆಯರೂ ವಿದ್ಯಾಭ್ಯಾಸಮಾಡುತ್ತಿರುವರೆಂದೂ ಈ ತಾಲ್ಲೂಕಿನಲ್ಲಿ ವಿದ್ಯಾಭಿವೃದ್ಧಿಗೆ ವಿದ್ಯಾಶಾಖೆಯವರು ತಕ್ಕ ಗಮನವನ್ನು ಕೊಡಬೇಕೆಂದೂ ದಿವಾನರವರು ತಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟಿನ ಸಂಚಾರಕಾಲದ ಅನುಭವವನ್ನು ಬರೆದಿರುತ್ತಾರೆ.

ಮೈಸೂರು ಸಂಸ್ಥಾನದ ಪ್ರಜೆಗಳಲ್ಲಿ ಪ್ರಾಯಸಮರ್ಥರಾದವರನ್ನು ಬಲಾತ್ಕಾರವಿಲ್ಲದೆ ಸೈನ್ಯಶಾಖೆಗೆ ಸೇರಿಸಿಕೊಳ್ಳಲು ಪ್ರೋತ್ಸಾಹಕರವಾದ ಏರ್ಪಾಟುಗಳು ಸ್ಥಾಪಿಸಲ್ಪಟ್ಟಿವೆ. ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಅವರಾಗಿ ಇಷ್ಟಪಡತಕ್ಕ ಜನರನ್ನು ಸೇರಿಸಿಕೊಳ್ಳಲು ಸರ್ಕಾರದಧಿಕಾರಿಗಳೂ ಪ್ರಜಾಪ್ರಮುಖರೂ ಸಹ ಮುತುವರ್ಜಿ ವಹಿಸುವವರಾಗಿದ್ದಾರೆ. ಸಾಮ್ರಾಜ್ಯ ಸರ್ಕಾರದ ಸೇವೆಯನ್ನೂ ದೇಶಸೇವೆಯನ್ನೂ ಮಾಡಿ ಕೃತಾರ್ಥರಾಗುವುದಕ್ಕೆ ಕಾಯಶಕ್ತಿಯುಳ್ಳ ಪ್ರತಿಯೊಂದು ಜನವರ್ಗದವರಿಗೂ ಇದು ಅನುಕೂಲಸಮಯ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.—ಈ ರಂಗದಲ್ಲಿ ಇಂಗ್ಲೀಷರು ಈಗ ೪ ನೆಯ ಅವಸ್ಕಂದನವನ್ನು ಸಾಗಿಸುತ್ತಿದ್ದಾರೆ. ಜರ್ಮನರು ಪತಂಗಗಳು ಬೆಂಕಿಗೆ ಬಂದುಬಿದ್ದು ಭಸ್ಮವಾಗುವಂತೆ ಜರ್ಮನರು ಆಂಗ್ಲರ ಫಿರಂಗಿಗುಂಡಿನ ಬೆಂಕಿಗೆ ಆಹುತಿಯಾಗುತ್ತಿದ್ದಾರೆ. ಫ್ಲಾಂಡರ್ಸ್ ಜರ್ಮನರ ಕೈಯಿಂದ ಸಂಪೂರ್ಣವಾಗಿ ಬಿಟ್ಟುಹೋಗುವುದರಲ್ಲಿದೆ. ಇದು ಸಿದ್ಧಿಸಿದರೆ ಬೆಲ್ಜಿಯಮ್ಮಿನಾಸೆಯನ್ನು ಜರ್ಮನರು ಬಿಟ್ಟೇತೀರಬೇಕು. ಏಕೆಂದರೆ—ಸಮುದ್ರದ ಕಡೆಯಿಂದ ಇಂಗ್ಲೀಷರು ಎಷ್ಟು ಸೈನ್ಯವನ್ನು ಬೇಕಾದರೂ ಬೆಲ್ಜಿಯಮ್ಮಿನ ಮೇಲೆ ಇಳುಹಿಸುವರು. ಆಗ ಜರ್ಮನರು ಅದನ್ನು ಕಾಪಾಡಿಕೊಳ್ಳುವುದು ಕಷ್ಟ. ಸದ್ಯಃ ಪೂರ್ವರಂಗದಲ್ಲಿ ರಷ್ಯನರ ಒತ್ತಾಟವು ಕ್ಷೀಣಿಸಿಹೋಗಿರುವುದರಿಂದ ಶತ್ರುಗಳು ಹೆಚ್ಚು ಸೈನ್ಯಗಳನ್ನು ಪಶ್ಚಿಮರಂಗದಲ್ಲಿ ಉಪಯೋಗಿಸುತ್ತಿದ್ದಾರೆ. ಈಗ ಅವರು ಕಂದಕಗಳ ಯುದ್ಧವನ್ನು ಬಿಟ್ಟು ಅಲ್ಲಲ್ಲಿ ಬಲವಾದ ಗೋಡೆಗಳನ್ನು ಕೋಟೆಯಂತೆ ಕಟ್ಟಿ ಫಿರಂಗಿಗಳನ್ನು ಅಲ್ಲಿ ಸೇರಿಸುತ್ತಲಿದ್ದಾರೆ. ಇಂಥ ಅನುಕೂಲಸ್ಥಿತಿಯಲ್ಲೂ ಜರ್ಮನರು ಇಂಗ್ಲೀಷರ ನುಗ್ಗಾಟವನ್ನು ನಿಲ್ಲಿಸಲಾರದೆ ಹಿಮ್ಮೆಟ್ಟುತ್ತಲಿದ್ದಾರೆ. ಇದುವರೆಗೂ ಇಂಗ್ಲೀಷರು ಅರ್ರಾಸು, ಮೆಸಿನೀಸು, ಈಪ್ರೆಸ್ಸುಗಳ ಹತ್ತಿರ ತಮ್ಮ ಅಸಾಧಾರಣವಾದ ಶೌರ್ಯ ಸಾಹಸಗಳಿಂದ ಅವಸ್ಕಂದನವನ್ನು ನಡೆಯಿಸಿ ಅನೇಕ ವಿಜಯಗಳನ್ನು ಪಡೆದಿರುವರು. ಈ ಸಂದರ್ಭಗಳಲ್ಲಿ ಜರ್ಮನರು ತೋರಿಸಿದ ಅಸಾಧಾರಣ ಕೌಶಲ್ಯವೇ ಆಗಲೀ ವಿಜಯವೇ ಆಗಲೀ ಯಾವುದೂ ಇಲ್ಲ. ಅವರು ತಮ್ಮ ಸಂರಕ್ಷಕ ಸ್ಥಲಗಳನ್ನೇ ಉಳುಹಿಕೊಳ್ಳಲಾರದೆ ಹೋಗಿದ್ದಾರೆ. ಅಸಂಖ್ಯಾತವಾಗಿ ಅವರ ಸೈನಿಕರು ಮಡಿದಿರುತ್ತಾರೆ. ಈಗ ಇಂಗ್ಲೀಷರು ವೆಸ್ಟಕ್ ಎಂಬ ಗುಡ್ಡವನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದ್ದಾರೆ. ಇದು ಮೆಸಿನೀಸಿಗೆ ಸೇರಿಕೊಂಡಂತೆಯೇ ಇದೆ. ಅಲ್ಲದೆ ಮೆನಿನ್ ಎಂಬ ಗ್ರಾಮವನ್ನು ಹಿಡಿದುಕೊಳ್ಳಬೇಕೆಂಬುದೂ ಇಂಗ್ಲೀಷರ ಸಂಕಲ್ಪವಾಗಿದೆ. ಅಲ್ಲದೆ ರೂಲರ್ಸ್ ಎಂಬ ಗ್ರಾಮವು ಬಂಡಿದಾರಿಗಳೂ ಲೋಹಮಾರ್ಗಗಳೂ ಕೂಡುವ ಮುಖ್ಯಸ್ಥಾನವಾಗಿದೆ. ಇದನ್ನು ಹಿಡಿದುಕೊಂಡುದೇ ಆದರೆ ಪಶ್ಚಿಮಫ್ಲಾಂಡರ್ಸಿನಲ್ಲಿ ಜರ್ಮನರಿಗೆ ನೆಲೆಯೇ ತಪ್ಪಿದಂತಾಗುವುದು. ಮೆನಿನ್ ಗ್ರಾಮವು ಸಿಕ್ಕಿಹೋದರೆ ಲಿಲ್ಲಿ ಪಟ್ಟಣವು ಜರ್ಮನರ ಕೈಬಿಟ್ಟಂತೆಯೇ ಸರಿ. ಸೆಪ್ಟಂಬರ್ ತಾ|| ೧ ರಿಂದ ೨೧ ರವರೆಗೆ ಇಂಗ್ಲೀಷರು ಶತ್ರುಗಳನ್ನು ಅವರ ಸುರಕ್ಷಿತವಾದ ಅನೇಕಸ್ಥಲಗಳಿಂದ ಹಿಮ್ಮೆಟ್ಟಿಸಿ ಅವನ್ನೆಲ್ಲಾ ತಾವು ವಶಪಡಿಸಿಕೊಂಡುದಲ್ಲದೆ ಶತ್ರುಗಳಿಗೆ ಬಹು ವಿಧವಾದ ನಷ್ಟಗಳನ್ನುಂಟುಮಾಡಿ ವಿಶೇಷ ಜಯವನ್ನು ಪಡೆದಿದ್ದಾರೆ. ಈ ಯುದ್ಧದಲ್ಲಿ ಶತ್ರುಗಳ ಕಡೆಯ ೨೦೦೦ ಮಂದಿ ಸೈನಿಕರನ್ನು ಸೆರೆಹಿಡಿದಿದ್ದಾರೆ. ಈಚೆಗೆ ಜರ್ಮನರು ನೂತನ ಸಂರಕ್ಷಕ ಸ್ಥಾನಗಳನ್ನೇರ್ಪಡಿಸಿಕೊಂಡಿದ್ದಾರೆ. ಮಿತ್ರಮಂಡಲಿಯ ವೈಮಾನಿಕರು ಅವುಗಳ ಛಾಯಾಚಿತ್ರವನ್ನೆಲ್ಲಾ ಗ್ರಹಿಸಿಕೊಂಡು ಬಂದಿರುವುದರಿಂದ ಆ ಸ್ಥಲಗಳೂ ಕೂಡ ಸ್ವಲ್ಪಕಾಲದೊಳಗೆ ಹಾಳಾಗಿ ಮಿತ್ರಮಂಡಲಿಯ ವಶವಾಗುವುದರಲ್ಲಿವೆ. ಫ್ರೆಂಚ್ ಸೇನಾಮುಖದಲ್ಲಿ ವರ್ಡನ್ ಮೊದಲಾದ ಕಡೆ ಬಲವಾದ ಫಿರಂಗಿಯುದ್ಧಗಳು ಅಖಂಡವಾಗಿ ನಡೆಯುತ್ತಿವೆ. ಫ್ರೆಂಚರು ಕೆಲ ಜರ್ಮನ್ ಸೇನಾಪಜ್ಞ ಸ್ಥಲಗಳನ್ನು ಹಿಡಿದಿದ್ದಾರೆ. ಹೇಳಿಕೊಳ್ಳತಕ್ಕ ಜಯವು ಉಭಯಪಕ್ಷದಲ್ಲೂ ಉಂಟಾಗಿಲ್ಲ.

ರಷ್ಯಾರಂಗ—ರಿಗಾ ರಂಗದಲ್ಲಿ ರಷ್ಯನ್ ಸೈನ್ಯಗಳು ಈಗೀಗ ಸ್ವಲ್ಪ ಕಾಲೂರಿ ಹಿಮ್ಮೆಟ್ಟದೆ ನಿಂತಿರುವಂತೆ ಕಾಣುತ್ತದೆ. ಜರ್ಮನರು ಇದುವರೆಗೆ ಆ ಪ್ರಾಂತದಲ್ಲಿ ಹಿಡಿದುಕೊಂಡಿದ್ದ ಕೆಲವು ಸ್ಥಾನಗಳನ್ನು ಕೂಡ ರಷ್ಯನರು ಹಿಡಿದುಕೊಂಡು ಅಲ್ಲಿಂದ ಶತ್ರುಗಳನ್ನು ಹಿಮ್ಮೆಟ್ಟಿಸಿದ್ದಾರೆ. ದೇಶದ್ರೋಹಿಗಳೆಂದು ಹಿಡಿಯಲ್ಪಟ್ಟಿರುವ ಸುಖೋಮ್ಲಿನಾಫ್ ಕಾರ್ನಿಲಾಫ್ ಮೊದಲಾದ ಅನೇಕ ಸೈನ್ಯಾಧಿಕಾರಿಗಳ ವಿಚಾರಣೆಯು ನಡೆಯುತ್ತಿದೆ. ಸೈನಿಕ ಪುನರ್ನಿರ್ಮಾಣವು ಇನ್ನೂ ಸರಿಯಾಗಿ ಸಾಗಿಲ್ಲ. ವೃದ್ಧರನ್ನೂ ನಿರ್ಬಲರನ್ನೂ ಸೈನ್ಯದಿಂದ ತೆಗೆದು ಸೇನಾಸಂಖ್ಯೆಯನ್ನೂ ವ್ಯಯವನ್ನೂ ಕಡಿಮೆಮಾಡುವ ಯೋಚನೆಯು ಈಗಣ ಪ್ರಭುತ್ವದವರಿಗಿರುವುದಂತೆ. ಇಷ್ಟರಲ್ಲೇ ಸರ್ವ ವಿಚಾರಕ್ಕೂ ಪ್ರಜಾಸತ್ತಾತ್ಮಕ ಪ್ರಭುತ್ವದ ಮಹಾಸಭೆಯೊಂದು ನಡೆಯುವುದರಲ್ಲಿದೆ.

ಇಟಲಿರಂಗ—ಇಟಲಿಯವರು ಕರ್ಯಿನ್ ಸಿಜ್ಜಾ ಪೀಠಭೂಮಿಯಲ್ಲಿ ತಮ್ಮ ಸ್ಥಲವನ್ನು ಕಾಪಾಡಿಕೊಂಡು, ಆಸ್ಟ್ರಿಯನ್ನರು ಬಹಳ ಬಲವಾದ ಯುದ್ಧವನ್ನು ನಡೆಯಿಸಿದರೂ ಹಿಮ್ಮೆಟ್ಟದೆ ಶತ್ರುಗಳನ್ನೇ ಹೊಡೆದು ಸೋಲಿಸಿ ಹಿಮ್ಮೆಟ್ಟಿಸಿದ್ದಾರೆ.

ರುಮೇನಿಯಾರಂಗ—ರುಮೇನಿಯಾ ಸೈನ್ಯಗಳು ಈಗ ಬಲವಾಗಿನಿಂತು ಶತ್ರುಗಳನ್ನು ಮುಂದಕ್ಕೆ ನುಗ್ಗಿಬರದಂತೆ ತಡೆದಿರುತ್ತವೆ.

ಆಕಾಶಯಾನಗಳು—ರಣರಂಗದಲ್ಲಿ ವಿಮಾನಯುದ್ಧಗಳು ಅಖಂಡವಾಗಿ ನಡೆಯುತ್ತಿವೆ. ಮಿತ್ರಮಂಡಲಿ ವೈಮಾನಿಕರು ಆಗಾಗ್ಗೆ ಶತ್ರುಸೇನಾಶಿಬಿರ ಮೊದಲಾದುವುಗಳಮೇಲೆ ಹೋಗಿ ಟನ್ನುಗಟ್ಟಲೆ ಸಿಡಿಮದ್ದುಗಳನ್ನು ಹಾಕಿ ನಷ್ಟಪಡಿಸಿ ಬಂದಿರುತ್ತವೆ. ಶತ್ರುವೈಮಾನಿಕರು ಕಳೆದ ವಾರದಲ್ಲಿ ಒಂದುದಿನ ಲಂಡನ್ನಿನ ಮೇಲಕ್ಕೆ ಬಂದು ಸಿಡಿಮದ್ದುಗಳನ್ನು ಹಲವುಕಡೆ ಹಾಕಿದುವು. ಶತ್ರುವಿಮಾನಗಳಮೇಲೆ ಇಂಗ್ಲೀಷ್ ವಿಮಾನಗಳು ಹಲವುಕಡೆ ಯುದ್ಧವನ್ನು ನಡೆಯಿಸಿದುವು. ಶತ್ರುಗಳ ಸಿಡಿಮದ್ದಿನಿಂದ ವಿಶೇಷಾನರ್ಥವೇನೂ ಆಗಿಲ್ಲ. ೧೫ ಮಂದಿಗಳು ಸತ್ತರು ; ೭೦ ಮಂದಿಗಳಿಗೆ ಪೆಟ್ಟುಬಿದ್ದು ಗಾಯಗಳಾಗಿರುವುವು. ಶತ್ರುವಿಮಾನಗಳು ಬಂದವೆಂಬ ಸೂಚನೆಯ ಗುಂಡಿನ ಶಬ್ದವನ್ನು ಕೇಳಿದಕೂಡಲೇ ಪುರಜನರೆಲ್ಲಾ ಸಂರಕ್ಷಕ ಸ್ಥಲಗಳಿಗೆ ಹೋಗಿ ಸೇರಿಕೊಂಡುದರಿಂದ ಪ್ರಜಾನಾಶವು ವಿಶೇಷವಾಗಿ ಆಗಲು ಆಸ್ಪದವಿರಲಿಲ್ಲ.

ಭರತಖಂಡದ ವೃತ್ತಾಂತಗಳು.

ಕಳೆದ ತಾ|| ೨೨ ರಿಂದಲೂ ನ್ಯೂಇಂಡಿಯಾ ಪತ್ರಿಕೆಯ ಸಂಪಾದಕತ್ವವನ್ನು ಅನಿಬೆಸೆಂಟಮ್ಮನವರೇ ವಹಿಸಿ ನಡೆಯಿಸುತ್ತಿದ್ದಾರೆ. ಈ ವರ್ಷದ ಕಡೆಯವರೆಗೂ ಮ|| ತಿಲಾಂಗ್‌ರವರುಕೂಡ ಸಂಪಾದಕವರ್ಗದಲ್ಲಿ ಕೆಲಸಮಾಡುವರೆಂದು ಗೊತ್ತಾಗುತ್ತದೆ.

ಅನಿಬೆಸೆಂಟಮ್ಮನವರನ್ನೂ ಅವರ ಅನುಚರರಾದ ಅರುಂಡೇಲ್-ವಾಡಿಯಾರವರುಗಳನ್ನೂ ಅಲಹಾಬ್ ಪುರಪ್ರಮುಖರು ತಮ್ಮಲ್ಲಿಗೆ ಆಹ್ವಾನಿಸಿ ಸನ್ಮಾನಿಸುವುದಕ್ಕೆ ಅಗಾಧವಾದ ಏರ್ಪಾಟುಗಳನ್ನು ಮಾಡಿಕೊಂಡಿರುವರು. ಈ ಮೂವರೂ ಅಲ್ಲಿಗೆ ಅಕ್ಟೋಬರ್ ತಾ|| ೫ ಕ್ಕೆ ಹೋಗಿ ಸೇರುವರು.

ಅನಿಬೆಸೆಂಟಮ್ಮನವರು ಬೊಂಬಾಯಿ ಅಧಿಪತ್ಯಕ್ಕೆ ಬರಕೂಡದು, ಶಿವರಾಮ ಮಹಾದೇವ ಪರಾಂಜಪೆಯವರು ಉಪನ್ಯಾಸಗಳನ್ನು ಮಾಡಕೂಡದು ಎಂದು ಮೊದಲಾಗಿ ಬೊಂಬಾಯಿ ಗೌರ್ನಮೆಂಟಿನವರು ಕೆಲ ತಿಂಗಳ ಕೆಳಗೆ ಮಾಡಿದ್ದ ನಿರ್ಬಂಧಾಜ್ಞೆಗಳನ್ನೆಲ್ಲಾ ಈಗ ಅವರು ಉಪಸಂಹರಿಸಿಕೊಂಡಿರುತ್ತೇವೆಂದು ಪ್ರಕಟಿಸಿದ್ದಾರೆ.

ಅನಿಬೆಸೆಂಟಮ್ಮ ಮೊದಲಾದವರಂತೆಯೇ ನಿರ್ಬಂಧವಾಸಕ್ಕೊಳಪಟ್ಟಿರುವ ಮಿ|| ಮಹಮ್ಮದಾಲಿ, ಷೌಕತಾಲಿ ಮೊದಲಾದ ಕೆಲ ಮಂದಿ ಮಹಮ್ಮದೀಯ ಪ್ರಮುಖರನ್ನೂ ಕೂಡ ವಿಮೋಚನಗೊಳಿಸಿಕೊಡಬೇಕೆಂದು ಮುಖ್ಯ ಮುಖ್ಯ ನಗರಗಳ ಮಹಮ್ಮದೀಯ ಪ್ರಮುಖ ಜನರು ಸಭೆಯಮೂಲಕ ನಿರ್ಧಾರಮಾಡಿ ಇಂಡ್ಯಾ ಗೌರ್ನಮೆಂಟಿಗೆ ಬಿನ್ನೈಸಿಕೊಳ್ಳುತ್ತಿದ್ದಾರೆ. ಈ ಪ್ರಾರ್ಥನೆಯಲ್ಲಿ ಭಾರತೀಯಪ್ರಮುಖರೂ ಭಾಗಿಗಳಾಗಿದ್ದಾರೆ. ಆದರೆ ಇವರನ್ನು ಬಿಡಲಾಗುವುದೆಂದು ಸಾಮ್ರಾಜ್ಯ ಶಾಸನ ಸಭೆಯಲ್ಲಿ ಸರ್ಕಾರದವರು ಹೇಳಿರುತ್ತಾರೆ.

ವರ್ತಮಾನಸಂಗ್ರಹ.

ಈ ದಿನ ಅನಿಬೆಸೆಂಟಮ್ಮನವರು ತಮ್ಮ ಅನುಚರರೊಡನೆ ಬೊಂಬಾಯಿಗೆ ಸೇರುತ್ತಾರೆ. ಮರುದಿನ ಅವರ ವರ್ಧಂತಿಯ ದಿವಸವು. ಆಗ್ಗೆ ಜಾತೀಯ ಕಲಾಶಾಲಾ ಸ್ಥಾಪನೆಗಾಗಿ ಆಕೆಯವರ ವಶಕ್ಕೆ ೭ ಲಕ್ಷ ರೂ. ಗಳು ಬೊಂಬಾಯಿಯಲ್ಲಿ ಸಮರ್ಪಿಸಲ್ಪಡುವುದಕ್ಕೆ ಸಿದ್ಧವಾಗಿದೆಯೆಂದು ಪ್ರಕಟವಾಗಿದೆ.

ಇಂಗ್ಲೀಷರು ಸೆರೆಹಿಡಿದಿದ್ದ ಜರ್ಮನ್ ಉದ್ಯೋಗಿಗಳಲ್ಲಿ ಹಲವರು ತಲೆತಪ್ಪಿಸಿಕೊಂಡು ಹೋಗಿದ್ದಾರೆ. ಅವರಲ್ಲಿ ಎಮ್ಡೆನ್ ಹಡಗಿನ ಕ್ಯಾಪ್ಟನ್ನಾದ ಮ್ಯೂಲರ್‌ಕೂಡ ಒಬ್ಬನಾಗಿದ್ದನು. ಈತನ ಸಮೇತ ಒಂಭತ್ತು ಮಂದಿಗಳು ಕಳೆದವಾರ ಹಿಡಿಯಲ್ಪಟ್ಟರು. ತಾವು ಲಂಡನ್ ಪಟ್ಟಣದಲ್ಲಿ ಕೂಲಿ ಸಂಪಾದಿಸುವುದಕ್ಕೆ ಹೋಗುತ್ತಿದ್ದ ಕೆಲಸಗಾರರೆಂದು ಇವರು ಹೇಳಿಕೊಳ್ಳುತ್ತಿದ್ದರು. ಇವರಲ್ಲಿ ಲಂಡನ್ ಪೂರ್ವಸಮುದ್ರತೀರಕ್ಕೆ ಹೋಗುವ ಮಾರ್ಗಗಳ ಛಾಯಾಚಿತ್ರಗಳು ಗುರುತುಮಾಡಲ್ಪಟ್ಟುವು ಇದ್ದುವು. ಇವರಲ್ಲಿ ಮತ್ತೊಬ್ಬ ವೈಮಾನಿಕನಿರುವನು. ಅವನು ನಾಣ್ಯಾಕೃತ್ತಿ ಹೀಗೆಯೇ ತಲೆತಪ್ಪಿಸಿಕೊಂಡು ಹೋಗಿದ್ದವನು.

ಬೊಂಬಾಯಿಯ ಅಂಚೆಯಾಳುಗಳು ಬಹುಶಃ ೮೦೦ ಮಂದಿಗಳು ತಮಗೆ ಸಂಬಳವು ಸಾಲದೆಂದೂ, ಕೆಲಸವು ಹೆಚ್ಚೆಂದೂ, ಆಳುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದೂ, ರಾತ್ರಿಯವೇಳೆ ಪ್ರತಿಯೊಬ್ಬರಿಗೂ ಕೈಲಾಂದ್ರಗಳನ್ನು ಕೊಡಬೇಕೆಂದೂ ಮೊದಲಾಗಿ ಗೌರ್ನಮೆಂಟಿನವರಿಗೆ ಬಿನ್ನಯಿಸಿಕೊಂಡಿದ್ದಾರೆ. ಇದರಮೇಲೆ ಅವರ ಕೋರಿಕೆಗಳು ಇನ್ನೂ ಸಫಲವಾಗದಿರುವುದರಿಂದ ಅವರು ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟಿದ್ದಾರೆ. ಜಿಲ್ಲೆಗಳಿಂದ ಹೊಸ ಅಂಚೆಯಾಳುಗಳನ್ನು ಕರೆಯಿಸಿ ಸರ್ಕಾರದವರು ಕೆಲಸವನ್ನು ಸಾಗಿಸುತ್ತಿದ್ದರೂ ಅವರಿಗೆ ಅನುಭವವಿಲ್ಲದುದರಿಂದ ಸಮರ್ಪಕವಾಗಿ ನಡೆಯುವುದಿಲ್ಲ. ವ್ಯಾಪಾರಿಕರ ದೂರು ಬಹಳವಾಗಿದೆ. ಡೈರೆಕ್ಟರ್ ಜನರಲ್‌ರವರು ಹೇಳಿಕೆಗಳನ್ನೆಲ್ಲಾ ಕೇಳಿ ಮುಂದಣ ಯೋಚನೆಯನ್ನು ಮಾಡುತ್ತಲಿದ್ದಾರೆ.

ಪತ್ರವ್ಯವಹಾರ.

ಕೊಪ್ಪ ತಾ|| ಬರ್ಗುಂಟಿ ವಾಗಣೆ ಬೆಳುವಿನಕೊಡಿಗೆ ಗ್ರಾಮಸ್ಥರು ಮಲೆನಾಡಿನ ವಿಚಾರವಾಗಿ ವಿಜ್ಞಾಪಿಸಿಕೊಳ್ಳುವುದೇನೆಂದರೆ.—

ಕೊಪ್ಪ ತಾ|| ಬೆಳುವನಕೊಡಿಗೆ ಮುಂತಾದ ಗ್ರಾಮಗಳು ಬಹು ಹೀನಸ್ಥಿತಿಯಲ್ಲಿವೆ. ವಿದ್ಯೆಯಂತೂ ಇಲ್ಲ. ಆರೋಗ್ಯವೊಂದಾದರೂ ಇದ್ದರೆ ಜೀವಿಸಿಕೊಂಡಾದರೂ ಇರಬಹುದಾಗಿತ್ತು. ಈ ಪ್ರಾಂತಗಳಲ್ಲಿ ಒಂದಲ್ಲ ಒಂದು ವ್ಯಥೆಯು ಇದ್ದೇ ಇರುವುದು. ಇಲ್ಲಿನ ಜನಗಳಿಗೆ ಚಿಕಿತ್ಸೆ ದೊರಕುವ ಮಾರ್ಗವೇ ಇಲ್ಲ. ಖಾಯಿಲೆ ಬಂದೊಡನೆಯೇ ಶೃಂಗೇರಿಗೆ ಅಥವಾ ಕೊಪ್ಪ ಕೊಳ್ಳೆಗಾಲ್ ಆಸ್ಪತ್ರೆಗೆ ಹೋಗಬೇಕು. ೬-೭ ಮೈಲಿ ದೂರ ಹೋಗಿ ಕ್ರಮವಾಗಿ ಕಾಲಕಾಲಕ್ಕೆ ಔಷಧ ತಂದು ಸೇವಿಸುವ ಪ್ರಯಾಸವನ್ನು ಎಷ್ಟು ಹೇಳಿದರೂ ತೀರದುದಾಗಿದೆ. ನಮ್ಮ ಜನಗಳಿಗಂತೂ ಮೂಲಿಕೆಗಳ ಔಷಧಗಳಲ್ಲಿಯೇ ನಂಬಿಕೆ ಹೆಚ್ಚು. ಈ ಔಷಧಗಳನ್ನಾದರೂ ಶೃಂಗೇರಿ ಆಯುರ್ವೇದಶಾಲೆಯಿಂದ ಹೊಂದಬೇಕು. ಹಿಂದೂ ಔಷಧದ ನಂಬಿಕೆ ನಮಗಿರುವುದರಿಂದ ಅದು ದೊರೆಯುವಂತೆ ನಮಗೆ ಆಗಬೇಕು. ಈ ಔಷಧಗಳಿಗಾದರೂ ಆಸ್ಪತ್ರೆಯಷ್ಟು ಖರ್ಚು ವೆಚ್ಚಗಳು ತಗಲುವದಿಲ್ಲ. ನಮ್ಮ ಗ್ರಾಮದವರೊಬ್ಬರು ಈ ಆಯುರ್ವೇದವನ್ನು ಕಲಿಯುವಂತಾದರೆ ನಮ್ಮಗಳಿಗೆಲ್ಲಾ ಕ್ಷೇಮವಾದೀತು. ಪ್ರಕೃತ ಶೃಂಗೇರಿಯಲ್ಲಿ ಆಯುರ್ಭಿಷಕ್ಶಾಸ್ತ್ರದ ವೇ|| ಶೇಷಶಾಸ್ತ್ರಿಗಳವರು ಪೂನಾ ಕಲ್ಕತ್ತಾ ಅಲಹಾಬಾದ್ ಮುಂತಾದ ಸ್ಥಳಗಳಲ್ಲಿರುವ ಜಗತ್ಪ್ರಸಿದ್ಧರಾದ ಆಲ್ ಇಂಡಿಯಾ ಆಯುರ್ವೇದ ವಿದ್ಯಾಪಂಡಿತರಿಂದ ಯೋಗ್ಯತಾಪತ್ರಿಕೆಗಳನ್ನು ಹೊಂದಿ ನಮ್ಮ ದೇಶಹಿತಕ್ಕಾಗಿ ಪರಿಶ್ರಮಪಡುತ್ತಿರುವರು. ಮಲನಾಡು ಪ್ರಾಂತದಲ್ಲಿ ಇವರಿಂದ ಒಂದು ಆಯುರ್ವೇದ ಶಾಲೆಯು ನಡೆಸಲ್ಪಡುವಂತೆ ನಮ್ಮ ಘನಹೊಂದಿದ ಸರ್ಕಾರದವರು ಮಾಡಿಸಿದರು. ನಮ್ಮ ಗ್ರಾಮಗಳಲ್ಲಿ ಒಬ್ಬಿಬ್ಬರು ವಿದ್ಯಾರ್ಥಿಗಳು ಓದಿ ನಮ್ಮ ಗ್ರಾಮಗಳಲ್ಲಿರುವ ವ್ಯಾಧಿಗ್ರಸ್ತರಿಗೆ ಅನುಕೂಲಪಡಿಸಬಹುದು. ಘನಹೊಂದಿದ ಸರ್ಕಾರದವರು ಪ್ರಕೃತ ನಮ್ಮಗಳಿಗೆ ಇವರ ಆಯುರ್ವೇದ ಔಷಧಗಳು ದೊರೆಯುವಂತೆ ಮಾಡಿಸಿಕೊಟ್ಟರೆ ತಾತ್ಕಾಲಿಕವಾಗಿ ಅನುಕೂಲವಾಗಬಹುದು. ಈ ವಿಚಾರವನ್ನು ಸರ್ಕಾರದವರು ಗಮನಕ್ಕೆ ತಂದು ನಡೆಯಿಸಿ ನಮ್ಮಗಳನ್ನು ಕಾಪಾಡುವರಾಗಿ ನಂಬಿದ್ದೇವೆ. ಇಂತೀ ವಿಜ್ಞಾಪನೆಗಳು. ಮಂಜಪ್ಪಾ ಹುಣ್ಸೆಕೊಪ್ಪಾ

ವೊದಲಾದ ೧೫ ಮಂದಿಗಳ ಹಸ್ತಾಕ್ಷರವಿದೆ.

ಪ್ರತ್ಯಕ್ಷವಾದ ಸ್ವಂತ ಅನುಭವವು.

ನಮ್ಮ ದೇಶದಲ್ಲಿ ಬಡವರು ಏಳಿಗೆಗೆ ಬರಲು ಕೈಗಾರಿಕೆಯೊಂದಲ್ಲದೆ ಬೇರೊಂದು ಮಾರ್ಗವೇ ಕಾಣುವುದಿಲ್ಲವು. ದೇಶಸೇವಕರನೇಕರು ಇಲ್ಲಿಂದ ಪರದೇಶಗಳಿಗೆ ಹೋಗಿ ಅಲ್ಲಿ ಅನೋಘವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಬರುವುದಲ್ಲಿದ್ದಾರೆ. ಆದರೆ ಈಗಾಗಲೆ ಹೋಗಿ ಬಂದವರಲ್ಲಿ ಬಹುಜನರು ತಾವು ನೋಡಿ ಬಂದ ಮತ್ತು ಪುಸ್ತಕಗಳಲ್ಲಿ ಓದಿದ ದೊಡ್ಡ ದೊಡ್ಡ ಯಂತ್ರಗಳ ವಿಷಯವಾಗಿ ಪ್ರಸ್ತಾಪ ಮಾಡುವುದರಲ್ಲಿ ಬಹು ಕುತೂಹಲವುಳ್ಳವರಾಗಿದ್ದಾರೆ. ಒಂದು ವಿಧದಲ್ಲಿ ಹೀಗೆ ಮಾಡುತ್ತಿರುವುದೂ ಕೂಡ ಪ್ರಯೋಜನವೆಂದು ಕಂಡುಬಂದರೂ, ಬಡವರಿಗೆ ಇದರಿಂದ ಏನೂ ಉಪಯೋಗವಿಲ್ಲ. ಹಣಗಾರರಿಗೂ ಕೂಡ ಇದು ಪ್ರಾರಂಭದಲ್ಲಿ ಸುಲಭಸಾಧ್ಯವಾದ ಕೆಲಸವಲ್ಲ. ಆದರೂ ಇದಕ್ಕೊಂದಕ್ಕೂ ಗಮನಕೊಡದೆ ಭಾರಿ ಭಾರಿಯಾದ ಕೆಲಸಗಳನ್ನು ಕೈಕೊಂಡು, ಅತಿ ಜಾಗ್ರತೆಯಾಗಿ ಹಣವನ್ನು ಅರ್ಜಿಸಬೇಕೆಂದು ಇಷ್ಟಪಡುವವರ ಮನೋಗತವು ತಳಹದಿಯಿಲ್ಲದೆ ಮನೆಯನ್ನು ಕಟ್ಟುವಂತೆಯೂ, ಬೆಟ್ಟದ ಬುಡದಿಂದ ಮೇಲಕ್ಕೆ ಒಂದೇಸಾರಿಗೆ ಹಾರಬೇಕೆನ್ನುವಂತೆಯೂ ನಿರರ್ಥಕವಾಗುತ್ತದೆ.

ಕೇವಲ ಬಡವರಿಂದಲೇ ನಿಬಿಡೀಕೃತವಾದ ನಮ್ಮ ಸೀಮೆಯು ಉನ್ನತಪದವಿಯನ್ನೈದಬೇಕಾದರೆ ಸುಲಭಸಾಧ್ಯವಾದ ಕೈಗಾರಿಕೆಗಳಿಂದ ವೊದಲು ನಾವು ಆರಂಭಿಸಬೇಕು. ಜಪಾನ್ ದೇಶದಲ್ಲಿ ಈ ವಿಧವಾದ ಅಭ್ಯಾಸವು ಬಹು ಆಚರಣೆಯಲ್ಲಿದೆ. ಸೀಮೆಯಿಂದ ಬರತಕ್ಕ ಅನೇಕ ವಸ್ತುಗಳನ್ನು ನೋಡಿ, ನಮ್ಮ ಸಹೋದರರನೇಕರು ಯಂತ್ರಗಳ ಸಹಾಯವಿಲ್ಲದೆ, ಸೀಸದ ಕಡ್ಡಿ, ಪೆಪ್ಪರಮೆಂಟು, ಗುಂಡಿಗಳು, ಮೊಳೆಗಳು, ಅರ, ಸೂಜಿ ಮೊದಲಾದುವುಗಳನ್ನು ಖಂಡಿತವಾಗಿಯೂ ಮಾಡುವುದಕ್ಕಾಗುವುದಿಲ್ಲವೆಂದು ಅಭಿಪ್ರಾಯಪಡಬಹುದು. ಆದರೆ ಇದು ಎಂದಿಗೂ ನಿಜವಾದ ಊಹೆಯಲ್ಲ.

ಜಪಾನ್ ಮುಂತಾದ ದೇಶದವರು ಇದ್ದಕ್ಕಿದ್ದಹಾಗೆಯೇ ಈಗಿನ ಸ್ಥಿತಿಗೆ ಬರಲಿಲ್ಲ. ಅಕ್ಷರಾಭ್ಯಾಸ ಪ್ರಾರಂಭಿಸಿ ದಿನಂಪ್ರತಿಯಲ್ಲಿ ಪಂಡಿತನಾಗುವ ಬಾಲಕನಂತೆ, ಸಣ್ಣ ಕೆಲಸಗಳನ್ನು ಮಾಡುತ್ತಾ ಬಂದು ಈಗ ಕೈಗಾರಿಕೆಯಲ್ಲಿ ಎಲ್ಲರನ್ನು ಮೀರಿಸಲು ಸಮರ್ಥರಾಗಿದ್ದಾರೆ. ಮುಖ್ಯವಾಗಿ ಜಪಾನಿನಲ್ಲಿ ಯಥೇಚ್ಛವಾಗಿ ಯಂತ್ರಗಳು ಸಿಕ್ಕುವಹಾಗಿದ್ದರೂ ಅಲ್ಲಿನವರನೇಕರು ಕೈಕೆಲಸಗಳಲ್ಲಿಯೇ ನಿರತರಾಗಿ ಎಷ್ಟೋ ಆದಾಯವನ್ನು ಹೊಂದುತ್ತಲಿದ್ದಾರೆ. ಇವರು ಮರದ ತುಂಡುಗಳಿಂದ ತೆಳುವಾದ ಪರೆಗಳನ್ನು ಕೆಗೆದು ಮರದ ಕಾಗದ (ಉಡ್‌ಪೇಪರ್) ಗಳಾಗಿ ಮಾಡಿ, ಅದರಿಂದ ಬೆಂಕಿಪೆಟ್ಟಿಗೆ, ಸೀಸದಕಡ್ಡಿ, ಬೆಂಕಿಕಡ್ಡಿಗಳು, ಪೆಟ್ಟಿಗೆಗಳು (ಪ್ಯಾಕಿಂಗ್‌ಬಾಕ್ಸ್) ವೊದಲಾದುವನ್ನು ಕೈಯಿಂದಲೇ ಮಾಡುತ್ತಾರೆ. ಕಾಗದದಿಂದ ಹೊಂದಬಹುದಾದ ಪ್ರತಿಯೊಂದು ಪ್ರಯೋಜನವನ್ನೂ ಈ ಕಾಗದದಿಂದಲೇ ಹೊಂದಬಹುದು. ಬರೆಯುವುದಕ್ಕೂ ಕೂಡ ಈ ಕಾಗದವು ಉಪಯೋಗಕ್ಕೆ ಬರುತ್ತದೆ.

ಈ ರೀತಿಯಾದ ಕೆಲಸಗಳೆಲ್ಲವೂ ವೊದಲಿನಲ್ಲಿ ಕಷ್ಟವೆಂದು ತೋರಿದರೂ, ಪ್ರಯತ್ನಪಟ್ಟು ಆಸಕ್ತಿಯಿಂದ ಮಾಡಿದರೆ ಸುಲಭಸಾಧ್ಯವೂ, ಹೆಚ್ಚು ಆದಾಯಕರಗಳಾಗಿಯೂ ಇವೆ. ಜಪಾನ್ ದೇಶದ ಸಣ್ಣ ಸಂದುಗಳಲ್ಲಿಯೂ ಈ ವಿಧವಾದ ಕೆಲಸಗಳು ಅಸಂಖ್ಯಾತವಾಗಿ ಆಚರಣೆಯಲ್ಲಿರೋಣದರಿಂದ, ನಮ್ಮ ದೇಶೀಯರೂ ಅವರಂತೆಯೇ ಕೈಕೆಲಸಗಳನ್ನು ವೊದಲು ಅಭ್ಯಾಸಕ್ಕೆ ತರುವುದು ಒಳ್ಳೆಯದು. ಅವರಲ್ಲಿ ಸಾಕಾದಷ್ಟು ಅನುಭವವನ್ನು ಪಡೆದಮೇಲೆ, ಯಂತ್ರಗಳ ಸಹಾಯವನ್ನು ಅಪೇಕ್ಷಿಸಿದರೆ ಅವರ ಮನೋರಥವು ಎಂದಿಗೂ ಭಗ್ನವಾಗುವುದಿಲ್ಲ.

ಈ ವಿಧವಾದ ಅಭಿಪ್ರಾಯವನ್ನು ನೋಡಿ ಕೆಲವರಿಗೆ ಇದರಲ್ಲಿ ಸಂಶಯವಾಗಬಹುದು. ಇದರ ಪರಿಹಾರಕ್ಕೆ ಮುಂದಿನ ವಾರದಲ್ಲಿ ಕೆಲವು ಕೈಗೆಲಸಗಳ ಉಪಯೋಗವನ್ನು ಚೆನ್ನಾಗಿ ಪ್ರಸ್ತಾಪಿಸುವೆವು.

ಟಿ.ಸಿ. ಅನ್ನದಾನಪ್ಪ.

ವೀರಶೈವ ಮುಂದಾಳುಗಳಿಗೆ ವಿಜ್ಞಾಪನೆ.

ಭರತಖಂಡದಲ್ಲುಂಟಾಗಿರುವ ನೂತನ ಚೈತನ್ಯದಿಂದ ಪ್ರತಿಯೊಂದು ಸಮಾಜದವರೂ ತಮ್ಮ ತಮ್ಮ ಉನ್ನತಿಯ ಕಾರ್ಯಗಳನ್ನು ಪ್ರಕೃತ ಸಾಹಸದಿಂದಲೂ ಉತ್ಸಾಹದಿಂದಲೂ ಮಾಡುತ್ತಿರುವರಷ್ಟೆ? ಸ್ವಾತಂತ್ರ್ಯ ಸಂಪಾದನೆಯ ಈ ಕಾಲದಲ್ಲಿ ಯಾರು ಮುಂದೆ ಬಂದು ನ್ಯಾಯವಾದ ರೀತಿಯಲ್ಲಿ ದೃಢಪ್ರಯತ್ನವನ್ನು ಮಾಡುತ್ತಾರೆಯೋ ಅವರ ಉದ್ದೇಶವೇ ಸಾಧಿಸುವುದು. ಈ ಕಾಲದಲ್ಲಿ ಹಿಂದುಳಿಯುವವರು ಮುಂದೆ ಬಹುಕಾಲದವರೆಗೂ ಹಿಂದೆ ಇರಬೇಕಾಗುವುದು ಖಂಡಿತ. ಈಸುಸಮಯವನ್ನು ಕಳೆದುಕೊಳ್ಳುವವರು ಮುಂದೆ ಎಷ್ಟೋ ಕಾಲದವರೆಗೆ ತಮ್ಮ "ಹಕ್ಕು" ಗಳನ್ನು ಸಂಪಾದಿಸಿಕೊಳ್ಳದೆ ನರಳಬೇಕಾಗುವುದು ನಿಶ್ಚಯ. ಈ ಪವಿತ್ರಕಾಲದಲ್ಲಿ ಕಾರ್ಯತತ್ಪರರಾಗದವರು ತಮ್ಮ ಸಮಾಜದ ಯೋಗ್ಯತೆಯನ್ನು ಕಳೆದುಕೊಳ್ಳುವದೇ ನಿಜ. ಆದುದರಿಂದ ಯಾವುದು ನಮ್ಮ ಸಮಾಜದ ಸುಧಾರಣೆಗೆ ಪ್ರಬಲವಾದ ಸಾಧನವಾಗಿದ್ದಿತೋ ಯಾವುದು ನಮ್ಮ ಸಮಾಜದ ಯೋಗ್ಯತೆಯನ್ನು ವೃದ್ಧಿಗೊಳಿಸಲು ತುಂಬಾ ಸಹಕಾರಿಯಾಗಿದ್ದಿತೋ, ಯಾವುದು ನಮ್ಮ "ಹಕ್ಕು" ಗಳನ್ನು ಸಂಪಾದಿಸಿಕೊಳ್ಳಲು ಸಹಾಯಮಾಡುತ್ತಿದ್ದಿತೊ ಮತ್ತು ಯಾವುದು ನಮ್ಮಲ್ಲಿ ಘನತರವಾದ ಏಕಮತ್ಯವನ್ನುಂಟುಮಾಡಿ ಸಮಾಜದ ಸಾಮರ್ಥ್ಯವನ್ನು ಹೆಚ್ಚಿಸುತ್ತಿದ್ದಿತೋ ಅಂತಹ ವೀರಶೈವ ಮಹಾಸಭೆಯು ಈ ಸುವರ್ಣದಂತಹ ಸಮಯದಲ್ಲಿಲ್ಲವಲ್ಲಾ! "ಎಣ್ಣೆ ಬರುವಾಗ ಗಾಣ ಮುರಿಯಿತೆಂಬಂತೆ" ಈ ಕಾಲದಲ್ಲಿಯೇ ಮಹಾಸಭೆಯು ಅಸ್ತವಾಗಿರುವುದಲ್ಲಾ!! ಎಂದು ಸಮಾಜಹಿತ ಚಿಂತಕರು ಅತ್ಯಂತ ವಿಷಾದವನ್ನು ಹೊಂದದಿರಲಾರರು.

ಈ ಮಹಾಸಭೆಯ ಕಥೆಯಾದರೋ ದುಃಖಮಯವಾಗಿದೆ. ಇದು ಪ್ರತಿವರ್ಷದಲ್ಲಿಯೂ ಸೇರುತ್ತಬಂದಿದ್ದರೆ ಈ ವರ್ಷ ೧೪ ನೆಯ ಮಹಾಸಭೆಯು ಸೇರಬೇಕಾಗಿದ್ದಿತು. ಆದರೆ ಈವರೆಗೆ ಏಳಾವರ್ತಿ ಮಾತ್ರ ಈ ಸಭೆಯು ಕೂಡಿದೆ. ಅದೂರದರ್ಶಿಗಳೂ, ಕಾಲಸ್ಥಿತಿಯನ್ನರಿಯದವರೂ ಮತ್ತು ಸುಧಾರಣೆಯ ರೀತಿಯನ್ನು ತಿಳಿಯದವರೂ ಆದ ಕೆಲವು ಜನಗಳು ಮಹಾಸಭೆಯಿಂದೇನು ಪ್ರಯೋಜನವೆಂದು ಆಡಿಕೊಳ್ಳುತ್ತಿರುವುದನ್ನು ನೋಡಿ ನಮ್ಮ ಸಮಾಜದ ಮುಖಂಡರು ಈ ರೀತಿಯಾಗಿ ಉದಾಸೀನ ಮಾಡಿರಬಹುದೇ? ಹಾಗೆ ಯೋಚಿಸಲಿಕ್ಕಾಗುವುದಿಲ್ಲ. ಏಕೆಂದರೆ ನಮ್ಮ ಸಮಾಜದ ಸುಪ್ರಸಿದ್ಧ ಮುಂದಾಳುಗಳಾಗಿದ್ದ ಕೈ|| ರಾ|| ಬ|| ವಾರದ ಮಲ್ಲಪ್ಪನವರು ಐದನೆಯ ಮಹಾಸಭೆಯ ಅಧ್ಯಕ್ಷರಾದಾಗ "ಈ ಮಹಾಸಭೆಯೇ ನಮ್ಮ ಸಮಾಜ ಮುಖವಾಗಿದೆಯೆಂತಲೂ, ಈ ಮಹಾಸಭೆಯೇ ನಮ್ಮ ಸಮಾಜಕ್ಕೆ ಮಾರ್ಗವನ್ನು ತೋರಿಸತಕ್ಕುದಾಗಿದೆಯೆಂತಲೂ" ಹೇಳಿರುವುದನ್ನು ನಮ್ಮ ಸಮಾಜದ ಮುಖಂಡರು ಮರೆತಿರಲಿಕ್ಕಿಲ್ಲ. ಇದೂ ಅಲ್ಲದೆ ಸಭೆಯ ಮೂಲಕವಾಗಿಯೇ ಕೇವಲ ನಮ್ಮ ದೇಶದಲ್ಲೇ ಅಲ್ಲ; ಪ್ರಪಂಚದಲ್ಲೆಲ್ಲಾ ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕಾದಿ ವಿಷಯಗಳನ್ನು ಅಭಿವೃದ್ಧಿಗೆ ತರುತ್ತಿದ್ದಾರೆ. ಇಂತಹ ಲೋಕಮಾನ್ಯವಾದ ಪದ್ಧತಿಯು ಅಪ್ರಯೋಜನವಾದುದೆಂದು ತಿಳುವಳಿಕೆಯಿಲ್ಲದ ಕೆಲವು ಜನಗಳು ಆಡುತ್ತಿರುವುದನ್ನು ನಮ್ಮ ಸಮಾಜದ ಮುಖಂಡರು ಒಪ್ಪುತ್ತಾರೆಂಬುದನ್ನು ಸ್ವಪ್ನದಲ್ಲಿ ಕೂಡ ನಂಬಲಿಕ್ಕಾಗುವುದಿಲ್ಲ. ಹಾಗಾದರೆ ಮಹಾಸಭೆಯಿಂದ ಪ್ರಕೃತ ನಾವು ಮಾಡಿಕೊಳ್ಳಬೇಕಾಗಿರುವ ಪ್ರಯೋಜನಗಳಾವುವೂ ಇಲ್ಲವೆಂದು ನಮ್ಮ ಸಮಾಜದ ಮುಖಂಡರು ಈ ಪ್ರಕಾರ ಉಪೇಕ್ಷೆಮಾಡಿರಬಹುದೆ? ಅದೂ ಸರಿತೋರುವುದಿಲ್ಲ. ಏಕೆಂದರೆ:—ನಮ್ಮ ಸಮಾಜದ ಸುಪ್ರಸಿದ್ಧ ದಾನಶೂರರಾದ ಕೈ|| ಶ್ರೀಮಂತ ಲಿಂಗಪ್ಪ ಜಯಪ್ಪ ಸರ್ ದೇಸಾಯಿಗಳು ಧಾರವಾಡದ ವೊದಲನೆಯ ಸಭೆಗೆ ಅಧ್ಯಕ್ಷರಾಗಿ ಈ ಸಭೆಯ ಉದ್ದೇಶವನ್ನು ಕುರಿತು ಹೇಳಿರುವದೇನಂದರೆ "ನಮ್ಮ ಧಾರ್ಮಿಕ ಸಾಮಾಜಿಕ ಮತ್ತು ಔದ್ಯೋಗಿಕಾದಿ ವಿಷಯಗಳ ಉನ್ನತಿಯನ್ನು ಸಾಧಿಸುವುದೇ ಈ ಮಹಾಸಭೆಯ ಉದ್ದೇಶವಾಗಿದೆ" ನಮ್ಮ ಸಮಾಜವು ಈ ವಿಷಯಗಳಲ್ಲಿ ಅಭಿವೃದ್ಧಿಯನ್ನು ಹೊಂದಿರುವುದೆಂದು ಯಾರಿಗೆತಾನೇ ತೋರುವುದು? ಹಾಗಾದರೆ ಮಹಾಸಭೆಯು ನಿಂತಕಾರಣವು ವ್ಯಕ್ತವಾಗಲಿಲ್ಲವಷ್ಟೆ? ಇದರ ನಿಜವಾದ ಕಾರಣವನ್ನು ಸ್ಪಷ್ಟವಾಗಿ ಹೇಳಬೇಕಾದರೆ, ಸ್ಟ್ಯಾಂಡಿಂಗ್ ಕಮಿಟಿಯವರ ಅಶ್ರದ್ಧೆ, ಮತ್ತು ಸಮಾಜದ ಮುಖಂಡರ ಉತ್ಸಾಹಭಂಗ ಈ ಜನಗಳೇ ಪುನಃ ಪ್ರಯತ್ನಿಸದ ವಿನಾ ಈ ಮಹತ್ಕಾರ್ಯವು ಆಗುವುದಿಲ್ಲ.

ನಮ್ಮ ಸಮಾಜದ ಮುಂದಾಳುಗಳಮೇಲೆ ಈ ಕಾಲದಲ್ಲಂತೂ ಹೆಚ್ಚಿನ "ಜವಾಬ್ದಾರಿ" ಇದೆಯೆಂಬುದನ್ನು ಹೇಳಬೇಕಾದುದೇ ಇಲ್ಲ. ಈ ದೇಶದಲ್ಲುಂಟಾಗಿರುವ ಪ್ರಕೃತದ ಉತ್ಸಾಹವು ನಮ್ಮ ಸಮಾಜದ ಸುಶಿಕ್ಷಿತ ತರುಣರಲ್ಲಿಯೂ ಪ್ರವೇಶಿಸದೆ ಬಿಡುವುದಿಲ್ಲ. ಅವರ ಉತ್ಸಾಹಕ್ಕೆ ಸರಿಯಾದ ಒಂದು ಸಂಸ್ಥೆಯು ಸಮಾಜದಲ್ಲಿರದಿದ್ದರೆ ಅದು ದುರುಪಯೋಗವಾಗುವ ಸಂಭವವಿದೆ. ಹಾಗಾದರೆ ಸಮಾಜಕ್ಕೆ ಮಹತ್ತರವಾದ ನಷ್ಟವೆಂದೇ ತಿಳಿಯತಕ್ಕದ್ದು. ಆದುದರಿಂದ ಮಹಾಸಭೆಯೆಂಬ ಪವಿತ್ರಸಂಸ್ಥೆಯನ್ನು ಜೀರ್ಣೋದ್ಧಾರಮಾಡುವುದು ಮುಂದಾಳುಗಳ ಮುಖ್ಯ ಕರ್ತವ್ಯವಾಗಿದೆ. ಸಮಾಜದ ಪವಿತ್ರವಾದ ಈ "ಜವಾಬ್ದಾರಿ" ಯನ್ನು ಈ ಕಾಲದಲ್ಲಿ ನಮ್ಮ ಮುಂದಾಳುಗಳು ಮರೆತಿದ್ದರೆ ಮುಂದಣವರ ದೂಷಣೆಗೆ ಪಾತ್ರರಾಗಬೇಕಾಗುವುದು. ಅಂತಹ ವಿಷಾದಕರವಾದ ಪ್ರಸಂಗವು ಬರದಿರಲಿ! ಮತ್ತು ನಮ್ಮ ಮುಂದಾಳುಗಳಿಂದ ಸಮಾಜಕ್ಕೆ ಮಹದುಪಕಾರಗಳುಂಟಾಗಲಿ! ಎಂಬ ಸದುದ್ದೇಶದಿಂದ ವಿಜ್ಞಾಪಿಸಿಕೊಳ್ಳುವುದೇನೆಂದರೆ—

ಮಹಾಸಭೆಯನ್ನು ಸ್ಥಾಪಿಸಿದ್ದಕ್ಕಿಂತಲೂ ಈ ಕಾಲದಲ್ಲಿ ಅದನ್ನು ಜೀರ್ಣೋದ್ಧಾರಮಾಡುವುದು ಅತ್ಯಂತ ಶ್ರೇಷ್ಠವಾಗಿಯೂ, ಕಠಿಣವಾಗಿಯೂ ಇದೆ. ಮಹಾಸಭೆಯನ್ನು ಸೇರಿಸಬೇಕಾದ ಕಾಲವಾದರೋ, ಇನ್ನು ಮೂರು ತಿಂಗಳು ಮಾತ್ರ ಇದೆ. ಈ ವರ್ಷ ಮಹಾಸಭೆಯನ್ನು ಕೂಡಿಸಲೇಬೇಕಾದ ಅತ್ಯಾವಶ್ಯಕತೆ, ಮತ್ತು ಪ್ರಾಮುಖ್ಯತೆಗಳನ್ನು ಭರತಖಂಡದ ಪ್ರಕೃತ ಸ್ಥಿತಿಯನ್ನರಿತ ಸುಜ್ಞವಾಚಕರಿಗೆ ವಿವರಿಸಿ ಹೇಳಬೇಕಾದುದೇ ಇಲ್ಲ. ಆದುದರಿಂದ ಸಮಾಜದ ಶ್ರೇಯೋಭಿವೃದ್ಧಿಗಾಗಿಯೇ ಪ್ರಯತ್ನಿಸುತ್ತಿರುವ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರು, ಶ್ರೀಮನ್ನಿರಂಜನ ಹಾನಗಲ್ಲ ಕುಮಾರಸ್ವಾಮಿಗಳವರು, ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ., ರಾವ್ ಬಹದ್ದೂರ್ ಅರ್ಟಾಳ್ ರುದ್ರಗೌಡರು ಐ. ಎಸ್. ಓ, ಮತ್ತು ಮೇಹುಸಿನಕಾಯಿ ಶಾಂತವೀರಪ್ಪನವರೇ ವೊದಲಾದವರು ಉದಾರಬುದ್ಧಿಯಿಂದ ವೀರಶೈವ ಸಮಾಜದಕಡೆಗೆ ನೋಡಿ ಅದರ ಶ್ರೇಯೋಭಿವೃದ್ಧಿಗಾಗಿ ಮಹಾಸಭೆಯನ್ನು ಕೂಡಿಸಲು ಪ್ರಯತ್ನಿಸೋಣವಾಗಬೇಕು. ಮತ್ತು ನಮ್ಮ ಸಮಾಜದ ಪತ್ರಿಕಾಕರ್ತರು, ಲೇಖಕರು ಈ ಕಾಲದಲ್ಲಿ ಮಹಾಸಭೆಯನ್ನು ಸೇರಿಸಬೇಕಾದ ವಿಷಯದಲ್ಲಿ ಲೇಖನಗಳನ್ನು ಬರೆದು ಜನರಲ್ಲಿ ಚಟುವಟಿಕೆಯನ್ನುಂಟುಮಾಡಬೇಕು. ಸಮಾಜದ ಈ ಪವಿತ್ರಕಾರ್ಯವನ್ನು ಎಲ್ಲರೂ ಸಾಧಿಸಬೇಕೆಂದು ಪುನಃ ಪುನಃ ಪ್ರಾರ್ಥಿಸಿ ಈ ಲೇಖನವನ್ನು ಮುಗಿಸಿದೆ.

ಎಸ್.

ಸಂಸ್ಕೃತ ಶಾಲಾರಂಭವು.

ಶ್ರೀಮನ್ ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಸ್ವಾಮಿಗಳವರ ಶಾಖಾಮಠವಾದ ಹಾವೇರಿಯಲ್ಲಿರುವ ಹೊಸಮಠದಲ್ಲಿ ಸದರಿ ಜಗದ್ಗುರುಗಳವರ ಅಪ್ಪಣೆಯಮೇರೆ ಸಂಸ್ಕೃತಪಾಠಶಾಲೆಯು ತಾ|| ೩೦—೭—೧೯೧೭ ನೆಯ ಸೋಮವಾರ ದಿವಸ ಪ್ರಾರಂಭಿಸಲ್ಪಟ್ಟಿತು. ವೇ|| ವಂಟಮುರಿ ಚನ್ನಬಸವಶಾಸ್ತ್ರಿಗಳೇ ಅಧ್ಯಾಪಕರಾಗಿದ್ದಾರೆ. ಸಾಹಿತ್ಯ ಓದಪೇಕ್ಷೆಯುಳ್ಳ ವೀರಮಾಹೇಶ್ವರ ವಿದ್ಯಾರ್ಥಿಗಳು ಕೂಡಲೇ ಬರಬೇಕು. ವಿದ್ಯಾರ್ಥಿಗಳು ಭರ್ತಿಯಾದಮೇಲೆ ಪಾಠಶಾಲೆಯಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ.

ಸೆಕ್ರೆಟರಿ.
ಗೋಲಪ್ಪ ಹಳಕೊಪ್ಪದ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲಿಗರಿಗೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರ ಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವೇದ,ಶಾಸ್ತ್ರ ಮತ್ತು ಚರಿತ್ರೆಗಳ ಆಧಾರದಿಂದ "ಕುರುಬರಜಾತಿ" ನಡಾವಳಿ, ಆಚಾರಗಳ, ಇವರಲ್ಲಿ ರಾಜ್ಯಧರ್ಮ ಸ್ಥಾಪಕರಾದ ಪೂರ್ವೀಕರ ಸಂಗತಿಗಳ ೧೯೨ ಪುಟದ ದೊಡ್ಡ ಪುಸ್ತಕ ಅಚ್ಚಾಗುತ್ತಲಿದೆ. ಈ ನವರಾತ್ರಿಯೊಳಗಾಗಿ ಬರುವ ಆರ್ಡರುಗಳಿಗೆ ಮಾತ್ರ ೧೨ ಆಣೆ! (ಹಾಸಲು ಬೇರೆ) ಮುಂದೆ ಹೆಚ್ಚಾಗುವದು.

2 ವಿಳಾಸ—ಎಂ. ಎನ್. ಲಿಂಗಪ್ಪ ಎಡಿಟರ್,
ಬೆಂಗಳೂರು ಸಿಟಿ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ವಾಪಸ. 5

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೭ ನೆಯ ಇಸವಿ ಸೆಪ್ಟಂಬರ್ ತಾ|| ೩೦ ರಿಂದ ೧೯೧೭ ನೆಯ ಅಕ್ಟೋಬರ್ ತಾ|| ೬ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ನಿಜಭಾದ್ರಪದ ಶು|| ಪೌರ್ಣಿಮೆಯಿಂದ ನಿಜಭಾದ್ರಪದ ಬ|| ಷಷ್ಠಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತೇದಿ
30	[1] ಭಾನು	ಪೌರ್ಣ	50-5	ಪೂಭಾ	4-45	15
1	ಸೋಮ	ಪಾಡ್ಯ	44-36	ಉಭಾ	0-51	16
2	ಮಂಗಳ	ಬಿದಿಗೆ	39-20	ಅಶ್ವಿನಿ	54-10	17
3	[2] ಬುಧ	ತದಿಗೆ	35-37	ಭರಣಿ	52-0	18
4	ಗುರು	ಚೌತಿ	32-28	ಕೃತ್ತಿ	50-50	19
5	ಶುಕ್ರ	ಪಂಚ	30-24	ರೋಹಿಣಿ	50-50	20
6	[3] ಶನಿ	ಷಷ್ಠಿ	29-32	ಮೃಗಶಿರ	52-2	21

(1) ಉಮಾಮಹೇಶ್ವರವ್ರತಂ. (2) ಬೃಹದ್ಗೌರೀವ್ರತಂ, ಮಹಾಭರಣಿ ದಗ್ಧಯೋಗ. (3) ಪೆರಟಾಶಿ ಶನಿವಾರಂ ಚಲುವಾಜಮ್ಮಣ್ಣಿಯವರ ೨ ನೇ ಕುಮಾರೀವರ್ಧಂತೀ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರನೋತರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಅಕ್ಟೋಬರ್ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೪೦

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೮. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ವೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

46 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚುಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ. ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಟ್ಟುಗಳು ಆಸವ ತೈಲ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು, ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶವೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಆರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ವೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮಿ ಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಜೊತೆ ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಕೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಪೋಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಹಸಂದರಿ ಪ್ರಕಾರಬಾಟ್ಲಿಯ ಸೋಲತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
30 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ಕೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಶನ್ ಕೊಡುತ್ತೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 44

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್. ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ವೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಾಹಕನಾತಿಗೂ ವೈದ್ಯರ ಸಮಯವನ್ನು ಕಾದು ವೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎನ್. ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎನ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಿಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳ ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಶರವಾದಿ ಗಣಾಂಕಶತಾರಾ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—೫—೦
ತರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧಕ)	೦—೨—೦
ಗರುತಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಮೈಸೂರು ಸ್ಟಾರ್.

೧೯೧೭ ನೆ ಇಸವಿಯ ಅಕ್ಟೋಬರ್ ತಾ|| ೭ ನೆಯ ಭಾನುವಾರ.

ಮೈಸೂರು ನಿಯಮನಿರ್ಮಾಣಸಭೆ, ಮತ್ತೂ ಪ್ರತ್ಯೇಕ ಪ್ರಾತಿನಿಧ್ಯ.

ಮೈಸೂರ ನಿಯಮನಿರ್ಮಾಣ ಸಭೆಯು ಕಳೆದ ತಿಂಗಳು ತಾ|| ೨೮ ರಲ್ಲಿ ಬೆಂಗಳೂರಿನಲ್ಲಿ ಕೂಡಿದ್ದಿತು. ೧ ನೆ ಕೌನ್ಸಿಲರಾದ ಸರ್ದಾರ್ ಕಾಂತರಾಜ ಅರಸಿನವರು ಸಭಾಧ್ಯಕ್ಷರಾಗಿದ್ದರು. ಅನಧಿಕಾರಿ ಸಭ್ಯರಿಂದ ಅನೇಕ ವಿಷಯಗಳು ಚರ್ಚೆಗೆ ತರಲ್ಪಟ್ಟು ಸರ್ಕಾರದ ಉತ್ತರವನ್ನು ಪಡೆಯಲಾಯಿತು. ಮ್ಯುನ್ಸಿಪಲ್ ರೆಗ್ಯುಲೇಷನ್ನಿನ ತಿದ್ದುಪಾಟಿನ ವಿಷಯದಲ್ಲಿ ಸೆಲೆಕ್ಟ್ ಕಮಿಟಿಯವರು ಮಾಡಿದ್ದ ವರದಿಯನ್ನು ಕುರಿತು ೨ ನೆ ಕೌನ್ಸಿಲರ್ ಮ|| ಬಾನರ್ಜಿಯವರು ಕೆಲ ವಿಷಯಗಳನ್ನು ಮಾತನಾಡಿ ಮ್ಯುನ್ಸಿಪಾಲಿಟಿಗಳಿಗೆ ಪೋರ್ಲ್‌ಟೈಂ ಪ್ರೆಸಿಡೆಂಟರನ್ನಾಗಿ ಅನಧಿಕಾರಿ ಜನರನ್ನು ನಿಯಮಿಸಬೇಕೆಂಬ ವಿಷಯವಾಗಿ ಸರ್ಕಾರದಭಿಪ್ರಾಯವನ್ನೂ, ಬೆಂಗಳೂರು, ಮೈಸೂರು ಮ್ಯುನ್ಸಿಪಲ್ ಕೌನ್ಸಿಲ್ಲುಗಳ ಅಭಿಪ್ರಾಯಗಳು ಹೇಗಿರುವುವೆಂಬುದನ್ನೂ, ಮ್ಯುನ್ಸಿಪಾಲಿಟಿಗಳ ವೈಸ್‌ಪ್ರೆಸಿಡೆಂಟರನ್ನೂ ಪ್ರೆಸಿಡೆಂಟರನ್ನೂ ಆಯಾ ಸ್ಥಳಗಳ ಕೌನ್ಸಿಲರುಗಳಿಂದಲೇ ಆರಿಸಿಕೊಳ್ಳುವುದರ ಪ್ರಯೋಜನವನ್ನೂ ಕುರಿತು ಭಾಷಣಮಾಡಿದರು. ಇದರಮೇಲೆ ಸಭಿಕರು ಚರ್ಚೆಯನ್ನು ನಡೆಯಿಸಿದರು. ತದನಂತರ ಲೋಕಲ್ ಬೋರ್ಡುಗಳಲ್ಲಿ ಆಯಾ ಪ್ರಜಾವರ್ಗದ ಜನರ ಬೇರೆಬೇರೆ ಪ್ರತಿನಿಧಿಗಳಿರುವಂತೆ ಮಾಡುವುದರ ಅವಶ್ಯಕತೆಯನ್ನೂ ಪ್ರಯೋಜನವನ್ನೂ ಕುರಿತು ಒಂದು ಸೂಚನೆಯನ್ನು ಮ|| ಎಂ. ಬಸವಯ್ಯ ಬಿ.ಎ., ಬಿ.ಎಲ್., ರವರು ತಂದರು. ಅದರ ಪ್ರಯೋಜನವನ್ನು ಮಿ|| ಅಹಮ್ಮದ್ ಕಲಾಮಿಯವರು ಕೂಡ ಅನುಮೋದಿಸಿದರು. ಆದರೆ ಸಭೆಯಲ್ಲಿ ಹೆಚ್ಚು ಮಂದಿಗಳು ಅದಕ್ಕೆ ಪ್ರತಿಭಟಿಸಿದುದರಿಂದ ಅದು ಅಂಗೀಕೃತವಾಗದೆಹೋಯಿತು. ನಮ್ಮ ನಿಯಮನಿರ್ಮಾಣ ಸಭೆಯಲ್ಲಿ ಹೀಗಾದುದೇನೂ ಆಶ್ಚರ್ಯವಲ್ಲ. ರಾಜಕೀಯ ಕಾರ್ಯನಿರ್ವಾಹದಲ್ಲಿ ಮುಂದಾಗಿರುವ ಜನರಿಗೆ ಪ್ರಜಾಪ್ರಾತಿನಿಧ್ಯವು ಸಿದ್ಧವಾಗಿಯೇ ಇರುತ್ತದೆ. ಅಂಥ ಲಾಭದಲ್ಲಿ ಭಾಗವನ್ನು ಇತರರಿಗೆ ಮೀಸಲಾಗಿ ತೆಗೆದಿಡುವುದಕ್ಕೆ ಅವರುಗಳು ಒಪ್ಪುವುದುಂಟೆ?

ಪ್ರಜಾಸಾಮಾನ್ಯಕ್ಕೂ ಪ್ರತಿನಿಧಿಗಳೆಂದುಕೊಂಡು ಮುಂದೆ ಬಂದವರು ಸ್ವಾರ್ಥೈಕಪರಾಯಣರಾಗದೆ ಸರ್ವರ ಸೌಖ್ಯವನ್ನೂ ತಮ್ಮ ಸೌಖ್ಯದಂತೆ ಬಗೆದು ಕೆಲಸಮಾಡುತ್ತಿರುವವರೆಗೂ, ಇತರರಲ್ಲಿ ಭೇದಬುದ್ಧಿಯಾಗಲೀ ಪ್ರತ್ಯೇಕಪ್ರಾತಿನಿಧ್ಯದ ಅವಶ್ಯಕತೆಯಾಗಲೀ ಉಂಟಾಗುವ ಸಂಭವವೇ ಇಲ್ಲ. ಅಂಥ ಸರ್ವಸಮದೃಷ್ಟಿಗೆ ಮುಂದಾಳುಗಳಲ್ಲಿ ಲೋಪವು ಕಂಡುಬಂದು, ಅವರ ಸ್ವಾರ್ಥಪರತೆಯು ವ್ಯಕ್ತವಾದಾಗ ಹಿಂದಾಳುಗಳು ತಂತಮಗೆ ಬೇರೆ ಬೇರೆ ಪ್ರಾತಿನಿಧ್ಯವನ್ನು ಕೋರಿಕೊಳ್ಳಬೇಕಾದುದು ಅನಿವಾರ್ಯವಾಗಿರುತ್ತದೆ. ಆಂಗ್ಲರ ಸ್ವತಃ ಪರಿಪಾಲನೆಗೊಳಪಟ್ಟಿರುವ ನಮ್ಮ ಭರತಖಂಡದ ಕೆಲ ಪ್ರದೇಶದೊಳಗಿನ ಲೋಕಲ್ ಬೋರ್ಡುಗಳಲ್ಲಿ ಈ ಪ್ರತ್ಯೇಕಪ್ರಾತಿನಿಧ್ಯಸ್ವಾಮ್ಯವು ಮಹಮ್ಮದೀಯರುಗಳಿಂದ ಈ ಕಾರಣಕ್ಕಾಗಿಯೇ ಪಡೆದುಕೊಳ್ಳಬೇಕಾಗಿ ಬಂದಿತು. ಅವರು ಈಗ ಅದನ್ನು ಪಡೆದು ಅನುಭವಿಸುತ್ತಿದ್ದಾರೆ. ಈಗಣ ಸ್ವರಾಜ್ಯಸಾಧನದ ಚಳವಳಿಯಲ್ಲಿಯೂ ಕೂಡ ಹಿಂದುಳಿದ ಜನವರ್ಗಗಳವರಾದ ಕೋಟ್ಯಂತರ ಬ್ರಾಹ್ಮಣೇತರರುಗಳು ಮುಂದಣ ರಾಜಕೀಯ ಸಂಸ್ಕರಣಗಳಲ್ಲಿ ತಮ್ಮ ಜನವರ್ಗಕ್ಕೆ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂದು ಕೋರಿ ಅದನ್ನು ಪಡೆದುಕೊಳ್ಳಲು ಈಗಣಿಂದಲೂ ಪ್ರಯತ್ನಿಸುತ್ತಿದ್ದಾರೆ. ಆದರೆ ಈ ವಿಧಾನಕ್ಕೆ ಬ್ರಾಹ್ಮಣ ಪ್ರತಿನಿಧಿಗಳನೇಕರು ಒಪ್ಪದೆ ಪ್ರತಿಭಟಿಸುತ್ತಿದ್ದಾರೆ. ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಅವಕಾಶ ಕೊಡುವುದರಿಂದ ಐಕಮತ್ಯಕ್ಕೆ ವಿಘಾತವಾಗುವುದೆಂತಲೂ, ಜನವರ್ಗಗಳ ಸಂಖ್ಯೆಯು ಅಗಣಿತವಾಗಿರುವುದರಿಂದ ಅವುಗಳಿಗೆಲ್ಲಾ ಬೇರೆಬೇರೆ ಪ್ರಾತಿನಿಧ್ಯವನ್ನು ಕೊಡುವುದು ಅಸಾಧ್ಯವೆಂತಲೂ, ಆಚಾರ ವ್ಯವಹಾರಾದಿಗಳಲ್ಲಿ ಜನವರ್ಗಗಳ ಭಿನ್ನಭಾವವು ಇದ್ದರೂ ರಾಜಕೀಯ ವಿಷಯಗಳಲ್ಲಿ ಮಾತ್ರ ಅಭೇದಭಾವವಿರುವುದು ಅವಶ್ಯಕವೆಂತಲೂ ಅವರುಗಳು ವಾದಿಸುತ್ತಾರೆ. ಇದು ಯುಕ್ತಿಯುಕ್ತವಾದದೆಂದು ನಮಗೆ ತೋರುವುದಿಲ್ಲ. ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಲು ಹಿಂದೂಗಳು ಒಪ್ಪದಿದ್ದರೆ ಸ್ವರಾಜ್ಯಸಾಧನದ ವಿಷಯದಲ್ಲಿ ಈಗ ಹಿಂದೂ ಮಹಮ್ಮದೀಯರಲ್ಲಿ ಕಾಣಬರುತ್ತಿರುವ ಐಕ್ಯಕ್ಕೆ ಅವಕಾಶವೇ ಇರುತ್ತಿರಲಿಲ್ಲವೆಂಬುದನ್ನು ಭರತಖಂಡದ ಕಳೆದ ನಾಲ್ಕಾರು ವರ್ಷಗಳ ರಾಜಕೀಯ ಚರಿತ್ರವನ್ನು ಅರಿತಿರುವವರೆಲ್ಲರೂ ಬಲ್ಲರಾದಕಾರಣ, ಹೆಚ್ಚು ಜನಸಂಖ್ಯೆಯುಳ್ಳ ತಮ್ಮ ಸಹೋದರವರ್ಗದವರು ಯಾವಾಗ ತಮಗೂ ಸ್ವಾತಂತ್ರ್ಯವು ಬೇಕೆಂದು ಕೋರುವಷ್ಟು ತಿಳಿವಿಕೆಯನ್ನೂ ಸ್ವಾತಂತ್ರ್ಯವನ್ನೂ ಹೊಂದಿ ಯಾವಾಗ ಬರುವರೋ ಆಗ ಅವರಿಗೆ ಅದನ್ನು ಕೊಟ್ಟು ಸಂವರಿಸಿಕೊಂಡು ಹೋಗುವುದು ಐಕಮತ್ಯಕ್ಕೆ ಸಾಧಕವಾಗುವುದೇ ಹೊರತು ವಿಘಾತಕವಾಗುವುದಿಲ್ಲ. ಪಿತ್ರಾರ್ಜಿತವಾದ ಆಸ್ತಿಯಲ್ಲಿ ಹಿರಿಯಣ್ಣನಿಗಿರುವಷ್ಟು ಸ್ವಾಮ್ಯವು ತಮಗೂ ಇದೆಯೆಂದು ಹೇಳಿ ಅದನ್ನು ತಮಗೂ ಭಾಗಿಸಿಕೊಡಬೇಕೆಂದು ಕೇಳಬಂದ ಪ್ರಾಪ್ತವಯಸ್ಕರಾದ ಸಹೋದರರಿಗೆ ಅವರಿಷ್ಟದಂತೆ ಆಸ್ತಿಯನ್ನು ಹಂಚಿಕೊಡುವುದರಿಂದ ಕಲಹಶಾಂತಿಯಾಗುವುದೇ ಹೊರತು ಮತ್ಸರವೃದ್ಧಿಯಾಗುವುದಿಲ್ಲವಷ್ಟೆ? ಇನ್ನು ಜನವರ್ಗಗಳ ಸಂಖ್ಯೆ ಬಹಳವಾಗಿರುವುದರಿಂದ ಅಷ್ಟೊಂದು ಪ್ರಾತಿನಿಧ್ಯವನ್ನು ಬೇರೆಬೇರೆಯೇ ಏರ್ಪಡಿಸುವುದು ಅಸಾಧ್ಯವೆಂದು ಹೇಳುವ ಕಾರಣವು ಕೂಡ ಅಷ್ಟು ಸಮಂಜಸವಾದುದಲ್ಲ. ಏಕೆಂದರೆ—ಹಿಂದುಳಿದ ಜನವರ್ಗಗಳೆಲ್ಲವೂ ಈ ಪ್ರಾತಿನಿಧ್ಯವನ್ನು ಕೇಳುವ ಸ್ಥಿತಿಯಲ್ಲಿಲ್ಲ. ಮತ್ತೂ ಅನೇಕ ವರ್ಗಗಳು ಜನಸಂಖ್ಯೆಯಲ್ಲಿ ಬಹಳ ಚಿಕ್ಕವಾಗಿರುತ್ತವೆ. ಸದ್ಯಃ ಕಾಲದಲ್ಲಿ ಅವೆಲ್ಲಾ ಇಂಥ ಪ್ರಾತಿನಿಧ್ಯದ ಗೋಜಿಗೆ ಬರುವಷ್ಟು ಸಮೀಪದಲ್ಲಿಯೂ ಇಲ್ಲ. ಅಂಥ ಸ್ಥಿತಿಗೆ ಅವು ಬಂದಾಗ ಆ ವಿಷಯವನ್ನು ಆಲೋಚಿಸಬಹುದು. ಯಾವ ಜನವರ್ಗವು ಯಾವ ಪ್ರಾಂತದಲ್ಲಿ ಹೆಚ್ಚು ಜನಸಂಖ್ಯೆಯುಳ್ಳುದಾಗಿಯೂ, ರಾಜಕೀಯ ಕಾರ್ಯನಿರ್ವಾಹದಲ್ಲಿ ಪಾಲನ್ನು ಪಡೆದು ದುಡಿಯಬೇಕೆಂಬ ಕುತೂಹಲವುಳ್ಳುದಾಗಿಯೂ, ತಕ್ಕ ಸಾಮರ್ಥ್ಯವನ್ನು ತೋರಿಸಿಕೊಂಡು ಬರುವುದೋ ಅಂಥ ಜನವರ್ಗಕ್ಕೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವ ವಿಷಯದಲ್ಲಿ ಅಭ್ಯಂತರವೇನು?

ಜಾತಿಕುಲಾದಿ ಭಿನ್ನಭಾವಗಳು ಆಚಾರವ್ಯವಹಾರಾದಿಗಳಲ್ಲಿದ್ದರೂ ರಾಜಕೀಯ ವಿಷಯದಲ್ಲಿರಬಾರದೆಂದು ಪ್ರತಿಪಕ್ಷದವರು ವಾದಿಸುತ್ತಾರಷ್ಟೆ. ಸರ್ವವಿಷಯದಲ್ಲಿಯೂ ಭಿನ್ನಭಾವವನ್ನಿಟ್ಟುಕೊಂಡು ಬಳೆಯಿಸುತ್ತ ಬಂದವರು ರಾಜಕೀಯವಿಷಯವೊಂದರಲ್ಲಿ ಮಾತ್ರ ಅದನ್ನು ಬಿಡುವುದು ಸಾಧ್ಯವೆ? ಹಾಗೆ ಬಿಟ್ಟರತಕ್ಕವರು ಲಕ್ಷಕ್ಕೋ ಕೋಟಿಗೋ ಒಬ್ಬೊಬ್ಬರಿದ್ದರೂ ಲೋಕಕ್ಕೆಲ್ಲಾ ಅದನ್ನು ಹೋಲಿಸಿ ಈ ವಾದವನ್ನು ಸಮರ್ಥಿಸಬಹುದೆ? ಸರ್ಕಾರದ ಕಾರ್ಯನಿರ್ವಾಹದಲ್ಲೂ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣವನ್ನಿಕ್ಕಿದಂತೆ ಕೆಲಸಮಾಡುತ್ತಿರುವವರು ಎಷ್ಟು ಸಹಸ್ರ ಮಂದಿಗಳಿಲ್ಲ? ಅಂಥ ಪಕ್ಷಪಾತವು ಹೆಚ್ಚುತ್ತ ಬಂದಿರುವುದರಿಂದಲೇ ಅದರ ಬಾಧೆಯನ್ನು ಸೈರಿಸಿಕೊಳ್ಳಲಾರದ ಕಾರಣದಿಂದಲೇ ಅಲ್ಲವೆ ಪ್ರತ್ಯೇಕ ಪ್ರಾತಿನಿಧ್ಯ ವಾಂಛೆಯು ಹುಟ್ಟಿರುವುದು? ಈ ಭಿನ್ನಭಾವದ ಕಾರಣದಿಂದಲೇ ಅಲ್ಲವೆ ಪ್ರತ್ಯೇಕಪ್ರಾತಿನಿಧ್ಯ ಪ್ರದಾನಕ್ಕೆ ನಿಯಮನಿರ್ಮಾಣಸಭೆಯಂಥ ಸ್ಥಳಗಳಲ್ಲೂ ಅನುಮೋದನವು ದೊರೆಯದೆ ಹೋಗುವುದು? ರಾಜಕೀಯ ವಿಷಯದಲ್ಲಿ ಭಿನ್ನಭಾವಕ್ಕೆಡೆಯಿರಬಾರದೆಂಬ ತತ್ತ್ವಕ್ಕೆ ಮರ್ಯಾದೆ ಕೊಡಬೇಕಾದರೆ, ಮುಂದಾದವರು ಹಿಂದುಳಿದ ಜನವರ್ಗದವರಲ್ಲೂ ಸಹೋದರವಾತ್ಸಲ್ಯವನ್ನಿಟ್ಟು ಅವರಿಷ್ಟದಂತೆ ಅವರಿಗೆ ಪ್ರತ್ಯೇಕಪ್ರಾತಿನಿಧ್ಯದ ಸ್ವಾಮ್ಯವನ್ನು ಕೊಟ್ಟು ತಮ್ಮ ಸಹಗಾಮಿಗಳನ್ನಾಗಿ ಮಾಡಿಕೊಳ್ಳುವುದೇ ಕರ್ತವ್ಯವು. ಆಗ್ಗೆ ದೃಢವಾದ ಐಕಮತ್ಯವೂ ನಿರ್ಮತ್ಸರಭಾವಗಳೂ ರಾಜಕೀಯ ಕಾರ್ಯಗಳಲ್ಲಿ ರೂಢಮೂಲವಾಗುವುವು. ಇದನ್ನು ನಮ್ಮ ಮುಂದಾಳುಗಳು ಅವಶ್ಯಕವಾಗಿ ಪರಿಭಾವಿಸಬೇಕೆಂದೂ, ತಮ್ಮ ಉನ್ನತಿ ಪ್ರಯತ್ನಕ್ಕೆ ಪ್ರತಿಬಂಧವು ಸಂಘಟಿಸುವುದು ಸಹಜವಾದುದರಿಂದ ಇದಕ್ಕಾಗಿ ಹಿಂದುಳಿದ ಜನವರ್ಗದವರು ವಿಮುಖರಾಗದೆ ತಮ್ಮ ಉದ್ದೇಶಸಾಧನೆಗೆ ದೃಢಸಂಕಲ್ಪದಿಂದಲೂ ನಿರ್ಮತ್ಸರಮತಿಯಿಂದಲೂ ಸಾಹಸಪಡುತ್ತಿರುವವರಾಗಬೇಕೆಂದು ಸೂಚಿಸುವೆವು.

ಶ್ಲಾಘನೀಯವಾದ ಮಹೌದಾರ್ಯವು.

ಭರತಖಂಡವು ಕರ್ಣ ದಧೀಚಿ ಶಿಬಿ ಮೊದಲಾದ ಮಹಾವಿತರಣ ಶಾಲಿಗಳ ಜನ್ಮಭೂಮಿಯು. ಈಗ್ಗೂ ಅಂಥ ಪುರುಷಸಿಂಹರನ್ನು ವಿರಳವಾಗಿಯಾದರೂ ಪಡೆದಿರುವ ಭಾರತ ಮಾತೆಯೇ ಧನ್ಯಳು. ಈಗಣ ದಾನಶೂರರಲ್ಲಿ ತಿಕ್ಕಾರಿ ಮಹಾರಾಜ ದಂಪತಿಗಳ ಹೆಸರುಗಳು ಶೋಭಾಯಮಾನವಾಗಿರುತ್ತವೆ. ಈ ಮಹಾರಾಜರ ಸಂಸ್ಥಾನವು ಮಧ್ಯಪ್ರಾಂತಕ್ಕೆ ಸೇರಿರುತ್ತದೆ. ಅದರಲ್ಲಿ ವರ್ಷ ೧ ಕ್ಕೆ ೧೩ ಲಕ್ಷ ರೂ.ಗಳ ವರಮಾನವಿದೆ. ಇಂಥ ಸಂಸ್ಥಾನದ ಸರ್ವಸ್ವವನ್ನೂ ಭರತಖಂಡದ ಸ್ತ್ರೀ ವಿದ್ಯಾಭಿವೃದ್ಧಿಗಾಗಿ ಒಂದು ಉತ್ತಮಕಲಾಶಾಲೆಯನ್ನು ಸ್ಥಾಪಿಸುವುದಕ್ಕಾಗಿ ಧಾರಾದತ್ತವನ್ನು ಮಾಡಿಕೊಟ್ಟರೆಂಬುದನ್ನು ಕೇಳುವುದಕ್ಕೆ ಯಾರಿಗೆತಾನೇ ಸಂತೋಷವಾಗುವುದಿಲ್ಲ? ಇವರು ಹೀಗೆ ತಮ್ಮ ಸಂಸ್ಥಾನವನ್ನೆಲ್ಲಾ ವಿದ್ಯಾಭಿವೃದ್ಧಿಗಾಗಿ ದಾನಮಾಡಿದರೂ ತಮ್ಮ ಪೋಷ್ಯವರ್ಗಕ್ಕೆ ಸೇರಿದ ಬಾಂಧವಾದಿಗಳಿಗೆ ಯಾವ ಲೋಪವೂ ಉಂಟಾಗದಂತೆ ಏರ್ಪಡಿಸಿರುವುದು ಮತ್ತಷ್ಟು ಶ್ಲಾಘನೀಯವು. ಸಂಸ್ಥಾನದ ಪರಿಪಾಲನೆಗಾಗಿ ಮಹಾರಾಜರವರು ಒಂದು ಪ್ರತ್ಯೇಕಸಂಘವನ್ನೇರ್ಪಡಿಸಿರುವರು. ಅದಕ್ಕೆ ಸರ್ ಸತ್ಯೇಂದ್ರಪ್ರಸನ್ನಸಿಂಹರವರು, ಮಹಮ್ಮದಾಬಾದ್ ರಾಜರವರು ಮೊದಲಾದ ೧೦ ಮಂದಿಗಳಲ್ಲದೆ ತಿಕಾರಿ ಸಂಸ್ಥಾನದ ಕುಮಾರ ಮಹಾರಾಜರೂ ಅವರ ಪತ್ನಿಯವರೂ ಕೂಡ ಸಭ್ಯರಾಗಿರುವರು. ಈ ದಾನದಿಂದ ಏರ್ಪಡುವ ಮಹಿಳಾ ಕಲಾಶಾಲೆಯಲ್ಲಿ ಘೋಷಾ ಹೆಂಗುಸರೇ ಮೊದಲಾದವರು ತಮ್ಮ ೫ ನೆಯ ವಯಸ್ಸು ಮೊದಲುಗೊಂಡು ೧೮ ವರ್ಷ ವಯಸ್ಸಿನವರೆಗೂ ವಿದ್ಯಾಭ್ಯಾಸಮಾಡಬಹುದು. ಜಾತಿ ಮತ ವಿವಕ್ಷತೆಯಿಲ್ಲದೆ ಎಲ್ಲ ಸ್ತ್ರೀಯರೂ ಈ ಶಾಲೆಗೆ ಸೇರಿಸಿಕೊಳ್ಳಲ್ಪಡುವರು. ಈ ಶಾಲೆಯನ್ನು ಕಟ್ಟಿಸುವುದಕ್ಕೆ ಬೇಕಾದ ೪೦ ಸಾವಿರ ರೂ.ಗಳ ಬೆಲೆ ಬಾಳುವ ಭೂಮಿಯನ್ನು ಸರ್ ಅಲಿ ಇಮಾಂರವರು ಉಚಿತವಾಗಿ ಕೊಡಲು ವಾಗ್ದಾನಮಾಡಿರುತ್ತಾರೆ. ಈ ಇಮಾಂರವರೂ ಕೂಡ ಈ ಸಂಸ್ಥಾನದ ಪರಿಪಾಲನಸಂಘದಲ್ಲಿಸಭಿಕರಾಗಿದ್ದಾರೆ. ಈ ಮಹಾದಾತೃಗಳ ಸತ್ಸಂಕಲ್ಪವು ಭಾರತೀಯ ಮಹಿಳೆಯರ ವಿದ್ಯಾಭಿವೃದ್ಧಿಗೆ ವಿಶೇಷ ಸಹಾಯಕವಾಗಿ ಇವರ ಕೀರ್ತಿಯು ಆಚಂದ್ರಾರ್ಕವಾಗಿ ನಿಲ್ಲುವುದಕ್ಕೆ ಸಂಶಯವಿಲ್ಲ.

ಇದೇ ಸಮಯದಲ್ಲಿ ಮತ್ತೊಬ್ಬ ದಾನಶೂರರ ಕೃ… ಶೇಷವು ಹೊರಬಿದ್ದು, ವಾಚಕಮಂಡಲವನ್ನು ಆನಂದತುಂ… ವನ್ನಾಗಿ ಮಾಡತಕ್ಕುದಾಗಿದೆ. ಅವರು ಕೇವಲ ದಾನಶೂ… ಮಾತ್ರವೇ ಅಲ್ಲ; ಅದ್ವಿತೀಯ ವಿಜ್ಞಾನಶಾಸ್ತ್ರ ಪಾರಂಗ… ಆಗಿದ್ದಾರೆ. ಅವರಾರೆಂದರೆ—ವಂಗದೇಶಭೂಷಣರೂ … ಖಂಡದ ಪುರುಷಸಿಂಹರೂ ಆದ ಜಗದೀಶ ಚಂದ್ರಭೋಸ… ರಾಗಿರುತ್ತಾರೆ. ಈ ಪ್ರಕೃತಿಶಾಸ್ತ್ರ ತತ್ತ್ವಜ್ಞರ ವಿಖ್ಯಾತಿ… ಎಲ್ಲ ಖಂಡಗಳಲ್ಲೂ ಇದುವರೆಗೇ ವ್ಯಾಪಿಸಿರುತ್ತದೆ. ಪಾಶ್ಚಾ… ವಿಜ್ಞಾನಧುರೀಣರೆಲ್ಲಾ ಈ ಮಹಾಶಯರ ಶೋಧಕಬು… ದಿಗ್ಭ್ರಮೆಗೊಂಡಿದ್ದಾರೆ. ಇವರು ತಮ್ಮ ಜೀವಿತಕಾಲ… ಲ್ಲಾ ವಿಜ್ಞಾನಶಾಸ್ತ್ರ ಸಂಪಾದನೆಗಾಗಿಯೇ ವಿನಿಯೋಗಿಸಿ … ತಖಂಡಕ್ಕೆ ಗೌರವವನ್ನು ತಂದಿದ್ದಾರೆ. ಇಂಥ ಅಸದೃಶ… ಜ್ಞಾನವು ತಮ್ಮ ಸಂಗಡವೇ ಅದೃಶ್ಯವಾಗದಂತೆ ಮಾಡ… ದೆಂಬ ಘನತರೋದ್ದೇಶದಿಂದ ಒಂದು ಶಾಸ್ತ್ರಪರಿಶೋಧ… ಯವನ್ನು ಸ್ಥಾಪಿಸಿ, ಅದರಮೂಲಕ ಭಾರತೀಯರಲ್ಲಿ ಶಾಸ್ತ್ರ… ಜ್ಞಾನವು ಸರ್ವತೋಮುಖವಾಗಿ ವೃದ್ಧಿಗೊಂಡು, ಭರ… ಡವು ಕೂಡ ನಾಗರಿಕವಾದ ಪಾಶ್ಚಾತ್ಯದೇಶಗಳೊಳಗೆ ಈ … ಯದಲ್ಲೂ ಹಿಂದಾದುದಲ್ಲವೆನಿಸುವಂತೆ ಮಾಡಬೇಕೆಂದು ಇ… ಸಂಕಲ್ಪಿಸಿರುತ್ತಾರೆ. ಸ್ತುತ್ಯವಾದ ಈ ಉದ್ಯಮದ ಸಾಫಲ್ಯ… ಗಿ ಇದುವರೆಗೆ ತಾವು ಸಂಪಾದಿಸಿರುವ ಧನವನ್ನೆಲ್ಲಾ (೫ … ರೂ. ಗಳು) ಅರ್ಪಿಸಿಬಿಟ್ಟಿದ್ದಾರೆ. ಈ ನೂತನ ಶಾಸ್ತ್ರೀಯ… ಶೋಧನಾಲಯದಲ್ಲಿ ಪ್ರಕೃತಿಶಾಸ್ತ್ರ, ಜೀವಶಾಸ್ತ್ರ, ವ್ಯವಸಾ… ಶಾಸ್ತ್ರ, ವೈದ್ಯಶಾಸ್ತ್ರ, ಮಾನಸಿಕಶಾಸ್ತ್ರ ಮೊದಲಾದ ಶಾ… ಳಿಗೆ ಸಂಬಂಧಪಟ್ಟ ಪರಿಶೋಧನೆಗಳೆಲ್ಲಾ ನಡೆಯಿಸಲ್ಪಡುವ… ಅದುಕಾರಣ ಇದಕ್ಕೆಲ್ಲಾ ಧನಸಹಾಯವು ಹೆಚ್ಚಾಗಿ ಬೇ… ಗುವುದು. ಬಹುಶಃ ೧೭ ಲಕ್ಷ ರೂ. ಗಳು ಬೇಕಾಗುವ… ದು ನಿರ್ಧರಿಸಲ್ಪಟ್ಟಿದೆ. ಇದರಲ್ಲಿ ೫ ಲಕ್ಷವನ್ನೇನೋ ಅ… ಕೊಟ್ಟುಬಿಟ್ಟಿದ್ದಾರೆ. ಮತ್ತೂ ಬೊಂಬಾಯಿಯ ದಾನ… ರಲ್ಲಿ ಹೆಸರಾದ ಮತ್ತೂ ಭರತಖಂಡದ ಸ್ವರಾಜ್ಯಸಾಧನ … ಕ್ಕಾಗಿ ಮೊನ್ನೆತಾನೇ ೧ ಲಕ್ಷ ರೂ. ಗಳನ್ನು ದಾನಮಾಡಿ… ಬೊಮ್ಮಂಜಿಯೆಂಬ ಪಾರ್ಸಿ ಗೃಹಸ್ಥರು ಈ ಪ್ರತಿಷ್ಠಾಪನೆ… ೧ ಲಕ್ಷ ರೂ. ಗಳನ್ನು ದಾನಮಾಡಿರುತ್ತಾರೆ. ಉಳಿದ … ನ್ನೆಲ್ಲಾ ದೇಶಾಭಿಮಾನಿಗಳೂ ಧನಿಕರೂ ಆದ ಮಹಾ… ಸಹಾಯಮಾಡಿ ಈ ಪ್ರತಿಷ್ಠಾಪನೆಯನ್ನು ಶಾಶ್ವತಗೊಳಿ… ಕೆಂದು ಭೋಸ್‌ರವರು ದೇಶೀಯರನ್ನು ಪ್ರಾರ್ಥಿಸಿಕೊಂ… ತ್ತಾರೆ. ಈ ಪ್ರತಿಷ್ಠಾಪನೆಯು ನಮ್ಮ ಭರತಖಂಡದಲ್ಲೇ … ವುದರಿಂದ ಮುಂದೆ ಈ ಶಾಸ್ತ್ರೀಯ ಜ್ಞಾನಾರ್ಜನೆಗಾಗಿ … ದೇಶದ ವಿದ್ಯಾರ್ಥಿಗಳು ವಿದೇಶಗಳಿಗೆ ಹೋಗಬೇಕಾದ ಕಷ… ತಪ್ಪಿಹೋಗುವುದು. ಅದುಕಾರಣ ಇಂಥ ಮಹಾಫಲಪ್ರದ… ಕವಾದ ಈ ನವೀನ ಪ್ರತಿಷ್ಠಾಪನೆಗೆ ಅವಶ್ಯಕವಾದ ಧನಸ… ಯವನ್ನು ಈಗಣ ದೇಶೋದ್ಧರಣ ಚಲನವಲನದ ಮಹಾ … ವಸಮಯದಲ್ಲಿ ದೇಶಭಕ್ತರಾದ ಶ್ರೀಮಂತರುಗಳು ನಡೆ… ಕೊಡುವುದರಲ್ಲಿ ಅಭ್ಯಂತರವೇನೂ ಕಾಣಬರುವುದಿಲ್ಲ. ಬ… ನವೆಂಬರ್ ತಿಂಗಳು ತಾ|| ೩೦ ರಿಂದ ಈ ಪ್ರತಿಷ್ಠಾಪನೆ… ಆರಂಭಿಸಲ್ಪಡುವುದಾಗಿದೆ. ಅಷ್ಟರಲ್ಲೇ ಇದಕ್ಕಾಗಬೇ… ಧನಸಹಾಯವು ಒದಗುವಂತೆ ದೇಶೀಯರು ಮಾಡಿದರೆ, … ಭೋಸ್‌ರವರ ಉತ್ಸಾಹವು ಇಮ್ಮಡಿ ಮುಮ್ಮಡಿಯಾಗಿ, … ದ್ದಿಷ್ಟ ಕಾರ್ಯವು ಸಂಪ್ರಾರಂಭದಿಂದ ಸಮಗ್ರವಾಗಿ ತಲೆ… ವುದೆಂಬುದಕ್ಕೆ ಅಭ್ಯಂತರವಿಲ್ಲ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಕಳೆದ ಶುಕ್ರವಾರ ಬೆಂಗ… ನಿಂದ ರಾಜಧಾನಿಗೆ ದಯಮಾಡಿಸಿದರು.

ಕೋಲಾರದ ಚಿನ್ನದ ಗಣಿಗಳ ಕೂಲಿಕಾರರಲ್ಲಿ … ತಿಂಗಳೊಂದರಲ್ಲೇ ಅಪಾಯಗಳಿಂದ ಇಬ್ಬರು ಸತ್ತಿರು… ಒಬ್ಬನಿಗೆ ಗಾಯವಾಗಿರುವುದು.

ಮ|| ಸಿ. ರಾಮಲಿಂಗರೆಡ್ಡಿಯವರು ತಮ್ಮ ನೂತ… ಧ್ಯೋಗವನ್ನು ವಹಿಸಿಕೊಳ್ಳುವುದಕ್ಕಾಗಿ ಕಳೆದ ತಾ|| ೧… ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣಮಾಡಿದರು.

ಮೈಸೂರಿನ ಸೇನಾಶಾಖೆಯ ಕಮ್ಯಾಂಡೆಂಟರಾದ ದೇಶ… ಅರಸಿನವರಿಗೆ ಆಂಗ್ಲಸೈನ್ಯದ ಲೆಫ್ಟನೆಂಟ್ ಕರ್ನಲ್ ಎಂಬ ಗ… ಪ್ರಶಸ್ತಿಯು ಸಾಮ್ರಾಜ್ಯಪ್ರಭುತ್ವದವರಿಂದ ಕೊಡಲ್ಪಟ್ಟಿರು…

ಸಂಸ್ಥಾನದಲ್ಲಿಯೇ ಗಂಧದಮರದ ಎಣ್ಣೆಯನ್ನು ತೆಗೆ… ಕರ್ಮಾಗಾರಗಳು ಸ್ಥಾಪಿಸಲ್ಪಟ್ಟಿರುವುದರಿಂದ, ಆ ಮರ… ಇತರರಿಗೆ ಹರಾಜುಮೂಲಕ ವಿಕ್ರಯಿಸುವುದನ್ನು ನಮ್ಮ ಸ… ರದವರು ಈ ವರ್ಷ ನಿಲ್ಲಿಸಿಬಿಟ್ಟಿದ್ದಾರೆ.

ಈ ವರ್ಷದ ವಸ್ತುಪ್ರದರ್ಶನಾಲಯವು ತಾ|| ೨೦ … ದಿನದಿಂದಾರಂಭವಾಗಿ ನವೆಂಬರ್ ತಾ|| ೫ ರವರೆಗೂ ತೆ… ಲ್ಪಟ್ಟಿರುವುದು. ಈಗಾಗಲೇ ಅನೇಕ ಡಿಸ್ಟ್ರಿಕ್ಟುಗಳ ಸಾ… ಗಳು ಪ್ರದರ್ಶನಾಲಯಕ್ಕೆ ಬಂದು ಸೇರುತ್ತಿವೆ.

ರಾಜಧಾನಿಯಿಂದ ಬೆಂಗಳೂರಿಗೆ ಹೋಗಿದ್ದ ಶ… ಮಹಾರಾಜರವರು ಕಳೆದ ಸೋಮವಾರದದಿನ ಕೋಲಾರದ … ದಗಣಿಗಳಿಗೆ ಹೋಗಿ ನೋಡಬೇಕಾದುದನ್ನೆಲ್ಲಾ ನೋಡಿ… ಸಾಯಂಕಾಲವೇ ಬೆಂಗಳೂರಿಗೆ ಹಿಂದಿರುಗಿ ಬಂದರು.

ಉಪಯೋಗಿಸದಿರುವ ಅಥವಾ ಕೆಟ್ಟುಹೋದ ಛಾಪಾ… ಗದಗಳನ್ನು ಡಿಸ್ಟ್ರಿಕ್ಟ್ ಖಜಾನೆಗೆ ಹಿಂದಿರುಗಿ ಕೊಟ್ಟು ಹಣ… ಪಡೆದುಕೊಳ್ಳುವುದಕ್ಕೆ ಕೊಡುವ ಅರ್ಜಿಗೆ ಇನ್ನುಮೇಲೆ … ಷನ್ನು ಅಂಟಿಸಬೇಕಾದುದಿಲ್ಲವೆಂದು ಸರ್ಕಾರದಪ್ಪಣೆಯಾಗಿ…

ಇದೇ ತಿಂಗಳು ತಾ|| ೧೬ ನೆಯ ಮಂಗಳವಾರದ ದಿವಸ ಶ್ರೀಮನ್ಮಹಾರಾಜರವರು ನವರಾತ್ರಿಯ ಪ್ರಯುಕ್ತವಾದ ಮಹೋತ್ಸವಕ್ಕಾಗಿ ಸಿಂಹಾಸನಾರೋಹಣವನ್ನು ಮಾಡುವರು. ತಾ|| ೨೫ ನೆ ಗುರುವಾರ ವಿಜಯದಶಮಿಯುತ್ಸವವು ಜರುಗುವುದು.

ಬೆಂಗಳೂರು ಪಟ್ಟಣದ ಸಿದ್ದಿಕಟ್ಟೆ ಮಾರಕಟ್ಟಿನ ಚೌಕದಲ್ಲಿರುವ ವಿದ್ಯುಚ್ಛಕ್ತಿ ನಿಲಯವನ್ನು ಅಲ್ಲಿಂದ ಹಳೆ ಸವಾರಲೈನಿನ ಬಳಿಗೆ ವರ್ಗಾಯಿಸಿ, ಅದಿದ್ದ ಸ್ಥಲವನ್ನನುಸರಿಸಿ ಮ್ಯುನ್ಸಿಪಲ್ ಆಫೀಸನ್ನೂ ಟವರ್ ಹಾಲನ್ನೂ ಕಟ್ಟಿಸಲು ಸರ್ಕಾರದವರುನಿರ್ಧರಿಸಿರುತ್ತಾರೆ.

ರಾಜಧಾನಿಯಲ್ಲೂ ಸುತ್ತಮುತ್ತಣ ಗ್ರಾಮಾಂತರಗಳಲ್ಲೂ ಕಳೆದವಾರ ಮಳೆಯು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಂಡಿರುವುದರಿಂದ ಶೀತಹಿಡಿದಿರುವ ಪೈರುಪಚ್ಚೆಗಳು ಚೇತರಿಸಿಕೊಳ್ಳಲು ಮಾರ್ಗವಾಯಿತು. ತಂಪು ಹಿಡಿದ ಗಾಳಿಯು ರಾತ್ರಿಯಹೊತ್ತು ಬೀಸುತ್ತಿದೆ.

ತೆಂಗಿನ ಸಾಗುವಳಿಗಾಗಿ ಸರ್ಕಾರದವರು ಕೊಡತಕ್ಕ ತಕ್ಕಾವಿಸಾಲದ ಪರಮಾವಧಿಯನ್ನು ೨೦೦ ರೂ ಗಳಿಂದ ೫೦೦ ರೂ. ಗಳವರೆಗೆ ಹೆಚ್ಚಿಸಿರುವುದಲ್ಲದೆ, ಆ ಸಾಲವನ್ನು ತೆಗೆದುಕೊಂಡವರು ೭ ವರ್ಷ ತುಂಬಿದನಂತರ ಮೂರು ವರ್ಷಗಳವರೆಗೆ ಕಂತುವಾರಾಗಿ ತೀರಿಸಬಹುದೆಂದು ಅಪ್ಪಣೆಮಾಡಿದ್ದಾರೆ.

ಪುಣೆಯ ನಿವಾಸಿ ವೀರಶೈವ ಗೃಹಸ್ಥರಾದ ಮ|| ಸಿದ್ಧರಾಮಯ್ಯ ಮನೂರಕರ ಎಂಬುವವರು ಅಲ್ಲಿಯ ಫರ್ಗ್ಯುಸನ್ ಕಲಾಶಾಲೆಯಲ್ಲಿರುವ ವೀರಶೈವ ವಿದ್ಯಾರ್ಥಿಗಳ ವಸತಿಗಾಗಿ ಎರಡು ಕೊಟ್ಟಡಿಗಳನ್ನು ೧೬೦೦ ರೂ.ಗಳ ವೆಚ್ಚದಿಂದ ಕಟ್ಟಿಸಿಕೊಡಲು ಒಪ್ಪಿರುತ್ತಾರೆ. ಇವರ ವಿದ್ಯಾಭಿಮಾನವು ಸ್ತುತ್ಯವು.

ಅಸಿಸ್ಟೆಂಟ್ ಕಂಟ್ರೋಲರಾದ ಮ|| ಎಚ್. ಕೃಷ್ಣಸ್ವಾಮಿ ರಾವ್ ಬಿ. ಎ. ಬಿ. ಎಲ್ ರವರು ಮ|| ಸಿ. ವೆಂಕಟರಾಯರವರು ಬೇರೆ ಕೆಲಸದಮೇಲಿರುವವರೆಗೆ ಅಥವಾ ಇನ್ನೊಂದಪ್ಪಣೆಯಾಗುವವರೆಗೆ ಮೈಸೂರು ಸಂಸ್ಥಾನದ ಸೇನೆಗಳ ಕಮ್ಯಾಂಡೆಂಟರ ಆಫೀಸಿನ ಅಸಿಸ್ಟೆಂಟರಾಗಿಯೂ ಅಮೃತಮಹಲ್ ಶಾಖೆಯ ಅಧಿಕಾರಿಗಳಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಶಿವಮೊಗ್ಗೆಯಲ್ಲಿ ಇಷ್ಟರಲ್ಲೇ ಒಂದು ಸೀಸದಕಡ್ಡಿಯ ನಿರ್ಮಾಣದ ಕರ್ಮಾಗಾರವು ಸ್ಥಾಪಿತವಾಗುವುದರಲ್ಲಿದೆ. ಇದರ ಮೂಲಧನಕ್ಕಾಗಿ ಕೂಡುವ ಭಾಗಸ್ಥರ ಹಣಕ್ಕೆ ೧೦೦ ಕ್ಕೆ ೫ ರೂ. ನಂತೆ ಬಡ್ಡಿಯನ್ನು ಕೊಡಲು ಸರ್ಕಾರದವರು ಬರವಸೆಕೊಟ್ಟಿರುತ್ತಾರೆ. ಅಲ್ಲದೆ ಅವಶ್ಯಕವಾದರೆ ಈ ಕೆಲಸದಲ್ಲಿ ಕುಶಲರಾದವರ ಸಹಾಯವನ್ನೂ ಸೂಚನೆಯನ್ನೂ ಸಹ ಕೊಡಿಸಲು ವಾಗ್ದಾನಮಾಡಿದ್ದಾರೆ.

ಬೊಂಬಾಯಿ ಅಧಿಪತ್ಯದ ಹಿಂದುಳಿದ ಜನವರ್ಗದವರಾದ ಜೈನರು ಲಿಂಗಧಾರಿಗಳು, ರಡ್ಡಿಜನರು, ಮರಾಟಿಯವರು ಸಹ ತಂತಮ್ಮ ಸಮಾಜಕ್ಕೆ ನಿಯಮನಿರ್ಮಾಣಸಭೆಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯದ ಹಕ್ಕು ಇರುವಂತೆ ಮಾಡಬೇಕೆಂದು ಸ್ಟೇಟ್‌ಸೆಕ್ರಟರಿಯವರಲ್ಲಿ ಬಿನ್ನಯಿಸಿಕೊಳ್ಳಲಿಕ್ಕೆ ನಿರ್ಧರಿಸಿರುತ್ತಾರೆಂದು ಕೇಳುತ್ತೇವೆ. ಅನುಕೂಲಸಮಯದಲ್ಲಿ ಹಿತಸಾಧನೆಮಾಡಿಕೊಳ್ಳುವುದೇ ದೂರದರ್ಶಿಗಳ ಲಕ್ಷಣವು.

ಅಡಕೆಯಮೇಲಣ ಕಂದಾಯದ ರೂಪವಾಗಿ ಬರುವ ಹಣವನ್ನು ಕೊಳೆರೋಗವಲ್ಲದೆ ಅಡಿಕೆ ಮರಗಳಿಗೆ ತಗಲುವ ಉಳಿದ ರೋಗಗಳ ಪರಿಶೋಧನೆಗಳಿಗಾಗಿಯೂ, ಅಡಕೆಯ ವ್ಯವಸಾಯ ಮತ್ತೂ ಅದರ ತಯಾರಿಗೆ ಸಂಬಂಧಪಟ್ಟ ಅಜಮಾಯಿಷಿ ಕೆಲಸಗಳಿಗಾಗಿಯೂ ಪರೀಕ್ಷಾಕ್ಷೇತ್ರಗಳನ್ನೇರ್ಪಡಿಸುವುದಕ್ಕೂ ಅದರ ವ್ಯವಸಾಯಕ್ಕೆ ಬೇಕಾದ ಕೂಲಿ ಜನರನ್ನು ಮಲೆನಾಡಿಗೆ ಒದಗಿಸಿಕೊಡುವ ಕೆಲಸಕ್ಕೂ, ಅಡಿಕೆಯ ವ್ಯಾಪಾರಕ್ಕೆ ಅನುಕೂಲವಾದ ಸ್ಥಲವನ್ನು ಗೊತ್ತುಮಾಡುವ ಕೆಲಸಕ್ಕೂ ಸಹ ಇತಃಪರಃ ಉಪಯೋಗಿಸತಕ್ಕುದೆಂದು ಸರ್ಕಾರದಪ್ಪಣೆಯಾಗಿದೆ.

ಮೈಸೂರು ಡಿಸ್ಟ್ರಿಕ್ಟಿನ ಕಾಡುಗಳಲ್ಲಿ ೩ ಕಾಡಾನೆಗಳು ಇದುವರೆಗೆ ೮ ಮಂದಿಗಳನ್ನು ಕೊಂದು ಪ್ರಜೆಗಳಿಗೆ ಅಪಾಯಕರವಾಗಿ ಹಾವಳಿಮಾಡುತ್ತಿರುವುದರಿಂದ ಅವುಗಳನ್ನು ಕೊಲ್ಲತಕ್ಕವರಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂದು ಡಿ|| ಕಮಿಷನರವರು ಸರ್ಕಾರಕ್ಕೆ ಬರೆದಿದ್ದುದರಮೇಲೆ ಆ ಆನೆಗಳನ್ನು ಕೊಲ್ಲುವುದಕ್ಕೆ ಯಾರಿಗೆಬೇಕಾದರೂ ಅಪ್ಪಣೆ ಕೊಡಬಹುದೆಂದು ಡಿ|| ಕಮಿಷನರಿಗೆ ತಿಳಿಯಿಸಿರುವುದಲ್ಲದೆ, ಹಾಗೆ ಶಿಕಾರಿಮಾಡಿದ ಮನುಷ್ಯನು ಅಂಥ ಪ್ರತಿ ಆನೆಯ ಎರಡು ಕೊಂಬುಗಳನ್ನೂ ತಾನೇ ಇಟ್ಟುಕೊಳ್ಳಬಹುದೆಂತಲೂ, ಅಥವಾ ಅವಕ್ಕೆ ಪ್ರತಿಯಾಗಿ ಸರ್ಕಾರದಿಂದ ೫೦೦ ರೂ.ಗಳ ಬಹುಮಾನವನ್ನಾದರೂ ಪಡೆಯಬಹುದೆಂತಲೂ ಪ್ರಕಟಿಸಿರುತ್ತಾರೆ. ಶಿಕಾರಿಗಾರರಿಗೆ ಇದು ಒಳ್ಳೆಸಮಯ. ಒಳ್ಳೆಯ ಬಹುಮಾನವನ್ನು ಪಡೆಯುವುದಕ್ಕೂ ಪ್ರಜಾಹಿಂಸೆಯನ್ನು ತಪ್ಪಿಸಿ ಪುಣ್ಯ ಪಡೆಯುವುದಕ್ಕೂ ಅನುಕೂಲವಾದ ಕಾಲ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.—ಫ್ಲಾಂಡರ್ಸಿನಲ್ಲಿ ಮೊನ್ನೆವಾರದಲ್ಲಿ ಆಂಗ್ಲಸೈನಿಕರು ಪಡೆದುಕೊಂಡ ಮಹಾ ವಿಜಯದ ವಿವರಣವು ಕಳೆದವಾರದ ತಂತ್ರೀವಾರ್ತೆಗಳಲ್ಲಿ ವಿಶೇಷವಾಗಿ ಬಂದಿದೆ. ಶತ್ರುಸೇನಾಪಙ್ಕ್ತಿಯಮೇಲೆ ೭ ಮೈಲಿಗಳಗಲಕ್ಕೆ ಇಂಗ್ಲೀಷ್ ಸೈನಿಕರು ಬಿದ್ದು ೩೦೦೦ ಗಜಗಳದೂರ ಅಷ್ಟು ಸೈನ್ಯವನ್ನೂ ಹಿಂದಕ್ಕೆ ಸರಿಸಿರುತ್ತಾರೆ. ಈ ಯುದ್ಧದಲ್ಲಿ ಮಿತ್ರಮಂಡಲಿಯವರಿಗಾದ ನಷ್ಟಕ್ಕೆ ೩ ಪಾಲು ಹೆಚ್ಚಾಗಿ ಶತ್ರುಗಳಿಗಾಗಿದೆ. ಈ ಪ್ರಸ್ಸಿಗೆ ಪೂರ್ವಭಾಗದಲ್ಲಿರುವ ಎತ್ತರವಾದ ಪ್ರದೇಶಗಳಮೇಲೆ ಇಂಗ್ಲೀಷರು ಈ ವಿಜಯವನ್ನು ಪಡೆದಿರುತ್ತಾರೆ. ಈ ಸ್ಥಾನವು ಮುಂದಣ ಯುದ್ಧಕಾರ್ಯಕ್ಕೆ ಬಹಳ ಅನುಕೂಲವಾದುದು. ಇದನ್ನು ಅಧೀನಪಡಿಸಿಕೊಳ್ಳುವುದಕ್ಕಾಗಿ ಇಂಗ್ಲೀಷರು ಜುಲೈ ತಿಂಗಳ ಕೊನೆಯಿಂದಲೂ ಪ್ರಯತ್ನಿಸಿದ್ದರು. ಇದೆಲ್ಲಾ ಸಂಪೂರ್ಣವಾಗಿ ವಶವಾಗಿಬಿಟ್ಟರೆ ಅದರ ಹಿಂದೆ ಇರುವುದು ಸಮಭೂಮಿ. ಅಲ್ಲಿ ಯುದ್ಧವನ್ನು ಮಾಡಿ ಶತ್ರುಗಳನ್ನು ಹಿಮ್ಮೆಟ್ಟಿಸುವುದು ಅಷ್ಟು ಕಷ್ಟವಾಗಿರುವುದಿಲ್ಲ. ಅದುಕಾರಣವೇ ಇದನ್ನು ಹಿಡಿಯುವುದರಲ್ಲಿ ಇಂಗ್ಲೀಷರು ಬಹು ಕಷ್ಟನಷ್ಟಗಳನ್ನನುಭವಿಸಿದರೂ ಲಕ್ಷ್ಯಮಾಡಲಿಲ್ಲ. ಇಲ್ಲಿ ಯುದ್ಧಮಾಡಲು ಸಿದ್ಧವಾಗಿದ್ದ ಇಂಗ್ಲೀಷ್ ಸೈನ್ಯಕ್ಕೆ ೪ ಭಾಗ ಹೆಚ್ಚಾಗಿ ಜರ್ಮನರ ಸೈನ್ಯವು ಇದ್ದಿತು. ಆದರೂ ಇಂಗ್ಲೀಷರು ಜಯಶಾಲಿಗಳಾದರು. ೩ ಸಾವಿರಕ್ಕಿಂತಲೂ ಹೆಚ್ಚಾಗಿಯೇ ಇಲ್ಲಿ ಶತ್ರುಗಳು ಸೆರೆಸಿಕ್ಕಿದರು. ಈ ಸ್ಥಲವು ಅತ್ಯಂತ ಪ್ರಾಮುಖ್ಯವುಳ್ಳುದಾದುದರಿಂದಲೇ ಇದನ್ನು ಮರಳಿ ವಶಪಡಿಸಿಕೊಳ್ಳಬೇಕೆಂದು ಶತ್ರುಗಳು ಬಹಳ ಪ್ರತಿಯುದ್ಧಗಳನ್ನು ಮಾಡಿದರು. ಆದರೂ ಅವರಿಗೆ ನಷ್ಟದಹೊರತು ಜಯವೇನೂ ಆಗಲಿಲ್ಲ. ಕಳೆದ ಸೆಪ್ಟಂಬರ್ ತಿಂಗಳೊಂದರಲ್ಲಿ ಇಂಗ್ಲೀಷರು ಈ ರಂಗದಲ್ಲಿ ೫೨೯೬ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದರು. ಅವರಲ್ಲಿ ೧೪೬ ಮಂದಿ ಉದ್ಯೋಗಸ್ಥರು. ಇದಲ್ಲದೆ ೫೭ ಕಂದಕಫಿರಂಗಿಗಳನ್ನೂ, ೩೭೭ ಮಿಷನ್ ಫಿರಂಗಿಗಳನ್ನೂ, ೪ ತುಪಾಕಿಗಳನ್ನೂ, ೩ ದೊಡ್ಡ ತುಪಾಕಿಗಳನ್ನೂ ಸಹ ವಶಪಡಿಸಿಕೊಂಡಿದ್ದಾರೆ. ಈಪ್ರೆಸ್, ಮೆನಿನ್ ರೋಡು, ಪೋಲಿಗಾನ್ ಕಾಡು ಇವುಗಳ ಮಧ್ಯದ ಪ್ರದೇಶದಲ್ಲಿ ಶತ್ರುಗಳು ಈಗಲೂ ಭೀಕರವಾಗಿ ಯುದ್ಧಗಳನ್ನು ನಡೆಯಿಸುತ್ತಿದ್ದಾರೆ. ಫ್ರೆಂಚ್ ಸೇನಾಮುಖದಲ್ಲಿ ವರ್ಡನ್ನಿನ ಹತ್ತಿರವೂ ಎಯ್ಸ್ನೀ ಪರ್ವತಪಙ್ಕ್ತಿಯ ಹತ್ತಿರವೂ ಶತ್ರುಗಳು ಯುದ್ಧಮಾಡಿದರು. ಅವರಿಗೆ ಲಾಭವೇನೂ ಆಗಲಿಲ್ಲ.

ರಷ್ಯಾರಂಗ—ರಿಗಾ ರಂಗದಲ್ಲಿ ಜರ್ಮನರ ನುಗ್ಗಾಟವನ್ನು ರಷ್ಯನರು ತಡೆದುಬಿಟ್ಟುದಲ್ಲದೆ ಅವರನ್ನೇ ಕೆಲವುದೂರ ಹಿಂದಕ್ಕಟ್ಟಿರುವರು.

ಇಟಲಿರಂಗ—ಬಿಯಿನ್ ಸಿಜ್ಜಾ ಪೀಠಭೂಮಿಯಹತ್ತಿರ ಇಟಾಲಿಯನ್ನರು ಅಕಸ್ಮಾತ್ತಾಗಿ ಶತ್ರುಗಳಮೇಲೆ ಬಿದ್ದು ಯುದ್ಧಮಾಡಿ ಸೋಲಿಸಿ ಹಿಮ್ಮೆಟ್ಟಿಸಿ, ತಾವು ಸ್ವಲ್ಪ ಮುಂದಕ್ಕೆ ಸರಿದರು. ಫಾಡ್ಲಾಕಿಗೆ ದಕ್ಷಿಣಭಾಗದಲ್ಲಿ ಕೆಲ ಉನ್ನತ ಪ್ರದೇಶಗಳನ್ನು ವಶಪಡಿಸಿಕೊಂಡರು. ಶತ್ರುಸೈನ್ಯದಲ್ಲಿ ೩೯ ಮಂದಿ ಉದ್ಯೋಗಸ್ಥರನ್ನೂ, ೧೩೭೦ ಮಂದಿ ಸೈನಿಕರನ್ನೂ ಸೆರೆಹಿಡಿದರು. ಶತ್ರುಗಳ ಪ್ರತಿಯುದ್ಧವನ್ನೆಲ್ಲಾ ತೊಲಗಿಸಿ, ತಾವು ಹಿಡಿದ ಸ್ಥಾನಗಳನ್ನು ಕಾಪಾಡಿಕೊಂಡರು. ಕಳೆದವಾರದ ಯುದ್ಧದಲ್ಲೆಲ್ಲಾ ಇಟಲಿಯವರು ಒಟ್ಟಿಗೆ ೨೦೧೯ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದಿರುವರು. ಮದ್ದುಗುಂಡು ಮೊದಲಾದ ವಸ್ತುಗಳೂ ಬಹಳವಾಗಿ ಸಿಕ್ಕಿರುವುವು.

ತುರ್ಕಿರಂಗ—ಯೂಪ್ರಟೀಸ್ ನದಿಯಹತ್ತಿರ ಮೊನ್ನೆವಾರದಲ್ಲಿ ಇಂಗ್ಲೀಷರು ಪಡೆದುಕೊಂಡ ವಿಜಯವು ಬಹಳ ಗಣ್ಯವಾದುದೆಂದು ತಿಳಿಯಬರುತ್ತದೆ. ಮೆಸಪೊಟೋಮಿಯಾದ ಯುದ್ಧವಾರಂಭವಾದಂದಿನಿಂದಲೂ ಇಂಥ ಪರಿಪೂರ್ಣ ವಿಜಯವು ಲಭಿಸಿರಲಿಲ್ಲವೆಂದು ಹೇಳಲ್ಪಟ್ಟಿದೆ. ಜರ್ಮನರು ಈ ಮಾರ್ಗವಾಗಿ ಬಾಗ್ದಾದಿನಮೇಲೆ ಸಾಗಿಬರುವರೆಂಬ ಸುದ್ದಿಯಿರುವಲ್ಲಿ ಆ ಮಾರ್ಗದಲ್ಲಿ ಇಂಥ ಮಹಾವಿಜಯವು ಇಂಗ್ಲೀಷರಿಗಾದುದರಿಂದ, ಅದರ ಗಣ್ಯತೆಯು ಮತ್ತಷ್ಟು ಹೆಚ್ಚಿದೆ. ಈ ವಿಜಯವು ಕಳೆದ ತಾ|| ೨೭-೨೮ ರಲ್ಲಿ ಲಭಿಸಿತು. ನಮ್ಮವರ ಸೈನ್ಯವು ತಾ|| ೨೭ ರಲ್ಲಿ ಮುಂದಕ್ಕೆ ನುಗ್ಗಿ ತಾ|| ೨೮ ರಲ್ಲಿ ಮುಷೈದ್ ಪಟ್ಟಣವನ್ನು ನಿರಾಯಾಸವಾಗಿ ವಶಪಡಿಸಿಕೊಂಡು, ಬಳಿಕ ರುಮಾಡೈ ನಗರದಲ್ಲಿದ್ದ ತುರ್ಕಿಯವರ ಮುಖ್ಯಸ್ಥಾನವನ್ನೂ ಕೂಡ ವಶಪಡಿಸಿಕೊಂಡಿತು. ಹಗಲೆಲ್ಲಾ ಯುದ್ಧವು ತೀಕ್ಷ್ಣವಾಗಿ ನಡೆದು ಸಾಯಂಕಾಲದಹೊತ್ತಿಗೆ ನಮ್ಮ ಸೈನ್ಯಗಳು ಆ ಪಟ್ಟಣವನ್ನು ಸುತ್ತಲೂ ಮುತ್ತುವುದಕ್ಕಾರಂಭಿಸಿದರು. ಪಟ್ಟಣದಲ್ಲಿದ್ದ ಜನರು ಊರನ್ನು ಬಿಟ್ಟೋಡುವುದಕ್ಕೆ ರಾತ್ರಿಯೆಲ್ಲಾ ಪ್ರಯತ್ನಿಸಿದರು. ಆದರೆ ನಮ್ಮವರ ಅಶ್ವಸೈನ್ಯವು ಅವಕಾಶ ಕೊಡಲಿಲ್ಲ. ಮರುದಿನ ಬೆಳಗ್ಗೆ ನಮ್ಮವರು ಮತ್ತೆ ಯುದ್ಧವನ್ನಾರಂಭಿಸಿದರು. ೯|| ಗಂಟೆಯ ಹೊತ್ತಿಗೆ ಶತ್ರುಗಳು ಎಲ್ಲ ಸ್ಥಳದಲ್ಲೂ ವಶವಾಗಿಹೋದರು. ಅಲ್ಲಿ ಬಹಳ ಮದ್ದುಗುಂಡುಗಳೂ ಫಿರಂಗಿಗಳೂ ಇತರ ಉಪಕರಣಗಳೂ ವಿಶೇಷವಾಗಿ ಸಿಕ್ಕಿದುವು ಅನೇಕ ಮಂದಿಗಳನ್ನು ಸೆರೆಹಿಡಿದರು. ತುರುಕರ ಸೇನಾಪತಿ ಅಹಮ್ಮದ್‌ಬೇ ಎಂಬುವನೂ ಅವನ ಕೈಕೆಳಗಣ ಉದ್ಯೋಗಸ್ಥರೂ ಸಹ ಸೆರೆಸಿಕ್ಕಿದರು. ರುಮಾಡೈಪುರವು ಅದರ ಸಂರಕ್ಷಕ ಸೈನ್ಯಸಮೇತವಾಗಿ ನಮ್ಮವರ ವಶವಾದಂತಾಯಿತು. ಅದೇ ತಾ|| ೨೭-೨೮ರಲ್ಲಿ ನಮ್ಮವರ ಮತ್ತೊಂದು ಅಶ್ವಸೈನ್ಯವು ಬಾಗ್ದಾದಿನ ಈಶಾನ್ಯಕ್ಕೆ ಹೋಗಿ ಶತ್ರುಗಳ ಮೇಲೆ ಯುದ್ಧಮಾಡಿ ಬಹಳ ನಷ್ಟಪಡಿಸಿ ಓಡಿಸಿತು.

ಆಕಾಶರಂಗ—ಶತ್ರುವಿಮಾನಗಳು ಪದೇಪದೇ ಲಂಡನ್ ಪಟ್ಟಣದಮೇಲೆ ಬಂದು ಸಿಡಿಮದ್ದುಗಳನ್ನು ಹಾಕುವುದು ಹೆಚ್ಚಾಗಿರುತ್ತದೆ. ಅವುಗಳ ಬರುವಿಕೆಯನ್ನು ಸೂಚಿಸತಕ್ಕ ಫಿರಂಗಿಗುಂಡುಗಳನ್ನು ಹಾರಿಸಿ ಪ್ರಜೆಗಳನ್ನು ಎಚ್ಚರಿಸಿ ಅವರು ರಕ್ಷಕಸ್ಥಲಗಳಿಗೆ ಹೋಗಿ ಸೇರಿಕೊಳ್ಳುವಂತೆ ಮಾಡುತ್ತಿರುವುದರಿಂದ ವಿಶೇಷ ಪ್ರಾಣನಷ್ಟವೇನೂ ಆಗುತ್ತಿರುವುದಿಲ್ಲ. ಶತ್ರುವಿಮಾನಗಳಮೇಲೆ ಇಂಗ್ಲೀಷರ ವಿಮಾನಗಳು ಬಿದ್ದು ಯುದ್ಧಮಾಡಿ, ಕೆಲವನ್ನು ಹಾಳ್ಮಾಡಿರುತ್ತವೆ. ಕಳೆದ ಆದಿತ್ಯವಾರದದಿನ ಬಿದ್ದ ಸಿಡಿಮದ್ದುಗಳಿಂದ ಲಂಡನ್ ಪಟ್ಟಣದಲ್ಲಿ ೧೦ ಜನರು ಸತ್ತರು. ೩೮ ಜನರಿಗೆ ಗಾಯಗಳಾದುವು. ಶನಿವಾರದಲ್ಲಿ ಬಿದ್ದ ಸಿಡಿಮದ್ದುಗಳಿಂದ ೧೧ ಮಂದಿಗಳು ಸತ್ತರು. ೮೨ ಮಂದಿಗೆ ಗಾಯಗಳಾದುವು. ಇದಕ್ಕೆ ಪ್ರತಿಯಾಗಿ ಇಂಗ್ಲೀಷ್ ವೈಮಾನಿಕರು ಜರ್ಮನರ ಪಟ್ಟಣಗಳ ಮೇಲಕ್ಕೆ ಹೋಗಿ ಬಹಳ ಕ್ರೂರವಾಗಿ ಸಿಡಿಮದ್ದುಗಳನ್ನು ಹಾಕಿ ಬರುತ್ತಿದ್ದಾರೆ. ರಣರಂಗದಲ್ಲೂ ಮಿತ್ರಮಂಡಲಿ ವೈಮಾನಿಕರು ಶತ್ರುಗಳ ವಿಮಾನಾಲಯ ಮೊದಲಾದವುಗಳಮೇಲೆ ಟನ್ನುಗಟ್ಟಲೆ ಸಿಡಿಮದ್ದುಗಳನ್ನು ಹಾಕಿ ಬಹಳಾನರ್ಥವನ್ನು ಮಾಡಿದ್ದಾರೆ.

ಭರತಖಂಡದ ವೃತ್ತಾಂತಗಳು.

ಸ್ಟೇಟ್ ಸೆಕ್ರಟರಿಯವರು ವೈಸ್ರಾಯರವರೊಡನೆ ಕೂಡಿ ತಮ್ಮ ಪಟ್ಟಣಗಳಿಗೆ ಬಂದಾಗ್ಗೆ ಸನ್ಮಾನಪತ್ರಗಳನ್ನರ್ಪಿಸುವುದಕ್ಕೂ ಅವುಗಳಲ್ಲಿ ರಾಜಕೀಯ ವಿಷಯಗಳಾವುವನ್ನೂ ನಿರೂಪಿಸದಿರುವುದಕ್ಕೂ ಬೊಂಬಾಯಿ ಮದರಾಸು ಪಟ್ಟಣಗಳ ಕಾರ್ಪೋರೇಷನ್ನಿನವರು ನಿರ್ಧರಿಸಿರುವರು.

ಈಗಣ ಸ್ವರಾಜ್ಯವಾದಿ ನಾಯಕರಲ್ಲಿ ಪ್ರಸಿದ್ಧರಾದ ಶ್ರೀಮತಿ ಆನಿಬೆಸೆಂಟಮ್ಮ, ಸರ್ ಸುಬ್ರಹ್ಮಣ್ಯಯ್ಯರ್, ಶ್ರೀಯುತ ಗಂಧಿ ಈ ಮಹಾಶಯರು ಮೂವರ ವರ್ಧಂತ್ಯುತ್ಸವವೂ ಕಳೆದ ಇದೇತಿಂಗಳು ತಾ|| ೧ ರಲ್ಲಿ ಕೂಡಿದ್ದುದು ಒಂದುಅದ್ಭುತವಾದ ಯೋಗವೇ ಆಗಿದ್ದಿತು. ಅದಿನ ಸರ್ ಸುಬ್ರಹ್ಮಣ್ಯಯ್ಯರಿಗೆ ೭೫ ನೆ ವರ್ಷವರ್ಧಂತಿ; ಅಮ್ಮನವರಿಗೆ ೭೦ ನೆವರ್ಷವರ್ಧಂತಿ; ಗಂಧಿಯವರಿಗೆ ೪೯ ನೆ ವರ್ಷವರ್ಧಂತಿಯಾಗಿದ್ದಿತು. ಅದುಕಾರಣ ಮಹಾಜನರನೇಕರು ಆ ದಿವಸ ಮೇಲೆಕಂಡ ಮೂವರ ವಿಷಯದಲ್ಲೂ ತಮಗಿರುವ ಭಕ್ತಿ ಗೌರವಗಳನ್ನು ನಾನಾರೂಪದಿಂದ ಪ್ರದರ್ಶಿಸಿ, ಅಭಿನಂದನಪತ್ರಗಳನ್ನರ್ಪಿಸಿ, ಅವರ ದೀರ್ಘಾಯುಷ್ಯವನ್ನು ಕೋರಿ ಭಗವತ್ಪ್ರಾರ್ಥನೆಗಳನ್ನು ಮಾಡಿರುತ್ತಾರೆ.

ಕೊಲ್ಲಾಪುರದ ರಾಜಾರಾಮ ಕಲಾಶಾಲೆಯ ಸಾಂವತ್ಸರಿಕೋತ್ಸವವು ಮೊನ್ನೆತಾನೇ ನಡೆದಾಗ ಅಲ್ಲಿಯ ಶಂಕರಾಚಾರ್ಯ ಪೀಠಾಧಿಪತಿಗಳು ಬಾಲಕರಿಗೆ ಬಹುಮಾನಪ್ರದಾನಮಾಡುವಾಗ್ಗೆ ವಿದ್ಯಾರ್ಥಿಗಳನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು. ಅದರಲ್ಲಿ ಪೂರ್ವಪಶ್ಚಿಮ ದೇಶೀಯರೀರ್ವರ ಸಂಬಂಧದ ಅವಶ್ಯಕತೆಯನ್ನು ವಿವರಿಸುವಾಗ್ಗೆ—ವಿದ್ಯಾರ್ಥಿಗಳು ದೇಶದಪುರೋವೃದ್ಧಿಯ ಮೊಳಕೆಗಳು. ಅವರೇ ಮುಂದೆ ಪೌರರಾಗತಕ್ಕವರು. ಅವರು ತಮ್ಮ ಶಕ್ತಿ ವಂಚನೆಯಿಲ್ಲದೆ ದೇಶಾಭಿವೃದ್ಧಿಗೆ ಪಾಟುಪಡಬೇಕು. ಆಧುನಿಕರಲ್ಲಿ ಉತ್ತಮರಾದವರಿಗೂ ಪೂರ್ವಿಕರಲ್ಲಿ ಉತ್ತಮರಾದವರಿಗೂ ಒಂದು ವಿಧವಾದ ಮೈತ್ರೀಸಂಬಂಧವಿರತಕ್ಕುದು ಅತ್ಯವಶ್ಯಕವು. ಇಂಥ ಅನ್ಯೋನ್ಯಸಹಾಯದಿಂದ ಎಷ್ಟು ಪ್ರಯೋಜನವುಂಟಾಗುವುದೆಂಬುದನ್ನು ಅವರವರೇ ಪ್ರತ್ಯಕ್ಷವಾಗಿ ಕಾಣಬಲ್ಲರು. ಈಗಣ ಕ್ರಮವು ಪೂರ್ವಪದ್ಧತಿಗಳ ದೃಢತ್ವವನ್ನು ನಾಶಗೊಳಿಸಿ ಪ್ರಪಂಚದ ಯಾವ ಮೂಲೆಯಲ್ಲಿ ಏನೇನು ನಡೆಯುತ್ತಿದೆಯೋ ಅದರ ಗಂಭೀರಾಭಿಪ್ರಾಯಗಳನ್ನು ತಿಳಿಯಪಡಿಸುತ್ತ ಅದು ಮಾನವಜೀವಿತವನ್ನು ಅತ್ಯಂತಾಭಿವೃದ್ಧಿಗೊಳಿಸಿ, ಜೀವಿತದ ವಿಜ್ಞಾನವಿಧಾನವನ್ನು ಬೋಧಿಸುತ್ತಿರುವುದು. ಆಂಗ್ಲಭಾಷೆ ಸಂಸ್ಕೃತಭಾಷೆ ಇವೆರಡನ್ನೂ ವಿದ್ಯಾರ್ಥಿಗಳು ಅಭ್ಯಾಸಮಾಡಬೇಕು. ಭಾರತೀಯರು ಆಂಗ್ಲೇಯರ ಗುಣಗಳನ್ನೂ, ಆಂಗ್ಲೇಯರು ಭಾರತೀಯರ ಗುಣಗಳನ್ನೂ ಗ್ರಹಿಸುವುದಕ್ಕೆ ಮೇಲೆಕಂಡ ಎರಡು ಭಾಷೆಗಳ ಜ್ಞಾನವೂ ಅತ್ಯವಶ್ಯಕ. ಒಬ್ಬರಿಗೆ ಮತ್ತೊಬ್ಬರ ಸಹಾಯವಿಲ್ಲದಿದ್ದರೆ ಕಾರ್ಯವು ಸಾಗಲಾರದು. ಇದರಲ್ಲೇ ಯಥಾರ್ಥಸೂತ್ರವು ಅಡಕವಾಗಿದೆ. ಪಾಲಕರು ಪರಿಪಾಲಿತರನ್ನೂ ಪಾಲಿತರು ಪಾಲಕರನ್ನೂ ಪರಸ್ಪರ ಚೆನ್ನಾಗಿ ಅರಿತುಕೊಳ್ಳದಿದ್ದರೆ ಜನಗಳಿಗೆ ಆನಂದಸೌಖ್ಯಗಳು ಅಳವಡಲಾರವು ಎಂದುಹೇಳಿದರು.

ಶ್ರೀಯುತ ಗಂಧಿ ಮಹಾಶಯರು ಕಳೆದ ೨|| ವರ್ಷಗಳ ಕಾಲದಲ್ಲಿ ಭರತಖಂಡದ ದೇಶಾಟನದಲ್ಲೇ ಮುಕ್ಕಾಲುಭಾಗವನ್ನು ಕಳೆದಿದ್ದಾರೆ. ಆಗೆಲ್ಲಾ ಅವರು ೩ನೆ ತರಗತಿಯ ಪ್ರಯಾಣಿಕರ ಅವಸ್ಥೆಯು ಹೇಗಿದೆಯೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ತಾವೂ ಕೂಡ ಈ ದೇಶದ ಎಲ್ಲಾ ರೈಲ್ವೆ ಕಂಪೆನಿಗಳ ೩ನೆ ತರಗತಿಯ ಬಂಡಿಗಳಲ್ಲೂ ಪ್ರಯಾಣ ನಡೆಯಿಸಿರುವರು. ಅದರಿಂದ ತಮಗುಂಟಾದ ಅನುಭವವನ್ನೆಲ್ಲಾ ಇವರು ವಿವರಿಸಿ ಆಗಾಗ್ಗೆ ಕಂಪೆನಿಗಳವರಿಗೆ ಬರೆದಿರುವುದಲ್ಲದೆ, ಸರ್ಕಾರದವರೂ ವೃತ್ತಪತ್ರಿಕೆಗಳೂ ಪ್ರಜಾಪ್ರಮುಖರೂ ಸಹ ಶ್ರದ್ಧೆವಹಿಸಿ ಕೆಲಸಮಾಡಿ, ಈ ೩ ನೆ ತರಗತಿಯ ಪ್ರಯಾಣಿಕರ ತೊಂದರೆಗಳನ್ನೆಲ್ಲಾ ಪರಿಹರಿಸಲು ಪ್ರಬಲ ಪ್ರಯತ್ನವನ್ನು ಮಾಡಬೇಕೆಂದು ಒಂದು ಲೇಖನವನ್ನು ವೃತ್ತಪತ್ರಿಕೆಗಳಿಗೆ ಬರೆದಿರುತ್ತಾರೆ. ಅದರಲ್ಲಿ ತಮ್ಮ ಪ್ರಯಾಣದ ಅನುಭವದಲ್ಲಿ ಕೆಲವುಭಾಗಗಳನ್ನೆಲ್ಲಾ ವಿವರಿಸಿರುವುದಲ್ಲದೆ, ವೈಸ್ರಾಯರು, ಸಾಮ್ರಾಜ್ಯ ನಿಯಮನಿರ್ಮಾಣಸಭೆಯ ಸಭಿಕರು, ರಾಜರು, ಮಹಾರಾಜರು ಧನಿಕರು ಮೊದಲಾದವರೆಲ್ಲಾ ೧ ನೆ ತರಗತಿಯ ಬಂಡಿಗಳಲ್ಲೇ ಪ್ರಯಾಣಮಾಡುತ್ತಿರುವರೆಂತಲೂ, ಆ ಮಹನೀಯರೆಲ್ಲಾ ಒಂದೊಂದುಸಲ ಗುಟ್ಟಾಗಿ ೩ ನೆ ತರಗತಿಯ ಬಂಡಿಗಳಲ್ಲಿ ಕುಳಿತುಪ್ರಯಾಣಮಾಡಿದರೆ ಅವುಗಳ ಪ್ರಯಾಣಿಕರ ಕಷ್ಟಸುಖಗಳು ಗೊತ್ತಾಗುವುವೆಂತಲೂ, ಆ ಬಳಿಕಾದರೂ ೩ನೆ ತರಗತಿ ಪ್ರಯಾಣಿಕರ ಕಷ್ಟಗಳು ತೊಲಗಿ ಕೆಲ ಮಟ್ಟಿನ ಸೌಖ್ಯಗಳಾದರೂ ದೊರೆಯುವುದಕ್ಕೆ ಅವಕಾಶವಾಗಬಹುದೆಂತಲೂ ಬರೆದಿರುತ್ತಾರೆ.

ಪತ್ರವ್ಯವಹಾರ.

ತಾ|| ೧೮-೮-೧೯೧೭ನೆಯ ಶನಿವಾರ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಗರಡಿವಿಜನ್ ವೀರಶೈವ ವಿದ್ಯಾವರ್ಧಕ ಸಂಘದವರು ನಡೆಯಿಸಿದ ೪ ನೆಯ ಮ್ಯಾನೇಜಿಂಗ್ ಕಮಿಟಿಯ ಮೀಟಿಂಗ್ ಪ್ರೊಸೀಡಿಂಗ್ಸ್.

೧. ತಾ|| ೯-೮-೧೯೧೭ ರಲ್ಲಿ ನಡೆದ ಮೀಟಿಂಗ್ ಪ್ರೊಸೀಡಿಂಗ್ಸು ಓದಿ ಒಪ್ಪಲ್ಪಟ್ಟಿತು.

೨. ಇಲ್ಲಿಯವರೆಗಿನ ಜಮಾಖರ್ಚು ಜಮಾ ೧೩೭೧೮-೪-೩ ಖರ್ಚು ೧೨೧೫-೬-೯. ಖರ್ಚುತಪ್ಸೀಲ್—ನಾಟಾವಗೈರೆ ಕೊಂಡಕಮಾಗೆ ೩೧೫-೧೫-೯. ನಾಟಾಕ್ಕೆ ಅಡ್ವಾನ್ಸ್ ೧೦೦-೦-೦, ಗಾಡಿ ಮೇರೆಗೆ ಕೊಂಡಕಲ್ಲಿಗೆ ೭೮-೧೨-೦, ಕಲ್ಲಿಗೆ ಅಡ್ವಾನ್ಸ್ ೫೫೨-೦-೦ ಚಿಲ್ಲರೆ ಖರ್ಚು ೧೬೮-೧೧-೦ ಜುಂಲಾ ೧೨೧೫-೬-೯.

ಈ ಜಮಾಖರ್ಚನ್ನು ಪ್ಯಾಸ್ ಮಾಡಲಾಯಿತು.

ರುಸುಂಡಬ್ಬಿಬಾಬತು (೧) ಮ|| ರಾ|| ಕೋರಿ ವೀರಪ್ಪನವರು ಮತ್ತು ಮ|| ರಾ|| ಸುಬ್ಬರಾವ್‌ನಾಯಕರು ಇವರ ಮಂಡಿಯಿಂದ ೯-೪-೯ (೨) ಪಟ್ಟಣಶೆಟ್ಟಿ ವೀರಪ್ಪನವರಿಂದ ೦-೧೨-೩ (೩) ಮ|| ರಾ|| ಜಿ.ಎಂ. ಕಾಡಪ್ಪನವರಿಂದ ಚೌಲಪ್ರಸ್ಥದ ಬಾಬತು ೧-೦-೦ ಹೀಗೆ ಜುಂಲಾ ೧೧-೧-೦ ವಂದನಾಪೂರ್ವಕವಾಗಿ ಸ್ವೀಕರಿಸಲಾಯಿತು. (೪) ಕಮಿಟಿಯವರು ಈಗ ಪ್ರಾರಂಭಿಸಿರುವ ವಿದ್ಯಾರ್ಥಿನಿಲಯದ ಕಟ್ಟಡವು ಭಾರಿ ದೊಬಲಗಿನ ಕಟ್ಟಡವಾಗಿರುವದರಿಂದ ಹೆಡ್‌ಕ್ವಾರ್ಟರ್ ಬಿಲ್ಡಿಂಗ್ ಛಾರ್ಜನಲ್ಲಿರುವ ಮ|| ಲಕ್ಷ್ಮೀ ನಾರಾಯಣ ನಾಯಡುರವರನ್ನು ಸದರಿ ಕಟ್ಟಡದ ಕೆಲಸಗಳಮೇಲೆ ನಿಗಾ ನೋಡುವಬಗ್ಗೆ ದೊರಕಿಸಿಕೊಡಬೇಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರನ್ನು ಮತ್ತು ಎಕ್ಸಿಕ್ಯುಟಿವ್ ಇಂಜನಿಯರ್ ಸಾಹೇಬರನ್ನು ಕೇಳಿಕೊಳ್ಳಬೇಕಾಗಿಯೂ ಸದರಿ ನಾಯಡರಿಗೆ ಹಾಲಿ ಅವರಿಗೆ ಸಲ್ಲುತ್ತಿರುವ ಮಾಹೆಯಾನಾ ಸಂಬಳದ ಜತೆಗೆ ೫-೦-೦ ಅಲೋಯನ್ಸ್ ಕೊಡಬಹುದಾಗಿಯೂ, ಕಟ್ಟಡವು ಪೂರೈಸಿದ ನಂತರ ಸದರಿಯವರು ಕಮಿಟಿಯವರ ಮೆಚ್ಚಿಗೆಗೆ ಪಾತ್ರರಾದರೆ ಅವರಿಗೆ ತಕ್ಕ ಉಚಿತಾರ್ಥವನ್ನು ಸಹ ಕೊಡಬೇಕೆಂದು ನಿರ್ಧರಮಾಡಲ್ಪಟ್ಟಿತು. (೫) ಸದರಿ ನಿಲಯದ ಪ್ಲಾನ್ ಬದಲಾವಣೆ ವಿಷಯದಲ್ಲಿ ಸೂಕ್ತವಾದ ಸಲಹೆಗಳನ್ನು ಕೊಡುತ್ತಿರುವ ಮ|| ರಾ|| ಇಂಜನಿಯರ್ ಸಾಹೇಬರವರಿಗೆ ಸಂಘದವರ ವಂದನೆಗಳನ್ನು ತಿಳಿಸತಕ್ಕದ್ದು. (೬) ಮರಾಮತ್ ಸಬ್ ಇಂಜನಿಯರ್ ಮಿ|| ಕುಪ್ಪುರಾಯರವರಿಗೆ ಈ ನಿಲಯದ ಪ್ಲಾನ್ ಎಸ್ಟಿಮೇಟು ವಗೈರೆ ತಯಾರ್ಮಾಡಿದ್ದಕ್ಕಾಗಿಯೂ ಮತ್ತು ಆಗಾಗ್ಗೆ ಸದರಿಯವರು ಕೊಡುತ್ತಿರುವ ಸಲಹೆಗೂ ಸಂಘದವರ ವಂದನೆಗಳನ್ನು ತಿಳಿಸತಕ್ಕದ್ದು. (೭) ಹೊಸಮೆಂಬರುಗಳ ಚುನಾವಣೆ:—ಇಟ್ಟಿಗೆಹಳ್ಳಿ ತೋಟಪ್ಪಯ್ಯನವರು ೨ ಕೋರಿ ಅಡಿಕೆಪ್ಪಕೆಟ್ಟರು. (೮) ಚೆನ್ನಗಿರಿ ತಾ|| ಇಟ್ಟಿಗೆಗ್ರಾಮದ ಹೆಚ್. ರಾಮಪ್ಪ ಎಂಬ ವಿದ್ಯಾರ್ಥಿಗೆ ಫ್ರೀಸಿಪ್ಪಾಗಲೀ ಸ್ಕಾಲರ್ಶಿಪ್ಪಾಗಲೀ ದೊರೆಯಲಿಲ್ಲವಾದ್ದರಿಂದ ಸದರಿ ವಿದ್ಯಾರ್ಥಿಗೆ ಮಾಹೆಯಾನಾ ಸ್ಕೂಲ್ ಫೀಮಟ್ಟಿಗೆ ಅಂದರೆ ೦-೧೩-೦ ಯನ್ನು ಎಂಟುತಿಂಗಳವರೆಗೆ ಈ ಫಂಡಿನಿಂದ ಕೊಡತಕ್ಕದ್ದು. ಜಿ. ಎಂ. ಕಾಡಪ್ಪ ಚೇರ್ಮನ್.

ಅನುಕರಣೀಯವಾದ ಶಿವದೀಕ್ಷಾ ಮಹೋತ್ಸವ.

ಬೀರೂರಿನ ಉಜ್ಜಾಣಿ ಮಠದ ಎನ್. ಎಂ. ಶಿವಲಿಂಗಪ್ಪಯ್ಯನವರಿಗೆ ಮಗನೂ ಶ್ರೀಮಾನ್ ಪತ್ರಿ ಚೆಂ. ವೀರಪ್ಪಯ್ಯನವರಿಗೆ ಮೊಮ್ಮಗನೂ ಆದ ಶ್ರೀಕಂಠಯ್ಯನೆಂಬಾತನಿಗೆ ಶಿವದೀಕ್ಷಾ ಸಂಸ್ಕಾರವನ್ನು ನಡೆಯಿಸಬೇಕೆಂಬ ಉದ್ದೇಶದಿಂದ ಮೇಲೆಕಂಡ ದೊಡ್ಡ ಮನುಷ್ಯರಿಬ್ಬರೂ ತರೀಕೆರೆಯಲ್ಲಿದ್ದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸನ್ನಿಧಿಗೆ ಹೋಗಿ ಶ್ರೀ ಸನ್ನಿಧಿಯ ಸಮುಖದಲ್ಲಿಯೇ ಈ ಕಾರ್ಯವನ್ನು ಆಗಮಾಡಿಸಬೇಕೆಂಬ ತಮ್ಮ ಉದ್ದೇಶವನ್ನು ಬಿನ್ನಯಿಸಿ, ಶ್ರಾವಣ ಶು|| ೭ ಗುರುವಾರದ ದಿವಸ ಬೀರೂರಿನಲ್ಲಿ ನಡೆದ ದೀಕ್ಷಾ ಕಾಲಕ್ಕೆ ಸರಿಯಾಗಿ ಶ್ರೀ ಸ್ವಾಮಿಯು ಸಕಲ ಬಿರುದಾವಳಿಗಳಿಂದ ದಯಮಾಡಿಸಲು, ತಿಪಟೂರು ಆನಂದಾಶ್ರಮದ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ವಿರೂಪಾಕ್ಷಶಾಸ್ತ್ರಿಗಳ ಪೌರೋಹಿತ್ಯದಿಂದ ದೀಕ್ಷಾಸಂಸ್ಕಾರವು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು. ಫಲತಾಂಬೂಲ ದಕ್ಷಿಣಾಪ್ರದಾನಗಳಿಂದ ಗಣಾರಾಧನೆಯೂ ಅತ್ಯುದಾರವಾಗಿ ನಡೆಯಿಸಲ್ಪಟ್ಟಿತು. ಮರುದಿನ ಮಹಾ ಸನ್ನಿಧಾನದ ಸಂಮುಖದಲ್ಲಿ ನೆರೆದಿದ್ದ ಮಹಾಸಭೆಯಲ್ಲಿ ಶ್ರೀಗಳವರ ಅಪ್ಪಣೆಪ್ರಕಾರ ಅಜ್ಜಂಪುರದ ಹಿರೇಮಠದ ವೇ|| ಉಮಾಪತಿಶಾಸ್ತ್ರಿಗಳು ಶಿವದೀಕ್ಷೆಯನ್ನು ಗರ್ಭಾಷ್ಟಮದಲ್ಲೇ ನಡೆಯಿಸಬೇಕಾದ ಅವಶ್ಯಕತೆಯನ್ನೂ, ಅದರ ಫಲಾತಿಶಯವನ್ನೂ, ವಿವಾಹಕರ್ಮಕ್ಕಿಂತಲೂ ಶಿವದೀಕ್ಷೆಯನ್ನು ಅತ್ಯವಶ್ಯಕವಾಗಿ ನಡೆಯಿಸಬೇಕಾದುದನ್ನೂ, ಸಪ್ರಮಾಣವಾಗಿ ನಿರೂಪಿಸಿ, ಆ ಸಂಪ್ರದಾಯವನ್ನು ಅನೇಕರು ಪರಿತ್ಯಜಿಸಿ ಅನರ್ಥಭಾಜನರಾಗುತ್ತಿರುವುದನ್ನೂ ತಂತಮ್ಮ ಮನೆಗಳಲ್ಲೂ ಪವಿತ್ರಸ್ಥಾನಗಳಲ್ಲೂ ತಂತಮ್ಮ ಬಾಲಕರಿಗೆ ಶಿವದೀಕ್ಷೆಯನ್ನು ಮಾಡಿಸುವ ಸಂಪ್ರದಾಯವನ್ನು ಬಿಟ್ಟು ಊರವರಿಗೆ ಗುಂಪುಕಟ್ಟಿಕೊಂಡು ಹೋಗಿ ಅಲ್ಲಿ ಮಂತ್ರಲೋಪತಂತ್ರಲೋಪಾದಿಗಳಿಂದ ಸಂಸ್ಕಾರ ನಡೆಯಿಸುವ ದುಷ್ಪದ್ಧತಿಯ ದೋಷವನ್ನೂ ವಿವರಿಸಿ, ಪ್ರಶಸ್ತವಾದ ಉಪನ್ಯಾಸವನ್ನು ಮಾಡಿದರು. ಇದೇ ವಿಷಯವನ್ನು ಕುರಿತು ಶ್ರೀ ಮಹಾಸ್ವಾಮಿಯೂ ಸಭಿಕರ ಚಿತ್ತವೆಲ್ಲಾ ತಲ್ಲೀನವಾಗುವಂತೆ ಉಪನ್ಯಾಸಮಾಡಿದನಂತರ, ವೇ|| ಶಿವಲಿಂಗಪ್ಪಯ್ಯನವರು ತಮ್ಮ ಪುತ್ರನ ಶಿವದೀಕ್ಷಾ ಸಂಸ್ಕಾರದ ಸಾಫಲ್ಯಕ್ಕಾಗಿ ತಿಪಟೂರು ಶ್ರೀ ಜಗದ್ಗುರು ಜಯದೇವಾನಂದಾಶ್ರಮದ ವಿದ್ಯಾವರ್ಧಕ ಫಂಡಿಗೆ ೨೫ ರೂಗಳನ್ನೂ ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೆ ೫ ರೂಗಳನ್ನೂ, ಬೀರೂರು ಪಾಠಶಾಲೆಗೆ ೫ ರೂ.ಗಳನ್ನೂ, ಶ್ರೀ ಕಾಶೀಕ್ಷೇತ್ರದ ವಿಶ್ವಾರಾಧ್ಯ ಜಗದ್ಗುರು ವಿದ್ಯಾನಿಧಿಗೆ ೫ ರೂ.ಗಳನ್ನೂ, ಧರ್ಮಗ್ರಂಥ ಪ್ರಸಾರಕರಾದ ಶ್ರೀ. ಕೀರ್ತಿಮೂರ್ತಿ ವೀರಸಂಗಪ್ಪನವರ ಸ್ಮಾರಕನಿಧಿಗೆ ೨ ರೂ.ಗಳನ್ನೂ, ಶಿವಯೋಗಿಮಠದಲ್ಲದೆ ನೆರೆದಿದ್ದ ವೈದಿಕ ಮಂಡಲಿಗೆ ಶಾಲು ಜಟ್ಟವಸ್ತ್ರ ದಕ್ಷಿಣಾದಿಗಳನ್ನೂ ಸಭಾಸ್ತಾರರಿಗೆ ಗಂಧಪುಷ್ಪತಾಂಬೂಲಾದಿಗಳನ್ನೂ ಸಮರ್ಪಿಸಿದ ನಂತರ, ಶ್ರೀ ಜಗದ್ಗುರು ಮಹಾ ಸನ್ನಿಧಿಯಿಂದ ಧರ್ಮನಿಷ್ಠಾ ವಿದ್ಯಾಭ್ಯಾಸನ ವಿಷಯಕವಾದ ಗಂಭೀರೋಪನ್ಯಾಸವು ಕೊಡಲ್ಪಟ್ಟ ಕೂಡಲೇ ಅದರ ಶ್ರವಣದಿಂದ ಉದ್ಬೋಧಿತರಾದ ಬೀರೂರು ಪುರನಿವಾಸಿ ವೀರಶೈವ ಮಹಾಜನರೆಲ್ಲರೂ ಒಮ್ಮನಸ್ಸಿನಿಂದ ಇತರ ಸ್ಥಳಗಳಲ್ಲಿ ಸ್ಥಾಪಿಸಿರುವಂತೆ ಈ ಊರಿನಲ್ಲಿ ಒಂದು ವೀರಶೈವ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲು ಅನುಗ್ರಹಿಸಬೇಕೆಂದು ಪ್ರಾರ್ಥಿಸಲಾಗಿ, ಶ್ರೀ ಜಗದ್ಗುರುಗಳವರು ಧರ್ಮೋದ್ಧರಣೈಕ ಸಂಕಲ್ಪದಿಂದ ಪ್ರಕೃತದಲ್ಲಿ ಅದಕ್ಕಾಗಿ ೩ ಸಾವಿರ ರೂ.ಗಳನ್ನು ಅನುಗ್ರಹಿಸುವುದಾಗಿ ಆಶೀರ್ವದಿಸಿದರು. ಬಳಿಕ ಶ್ರೀಮಾನ್ ಪತ್ರಿ ಚೆಂ. ವೀರಪ್ಪಯ್ಯನವರು ತಾವು ೩ ಸಾವಿರ ರೂ.ಗಳನ್ನು ಕೊಡುವೆವೆಂದು ಅಭಿವಚನವನ್ನಿತ್ತರು. ಅನಂತರ ಪುರನಿವಾಸಿಗಳೆಲ್ಲಾ ೩ ಸಾವಿರ ರೂ.ಗಳನ್ನು ಚಂದಾ ಮೂಲಕ ಶೇಖರಿಸಿ ಅರ್ಪಿಸುವುದಾಗಿ ಬಿನ್ನಯಿಸಿದರು. ಬಳಿಕ ಈ ಕಾರ್ಯನಿರ್ವಾಹಕ್ಕಾಗಿ ಶ್ರೀ ಸನ್ನಿಧಿಯ ಅಪ್ಪಣೆಯಮೇರೆಗೆ ಒಂದು ಕಾರ್ಯನಿರ್ವಾಹಕ ಸಂಘವು ಏರ್ಪಟ್ಟು, ಅವರು ಈ ವಿಷಯವಾಗಿ ನಡೆಯಿಸಿದ ಪ್ರೊಸಿಡಿಂಗ್ಸನ್ನು ಸನ್ನಿಧಿಗೆ ಕೂಡಲೇ ಬಿನ್ನಯಿಸಿಕೊಳ್ಳತಕ್ಕದ್ದೆಂದು ನಿರ್ಧರಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ವೀರಶೈವ ಮಹಾಸಭೆಯೂ ಮಹಾಜನಗಳೂ.

ವೀರಶೈವ ಸಮಾಜದಂತೆ ಹಿಂದುಸ್ಥಾನದಲ್ಲಿ ಹಿಂದುಳಿದ ಅನೇಕ ಸಮಾಜಗಳು ಇರುವವಷ್ಟೆ. ಸಮಾಜದಲ್ಲಿಯ ಹೀನಾವಸ್ಥೆಯನ್ನು ದೂರಮಾಡಿ ಉನ್ನತಾವಸ್ಥೆಗೆ ತರುವುದು ಆಯಾ ಸಮಾಜದ ಅಗ್ರೇಸರರ ಕರ್ತವ್ಯವಾಗಿದೆ. ಇದಕ್ಕನುಸಾರವಾಗಿ ಪ್ರತಿಯೊಂದು ಸಮಾಜದ ಏಳಿಗೋಸ್ಕರ ಯೋಗ್ಯ ಪ್ರಯತ್ನಗಳು ನಡೆದಿರುವುದನ್ನು ನಾವು ನೋಡುತ್ತೇವೆ. ಜೈನ, ಪ್ರಭು, ಕಾಯಸ್ಥ, ಮುಸಲ್ಮಾನರೇ ಮೊದಲಾದ ನಮ್ಮ ಎಡಬಲದ ಬಾಂಧವರು ತಮ್ಮ ತಮ್ಮ ಸಮಾಜದ ಪುನರುಜ್ಜೀವನೆಯ ಕಾರ್ಯವನ್ನು ಪ್ರಾರಂಭಿಸಿ ಅವ್ಯಾಹತವಾಗಿ ಪ್ರಯತ್ನ ನಡೆಸಿರುತ್ತಾರೆ. ಕೆಲವು ವಿಷಯಗಳಲ್ಲಿ ತಮ್ಮ ಪ್ರಯತ್ನಗಳ ಫಲವನ್ನೂ ಕೂಡ ಹೊಂದುತ್ತಿದ್ದಾರೆ. ಈ ಪ್ರಕಾರ ನಮ್ಮ ಬಾಂಧವರು ತಮ್ಮ ತಮ್ಮ ಸಮಾಜದ ಉನ್ನತಿಗಾಗಿ ಸಂಪೂರ್ಣ ತೊಡಗಿರುವಾಗ ನಮ್ಮ ವೀರಶೈವ ಸಮಾಜವು ಯಾವ ಸ್ಥಿತಿಯಲ್ಲಿರುವದೆಂಬದನ್ನು ನೋಡೋಣ. ದಯಾಳು ಬ್ರಿಟಿಷ್ ಅಧಿಕಾರದ ಕೆಳಗೆ ಪಾಶ್ಚಿಮಾತ್ಯ ಶಿಕ್ಷಣದ ಲಾಭವು ದೊರಕಲಾರಂಭವಾದಂದಿನಿಂದ ಎಲ್ಲರಂತೆ ನಮ್ಮ ಜನರೂ ಸಹ ಕಣ್ಣು ತೆಗೆದು ನೋಡಹತ್ತಿದರು. ಶಿಕ್ಷಣ ಪ್ರಸಾರಕ್ಕಾಗಿ ೩೦ ವರ್ಷಗಳ ಪೂರ್ವದಲ್ಲಿಯೇ ಧನಸಂಚಯಮಾಡಿಟ್ಟರು. ಆದರೆ ಶಿಕ್ಷಣಪ್ರಸಾರವೊಂದರಿಂದಲೇ ಸಮಾಜವು ಸುಸ್ಥಿತಿಗೆ ಬರಲಾರದು. ನೈತಿಕ, ಧಾರ್ಮಿಕ, ಸಾಮಾಜಿಕ, ಸಾಂಪತ್ತಿಕ ಮೊದಲಾದ ಅನೇಕ ವಿಷಯಗಳ ಕಡೆಗೆ ಸಂಪೂರ್ಣ ಲಕ್ಷ್ಯಕೊಡದವರ ಸಮಾಜವು ಉನ್ನತಿಯ ಶಿಖರವನ್ನು ಏರಲಾರದು. ಮತ್ತು ಇಂಥ ಕಠಿಣತರವಾದ ಕಾರ್ಯದಲ್ಲಿ ಒಬ್ಬಿಬ್ಬರ ಪ್ರಯತ್ನಗಳಿಂದ ಏನೂ ಪ್ರಯೋಜನವಾಗಲಾರದು. ಈ ಮಹತ್ತರ ಕಾರ್ಯಕ್ಕೆ ಸಂಘಟಿತ ಪ್ರಯತ್ನಗಳು ಸತತವಾಗಿ ನಡೆಯಬೇಕಾಗುತ್ತವೆ. ಪಾಶ್ಚಾತ್ಯ ಶಿಕ್ಷಣದಿಂದ ಕಲಿತುಕೊಂಡ ಅನೇಕ ಸ್ತುತ್ಯ ವಿಚಾರಗಳಲ್ಲಿ ಇದೊಂದು ಮುಖ್ಯವಾದದ್ದಾಗಿದೆ. ಅದುದರಿಂದಲೇ ಜೈನಸಭೆ, ಪ್ರಭುಪರಿಷತ್ತು, ಮುಸ್ಲಿಂಲೀಗ್, ಮೊದಲಾದ ಸಭೆಗಳು ಜನ್ಮವೆತ್ತಿ ಆಯಾ ಸಮಾಜಗಳ ಉನ್ನತಿಗೋಸ್ಕರ ಯಥಾವತ್ ಪ್ರಯತ್ನಗಳನ್ನು ನಡೆಸಿರುತ್ತವೆ. ಇದನ್ನನುಸರಿಸಿಯೇ ನಮ್ಮ ಸಮಾಜದ ಪ್ರಮುಖಜನರು "ವೀರಶೈವಮಹಾಸಭೆ" ಯೆಂಬ ಸಂಸ್ಥೆಯನ್ನು ಸನ್ ೧೯೦೪ ನೆಯ ಇಸವಿಯಲ್ಲಿ ಅಸ್ತಿತ್ವದಲ್ಲಿ ತಂದರು. ಇದು ಮುಂದೆ ಕುಂಟುತ್ತ ಬೀಳುತ್ತ ಕೆಲವು ವರ್ಷಗಳವರೆಗೆ ನಡೆದು ತನ್ನ ೭ ನೆಯ ವರ್ಷದಲ್ಲಿ ಮಲಗಿತು. ಈ ೫ ವರ್ಷಗಳವರೆಗೆ ಗಾಢನಿದ್ರೆಯಲ್ಲಿರುವ ಮಹಾಸಭೆಯನ್ನು ಎಚ್ಚರಗೊಳಿಸಿ ಮುಂದೆ ತರುವ ಮಹಾಪುರುಷರು ಎಲ್ಲಿರುವರೋ ಯಾರುಬಲ್ಲರು? ಮಹಾಸಭೆಯ ಈ ದುರವಸ್ಥೆಗೆ ಅನೇಕ ಕಾರಣಗಳಿರಬಹುದು. ಅವುಗಳಲ್ಲಿ ಮುಖ್ಯವಾದುವುಗಳನ್ನು ಇಲ್ಲಿ ಹೇಳಿದರೆ ಅಪ್ರಾಸಂಗಿಕವಾಗಲಿಕ್ಕಿಲ್ಲ. ನಮ್ಮಲ್ಲಿಯ ಕೆಲವು ಕಾರ್ಯಶೀಲ ಧಾರ್ಮಿಕ ಗುರುಗಳ ಸಾಹಸಬಲದಿಂದ ಮೊದಲಿನ ಕೆಲವು ಸಭೆಗಳು ಸಾಂಗವಾಗಿ ನಡೆದವು. ತದನಂತರ ಭಿನ್ನಾಭಿಪ್ರಾಯದಿಂದಲೋ ಇನ್ನಾವಕಾರಣದಿಂದಲೋ, ಇವರು ಮಹಾಸಭೆಯಿಂದ ದೂರವಾಗಿ ನಿಂತುಕೊಂಡರು. ಅಂದಿನಿಂದಲೇ ಮಹಾಸಭೆಯ ಅರ್ಥತೇಜವು ಕುಂದಿತು. ಕೆಲವು ಕಾಲದಲ್ಲಿಯೇ ನಮ್ಮ ಇನ್ನುಳಿದ ಸಮಾಜದ ಮುಂದಾಳುಗಳ ಆಲಸ್ಯ ಉದಾಸೀನ ಭಾವಗಳಿಂದ ಸಭೆಯು ನೆಲಕ್ಕುರುಳಹತ್ತಿತು. ಇಂಥ ಸಮಯದಲ್ಲಿ "ಮಹಾಸಭೆಯಿಂದ ಪ್ರಯೋಜನವಿಲ್ಲ; ವ್ಯರ್ಥಾ ಧನವ್ಯಯವಾಗುತ್ತದೆ. ಇದೇ ಹಣವನ್ನು ಶಿಕ್ಷಣ ಮೊದಲಾದ ಕಾರ್ಯದಲ್ಲಿ ಉಪಯೋಗಿಸಿದರೆ ಹೆಚ್ಚು ಪ್ರಯೋಜನವಾದೀತು" ಎಂದು ಪೂರ್ವದಿಂದಲೇ ಕೂಗುತ್ತಿದ್ದ ಕೆಲವು ಸಮಾಜಹಿತಚಿಂತಕರಂತೂ ತಮ್ಮ ಪ್ರಹಾರಗಳನ್ನು ಹೆಚ್ಚಾಗಿ ಬಡಹತ್ತಿದರು. ಈ ಪ್ರಕಾರ ರೋಗಪೀಡಿತವಾದ ಮಹಾಸಭೆಯು ನೆಲಬಿಟ್ಟು ಏಳುವದಾದರೂ ಹೇಗೆ? ಆದರೆ ಈ ನಮ್ಮ ಮಹಾಸಭೆಯ ಹಿತಚಿಂತಕರೂ ನಿಂದಕರೂ ತಮ್ಮ ಸುತ್ತಲೂ ದೇಶದಲ್ಲಿ ಏನು ನಡೆದಿರುವುವೆಂಬದನ್ನು ಕಣ್ಣುತೆರೆದು ನೋಡುವಷ್ಟು ಅವಕಾಶವು ಇವರಿಗಿದ್ದಂತೆ ತೋರುವುದಿಲ್ಲ. ನಮ್ಮ ಸಮಾಜದವರ ಪೂರ್ವಪ್ರಯತ್ನಗಳನ್ನು ನೋಡಿ ಅನೇಕ ಸಮಾಜಗಳ ಜನರು ತಮ್ಮ ತಮ್ಮ ಸಮಾಜೋನ್ನತಿಯ ಕಾರ್ಯದಲ್ಲಿ ತೊಡಗಿ ನಮ್ಮ ಮುಂದೆ ಹೋಗಹತ್ತಿದ್ದಾರೆ. ಮುಸಲ್ಮಾನಬಂಧುಗಳದೊಂದೇ ದೃಷ್ಟಾಂತವು ಸಾಕಾಗಿದೆ. ನಮ್ಮ ಮಹಾಸಭೆಯು ಜನ್ಮವೆತ್ತಿದ ಕೆಲವು ಕಾಲಾನಂತರ "ಮುಸಿಂಲೀಗ" ವು ಸ್ಥಾಪಿಸಲ್ಪಟ್ಟಿತು. ಈಗ ಅವರು ಪ್ರಗತಿಯ ಪಥದಲ್ಲಿ ಎಷ್ಟುಮುಂದೆ ಹೋಗಿರುವರೆಂಬುದನ್ನು ನೋಡಿದರೆ ಪೂರ್ಣ ತಾರತಮ್ಯವು ತಿಳಿಯುವುದು. ಅಲ್ಲದೆ ಈ ಮಹಾ ಯುದ್ಧವು ಮುಗಿದನಂತರ ಎಲ್ಲಾ ರಾಷ್ಟ್ರಗಳಲ್ಲಿ ಬದಲಾವಣೆಗಳಾಗುವಂತೆ ಹಿಂದುಸ್ಥಾನದಲ್ಲಿಯೂ ಆಗುವವು. ಇದಕ್ಕೋಸ್ಕರವಾಗಿಯೇ ಹಿಂದುಸ್ಥಾನದ ಮಂತ್ರಿಗಳಾದ ಮಿ. ಮೊಂಟೆಗ್ಯೂ ಸಾಹೇಬರವರು ಇಲ್ಲಿಯ ಸಾಮಾಜಿಕ ಸಾಂಪತ್ತಿಕ ರಾಜಕೀಯ ಸ್ಥಿತಿಯನ್ನು ಸ್ವತಃ ನೋಡಿಕೊಂಡು ಹೋಗಲಿಕ್ಕೆ ಇಲ್ಲಿಗೆ ಈ ವರ್ಷಾಂತ್ಯದಲ್ಲಿಯೇ ಆಗಮಿಸುವವರಿದ್ದಾರೆ. ಇವರ ಆಗಮನದಿಂದ ಈ ದೇಶದಲ್ಲಿ ಇರತಕ್ಕ ಕೊಂಕೆಗಳು ಅದಷ್ಟು ದೂರಾಗಿ ಅನೇಕ ಬದಲಾವಣೆಗಳು ಆಗುವುದು ನಿಶ್ಚಯ. ಇಂಥ ಸುಸಮಯಗಳು ಬರುವುದೇ ಅಪರೂಪ. ಈಗ ಇಂಥಾ ಸಮಯವು ಬಂದಿರುವುದನ್ನು ನೋಡಿ ಈ ದೇಶದ ಪ್ರತಿಯೊಂದು ಭಾಗದಲ್ಲಿಯೂ ಇದರ ಯೋಗ್ಯ ಪ್ರಯೋಜನವನ್ನು ಹೊಂದುವುದಕ್ಕೆ ತಕ್ಕ ಪ್ರಯತ್ನಗಳು ನಡೆದಿರುವುದು ನಾವು ನೋಡುತ್ತೇವೆ. ಆದರೆ ನಮ್ಮ ಸಮಾಜದ ಮುಂದಾಳುಗಳು ಕುಂಭಕರ್ಣ ನಿದ್ರೆಯಲ್ಲಿರುವುದು ಶೋಚನೀಯ ವಿಷಯವಾಗಿದೆ. ಅಕಸ್ಮಾತ್ ಬಂದೊದಗಿದ ಇಂಥ ಸುಸಮಯವನ್ನು ಕಳೆದುಕೊಂಡು ಹಿಂದಿನಿಂದ ಚಿಂತಿಸಿ ಪ್ರಯೋಜನವಿಲ್ಲ. ಈ ವಿಷಯದಲ್ಲಿ ಹಿತೋಪದೇಶದಲ್ಲಿಯ ಚಿಕ್ಕದೊಂದು ಕಥೆಯೇನಂದರೆ ಈ ಜಗತ್ತನ್ನು ನಿರ್ಮಿಸಿದನಂತರ ಪರಮೇಶ್ವರನು ಬುದ್ಧಿಯನ್ನು ಹಂಚಿಕೊಡುತ್ತೇನೆಂದು ಎಲ್ಲಾ ಪ್ರಾಣಿಕೋಟಿಗೆ ಸ್ವತಃ ಬರುವುದಕ್ಕೆ ಹೇಳಿದನು. ಆಗ ಎಲ್ಲಾ ಪ್ರಾಣಿಗಳು ಪರಮೇಶ್ವರನಲ್ಲಿಗೆ ಹೋಗಿ ತಮ್ಮ ತಮ್ಮ ಪಾಲಿಗೆ ಬಂದ ಭಾಗವನ್ನು ತೆಗೆದುಕೊಂಡು ತಿರಿಗಿಬಂದವು. ಆದರೆ ಮೂರ್ಖಶಿರೋಮಣಿಯಾದ ಕತ್ತೆಯು ಪರಮೇಶ್ವರನಲ್ಲಿ ಆಕಾಲಕ್ಕೆ ಹೋಗದೆ ಎಲ್ಲಿಯೋ ಬಿದ್ದಿತ್ತು. ಅದ್ದರಿಂದ ಕತ್ತೆಯು ಕತ್ತೆ (ಮೂರ್ಖ) ಯಾಯಿತು; ಮತ್ತು ತನ್ನ ತಪ್ಪು ಹಿಂದಿನಿಂದ ತಿಳಿದಮೇಲೆ ಅದಕ್ಕಾಗಿ ಓಣಿ ಹಿಡಿದು ಒದರುತ್ತಾ ತಿರುಗಹತ್ತಿತು. ಈ ಕಥೆಯ ಕತ್ತೆಯ ಸ್ಥಿತಿಯು ಬರಬಾರದೆಂದು ಪ್ರಯತ್ನಿಸುತ್ತಿರುವ ನಮ್ಮ ಎಡಬಲದ ಸಮಾಜದವರನ್ನಾದರೂ ನೋಡಿ ನಮ್ಮ ಸಮಾಜದ ಮುಖಂಡರು ಆಲಸ್ಯವೆಂಬ ಕವಚವನ್ನು ತೆಗೆದಿಟ್ಟು ಕಾರ್ಯಕ್ಕೆ ಪ್ರವೃತ್ತರಾಗುವರೋ? ಅಥವಾ ಈಗಿನ ಇಮ್ಮ ಆಲಸ್ಯದ ದುಷ್ಫಲವನ್ನು ತಮ್ಮೊಂದಿಗೆ ತಮ್ಮ ಮುಂದಿನ ಸಂತತಿಯೂ ಅನುಭೋಗಿಸುವಂತೆ ನಡೆಯುವರೋ? ಒಬ್ಬ ವೀರಶೈವ.

ಸಂಸ್ಕೃತ ಶಾಲಾರಂಭವು.

ಶ್ರೀಮನ್ ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಸ್ವಾಮಿಗಳವರ ಶಾಖಾಮಠವಾದ ಹಾವೇರಿಯಲ್ಲಿರುವ ಹೊಸಮಠದಲ್ಲಿ ಸದರಿ ಜಗದ್ಗುರುಗಳವರ ಅಪ್ಪಣೆಯಮೇರೆ ಸಂಸ್ಕೃತಪಾಠಶಾಲೆಯು ತಾ|| ೩೦—೭—೧೯೧೭ ನೆಯ ಸೋಮವಾರ ದಿವಸ ಪ್ರಾರಂಭಿಸಲ್ಪಟ್ಟಿತು. ವೇ|| ವಂಟಮುರಿ ಚನ್ನಬಸವಶಾಸ್ತ್ರಿಗಳೇ ಅಧ್ಯಾಪಕರಾಗಿದ್ದಾರೆ. ಸಾಹಿತ್ಯ ಓದಪೇಕ್ಷೆಯುಳ್ಳ ವೀರಮಾಹೇಶ್ವರ ವಿದ್ಯಾರ್ಥಿಗಳು ಕೂಡಲೇ ಬರಬೇಕು. ವಿದ್ಯಾರ್ಥಿಗಳು ಭರ್ತಿಯಾದಮೇಲೆ ಪಾಠಶಾಲೆಯಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಸೆಕ್ರಟರಿ.

2 ಗೋಲಪ್ಪ ಹಳಕೊಪ್ಪದ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲಿಗರೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರ ಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವೇದ, ಶಾಸ್ತ್ರ ಮತ್ತು ಚರಿತ್ರೆಗಳ ಆಧಾರದಿಂದ "ಕುರುಬರಜಾತಿ" ನಡಾವಳಿ, ಆಚಾರಗಳು, ಇವರಲ್ಲಿ ರಾಜ್ಯಧರ್ಮ ಸ್ಥಾಪಕರಾದ ಪೂರ್ವಿಕರ ಸಂಗತಿಗಳ ೧೯೨ ಪುಟದ ದೊಡ್ಡ ಪುಸ್ತಕ ಅಚ್ಚಾಗುತ್ತಲಿದೆ. ಈ ನವರಾತ್ರಿಯೊಳಗಾಗಿ ಬರುವ ಆರ್ಡರುಗಳಿಗೆ ಮಾತ್ರ ೧೨ ಆಣೆ! (ಹಾಸಲು ಬೇರೆ) ಮುಂದೆ ಹೆಚ್ಚಾಗುವದು.

3 ವಿಳಾಸ—ಎಂ. ಎನ್. ಲಿಂಗಪ್ಪ ಎಡಿಟರ್,
ಬೆಂಗಳೂರು ಸಿಟಿ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 6

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೭ ನೆಯ ಇಸವಿ ಅಕ್ಟೋಬರ್ ತಾ|| ೭ ರಿಂದ ೧೯೧೭ ನೆಯ ಅಕ್ಟೋಬರ್ ತಾ|| ೧೩ ರವರೆಗೆ ಸಲ್ಲುವ ಶಾಲಿವಾಹನಶಕ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ನಿಜಭಾದ್ರಪದ ಬ|| ಸಪ್ತಮಿಯಿಂದ ನಿಜಭಾದ್ರಪದ ಬ|| ತ್ರಯೋದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ತೇದಿ
7	ಭಾನು	ಸಪ್ತಮಿ	29-56	ಆರಿದ್ರಾ	54-30	22
8	ಸೋಮ	ಅಷ್ಟಮಿ	31-38	ಪುನರ್ವಸು	58-38	23
9	[1] ಮಂಗಳ	ನವಮಿ	34-36	ಪುಷ್ಯ	60	24
10	ಬುಧ	ದಶಮಿ	38-34	ಪುಷ್ಯ	3-52	25
11	[2] ಗುರು	ಏಕಾ	43-18	ಆಶ್ಲೇಷ	9-6	26
12	ಶುಕ್ರ	ದ್ವಾದ	48-35	ಮಖಾ	15-27	27
13	[3] ಶನಿ	ತ್ರಯೋ	54-0	ಪುಬ	22-0	28

(1) ಅವಿಧವಾನವಮೀ, ಹರಿಹರವ್ರತಂ. (2) ಸರ್ವೇಷ್ಯೇಕಾದಶೀ. (3) ಪ್ರದೋಷಃ, ಕಲಿಯುಗಾದಿಃ, ಪೆರಟಾಶಿ ಶನಿವಾರಂ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜ ನಕೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ...]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಅಕ್ಟೋಬರ್ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೪೨

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಕ್ಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಳೂರ, ಹಾವೇರಿ, ಹಾಳಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದ ನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರ್ವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದು ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದೆ ಕಾಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಸಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ,

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೋ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝುಂಡೆ ಹಚ್ಚಿದ ಅದ್ವಿತಿಯ ಶಂಭುವಿನ ಅವತಾರಿಯಾದ "ಶ್ರೀ ಕಲ್ಯಾಣ ಬಸವೇಶ್ವರದೇವರ" ಅಂಬಿ ಮೇಲೆ ತೆಗೆದಿದ್ದು ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅದ್ಯಕರ್ತವ್ಯ ಅದೆ ಫುಲ್‌ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕೈ ಬಣ್ಣದ್ದು ರೂ. ೧ ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುತ್ತದೆ. ಫುಲ್‌ಸೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸೈಜು ರೂ. ೦-೮-೦ ಮೇಲೆ ಕೈ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೊಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೇ ಫು|| ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ಆಣೆ ೮ ಮೇಲೆ ಕೈ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೊಟೊ ಬೇರೆ ಬೇರೆ ಸಿಕ್ಕುತ್ತವೆ.

ಪುರವುರಿಗೇ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಜಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪೆನಿ,
2 ಸೊಲ್ಲಾಪುರ ಸಿಟಿ.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

48 ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚುಬರೋಣ ಚಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು. ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ವಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವುವು. ಅಂಚೆ ವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧ ಗುಣಾದರ್ಶ ಪುಸ್ತಕ ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ತಿಪ್ಪೂರು, ಬೆಳಗಾಂ ಡಿಸ್ಟ್ರಿಕ್ಟ್.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಆರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ. ಶಾಸ್ತ್ರಾಧಾರದಿಂದಲೂ



ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ಸೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದರೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಶಿರಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇಷ್ಟಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ಸಡಶೂಲಿ, ವಾತಶೂಲಿ, ರಕ್ತಪಿತ್ಥ, ಗುದ್ದವ್ಯನ ಬೇನೆ, ಹುರುಕು ಕಜ್ಜ, ಗಜಕರ್ಣ, ದದ್ದು ಇಸಬು, ಘಾಯವ್ರಣ, ಹಾರುಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡಕಪಂಬು, ಸಣ್ಣಕೂಸುಗಳ ಬಾಲಗ್ರಹ, ಅಡಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೬) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಕೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ. ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇವಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಟಿತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
32 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾತ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಕಥಾಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಖಾವಳಿ ೬ ಆಣೆ; ಶಿವಾಷ್ಟಕ ೨ ಆಣೆ; ಶಂಕರಲಿಂಗಶಂಡಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೧೭ ನೆ ಇಸವಿಯ ಅಕ್ಟೋಬರ್ ತಾ|| ೨೧ನೆಯ ಭಾನುವಾರ.

ನವರಾತ್ರಿ ಮಹೋತ್ಸವ.

ರಾಜಧಾನಿಯಲ್ಲಿ ಕಳೆದ ಬುಧವಾರದಿಂದ ಈ ಉತ್ಸವಗಳು ಆರಂಭಗೊಂಡುವು. ಅರಮನೆಯ ಸಜ್ಜೆಯ ಸಭಾಮಂಟಪವು ಆ ದಿನ ಬೆಳಗಿನ ೮ ಗಂಟೆಯೊಳಗಾಗಿ ರಾಜಬಂಧುವರ್ಗದವರು, ಮಂತ್ರಿವರ್ಯರೇ ಮೊದಲಾದ ಅಧಿಕಾರಿಗಳು, ವೈದಿಕರು, ಶೆಟ್ಟಿ ವರ್ತಕರೇ ಮೊದಲಾದ ಪ್ರಜಾಪ್ರಮುಖರು ಇವರುಗಳಿಂದೆಲ್ಲಾ ಸುಶೋಭಿತವಾಗಿರುವಲ್ಲಿ, ಶ್ರೀಮನ್ಮಹಾರಾಜರವರು ದೇದೀಪ್ಯಮಾನಗಳಾದ ವಸ್ತ್ರಾಭರಣಗಳಿಂದ ವಿಭೂಷಿತರಾಗಿ, ತಮ್ಮ ಸಹೋದರರೊಡನೆ ಕೂಡಿ ಸಭಾಮಂಟಪವನ್ನು ಪ್ರವೇಶಿಸಿ, ಸಭಿಕರ ಪ್ರತ್ಯುತ್ಥಾನಗಳನ್ನೂ, ವಂದಿಮಾಗಧರ ಪರಾಕುಗಳನ್ನೂ ಗಮನಿಸುತ್ತ, ಚಿರಾಗತವಾಗಿಯೂ ಈ ತಮ್ಮ ಕಾಲದಲ್ಲಿ ವಿಚಿತ್ರತರವಾದ ಸಣ್ಣಗೆಲಸದಿಂದ ಕೂಡಿದ ಭಂಗಾರದ ತಗಡಿನ ಹೊದ್ದಿಕೆಯಿಂದ ಅತ್ಯಂತ ತೇಜೋವತ್ತಾಗಿ ಮಾಡಲ್ಪಟ್ಟೂ ಇರುವ ಸಿಂಹಪೀಠವನ್ನು ವಿಧಿವತ್ತಾಗಿ ಆರಾಧಿಸಿ, ತುಲಾಲಗ್ನದ ಸುಮುಹೂರ್ತದಲ್ಲಿ ಆರೋಹಣವನ್ನು ಮಾಡಿದರು. ಸಕಲವಿಧದ ವಾದ್ಯಗಳೂ ಭೋರ್ಗರೆದುವು. ಸೇನಾವಿತತಿಯೆಲ್ಲವೂ ಮರ್ಯಾದಿಸಿತು. ೨೧ ಗುಂಡುಗಳು ಹಾರಿಸಲ್ಪಟ್ಟುವು. ಪಟ್ಟದಾನೆಕುದುರೆಗಳು ಕೆರೆಗೆ ಉತ್ಸವಪೂರ್ವಕವಾಗಿ ಅರಮನೆಯಿಂದ ಸಕಲ ಬಿರುದಾವಳಿಗಳೊಡನೆ ಹೊರಟುವು. ಶ್ರೀಮನ್ಮಹಾರಾಜರವರಿಗೆ ದಿವಾನರೂ, ಖಾಸಾ ಅಳಿಯಂದಿರೂ, ಕೌನ್ಸಿಲರುಗಳೂ, ಇತರ ರಾಜಬಂಧುಗಳೂ ಮುಖ್ಯಾಧಿಕಾರಿಗಳೂ ನಜರನ್ನು ಒಪ್ಪಿಸಿದರು. ವೈದಿಕರ ಫಲಮಂತ್ರಾಕ್ಷತೆಗಳ ಅರ್ಪಣವಾಯಿತು. ಕೆಳಗೆ ಕೆಮ್ಮಣ್ಣು ಮಟ್ಟಿಯಲ್ಲಿ ನಿಂತಿದ್ದ ಸಿಪಾಯಿಗಳು ಸುರೂಟನ್ನು ಮಾಡಿದರು. ಕೆರೆಯಿಂದ ಪಟ್ಟದಾನೆಕುದುರೆಗಳು ಹಿಂದಿರುಗಿ ಅರಮನೆಗೆ ಬಂದಬಳಿಕ ಶ್ರೀಮದ್ಯುವರಾಜರು ಮೊದಲಾದ ಸಭಿಕರಿಗೆಲ್ಲಾ ಪುಷ್ಪಹಾರ ತಾಂಬೂಲಾದಿಗಳು ಕೊಡಲ್ಪಟ್ಟುವು. ಬಳಿಕ ಸಭಾಂಗಣವು ರಾಣೀವಾಸದವರ ಪ್ರವೇಶಕ್ಕೆ ಅರ್ಹವಾಗಿ ಮಾಡಲ್ಪಟ್ಟಬಳಿಕ ಅವರುಗಳ ನಜರುಗಳು ನಡೆದುವು. ಅರಮನೆಯ ಮುಂದಣ ವಿಶಾಲವಾದ ಬಯಲಿನಲ್ಲಿ ಪುರಜನರೂ ಹೊರಗಣಿಂದ ಬಂದಿದ್ದ ಜನರೂ ಕಿಕ್ಕಿರಿದು ನಿಂತಿದ್ದು, ಈ ಉತ್ಸವಗಳನ್ನೆಲ್ಲಾ ಅವಲೋಕಿಸಿ, ಶ್ರೀಮನ್ಮಹಾರಾಜರವರು ಇಂಥ ಉತ್ಸವಗಳನ್ನು ಬಹುಕಾಲ ಅನುಭವಿಸುತ್ತ ರಾಜ್ಯವನ್ನು ಕಾಪಾಡಿಕೊಂಡಿರಲೆಂದು ಕೋರುತ್ತ ಸಕಲ ವಾದ್ಯಘೋಷಗಳೊಡನೆ ಜಯಜಯಕಾರಗಳನ್ನು ಮಾಡಿದರು. ಅಂದಿನ ಬೆಳಗಣ ದರ್ಬಾರಿನ ಕಾರ್ಯಗಳೆಲ್ಲವೂ ೧೦ ಗಂಟೆಯೊಳಗಾಗಿ ಮುಗಿದುವು. ಆ ದಿನ ಸಾಯಂಕಾಲ ೭ ಗಂಟೆಗೆ ಜ್ಯೋತಿರ್ಮಂದಿರವೋ ನಕ್ಷತ್ರಮಾಲೆಯಿಂ ವಿರಾಜಿತವಾದ ಮೇರುಶಿಖರವೋ ಎಂಬಂತೆ ಅದ್ಭುತವಾಗಿ ಅಗಣಿತ ವಿದ್ಯುಚ್ಛಕ್ತಿ ದೀಪಾವಳಿಗಳಿಂದ ಕಣ್ಣಿಗೆ ಹಬ್ಬವಾಗಿ ವಿರಾಜಿಸುತ್ತಿದ್ದ ರಾಜಮಂದಿರದ ಮುಂಗಡೆಯಲ್ಲಿ ಸಕಲ ಸೈನ್ಯವೂ ಪ್ರೇಕ್ಷಕಸ್ತೋಮವೂ ತುಂಬಿರಲಾಗಿ, ಸಭಾಂಗಣದ ಅಸಂಖ್ಯಾತ ವಿದ್ಯುಲ್ಲತಾತೇಜಸ್ಸಿನಿಂದ ಅತಿಶಯವಾಗಿ ಥಳಥಳಿಸುತ್ತಿದ್ದ ಸಿಂಹವಿಷ್ಟರವನ್ನು ಯಥಾಪ್ರಕಾರ ಶ್ರೀಮನ್ಮಹಾರಾಜರವರು ಅಲಂಕರಿಸಲಾಗಿ, ವಾದ್ಯಗಳು ಭೋರ್ಗರೆದು ನಿಂತಕೂಡಲೇ ಜಟ್ಟಿಕಾಳಗ ಮೊದಲಾದುವುಗಳೂ, ಸೈನಿಕರ ಅಂಗಸಾಧನಗಳೂ, ಆನೆ ಕುದುರೆಗಳು ಕೆರೆಗೆ ಹೋಗಿ ಬರುವುದೂ, ದೀವಟಿಗೆಯ ಸಲಾಮುಗಳೂ, ಸಭಿಕರ ನಜರುಮುಜುರೆಗಳೂ, ಹಾರ ತಾಂಬೂಲ ವಿನಿಯೋಗವೂ, ಬಾಣಗಾರಿಕೆಯೂ ನಡೆದಬಳಿಕ ರಾತ್ರಿ ೮|| ಗಂಟೆಗೆ ದರ್ಬಾರು ಮುಗಿದಿತು. ಈಗ ಪ್ರತಿದಿನ ಸಾಯಂಕಾಲವೂ ಹೀಗೆಯೇ ದರ್ಬಾರುಗಳು ನಡೆಯುತ್ತಿವೆ. ಬರುವ ತಾ|| ೨೪ ನೆಯ ದಿವಸ ಸಾಯಂಕಾಲ ರೆಸಿಡೆಂಟರವರೇ ಮೊದಲಾದ ಯೂರೋಪ್ಯ ಜನಗಳಿಂದ ಕೂಡಿದ ದರ್ಬಾರು ನಡೆಯುತ್ತದೆ. ಅದರ ಮರುದಿನ ಗುರುವಾರ ಬೆಳಗ್ಗೆ ಬನ್ನಿಮಂಟಪಕ್ಕೆ ಪಟ್ಟದಾನೆ ಕುದುರೆಗಳೂ ಆಯುಧಗಳೂ ಸಕಲ ಮರ್ಯಾದೆಯೊಡನೆ ಉತ್ಸವಪೂರ್ವಕವಾಗಿ ಹೋಗುವುವು. ೪ ಗಂಟೆಗೆ ಶ್ರೀಮನ್ಮಹಾರಾಜರವರ ಜಂಬೂಸವಾರಿಯು ಚಿತ್ತೈಸುವುದು. ಅಲ್ಲಿಂದ ಮರಳಿ ಬಂದಬಳಿಕ ಮೂರು ದಿನಗಳವರೆಗೆ ರಾತ್ರಿಯಹೊತ್ತು ಅಂಬಾವಿಲಾಸದಲ್ಲಿ ದರ್ಬಾರೂ ನಜರು ಮುಜುರೆಗಳೂ ನಡೆಯುವುವು.

ಆಳುವ ನಮ್ಮ ಮಹಾಸ್ವಾಮಿಯವರ ರಾಜಪರಿಪಾಲನಕ್ರಮದ ಅಂತರ್ಯವು ಸರ್ವಪ್ರಜಾರಂಜಕವಾಗಿ, ಅವರಲ್ಲಿ ಸಕಲ ಪ್ರಜೆಗಳಿಗೂ ಪ್ರತ್ಯಕ್ಷ ದೇವತಾಬುದ್ಧಿಯನ್ನು ಹೇಗೆ ರೂಢಮೂಲಗೊಳಿಸಿರುವುದೋ ಅದರಂತೆಯೇ ಅದರ ವಾರ್ಷಿಕೋತ್ಸವ ಬಹಿರ್ವೈಭವಗಳೂ ಕೂಡ ಸಕಲ ಪ್ರಜೆಗಳಿಗೂ ನೇತ್ರಾನಂದವನ್ನು ಉಂಟುಮಾಡುತ್ತಿರುವುವು. ಇಂಥ ಧರ್ಮಸ್ವರೂಪ ಪುತ್ರರತ್ನವನ್ನು ಪಡೆದಿರುವ ಮಹಾಮಾತೃಶ್ರೀಯವರ ಸುಕೃತವಿಶೇಷವೂ, ಇಂಥ ಮಹಾಭಾಗರನ್ನು ಪ್ರಭುಗಳನ್ನಾಗಿ ಪಡೆದಿರುವ ಮೈಸೂರು ಪ್ರಜೆಗಳ ಪುಣ್ಯವಿಶೇಷವೂ ಕೂಡ ನಿರತಿಶಯವಾದುವುಗಳಲ್ಲವೆ? ಜಗದಂಬೆಯಾದ ಶ್ರೀ ಚಾಮುಂಡೇಶ್ವರಿಯು ಶ್ರೀಮನ್ಮಹಾರಾಜರವರಿಗೂ ಅವರ ಬಲಭುಜದಂತಿರುವ ಶ್ರೀಮದ್ಯುವರಾಜರವರಿಗೂ ಸಹ ದೀರ್ಘಾಯುರಾರೋಗ್ಯಗಳನ್ನಿತ್ತು, ಅವರುಗಳಮೂಲಕ ಮೈಸೂರು ದೇಶದ ಸುಖಸಂಪದ್ವೈಭವಗಳು ಇತೋಪ್ಯತಿಶಯವಾಗಿ ಅಭಿವೃದ್ಧಿಗೊಳ್ಳು[illegible] ಕೋರುವೆವು.

ಪರಸ್ಪರ ಸಹಾಯಕಸಂಘಗಳ ೭ ನೆಯ ವಾರ್ಷಿಕ ಮಹಾಸಭೆ.

ಈ ಸಭೆಯು ರಾಜಧಾನಿಯ ಟೌನ್ ಹಾಲಿನಲ್ಲಿ ಕಳೆದ ತಾ|| ೧೮ ನೆ ಗುರುವಾರ ಶ್ರೀಮದ್ಯುವರಾಜರವರಿಂದ ಆರಂಭಿಸಲ್ಪಟ್ಟಿತು. ಸಂಸ್ಥಾನದ ದಿವಾನರು ಕೌನ್ಸಿಲರುಗಳು ಮೊದಲಾದ ಅಧಿಕಾರಿಗಳೂ, ಸಂಸ್ಥಾನದ ಎಲ್ಲ ಪರಸ್ಪರ ಸಹಾಯಕಸಂಘಗಳ ಪ್ರತಿನಿಧಿಗಳಾಗಿ ಬಹುಶಃ ೧೮೦ ಮಂದಿಗಳೂ, ರಾಜಧಾನಿಯ ಪುರಪ್ರಮುಖರುಗಳು ಮೊದಲಾದ ಸಾವಿರಾರು ಮಂದಿಗಳೂ ಸಭೆಯನ್ನಲಂಕರಿಸಿದ್ದರು. ಪ್ರಥಮತಃ ಮ|| ಸಾ|| ವರ್ಧಮಾನಯ್ಯನವರು ಪ್ರತಿನಿಧಿಗಳ ಪಕ್ಷದಿಂದ ಶ್ರೀಮದ್ಯುವರಾಜರನ್ನು ಕುರಿತು ಒಂದು ವಿಜ್ಞಾಪನಪತ್ರವನ್ನೋದಿ ಅರ್ಪಿಸಿದರು. ಅದರಲ್ಲಿ ಆದಿಯಿಂದಲೂ ಈ ಸಂಘಗಳ ಅಭಿವೃದ್ಧಿವಿಷಯದಲ್ಲಿ ಶ್ರೀಯವರು ತೋರಿಸುತ್ತಿರುವ ಅಭಿಮಾನಕ್ಕಾಗಿ ಸಂಘಗಳವರ ಕೃತಜ್ಞತೆಯನ್ನು ತಿಳಿಯಿಸಿ, ಸಂಘಗಳ ಅಭಿವೃದ್ಧಿಸ್ಥಿತಿಯನ್ನೂ, ಅವುಗಳ ಪ್ರಯತ್ನವು ಸರಿಯಾಗಿ ಫಲಕಾರಿಯಾಗದಿರುವುದಕ್ಕೆ ತಕ್ಕಷ್ಟು ಬಂಡವಾಳವಿಲ್ಲದಿರುವುದರಿಂದ ಈಗಣ ರಿಜಿಸ್ಟ್ರಾರರಾದ ಮ|| ಚಾಂಡಿಯವರು ಆಲೋಪದ ನಿವಾರಣೆಗಾಗಿ ಮುಖ್ಯಸಂಘವೊಂದನ್ನು ಕಲ್ಪಿಸುವುದರಲ್ಲಿ ಪ್ರಯತ್ನಿಸಿದ್ದಾರೆಂದು ವಿವರಿಸಿ, ಇದುವರೆಗೆ ಈ ಸಂಘಗಳ ರಿಜಿಸ್ಟ್ರಾರರಾಗಿದ್ದು ಸಂಘಗಳ ಪುರೋವೃದ್ಧಿಗಾಗಿ ವಿಶೇಷಾದರವನ್ನು ವಹಿಸಿದ್ದ ಮ|| ಎಂ. ಎ. ನಾರಣಯ್ಯಂಗಾರರ ವಿಷಯದಲ್ಲಿ ಸಂಘಗಳವರ ಕೃತಜ್ಞತೆಯನ್ನು ನಿವೇದಿಸಿ, ಈ ಸಮ್ಮೇಳನವನ್ನು ಈ ಸಲವೂ ಆರಂಭಿಸುವುದಕ್ಕಾಗಿ ಶ್ರೀಯವರು ಒಪ್ಪಿಗೆಕೊಟ್ಟು ದಯಮಾಡಿಸಿದುದಕ್ಕಾಗಿ ಸಂಘಗಳ ಪಕ್ಷವಾದ ವಂದನೆಗಳನ್ನು ಅರ್ಪಿಸಿರುವ ವಿಷಯಗಳು ಹೇಳಲ್ಪಟ್ಟಿದ್ದುವು. ಅನಂತರ ಶ್ರೀಮದ್ಯುವರಾಜರವರು ತಮ್ಮ ಭಾಷಣವನ್ನು ಮಾಡಿದರು. ಅದರಲ್ಲಿ—ಸಂಸ್ಥಾನದಲ್ಲಿರುವ ಪರಸ್ಪರ ಸಹಾಯಸಂಘಗಳ ಸಂಖ್ಯೆಯು ೧೦೦೦ ಕ್ಕೂ, ಮೆಂಬರುಗಳ ಸಂಖ್ಯೆಯು ೭೫ ಸಾವಿರಕ್ಕೂ, ಬಂಡವಾಳವು 5764000 ರೂ.ಗಳಿಗೂ ಹೆಚ್ಚಿರುವುದರಿಂದ, ಅದರಜತೆಗೆ ಹೆಚ್ಚಿರುವ ಕಾರ್ಯಭಾರಗಳ ಲೋಪಾಲೋಪಗಳನ್ನು ಕುರಿತು ಚರ್ಚಿಸುವುದಕ್ಕೆ ಇಂಥ ವಾರ್ಷಿಕಸಮ್ಮೇಳನಗಳನ್ನು ತಪ್ಪದೆ ನಡೆಯಿಸುತ್ತಾ ಬರಬೇಕೆಂತಲೂ, ಮಿ|| ಚಾಂಡಿಯವರು ಬಂಡವಾಳದ ಸಮೃದ್ಧಿಗಾಗಿ ಮಾಡಿರುವ ಪ್ರಯತ್ನವು ಸಫಲವಾಗಬೇಕೆಂತಲೂ, ಅವರ ಕಾಲದಲ್ಲಿ ಈ ಸಂಘಗಳ ಕಾರ್ಯವು ಇನ್ನಷ್ಟು ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲವೆಂತಲೂ, ಮುಖ್ಯವಾಗಿ ಪರಸ್ಪರ ಸಹಾಯ ಸಂಘಗಳು ಹಿಂದುಳಿದ ಜನರ ಪುರೋವೃದ್ಧಿಗೆ ವಿಶೇಷವಾಗಿ ಗಮನಿಸಬೇಕೆಂತಲೂ, ಲೇವಾದೇವಿಯೊಂದೇ ಅಲ್ಲದೆ ಕೃಷಿ ಕೈಗಾರಿಕೆ ಮೊದಲಾದುವುಗಳ ಏಳ್ಗೆಗೆ ಈ ಸಂಘಗಳು ವಿಶೇಷ ಪ್ರಯತ್ನವನ್ನು ಮಾಡಬೇಕಾಗಿದೆಯೆಂತಲೂ, ಸಂಘಗಳ ಮುಖಂಡರಾದ ಕೆಲವರಿಗೆ ದೊಡ್ಡದೊಡ್ಡದಾಗಿ ಸಾಲಗಳನ್ನು ಕೊಡುವುದಕ್ಕಿಂತಲೂ ಹೆಚ್ಚು ಜನರಿಗೆ ಸಣ್ಣಸಣ್ಣನಾದ ಸಾಲಗಳನ್ನು ವಿಶೇಷವಾಗಿ ಕೊಡುವುದು ಫಲಕಾರಿಯಾದುದೆಂತಲೂ, ಮೊದಲಾಗಿ ಹೇಳಿ, ಇದುವರೆಗೆ ಮ|| ಎಂ. ಎ. ನಾರಾಯಣಯ್ಯಂಗಾರರು ಈ ಸಂಘಗಳ ಏಳ್ಗೆಗೆ ಮಾಡಿದ ಮುತುವರ್ಜಿಯನ್ನು ಶ್ಲಾಘಿಸಿ, ಮುಂದೆಯೂ ಮ|| ಚಾಂಡಿಯವರ ಕಾಲದಲ್ಲಿ ಏಳ್ಗೆಯೊಂದುವುದರಲ್ಲಿ ಸಂಶಯವಿಲ್ಲವೆಂದು ಅಪ್ಪಣೆಕೊಡಿಸಿದರು.

ಬಳಿಕ ರಾ|| ಬ|| ಶ್ಯಾಮರಾಯರವರು ಅಧ್ಯಕ್ಷತೆಯನ್ನು ವಹಿಸಿ, ಉಪದೇಶಪರವಾದ ಭಾಷಣವನ್ನು ಮಾಡಿದರು. ಇನ್ನೂ ಒಬ್ಬಿಬ್ಬರ ಭಾಷಣಗಳಾದ ಬಳಿಕ ಶ್ರೀಮದ್ಯುವರಾಜರು ದಿವಾನರು ಮೊದಲಾದವರಿಗೆಲ್ಲಾ ಪುಷ್ಪಹಾರ ಗುಚ್ಛ ತಾಂಬೂಲಾದಿಗಳು ಸಮರ್ಪಿಸಲ್ಪಟ್ಟುವು. ಶ್ರೀಮನ್ಮಹಾರಾಜ ಸಹೋದರರುಗಳು ಪರಸ್ಪರ ಸಹಾಯಕಸಂಘಗಳ ವಿಷಯವಾಗಿ ಮಾಡುತ್ತಿರುವ ಪ್ರೋತ್ಸಾಹಕ್ಕಾಗಿ ಸಭಾಪರವಾದ ವಂದನೆಗಳು ಮ|| ಅಣ್ಣಾಯ್ಯಪಂಡಿತರೇ ಮೊದಲಾದ ಕೆಲವರಿಂದ ತಿಳಿಯಿಸಲ್ಪಟ್ಟುವು. ಮೊನ್ನೆ ನಿನ್ನೆಯದಿನಗಳಲ್ಲಿ ಸಭಿಕರು ಸಂಘಗಳಿಗೆ ಸಂಬಂಧಪಟ್ಟ ವಿಷಯಗಳ ಚರ್ಚೆಗಳನ್ನು ಮಾಡಿ ಕೆಲ ತೀರ್ಮಾನಗಳನ್ನು ಮಾಡಿದರು.

ಒಳದೇಶದ ವೃತ್ತಾಂತಗಳು.

ಬರುವ ತಾ|| ೨೭ ರಲ್ಲಿ ಪ್ರಜಾಪ್ರತಿನಿಧಿಸಭೆಯು ಆರಂಭಿಸಲ್ಪಡುವುದು.

ಕಳೆದ ಸಂಚಿಕೆಯಲ್ಲಿ ವಿವರಿಸಿರುವ ಮುನ್ಸೀಫರುಗಳ ವರ್ಗಾವರ್ಗಿಯೆಲ್ಲಾ ಬರುವ ನವಂಬರ್ ತಾ|| ೨ ರಲ್ಲಿ ನಡೆಯುವುದು.

ಹಿರಿಯೂರು ತಾಲ್ಲೂಕಿಗೆ ಸೇರಿದ ಚಿಕ್ಕನಹಳ್ಳಿ ಎಂಬ ಗ್ರಾಮವು ಇಕಃಪರಂ ವಾಣೀವಿಲಾಸಪುರವೆಂಬುದಾಗಿ ಕರೆಯಲ್ಪಡತಕ್ಕುದೆಂದು ಸರ್ಕಾರದ ಅಪ್ಪಣೆಯಾಗಿದೆ.

ಹೊಳೇನರಸೀಪುರದ ಮುನ್ಸೀಫರಾಗಿದ್ದ ಮ|| ಎಚ್. ಕೆ. ವೀರಬಸವಯ್ಯ ಬಿ. ಎ. ಬಿ. ಎಲ್. ರವರು ಬೆಂಗಳೂರಿನ ೨ ನೆ ಮುನ್ಸೀಫರಾಗಿ ವರ್ಗಮಾಡಲ್ಪಟ್ಟಿರುವರು.

ಮೈಸೂರು ಅರಸೀಕೆರೆಯ ಲೋಹಮಾರ್ಗದ ಎಲ್ಲ ನಿಲ್ದಾಣಗಳಲ್ಲೂ ತಂತ್ರೀವಾರ್ತೆಗಳನ್ನು ಪ್ರಜೆಗಳು ಕಳುಹಿಸಿಕೊಡುವುದಕ್ಕೆ ಏರ್ಪಾಟು ಕಳೆದ ತಾ|| ೧೫ ರಿಂದ ಮಾಡಲ್ಪಟ್ಟಿರುತ್ತದೆ.

ಚಿತ್ರದುರ್ಗದಲ್ಲೂ ಸುತ್ತಣ ಸ್ಥಲಗಳಲ್ಲೂ ಪ್ಲೇಗು ವ್ಯಾಪಿಸಿರುವುದರಿಂದ ಶ್ರೀ ಜಗದ್ಗುರು ಮಠದಲ್ಲಿ ನಡೆಯಬೇಕಾದ ನವರಾತ್ರಿಯ ಮಹೋತ್ಸವವು ಈ ವರ್ಷ ಸಂಕ್ಷೇಪವಾಗಿ ನಡೆಯಿಸಲ್ಪಡುವುದು.

ವಿದ್ಯಾಭ್ಯಾಸ ಶಾಖಾಮುಖ್ಯಾಧಿಕಾರವನ್ನು ವಹಿಸುವುದರಲ್ಲಿರುವ ಪ್ರೊ|| ಸಿ. ರಾಮಲಿಂಗರೆಡ್ಡಿಯವರಿಗೆ ರಾಜಧಾನಿಯ ನಿವಾಸಿಗಳು ಒಂದು ಎಂಟರ್ಟೈನ್‌ಮೆಂಟನ್ನು ಕೊಡಬೇಕೆಂದು ಪ್ರಯತ್ನಿಸಿರುವರು.

ಬೆಂಗಳೂರಿನಲ್ಲೂ ಪ್ಲೇಗು ತಲೆಯೆತ್ತುತ್ತಿದೆ. ಅಲ್ಲಿಯ ರಿಚ್ಮಂಡ್‌ಟವನ್ನಿಗೂ ಇದು ವ್ಯಾಪಿಸಿ, ಒಬ್ಬ ಆಂಗ್ಲೋ ಇಂಡಿಯನ್ ಬಾಲಕನನ್ನು ಬಲಿ ತೆಗೆದುಕೊಂಡಿತು. ಅದೇ ಪೇಟೆಯ ಇನ್ನಿಬ್ಬರು ರೋಗಗ್ರಸ್ತರಾಗಿ ವೈದ್ಯಶಾಲೆಯಲ್ಲಿದ್ದಾರೆ.

ಕಳೆದ ತಾ|| ೫ ಕ್ಕೆ ಕಡೆಯಾದ ವಾರದಲ್ಲಿ ಮೈಸೂರು ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ಪ್ಲೇಗಿನ ಮರಣಗಳು ಸಂಭವಿಸಿದ್ದುವು. ಒಟ್ಟು ಸಂಸ್ಥಾನದಲ್ಲಿ ಆ ವಾರದೊಳಗೆಲ್ಲಾ ೪೩೭ ಮಂದಿಗೆ ಪ್ಲೇಗುರೋಗವು ತಗುಲಿ ೩೧೭ ಮಂದಿಗಳು ಸತ್ತಿರುವರು.

ಸಂಸ್ಥಾನದಲ್ಲಿರುವ ಪ್ರೊವಿನ್ಷಿಯಲ್ ಬ್ಯಾಂಕುಗಳನ್ನೂ ಸೆಂಟರಲ್ ಕೋ ಆಪರೇಟೀವ್ ಬ್ಯಾಂಕುಗಳನ್ನೂ ಒಟ್ಟಿಗೆ ಸೇರಿಸಬಹುದೆಂದು ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುವರೆಂಬ ವಿಷಯವು ಪರಸ್ಪರ ಸಹಾಯಸಂಘಗಳ ಸಭೆಯಲ್ಲಿ ತಿಳಿಯಿಸಲ್ಪಟ್ಟಿತು.

ಪ್ರೊ|| ಸಿ. ರಾಮಲಿಂಗರೆಡ್ಡಿಯವರಿಗೆ ವಿದ್ಯಾಭ್ಯಾಸಶಾಖೆಯ ಇನ್ಸ್ಪೆಕ್ಟರ್ ಜನರಲ್ ಉದ್ಯೋಗವು ದೊರೆಯುವುದರಲ್ಲಿದೆಯೆಂಬ ವರ್ತಮಾನವು ಹುಟ್ಟಿದಾಗಣಿಂದ ಮೈಸೂರ ಒಂದೆರಡು ಪತ್ರಿಕೆಗಳಿಗೆ ಹೊಟ್ಟೆಯುರಿಯುಂಟಾಗಿರುವಂತೆ ಅವುಗಳಲ್ಲಿ ಬರುವ ಲೇಖನಗಳಿಂದ ವ್ಯಕ್ತವಾಗುತ್ತಿದೆ.

ನವರಾತ್ರಿಯುತ್ಸವಕ್ಕಾಗಿ ಬೆಂಗಳೂರು ಮೈಸೂರುಗಳ ಮಧ್ಯೆ ಸ್ಪೆಷಲ್ ಟ್ರೇನುಗಳನ್ನು ಬಿಡುವ ಪದ್ಧತಿಯಿದ್ದಿತಷ್ಟೆ. ಕಲ್ಲಿದ್ದಲಿನ ಅಭಾವದಿಂದ ಈ ವರ್ಷ ಅಂಥ ಹೆಚ್ಚು ಬಂಡಿಗಳನ್ನು ಬಿಡಲು ಸಾಧ್ಯವಿಲ್ಲವೆಂದು ಕಂಪೆನಿಯವರು ತಿಳಿಯಪಡಿಸಿರುವರೆಂದು ಬೆಂಗಳೂರು ಡಿ|| ಪತ್ರಿಕೆಯು ಹೇಳಿರುತ್ತದೆ. ಇದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗುವುದೆಂಬುದಕ್ಕೆ ಸಂಶಯವಿಲ್ಲ.

ಬರುವ ಜನವರಿಯಿಂದ ನಂಜನಗೂಡಿನಿಂದ ಮೈಸೂರು, ಎಡತೊರೆ, ಅರಸಿಕೆರೆ, ಬೀರೂರು, ಶಿವಮೊಗ್ಗಾದ ವರೆಗಣ ಲೋಹಮಾರ್ಗದಲ್ಲಿ ದೊಡ್ಡ ಇಂಜಿನ್ನುಗಳ ಸಹಾಯದಿಂದ ಥ್ರೂಟ್ರೇನುಗಳನ್ನು ಬಿಡುವುದಕ್ಕೂ, ಆ ಮಾರ್ಗದ ಮತ್ತೂ ಮೈಸೂರು ಬೆಂಗಳೂರು ಮಾರ್ಗದ ಮೇಲಣ ಅಧಿಪತ್ಯವನ್ನೆಲ್ಲಾ ತಾವೇ ವಹಿಸಿಕೊಂಡು ನಡೆಯಿಸುವುದಕ್ಕೂ ನಮ್ಮ ಗೌರ್ನಮೆಂಟಿನವರು ನಿರ್ಧರಿಸಿರುವರೆಂದು ಕೇಳುತ್ತೇವೆ.

ಧಾರವಾಡದಲ್ಲಿ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ವಾರ್ಷಿಕ ಸಭೆಯು ಮೊನ್ನೆ ವಾರ ಕೂಡಿದ್ದಾಗ ನಡೆದ ತೀರ್ಮಾನಗಳೊಳಗೆ ವೀರಶೈವ ಸಮಾಜಕ್ಕೆ ನಿಯಮನಿರ್ಮಾಣ ಸಭೆಗಳಲ್ಲಿ ಪ್ರತ್ಯೇಕ ಪ್ರಾತಿನಿಧ್ಯಸ್ವಾಮ್ಯವಿರುವಂತೆ ಮಾಡಬೇಕೆಂದು ಸ್ಟೇಟ್‌ಸೆಕ್ರೆಟರಿಯವರನ್ನು ವಿಜ್ಞಾಪನಪತ್ರದ ಮೂಲಕ ಪ್ರಾರ್ಥಿಸಿಕೊಳ್ಳಬೇಕೆಂಬ ವಿಷಯವೂ ಒಂದಾಗಿದ್ದಿತು. ಮತ್ತೂ ಇತ್ತೀಚೆಗೆ ಆ ಫಂಡಿನವರು ಮೈಸೂರು ದೇಶದ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುತ್ತಿರಲಿಲ್ಲವಷ್ಟೆ. ಈ ಸಲ ಒಬ್ಬ ವಿದ್ಯಾರ್ಥಿಗೆ ವೇತನವನ್ನು ಕೊಡುವುದಕ್ಕೂ ನಿರ್ಧಾರಮಾಡಿರುವುದು ಸಂತೋಷಪ್ರದವಾಗಿದೆ.

ಮೆಸಪೊಟೋಮಿಯಾ ಮೊದಲಾದ ರಂಗಗಳಲ್ಲಿ ಯುದ್ಧ ಮಾಡುತ್ತಿರುವ ನಮ್ಮ ಸೈನಿಕರ ಸಹಾಯಕ್ಕಾಗಿ ಧನವನ್ನು ಕೂಡಿಸುವುದಕ್ಕಾಗಿ ನಾನಾತರದ ಉತ್ಸವಗಳನ್ನು ಬರುವ ಡಿಶಂಬರ್ ತಾ|| ೧೨ ರಲ್ಲಿ ಭರತಖಂಡದ ಎಲ್ಲ ಭಾಗದಲ್ಲೂ ನಡೆಯಿಸಲು ಸರ್ಕಾರದಪ್ಪಣೆಯಾಗಿರುವುದು. ನಮ್ಮ ದೇಶದಲ್ಲೂ ಆ ದಿನ "ಅವರ್‌ಡೇ" (ನಮ್ಮದಿನ) ವೆಂಬ ಹೆಸರಿನ ಆ ಉತ್ಸವವು ನಡೆಯಲು ನಮ್ಮ ಸರ್ಕಾರದವರೂ ಅಪ್ಪಣೆಮಾಡಿದ್ದಾರೆ. ದೇಶಾಭಿಮಾನ ಪುಣ್ಯಾಭಿಮಾನಗಳಿಂದ ಸರ್ವರೂ ಯುದ್ಧರಂಗದಲ್ಲಿ ಹೋರಾಡುತ್ತಿರುವ ನಮ್ಮ ಸಹೋದರಪ್ರಜೆಗಳಿಗೆ ಯಥೋಚಿತ ಧರ್ಮಸಹಾಯಮಾಡುವುದಕ್ಕೆ ಅದು ಅನುಕೂಲದಿನವಾಗಿದೆ.

ರಾಜಧಾನಿಯಲ್ಲಿ ಮೋಡ ಮುಚ್ಚಿ ಆಗಾಗ್ಗೆ ಮಳೆಯು ಸಾಧಾರಣವಾಗಿ ಬೀಳುತ್ತಿದೆ. ಗುರುವಾರ ರಾತ್ರಿಯೆಲ್ಲಾ ಹೆಚ್ಚು ಮಳೆಯಾಯಿತು. ವಾಯುಗುಣವು ತಂಪಾಗಿದೆ. ಪ್ಲೇಗಿನ ಹಾವಳಿಯು ವಿಶೇಷವಾಗಿಲ್ಲ. ನವರಾತ್ರಿಯ ಉತ್ಸವಾರ್ಥವಾಗಿ ದಿವಾನರು ಕೌನ್ಸಿಲರುಗಳು ಶಾಖಾ ಮುಖ್ಯಾಧಿಕಾರಿಗಳು ಡೆ|| ಕಮಿಷನರುಗಳು ಇತ್ಯಾದಿಗಳೆಲ್ಲಾ ಬಂದಿದ್ದಾರೆ. ಬೆಂಗಳೂರಿನಿಂದ ಅಶ್ವಸೈನ್ಯ ಪದಾತಿಸೈನ್ಯಗಳೂ, ತಾಲ್ಲೂಕು ಪೋಲೀಸುಗಳೂ ಸಹ ಬಂದಿವೆ. ಹೊರಗಣ ಪ್ರಜೆಗಳು ಉತ್ಸವದರ್ಶನಕ್ಕಾಗಿ ಬಂದು ಸೇರುತ್ತಿದ್ದಾರೆ. ಜನರನ್ನು ಸಂತೋಷಪಡಿಸಿ ಧನಾರ್ಜನೆ ಮಾಡುವುದಕ್ಕಾಗಿ ೨ ಸರ್ಕಸ್ ಕಂಪೆನಿಗಳೂ, ೨ ಬಯೊಸ್ಕೋಪು ಕಂಪೆನಿಗಳೂ, ನಾಲ್ಕಾರು ನಾಟಕಸಂಘಗಳೂ ಸಿದ್ಧವಾಗಿವೆ.

ರೆವಿನ್ಯೂ ಕಮಿಷನರಾಗಿದ್ದ ಮ|| ಕೆ. ಎಸ್ ದೊರೆಸಾಮಯ್ಯರವರ ಮೃತಿಯ ವಿಷಯದಲ್ಲಿ ಮೈಸೂರು ಸರ್ಕಾರದವರು ರಿಕಾರ್ಡಿನ ಮೂಲಕ ತಮ್ಮ ವಿಷಾದವನ್ನು ಪ್ರದರ್ಶಿಸಿರುವುದರಲ್ಲಿ—ಇವರು ೧೮೮೮ ನೆ ಇಸವಿಯಲ್ಲಿ ಸರ್ಕಾರದ ಉದ್ಯೋಗಕ್ಕೆ ಸೇರಿದರು. ಅಸಿಸ್ಟೆಂಟ್ ಕಮಿಷನರ್, ಡೆ|| ಕಮಿಷನರ್ ಪದವಿಗಳನ್ನು ಸಾಮರ್ಥ್ಯದಿಂದ ನಿರ್ವಹಿಸಿ, ೧೯೧೨ ನೆ ವರ್ಷದಿಂದ ಇದುವರೆಗೆ ರೆವಿನ್ಯೂ ಕಮಿಷನರ್ ಪದವಿಯನ್ನು ಸಾಮರ್ಥ್ಯಯುಕ್ತವಾಗಿ ನಿರ್ವಹಿಸುತ್ತಿದ್ದರು. ಇವರ ಚಾರಿತ್ರ್ಯವು ನಿಷ್ಕಲಂಕವಾದ ಧೀರಭಾವದಿಂದಲೂ ನಿಸ್ಪೃಹತೆಯಿಂದಲೂ ಭೂಷಿತವಾಗಿದ್ದಿತು. ಇವರ ಮೃತಿಯಿಂದ ಗುಣಾಢ್ಯರೂ ದೃಢಭಕ್ತರೂ ಆದ ಒಬ್ಬ ಅಧಿಕಾರಿಯ ಸೇವೆಯು ಸಂಸ್ಥಾನಕ್ಕೆ ತಪ್ಪಿದಂತಾಯಿತು. ಎಂದು ಬರೆದು, ಅವರ ವಿಷಯದಲ್ಲಿ ಸರ್ಕಾರಕ್ಕಿದ್ದ ಗೌರವಭಾವವನ್ನು ವ್ಯಕ್ತಪಡಿಸಿರುತ್ತಾರೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.—ಈ ರಂಗದಲ್ಲಿ ಮತ್ತೊಂದುಸಲ ಹೆಚ್ಚಿನ ಮಳೆಯಾಗುತ್ತ ಭೂಮಿಯೆಲ್ಲಾ ಕೆಸರಿನ ಮಯವಾಗಿ ತಿರುಗಾಟಕ್ಕೇ ಬಹಳ ತಡೆಯಾಗಿರುವುದರಿಂದ ಯುದ್ಧಕಾರ್ಯಕ್ಕೆ ಅನುಕೂಲವಾಗಿಲ್ಲ. ಆದರೂ ಫಿರಂಗಿಯುದ್ಧಗಳು ಅವ್ಯಾಹತವಾಗಿ ನಡೆಯುತ್ತಿವೆ. ಮತ್ತೂ ಇದುವರೆಗೆ ಮಿತ್ರಮಂಡಲಿಯವರು ತಾವುವಶಪಡಿಸಿಕೊಂಡ ಸ್ಥಾನಗಳನ್ನೆಲ್ಲಾ ಶತ್ರುವಶವಾಗಗೊಡಿಸದಂತೆ ಕಾಪಾಡಿಕೊಂಡುದಲ್ಲದೆ, ಅವನ್ನು ಭದ್ರಪಡಿಸಿಯೂಕೊಂಡರು. ಅಲ್ಲದೆ ಈಚೆಗೆ ಬೆಲ್ಜಿಯಮ್ಮಿನಲ್ಲಿ ಮಿತ್ರಮಂಡಲಿಯವರು ಈ ಪ್ರೆಸ್ಸಿಗೆ ಈಶಾನ್ಯದಲ್ಲಿ ಮತ್ತೊಂದುಸಲ ಜರ್ಮನರ ಸೇನಾಪಜ್ಞಿಯಮೇಲೆ ೭ ಮೈಲಿಯಗಲದ ಪ್ರದೇಶದಲ್ಲಿ ಬಿದ್ದು ಯುದ್ಧಮಾಡಿ ಇನ್ನಷ್ಟು ಸ್ಥಲಗಳನ್ನು ಹಿಡಿದು ಜಯಶಾಲಿಗಳಾಗಿರುತ್ತಾರೆ. ಇದು ತಾ|| ೧೨-೧೩ ರಿಂದ ಈಚೆಗೆ ನಡೆದಿರುತ್ತದೆ. ಈ ಯುದ್ಧದಲ್ಲಿ ಇಂಗ್ಲೀಷರು ಶತ್ರುಗಳ ಅನೇಕ ಸಂರಕ್ಷಕ ಪ್ರದೇಶಗಳನ್ನೂ ಬಲವತ್ತರವಾಗಿ ಮಾಡಿದ್ದ ಸ್ಥಲಗಳನ್ನೂ ಕೆಲ ಕಾಡುಗಳನ್ನೂ ಸಹ ಹಿಡಿದುಕೊಂಡುದಲ್ಲದೆ, ೨ ಸಾವಿರಕ್ಕೆ ಮೇಲ್ಪಟ್ಟ ಶತ್ರುಸೈನಿಕರನ್ನು ಸೆರೆಹಿಡಿದಿದ್ದಾರೆ. ಶತ್ರುಗಳು ಇಲ್ಲಿಯ ಸ್ಥಲಗಳನ್ನು ಮೂರು ವರ್ಷಗಳಿಂದಲೂ ಬಲಪಡಿಸಿಕೊಂಡಿದ್ದರು. ಅವನ್ನು ಬಿಡಲಾರದೆ ಅವರು ಬಹಳ ಬಲವಾಗಿ ಕಾದಾಡಿದರು. ಆದರೂ ಕಡೆಗೆ ಅದನ್ನು ಉಳುಹಿಸಿಕೊಳ್ಳಲು ಅವರಿಂದಾಗಲಿಲ್ಲ.

ರಷ್ಯಾರಂಗ—ಜರ್ಮನರು ರಷ್ಯಾ ದೇಶದಮೇಲೆ ನಡೆಯಿಸುತ್ತಿರುವ ಯುದ್ಧದಲ್ಲಿ ಒಂದು ದೊಡ್ಡ ಜಯವನ್ನು ಜಲಮಾರ್ಗದಮೇಲೆ ಕಳೆದವಾರ ಸಂಪಾದಿಸಿರುತ್ತಾರೆ. ಜರ್ಮನರ ನೌಕಾಸೈನ್ಯದಲ್ಲಿ ಕೆಲವರು ಪ್ರಭುತ್ವದವರಮೇಲೆ ತಿರುಗಿಬಿದ್ದಿರುವರೆಂದೂ ಅದರಿಂದ ಕೆಲವರನ್ನು ಗುಂಡಿನಬಾಯಿಗೆ ಕಟ್ಟಿಸಿದರೆಂದೂ, ಜರ್ಮನ್ ನೌಕಾದಳ ಮಂತ್ರಿಯು ರಾಜೀನಾಮೆಕೊಡುವುದರಲ್ಲಿದ್ದಾರೆಂದೂ ಸಹ ಇದಕ್ಕೆ ಮುಂಚೆ ಸುದ್ದಿಗಳು ಹುಟ್ಟಿದ್ದುವು. ಆದರೆ ಇಷ್ಟುಬೇಗನೆ ಅವರ ನೌಕಾದಳವೇ ಒಂದು ಮಹಾಜಯವನ್ನು ಸಂಪಾದಿಸಿರುವುದನ್ನು ನೋಡಿದರೆ, ಈ ತಮ್ಮ ನೌಕಾದಳ ವಿಪ್ಲವದ ಸುದ್ದಿಯನ್ನು ಅವರು ಬೇಕೆಂತಲೇ ಹುಟ್ಟಿಸಿ, ರಷ್ಯನರು ನೌಕಾದಳ ವಿಷಯದಲ್ಲಿ ಔದಾಸೀನ್ಯದಿಂದಿರುವಂತೆ ಮಾಡಬೇಕೆಂಬ ಕೌಟಿಲ್ಯದಿಂದ ಹೀಗೆ ಮಾಡಿದ್ದರೋ ಏನೋ ಎಂದು ಯೋಚಿಸಬೇಕಾಗುವುದು. ಜರ್ಮನರ ಒಂದು ನೌಕಾದಳವು (ಅದರಲ್ಲಿ ೮ ಡ್ರೆಡ್‌ನಾಟ್ ಎಂಬ ದೊಡ್ಡ ಯುದ್ಧದ ಹಡಗುಗಳು, ೧೨ ಕ್ರುಯಿಝರುಗಳು, ೪೦ ಟಾರ್ಪೆಡೋ ದೋಣಿಗಳು, ೩೦ ಮದ್ದಿನ ಸುರಂಗಗಳನ್ನು ಸೆಳೆದುಹಾಕುವ ಸಣ್ಣ ಹಡಗುಗಳಿದ್ದುವು. ಕೆಲವು ವಿಮಾನಗಳ ಸಹಾಯವನ್ನೂ ಭೂಸೈನಿಕಸಹಾಯವನ್ನೂ ಹೊಂದಿ, ಬಾಲ್ಟಿಕ್ ಸಮುದ್ರದಲ್ಲಿ ಹೋಗಿ ರಿಗಾ ಸಿಂಧುಶಾಖಾ ಮುಖದ್ವಾರದಲ್ಲಿರುವ ಈಜೆಲು, ಡೇಗೋ-ಎಂಬ ಎರಡು ದೊಡ್ಡ ರಷ್ಯನ್ ದ್ವೀಪಗಳಮೇಲೆ ಮುತ್ತಿಗೆಹಾಕಿ ಸುಲಭವಾಗಿ ಅಲ್ಪಯುದ್ಧದಿಂದಲೇ ಅವನ್ನು ವಶಮಾಡಿಕೊಂಡು ಅವುಗಳಲ್ಲಿ ತಮ್ಮ ೩-೩ ಡಿವಿಜನ್ ಸೈನ್ಯಗಳನ್ನು ಬಲುಬೇಗನೆ ಇಳುಹಿಸಿರುವುದು. ಆ ದ್ವೀಪಗಳನ್ನು ಕಾಪಾಡುವುದಕ್ಕಿದ್ದ ಜಲಸೈನ್ಯ ಭೂಸೈನ್ಯಗಳು ಅಲ್ಪವಾಗಿದ್ದುವು. ಶತ್ರುಗಳ ಅನಂತವಾದ ಫಿರಂಗಿಗುಂಡುಗಳೇಟಿನಮುಂದೆ ಅವು ನಿಲ್ಲಲಾರದೆಹೋದುವು. ಆದರೂ ಆಗ ನಡೆದ ಯುದ್ಧದಿಂದ ಶತ್ರುಗಳ ೪ ಟಾರ್ಪೆಡೋ ದೋಣಿಗಳು ಮುಳುಗಿಸಲ್ಪಟ್ಟುವು. ಒಂದು ಕ್ರುಯಿಝರು ದಡಕಚ್ಚಿತು. ರಷ್ಯನರಿಗೆ ವಿಶೇಷ ನಷ್ಟವೇನೂ ಆಗಲಿಲ್ಲ. ಎರಡು ದ್ವೀಪಗಳಿಗೂ ಮಧ್ಯದಲ್ಲಿರುವ ಸಮುದ್ರಕ್ಕೆ ಜರ್ಮನರ ಹಡಗುಗಳನ್ನು ಬರಗೊಡಿಸದಂತೆ ರಷ್ಯನ್ ಹಡಗುಗಳು ಇದುವರೆಗೆ ಕಾಪಾಡಿಕೊಂಡಿವೆ. ಈ ದ್ವೀಪದ ಉತ್ತರ ಪೂರ್ವಭಾಗಗಳನ್ನು ಶತ್ರುಗಳು ಆಕ್ರಮಿಸಿ, ಅರೆನ್ಸ್‌ಬರ್ಗ್ ಎಂಬ ಪಟ್ಟಣವನ್ನು ಸೇರಿರುವರು. ಉಳಿದ ಭಾಗವನ್ನು ರಷ್ಯನ್ ಸೈನ್ಯಗಳು ಕಾಪಾಡಿಕೊಂಡು ಯುದ್ಧಮಾಡುತ್ತಿರುವುವು. ದ್ವೀಪದ ಪಶ್ಚಿಮದಿಕ್ಕಿನ ದುರ್ಗಗಳೆಲ್ಲಾ ರಷ್ಯನರ ವಶದಲ್ಲೇ ಇವೆ. ಅವು ಬಲವತ್ತರವಾದುವು. ಈ ದ್ವೀಪಗಳು ಶತ್ರುಗಳ ವಶವಾದುದರಿಂದ ಬಾಲ್ಟಿಕ್ ಸಮುದ್ರದಲ್ಲಿ ಪೂರ್ವತೀರಗಳಮೇಲೆಲ್ಲಾ ಜರ್ಮನರ ಆಧಿಪತ್ಯವು ಬಳೆಯುವುದಕ್ಕೂ, ಆ ಸಮುದ್ರದಲ್ಲಿ ರಷ್ಯನರ ನೌಕಾದಳದ ಆಟೋಪವು ಕ್ಷೀಣಿಸಿಹೋಗುವುದಕ್ಕೂ ಅವಕಾಶವಾಯ್ತೆಂದೂ, ಈ ದ್ವೀಪಗಳ ಆಧಾರದಿಂದ ಶತ್ರುಗಳು ಇನ್ನು ಮುಂದೆ ರಷ್ಯಾ ರಾಜಧಾನಿಯಾದ ಪೆಟ್ರೋಗ್ರೇಡಿನ ಮೇಲೆ ವಿಮಾನಗಳ ಹಾವಳಿಯನ್ನು ನಡೆಯಿಸುವರೆಂದೂ, ಫಿನ್ಲೆಂಡಿನಮೇಲೆ ಸಾಗುವುದಕ್ಕೆ ಶತ್ರುಗಳಿಗೆ ಸರಾಗವಾಯ್ತೆಂದೂ ಮೊದಲಾಗಿ ಅನೇಕರು ಊಹಿಸುತ್ತಿರುವರು. ಈ ದ್ವೀಪಗಳು ವಶವಾದರೂ ಪೆಟ್ರೋಗ್ರೇಡಿನಮೇಲೆ ಸಾಗಿಹೋಗುವುದು ಶತ್ರುಗಳಿಗೆ ಸುಲಭವಲ್ಲವೆಂದು ಇನ್ನು ಕೆಲರು ವಾದಿಸುತ್ತಿರುವರು. ರಷ್ಯನ್ ಪತ್ರಿಕೆಗಳಾದರೂ ದಿಗಿಲುಪಟ್ಟಿರುವುವು. ರಷ್ಯನ್ ಸೈನ್ಯದಲ್ಲಿ ಹುಟ್ಟಿರುವ "ಬೇಬಂದೇ" ಇದಕ್ಕೆ ಕಾರಣವೆಂಬುದು ವ್ಯಕ್ತಪಟ್ಟಿರುವುದು. ಈಗಲಾದರೂ ಬಾಲ್ಟಿಕ್ಕಿನ ರಷ್ಯನ್ ನೌಕಾದಳವು ತನ್ನ ಕರ್ತವ್ಯಕರ್ಮವನ್ನು ನೆರವೇರಿಸಿ ಕೃತಕೃತ್ಯವಾಗಬೇಕೆಂದು ಎಂ. ಕರೆನ್‌ಸ್ಕಿಯವರು ಎಚ್ಚರಿಸಿರುವರು. ರಷ್ಯಾದೇಶಾಭಿಮಾನಿಗಳಾದ ಪ್ರಜೆಗಳೆಲ್ಲರಿಗೂ ಜರ್ಮನರಮೇಲೆ ಈಗ ದ್ವೇಷವು ಹೆಚ್ಚಿರುವುದು. ಜರ್ಮನರು ರಷ್ಯಾದ ಉದ್ಧಾರಕರಂತೆ ಮಾಡುತ್ತಿದ್ದ ಸಂಧಿ ರಾಯಭಾರ ಮೊದಲಾದುವುಗಳೆಲ್ಲಾ ನಟನೆಯೆಂಬುದು ಅವರಿಗೆ ಈಗ ಚೆನ್ನಾಗಿ ಗೊತ್ತಾಯಿತು. ಇಂಥ ಸಂದಿಗ್ಧ ಸಮಯದಲ್ಲಾದರೂ ರಷ್ಯನರು ತಮ್ಮ ಅನೈಕಮತ್ಯವನ್ನು ಬಿಟ್ಟು ದೇಶೋದ್ಧಾರವನ್ನು ಮಾಡಿಕೊಳ್ಳುವರೋ ಹೇಗೋ ನೋಡಬೇಕು. ಈಗ ಎಲ್ಲ ಪಕ್ಷದವರೂ ಕೂಡಿ ಏರ್ಪಟ್ಟಿರುವ ರಷ್ಯನ್ ಮಂತ್ರಿಮಂಡಲವು ಉಳಿದಕಡೆಯ ತಮ್ಮ ಗಮನವನ್ನೆಲ್ಲಾ ನಿಲ್ಲಿಸಿ, ಮುಖ್ಯವಾಗಿ ಯುದ್ಧದಕಡೆಗೂ ಶತ್ರುನಿಗ್ರಹದಕಡೆಗೂ ದೇಶರಕ್ಷಣೆಯಕಡೆಗೂ ಪ್ರಯತ್ನಿಸದಿದ್ದರೆ ಅಸಲಿಗೇ ಮೋಸವಾಗುವುದರಲ್ಲಿ ಸಂಶಯವಿಲ್ಲ. ಈಗಣ ಜರ್ಮನ್ ವಿಜಯವು ರಷ್ಯಾ ದೇಶವನ್ನು ಬಹಳಮಟ್ಟಿಗೆ ಎಚ್ಚರುಗೊಳಿಸಿರುವುದೆಂಬುದಕ್ಕೆ ತಕ್ಕ ಸೂಚನೆಗಳು ಕಾಣಬರುತ್ತಿವೆ.

ಈಗ ಜರ್ಮನರು ಹಿಡಿದುಕೊಂಡಿರುವ ದ್ವೀಪಗಳು ಜಲಮಾರ್ಗದಲ್ಲಿ ಪೆಟ್ರೋಗ್ರೇಡ್ ಪಟ್ಟಣಕ್ಕೆ ೩೫೦ ಮೈಲಿಗಳಲ್ಲಿದ್ದು, ಸಮುದ್ರಮಾರ್ಗದಲ್ಲಿ ರಾಜಧಾನಿಯನ್ನು ಕಾಪಾಡಿಕೊಳ್ಳುವ ಸ್ಥಾನಗಳಲ್ಲಿ ಇದು ಮೊದಲನೆಯ ಹಂತವಾಗಿದ್ದಿತು.

ಭರತಖಂಡದ ವೃತ್ತಾಂತಗಳು.

ಅನಿಬೆಸೆಂಟಮ್ಮನವರು ತಮ್ಮ ಅನುಚರರೊಡನೆ ಈಗ ಸಿಮ್ಲಾದಲ್ಲಿದ್ದಾರೆ.

ಸಿಮ್ಲಾಕ್ಕೆ ಹೋಗಿದ್ದ ಅನಿಬೆಸೆಂಟಮ್ಮನವರು ಕಾಶೀಪಟ್ಟಣಕ್ಕೆ ಮರಳಿ ಬಂದರು.

"ಅವರ್‌ಡೆ" ಫಂಡಿಗೆ ಹೈದರಾಬಾದ್ ನೈಜಾಂರವರು ರಾಜಪೋಷಕರಾಗಿರುವುದಕ್ಕೆ ಅಂಗೀಕರಿಸಿ, ೧ ಲಕ್ಷ ರೂ.ಗಳನ್ನು ಕೊಟ್ಟರು.

ಕಳೆದ ತಾ|| ೬ ಕ್ಕೆ ಕಡೆಯಾದ ೧ ವಾರದ ಕಾಲದಲ್ಲಿ ಭರತಖಂಡದೊಳಗೆಲ್ಲಾ ೧೧೯೦೭ ಮಂದಿಗೆ ಪ್ಲೇಗುತಗುಲಿ ೮೮೦೬ ಮಂದಿಗಳು ಸತ್ತಿರುತ್ತಾರೆ.

ಪುನಾದಲ್ಲಿ ಪಂಚಮರ ಸಭೆಯೊಂದು ಕೂಡಿದ್ದಿತು. ಸ್ಟೇಟ್ ಸೆಕ್ರೆಟೆರಿಯವರನ್ನು ತಮ್ಮ ಸಂಘದ ಪ್ರತಿನಿಧಿಯು ಕಂಡು ಮಾತನಾಡಬೇಕೆಂದು ಸಭಿಕರು ನಿರ್ಧರಿಸಿದರು.

ವೈಸ್ರಾಯರು ಪತ್ನೀಪರಿವಾರ ಸಮೇತರಾಗಿ ಕಳೆದ ತಾ|| ೧೩ ರಲ್ಲಿ ಸಿಮ್ಲಾ ಪಟ್ಟಣವನ್ನು ಬಿಟ್ಟರು. ಕ್ವೆಟ್ಟಾ, ಕರಾಚಿ ಮೊದಲಾದ ಪಟ್ಟಣಗಳನ್ನು ಸಂದರ್ಶಿಸಿಕೊಂಡು ಈ ಸಂಚಾರವನ್ನು ನವಂಬರ್ ತಾ|| ೩ ಕ್ಕೆ ಮುಗಿಸಿ ದಿಲ್ಲಿಪಟ್ಟಣವನ್ನು ಸೇರುವರು.

ಬರುವ ತಾ|| ೨೪ ರಲ್ಲಿ ಕಲ್ಕತ್ತಾ, ಬೊಂಬಾಯಿ, ಮದರಾಸು, ಬೆಂಗಳೂರು ಮೊದಲಾದ ಪ್ರಮುಖಸ್ಥಲಗಳ ಅನೇಕಮಂದಿ ಆಂಗ್ಲೋ ಇಂಡಿಯನ್ ಜನರು ಕಲ್ಕತ್ತಾಪಟ್ಟಣಕ್ಕೆ ಹೋಗಿ ಮಹಾ ಸಭೆಗೂಡಿ ಅಲ್ಲಿ ಪ್ರಕೃತ ರಾಜಕೀಯ ಸಂದರ್ಭ ವಿಷಯವಾಗಿ ಚರ್ಚಿಸುವವರಾಗಿದ್ದಾರೆ.

ಬೊಂಬಾಯಿಯಿಂದ ಪ್ರಕಟವಾಗುತ್ತಿರುವ ಕ್ರಾನಿಕಲ್ ಎಂಬ ದಿನಪತ್ರಿಕೆಯ ಡೈರೆಕ್ಟರುಗಳಿಗೂ ಅದರ ಮುಖ್ಯ ಸಂಪಾದಕರಾಗಿದ್ದ ಮಿ|| ಹಾರ್ನಿಮನ್ ರವರಿಗೂ ಸಹ ಅಭಿಪ್ರಾಯಭೇದವುಂಟಾದುದರಿಂದ ಹಾರ್ನಿಮನ್ ರವರೂ ಅವರ ಉಪಸಂಪಾದಕರುಗಳೂ ಸಹ ತಮ್ಮ ಉದ್ಯೋಗವನ್ನು ಪರಿತ್ಯಜಿಸಿದರೆಂದೂ ಎಂಗ್ ಇಂಡಿಯಾದ ಪತ್ರಿಕೆಯನ್ನು ದಿನಪತ್ರಿಕೆಯನ್ನಾಗಿ ಪ್ರಕಟಿಸಲು ಇವರುಗಳು ಉಜ್ಜುಗಿಸಿರುವರೆಂದೂ ಕೇಳುತ್ತೇವೆ.

ಹಿಂದೆ ಸಿಪಾಯಿ ದಂಗೆಯು ಯಾವ ಸ್ಥಲದಲ್ಲಿ ಮೂಡಿ ಹಬ್ಬಿಕೊಂಡಿತೋ ಅದೇ ಸ್ಥಲದಲ್ಲೇ ಈಗ ಮತ್ತೊಂದು ದಂಗೆಯ ಗುಂಪು ಎದ್ದು ಕೆಲ ಗ್ರಾಮಗಳನ್ನು ಸುಲಿದುಕೊಂಡು ದಕ್ಷಿಣಕ್ಕೆ ನುಗ್ಗಿ ಬರುತ್ತಿದೆ. ಗಯಾ ಜಿಲ್ಲೆಯಲ್ಲಿ ಸೋನ್ ನದಿಯ ದಡದಮೇಲಿರುವ ಅರ್ಹರಾಲು ಎಂಬ ಗ್ರಾಮವನ್ನು ಈ ದಂಗೆಗಾರರು ದೋಚಿಕೊಂಡರು. ಬೀಹಾರು ಒರಿಸ್ಸಾ ಪ್ರಾಂತದ ಲೆ|| ಗೌರ್ನರು ಇದರ ವಿಚಾರಣೆಗಾಗಿ ಪಾಟ್ನಾಕ್ಕೆ ಹೋಗಿದ್ದಾರೆ.

ತಾತಾ ಕಂಪೆನಿಯವರ ಕಬ್ಬಿಣದ ಕರ್ಮಾಗಾರದಲ್ಲಿ ಕಳೆದ ಜೂನ್ ತಿಂಗಳ ಕೊನೆಗೆ ಮುಗಿದ ೧ ವರ್ಷದ ಕಾಲದಲ್ಲಿ ಒಟ್ಟು ೧೧೧೦೭೬೯೨ ರೂ. ಗಳ ಲಾಭವು ಬಂದಿದೆ. ರಿಜರ್ವ್ ಫಂಡು ಮೊದಲಾದುವುಗಳಿಗೆಲ್ಲಾ ಅರ್ಧ ಕೋಟಿಗಿಂತ ಹೆಚ್ಚಾದ ಹಣವನ್ನು ತೆಗೆದಿಟ್ಟು, ೫೭೩೫೭೩೦ ರೂ.ಗಳನ್ನು ಪಾಲುಗಾರರಿಗೆ ಲಾಭವಾಗಿ ಹಂಚಿಕೊಟ್ಟಿರುವರು. ಸದ್ಯದಲ್ಲಿ ಕಬ್ಬಿಣದ ಬೆಲೆಯು ಏರಿರುವುದರಿಂದ ಈ ಕರ್ಮಾಗಾರದ ಪಾಲುಗಾರರಿಗೆ ಭಾಗ್ಯಲಕ್ಷ್ಮಿಯು ಚಾಮರವನ್ನು ಬೀಸುತ್ತಿರುವಳು.

ನವಂಬರ್ ತಿಂಗಳಲ್ಲಿ ಭರತಖಂಡಕ್ಕೆ ಬರುವವರಾಗಿರುವ ಸ್ಟೇಟ್ ಸೆಕ್ರೆಟರಿಯವರ ಜತೆಗೆ ಮಿ|| ಚಾರ್ಲೆಸ್ ರಾಬರ್ಟ್ಸ್ ರವರೂ ಕೂಡ ಬರುವವರಾಗಿದ್ದಾರೆ. ಇವರು ಇದುವರೆಗೆ ಸ್ಟೇಟ್ ಸೆಕ್ರೆಟರಿಯವರ ಬಳಿಯಲ್ಲಿ ಉಪಕಾರ್ಯದರ್ಶಿಗಳಾಗಿದ್ದು, ಭಾರತೀಯರ ವಿಷಯದಲ್ಲಿ ಸಾನುಭೂತಿಯುಳ್ಳವರಾಗಿದ್ದರು. ಸ್ಟೇಟ್‌ಸೆಕ್ರೆಟರಿ ಮಿ|| ಮಾಂಟುಗ್‌ರವರು ಭರತಖಂಡದಲ್ಲಿರುವಾಗ್ಗೆ ಅವರಿಗೆ ಅಂತರಂಗಿಕ ಕಾರ್ಯದರ್ಶಿಗಳಾಗಿರಲು ಮಿ|| ಜಾರ್ಜ್ ಮತ್ತಾಯಿ ಬಿ.ಎ., ಬಿ.ಎಲ್., ರವರು ಗೊತ್ತುಮಾಡಲ್ಪಟ್ಟಿರುವರು. ಇವರು ಸಿರಿಯನ್ ಕ್ರೈಸ್ತರಂತೆ.

ಮದ್ರಾಸಿನಲ್ಲಿರುವ ಪಂಚಮರು ಸೀಮೆಯಲ್ಲಿರುವ ಲಾರ್ಡ್ ಸಿಡೆನ್‌ಹ್ಯಾಂರವರಿಗೂ, ಅಲ್ಲಿಯ ಕೆಲ ಆಂಗ್ಲಪತ್ರಿಕೆಗಳಿಗೂ ಸಹ ತಂತಿಯಮೂಲಕ—"ಲಕ್ಷಾಂತರ ಸಂಖ್ಯೆಯುಳ್ಳ ನಮಗೆ ಸ್ವರಾಜ್ಯವು ಅಗತ್ಯವಿಲ್ಲ, ಆದರೆ ಎಲ್ಲೆಲ್ಲೂ ಈ ವಿಷಯವಾಗಿ ಗಲಭೆಗಳು ಹೆಚ್ಚುತ್ತಿವೆ. ಸ್ಥಿತಿಗತಿಗಳು ಭಯೋತ್ಪಾದಕಗಳಾಗಿವೆ. ಮಾಂಟುಗ್ಯೂರವರನ್ನು ರಾಜೀನಾಮೆಕೊಡುವಂತೆಯೂ, ಬಿಸೆಂಟಮ್ಮನವರನ್ನು ಭರತಖಂಡವನ್ನು ಬಿಟ್ಟು ಹೋಗುವಂತೆಯೂ ಮಾಡಿಸಿರಿ. ಇಲ್ಲವಾದರೆ ಭರತಖಂಡದ ಸಾಮ್ರಾಜ್ಯಕ್ಕೆ ಹಾನಿತಟ್ಟುವುದು" ಎಂದು ತಿಳಿಯಪಡಿಸಿದ್ದಾರಂತೆ.

ಕಲ್ಲಿಕೋಟೆಗೆ ಸೇರಿದ ತೈಲಿ ಎಂಬ ಪುರದಲ್ಲಿರುವ ದೇವಾಲಯದ ಮುಂಗಡೆಯಲ್ಲಿ ಮ್ಯುನಿಸಿಪಾಲಿಟಿಯವರಿಂದ ಏರ್ಪಡಿಸಲ್ಪಟ್ಟಿರುವ ಮಾರ್ಗದಮೇಲೆ ತಿಯ್ಯಾಲಿ ಮೊದಲಾದ ಪಂಚಮಜಾತಿಯ ಜನರು ತಿರುಗಾಡುವುದರಿಂದ ದೇವಾಲಯಕ್ಕೆ ಮುಟ್ಟುಂಟಾಯಿತೆಂತಲೂ ಅದಕ್ಕೆ ಸಂಪ್ರೋಕ್ಷಣೆಯಾಗಬೇಕಾಗಿರುವುದೆಂತಲೂ ಇತಃಪರಃ ಆ ಮಾರ್ಗದಲ್ಲಿ ಅಗ್ರಜಾತಿಯವರು ಹೊರತು ಇತರರಾರೂ ತಿರುಗಾಡದಂತೆ ಕಟ್ಟುಮಾಡಿಸಬೇಕೆಂತಲೂ ಅರ್ಚಕರು ಮೊದಲಾದ ಜನರು ಜಾಯಿಂಟ್ ಕಲೆಕ್ಟರವರಿಗೆ ಬರೆಯಲು ಅವರು ವಿಚಾರಣೆ ಬಗೆಗೆ ಕಲೆಕ್ಟರ ವಶಕ್ಕೆ ಕಳುಹಿಸಿಕೊಟ್ಟಿರುವರಂತೆ.

ಮತ್ತೊಂದು ಭವಿಷ್ಯತ್ತು—೩ ತಿಂಗಳಹಿಂದೆ ಪ್ರಕಟವಾಗಿದ್ದ ಜಪಾನಿನ ಜೋಯಿಸನೊಬ್ಬನ ಯುದ್ಧವಿಷಯಕ ಭವಿಷ್ಯತ್ತು ಮೂಲೆಮುಟ್ಟಾಯಿತು. ಈಗ ಕಲ್ಕತ್ತಾದ ಭಟ್ಟಾಚಾರರೊಬ್ಬರ ಭವಿಷ್ಯತ್ತು ಪತ್ರಿಕೆಗಳಲ್ಲೆಲ್ಲಾ ಪ್ರಕಟಿತವಾಗಿದೆ. ಇದರ ಗತಿಯೇನಾಗುವುದೋ ನೋಡಬೇಕು. ಇದರ ವಿವರವೇನೆಂದರೆ—"ಬರುವ ನವಂಬರ್ ತಾ|| ೧೨ ರಿಂದ ೩೦ ರೊಳಗೆ ಜರ್ಮನರಿಗೆ ಮಹಾನಷ್ಟವು ಸಂಭವಿಸುವುದು. ಡಿಶಂಬರ್ ತಾ|| ೭ ರಿಂದ ಜರ್ಮನ್ ಸೇನಾಮುಖವು ಇಂಗ್ಲೀಷರಿಂದ ಭೇದಿಸಲ್ಪಡುವುದು. ಡಿಶಂಬರ್ ತಾ|| ೩೧ ರಲ್ಲಿ ಇಂಗ್ಲೀಷ್ ಸೇನಾಮುಖವು ಲಿಲ್ಲಿ ಪಟ್ಟಣದ ಹತ್ತಿರವೂ, ಫ್ರೆಂಚ್ ಸೇನಾಮುಖವು ಮಾಂಬರ್ಜಿಯಹತ್ತಿರವೂ ಏರ್ಪಡುವುವು. ೧೯೧೮ ನೆ ಫೆಬ್ರವರಿ ತಾ|| ೨ ರೊಳಗಾಗಿ ಜರ್ಮನರು ಫ್ರಾನ್ಸಿನಿಂದ ಹೊರಕ್ಕೆ ಅಟ್ಟಲ್ಪಡುವರು. ಆ ವರ್ಷದ ಏಪ್ರಿಲ್ ತಾ|| ೧೫ ರಲ್ಲಿ ಬೆಲ್ಜಿಯಮ್ಮಿಗೆ ಸೇರಿದ ಮಾನ್ಸಿನ ಹತ್ತಿರವೂ, ಜೂನ್ ತಾ|| ೯ ರಲ್ಲಿ ನಾಮೂರಿನ ಹತ್ತಿರವೂ, ಆಗಸ್ಟ್ ತಾ|| ೧೩ ರಲ್ಲಿ ಬ್ರಸಲ್ಸಿನ ಹತ್ತಿರವೂ ತೀವ್ರ ಯುದ್ಧಗಳು ನಡೆದು ಆ ಮೂರು ಕಡೆಯೂ ಶತ್ರುಗಳು ಸೋತುಹೋಗುವರು. ಆ ಡಿಶಂಬರ್ ತಾ|| ೨ ರೊಳಗಾಗಿ ಜರ್ಮನರು ಬೆಲ್ಜಿಯಮ್ಮಿನಿಂದ ಓಡಿಸಲ್ಪಡುವರು. ೧೯೧೯ ನೆ ವರ್ಷದ ಏಪ್ರಿಲ್ ತಾ|| ೨೭ ರೊಳಗಾಗಿ ರೈನಿಷ್ ಪ್ರಷ್ಯಾದೇಶವು ಮಿತ್ರಮಂಡಲಿ ವಶವಾಗುವುದು. ಜುಲೈ ತಾ|| ೧ ರಲ್ಲಿ ಇಂಗ್ಲೀಷರು ಸಂಧಿನಿಬಂಧನೆಗಳನ್ನು ವಿಧಿಸುವರು. ಆ ಸೆಪ್ಟಂಬರ್ ತಾ|| ೫ ರಿಂದ ತಾತ್ಕಾಲಿಕವಾಗಿ ಯುದ್ಧವು ನಿಲ್ಲುವುದು. ೨ ವರ್ಷಗಳ ಕಾಲದೊಳಗೆ ಸಂಧಿ ನೆರವೇರುವುದಿಲ್ಲ"

ಇತರವಿಷಯಗಳು.

ರಷ್ಯಾದಲ್ಲಿ ಶೀತಕಾಲವು ಈ ವರ್ಷ ಬೇಗನೆ ಆರಂಭವಾಗಿದೆ. ಮಂಜು ಸುರಿಯಲಾರಂಭಿಸಿದೆ.

ಪೂರ್ವಾಫ್ರಿಕಾದಲ್ಲಿ ಬೆಲ್ಜಿಯಂಸೈನಿಕರು ಜರ್ಮನರ ಮಾಹೆಂಬೆಪಟ್ಟಣವನ್ನು ವಶಪಡಿಸಿಕೊಂಡರು.

ಇಟಲಿಯವರು ಯುದ್ಧಮಾಡುತ್ತಿರುವ ಐಸಾಂಜೋ ಕಾರ್ಸೋ ಯುದ್ಧಭೂಮಿಗಳು ಜಲಮಯವಾಗಿ ಬೆಟ್ಟಗಳೆಲ್ಲಾ ಸರೋವರದಂತಾಗಿವೆ. ಟ್ರೆಂಟಿನೋದಲ್ಲಿ ಮಂಜು ವಿಪರೀತವಾಗಿ ಸುರಿಯುತ್ತಿದೆ.

ತುರ್ಕಿದೇಶದಲ್ಲಿ ಯುದ್ಧಮಾಡುತ್ತಿರುವ ರಷ್ಯನ್ ಸೈನ್ಯಗಳು ಉರ್ಮಿಯಾವಿಗೆ ಪಶ್ಚಿಮಭಾಗದಲ್ಲಿರುವ ೨ ಗ್ರಾಮಗಳನ್ನು ವಶಪಡಿಸಿಕೊಂಡು ೨೫೦ ಮಂದಿ ಕುರ್ದು ಸೈನಿಕರನ್ನು ಸೆರೆಹಿಡಿದಿದ್ದಾರೆ. ಶತ್ರುಸೈನ್ಯಗಳು ಗ್ರೀಟ್‌ಜಾಬು ಮಾರ್ಗವಾಗಿ ತಲೆತಪ್ಪಿಸಿಕೊಂಡು ಓಡಿಹೋಗುತ್ತ ದಾರಿಯಲ್ಲಿ ೩ ಸೇತುಗಳನ್ನು ಹಾಳ್ಮಾಡಿವೆ.

ಕಳೆದ ವಾರದಲ್ಲಿ ಶತ್ರುವಿಮಾನಗಳ ದಾಳಿಯು ಇಂಗ್ಲೆಂಡಿನಮೇಲೆ ತಲೆಯಿಕ್ಕಿಲ್ಲ. ಅವರ ಸಬ್‌ಮೆರೀನುಗಳ ಹಾವಳಿಯೂ ಕೂಡ ಕುಗ್ಗಿದಂತೆ ಕಾಣುತ್ತಿದೆ. ತಾ|| ೧೦ ಕ್ಕೆ ಕಡೆಯಾದ ವಾರದಲ್ಲಿ ಇಂಗ್ಲೀಷ್‌ತೀರಗಳಿಗೆ ೨೫೧೯ ಹಡಗುಗಳು ಹೊರಗಣಿಂದ ಬಂದು ೨೬೩೨ ಹಡಗುಗಳು ಅಲ್ಲಿಂದ ಹೊರಕ್ಕೆ ಹೋಗಿರುತ್ತವೆ. ೧೬ ಇಂಗ್ಲೀಷರ ಹಡಗುಗಳೂ ಅಂಬಿಗರ ದೋಣಿಗಳು ಮೂರೂ ಸಹ ಮುಳುಗಿಸಲ್ಪಟ್ಟಿವೆ. ಅಲ್ಲದೆ ಅದೇ ವಾರದಲ್ಲಿ ಫ್ರೆಂಚರ ೫ ಹಡಗುಗಳೂ ಇಟಲಿಯವರ ೪ ಹಡಗುಗಳೂ ಸಹ ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ.

ಜರ್ಮನ್ ಕೈಜರರು ಬಲ್ಗೇರಿಯಾ ರಾಜಧಾನಿಗೆ ಹೋಗಿದ್ದರು. ಅಲ್ಲಿಯ ಪ್ರಭುವು ಬಹಳ ವೈಭವದಿಂದ ಪಟ್ಟಣವನ್ನಲಂಕರಿಸಿ ಇದಿರ್ಗೊಂಡು ಉತ್ಸವಮಾಡಿ ಕರೆದುಕೊಂಡುಹೋಗಿ ಔತಣ ಮೊದಲಾದುವುಗಳಿಂದ ಸಂತೋಷಪಡಿಸಿದರು. ಆಗ ಇಬ್ಬರು ಪ್ರಭುಗಳೂ ದೀರ್ಘವಾಗಿ ಉಪನ್ಯಾಸಗಳನ್ನು ಮಾಡಿದರಂತೆ. ಈಗ ಕೈಜರು ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ಲಿಗೆ ಹೋಗಿದ್ದಾರೆ. ಅಲ್ಲೂ ವಿಶೇಷ ವಿಜೃಂಭಣೆಯಿಂದ ಸತ್ಕಾರಗಳು ನಡೆದಿರುತ್ತವೆ. ತುರ್ಕಿ ಸುಲ್ತಾನರೂ, ಯುವರಾಜರೂ, ಪೂರ್ವದ ಚಕ್ರವರ್ತಿಯೂ ಸಹ ಕೈಜರರನ್ನು ಇದಿರ್ಗೊಂಡು ಮರ್ಯಾದಿಸಿದರು.

ಪತ್ರವ್ಯವಹಾರ.

ಅರಸೀಕೆರೆ ಟವನ್ನಿನಲ್ಲಿ ನಡೆದ ಬಾಲಿಕಾಪಾಠಶಾಲಾ ಸ್ಥಳಭಿತ್ತಿ ಮಹೋತ್ಸವ.

ಹಾಸನ ಡಿ|| ಅರಸೀಕೆರೆ ಟವನ್ನಿನಲ್ಲಿ ತಾ|| ೨೮-೯-೧೯೧೭ ನೆ ಶುಕ್ರವಾರ ಸಾಯಂಕಾಲ ೫ ಘಂಟೆ ಸಮಯದಲ್ಲಿ ಹಾಸನ ಡಿ|| ಡೆ|| ಕ|| ರಾದ ಮ|| ಸಿ. ವೆಂಕಟ್ರಾವ್ ಬಿ. ಎ. ಯವರನ್ನು ಬಂಗಲೆಯಿಂದ ಹಲ್ಲೂರು ಮ|| ರಾ|| ಸಾ|| ಮರುಳಸಿದ್ದಪ್ಪನವರು ಈ ಗ್ರಾಮದ ದೊಡ್ಡಮನುಷ್ಯರುಗಳು ವಾದ್ಯಘೋಷದೊಡನೆ ಬಾಲಿಕಾಪಾಠಶಾಲೆಯನ್ನು ಕಟ್ಟತಕ್ಕ ಸ್ಥಳದಲ್ಲಿ ವೊದಲೇ ಏರ್ಪಾಡುಮಾಡಿದ್ದ ಚಪ್ಪರಕ್ಕೆ ಕರೆದುಕೊಂಡು ಬಂದರು. ಅವರ ಜೊತೆಯಲ್ಲಿ ಜನರಲ್ ಅ|| ಕ|| ಮ|| ಟಿ|| ವೆಂಕಟರಾಮಯ್ಯ ಬಿ. ಎ. ಯವರು ಎಕನಾಮಿಕ್ ಸೂಪರಿಂಟೆಂಡೆಂಟ್ ಧರ್ಮರಾಯರು ವಿದ್ಯಾಭ್ಯಾಸದ ಇಲಾಖಾ ಡಿ|| ಇನ್‌ಸ್ಪೆಕ್ಟರಾದ ಶ್ರೀಮತಿ ಎಸ್. ರಂಗಮ್ಮನವರು ತಾ|| ಅಮಲ್ದಾರ್ ಮ|| ಪಿ. ಕೃಷ್ಣರಾವ್ ಇವರೇ ವೊದಲಾದ ದೊಡ್ಡಮನುಷ್ಯರುಗಳು ಹಾಜರಿದ್ದರು. ಈ ಮಹೋತ್ಸವ ಕಾರ್ಯಗಳನ್ನೆಲ್ಲಾ ನೆರವೇರಿಸುವುದಕ್ಕಾಗಿ ಹಲ್ಲೂರು ಸಾ|| ಮರುಳಸಿದ್ದಪ್ಪನವರ ಪ್ರಾರ್ಥನೆಮೇರೆ ಡೆ|| ಕ|| ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಅನಂತರ ಮ|| ಪಿ. ರುದ್ರಪ್ಪನವರು ಎಲ್ಲರಿಗೂ ಸುಸ್ವಾಗತವನ್ನು ಬಯಸಿ ೧ ಅಡ್ರಸ್ಸನ್ನು ಓದಿದರು. ಅಮೇಲೆ ಡೆ|| ಕಮಿಷನರ್‌ರವರು ವಿದ್ಯಾಭ್ಯಾಸದ ವಿಷಯವಾಗಿಯೂ ಅದರಲ್ಲೂ ಸ್ತ್ರೀ ವಿದ್ಯಾಭ್ಯಾಸದ ಪ್ರಾಮುಖ್ಯತೆಯ ವಿಷಯವಾಗಿಯೂ ಮತ್ತು ಖಾಸಗೀ ದೊಡ್ಡಮನುಷ್ಯರುಗಳು ಈ ವಿಷಯವಾಗಿ ತಾವಾಗಿಯೇ ಮುಂದಾಳುಗಳಾಗಿ ಬಂದು ಸಾವಿರಾರು ರೂಪಾಯಿಗಳನ್ನು ಮುಟ್ಟಿಸಿ ಧರ್ಮಾರ್ಥವಾಗಿ ಕಟ್ಟಡ ಕಟ್ಟಿಸಿಕೊಡುವವರ ಮೂಲಕ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಮಾಡುತ್ತಿರುವ ವಿಷಯದಲ್ಲಿಯೂ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದನಂತರ ವೊದಲೇ ಸಿದ್ಧಪಡಿಸಿದ್ದ ಸ್ಥಳದಲ್ಲಿ ಅಸ್ತಿಭಾರ ಶಿಲಾಸ್ಥಾಪನೆಯನ್ನು ತಮ್ಮ ಸ್ವಹಸ್ತದಿಂದ ಮಾಡಿದರು. ತರುವಾಯ ಸಾ|| ಮರುಳಸಿದ್ಧಪ್ಪನವರು ಈ ಕಟ್ಟಡವನ್ನು ಕಟ್ಟಿಸಬೇಕೆಂಬ ಸಂಕಲ್ಪಮಾಡಿದ ಸ್ವಲ್ಪದಿವಸದಲ್ಲಿಯೇ ಈ ಕಟ್ಟಡದ ಸ್ಥಳಭಿತ್ತಿಯನ್ನು ಜಾಗ್ರತೆ ನೆರವೇರಿಸಿದಂತೆಯೇ ಕಟ್ಟಡಕಟ್ಟಿ ಪೂರೈಸುವದನ್ನೂ ಕೂಡಾ ಜಾಗ್ರತೆ ನೆರವೇರಿಸಬೇಕೆಂಬ ವಿಷಯವಾಗಿ ವಿದ್ಯಾಭ್ಯಾಸದ ಡಿ|| ಇನ್‌ಸ್ಪೆಕ್ಟರವರು ಡೆ|| ಇನ್‌ಸ್ಪೆಕ್ಟರ್ ಮ|| ದೇಶಿಕಾಚಾರ್ಯರವರು ಉಪನ್ಯಾಸಮಾಡಿದರು ಡೆ|| ಕ|| ರವರೇ ವೊದಲಾದ ಆಫೀಸರುಗಳೂ ಮತ್ತು ಇತರ ದೊಡ್ಡಮನುಷ್ಯರುಗಳೂ ಈ ಮಹೋತ್ಸವಕ್ಕೆ ದಯಮಾಡಿ ಕಾರ್ಯನೆರವೇರಿಸಿದ್ದಕ್ಕಾಗಿ ಸಾ|| ಮರುಳಸಿದ್ಧಪ್ಪನವರು ಎಲ್ಲರಿಗೂ ವಂದನೆಯನ್ನು ಅರ್ಪಿಸಿದರು. ಅನಂತರ ನೆರೆದಿದ್ದವರಿಗೆಲ್ಲಾ ಗಂಧಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟುವು. ಈ ಉತ್ಸವಕಾಲದಲ್ಲಿ ಈ ಊರಿನ ಬಾಲಿಕಾ ಪಾಠಶಾಲೆಯ ಬಾಲಿಕೆಯರನ್ನೆಲ್ಲಾ ಬರಮಾಡಿಕೊಂಡು ಅವರುಗಳಿಂದ ಹಾಡುಗಳನ್ನು ಹಾಡಿಸಿ ಅವರುಗಳಿಗೆ ಸಕ್ಕರೆ ಮಿಠಾಯಿ ಮುಂತಾದ್ದನ್ನು ಸಾ|| ಮರುಳಸಿದ್ದಪ್ಪನವರು ಹಂಚಿಸಿದರು. ಈ ರೀತಿಯಾಗಿ ಉತ್ಸವಕಾರ್ಯಗಳೆಲ್ಲಾ ನೆರವೇರಿಸಲ್ಪಟ್ಟುವು.

ಜಪಾನ್ ದೇಶದಲ್ಲಿ ನಡೆಯುತ್ತಿರುವ ಒಂದು ಚಮತ್ಕಾರವಾದ ಸೀಸದಕಡ್ಡಿಯ ಕೈಗಾರಿಕೆ.

ನಮ್ಮ ದೇಶದಲ್ಲಿ ಕಾಡುಗಳು ಅಪರಿಮಿತವಾಗಿರುವುದರಿಂದ ಅವುಗಳಲ್ಲಿ ಅನೇಕ ಜಾತಿಯ ಮೃದುವಾದ ಮರಗಳು ಸಿಕ್ಕುತ್ತವೆ. ಇದರ ಮಹತ್ತರವಾದ ಉಪಯೋಗವು ಇಲ್ಲಿ ಇನ್ನೂ ಪ್ರಚಾರಕ್ಕೆ ಬಂದಿಲ್ಲವಾದಕಾರಣ ಇವುಗಳ ವಿಷಯದಲ್ಲಿ ನಮ್ಮ ದೇಶೀಯರಿಗೆ ಬಹಳ ಅಸಡ್ಡೆಯಾಗಿದೆ. ಇದರ ಮಹತ್ವಯವನ್ನೂ ಉಪಯೋಗವನ್ನೂ ನಾವು ತಿಳಿಯಬೇಕಾದರೆ ಜಪಾನ್ ದೇಶದಲ್ಲಿ ಸಿಕ್ಕುವ ಮೃದುವಾದ ಜಾತಾಯಿ (ಪೈನ್. ಗ್ರೀನ್. ಟ್ರಿ) ಮುಂತಾದ ಮರಗಳಿಂದ ಆ ದೇಶೀಯರು ಯಾವ ಯಾವ ಸಾಮಾನುಗಳನ್ನು ಮಾಡುತ್ತಾರೆನ್ನುವುದನ್ನು ಸ್ವಲ್ಪಮಟ್ಟಿಗೆ ತಿಳಿಯತಕ್ಕದ್ದು ಅವಶ್ಯಕ. ಇವರು ಮೇಲೆ ಹೇಳಿದ ಜಾತಿಯ ಮರಗಳನ್ನು ಶೃಂಗಾರಕ್ಕಾಗಿ ಮನೆಗಳ ಹಿತ್ತಲಿನಲ್ಲಿಯೂ ಅಂಗಳಗಳಲ್ಲಿಯೂ ಬೆಳೆಯುತ್ತಾರೆ. ಈ ವಿಧವಾದ ಬೆಳಸು ಜಪಾನಿನ ಒಂದು ಪ್ರಾಂತವಾದ ನಗೋಯದಲ್ಲಿ ವಿಶೇಷವಾಗಿದೆ. ಕಾಡುಗಳಲ್ಲಿಯಾದರೋ ಎಲ್ಲಿ ನೋಡಿದರೂ ಈ ಮರಗಳೇ ಹೇರಳವಾಗಿವೆ. ಕಾಡುಗಳಿಗೆ ಹೋಗಿ ಅಲ್ಲಿ ಕತ್ತರಿಸಿದ ದೊಡ್ಡ ಮರದ ತುಂಡುಗಳನ್ನು ಇವರು ನದಿಗಳಲ್ಲಿ ಹಾಕಿಬಿಡುತ್ತಾರೆ. ಇವು ಊರಿಗೆ ಬಂದು ತಲುಪುವದಕ್ಕೆ ಕೆಲವು ತಿಂಗಳು ಹಿಡಿಯುತ್ತದೆ. ಈ ವಿಧವಾದ ಕೆಲಸದಿಂದ ಇವರಿಗೆ ಎರಡು ವಿಧವಾದ ಪ್ರಯೋಜನ ಉಂಟು. ಹೇಗೆಂದರೆ ಕಾಡಿನಿಂದ ತಾವು ಇರುವ ಸ್ಥಳಕ್ಕೆ ಮರವನ್ನು ಸಾಗಿಸಬೇಕಾದ ಖರ್ಚು ತಪ್ಪುತ್ತದೆ. ಮತ್ತು ಮರಗಳು ಚೆನ್ನಾಗಿ ನೀರಿನಲ್ಲಿ ನೆನೆಯುವದರಿಂದ ಕೆಡುವುದಕ್ಕೆ ಆಸ್ಪದವಿರುವುದಿಲ್ಲ. ಅಲ್ಲದೆ ಇವು ಕೆಲಸಕ್ಕೆ ಉಪಯೋಗಿಸಿಕೊಳ್ಳಲು ತಕ್ಕ ಹಾಗೆ ಹದಕ್ಕೆ ಬರುತ್ತವೆ. ಒಂದುವೇಳೆ ನೀರಿನಲ್ಲಿ ನೆನೆಯೋಣದರಿಂದ ಹದಕ್ಕೆ ಬಾರದೆಹೋದರೆ ಹಬೆಯಿಂದ ಇವನ್ನು ಅನುಕೂಲವಾದ ರೀತಿಗೆ ತರಬಹುದು. ಹೀಗೆ ಹದಮಾಡಲ್ಪಟ್ಟ ತುಂಡುಗಳನ್ನು ಜಪಾನ್ ದೇಶಸ್ಥರು ವೊದಲು ಸಣ್ಣ ಹಲಗೆಗಳಾಗಿ ಕೊಯ್ದು ಕೊಳ್ಳುತ್ತಾರೆ. ಈ ಹಲಗೆಗಳಲ್ಲಿ ೪ ಅಡಿ ಉದ್ದ ೧| ಅಡಿ ಅಗಲ || ಅಡಿ ದಪ್ಪವುಳ್ಳ ಮರದ ತುಂಡಿನಲ್ಲಿ ಸೇರಿಸಿರುವ ೧ ಅಂಗುಲ ದಪ್ಪ ೧೨ ಅಂಗುಲ ಅಗಲ ೬ ಅಂಗುಲ ಉದ್ದವಾದ ಉಕ್ಕಿಯಂತೆ ಅಗಲವಾಗಿರುವ ಅಲಗುಳ್ಳ ಕೋಬಡಪ್ಲೇನ್‌ದಿಂದ ತೆಳುವಾದ ಪೊರೆಗಳನ್ನು ತೆಗೆಯುತ್ತಾರೆ. ಅನೇಕ ಕೆಲಸಗಳು ಈ ಪೊರೆಗಳಿಂದಲೇ ನಡೆಯುತ್ತವೆಯಾದುದರಿಂದ ಅವುಗಳನ್ನು ದಪ್ಪ ಸಣ್ಣ ಮಾಡಿಕೊಳ್ಳಲು ಅನುಕೂಲವಾಗಿರುವಂತೆ ಕೋಬಡದ ಅಲಗಿಗೆ ೪ ತಿರುಪಿನ ಮೊಳೆಗಳು ಸೇರಿಸಲ್ಪಟ್ಟಿವೆ. ಈ ವಿಧವಾದ ಮರದ ಕಾಗದಗಳು ಜಪಾನಿನ ದೊಡ್ಡ ಪಟ್ಟಣವಾದ ಟೋಕಿಯೋದಲ್ಲಿ ವಿಶೇಷವಾಗಿ ತಯಾರಾಗುತ್ತವೆ. ಈ ಕಾಗದಕ್ಕೆ ವಜ್ರದ ಅಂಟನ್ನು ಬಳಿದು ಹದಮಾಡಿ ಹೊಸೆದ ಸೀಸವನ್ನು ಸೇರಿಸಿ ಸುರುಳಿಸುತ್ತಾರೆ. ಮೇಲ್ಭಾಗಕ್ಕೆ ಬಣ್ಣವನ್ನು ಬೇಕಾದರೂ ಕೊಡಬಹುದು ಒಣಗಿದಮೇಲೆ ಈ ಸುರುಳಿಗಳನ್ನು ೬ ಅಂಗುಲ ಅಳತೆಗೆ ಕತ್ತರಿಸಿ ಹಿಂದುಗಡೆ ಅಚ್ಚನ್ನು ಹಾಕಿದರೆ ನಾವು ಧೈರಿಗಳಲ್ಲಿ ಇಟ್ಟುಕೊಂಡು ಉಪಯೋಗಿಸುವ ಸೀಸದಕಡ್ಡಿಗಳಾಗುತ್ತವೆ. ಕಾಗದವನ್ನು ಹೆಚ್ಚಾಗಿ ಸುತ್ತಿದರೆ ದಪ್ಪ ಸೀಸದಕಡ್ಡಿಗಳನ್ನು ಸೀಸಕ್ಕೆ ಬದಲಾಗಿ ಸಣ್ಣದಾಗಿ ಹೊಸೆದ ಬಳಪವನ್ನು ಒಳಗೆ ಸೇರಿಸಿದರೆ ಬಳಪದ ಸೀಸದಕಡ್ಡಿಯನ್ನೂ ತಯಾರುಮಾಡಬಹುದು. ಮರದ ಕಾಗದಗಳಿಂದ ಬರೀ ಸೀಸದಕಡ್ಡಿಯೊಂದನ್ನು ಮಾಡುವುದಲ್ಲದೆ ಜಪಾನಿನ ಜನಗಳು ಅವುಗಳಿಂದ ಮನೆಕೆಲಸಕ್ಕೆ ಸದಾ ಯೋಗ್ಯವಾಗುವ ಅನೇಕ ವಸ್ತುಗಳನ್ನು ಮಾಡುತ್ತಾರೆ. ಅವರು ಉಪಯೋಗಿಸುವ ಸಾಧಾರಣವಾದ ಟೊಪ್ಪಿಗಳು ಕೊಡೆಗಳು, ಮಳೆಗಾಲದ ಕೋಟುಗಳು, ದುಡ್ಡು ಹಾಕುವ ಚೀಲಗಳು, ಮುಂತಾದ ಸಾಮಾನುಗಳನ್ನು ಈ ಕಾಗದದಿಂದಲೇ ಬಹು ಅಂದವಾಗಿಯೂ ನಾಜೂಕಾಗಿಯೂ ಮಾಡುತ್ತಾರೆ. ಈ ವಿಧವಾದ ಪದಾರ್ಥಗಳು ನಮ್ಮ ದೇಶದಲ್ಲಿ ಬಹುಮಟ್ಟಿಗೆ ಬಳಕೆಯಲ್ಲಿಲ್ಲದೆ ಇರುವುದರಿಂದ ಅನೇಕರಿಗೆ ಇದರ ಸಂಗತಿ ನೂತನವಾಗಿಯೂ ಆಶ್ಚರ್ಯಕರವಾಗಿಯೂ ತೋರಬಹುದು. ವಸ್ತುತಃ ನಿರ್ಮಿಸಲು ಇವರಿಗೆ ಅಸಾಧ್ಯವಾಗಿರುವುದರಿಂದ ಹೀಗೆ ಕಾಣುವುದು ಸಹಜವಾಗಿದೆ. ಆದರೆ ಸ್ವಲ್ಪ ಕ್ರಮಪಟ್ಟು ಮೇಲೆಹೇಳಿದ ಪದಾರ್ಥಗಳನ್ನು ಮಾಡಲು ಪ್ರಯತ್ನಪಟ್ಟರೆ ಇದರ ನಿಜಾಂಶವು ಅಗ ಎಲ್ಲರಿಗೂ

ಹಳವಾಗಿ ದೊರೆಯೋಣದರಿಂದ ಇದರ ಕೈಗಾರಿಕೆಯನ್ನು ಕೈಕೊಳ್ಳುವುದು ಅತ್ಯಂತ ಸುಲಭವಾಗಿದೆ. ಸಾಕಾದಷ್ಟು ಉತ್ತೇಜನವನ್ನೂ ಸಹಾಯವನ್ನೂ ಸರ್ಕಾರದವರು ಇದರಲ್ಲಿ ಅಭಿರುಚಿಯುಳ್ಳ ಮನುಷ್ಯರಿಗೆ ಕೊಡುತ್ತಾ ಬಂದಲ್ಲಿ ದಿನೇದಿನೇ ನಮ್ಮ ದೇಶವು ಏಳಿಗೆಗೆ ಬರಲು ಸಹಾಯವಾಗುತ್ತದೆ.

ಟಿ. ಸಿ. ಅನ್ನದಾನಪ್ಪ.

ಕಪ್ಪು ಶಾಯಿಪುಡಿ ಪೊಟ್ಟಣಗಳು.

೧೦೦ ಕ್ಕೆ ೬ ಆಣೆ. ೩೦೦ ಕ್ಕೆ ೧ ರೂ. ೫೦೦ ಕ್ಕೆ ೧—೯—೦ ೧೦೦೦ ಕ್ಕೆ ೨—೮—೦ ನೀಲಿ ಕಪ್ಪು ೧೦೦ ಕ್ಕೆ ೧ ರೂ. ಅಂಚೆವೆಚ್ಚ ಬೇರೆ ವಿ. ಪಿ. ಯಲ್ಲಿ ತರಿಸಿ ಮಾರುವುದು ಅತ್ಯಂತ ಲಾಭಕರ! ಹಲ್ಲು ನೋವಿನ ಔಷಧಿ ಖಾತ್ರಿಯಾದದ್ದು ಬೆಲೆ ೧ ರೂ.

ವಿಳಾಸ:—ವಿ. ಪಿ. ಹಳೇ ಸಿದ್ದಿಕಟ್ಟೆ,
ಬೆಂಗಳೂರು ಸಿಟಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.
ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 46

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಆಫ್ರಿಕಾ, ವೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನು ಕಾದು ನೋರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರುಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರುಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ಸಂಸ್ಕೃತ ಶಾಲಾರಂಭವು.

ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಸ್ವಾಮಿಗಳವರ ಶಾಖಾಮಠವಾದ ಹಾವೇರಿಯಲ್ಲಿರುವ ಹೊಸಮಠದಲ್ಲಿ ಸದರಿ ಜಗದ್ಗುರುಗಳವರ ಅಪ್ಪಣೆಯಮೇರೆ ಸಂಸ್ಕೃತಪಾಠಶಾಲೆಯು ತಾ|| ೩೦—೭—೧೯೧೭ ನೆಯ ಸೋಮವಾರ ದಿವಸ ಪ್ರಾರಂಭಿಸಲ್ಪಟ್ಟಿತು. ವೇ|| ವಂಟಮುರಿ ಚನ್ನಬಸವಶಾಸ್ತ್ರಿಗಳೇ ಅಧ್ಯಾಪಕರಾಗಿದ್ದಾರೆ. ಸಾಹಿತ್ಯ ಓದಬೇಕೆಂದುಳ್ಳ ವೀರಮಾಹೇಶ್ವರ ವಿದ್ಯಾರ್ಥಿಗಳು ಕೂಡಲೇ ಬರಬೇಕು. ವಿದ್ಯಾರ್ಥಿಗಳು ಭರ್ತಿಯಾದಮೇಲೆ ಪಾಠಶಾಲೆಯಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ.

ಸೆಕ್ರಟರಿ.
4 ಗೋಲಪ್ಪ ಹಳಕೊಪ್ಪದ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲರಿಗೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವೇದ,ಶಾಸ್ತ್ರ ಮತ್ತು ಚರಿತ್ರೆಗಳ ಆಧಾರದಿಂದ "ಕುರುಬರಜಾತಿ" ನಡಾವಳಿ, ಆಚಾರಗಳ, ಇವರಲ್ಲಿ ರಾಜ್ಯಧರ್ಮ ಸ್ಥಾಪಕರಾದ ಪೂರ್ವಿಕರ ಸಂಗತಿಗಳ ೧೯೨ ಪುಟದ ದೊಡ್ಡ ಪುಸ್ತಕ ಅಚ್ಚಾಗುತ್ತಲಿದೆ. ಈ ನವರಾತ್ರಿಯೊಳಗಾಗಿ ಬರುವ ಆರ್ಡರುಗಳಿಗೆ ಮಾತ್ರ ೧೨ ಆಣೆ! (ಹಾಸಲು ಬೇರೆ) ಮುಂದೆ ಹೆಚ್ಚಾಗುವದು.

5 ವಿಳಾಸ—ಎಂ. ಎಸ್. ಲಿಂಗಪ್ಪ ಎಡಿಟರ್,
ಬೆಂಗಳೂರು ಸಿಟಿ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 8

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ವೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ವೊದಲಾದವು ಫಕ್ತಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಯೆ ಮದನೋದ್ಭವ ಗುಳಿಗೆಗಳನ್ನುಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟೆ.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೭ ನೆಯ ಇಸವಿ ಅಕ್ಟೋಬರ್ ತಾ|| ೨೧ ರಿಂದ ೧೯೧೭ ನೆಯ ಅಕ್ಟೋಬರ್ ತಾ|| ೨೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಶ್ವಯುಜ ಶು|| ಪಂಚಮಿಯಿಂದ ಆಶ್ವಯುಜ ಶು|| ದ್ವಾದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ಶೇದಿ
21	[1] ಭಾನು	ಪಂಚ	5-21	ಮೂಲ	45-43	5
22	ಸೋಮ	ಷಷ್ಠಿ	2-16	ಉಪರಿ	56-37	6
23	[2] ಮಂಗಳ	ಅಷ್ಟಮಿ	53-50	ಉಷಾ	40-44	7
24	[3] ಬುಧ	ನವಮಿ	48-22	ಶ್ರವಣ	37-8	8
25	[4] ಗುರು	ದಶಮಿ	42-32	ಧನಿಷ್ಠ	33-8	9
26	[5] ಶುಕ್ರ	ಏಕಾದ	36-28	ಶತಭಿಷ	29-6	10
27	[6] ಶನಿ	ದ್ವಾದಶಿ	30-22	ಪೂಭಾ	24-47	11

(1) ಸರಸ್ವತೀಪೂಜಾ. (2) ದುರ್ಗಾಷ್ಟಮೀ ಕಾಳರಾತ್ರೀ ಮಹಿಷಾಸುರ ಸಂಹಾರಃ. (3) ಸ್ವಾಯಂಭುವಮನ್ವಾದಿಃ, ಮಹಾನವಮೀ ಆಯುಧಗಜಾಶ್ವಪೂಜಾ, ಅಮಲುದೇವಕಾಪೂಜಾ. (4) ವಿಜಯದಶಮೀ ಶಮೀಪೂಜಾ (5) ಸರ್ವತ್ರೈಕಾದಶೀ. (6) ಶನಿಪ್ರದೋಷಃ, ಗೋದ್ವಾದಶೀ ವೊಹರಂ ಕೊನೇದಿನ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತ್ರೋತುಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಶೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಶ್ರೀಮಂಚೆತ್ರೀಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಅಕ್ಟೋಬರ್ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೪೩

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಕ್ಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹಾಳಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೊಗಳು ಕೂಡಿಸಿ ಚಿತ್ತಾಕರ್ಷಕವಾದ ನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರ್ವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದ ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದೆ ಕಾಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಸಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೊ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝುಂಡೆ ಹಚ್ಚಿದ ಅದ್ವಿತಿಯ ಶಂಭುವಿನ ಅವತಾರಿಯಾದ "ಶ್ರೀ ಕಲ್ಯಾಣ ಬಸವೇಶ್ವರದೇವರ" ಅರಿವಿ ಮೇಲೆ ತೆಗೆದಿದ್ದ ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಆದ್ಯಕರ್ತವ್ಯ ಅದೆ ಫುಲ್‌ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕೈ ಬಣ್ಣದ್ದು ರೂ. ೧ ಟಪಾಲ್‌ಖರ್ಚು ಬೇರೆ.

ಶ್ರೀಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುತ್ತದೆ ಫುಲ್‌ಸೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸೈಜು ರೂ. ೦-೫-೦ ಮೇಲೆ ಕೈ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೊಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೇ ಫು|| ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ಆಣೆ ೮ ಮೇಲೆ ಕೈ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಅವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೊಟೊ ಬೇರೆ ಬೇರೆ ಸಿಕ್ಕುತ್ತವೆ.

ಪುರವುರಿಗೇ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಜಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪೆನಿ,
3 ಸೊಲ್ಲಾಪುರ ಸಿಟಿ.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

49 ### ಮೂರುಕಾಸು!

ಕಣ್ಣುಬೇನೆಯ ಔಷಧ—ಕಣ್ಣು ಕೆಂಪಗಾಗೋಣ ಪಿಚ್ಚು ಬರೋಣ ಬಾವು ಇಂಥ ಈ ಕಣ್ಣುರೋಗಗಳು ಮೂರೇ ದಿವಸಗಳಲ್ಲಿ ಪೂರ್ಣ ಗುಣವಾಗುವುದು. ಔಷಧವನ್ನು ಕಣ್ಣಿಗೆ ಹಾಕಿದರೆ ಯಾವತರದ ಬಾಧೆಯಾಗದೆ ಕಣ್ಣಿಗೆ ತಂಪು ಕೊಡುವುದು. ೧ ಚೀಟಿಗೆ ಮೂರುಕಾಸು, ೧೦೦ ಕ್ಕೆ ೧ ರೂ.

ಒಂದೇ ಆಣೆ.

ಸುವಾಸಿಕ ಹುರುಕಿನ ಔಷಧ.

ಒಣಹುರುಕು ಹಸಿಕಜ್ಜಿ ಗಜಕರ್ಣ ಇಸಬು ಈ ತ್ವಚರೋಗಗಳು ಬಹುಬೇಗ ಗುಣವಾಗಿ ಶರೀರವು ಮೃದು ಮತ್ತು ಸುವಾಸಿಕವಾಗುವುದು. ೧ ಚೀಟಿಗೆ ೧ ಆಣೆ. ೧೦೦ ಕ್ಕೆ ೫ ರೂ.

ಕಾಲರಾಪಿಲ್ಸ.

ಗಾಂತಿಭೇದಿ, ಕಾಲರಾ, ಮಹಾಮಾರಿ ರೋಗವು ಪ್ರಾರಂಭವಾದ ಕೂಡಲೇ ಈ ಮಾತ್ರೆಗಳನ್ನು ಕೊಟ್ಟರೆ ಕೂಡಲೇ ಗುಣವಾಗುವದು.

ಬೆಲೆ ೩೦ ಮಾತ್ರೆಗೆ ೧ ರೂ. ೧೦೦ ೩ ರೂ. ವ್ಯಾಪಾರಸ್ಥರಿಗೆ ಭರಪೂರ ಕಮಿಷನ್.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಅವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು. ಅಂಚೆವೆಚ್ಚಕ್ಕಾಗಿ ಅರ್ಧ ಆಣೆ ಟಿಕೆಟ್ಟು ಕಳುಹಿಸಿದಲ್ಲಿ ಆರ್ಯೌಷಧಿ ಗುಣಾದರ್ಶ ಹೆಂಬ ಬುಕ್ಕು ಉಚಿತವಾಗಿ ಕಳುಹಿಸುವೆವು.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಚಿಕ್ಕೋಡಿ, ಬೆಳಗಾಂ ಡಿಸ್ಟ್ರಿಕ್ಟು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ವೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚಿಜಡ್ಡು, ಗುದ್ದವ್ವನ ಬೇನೆ, ಹುರುಳು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ಹಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದಪಂಚು, ಸಣ್ಣಕೂಸುಗಳ ಬಾಲಗ್ರಹ, ಅರಡು ಮುಟ್ಟಿದೋಷ, ಹೊಟ್ಟೆ ದೊಡ್ಡದಾ

ಗೋಣ, ಮೈ ಹೊರಬೀಳೋಣ, ಮತ್ತು ಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ. ಪಿ. ಖರ್ಚು ಬೇರೆ ಬೀಳುವದು. ಒಂದು ದಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ. ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಟತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
33 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ವೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣನಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನು, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೧೭ನೆ ಇಸವಿಯ ಅಕ್ಟೋಬರ್ ತಾ|| ೨೮ನೆಯ ಭಾನುವಾರ.

ವಸ್ತುಪ್ರದರ್ಶನವು.

ಈ ವರ್ಷದ ವಸ್ತುಪ್ರದರ್ಶನಾಲಯವು ಕಳೆದ ತಾ|| ೨೦ರಲ್ಲಿ ದಿವಾನ್ ಸರ್ ವಿಶ್ವೇಶ್ವರಯ್ಯನವರಿಂದ ತೆರೆಯಲ್ಪಟ್ಟಿತು. ಅಂದಿನಿಂದಲೂ ಪ್ರಜೆಗಳು ಹೋಗಿ ನೋಡಿಕೊಂಡು ಬರುತ್ತಿರುವರು. ಬರುವ ನವೆಂಬರ್ ತಾ|| ೫ ರ ವರೆಗೂ ಇದು ಪ್ರೇಕ್ಷಕರಿಗಾಗಿ ತೆರೆಯಲ್ಪಟ್ಟಿರುವುದು. ಈ ಸಲದ ಏರ್ಪಾಟುಗಳೆಲ್ಲವೂ ಹಿಂದಣ ಪದ್ಧತಿಯಂತೆಯೇ ಇವೆ. ಸಾಲುಕೊಟ್ಟಡಿಗಳಲ್ಲಿ ಬೇರೆಬೇರೆಯಾಗಿ ಆಯಾ ಡಿಸ್ಟ್ರಿಕ್ಟಿನಿಂದ ಬಂದಿರುವ ಕೃಷಿ ಶಿಲ್ಪಗಳಿಗೆ ಸಂಬಂಧಪಟ್ಟ ವಸ್ತುಗಳು ವಿಂಗಡವಾಗಿ ಇಡಲ್ಪಟ್ಟಿವೆ. ಸಂಸ್ಥಾನದ ಹೊರಗಣೆಯ ವಸ್ತುಗಳು ಎಲ್ಲೋ ಅಲ್ಪವಾಗಿವೆ. ಉಳಿದುವೆಲ್ಲಾ ಸ್ವದೇಶದ ವಸ್ತುಗಳೇ ಆಗಿರುತ್ತವೆ. ವ್ಯವಸಾಯಕ್ಕೂ ಕೈಗಾರಿಕೆಗೂ ಉಪಯೋಗಿಸತಕ್ಕ ಯಂತ್ರಸಾಮಗ್ರಿಗಳೂ, ಕಾಡಿನ ವಸ್ತುಗಳೂ, ಚಿತ್ರವಸ್ತುಗಳೂ ಸಹ ಆಯಾ ಸ್ಥಲಗಳಲ್ಲಿ ಪದ್ಧತಿಯಂತೆ ಪ್ರದರ್ಶನಕ್ಕಿಡಲ್ಪಟ್ಟಿವೆ. ಪ್ರದರ್ಶನೀಯವಾಗಿರುವ ಕೈಗಾರಿಕೆಯ ವಸ್ತುಗಳೊಳಗೆಲ್ಲಾ ಮನೆ ಕೈಗಾರಿಕೆಯ ಪದಾರ್ಥಗಳೇ ಹೆಚ್ಚಾಗಿ ಬಂದಿರುವಂತೆ ಗೊತ್ತಾಗುತ್ತದೆ. ಸ್ತ್ರೀಯರ ಕೈಗಾರಿಕೆಗೆ ಸಂಬಂಧಪಟ್ಟವುಗಳು ಕಳೆದವರ್ಷ ಬಂದಿದ್ದಷ್ಟು ಇರುವುದಿಲ್ಲ. ಒಟ್ಟಿನಲ್ಲಿ ಈ ಪ್ರದರ್ಶನವು ವರ್ಷವರ್ಷಕ್ಕೆ ಅಷ್ಟೇನೂ ಉತ್ಸಾಹಜನಕವಾಗಿಯೂ ಪ್ರವರ್ಧಮಾನವಾಗಿಯೂ ಇರುವಂತೆ ತೋರಲಿಲ್ಲ. ಕೆಲಸಗಾರರಲ್ಲಿ ತಾನಾಗಿ ಪ್ರೋತ್ಸಾಹವು ಹುಟ್ಟಿ ಅವರು ತಮ್ಮ ಪರಿಶ್ರಮದಲ್ಲಿ ನವೀನ ಸುಧಾರಣೆಗಳನ್ನು ಮಾಡಿ ನವನವ ವಸ್ತುನಿರ್ಮಾಣದಿಂದ ತಾವೂ ಹೆಸರನ್ನು ತಂದುಕೊಂಡು ದೇಶಕ್ಕೂ ಉಪಯೋಗಮಾಡಿ, ಧನಿಕರಾಗುವುದಕ್ಕೆ ಸಾಧಕವಾಗುವಂತೆ ವಸ್ತುಪ್ರದರ್ಶನದ ಏರ್ಪಾಟುಗಳನ್ನು ಮಾಡಿಡುವುದು ಅವಶ್ಯಕವಾಗಿದೆ. ಈಗಣ ಏರ್ಪಾಟಿನಿಂದ ವರ್ಷೆ ವರ್ಷೆ ಹತ್ತಾರು ಸಾವಿರ ರೂ. ಗಳು ಇದಕ್ಕೆ ವೆಚ್ಚವಾಗಿಹೋಗುತ್ತಿದ್ದರೂ ಕಸಬುದಾರರಿಗೆ ನಿಜವಾದ ಉತ್ತೇಜನಕ್ಕೆ ಇದರಲ್ಲಿ ಸರಿಯಾದ ಮಾರ್ಗವಿರುವಂತೆ ಕಾಣುವುದಿಲ್ಲ. ದೊಡ್ಡಸ್ತಿಗೆಯನ್ನೂ ಅನುಸರಣಮಾಡಿದವರನ್ನೂ ನೋಡಿ ಬಹುಮಾನ ವಿನಿಯೋಗವನ್ನು ನಡೆಸುತ್ತಿರುವರೆಂದು ಕಸಬುದಾರರಲ್ಲಿ ಗೊಣಗುಟ್ಟಾಟವು ಈಗ ಎಲ್ಲೆಲ್ಲೂ ಕೇಳಬರುತ್ತಿದೆ. ಉತ್ಪಾದಕವ್ಯಕ್ತಿಯಮೇಲಣ ಗಮನವನ್ನು ಬಿಟ್ಟು ವಸ್ತುಗುಣವಿಮರ್ಶೆಯನ್ನು ಮಾಡಿ ನಿಷ್ಪಕ್ಷಪಾತದಿಂದ ಪ್ರೋತ್ಸಾಹವನ್ನು ಕೊಡುವರೆಂಬ ನಂಬುಗೆಯು ಕೆಲಸಗಾರರಿಗೆ ಹೆಚ್ಚುವಂತೆ ಈ ಪ್ರದರ್ಶನಕಾರ್ಯ ಪ್ರವರ್ತಕರು ಮಾಡಿಡುವುದರಿಂದ ವಿಶೇಷ ಪ್ರಯೋಜನವುಂಟು.

ಮತ್ತೂ ಹೊರಗಣ ವಸ್ತುಗಳನ್ನು ಪ್ರದರ್ಶನಾಲಯದಲ್ಲಿ ಸಂಗ್ರಹಿಸಿಡುವ ಏರ್ಪಾಟನ್ನು ಬಿಟ್ಟಿರುವುದು ಕೂಡ ಅಷ್ಟೇನೂ ಪ್ರಶಸ್ತವಾಗಿ ತೋರುವುದಿಲ್ಲ. ಉತ್ಕೃಷ್ಟ ವಸ್ತುಗಳ ಅನುಕರಣ ಜ್ಞಾನವು ಶಿಲ್ಪಗಾರರಲ್ಲಿ ವಿಶೇಷವಾಗಿರುವುದು ಸಹಜ. ನಮ್ಮ ಜ್ಞಾನವೇ ನಮಗೆ ದೊಡ್ಡದಾಗಿರಬಾರದು. ಪರರಲ್ಲಿರುವ ಸಾಮರ್ಥ್ಯವಿಶೇಷವನ್ನು ನೋಡುತ್ತ ಬಂದಾಗಲೇ ನಮ್ಮಲ್ಲಿರುವ ಕುಂದುಗಳನ್ನು ತಿದ್ದಿಕೊಳ್ಳಲು ಅವಕಾಶವಾಗುವುದು. ಮತ್ತೂ ನಮ್ಮಲ್ಲಿಲ್ಲದ ಶಿಲ್ಪಗಳನ್ನೂ ಕೂಡ ಪರಾನುಕರಣದಿಂದ ಉಂಟುಮಾಡಿಕೊಳ್ಳಬಹುದು. ಮೈಸೂರು ದೇಶದಲ್ಲಿ ಈಗ ವ್ಯವಹಾರದಲ್ಲಿರುವ ಕೈಗಾರಿಕೆಗಳೇ ಸಂಪೂರ್ಣತೆಯನ್ನು ಹೊಂದಿದ್ದ ಪಕ್ಷದಲ್ಲಿ ಪರಾನುಕರಣವು ನಮಗೇಕೆಂದು ದೂರೀಕರಿಸಬಹುದು. ಆ ಸ್ಥಿತಿಯು ಯಾವ ದೇಶಕ್ಕೂ ಇರಲಾರದು. ಪಾಶ್ಚಾತ್ಯರು ಕೂಡ ಪೂರ್ವದೇಶೀಯ ಶಿಲ್ಪವಸ್ತುಗಳನ್ನು ತಮ್ಮ ಪ್ರದರ್ಶನಾಲಯಗಳಿಗೆ ಸಂಗ್ರಹಿಸದೆ ಬಿಡುವುದಿಲ್ಲವಾಗಿರಲಾಗಿ, ಕೈಗಾರಿಕೆಯಲ್ಲಿ ಪಾಶ್ಚಾತ್ಯರಿಗಿಂತ ಎಷ್ಟೋ ಹಿಂದೆಬಿದ್ದಿರುವ ನಮಗೆ ಪರಾನುಕರಣದ ಅಪೇಕ್ಷೆಯು ಅನವಶ್ಯಕವೆಂದು ಹೇಳುವುದುಹೇಗೆ?

ನೋಡಿದ ವಸ್ತುಗಳನ್ನೇ ನೋಡಿ ತೃಪ್ತಿಪಡುವುದಕ್ಕಿಂತಲೂ, ಒಂದು ಪ್ರದರ್ಶನಕ್ಕಿಂತ ಮತ್ತೊಂದು ಪ್ರದರ್ಶನದಲ್ಲಿ ವಸ್ತುವೈಲಕ್ಷಣ್ಯವೂ ಸುಧಾರಣೆಗಳೂ ದೃಶ್ಯಮಾನವಾಗುವಂತೆ ಮಾಡಿಡುವುದು ಅವಶ್ಯಕ. ಹಾಗಾಗಬೇಕಾದರೆ ಮೂಲದಲ್ಲಿ ಸುಧಾರಣೆಯಾಗಬೇಕು. ಎಂದರೆ-ಕಸಬುದಾರರಿಗೆ ನಿಜವಾದ ಪ್ರೋತ್ಸಾಹವಾಗುವುದಕ್ಕೆ ವಿಶೇಷ ಗಮನಕೊಡಬೇಕು. ವರ್ಷೇವರ್ಷೆ ಇಂಥ ಪ್ರದರ್ಶನಗಳನ್ನು ನೀರಸವಾಗಿ ನಡೆಯಿಸುವುದಕ್ಕಿಂತಲೂ ೫ ವರ್ಷಕ್ಕೊಂದೊಂದುಸಲ ಪ್ರದರ್ಶನವು ಸಮಗ್ರವಾಗಿ ನಡೆಯುವಂತೆ ಏರ್ಪಡಿಸಿ, ಪ್ರತಿವರ್ಷವೂ ನಡೆಯುತ್ತಿದ್ದ ಪ್ರದರ್ಶನಗಳಿಗೆ ತಗುಲುತ್ತಿರುವ ವೆಚ್ಚವನ್ನೆಲ್ಲಾ ಕಸಬುದಾರರ ಬಂಡವಾಳ ಬಹುಮಾನಗಳಿಗೆ ಉಪಯುಕ್ತವಾಗುವಂತೆ ಮಾಡುವುದು ವಿಹಿತವೆಂದು ತೋರುತ್ತದೆ. ಈ ಸಲದ ಪ್ರದರ್ಶನಾಲಯವನ್ನು ನೋಡಿದ ದೂರದರ್ಶಿಗಳಲ್ಲಿ ಹಲವಗೆ ಇಂಥ ಭಾವವು ಹುಟ್ಟದೆಹೋಗಿರಲಾರದೆಂದು ತಿಳಿದು ಇದ್ದ ಸಂಗತಿಯನ್ನು ನಾವು ಶ್ರುತಪಡಿಸಿರುತ್ತೇವೆ.

ಒಳದೇಶದ ವೃತ್ತಾಂತಗಳು.

ಮಾರಿಕಣಿವೆಯ ದೊಡ್ಡಕೆರೆಗೆ "ವಾಣೀವಿಲಾಸಸಾಗರ" ವೆಂಬುದಾಗಿ ನಾಮಕರಣವು ಸರ್ಕಾರದವರಿಂದ ಮಾಡಲ್ಪಟ್ಟಿರುವುದು.

ಜ್ಯುಡಿಷಿಯಲ್ ಪ್ರೊಬೇಷನರಾದ ಮ|| ಸಿ. ಸುಬ್ರಹ್ಮಣ್ಯಯ್ಯರ್ ಬಿ. ಎ., ಬಿ. ಎಲ್., ರವರು ಶ್ರೀರಂಗಪಟ್ಟಣದ ಮುನ್ಸೀಫರಾಗಿ ನಿಯಮಿಸಲ್ಪಟ್ಟಿರುವರು.

ಶ್ರೀಮನ್ಮಹಾರಾಜರವರ ಕಾಲೇಜ್‌ಡೇ ಎಂಬ ಮಹೋತ್ಸವದ ೨ ನೆ ವರ್ಷದ ಕೂಟವು ಕಳೆದ ತಾ|| ೨೩ ರಲ್ಲಿ ರಾ|| ಬ|| ಶ್ಯಾಮರಾಯರವರ ಅಧ್ಯಕ್ಷತೆಯಿಂದ ನಡೆದಿತು.

ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರು ಇನ್ನೊಂದು ವರ್ಷದವರೆಗೂ ಬೆಂಗಳೂರು ಪಟ್ಟಣದ ಆನರರಿ ಪ್ರೆಸಿಡೆಂಟ್‌ಗಿರಿಯನ್ನು ವಹಿಸಿರುವಂತೆ ಸರ್ಕಾರದವರು ಅಪ್ಪಣೆಮಾಡಿರುತ್ತಾರೆ.

ಮಳೆಯು ಕಳೆದ ೪-೫ ದಿನಗಳಿಂದಲೂ ವಿಶ್ರಾಂತಿಯನ್ನು ತೆಗೆದುಕೊಂಡಿದ್ದುದರಿಂದ ರಾಜಧಾನಿಯಲ್ಲಿ ನವರಾತ್ರಿಯ ಉತ್ಸವಗಳೆಲ್ಲಾ ಪ್ರೇಕ್ಷಕರಿಗೆ ಆನಂದವನ್ನಿತ್ತು ಮುಗಿದುವು.

ಗೌರ್ನಮೆಂಟಿನ ಜನರಲ್ ಸೆಕ್ರೆಟರಿಯವರಾದ ಮ|| ಬಾಲಸುಂದರಂ ಅಯ್ಯರವರು ಕಳೆದ ಸೆಪ್ಟಂಬರ್ ತಾ|| ೮ ರಿಂದ ಗೌರ್ನಮೆಂಟಿನ ಚೀಫ್ ಸೆಕ್ರೆಟರಿಗಳಾಗಿ ಮಾಡಲ್ಪಟ್ಟಿದ್ದಾರೆ.

ಪ್ರಜಾಪ್ರತಿನಿಧಿ ಸಭೆಯಿಂದ ಆರಿಸಲ್ಪಟ್ಟ ನಿಯಮನಿರ್ಮಾಣ ಸಭಾಸಭಿಕ ಪ್ರತಿನಿಧಿಗಳ ಕಾಲಾವಧಿಯನ್ನು ಸರ್ಕಾರದವರು ಇನ್ನೊಂದು ವರ್ಷದವರೆಗೆ ಈಸಲ ಹೆಚ್ಚಿಸಿಕೊಟ್ಟಿರುತ್ತಾರೆ.

ಕಳೆದವಾರ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಆಗಿರುವ ಹೆಚ್ಚು ಮಳೆಯಿಂದ ಬೀರೂರು-ಶಿವಮೊಗ್ಗಾ ಲೋಹಮಾರ್ಗವು ಶಿಥಿಲವಾಗಿ ಹೊಗೆಬಂಡಿಗಳ ತಿರುಗಾಟಕ್ಕೆ ತಡೆಯಾಗಿದ್ದಿತೆಂದು ಕೇಳುತ್ತೇವೆ.

ಪ್ರೊಬೇಷನರು ಅಸಿಸ್ಟೆಂಟ್ ಕಮಿಷನರಾದ ಮ|| ಟಿ. ವಿ. ಎ. ಈಶ್ವರನ್ ಬಿ. ಎ., ಯವರು ಚಿಕ್ಕಜಾಜೂರು-ಚಿತ್ರದುರ್ಗದ ರೈಲ್ವೆಯ ಸಂಬಂಧವಾದ ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿ ನಿಯಮಿಸಲ್ಪಟ್ಟಿದ್ದಾರೆ.

ಪ್ರೊ|| ಕರ್ವೆಯವರು ರಾಜಧಾನಿಗೆ ದಯಮಾಡಿಸಿ, ಶ್ರೀಮನ್ಮಹಾರಾಜರವರ ಆತಿಥ್ಯದಲ್ಲಿರುವರು ಅವರು ಬರುವ ತಾ|| ೨೯ ರಲ್ಲಿ ಮಹಾರಾಣೀ ಕಾಲೇಜಿನೊಳಗೆ ಸ್ತ್ರೀವಿದ್ಯಾನಿಲಯದ ವಿಷಯವಾಗಿ ಉಪನ್ಯಾಸಮಾಡುವರು.

ಗ್ರಾಮಾಂತರಗಳಲ್ಲಿ ಸ್ಕೂಲ್ ಮಾಸ್ಟರುಗಳು ಮನೆ ಕಟ್ಟಿಕೊಳ್ಳುವುದಾದರೆ ಗ್ರಾಂಟ್ ಪಡೆಯುವ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಮಾಡಲ್ಪಡುವ ಅನುಕೂಲ್ಯವೇ ಇದಕ್ಕೂ ನಡೆಯಬಹುದೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಪರಸ್ಪರ ಸಹಾಯಸಂಘ ಮಹಾಸಭೆಗಾಗಿ ರಾಜಧಾನಿಗೆ ಬಂದಿದ್ದ ಪ್ರತಿನಿಧಿಗಳಿಗೆ ಪ್ರೇಕ್ಷಕರಿಗೆಲ್ಲಾ ಶ್ರೀಮದ್ಯುವರಾಜರವರು ಪದ್ಧತಿಯಂತೆ ಕುದುರೆಜೂಜಿನ ಬಯಲಿನಲ್ಲಿ ಒಂದು ವಿನೋದಕೂಟವನ್ನೂ ಫಲಾಹಾರದ ಏರ್ಪಾಟನ್ನೂ ಮಾಡಿಸಿದರು. ಶ್ಲಾಘನೀಯವಾಗಿದ್ದ ಈ ಏರ್ಪಾಟಿನಲ್ಲಿ ಅತಿಥಿಗಳನ್ನು ಫಲಾಹಾರಾದಿಗಳು ಎಷ್ಟು ತೃಪ್ತಿಪಡಿಸಿದುವೋ ಅದಕ್ಕಿಂತಲೂ ಅತಿಶಯವಾಗಿ ಶ್ರೀಮದ್ಯುವರಾಜರ ಸಾಂಗತ್ಯ ಸಂಭಾಷಣ ಪ್ರೀತಿವಿಶ್ವಾಸಗಳು ಆನಂದಪಡಿಸಿದುವು.

ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯಾತಿಥಿಗಳು ಕಳೆದ ಬುಧವಾರ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು. ಆ ದಿನ ರಾತ್ರಿ ೭ ಗಂಟೆಗೆ ಅವರುಗಳ ದರ್ಬಾರು ನಡೆದಿತು. ೪ ಕುದುರೆಗಳನ್ನು ಹೂಡಿದ ರಥದಲ್ಲಿ ಬ್ರಿಟಿಷ್ ರೆಸಿಡೆಂಟರೂ ಅ|| ರೆಸಿಡೆಂಟರೂ ಸಹ ಕುಳಿತು ಹಿಂದೂಮುಂದೂ ಅಶ್ವಸೇನೆಯಿಂ ಪರಿವೃತರಾಗಿ ಅರಮನೆಯ ಜಿಲ್ಲೋ ಮರ್ಯಾದೆಗಳೊಡನೆ ಕೂಡಿ ೧೩ ಗುಂಡುಗಳು ಹಾರುತ್ತಿರುವಾಗ ಅರಮನೆಯನ್ನು ಪ್ರವೇಶಿಸಿದರು. ಇತರ ಅನೇಕಮಂದಿ ಯೂರೋಪ್ಯರೂ ಸಭೆಯನ್ನಲಂಕರಿಸಿದ್ದರು. ಸರ್ವರೂ ಜಟ್ಟಿಕಾಳಗ ಮೊದಲಾದುವುಗಳನ್ನು ಪರಾಮರಿಸಿ, ಹಾರ ತುರಾಯಿಗಳನ್ನು ಸ್ವೀಕರಿಸಿ, ಮರ್ಯಾದಿತರಾಗಿ ಯಥಾಮರ್ಯಾದೆಯಿಂದ ರೆಸಿಡೆನ್ಸಿಗೆ ತೆರಳಿದರು. ಆಗಲೂ ಗುಂಡುಗಳು ಹಾರಿಸಲ್ಪಟ್ಟುವು. ಬಳಿಕ ನಿತ್ಯಗಟ್ಟಲೆಯಂತೆ ಹಿಂದೂ ದರ್ಬಾರು ನಡೆದಿತು.

ಪ್ರಜಾಪ್ರತಿನಿಧಿಸಭೆಯ ಸಮ್ಮೇಳನವು ಕಳೆದ ತಾ|| ೨೬ನೆ ಮಧ್ಯಾಹ್ನ ಆರಂಭಿಸಲ್ಪಟ್ಟಿತು. ಬ್ರಿಟಿಷ್ ರೆಸಿಡೆಂಟ್ ದಂಪತಿಗಳೂ ಇನ್ನು ಕೆಲ ಯೂರೋಪ್ಯಾಧಿಕಾರಿಗಳೂ, ದಿವಾನರು ಕೌನ್ಸಿಲರು ಮೊದಲಾದಧಿಕಾರಿಪ್ರಮುಖರೂ ನೆರೆದಿದ್ದರು. ದಿವಾನರು ಮೊದಲು ಆಂಗ್ಲಭಾಷೆಯಲ್ಲಿ ತಮ್ಮ ಉಪನ್ಯಾಸವನ್ನು ಓದಿದರು. ಬಳಿಕ ಚಿನ್ನದ ಗಣಿಗಳವರ ಮಹಮ್ಮದೀಯರ ಮಲ್ನಾಡಿನವರ, ಪ್ಲಾಂಟರುಗಳ ಪಕ್ಷದ ವಿಜ್ಞಾಪನಪತ್ರಿಕೆಗಳು ಓದಿ ಒಪ್ಪಿಸಲ್ಪಟ್ಟುವು. ರೆಸಿಡೆಂಟರೇ ಮೊದಲಾದ ಯೂರೋಪ್ಯರು ಹಾರ ತುರಾಯಿಗಳ ಸಮರ್ಪಣೆಯಿಂದ ಮರ್ಯಾದಿತರಾಗಿ ತೆರಳಿದಬಳಿಕ ಕನ್ನಡದ ಉಪನ್ಯಾಸವು ಮ|| ಬಿ. ರಾಮಸ್ವಾಮಯ್ಯನವರಿಂದ ಓದಲ್ಪಟ್ಟಿತು. ಸಭೆಯ ಮುಂದಣ ಕಾರ್ಯಗಳು ನಾಳೆ ಸೋಮವಾರದಿಂದ ಜರುಗುವುವು. ದಿವಾನರ ಉಪನ್ಯಾಸವು ಉಪಯುಕ್ತ ಮುಖ್ಯವಿಷಯಗಳಿಂದ ಕೂಡಿ ಎಂದಿನಂತೆ ೨ ಭಾಗಗಳಾಗಿಯೇ ಪ್ರಕಟಿಸಲ್ಪಟ್ಟಿರುವುದಾದರೂ ಅತ್ಯಂತ ದೀರ್ಘವಾಗಿರುವುದಿಲ್ಲ. ಅದರಲ್ಲಿ ಕಂಡ ಮುಖ್ಯ ವಿಷಯಗಳನ್ನು ಮುಂದಣ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ಅರಮನೆಯಮುಂದೆ ನಡೆಯುವ ಉತ್ಸವದ ದರ್ಶನಕ್ಕಾಗಿ ಬರುವ ಪ್ರಜೆಗಳ ನೋಟಕ್ಕೆ ಯಾವತೆರದ ಅಡ್ಡಿಯೂ ಆಗಬಾರದೆಂಬುದಾಗಿ ಪ್ರಜಾವಾತ್ಸಲ್ಯಶೀಲರಾದ ನಮ್ಮ ಮಹಾರಾಜರವರೂ ಅವರ ಅಧಿಕಾರಿಗಳೂ ಬಹಳ ಉತ್ತಮವಾದ ಏರ್ಪಾಟುಗಳನ್ನು ಮಾಡಿದ್ದರು. ಪ್ರೇಕ್ಷಕರಿಗೆ ಅಡ್ಡಲಾಗಿ ನಿಂತುಕೊಳ್ಳುತ್ತಿದ್ದ ಆನೆಕುದುರೆಗಳ ಸಾಲುಗಳೊಂದೂ ಅರಮನೆಯ ಮುಂದಕ್ಕೆ ಬರದಂತೆಯೇ ಅಪ್ಪಣೆಮಾಡಿದ್ದರು. ರಾವುತರೂ ಕಾಲ್ನಡಗೆಯಲ್ಲೇ ಬಂದು ನಿಲ್ಲುವಂತೆ ಮಾಡಿದ್ದರು. ಮತ್ತೂ ಪದಾತಿ ಸೈನ್ಯದವರೂ ಕೂಡ ನಡುಮಟ್ಟ ತೋಡಿದ್ದ ಸಾಲುಗುಳಿಯಲ್ಲಿ ತಗ್ಗಾಗಿ ನಿಲ್ಲುವಂತೆ ಏರ್ಪಡಿಸಿದ್ದರು. ವಿದ್ಯುಚ್ಛಕ್ತಿ ದೀವಿಗೆಗಳಂತೂ ಇದುವರೆಗಿದ್ದುವುಗಳಿಗೆ ಇಮ್ಮಡಿಯಾಗಿ ತೋರಣಗಳ ರೂಪದಲ್ಲಿಯೂ, ಸ್ತಂಭಾಕೃತಿಯಿಂದಲೂ, ವಲಯಾಕಾರದಿಂದಲೂ ಕೋಟೆ ಬಾಗಿಲಿಂದ ಹಿಡಿದು ಕೋಟೆಯ ಒಳಭಾಗವನ್ನೆಲ್ಲಾ ಹಗಲಿನಂತೆ ಮಾಡಿರುತ್ತಿದ್ದುವು. ಪೋಲೀಸರಿಂದ ನೋಟದ ವಿಷಯದಲ್ಲಿ ಯಾವ ವಿಧದ ತಡೆಯೂ ಆಗದಂತೆ ಕಟ್ಟಪ್ಪಣೆ ಮಾಡಲ್ಪಟ್ಟಿದ್ದುದರಿಂದ ಮೇಲೆಕಂಡ ಸೌಕರ್ಯಗಳೆಲ್ಲಾ ಸಾರ್ಥಕವಾಗಿ ಪ್ರಜೆಗಳಿಗೆ ಸಂತೋಷಪಡಿಸಲು ಸಾಧಕಗಳಾದುವು.

ಕಳೆದ ಗುರುವಾರದದಿವಸ ವಿಜಯದಶಮಿಪ್ರಯುಕ್ತವಾದ ಮಹೋತ್ಸವಗಳು ರಾಜಧಾನಿಯಲ್ಲಿ ವಿಜೃಂಭಣೆಯಿಂದ ನೆರವೇರಿದುವು. ಆ ದಿನ ಮಳೆಯೇ ಇಲ್ಲದಿದ್ದುದರಿಂದ ಉತ್ಸವವು ಬಹಳ ಪ್ರೇಕ್ಷಣೀಯವಾಯಿತು. ಆದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು ಮಂಗಲಸ್ನಾನವನ್ನು ಮಾಡಿ, ಪೂರ್ವದಿನ ಸಂಪೂಜಿತವಾಗಿದ್ದ ಪಟ್ಟದಾಯುಧ ಮೊದಲಾದುವುಗಳಿಗೆ ಉತ್ತರಪೂಜೆಯನ್ನು ಮಾಡಿ, ೮ ಗಂಟೆಗೆ ಸರಿಯಾಗಿ ಸುವರ್ಣದ ಪಲ್ಲಕ್ಕಿಯಲ್ಲಿ ಅದಿಷ್ಠಿಸಿ, ಪಟ್ಟದಾನೆಕುದುರೆಗಳನ್ನೂ ಸಹ ಸಕಲ ಬಿರುದಾವಳಿಗಳೊಡನೆ ಕೋಟೆಯಿಂದ ದೊಡ್ಡಪೇಟೆಯ ಮಾರ್ಗವಾಗಿ ಬನ್ನಿಮಂಟಪಕ್ಕೆ ಸಾಗಗೊಳಿಸಿಕೊಟ್ಟರು. ಮಧ್ಯಾಹ್ನಾತ್ಪರ ೪|| ಗಂಟೆಗೆ ಜಂಬೂಸ್ವಾರಿಯು ಹೊರಟಿತು. ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಸಹ ದಿವ್ಯಾಂಬರಾಭರಣವಿಭೂಷಿತರಾಗಿ ಸಾಲಂಕೃತವಾದ ಭದ್ರಗಜದಮೇಲಣ ಅಂಬಾರಿಯಲ್ಲಿ ಕುಳಿತು, ಸಕಲ ಚತುರಂಗ ಸೈನ್ಯದ ಮಧ್ಯದಲ್ಲಿ ಅರಮನೆಯಿಂದ ಹೊರಟು, ಕೋಟೆಯ ಉತ್ತರದ್ವಾರಕ್ಕೆ ಬಂದಕೂಡಲೇ ೨೧ ಗುಂಡುಗಳು ಹಾರಿಸಲ್ಪಟ್ಟುವು. ಧ್ವಜಪತಾಕ ತೋರಣಾದಿಗಳಿಂದಲೂ ಚಿತ್ರಪಟಾದಿಗಳಿಂದಲೂ ವಿವಿಧವಾಗಿ ಅಲಂಕರಿಸಲ್ಪಟ್ಟಿದ್ದ ದೊಡ್ಡಪೇಟೆಯಲ್ಲಿ ಹೋಗುವಾಗ್ಗೆ ಉದ್ದಕ್ಕೂ ಅಲ್ಲಿಗಲ್ಲಿಗೆ ವರ್ತಕರು ಮೊದಲಾದವರಿಂದ ಒಪ್ಪಿಸಲ್ಪಟ್ಟ ಹಾರ ತುರಾಯಿಗಳನ್ನು ಸ್ವೀಕರಿಸುತ್ತ, ಬೀದಿ ಯುದ್ದಕ್ಕೂ ಅಖಂಡವಾಗಿ ನಿಂತು ನೋಡಿ ಆನಂದದಿಂದ ಕರಾಸ್ಫಾಲನವನ್ನು ಮಾಡುತ್ತಿರುವ ಪ್ರಜಾವರ್ಗದವರನ್ನು ಹಸನ್ಮುಖದಿಂದ ಅಭಿನಂದಿಸುತ್ತ, ೬|| ಗಂಟೆ ಹೊತ್ತಿಗೆ ಬನ್ನಿಮಂಟಪವನ್ನು ಸೇರಿದರು. ಅಲ್ಲಿ ವಿಧ್ಯುಕ್ತವಾಗಿ ಶಮೀಪೂಜಾದಿಗಳನ್ನು ನೆರವೇರಿಸಿ, ಅಶ್ವಾರೂಢರಾಗಿ ಸೈನಿಕರ ಕವಾಯಿತನ್ನು ಪರಾಮರಿಸಿ, ಸುರೂಟುಗಳಾದಕೂಡಲೇ ಸ್ವಲ್ಪಕಾಲ ವಿಶ್ರಮಿಸಿ, ಮರಳಿ ಯಥಾಪ್ರಕಾರ ವಿದ್ಯುಚ್ಛಕ್ತಿದೀಪ ಸುಶೋಭಿತವಾದ ಆನೆಯಮೇಲಣ ಅಂಬಾರಿಯಲ್ಲಿ ಮಂಡಿಸಿ, ಉಭಯ ಪಾರ್ಶ್ವದಲ್ಲೂ ಸಾಲಾಗಿ ಹೋಗುತ್ತಿರುವ ವಿದ್ಯುಚ್ಛಕ್ತಿ ದೀಪರಾಜಿಗಳಿಂದಲೂ, ವಾಷಿಂಗ್‌ಟನ್ ದೀಪಾವಳಿಗಳಿಂದಲೂ ಪರಿವೃತರಾಗಿ, ಬೆಳಗ್ಗೆ ಹೋಗಿದ್ದ ಪಟ್ಟದಾನೆಕುದುರೆ ಆಯುಧ ಮೊದಲಾದುವುಗಳನ್ನು ಮುಂದೆ ಬಿಟ್ಟುಕೊಂಡು, ನಾನಾವಿಧವಾದ ವಾದ್ಯವೈಭವದೊಡನೆ ದೊಡ್ಡಪೇಟೆ ಮಾರ್ಗವಾಗಿ ಕಲ್ಯಾಣಿ ಮೈದಾನದ ಬಳಿಗೆ ಬಂದಕೂಡಲೇ ಅಲ್ಲಿ ಸಮುದ್ರದಂತೆ ನೆರೆದಿದ್ದ ಜನಸ್ತೋಮವು ಜಯಘೋಷವನ್ನೂ ಕರತಾಳಿಗಳನ್ನೂ ಮಾಡುತ್ತಿರುವಲ್ಲಿ, ಮುಂಗಡೆಯಲ್ಲಿ ಮದ್ದಿನ ಗಿಡಗಳು ಹೊತ್ತಿಸಲ್ಪಡಲು ಹಗಲುಬತ್ತಿಯ ಬೆಳಕಿನಿಂದಲೂ ಅನಂತಾನಂತವಾದ ವಿದ್ಯುಲ್ಲತಾದೀಪಗಳಿಂದಲೂ ಶ್ರೀಮನ್ಮಹಾರಾಜ ಸಹೋದರರ ಶರೀರಗಳಮೇಲೆ ವಿರಾಜಿಸುತ್ತಿದ್ದ ರತ್ನಾವಳಿಗಳು ನಕ್ಷತ್ರಗಳಂತೆ ಝುಗಝುಗಿಸುತ್ತಿರಲು; ಆ ಅಪೂರ್ವತರವಾದ ನೋಟವನ್ನು ನೋಡಿ ಪ್ರಜೆಗಳೆಲ್ಲಾ ಪಟ್ಟ ಆನಂದವು ವರ್ಣನಾತೀತವಾಗಿದ್ದಿತು. ಉತ್ಸವವು ಕೋಟೆಬಾಗಿಲನ್ನು ಪ್ರವೇಶಿಸಿದಕೂಡಲೇ ಮರಳಿ ೨೧ ಗುಂಡುಗಳು ಹಾರಿಸಲ್ಪಟ್ಟುವು. ರಾತ್ರಿ ೧೦ ಗಂಟೆಗೆ ಸ್ವಾರಿಯು ಅರಮನೆಯನ್ನು ಸೇರಿತು. ಬಳಿಕ ಅಂಬಾವಿಲಾಸದಲ್ಲಿ ಆರ್ತ್ಯಕ್ಷತೆಯು ಬೆಳೆದಿತು. ಮೊನ್ನೆ ನಿನ್ನೆ ರಾತ್ರಿಗಳೆರಡರಲ್ಲೂ ಹಾಗೆಯೇ ಆರ್ತ್ಯಕ್ಷತೆಗಳೂ ನಜರುಗಳೂ ನಡೆದುವು. ಆ ದಿನಗಳಲ್ಲೆಲ್ಲಾ ಅರಮನೆಯಾದ್ಯಂತವೂ ಹೊರಗೂ ಒಳಗೂ ಕೋಟೆಯ ಉತ್ತರದ್ವಾರಗಳೂ ಸಹ ಯಥಾವತ್ತಾಗಿ ದೀಪರಾಜಿ ವಿರಾಜಿತವಾಗಿದ್ದುವು. ಈ ಸಲದ ಉತ್ಸವಕ್ಕೆ ಹೊರಗಣ ಜನವು ವಿಶೇಷವಾಗಿ ಬರದಿದ್ದರೂ, ಪ್ಲೇಗಿನ ಉಲ್ಬಣವೇನೂ ಇಲ್ಲದಿದ್ದುದರಿಂದ ಉತ್ಸವವು ಅತ್ಯಂತ ಶೋಭಾಯಮಾನವಾಗಿ ಕೊನೆಗಂಡಿತು.

ಯುದ್ಧವಾರ್ತೆಯು.

ಪಶ್ಚಿಮರಣರಂಗ—ಈ ರಂಗದಲ್ಲಿ ಚಳಿಯು ಪ್ರಾಪ್ತವಾಗಿರುವುದರಿಂದ ಈ ವರ್ಷ ಯುದ್ಧದ ಮುತ್ತಿಗೆಗಳನ್ನು ಮಿತ್ರಮಂಡಲಿಯವರು ಇಲ್ಲಿಗೇ ನಿಲ್ಲಿಸುವಂತೆ ಯುದ್ಧಮಂತ್ರಿವರ್ಗದವರ ಪ್ರಕಟನೆಯಿಂದ ಗೊತ್ತಾಗುತ್ತದೆ. ಇದುವರೆಗಿನ ಯುದ್ಧದಿಂದ ಆಂಗ್ಲಸೇನಾ ಮುಖ್ಯದಳಪತಿಯಾದ ಸರ್ ಡಗ್ಲಸ್‌ಹೇಗ್‌ರವರು ಪ್ರಶಂಸನೀಯವಾದ ಜಯಗಳನ್ನು ಪಡೆದುಕೊಂಡಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಇವರ ಸಾಹಸದಿಂದ ಫ್ಲಾಂಡರ್ಸಿನಲ್ಲಿದ್ದ ಜರ್ಮನರ ಬೇರು ಸಡಿಲಿಹೋಯಿತು. ಶೀತಕಾಲವು ಪ್ರಾಪ್ತವಾಗದೆ ಇನ್ನು ಕೆಲಕಾಲ ಯುದ್ಧವು ಸಾಗಿದ್ದರೆ ಫ್ಲಾಂಡರ್ಸಿನಿಂದ ಪೂರ್ತಿಯಾಗಿಯೇ ಜರ್ಮನರನ್ನು ಅಟ್ಟಿಬಿಡುತ್ತಿದ್ದರು. ಯುದ್ಧಗಳಲ್ಲಾದ ನಿಸ್ಸಂಶಯ ವಿಜಯಗಳಲ್ಲಿ ಸರ್ ಹೇಗ್‌ರವರ ವಿಜಯಗಳೇ ಪ್ರಶಂಸನೀಯವಾದುವುಗಳೆಂದು ಅಮೇರಿಕಾದವರು ಕೊಂಡಾಡಿರುತ್ತಾರೆ. ಇಂಗ್ಲೀಷ್ ಪಾರ್ಲಿಮೆಂಟಿನವರೂ ಕೂಡ ಸರ್ ಹೇಗ್‌ರವರಿಗೂ ಅವರ ಕೈಕೆಳಗಣ ಸೈನಿಕರಿಗೂ ಸಹ ವಂದನೆಗಳನ್ನರ್ಪಿಸುವ ಮೂಲಕ ಗೌರವಿಸಿರುತ್ತಾರೆ. ಫ್ಲಾಂಡರ್ಸಿನಲ್ಲಿರುವ ಮುಖ್ಯಮುಖ್ಯವಾದ ಗುಡ್ಡಗಳೆಲ್ಲಾ ಈಗ ಇಂಗ್ಲೀಷರ ಅಧೀನವಾಗಿರುತ್ತವೆ. ಚಳಿಗಾಲ ಮುಗಿದು ಬೇಸಗೆ ಆರಂಭವಾಗಿ ಮರಳಿ ಮುತ್ತಿಗೆಗುಪಕ್ರಮವಾದ ಕೂಡಲೇ ಜರ್ಮನರು ಫ್ಲಾಂಡರ್ಸಿನಿಂದ ಗುಡಿಚಾಪೆ ಕಟ್ಟಿಕೊಂಡೇಳುವುದು ಖಂಡಿತ. ಸದ್ಯದಲ್ಲಿ ಈ ರಂಗದ ಯುದ್ಧದಲ್ಲಿ ಮಹತ್ತಾದ ವಿಷಯಗಳೇನೂ ಸಂಭವಿಸುವುದಿಲ್ಲ. ವಿಮಾನಗಳ ಯುದ್ಧವೂ ಫಿರಂಗಿಯುದ್ಧವೂ ಅಲ್ಲಲ್ಲಿ ಸಾಮಾನ್ಯತರವಾಗಿ ನಡೆಯುತ್ತಿವೆ. ಕಳೆದ ವಾರದಲ್ಲೂ ಇಂಗ್ಲೀಷರು ಶತ್ರುಗಳ ಕೆಲವು ಸ್ಥಲಗಳನ್ನು ಪೊಯಿಲ್ಕಾಪೆಲ್ಲಿ ಗ್ರಾಮದಹತ್ತಿರ ಆಕ್ರಮಿಸಿಕೊಂಡಿದ್ದಾರೆ.

ಎಯಿಸ್‌ನದಿಗೆ ಉತ್ತರದಲ್ಲಿ ಫ್ರೆಂಚರು ಮಹಾಯುದ್ಧವನ್ನು ನಡೆಯಿಸಿ, ಅನೇಕ ಮುಖ್ಯಸ್ಥಾನಗಳನ್ನು ವಶಪಡಿಸಿಕೊಂಡು ೮೦೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದರು. ಇದು ವರ್ಡನ್ ಯುದ್ಧದಷ್ಟು ಮಹತ್ತರವಾಗಿದ್ದಿತೆಂದು ವರ್ಣಿಸಲ್ಪಟ್ಟಿದೆ.

ರಷ್ಯಾರಂಗ—ಈಚೆಗೆ ರಿಗಾ ಕೊಲ್ಲಿಯಲ್ಲಿ ಜರ್ಮನರು ಮತ್ತೆ ಕೆಲವು ಪ್ರದೇಶಗಳನ್ನು ಆಕ್ರಮಿಸಿದರು. ಮೊನ್ನೆವಾರದಲ್ಲಿ ಹಿಡಿಯದೆ ಬಿಟ್ಟಿದ್ದ ಪ್ರದೇಶವೆಲ್ಲಾ ಅವರ ವಶವಾದಂತಾಯಿತು. ಇದರಿಂದ ರಿಗಾ ಕೊಲ್ಲಿಯನ್ನೆಲ್ಲಾ ರಷ್ಯನರು ಬಿಟ್ಟುಹೋದರು. ಮೂನ್ ದ್ವೀಪವೂ ಶತ್ರುಗಳ ವಶವಾಯಿತು. ತದನಂತರ ಈ ಕೊಲ್ಲಿಯಲ್ಲಿ ಕೊಟ್ಟ ಕೊನೆಯದಾಗಿದ್ದ ಡಾಗೋದ್ವೀಪಕ್ಕೂ ಜರ್ಮನರು ನುಗ್ಗಿದರು. ಓಸೆಲ್, ಮೂನ್, ಡಾಗೋ ಈ ದ್ವೀಪಗಳೆಲ್ಲಾ ಶತ್ರುಗಳಧೀನವಾಗಿರುವುವು. ಆದರೆ ಇಲ್ಲಿದ್ದ ರಷ್ಯನ್ ಸೈನ್ಯವೆಲ್ಲಾ ಜರ್ಮನರ ಮುತ್ತಿಗೆಗೆ ಸಿಕ್ಕಿ ಎಲ್ಲಿ ವಶವಾಗಿಹೋಗುವುದೋ ಎಂಬ ಭೀತಿಯಿದ್ದಿತು. ಕಡೆಗೆ ಅದು ತೊಲಗಿಹೋಯಿತು. ಅಲ್ಲಿದ್ದ ರಷ್ಯನ್ ನೌಕಾದಳವೆಲ್ಲಾ ಫಿನ್‌ಲೆಂಡ್ ಕೊಲ್ಲಿಗೆ ಹೋಗಿ ಸೇರಿಬಿಟ್ಟಿತು. ಈ ಸೈನ್ಯವು ಕ್ರಾನ್‌ಸ್ಟಾಟ್ ನೌಕಾದಳದೊಡನೆ ಕೂಡಿಕೊಂಡು ಮುಂದಕ್ಕೆ ಫಿನ್‌ಲೆಂಡ್ ಕೊಲ್ಲಿಗೆ ಜರ್ಮನರನ್ನು ಬರಗೊಡಿಸದಂತೆ ಕಾಪಾಡಿಕೊಳ್ಳಬಹುದೆಂದು ಕಾಣುತ್ತದೆ. ಈಗ ರಷ್ಯನರಿಗೆ ಪೆಟ್ರೋಗ್ರೇಡ್ (ರಷ್ಯಾರಾಜಧಾನಿ) ಪಟ್ಟಣದ ರಕ್ಷಣೆಯ ಚಿಂತೆಯು ಹತ್ತಿರುತ್ತದೆ. ಈಗ ರಷ್ಯನರು ತೋರಿಸಬಹುದಾದ ಸಾಮರ್ಥ್ಯದಮೇಲೆ ಅವರ ರಾಜಧಾನಿಯ ರಕ್ಷಣೆಯೂ ಅವರ ಸ್ವಾತಂತ್ರ್ಯವೂ ಅವಲಂಬಿಸಿಕೊಂಡಿರುತ್ತವೆ. ಅವರು ತಮ್ಮ ಅನೈಕಮತ್ಯವನ್ನೇ ಹೆಚ್ಚಿಸಿಕೊಂಡು ರಾಜಧಾನಿಯನ್ನು ಕಳೆದುಕೊಳ್ಳಲು ಇಷ್ಟಪಡಲಾರರು. ಅದುಕಾರಣ ಅಲ್ಲಿಯ ಅನೈಕಮತ್ಯವೆಲ್ಲಾ ಹಾಳಾಗುವುದಕ್ಕೆ ಇದಕ್ಕಿಂತ ಅನುಕೂಲವಾದ ಸಮಯವು ಬೇರೆ ದೊರೆಯಲಾರದು. ಪೆಟ್ರೋಗ್ರೇಡನ್ನು ರಕ್ಷಣೆಮಾಡಿಕೊಳ್ಳುವುದಕ್ಕಾಗಿಯೇ ಈಗ ಅವರುಗಳು ರಾಜಧಾನಿಯನ್ನು ಅಲ್ಲಿಂದ ಮಾಸ್ಕೋ ಪಟ್ಟಣಕ್ಕೆ ಬದಲಾಯಿಸುವುದರಲ್ಲಿದ್ದಾರೆ. ದೊಡ್ಡ ದೊಡ್ಡ ಯಂತ್ರಾಲಯಗಳೂ ಆಸ್ತಿಗಳೂ ಪ್ರಜೆಗಳೂ ಸಹ ಮಾಸ್ಕೋ ಪಟ್ಟಣಕ್ಕೆ ಕಳುಹಿಸಲ್ಪಡುತ್ತಿದ್ದಾರೆ. ಮುಖ್ಯಮಂತ್ರಿ ಎಂ. ಕರೆನ್ಸ್ಕಿಯವರು ಈಗ ತಾವೇ ರಣಮಂಡಲಕ್ಕೆ ಹೋಗಿರುವರೆಂದು ಗೊತ್ತಾಗಿರುತ್ತದೆ. ರಿಗಾರಂಗದಲ್ಲಿ ರಷ್ಯನ್ ಸೈನ್ಯಗಳು ಜರ್ಮನರನ್ನು ೧೮ ಮೈಲಿಗಳ ದೂರ ಹಿಂದಕ್ಕೆ ಓಡಿಸಿದರು.

ಆಕಾಶವಿಮಾನಗಳು—ಕಳೆದವಾರದಲ್ಲಿ ಜರ್ಮನರ ಹನ್ನೊಂದು ವಿಮಾನಗಳು ಮತ್ತೊಂದುಸಲ ಇಂಗ್ಲೆಂಡಿನಮೇಲಕ್ಕೆ ಹಾರಿಬಂದುವು. ಕಡೆಗೆ ಅವುಗಳಲ್ಲಿ ೫ ವಿಮಾನಗಳು ಲಂಡನ್ ಪಟ್ಟಣದಕಡೆಗೆ ಹೊರಟುಬಂದರೂ ೪ ವಿಮಾನಗಳು ನಗರ ರಕ್ಷಕಪಙ್ತಿಯನ್ನು ದಾಟಿ ನುಗ್ಗಲಾರದೆಹೋದುವು. ಒಂದು ಮಾತ್ರ ನುಗ್ಗಿಹೋಗಿ ೩ ಸಿಡಿಮದ್ದುಗಳನ್ನು ಹಾಕಿತು. ವಿಶೇಷ ನಷ್ಟವೇನೂ ಆಗಲಿಲ್ಲ. ಉಳಿದ ವಿಮಾನಗಳು ಆಂಗ್ಲದೇಶದ ಇತರ ಭಾಗಗಳಲ್ಲಿ ಹಾಕಿದ ಸಿಡಿಮದ್ದುಗಳಿಂದ ೩೪ ಮಂದಿಗಳು ಸತ್ತರು; ೫೬ ಮಂದಿಗೆ ಏಟುಗಳು ಬಿದ್ದು ಗಾಯವಾಯಿತು. ಈ ವಿಮಾನಗಳೆಲ್ಲಾ ತಮ್ಮ ಕಾರ್ಯವನ್ನು ಮುಗಿಯಿಸಿಕೊಂಡು ಫ್ರಾನ್ಸ್ ದೇಶದಮೇಲಿಂದ ಸ್ವದೇಶಕ್ಕೆ ಹೋಗುತ್ತಿರುವಾಗ ಫ್ರೆಂಚ್ ವೈಮಾನಿಕದಳದವರು ಇವುಗಳನ್ನು ಸುತ್ತುಗಟ್ಟಿ ಫಿರಂಗಿಗುಂಡುಗಳಿಂದ ಹೊಡೆದು ಮೂರರ ಹೊರತು ಉಳಿದುವನ್ನೆಲ್ಲಾ ಹಾಳ್ಮಾಡಿ ನೆಲಕ್ಕೆ ಬೀಳುವಂತೆ ಮಾಡಿ, ಒಳಗಿದ್ದವರಲ್ಲಿ ಅನೇಕರನ್ನು ಸೆರೆಹಿಡಿದರು. ಅದೇ ವಾರದಲ್ಲಿ ಇಂಗ್ಲೀಷ್ ಫ್ರೆಂಚ್ ವೈಮಾನಿಕರು ಶತ್ರುದೇಶಪಟ್ಟಣಗಳ ಮೇಲೆ ಹೋಗಿ ಟನ್ನುಗಟ್ಟಲೆ ಸಿಡಿಮದ್ದುಗಳನ್ನು ಹಾಕಿ ಬೆಂಕಿ ಹುಟ್ಟಿಸಿ ಬಹು ಪದಾರ್ಥ ನಷ್ಟವನ್ನೂ ಜನಪ್ರಾಣ ಧನನಷ್ಟವನ್ನೂ ಮಾಡಿ ಬಂದಿರುತ್ತಾರೆ. ಆ ನಷ್ಟಗಳೆಲ್ಲಾ ಶತ್ರುದೇಶಗಳಲ್ಲಿ ಆಗುವುದರಿಂದ ಅವುಗಳ ವಿವರಣವನ್ನು ಹೇಳುವುದು ನಮ್ಮವರಿಗೆ ಸಾಧ್ಯವಲ್ಲ.

ಜಲಯಾನಗಳು—ಶತ್ರುಗಳ ಸಬ್‌ಮೆರೀನುಗಳ ಮೂಲಕವಾಗಿ ಮಾಡುತ್ತಿದ್ದ ನೌಕಾನಷ್ಟವು ದಿನಕ್ರಮೇಣ ಕಡಿಮೆಯಾಗುತ್ತಲಿವೆ. ಕಳೆದವಾರದಲ್ಲಿ ಇಂಗ್ಲೀಷ್ ತೀರಗಳಿಂದ ೨೦೪೪ ಹಡಗುಗಳು ಹೊರಕ್ಕೆ ಹೋಗಿ, ಅಲ್ಲಿಗೆ ಹೊರಗಣಿಂದ ೨೧೨೪ ಹಡಗುಗಳು ಬಂದಿರುತ್ತವೆ. ಮತ್ತೂ ೧೮ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ. ಫ್ರೆಂಚರ ೨ ಹಡಗುಗಳು ಮುಳುಗಿಸಲ್ಪಟ್ಟಿವೆ. ಮಿತ್ರಮಂಡಲಿಯ ನೌಕಾದಳದವರು ಶತ್ರುಗಳ ಹಲವು ಸಬ್‌ಮೆರೀನುಗಳನ್ನು ಪ್ರತಿವಾರದಲ್ಲೂ ಫಿರಂಗಿಗುಂಡುಗಳಿಂದ ಹೊಡೆದು ಮುಳುಗಿಸುತ್ತಿದ್ದಾರೆ. ಅಮೇರಿಕಾದವರ ಒಂದು ಟ್ರಾನ್ಸ್‌ಪೋರ್ಟು ಹಡಗು ಶತ್ರುಗಳ ಟಾರ್ಪೆಡೋ ಬಡಿತದಿಂದ ಮುಳುಗಿಹೋಯಿತು. ಒಳಗಿದ್ದ ೧೬೭ ಮಂದಿಗಳಲ್ಲಿ ೬೭ ಮಂದಿಗಳು ಮುಳುಗಿಹೋದರು. ಆಸ್ಟ್ರಿಯಾ ಮತ್ತು ಜರ್ಮನಿಯ ನೌಕಾದಳಲ್ಲಿ ಹಲವರು ಅಮೇರಿಕಾದವರಿಗೆ ಭಯಪಟ್ಟು ತಮ್ಮ ಸಬ್‌ಮೆರೀನುಗಳಲ್ಲಿ ಕೆಲಸ ಮಾಡುವುದಕ್ಕೆ ಹೋಗದೆ, ಹಿಂದೆಗೆದು, ಬಲಾತ್ಕರಿಸಿದ ತಮ್ಮ ಪ್ರಭುತ್ವದವರಮೇಲೆ ತಿರುಗಿಬಿದ್ದಿರುವರೆಂದು ತಂತ್ರೀವಾರ್ತೆ ಬಂದಿದೆ. ಈ ಕಾರಣದಿಂದ ಅಂಥ ನೌಕಾದಳೋದ್ಯೋಗಿಯೊಬ್ಬನನ್ನು ಜರ್ಮನರು ಸಮುದ್ರದೊಳಕ್ಕೆ ನೂಕಿಸಿಬಿಟ್ಟರಂತೆ. ಇನ್ನು ಮೂವತ್ತು ಮಂದಿಗೆ ಕೈಕಾಲುಗಳಿಗೆ ಸಂಕಲಗಳನ್ನು ತೊಡಿಸಿ ಆಸ್ಟೆಂಡಿನಿಂದ ಬ್ರೂಜಸ್ಸಿಗೆ ಸಾಗಿಸಿಕೊಂಡು ಹೋದರು. ಉತ್ತರಸಮುದ್ರದಲ್ಲಿ ರಷ್ಯಾದೇಶಕ್ಕೆ ಸಾಮಾನನ್ನು ಸಾಗಿಸಿಕೊಂಡು ಹೋಗುತ್ತಿದ್ದ ಹಡಗುಗಳಮೇಲೆ ಜರ್ಮನರ ಸಾಯುಧನೌಕೆಗಳು ಹೆಚ್ಚಾಗಿ ಬಂದು ಬಿದ್ದು ಯುದ್ಧಮಾಡಿ, ೨ ಇಂಗ್ಲೀಷ್ ಹಡಗುಗಳನ್ನೂ ೫ ನಾರ್ವೆ ಹಡಗುಗಳನ್ನೂ ೧ ಡೆನ್ಮಾರ್ಕ್ ಹಡಗನ್ನೂ ೩ ಸ್ವೀಡನ್ ಹಡಗುಗಳನ್ನೂ ಮುಳುಗಿಸಿದುವು.

ಜರ್ಮನ್ ಚಕ್ರವರ್ತಿಯು ಬಲ್ಗೇರಿಯಾಕ್ಕೂ ತುರ್ಕಿಗೂ ಸಹ ಹೋಗಿದ್ದುದು, ಗ್ರೀಕರಮೇಲೆ ಬಲ್ಗೇರಿಯಾ ತುರ್ಕಿ ಸೈನ್ಯಗಳನ್ನು ಸಾಗಿಸಿ ಗ್ರೀಕ್‌ದೇಶವನ್ನು ಗೆಲ್ಲುವುದಕ್ಕಾಗಿಯೇ ಎಂದು ಪ್ರಕಟವಾಗಿದೆ. ಆ ಕೆಲಸವನ್ನು ಸಾಧಿಸಿದರೆ ಸಾಲೋನಿಕಾವನ್ನು ಅವೆರಡು ದೇಶಗಳಿಗೂ ಹಂಚಿಕೊಡುವೆನೆಂದು ಕೈಜರರು ಮಾತುಕೊಟ್ಟಿರುವರಂತೆ. ಈ ಕೆಲಸವನ್ನು ಮಾಡಿ ಕೈಜರರು ಜರ್ಮನಿಗೆ ಮರಳಿ ಹೋದರು. ಆದರೆ ತುರ್ಕಿಯಲ್ಲಿ ರಾಜಕೀಯಸ್ಥಿತಿಯು ವಿಷಮವಾಗಿದೆ. ಎನ್ವರ್‌ಪಾಷಾನ ಸ್ಥಿತಿಯು ಬಹಳ ಸಂದಿಗ್ಧವಾಗಿದೆ. ಇನ್ನು ಮುಂದೆ ಯುದ್ಧವನ್ನು ನಡೆಯಿಸಲು ಪ್ರಜೆಗಳು ಇಷ್ಟವುಳ್ಳವರಾಗಿಲ್ಲವೆಂದು ಹೇಳಲಾಗಿದೆ. ಜರ್ಮನರೊಡನೆ ಸೇರಿಕೊಂಡುದಕ್ಕೆ ಇದುವರೆಗೆ ತಮಗಾದ ಪ್ರಾಯಶ್ಚಿತ್ತವನ್ನು ತುರ್ಕಿ ಪ್ರಭುತ್ವದವರು ಅರಿತುಕೊಂಡಿರಬಹುದು. ಬಲ್ಗೇರಿಯಾದವರೂ ತುರ್ಕಿಯವರೂ ಸಹ ಮಿತ್ರಮಂಡಲಿಯವರೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳಬೇಕೆಂದು ಯೋಚಿಸಿರುವರೆಂದು ಈ ಮಧ್ಯೆ ವಾರ್ತೆಹುಟ್ಟಿದ್ದಿತು. ಹಾಗಾದರೆ ತಮ್ಮ ಬಲವು ಮುರಿದುಹೋದೀತೆಂದು ದಿಗಿಲುಬಿದ್ದು ಕೈಜರರು ಪ್ರತ್ಯಕ್ಷವಾಗಿ ಆ ದೇಶಗಳಿಗೆ ಹೋಗಿ ಏನೇನೋ ಆಸೆಗಳನ್ನು ಹುಟ್ಟಿಸಿ ಹುರಿದುಂಬಿಸಿ ಬಂದಿರಬೇಕೆಂದು ಕಾಣುತ್ತದೆ.

ಬಾಲ್ಕನ್ಸಿನಲ್ಲಿ ಈಗ ಬಲ್ಗೇರಿಯನ್ ಸೈನಿಕರು ಮಿತ್ರಮಂಡಲಿಯ ಸೈನ್ಯಗಳಮೇಲೆ ಭಯಂಕರವಾಗಿ ಯುದ್ಧವನ್ನು ನಡೆಯಿಸುತ್ತಿದ್ದಾರೆ. ಮೊನಾಸ್ಟಿರ್ ಪಟ್ಟಣದಮೇಲೆ ಅವರು ಹೊಡೆದ ವಿಶೇಷವಾದ ಫಿರಂಗಿಗುಂಡುಗಳೇಟಿನಿಂದ ಅನೇಕಮಂದಿ ಪುರಜನರು ಸತ್ತರು. ಆಗ ಕೈಜರರೂ ಬಲ್ಗೇರಿಯಾ ಪ್ರಭುವೂ ಕೂಡ ಅಲ್ಲಿಗೆ ಬಂದಿದ್ದರಂತೆ. ಆ ಪಟ್ಟಣವನ್ನು ನೋಡುವುದಕ್ಕಾಗಿ ಆ ಸಮಯದಲ್ಲಿ ಬಂದಿದ್ದ ಸರ್ವಿಯನ್ ಪ್ರಧಾನಿಯು ಹೇಗೋ ಉಪಾಯದಿಂದ ಪ್ರಾಣವನ್ನುಳುಹಿಕೊಂಡು ಬಂದಿರುವನು.

ಪೂರ್ವಾಫ್ರಿಕಾರಂಗ—ಇಲ್ಲಿ ಶತ್ರುಸೈನ್ಯಗಳಲ್ಲಿ ಬಹಳ ಭಾಗವು ಎಳಂಕೂರನ್ನು ಬಿಟ್ಟು ಮಹವಾ ಎಂಬಲ್ಲಿಗೆ ಓಡಿಹೋದುವು. ನಮ್ಮವರು ರೂಪೊಂಡಾ, ಲೂಕೆವೇಡೀ ಎಂಬ ಸ್ಥಲಗಳನ್ನು ವಶಪಡಿಸಿಕೊಂಡು, ನ್ಯಾಂಗೀಯೋವಿನ ಕಡೆಗೆ ಶತ್ರುಗಳನ್ನೋಡಿಸಿ, ಯಾಂಗೀಯೋ ಎಂಬ ಪುರವನ್ನು ಹಿಡಿದುಕೊಂಡರು. ಈಗಲೂ ಯುದ್ಧವು ನಡೆಯುತ್ತಿದೆ.

ಭರತಖಂಡದ ವೃತ್ತಾಂತಗಳು.

ಬರ್ಮಾದಲ್ಲಿ ಅತಿವೃಷ್ಟಿಯಿಂದ ಅನೇಕ ಗ್ರಾಮಗಳು ನೀರಿನಲ್ಲಿ ಮುಳುಗಿಹೋದುವು.

ಕಳೆದ ವಾರದಲ್ಲಿ ಮದ್ರಾಸು ಮೊದಲಾದ ಪೂರ್ವಸಮುದ್ರತೀರದ ಪಟ್ಟಣಗಳಲ್ಲೂ ದಕ್ಷಿಣದಲ್ಲೂ ಪಶ್ಚಿಮತೀರದ ಹಲವು ಕಡೆಯೂ ವಿಶೇಷವಾಗಿ ಮಳೆಯಾಗಿದೆ.

ಕಳೆದ ಜನವರಿ ತಾ|| ೧ ರಿಂದ ಸೆಪ್ಟಂಬರ್ ತಾ|| ೧೪ ರವರೆಗೆ ರಂಗೂನಿನಿಂದ ಯೂರೋಪು ಇಂಡ್ಯಾ ಮೊದಲಾದ ಹಲವು ಕಡೆಗಳಿಗೆ ೧೩೩೯೭೬ ಟನ್ನುಗಳ ತೂಕದ ಅಕ್ಕಿಯು ಸಾಗಿಹೋಗಿರುತ್ತದೆ.

ರಾಯಿಬಹದ್ದೂರ್ ಸೇತುಸುರೂಪಚಂದ್ ಹುಕುಂಚಂದ್ ಎಂಬ ಮಾರ್ವಾಡಿ ಶ್ರೀಮಂತರು ಲೇಡಿ ಹಾರ್ಡಿಂಜ್ ಕಲಾಶಾಲೆಗೆ ೪ ಲಕ್ಷ ರೂ. ಗಳನ್ನು ಧರ್ಮಾರ್ಥವಾಗಿ ಕೊಟ್ಟರು. ಇದನ್ನು ವೈಸ್ರಾಯರು ಕೃತಜ್ಞತೆಯಿಂದಂಗೀಕರಿಸಿದರು.

ಕಳೆದ ಸೋಮವಾರದಿಂದ ಬೊಂಬಾಯಿ ಕ್ರಾನಿಕಲ್ ಪತ್ರಿಕೆಯು ಮರಳಿ ಮಿ|| ಹಾರ್ನಿಮನ್‌ರವರ ಸಂಪಾದಕತ್ವದಿಂದಲೇ ಪ್ರಕಟವಾಗುತ್ತಿದೆ. ಅದಕ್ಕೆ ಕೆಲ ಹೊಸ ಡೈರೆಕ್ಟರುಗಳು ಸೇರಿದರು. ಡೈರೆಕ್ಟರುಗಳಿಗೂ ಹಾರ್ನಿಮನ್‌ರವರಿಗೂ ಅಭಿಪ್ರಾಯಭೇದಗಳು ತಪ್ಪಿಹೋದುವು.

ಸೊಲ್ಲಾಪುರದ ವೀರಶೈವರುಗಳು ರಾ|| ಬ|| ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರ ಅಧ್ಯಕ್ಷತೆಯಿಂದ ಸಭೆಗೂಡಿದ್ದು ತಮ್ಮ ಸಂಘಕ್ಕೆ ಪ್ರತ್ಯೇಕ ಪ್ರಾತಿನಿಧ್ಯ ಸ್ವಾಮ್ಯವನ್ನು ಪಡೆದುಕೊಳ್ಳುವುದಕ್ಕಾಗಿ ಸ್ಟೇಟ್ ಸೆಕ್ರೆಟರಿಯವರಲ್ಲಿ ಬಿನ್ನೈಸಿಕೊಳ್ಳಬೇಕೆಂದು ತೀರ್ಮಾನಿಸಿದರು.

ಬೊಂಬಾಯಿಯಲ್ಲಿ ಚೀನಾ ಸ್ತ್ರೀಯರು ತುಂಬಾ ವಾಸಮಾಡಿಕೊಂಡಿರುವ ಬೀದಿಯ ಒಂದು ಮನೆಯಲ್ಲಿ ಸಿಡಿಮದ್ದು ಹಾರಿತು. ಅದರಿಂದ ಮನೆಯ ತಾರಸಿಯಲ್ಲಿ ದೊಡ್ಡ ರಂಧ್ರವಾಯಿತು. ಅದರ ರಭಸಕ್ಕೆ ಮನೆಯೆಲ್ಲಾ ಕಂಪಿಸಿಹೋಯಿತು. ಯಾರಿಗೂ ಅಪಾಯವಾಗಲಿಲ್ಲ. ಪೋಲೀಸರು ಬಂದು ಒಳಗೆ ದೊರೆದ ಮದ್ದುಸಿಡಿದುರಿದಿದ್ದ ಸಾಮಗ್ರಿಗಳನ್ನು ವಶಪಡಿಸಿಕೊಂಡು ಕಾರಣಭೂತರನ್ನು ತಡಕುತ್ತಿದ್ದಾರೆ.

ತಾತಾ ಕಂಪೆನಿಯವರ ವಾರ್ಷಿಕೋತ್ಸವವು ಕಳೆದ ವಾರದಲ್ಲಿ ನಡೆವಾಗ ಸರ್ ದೊರಾಬ್ಜಿ ತಾತಾರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಆಗ ಮಾಡಿದ ಅವರ ಭಾಷಣದಲ್ಲಿ ತಮ್ಮ ಕಬ್ಬಿಣದ ಕರ್ಮಾಲಯದ ಕೆಲಸವು ಹೇಗೆ ಅಭಿವೃದ್ಧಿಗೆ ಬಂದಿತೆಂಬುದನ್ನು ವಿಸ್ತರಿಸಿ ಹೇಳುವಾಗ್ಗೆ ಈಗಣ ಯುದ್ಧದಿಂದಲೇ ತಮ್ಮ ಕಾರ್ಯಾಲಯಕ್ಕೆ ವಿಶೇಷಾಭಿವೃದ್ಧಿಯುಂಟಾಯಿತೆಂತಲೂ, ಭರತಖಂಡದ ಸರ್ಕಾರದವರು ತಮ್ಮ ಲೋಹಮಾರ್ಗಗಳಿಗೆ ಬೇಕಾದ ಸಾಮಾನುಗಳಲ್ಲಿ ಬಹುಭಾಗವನ್ನೆಲ್ಲಾ ನಮ್ಮ ಕಂಪೆನಿಯಿಂದಲೇ ಕೊಳ್ಳುತ್ತಿರುವರೆಂತಲೂ, ಇನ್ನು ಮುಂದೆ ನಮ್ಮ ಕಂಪೆನಿಯವರು ಇನ್ನೂ ಹಲವು ತೆರದ ಸಣ್ಣಸಣ್ಣ ಪರಿಶ್ರಮಗಳನ್ನು ಸ್ಥಾಪಿಸುವುದರಲ್ಲಿದ್ದಾರೆಂತಲೂ, ವ್ಯಾಪಾರವನ್ನು ನಡೆಯಿಸುವುದಕ್ಕೆ ಅನುಕೂಲಿಸುವ ಹಡಗುಗಳನ್ನು ಕಟ್ಟಿಸುವುದಕ್ಕೂ ಪ್ರಯತ್ನಿಸಿರುವರೆಂತಲೂ ಮೊದಲಾಗಿ ಹೇಳಿ, ಈ ದೇಶದ ಜನರೆಲ್ಲರೂ ತಂತಮ್ಮ ನಿರರ್ಥಕ ಭೇದಭಾವಗಳನ್ನು ಬಿಟ್ಟು ಪಾರಿಶ್ರಾಮಿಕ ವಿಷಯದಲ್ಲಿ ಏಕಮತ್ಯದಿಂದ ನಡೆದುಕೊಂಡರೆ ದೇಶಾಭಿವೃದ್ಧಿಯಾಗುವುದೆಂದು ಹೇಳದರು.

ಕಳೆದವಾರದಲ್ಲಿ ಕೊಚ್ಚಿಯಕಡೆಗೆ ಸಂಚಾರಾರ್ಥವಾಗಿ ಹೋಗಿದ್ದ ಮದ್ರಾಸ್ ಗೌರ್ನರವರು ಕೊಚ್ಚಿ ಸಂಸ್ಥಾನಕ್ಕೆ ಸೇರಿದ ಚೇರುತಿರುತಿ ಎಂಬ ಗ್ರಾಮದಲ್ಲಿ ಕೊಚ್ಚಿ ಪ್ರಭುತ್ವದವರಿಂದ ಏರ್ಪಡಿಸಲ್ಪಟ್ಟಿರುವ ಒಂದು ಆಯುರ್ವೇದ ಕಲಾಶಾಲೆಯ ಸ್ಥಾಪನಮಹೋತ್ಸವವನ್ನು ನೆರವೇರಿಸಿದರು. ಆ ಸಮಯದಲ್ಲಿ ಗೌರ್ನರವರು ಭಾರತೀಯಾಯುರ್ವೇದದ ಪ್ರಾಶಸ್ತ್ಯವನ್ನು ಕುರಿತು ಪ್ರಶಂಸೆಮಾಡಿದುದಲ್ಲದೆ ಉಷ್ಣವ್ಯಾಧಿಗಳ ಪರಿಹಾರಕ್ಕೆ ತಕ್ಕ ಓಷಧಿಗಳು ಈ ದೇಶದಲ್ಲಿ ಹೇರಳವಾಗಿರುವುದರಿಂದಲೂ, ಈ ರೋಗಗಳ ಪರಿಹಾರಕ್ಕೆ ತಕ್ಕ ಔಷಧಗಳಿಗೆ ಸಮನಾದುವು ಮತ್ತೆಲ್ಲೂ ದೊರೆಯುವುದಿಲ್ಲವೆಂದೂ, ಆದರೂ ಔಷಧಗಳ ಗುಣ ಪರಿಶೋಧನವನ್ನು ನವೀನ ಶಾಸ್ತ್ರೀಯ ವಿಧಾನದಿಂದ ನಡೆಯಿಸುವುದು ಅತ್ಯವಶ್ಯಕವಾಗಿರುವುದೆಂತಲೂ, ಮದ್ರಾಸ್ ಸರ್ಕಾರದವರು ಈ ಕಾರ್ಯಕ್ಕಾಗಿಯೇ ಒಂದು ವೈದ್ಯಪೀಠವನ್ನು ಸ್ಥಾಪಿಸುವುದರಲ್ಲಿದ್ದಾರೆಂತಲೂ, ಅದಕ್ಕೆ ದೇಶೀಯ ವೈದ್ಯವಿದ್ಯಾಭಿಮಾನಿಗಳೆಲ್ಲರೂ ಸಹಾಯಮಾಡಬೇಕೆಂತಲೂ ಮೊದಲಾಗಿ ಹೇಳಿ ಆಯುರ್ವೇದ ವೈದ್ಯದಲ್ಲಿ ತಮಗಿರುವ ಗೌರವಭಾವವನ್ನು ವ್ಯಕ್ತಪಡಿಸಿದರು.

ತಾ|| ೪-೧೦-೧೭ ನೇ ದಿವಸ ಬೆಳಗಾವ ಲಿಂಗಾಯತ ಬೋರ್ಡಿಂಗ್ ಹೌಸಿನಲ್ಲಿ ಕೂಡಿದ ಲಿಂಗಾಯತ ಜನರ ಮೀಟಿಂಗಿನಲ್ಲಿ ಆದ ಠರಾವುಗಳು.

೧. ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಹಿಂದುಸ್ಥಾನವು ಯೋಗ್ಯಕಾಲದಲ್ಲಿ ಪಡೆಯಬೇಕೆಂಬುವುದೇ ನಮ್ಮ ದಯಾಳು ಸರಕಾರದವರ ಧ್ಯೇಯವಿರುತ್ತದೆಂದು ನೇಕನಾಮದಾರ ವೈಸರಾಯರಾದ ಲಾರ್ಡ್ ಚೆಲ್ಮಸ್‌ಫರ್ಡ ದೊರೆಗಳು ಪ್ರಸಿದ್ಧಪಡಿಸಿದ್ದಕ್ಕಾಗಿ ಎಲ್ಲ ಲಿಂಗಾಯತ ಸಮಾಜದ ಪರವಾಗಿ ಈ ಸಭೆಯು ಅಂತಃಕರಣಪೂರ್ವಕ ನಮ್ಮ ಸರಕಾರದವರನ್ನು ಅಭಿನಂದಿಸುತ್ತದೆ.

೨. ಹಿಂದುಸ್ಥಾನದ ಪ್ರಜೆಗಳು ಬಯಸುತ್ತಿರುವ ರಾಜಕೀಯ ಹಕ್ಕುಗಳನ್ನು ಕುರಿತು ವಿಚಾರಿಸುವದಕ್ಕೋಸ್ಕರ ನೇಕನಾಮದಾರ ಮಿ|| ಇ.ಎಸ್. ಮಾಂಟೇಗು ದೊರೆಗಳು ಸ್ವತಃ ಹಿಂದುಸ್ಥಾನಕ್ಕೆ ಬರುವುದಕ್ಕೆ ನಿಶ್ಚಯಿಸಿದ್ದನ್ನು ಕಂಡು ಲಿಂಗಾಯತ ಸಮಾಜದವರು ಪೂರ್ಣವಾಗಿ ಸಂತೋಷಪಡುತ್ತಾರೆ.

೩. ರಾಜ್ಯದ ಆಡಳಿತೆಯಲ್ಲಿ ಪ್ರಜೆಗಳು ತಮ್ಮ ಯೋಗ್ಯತೆಯನ್ನು ತೋರಿಸುತ್ತ ಹೋದಹೋದಹಾಗೆ ಅವರಿಗೆ ಯೋಗ್ಯವಾದ ರಾಜಕೀಯ ಹಕ್ಕುಗಳನ್ನು ಸರಕಾರದವರು ಕೊಡಬೇಕೆಂತಲೂ ಮತ್ತು ಏಕಕಾಲಕ್ಕೆ ಕ್ರಾಂತಿಕಾರಕವಾದ ಬದಲಾವಣೆಗಳು ಹಿಂದುಸ್ಥಾನದ ಪ್ರಗತಿಗೆ ಘಾತಕವಿರುತ್ತವೆಂತಲೂ ಈಸಭೆಯವರು ಖಂಡಿತವಾಗಿ ಹೇಳುತ್ತಾರೆ.

೪. ಜನಸಂಖ್ಯೆಯ ಮಾನದಿಂದಲೂ ವ್ಯವಹಾರೋದ್ಯೋಗಗಳ ಮಾನದಿಂದಲೂ ಲಿಂಗಾಯತ ಸಮಾಜದ ಮಹತ್ವವನ್ನು ಲಕ್ಷಿಸಿ ಕಂಡು ವಿಧಾನಸಭೆಗೆ ಮುಂಬಯಿ ದಕ್ಷಿಣಭಾಗದ ಲಿಂಗಾಯತರ ಪರವಾಗಿ ಇಬ್ಬರೂ, ಮತ್ತು ಮಧ್ಯಭಾಗದ ಲಿಂಗಾಯತರ ಪರವಾಗಿ ಒಬ್ಬರೂ ಈ ಪ್ರಕಾರ ಐದು ಜನ

[illegible]

ವರ್ತಮಾನಸಾರ.

[illegible]

ನೋಟೀಸು.

ಬಳ್ಳಾರಿ ಡಿಸ್ಟ್ರಿಕ್ಟು ಮುನಸೀಫ್ ಕೋರ್ಟ್.

ಅಸಲ್ ನಂಬರು ೬೨೬ / ೧೯೧೭

ಮುಲ್ಲಂಗಿ ಕರಿಬಸವಪ್ಪ — ವಾದಿ.

ಸಾತನೂರು ಬಸಪ್ಪ — ಪ್ರತಿವಾದಿ.

ಮೇಲ್ಕಂಡ ನಂಬರುನಲ್ಲಿ ಪ್ರತಿವಾದಿಯಾದ ನಿನ್ನಮೇಲೆ ವಾದಿಯಾದ ಮುಲ್ಲಂಗಿ ಕರಿಬಸವಪ್ಪನವರ ಅಂಗಡಿಯಲ್ಲಿ ನೀನು ಲೇವಾದೇವಿ ಮಾಡಿದ ಬಾಬತು ೩೧೩-೧೪-೩ ರೂ. ಗೆ ಬಳ್ಳಾರಿ ಡಿ|| ಮುನ್ಸೀಫ್ ಕೋರ್ಟಿನಲ್ಲಿ ದಾಖಲ್ ಮಾಡಿರುತ್ತಾರೆ. ಸದರಿ ನಂಬರಿನಲ್ಲಿ ಕೋರ್ಟಿಗೆ ಹಾಜರು ಆಗುವುದಕ್ಕಾಗಿ ಇದುವರಿವಿಗೆ ಅನೇಕದಪ ಕೋರ್ಟಿನವರು ಸಮನ್ ನೂಡಿದಾಗ್ಯೂ ಹಾಜರಾಗಲಿಲ್ಲ. ಆದುದರಿಂದ ತಾ|| ೬-೧೧-೧೯೧೭ ಕ್ಕೆ ವಾಯಿದೆ ಹಾಕಿರುತ್ತಾರೆ. ಸದರಿ ತೇದಿಗೆ ನೀನು ಖುದ್ದಾಗಲಿ ಇಲ್ಲವೇ ವಕೀಲರ ದ್ವಾರಾ ಆಗಲಿ ಹಾಜರಾಗಬೇಕು. ಹಾಗೆ ಹಾಜರಾಗದಪಕ್ಷದಲ್ಲಿ ಪ್ರತಿವಾದಿಯಾದ ನಿನ್ನ ಯಕ್ಸ್ ಪಾರ್ಟಿ ಮಾಡಿ ಕೋರ್ಟಿನವರ ಕಡೆಯಿಂದ ವಾದಿಯು ಡಿಕ್ರಿಹೊಂದುತ್ತಾನೆ.

ಬಳ್ಳಾರಿ ತಾ|| ೧೬-೧೦-೧೯೧೭. } ಡಿ. ವೆಂಕಟಕೃಷ್ಣಮಾಚಾರ್ಯರು, ವಾದಿ ಪ್ಲೀಡರ್.

ಕಪ್ಪು ಶಾಯಿಪುಡಿ ಪೊಟ್ಟಣಗಳು.

೧೦೦ ಕ್ಕೆ ೬ ಆಣೆ. ೩೦೦ ಕ್ಕೆ ೧ ರೂ. ೫೦೦ ಕ್ಕೆ ೧—೯—೦ [illegible]

ವಿಳಾಸ:— ವಿ. ಬಿ. ಹಳೇ ಸಿದ್ದಿಕಟ್ಟಿ, ಬೆಂಗಳೂರು ಸಿಟಿ.

ಪ್ರಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

[illegible]

ಯೋಗ್ಯತಾಪತ್ರಗಳು.

[illegible]

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲರಿಗೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರ ಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವೇದ,ಶಾಸ್ತ್ರ ಮತ್ತು ಚರಿತ್ರೆಗಳ ಆಧಾರದಿಂದ "ಕುರುಬರಜಾತಿ" ನಡಾವಳಿ, ಆಚಾರಗಳ, ಇವರಲ್ಲಿ ರಾಜ್ಯಧರ್ಮ ಸ್ಥಾಪಕರಾದ ಪೂರ್ವೀಕರ ಸಂ[illegible]

ವಿಳಾಸ—ಎಂ. ಎಚ್. ಲಿಂಗಪ್ಪ ಎಡಿಟರ್, ಬೆಂಗಳೂರು ಸಿಟಿ.

ಸತ್ಯಮೇವಜಯತೇ.

ಮದನೋದ್ಭವ ಗುಳಿಗೆ.

[illegible]

ನಪುಂಸಕತ್ವಾರಿ ತೈಲವು.

[illegible] ಲುಖರ್ಚು ಬೇರೆ. ಒಂದಾಣೆ ಸ್ಟಾಂಪು ಕಳಿಸಿದರೆ ಕ್ಯಾಟಲಾಗು ಪುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ, ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೭ ನೆಯ ಇಸವಿ ಅಕ್ಟೋಬರ್ ತಾ|| ೨೮ ರಿಂದ ೧೯೧೭ ನೆಯ ನವಂಬರ್ ತಾ|| ೩ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಶ್ವಯುಜ ಶು|| ತ್ರಯೋದಶಿಯಿಂದ ಆಶ್ವಯುಜ ಬ|| ಚೌತಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ತೇದಿ
28	[1] ಭಾನು	ತ್ರಯೋ	24-35	ಉಭಾ	20-47	12
29	ಸೋಮ	ಚತು	19-16	ರೇವತಿ	17-11	13
30	[2] ಮಂಗಳ	ಪೌರ್ಣ	14-30	ಅಶ್ವಿನಿ	14-8	14
31	[3] ಬುಧ	ಪಾಡ್ಯ	9-36	ಭರಣಿ	11-53	15
1	[4] ಗುರು	ಬಿದಿಗೆ	7-30	ಕೃತ್ತಿಕೆ	10-31	16
2	[5] ಶುಕ್ರ	ತದಿಗೆ	5-31	ರೋಹಿಣಿ	10-13	17
3	ಶನಿ	ಚೌತಿ	4-47	ಮೃಗಶಿರ	11-8	18

(1) ತ್ರಯೋದಶೀತಿಥಿಃ, ಬೆಟ್ಟದಲ್ಲಿ ಚಾಮರಾಜಮುಡೀ ಉತ್ಸವ. (2) ಚಂದ್ರೋದಯಗೌರೀವ್ರತಂ, ದಾನಫಲವ್ರತಂ, ಅಮೃತಸಿದ್ಧಿಯೋಗಃ. (3) ಶ್ರೀ ಚಾಮುಂಡೇಶ್ವರೀ ರಥಃ. (4) ಗುರುಚಂದ್ರಯೋಗ್ಯ ಮೌನಮಃ. (5) ಶ್ರೀರಂಗದಲ್ಲಿ ದೋಲೋತ್ಸವಾರಂಭ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನತ್ಯಕ್ತವೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಕೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

REGISTERED NO. M. 124.

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ನವಂಬರ್ ತಾರೀಖು ೪ ನೆಯ ಭಾನುವಾರ. (ಸಂಚಿಕೆ ೪೪

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಕ್ಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹಾಳಕೇರಿ, ಮುಳಗುಂದ, ಬದರಿ, ಅನಂತಪೂರ, ಮುಂತಾದ ೧೪ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದ ನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರ್ವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೪ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದು ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದೆ ಕಾಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂಬು ನಾವು ಸಂತೋಷಪೂರ್ವಕವಾಗಿ ಸಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೊ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝಂಡೆ ಹಚ್ಚಿದ ಅದ್ವಿತಿಯ ಶಂಭುವಿನ ಅವತಾರಿಯಾದ "ಶ್ರೀ ಕಲ್ಯಾಣ ಬಸವೇಶ್ವರದೇವರ" ಅರಿವಿ ಮೇಲೆ ತೆಗೆದಿದ್ದ ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅದ್ಯಕರ್ತವ್ಯ ಅದೆ ಫುಲ್‌ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕೈ ಬಣ್ಣದ್ದು ರೂ. ೧-ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುತ್ತದೆ ಫುಲ್‌ಸೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸೈಜು ರೂ. ೦-೮-೦ ಮೇಲೆ ಕೈ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೋಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೇ ಫು|| ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ಆಣೆ ೮ ಮೇಲೆ ಕೈ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೋಟೊ ಬೇರೆ ಬೇರೆ ಸಿಕ್ಕುತ್ತವೆ.

ಪುರವುಗೆ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಚಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪೆನಿ, ಸೊಲ್ಲಾಪುರ ಸಿಟಿ.

ಶಾಸ್ತ್ರೋಕ್ತ] [ಔಷಧಗಳು

ಶ್ರೀ ಭಾರತ ವನೌಷಧಿ ಸಂಗ್ರಹಾಲಯ.

ಮೂರುಕಾಸು!

[illegible]

ಸುವಾಸಿಕ ಹುರುಕಿನ ಔಷಧ.

[illegible]

ಕಾಲರಾಪಿಲ್ಸ್.

[illegible]

ಶ್ರೀ ಭಾರತ ವನೌಷಧಿ ಸಂಗ್ರಹಾಲಯ ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

[illegible]

ಅವುಗಳ ನಾಮಗಳು.

[illegible]

[illegible]

ಉತ್ತಮ ವೀರಶೈವ ಗ್ರಂಥಗಳು.

[illegible]

ಎಚ್. ಆರ್. [illegible], ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮ॥ ಸಿ. ರಾಮಲಿಂಗರೆಡ್ಡಿ, ಎಂ. ಎ., ಯವರು.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ನವಂಬರ್ ತಾ॥ ೪ ನೆಯ ಭಾನುವಾರ.

ಮ॥ ಸಿ. ರಾಮಲಿಂಗರೆಡ್ಡಿ, ಎಂ. ಎ., ಯವರಿಗೆ ರಾಜಧಾನಿಯ ಮಹಾಜನರ ಸತ್ಕಾರ.

ಕಳೆದ ತಾ॥ ೧ ನೆಯ ಗುರುವಾರಸಾಯಂಕಾಲ ರಾಜಧಾನಿಯ ಟರ್ವ ಹಾಲಿನಲ್ಲಿ ಮ॥ ಸಿ. ರಾಮಲಿಂಗರೆಡ್ಡಿ ಎಂ. ಎ., ಯವರಿಗಾಗಿ ಮೈಸೂರು ಪುರನಿವಾಸಿಗಳಿಂದ ಒಂದು ಬಹಿರಂಗವಾದ ಗೌರವ ಸತ್ಕಾರಾಭಿನಂದನಮಹೋತ್ಸವವು ನೆರವೇರಿಸಲ್ಪಟ್ಟಿತು. ಸರ್ದಾರ್ ಕಾಂತರಾಜ ಅರಸ್ ಬಿ. ಎ.; ಸಿ. ಎಸ್. ಐ., ಯವರು ಅಧ್ಯಕ್ಷಪೀಠವನ್ನಲಂಕರಿಸಿದ್ದರು. ಈ ಉತ್ಸವಾರಂಭವು ೬॥ ಗಂಟೆಗಾದರೂ, ಸಭಾಭವನಕ್ಕೆ ೫ ಗಂಟೆಯಿಂದಲೇ ಜನರು ಸೇರುವುದಕ್ಕಾರಂಭವಾದುದರಿಂದ ಸ್ಥಲ ಸಾಲದೆ ೫॥ ಗಂಟೆಯೊಳಗಾಗಿ ಹೊರಬಾಗಿಲನ್ನು ಮುಚ್ಚಿ ಜನಸಂಮರ್ದವನ್ನು ತಡೆಯಬೇಕಾಗಿ ಬಂದಿತು. ಒಳಗೆಲ್ಲಾ ಲೇಶವೂ ಅವಕಾಶವಿಲ್ಲದಂತೆ ಜನರು ಸೇರಿದ್ದುದಲ್ಲದೆ ಮಾಡದಮೇಲೂ ಒಬ್ಬರಮೇಲೊಬ್ಬರು ನಿಂತಿದ್ದರು. ಹೊರಗಣ ಜಗತಿಯಮೇಲೂ ತುಂಬಿತುಳುಕುತ್ತಿದ್ದರು. ಒಳಗಿದ್ದವರಲ್ಲಿ ಸಾವಿರಾರುಜನಕ್ಕೆ ಆಸನಗಳೇ ದೊರೆಯದೆ ನಿಂತಿರಬೇಕಾಗಿ ಬಂದಿತು. ಇಂಥ ಅಭೂತಪೂರ್ವವಾದ ಕೂಟವು ಟರ್ವಹಾಲು ನಿರ್ಮಿತವಾದಾರಭ್ಯ ಒಂದೆರಡುವೇಳೆ ಮಾತ್ರ ಆಗಿರಬಹುದು. ಸಭೆಗೆ ಆಗಮಿಸಿದ್ದವರಲ್ಲಿ ಸರ್ದಾರ್ ಲಕ್ಷ್ಮೀಕಾಂತರಾಜ ಅರಸ್, ಮ॥ ಗಳಾದ ಎಂ. ಎಸ್. ಬಾಳರಾಜ ಅರಸ್, ಹೆಚ್. ಸಂಜುಂಡರಾಜ ಅರಸ್, ಹೆಚ್. ಲಿಂಗರಾಜ ಅರಸ್, ಚಿಕ್ಕೇ ಅರಸ್ ಮೊದಲಾದ ರಾಜಬಂಧುವರ್ಗದವರೂ, ದಿ॥ ಬ॥ ಚಕ್ರವರ್ತಿಯವರು ಮ॥ ಗಳಾದ ಎಕ್ಸೈಜ್ ಕಮಿಷನರ್, ಪಿ. ರಾಘವೇಂದ್ರರಾವ್, ಪ್ರೊ॥ ಇ॥ ಜನರಲ್ ಕೆ. ಆರ್. ಶ್ರೀನಿವಾಸಯ್ಯಂಗಾರ್, ಕೋ॥ ಆ॥ ರಿಜಿಸ್ಟ್ರಾರ್ ಚಾಂಡಿಯವರು, ಮೈಸೂರು, ಬೆಂಗಳೂರು, ಕೋಲಾರ, ಚಿತ್ರದುರ್ಗ—ಈ ಡಿಸ್ಟ್ರಿಕ್ಟುಗಳ ಡಿ॥ ಕಮಿಷನರುಗಳು, ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜ್ ಮಿ॥ ಹಂಸಾಹುಸೇನ್ ರವರು, ಸಂಪದಭ್ಯುದಯಸಮಾಜದ ವಿದ್ಯಾಭ್ಯಾಸಶಾಖಾ ಸೆಕ್ರೆಟರಿಗಳಾದ ಮಿ॥ ಡಿಸೋಜಾರವರು, ರಾಜಧಾನಿಯ ಮ್ಯು॥ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು ಮೊದಲಾದ ಅನೇಕಾಧಿಕಾರಿವರ್ಗದವರೂ, ರಾಜಧಾನಿಯ ಎಲ್ಲಾ ಜನವರ್ಗಗಳ ಪ್ರಮುಖರೂ ಸಹ ಮುಂಗಡೆಯ ಆಸನಗಳಲ್ಲಿ ವಿರಾಜಮಾನರಾಗಿದ್ದರು. ಅವರ ಹಿಂಬದಿಯಲ್ಲಿ ಸಾವಿರಾರುಮಂದಿ ಪುರಜನರೂ ವಿದ್ಯಾರ್ಥಿಗಳೂ ಅತ್ಯುತ್ಸಾಹದಿಂದ ನೆರೆದಿದ್ದರು. ಸರ್ದಾರ್ ಕಾಂತರಾಜ ಅರಸರವರು ಮತ್ತು ಮ॥ ರಾಮಲಿಂಗರೆಡ್ಡಿಯವರು ದಯಮಾಡಿಸಿದ ಕೂಡಲೇ ಬ್ಯಾಂಡು ಬಾಜಿಸಲ್ಪಡುತ್ತಿರುವಾಗ್ಗೆ, ಸತ್ಕಾರಕಸಂಘದ ಮ॥ ಗಳಾದ ಮಹಮ್ಮದ್ ಸೇಟರು, ಡಿ. ಬಸುಮಯ್ಯನವರು, ಪುರುಷೋತ್ತಮಾನಂದಗಿರಿಬಾವಾಜಿಯವರು, ಸಾ॥ ಕಾವೇರಿಪಟ್ಟಂ ಸುಬ್ರಾಯಶೆಟ್ಟರು ಮೊದಲಾದವರು ಹೋಗಿ ಇದಿರ್ಗೊಂಡು ಸಭಿಕರು ಪ್ರತ್ಯುತ್ಥಾನ ಕರತಾಡನಗಳಿಂದ ಸುಸ್ವಾಗತ ಮಾಡುತ್ತಿರಲು, ಉನ್ನತಾಸನಗಳಲ್ಲಿ ಕುಳ್ಳಿರಿಸಿದರು.

ಅತಿಥಿಗಳ ಸಂತೋಷಕ್ಕಾಗಿ ಮಾಡಿದ್ದ ಏರ್ಪಾಟುಗಳೊಳಗೆ ಮೊಟ್ಟಮೊದಲು ವೈಣಿಕಶಿಖಾಮಣಿ ಮ॥ ಶೇಷಣ್ಣನವರ ವೀಣಾವಾದನವಾಯಿತು. ಜನಗಳ ಕಲಕಲದಲ್ಲಿ ಅದು ಮುಕ್ತಾಯವಾಯಿತು. ಬಳಿಕ ಸಂಗೀತ ವಿದ್ವಾನ್ ರಾಜೋಟಪ್ಪನವರ ಗಾನಾರಂಭವಾದಕೂಡಲೇ ಸಭೆಯು ನಿಶ್ಶಬ್ದವಾಗಿ ಕರ್ಣಾನಂದಗೊಂಡಿತು. ಬಳಿಕ ರಾಂಪೂರಿನ ಮಿ॥ ಜೂನೂಖಾನರ ಸಿತಾರ್ ವಾದ್ಯವಾದನವು ಇಂಪಾಗಿ ಸ್ವಲ್ಪಹೊತ್ತು ನಡೆದಿತು. ಬಳಿಕ ಗಾನವಿಶಾರದರಾದ ಮಿ॥ ಈಸಾಸೇಟರು ಉರ್ದುಭಾಷೆಯಲ್ಲಿ ಮ॥ ರಡ್ಡಿಯವರ ಗುಣಪ್ರಶಂಸೆ ಮಾಡಿ ರಚಿತವಾಗಿದ್ದ ಪದ್ಯಾವಳಿಯನ್ನು ಗಾನರಸ ಮಿಶ್ರಮಾಡಿ ಬಹಳ ಶ್ರಾವ್ಯವಾಗಿ ಓದಿದರು. ತದನಂತರ ಮೈಸೂರು ಎಸ್. ಐ. ಎಸ್. ನಾಟಕ ಸಂಘದವರಿಂದ ಒಂದೆರಡು ಸೀನುಗಳು ಪ್ರದರ್ಶಿಸಲ್ಪಟ್ಟುದು ಮನೋಹರವಾಗಿದ್ದಿತು. ಬ್ಯಾಂಡಿನ ಬಾರಿಸುವಿಕೆಯೊಡನೆ ಇವೆಲ್ಲಾ ಸಮಾಪ್ತವಾದ ಬಳಿಕ ಸಭಾರಂಗ ಜಗತಿಯಮೇಲೆ ಏರ್ಪಡಿಸಲ್ಪಟ್ಟ ಉನ್ನತಾಸನಗಳಮೇಲೆ ಬಲಗಡೆಯಲ್ಲಿ ಮ॥ ರಡ್ಡಿಯವರೂ, ಎಡಗಡೆಯ ಪೀಠದಮೇಲೆ ಸಭಾಧ್ಯಕ್ಷರೂ ಆಸೀನರಾದರು. ಮೊದಲು ಕೊಡಗಿನ ರಿಟೈರ್ಡ್ ಸಬ್ ಜಡ್ಜರಾದ ರಾವ್ ಸಾಹೇಬ್ ಚೆನ್ನಯ್ಯನವರು ಇಂಗ್ಲೀಷ್ ಭಾಷೆಯಲ್ಲೂ, ಬಳಿಕ ಮ॥ ಎಂ. ಬಸವಯ್ಯ ಬಿ. ಎ., ಬಿ. ಎಲ್., ರವರು ಕನ್ನಡದಲ್ಲೂ, ಅನಂತರ ಮಿ॥ ಮಹಮ್ಮದ್ ಸೇಟರು ಉರ್ದುವಿನಲ್ಲೂ ಭಾಷಣಗಳನ್ನು ಮಾಡಿದರು. ಸ್ವಲ್ಪ ಹೆಚ್ಚುಕಡಿಮೆ ಎಲ್ಲ ಭಾಷಣಗಳ ಅಭಿಪ್ರಾಯವೂ ಒಂದೇ ರೀತಿಯಾಗಿದ್ದಿತು. ಅವುಗಳಲ್ಲಿ ಮ॥ ಬಸವಯ್ಯನವರ ಭಾಷಣದ ಮುಖ್ಯಾಶಯವನ್ನು ಮಾತ್ರ ಇಲ್ಲಿ ತಿಳಿಯಿಸುತ್ತೇವೆ:—ಮೈಸೂರು ಶ್ರೀಮನ್ಮಹಾರಾಜ ಸರ್ಕಾರದವರು ತಮ್ಮ ಪ್ರಜಾಸಮುದಾಯದ ಸರ್ವಾಂಗವನ್ನೂ ವಿದ್ಯಾವಿವೇಕಾದಿಗಳಿಂದ ಪರಿಪುಷ್ಟಿಗೊಳಿಸಬೇಕಾದುದು ಅವಶ್ಯಕವೆಂದು ತಿಳಿದುಕೊಂಡಿರುವ ಈ ಸುಸಂಧಿಯಲ್ಲಿ ಆ ಕಾರ್ಯವನ್ನು ನಿರ್ವಹಿಸುವುದಕ್ಕೆ ಸಕಲ ವಿಧದಲ್ಲೂ ಸಮರ್ಥರಾಗಿರುವ ಮ॥ ರಾಮಲಿಂಗರಡ್ಡಿಯವರನ್ನು ವಿದ್ಯಾಭ್ಯಾಸಶಾಖೆಯ ಇನ್ಸ್‌ಪೆಕ್ಟರ್ ಜನರಲ್ ಉದ್ಯೋಗಕ್ಕೆ ನಿಯಮಿಸಲು ಉದ್ದೇಶಪಟ್ಟಿರುವುದು ಬಹಳ ಪ್ರಶಸ್ತವಾಗಿರುತ್ತದೆ. ಮ॥ ರಡ್ಡಿಯವರು ಸ್ವದೇಶ ವಿದೇಶಗಳಲ್ಲಿ ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಅನೇಕ ಡಿಗ್ರಿಗಳನ್ನು ಪಡೆದುಕೊಂಡಿರುವುದಲ್ಲದೆ ವಿದ್ಯಾರ್ಜನೆಗಾಗಿ ಪಾಶ್ಚಾತ್ಯ ದೇಶಗಳನ್ನು ಸಂಚರಿಸಿ, ಬೇಕಾದಷ್ಟು ಅನುಭವ ಪಡೆದುಕೊಂಡು ಬಂದುದಲ್ಲದೆ ಮತ್ತೊಂದು ಸಲ ಯೂರೋಪು, ಅಮೇರಿಕಾ, ಜಪಾನ್ ಮೊದಲಾದ ದೇಶಗಳಲ್ಲೆಲ್ಲಾ ಸಂಚರಿಸಿ, ಅಲ್ಲಿಯ ವಿದ್ಯಾಪೀಠಗಳ ರಚನೆ, ವಿದ್ಯಾಭ್ಯಾಸ ಸೌಕರ್ಯಗಳು, ಕೈಗಾರಿಕೆಗಳ ಪದ್ಧತಿ, ಕುಶಲ ವಿದ್ಯಾಪ್ರಾಚುರ್ಯ-ಇವುಗಳನ್ನೆಲ್ಲಾ ಅರಿತುಕೊಂಡು ಬಂದು, ನಮ್ಮ ಮೈಸೂರು ವಿಶ್ವವಿದ್ಯಾಲಯ ರಚನೆಗಾಗಿ ಎಷ್ಟೋ ಉಪಯುಕ್ತ ಸೂಚನೆಗಳನ್ನು ಮಾಡಿದವರಾಗಿರುತ್ತಾರೆ. ಇದುವರೆಗೆ ರಾಜಧಾನಿಯ ಮಹಾರಾಜಾ ಕಲಾಶಾಲೆಯಲ್ಲಿ ಬೋಧಕರೂ ಪ್ರಿನ್ಸಿಪಾಲರೂ ಆಗಿದ್ದುಕೊಂಡು ಆ ಕೆಲಸವನ್ನು ಬಹಳ ದಕ್ಷತೆಯಿಂದ ನೆರವೇರಿಸಿ ಒಳ್ಳೆ ಹೆಸರನ್ನು ಪಡೆದುಕೊಂಡಿರುತ್ತಾರೆ. ಮೈಸೂರುದೇಶದ ಪ್ರಜಾವರ್ಗದಲ್ಲಿ ಹಿಂದುಳಿದ ಜನರೇ ಸಂಪೂರ್ಣವಾಗಿರುವುದರಿಂದ ಅವರಲ್ಲಿ ವಿದ್ಯಾವಿಕಾಸವನ್ನುಂಟುಮಾಡುವ ಕೆಲಸಕ್ಕೆ ಇವರಂಥ ಕಾರ್ಯದಕ್ಷರ ಮತ್ತೂ ಪೂರ್ಣಾನುಭವಿಗಳ ಅವಶ್ಯಕತೆಯು ಬಹಳವಾಗಿದ್ದಿತು. ಇದನ್ನರಿತು ನಮ್ಮ ಶ್ರೀಮನ್ಮಹಾರಾಜರವರೂ ಅವರ ಸರ್ಕಾರದವರೂ ಸಹ ಮ॥ ರಡ್ಡಿಯವರನ್ನು ನಿಯಮಿಸಿಕೊಳ್ಳಲಿರುವುದಕ್ಕಾಗಿ ಪ್ರಜೆಗಳೆಲ್ಲರೂ ಮುಖ್ಯವಾಗಿ ಹಿಂದುಳಿದ ಜನವರ್ಗದವರೆಲ್ಲರೂ ಅತ್ಯಂತ ಕೃತಜ್ಞರಾಗಿರುತ್ತಾರೆ. ದೇಶದಲ್ಲಿ ಯಾವುದಾದರೊಂದಂಗವು ಮುಂದಾಗಿದ್ದ ಮಾತ್ರಕ್ಕೇ ಅದು ಸರ್ವಾಂಗ ಪರಿಪುಷ್ಟವೆನಿಸಿಕೊಳ್ಳುವುದಿಲ್ಲ. ಒಂದೇ ಒಂದಂಗವನ್ನು ಮುಂದುಮಾಡಿಕೊಂಡಿರುವ ದೇಶವು ಪ್ರಪಂಚದಲ್ಲೆಲ್ಲೂ ಇರುವುದಿಲ್ಲ. ಸರ್ವಪ್ರಜೆಗಳ ಕಷ್ಟಸುಖಗಳನ್ನೂ ವಿಚಾರಿಸಿ ಅವರ ಕ್ಷೇಮವೇ ತಮ್ಮ ಕ್ಷೇಮವೆಂದು ಬಗೆದು ಸರ್ವರ ಪುರೋವೃದ್ಧಿಯನ್ನೂ ಬಯಸದಿರುವ ಅಧಿಕಾರಿಗಳು ದೇಶದಲ್ಲಿ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಸರ್ವರನ್ನೂ ಮುಂದಕ್ಕೆ ತರಬೇಕೆಂದು ಬಯಸತಕ್ಕ ಅಧಿಕಾರಿಗಳು ನಮ್ಮ ದೇಶದಲ್ಲಿ ಬಹಳ ವಿರಳರಾಗಿರುವುದು ನಮ್ಮ ದುರದೃಷ್ಟ. ಇಂಥ ಲೋಪವು ಮುಂದೆ ಪರಿಹೃತವಾಗುತ್ತ ಬರಬೇಕು. ಹಿಂದುಳಿದ ಜನವರ್ಗದವರನ್ನು ವಿದ್ಯಾಪ್ರಸಾರದಿಂದ ಉದ್ಧರಿಸಬೇಕೆಂಬ ಉದ್ದೇಶದಿಂದಲೇ ಶ್ರೀಮನ್ಮಹಾರಾಜರವರು ೧ ಲಕ್ಷ ರೂ. ಗಳನ್ನು ಪ್ರತ್ಯೇಕವಾಗಿ ವೆಚ್ಚಮಾಡಲು ಅಪ್ಪಣೆ ಮಾಡಿರುವುದಕ್ಕಾಗಿ ನಾವೆಲ್ಲರೂ ಕೃತಜ್ಞತೆಯಿಂದ ಅವರನ್ನು ವಂದಿಸುತ್ತೇವೆ. ಮ॥ ರಡ್ಡಿಯವರು ಈಗ ವಹಿಸುವುದರಲ್ಲಿರುವ ಉದ್ಯೋಗದ ಭಾರವು ಸಾಮಾನ್ಯವಾದುದಲ್ಲ. ಎಲ್ಲ ಶಾಖೆಗಳಿಗಿಂತಲೂ ವಿದ್ಯಾಭ್ಯಾಸಶಾಖೆಯು ಬಹಳ ಮುಖ್ಯವಾದುದು. ಇದರಿಂದ ಪ್ರಜಾವರ್ಗದ ಸಮುದ್ಧಾರಕ್ಕೆ ಅತ್ಯಂತ ಸಹಾಯವಾಗುವುದು. ಇದರ ಕಾರ್ಯನಿರ್ವಾಹದಲ್ಲಿ ಅನೇಕವಾದ ತೊಡಕುಗಳಿಲ್ಲದೆ ಇಲ್ಲ. ಬೇಕೆಂತಲೇ ಕೆಲರು ತೊಡಕುಗಳನ್ನೊಡ್ಡುತ್ತಲೂ, ಹಿಂದಕ್ಕೆ ಜಗ್ಗುತ್ತಲೂ ಬರುವರು. ಆದರೆ ಮ॥ ರಡ್ಡಿಯವರು ಅವುಗಳೊಂದಕ್ಕೂ ಜಗ್ಗದೆ ತಮ್ಮ ಮೇಲೆ ಹೊರಿಸಲ್ಪಡಲಿಕ್ಕಿರುವ ವಿಶೇಷ ಉತ್ತರವಾದಿತ್ವವುಳ್ಳ ಕೆಲಸವನ್ನು ಪ್ರಜಾಸಾಮಾನ್ಯಕ್ಕೂ ಹಿತಕರವಾಗುವಂತೆ ನೆರವೇರಿಸಿ, ಈಗ ಇಲ್ಲಿ ಸೇರಿರುವ ಇಷ್ಟು ಸಹಸ್ರಾರುಜನರು ಅವರ ವಿಷಯದಲ್ಲಿ ಯಾವ ನಂಬುಗೆಯನ್ನಿಟ್ಟು ಅವರಿಗೆ ಸತ್ಕಾರದವರಿಂದ ಕೊಡಲ್ಪಡಲಿಕ್ಕಿರುವ ಉದ್ಯೋಗಕ್ಕಾಗಿ ತಮ್ಮ ಅಭಿನಂದನವನ್ನು ತಿಳಿಯಿಸಲು ನೆರೆದಿರುತ್ತಾರೋ, ಇವಿಷ್ಟು ತಲೆಯೊಂದೊಂದಕ್ಕೂ ಸಾವಿರಾರು ಜನರಂತೆ ಅಭಿನಂದಿಸುವ ಸ್ಥಿತಿಯನ್ನು ತಮ್ಮ ಉದ್ಯೋಗ ವಿಶ್ರಾಂತಿಕಾಲದಲ್ಲಿ ಪಡೆದುಕೊಳ್ಳುವವರಾಗಲೆಂದು ಕೋರುತ್ತೇವೆ.'' ಹೀಗೆ ಭಾಷಣಗಳಾದ ಬಳಿಕ ಅವರಿಗೂ ಸಭಾಧ್ಯಕ್ಷರಿಗೂ ಹಾರ ಗುಚ್ಛಗಳು ಅರ್ಪಿಸಲ್ಪಟ್ಟುವು. ಅನಂತರ ಮ॥ ರಡ್ಡಿಯವರು ಬಹಳ ಗಂಭೀರವೂ ಗಂಗಾಪ್ರವಾಹದಂತೆ ಅವಿಚ್ಛಿನ್ನವೂ ಆದ ವಾಣಿಯಿಂದ ಆಂಗ್ಲಭಾಷೆಯಲ್ಲಿ ಸ್ವಲ್ಪ ದೀರ್ಘವಾಗಿಯೇ ಪ್ರತ್ಯುತ್ತರ ಭಾಷಣವನ್ನು ಮಾಡಿ, ತಮ್ಮ ವಿದ್ಯಾವೈದುಷ್ಯಾನುಭವಗಳನ್ನು ಈ ದೇಶೀಯರ ಹಿತಕ್ಕಾಗಿ ವಿನಿಯೋಗಿಸಲು ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಕೊಡಲ್ಪಡುವ ಅವಕಾಶವನ್ನು ಮನಸ್ಸಾಕ್ಷಿಗೆ ವಿರುದ್ಧವಿಲ್ಲದಂತೆ ಸರ್ವ ಪ್ರಜಾಸೇವೆಯನ್ನು ಮಾಡುವಲ್ಲಿ ವಿನಿಯೋಗಿಸಿ, ಪ್ರಜಾವರ್ಗದವರು ತಮ್ಮ ವಿಷಯದಲ್ಲಿಟ್ಟಿರುವ ಭರವಸೆಯನ್ನು ಸಾರ್ಥಕಪಡಿಸಲು ಪುರುಷಯತ್ನದಿಂದ ಸಾಧ್ಯವಾಗುವಷ್ಟು ಪ್ರಯತ್ನಗಳನ್ನೆಲ್ಲಾ ಮಾಡಲು ತಾವು ಸಿದ್ಧರಾಗಿರುತ್ತೇವೆಂತಲೂ, ಅಂಥ ಅವಕಾಶವು ಎಷ್ಟು ದೊರೆದರೂ ಸತ್ಯ ನ್ಯಾಯ ಧರ್ಮಗಳಿಗೆ ಲೋಪವಿಲ್ಲದಂತೆ ನೆರವೇರಿಸಬೇಕಾದುದು ಪ್ರತಿಯೊಬ್ಬನ ಕತ್ರಾಪಿ ವಿದ್ಯಾವಿವೇಕಸಂಪನ್ನನ ಮುಖ್ಯಕರ್ತವ್ಯವೆಂಬುದನ್ನು ನಾನು ಸಂಪೂರ್ಣವಾಗಿ ತಿಳಿದಿರುವೆನೆಂತಲೂ, ಮುಖ್ಯವಾಗಿ ಹಿಂದುಳಿದವರನ್ನು ಮುಂದಕ್ಕೆ ತರಲು ಪ್ರಯತ್ನಿಸಿದರೂ ಮುಂದಾದವರನ್ನು ಹಿಂದಕ್ಕೆ ಜಗ್ಗಿಸಬೇಕೆಂಬುದು ತಮ್ಮ ಉದ್ದೇಶವಲ್ಲವೆಂತಲೂ, ಮುಂದಾದವರ ಹಿತವಾದಗಳನ್ನು ಅಂಗೀಕರಿಸಿ ಹಿಂದಾದವರು ನಡೆಯಬೇಕೆಂತಲೂ ಮೊದಲಾಗಿ ಪ್ರತಿಪಾದಿಸಿ, ರಾಜಧಾನಿಯ ಸಕಲ ಪ್ರಜಾವರ್ಗದವರೂ ಈ ದಿವಸ ನೆರವೇರಿಸಿದ ಸತ್ಕಾರವನ್ನು ತಾವು ಜೀವಿತಾಂತವಾಗಿ ಮರೆಯತಕ್ಕವರಲ್ಲವೆಂತಲೂ, ಅವರು ವಿಶೇಷ ತರವಾಗಿ ಮಾಡಿದ ಸತ್ಕಾರಕ್ಕೂ ಗುಣಗ್ರಹಣೈಕವಿಚಕ್ಷಣರಾದ ಸರ್ದಾರ್ ಕಾಂತರಾಜ ಅರಸಿನವರು ಈ ದಿನದ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದುದಕ್ಕೂ ತಮ್ಮ ಕೃತಜ್ಞತಾವಂದನೆಗಳನ್ನು ತಿಳಿಯಿಸಿ, ತಮ್ಮ ಭಾಷಣವನ್ನು ಮುಗಿಸಿದರು.

ಬಳಿಕ ಸಭಾಧ್ಯಕ್ಷರಾದ ಸರ್‌ದಾರ್ ಕಾಂತರಾಜ ಅರಸಿನವರು ಸಭಿಕರ ಅಖಂಡಕರಾಸ್ಫಾಲನದಿಂದ ಉತ್ತೇಜಿತರಾಗಿ ತಮ್ಮ ಉಪಸಂಹಾರ ಭಾಷಣವನ್ನು ಸಂಕ್ಷಿಪ್ತವಾಗಿದ್ದರೂ ಬಹಳ ಶ್ಲಾಘನೀಯವಾದ ಅಭಿಪ್ರಾಯಗಳಿಂದ ಕೂಡಿ ನೆರವೇರಿಸಿದರು. ಅದರ ಮುಖ್ಯಾಂಶವೇನೆಂದರೆ—ಇದುವರೆಗೆ ಈ ಸಭೆಯಲ್ಲಿ ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಉರುದಿನಲ್ಲೂ ಶ್ಲಾಘನೀಯಗಳಾದ ಭಾಷಣಗಳನ್ನು ಬೇರೆಬೇರೆ ದೊಡ್ಡ ಮನುಷ್ಯರು ಮಾಡಿರುತ್ತಾರೆ. ಅವುಗಳಲ್ಲೆಲ್ಲಾ ಮ॥ ರಡ್ಡಿಯವರ ಯೋಗ್ಯತಾವಿಶೇಷಗಳು ವ್ಯಕ್ತಪಟ್ಟೇ ಇರುತ್ತವೆ. ನಾನು ಇವುಗಳನ್ನೆಲ್ಲಾ ಬಿಟ್ಟು ೪ ನೆಯ ಭಾಷೆಯಲ್ಲಿ ಮಾತನಾಡಬೇಕಾದರೆ ತೆಲುಗಿನಲ್ಲಿ ಮಾತನಾಡಬೇಕು. ಆ ಭಾಷೆಯಲ್ಲಿ ಮ॥ ರಡ್ಡಿಯವರು ವಿಶೇಷ ಪಾಂಡಿತ್ಯವುಳ್ಳವರಾದುದರಿಂದ ನಾನು ಅದರಲ್ಲಿ ಬಾಯಿ ಹಾಕುವ ಹಾಗಿಲ್ಲ. ಇವರು ಆಂಧ್ರದೇಶೀಯರಾದರೂ ನಮ್ಮ ವಿಶ್ವವಿದ್ಯಾನಿಲಯದ ಬೋಧನಕ್ರಮಗಳೆಲ್ಲಾ ದೇಶಭಾಷೆಯಾದ ಕನ್ನಡದಲ್ಲೇ ನಡೆಯುವಂತಾಗಬೇಕೆಂದು ಮೊದಲಿಂದಲೂ ವಾದಿಸುತ್ತ ಅನನ್ಯಸಾಧಾರಣವಾದ ಅಭಿಮಾನವನ್ನು ಆ ಭಾಷೆಯ ವಿಷಯದಲ್ಲಿ ವಹಿಸಿರುವವರಾದಕಾರಣ ಆ ಕನ್ನಡದಲ್ಲೇ ನನ್ನ ಭಾಷಣವನ್ನು ಮಾಡುವುದು ವಿಹಿತವಾದುದೆಂದು ನಾನು ತಿಳಿಯುತ್ತೇನೆ. ಮ॥ ರಡ್ಡಿಯವರನ್ನು ಸರ್ಕಾರದವರು ಮಹಾರಾಜಾಕಾಲೇಜ್ ಪ್ರಿನ್ಸಿಪಾಲ್ ಕೆಲಸದಿಂದ ಬಿಡುಗಡೆ ಮಾಡಿಸಿದ ಬಳಿಕ ಅವರಿಗೆ ಮುಂದಣ ಉದ್ಯೋಗವನ್ನು ಕೊಡುವ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯವು ಹೇಗಿರುವುದೋ ಎಂದು ಸರ್ಕಾರದವರು ಸಂಶಯಪಡುತ್ತಿದ್ದರು. ಈ ದಿನ ಇಲ್ಲಿ ನೆರೆದಿರುವ ಅಸದೃಶವಾದ ಜನಸ್ತೋಮ ನಿಬಿಡವಾದ ಮಹಾಸಭೆಯ ಸ್ಥಿತಿಯನ್ನು ನೋಡುವಲ್ಲಿ ಅವರ ವಿಷಯದಲ್ಲಿ ಪ್ರಜೆಗಳ ಸಾನುಭೂತಿಯು ಎಷ್ಟು ಘನತರವಾಗಿದೆಯೆಂಬುದು ವ್ಯಕ್ತವಾಗಿರುವ ಕಾರಣ, ಸರ್ಕಾರದವರ ಮನಸ್ಸಿನಲ್ಲಿದ್ದ ಸಂಶಯವೆಲ್ಲಾ ನಿರ್ಮೂಲಿತವಾಗುವುದೆಂಬುದಕ್ಕೆ ಸಂಶಯವಿಲ್ಲ. ಯಾರೊಬ್ಬರ ಗುಣಾತಿಶಯವನ್ನು ಅರಿಯಬೇಕಾದರೂ ದೂರದಿಂದ ನೋಡಿದರೆ ಫಲವಿಲ್ಲ. ಸಹವಾಸ ಸಾಮೀಪ್ಯವರ್ತನವು ಅತ್ಯವಶ್ಯಕವು. ಮ॥ ರಡ್ಡಿಯವರ ಗುಣಾತಿಶಯಗಳೆಂಥವುಗಳೆಂಬುದನ್ನು ಇಲ್ಲಿ ನೆರೆದಿರುವ ಅವರ ಸಹಸ್ರಾರು ವಿದ್ಯಾರ್ಥಿಗಳು ತಿಳಿದಿರುವ ಮಟ್ಟಿಗೆ ಇತರರು ತಿಳಿಯಲಾರರು. ಮ॥ ರಡ್ಡಿಯವರು ಘನತರವಾದ ಪಂಡಿತರು ಮಾತ್ರವೇ ಅಲ್ಲದೆ ಭೂಮಂಡಲದ ಅನೇಕ ಪ್ರಸಿದ್ಧ ರಾಷ್ಟ್ರಗಳ ಮಹಾ ಮಹಾ ಪಂಡಿತರ ವಿದ್ಯಾಪೀಠಗಳ ಸಂಭಾಷಣ ಸಹವಾಸಾದಿಗಳಿಂದ ವಿಶೇಷವಾದ ಅನುಭವವನ್ನು ಪಡೆದಿರುವುದು ಮಾತ್ರವೇ ಅಲ್ಲದೆ ಕೈಗಾರಿಕೆ ಮೊದಲಾದ ವಿದ್ಯೆಗಳಲ್ಲೂ ಕುಶಲರಾಗಿರುತ್ತಾರೆ. ಕಾರ್ಯನಿರ್ವಾಹ ಮಾಡುವುದರಲ್ಲಿ ಶ್ರೇಷ್ಠವಾದ ಚಟುವಟಿಕೆಯೂ ಅಭಿಮಾನವೂ ಇವರಲ್ಲಿ ಬಹಳವಾಗಿವೆ. ನಮಗೆ ಗುಣದಲ್ಲಿ ಲಕ್ಷ್ಯವಿರಬೇಕೇ ಹೊರತು ಸ್ವದೇಶದವನು, ವಿದೇಶದವನು, ಸ್ವಕುಲದವನು, ಪರಕುಲದವನು ಎಂಬ ಭೇದಭಾವದಿಂದ ಪ್ರಯೋಜನವಿಲ್ಲ. "ಖಂಡಿತವಾದೀ ಲೋಕವಿರೋಧೀ'' ಎಂಬ ಗಾದೆಯು ಇರುವುದಷ್ಟೆ. ಮ॥ ರಡ್ಡಿಯವರು ಹೊರಗೊಂದು ಒಳಗೊಂದು ತೋರಿಸುವ ವಂಚಕಸ್ವಭಾವದವರಲ್ಲ. ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯುವುದು ಅವರಿಗೆ ಸೇರದು. ಈ ಅವರ ಸ್ವಭಾವವು ಕೆಲವರಿಗೆ ಪ್ರಕಾರಾಂತರವಾಗಿ ತೋರುತ್ತಿರಬಹುದು. ಅದು ಪ್ರಯೋಜಕವಾದುದಲ್ಲ. ನಮ್ಮ ಪ್ರಜೆಗಳು ಗುಣಕ್ಕೆ ಗೌರವವನ್ನು ಹೇಗೆ ಕೊಡುವರೆಂಬುದು ಈ ದಿನದ ಸಭೆಯಿಂದ ವ್ಯಕ್ತಪಟ್ಟಿರುತ್ತದೆ. ಇದು ಸಂತೋಷಪ್ರದವಾದುದು. ಮ॥ ರಡ್ಡಿಯವರ ವಿಷಯದಲ್ಲಿ ದುರಭಿಪ್ರಾಯ ಪಟ್ಟಿದ್ದ ಜನರು ಈ ದಿನದ ಸಭೆಯನ್ನೂ ಸಂಭ್ರಮವನ್ನೂ ನೋಡಿದ್ದ ಪಕ್ಷದಲ್ಲಿ ತಮ್ಮ ಅಭಿಪ್ರಾಯಗಳಿಗಾಗಿ ಸಂಪೂರ್ಣವಾಗಿ ವಿಷಾದಪಟ್ಟುಕೊಳ್ಳದೆ ಹೋಗುತ್ತಿರಲಿಲ್ಲವೆಂದು ನಾನು ದೃಢವಾಗಿ ಹೇಳಬಲ್ಲೆನು. ಮುಂದೆ ಇವರಿಗೆ ದೊರೆಯುವ ಉತ್ತಮ ಸಂಧಿಯಲ್ಲಿ ಉತ್ಕೃಷ್ಟವಾಗಿ ದೇಶಸೇವೆಯನ್ನು ಮಾಡಿ ಸತ್ಕೀರ್ತಿಯನ್ನು ಪಡೆದುಕೊಳ್ಳುವಂತೆ ಜಗದೀಶನು ಇವರಿಗೆ ದೀರ್ಘಾಯುರಾರೋಗ್ಯಾದಿಗಳನ್ನು ಅನುಗ್ರಹಿಸಬೇಕೆಂದು ನಾನು ಕೋರುತ್ತೇನೆ'' ಎಂದು ಹೇಳಿ ಮುಗಿಸಿದರು. ಕೂಡಲೆ ಹೊರಗೆ ಬ್ಯಾಂಡಿನ ವಾದ್ಯವಾಯಿತು. ರಿಟೈರ್ಡ್ ಪೊಲೀಸ್ ಸೂಪರಿಂಟೆಂಡೆಂಟ್ ಮಿ॥ ಮಹಮದ್ ಜಾಫರ್ ಸಾಹೇಬರು ಸಭಾಪರವಾಗಿ ಸಭಾಧ್ಯಕ್ಷರನ್ನು ವಂದಿಸಿದ ಬಳಿಕ ಸಭಿಕರಿಗೆ ಪುಷ್ಪಗುಚ್ಛಗಳು ಕೊಡಲ್ಪಟ್ಟ ಬಳಿಕ ಸಭೆಯು ಪರಿಸಮಾಪ್ತವಾಯಿತು.

ಹೀಗೆ ಆ ದಿನದ ಸಭೆಯು ಅಭೂತಪೂರ್ವವಾದ "ಎಂಟರ್ಟೇಂಟಿನ ಸಭೆ'' ಯೆನಿಸಿಕೊಂಡು ಸಾಂಗವಾದುದನ್ನು ಕಂಡು, ಇದಕ್ಕೆ ಮೂಲಭೂತರಾಗಿದ್ದ ದೊಡ್ಡಮನುಷ್ಯರೆಲ್ಲರೂ ಇಷ್ಟು ಸಲಕ್ಷಣವಾಗಿ ಈ ಕಾರ್ಯಭಾರವನ್ನು ನೆರವೇರಿಸಿದುದಕ್ಕಾಗಿ ಅವರನ್ನು ನಾವು ವಿಶೇಷವಾಗಿ ಅಭಿನಂದಿಸುತ್ತೇವೆ. ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳಲ್ಲಿ—ಮ॥ ರೆಡ್ಡಿಯವರಿಗೆ ಎಂಟರ್ಟೇನ್‌ಮೆಂಟನ್ನು ಕೊಡಬೇಕೆಂದು ಮ॥ ಪುರುಷೋತ್ತಮಾನಂದಗಿರಿಬಾವಾಜಿಯವರಿಂದಲೂ, ಮ॥ ಮಹಮ್ಮದ್ ಸೇಟರಿಂದಲೂ ಪ್ರಯತ್ನಮಾಡಲ್ಪಟ್ಟಿತು. ಬಹುಜನರು ಒಪ್ಪದೆ ಹೋದುದರಿಂದ ನಿಂತುಹೋಯಿತು ಎಂಬುದಾಗಿಯೂ ಮಹಾಜನರ ಹೆಸರಿನಲ್ಲಿ ಕೆಲವರು ಅಡ್ರೆಸ್ಸು ಕೊಡುವುದಾದರೆ ಯಾರ ಸಮ್ಮತಿಯು ಕೊಡಲ್ಪಟ್ಟಿಲ್ಲವೋ ಅವರೆಲ್ಲರೂ ಸದರಿ ಅಡ್ರೆಸ್ ಸಭೆಯಲ್ಲಿ ಈ ಅಡ್ರೆಸ್ಸಿಗೆ ನಾವು ಸಮ್ಮತಿಸಲಿಲ್ಲವೆಂದು ಹೇಳಬೇಕೆಂದಿರುವರು ಎಂಬುದಾಗಿಯೂ, ಎಲ್ಲಾ ಪುರನಿವಾಸಿಗಳ ಹೆಸರಿನಲ್ಲಿಯೂ ಈ ಎಂಟರ್ಟೇನ್‌ಮೆಂಟು ಕೊಡಲ್ಪಟ್ಟರೆ ಅದು ನಿಜವಾಗುವುದಿಲ್ಲ ಎಂಬುದಾಗಿಯೂ, ಬರೆದುಕೊಂಡಿರುವ ಲೇಖಕರು ಮುಖ್ಯವಾಗಿ ಈ ಸಭೆಗೆ ಬಂದಿದ್ದರೆ, ಅಥವಾ ಬರುವುದಕ್ಕೆ ಮುಖವಿಲ್ಲದಿದ್ದರೆ ವೇಷಾಂತರವನ್ನಾದರೂ ಧರಿಸಿ ಬಂದು ನೋಡಿದ್ದರೆ ಬಹಳ ಚೆನ್ನಾಗಿದ್ದಿತು. ಏಕೆಂದರೆ ಇನ್ನು ಮೇಲಾದರೂ ಇಂಥ ಕುಹಕಪ್ರಯತ್ನಗಳಿಗೆ ಕೈಹಾಕಬಾರದೆಂಬ ಬುದ್ಧಿಯು ಅವರಿಗೆ ಹುಟ್ಟುತ್ತಿದ್ದಿತು.

ಈ ಎಂಟರ್ಟೇನ್‌ಮೆಂಟನ್ನು ನಡೆಯಿಸದಂತೆ ಮಾಡಬೇಕೆಂದು ರಾಜಧಾನಿಯ ಪ್ರಜೆಗಳಲ್ಲಿ ಅಸೂಯಾಳುಗಳಾದ ಎಲ್ಲೋ ಕೆಲವರಿಗೆ ಮಾತ್ರ ಉದ್ದೇಶವಿದ್ದಿರಬಹುದು. ಅವರುಗಳು ಇದನ್ನು ನಡೆಯಗೊಡಿಸದಂತೆ ಮಾಡಬೇಕೆಂದು ಹಲವು ತೆರದ ವಿಘ್ನಗಳನ್ನಾಚರಿಸುತ್ತ ಬಂದರೆಂದು ನಾವು ಕೇಳುತ್ತೇವೆ. ಇದಕ್ಕಿಂತಲೂ ಜಘನ್ಯವಾದ ಚೇಷ್ಟೆಯು ಮತ್ತೊಂದಿರುವುದಿಲ್ಲ. ಇವರ ಚೇಷ್ಟೆಗಳೇ ರಡ್ಡಿಯವರ ಎಂಟರ್ಟೇನ್‌ಮೆಂಟನ್ನು ಅಸದೃಶವಾಗಿ ಪರಿಣಮಿಸುವಂತೆ ಮಾಡಲು ಬಲುಮಟ್ಟಿಗೆ ಕಾರಣವಾಗಿರಬೇಕೆಂದು ನಮಗೆ ತೋರುತ್ತದೆ. ಮೊನ್ನೆತಾನೇ ಅನಿಬೆಸೆಂಟಮ್ಮನವರು ಮದ್ರಾಸಿನಲ್ಲಿ ಒಂದು ಉಪನ್ಯಾಸಮಾಡುವಾಗ್ಗೆ "ನಮ್ಮ ಪ್ರತಿಪಕ್ಷದವರೇ ನಮಗೆ ಉತ್ತಮಬೋಧಕರು'' ಎಂದು ಹೇಳಿರುತ್ತಾರೆ. ಆ ವಾಕ್ಯವು ರಾಜಧಾನಿಯ ಈ ಎಂಟರ್ಟೇನ್‌ಮೆಂಟಿನ ವಿಷಯದಲ್ಲಿ ದೃಷ್ಟಾಂತವಾಗಿ ಪರಿಣಮಿಸಿದೆಯೆಂಬುದಕ್ಕೆ ಸಂಶಯವಿಲ್ಲ.

ಹಿಂದುಳಿದ ಜನವರ್ಗಕ್ಕೆ ಸೇರಿದವರೊಬ್ಬರಿಗೆ ಸರ್ಕಾರದ ೧ ಉನ್ನತೋದ್ಯೋಗವು ದೊರೆಯುವಂತಿದ್ದರೆ ಅದನ್ನು ತಪ್ಪಿಸಬೇಕೆಂದು ಅಸೂಯಾಳುಗಳು ಎಷ್ಟು ಕುತಂತ್ರವನ್ನು ಮಾಡುವರೆಂಬುದನ್ನು ಮ॥ ರಡ್ಡಿಯವರಿಗೆ ಸಂಬಂಧಿಸಿದ ಈಗಣ ಕಥಾಂತರದಿಂದ ಅರಿತುಕೊಂಡರೆ, ಪ್ರತಿಯೊಬ್ಬ ಹಿಂದುಳಿದ ಜನವರ್ಗದ ಮನುಷ್ಯನೂ ಒಂದು ಗುಣಪಾಠವನ್ನು ಕಲಿತಂತಾಗುವುದು. ಅದರಿಂದ ಅಸೂಯಾಳುಗಳ ವಿರುದ್ಧಚೇಷ್ಟೆಗಳು ಹಿಂದಾದವರನ್ನು ಜಾಗರೂಕಗೊಳಿಸುವುದಕ್ಕೆ ಒಂದು ವಿಧದಲ್ಲಿ ಸಾಧಕವೇ ಆಗುವುದು. ನಮ್ಮಲ್ಲಿ ಉದಾಸೀನವಾಗಿರುವ ನಮ್ಮ ಜನಕ್ಕಿಂತಲೂ ಆ ವಿರುದ್ಧಪಕ್ಷೀಯರೇ ನಮ್ಮ ಉದ್ಧಾರಕ್ಕೆ ಸಹಾಯಭೂತರೆಂದು ಹೇಳಬೇಕಾಗುವುದು.

ಸಭೆಯಲ್ಲಿ ನಡೆದ ನಡವಳಿಕೆಗಳೆಲ್ಲದರಿಂದಲೂ ಮ॥ ರಡ್ಡಿಯವರು ವಿದ್ಯಾಭ್ಯಾಸ ಶಾಖೆಯ ಇನ್ಸ್‌ಪೆಕ್ಟರ್ ಜನರಲ್ ಪದವಿಗೆ ಬರುವುದು ಖಂಡಿತವೆಂಬುದು ವ್ಯಕ್ತವಾಗಿರುತ್ತದೆ. ಅಸೂಯಾಳುತನದಿಂದ ಇದುವರೆಗೆ ಕೆಲರು ಮಾಡುತ್ತಿದ್ದ ಕ್ಷುಲ್ಲಕಯತ್ನಗಳಿಗೂ ಕುಹಕಲೇಖನಗಳಿಗೂ ಅಸಮಂಜಸ ಪ್ರಲಾಪಗಳಿಗೂ ಇಲ್ಲಿಂದಾಚೆಗೆ ಉತ್ತರಕ್ರಿಯೆಯಾಗಬಹುದೆಂದು ನಿರೀಕ್ಷಿಸುತ್ತೇವೆ. ಮುಖ್ಯವಾಗಿ ದೇಶಭಾಷೆಯ ಉದ್ಧಾರದ ವಿಷಯದಲ್ಲಿ ವಿಶೇಷಾದರಾಭಿಮಾನಗಳನ್ನು ವಹಿಸಿರುವ ಮ॥ ರಡ್ಡಿಯವರು ನಮ್ಮ ಸಂಸ್ಥಾನದ ವಿದ್ಯಾಭ್ಯಾಸಶಾಖಾ ಮುಖ್ಯಾಧ್ಯಕ್ಷ ಪದವಿಗೆ ಬರುವ ವಿಷಯದಲ್ಲಿ ನಾವು ಮನಃಪೂರ್ವಕವಾಗಿ ಸ್ವಾಗತವನ್ನು ಮಾಡಿ, ಮ॥ ರಡ್ಡಿಯವರ ಭಾವಚಿತ್ರ ಪ್ರಕಟನದ ಮೂಲಕ ಅವರ ಪರಿಚಯವನ್ನು ನಮ್ಮ ಪತ್ರಿಕಾ ವಾಚಕ ವರ್ಗಕ್ಕೆಲ್ಲಾ ಮಾಡಿಕೊಟ್ಟಿರುತ್ತೇವೆ.

ಒಳದೇಶದ ವೃತ್ತಾಂತಗಳು.

ಪ್ರಜಾಪ್ರತಿನಿಧಿ ಸಭೆಯ ಕೆಲಸಗಳೆಲ್ಲಾ ನಿನ್ನೆಯ ದಿನಕ್ಕೆ ಮುಗಿದುವು.

ಈ ದಿವಸ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಡಿಸ್ಟ್ರಿಕ್ಟ್ ಡಿ॥ ಕಮಿಷನರುಗಳ ಸಮಾವೇಶವು ಜರುಗುವುದು.

ಇನ್ನೆರಡು ವರ್ಷಗಳವರೆಗೂ ಸರ್ ಎಂ. ವಿಶ್ವೇಶ್ವರಯ್ಯನವರನ್ನೇ ದಿವಾನಗಿರಿಯಲ್ಲಿರಿಸಿಕೊಳ್ಳುವುದಕ್ಕೆ ನಮ್ಮ ಮಹಾರಾಜರವರು ಏರ್ಪಡಿಸಿರುವರೆಂದು ಕೇಳಿ ಸಂತೋಷಿಸುತ್ತೇವೆ.

ದಿಲ್ಲಿಯಲ್ಲಿ ಬರುವ ತಾ॥ ೬ ರಲ್ಲಿ ಕೂಡುವ ಸಂಸ್ಥಾನಿಕರ ಮಹಾಸಭೆಗೆ ನಮ್ಮ ಶ್ರೀಮನ್ಮಹಾರಾಜರವರು ದಯಮಾಡಿಸುವರೆಂಬ ವರ್ತಮಾನವಿದ್ದಿತು. ಆದರೆ ಅವರು ಹೊರಡದೆ ಶ್ರೀಮದ್ಯುವರಾಜರು ಸಪರಿವಾರರಾಗಿ ದಿಲ್ಲಿಗೆ ಕಳೆದವಾರವೇ ಪ್ರಯಾಣಮಾಡಿ ದಯಮಾಡಿಸಿದ್ದಾರೆ.

ತುಲಾಮಾಸವಾರಂಭವಾದೀಚೆಗೆ ರಾಜಧಾನಿಯಲ್ಲೂ ಸುತ್ತಮುತ್ತಣ ಸ್ಥಲಗಳಲ್ಲೂ ಮಳೆಯೇನೂ ಆಗಿಲ್ಲ. ಈಗ ೧ ಹದವಾದರೂ ಮಳೆಯಾದರೆ ಅನುಕೂಲವೆಂದು ಬೇಸಾಯಗಾರರು ಅಪೇಕ್ಷಿಸುತ್ತಿದ್ದಾರೆ. ರಾಜಧಾನಿಯಲ್ಲಿ ನವರಾತ್ರಿ ಪ್ರಯುಕ್ತವಾಗಿ ಜನಸ್ತೋಮವು ಸೇರಿದ್ದರೂ ಪ್ಲೇಗಿನ ಉಲ್ಬಣವೇನೂ ಆಗದಿದ್ದುದು ಸಂತೋಷಪ್ರದವು.

ಕಳೆದ ಬುಧವಾರದದಿವಸ ಶ್ರೀ ಚಾಮುಂಡೇಶ್ವರೀಜಾತ್ರೆಯು ವಿಶೇಷ ಸಂಭ್ರಮದಿಂದ ಬೆಟ್ಟದಲ್ಲಿ ನೆರವೇರಿತು. ಶ್ರೀಮನ್ಮಹಾರಾಜರೂ ರಾಣೀವಾಸದವರುಗಳೂ ಅನೇಕಮಂದಿ ರಾಜಬಂಧುಗಳೂ ಸಹ ಆ ದಿನ ಬೆಳಗಿಂದ ಸಾಯಂಕಾಲದವರೆಗೂ ಅಲ್ಲೇ ಇದ್ದರು. ರಾಜಧಾನಿಯ ಮತ್ತೂ ಸುತ್ತುಮುತ್ತಣ ಗ್ರಾಮಗಳ ೪೦-೫೦ ಸಹಸ್ರ ಜನರು ಜಾತ್ರೆಗೆ ನೆರೆದಿದ್ದರು. ರಥವು ದೇವಾಲಯದ ಪ್ರದಕ್ಷಿಣ ಮಾಡಿದಾಗ ಶ್ರೀಮನ್ಮಹಾರಾಜರವರೂ ಸಹ ವಿಶೇಷ ಭಕ್ತಿಯಿಂದ ಜತೆಯಲ್ಲೇ ಇದ್ದರು. ರಥವು ನೆಲೆಗೆ ನಿಂತಾಗ ೨೧ ಗುಂಡುಗಳು ಹಾರಿಸಲ್ಪಟ್ಟುವು. ಸಾಯಂಕಾಲ ೫ ಗಂಟೆಗೆ ಸಿಂಹವಾಹನೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಮ॥ ರಾ॥ ಹೆಚ್. ಕೆ. ಮಲ್ಲಪ್ಪನವರು ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸಶಾಖೆಯವರಿಂದ ಉಪನ್ಯಾಸಕರಾಗಿ ಏರ್ಪಡಿಸಲ್ಪಟ್ಟಿದ್ದಾರೆ. ಇವರು ಮುನ್‌ಸೀಫ್ ಮ॥ ಹೆಚ್. ಕೆ. ವೀರಬಸವಯ್ಯನವರ ಸಹೋದರರು. ಇವರು ಬೆಂಗಳೂರಿನಲ್ಲಿ ಅನೇಕೋಪನ್ಯಾಸಗಳನ್ನು ಮಾಡಿರುವರು. ಈ ನವರಾತ್ರಿಯ ಉತ್ಸವಕಾಲಕ್ಕೆ ರಾಜಧಾನಿಗೆ ಬಂದು ಪರಸ್ಪರ ಸಹಾಯ ಸಂಘ ಮಹಾಸಭೆಯಲ್ಲೂ ವಸ್ತುಪ್ರದರ್ಶನಾಲಯದ ಹಾಲಿನಲ್ಲೂ ನಾಲ್ಕಾರು ಉಪನ್ಯಾಸಗಳನ್ನು ಮಾಡಿದರು. ಧನದ ಮಿತವ್ಯಯವನ್ನೂ, ಪರಸ್ಪರ ಸಹಾಯದ ಫಲವನ್ನೂ, ಗ್ರಾಮಾಂತರ ಪುಸ್ತಕಭಂಡಾರಗಳ ಪ್ರಯೋಜನ ವಿಷಯವನ್ನೂ, ಜೀವವಿಮೆ ವಿಷಯವನ್ನೂ ಕುರಿತು ಇವರು ಮಾಡಿದ ಎಲ್ಲ ಉಪನ್ಯಾಸಗಳೂ ಚಿತ್ತಾಕರ್ಷಕವಾಗಿದ್ದುವು. ಈ ವಿಷಯಗಳನ್ನು ಪ್ರತ್ಯಕ್ಷಾಭಿನಯದಿಂದ ಅನುಭವಕ್ಕೆ ಬರಿಸಲು ಸಾಧಕವಾಗುವಂತೆ ಮ॥ ಮಲ್ಲಪ್ಪನವರಿಂದ ರಚಿಸಲ್ಪಟ್ಟ ನಾಟಕಗಳೂ ಕೂಡ ಪ್ರದರ್ಶಿಸಲ್ಪಟ್ಟುವು. ಇವುಗಳ ಅವಲೋಕನೆಗೆ ದಯಮಾಡಿಸಿದ್ದ ಶ್ರೀಮದ್ಯುವರಾಜರೇ ಮೊದಲಾದವರು ಸಂತೋಷಪಟ್ಟರು.

ಅರಮನೆಯಂಬಾವಿಲಾಸದಲ್ಲಿ ನಡೆದ ಕೊನೆ ದರ್ಬಾರಿನ ದಿವಸ ಮಹಾರಾಜಾ ಸಂಸ್ಕೃತ ಕಲಾಶಾಲೆಯಲ್ಲಿ ಕಳೆದ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ವಾಂಸರುಗಳಿಗೆಲ್ಲಾ ಬಹುಮಾನವು ಕೊಡಲ್ಪಟ್ಟಿತು. ಇತಃಪರಃ ಈ ವಿದ್ಯಾಲಯವು ಸಂಪೂರ್ಣವಾಗಿ ಸರ್ಕಾರದ ಅಧಿಪತ್ಯಕ್ಕೆ ಒಳಪಡಿಸಲ್ಪಟ್ಟಿರುವುದರಿಂದ ಇಂಥ ಬಹುಮಾನವಿನಿಯೋಗವು ಅರಮನೆಯಲ್ಲಿ ನಡೆಯುವುದಕ್ಕೆ ಇದೇ ಕಡೆಯೆಂದು ಕೇಳುತ್ತೇವೆ. ಅದೇ ದಿನದ ದರ್ಬಾರಿನಲ್ಲಿ ಸಂಸ್ಥಾನದೊಳಗೆ ಶ್ಲಾಘನೀಯವಾಗಿ ರಾಜಕೀಯೋದ್ಯೋಗವನ್ನು ನಿರ್ವಹಿಸಿದ ಅಧಿಕಾರಿಗಳು ಮೊದಲಾದವರಿಗೆ ಬಿರುದಾಂಕನಾದಿಗಳನ್ನು ಕೊಡುವ ಪದ್ಧತಿಯಂತೆ ಅಂಥವರಿಗೂ, ವಿದ್ಯಾಪ್ರೋತ್ಸಾಹಾದಿ ಧರ್ಮಕಾರ್ಯಗಳಲ್ಲಿ ನಾನಾವಿಧವಾಗಿ ತಮ್ಮ ಔದಾರ್ಯವನ್ನು ತೋರಿಸಿದ ಕೆಲ ಮಂದಿ ದೊಡ್ಡಮನುಷ್ಯರುಗಳಿಗೂ ನಾರೀಮಣಿಯರಿಗೂ ಕೂಡ ಬಹುಮಾನವಸ್ತುಗಳೂ ಪ್ರಶಸ್ತಿನಾಮಗಳೂ ಸಹ ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟುವು. ಅವರುಗಳಲ್ಲಿ ವಿದ್ಯಾಭ್ಯಾಸಶಾಖಾ ಮುಖ್ಯಾಧಿಕಾರಿಗಳಾದ ರಾ॥ ಬ॥ ಎಂ. ಶ್ಯಾಮರಾಯರವರಿಗೆ "ರಾಜಕಾರ್ಯಪ್ರಸಕ್ತ'' ವೇ॥ ನವೀನಂ ರಾಮಾನುಜಾಚಾರ್ಯರವರಿಗೆ "ಧರ್ಮಪ್ರವೃತ್ತ'' ಮ॥ ಮನ್ನಾರ್ ಕೃಷ್ಣಶೆಟ್ಟರವರಿಗೆ "ವಣಿಗ್ರತ್ನ'' ಸಂಗೀತ ವಿದ್ವಾಂಸರಾದ ಅನಂತರಾಮ ಭಾಗವತರಿಗೆ "ಗಾಯಕಶಿಖಾಮಣಿ'' ಎಂಬ ಬಿರುದುಗಳನ್ನು ಉಚಿತವಾದ ಕಿಲ್ಲತ್ತುಗಳೊಡನೆಯೂ, ನಾರೀಮಣಿಯರುಗಳಲ್ಲಿ ಕೀರ್ತಿಶೇಷರಾದ ಸರ್ ಕೃಷ್ಣಮೂರ್ತಿಯವರ ಧರ್ಮಪತ್ನಿ ಕಾವೇರಿಬಾಯಮ್ಮನವರಿಗೂ, ಮ॥ ಜಸ್ಟಿಸ್ ಚಂದ್ರಶೇಖರಯ್ಯನವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮನವರಿಗೂ, ದೊಡ್ಡಬಳ್ಳಾಪುರದ ತಾ॥ ರೋಜುಪುರದ ಲಕ್ಷ್ಮಿಕ್ಕನವರಿಗೂ ಸಹ ೧ ನೆ ತರಗತಿಯ ಕಿಲ್ಲತ್ತುಗಳೂ ಕೊಡಲ್ಪಟ್ಟುವು. ಅಲ್ಲದೆ ಧರ್ಮಕಾರ್ಯತತ್ಪರರಾದ ಇನ್ನು ೧೪ ಮಂದಿ ಬೇರೆಬೇರೆ ದೊಡ್ಡಮನುಷ್ಯರುಗಳಿಗೆ ಶಾಲುಜೋಡಿ ಕಿಲ್ಲತ್ತುಗಳೂ ಅನುಗ್ರಹಿಸಲ್ಪಟ್ಟುವು. ಇವರುಗಳಲ್ಲಿ ವೀರಶೈವಸಮಾಜಕ್ಕೆ ಸೇರಿದವರು ತಿಪಟೂರಿನ ಮ॥ ಕೊಟ್ಟೂರಪ್ಪನವರು ಒಬ್ಬರಾಗಿರುತ್ತಾರೆ. ಮೇಲೆಕಂಡ ಮಹಾಶಯರುಗಳೆಲ್ಲರೂ ಧರ್ಮಪ್ರವರ್ತನೆಯಿಂದ ಶ್ರೀಮನ್ಮಹಾರಾಜರವರ ಅನುಗ್ರಹಕ್ಕೆ ಪಾತ್ರರಾಗಿ ಇತರರಿಗೂ ಮೇಲ್ಪಂಕ್ತಿ ಹಾಕಿಕೊಟ್ಟಿರುವುದಕ್ಕಾಗಿ ಅವರುಗಳೆಲ್ಲರನ್ನೂ ನಾವು ಈಮೂಲಕ ಅಭಿನಂದಿಸುತ್ತೇವೆ.

ಪ್ರೊ॥ ಕರ್ವೆಯವರ ಉಪನ್ಯಾಸವು ಕಳೆದ ಸೋಮವಾರ ರಂಗಾಚಾರ್ಯರ ಮೆಮೋರಿಯಲ್ ಹಾಲಿನಲ್ಲಿ ನಡೆದಿತು. ಮ॥ ಕರ್ಪೂರ ಶ್ರೀನಿವಾಸರಾಯರು ಅಧ್ಯಕ್ಷರಾಗಿದ್ದರು. ಕರ್ವೆಯವರು ತಮ್ಮಿಂದ ಏರ್ಪಟ್ಟಿರುವ ಭಾರತಮಹಿಳಾ ವಿಶ್ವವಿದ್ಯಾಲಯದ ಆವಶ್ಯಕತೆಯನ್ನೂ, ಪ್ರಯೋಜನವನ್ನೂ, ಅದರ ರಚನಾವಿಧಾನವನ್ನೂ, ಅದಕ್ಕಾಗಬೇಕಾಗಿರುವ ಧನಸಹಾಯದ ಅವಶ್ಯಕತೆಯನ್ನೂ, ಇದುವರೆಗೂ ಭರತಖಂಡದ ಆಯಾಭಾಗಗಳಲ್ಲಿ ಅದಕ್ಕೆ ಮಾಡಲ್ಪಟ್ಟಿರುವ ಸಹಾಯವನ್ನೂ ಕಳೆದ ೨ ವರ್ಷಗಳಿಂದ ಅದರಲ್ಲಿ ನಡೆದಿರುವ ಅಭ್ಯುದಯವನ್ನೂ ವಿವರವಾಗಿ ತಿಳಿಯಿಸಿದರು. ಆ ಮಧ್ಯದಲ್ಲೇ ಭರತಖಂಡದ ವಿಶ್ವವಿದ್ಯಾಲಯಗಳವರು ದೇಶಭಾಷೆಗಳಿಗೆ ಕೊಡಬೇಕಾಗಿರುವ ಪ್ರಾಮುಖ್ಯವನ್ನೂ ಕುರಿತು ವಿವರಿಸಿ, ನೈಜಾಂ ಗೌರ್ನಮೆಂಟಿನವರು ಉರ್ದು ಭಾಷೆಗೆ ಕೊಟ್ಟಿರುವ ಪ್ರಮುಖತ್ವವನ್ನು ಉದಾಹರಣವಾಗಿ ಹೇಳಿ ಶ್ಲಾಘಿಸಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರೊ॥ ಕರ್ವೆಯವರ ಚಾಲ್ಯಾರಭ್ಯದ ಶಕ್ತಿ ಗುಣವಿಶೇಷಗಳ ಈಗ ಅವರು ಮಾಡುತ್ತಿರುವ ಪ್ರಯತ್ನವಿಶೇಷಗಳ ಪ್ರಶಂಸೆಯನ್ನೂ ಮಾಡಿ ಸ್ತ್ರೀ ವಿದ್ಯಾಭ್ಯಾಸವು ಯಾವರೂಪವಾಗಿದ್ದರೆ ದೇಶಕ್ಕೆ ಹಿತವಾಗುವುದೆಂಬುದನ್ನೂ, ದೇಶಭಾಷೆಗೆ ವಿಶ್ವವಿದ್ಯಾಲಯಗಳಲ್ಲಿ ಅವಶ್ಯವಾಗಿ ಅಗ್ರಸ್ಥಾನವನ್ನು ಕೊಡಬೇಕಾದುದರ ಮಹತ್ವವನ್ನೂ, ಜರ್ಮನಿ, ಜಪಾನ್ ಮೊದಲಾದ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಅದೇ ಕ್ರಮವು ಅನುಸರಿಸಲ್ಪಟ್ಟಿರುವುದರಿಂದ ಜನಸಾಮಾನ್ಯಕ್ಕೂ ವಿದ್ಯಾಭ್ಯಾಸಫಲವು ಸಮಗ್ರವಾಗಿ ಉಂಟಾಗಲು ಅವಕಾಶವಾಯ್ತೆಂಬುದನ್ನೂ, ಮ॥ ಸಿ. ರಾಮಲಿಂಗರೆಡ್ಡಿಯವರೂ ಕೂಡ ನಮ್ಮ ವಿಶ್ವವಿದ್ಯಾಲಯಗಳಲ್ಲಿ ದೇಶಭಾಷೆಗೆ ಪ್ರಾಮುಖ್ಯವನ್ನು ಕೊಡಬೇಕೆಂದು ಮಾಡಿದ್ದ ಸೂಚನೆಯ ವಿಹಿತತ್ವವನ್ನೂ ಪ್ರತಿಪಾದಿಸಿ, ಪ್ರೊ॥ ಕರ್ವೆಯವರ ಪ್ರಯತ್ನವಿಶೇಷಕ್ಕೆ ಮೈಸೂರುದೇಶೀಯರೂ ಕೂಡ ಅವಲಂಬನೆಯನ್ನೀಯಬೇಕಾದುದು ಅವಶ್ಯಕವೆಂದು ಹೇಳಿದರು. ಅವರ ಉಪನ್ಯಾಸವು ನಡೆಯುತ್ತಿರುವಾಗಲೇ ಮ॥ ಎಸ್. ಎಸ್. ಸುಬ್ಬರಾಯರು, ಮ॥ ಜೋಯ್ಸರು, ತಲೆಗೆ ೩೦೦ ರೂ. ಗಳಂತೆ ಕೊಡಲೂ, ಮ॥ ಗಳಾದ ಕಡಬ ಶ್ರೀನಿವಾಸಯ್ಯಂಗಾರರು, ಸಿಂಗರಿ ನಂಜಪ್ಪನವರು, ಎಸ್. ಸುಬ್ಬಯ್ಯನವರು, ಶ್ರೀಮತಿ ವನಜಮ್ಮನವರು ೧೦೦ ರೂ. ಗಳಂತೆಯೂ ಕೊಡಲು ವಾಗ್ದಾನಮಾಡಿದರು. ಮ॥ ಎಂ. ವೆಂಕಟಕೃಷ್ಣಯ್ಯನವರು ತಿಂಗಳಿಗೆ ೫ ರೂ. ನಂತೆ ಕೊಡಲು ವಾಗ್ದಾನಮಾಡಿದರು. ಇನ್ನು ಕೆಲರೂ ಹೀಗೆಯೇ ಚಂದಾರೂಪವಾಗಿಯೂ ಒಟ್ಟು ಮೊತ್ತವಾಗಿಯೂ ಹಣವನ್ನು ಕೊಡಲು ವಾಗ್ದಾನಮಾಡಿದರು.

ಕಳೆದ ಶುಕ್ರವಾರ ಸಾಯಂಕಾಲ ೬॥ ಗಂಟೆಗೆ ಧರ್ಮಪ್ರಕಾಶ ಡಿ॥ ಬಸುಮಯ್ಯನವರ ಶಾಲಾಮಂದಿರದಲ್ಲಿ ಹಿಂದುಳಿದ ಜನವರ್ಗದವರಾದ ಹಲವು ಕೋಮುಗಳ ಪ್ರತಿನಿಧಿಗಳೂ ಪ್ರಜಾಪ್ರತಿನಿಧಿ ಸಭೆಗೆ ಬಂದಿದ್ದ ಅನೇಕ ಪ್ರತಿನಿಧಿಗಳೂ ಸೇರಿ ೧ ಸಾವಿರ ಮಂದಿಯವರೆಗೆ ರಾ॥ ಸಾ॥ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿದ್ದರು. ಹಿಂದುಳಿದ ಜನವರ್ಗದವರಲ್ಲಿ ವಿದ್ಯಾಪ್ರಸಾರವನ್ನು ಹೆಚ್ಚಿಸಿ, ಎಲ್ಲ ವಿಧದಲ್ಲೂ ಅವರನ್ನು ಮುಂದಕ್ಕೆ ಬರುವಂತೆ ಮಾಡಿಕೊಳ್ಳುವ ವಿಷಯವಾಗಿಯೂ, ಆ ಜನವರ್ಗದವರ ಹಿತಕ್ಕಾಗಿ ನ್ಯಾಯವಾಗಿಯೂ ಅವರ ಪ್ರಜಾಸಂಖ್ಯೆಗನುಗುಣವಾಗಿಯೂ, ಅವರಿಗೆ ಇರತಕ್ಕ ಸಾಮಾನ್ಯವಾದ ಹಕ್ಕುಬಾಧ್ಯತೆಗಳಿಗನುಗುಣವಾಗಿಯೂ, ತಾಲ್ಲೂಕು ಬೋರ್ಡು, ಡಿಸ್ಟ್ರಿಕ್ಟು ಬೋರ್ಡು, ನಿಯಮನಿರ್ಮಾಣಸಭೆ—ಇವುಗಳಲ್ಲೆಲ್ಲಾ ಆ ಜನವರ್ಗಗಳ ಪ್ರತಿನಿಧಿಗಳಿಗೆ ಸ್ಥಾನವನ್ನು ಏರ್ಪಡಿಸಿ ಕೊಡುವಂತೆ ಗೌರ್ನಮೆಂಟಿನವರನ್ನು ಪ್ರಾರ್ಥಿಸಿಕೊಳ್ಳಬೇಕೆಂಬ ವಿಷಯವಾಗಿಯೂ ಮೊಟ್ಟಮೊದಲು ಮ॥ ಎಂ. ಬಸವಯ್ಯ ಬಿ. ಎ., ಬಿ ಎಲ್., ರವರು ದೀರ್ಘವಾಗಿ ಉಪನ್ಯಾಸ ಮಾಡಿದರು. ಬಳಿಕ ಮೇಲೆಕಂಡರ್ಥದ ರೆಜಲ್ಯೂಷನ್ನು ಮಿ॥ ಮಹಮ್ಮದ್ ಕಲೀಮಿಯವರು ಇಂಗ್ಲೀಷಿನಲ್ಲಿ ಪ್ರತಿಪಾದಿಸಿ, ಅದೇ ಅರ್ಥವನ್ನೇ ಸಮರ್ಥಿಸುವುದಕ್ಕಾಗಿ ಉರುದುಭಾಷೆಯಲ್ಲಿ ದೀರ್ಘವಾಗಿ ಉಪನ್ಯಾಸಮಾಡಿ, ಸಭಿಕರನ್ನೆಲ್ಲಾ ಹುರಿದುಂಬಿಸಿದರು. ಈ ರೆಜಲ್ಯೂಷನ್ನನ್ನು ಪುಷ್ಟೀಕರಿಸುವ ಭಾಷಣಗಳನ್ನು ಮ॥ ಎಂ. ಸುಬ್ಬಯ್ಯ ಬಿ. ಎ ಯವರು, ಮ॥ ಚಂಗಯ್ಯಶೆಟ್ಟಿ ಬಿ. ಎ. ಯವರು, ಮ॥ ಸಿದ್ಧಲಿಂಗಯ್ಯದೇವರು, ಮಿ॥ ಜಗಲೂರು ಬಡೇಸಾಬರು, ಮ॥ ಪುರುಷೋತ್ತಮಾನಂದಗಿರಿ ಬಾವಾಜಿಯವರುಗಳು ಮಾಡಿದರು. ಮ॥ ಗಳಾದ ಬಸುಮಯ್ಯನವರು, ತಿರುವೆಂಗಡಮೊದಲ್ಯಾರರು, ಸಾ॥ ಮಾದಪ್ಪನವರು, ಹಾರ್ಡಿಕರ್ ಸಾಹೇಬರು, ರಂಗಯ್ಯನವರು, ಕಲ್ಲೇಗೌಡರು, ಕಲಶೇಗೌಡರು, ಹುಚ್ಚವೀರೇಗೌಡರು, ತರೀಕೆರೆ ಶಿವಪ್ಪನವರು, ಲಿಂಗೋಜಿರಾಯರು, ಮಿರ್ ಮಹಮ್ಮದ್ ಸಾಹೇಬರು, ಸಾ॥ ತಿಮ್ಮಯ್ಯನವರು, ದೊಡ್ಡಮಲ್ಲಯ್ಯನವರು, ಪುಟ್ಟಸ್ವಾಮೇಗೌಡರು, ಆರಣಿ ಸೂರಪ್ಪನವರು, ನಾಗವಾಲದ ಪ॥ ಲಿಂಗೇಗೌಡರು, ಎಡತೊರೆ ಸಿದ್ಧಲಿಂಗಶೆಟ್ಟರು, ನಿಜಾಮುದ್ದೀನ್ ಅಲ್ಲೀಖಾನರು, ನರಸಿಹ್ಮಯ್ಯನವರು, ತುಂಗಾ ನಂಜುಂಡಶೆಟ್ಟರು, ರೈಸ್‌ಮಿಲ್ ಮಾದಪ್ಪನವರು, ಶಂಭುಗೌಡರು, ರಸೂಲ್ ಖಾನರು, ಕೋದಂಡರಾಮಶೆಟ್ಟರು, ಆರ್. ರಂಗಯ್ಯನವರು ಮೊದಲಾದ ಅನೇಕಾನೇಕರು ಅನುಮೋದನಪರವಾದ ಭಾಷಣಗಳನ್ನು ಮಾಡಿದರು. ಸಭಿಕರೆಲ್ಲರೂ ಕೈಯೆತ್ತಿ ಅನುಮೋದನೆ ಕೊಟ್ಟನಂತರ, ಸಭಾಧ್ಯಕ್ಷರು ಈ ರೆಜಲ್ಯೂಷನ್ನನ್ನು ಶ್ರೀಮನ್ಮಹಾರಾಜರವರಿಗೂ ಗೌರ್ನಮೆಂಟಿಗೂ ಕಳುಹಿಸಿಕೊಡಬೇಕೆಂಬ ಮತ್ತೊಂದು ರೆಜಲ್ಯೂಷನ್ನನ್ನು ಪ್ರತಿಪಾದಿಸಿದರು. ಸರ್ವಾನುಮೋದನೆಯಿಂದ ಅದು ನಿರ್ಧಾರಿತವಾಯಿತು. ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭೆಯು ಮುಗಿಸಲ್ಪಟ್ಟಿತು.

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಗಳ ಸಭೆಯ ದಸರಾ ಸಮ್ಮೇಳನದಲ್ಲಿ ದಿವಾನರವರು ಮಾಡಿದ ಉಪನ್ಯಾಸದ ಮುಖ್ಯಾಂಶಗಳು.

ಮಹಾಶಯರೇ,

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹಾದ್ದುರವರ ಆಜ್ಞಾನುಸಾರವಾಗಿ ಈ ದಸರಾ ಸಭೆಯ ಸಮಾವೇಶಕ್ಕೆ ಪ್ರಜಾಪ್ರತಿನಿಧಿಗಳಾದ ತಮ್ಮಗ... 1916-17 ನೇ ಸರ್ಕಾರಿ ...

ಯುದ್ಧ.

ಜನಾಖರ್ಚು ವಸ್ತುಗಳ ನಿಗಿತವಾದಂತೆ ಆಯಿತು. ಚಾಲತಿ ವರ್ಷದ ಅಂದಾಜಿನಲ್ಲಿಯೂ ಸಹ ಹುಟ್ಟುವಳಿ ಮತ್ತು ಖರ್ಚು ಸಂಶಮ ಎಂದರೆ 302.92 ಲಕ್ಷ ರೂಪಾಯಿ ಆಗುವಂತೆ ಏರ್ಪಡಿಸಿದೆ.

ಕೆಲವು ವರ್ಷಗಳಿಂದಲೂ, ನಮ್ಮ ಶಿಲ್ಕು ವೊಬಲಗುಗಳನ್ನು ಹುಟ್ಟುವಳಿ ತರುವ ಜನೋಪಯುಕ್ತವಾದ ಕಾಂಗಾರಿಗಳಿಗಾಗಿ ಉಪಯೋಗಿಸುತ್ತಾ ಇರುತ್ತೇವೆ ಎಂಬುದು ನಿಮಗೆ ತಿಳಿದೇ ಇರುತ್ತದೆ. ...

ಕಂದಾಯ ಇಲಾಖೆಗಳು.

ರಕ್ಷಣೆ.

ಪೊಲೀಸ್ ಇಲಾಖೆ.—ರೈಲ್ವೆ ಪೊಲೀಸಿಗೂ ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಬಾಬಿಗೂ ಒಬ್ಬ ಪೊಲೀಸು ಸೂಪರಿಂಟೆಂಡೆಂಟರನ್ನು ಹೆಚ್ಚಾಗಿ ನೇಮಕವಾಡಿದೆ. ಪೊಲೀಸು ಟ್ರೈನಿಂಗ್ ಸ್ಕೂಲನ್ನು ಬದಾಯಿಸುವ ವಿಚಾರವೂ ಮತ್ತು ಶಕ್ತಿಗಳನ್ನು ಮತ್ತಷ್ಟು ವಿಚಕ್ಷಣೆಯಿಂದ ಪತ್ತೇಮಾಡುವುದಕ್ಕಾಗಿ ಪೊಲೀಸು ಜಮಾದಾರರಿಗೆ ಬದಲಾಗಿ ಇನ್ನೂ ಮೇಲಾದ ದರ್ಜೆಯ ಆಫೀಸರುಗಳನ್ನು ನೇಮಿಸುವ ವಿಚಾರವೂ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ.

ವೈದ್ಯ ಮತ್ತು ಜನಾರೋಗ್ಯ ಇಲಾಖೆ.—ಚಾಲ್ತೀ ಸರ್ಕಾರೀ ಸಾಲಿನ ಶುರುವಿನಿಂದ ವೈದ್ಯ ಇಲಾಖೆಯ ಕೆಳದರ್ಜೆಯ ನೌಕರಿಗೆ ಸೇರತಕ್ಕವರಿಗೆ ಶಿಕ್ಷಣವನ್ನು ಕೊಡುವುದಕ್ಕಾಗಿ ಒಂದು ಮೆಡಿಕಲ್ ಸ್ಕೂಲನ್ನು ಏರ್ಪಡಿ...

ಕೌಶಲ್ಯದ ಇಲಾಖೆಗಳು.

... ಸ್ಟೇಷನ್ನಿನ ಉತ್ಪತ್ತಿ ಪ್ರಮಾಣವು 18,650 H.P. ಇಂದ 22,650 H.P. ವರೆಗೆ ಹೆಚ್ಚಿದಂತಾಗುವುದು. ಕಳೆದ 5 ವರ್ಷಗಳಲ್ಲಿ ಬಂದ ಹುಟ್ಟುವಳಿಯನ್ನು ಕೆಳಗೆ ಕಾಣಿಸಿದೆ. [ಸಶೇಷ]

೧೯೧೭ ನೆಯ ಇಸವಿ ನವಂಬರ್ ತಾ॥ ೪ ರಿಂದ ೧೯೧೭ ನೆಯ ನವಂಬರ್ ತಾ॥ ೧೦ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಶ್ವಯುಜ ಬ॥ ಪಂಚಮಿಯಿಂದ ಆಶ್ವಯುಜ ಬ॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ತೇದಿ
4	1 ಭಾನು	ಪಂಚ	5-18	ಆರಿದ್ರಾ	13-16	19
5	ಸೋಮ	ಷಷ್ಠಿ	7-7	ಪುನರ್ವಸು	16-39	20
6	2 ಮಂಗಳ	ಸಪ್ತಮಿ	10-1	ಪುಷ್ಯ	21-10	21
7	3 ಬುಧ	ಅಷ್ಟಮಿ	14-14	ಆಶ್ಲೇಷ	26-40	22
8	ಗುರು	ನವಮಿ	19-5	ಮಘ	32-51	23
9	4 ಶುಕ್ರ	ದಶಮಿ	24-24	ಪುಫ	39-25	24
10	5 ಶನಿ	ಏಕಾದ	29-47	ಉಫ	45-58	25

(1) ದಶರಥಗೌರೀವ್ರತಂ. (2) ಅಷ್ಟಮಿತಿಥಿಃ, ಶನಿಚಂದ್ರಯೋಸ್ಸಮಾಗಮಃ. (3) ನವಮೀತಿಥಿಃ (ವಾಕ್ಯರೀತ್ಯಾ ಅತಿಥಿಃ) (4) ದಶಮೀತಿಥಿಃ, ... (5) ...

ಮೈಸೂರು: ...

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ಞನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರಕಾಶವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ರಿಲೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

REGISTERED NO M. 124.

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ನವಂಬರ್ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೪೫

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಗಳ ಸಭೆಯ ದಸರಾ ಸಮ್ಮೇಳನದಲ್ಲಿ ದಿವಾನರವರು ಮಾಡಿದ ಉಪನ್ಯಾಸದ ಮುಖ್ಯಾಂಶಗಳು.

(ಕಳೆದವಾರದ ಶೇಷ)

ವರುಷ	ಶಕ್ತಿಯ ಪ್ರಮಾಣ	ನಿವ್ವಳ ಹುಟ್ಟುವಳಿ
	ಕಿಲೊ ವಾಟ್ಸುಗಳು	ರೂ.
1912—13	79,709,668	10,62,301
1913—14	74,326,757	10,21,103
1914—15	86,350,615	10,53,111
1915—16	90,392,109	13,77,247
1916—17	89,369,500	16,85,000

ಕೃಷ್ಣರಾಜಸಾಗರದ ಅಣೆಗೆ ಪೆನ್‌ಸ್ಟಾಕ್ ಪೈಪುಗಳನ್ನು ಜೋಡಿಸಿ, ಮೈಸೂರಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದರಲ್ಲಿ ತಡವೆ ಬಿದುದ್ದಕ್ಕೆ ಘರ್ತಿಗಾಗಿಯೂ ಮತ್ತು ಇತರ ಅನೇಕ ಕೆಲಸಗಳಿಗೆ ಉಪಯೋಗವಾಗುವಂತೆಯೂ ಶಕ್ತಿಯನ್ನು ಉಂಟುಮಾಡುವುದಕ್ಕಾಗಿ ತಕ್ಕ ಏರ್ಪಾಡು ಮಾಡಿದೆ.

ಪತ್ರಿಕೆಗಳನ್ನು ಮೂರು ತಿಂಗಳಿಗೊಂದಾವರ್ತಿ ಶೇಖರಿಸಿ ಪ್ರಕಟಿಸುವ ಜರ್ನಲನ್ನು ಈ ಸಾಲಿನಲ್ಲಿ ಹೊರಡಿಸಲಾಯಿತು. ಸಂವಿಧಾನ ಮತ್ತು ಅಭಿವೃದ್ಧಿಯ (ಆರ್ಗನೈಜೇಷನ್ ಮತ್ತು ಡೆವಲಪ್‌ಮೆಂಟ್) ಏರ್ಪಾಡಿನ ಕೆಲಸವನ್ನು ಎಲ್ಲಾ ಇಲಾಖೆಗಳಲ್ಲಿಯೂ ಜಾರಿಗೆ ತರಲಾಗಿದೆ. ಇದು ಪ್ರತಿಯೊಂದು ಇಲಾಖೆಯಲ್ಲಿಯೂ ಹಾಲಿ ಇರುವ ದೊಡ್ಡದೊಡ್ಡ ನ್ಯೂನತೆಗಳ ಮತ್ತು ...

ಸಂಪದಭಿವೃದ್ಧಿಗೆ ಸಂಬಂಧಪಟ್ಟ ಇಲಾಖೆಗಳು.

ವಿದ್ಯಾಭ್ಯಾಸದ ಇಲಾಖೆ.—1917 ನೆ ಜೂನ್ 30 ನೆ ತಾರೀಖಿನಲ್ಲಿ ...

ಲೋಕಲ್ ಸೆಲ್ಫ್ ಗೌರ್ನಮೆಂಟ್ ಮತ್ತು ಇತರ ಇಲಾಖೆಗಳು.

ಶೆಲ್ಫರ್ ಇಲಾಖೆ.—...

ಅನ್ನು ಪ್ರಚುರಪಡಿಸುವುದಕ್ಕೆ ಏರ್ಪಾಟುಮಾಡುವುದು, ಮತ್ತು ಕೆಳಗಿನ ತರಗತಿಗಳಿಂದ ವಿಜ್ಞಾನವಿಷಯವನ್ನು ಉಪದೇಶಿಸುವುದು.

ಮೈಸೂರು ಯೂನಿವರ್ಸಿಟಿ.—1916-17 ನೆ ಸಾಲಿನಲ್ಲಿ ಮೈಸೂರು ಯೂನಿವರ್ಸಿಟಿಯನ್ನು ಸ್ಥಾಪಿಸಲಾಯಿತು. ಫ್ಯಾಕಲ್ಟಿಗಳನ್ನೂ ನಾನಾ ಸ್ಟಾಟ್ಯೂಟರಿ ಬೋರ್ಡುಗಳನ್ನೂ ಮತ್ತು ಕಮಿಟಿಗಳನ್ನೂ, ಏರ್ಪಡಿಸುವುದಕ್ಕೆ ...

... (Spike) ...

... (Boy Scout) ...

[ಇ ತಿಯ ಶೇಷವನ್ನು ನೋಡಿ.]

ಮೈಸೂರು ಸ್ಟಾರ್.

೧೯೧೭ನೆಯ ಇಸವಿ ನವಂಬರ್ ತಾ|| ೧೧ನೆಯ ಭಾನುವಾರ.

ಹಿಂದುಳಿದ ಜನವರ್ಗಗಳ ಆತ್ಮೋದ್ಧಾರಪ್ರಯತ್ನ.

ಪ್ರಜೆಗಳಲ್ಲಿ ವಿದ್ಯಾವಿವೇಕ ನಾಗರಿಕತಾದಿಗಳೊಳಗೆ ಹಿಂದುಳಿದಿರುವ ಜನವರ್ಗಗಳೇ ವಿಶೇಷವಾಗಿರುತ್ತವೆ. ಈ ಕಾರಣದಿಂದಲೇ ಭಾರತೀಯ ಪ್ರಜೆಗಳಲ್ಲಿ ವಿದ್ಯಾವಂತರುಗಳು ನೂರಕ್ಕೆ ೫ ರಷ್ಟು ಮಾತ್ರ ದೊರೆಯುತ್ತಿದ್ದಾರೆ. ದೇಶವು ಸುಧಾರಿಸಬೇಕಾದರೆ ಅಧಿಕ ಸಂಖ್ಯಾಕರಾದ ಹಿಂದುಳಿದ ಪ್ರಜೆಗಳ ಸುಧಾರಣೆಯ ಹೊರತು ಬೇರೆ ಮಾರ್ಗವೇ ಇಲ್ಲ. ದೇಶವನ್ನುದ್ಧರಿಸಬೇಕೆಂಬ ಕುತೂಹಲವುಳ್ಳ ಯಾವ ಪ್ರಭುವೇ ಆಗಲೀ ಪ್ರಜೆಯೇ ಆಗಲೀ ಈ ವಿಷಯವನ್ನು ಉದಾಸೀನಮಾಡುವಹಾಗಿಲ್ಲ. ದೇಶದ ಸ್ಥಿತಿಗತಿಯನ್ನು ಚೆನ್ನಾಗಿ ಅರಿತಿರುವ-ಈ ದೇಶದ ಉದ್ಧಾರ ವಿಷಯದಲ್ಲಿ ನಿಜವಾದ ಅಭಿಮಾನವುಳ್ಳ-ಅನೇಕಮಂದಿ ಆಂಗ್ಲಾಧಿಕಾರಿಗಳೂ ದೇಶೀಯಾಧಿಕಾರಿಗಳೂ ದೇಶಭಕ್ತಶಿರೋಮಣಿಗಳೂ ಸಹ ಈ ಅಭಿಪ್ರಾಯವನ್ನು ಹಲವುಸಲ ವ್ಯಕ್ತಪಡಿಸಿರುತ್ತಾರೆ. ದೇಶೋದ್ಧರಣೈಕ ತಪಸ್ವೀಲರಾಗಿರುವ ನಮ್ಮ ದಿವಾನ್ ಸರ್ ವಿಶ್ವೇಶ್ವರಯ್ಯನವರು ಕೂಡ ಪ್ರತಿಯೊಂದು ತಮ್ಮ ಭಾಷಣದಲ್ಲೂ ಈ ಅಭಿಪ್ರಾಯವನ್ನು ಎಷ್ಟೋ ಬಲೋಪೇತವಾಗಿ ಆಡುತ್ತಲೇ ಬಂದಿದ್ದಾರೆ. ಕಳೆದ ಪ್ರಜಾಪ್ರತಿನಿಧಿ ಸಭೆಯ ಉಪಸಂಹಾರಕಾಲದಲ್ಲಿ ಮಾಡಿದ ಭಾಷಣದೊಳಗೂ ಕೂಡ "ಸಂಸ್ಥಾನದ ಎಲ್ಲ ಜನವರ್ಗಗಳವರಲ್ಲೂ ತಾವು ಮುಂದಕ್ಕೆ ಬರಬೇಕೆಂಬ ಬುದ್ಧಿಯೂ, ವಿಚಾರವೂ, ಆತ್ಮಾವಲಂಬನ ಕುತೂಹಲವೂ ಹೆಚ್ಚುತ್ತ ಬರಬೇಕು" ಎಂದು ಒತ್ತಿ ಹೇಳಿರುತ್ತಾರೆ. ಮತ್ತೂ ಅದೇ ಸಭೆಯ ಆರಂಭೋಪನ್ಯಾಸದಲ್ಲಿ "ಹಿಂದುಳಿದ ಜನರನ್ನೂ ಚತುರ್ವರ್ಣಕ್ಕೆ ಸೇರದ ಜನರನ್ನೂ ಎಲ್ಲರನ್ನೂ ಕೂಡಿದ ಜನಸಮುದಾಯದ ವಿದ್ಯಾಭ್ಯಾಸದ ಪ್ರಮಾಣವನ್ನೂ ಮತ್ತೂ ಕೆಲಸಮಾಡತಕ್ಕ ಶಕ್ತಿಯನ್ನೂ ಹೆಚ್ಚಿಸುವುದಕ್ಕೆ ದೃಢವಾದ ಪ್ರಯತ್ನವು ಅವಶ್ಯಕವಾಗಿರುವುದು" ಎಂದು ಅಪ್ಪಣೆಕೊಡಿಸಿರುತ್ತಾರೆ. ಇವುಗಳಿಂದ ನಮ್ಮ ಶ್ರೀಮನ್ಮಹಾರಾಜರ ಸರ್ಕಾರದವರ ಅಭಿಪ್ರಾಯಗಳು ಎಷ್ಟು ಪರಿಶುದ್ಧವಾಗಿಯೂ ಉದಾರವಾಗಿಯೂ ಪ್ರಜಾರಕ್ಷಣೈಕ ಲಾಲಸಗಳಾಗಿಯೂ ಇವೆಯೆಂಬುದನ್ನು ಸರ್ವರೂ ತಿಳಿದುಕೊಳ್ಳಬಹುದಾಗಿದೆ.

ಹಿಂದುಳಿದ ಜನವರ್ಗಗಳವರಾದರೊ ಆಗದವರ ಮಾಟಕುಟಿಲಗಳಿಗೆ ಈಡಾದವರಂತೆಯೋ, ಕೆಟ್ಟ ಸೊಳ್ಳೆಗಳ ಕಡಿತಕ್ಕೆ ಸಿಕ್ಕಿ ಮಲೇರಿಯಾ ರೋಗಪೀಡಿತರಾದವರಂತೆಯೋ ಕಾಲು ಸಣ್ಣಗಾಗಿ, ಹೊಟ್ಟೆ ಮಾತ್ರ ಉಬ್ಬರಿಸಿಕೊಂಡು, ಈ ಕಾರಣದಿಂದ ವಿದ್ಯಾಭಾವ, ವಿವೇಕಾಭಾವ, ವಿಜ್ಞಾನಾಭಾವ, ಲೋಕಪ್ರಗತಿಸ್ವರೂಪಾನುಭವಾಭಾವ-ಎಂಬುದೇ ಮೊದಲಾದ ಅಭಾವಗಳೆಂಬ ಕ್ಷಯಕ್ಕೆ ಈಡಾಗಿ ನೀರಸರಾಗಿದ್ದರು. ಪ್ರಗತಿಕ್ರಮವನ್ನನುಸರಿಸಿಯೋ ಕಾಲವೈಲಕ್ಷಣ್ಯದಿಂದಲೋ ದೈವಕಟಾಕ್ಷದಿಂದಲೋ ಅವರಿಗೆ ಕ್ಷಯನಿವೃತ್ತಿಯಾಗುವ ಸಮಯವು ಪ್ರಾಪ್ತವಾಗಿದೆ. ತಮಗೆ ಹಿಡಿದಿರುವ ರೋಗವಿಂತಹುದೆಂಬುದು ಅವರಿಗೇ ಗೊತ್ತಾಗಿಯೂ ಆಗುತ್ತಲೂ ಇದೆ. ಭವರೋಗವೈದ್ಯ ಪ್ರತಿನಿಧಿಯಾದ ಸರ್ಕಾರವೂ ಕೂಡ ಆರೋಗನಿವೃತ್ತಿಗೆ ತಕ್ಕ ಔಷಧವನ್ನು ಕೊಡಲು ಸಿದ್ಧವಾಗಿದೆ. ಇದು ದೇಶೋದ್ಧಾರದ ಸುಲಕ್ಷಣವಲ್ಲವೆ? ಇದು ದೇಶಾಭಿಮಾನಿಗಳಿಗೆಲ್ಲಾ ಸಂತೋಷಪ್ರದವಲ್ಲವೆ? ಹೀಗಿರುವಲ್ಲಿ, ತಮ್ಮ ಭ್ರಾತೃವರ್ಗದವರ ಅಭ್ಯುನ್ನತಿ ಮಾರ್ಗವನ್ನು ಕಂಡು ಅಸೂಯೆಪಡತಕ್ಕವರನ್ನು ಮಾನುಷಕೋಟಿಗೆ ಸೇರಿದವರೆಂದು ಎಣಿಸಬಹುದೆ? ಅದಂತಿರಲಿ.

ಸದ್ಯದಲ್ಲಿ ಭರತಖಂಡದ ಎಲ್ಲ ಮೂಲೆಯಲ್ಲಿಯೂ ಹಿಂದುಳಿದ ಜನವರ್ಗಗಳ ಅನೇಕ ಪ್ರಮುಖರಿಗೆ ಆತ್ಮಗೌರವಾಭಿಮಾನವು ಹುಟ್ಟಿರುವುದರಿಂದ, ತಮ್ಮವರ ಸರ್ವತೋಮುಖಾಭಿವೃದ್ಧಿಗೆ ನಾನಾವಿಧವಾಗಿ ಪಾಟುಪಡುತ್ತಿರುವರು. ಸಭೆಗಳಮೂಲಕ ತಮ್ಮ ಅವನತಿಯಜ್ಞಾನವನ್ನು ತಮ್ಮವರಿಗೆ ಮಾಡಿಕೊಟ್ಟು ಜಾಗರೂಕಗೊಳಿಸುತ್ತಿರುವರು. ಮದ್ರಾಸು, ಬೊಂಬಾಯಿ, ಬಂಗಾಳಾ ಮೊದಲಾದ ಪ್ರಾಂತಗಳಲ್ಲಿ ಪಂಚಮರೂ ಕೂಡ ಈ ತೆರದ ಪ್ರಯತ್ನಗಳನ್ನು ಅನೇಕವಾಗಿ ಮಾಡುತ್ತಿರುವರು. ಮೊಟ್ಟಮೊದಲನೆಯ ಶ್ರೇಯಸ್ಸಾಧನವಾದ ವಿದ್ಯೆಯ ಅಭಿವೃದ್ಧಿಯಕಡೆಗೆ ವಿಶೇಷವಾಗಿ ಗಮನವಿತ್ತಿರುವರು. ಹಿಂದುಳಿದವರಲ್ಲಿ ಕರ್ತವ್ಯಜ್ಞಾನವನ್ನುಂಟುಮಾಡಲು ಸಾಧಕವಾಗಿರುವಂತೆ ಮೊನ್ನೆತಾನೇ ಬೊಂಬಾಯಿಯ ಜನರು ಮಹಾರಾಷ್ಟ್ರ ಭಾಷೆಯಲ್ಲಿ "ಜಾಗರೂಕ" ಎಂಬ ಹೆಸರಿನ ವೃತ್ತಪತ್ರಿಕೆಯನ್ನು ಆರಂಭಿಸಿರುವರು. ಭರತಖಂಡದ ಹಿಂದುಳಿದ ಜನವರ್ಗಗಳಲ್ಲಿ ಸಂಖ್ಯೆಯೊಳಗೆ ಪ್ರಾಮುಖ್ಯವನ್ನು ಪಡೆದಿರುವುವೆಲ್ಲಾ ತಮ್ಮಗಳಿಗೆ ನಿಯಮನಿರ್ಮಾಣ ಸಭೆ ಮೊದಲಾದುವುಗಳಲ್ಲಿ ಯುಕ್ತವಾದ ಪ್ರಾತಿನಿಧ್ಯದ "ಹಕ್ಕನ್ನು" ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸಿರುವುವು. ಹಿಂದುಳಿದ ಜನವರ್ಗದವರಿಗೆ ಇಂಥ ಪ್ರಾತಿನಿಧ್ಯವು ಸಲ್ಲಬೇಕಾದುದು ಯುಕ್ತವೆಂದು ರಾಜತಂತ್ರವಿಶಾರದರನೇಕರು ಒಪ್ಪಿರುವರು. ಶ್ರೈ. ಗೋಖಲೆಯವರಂತೂ ಸ್ಪಷ್ಟವಾಗಿಯೇ ಅಭಿಪ್ರಾಯಕೊಟ್ಟಿರುವರು. ಈಗಣ ಸ್ವರಾಜ್ಯವಾದಿಗಳಲ್ಲಿ ತಿಲಕರಾಗಿರುವ ಮ|| ಬಾಲಗಂಗಾಧರ ತಿಲಕರೂ ಕೂಡ ತಮ್ಮ ಮರಾಠಾ ಕೇಸರಿ ಪತ್ರಿಕೆಗಳಲ್ಲಿ ಈ ಅಭಿಪ್ರಾಯವನ್ನು ಅನುಮೋದಿಸಿರುವರು. ಭರತಖಂಡಕ್ಕೆ ಬರುತ್ತಲಿರುವ ಸ್ಟೇಟ್ ಸೆಕ್ರೆಟರಿ ಮಿ|| ಮಾಂಟುಗ್‌ರವರಲ್ಲಿ ತಮ್ಮ ಈ ಇಷ್ಟಾರ್ಥವನ್ನು ಬಿನ್ನಯಿಸಿಕೊಳ್ಳುವುದಕ್ಕೆ ಹಿಂದುಳಿದ ಅನೇಕ ಜನವರ್ಗಗಳವರು ಸಿದ್ಧರಾಗಿರುವರು.

ಇಂಥ ಚಳವಳವು ಭರತಖಂಡದ ಇತರ ಭಾಗಗಳಲ್ಲೆಲ್ಲಾ ನಡೆದಿರುವಾಗ, ಮೈಸೂರು ದೇಶವು ಅದಕ್ಕೆ ವಿಲಕ್ಷಣವಾಗಿರುವುದು ಸಂಭವನೀಯವಲ್ಲ. ಇಲ್ಲಿನವರಲ್ಲೂ ಆ ಜಾಗರೂಕತೆಯು ತಕ್ಕಮಟ್ಟಿಗೆ ಉಂಟಾಗಿರುವ ಚಿಹ್ನೆಗಳು ತೋರುತ್ತಿವೆ. ಇಲ್ಲಿಯ ಹಿಂದುಳಿದ ಜನವರ್ಗಗಳವರಲ್ಲಿ ಅಲ್ಪಸ್ವಲ್ಪವಾಗುಂಟಾಗಿದ್ದ ಅಂಥ ಎಚ್ಚರಿಕೆಯು ಬಲವಾಗುವಂತೆ ಮಾಡಲಿಕ್ಕೆ ಈ ದೇಶದ ಕೆಲವು ಬ್ರಾಹ್ಮಣಪತ್ರಿಕೆಗಳ ಲೇಖನಗಳೇ ಬಲುಮಟ್ಟಿಗೆ ಕಾರಣವಾಗಿರುತ್ತದೆ. ಕಾಲಪ್ರಗತಿಪ್ರವಾಹವನ್ನನುಸರಿಸಿ ನಮ್ಮ ಶ್ರೀಮನ್ಮಹಾರಾಜರವರೂ ಅವರ ಸರ್ಕಾರದವರೂ ಸಹ ನಡೆಯಬೇಕಾದವರಾಗಿರುತ್ತಾರೆ. ಅದಕ್ಕಾಗಿ ಅವರು ದಯಾರ್ದ್ರಹೃದಯದಿಂದ ಹಿಂದುಳಿದವರನ್ನುದ್ಧರಿಸಬೇಕಾದ ಧರ್ಮಕ್ಕೆ ಕಟ್ಟುಬಿದ್ದು, ಅವರುಗಳ ವಿದ್ಯಾಭ್ಯಾಸ ಪ್ರೋತ್ಸಾಹಕ್ಕಾಗಿ ಹೆಚ್ಚುಗಟ್ಟಲೆಯ ದ್ರವ್ಯವನ್ನು ವಿನಿಯೋಗಿಸುವುದಕ್ಕೂ, ಅವರಲ್ಲಿ ಕೇವಲ ವಿದ್ಯಾಮಹತ್ತಮತೆಯನ್ನೇ ಲಕ್ಷಿಸದೆ, ಕಾರ್ಯನಿರ್ವಾಹಶಕ್ತಿಯನ್ನು ಲಕ್ಷೀಕರಿಸಿ, ಅವರುಗಳಿಗೆ ಸರ್ಕಾರದುದ್ಯೋಗಗಳನ್ನು ಸುಕರವಾಗಿ ಹಂಚಿ ಕೊಡುವುದಕ್ಕೂ ಅಪ್ಪಣೆ ಮಾಡಿ ಹಿಂದುಳಿದಿರುವ ತಮ್ಮ ಅರ್ಧಕೋಟಿ ಪ್ರಜೆಗಳ ಚಿರಕೃತಜ್ಞತೆಗೆ ಪಾತ್ರರಾಗಿರುತ್ತಾರೆ.) ಆದರೆ ಹೀಗೆ ಹಿಂದುಳಿದವರ ವಿಷಯದಲ್ಲಿ ಪ್ರಭುತ್ವದವರಿಂದ ತೋರಿಸಲ್ಪಡುತ್ತಲಿರುವ ಸಾನುಭೂತಿಯು ಮುಂದಾಗಿರುವ ಕೆಲವರಿಗೆ ಸೈರಣೆಯನ್ನುಂಟುಮಾಡಿರುವುದಿಲ್ಲ. ಅದಕ್ಕಾಗಿ ಅವರು ನಾನಾವಿಧವಾದ ತೊಡಕುಗಳನ್ನೊಡ್ಡಲು ಹವಣಿಸಿಕೊಂಡಿದ್ದಾರೆ. ಹಿಂದುಳಿದವರು ಪ್ರಬಲರಾಗಿ ಸರ್ಕಾರದುದ್ಯೋಗಗಳಿಗೆ ಬಂದರೆ ತಮಗೂ ತಮ್ಮ ಬಂಧುವರ್ಗದವರಿಗೂ ಪೂರ್ವದಂತೆಯೇ ಸರ್ಕಾರದುದ್ಯೋಗಗಳು ಲಭಿಸದೆ ಎಲ್ಲಿ ತಪ್ಪಿಹೋಗುವುವೋ ಎಂಬ ದಿಗಿಲು ಅವರುಗಳಿಗೆ ಪ್ರಾಪ್ತವಾದಂತೆ ಕಾಣುತ್ತಿದೆ. ತಮ್ಮವರೇ ನಿರುಪಾಧಿಕವಾಗಿ ರಾಜ್ಯಸೂತ್ರವನ್ನು ಹಿಡಿದು ಸುಖಾನುಭವ ಮಾಡುತ್ತ, ಉಳಿದ ಜನವರ್ಗದವರಿಂದೆಲ್ಲಾ ದುಡಿಸಿಕೊಳ್ಳುತ್ತ ಇದ್ದ ಕಾಲವು ಎಲ್ಲಿ ಸಮಾಪ್ತವಾಗಿಹೋಗುವುದೋ ಎಂಬ ಚಿಂತೆಯು ಅವರುಗಳಿಗೆ ಹುಟ್ಟಿದಂತಿದೆ. ಆದಕ್ಕಾಗಿಯೇ ಅವರುಗಳು ಇತರರ ನೂತನಾಭ್ಯುದಯಕ್ಕೆ ಅಡ್ಡಿಗಳನ್ನು ಮಾಡಲು ಭಗೀರಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಾಡಿದರೆ ಮಾಡಿಕೊಳ್ಳಲಿ; ದುರುದ್ದೇಶ ಸದುದ್ದೇಶಗಳಿಗೆ ಅನುಗುಣವಾದ ಫಲವನ್ನುಣ್ಣಿಸಲಿಕ್ಕೆ ಸರ್ವಸಾಕ್ಷಿಯಾದ ಭಗವಂತನೂ ಅವನಿಗೆ ಪ್ರತಿನಿಧಿಯಾದ ಮಹಾಪ್ರಭುಗಳೂ ಇರುವಾಗ, ಆತ್ಮಾಭ್ಯುದಯಕ್ಕಾಗಿ ದೃಢಚಿತ್ತದಿಂದ ಕೆಲಸಮಾಡುವ ದೀನರಾದ ಹಿಂದುಳಿದ ಜನವರ್ಗಗಳವರು ಬೆದರಬೇಕಾಗಿಯೂ ಇಲ್ಲ, ನಿರುತ್ಸಾಹರಾಗಬೇಕಾದುದೂ ಇಲ್ಲ. ಇದು ಹೊರತು ಆ ಮುಂಬರಿದ ಜನರು ಭಯಪಡಬೇಕಾದುದಕ್ಕೆ ಕಾರಣವೂ ಇಲ್ಲ. ಏಕೆಂದರೆ-ಇವರ ಸಹಚರರಾದ ಭಾರತೀಯ ತತ್‌ಕ್ಷಣ ಸ್ವರಾಜ್ಯವಾದಿಗಳು ಯೂರೋಪ್ಯಾಧಿಕಾರವನ್ನೇ ಭರತಖಂಡದಲ್ಲಿ ತಪ್ಪಿಸಿ, ಅದನ್ನೆಲ್ಲಾ ತಾವೇ ಆಕ್ರಮಿಸಿಕೊಳ್ಳಬೇಕೆಂದು ಹವಣಿಸಿಕೊಂಡಿರುವಂತೆ ಮೈಸೂರಿನ ಹಿಂದುಳಿದ ಜನವರ್ಗಗಳವರು ಬ್ರಾಹ್ಮಣರನ್ನೆಲ್ಲಾ ಅಧಿಕಾರದಿಂದ ತಪ್ಪಿಸಿ ತಾವೇ ಆಕ್ರಮಿಸಿಕೊಳ್ಳಬೇಕೆಂಬ ಸಂಕಲ್ಪವುಳ್ಳವರಲ್ಲ. "ಅವರ ಪಾಲಿಗೂ ಅಷ್ಟಿರಲಿ; ನಮಗೂ ತಕ್ಕಷ್ಟಿರಲಿ; ಈರ್ವರೂ ಅಸಮಾಧಾನವಿಲ್ಲದೆ ಸೌಜನ್ಯದಿಂದಿದ್ದು ದೇಶೋದ್ಧಾರವನ್ನು ಮಾಡೋಣ" ಎಂಬುದೇ ಇವರುಗಳ ಉದ್ದೇಶವಾಗಿರುತ್ತದೆ.

ಪ್ರಕೃತದಲ್ಲಿ ಭರತಖಂಡದ ಇತರ ಭಾಗಗಳ ಹಿಂದುಳಿದ ಜನರಲ್ಲಿ ತಮ್ಮ ಸಾಂಘಿಕನೈತಿಕಾಭ್ಯುನ್ನತಿ ಪ್ರಾಪ್ತಿಗಾಗಿ ಚಳವಳವು ಉದಯಿಸಿರುವುದರಿಂದ ಒಂದು ತೆರದ ಪ್ರಬೋಧವನ್ನು ಪಡೆದು ಮೈಸೂರು ದೇಶದ ಹಿಂದುಳಿದ ಜನವರ್ಗಗಳವರೂ ಕೂಡ ಪ್ರಯತ್ನಿಸಿರುತ್ತಾರೆ. ತಮ್ಮ ರಾಜಕೀಯೋನ್ನತಿಗಾಗಿ ಇವರುಗಳು ಕೈಕೊಂಡಿರುವ ಯತ್ನದಲ್ಲಿ ಪ್ರತ್ಯೇಕ ಪ್ರಾತಿನಿಧ್ಯ ವಿಷಯವು ಒಂದಾಗಿರುತ್ತದೆ. ಎಂದರೆ-ದೇಶಪ್ರಜಾಹಿತ ಸಾಧನೆಗಾಗಿ ಏರ್ಪಟ್ಟಿರುವ ಸ್ಥಳಿಕ ಸರ್ಕಾರದ ಸಂಘಗಳಲ್ಲೂ ಎಂದರೆ ತಾಲ್ಲೂಕು ಬೋರ್ಡು ಡಿಸ್ಟ್ರಿಕ್ಟು ಬೋರ್ಡು ಮ್ಯುನ್ಸಿಪಲ್ ಬೋರ್ಡುಗಳಲ್ಲೂ, ಪ್ರಜಾಪ್ರತಿನಿಧಿಸಭೆ ನಿಯಮನಿರ್ಮಾಣ ಸಭೆ-ಇವುಗಳಲ್ಲೂ ಸಹ ಜನವರ್ಗಗಳ ಪ್ರಜಾಸಂಖ್ಯಾ ಪರಿಮಿತಿಗೆ ಅನುಗುಣವಾಗಿ ಆಯಾ ವರ್ಗಗಳ ಪ್ರತಿನಿಧಿಗಳ ಸಂಖ್ಯೆಯು ಇರುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಪ್ರಭುತ್ವದವರನ್ನು ಪ್ರಾರ್ಥಿಸುತ್ತಿರುವ ವಿಷಯವು ಮುಖ್ಯವಾಗಿರುತ್ತದೆ. ಈ ವಿಷಯವನ್ನು ಹಿಂದುಳಿದ ಜನವರ್ಗಗಳ ಪ್ರತಿನಿಧಿಗಳು ನಿಯಮನಿರ್ಮಾಣ ಸಭೆಯಲ್ಲೂ ಕಳೆದ ಪ್ರಜಾಪ್ರತಿನಿಧಿಸಭೆಯಲ್ಲೂ ಸಹ ಚರ್ಚೆಗೆ ತಂದಿದ್ದುದಲ್ಲದೆ, ಇದೇ ನವರಾತ್ರಿ ಕಾಲದಲ್ಲಿ ರಾಜಧಾನಿಯಲ್ಲಿ ಕೂಡಿದ್ದ ಎಲ್ಲ ಕೋಮುವಾರು ಜನಗಳ ಮಹಾಸಭೆಯಲ್ಲೂ ಕೂಡ ಇದೇ ವಿಷಯಕವಾದ ನಿರ್ಧಾರವನ್ನು ಮಾಡಿ, ಅದರ ಪ್ರತಿಯನ್ನು ಶ್ರೀಮನ್ಮಹಾರಾಜರವರಿಗೂ ಗೌರ್ನಮೆಂಟಿಗೂ ಸಹ ಕಳುಹಿಸಿಕೊಟ್ಟಿರುತ್ತಾರೆ. ತಮ್ಮ ಸಕಲ ಪ್ರಜೆಗಳನ್ನೂ ಸರ್ವತೋಮುಖವಾಗಿ ಅಭಿವೃದ್ಧಿಗೆ ತಂದು ಅಂಥ ಪ್ರತಿಯೊಬ್ಬ ಪ್ರಜೆಯಿಂದಲೂ ಸಾಧ್ಯವಾಗುವಷ್ಟು ಸಹಾಯವನ್ನೆಲ್ಲಾ ದೇಶಪ್ರಯೋಜನಕ್ಕೆ ಉಪಯೋಗಿಸಿಕೊಳ್ಳಬೇಕೆಂಬುದು ನನ್ನ ಶ್ರೀಮನ್ಮಹಾರಾಜರವರ ಮತ್ತೂ ಅವರ ಉದಾರವಾದ ಸರ್ಕಾರದ ಅಭಿಪ್ರಾಯವಾಗಿರುವುದರಿಂದ ಹಿಂದುಳಿದವರ ಸಕಾರಣವಾದ ಪ್ರಾರ್ಥನೆಯು ನೆರವೇರದೆ ಹೋಗಲಾರದೆಂದು ಎಣಿಸಬಹುದಾಗಿದೆ.

ಆದರೆ ನಿಯಮನಿರ್ಮಾಣ ಸಭೆಯಲ್ಲೂ ಪ್ರಜಾಪ್ರತಿನಿಧಿಯಲ್ಲೂ ಈ ವಿಷಯದ ಚರ್ಚೆಯು ಬಂದಾಗ ಬ್ರಾಹ್ಮಣ ಪ್ರತಿನಿಧಿಗಳೊಬ್ಬರಾದರೂ ಇದಕ್ಕೆ ಅನುಮೋದನೆಯನ್ನು ತೋರಿಸದೆ ಹೋದುದು ಗಮನೀಯವಾಗಿರುತ್ತದೆ. ಇದಕ್ಕೆ ಕಾರಣವನ್ನು ಬಹುದೂರ ಹುಡುಕಬೇಕಾಗಿಲ್ಲ. ಈ ಪ್ರಾರ್ಥನೆಯನ್ನು ಗೌರ್ನಮೆಂಟಿನವರು ನೆರವೇರಿಸಿಕೊಡಲಾಗದೆಂದು ಅನೇಕರು ಪ್ರತಿಭಟಿಸಿದರು. ಅದಕ್ಕೆ ಅವರುಗಳು ತೋರಿಸಿದ ಕಾರಣಗಳಾದರೊ ವಿಚಿತ್ರವಾಗಿರುವುವು. ಅವುಗಳಲ್ಲಿ ಒಂದೆರಡರ ಸ್ವರೂಪವನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ವಿವರಿಸಿ ವಿಮರ್ಶಿಸುತ್ತೇವೆ.

ಪ್ರಜಾಕ್ಷೇಮಕ್ಕಾಗಿ ಕಲ್ಪಿತವಾಗಿರುವ ರಾಜಕೀಯ ಸಭೆಗಳಲ್ಲಿ ಜಾತಿ ಕುಲ ಗೋತ್ರಗಳ ಸಂಬಂಧವನ್ನು ಇಟ್ಟುಕೊಳ್ಳಲಾಗದು. ಹಾಗೆ ಇಟ್ಟುಕೊಂಡರೆ ಜನಗಳಲ್ಲಿ ಅನ್ಯೋನ್ಯತೆಯು ತಪ್ಪುತ್ತದೆ. ಲಂಡನ್ ಮೊದಲಾದ ಕಡೆಗಳಲ್ಲಿ ಈ ರೀತಿಯ ಪ್ರತಿನಿಧಿತ್ವವು ವ್ಯವಹಾರದಲ್ಲಿಲ್ಲ. ಬ್ರಾಹ್ಮಣರು ಈ ಸಭೆಗೆ ಬ್ರಾಹ್ಮಣರಾಗಿ ಬರುತ್ತಲಿಲ್ಲ. ಎಲ್ಲ ಜನವರ್ಗಗಳವರ ಪ್ರತಿನಿಧಿಗಳಾಗಿ ಬರುತ್ತಿದ್ದಾರೆ. ಈಗ ಎಲ್ಲ ಕೋಮುಗಳ ಪ್ರತಿನಿಧಿಗಳೂ ಸಭೆಗೆ ಬರುವುದಕ್ಕೆ ಅವಕಾಶವಿದೆ. ಅದುಕಾರಣ ಕೋಮುವಾರು ಪ್ರತಿನಿಧಿಗಳನ್ನಾರಿಸುವಿಕೆಗೆ ಅವಕಾಶಕೊಡಲಾಗದು. ಎಂದು ಬ್ರಾಹ್ಮಣಸಭಿಕರನೇಕರು ಪ್ರತಿಭಟಿಸಿದರು. ಸರ್ವಪ್ರಜೆಗಳಿಗೂ ಪ್ರತಿನಿಧಿಗಳಾಗಿ ಈ ಬ್ರಾಹ್ಮಣ ಸಭಾಸ್ತಾರರೆಲ್ಲಾ ಬಂದಿದ್ದರೆ ಆ ಸರ್ವಪ್ರಜೆಗಳಭಿಪ್ರಾಯವೂ ಈ ಸಬ್ಜೆಕ್ಟಿನ ವಿಷಯದಲ್ಲಿ ಹೀಗೆಯೇ ಇರುವುದೆಂದು ಇವರುಗಳು ದೃಢವಾಗಿ ಹೇಳಬಲ್ಲರೆ? ಇದೊಂದೇ ವಿಷಯದಿಂದಲೇ ಇವರು ಸರ್ವಪ್ರಜೆಗಳ ಪ್ರಾತಿನಿಧ್ಯವನ್ನು ಯಥಾರ್ಥವಾಗಿ ಸಾಗಿಸುತ್ತಲಿಲ್ಲವೆಂಬುದು ಸಿದ್ಧವಾಗುವುದಿಲ್ಲವೆ? ಬ್ರಾಹ್ಮಣರೊಳಗೆ ಅಧಿಕ ಸಂಖ್ಯಾಕರಲ್ಲಿ ಅವರ ಅನೂಚಾನವಾಗಿದ್ದ ಸ್ವಾರ್ಥತ್ಯಾಗಪೂರ್ವಕ ಪರೋಪಕಾರನಿರತತೆಯು ನಾಮಾವಶೇಷವಾದುದರಿಂದಲೇ ಅಲ್ಲವೆ ಅವರುಗಳ ವಿಷಯದಲ್ಲಿ ಇತರರಿಗೆ ವಿಶ್ವಾಸವು ತಪ್ಪಿ ತಂತಮ್ಮ ಕ್ಷೇಮಲಾಭವನ್ನು ತಾವು ತಾವೇ ಸಾಧಿಸಿಕೊಳ್ಳದೆ ಹೋಗುವುದು ತಪ್ಪೆಂಬ ಯೋಚನೆಯು ಅವರಲ್ಲಿ ಹುಟ್ಟಿರುವುದು? ಇದಲ್ಲದೆ ಜಾತಿ ಕುಲ ಗೋತ್ರ ಸಂಬಂಧವನ್ನು ಈ ಸಭೆಯಲ್ಲಿಟ್ಟುಕೊಳ್ಳಬೇಕೆಂದು ಯಾರು ಹೇಳಿದರು? ಎಲ್ಲ ಜನವರ್ಗಗಳ ಸರಿಯಾದಭಿಪ್ರಾಯವು ಅವರವರುಗಳ ನಿಜಪ್ರತಿನಿಧಿಗಳಿಂದ ತಿಳಿಯಿಸಲ್ಪಡುವಂತಾದರೇನೇ ಸರ್ಕಾರದವರ ಉದ್ದೇಶವು ಸಾರ್ಥಕವಾಗಬಹುದಾದ ಕಾರಣ ತಂತಮ್ಮ ಅರಿಕೆಗಳನ್ನು ತಂತಮ್ಮ ಜನವರ್ಗದವರ ಮೂಲಕವೇ ಬಿನ್ನೈಸಿಕೊಳ್ಳುವುದಕ್ಕೆ ಸರ್ಕಾರದವರು ಅವರಿಗೆ ಅವಕಾಶ ಕೊಡುವುದು ಅವಶ್ಯಕವಲ್ಲವೆ? ಕಕ್ಷಿಗಾರನು ನ್ಯಾಯಸ್ಥಾನದಲ್ಲಿ ತನ್ನ ವಾದವನ್ನು ತಾನೇ ಪರಾಪೇಕ್ಷೆಯಿಲ್ಲದೆ ಸಾಗಿಸಿಕೊಂಡು ಹೋಗುತ್ತೇನೆನ್ನುವಾಗ್ಗೆ, ಅದು ಕೂಡದು; ವಕೀಲನ ಮೂಲಕವಾಗಿಯೇ ವ್ಯವಹಾರವನ್ನು ನೀನು ಸಾಗಿಸಬೇಕೆಂದು ನ್ಯಾಯಾಧಿಪತಿಯು ಹೇಳುವುದಾದರೆ ಅದು ನ್ಯಾಯಸಮ್ಮತವೆನಿಸುವುದೆ? ಮತ್ತೂ ಲಂಡನ್ ಮೊದಲಾದ ಪಟ್ಟಣಗಳ ಸಭೆಯ ಸಾಮ್ಯವನ್ನು ಇಲ್ಲಿಯ ಸಭೆಗಳಿಗೆ ಹೇಗೆ ಕೊಡಲಾದೀತು? ಜಾತಿ ಕುಲ ಗೋತ್ರಗಳೂ ತತ್ಸಂಬಂಧವಾಗಿ ನೀಚೋಚ್ಚಭಾವ ಕಲ್ಪನೆಗಳೂ ಅಲ್ಲಿರುವುವೆ? ಕಸಬುದಾರರ ಮುಟ್ಟುಗಳ ಸದ್ದನ್ನು ಕೇಳಿದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂಬ ಶಾಸ್ತ್ರವಿಧಿಗಳು ಆ ದೇಶದಲ್ಲಿರುವುವೆ? ಮುಗಿಲಿನಲ್ಲಿ ಸಂಚರಿಸುವವರನ್ನು ನೋಡಿ ನಾವು ಕುಪ್ಪಳಿಸಿದ ಮಾತ್ರಕ್ಕೇ ಆಕಾಶಗಾಮಿಗಳಾಗಿ ಹೋದೆವೆ? ನಮ್ಮ ರಾಜಕೀಯ ಸಭೆಗಳಲ್ಲಿ ಜಾತಿ ಕುಲ ಗೋತ್ರಗಳ ಮಾತೆಲ್ಲಾ ಬಹಿಷ್ಕರಿಸಲ್ಪಟ್ಟಿರುವುವೆ? ಸೆನ್ಸಸ್ ಕೆಲಸ, ಎತ್ನಾಗ್ರಫಿಯ ಕೆಲಸ ಇವುಗಳಲ್ಲೆಲ್ಲಾ ಜಾತಿ ಕುಲ ಗೋತ್ರಗಳಿಗೆ ಪ್ರಾಶಸ್ತ್ಯವನ್ನು ಸರ್ಕಾರದವರೇ ಕೊಟ್ಟಿಲ್ಲವೆ? ಸಂಸ್ಥಾನದಲ್ಲೆಲ್ಲಾ ೨ ಲಕ್ಷಕ್ಕಿಂತ ಕಡಿಮೆಯಾಗಿ ಬ್ರಾಹ್ಮಣಜನಸಂಖ್ಯೆಯಿದ್ದರೂ, ಪ್ರಜಾಪ್ರತಿನಿಧಿಸಭೆಯ ಅರ್ಧಭಾಗಕ್ಕಿಂತ ಹೆಚ್ಚಾದ ಸ್ಥಲವನ್ನೆಲ್ಲಾ ಬ್ರಾಹ್ಮಣ ಸಭಾಸ್ತಾರರೇ ಆವರಿಸಿಕೊಂಡಿರುತ್ತಿದ್ದು, ಕೋಮುವಾರು ಪ್ರತಿನಿಧಿಗಳ ಆರಿಸುವಿಕೆಗೆ ಮುಂದೆ ಅವಕಾಶವಾದರೆ ತಮ್ಮ ಬಾಯಿ ಹಿಂದಾಗಿಹೋದೀತೆಂಬ ಭೀತಿಯಿಂದ ಅವರೆಲ್ಲರೂ ಒಟ್ಟಾಗಿ ಈ ವಿಷಯದಲ್ಲಿ ಪ್ರತಿಭಟಿಸುವುದಕ್ಕೆ ಜಾತ್ಯಭಿಮಾನವೇ ಕಾರಣವಲ್ಲವೆ? ಅಂಥ ದುರಭಿಮಾನವು ಅವರಿಗಿಲ್ಲದಿದ್ದರೆ, ಈ ಸಭೆಯ "ಪ್ರಜಾಪ್ರತಿನಿಧಿ" ಎಂಬ ಹೆಸರು ಅನ್ವರ್ಥವಾಗಬೇಕಾಗಿದ್ದರೆ, ಸಕಲ ವರ್ಗಗಳ ಪ್ರತಿನಿಧಿಗಳಿಗೂ ಪಕ್ಷಪಾತಕ್ಕೂ ವಂಚನೆಗೂ ಅವಕಾಶವಿಲ್ಲದಂತೆ ಎಡೆಗುಡುವುದೇ ಧರ್ಮವು. ಇದಲ್ಲದೆ ಕೋಮುವಾರು ಪ್ರತಿನಿಧಿಗಳು ಸಭೆಗೆ ಬಂದರೆ ಅನ್ಯೋನ್ಯತ್ವಕ್ಕೆ ಭಂಗಬರುವುದು ಹೇಗೆ? ಅದು ಪೆಚ್ಚುಮಾತೇ ಸರಿ. ಏಕೆಂದರೆ—ಕೋಮುವಾರು ಜನರ ಪ್ರಾರ್ಥನೆಗಳೆಲ್ಲಾ ಸ್ವಾರ್ಥಪರರ ಅಡ್ಡಿಯಿಂದ ಭಂಗಗೊಳ್ಳುವುದಾದರೆ ಮಾತ್ರ ಅನ್ಯೋನ್ಯತ್ವಕ್ಕೆ ಶೈಥಿಲ್ಯ ಬಂದೀತೇ ಹೊರತು ಅನ್ಯಥಾ ಇಲ್ಲ. ಆ ಜನರ ಪ್ರಾರ್ಥನೆಯು ನೆರವೇರಿಹೋದರೆ ಅವರ ಮನಸ್ಸು ಸಂತೃಪ್ತವಾಗುವುದರಿಂದ ಮುಂದೆ ಅವರು ಎಷ್ಟೋ ಏಕಮತ್ಯದಿಂದ ಸೇರಿ ಕೆಲಸಮಾಡಲು ಮತ್ತಷ್ಟು ಸಾಧಕವೇ ಆಗುವುದು. ಅದುಕಾರಣ ಹಿಂದುಳಿದ ಜನವರ್ಗಗಳ ಪ್ರತಿನಿಧಿಗಳು ಸಂಖ್ಯಾನುಗುಣವಾಗಿ ಸಭೆಗೆ ಬರುವ ವಿಷಯದಲ್ಲಿ ಬ್ರಾಹ್ಮಣ ಪ್ರತಿನಿಧಿಗಳು ಆಡಿದ ಮಾತುಗಳು ಸ್ವಾರ್ಥಾಭಿಮಾನದ ಮಾತುಗಳೇ ಹೊರತು ನಿಷ್ಪಕ್ಷಪಾತವಾದುವುಗಳಲ್ಲ. ಗೌರ್ನಮೆಂಟಿನವರು ಅದರ ಹುರುಳಿನ ನಿಜಸ್ಥಿತಿಯನ್ನು ಅರಿತುಕೊಂಡು, ಹಿಂದುಳಿದವರ ಉದ್ಧಾರಕ್ಕಾಗಿ ಕನಿಕರಪಟ್ಟು ತಾವು ಮಾಡುತ್ತಿರುವ ಇತರ ಕರ್ತವ್ಯದಂತೆಯೇ ಈ ವಿಷಯದಲ್ಲಾದರೂ ಅವರಿಗೆ ಧರ್ಮವಾದ ಸೌಕರ್ಯವನ್ನು ಕಲ್ಪಿಸಿಕೊಟ್ಟು, ಪ್ರಜಾಪ್ರತಿನಿಧಿಸಭೆಯಲ್ಲೂ ಇತರ ಸಭೆಗಳಲ್ಲೂ ಸರ್ವ ಪ್ರಜೆಗಳ ಯಥಾರ್ಥವಾದ ಭಾವಗಳೂ ಸಮನಾಗಿ ಗೌರ್ನಮೆಂಟಿನವರ ಅರಿಕೆಗೆ ಬರಲವಕಾಶವಾಗುವಂತೆಯೂ, ಯಾವ ಪ್ರಜೆಗಳ ಅಸಂತುಷ್ಟಿಗೂ ಆಸ್ಪದವಿಲ್ಲದಂತೆಯೂ ಮಾಡದೆ ಇರಲಾರರೆಂದು ನಂಬುತ್ತೇವೆ. ಈ ವಿಷಯವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರಿಂದ ಹೇಗೋ ಹೊರಟ ಮಾತುಗಳು ನಿರಾಶಾಜನಕಗಳಾಗಿರುವುದರಿಂದ ಈ ವಿಷಯವನ್ನು ಮರಳಿ ದೀರ್ಘವಾಗಿ ಪರ್ಯಾಲೋಚಿಸುವವರಾಗಬೇಕೆಂದು ಕೋರುತ್ತೇವೆ. ಮತ್ತೂ ಕೋಮುವಾರು ಪ್ರತಿನಿಧಿಗಳನ್ನು ಆರಿಸಿಕೊಳ್ಳುವಂತೆ ಮಾಡಿಕೊಡಬೇಕೆಂಬ ವಿಷಯದಲ್ಲಿ ದೇಶದ ಎಲ್ಲ ಭಾಗಗಳ ಹಿಂದುಳಿದ ಜನವರ್ಗಗಳವರೂ ಕೂಡ ತಂತಮ್ಮ ಸ್ಥಳಗಳಲ್ಲಿ ಸಭೆಗಳಮೂಲಕ ನಿರ್ಧಾರವನ್ನು ಮಾಡಿ ಶ್ರೀಮನ್ಮಹಾರಾಜರಿಗೂ ಅವರ ಗೌರ್ನಮೆಂಟಿನವರಿಗೂ ತಮ್ಮ ನಿಸರ್ಗಸಿದ್ಧವಾದ ರಾಜಭಕ್ತಿಯನ್ನನುಸರಿಸಿ ಬಿನ್ನಯಿಸಿಕೊಳ್ಳುವ ವಿಷಯದಲ್ಲಿ ಹಾಲುಮಾರದೆ ಇರುವರೆಂದೂ ನಿರೀಕ್ಷಿಸುತ್ತೇವೆ.

ಇದೇ ಸಮಯದಲ್ಲಿ ಬ್ರಾಹ್ಮಣವರ್ಗದ ವಕೀಲನಾಗಿರುವ ಸಂಪದಭ್ಯುದಯ ಪತ್ರಿಕೆಯ ಕಳೆದ ತಾ|| ೭ ರ ಸಂಚಿಕೆಯಲ್ಲಿ ಒಂದು ಉಪಶ್ರುತಿಯು ಹೊರಟಿರುತ್ತದೆ. ಅದಾದರೂ ಇತರರ ಬಾಯಿಗೆ ಕುಕ್ಕೆಕಟ್ಟಿ ಬ್ರಾಹ್ಮಣರೊಬ್ಬರ ಸಂಪದಭ್ಯುದಯವನ್ನು ಮಾಡಬೇಕೆಂಬುದಕ್ಕಾಗಿಯೇ ಆಗಿರುತ್ತದೆ. ಅದರಭಿಪ್ರಾಯವೇನೆಂದರೆ—"ಕೋಮುವಾರು ಪ್ರತಿನಿಧಿಗಳ ಏರ್ಪಾಡು ಪ್ರಯೋಜಕವಲ್ಲ. ಈ ಏರ್ಪಾಡು ಯಾವ ದೇಶದಲ್ಲೂ ಇಲ್ಲ. ಯಾವ ಕೆಲಸವನ್ನು ಮಾಡುವುದಕ್ಕೆ ಯಾರು ಅರ್ಹರೋ ಅವರು ಆ ಕೆಲಸಕ್ಕೆ ನಿಯಮಿಸಲ್ಪಡಬೇಕು. ಸಮರ್ಥನಾದ ಅಗಸನು ಮಂತ್ರಿಪದವಿಗೆ ನಿಯಮಿಸಲ್ಪಟ್ಟರೆ ಆ ಕೆಲಸವು ಸರಿಯಾಗಿ ನಡೆಯುವುದೆ? ಝಾಡಮಾಲಿ ಕೆಲಸಕ್ಕೆ ಭಾರಿ ಅಧಿಕಾರಿಯನ್ನು ನಿಯಮಿಸಿದರೆ ಅದು ಸರಿಯಾಗಿ ನಡೆಯುವುದೆ?" ಇತ್ಯಾದಿಯಾಗಿ ಹೇಳಿರುತ್ತದೆ. ಇದರಿಂದ ಆಯಾ ಕಸಬಿನವರು ಅವರವರ ಕಸಬಿನಲ್ಲೇ ಇರಬೇಕೆಂಬುದೂ, ಕೈಕಸಬುದಾರರೆಲ್ಲಾ ರಾಜಕೀಯ ವ್ಯವಹಾರಕ್ಕೆ ತಲೆಯಿಕ್ಕಲೇಬಾರದೆಂಬುದೂ ಇದರ ಉದ್ದೇಶವೆಂದು ತೋರುತ್ತದಲ್ಲವೆ? ಹಾಗಾದರೆ ಜಗದಾದಿಯಿಂದಲೂ ತಮತಮಗಿದ್ದ ಕಸಬಿನಲ್ಲಿಯೇ ಎಲ್ಲರೂ ಇರುವಂತೆ ಈ ಪತ್ರಿಕಾಕರ್ತರು ಮಾಡುವುದು ಸಾಧ್ಯವಾದರೆ ಮಾಡಲಿ. ಮನುವಿನ ಕಾಲದ ವೃತ್ತಿಗಳೇ ಮರಳಿ ಸ್ಥಾಪಿಸಲ್ಪಡಲಿ. ಭರತಖಂಡಕ್ಕೆ ಆರ್ಯರು ತಲೆಯಿಕ್ಕಿದಾಗಿನಿಂದಲೂ ಈಗಣ ಬ್ರಾಹ್ಮಣರು ಕೈಕೊಂಡಿರುವ ವೃತ್ತಿಗಳನ್ನೇ ಆಗಣ ಬ್ರಾಹ್ಮಣರೂ ಮಾಡುತ್ತಿದ್ದಿರಬಹುದು! ಈಗಣ ಬ್ರಾಹ್ಮಣರು ಬಿಟ್ಟಿರುವ ವೃತ್ತಿಗಳಾವುವು? ಅವರುಗಳು ಮಾಡುವ ವೃತ್ತಿ ವ್ಯಭಿಚರಣಗಳು ಮಾತ್ರ ಆಕ್ಷೇಪಾಸ್ಪದವಲ್ಲ. ಇತರರು ಬೇರೆಕಸಬಿಗೆ ಹೋಗುವುದು ಮಾತ್ರ ತಪ್ಪೆ? ಅಗಸನ ಕೆಲಸ, ಬಣಜಿಗನ ಕೆಲಸ, ಕುಂಬಾರಕೆಲಸ, ಮುಚ್ಚಿಯ ಕೆಲಸ, ಚಿತ್ರಗಾರನ ಕೆಲಸ, ಅನ್ನಮಾಡುವ ಕೆಲಸ, ದರ್ಜಿಯ ಕೆಲಸ, ಸೇನೆಯ ಕೆಲಸ—ಇತ್ಯಾದಿಗಳಿಂದೆಲ್ಲಾ ತಮ್ಮ ವರ್ಗದವರನ್ನು ಈ ಪತ್ರಿಕೆಯು ಮೊದಲು ಬಿಡಿಸಲಿ. ಅವರ ಯಜನಯಾಜನಾದಿ ಷಟ್ಕರ್ಮಗಳಿಗೆ ಅವರನ್ನು ಕಳುಹಿಸಲಿ. ಬಳಿಕ ಇತರರಿಗೆಲ್ಲಾ ಅವರವರ ವೃತ್ತಿಯಲ್ಲೇ ಇರಬೇಕೆಂದು ಬೋಧಿಸುವುದಕ್ಕೆ ಬರಲಿ. ತಾನೇ ಜಾರೆಯಾಗಿರುವವಳು ಇತರರಿಗೆ ಸಾಧ್ವೀತ್ವವನ್ನು ಬೋಧಿಸುವುದಕ್ಕೆ ಉಜ್ಜುಗಿಸಿದರೆ ಪರಿಹಾಸಾಸ್ಪದವಾಗುವುದಲ್ಲವೆ? ಇದಲ್ಲದೆ ಇವರು ಬ್ರಾಹ್ಮಣರುಗಳು ತಮಗೆ ಸಹಜವಲ್ಲದ ವೃತ್ತಿಗಳಿಗೆ ಕೈಹಾಕಿ ಹೇಗೆ ನಿರ್ವಹಿಸುತ್ತಲಿದ್ದಾರೋ ಅದರಂತೆಯೇ ಇತರರೂ ಕೂಡ ಒಂದುವೇಳೆ ತಮಗೆ ಸಹಜವಲ್ಲದ ವೃತ್ತಿಗಳಿಗೂ ಕೈಹಾಕಿದರೆ ಏತಕ್ಕೆ ಕೃತಾರ್ಥರಾಗಬಾರದು? ಪ್ರಜಾಪ್ರತಿನಿಧಿ ಸಭೆಯು ಏರ್ಪಟ್ಟಾಗ ಆಗಣ ಪ್ರತಿನಿಧಿಗಳೆಲ್ಲಾ ಸಭಾಕಾರ್ಯನಿರ್ವಾಹದಲ್ಲಿ ಈಗಣಷ್ಟು ನುರುಗಿದ್ದರೆ? ದಿನಕ್ರಮೇಣ ಅವರು ಸುಧಾರಿಸಲಿಲ್ಲವೆ? ಹೀಗೆಯೇ ಅವಕಾಶವನ್ನುಂಟುಮಾಡಿದರೆ ಪ್ರಜಾಸಾಮಾನ್ಯವೂ ಏಕೆ ಶಕ್ತವಾಗುವುದಿಲ್ಲ? ಸರ್ವರಲ್ಲೂ ಅಂಥ ವಿವೇಕಶಕ್ತಿ ಸಾಮರ್ಥ್ಯಗಳುಂಟಾಗುವಂತೆ ಮಾಡುವುದು ಪ್ರಭುಗಳ ಕರ್ತವ್ಯವಲ್ಲವೆ? ಹಿಂದುಳಿದವರು ಈ ಜನ್ಮದಲ್ಲಿ ಪ್ರಯತ್ನಿಸಿದರೆ ಆ ಸಂಸ್ಕಾರಬಲದಿಂದ ಮುಂದಣ ಜನ್ಮಕ್ಕಾದರೂ ಮಹಾವಿದ್ವಾಂಸರುಗಳಾಗಲಾರರೆ? ಅವರುಗಳಿಗೆ ರಾಜಕೀಯ ವ್ಯವಹಾರದಲ್ಲಿ ಪ್ರವೇಶವೇ ಇಲ್ಲದಂತೆ ಮಾಡಿದರೆ ಅವರಲ್ಲಿ ಆ ಸಂಸ್ಕಾರವು ಹುಟ್ಟುವ ಬಗೆ ಹೇಗೆ? ಜಗತ್ತಿನ ಪ್ರಳಯವಾಗುವವರೆಗೂ ಅವರುಗಳನ್ನು ಅಂಧಕೂಪದಲ್ಲಿಯೇ ಇರುವಂತೆ ಮಾಡಬೇಕೆಂಬುದು ಈ ೨೦ ನೆಯ ಶತಮಾನದ ವೃತ್ತಪತ್ರಿಕೆಗಳಿಗೂ ಸಂಕಲ್ಪವಾಗಿರಬಹುದೆ? ಇದನ್ನು ಯುಕ್ತಾಯುಕ್ತ ವಿಮರ್ಶನ ವಿಚಕ್ಷಣರಾದ ಪ್ರಭುತ್ವದವರೂ ದೇಶದ ಮಹಾಜನರೂ ಸಹ ಪರಿಭಾವಿಸುವವರಾಗಬೇಕು.

ಮನೆಯಲ್ಲಿ ಮಾಡಬಹುದಾದ ಕೈಗಾರಿಕೆಗಳನ್ನು ಕಲಿಸುವ ತರಗತಿಗಳು.

ಹೊರಗಡೆ ಹೋಗದೆ ಮನೆಯಲ್ಲೇ ಇದ್ದುಕೊಂಡು ಮಾಡಬಹುದಾದ ಮತ್ತೂ ಜನರುಪಯೋಗಕ್ಕೆ ಅವಶ್ಯಕವಾದ ಕಾಲುಚೀಲಗಳು, ಕರವಸ್ತ್ರಗಳು, ಬನಿಯನ್ನುಗಳು, ಕೊರಳಿನ ಪಟ್ಟಿಗಳು, ಚಿತ್ರದ ಪಟ್ಟಿಗಳು ಮೊದಲಾದ ಪದಾರ್ಥಗಳನ್ನು ಮಾಡುವುದನ್ನು ಹೆಂಗುಸರೂ ಗಂಡುಸರೂ ಬಾಲಕ ಬಾಲಿಕೆಯರೂ ಕಲಿತುಕೊಂಡು ತಕ್ಕಮಟ್ಟಿಗೆ ತಮ್ಮ ಜೀವನನಿರ್ವಾಹ ಮಾಡಿಕೊಳ್ಳಲನುಕೂಲಿಸುವಂತೆ ನಮ್ಮ ಸಂಪದಭ್ಯುದಯ ಸಮಾಜದವರು ಸದ್ಯದಲ್ಲಿ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಪಾಠಶಾಲೆಗಳನ್ನೇರ್ಪಡಿಸಿರುವರು. ಮತ್ತೂ ಇವುಗಳುಪಯೋಗವನ್ನು ತಿಳಿದು ಸಂಸ್ಥಾನದ ಉಳಿದ ಕಡೆಗಳಲ್ಲೂ ಏರ್ಪಡಿಸಬೇಕೆಂದಿರುವರೆಂದು ತಿಳಿಯಬರುತ್ತದೆ. ಈ ವರ್ಷ ನಡೆದ ವಸ್ತುಪ್ರದರ್ಶನಕ್ಕೆ ಈ ಕೈಗಾರಿಕೆಯ ಪಾಠಶಾಲೆಗಳಲ್ಲಿ ಮಾಡಲ್ಪಟ್ಟ ಪದಾರ್ಥಗಳು ವಿಶೇಷವಾಗಿ ಕಳುಹಲ್ಪಟ್ಟಿದ್ದುವು. ಮತ್ತು ಇವುಗಳಲ್ಲಿ ಕೆಲ ಶ್ಲಾಘನೀಯವಾಗಿದ್ದ ಪದಾರ್ಥಗಳಿಗೆ ಉತ್ಕೃಷ್ಟವಾದ ಮೊದಲನೆಯ ತರಗತಿಯ ಬಹುಮಾನಗಳು ಕೊಡಲ್ಪಟ್ಟುವು.

ಬೆಂಗಳೂರಲ್ಲಿರುವ ಈ ಕೈಗಾರಿಕೆಯ ಪಾಠಶಾಲೆಗಳ ಸೂಪರಿಂಟೆಂಡೆಂಟರಾಗಿದ್ದ ಮ|| ಸುಬ್ಬಸಾಮಯ್ಯರ್ ರವರು ಉದ್ಯೋಗದಿಂದ ನಿವೃತ್ತರಾದ ಪ್ರಯುಕ್ತ ಅವರ ಸ್ಥಾನಕ್ಕೆ ತುಮಕೂರಿನಲ್ಲಿ ದೊಡ್ಡ ಪಾಪನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು ಸರ್ಕಾರದವರ ಪ್ರೋತ್ಸಾಹದಿಂದ ಜಪಾನಿಗೆ ಹೋಗಿ ಸೀಸದಕಡ್ಡಿ ಮೊದಲಾದುವುಗಳನ್ನು ಮಾಡುವುದನ್ನು ಕಲಿತುಕೊಂಡು ಬಂದಿರುವ ಮ|| ಚಿನ್ನಪ್ಪನವರು ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ವರ್ತಕತನದಲ್ಲಿದ್ದು ಜಪಾನಿಗೆ ಹೋಗಿ ಅಲ್ಲಿನ ಕೈಗಾರಿಕೆಗಳನ್ನು ಸ್ವತಃ ನೋಡಿ ತಿಳಿದು ಅನುಭವ ಮಾಡಿಕೊಂಡು ಬಂದಿರುವರಾದುದರಿಂದ ಇವರ ಮೇಲ್ವಿಚಾರಣೆಯಲ್ಲಿ ಮನೆಯ ಕೈಗಾರಿಕೆಗಳ ನಿರ್ಮಾಣವು ಅಭಿವೃದ್ಧಿಗೆ ಬಂದು ಇವರನ್ನು ನಿಯಮಿಸಿದ ಸರ್ಕಾರದವರ ನಿರೀಕ್ಷಣೆಯನ್ನು ಇವರು ಸಾರ್ಥಕಪಡಿಸುವವರಾಗಲೆಂದಿಚ್ಛಿಸುತ್ತೇವೆ.

ಇದೇ ರೀತಿಯಲ್ಲಿ ರಾಜಧಾನಿಯಲ್ಲಿರುವ ಮನೆಕೈಗಾರಿಕೆ ಪಾಠಶಾಲೆಗಳ ಮೇಲ್ವಿಚಾರಣೆಗಾಗಿ ಒಬ್ಬ ಸೂಪರಿಂಟೆಂಡೆಂಟರನ್ನು ನಿಯಮಿಸಲು ಸಂಪದಭ್ಯುದಯ ಸಮಾಜದವರು ನಿರ್ಧರಿಸಿರುವುದಾಗಿಯೂ, ಈ ಉದ್ಯೋಗವನ್ನು ಪಡೆಯಲು ಕೆಲ ಜನರು ಪ್ರಯತ್ನಿಸಿರುವುದಾಗಿಯೂ ತಿಳಿಯಬರುತ್ತದೆ. ಇವರಲ್ಲಿ ಮ|| ಶ್ರೀನಿವಾಸಾಚಾರ್ಯ ಎಂಬುವರೊಬ್ಬರಾಗಿರುತ್ತಾರೆ. ಇವರು ಅರ್ಕಶಾಲೆ ಜಾತಿಯವರಾಗಿರುವರಲ್ಲದೆ ಜಪಾನಿಗೆ ಹೋಗಿ ೩-೪ ವರ್ಷಗಳವರೆಗೆ ಅಲ್ಲಿದ್ದು ಕೈಗಾರಿಕೆಗಳ ವಿಷಯಾನುಭವವನ್ನು ಚೆನ್ನಾಗಿ ಮಾಡಿಕೊಂಡು ಬಂದಿರುವರೆಂದು ಕೇಳುತ್ತೇವೆ. ಈ ಜಾತಿಯ ಜನರಲ್ಲಿ ವಿದ್ಯಾವಂತರು ಬಹಳ ಕಡಿಮೆ. ಮತ್ತೂ ಹೀಗೆ ಅನ್ಯದೇಶಕ್ಕೆ ಹೋಗಿ ಕೈಗಾರಿಕೆಯನ್ನು ಕಲಿತು ಬಂದಿರುವವರಲ್ಲಿ ಇವರೇ ಮೊದಲನೆಯವರು. ಅಲ್ಲದೆ ಈ ಜನರು ನಮ್ಮ ಸೀಮೆಯ ಸರ್ಕಾರಿಯುದ್ಯೋಗದಲ್ಲಿ ಇಲ್ಲವೆಂತಲೇ ಹೇಳಬಹುದು. ಆದುಕಾರಣ ಕೈಗಾರಿಕೆಯ ಕೌಶಲ್ಯದಲ್ಲಿ ಹೆಸರ್ವಡೆದಿರುವ ಕುಲಕ್ಕೆ ಸೇರಿದವರಾಗಿಯೂ, ಜಪಾನಿಗೆ ಹೋಗಿ ವಿಶೇಷಾನುಭವವನ್ನು ಮಾಡಿಕೊಂಡು ಬಂದವರಾಗಿಯೂ, ಇಂಗ್ಲೀಷ್ ಭಾಷೆಯನ್ನು ಬಲ್ಲವರಾಗಿಯೂ ಇರುವ ಈ ಆಚಾರರನ್ನೇ ರಾಜಧಾನಿಯ ಮನೆ ಕೈಗಾರಿಕೆಯ ಪಾಠಶಾಲೆಗಳ ಸೂಪರಿಂಟೆಂಡೆಂಟರನ್ನಾಗಿ ನಿಯಮಿಸಿದಲ್ಲಿ ಅವು ಒಳ್ಳೆಯಭಿವೃದ್ಧಿಸ್ಥಿತಿಗೆ ಬಂದು ಸಂಪದಭ್ಯುದಯ ಸಮಾಜದವರ ಉದ್ದೇಶವು ಸಾರ್ಥಕವಾಗುವುದೆನ್ನುವುದರಲ್ಲಿ ಸಂದೇಹವಿಲ್ಲವು. ಹಾಗಲ್ಲದೆ ದಾಕ್ಷಿಣ್ಯಕ್ಕೆ ಬದ್ಧರಾಗಿ ಅನರ್ಹರಾದವರನ್ನು ನಿಯಮಿಸುವುದಾದರೆ ತಮ್ಮುದ್ದೇಶಕ್ಕೆ ಭಂಗವನ್ನುಂಟುಮಾಡಿದಂತಾಗುವುದಲ್ಲದೆ ಹಿಂದುಳಿದ ಜನರು ಮುಂದಕ್ಕೆ ಬರಲು ಅವಕಾಶವಿಲ್ಲದಂತಾಗಿ ಅವರು ನಿರಾಶರಾಗಲು ಕಾರಣವಾಗುತ್ತದೆ. ಈ ವಿಚಾರವನ್ನು ಸಮಾಜದವರು ಚೆನ್ನಾಗಿ ಪರಾಮರ್ಶಿಸಿ ಅರ್ಹರಾದವರಿಗೆ ಪ್ರೋತ್ಸಾಹವನ್ನು ಕೊಡದೆ ಇರಲಾರರೆಂದು ನಿರೀಕ್ಷಿಸುತ್ತೇವೆ.

ಯುದ್ಧವಾರ್ತೆಯು.

ಪಶ್ಚಿಮರಂಗ.—ಈ ರಂಗದಲ್ಲಿ ಮಿತ್ರಮಂಡಲಿಯವರಿಗೇ ಅನುಕೂಲವಾಗಿದೆ. ಜರ್ಮನರು ತಮ್ಮ ಸ್ಥಲಗಳನ್ನು ಬಿಡುತ್ತಲೇ ಇದ್ದಾರೆ. ಅವರಿಗೆ ಆತ್ಮರಕ್ಷಣೆಯೇ ದುರ್ಭರವಾಗಿದೆ. ಹಿಂಡನ್ ಬರ್ಗರ ಪಙ್ತ್ತಿಯಲ್ಲಿ ೨೦ ಮೈಲಿಯಗಲಕ್ಕೆ ಕನ್ನ ಬಿದ್ದು ಅವರ ಸೇನಾಪಙ್ತ್ತಿಯ ಬಲವು ಶಿಥಿಲವಾಯಿತು. ಬಹು ಸುರಕ್ಷಿತವಾಗಿದ್ದ ಷೆಮಿನ್‌ಡೇಸ್‌ಡೆಮಿನ್‌ಡೆಸ್ ಎಂಬ ಗುಡ್ಡವನ್ನು ಫ್ರೆಂಚರು ವಶಪಡಿಸಿಕೊಂಡುಬಿಟ್ಟರು. ಇದಕ್ಕಾಗಿ ಅವರು ಕಳೆದ ಏಪ್ರಿಲ್ ತಿಂಗಳಿಂದಲೂ ಹೋರಾಡುತ್ತಿದ್ದರು. ವರ್ಡನ್ ಯುದ್ಧಕ್ಕಿಂತಲೂ ಬಲವಾಗಿಯೇ ಈ ಯುದ್ಧವು ನಡೆದಿತು. ಕಳೆದ ಅಕ್ಟೋಬರ್ ತಾ|| ೨೩ ರಿಂದ ಈಚೆಗೆ ೧೦ ದಿನಗಳ ಕಾಲದಲ್ಲಿ ಫ್ರೆಂಚರು ಜರ್ಮನರ ಕಡೆಯ ೨೦೦ ದೊಡ್ಡ ಫಿರಂಗಿಗಳನ್ನೂ, ೨೨೨ ಕಂದಕಫಿರಂಗಿಗಳನ್ನೂ, ೭೨೦ ಯಂತ್ರದ ಫಿರಂಗಿಗಳನ್ನೂ ವಶಪಡಿಸಿಕೊಂಡಿದ್ದಾರೆ. ಪ್ಲಾಂಡರ್ಸಿನಲ್ಲಿ ಇಂಗ್ಲೀಷರು ಮುಂದಕ್ಕೆ ಸಾಗುತ್ತಲೇ ಇದ್ದಾರೆ. ಅಮೇರಿಕನ್ ಸೈನ್ಯವು ಈ ರಂಗಕ್ಕೆ ಬಂದು ಈಗ ಶತ್ರುಗಳಮೇಲೆ ಕಾದಾಡುತ್ತಲಿದೆ.

ಇಟಲಿರಂಗ.—ಇಟಲಿಯವರು ಕಳೆದ ೨|| ವರ್ಷಗಳಿಂದಲೂ ಬಹಳ ಬಲವಾಗಿ ಆಸ್ಟ್ರಿಯಾದವರಮೇಲೆ ಯುದ್ಧ ಮಾಡುತ್ತ ಆಸ್ಟ್ರಿಯಾದಲ್ಲಿ ಕೆಲವು ಭಾಗಗಳನ್ನೂ ವಶಪಡಿಸಿಕೊಂಡಿದ್ದರು. ತಮ್ಮ ಕೈಯೇ ಹಿಂದಾಗುತ್ತ ಬಂದಿದ್ದುದರಿಂದ ಆಸ್ಟ್ರಿಯನ್ನರು ಮಿತ್ರಮಂಡಲಿಯವರೊಡನೆ ಪ್ರತ್ಯೇಕ ಸಂಧಿಮಾಡಿಕೊಳ್ಳುವರೆಂಬ ಸುದ್ದಿಯು ಹುಟ್ಟಿದ್ದಿತು. ಇದರಿಂದ ಕಾರ್ಯವು ಕೆಟ್ಟುಹೋದೀತೆಂದು ಯೋಚಿಸಿ, ಜರ್ಮನರು ರಿಗಾ ರಂಗದಲ್ಲಿದ್ದ ತಮ್ಮ ಸೈನ್ಯದಲ್ಲಿ ಅನೇಕ ಭಾಗವನ್ನು ತಂದು ಆಸ್ಟ್ರಿಯನ್ನರ ಸಹಾಯಕ್ಕೆ ಕೊಟ್ಟು ಜನರಲ್ ಮೆಕನ್ ಸೇನನ ದಳವಾಯಿತನದಿಂದ ಇಟಲಿಯವರಮೇಲೆ ನುಗ್ಗಿಸಿದರು. ಆ ಸೈನ್ಯವು ಇಟಲಿಯವರ ಸೈನ್ಯಕ್ಕೆ ೨೦ ರಷ್ಟು ಹೆಚ್ಚಾಗಿಯೂ, ಅವರ ಫಿರಂಗಿಗಳು ಇಟಲಿ ಫಿರಂಗಿಗಳಿಗೆ ೧ ಕ್ಕೆ ೧೦ ರಷ್ಟೂ ಮಿಗಿಲಾಗಿದ್ದುವು. ಇಂಥ ಮಹಾಸೈನ್ಯವು ಇಟಲಿ ಸೈನ್ಯಪಙ್ತ್ತಿಯ ಮುಂಗಡೆಯಲ್ಲಿದ್ದ ಮಹಾ ಪರ್ವತಶ್ರೇಣಿಯ ಮಗ್ಗುಲಲ್ಲಿ ಬಂದು ಸೇರಿ, ಆಕಸ್ಮಾತ್ತಾಗಿ ಇಟಲಿಯವರ ಸೈನ್ಯವು ಕಡಿಮೆಯಾಗಿದ್ದ ಸ್ಥಲದಮೇಲೆ ಬಿದ್ದು ಸೇನಾಪಙ್ತ್ತಿಯನ್ನು ಭೇದಿಸಿ ನುಗ್ಗಿದುದರಿಂದ ಇಟಲಿಯವರು ಬಹಳ ನಷ್ಟಪಟ್ಟು, ತಾವು ಇದುವರೆಗೆ ಹಿಡಿದುಕೊಂಡಿದ್ದ ಆಸ್ಟ್ರಿಯಾ ದೇಶಭಾಗವನ್ನೆಲ್ಲಾ ಬಿಟ್ಟುಬಿಟ್ಟು ಸ್ವದೇಶಕ್ಕೆ ಓಡಿಬಂದು ಸೇರಿಕೊಂಡರು. ಬರುವಾಗ್ಗೆ ಉದ್ದಕ್ಕೂ ಶತ್ರುಗಳೊಡನೆ ಯುದ್ಧಮಾಡುತ್ತಲೂ, ಸಾಗಿಸಲು ಅಸಾಧ್ಯವಾದ ಸಾಮಗ್ರಿಗಳನ್ನೆಲ್ಲಾ ಶತ್ರುಗಳಕೈಗೆ ಸಿಕ್ಕಗೊಡದಂತೆ ಧ್ವಂಸಮಾಡುತ್ತಲೂ ನದೀಸೇತುಗಳನ್ನು ಹಾಳ್ಮಾಡುತ್ತಲೂ ಬಂದರು. ಹೀಗೆ ಅವರು ತಮ್ಮ ೧೦ ಲಕ್ಷ ಸೈನ್ಯವನ್ನು ಬಹಳ ಜಾಣ್ಮೆಯಿಂದ ೪೦ ಮೈಲಿಗಳದೂರ ಹಿಂದಕ್ಕೆ ಸಾಗಿಸಿಕೊಂಡು ಹೋಗಿ ಟಾಗ್ಲಿಮೆಂಟೋ ನದಿಯ ಪಶ್ಚಿಮತೀರದಲ್ಲಿ ಸುರಕ್ಷಿತವಾದ ಸ್ಥಾನಗಳಿಗೆ ಸೇರಿ ಅಲ್ಲಿ ಯುದ್ಧ ಕೊಡುವುದಕ್ಕೆ ಸಿದ್ಧರಾಗಿದ್ದರು. ಜರ್ಮನರು ಈಗ ಆ ನದಿಯನ್ನೂ ದಾಟಿಹೋಗಿ ಇಟಲಿಯವರ ಮೇಲೆ ಯುದ್ಧಮಾಡುತ್ತಿರುವರು. ಪ್ರಸಿದ್ಧವಾದ ಆಲಪ್ಸ್ ಪರ್ವತಗಳಿಂದ ಒಳಕ್ಕೆ ನುಗ್ಗಿಹೋಗುವುದು ಶತ್ರುಗಳಿಗೆ ಅಸಾಧ್ಯವೆಂದು ಎಣಿಸಲ್ಪಡುತ್ತಿದೆ. ಈಗ ಅಲ್ಲಿ ಭೀಕರ ಯುದ್ಧವು ನಡೆಯುತ್ತಿದೆ. ಇಷ್ಟರೊಳಗೇ ಇಟಲಿಯಲ್ಲಿ ಕೆಲ ಭಾಗವೆಲ್ಲಾ ಶತ್ರುವಶವಾಗಿಹೋಗಿದೆ. ಮುಂದೆ ಏನಾಗುವುದೋ ನೋಡಬೇಕು. ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಇಟಲಿಯವರ ಸಹಾಯಕ್ಕೆ ಹೋಗಿಯೂ ಹೋಗುತ್ತಲೂ ಇವೆ. ಇಂಗ್ಲೀಷ್ ಮುಖ್ಯಮಂತ್ರಿ ಲಾಯಿಡ್ ಜಾರ್ಜರೂ, ಸ್ಮಟ್ಸ್‌ರವರು ಮೊದಲಾದ ಆಂಗ್ಲ ಪ್ರಮುಖರೂ ಫ್ರೆಂಚ್ ಮಂತ್ರಿಮಂಡಲದವರೂ ಸಹ ಇಟಲಿಗೆ ಹೋಗಿರುತ್ತಾರೆ. ಆದ್ರಿಯಾಟಿಕ್ ಸಮುದ್ರದಲ್ಲಿ ಜಲಮಾರ್ಗದ ಮೇಲೆ ಯುದ್ಧವನ್ನಾರಂಭಿಸಿ ಶತ್ರುಗಳಿಗೆ ಹಾನಿಯನ್ನುಂಟುಮಾಡಬೇಕೆಂದು ಮಿತ್ರಮಂಡಲಿಯವರು ಸಂಕಲ್ಪಿಸಿದ್ದಾರೆ. ಈಗಾಗಲೇ ಇಟಲಿ ನೌಕಾದಳವು ಹೊರಟು ಆಸ್ಟ್ರಿಯನ್ನರಿಗೆ ಸೇರಿದ ಗ್ರೇಡೋನನ್ನೂ ಅಲ್ಲಿಯ ವಿಸ್ತಾರವಾದ ಸಮುದ್ರಶಾಖೆಯನ್ನೂ ವಶಪಡಿಸಿಕೊಂಡಿತು. ಆ ದಳವು ಈಗ ಟ್ರೀಸ್ಟ್ ಸಮುದ್ರಶಾಖೆಯನ್ನೆಲ್ಲಾ ಕಾಪಾಡುತ್ತಿದೆ.

ತುರ್ಕಿ.—ಪಾಲಸ್ತೈನಿನಲ್ಲಿ ಕಳೆದವಾರ ಅನುಕೂಲವಾದ ವಿಜಯವೊಂದು ಪ್ರಾಪ್ತವಾಗಿದೆ. ಇಲ್ಲಿಯ ಸಮುದ್ರತೀರಕ್ಕೆ ಆತುಕೊಂಡು ಗಾಜಾ ಎಂಬ ಸ್ಥಲವಿರುತ್ತದೆ. ಇದು ತುರ್ಕಿಯವರಿಗೆ ಸೇರಿದುದು. ಇದನ್ನು ಬಲಪಡಿಸಿಕೊಂಡು ಸಬ್‌ಮೆರೀನುಗಳಿಗೆ ಆಶ್ರಯಸ್ಥಾನವನ್ನಾಗಿ ಮಾಡಿಕೊಂಡು ಮಧ್ಯಧರಾ ಸಮುದ್ರದಲ್ಲಿ ತಿರುಗುವ ಮಿತ್ರಮಂಡಲಿ ಹಡಗುಗಳಿಗೆ ಜಲಸಮಾಧಿಗಾಣಿಸಿ, ಸೂಯೇಜ್ ಕಾಲ್ವೆಯಮೂಲಕ ಭರತಖಂಡಕ್ಕೆ ಹಡಗುಗಳ ಪ್ರಯಾಣವೇ ನಡೆಯದಂತೆ ಮಾಡಬೇಕೆಂಬುದು ಶತ್ರುಗಳ ಸಂಕಲ್ಪವಾಗಿದೆ. ಅದುಕಾರಣ ಈ ಗಾಜಾ ಎಂಬ ತೀರಪಟ್ಟಣವನ್ನೆ ಹಿಡಿದುಕೊಂಡು ಶತ್ರುಗಳ ಸಂಕಲ್ಪಕ್ಕೆ ಮಣ್ಣುಗೂಡಿಸಬೇಕೆಂಬುದು ಇಂಗ್ಲೀಷರ ಸಂಕಲ್ಪವಾಗಿದೆ. ಇಲ್ಲಿ ನೌಕಾಶ್ರಯ ಮೊದಲಾದುವುಗಳನ್ನು ಬಲಪಡಿಸಿಕೊಳ್ಳದಂತೆ ನಮ್ಮವರು ಪದೇ ಪದೇ ತುರುಕರಿಗೆ ಪ್ರತಿಬಂಧಕವನ್ನು ಮಾಡುತ್ತಲೇ ಬಂದಿದ್ದಾರೆ. ಗಾಜಾ ಪಟ್ಟಣವು ಒಂದು ಕೊನೆಯಲ್ಲಿದ್ದರೆ ಅದರ ಇದಿರಿಗೆ ಮತ್ತೊಂದು ಕೊನೆಯಲ್ಲಿ ಬೀರ್ಷೆಬಾ ಪಟ್ಟಣವಿದೆ. ಇಂಗ್ಲೀಷರು ಕಳೆದ ತಾ|| ೧ ರಲ್ಲಿ ತುರುಕರಮೇಲೆ ಯುದ್ಧಮಾಡಿ ಸೋಲಿಸಿ, ಆ ಪಟ್ಟಣವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡರು. ಅಲ್ಲದೆ ೨೦೭ ಮಂದಿ ಸೈನಿಕೋದ್ಯೋಗಿಗಳನ್ನೂ ೨೪೯೨ ಮಂದಿ ಸೈನಿಕರನ್ನೂ ಸೆರೆಹಿಡಿದರು. ೧೫ ಫಿರಂಗಿಗಳನ್ನೂ ವಶಪಡಿಸಿಕೊಂಡರು. ಅಲ್ಲದೆ ಸ್ವಭಾವಸಿದ್ಧವಾಗಿ ದುರ್ಭೇದ್ಯವಾಗಿದ್ದ ಆ ಪಟ್ಟಣದ ರಕ್ಷಣೆಗೆ ಶತ್ರುಗಳು ಏರ್ಪಡಿಸಿದ್ದ ದುರ್ಗಗಳನ್ನೂ ಫಿರಂಗಿಗಳ ಸಾಲನ್ನೂ ಸಹ ನಮ್ಮವರು ಧ್ವಂಸಪಡಿಸಿದರು. ಬಹು ಮಂದಿ ಸೈನಿಕರನ್ನು ಕೊಂದರು. ತುರ್ಕಿಯವರಿಗೆ ಇದರಿಂದ ಬಹಳ ನಷ್ಟವಾಯಿತು. ಸಿನೇಯಿ ಮಾರ್ಗದಲ್ಲಿ ಈಜಿಪ್ಟಿನ ಮೇಲೆ ದಂಡೆತ್ತಿ ಬರುವುದಕ್ಕೆ ತುರುಕರಿಗೆ ಇದೇ ಮುಖ್ಯಮಾರ್ಗವಾಗಿದ್ದಿತು. ಪಾಲಸ್ತೈನನ್ನೂ ಮೆಸಪೊಟೋಮಿಯಾವನ್ನೂ ಹಿಡಿದುಕೊಳ್ಳುವುದಕ್ಕೆ ಜರ್ಮನರ ಫಾಲ್ಕನ್‌ಹೇನನು ಬರುತ್ತಿರುವನೆಂಬ ಸುದ್ದಿ ಹುಟ್ಟಿರುವುದರಲ್ಲಿಯೇ ಇಂಥ ಮುಖ್ಯಸ್ಥಾನವು ನಮ್ಮವರ ವಶವಾದುದು ಇವರಿಗೆ ಬಹಳ ಅನುಕೂಲವಾದಂತಾಯಿತು. ಗಾಜಾದ ಪರ್ಯವಸಾನವೂ ಸ್ವಲ್ಪ ಕಾಲದಲ್ಲಿ ಹೀಗೇ ಆದೀತೆಂಬ ನಿರೀಕ್ಷಣೆಯಿದೆ. ಈಗ ಇಂಗ್ಲೀಷರ ಕಡೆಯ ಸೈನ್ಯವು ಗಾಜಾದಮೇಲೆ ಯುದ್ಧಮಾಡುತ್ತ ಸುತ್ತಣ ಕೆಲವು ರಕ್ಷಣಸ್ಥಾನವನ್ನು ಹಿಡಿದುಕೊಂಡಿವೆ. ಚಿಕ್ಕ ರವ್ವಾದಲ್ಲಿ ಕಪ್ಪು ಸಮುದ್ರದ ಹತ್ತಿರವಿರುವ ತುರ್ಕಿ ಸೈನ್ಯದಮೇಲೆ ರಷ್ಯನ್ ಸೈನ್ಯಗಳು ಬಿದ್ದು, ಶತ್ರುಗಳ ಮೊದಲನೆ ಸಾಲಿನ ಕಂದಕಗಳೆಲ್ಲವನ್ನೂ ಹಿಡಿದು ೨ನೆ ಪಙ್ತ್ತಿಯ ಕೆಲ ಕಂದಕಗಳನ್ನೂ ಹಿಡಿದುಕೊಂಡವು. ಶತ್ರುಗಳ ಬಹಳ ಯುದ್ಧಸಾಮಗ್ರಿಗಳೂ ಕೂಡ ಸಿಕ್ಕಿದುವು.

ಕೈಗಾರಿಕೆ ಮತ್ತು ವಾಣಿಜ್ಯ ಕಮಿಟಿ.—ಮನೆಯ ಕೈಗಾರಿಕೆಗಳನ್ನೂ ಮತ್ತು ಚಿಲ್ಲರೆ ಕೈಗಾರಿಕೆಗಳನ್ನೂ ಸಾಲಗಳನ್ನು ಕೊಡುವುದರಮೂಲಕ ಅಭಿವೃದ್ಧಿ ಪಡಿಸುವುದಕ್ಕೂ, ವ್ಯಾಪಾರ ವಸ್ತುಪ್ರದರ್ಶನಶಾಲೆಯನ್ನು ಒಂದು ಮಧ್ಯರಂಗಸ್ಥಳದಲ್ಲಿ ಸ್ಥಾಪಿಸುವುದಕ್ಕೂ ಸಹ ಕಮಿಟಿಯವರು ಕೊಟ್ಟ ಸಲಹೆಗಳು ಮಂಜೂರಾಗಿವೆ. ವರ್ತಕರು ಮತ್ತು ಆಫೀಸರುಗಳ ಕೆಲವರನ್ನು ಜಪಾನ್ ದೇಶದ ಕೈಗಾರಿಕೆಗಳನ್ನೂ ಮತ್ತು ವ್ಯಾಪಾರವನ್ನೂ ತಿಳಿದುಕೊಂಡು ಬರುವುದಕ್ಕಾಗಿ ಆ ದೇಶಕ್ಕೆ ಕಳುಹಿಸಿತು.

ಈ ವರ್ಷದಲ್ಲಿ ಮೈಸೂರು ಚೇಂಬರ್ ಆಫ್ ಕಾಮರ್ಸ್ ಎಂಬ ವರ್ತಕರ ಸಂಘವು ಕೆಲಸವನ್ನು ಆರಂಭಿಸಿತು. ತುಮಕೂರು, ದಾವಣಗೆರೆ, ಚಿಕ್ಕಮಗಳೂರು ಮತ್ತು ತಿಪಟೂರಿನಲ್ಲಿ ಸಬ್ ಕಮಿಟಿಗಳನ್ನು ಏರ್ಪಡಿಸಲಾಗಿದೆ.

ಸ್ಪೆಷಲ್ ಏರ್ಪಾಡುಗಳು.

ಗ್ರಾಮಾಭಿವೃದ್ಧಿಯ ಏರ್ಪಾಡು.—ಗ್ರಾಮಾಭಿವೃದ್ಧಿಯ ಏರ್ಪಾಡು 1914 ನೆ ಇಸವಿಯಲ್ಲಿ ಜಾರಿಗೆ ಬಂದಲಾಗಾಯಿತು ವರ್ಷವರ್ಷವೂ ಕ್ರಮವಾಗಿ ತಪ್ಪದೆ ಅಭಿವೃದ್ಧಿಯನ್ನೈದುತ್ತಿದೆ. 1916-17 ನೆ ವರ್ಷದಲ್ಲಿ ಗ್ರಾಮಕಮಿಟಿಗಳ ಸಂಖ್ಯೆಯು 8,171 ರಿಂದ 8,661 ಕ್ಕೂ ಅದರಿಂದ ಪ್ರಯೋಜನವನ್ನು ಹೊಂದುವ ಜನರ ಸಂಖ್ಯೆಯು 45,14,244 ರಿಂದ 46,50,570 ಕ್ಕೂ ಹೆಚ್ಚಿತು. ಈಗ 15,127 ಗ್ರಾಮಗಳಲ್ಲಿ ಕಮಿಟಿಗಳು ಏರ್ಪಟ್ಟಿರುತ್ತವೆ. 1,162 ಗ್ರಾಮಗಳು ಮಾತ್ರ ಈ ಏರ್ಪಾಡಿಗೆ ಒಳಪಟ್ಟಿರುವುದಿಲ್ಲ. ಶೇಕಡಾ 50 ಕ್ಕಿಂತ ಜಾಸ್ತಿಯಾಗಿ ಕಮಿಟಿಗಳು ವಾರಗಟ್ಟಿ ಕೆಲಸಮಾಡಿ ಜನೋಪಯುಕ್ತವಾದ ಕೆಲಸಗಳನ್ನು ನಡಿಸಿದವು. 4,194 ಕಮಿಟಿಗಳು ಗ್ರಾಮಪುಸ್ತಕಾಲಯಗಳನ್ನು ಇಟ್ಟಿದ್ದವು, ಅಥವಾ ವೃತ್ತಾಂತಪತ್ರಿಕೆಗಳಿಗೆ ಚಂದಾವನ್ನು ಕೊಡುತ್ತಿದ್ದವು. ಸರ್ಕಾರದ ದ್ರವ್ಯಸಹಾಯದಿಂದ ನಡಿಸಲ್ಪಟ್ಟ ಕಾಂಗಾರಿಗಳ ಕಿಮ್ಮತ್ತು 1,24,553 ರೂಪಾಯಿಗಳು ಗ್ರಾಮಸ್ಥರ ಖರ್ಚಿನಿಂದಲೇ ನಡಿಸಲ್ಪಟ್ಟ ಕಾಂಗಾರಿಗಳ ಕಿಮ್ಮತ್ತು 3,07,129 ರೂಪಾಯಿಗಳು ಆಗಿರುತ್ತೆ. ಪ್ರಸಕ್ತ ವರ್ಷದಲ್ಲಿ 2,441 ಮೈಲಿಗಳ ಬಂಡಿ ಜಾಡುಗಳು ಉತ್ತಮಸ್ಥಿತಿಗೆ ತರಲ್ಪಟ್ಟವು. ಗ್ರಾಮಸಮುದಾಯದ ಪ್ರಯೋಜನಾರ್ಥವಾದ ಫಂಡಿಗಾಗಿ 31,923 ರೂಪಾಯಿ ಜಮಾಯಿಸಲ್ಪಟ್ಟಿತು. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಗ್ರಾಮಾಭಿವೃದ್ಧಿ ಏರ್ಪಾಡಿಗೆ ಸೇರದೆ ಇರುವ ಗ್ರಾಮಗಳು 6 ಮಾತ್ರ ಇರುವುದರಿಂದ, ಆ ಡಿಸ್ಟ್ರಿಕ್ಟಿನಲ್ಲಿ ಈ ಏರ್ಪಾಡಿನಿಂದ ಅಭಿವೃದ್ಧಿಯು ಚೆನ್ನಾಗಿ ನಡೆದಿರುತ್ತದೆ. ಕೋಲಾರ, ಬೆಂಗಳೂರು, ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಕಮಿಟಿಗಳವರು ಶ್ರೀಮನ್ ಮಹಾರಾಜರವರ ವರ್ಷವರ್ಧಂತಿಯದಿನ ಬಹಳವಾಗಿ ಗಿಡಗಳನ್ನು ನಾಟುವ ಕೆಲಸವನ್ನು ಕೈಗೊಂಡರು. ಮೇಲೆ ನಮೂದಿಸಿರುವ ಸಂಖ್ಯೆಗಳು ಡಿಸ್ಟ್ರಿಕ್ಟು ರಿಪೋರ್ಟುಗಳ ಆಧಾರದಮೇಲೆ ಕೊಟ್ಟವುಗಳಾಗಿರುತ್ತವೆ. ಆದರೆ ಇವುಗಳಲ್ಲಿ ಕೆಲವು ತಪ್ಪುಗಳಿಗೂ ಅತಿಶಯೋಕ್ತಿಗೂ ಅವಕಾಶವಿರುತ್ತೆಂದು ಇಟ್ಟುಕೊಂಡಾಗ್ಯೂ, ಕೂಡ ನಡೆದಿರುವ ಕೆಲಸವು ತೃಪ್ತಿಕರವಾದದ್ದೆಂದು ಹೇಳಲು ಯಾವ ಸಂಶಯವೂ ಇರುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಜನೋಪಕಾರದ ಅಭಿಲಾಷೆಯು ಹೆಚ್ಚುತ್ತಾ ಇರುತ್ತೆಂಬುವುದಕ್ಕೆ ಇದು ನಿದರ್ಶನವಾಗಿರುತ್ತದೆ.

ಗ್ರಾಮಾಭಿವೃದ್ಧಿಯ ಏರ್ಪಾಡು ಈಗ ಒಂದು ಹೊಸ ವಿಧಾನವನ್ನು ಅವಲಂಬಿಸುವುದರಲ್ಲಿ ಇದೆ. ಇದುವರೆಗೂ ಗ್ರಾಮಸ್ಥರ ಸೌಮನಸ್ಯ ಮತ್ತು ಸಮ್ಮತಿಯಮೇಲೆ ಮಾತ್ರ ಕಮಿಟಿಯವರು ತಮ್ಮ ಕೆಲಸಗಳನ್ನು ನಡೆಸಿರುತ್ತಾರೆ. ಇನ್ನು ಮುಂದೆ ಗ್ರಾಮಕಮಿಟಿಗಳು, ಶೀಘ್ರದಲ್ಲಿಯೇ ಕಾನೂನಾಗಿ ಮಾಡಲ್ಪಡುವ ಲೋಕಲ್ ಬೋರ್ಡು ಮತ್ತು ಗ್ರಾಮಪಂಚಾಯಿತರ ರೆಗ್ಯುಲೇಷನ್ ಪ್ರಕಾರ ನಿಶ್ಚಯವಾಗಿ ಅಧಿಕಾರಗಳುಳ್ಳ, ಮತ್ತು ಗ್ರಾಮದಲ್ಲಿಯೇ ವಿಧಿಸಲ್ಪಡುವ ಸೆಸ್ಸೂ ಸೇರಿ ಗೊತ್ತಾದ ಹುಟ್ಟುವಳಿಯ ಬಾಬುಗಳುಳ್ಳ, ಕಾನೂನಿಗೆ ಸಂಬಂಧಪಟ್ಟ ಸಂಘಗಳಾಗಿ ಏರ್ಪಡುವುವು. ಸೆಸ್ಸನ್ನು ಕೊಡುವುದಕ್ಕೆ ಬದಲಾಗಿ ವರ್ಷಕ್ಕೆ 36 ಅರ್ಧ ದಿನಗಳಿಗೆ ಮೀರದಷ್ಟು ಕಾಲ ಕೆಲಸಮಾಡುವಂತೆ ನಿರ್ಬಂಧಮಾಡಲು ಗ್ರಾಮಪಂಚಾಯಿತರಿಗೆ ಅಧಿಕಾರವನ್ನು ಕೊಟ್ಟಿರುವುದೇ ಈ ಕಾನೂನಿನಲ್ಲಿರುವ ಒಂದು ಸ್ವಾರಸ್ಯವಾದ ಅಂಶವಾಗಿದೆ.

ಅನುಪೂರ್ವಿಯಾದ ಅಭಿವೃದ್ಧಿಕ್ರಮ.

ಈಗ ಕೆಲವು ವರ್ಷಗಳಿಂದ ಯಥಾಶಕ್ತಿಯಾಗಿ ಅನೇಕ ಬದಲಾವಣೆಗಳನ್ನೂ ಅಭಿವೃದ್ಧಿ ಕಾರ್ಯಗಳನ್ನೂ ಮಿತವಾದ ರೀತಿಯಲ್ಲಿ ಸಾಧಿಸಲು ಪ್ರಯತ್ನಪಟ್ಟಿರುವೆವು. ಅಂಥಾ ಸಲಹೆಗಳು ಸ್ವಲ್ಪಸ್ವಲ್ಪ ಭಾಗಗಳಾಗಿ ಕಂಡುಬಂದರೂ, ಅವೆಲ್ಲವೂ ಅನುಪೂರ್ವಿಯಾದ ಒಂದು ಅಭಿವೃದ್ಧಿ ಏರ್ಪಾಡಿನ ಭಾಗಗಳೇ ಆಗಿವೆ.

ಕಳೆದ ವರ್ಷದ ಉಪನ್ಯಾಸದಲ್ಲಿ ವಿವರಿಸಿರುವಂತೆ ಸಂಸ್ಥಾನದಲ್ಲಿ ನಡೆಯುವ ಎಲ್ಲಾ ವಿಧವಾದ ಕಾರ್ಯಗಳನ್ನೂ ಮೂರು ದೊಡ್ಡ ಬಾಬುಗಳಾಗಿ ವಿಂಗಡಿಸಬಹುದಾಗಿದೆ. ಅವು ಯಾವುವೆಂದರೆ:—

(1) ಸರಕಾರಿ ಆಡಳಿತ.
(2) ಸಂಪದಭಿವೃದ್ಧಿ.
(3) ಪೌರ ಮತ್ತು ಸಾಮಾಜಿಕ ಅಭಿವೃದ್ಧಿ.

ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಶ್ರೀಮನ್ ಮಹಾರಾಜರವರ ಸರ್ಕಾರದವರು, ಈ ಸಭೆಯ ಮತ್ತು ಇತರ ಸಮಾಜಗಳ ಅರಿಕೆಗಳ ಮತ್ತು ಸಲಹೆಗಳ ಸಹಾಯದಿಂದ ವ್ಯವಸ್ಥೆ ಮಾಡುವರು.

ಸಂಪದಭಿವೃದ್ಧಿ ಕಾರ್ಯಗಳನ್ನು ಸರ್ಕಾರಿ ಮತ್ತು ಖಾಸಗಿ ಜನಗಳಿಂದ ಕೂಡಿದ ಸಂಪದಭಿವೃದ್ಧಿ ಸಮಾಜವು ನೋಡಿಕೊಳ್ಳುತ್ತಿರುವುದು. ಈ ಸಮಾಜವು ಹೆಚ್ಚು ಹೆಚ್ಚಾಗಿ ಕಾರ್ಯಕಾರಿಯಾಗುತ್ತಾ ಬರುತ್ತಿದೆ. ಅದರಲ್ಲಿ ಬಹು ಮಂದಿ ಸರ್ಕಾರೀ ಅಧಿಕಾರಿಗಳೂ ಮತ್ತು ಸರ್ಕಾರೀ ಉದ್ಯೋಗಸ್ಥರಲ್ಲದ ದೊಡ್ಡಮನುಷ್ಯರೂ ಭಾಗಿಗಳಾಗಿ ಕೆಲಸಮಾಡುತ್ತಿರುವರು.

ಪೌರ ಮತ್ತು ಸಾಮಾಜಿಕ ಕಾರ್ಯಗಳನ್ನು ಈಚೆಗೆ ಪ್ರಾರಂಭಿಸಿರುವುದರಿಂದ ಜನರ ಅಭಿಪ್ರಾಯದಲ್ಲಿ ಅವುಗಳು ತಕ್ಕ ಪ್ರಾಮುಖ್ಯತೆಯನ್ನು ಪಡೆಯಬೇಕಾದರೆ ಹೆಚ್ಚಾದ ಪ್ರಚಾರಕಾರ್ಯವು ಅವಶ್ಯಕವಾಗಿರುವುದು. ಪ್ರಪಂಚದ ಇತರ ಭಾಗಗಳಲ್ಲಿ ಈಚೆಗೆ ನಡೆದಿರುವ ಅಭಿವೃದ್ಧಿಗಳನ್ನು ನೋಡಿದರೆ, ನಾವು ಸರಿಯಾದ ದಾರಿಯನ್ನು ಅವಲಂಬಿಸಿರುವೆವೆಂದು ಕಾಣುವುದು. ಇನ್ನು ಮುಂದೆ ಮಾಡಬೇಕಾದ ಅಭಿವೃದ್ಧಿಯು ನಮ್ಮ ದೇಶದ ಜನರು ತೋರ್ಪಡಿಸಬಹುದಾದ ಜಾಗರೂಕತೆ, ಸಾಹಸ ಮತ್ತು ಸಮಯಾನುವರ್ತನಶಕ್ತಿ-ಇವುಗಳಿಗೆ ಅನುಗುಣವಾಗಿರುವುದು.

ನೀರು ಸರಬರಾಯಿ ಕಾಮಗಾರಿಗಳನ್ನೂ, ವಿದ್ಯುಚ್ಛಕ್ತಿಯ ಕಾಂಗಾರಿಗಳನ್ನೂ, ರೈಲ್ವೆ ರಸ್ತೆಗಳನ್ನೂ ಮಾಡಿಸುವುದು, ಜಂಗಲುಗಳಿಂದಲೂ ಗಣಿಗಳಿಂದಲೂ ಆದಾಯದೆಯುಂಟಾಗುವಂತೆ ಕೆಲಸವನ್ನು ಮಾಡಿಸುವುದು, ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು—ಇವೇ ಮೊದಲಾದ ಕಾರ್ಯಗಳಮೂಲಕ ದೇಶದ ಅರ್ಥೋತ್ಪತ್ತಿಯ ಸಾಧನೆಗಳನ್ನು ಅಭಿವೃದ್ಧಿಪಡಿಸುವ ಕೆಲಸವು ಸಂದರ್ಭಗಳಿಗೆ ತಕ್ಕಹಾಗೆ ತ್ವರಿಯಾಗಿಯೂ ಮತ್ತು ಜಾಗರೂಕತೆಯಿಂದಲೂ ನಡೆಯುತ್ತಲಿದೆ. ಹೊಸ ಆಸ್ತಿಗಳು ಕಲ್ಪಿಸಲ್ಪಡುತ್ತಿವೆ. ಇವುಗಳು ಸಂಸ್ಥಾನಕ್ಕೆ ಉತ್ತರೋತ್ತರ ಹಿಂಗೆಯಿಲ್ಲದ ಹುಟ್ಟುವಳಿಯ ಬಾಬುಗಳಾಗುತ್ತವೆ. ಇದೇ ಉದ್ದೇಶದಿಂದಲೇ, ಉತ್ಪತ್ತಿಯ ಕಾರ್ಯದ ಇಲಾಖೆಗಳಿಗೂ ಸಂಪದಭಿವೃದ್ಧಿಯ ವಿಷಯಗಳನ್ನು ಪ್ರಚುರಪಡಿಸುವುದಕ್ಕೂ ಉದಾರವಾಗಿ ಖರ್ಚನ್ನು ಮಂಜೂರುಮಾಡಿದೆ.

ಹಿಂದುಳಿದ ಜನರನ್ನೂ ಚತುರ್ವರ್ಣಕ್ಕೆ ಸೇರದ ಜನರನ್ನೂ, ಎಲ್ಲರನ್ನೂ ಕೂಡಿದ ಜನಸಮುದಾಯದ ವಿದ್ಯಾಭ್ಯಾಸದ ಪ್ರಮಾಣವನ್ನೂ, ಮತ್ತು ಕೆಲಸಮಾಡತಕ್ಕ ಶಕ್ತಿಯನ್ನೂ ಹೆಚ್ಚಿಸುವುದಕ್ಕೆ ದೃಢವಾದ ಪ್ರಯತ್ನವು ಅವಶ್ಯಕವಾಗಿರುವುದು. ಈಗ ನಡೆಯುತ್ತಿರುವ ಏರ್ಪಾಟುಗಳು ಸಫಲವಾಗಿ ಅಭಿವೃದ್ಧಿಗೆ ಬಂದರೆ, 1913 ರಲ್ಲಿ ಇದ್ದದ್ದಕ್ಕಿಂತಲೂ 1920 ರಲ್ಲಿ ಸ್ಕೂಲಿಗೆ ಹೋಗುವ ಹುಡುಗರ ಸಂಖ್ಯೆಯನ್ನು ನಾವು ನಾಲ್ಕರಷ್ಟಕ್ಕೆ ಹೆಚ್ಚಿಸಿದಂತಾಗುವುದು. ಈ ಏರ್ಪಾಟಿನಿಂದ ಹಳ್ಳಿಗಳಲ್ಲಿರುವ ಜನರಿಗೂ ವಿದ್ಯೆಯಲ್ಲಿ ಹಿಂದುಳಿದ ಜನರಿಗೂ ಪ್ರಯೋಜನವಾಗುವುದು. ಒಂದುಕಡೆ ಪ್ರಾಥಮಿಕ ವಿದ್ಯೆಯು ಹರಡುವುದರಿಂದಲೂ, ಮತ್ತೊಂದುಕಡೆ ಯೂನಿವರ್ಸಿಟಿಯು ಬೇಗನೆ ಅಭಿವೃದ್ಧಿಯನ್ನು ಹೊಂದುತ್ತಿರುವ ನವೀನ ವಿದ್ಯಾಶಾಖೆಯಿಂದಲೂ ವಿದ್ಯಾಪ್ರಚಾರ ವಿಷಯದಲ್ಲಿ ಅಭಿವೃದ್ಧಿಯು ಬಹು ತೃಪ್ತಿಕರವಾಗಿರುವುದೆಂದು ನಂಬಲು ಕಾರಣವುಂಟು. ನಮ್ಮ ವಿದ್ಯಾಭ್ಯಾಸದ ಏರ್ಪಾಟುಗಳು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಎಲ್ಲಾ ಪಂಗಡದವರಿಗೂ ಪ್ರಯೋಜನಕರವಾಗಿರುವುವು. ಅವು ನಮ್ಮ ಪ್ರಜೆಗಳಲ್ಲಿ ಸಾಮಾಜಿಕ ಐಕಮತ್ಯವನ್ನೂ ಸರ್ವಸಮತ್ವವನ್ನೂ ಉಂಟುಮಾಡುವುದರಲ್ಲಿ ಕ್ರಮೇಣ ಸಹಕಾರಿಗಳಾಗುವುವೆಂದು ನಮ್ಮ ಕೋರಿಕೆಯಾಗಿದೆ.

ಸರ್ಕಾರದ ನೌಕರಿಗೆ ಜನರನ್ನು ಸೇರಿಸಿಕೊಳ್ಳುವ ಮತ್ತು ಅವರಿಗೆ ಕ್ರಮವಾಗಿ ಬಡ್ತಿ ಉಂಟಾಗುವ ಏರ್ಪಾಟನ್ನು ಉತ್ತಮಸ್ಥಿತಿಗೆ ತಂದಿರುತ್ತದೆ. ನೌಕರಿಯ ಮೊಕದರಾತಿ ವಿಷಯಗಳನ್ನು ವಿಶೇಷವಾಗಿ ಪರಿಶೋಧನೆ ಮಾಡುತ್ತಲಿದೆ. ಎಲ್ಲಾ ಇಲಾಖೆಗಳ ಡಿಸ್ಟ್ರಿಕ್ಟ್ ಆಫೀಸರುಗಳು ತಮ್ಮ ಅಧಿಕಾರ ಸರಹದ್ದಿನೊಳಗೆ ಕೆಲಸವು ಪರಸ್ಪರ ವಿರುದ್ಧವಿಲ್ಲದೆ ಏಕರೀತಿಯಾಗಿ ನಡಿಯುವಂತೆ ಮಾಡಲು ಆಗಾಗ್ಯೆ ಸೇರುವರು. ಸರಿಯಾದ ಕ್ರಮಪ್ರಕಾರ ಕೆಲಸ ನಡಿಯಲು ಏರ್ಪಾಟುಮಾಡುವುದಕ್ಕಾಗಿ ಪ್ರತಿಯೊಂದು ಇಲಾಖೆಗೂ ಮ್ಯಾನುಯಲ್‌ಗಳು, ಮತ್ತು ಇತರ ಬುಕ್ಕುಗಳು ಸಹ ತಯಾರಾಗುತ್ತಲಿವೆ.

ಉತ್ಪತ್ತಿಯನ್ನೂ ಸಂಪತ್ತನ್ನೂ ಹೆಚ್ಚಿಸುವುದು, ನಮ್ಮ ಜನಗಳಲ್ಲಿ ಸರಿಯಾದ್ದೆಂದು ಕಂಡುಬಂದಿರುವ ಆಚಾರ ವ್ಯವಹಾರಗಳನ್ನೂ ಪದ್ಧತಿಗಳನ್ನೂ ಸ್ವೀಕರಿಸಿ ಪ್ರೋತ್ಸಾಹಿಸುವುದು, ಜನಗಳಲ್ಲಿರತಕ್ಕ ತಪ್ಪು ಅಭಿಪ್ರಾಯಗಳನ್ನು ತಿದ್ದುವುದು, ನಾಗರೀಕ ಸ್ಥಿತಿಯಲ್ಲಿರುವ ಜನಾಂಗದವರ ಅನುಭವದ ಆಧಾರದಿಂದುಂಟಾಗಿರುವ ನಿಷ್ಪಕ್ಷಪಾತವಾದ ಉದ್ದೇಶಗಳನ್ನು ಜನಗಳಿಗೆ ತಿಳಿಸುವುದು ಇವೇ ನಮ್ಮ ಕಾರ್ಯಗಳ ಮುಖ್ಯೋದ್ದೇಶವಾಗಿರಬೇಕು. ಅಂದರೆ ನಮ್ಮ ಪ್ರಜೆಗಳನ್ನು ಸಂಪದ್ಯುಕ್ತರಾದ ಉತ್ಸಾಹವುಳ್ಳ ಜಾಗರೂಕರಾದ ಸಾಹಸಿಗಳನ್ನಾಗಿ ತಯಾರುಮಾಡುವುದೇ ನಮ್ಮ ಕಾರ್ಯವಾಗಿರುತ್ತೆ.

ಈಗಿನ ವಿದ್ಯಮಾನಗಳ ಸ್ಥಿತಿ.

ನಮ್ಮ ದೇಶದ ಸಂಪತ್ತಿನ ಸ್ಥಿತಿಯು ಅತೃಪ್ತಿಕರವಾಗಿರುವುದು. ಪರಸ್ಪರ ಸಹಾಯಕ ಶಕ್ತಿ ಕಮ್ಮಿಯಾಗಿರುವುದು, ಅಭಿವೃದ್ಧಿಗೆ ಬರಬೇಕೆಂಬ ಆಶೆಯು ಇಲ್ಲದಿರುವುದು, ಮತ್ತು ಏಳಿಗೆಗೆ ತಕ್ಕ ಪ್ರಯತ್ನಗಳು ಬಹಳ ಕಡಿಮೆಯಾಗಿರುವುದು,—ಈ ವಿಚಾರಗಳನ್ನು ಹಿಂದಿನ ಪ್ರತಿ ಒಂದು ವರ್ಷದ ನಮ್ಮ ಉಪನ್ಯಾಸದಲ್ಲಿ ತಮ್ಮಗಳ ಅವಗಾಹನೆಗೆ ತಂದಿರುತ್ತೇವೆ.

ಜನಗಳಿಂದ ಆಗಬೇಕಾದ ಸಹಾಯ.

ಭಾರಿ ಭಾರಿ ಅಭಿವೃದ್ಧಿ ಕಾರ್ಯಗಳು ನಿದಾನವಾಗಿಯೂ ಬಹು ದೀರ್ಘಪ್ರಯತ್ನದಿಂದಲೂ, ನೆರವೇರತಕ್ಕವು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ನಾವು ಅನೇಕ ತೊಂದರೆಗಳ ಮಧ್ಯದಲ್ಲಿ ಕೆಲಸ ಮಾಡಬೇಕಾಗಿದೆ; ಆದರೆ, ಜನರು ನಮ್ಮ ಕಾರ್ಯಕ್ಕೆ ಧಾರಾಳವಾಗಿ ಸಹಾಯಮಾಡುತ್ತಿರುವುದು ಕೇವಲ ಹರ್ಷಕ್ಕೆ ಕಾರಣವಾಗಿರುತ್ತದೆ. ಮುಖ್ಯವಾಗಿ ವಿದ್ಯಾಭ್ಯಾಸ ವಿಷಯದಲ್ಲಿ ನಿಸ್ಸಂದೇಹವಾದ ಉಪಕಾರಕ ಬುದ್ಧಿಯೂ ನಮ್ಮ ಜನಗಳಲ್ಲಿ ಇರುವುದು ಈಚೆಗೆ ಕಂಡುಬಂದ ಒಂದು ಅಂಶವಾಗಿದೆ. ಬೆಂಗಳೂರಿನಿಂದ ಸುಮಾರು 100 ಮೈಲಿಗಳ ದೂರದಲ್ಲಿರುವ ಒಂದು ಸರಹದ್ದು ಗ್ರಾಮಕ್ಕೆ ಕಳೆದ ಆಗಸ್ಟು ತಿಂಗಳಲ್ಲಿ ನಾವು ಹೋದಾಗ ಆ ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಿಂದ ಸ್ಥಾಪಿಸಿ ನಡೆಸುತ್ತಿದ್ದ ಒಂದು ಹುಡುಗಿಯರ ಸ್ಕೂಲನ್ನು ಬಹಳ ಉತ್ಸಾಹದಿಂದ ನಮಗೆ ತೋರಿಸಿದ್ದಲ್ಲದೆ ತಮ್ಮ ಗ್ರಾಮಕ್ಕೆ ನಿರ್ಬಂಧ ವಿದ್ಯಾಭ್ಯಾಸಕ್ರಮವನ್ನು ಜಾರಿಗೆ ತರಬೇಕೆಂತಲೂ ಕೇಳಿಕೊಂಕೊಂಡರು. ನಾವು ವಾಪಸು ಬರುತ್ತಿದ್ದಾಗ, ರಸ್ತೆಯ ಪಕ್ಕದಲ್ಲಿದ್ದ ಒಂದು ಗ್ರಾಮದ ಜನಗಳು ತಾವು ಸ್ವಂತ ಖರ್ಚಿನಿಂದ ಕಟ್ಟುತ್ತಿದ್ದ ಸ್ಕೂಲ್ ಕಟ್ಟಡವನ್ನು ನಮಗೆ ತೋರಿಸುವುದಕ್ಕಾಗಿ ನಮ್ಮನ್ನು ನಿಲ್ಲಿಸಿದರು. ಮತ್ತೊಂದುಕಡೆ ಒಂದು ಗ್ರಾಮದ ಯಜಮಾನನು ರೂಪಾಯಿಗಳ ಒಂದು ಗಂಟನ್ನು ನಮ್ಮ ಮೋಟಾರ್ ಗಾಡಿಯೊಳಕ್ಕೆ ಹಾಕಿ ಅವರ ಗ್ರಾಮಕ್ಕೆ ಒಂದು ಸ್ಕೂಲ್ ಕಟ್ಟಡವನ್ನು ಕೂಡಲೆ ಕಟ್ಟಿಸಿಕೊಡಬೇಕೆಂದು ಕೇಳಿಕೊಂಡನು. ಗ್ರಾಮಸ್ಥರು ತಮ್ಮ ರಸ್ತೆಗಳನ್ನೂ, ಬಾವಿಗಳನ್ನೂ, ಕೆರೆಗಳನ್ನೂ ದುರಸ್ತುಮಾಡಿಸುವುದಕ್ಕೆ ಧಾರಾಳವಾಗಿ ಖುದ್ದು ಕೆಲಸಮಾಡಿರುವುದಲ್ಲದೆ ದ್ರವ್ಯವನ್ನೂ ಕೊಟ್ಟಿರುತ್ತಾರೆ. ಹೋದವರ್ಷ ಹೊಸದಾಗಿ ಪ್ರಾರಂಭಿಸಿದ ಇಂಥಾ ಕಾರ್ಯಗಳ ಬೆಲೆ ಮಾತ್ರವೇ 5 ಲಕ್ಷ ರೂಪಾಯಿಗೆ ಮೇಲ್ಪಟ್ಟಿರುತ್ತದೆ. ನಮ್ಮ ಸಂಪದಭಿವೃದ್ಧಿ ಕಾರ್ಯಗಳಲ್ಲಿ ಸಂಸ್ಥಾನದ ಎಲ್ಲಾ ಕಡೆಗಳಲ್ಲಿರುವ ಉದ್ಯೋಗವಂತರು ಸಹಾಯಮಾಡಿರುತ್ತಾರೆ. ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಚಾದ ಕಾಲದೊಳಗಾಗಿಯೇ ಮೈಸೂರಿನ ಜನಗಳು ಹೊಸದಾಗಿ ಸ್ಥಾಪಿಸಲ್ಪಟ್ಟ ಮೈಸೂರು ಯೂನಿವರ್ಸಿಟಿಗೆ ಧರ್ಮಹಣರೂಪವಾಗಿ ಸ್ವಲ್ಪ ಹೆಚ್ಚು ಕಡಿಮೆ ಒಂದು ಲಕ್ಷ ರೂಪಾಯಿನವರೆಗೆ ಚಂದಾ ಹಣವನ್ನು ಕೊಟ್ಟಿರುತ್ತಾರೆ. ಇಷ್ಟು ಧಾರಾಳವಾದ ಸಹಾಯವು ದೇಶಾಭಿಮಾನಿಗಳೆಲ್ಲರಿಗೂ ಬಹಳ ಹರ್ಷವನ್ನು ಉಂಟುಮಾಡತಕ್ಕ ವಿಷಯವಾಗಿದೆ.

ನಮ್ಮಲ್ಲಿ ಪ್ರತಿಯೊಬ್ಬರಿಂದಲೂ ಕೆಲಸವನ್ನು ತೆಗೆದುಕೊಳ್ಳಲು ಸಂಸ್ಥಾನಕ್ಕೆ ಬಾಧ್ಯತೆ ಇರುತ್ತದೆ. ಈ ಅಭಿವೃದ್ಧಿ ಕಾರ್ಯಗಳಲ್ಲಿ ಸಹಾಯಮಾಡುವುದರಿಂದ ನಮ್ಮ ಸಮಾಜವನ್ನೂ ನೆರೆಹೊರೆಯನ್ನೂ ಉತ್ತಮಸ್ಥಿತಿಗೆ ತರುವುದರಲ್ಲಿ ಸಹಾಯಮಾಡಿದಂತಾಗುವುದಲ್ಲದೆ ಅಂಥಾ ಸ್ಥಿತಿಯು ನಮ್ಮ ದೇಶದ ಮುಂದಿನ ತಲೆತಲಾಂತರದವರ ಜೀವಮಾನಗಳನ್ನು ನಮ್ಮ ಜೀವಮಾನಕ್ಕಿಂತಲೂ ಸುಖತರವಾಗಿಯೂ ಹರ್ಷಕರವಾಗಿಯೂ ಇರುವಂತೆ ಮಾಡುವುದು. ಇದರಿಂದ ನಮ್ಮ ಮಕ್ಕಳಿಗೂ ಮಕ್ಕಳ ಮೊಮ್ಮಕ್ಕಳಿಗೂ ಉತ್ತಮವಾದ ಪ್ರಪಂಚವನ್ನು ಒಪ್ಪಿಸಿಕೊಟ್ಟಂತಾಗುವುದು.

ದೇಶಸೇವಾ ಬುದ್ಧಿಯು ಸಾರ್ವತ್ರಿಕವಾಗಿ ನೆಲಸಬೇಕು, ಪ್ರಜಾಸಾಮಾನ್ಯಕ್ಕೆ ಪ್ರಯೋಜನಕರವಾದ ಕಾರ್ಯವನ್ನು ಮಾಡಬೇಕಾದ ಸಂದರ್ಭದಲ್ಲಿ ಜಾತಿ ಮತ್ತು ಮತಸಂಬಂಧವಾದ ವೈಷಮ್ಯಗಳು ನಮ್ಮಲ್ಲಿ ಭೇದಬುದ್ಧಿಯನ್ನುಂಟುಮಾಡಲು ಅವಕಾಶ ಕೊಡಬಾರದು. ಅವರವರ ಸ್ಥಿತಿಗೂ ಸಾಮರ್ಥ್ಯಕ್ಕೂ ಅವಕಾಶಕ್ಕೂ ತಕ್ಕಂತೆ ಪ್ರತಿಯೊಬ್ಬರ ಸಹಾಯವೂ ಅವಶ್ಯಕವಾಗಿರುವುದು. ಕೆಲವರು ತಮ್ಮ ಜ್ಞಾನವನ್ನೂ ಅನುಭವವನ್ನೂ ಕೊಡಬಹುದು. ಕೆಲವರು ತಮ್ಮ ದ್ರವ್ಯವನ್ನು ಕೊಡಬಹುದು. ಮತ್ತೆ ಕೆಲವರು ತಮ್ಮ ದೇಹಶ್ರಮವನ್ನೂ ವಿನಿಯೋಗಿಸಬಹುದು. ಅಂತೂ ಎಲ್ಲರೂ ಸಹಾಯಮಾಡಲೇಬೇಕು. ಶ್ರೀಮನ್ ಮಹಾರಾಜರವರ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ತಮ್ಮ ದೇಶದ ಪ್ರಯೋಜನಕ್ಕಾಗಿ ತಮ್ಮಿಂದ ಸಾಧ್ಯವಾದಷ್ಟು ಸಹಾಯವನ್ನಾದರೂ ಮಾಡಬೇಕಲ್ಲದೆ ಹಾಗೆ ಸಹಾಯಮಾಡುವುದು ತಮಗೆ ಗೌರವವೆಂದು ತಿಳಿದುಕೊಳ್ಳಬೇಕು.

ಇಂಡಿಯಾ ಸರ್ಕಾರದ ರಾಜ್ಯಭಾರಕ್ರಮದ ಬದಲಾವಣೆಯಲ್ಲಿ ಇಂಡಿಯಾ ದೇಶೀಯ ಸಂಸ್ಥಾನಗಳಿಗೆ ಇರಬೇಕಾದ ಸ್ಥಾನ.

ಈ ಉಪನ್ಯಾಸವನ್ನು ಪೂರೈಸುವುದಕ್ಕೆ ಮುಂಚೆ ಪ್ರಕೃತದಲ್ಲಿ ಬಹು ಮುಖ್ಯವಾದ ವಿಷಯ ಒಂದನ್ನು ಕುರಿತು ನಾವು ಒಂದೆರಡು ಮಾತುಗಳನ್ನು ಹೇಳಲಪೇಕ್ಷಿಸುತ್ತೇವೆ. ಇಂಡಿಯಾ ಸರ್ಕಾರದ ರಾಜ್ಯಭಾರಕ್ರಮದಲ್ಲಿ ಇಷ್ಟರಲ್ಲೇ ಮಾಡಬೇಕೆಂದು ಉದ್ದೇಶಿಸಿ ಇರುವ ಬದಲಾವಣೆಯೇ ಈ ಮುಖ್ಯವಾದ ವಿಷಯವಾಗಿರುತ್ತದೆ. ಬ್ರಿಟಿಷ್ ಇಂಡಿಯಾದೇಶದ ರಾಜಕೀಯ ವಿಷಯಗಳ ಚರ್ಚೆಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಇಷ್ಟವಲ್ಲ. ಆದರೆ ಪಾರ್ಲಿಮೆಂಟ್ ಸಭೆಯಲ್ಲಿ ಇಂಡಿಯಾ ದೇಶದ ಸ್ಟೇಟ್ ಸೆಕ್ರೆಟರಿಯವರು ಈಚೆಗೆ ಮಾಡಿದ ಪ್ರಸ್ತಾಪಗಳಿಂದಲೂ ಮತ್ತು ಅವರು ಸದ್ಯದಲ್ಲಿಯೇ ಇಂಡಿಯಾದೇಶಕ್ಕೆ ದಯಮಾಡಿಸುವವರಾಗಿರುವುದರಿಂದಲೂ ದೇಶೀಯ ಸಂಸ್ಥಾನಗಳ ಅಭಿಪ್ರಾಯಕ್ಕೆ ತಕ್ಕ ಪ್ರಾಶಸ್ತ್ಯವನ್ನು ಕೊಡತಕ್ಕ ವಿಷಯದ ಪರ್ಯಾಲೋಚನೆಯು ಮುಖ್ಯವೆಂತ ಕಾಣುತ್ತದೆ.

ಮೈಸೂರು ಸರ್ಕಾರದವರೂ ಮತ್ತು ಪ್ರಜೆಗಳೂ ಸಹ ಇಂಡಿಯಾ ಸರ್ಕಾರದ ಕೋಶಕ್ಕೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸಾಧಾರಣವಾಗಿ ಪ್ರತಿವರ್ಷ ಕೊಡುತ್ತಿರುವ ಸಹಾಯದ್ರವ್ಯವು ನಮ್ಮ ಸಂಸ್ಥಾನದ ಒಟ್ಟು ಹುಟ್ಟುವಳಿಯಪೈಕಿ ಸುಮಾರು ಮೂರು ಅಥವಾ ನಾಲ್ಕರಲ್ಲಿ ಒಂದು ಭಾಗವಾಗುವುದು.

ಲಂಡನ್ ಪಟ್ಟಣದಲ್ಲಿ ಈಚೆಗೆ ನಡೆದ ಇಂಪೀರಿಯಲ್ ವಾರ್ ಕಾನ್ಫರೆನ್ಸಿನಲ್ಲಿ ಬಿಕಾನೀರ್ ಸಂಸ್ಥಾನದ ಮಹಾರಾಜರವರು, ಇಂಡಿಯಾ ದೇಶೀಯ ಸಂಸ್ಥಾನಗಳಿಗೆ ಅರ್ಹರಾದ ಪ್ರತಿನಿಧಿಗಳಾಗಿದ್ದರು. ಇವರ ಜತೆಯಲ್ಲಿ ಇಂಡಿಯಾ ಸರ್ಕಾರದಿಂದ ಇನ್ನಿಬ್ಬರು ಸಹೋದ್ಯೋಗಿಗಳಾಗಿ ಕಳುಹಿಸಲ್ಪಟ್ಟಿದ್ದರು. ಮುಂದೆ ಏರ್ಪಡಿಸಬಹುದಾದ ಇಂಥಾ ಸಭೆಗಳಲ್ಲಿ ದೇಶೀಯ ಸಂಸ್ಥಾನಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಗೆ ಅವಕಾಶ ಕೊಡಲ್ಪಡುವುದರಲ್ಲಿ ಸಂಶಯವಿಲ್ಲವೆಂದು ನಂಬುತ್ತೇವೆ. ಅಲ್ಲದೆ ಈನ್ನುಮುಂದೆ ಏರ್ಪಡುವ ವೈಸರಾಯಿಯವರ ಎಗ್ಸಿಕ್ಯುಟಿವ್ ಕೌನ್ಸಿಲ್ ಅಥವಾ ಮಂತ್ರಿಮಂಡಲಿಗೆ ಮೆಂಬರುಗಳನ್ನು ಕಳುಹಿಸುವ ಹಕ್ಕು ದೇಶೀಯ ಸಂಸ್ಥಾನಗಳಿಗೆ ಲಭಿಸುವುದೆಂದು ನಾವು ಎಣಿಸುವೆವು.

ಇದುವರೆಗೆ ಈ ವಿಷಯದಲ್ಲಿ ನಡೆದಿರುವ ಚರ್ಚೆಗಳಲ್ಲಿ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳನ್ನು ಕಳುಹಿಸುವ ವಿಚಾರಕ್ಕೆ ಸಾಕಾದಷ್ಟು ಗಮನ ಕೊಟ್ಟಿರುವಹಾಗೆ ಕಾಣುವದಿಲ್ಲ. ಇಂಡಿಯಾ ಚಕ್ರಾಧಿಪತ್ಯದ ಮುಂದಿನ ನ್ಯಾಯವಿಧಾಯಕ ಸಭೆ ಯಾ ಸಭೆಗಳಲ್ಲಿ ಇಂಡಿಯಾ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳಿಗೆ ಸ್ಥಾನವಿರಬೇಕೆಂಬುವದು ಒಂದು ಅಂಶದ ಬಗೆಯ ಅಭಿಪ್ರಾಯವಾಗಿದೆ. ಬೇರೆ ಬೇರೆ ಸಂಸ್ಥಾನಗಳಿಗೂ ಅಥವಾ ಸಂಸ್ಥಾನಗಳ ಪ್ರತ್ಯೇಕವಾದ ಗುಂಪುಗಳಿಗೂ ಕೊಡತಕ್ಕ ಪ್ರತಿನಿಧಿಗಳ ಸಂಖ್ಯೆಯನ್ನು ಅವುಗಳಲ್ಲಿನ ಜನಸಂಖ್ಯೆಯಮೇಲೆ ಗೊತ್ತು ಮಾಡಬಹುದು, ಮತ್ತು ಅವಶ್ಯಕವಿದ್ದಲ್ಲಿ, ವಿದ್ಯಾಭ್ಯಾಸ, ಹುಟ್ಟುವಳಿ ಇವೇ ಮೊದಲಾದ ಅಂಶಗಳಿಂದ ಆ ಸಂಖ್ಯೆಯನ್ನು ಬದಲಾಯಿಸಬಹುದು. ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳು ಆ ಸಭೆಯಲ್ಲಿ ಮೆಂಬರುಗಳಾಗಿ ತಮ್ಮ ರಾಜ್ಯಗಳಿಗೂ, ಇಂಡಿಯಾದೇಶದ ಇತರ ಪ್ರಾಂತ್ಯಗಳಿಗೂ ಸಮವಾಗಿ ಸಂಬಂಧವುಳ್ಳ ವಿಷಯಗಳನ್ನು ಕುರಿತು ಚರ್ಚೆಗಳಲ್ಲಿ ಭಾಗಿಗಳಾಗಿ ಸೇರಿ ಆ ವಿಷಯಗಳನ್ನು ಕುರಿತು ತಮ್ಮ ಸಮ್ಮತಿಯನ್ನು ಕೊಡಬಹುದು.

ಮುಂದೆ ನಡಿಯುವ ವಿಚಾರಣೆಗಳಲ್ಲಿ ತೀರ್ಮಾನಿಸಲ್ಪಡುವ ಮುಖ್ಯಾಂಶಗಳು ದೇಶೀಯ ಸಂಸ್ಥಾನಗಳಿಗೆ ವಿಶೇಷವಾಗಿ ಸಂಬಂಧಪಟ್ಟಿರುತ್ತವೆ. ಈಗಲೂ ಕೂಡ ದೇಶೀಯ ಸಂಸ್ಥಾನಗಳಿಗೂ ಇಂಡಿಯಾ ದೇಶದ ಸಮಸ್ತಕ್ಕೂ ಸಂಬಂಧಪಟ್ಟ ರಾಜಕಾರ್ಯಗಳ ವಿಚಾರದಲ್ಲಿ, ಇಂಡಿಯಾ ಸರ್ಕಾರದವರು ಮಾಡತಕ್ಕ ತೀರ್ಮಾನಗಳು ಬ್ರಿಟಿಷ್ ಇಂಡಿಯಾದಲ್ಲಿರುವ ಜನರ ಅಭಿಪ್ರಾಯವನ್ನು ಸಹಜವಾಗಿ ಸ್ವಲ್ಪಮಟ್ಟಿಗೆ ಅನುವರ್ತಿಸಿಯೇ ಇರುತ್ತವೆ. ಇನ್ನು ಮುಂದೆ ಸರಕಾರದ ಆಡಳಿತಗಳಲ್ಲಿ ಜನಗಳ ಅಭಿಪ್ರಾಯವನ್ನು ಹೆಚ್ಚು ಹೆಚ್ಚಾಗಿ ಗಣನೆಗೆ ತೆಗೆದುಕೊಳ್ಳುವದಾಗುತ್ತೆ. ಆದುದರಿಂದ ಹೊಸ ಏರ್ಪಾಟಿನಲ್ಲಿ ಸಂಸ್ಥಾನಗಳ ಅಭಿಪ್ರಾಯಗಳನ್ನು ತಿಳಿಸುವುದಕ್ಕೂ, ಮತ್ತು ಅವರ ಹಕ್ಕುಗಳನ್ನು ರಕ್ಷಣೆಮಾಡಿಕೊಳ್ಳುವುದಕ್ಕೂ ಸರಿಯಾದ ಸಂವಿಧಾನವನ್ನು ಏರ್ಪಡಿಸುವದೂ ಮತ್ತು ದೇಶೀಯ ಸಂಸ್ಥಾನಗಳಿಗೆ ಇಂಡಿಯಾ ಚಕ್ರಾಧಿಪತ್ಯದ ಮಂತ್ರಾಲೋಚನೆ ಸಭೆಗಳಲ್ಲಿ ಸಲ್ಲಬೇಕಾದ ಸ್ಥಾನವನ್ನು ದೊರೆಯುವಂತೆ ಮಾಡುವದೂ ಮತ್ತಷ್ಟು ಅವಶ್ಯಕವಾಗಿರುತ್ತದೆ.

ಎಂ. ವಿಶ್ವೇಶ್ವರಯ್ಯ,
ಮೈಸೂರು ಸಂಸ್ಥಾನದ ದಿವಾನ್‌ರವರು.

೧೯೧೭ ನೆಯ ಇಸವಿ ನವಂಬರ್ ತಾ|| ೧೧ ರಿಂದ ೧೯೧೭ ನೆಯ ನವಂಬರ್ ತಾ|| ೧೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಆಶ್ವಯುಜ ಬ|| ದ್ವಾದಶಿಯಿಂದ ಕಾರ್ತಿಕ ಶು|| ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ತುಲಾ ವೃಶ್ಚಿ
11	ಭಾನು	ದ್ವಾದಶಿ	34-47	ಹಸ್ತ	52-4	26
12	[1] ಸೋಮ	ತ್ರಯೋ	39-58	ಚಿತ್ತ	57-17	27
13	ಮಂಗಳ	ಚತು	42-2	ಸ್ವಾತಿ	60	28
14	[2] ಬುಧ	ಅಮಾ	43-52	ಸ್ವಾತಿ	0-51	29
15	[3] ಗುರು	ಪಾಡ್ಯ	44-26	ವಿಶಾಖ	3-40	30
16	[4] ಶುಕ್ರ	ಬಿದಿಗೆ	43-41	ಅನೂರಾಧ	5-13	1
17	ಶನಿ	ತದಿಗೆ	41-44	ಜ್ಯೇಷ್ಠ	5-34	2

(1) ಸೋಮಪ್ರದೋಷಃ, ಮಾಸಶಿವರಾತ್ರಿಃ, ನರಕಚತುರ್ದಶೀ, ಪ್ರಯುಕ್ತ ನೀರುತುಂಬೋ ಹಬ್ಬ, ಚಂದ್ರೋದಯಕಾಲಸ್ನಾನಂ, ಯಮತರ್ಪಣಂ. (2) ಸರ್ವತ್ರಾಮಾವಾಸ್ಯಾ (ಸೌರರೀತ್ಯಾ ತುಲಾಕೃಷ್ಣ ಅಮಾತಿಥಿಃ) ಕೇದಾರೇಶ್ವರವ್ರತಂ. (3) ದೀಪಾವಳೀ, ಕಾಮಧೇನುಪೂಜಾ, ಬಲೀಂದ್ರಪೂಜಾ, ವಾಕ್ಯರೀತ್ಯಾ ವಿಷ್ಣುಪದಪುಣ್ಯಕಾಲಃ. (4) ವಿಷ್ಣುಪದಪುಣ್ಯಕಾಲಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೈತಾವತಾರಾ ಪಕ್ವಜ್ಞನಕ್ಷತ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಾಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಲಿಯಂಸದಾಪೂರೆಗೆ ಗೌರೀತಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦]   [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦)   ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ನವಂಬರ್ ತಾರೀಖು ೧೮ ನೆಯ ಭಾನುವಾರ.   (ಸಂಚಿಕೆ ೪೬.

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಕ್ಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹಾಳಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದ ನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದು ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದೆ ಕಾಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಶಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೊ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝುಂಡೆ ಹಚ್ಚಿದ ಅದ್ವಿತೀಯ ಶಂಭುವಿನ ಅವತಾರಿಯಾದ "ಶ್ರೀ ಕಲ್ಯಾಣ ಬಸವೇಶ್ವರದೇವರ" ಅರಿವಿ ಮೇಲೆ ತೆಗೆದಿದ್ದು ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೋ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅದ್ಯಕರ್ತವ್ಯ ಅದೆ ಫುಲ್‌ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕೈಬಣ್ಣದ್ದು ರೂ. ೧ ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುತ್ತದೆ ಫುಲ್‌ಸೈಜು ೧ ಕ್ಕೆ ರೂ ೧ ಕ್ಯಾಬಿನೆಟ್‌ಸೈಜು ರೂ. ೦-೮-೦ ಮೇಲೆ ಕೈ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣು ಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ಪೂಜಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೋಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೆ ಫು|| ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ಆಣೆ ೮ ಮೇಲೆ ಕೈ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೋಟೊ ಬೇರೆ ಬೇರೆ ಸಿಕ್ಕುತ್ತವೆ.

ಫುರವುಗೇ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಕೊಳ್ಳಿರಿ.

ಗಂಗಪ್ಪಾ ಚಿರಗೇ ಮಾಲಿಕ, ಶ್ರೀ ಶಾರದಾ ಫೋಟೋ ಕಂಪೆನಿ,
ಸೊಲ್ಲಾಪುರ ಸಿಟಿ.

5

ಫುಕಟ]   [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರಾ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ-೧ಬೇ- ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ-೧ಬೇ- ೩ಪ್ಯೆ. ೧೦೦ ಕ್ಕೆ ೧-೪-೦

೩. ಹೇನುತಿರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ-೧ಬೇ- ೩ಪ್ಯೆ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ-೧೨೮.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಬಾರದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ತಾಜಾ ಸತ್ಯ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ!   ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಆರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಆರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ



ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಪಡಿಸಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯ ಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಆರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸ ಮೊದಲಾದ ರೋಗವು, ಕಣ್ಣಿನೋಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಜೀರ್ಣ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚಿಜಡ್ಡು, ಗುದ್ದದ್ವಾರದ ಬೇನೆ, ಹುರುಳು ಕಜ್ಜಿ, ಗಜಕರ್ಣ, ಬದ್ಧಿ ಅಜಬು, ಘಾಯವ್ರಣ, ವಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದಹುಣ್ಣು, ಸಣ್ಣಕೂಸುಗಳ ಬಾಲಗ್ರಹ, ಅರಬ ಮುಟ್ಟದೋಷ, ಹೊಟ್ಟೆ ದೊಡ್ಡದಾ-

ಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ. ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲ, ವಿ ಪಿ. ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಪೋಸ್ಟ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರಿಕೆ ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂತಿ ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಆರ್ಕಶಫಾ ಶೋಧಕ, ಹೆಡ್ ಆಫೀಸ
35   ಮುಕ್ಕಾಮು ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸ ಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೊತ್ತರಶ್ಲೋಕ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಶೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ಶಬ್ದಾರ್ಥಕಳಿಕೆ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೧೭ನೆಯ ಇಸವಿ ನವಂಬರ್ ತಾ|| ೧೮ನೆಯ ಭಾನುವಾರ.

ವಾಣಿಜ್ಯಾದಿಗಳಿಂದ ದೇಶಾಭ್ಯುದಯ.

ದೇಶದ ಸಂಪದಭಿವೃದ್ಧಿಗೆ ವರ್ತಕತನದ ಏಳ್ಗೆಯು ಅತಿ ಮುಖ್ಯವು. ಅದಕ್ಕೆ ಕೃಷಿಯು ಮುಖ್ಯಾಧಾರವು. ಇವೆರಡರ ಜತೆಗೆ ಶಿಲ್ಪವಿದ್ಯೆಯೂ ಸೇರಿದರೆ ಲಕ್ಷ್ಮೀ ಪ್ರಸನ್ನತೆಗೆ ಸಾವಕಾಶವೇ ಇಲ್ಲ. ಈ ವಾಣಿಜ್ಯ ಕೃಷಿ ಶಿಲ್ಪಗಳ ಏಳ್ಗೆಯುಂಟಾಗಬೇಕಾದರೆ ಮುಖ್ಯವಾಗಿ ವಿದ್ಯಾಸಾಧನವಿದ್ದೇತೀರಬೇಕು. ಇವುಗಳ ಸಂಪಾದನೆಗೆಲ್ಲಾ ದೇಶೀಯರು ಸಾಹಸಮಾಡದಿದ್ದರೆ ದೇಶದ ಸಂಪತ್ತು ಅಭಿವೃದ್ಧಿಗೊಳ್ಳುವುದು ಅಸಾಧ್ಯವೇ ಸರಿ. ಇವುಗಳ ಸಂಪಾದನೆಗಾಗಿ ಪ್ರಜೆಗಳಲ್ಲಿ ಸಾಹಸಗುಣವುಂಟಾಗಬೇಕೆಂಬುದಕ್ಕಾಗಿ ನಮ್ಮ ಶ್ರೀಮನ್ಮಹಾರಾಜರೂ ಅವರ ಮಂತ್ರಿವರ್ಯರೂ ಸಹ ಅಹರ್ನಿಶಿಯೂ ಚಿಂತಿಸುತ್ತಿರುವರು; ನಾನಾವಿಧದ ಪ್ರೋತ್ಸಾಹಗಳನ್ನು ಮಾಡುತ್ತಿರುವರು. ಇಂಥ ಅನುಕೂಲ ವಾತಾವರಣವಿರುವಾಗ ನಮ್ಮ ದೇಶದ ವಾಣಿಜ್ಯ ಕೃಷಿ ಶಿಲ್ಪಾದಿ ಉದ್ಯೋಗವುಳ್ಳ ಜನರುಗಳು ಎಚ್ಚತ್ತು ಸಾಹಸಪಡದಿದ್ದರೆ ಅವರು ತಮ್ಮ ಮನೆ ಬಾಗಿಲಿಗೆ ಬಂದ ಭಾಗ್ಯಲಕ್ಷ್ಮಿಯನ್ನು ತಾವೇ ಒದೆದು ನೂಕಿದಂತಾಗುವುದಲ್ಲವೆ? ನಮ್ಮ ದೇಶದ ವ್ಯಾಪಾರಿಗಳೂ, ಕೃಷಿಕಾರರೂ, ಶಿಲ್ಪಗಾರರೂ ಸಹ ಈಗ ಮಾಡುತ್ತಿರುವ ಕಸಬುಗಳು ಈಗಣ ನಾಗರಿಕತೆಯ ಕಾಲಕ್ಕೆ ತಕ್ಕ ಸ್ವರೂಪದಲ್ಲಿಲ್ಲ. ಪ್ರಪಂಚದಮೇಲೆ ವ್ಯಾಪಾರಾದಿಗಳು ಎಷ್ಟು ಪ್ರಚಂಡತರವಾಗಿ ನಡೆಯುತ್ತಿವೆಯೆಂಬುದನ್ನು ಅವರು ಪರ್ಯಾಲೋಚಿಸಬೇಕು. ತಮ್ಮ ಉದ್ಯೋಗಗಳನ್ನು ಸುಧಾರಿಸಿಕೊಳ್ಳುವುದಕ್ಕೆ ಅವರು ಈಗ ವಿದ್ಯುದ್ವೇಗದಿಂದ ಪ್ರವರ್ತಿಸಬೇಕು. ಎಂದರೆ ಮೊಟ್ಟಮೊದಲು ತಂತಮ್ಮ ಮಕ್ಕಳುಮರಿಗಳಿಗೆ ಪ್ರಕೃತೋಪಯೋಗಿಯಾದ ವಿದ್ಯಾಭ್ಯಾಸವನ್ನು ಮಾಡಿಸಬೇಕು. ಪರರು ತಮ್ಮ ತಲೆಗೆ ಎಣ್ಣೆಯನ್ನೊತ್ತಿ ತಂನನ್ನು ಮಾಡುವರೆಂಬ ಭ್ರಮೆಯನ್ನು ದೂರೀಕರಿಸಬೇಕು. ತಂತಮ್ಮ ಜನರನ್ನು ವಿದ್ಯಾದಿಗಳಲ್ಲಿ ಮುಂದಕ್ಕೆ ತರುವ ವಿಷಯವಾಗಿ ಮಾಡುವ ದಾನಧರ್ಮಗಳೇ ಇತರರೂಪಧರ್ಮಕಾರ್ಯಗಳಿಗಿಂತಲೂ ಇಹಪರಶ್ರೇಯೋದಾಯಕವಾದ ಮುಖ್ಯ ಪುಣ್ಯಕಾರ್ಯಗಳೆಂಬುದನ್ನು ಮರೆಯಬಾರದು. ವಿದ್ಯೆಯಲ್ಲಿ ಇತರರೆಲ್ಲರಿಗಿಂತಲೂ ಎಷ್ಟೋ ಮುಂದಾಗಿರುವ ಜನರುಗಳೂ ಕೂಡ ಇನ್ನೂ ತಮ್ಮವರ ವಿದ್ಯಾಭಿವೃದ್ಧಿಗಾಗಿ ಪರರ ಸಹಾಯವನ್ನೆಲ್ಲಾ ಪಡೆದುಕೊಂಡು, ಅನಾಥಾಲಯ ವಿದ್ಯಾರ್ಥಿನಿಲಯ ಮೊದಲಾದುವುಗಳನ್ನು ಸ್ಥಾಪಿಸಿಕೊಂಡು, ಪರೋಪಾಶ್ರಯಗಳು ಅವಕ್ಕಿದ್ದರೂ ಆ ಪರರಿಗೆ ಮಾತ್ರ ತಮ್ಮಲ್ಲಿ ಲೇಶವೂ ಅವಕಾಶಕೊಡದೆ, ಸ್ವಜನೋದ್ಧಾರವನ್ನು ಹೇಗೆ ಮಾಡಿಕೊಳ್ಳುತ್ತಲಿರುವರೋ ಅದನ್ನು ನೋಡಿ ಇತರರೆಲ್ಲರೂ ಎಚ್ಚರುಗೊಳ್ಳಬೇಕು. ತಂತಮ್ಮ ಜನವರ್ಗದ ಬಾಲಕರಿಗೆ ವಿದ್ಯಾರ್ಜನ ಮಾಡಿಸುವುದಕ್ಕೆ ಅವಶ್ಯಕವಾದ ಅನಾಥಾಲಯ ವಿದ್ಯಾರ್ಥಿನಿಲಯ ಮೊದಲಾದುವುಗಳನ್ನು ಸ್ಥಾಪಿಸಿ, ಅಲ್ಲಿ ವಾಸಮಾಡುವ ವಿದ್ಯಾರ್ಥಿಗಳಿಗೆ ಸಾಧ್ಯವಾದಮಟ್ಟಿಗೆ ಅಶನವಸನಾದಿಗಳ ಸಾಹಾಯ್ಯವನ್ನು ಮಾಡಿಕೊಡುತ್ತ ಬರಬೇಕು. ಹಿಂದೆ ಚೋಳ ಪಾಂಡ್ಯಾದಿಗಳು ದಿನಕ್ಕೊಂದೊಂದು ದೇವಾಲಯವನ್ನು ಕಟ್ಟಿಸುತ್ತಿದ್ದರೆಂದು ಕೇಳುತ್ತಿರುವೆವು. ಅಂಥ ದೇವಾಲಯಗಳ ಗತಿಯೆಲ್ಲಾ ಈಗ ಹೇಗಾಗಿದೆ ನೋಡಿರಿ. ಸತ್ರಗಳ ನಿರ್ಮಾಣವು ಈಗಣ ಹೊಗೆಬಂಡಿಯ ಕಾಲಕ್ಕೆ ಅಷ್ಟು ವಿಶೇಷಾವಶ್ಯಕಗಳಾಗಿಲ್ಲ. ಎಲ್ಲ ವಿಧದ ಧರ್ಮಸಹಾಯವನ್ನೂ ವಿದ್ಯಾಪ್ರಸಾರಕ್ಕೆ ಮಾಡುತ್ತ ಬರುವುದು ಅತ್ಯವಶ್ಯಕವಾಗಿದೆ.

ಪ್ರಪಂಚದಲ್ಲಿ ಮುಂಬರಿದಿರುವ ದೇಶಗಳಲ್ಲೆಲ್ಲಾ ವರ್ತಕರ ಕೈಬಾಯಿಗಳೇ ಮುಂದಾಗಿವೆ. ಅವರ ಗೌರವವೇ ಘನತರವಾಗಿದೆ. ನಮ್ಮ ದೇಶದಲ್ಲಿ ವರ್ತಕಾದಿಗಳ ಪ್ರಾಬಲ್ಯವು ಎಷ್ಟುಮಟ್ಟಿಗಿದೆಯೆಂಬುದನ್ನು ಯಾರುತಾನೇ ಕಾಣರು? ಹೀಗೆ ಮಾಡಿಕೊಂಡಿರುವುದಕ್ಕೆ ನಮ್ಮಲ್ಲಿರುವ ಲೋಪಗಳೇ ಕಾರಣಗಳು. ನಮ್ಮಲ್ಲಿ ವಿದ್ಯಾಬುದ್ಧಿಗಳೂ, ಲೋಕಾನುಭವವೂ, ಸ್ವಕರ್ತವ್ಯಜ್ಞಾನವೂ ಆತ್ಮಗೌರವಾಭಿಮಾನವೂ, ಸಾಣ್ಯವೂ, ಹೆಚ್ಚದಲ್ಲದೆ ನಮ್ಮ ಪ್ರತಿಷ್ಠೆಗಳು ಬೆಳೆಯಲಾರವು. ಈ ವಿಷಯದಲ್ಲಿ ನಮ್ಮ ದೇಶದ ವರ್ತಕಾದಿಗಳಲ್ಲಿರುವ ಅಜ್ಞತೆಯು ಬಹಳಮಟ್ಟಿಗೆ ಸಂಕುಚಿತವಾಗಿರುವುದು. ಅದನ್ನು ವಿಕಾಸಪಡಿಸಿಕೊಳ್ಳುವುದಕ್ಕೆ ಸರ್ವರೂ ಪ್ರಯತ್ನಿಸಬೇಕು. ಅದಕ್ಕಾಗಿ ನಮ್ಮ ಜನರು ಮೂರು ಸಾಧನಗಳನ್ನು ಅವಶ್ಯಕವಾಗಿ ಮೊದಲು ಸಂಪಾದಿಸಬೇಕು. ಅವಾವುವೆಂದರೆ—೧ ನೆಯದು ವಿದ್ಯೆ, ೨ ನೆಯದು ಪರಿಶ್ರಮವಿಜ್ಞಾನ, ೩ ನೆಯದು ಏಕಮತ್ಯ.

ದಕ್ಷಿಣ ಇಂಡ್ಯಾ ವರ್ತಕಸಂಘಕ್ಕೆ ಬಹುಕಾಲ ಅಧ್ಯಕ್ಷರಾಗಿದ್ದುಕೊಂಡು ಕೈಗಾರಿಕೆಗಳು, ವ್ಯಾಪಾರಧರ್ಮ ಇವುಗಳಲ್ಲೆಲ್ಲಾ ವಿಶೇಷಾನುಭವವನ್ನು ಪಡೆದಿರುವ ಮದ್ರಾಸಿನ ರಾವ್ ಬಹದ್ದೂರ್ ಪಿ. ತ್ಯಾಗರಾಯಶೆಟ್ಟಿ ಬಿ.ಎ., ಯವರು, ಕಳೆದ ವಾರದಲ್ಲಿ ಬೆಜವಾಡ ಪಟ್ಟಣದಲ್ಲಿ ಗಂಜಾಂ, ವಿಶಾಖಪಟ್ಣ ಗೋದಾವರಿ, ಕೃಷ್ಣಾ, ಗುಂಟೂರು, ನೆಲ್ಲೂರು ಈ ಆರು ಜಿಲ್ಲೆಗಳ ಹಿಂದುಳಿದ ಜನವರ್ಗಪ್ರತಿನಿಧಿಗಳು ಸೇರಿ ನಡೆಯಿಸಿದ ಮಹಾಸಭೆಯಲ್ಲಿ ಅಧ್ಯಕ್ಷರಾಗಿ, ವಾಣಿಜ್ಯ ಮೊದಲಾದ ಕಸಬುಗಾರರ ಅಭಿವೃದ್ಧಿ ವಿಷಯವನ್ನು ಕುರಿತು ಭಾಷಣಮಾಡುವಾಗ್ಗೆ ಹೇಳಿದ ಕೆಲವು ವಾಕ್ಯಗಳನ್ನು ಈ ಸಂದರ್ಭದಲ್ಲಿ ನಮ್ಮ ದೇಶೀಯರೆಲ್ಲರೂ ಕೇಳಿ ತಿಳಿದುಕೊಳ್ಳಬೇಕಾದುದೆಂದು ಇಲ್ಲಿ ಪ್ರಕಟಿಸುವೆವು—

"ಆವಿಯ ಯಂತ್ರದ ಸಾಧನಗಳು ತಲೆಯೆತ್ತಿದಕೂಡಲೇ ಯೂರೋಪುಖಂಡವು ವೃದ್ಧಿಗೊಳ್ಳುವುದಕ್ಕೂ ಭರತಖಂಡವು ಕ್ಷೀಣಿಸಿಹೋಗುವುದಕ್ಕೂ ಪ್ರಾರಂಭವಾಯಿತು. ಕ್ರಮೇಣ ನಮ್ಮ ದೇಶದ ಹಡಗುಗಳೆಲ್ಲಾ ನಿರ್ನಾಮವಾದುವು. ನಮ್ಮ ದೇಶದ ಕೈಗಾರಿಕೆಗಳು ಮೂಲೆಪಾಲಾದುವು. ಸ್ವದೇಶದ ಹಡಗು ಎಂದು ನಿರ್ದೇಶಮಾಡಿ ತೋರಿಸುವುದಕ್ಕೂ ಕೂಡ ಒಂದು ಹಡಗಾದರೂ ಇಲ್ಲದಂತಾಯಿತು. ನಮ್ಮ ಪರಿಶ್ರಮಗಳಲ್ಲಿ ಕೆಲವಾದರೂ ನಮ್ಮಧೀನದಲ್ಲಿಲ್ಲ. ಈ ದುರವಸ್ಥೆಗೆ ಕಾರಣವೇನು? ಇದಕ್ಕೆ ಬಾಧ್ಯರಾರು? ಎಂಬುದನ್ನು ವಿಚಾರಿಸುತ್ತ ಕುಳಿತುಕೊಳ್ಳುವುದು ನಮ್ಮ ಕೆಲಸವಲ್ಲ. ಆದರೆ ಪ್ರಪಂಚದಮೇಲಿರುವ ನಮ್ಮ ಸಮಾನ ಜಾತಿಯವರೊಡನೆ ನಾವು ಸರಿದೂಗಬೇಕಾದರೂ, ಭರತಖಂಡವು ರತ್ನಗರ್ಭಾ, ವಸುಂಧರಾ ಎಂಬ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡು ತಲೆಯೆತ್ತುವಂತೆ ಮಾಡಬೇಕಾದರೂ, ಅದು ನಮ್ಮ ಪರಿಶ್ರಮಾಭಿವೃದ್ಧಿಯಿಂದಲೇ, ವಾಣಿಜ್ಯಾಭಿವೃದ್ಧಿಯಿಂದಲೇ ಎಂಬುದನ್ನರಿಯಬೇಕು. ನಮ್ಮ ಭರತಖಂಡದ ಪಟ್ಟಣಗಳೊಳಗೆಲ್ಲಾ ಬೊಂಬಾಯಿಯು ಅಗ್ರಸ್ಥಾನವನ್ನು ಪಡೆದಿರುವುದೆಂಬುದನ್ನು ನಾವೆಲ್ಲರೂ ತಿಳಿದಿದ್ದೇವೆ. ಒಂದು ಸಣ್ಣ ಬೆಸ್ತರ ಹಳ್ಳಿಯಾಗಿದ್ದ ಆ ಊರು ಈಗ ನಗರಾಗ್ರೇಸರವಾಗಿರುವುದು. ಇಂಥ ಅದರೌನ್ನತ್ಯಕ್ಕೆ ಕಾರಣವಾವುದು? ಸಂಸ್ಕೃತಭಾಷೆಯೇನೂ ಅಲ್ಲ; ಲೋಕಾಶ್ಚರ್ಯಕರವಾದ ಶಂಕರನ ವೇದಾಂತವೂ ಅಲ್ಲ; ಈಗ ಅಪೇಕ್ಷಿಸುತ್ತಲಿರುವ ರಾಜಕೀಯೌನ್ನತ್ಯವೂ ಅಲ್ಲ. ಮತ್ತಾವುದೆಂದರೆ-ಪ್ರಜೆಗಳ ಸಾಹಸೋತ್ಸಾಹವೇ. ಎಲ್ಲಿಂದಲೋ ಬಂದು ಬೊಂಬಾಯಿಯಲ್ಲಿ ನೆಲಸಿದ ಪಾರ್ಸಿ ಜನಗಳ ಸಾಹಸೋತ್ಸಾಹವೇ ಅದಕ್ಕೆ ಕಾರಣವು. ಕಲಕತ್ತಾ ಪಟ್ಟಣವನ್ನು ನೋಡಿರಿ. ಈ ಕಥೆಯೇ ಅಲ್ಲೂ ವ್ಯಕ್ತವಾಗುವುದು. ಆ ಪಟ್ಟಣಕ್ಕೆ ಪಾಶ್ಚಾತ್ಯ ದೇಶೀಯರು ಕೆಲರು ಪ್ರವೇಶಿಸಿ ಕೆಲ ಪರಿಶ್ರಮಗಳನ್ನು ಸ್ಥಾಪಿಸಿ, ಆ ಪಟ್ಟಣಕ್ಕೆ ವಾಣಿಜ್ಯ ಪ್ರಾಮುಖ್ಯವನ್ನು ಸಂಪಾದಿಸಿಕೊಟ್ಟರು. ಮದ್ರಾಸು ಪಟ್ಟಣವೂ ಕೂಡ ಹೀಗೆಯೇ ಅಭಿವೃದ್ಧಿಯೊಂದಿರುವುದೆಂದು ಹೇಳಬಹುದು. ನಾವು ವರ್ತಕತನದಲ್ಲಿ ಹಿಂದೆಬಿದ್ದುಹೋಗಿರುವುದಕ್ಕೆ ಕಾರಣವೇನೋ ಅದನ್ನು ನಾವೇ ಊಹಿಸಿಕೊಳ್ಳಬಹುದು. ನಮಗೆ ವಿದ್ಯೆಯು ಸಾಲದು. ಸಾಹಸೋತ್ಸಾಹಗಳು ಪೂಜ್ಯ. ಪರಸ್ಪರ ವಿಶ್ವಾಸವು ನಾಸ್ತಿ.......ನಮಗೆ ಯಂತ್ರಗಳಲ್ಲಿ ಕೆಲಸಮಾಡುವ ಕೆಲಸಗಾರರು ಹೇರಳವಾಗಿ ಬೇಕು. ಅಂಥ ಕೆಲಸಗಾರರನ್ನು ಆಣಿಮಾಡಿಕೊಡಬಲ್ಲ ವಿದ್ಯೆಯು ಮುಖ್ಯವಾಗಿ ಬೇಕು. ವಾಣಿಜ್ಯಾದಿಗಳ ಅಭಿವೃದ್ಧಿಗೆ ಪ್ರತ್ಯಕ್ಷ ಸಹಾಯಕವಾಗುವ ರಸಾಯನಶಾಸ್ತ್ರ ಪ್ರಕೃತಿಶಾಸ್ತ್ರ ವಿದ್ಯೆಗಳು ಬೇಕು. ಪ್ರಭುತ್ವದವರು ಇಂಥ ವಿದ್ಯೆಗಳನ್ನು ತಮ್ಮ ಪ್ರಜೆಗಳಿಗೆ ಅಧಿಕಾಧಿಕವಾಗಿ ಲಭಿಸುವಂತೆ ಮಾಡಬೇಕು" ಇತ್ಯಾದಿ.

ಅನುಭವಸೀಯಗಳಾದ ಈ ವಿಷಯಗಳನ್ನು ನಮ್ಮ ಹಿಂದುಳಿದಿರುವ ಜನವರ್ಗಗಳವರೆಲ್ಲಾ ಪರಿಭಾವಿಸಿ, ಏಕಮತ್ಯದಿಂದ ತಮ್ಮ ಪುರೋಭಿವೃದ್ಧಿಗೂ ದೇಶದ ಸಂಪದಭಿವೃದ್ಧಿಗೂ ಸಾಧಕವಾಗುವಂತೆ ಪ್ರಯತ್ನಶೀಲರಾಗಬೇಕೆಂಬುದೇ ನಮ್ಮ ಕೋರಿಕೆ.

ಹಿಂದುಳಿದವರಿಗೆ ಪ್ರೋತ್ಸಾಹ.

ಹಿಂದುಳಿದವರ ಉದ್ಧಾರಕ್ಕಾಗಿ ಮೈಸೂರು ಗೌರ್ನಮೆಂಟಿನವರು ಅವರುಗಳಿಗೆ ಸರ್ಕಾರದುದ್ಯೋಗವನ್ನು ಕೊಡುವ ವಿಷಯದಲ್ಲಿ ಇತರರಪೇಕ್ಷಯಾ ಸ್ವಲ್ಪ ಸೌಕರ್ಯವನ್ನುಂಟುಮಾಡಿಯೂ, ವಿದ್ಯಾಪ್ರೋತ್ಸಾಹಕ್ಕಾಗಿ ೧ ಲಕ್ಷ ರೂ.ಗಳನ್ನು ವಿನಿಯೋಗಿಸುವಂತೆ ಅಪ್ಪಣೆಮಾಡಿಯೂ ಇರುವರಷ್ಟೆ. ಸರ್ಕಾರದುದ್ಯೋಗವನ್ನು ಅವರುಗಳಿಗೆ ಅಷ್ಟು ಸುಕರವಾಗಿ ಕೊಡುವಂತೆ ಮಾಡಿರುವುದು ಕೆಲವುಜನ ಮುಂದಾಳುಗಳಿಗೆ ಸೈರಣೆಗೆ ಬಂದಿಲ್ಲ. ಅವರ ಗುಂಪಿಗೆ ಸೇರಿದ ಒಬ್ಬಿಬ್ಬರು ಈ ವಿಷಯವನ್ನು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತಂದು, ಇದು ಪಕ್ಷಪಾತವೆಂದೂ, ಅನರ್ಥಕಾರಿಯೆಂದೂ ಬಿನ್ನಯಿಸಿದರು. ಆದರೆ ದಿವಾನರು ಇದಕ್ಕೆ ಉತ್ತರಕೊಡುವಾಗ್ಗೆ- ಹಿಂದುಳಿದವರಿಗೆ ಪ್ರೋತ್ಸಾಹಕೊಡುವುದಕ್ಕಾಗಿಯೇ ಈ ಏರ್ಪಾಟನ್ನು ಮಾಡಿದೆಯಾದಕಾರಣ, ಆ ಅಪ್ಪಣೆಯನ್ನು ಬದಲಾಯಿಸಲಾಗುವುದಿಲ್ಲವೆಂದು ಹೇಳಿ ಈ ಚರ್ಚೆಯನ್ನು ಕೊನೆಗಾಣಿಸಿದರು. ಇನ್ನು ಮುಂದೆ ಈ ವಿಷಯವು ತಲೆಯಿಕ್ಕಲಾರದೆಂದು ನಿರೀಕ್ಷಿಸುತ್ತೇವೆ. ಆದರೆ ೧ ಲಕ್ಷ ರೂ.ಗಳನ್ನು ಹಿಂದುಳಿದವರ ವಿದ್ಯಾಪ್ರೋತ್ಸಾಹಕ್ಕೆ ಕೊಟ್ಟಿರುವುದರಲ್ಲಿ ಮುಂದಾಳುಗಳಾದ ಬ್ರಾಹ್ಮಣರಿಗೆ ಪಾಲಿಲ್ಲದೆ ಹೋದುದಕ್ಕಾಗಿ ಕೆಲವರಿಗೆ ಹೊಟ್ಟೆಗೆ ಬೆಂಕಿಬಿದ್ದಂತಾಗಿದೆ. ಸಾಧ್ವೀ ಪತ್ರಿಕೆಗೆ ಇದು ಅತ್ಯಧಿಕ ಸಂತಾಪಕರವಾಗಿದೆ. ೧ ಲಕ್ಷ ರೂ. ಗಳನ್ನು ಸರ್ಕಾರದವರು ಕೊಟ್ಟುದರಿಂದ ದೇಶದಲ್ಲಿ ಪ್ರಜೆಗಳಿಗೆ ಜಾತಿಮತ್ಸರವೂ, ತನ್ಮೂಲಕವಾದ ಗಲಾಟೆಗಳೂ ಹುಟ್ಟುವುದಕ್ಕೆ ಅವಕಾಶವಾಯಿತೆಂಬುದಾಗಿಯೂ, ಹೀಗೆ ಗಲಾಟೆ ಮಾಡುವುದಕ್ಕೆ ಮೇಲ್ಪಂಗ್ತಿ ಹಾಕಿದರೆ ಅನಂತರ ಇದನ್ನು ನಿಲ್ಲಿಸುವುದಕ್ಕೆ ಬ್ರಹ್ಮಾದಿಗಳಿಗೂ ಸಾಧ್ಯವಿಲ್ಲವೆಂಬದಾಗಿಯೂ ಮೊದಲಾಗಿ ತರಂಗತರಂಗವಾದ ಲೇಖನಪರಂಪರೆಗಳು ಸಾಧ್ವೀ-ಸಂಪದಭ್ಯುದಯ ಪತ್ರಿಕೆಗಳಲ್ಲಿ ಬರುತ್ತಿವೆ. ಈ ವಿಷಯವಾಗಿ ಸ್ವಲ್ಪ ವಿಚಾರಮಾಡೋಣ. ಹಿಂದುಳಿದವರ ಪ್ರೋತ್ಸಾಹಾರ್ಥವಾಗಿ ಗೌರ್ನಮೆಂಟಿನವರು ಸಹಾಯಮಾಡಿದರೆ, ಆ ಜನರಲ್ಲಿ ಪ್ರಭುತ್ವವಿಷಯವಾಗಿ ಕೃತಜ್ಞತೆಯು ಹೆಚ್ಚುವುದೇ ಹೊರತು ಅಸಮಾಧಾನಕ್ಕೂ ಗಲಾಟೆಗೂ ಕಾರಣವೇ ಇಲ್ಲ. ದೇಶದ ತುಂಬಾ ಆ ಹಿಂದುಳಿದವರೇ ಇರುವರು. ಅವರ ಹೊರತು ಉಳಿದವರು ೧-೨ ಲಕ್ಷ ಜನರಿರಬಹುದು. ಅವರುಗಳಿಗಾದರೂ ಇದರ ವಿಷಯವಾಗಿ ಅಸಮಾಧಾನ ಹುಟ್ಟುವುದಕ್ಕೆ ಕಾರಣವಿಲ್ಲ. ಮುಂಬರಿದ ಆ ಜನರು ಸರ್ಕಾರದ ಸಣ್ಣ ಉದ್ಯೋಗದಿಂದ ಹಿಡಿದು ಉನ್ನತೋದ್ಯೋಗಗಳವರೆಗೂ ವ್ಯಾಪಿಸಿ ಅಧಿಕಾರಾನುಭವಮಾಡುತ್ತಲೂ, ಉಳಿದ ಪ್ರಜೆಗಳೆಲ್ಲರಿಂದಲೂ ಎಷ್ಟೋ ವಿಧವಾದ ಸಹಾಯ ಸೌಕರ್ಯಗಳನ್ನನುಭವಿಸುತ್ತಲೂ ಇರುವಾಗ ಹಿಂದುಳಿದವರ ಉದ್ಧಾರಕ್ಕಾಗಿ ಸರ್ಕಾರದವರು ಎಲ್ಲೋ ಯತ್ಕಿಂಚಿತ್ಸಹಾಯಮಾಡಿದ ಮಾತ್ರಕ್ಕೇ ಅದನ್ನೂ ಸೈರಿಸಲಾರದೆ ಗಲಾಟೆಮಾಡುವುದಕ್ಕುಪಕ್ರಮಿಸಿದರೆ ಈ ಗಲಾಟೆಗೆ ಯಾರು ಕಾರಣಭೂತರೆಂಬುದನ್ನು ಪ್ರಭುತ್ವದವರು ಅರಿತುಕೊಳ್ಳಲಾರರೆ? ಆದರೆ ಅಗ್ರವರ್ಣೀಯರೂ ಸದ್ಗುಣಾಢ್ಯರೂ ಆಗಿರಬೇಕಾದ ತಾವು ಹೀಗೆ ಪರೋತ್ಕರ್ಷಾಸಹನೆಯನ್ನು ತೋರಿಸಿದರೆ ಹೇಗೆಂದು ಯೋಚಿಸತಕ್ಕವರು ಆ ಮುಂಬರಿದ ಜನರಲ್ಲಿ ಎಷ್ಟೋ ಮಂದಿಗಳಿದ್ದಾರೆ. ಪರೋತ್ಕರ್ಷಾಸಹನೆಯೇ ಶೀಲವಾಗುಳ್ಳ ಎಲ್ಲೋ ಕೆಲ ಬ್ರಾಹ್ಮಣನಾಮಧಾರಿಗಳಿಗೆ ಮಾತ್ರ ಇದು ಅಸಹನೆಯನ್ನುಂಟುಮಾಡಿರಬಹುದು. ಅವರುಗಳು ಸಾಧ್ವೀ ಮೊದಲಾದ ಒಂದೆರಡು ಪತ್ರಿಕೆಗಳಲ್ಲಿ ಬರೆದುಕೊಂಡು ಮಾಡುವ ಗದ್ದಲವು ಹೊರತು ಮೈಸೂರು ದೇಶದ ಯಾವ ಮೂಲೆಯಲ್ಲೂ ಯಾವ ತೆರದ ಗಲಾಟೆಯೂ ಇಲ್ಲ. ಯಾರಿಗೂ ಅಸಮಾಧಾನವಿರುವಂತೆಯೂ ಕಾಣುವುದಿಲ್ಲ. ಒಬ್ಬಿಬ್ಬ ಬ್ರಾಹ್ಮಣನಾಮಧಾರಿಗಳು ತಮ್ಮ ಸಂಕುಚಿತಾಭಿಪ್ರಾಯ ಲೇಖನಗಳಿಂದ ಪ್ರಭುತ್ವದವರನ್ನೂ ಪ್ರಜಾಸಾಮಾನ್ಯವನ್ನೂ ದ್ವೇಷಿಸುವ ಲೇಖನಗಳನ್ನು ಬರೆದು ತಮ್ಮ ಜನವರ್ಗಕ್ಕೆಲ್ಲಾ ಕೆಟ್ಟ ಹೆಸರನ್ನು ತರುತ್ತಿರುವುದನ್ನು ನೋಡಿದರೆ ವಿಷಾದವಾಗುತ್ತದೆ. ನಿಜಬ್ರಾಹ್ಮಣಲಕ್ಷಣವು ಹೇಗಿರಬೇಕೆಂಬುದನ್ನು ಆ ಲೇಖಕರು ಅರಿತುಕೊಂಡಿದ್ದರೆ, ನಿರ್ದುಷ್ಟ ಬ್ರಾಹ್ಮಣ್ಯವು ಅವರಲ್ಲಿದ್ದರೆ ಇಂಥ ಕುತ್ಸಿತ ವರ್ತನಕ್ಕೆ ಅವರುಗಳು ತಲೆಹಾಕುತ್ತಲೇ ಇರಲಿಲ್ಲ. ಶಾಸ್ತ್ರಗಳಲ್ಲಿ ನಿಜಬ್ರಾಹ್ಮಣಲಕ್ಷಣವು ಹೀಗೆ ಹೇಳಲ್ಪಟ್ಟಿದೆ:—

"ಶುಭಶ್ರೀಲಸಂಪನ್ನಃ ಪ್ರಸನ್ನಾತ್ಮಾತ್ಮವಿದ್ಬುಧಃ | ಪ್ರಾಪ್ಯೇಹಲೋಕೇಸನ್ಮಾನಂ ಸಬ್ರಾಹ್ಮಣಇತಿಸ್ಮೃತಃ || ಯಸ್ಯವಾಙ್ಮನಸೀಸ್ನಾತಾಂ ಸಮ್ಯಕ್ಪ್ರಣಿಹಿತೇಸದಾ | ತಪಸ್ತ್ಯಾಗಶ್ಚಸತ್ಯಂಚ ಸವೈಬ್ರಾಹ್ಮಣಉಚ್ಯತೆ || ಅಧ್ಯಾಪನಂಚಾಧ್ಯಯನಂ ಯಜನಂಯಾಜನಂ ತಥಾ | ದಾನಂಪ್ರತಿಗ್ರಹಂಚೈವ ಬ್ರಾಹ್ಮಣಾನಾಮಕಲ್ಪಯತ್ || ಶಮೋದಮಸ್ತಪಶ್ಶೌಚಂ ಕ್ಷಾಂತಿರಾರ್ಜವಮೇವಚ | ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮಸ್ವಭಾವಜಂ || ಅಹಿಂಸಾನಿರ್ಮಮತ್ವಂಚ ದುಷ್ಕೃತ್ಯಸ್ಯಚವರ್ಜನಂ | ರಾಗದ್ವೇಷನಿವೃತ್ತಿಶ್ಚ ಏತದ್ಬ್ರಾಹ್ಮಣಲಕ್ಷಣಂ || ಕ್ಷಮಾದಯಾದಮೋದಾನಂ ಸತ್ಯಂಶೌಚಂ ಸ್ಮೃತಿರ್ಘೃಣಾ | ವಿದ್ಯಾವಿಜ್ಞಾನಮಾಸ್ತಿಕ್ಯಂ ಏತದ್ಬ್ರಾಹ್ಮಣಲಕ್ಷಣಂ || ಪಾರಗಂಸರ್ವವೇದಾನಾಂ ಸರ್ವಸದ್ಗುಣಭೂಷಿತಂ | ಮುಕ್ತಸ್ಯರತಿಯೇಧರ್ಮಂ ತಮೇವಬ್ರಾಹ್ಮಣಂವಿದುಃ || ನಿರ್ಮಮೋನಿರಹಂಕಾರೋ ನಿಸ್ಸಂಗೋನಿಷ್ಪರಿಗ್ರಹಃ | ರಾಗದ್ವೇಷವಿನಿರ್ಮುಕ್ತಸ್ತಂದೇವಬ್ರಾಹ್ಮಣಂವಿದುಃ || ಋಜುಸ್ತಪಸ್ವೀಸಂತುಷ್ಟಃ ಕ್ಷಮಾಹಾಂೀಜಿತೇಂದ್ರಿಯಃ | ಜ್ಞಾನೀದಾತಾದಯಾಳುಶ್ಚ ಬ್ರಾಹ್ಮಣೋನವಭಿರ್ಗುಣೈಃ || ಜನ್ಮನಾಜಾಯತೇಶೂದ್ರಃ ಸಂಸ್ಕಾರಾದ್ದ್ವಿಜಉಚ್ಯತೆ | ವೇದಾಭ್ಯಾಸಾದ್ಭವೇದ್ವಿಪ್ರೋ ಬ್ರಹ್ಮವಿದ್ಬ್ರಾಹ್ಮಣೋಭವೇತ್" ||

ಸದ್ಗುಣಸಂಪನ್ನತ್ವವೇ ಇತ್ಯಾದ್ಯನೇಕ ಪ್ರಮಾಣಗಳಿಂದ ಸರ್ವಬ್ರಾಹ್ಮಣತ್ವವೆಂದು ಸಿದ್ಧವಾಗುತ್ತಿರಲಾಗಿ, ಆ ಬ್ರಾಹ್ಮಣ್ಯದ ಬುಡಕ್ಕೇ ಕೊಡಲಿಹಾಕುವ ರಾಗದ್ವೇಷಾದಿಗಳಿಗೆ ಬಲಿಯಾಗಿರುವ ಜನರು ತಾವು ವಿದ್ಯಾಶಕ್ತಿಯೊಂದರಿಂದಲೇ ಬ್ರಾಹ್ಮಣರೆಂದು ಹೇಳಿಕೊಂಡು, ಇತರರ ಮೇಲೆಲ್ಲಾ ಹಗೆತನವನ್ನು ಸಾಧಿಸುವುದಕ್ಕುಪಕ್ರಮಿಸಿದರೆ ಅವರುಗಳು "ವಿದ್ಯಯಾ ವಿಮಲಯಾಪ್ಯಲಂಕೃತೋ ದುರ್ಜನಸ್ಸದಸಿಮಾಸ್ತುಕಶ್ಚನ | ಸಾಕ್ಷರಾಹಿ ವಿಪರೀತತಾಂಗತಾಃ ಕೇವಲಂ ಜಗತಿ ತೇಪಿ ರಾಕ್ಷಸಾಃ||" ಎಂದರೆ ದುರ್ಜನನು ವಿದ್ಯಾಲಂಕೃತನಾಗಿದ್ದರೂ ಅವನು ಸಭೆಗೆ ಅಯೋಗ್ಯನು. ಕುಮಾರ್ಗವನ್ನನುಸರಿಸಿದ ಪಂಡಿತರು ಸಾಕ್ಷರರಾಗಿದ್ದರೂ ಅವರ ವಿಷಯದಲ್ಲಿ "ಸಾಕ್ಷರಾ" ಶಬ್ದವು ತಲೆಕೆಳಗಾಗಿ ವರ್ತಿಸುವುದು, ಎಂದರೆ "ರಾಕ್ಷಸಾಃ" ಎಂದಾಗುವುದು—ಎಂದಿರುವ ಚಾಟೂಕ್ತಿಯ ಪ್ರಕಾರ ಅವರುಗಳು ಮಾನುಷವರ್ಗಕ್ಕೆ ಸೇರದೆ ಲೋಕಹಿಂಸಕರಾದ ರಾಕ್ಷಸಗಣಕ್ಕೆ ಸೇರಿದವರೆಂದು ಭಾವಿಸಲ್ಪಡುವುದಕ್ಕೇ ಅರ್ಹರಾದವರು. ಸುಜನರು ಅಂಥವರಿಗೆ ದೂರರಾಗಿರುವುದೇ ಶ್ರೇಯಸ್ಕರವು.

ಸ್ಟೇಟ್ ಸೆಕ್ರೆಟರಿ ಮಿ|| ಮಾಂಟೂಗರವರು.

ಭರತಖಂಡದ ಮಂತ್ರಿಗಳಾದ ರೈಟ್ ಆನರಬಲ್ ಇ. ಎಸ್. ಮಾಂಟೂಗ್‌ರವರು ಸೀಮೆಯಿಂದ ಯಾವದಿನ ಪ್ರಯಾಣಮಾಡಿದರೆಂಬುದು ಶತ್ರುಗಳ ಸಬ್‌ಮೇರೀನಿನ ಹಾವಳಿಗಾಗಿ ಪ್ರಕಟವಾಗದಿದ್ದರೂ, ಅವರು ಪ್ರಯಾಣಮಾಡಿ ಬರುತ್ತಿರುವ ಸಂಗತಿಯು ಕಳೆದವಾರದಲ್ಲೇ ಭರತಖಂಡಕ್ಕೆ ಗೊತ್ತಾಗಿದ್ದಿತು. ಇವರು ಕಳೆದ ೯ನೆಯ ತಾರೀಖಿನ ದಿನ ಬೊಂಬಾಯಿಪಟ್ಟಣಕ್ಕೆ ಸುರಕ್ಷಿತವಾಗಿ ಬಂದು ಸೇರಿದರು. ಇವರ ಸಂಗಡ ಅವರ ಅಂತರಂಗಿಕ ಕಾರ್ಯದರ್ಶಿಗಳಿಬ್ಬರೂ, ಇಂಡ್ಯಾ ಆಫೀಸಿನ ಒಬ್ಬ ಕಾರ್ಯದರ್ಶಿಗಳೂ, ಇಂಡ್ಯಾ ಕೌನ್ಸಿಲಿನ ಒಬ್ಬ ಸಭಿಕರೂ, ಪಾರ್ಲಿಮೆಂಟ್ ಲಾರ್ಡುಗಳ ಸಂಘದ ಅಧ್ಯಕ್ಷರೊಬ್ಬರೂ, ಪಾರ್ಲಿಮೆಂಟ್ ಸಭಿಕರೊಬ್ಬರೂ ಸಹ ಬಂದಿರುತ್ತಾರೆ. ಇವರುಗಳು ಬಂದಿರುವ ಉದ್ದೇಶವು ನಮ್ಮ ಪತ್ರಿಕಾವಾಚಕವರ್ಗಕ್ಕೆಲ್ಲಾ ಗೊತ್ತೇಯಿದೆ. ಇವರು ಅದೇ ದಿನ ರಾತ್ರಿ ಬೊಂಬಾಯಿಯಿಂದ ದಿಲ್ಲಿ ಪಟ್ಟಣಕ್ಕೆ ಪ್ರಯಾಣಮಾಡಿ ೧೧ನೆಯ ತಾರೀಖಿನಲ್ಲಿ ಹೋಗಿ ಸೇರಿದರು. ಇವರು ಈ ತಿಂಗಳ ಕೊನೆಯವರೆಗೂ ದಿಲ್ಲಿಯಲ್ಲೇ ಇರುವರು. ಸಂಸ್ಥಾನಿಕ ಮಹಾಸಭೆಗಾಗಿ ಆ ಪಟ್ಟಣದಲ್ಲಿ ಕೂಡಿದ್ದ ಭೂಪತಿಗಳೊಡನೆ ಅವರು ೨-೩ ದಿನಗಳವರೆಗೂ ಕಲೆತು ಸಂಭಾಷಿಸುವರು. ಕಳೆದ ತಾ|| ೧೫ ರಿಂದಲೂ ಭಾರತೀಯರ ವಿಜ್ಞಾಪನೆಗಳನ್ನು ಸ್ವೀಕರಿಸುವುದಕ್ಕೆ ಆರಂಭಿಸಿರುವರು. ಈ ತಿಂಗಳ ಕೊನೆಯಲ್ಲಿ ಅವರು ದಿಲ್ಲಿಯಿಂದ ಹೊರಟು ಕಲ್ಕತ್ತೆಗೆ ಹೋಗಿ ಡಿಸೆಂಬರ್ ತಾ|| ೧೨ರ ವರೆಗೆ ಅಲ್ಲಿರುವರು. ಅಲ್ಲಿಂದ ಮದರಾಸಿಗೆ ಹೊರಟು ಅಲ್ಲಿ ಡಿಸೆಂಬರ್ ತಾ|| ೧೪ ರಿಂದ ೨೨ ರವರೆಗೆ ಇರುವರು. ಕ್ರಿಸ್ತ್‌ಮಸ್ ಹಬ್ಬದ ಹೊತ್ತಿಗೆ ಬೊಂಬಾಯಿಗೆ ಹೋಗಿ, ಅಲ್ಲಿ ಮುಂದಣ ಜನವರಿ ತಾ|| ೨ರ ವರೆಗೆ ಇರುವರು ಎಂದು ಪ್ರಕಟವಾಗಿರುವುದು. ಇವರು ತಮ್ಮ ಸಂಚಾರವನ್ನೆಲ್ಲಾ ಯಾವುದೊಂದು ಆಡಂಬರವೂ ಇಲ್ಲದಂತೆ ಸಾಧಾರಣವಾಗಿ ನಡೆಯುವುದಕ್ಕೆ ಏರ್ಪಾಟುಮಾಡಿಸಿಕೊಂಡಿರುವರು. ಇವರ ಸಂಚಾರಕಾಲದಲ್ಲಿ ನಮ್ಮ ವೈಸ್ರಾಯರೂ ಜತೆಯಲ್ಲೇ ಇರುವರು. ಇವರು ಹೋದ ದ ಕಡೆಯಲ್ಲೆಲ್ಲಾ ಪ್ರಜಾಪ್ರತಿನಿಧಿಗಳು ರಾಜಕೀಯ ವಿಷಯವಾಗಿ ಕೊಡುವ ವಿಜ್ಞಾಪನಗಳನ್ನು ಸ್ವೀಕರಿಸುವರು. ಪ್ರಜಾಪ್ರಮುಖರೊಡನೆ ವಿಷಯಗಳನ್ನೆಲ್ಲಾ ಚರ್ಚಿಸಿ, ಅವರುಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳುವರು. ಆದರೆ ಅವುಗಳಿಗೆಲ್ಲಾ ಉತ್ತರವನ್ನು ಕೊಡುವ ಪರ್ಯವಸಾನವೊಂದೂ ಇಲ್ಲಿ ಆಗುವುದಿಲ್ಲ. ಮತ್ತು ನಡೆದ ಸಂಭಾಷಣಾದಿಗಳೆಲ್ಲವೂ ಕೂಡ ಬಹಿರಂಗವಾಗತಕ್ಕವೂ ಆಗಿರುವುದಿಲ್ಲ. ಇಲ್ಲಿ ಅವರು ಸಂಗ್ರಹಿಸಿಕೊಂಡ ವಿಷಯಗಳನ್ನೂ ಅನುಭವವನ್ನೂ ಸೀಮೆಗೆ ಹೋಗಿ ಮಂತ್ರಿಮಂಡಲಕ್ಕೂ ಪಾರ್ಲಿಮೆಂಟಿಗೂ ನಿವೇದಿಸಿದನಂತರ ಉತ್ತರತ್ರ ರಾಜಕೀಯ ಸುಧಾರಣ ನಿರ್ಧಾರವು ನಡೆಯುವಂತೆ ಏರ್ಪಾಟಾಗಿರುವುದು.

ಮಿ|| ಮಾಂಟೂಗ್‌ರವರು ಭರತಖಂಡದ ಪ್ರಜೆಗಳ ನಿಜವಾದ ಆಶಯಗಳನ್ನೂ ಸ್ಥಿತಿಗತಿಗಳನ್ನೂ ಪ್ರತ್ಯಕ್ಷವಾಗಿ ಅರಿತುಕೊಂಡು ಹೋಗುವುದಕ್ಕಾಗಿ ಈ ಯುದ್ಧದ ಗಂಡಾಂತರದ ಸಮಯದಲ್ಲೂ ಬಹುದೂರ ಪ್ರಯಾಣಮಾಡಿ ಬಂದುದಕ್ಕಾಗಿ ಭಾರತೀಯರೆಲ್ಲರೊಡನೆಯೂ ನಾವು ಕೃತಜ್ಞತೆಯಿಂದ ಸ್ವಾಗತ ಮಾಡುವುದಲ್ಲದೆ, ಇಲ್ಲಿರುವವರೆಗೂ ಅವರ ಪ್ರಯಾಣವು ಸುರಕ್ಷಿತವಾಗಿ ನಡೆದು, ಸಕಲ ಪ್ರಜೆಗಳ ನಿಜವಾದ ಮನೋಭಾವಗಳೂ ಅವರ ಗೋಚರಕ್ಕೆ ಬರುವಂತೆ ಆಗಿ, ಅದರಿಂದ ಮುಂದೆ ನಡೆಯಬಹುದಾದ ರಾಜಕೀಯ ಸುಧಾರಣವು ಈ ದೇಶದ ಸಕಲ ಪ್ರಜಾವರ್ಗಗಳ ಅಭ್ಯುನ್ನತಿಗೂ ಸಹಾಯಕವಾಗಿ ಏರ್ಪಡುವಂತೆ ಆಗಲೆಂದು ಆಶಿಸುತ್ತೇವೆ.

ಮದ್ರಾಸಾಧಿಪತ್ಯದ ವೀರಶೈವರ ಸಭೆಯು.

ಮದ್ರಾಸಿನ ವೀರಶೈವ ನಿವಾಸಿಗಳೂ ಮತ್ತು ಪರಸ್ಥಳಗಳಿಂದ ಬಂದಿದ್ದ ಕೆಲ ಪ್ರಮುಖ ವೀರಶೈವರೂ ಕಳೆದ ತಾ|| 7-11-17 ರ ಸಾಯಂಕಾಲ ಅಲ್ಲಿಯ ವೀರಶೈವಾಶ್ರಮದಲ್ಲಿ ಹೈಕೋರ್ಟ್ ವಕೀಲರಾದ ಮ|| ಸಂಗಪ್ಪ, ಬಿ.ಎ., ಬಿ.ಎಲ್, ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಆಗ್ಗೆ ಅಧ್ಯಕ್ಷರು ಪ್ರಕೃತ ರಾಜಕೀಯ ಸ್ಥಿತಿಯನ್ನೂ, ಇಂಡ್ಯಾದ ಸ್ಟೇಟ್‌ಸೆಕ್ರೆಟರಿಯವರಲ್ಲಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವುದರಾವಶ್ಯಕತೆಯನ್ನೂ ಕುರಿತು ಆಂಗ್ಲಭಾಷೆಯಲ್ಲಿ ತಮ್ಮ ಅಸ್ಖಲಿತವಾಣಿಯಿಂದ ಬಹಳ ಸರಸವಾಗಿ ಭಾಷಣಮಾಡಿದರು. ಆ ನಂತರ ಬಳ್ಳಾರಿಯ ಪ್ರಮುಖ ವರ್ತಕರೂ ಆನರರಿ ಮ್ಯಾಜಿಸ್ಟ್ರೇಟರೂ ಆದ ಮ|| ಆಲಂಬಸಪ್ಪನವರು ಈ ಸಭೆಯುದ್ದೇಶವನ್ನು ಕುರಿತು ಸಾನುಭೂತಿಯನ್ನು ತೋರಿಸಿ ಪರಸ್ಥಳಗಳಿಂದ ಬಂದಿದ್ದ ಟೆಲಿಗ್ರಾಮುಗಳನ್ನೋದಿ ಅಧ್ಯಕ್ಷರ ಭಾಷಣವನ್ನು ಕನ್ನಡದಲ್ಲಿ ತಿಳಿಸಿದರು. ತರುವಾಯ ಈ ಮುಂದೆ ಹೇಳುವ ನಿರ್ಧಾರಗಳು ಮಾಡಲ್ಪಟ್ಟುವು.—(1) ಮದ್ರಾಸಾಧಿಪತ್ಯದ ವೀರಶೈವರುಗಳು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ತಮಗಿರುವ ಅಪಾರವಾದ ರಾಜಭಕ್ತಿಯನ್ನು ಪ್ರದರ್ಶಿಸುತ್ತಾರೆ, ಮತ್ತು ಮದ್ರಾಸಾಧಿಪತ್ಯಕ್ಕೆ ಆ|| ಮಿ|| ಮಾಂಟೆಗ್‌ರವರ ಮತ್ತು ವೈಸ್ರಾಯರ ಸುಭಾಗಮನವನ್ನು ಬಯಸುತ್ತಾರೆ. (2) ವೀರಶೈವರು ಯಾವಾಗಲೂ ವ್ಯಾಪಾರ ಮತ್ತು ಬೇಸಾಯದ ವೃತ್ತಿಗಳನ್ನು ಸ್ವತಂತ್ರವಾಗಿ ನಡಿಸಿಕೊಂಡು ಬರುತ್ತಿರುವುದರಿಂದ ಕೈ|| ಗೋಖಲೆಯವರ ಪಣನೆ ಕೊಡಿಸಿರುವಂತೆ, ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡುಗಳಲ್ಲಿ ನಮ್ಮ ಪ್ರಜಾಸಂಖ್ಯಾನುಗುಣವಾಗಿ ಪ್ರತಿನಿಧಿಗಳಿರಲೂ, ಸರ್ಕಾರಿ ಉದ್ಯೋಗದಲ್ಲಿ ಸಾಕಷ್ಟು ಜನರು ನಿಯಮಿಸಲ್ಪಡಲೂ, ಮತ್ತು ನಿಯಮನಿರ್ಮಾಣ ಸಭೆಯಲ್ಲಿ ಕನಿಷ್ಠ ಪಕ್ಷ ಇಬ್ಬರು ಸಭಾಸ್ತಾರರಿರಲೂ ಅವಕಾಶವನ್ನುಂಟುಮಾಡಿಕೊಡಬೇಕು. (3) ಯುದ್ಧಾನಂತರ ಬಾಲವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸುವಂತೆಯೂ, ಸರ್ಕಾರದಿಂದ ಬಡವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಟ್ಟು ಪ್ರೋತ್ಸಾಹಪಡಿಸುವಂತೆಯೂ ಪ್ರಾರ್ಥಿಸುವುದು. (4) ಮ|| ಬಸವಯ್ಯನವರು ಮೈಸೂರಲ್ಲಿ ಮಾಡುತ್ತಿರುವ ಜನೋಪಕಾರ ಕಾರ್ಯವು ಸ್ತೋತ್ರಾರ್ಹವಾಗಿರುವುದಲ್ಲದೆ ಅವರು ಧೈರ್ಯದಿಂದ ಪ್ರಜಾಪ್ರಾತಿನಿಧ್ಯದ ಸ್ವಾತಂತ್ರ್ಯವನ್ನು ಪಡೆಯಲು ಹೋರಾಡುತ್ತಿರುವುದಕ್ಕಾಗಿ ಈ ಸಮಾಜದವರು ತಮ್ಮ ವಂದನೆಯನ್ನು ತಿಳಿಸುತ್ತಾರೆ. ಬಳಿಕ ಸ್ಟೇಟ್‌ಸೆಕ್ರೆಟರಿಯವರಲ್ಲಿ ಬಿನ್ನೈಸಿಕೊಳ್ಳಬೇಕಾದ ವಿಷಯಗಳನ್ನೂ ಅವುಗಳನ್ನು ಅಂಕೆಮಾಡುವ ದೊಡ್ಡ ಮನುಷ್ಯರುಗಳನ್ನೂ ಗೊತ್ತುಪಡಿಸಲು ಒಂದು ಸಂಘವೇರ್ಪಡಿಸಲ್ಪಟ್ಟು ಮ|| ಗಳಾದ ಎ. ಸಂಗಪ್ಪನವರು ಅಧ್ಯಕ್ಷರಾಗಿಯೂ, ಹೈಕೋರ್ಟ್ ವಕೀಲ್ ನಂಜಪ್ಪಸೆಟ್ಟರು, ಮದ್ರಾಸಿನ ಗುರುಬಸವ ಕಂಪೆನಿಯ ಚೆನ್ನವೀರಸೆಟ್ಟರು, ಬಳ್ಳಾರಿಯ ಆ|| ಮ್ಯಾಜಿಸ್ಟ್ರೇಟ್ ಆಲಂಬಸಪ್ಪನವರು, ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಫಂಡಿನ ಸೆಕ್ರೆಟರಿ ಸಿಂದ್ಗಿ ಸಿದ್ದಪ್ಪನವರು, ಯೂನಿಯಕ್ ಚೇರ್ಮನ್ನರಾದ ಜಾಗಟಗೇರಿ ದೊಡ್ಡವೀರಪ್ಪನವರು, ಡಿ|| ಬೋರ್ಡು ಮೆಂಬರು ಕೊಟ್ರ ಬಸಪ್ಪನವರು, ಜಹಗೀರ್ದಾರ್ ಕೆ. ಚಿಕ್ಕಬಸಣ್ಣನವರು, ವೀರಶೈವಾಚಾರಪಂಚಪತ್ರದ ಸಂಪಾದಕರಾದ ಹೊಳೆಬಸವಶಾಸ್ತ್ರಿಗಳು, ಆ|| ಮ್ಯಾಜಿಸ್ಟ್ರೇಟ್ ಭೋಗಸೆಟ್ಟಿ ಗಿಡ್ಡಪ್ಪನವರು, ಮಡಕಶಿರಾದ ಬಿ. ನಂಜಪ್ಪಸೆಟ್ಟರು ಇವರೆಲ್ಲರೂ ಮೆಂಬರುಗಳಾಗಿ ಗೊತ್ತುಮಾಡಲ್ಪಟ್ಟಿರುವರು.

ಹಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಅಲ್ಲಲ್ಲಿ ಇಲಿಗಳು ಸಾಯುವ ಸುದ್ದಿಯುಂಟಾಗಿದೆ. ಈ ಡಿಸ್ಟ್ರಿಕ್ಟಿನ ಅನೇಕ ಸ್ಥಳಗಳಲ್ಲಿ ಪ್ಲೇಗಿನ ಹಾವಳಿಯು ಉಪಕ್ರಮವಾಗಿದೆ.

ರಾಜಧಾನಿಯಲ್ಲೂ ಸುತ್ತುಮುತ್ತಣ ಅನೇಕ ಗ್ರಾಮಾಂತರಗಳಲ್ಲೂ ಕಳೆದ ಮಂಗಳವಾರ ಒಳ್ಳೆಯ ಹದವಾದ ಮಳೆಯು ಆಯಿತು. ನಿಂತಿರುವ ಪೈರುಗಳಿಗೆ ಬಹಳ ಅನುಕೂಲವಾಯಿತು.

ಚಾಮರಾಜನಗರ ತಾಲ್ಲೂಕಿನ ಕಾಡಿನಲ್ಲಿ ಆನೆಗಳನ್ನು ಹಿಡಿಯುವ ಕೆಡ್ಡಾದ ಏರ್ಪಾಟುಗಳೆಲ್ಲಾ ಸಾಂಗವಾಗಿವೆ. ಶ್ರೀಮನ್ಮಹಾರಾಜರ ಮತ್ತೂ ರಾಣೀವಾಸದವರ ಸ್ವಾರಿಗಳೆಲ್ಲಾ ಈ ತಿಂಗಳ ಕೊನೆಗೆ ಅಲ್ಲಿಗೆ ದಯಮಾಡಿಸುವುವೆಂದು ಕೇಳುತ್ತೇವೆ. ಬರೋಡಾ ಮಹಾರಾಜರೂ, ಸ್ಟೇಟ್‌ಸೆಕ್ರೆಟರಿಯವರೂ ಸಹ ಅಲ್ಲಿಗೆ ದಯಮಾಡಿಸುವ ಸಂಭವವಿದೆಯೆಂದು ಕೇಳುತ್ತೇವೆ.

ಸರ್ ದೊರಾಬ್ಜಿ ತಾತಾರವರ ಕಬ್ಬಿಣದ ಕರ್ಮಾಗಾರದ ಇಂಜನಿಯರಾದ ಮಿ|| ಪೆರ್ಕಿ‌ರವರು ಮೈಸೂರು ಕಬ್ಬಿಣದ ಗಣಿಗಳ ಯಂತ್ರಾಗಾರದ ವಿಷಯವಾಗಿ ನಮ್ಮ ಶ್ರೀಮನ್ಮಹಾರಾಜರೊಡನೆಯೂ ಸರ್ಕಾರದವರೊಡನೆಯೂ ಮಾತನಾಡುವುದಕ್ಕಾಗಿ ರಾಜಧಾನಿಗೆ ದಯಮಾಡಿಸಿದ್ದು, ಮುಂದಣ ಕಾರ್ಯಕ್ರಮಗಳನ್ನೆಲ್ಲಾ ನಿರ್ಧರಿಸಿದರೆಂದು ಕೇಳುತ್ತೇವೆ.

ನಮ್ಮ ಶ್ರೀಮದ್ಯುವರಾಜರು ದಿಲ್ಲಿ ಪಟ್ಟಣಕ್ಕೆ ದಯಮಾಡಿಸಿದ್ದಾರಷ್ಟೆ, ಅಲ್ಲಿ ಸಂಸ್ಥಾನಿಕರ ಮಹಾಸಭೆಯ ಕಾರ್ಯಗಳು ಕಳೆದ ತಾ|| ೫ ರಿಂದ ತಾ|| ೧೧ ರವರೆಗೆ ನೆರವೇರಿದುವು. ಕಳೆದ ವರ್ಷದ ಸಭೆಗೆ ೩೨ಮಂದಿ ಸಂಸ್ಥಾನಿಕರು ಬಂದಿದ್ದರು. ಈ ಸಲದ ಮಹಾಸಭೆಗೆ ೪೮ ಮಂದಿ ಬಂದಿದ್ದರು. ಈ ಪ್ರಭುಗಳಿಗೆಲ್ಲಾ ಬಿಡಾರಗಳೂ ಆತಿಥ್ಯಗಳೂ ಬಹು ಸಮರ್ಪಕವಾಗಿ ನೆರವೇರಿಸಲ್ಪಟ್ಟುವು. ಸಭಾರಂಭದಲ್ಲಿ ವೈಸ್ರಾಯರು ಉಪನ್ಯಾಸಮಾಡಿದುದರಲ್ಲಿ, ಪ್ರಭುಗಳಿಗೆಲ್ಲಾ ಸ್ವಾಗತಮಾಡಿ, ಇಂಥ ಸಭೆಗಳಿಂದ ಸಂಸ್ಥಾನಾಧಿಪರ ಅಭಿಪ್ರಾಯಗಳು ಸಾಮ್ರಾಜ್ಯಪ್ರಭುತ್ವದವರಿಗೂ ಅವರ ಅಭಿಪ್ರಾಯಗಳು ಸಂಸ್ಥಾನಿಕರಿಗೂ ಪರಸ್ಪರ ಗೊತ್ತಾಗಿ ಅನ್ಯೋನ್ಯತಾಭಿವೃದ್ಧಿಯುಂಟಾಗುವುದಕ್ಕೆ ಇರುವ ಸೌಕರ್ಯವನ್ನು ವಿವರಿಸಿ, ಸ್ವಲ್ಪಕಾಲಾನುಭವಾನಂತರ ಸಂಸ್ಥಾನಾಧೀಶರ ಪ್ರತ್ಯೇಕ ಸಂಘವೊಂದು ಸ್ಥಾಪಿಸಲ್ಪಡುವುದೆಂದು ತಿಳಿಯಿಸಿ, ಸಾಮ್ರಾಜ್ಯ ಮಹಾಸಭೆಯಲ್ಲಿ ಸಂಸ್ಥಾನಾಧಿಪತಿಗಳಿಗೆ ಕೊಡಲ್ಪಟ್ಟ ಪ್ರಾತಿನಿಧ್ಯ ಗೌರವವನ್ನೂ ಅದರ ಪ್ರಯೋಜನವನ್ನೂ ತಿಳಿಯಿಸಿ, ಯುದ್ಧದಲ್ಲಿ ಸಂಸ್ಥಾನಿಕರೆಲ್ಲಾ ಪ್ರಭುತ್ವದವರಿಗೆ ಮಾಡಿರುವ ಸಹಾಯಗಳನ್ನು ವಿವರಿಸಿ ಕೊಂಡಾಡಿ, ಸಭಾಕಾರ್ಯಾರಂಭವನ್ನು ಮಾಡಿದರು. ಬಳಿಕ ಸಭಿಕರ ಪರವಾಗಿ ಬಿಕನೀರ್ ಮಹಾರಾಜರು ಪ್ರತ್ಯುತ್ತರಭಾಷಣವನ್ನು ಮಾಡಿ ವಂದಿಸಿದರು. ವೈಸ್ರಾಯಿ ದಂಪತಿಗಳು ತಾ|| ೬ ರ ರಾತ್ರಿ ತಮ್ಮ ಭವನದಲ್ಲಿ ಪ್ರಭುಗಳಿಗೂ ಅವರ ಮಂತ್ರಿವರ್ಗಗಳಿಗೂ ಅಂಗರಕ್ಷಕವರ್ಗಕ್ಕೂ ಸಹ ಒಂದು ಔತಣವನ್ನು ಬಹಳ ವಿಜೃಂಭಣೆಯಿಂದ ನಡೆಯಿಸಿ ಸಂತೋಷಪಡಿಸಿದರು.

ನರಸಿಂಹರಾಜಪುರದ ಮ|| ಇಂ. ಶಾಂತಪ್ಪಶೆಟ್ಟರು ತಮ್ಮ ಊರಲ್ಲಿ ಅನಾಥ ವೀರಶೈವ ವಿದ್ಯಾರ್ಥಿಗಳಿಗೋಸ್ಕರ ಒಂದು ಅನಾಥಾಲಯಸ್ಥಾಪನೆಗೆ ಉಜ್ಜುಗಿಸಿ, ಕಟ್ಟಡದ ಶಂಕುಸ್ಥಾಪನ ಮಹೋತ್ಸವವನ್ನು ಅಲ್ಲಿನ ಮುನ್ಸೀಫರವರ ಹಸ್ತದಿಂದ ಕಳೆದ ಆಶ್ವಯುಜ ಶುದ್ಧ ೧೦ ಯಲ್ಲಿ ನೆರವೇರಿಸಿದರು. ಧರ್ಮಕಾರ್ಯದಲ್ಲಿ ವಿಶೇಷಾದರವುಳ್ಳ ಉತ್ತಮವಂಶದಲ್ಲಿ ಜನಿಸಿದ ಈ ಮಹನೀಯರು ಪ್ರಸಕ್ತ ಧರ್ಮಸ್ಥಾಪನೆಯು ಸಾರೋದ್ಧಾರವಾಗಿ ನಡೆದುಕೊಂಡು ಹೋಗುವಂತೆ ಮಾಡುವುದಕ್ಕಾಗಿ ೫೦೦ ರೂ. ಕಂದಾಯವುಳ್ಳ ತರಿ ಬಾಗಾಯಿತು ಮಿಶ್ರವಾದ ದೊಡ್ಡ ಆಸ್ತಿಯನ್ನು ಈಶ್ವರಾರ್ಪಿತವಾಗಿ ಒಪ್ಪಿಸಿ, ಅದರ ಆದಾಯದಿಂದ ಆಲಯದಲ್ಲಿರುವ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಾದಿಗಳ ಸಹಾಯಮಾಡುವುದಕ್ಕೆ ಏರ್ಪಡಿಸಿರುವರೆಂದು ಕೇಳಿ ಸಂತೋಷಿಸುತ್ತೇವೆ. ಇದೇ ಅಲ್ಲದೆ ಈ ಧರ್ಮಾತ್ಮರು ನರಸಿಂಹರಾಜಪುರದಲ್ಲಿ ಇದಕ್ಕೆ ಮುಂಚೆಯೇ ಒಂದು ಧರ್ಮಸತ್ರವನ್ನೂ ಸ್ವಾದೂದಕವಾಪಿಯನ್ನೂ ವಾಚನಾಲಯವನ್ನೂ ಕೂಡ ಸರ್ವಜನೋಪಯೋಗಿಯಾಗುವಂತೆ ಸ್ಥಾಪಿಸಿ, ಅದರ ಪ್ರವೇಶೋತ್ಸವವನ್ನು ಶ್ರೀಮದ್ಯುವರಾಜರವರ ಮೂಲಕ ಕಳೆದ ೧೯೧೫ ನೆಯ ವರ್ಷದಲ್ಲೇ ನಡೆಯಿಸಿರುವರು. ಅಲ್ಲದೆ ಬಡಬಗ್ಗರಿಗಾಗಿ ಒಂದು ಶಾಲಾಭವನವನ್ನೂ ಪಂಚಮಬಾಲಕರಿಗಾಗಿ ಒಂದು ಶಾಲಾಭವನವನ್ನೂ ಸಹ ಅದೇ ಊರಿನಲ್ಲೇ ಕಟ್ಟಿಸಿಕೊಟ್ಟು ಅವೆರಡರ ಆರಂಭಮಹೋತ್ಸವವನ್ನು ಈ ವರ್ಷದಲ್ಲೇ ಸರ್ಕಾರದಧಿಕಾರಿಗಳ ಮೂಲಕ ನಡೆಯಿಸಿರುವರು. ಬೀರೂರಿನಲ್ಲಿ ಒಂದು ಶಿವಾಲಯವನ್ನೂ ಧರ್ಮಸತ್ರವನ್ನೂ ಕಟ್ಟಿಸುತ್ತಿರುವರು. ಇಂಥ ಧರ್ಮಾತ್ಮರೊಬ್ಬೊಬ್ಬರು ಇದ್ದರೂ ಲೋಕಕ್ಕೆ ಎಷ್ಟು ಕಲ್ಯಾಣವಾಗುತ್ತದೆಂಬುದನ್ನು ಮ|| ಶೆಟ್ಟರ ಧರ್ಮಕಾರ್ಯಗಳೇ ನಿರೂಪಿಸುತ್ತಿರುವುವು. ಧನಿಕರಿಗೆಲ್ಲಾ ಮಾರ್ಗದರ್ಶಕರಾಗಿರುವ ಇಂಥ ಪವಿತ್ರಚರಿತ್ರರ ದೀರ್ಘಾಯುರಾರೋಗ್ಯವನ್ನು ಕೋರುವುದು ದೇಶಾಭಿಮಾನಿಗಳೆಲ್ಲರಿಗೂ ಸಂತೋಷಪ್ರದವು.

ಯುದ್ಧವಾರ್ತೆಯು.

ಪಶ್ಚಿಮ ರಣರಂಗ—ಬೆಲ್ಜಿಯಮ್ಮಿನ ರಂಗದಲ್ಲಿ ಗುಡ್ಡಗಾಡಿನೊಳಗೆಲ್ಲಾ ಕೊನೆಯದಾಗಿದ್ದ ಒಂದು ದುರ್ಭೇದ್ಯವಾದ ಗುಡ್ಡವನ್ನೂ ಅದರ ಮೇಲಿದ್ದ ಪೆಸೆಂಡೀಲ್ ಎಂಬ ಗ್ರಾಮವನ್ನೂ ಕೂಡ ಆಂಗ್ಲಸೈನಿಕರು ಬಹು ಪರಾಕ್ರಮದಿಂದ ಕಾಯ್ದು ವಶಪಡಿಸಿಕೊಂಡರು. ಈಚೆಗೆ ಶತ್ರುಗಳ ಪ್ರತಿಯುದ್ಧಗಳು ಮಿತಿಮೀರಿದುದರಿಂದ ಅದರಲ್ಲಿ ಸ್ವಲ್ಪ ಭಾಗವನ್ನು ಇವರು ಕಳೆದು ಕೊಂಡರು. ಆದರೂ ಮರಳಿ ಆ ಭಾಗವನ್ನು ವಶಪಡಿಸಿಕೊಳ್ಳುವುದಕ್ಕೆ ಯುದ್ಧಮಾಡುತ್ತಿರುವರು. ವೈಮಾನಿಕ ಯುದ್ಧಗಳು ರಣರಂಗದಲ್ಲಿ ವಿಶೇಷವಾಗಿ ನಡೆಯುತ್ತಿರುವುವು.

ಇಟಲಿ ರಂಗ—ಶತ್ರುಗಳ ನುಗ್ಗಾಟವು ಇಟಲಿಯಲ್ಲಿ ಇನ್ನೂ ಸಾಗುತ್ತಲೇ ಇದೆ. ಇಟಲಿಯವರು ಇನ್ನೂ ದೃಢವಾಗಿ ನಿಂತಿಲ್ಲ. ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಸಹಾಯಮಾಡುತ್ತಿವೆ. ಅಮೆರಿಕಾ ಸೈನ್ಯವೂ ಸಹಾಯಕ್ಕೆ ಹೋಗುತ್ತಿದೆ. ಒಂದುಕಡೆ ಇಟಲಿಯವರು ಶತ್ರುಗಳನ್ನು ತಡೆದು ಹಿಂದಕ್ಕೆ ಕದಲಿಸಿ, ಅವರುದ್ದ ಸ್ಥಾನಾಕ್ರಮಣವನ್ನು ಮಾಡಿರುವರು.

ರಷ್ಯಾ—ಇದುವರೆಗಿದ್ದ ಕರೆನ್ಸ್ಕಿಯವರ ಮಂತ್ರಿಮಂಡಲವನ್ನೆಲ್ಲಾ ನೂತನವಾದೊಂದು ಗುಂಪಿನವರು ಸೆರೆಹಿಡಿದುಬಿಟ್ಟರು. ಇವರು ತಮ್ಮ ನೂತನ ಪ್ರಭುತ್ವವನ್ನು ಸಾರಿಸಿರುವರು. ಹಿಂದಣ ಪ್ರಭುತ್ವಕ್ಕೆ ಸಾನುಭೂತಿಯನ್ನು ತೋರಿಸುವವರೆಲ್ಲಾ ದೇಶದ್ರೋಹಿಗಳೆಂದು ಗಣಿಸಲ್ಪಟ್ಟು ಶಿಕ್ಷಿತರಾಗುವರೆಂದು ಸಾರಿಸಿರುವರು. ಕರೆನ್ಸ್ಕಿಯವರು ಮಾತ್ರ ತಪ್ಪಿಸಿಕೊಂಡು ಬೇರೆ ಸೈನ್ಯವನ್ನು ಜತೆಗೂಡಿಸುತ್ತಲಿರುವರು. ಈಗಣ ನೂತನ ಪ್ರಭುತ್ವದವರು ಶತ್ರುಗಳಕಡೆಯ ಪಕ್ಷಪಾತಿಗಳೆಂದು ಕಾಣುತ್ತಿದ್ದಾರೆ. ಸಂಧಿಮಾಡಿಕೊಳ್ಳುವುದೇ ಯುಕ್ತವೆಂದು ಅವರು ಅಭಿಪ್ರಾಯಪಟ್ಟಿದ್ದರು ಈಚೆಗೆ ಬಂದಿರುವ ಒಂದು ತಂತ್ರೀವಾರ್ತೆಯಿಂದ ಕರೆನ್ಸ್ಕಿಯವರ ಕಡೆಯ ೨ ಲಕ್ಷ ಸೈನಿಕರು ಪೆಟ್ರೋಗ್ರೇಡ್ ಪಟ್ಟಣದ ದಾರಿಯಲ್ಲಿ ಯುದ್ಧಮಾಡಿ ನೂತನಪಕ್ಷದವರನ್ನು ಸೋಲಿಸಿದರೆಂದೂ, ಕರೆನ್ಸ್ಕಿ ಪಕ್ಷದ ಇಬ್ಬರು ಹೊರತು ಉಳಿದ ಮಂತ್ರಿಗಳೆಲ್ಲಾ ಬಂಧವಿಮುಕ್ತರಾದರೆಂದೂ, ಈಗ ಪೆಟ್ರೋಗ್ರೇಡ್ ಪಟ್ಟಣವು ಕರೆನ್ಸ್ಕಿ, ಕೆಲಿಗಡೀನ್, ಕಾರ್ನಿಲಾಫ್‌ರವರ ಪಾಲನೆಯ ಕೆಳಗಿರುವುದೆಂದೂ, ಜರ್ಮನರಕಡೆಯ ಲಂಚತಿಂದು ಹೊಸ ಹಾವಳಿಯನ್ನು ಮಾಡಿದ್ದ ಪಕ್ಷದ ಮುಖಂಡನಾದ ಲೆನಿನ್ ಎಂಬುವನು ಬಂಧಿಸಲ್ಪಟ್ಟಿರುವನೆಂದೂ ಗೊತ್ತಾಗುತ್ತದೆ. ಈಗ ಮಾಕ್ಸಮಾಲಿಸ್ಟ್ ಪಕ್ಷದ ಪ್ರಮುಖರೆಲ್ಲಾ ಶರಣಾಗತರಾಗಿದ್ದಾರೆ. ಪೆಟ್ರೋಗ್ರೇಡ್ ಪಟ್ಟಣವೆಲ್ಲಾ ಅಲ್ಲಕಲ್ಲೋಲವಾಗಿದೆ. ಈ ಸುದ್ದಿಯನ್ನೆಲ್ಲಾ ಕೇಳಲಾಗಿ ರಷ್ಯಾದ ಸ್ಥಿತಿಯು ವಿಷಮತಮವಾಗಿದೆಯೆಂದು ಹೇಳಬಹುದು. ಈ ಒಳಕೋಟೆಯು ಶತ್ರುಗಳ ಲಾಭಕ್ಕೆ ವಿಶೇಷ ಸಹಾಯಕವಾಗುವಂತೆ ಕಾಣುತ್ತದೆ.

ಪಾಲಸ್ತೈನಿನಲ್ಲಿ—ಗಾಜಾ ಪಟ್ಟಣವೂ ಕೂಡ ಕಳೆದ ವಾರದಲ್ಲಿ ನಮ್ಮವರ ವಶವಾಯಿತು. ಬಹಳ ಯುದ್ಧಸಾಮಗ್ರಿಗಳೂ ಆಹಾರ್ಯವಸ್ತುಗಳೂ ನಮ್ಮವರಿಗೆ ಸಿಕ್ಕಿದುವು. ಶತ್ರುಗಳಿಗೆ ಬಹು ನಷ್ಟವಾಯಿತು. ಈ ವಿಜಯದಿಂದ ನಮ್ಮವರಿಗೆ ಉಂಟಾದ ಲಾಭವು ವಿಶೇಷ ಗಣ್ಯವೆನಿಸಿರುವುದು.

ಯುದ್ಧಸಭೆ:—ಮಿತ್ರಮಂಡಲಿಯವರೊಳಗೆ ಪರಸ್ಪರ ಧನಸಹಾಯ, ಯುದ್ಧಸಾಮಗ್ರಿಸಹಾಯ ಮೊದಲಾದ ಸ್ಥೂಲವಿಷಯಗಳಲ್ಲಿ ಏಕಮತ್ಯವಿದ್ದು ಯುದ್ಧಕಾರ್ಯನಿರ್ವಾಹಕ್ರಮದಲ್ಲಿ ಏಕಮುಖವಿಲ್ಲದೆ ಇದ್ದುದರಿಂದ ಸಂಗ್ರಾಮದ ಪರಿಸಮಾಪ್ತಿಯು ಬೇಗನೆ ಆಗುವುದಕ್ಕೆ ಅವಕಾಶವಿಲ್ಲದೆಹೋಯಿತೆಂದು ಆಂಗ್ಲ ಮುಖ್ಯಮಂತ್ರಿಯವರು ಸಕಾರಣವಾಗಿ ಪ್ರತಿಪಾದಿಸಿದ ವಿಷಯವು ಮಿತ್ರಮಂಡಲಿಯವರಿಗೆಲ್ಲಾ ಉಚಿತವಾಗಿ ತೋರಿದುದರಿಂದ ಈಗ ಅವರುಗಳೆಲ್ಲಾ "ಅಲೈಡ್ ವಾರ್ ಕೌನ್ಸಿಲ್" (ಮೈತ್ರಿಕ ಯುದ್ಧ ಸಭೆ) ಎಂಬುದೊಂದನ್ನು ಏರ್ಪಡಿಸಿದ್ದಾರೆ. ಇದರಲ್ಲಿ ಆಂಗ್ಲ ಮುಖ್ಯಮಂತ್ರಿಯವರೂ ಇಂಗ್ಲೀಷ್, ಫ್ರಾನ್ಸ್, ಇಟಲಿ ರಾಜ್ಯಗಳ ಮಂತ್ರಿಮಂಡಲದವರೊಬ್ಬೊಬ್ಬರೂ ಇರುವರು. ಇವರುಗಳ ಸಹಾಯಕ್ಕೆ ಆಯಾಯ ರಾಜ್ಯಗಳ ಸೈನ್ಯಶಾಖಾಧಿಕಾರಿಗಳೊಬ್ಬೊಬ್ಬರಿರುವರು. ಈಯೇರ್ಪಾಟಿನಿಂದ ಮುಂದೆ ಎಲ್ಲ ರಂಗಗಳ ಯುದ್ಧಕಾರ್ಯವೂ ಏಕಸೂತ್ರದಿಂದ ನಡೆಯುವುದಕ್ಕೆ ಮಾರ್ಗವಾಗಿ ಶತ್ರುಪರಾಭವಕ್ಕೆ ವಿಶೇಷಾನುಕೂಲ್ಯವುಂಟಾಗುವುದೆಂದು ಎಣಿಸಲ್ಪಟ್ಟಿದೆ.

ಭರತಖಂಡದ ವೃತ್ತಾಂತಗಳು.

ಸ್ಟೇಟ್ ಸೆಕ್ರೆಟರಿಯವರು ಬಂದ ಹಡಗಿನಲ್ಲೇ ಸೀಮೆಯಲ್ಲಿರುವ ರಾಯಲ್ ಕಾಲೇಜಿನ ಪ್ರೆಸಿಡೆಂಟರೂ ಸರ್ಜನ್ ಜನರಲ್ ಸರ್ ಜಾರ್ಜ್ ಮೆಕಿನ್ಸೀರವರೂ ಕೂಡ ಬಂದರು. ಇವರುಗಳು ಭರತಖಂಡದ ಮುಖ್ಯ ಮುಖ್ಯ ವೈದ್ಯಾಲಯಗಳ ಸ್ಥಿತಿಗತಿಯನ್ನೆಲ್ಲಾ ಸಾಂಗವಾಗಿ ಪರಿಶೀಲಿಸಿಕೊಂಡು ಹೋಗುವುದಕ್ಕಾಗಿ ಬಂದಿರುವರೆಂದು ಕೇಳುತ್ತೇವೆ.

ಲೋಕಸ್ವಾತಂತ್ರ್ಯರಕ್ಷಣಾರ್ಥವಾಗಿ ಮಿತ್ರಮಂಡಲಿಯವರು ನಡೆಯಿಸುತ್ತಿರುವ ಈಗಣ ಯುದ್ಧದಲ್ಲಿ ನಮ್ಮವರಿಗೇ ಜಯಲಾಭವಾಗುವಂತೆ ಅನುಗ್ರಹಿಸುವುದಕ್ಕಾಗಿ ಆಂಗ್ಲಸಾಮ್ರಾಜ್ಯಾಂತರ್ಗತ ಸಕಲ ದೇಶಗಳಲ್ಲೂ ಎಲ್ಲ ಪ್ರಜೆಗಳೂ ಬರುವ ಜನವರಿ ತಾ|| ೬ ನೆಯ ದಿವಸ ಭಗವತ್ಪ್ರಾರ್ಥನೆಯನ್ನು ಸಲ್ಲಿಸಬೇಕೆಂದು ನಮ್ಮ ಸಾರ್ವಭೌಮರು ಅಪ್ಪಣೆಮಾಡಿರುತ್ತಾರೆ.

ಬೊಂಬಾಯಿಪಟ್ಟಣದ ಹೀರಾಬಾಗ್ ಎಂಬ ತೋಟದಲ್ಲಿ ಆ ಅಧಿಪತ್ಯಕ್ಕೆ ಸೇರಿದ ರತ್ನಗಿರಿ, ಠಾಣಾ, ಕೊಲಾಬಾ ಮೊದಲಾದ ಅನೇಕ ಜಿಲ್ಲೆಗಳಲ್ಲಿರುವ ಹಿಂದುಳಿದ ಜನವರ್ಗಗಳಾದ ಭಂಡಾರಿ, ಮರಾಠಾ, ಮಾಲಿ, ಅಗ್ರಿ, ಪಂಚಾರಿ, ಹಾರ್ಣೆ, ಶಿಂಪ್ಲಿ, ಕೋಲಿ, ತೇಲಿ ಮೊದಲಾದ ಕುಲಗಳ ಎಷ್ಟೋ ಸಹಸ್ರ ಪ್ರತಿನಿಧಿಗಳು ರಾವ್‌ಸಾಹೇಬ್ ಮನ್ನಾಜಿರಾಜಾಜಿಯವರ ಅಧ್ಯಕ್ಷತೆಯಲ್ಲಿ ಸಭೆಗೂಡಿ, ತಮ್ಮಗಳ ಏಕಮತ್ಯ-ವಿದ್ಯಾಭಿವೃದ್ಧಿ, ಸಂಪದಭ್ಯುದಯ ಮೊದಲಾದ ವಿಷಯಗಳನ್ನು ಚರ್ಚಿಸಿ ೩-೪ ತೀರ್ಮಾನಗಳನ್ನು ಮಾಡಿದರು. ಅವುಗಳಲ್ಲಿ ಹಿಂದುಳಿದ ಜನವರ್ಗಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಬೇಕೆಂಬ ವಿಷಯವನ್ನು ಸ್ಟೇಟ್‌ಸೆಕ್ರೆಟರಿಯವರಲ್ಲಿ ಬಿನ್ನೈಸಿಕೊಳ್ಳಬೇಕೆಂಬುದು ಮುಖ್ಯವಾಗಿದ್ದಿತು.

ಪತ್ರವ್ಯವಹಾರ.

ಕಡೂರು ತಾಲ್ಲೋಕು ಸಖರಾಯಪಟ್ಟಣದ ಹೋಬಳೀ ಕಾನ್‌ಫರೆನ್ಸ್

ಸಖರಾಯಪಟ್ಟಣದ ೨ ನೆಯ ಹೋಬಳಿ ಕಾನ್‌ಫರೆನ್ಸು ಕಳೆದ ತಾ|| ೧೧ ನೆಯ ಭಾನುವಾರ ತಳಿರ್ತೋರಣಗಳಿಂದ ಅಲಂಕೃತವಾದ ಗರ್ಲ್ಸ್‌ಸ್ಕೂಲ್ ಹಾಲಿನಲ್ಲಿ ರಮ್ಯವಾಗಿ ಜರಗಿತು. ಮ|| ಅಮಲ್ದಾರ್ ಜಿ. ಶ್ರೀನಿವಾಸ ಯ್ಯಂಗಾರ್ಯರವರು ಅಧ್ಯಕ್ಷತೆಯನ್ನು ವಹಿಸಿದ್ದರು. ತಾಲೋಕು ಅಧಿಕಾರಿಗಳೂ ಗ್ರಾಮನಿವಾಸಿಗಳೂ ಸೇರಿ ೨೦೦ ಜನಗಳವರೆಗೆ ಸಭೆಯನ್ನಲಂಕರಿಸಿದ್ದರು. ಹೋಬಳೀ ಶೇಕದಾರರು ಮ|| ರಾ|| ಚನ್ನಪ್ಪಯ್ಯನವರು ಹೋಬಳೀ ಇಂಪ್ರೂವ್‌ಮೆಂಟ್ ರಿಪೋರ್ಟನ್ನು ಓದಿದನಂತರ ವಿದ್ಯಾಭ್ಯಾಸದ ವಿಷಯವಾಗಿ ಮ|| ಸ್ಕೂಲ್ ಮಾಸ್ಟರ್ ಶೇಷಭಟ್ಟರವರಿಂದ ಉಪನ್ಯಾಸನಾಡಲ್ಪಟ್ಟಿತು. ಮ|| ಡಾಕ್ಟರು ಕೃಷ್ಣಯ್ಯಂಗಾರ್ಯರವರು ವಾಚನಶಾಲೆಯ ಪ್ರಯೋಜನಾಂಶವನ್ನು ವಿವರಿಸಿದ ಈ ಸುಸಮಯದಲ್ಲಿ ಸಭಾಧ್ಯಕ್ಷರು ಅಲ್ಲಿನ ವಾಚನಶಾಲೆಯನ್ನು ಓಪನ್ ಮಾಡಿದರು. ಡಾಕ್ಟರವರು ಗ್ರಾಮನಿವಾಸಿಗಳಿಗಿಂತಲೂ ಅಧಿಕವಾದ ಶ್ರದ್ಧೆಯನ್ನು ವಹಿಸಿರುವುದು ಶ್ಲಾಘನೀಯವಾಗಿದೆ. ಸುಲಭ ಖರ್ಚಿನಿಂದ ಬೆಲ್ಲ ತಯಾರ್ಮಾಡಬಹುದೆಂಬ ಭರವಸೆ ಕೊಟ್ಟ ಅಧಿಕಾರಿಗಳ ಪ್ರೇರಣೆಯಿಂದ ಅಲ್ಲಿ ಸ್ಥಾಪಿಸಲ್ಪಟ್ಟಿರುವ ಕಬ್ಬಿನ ಹಾಲು ಕರೆಯುವ ಯಂತ್ರದಿಂದ ಉಂಟಾಗಿರುವ ಲಾಭನಷ್ಟಗಳ ವಿವರವನ್ನು ಮ|| ಪಟೇಲ್ ಮಲ್ಲೇಶಯ್ಯನವರು ವಿಲೇಜ್ ಇಂಪ್ರೂವ್‌ಮೆಂಟ್ ರಿಪೋರ್ಟಿನಲ್ಲಿ ಓದಿದರು. ಬಲಾತ್ಕಾರ ವಿದ್ಯಾಭ್ಯಾಸವು ಪಟ್ಟಣಗಳಿಗಿಂತ ಗ್ರಾಮಾಂತರಗಳಲ್ಲಿ ಅತ್ಯಾವಶ್ಯಕವೆಂತಲೂ, ಇದು ಪುರೋಭಿವೃದ್ಧಿಗೆ ಮುಖ್ಯವೆಂತಲೂ ಸಭಿಕರ ಮನಸ್ಸಿಗೆ ನಾಟುವಂತೆ ಮ|| ಬಾಣೂರು ಮಲ್ಲೇಗೌಡರವರಿಂದ ಹೇಳಲ್ಪಟ್ಟಿತು.

ಈ ಹೋಬಳಿಗೆ ಮುಖ್ಯಗ್ರಾಮವಾದ ಸಖರಾಯಪಟ್ಟಣದ ಕ್ಷೀಣಗತಿಗೆ ಕಾರಣಗಳಾದ ಗ್ರಾಮದೊಳಗೇ ಅದ್ಭುತವಾಗಿ ಬೆಳೆದಿರುವ ಲಾಂಟಾನ. ಇವುಗಳ ಪೊದರುಗಳಲ್ಲಡಗಿ ದನಕರುಗಳನ್ನು ಧ್ವಂಸಮಾಡುವ ಕಾಡುಮೃಗಗಳ ಹಾವಳಿ, ಪಾನಕ್ಕೆ ಅರ್ಹವಾದ ನೀರಿನ ಅಭಾವ, ಅಯ್ಯನಕೆರೆ ನೀರಿನ ಸಪ್ಲೈ ವಿಚಾರದಲ್ಲಿ ಮೊದಲಿಗಿಂತಲೂ ಹೆಚ್ಚಾದ ಅನಾನುಕೂಲತೆಯುಂಟುಮಾಡುವುದಾಗಿ ನಿರ್ಧಾರಮಾಡಲ್ಪಟ್ಟ ಇರಿಗೇಷನ್ ಅಲಾಬೆಯಿಂದ ಜನಗಳಿಗೆ ಸಂಭವಿಸುವ ಅನಾನುಕೂಲತೆ, ಗ್ರಾಮ ಮಂಗಳಕ್ಕೆ ಮುಖ್ಯಾಂಗವಾದ ಶ್ರೀ ಕಟಿವೀರ ರಂಗನಾಥಸ್ವಾಮಿಯ ದೇವಸ್ಥಾನದ ಶಿಥಿಲಾವಸ್ಥೆ, ಪ್ರತ್ಯೇಕ ಅಸ್ಪತ್ರೆ ಕಟ್ಟಡವಿಲ್ಲದೆ ಪ್ರಯಾಣಿಕರೂ, ರೋಗಿಗಳೂ ಪಡುವ ತೊಂದರೆ ಇವುಗಳನ್ನು ಪರಿಹರಿಸಿಕೊಡಲು ಗ್ರಾಮಸ್ಥರ ಪರವಾಗಿ ಮ|| ಅಳಸಿಂಗ್ರಾಚಾರ್ಯರವರು ಕೇಳಿಕೊಂಡುದರಮೇಲೆ ಅಧ್ಯಕ್ಷರಿಂದ ನೋಟ್ ಮಾಡಲ್ಪಟ್ಟಿತು. ಮ|| ಎಕನಾಮಿಕ್ ಲೆಕ್ಚರರ್ ಬಿ. ವೆಂಕೋಬರಾವ್‌ರವರು ಗ್ರಾಮಾಭಿವೃದ್ಧಿ ವಿಷಯವನ್ನು ಎಲ್ಲರ ಮನಸ್ಸಿಗೆ ತಟ್ಟುವಂತೆ ಬೋಧಿಸಿದರು. ಇಲ್ಲಿನ ಕೋಆಪರೇಟಿವ್ ಸೊಸೈಟಿಯು ಜನಗಳಿಗೆ ಅತ್ಯಂತ ಉಪಯುಕ್ತವಾಗಿರುವುದಾಗಿಯೂ, ಇನ್ನು ಜನಗಳ ಪರಸ್ಪರಾನುರಾಗವು ಆವಶ್ಯಕವೆಂದೂ ಮ|| ಅಶ್ವತ್ಥಯ್ಯನವರು ಸೂಚಿಸಿದರು. ಮ|| ಅಮಲ್ದಾರರವರು ಕೊನೆಯಲ್ಲಿ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಸಭಿಕರೊಂದಿಗೆ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ಬಾಲಿಕೆಯರ ದೇವತಾಕೀರ್ತನವೂ ವಾದ್ಯಘೋಷಗಳೂ ಆನಂದದಾಯಕವಾಗಿದ್ದುವು. ಸರ್ವರಿಗೂ ಗಂಧ, ಪುಷ್ಪ, ತಾಂಬೂಲ, ಉಪಹಾರಗಳನ್ನು ಹಂಚಿದಬಳಿಕ ಸಭೆಯು ಮುಕ್ತಾಯವಾಡಲ್ಪಟ್ಟಿತು. ಗ್ರಾಮಸ್ಥ.

ಹೆಗ್ಗಡದೇವನಕೋಟೆ ತಾಲ್ಲೂಕು ಕಾನ್‌ಫರೆನ್ಸ್.

ತಾರೀಖು ೬-೧೧-೧೯೧೭ ನೆಯ ಮಂಗಳವಾರದದಿವಸ ಈ ತಾಲ್ಲೂಕಿನ ಲೋಕಲ್ ಬೋರ್ಡು ಪ್ರೋಗ್ರೆಸ್ ಕಮಿಟಿಯ ಮೆಂಬರುಗಳೂ, ತಾಲ್ಲೂಕಾವಳಿ ವಿಲೇಜ್ ಕಮಿಟಿಯ ಪ್ರತಿನಿಧಿಗಳೂ, ಪ್ರೇಕ್ಷಕರೂ ಸಹ ಮೇಲ್ಕಂಡ ಸಭೆಯನ್ನಲಂಕರಿಸಿದ್ದಲ್ಲದೆ, ಅಸಿಸ್ಟೆಂಟ್ ಕಮಿಷನರಾದ ಮಿ|| ರಾಯಲುಚೆಟ್ಟಿಯವರೂ, ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟರಾದ ಮಿ|| ನರಸಿಂಹಶಾಸ್ತ್ರಿಗಳೂ, ಪ್ರೋಗ್ರೆಸ್ ಕಮಿಟಿ ಛೇರ್ಮನ್ನರಾದ ಮಿ|| ಅರುಣಾಚಲ ಮೊದಲಿಯಾರರೂ, ಪರಸ್ಪರ ಸಹಾಯಕಸಂಘಗಳ ಇನ್‌ಸ್ಪೆಕ್ಟರೂ, ಸ್ಯಾನಿಟರಿ ಇನ್‌ಸ್ಪೆಕ್ಟರೂ, ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರೂ, ಪೋಲೀಸ್ ಇನ್‌ಸ್ಪೆಕ್ಟರೂ, ಎಕನಾಮಿಕ್ ಅನರರಿ ಸೂಪರ್ವೈಸರ್ ಮಿ|| ಬಿ. ಚಂದ್ರಶೇಖರಯ್ಯನವರೂ ಇವರೇ ಮೊದಲಾದ ಸರಕಾರದ ಅಧಿಕಾರಿಗಳೂ ಸಹ ಸಭೆಯನ್ನಲಂಕರಿಸಿದ್ದರು.

ಮಧ್ಯಾಹ್ನ ೧೨ ಗಂಟೆಗೆ ಪ್ರೋಗ್ರೆಸ್ ಕಮಿಟಿ ಛೇರ್ಮನ್ನರೂ, ಅನರರಿ ಸೂಪರ್ವೈಜರೂ, ಪೋಲೀಸ್ ಇನ್‌ಸ್ಪೆಕ್ಟರೂ, ಹೆಡ್ಮಾಸ್ಟರ್ ಮಿ|| ಶಂಕರಲಿಂಗಯ್ಯನವರೂ, ಸರಗೂರು ಹೆಡ್ಮಾಸ್ಟರ್ ಮಿ|| ನರಸಿಂಹಶೆಟ್ಟರೂ, ಎತ್ತಿಗದ ಮಠದ ದೊಡ್ಡರಾಮಾರಾಧ್ಯಸ್ವಾಮಿಗಳೂ, ಸರಗೂರು ಕೃಷ್ಣಮಾಚಾರ್ಯರೂ, ಮಗ್ಗೆ ವೆಂಕಟನಾಗಪ್ಪನವರೂ ಇವರೇ ಮೊದಲಾದ ದೊಡ್ಡಮನುಷ್ಯರು ಬ್ಯಾಂಡ್, ಬಾಜ ವಗೈರೆ ಮರ್ಯಾದೆಗಳಿಂದ ಮಿ|| ರಾಯಲುಚೆಟ್ಟಿಯವರನ್ನೂ ಎಕನಾಮಿಕ್ ಸೂಪರಿಂಟೆಂಡೆಂಟರನ್ನೂ ಸಹ ಕರೆದುಕೊಂಡು, ಹಸಿಬಿದಿರು ತಟ್ಟಿಗಳಿಂದಲೂ, ತಳಿರುತೋರಣಗಳಿಂದಲೂ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಮನೋಹರವಾಗಿ ಅಲಂಕರಿಸಿದ್ದ ಚಪ್ಪರದಲ್ಲಿ ಕೂಡಿದ್ದ ಸಭೆಗೆ ಕರೆತರಲು, ಸಭೆಯವರೆಲ್ಲಾ ಎದ್ದು ಕರತಾಡನಮಾಡುತ್ತಿರಲು, ಮಿ|| ಚೆಟ್ಟಿಯವರು ಅಗ್ರಾಸನವನ್ನು ಅಲಂಕರಿಸಿದರು. ತರುವಾಯ ಅಧ್ಯಕ್ಷರು ಗಂಭೀರವಾಗಿಯೂ, ಮನೋಹರವಾಗಿಯೂ ಇದ್ದ ತಮ್ಮ ಭಾಷಣವನ್ನು ಓದಿದಮೇಲೆ, ಮಿ|| ಅಮಲ್ದಾರರು ತಾಲ್ಲೂಕು ಅಭಿವೃದ್ಧಿ ರಿಪೋರ್ಟನ್ನು ಓದಿದರು. ಅನಂತರ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಸಾಹೇಬರವರು ವ್ಯವಸಾಯ, ವಿದ್ಯಾಭ್ಯಾಸ, ಕೈಗಾರಿಕೆ, ವ್ಯಾಪಾರ ಮೊದಲಾದ ವಿಷಯಗಳನ್ನು ತಮ್ಮ ಅಸ್ಖಲಿತವಾಣಿಯಿಂದ ಮೃದುಮಧುರ ಗಂಭೀರವಾಗಿ ಸರ್ವರಿಗೂ ಬೋಧಿಸಿದರು. ಅನಂತರ ಅರ್ಧ ಗಂಟೆ ಕಾಲ ಫಲಾಹಾರಕ್ಕಾಗಿ ಸಭೆಯನ್ನು ವಿರಮಿಸಿದ್ದು ಪುನಃ ಸಭೆಯು ಸೇರುತ್ತಲೇ ಅನೇಕ ವಿಷಯಗಳು ಅನೇಕರಿಂದ ಚರ್ಚಿಸಲ್ಪಟ್ಟು ನಿರ್ಧಾರಮಾಡಲ್ಪಟ್ಟುವು. ಕೈಗಾರಿಕೆಯ ವಿಷಯವಾಗಿ ಎತ್ತಿಗದ ಮಠದ ದೊಡ್ಡರಾಮಾರಾಧ್ಯಸ್ವಾಮಿಗಳು ಓದಿದ ಉಪನ್ಯಾಸವು ಬಹು ಸ್ವಾರಸ್ಯವಾಗಿತ್ತು. ಕಳೆದ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದ ದೊಡ್ಡಮನುಷ್ಯರ ಕಾರ್ಯಗಳ ವಿವೇಚನೆಮಾಡಲ್ಪಟ್ಟು, ಹೊಸದಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸುವಂತೆ ಸುಮಾರು ೧೧೦ ಜನರು ಮುಚ್ಚಳಿಕೆ ಕೊಟ್ಟರು. ಅನಂತರ ಮ|| ರಾ|| ಸರಗೂರು ಅನ್ನತೂರು ಅಯ್ಯಂಗಾರ್ಯರವರು ಕೆಲವು ಸಂಸ್ಕೃತ ಶ್ಲೋಕಗಳನ್ನು ಇಂಪಾಗಿ ಹೇಳಿದರು. ಅನಂತರ ಶ್ರೀಮಚ್ಚಕ್ರವರ್ತಿ ಸಾರ್ವಭೌಮರವರ, ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರ ಮತ್ತು ಶ್ರೀಮಾನ್ ಸಚಿವ ಶಿರೋಮಣಿ ವಿಶ್ವೇಶ್ವರಯ್ಯನವರ ಹೆಸರಿನಿಂದ ತ್ರಿವಾರ ಜಯಘೋಷ ಮಾಡಲ್ಪಟ್ಟು ಸಭಾವಿಸರ್ಜನೆಯಾಯಿತು.

ಮಿ|| ಅಮಲ್ದಾರ್ ಅರುಣಾಚಲಮೊದಲಿಯಾರರು ಕಾನ್‌ಫರೆನ್ಸ್ ನಡೆಯುವುದಕ್ಕೆ ಇಟ್ಟಿದ್ದ ಏರ್ಪಾಡು ಶ್ಲಾಘನೀಯವಾಗಿತ್ತು. ಇದೇ ರೀತಿ ತಮ್ಮ ದಿವಸಗಳಲ್ಲಿ ನಮ್ಮ ತಾಲ್ಲೂಕನ್ನು ಅಭಿವೃದ್ಧಿಸ್ಥಿತಿಗೆ ತರುತ್ತಾ ಇರುವುದಕ್ಕಾಗಿ ತಾಲ್ಲೂಕಿನ ಮಹಾಜನಗಳೆಲ್ಲಾ ಕೃತಜ್ಞರಾಗಿರುತ್ತಾರೆ.

ಪ್ರತ್ಯಕ್ಷದರ್ಶೀ.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರವಿಚಂದ್ರ ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನೆಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,

ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 48

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇಪ್ರೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವೇಳಾವೇಳೆಗೂ ವೈದ್ಯರ ಸಮಯವನ್ನು ಕಾದು ಕೊರೆಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦

ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦

ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಿಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರ್ಮಾಡಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರ್ಮಾಡುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶಶತಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೨—೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗರುಡಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲಿಗರಿಗೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರ ಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವೇದ,ಶಾಸ್ತ್ರ ಮತ್ತು ಚರಿತ್ರೆಗಳ ಆಧಾರದಿಂದ "ಕುರುಬರಜಾತಿ" ನಡಾವಳಿ, ಆಚಾರಗಳ, ಇವರಲ್ಲಿ ರಾಜ್ಯಧರ್ಮ ಸ್ಥಾಪಕರಾದ ಪೂರ್ವಿಕರ ಸಂಗತಿಗಳ ೧೯೨ ಪುಟದ ದೊಡ್ಡ ಪುಸ್ತಕ ಅಚ್ಚಾಗುತ್ತಲಿದೆ. ಈ ಡಿಶಂಬರ್ ತಿಂಗಳೊಳಗಾಗಿ ಬರುವ ಆರ್ಡರುಗಳಿಗೆ ಮಾತ್ರ ೧೨ ಆಣೆ! (ಹಾಸಲು ಬೇರೆ) ಮುಂದೆ ಹೆಚ್ಚಾಗುವದು.

7 ವಿಳಾಸ—ಎಂ. ಎಸ್. ಲಿಂಗಪ್ಪ ಎಡಿಟರ್,

ಬೆಂಗಳೂರು ಸಿಟಿ.

ಸತ್ಯಮೇವಜಯತೇ.

ಗುಣವಾಗದಿದ್ದರೆ ಹಣ ಪರತ. 10

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಶಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತದೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ.

ನಪುಂಸಕತ್ವಾರಿ ತೈಲವು.

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ ನಿರ್ಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯದ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ್ಗೆ ಮದನೋದ್ಭವ ಗುಳಿಗೆಗಳನ್ನು ಸಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦ ಅನುಪಾನಪತ್ರಿಕೆ ಅವುಷಧದ ಸಂಗಡ ಟಪಾಲುಖರ್ಚು ಬೇರೆ. ಒಂದಾಣೆ ಸ್ಟ್ಯಾಂಪು ಕಳಿಸಿದರೆ ಕ್ಯಾಟಲಾಗು ಫುಕಟ.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ ಉತ್ತರಕನಡಾ ಡಿ||.

೧೯೧೭ ನೆಯ ಇಸವಿ ನವಂಬರ್ ತಾ|| ೧೮ ರಿಂದ ೧೯೧೭ ನೆಯ ನವಂಬರ್ ತಾ|| ೨೪ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಕಾಳಯುಕ್ತಿನಾಮಸಂವತ್ಸರದ ಕಾರ್ತಿಕ ಶು|| ಚೌತಿಯಿಂದ ಕಾರ್ತಿಕ ಶು|| ದಶಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ತೇದಿ
18	ಭಾನು	ಚೌತಿ	38-41	ಮೂಲ	4-46	3
19	[1] ಸೋಮ	ಪಂಚ	34-35	ಪೂಷಾ	2-56	4
20	ಮಂಗಳ	ಷಷ್ಠಿ	29-47	ಉಷಾ	0-17	5
21	[2] ಬುಧ	ಸಪ್ತಮಿ	24-23	ಧನಿಷ್ಠ	53-19	6
22	ಗುರು	ಅಷ್ಟಮಿ	18-34	ಶತಭಿಷ	49-10	7
23	[3] ಶುಕ್ರ	ನವಮಿ	12-40	ಪೂಭಾ	44-49	8
24	[4] ಶನಿ	ದಶಮಿ	6-43	ಉಭಾ	41-24	9

(1) ಕಾರ್ತಿಕಸೋಮವಾರ. (2) ಸಪ್ತಮಿತಿಥಿಃ, ಮೇಲುಕೋಟೆಯಲ್ಲಿ ರಾಜಮುಡೀ ಉತ್ಸವ. (3) ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ. (4) ಮೇಲುಕೋಟೆಯಲ್ಲಿ ಅಷ್ಟತೀರ್ಥರಥಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರು ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಕ್ಷಕೃತಾವತಾರಾ ಪಶ್ಯಜ್ಞ ನಕ್ಷತ್ರಮನೋಹರಾಜೀಯಾತ್ ||

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗನ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||

ಸೀಮಾತೀತಯಶಃಪ್ರಕಾಶವಿಭವಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಕಾಮುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸನ್ ೧೯೧೭ ನೆಯ ಇಸವಿ ಡಿಶಂಬರ್ ತಾರೀಖು ೧೬ ನೆಯ ಭಾನುವಾರ. (ಸಂಚಿಕೆ ೫೦

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿಜನರು ಹಲವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹಾಳಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರ್ವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದು ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದು ಸಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಸಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೊ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿರುವಂಡೆ ಹಚ್ಚಿದ ಅದ್ವಿತಿಯ ಶಂಭುವಿನ ಅವತಾರಿಯಾದ "ಶ್ರೀ ಕಲ್ಯಾಣ ಬಸವೇಶ್ವರದೇವರ" ಅರಿವಿ ಮೇಲೆ ತೆಗೆದಿದ್ದು ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅದ್ಯಕರ್ತವ್ಯ ಅದೆ ಫುಲ್‌ಸ್ಕೈ|| ೧ ಕ್ಕೆ ರೂ. ೧ ಕ್ಯಾ|| ಸ್ಕೈ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕೈ ಬಣ್ಣದ್ದು ರೂ. ೧ ಟಪಾಲ್‌ಖರ್ಚು ಬೇರೆ.

ಶ್ರೀಪಂಚಮುಖಿ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೊ ಇರುತ್ತದೆ. ಫುಲ್‌ಸ್ಕೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸ್ಕೈಜು ರೂ. ೦-೮-೦ ಮೇಲೆ ಕೈ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡಕೊಂಡ ಫೋಟೊ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೆ ಫು|| ಸ್ಕೈ|| ೧ ಕ್ಕೆ ರೂ. ೧ ಕ್ಯಾ|| ಸ್ಕೈ|| ಆಣೆ ೮ ಮೇಲೆ ಕೈ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೊ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೋಟೊ ಬೇರೆ ಬೇರೆ ಸಿಕ್ಕುತ್ತವೆ.

ಪುರವುಗೇ ಏಜಂಟರು ಬೇಕು ೦-೧-೦ ಸ್ಟ್ಯಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಜಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪೆನಿ,

9 ಸೊಲ್ಲಾಪುರ ಸಿಟಿ.

ಮದರಾಸ್ ಮೇಲ್ ವಾಚ್.

೫ ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4.0.0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವುದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು

ಮತ್ತು ಘಾಳಿ, ಧೂಳು, ಸೇರದಂತೆ ಗ್ಲಾಸ್‌ಡೋಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕೆಳಗೆ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರ್ಮನ್ ಬೆಳ್ಳಿ ಚೇನ್ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗೆಜ್ಜೆ ಅಡ್ಡಿಕೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 3, ಜರ್ಮನ್ ಕೈನಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1 ಕ್ಕೆ ರೂ. 4.0.0.

ವಿಳಾಸ:—ಎ. ಎ. ಎಸ್. ವಾಣಿ,

ಸಾಹುಕಾರ್‌ಪೇಟೆ, ಮದರಾಸ್.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ



ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ನೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಶಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೆಯುವ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅದಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಚ್ಕ ಜಡ್ಡು, ಗುದದ್ವಾರನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಕ್ಷಾಯವ್ರಣ, ಹಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡೆದನಂಜು, ಸಣ್ಣಕೂಸುಗಳ ಬಾಲಗ್ರಹ, ಅರದಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುಕೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ. ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಪೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದಿ ಪ್ರಕಾರ ಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ನೋದೀನ ಸಾಹೇಬ ಮುಲ್ಲಾ,

ಅರ್ಕುಶಫಾ ಶೋಧಕ, ಹೆಡ್ ಆಫೀಸ

39 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲಾಷ್ಟಾವರಣ, ಶರಣಸತಿಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣಕ್ಕೆ ೧-೩-೦.

ಸುಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕ ಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಡಿಸೆಂಬರ್ ತಾ|| ೧೬ ನೆಯ ಭಾನುವಾರ.

ಯುದ್ಧದ ಸ್ಥಿತಿ.

ರಷ್ಯನರು ಮಿತ್ರದ್ರೋಹ ಮಾಡುವ ಲಕ್ಷಣವು ಬಲವಾಗಿ ಕಾಣುತ್ತಿರುವುದರಿಂದ ಯುದ್ಧದಲ್ಲಿ ಮಿತ್ರಮಂಡಲಿಯವರ ಕರ್ತವ್ಯಭಾರವು ಹೆಚ್ಚಿತೆಂಬುದಕ್ಕೆ ಸಂಶಯವಿಲ್ಲ. ನಿರ್ವಾಹಕ್ಕೆ ಬೇರೆದಾರಿಯಿಲ್ಲದೆ ರುಮೇನಿಯಾದವರೂ ಸಹ ಜರ್ಮನರೊಡನೆ ತತ್ಕಾಲಿಕ ಸಂಧಿಗೆ ಒಪ್ಪಿಕೊಂಡರು. ಆದರೆ ಇದಕ್ಕೆ ಮಿತ್ರಮಂಡಲಿಯವರು ಹೆದರುವಹಾಗಿಲ್ಲ. "ಆಪತ್ಸುಮಹತಾಂಚಿತ್ತಂ ಶಿಲಾಸಂಘಾತಕರ್ಕಶಂ" ಎಂಬ ನೀತಿವಚನದಂತೆ ಅವರು ಮತ್ತಷ್ಟು ಧೀರತ್ವದಿಂದಲೂ ಗಟ್ಟಿಯ ಮನಸ್ಸಿನಿಂದಲೂ ಹಿಡಿದ ಪಟ್ಟನ್ನು ಸಾಧಿಸುವುದರಲ್ಲಿ ಸಂಶಯವೇ ಇಲ್ಲ. ಈಗ ಸಂಧಿಗೆ ಮಿತ್ರಮಂಡಲಿಯವರು ಒಪ್ಪುವರೆಂಬುದು ಸ್ವಪ್ನದಲ್ಲೂ ಅಸಂಭವ. ಏಕೆಂದರೆ ಅದರಿಂದ ಉತ್ತರೋತ್ರ ಆತ್ಮವಿನಾಶಕ್ಕೆ ಹೇಗೆ ಹೇತುವಾಗುವುದೆಂಬುದನ್ನು ಅವರುಗಳು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅಲ್ಲದೆ ಬೆಲ್ಜಿಯಂ ಮೊದಲಾದ ಪತಿತರಾಷ್ಟ್ರಗಳ ಉದ್ಧಾರಕ್ಕಾಗಿ ಅವರು ಕೊಟ್ಟಿರುವ ಭಾಷೆಯನ್ನು ಕಳೆದುಕೊಳ್ಳಲಾಗುವುದಿಲ್ಲ. ರಷ್ಯನರು ಶತ್ರುಗಳೊಡನೆ ಈಗ ಸಂಧಿ ಮಾಡಿಕೊಂಡರೆ ಅದಕ್ಕಾಗಿ ಮಿತ್ರಮಂಡಲಿಯವರಿಗೆ ಆಗ್ರಹವೂ ಇಲ್ಲ, ಭಯವೂ ಇಲ್ಲ. ಆದರೆ ಅವರು ಈ ವಿಷಯವಾಗಿ ಮಿತ್ರಮಂಡಲಿಯವರೊಡನೆ ಯಾವ ಆಲೋಚನೆಯನ್ನೂ ಮಾಡದೆ ಪ್ರವರ್ತಿಸಿದುದು ಮಾತ್ರ ಅವರಿಗೆ ಆಗ್ರಹವನ್ನುಂಟುಮಾಡಿದೆ. ಜರ್ಮನರ ವಾಗ್ದಾನವೂ ಅದನ್ನು ನಂಬುವುದೂ ನಿಷ್ಪ್ರಯೋಜಕವಾದುವುಗಳೆಂದೂ, ಯುದ್ಧದಲ್ಲಿ ಜಯವನ್ನು ಪಡೆಯುವುದರ ಮೂಲಕವಲ್ಲದೆ ಸಂಧಿಗೆ ಯುಕ್ತವಾದ ಇನ್ನಾವ ದಾರಿಯೂ ಇಲ್ಲವೆಂದೂ ದೂರದರ್ಶಿಗಳಾದ ಅನೇಕ ಮಹಾಜನರು ಹೇಳುತ್ತಿರುವರು. ಆದುಕಾರಣ ಈಗಣ ಪರಿಸ್ಥಿತಿಯಿಂದ ಯುದ್ಧ ಜರುಗುವ ಕಾಲವೂ ಅದರಿಂದ ಆಗಬಹುದಾದ ಅನರ್ಥಗಳೂ ಮತ್ತಷ್ಟು ಹೆಚ್ಚಿದುವೆಂಬುದೊಂದನ್ನು ಸಿದ್ಧಾಂತಮಾಡಬಹುದಾಯಿತು. ಇದರಿಂದ ಪ್ರಪಂಚವೆಲ್ಲಾ ಅನುಭವಿಸಬೇಕಾಗಿ ಬರುವ ನಷ್ಟಕಷ್ಟಗಳನ್ನು ಯೋಚಿಸಿಕೊಂಡರೆ ಬಹಳ ವಿಷಾದವಾಗುತ್ತದೆ. ದೈವಾನುಗ್ರಹದಿಂದ ಈ ವಿಪತ್ತು ಬೇಗನೆ ತೊಲಗಿಹೋಗಬೇಕಲ್ಲದೆ ಅನ್ಯಥಾ ಇಲ್ಲ.

ಕಳೆದವಾರದಲ್ಲಿ ಬಂದಿರುವ ತಂತ್ರೀವಾರ್ತೆಗಳನ್ನು ನೋಡುವಲ್ಲಿ ರಷ್ಯನರೂ ರುಮೇನಿಯನ್ನರೂ ತಾತ್ಕಾಲಿಕವಾಗಿ ತಮ್ಮ ಎಲ್ಲ ರಣರಂಗಗಳಲ್ಲೂ ಶತ್ರುಗಳಮೇಲೆ ಯುದ್ಧವನ್ನು ನಿಲ್ಲಿಸಿ ಸಂಧಿಯ ಮಾತುಕತೆಗಳನ್ನು ಜರ್ಮನ್ ಸೇನಾಪತಿಗಳೊಡನೆ ನಡೆಯಿಸುತ್ತಿದ್ದಾರೆಂದು ಗೊತ್ತಾಗುತ್ತದೆ. ಆದರೆ ಜರ್ಮನರು ಅದರಲ್ಲೂ ಕಾಪಟ್ಯವನ್ನೇ ತೋರಿಸುತ್ತಿದ್ದಾರೆ. ಹೇಗೆಂದರೆ— ಸಂಧಿಯನ್ನು ಕುರಿತು ತಮ್ಮ ರಾಜಕೀಯ ವ್ಯವಹಾರಸ್ಥರು ಪರಿಷ್ಕರಿಸತಕ್ಕವರೆಂತಲೂ ತಾವು ಕೇವಲ ಸೈನಿಕರಾಗಿರುವುದರಿಂದ ತಾತ್ಕಾಲಿಕ ಸಂಧಿ ರಾಯಭಾರವನ್ನು ನಡೆಯಿಸುವುದಕ್ಕೆ ಮಾತ್ರ ನಿಯುಕ್ತರಾಗಿದ್ದೇವೆಂತಲೂ ಜರ್ಮನ್ ಸೈನ್ಯಾಧಿಪತಿಗಳು ಹೇಳಿದರು. ಇದರಮೇಲೆ ರಷ್ಯಾಪ್ರತಿನಿಧಿಗಳು ಆಡಿದ ಮಾತುಗಳಿಗೂ ಜರ್ಮನರು ತಕ್ಕಿನ ಉತ್ತರಗಳನ್ನೇ ಕೊಟ್ಟಿರುತ್ತಾರೆ. ಈ ಮಾತುಗಳು ಇನ್ನೂ ಮುಗಿದಿಲ್ಲ. ತಾತ್ಕಾಲಿಕ ಸಂಧಿಪತ್ರಕ್ಕೆ ಎರಡುಪಕ್ಷದವರೂ ಹಸ್ತಾಕ್ಷರಗಳನ್ನು ಹಾಕಿರುತ್ತಾರೆ. ಕಳೆದ ತಾ|| ೫ ರಿಂದ ಈ ರಾಯಭಾರವು ಆರಂಭವಾಯಿತು. ೧೧ ದಿನಗಳಕಾಲ ಇದು ನಡೆಯಬೇಕೆಂದಿದ್ದ ಕಾಲಪರಿಮಿತಿಯನ್ನು ೩೮ ದಿನಗಳವರೆಗೆ ಹೆಚ್ಚಿಸಿಕೊಂಡಿರುತ್ತಾರೆ. ರಷ್ಯಾಸೈನ್ಯವು ಅಪೇಕ್ಷಿಸುತ್ತಿರುವ ಈ ಸಂಧಿಯನ್ನು ರಷ್ಯಾದೇಶದ ಅನೇಕ ಪ್ರಜೆಗಳು ಒಪ್ಪಿಲ್ಲ. ಮತ್ತೂ ಕಾಕಸಸ್ ಕಡೆಯ ರಾಜ್ಯಾಧಿಕಾರಿಗಳೂ, ಅಲ್ಲಿಯ ಸೈನ್ಯಾಧಿಕಾರಿಗಳೂ ಸಹ ಒಪ್ಪಿಲ್ಲ. ಅವರು ಮಿತ್ರಮಂಡಲಿಯವರ ಕಡೆಗೆ ಸೇರಿಕೊಂಡು ಮುಂದೆ ಇನ್ನೂ ಯುದ್ಧವನ್ನು ನಡೆಯಿಸಬೇಕೆಂದೇ ಇದ್ದಾರೆ. ಸೆರೆಯಲ್ಲಿಡಲ್ಪಟ್ಟಿದ್ದ ಕಾರ್ನಿಲಾಫ್ ಸೇನಾನಿಯನ್ನು ಅವರ ಮಿತ್ರರೊಬ್ಬರು ಪೋರ್ಜರಿಯ ಆರ್ಡರನ್ನು ಕಾರಾಗೃಹಾಧಿಕಾರಿಗೆ ತೋರಿಸಿ ಬಿಡಿಸಿಕೊಂಡುಹೋದರು. ಈಗ ಕಾರ್ನಿಲಾಫರೂ ಜನರಲ್ ಕಲಡೋನಿಯವರೂ ಕೂಡ ಒಂದು ಕಡೆ ಕೂಡಿದ್ದಾರೆ. ಅವರು ವಿಪ್ಲವಪಕ್ಷದಮೇಲೆ ಕಾರ್ಯಭಾರ ನಡೆಯಿಸುತ್ತಿದ್ದಾರೆ. ಸೈಬೇರಿಯಾ ದೇಶಭಾಗವು ರಷ್ಯಾದ ಈಗಣ ಪ್ರಭುತ್ವವನ್ನು ಒಪ್ಪದೆ ತಾವು ಪ್ರತ್ಯೇಕ ಪ್ರಭುತ್ವವನ್ನು ಪ್ರಕಟಿಸಿಕೊಂಡಿದ್ದಾರೆ. ಜರ್ಮನರು ಸಂಧಿಯಮಾತನ್ನು ಆಡುತಿದ್ದುಕೊಂಡಿರುವಾಗಲೇ ಉಪಾಯದಿಂದ ರಷ್ಯಾದ ಆಹಾರ್ಯಾದಿ ಸಾಮಗ್ರಿಗಳನ್ನು ತಮ್ಮ ದೇಶಕ್ಕೆ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಬೋಲ್ಷೋವಿಕ್ ನೂತನ ಪ್ರಭುತ್ವದವರು ದೇಶದ ಭೂಮಿ ಮನೆ ಮಠ ದನ ಮೊದಲಾದುವುಗಳೆಲ್ಲಾ ಸರ್ಕಾರಕ್ಕೆ ಸೇರಿದುವೆಂಬುದಾಗಿ ನೂತನ ಪ್ರಕಟನೆ ಮಾಡಿರುವುದರಿಂದ ಇದು ಪ್ರಜೆಗಳಲ್ಲಿ ಅಸಂತುಷ್ಟಿಯನ್ನು ಹೆಚ್ಚಿಸಿದೆ. ಈ ನೂತನ ಪ್ರಭುತ್ವವನ್ನು ಸಾಂಕೀಕವಾದಿಗಳು ವಿರೋಧಿಸುತ್ತಿದ್ದಾರೆ. ತಮ್ಮ ಹಿಂದಣ ರಷ್ಯಾಪ್ರಭುತ್ವದವರು, ಇಂಗ್ಲೀಷರು ಅಮೇರಿಕಾದವರು ಮೊದಲಾದವರಿಂದಲ್ಲಾ ಮಾಡಿದ್ದ ಸಾಲವನ್ನು ತೀರಿಸುವುದಕ್ಕೆ ನಾವು ಬದ್ಧರಲ್ಲವೆಂದು ಈಗಣ ರಷ್ಯಾದ ಮ್ಯಾಸ್‌ಮಾಲಿಸ್ಟ್ ಪ್ರಭುತ್ವದವರು ಪ್ರಕಟಿಸಿರುವುದು ನಾಗರಿಕವಾದ ಯಾವ ರಾಷ್ಟ್ರಕ್ಕೂ ತಕ್ಕುದಲ್ಲದ ಅಗೌರವಕರವಾದ ಸಂಗತಿಯಾಗಿರುವುದು. ಇದರಿಂದ ಅಲ್ಲಿಯ ಈಗಣ ಪ್ರಭುತ್ವವು ಎಷ್ಟು ಜಘನ್ಯ ಸ್ವಭಾವವುಳ್ಳದೆಂಬುದು ವ್ಯಕ್ತವಾಗುತ್ತಿರುವುದು. ಇದುವರೆಗೆ ಆ ದೇಶದ ಪ್ರಭುತ್ವಕ್ಕೆ ಸಾಲಕೊಟ್ಟಿರುವ ರಾಷ್ಟ್ರಗಳೆಲ್ಲಾ ಅತಿಶಯವಾಗಿ ಕಠಿನಚರ್ಯೆಗಳನ್ನು ಅದರ ವಿಷಯದಲ್ಲಿ ಇನ್ನು ಮುಂದೆ ಆಚರಿಸುವರೆಂಬುದಕ್ಕೆ ಸಂಶಯವಿಲ್ಲ. ಪ್ರಪಂಚದಲ್ಲೆಲ್ಲಾ ಒಂದು ಘನತರರಾಷ್ಟ್ರವಾಗಿದ್ದ ರಷ್ಯಾದ ಅವಸ್ಥೆಯೂ ಗೌರವವೂ ಸ್ವಲ್ಪ ಕಾಲದೊಳಗಾಗಿ ಇಷ್ಟು ಹೀನಸ್ಥಿತಿಗೆ ಬಂದುದು ದೈವಸಂಘಟನೆಯ ವೈಚಿತ್ರ್ಯವು.

ರಣರಂಗಗಳ ಸ್ಥಿತಿಗತಿ ಹೇಗಿರುವುದೆಂದರೆ—ಜರ್ಮನರು ರಷ್ಯಾರಂಗದಲ್ಲಿದ್ದ ತಮ್ಮ ಸೈನ್ಯಗಳೊಳಗೆ ಆಣಿಯಾಗಿರುವ ಭಾಗವನ್ನು ಮಾತ್ರ ಪಶ್ಚಿಮರಂಗಕ್ಕೆ ತಂದು ಕಾಂಬ್ರೆಯಹತ್ತಿರ ತಮಗಾದ ಅಪಜಯವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಬಹಳ ಸಾಹಸಮಾಡುತ್ತಿರುವರು. ಇದರ ಫಲವಾಗಿ ಅವರು ಬೋರ್ಲೋನ್ ಕಾಡನ್ನು ಮಾತ್ರ ಇಂಗ್ಲೀಷರಿಂದ ಮರಳಿ ವಶಪಡಿಸಿಕೊಂಡರು. ಇದರಿಂದ ಅವರು ಸ್ವಲ್ಪ ಲಾಭವನ್ನು ಪಡೆದಂತಾಯಿತು. ಉಳಿದ ಭಾಗವನ್ನೆಲ್ಲಾ ಇಂಗ್ಲೀಷರು ಕಾಪಾಡಿಕೊಂಡೇ ಇದ್ದಾರೆ ಮತ್ತೂ ಶತ್ರುಸೈನ್ಯದಮೇಲೆ ಬಿದ್ದು ಯುದ್ಧಮಾಡುತ್ತ ನೂತನಸ್ಥಲಗಳನ್ನು ವಶಪಡಿಸಿಕೊಳ್ಳುವುದನ್ನು ನಮ್ಮವರು ಬಿಟ್ಟಿಲ್ಲ. ಲಾವಾಕ್ರಿಗ್ರಾಮದಹತ್ತಿರವಿದ್ದ ಶತ್ರುಗಳ ಕೆಲ ಕಂದಕಗಳನ್ನು ವಶಪಡಿಸಿಕೊಂಡರು. ಅಮೇರಿಕಾದವರು ಬರುವ ಬೇಸಗೆಯೊಳಗಾಗಿ ಈ ಪಶ್ಚಿಮರಂಗಕ್ಕೆ ತಮ್ಮ ೩೦ ಲಕ್ಷ ಸೈನ್ಯವನ್ನು ಮಿತ್ರಮಂಡಲಿಯ ಸಹಾಯಾರ್ಥವಾಗಿ ಕಳುಹಿಸಿಕೊಡಲು ನಿರ್ಧರಿಸಿದ್ದಾರೆ. ಮತ್ತು ಅವರು ಆಸ್ಟ್ರಿಯಾದವರ ಮೇಲೂ ಯುದ್ಧವನ್ನು ಸಾರಿದರು. ಇಟಲಿರಂಗದಲ್ಲಿ ಶತ್ರುಗಳು ಮತ್ತೆ ಬಲವಾದ ಯುದ್ಧವನ್ನಾರಂಭಿಸಿರುವರು. ರಷ್ಯಾರಂಗದ ಯುದ್ಧವು ಸ್ವಲ್ಪಕಾಲ ನಿಂತಿರುವುದರಿಂದ ಈ ಸಂಧಿಯಲ್ಲಿ ಅವರು ಪಶ್ಚಿಮರಂಗದಲ್ಲೂ ಇಟಲಿಯಲ್ಲೂ ಯುದ್ಧವನ್ನು ಬಲಪಡಿಸಿದ್ದಾರೆ. ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಇಟಲಿ ಸೈನ್ಯಗಳೊಡನೆ ಕೂಡಿ ಶತ್ರುಗಳಮೇಲೆ ಯುದ್ಧಮಾಡುತ್ತಲಿರುವುವು. ಏಷಿಯಾಗೋ ಪೀಠಭೂಮಿಯ ಈಶಾನ್ಯಭಾಗದಲ್ಲಿ ಘೋರಯುದ್ಧವಾಗುತ್ತಿರುವುದು. ಪ್ಲಾವಿನದಿಯಹತ್ತಿರ ಶತ್ರುಗಳ ನುಗ್ಗಾಟಕ್ಕೆ ಇವರುಗಳು ಸ್ವಲ್ಪವೂ ಅವಕಾಶಕೊಡಲಿಲ್ಲ. ಆದರೆ ಮಾಲೆಟ್ ಪರ್ವತದ ಹತ್ತಿರ ಮಾತ್ರ ಇಟಲಿಯವರು ಸ್ವಲ್ಪ ಹಿಮ್ಮೆಟ್ಟಿ ಬಲವಾದ ಸ್ಥಾನವೊಂದನ್ನು ಆಶ್ರಯಿಸಿಕೊಂಡು ನಿಂತಿರುವರು. ಇದುವರೆಗೆ ನಡೆದ ಯುದ್ಧದಲ್ಲಿ ಶತ್ರುಗಳ ದಳದಲ್ಲಿ ಬಹುಭಾಗಸೈನ್ಯವು ಮಿತ್ರಮಂಡಲಿಯವರ ಫಿರಂಗಿಯೇಟಿನಿಂದ ಮೃತವಾಗಿರುವುದೆಂದೂ ರಣರಂಗವೆಲ್ಲಾ ಅವರುಗಳ ಹೆಣಗಳ ರಾಶಿಯಿಂದ ತುಂಬಿಹೋಗಿದ್ದಿತೆಂದೂ ಪ್ರಕಟವಾಗಿದೆ.

ತುರ್ಕಿರಂಗದಲ್ಲಿ ಎಂದರೆ ಪಾಲಸ್ತೈನಿನಲ್ಲಿ ನಮ್ಮವರು ಹೆಬ್ರಾನ್ ಎಂಬ ಮತ್ತೊಂದು ಪುರವನ್ನು ವಶಪಡಿಸಿಕೊಂಡರೆಂಬ ವಾರ್ತೆಯು ೮ ದಿನಗಳ ಕೆಳಗೆ ಬಂದಿದ್ದಿತು. ಈಚೆಗೆ ಬಂದ ವಾರ್ತೆಯಿಂದ ಜರೂಸಲೇಂ ಎಂಬ ಪಟ್ಟಣವೂ ಕೂಡ (ಇದು ಕ್ರೈಸ್ತರಿಗೂ ಮಹಮ್ಮದೀಯರಿಗೂ ಪರಮಪವಿತ್ರಸ್ಥಲವು.) ಇದನ್ನು ವಶಪಡಿಸಿಕೊಳ್ಳುವುದಕ್ಕಾಗಿ ಕ್ರೈಸ್ತರಿಗೂ ಮುಸಲ್ಮಾನರಿಗೂ ಹಿಂದೆ ಎಷ್ಟೋ ಯುದ್ಧಗಳು ನಡೆದಿರುವುವು. ಕಳೆದ ೭೦೦ ವರ್ಷಗಳಿಂದಲೂ ಇದು ಮುಸಲ್ಮಾನರ ಅಧೀನದಲ್ಲೇ ಇದ್ದಿತು. ನಮ್ಮವರಿಂದ ೮ ದಿನಕ್ಕೆ ಹಿಂದೆಯೇ ಆಕ್ರಮಿಸಲ್ಪಟ್ಟಿತೆಂಬ ಸಂತೋಷಕರವಾದ ವಾರ್ತೆಯು ಕೂಡ ಬಂದಿರುತ್ತದೆ. ಈ ಪುಣ್ಯಸ್ಥಲಕ್ಕೆ ಯಾವುದೊಂದು ಹಾನಿಯೂ ತಟ್ಟದಂತೆ ಉಪಾಯವಾಗಿ ಹಿಡಿಯಬೇಕೆಂಬ ಉದ್ದೇಶವಿದ್ದುದರಿಂದಲೇ ಇದರ ಆಕ್ರಮಣಕ್ಕೆ ಇಷ್ಟು ಸಾವಕಾಶವಾಯ್ತೆಂದು ತಿಳಿಯಬರುತ್ತದೆ. ಆಂಗ್ಲಾಧಿಕಾರಿಗಳೂ, ಮಹಮ್ಮದೀಯಪ್ರಮುಖರೂ ಸಹ ಆ ಪಟ್ಟಣದ ಪಾವಿತ್ರ್ಯರಕ್ಷಣೆಗೆ ಬೇಕಾದ ಏರ್ಪಾಟುಗಳನ್ನೆಲ್ಲಾ ಸಮರ್ಪಕವಾಗಿ ಮಾಡುತ್ತಲಿರುವರೆಂದು ವಾರ್ತೆಬಂದಿದೆ. ಪೂರ್ವಾಫ್ರಿಕಾದಲ್ಲಿ ನಮ್ಮವರಿಗೆ ಸಂಪೂರ್ಣವಾದ ದಿಗ್ವಿಜಯಪ್ರಾಪ್ತವಾದ ಸ್ವಲ್ಪ ಕಾಲದೊಳಗೇ ತುರ್ಕಿಯಲ್ಲಿ ಇಂಥ ಪವಿತ್ರಸ್ಥಲಪ್ರಾಪ್ತಿಯ ವಿಜಯವಾರ್ತೆಯೂ ಕೂಡ ಬಂದಿರುವುದು ಮಿತ್ರಮಂಡಲಿಯವರ ಉತ್ತರೋತ್ತರ ದಿಗ್ವಿಜಯಕ್ಕೆ ಶುಭಸೂಚನೆಗಳೂ ಪ್ರೋತ್ಸಾಹಕರವೂ ಆಗಿರುತ್ತವೆ.

ಅದ್ಭುತ!

"ಬ್ರಾಹ್ಮಣರು ನಮಗೆ ಉಪಕಾರಮಾಡತಕ್ಕವರು. ಅವರ ಜಮೀನುಗಳನ್ನು ವ್ಯವಸಾಯಮಾಡಬೇಡಿರೆಂದು ಇತರರು ನಮಗೆ ಬೋಧಿಸುತ್ತಾರೆ. ಬ್ರಾಹ್ಮಣರು ಮಾಡುವ ಉಪಕಾರದಲ್ಲಿ ಶತಾಂಶವನ್ನೂ ಇತರರು ನಮಗೆ ಮಾಡುವುದಿಲ್ಲ." ಎಂದು ತಮಗೆ ಪಂಚಮನೊಬ್ಬನು ಲೇಖನವನ್ನು ಬರೆದುಕೊಂಡಿರುವಂತೆ ಸಂಪದಭ್ಯುದಯದ ಎಡಿಟರ್‌ರವರು ಛಾಪಿಸಿದ್ದಾರೆ. ಇದನ್ನು ಲೋಕದ ನಿಜಸ್ಥಿತಿಯನ್ನು ಬಲ್ಲ ಯಾವೊಬ್ಬ ಪಂಚಮಜಾತಿಯವನೂ ಬರೆಯಲಾರನೆಂದೂ ಕೃತಘ್ನನಾದ ಪಂಚಮನಾದ ಇನ್ನಾರೋ ಬರೆದಿರುವನೆಂದೂ ನನಗೆ ತೋರುತ್ತೆ. ಇಂಡ್ಯಾದೇಶದಲ್ಲಿ ನಮ್ಮ ಪಂಚಮ ಜನರು ೯ ಕೋಟಿಯಷ್ಟಿರುವರೆಂದು ಕೇಳಿದ್ದೇನೆ. ಆದರೂ ಅವರು ಸರ್ವ ವಿಷಯದಲ್ಲಿಯೂ ಹಿಂದುಳಿದಿರುವಷ್ಟು ಇನ್ನಾರೂ ಉಳಿದಿರುವುದಿಲ್ಲ. ಅವರಿಗೆ ಇತರ ಜನವರ್ಗದವರೆಲ್ಲರೂ ಅವಲಂಬನೆ ಕೊಟ್ಟು ಉದ್ಧಾರಮಾಡಬೇಕಾಗಿದೆ. ಯಾರು ಅಂಥ ಕೆಲಸವನ್ನು ತ್ರಿಕರಣಶುದ್ಧಿಯಿಂದ ಮಾಡುತ್ತಾರೋ ಅಂಥ ಮಹನೀಯರಿಗೆಲ್ಲಾ ನಮ್ಮವರು ಕೃತಜ್ಞರಾಗಿರುವರು. ಸ್ವಪ್ರಯೋಜನದ ಯಾವದೋ ಗುರಿಯಿಟ್ಟುಕೊಂಡು ಮೇಲೆಮೇಲೆ ಅಭಿಮಾನವನ್ನು ತೋರಿಸಿಕೊಳ್ಳುತ್ತಿರುವವರಿಂದ ನಮಗೆ ಎಳ್ಳಷ್ಟೂ ಶಾಶ್ವತ ಫಲವಾಗುವದಿಲ್ಲ. ನಮ್ಮನ್ನು ಉದ್ಧಾರಮಾಡುತ್ತೇವೆಂದು ಎಷ್ಟೋ ಕೆಲವರು ಟವನ್ನುಗಳಲ್ಲಿ ಆತ್ಮಪ್ರತಿಷ್ಠಾ ವಿಜೃಂಭಣೆಯನ್ನು ಮಾಡಿಕೊಳ್ಳುವವರು ಇರಬಹುದು. ಅದಕ್ಕೆ ಈಗಿನ ಸ್ಥಿತಿಗತಿಯಲ್ಲಿ ಕೆಲವು ಕಾರಣವೂ ಇರಬಹುದು. ಆದರೆ ನಿಜವಾಗಿಯೂ ಪರಸ್ಪರ ಸಹಾಯದಿಂದ ನಮಗೆ ವಿಶೇಷವಾಗಿ ಅವಲಂಬನೆ ಕೊಟ್ಟುಕೊಂಡು ಬಂದಿರುವವರು ಇತರರೇ ಹೊರತು ಈ ಸ್ವಲ್ಪ ಜನಗಳಲ್ಲ. ರೈತರುಗಳ ಅವಲಂಬನೆಯೇ ನಮಗೆ ೯೯ ಪಾಲು ಉದ್ಧಾರ ನಡೆದುಬಂದಿರುವುದು. ಪ್ರತಿಯೊಂದು ಗ್ರಾಮಾಂತರಗಳ ಸಂಗತಿಯನ್ನೂ ಕಣ್ತೆರೆದು ನೋಡುವವರಿಗೆಲ್ಲಾ ಇದು ಗೊತ್ತಾಗದೆ ಹೋಗುವುದಿಲ್ಲ. ರೈತರು ನಮ್ಮನ್ನು ಮನೆ ಮಕ್ಕಳಂತೆ ಕಂಡು ಹಿಟ್ಟು ಬಟ್ಟೆಯನ್ನೂ ಸಂಬಳವನ್ನೂ ಕೊಟ್ಟು ನಮ್ಮಿಂದ ಕೆಲಸವನ್ನು ತೆಗೆದುಕೊಂಡು ಪರಸ್ಪರ ಸಹಾಯದಿಂದ ಅವರೂ ನಾವೂ ಬದುಕುತ್ತಿದ್ದೇವೆ. ಬೇಸಾಯ ಕೆಲಸದಲ್ಲಿ ಅವರೂ ನಾವೂ ಎಷ್ಟೋ ಹೊಕ್ಕು ಬಳಕೆಯಿಂದ ನಡೆಸಿಕೊಂಡು ಹೋಗುತ್ತಿದ್ದೇವೆ. ಇದರಲ್ಲಿ ಯಾವ ಬೂಟಾಟಿಕೆಯನ್ನೂ ಅವರು ಮಾಡುತ್ತಿರುವುದಿಲ್ಲ. ಹಿಂದೆ ನಮ್ಮಲ್ಲಿ ಅನೇಕರು ಜ್ಞಾನಸಂಪನ್ನರೂ ಭಕ್ತಿಸಂಪನ್ನರೂ ಆಗಿದ್ದರೆಂದು ಪುರಾಣ ಪುಣ್ಯಕಥೆಯಲ್ಲಿ ಕೇಳುತ್ತಿದ್ದೇವೆ. ಶಿವಭಕ್ತರ ಕಲ್ಯಾಣಪಟ್ಟಣದ ಬಸವಣ್ಣನವರು ನಮ್ಮ ಜನರಿಗೆ ಲಿಂಗಧಾರಣೆಯನ್ನು ಮಾಡಿಸಿ ಸಿರಿಯಭಕ್ತರೆಂದು ಕರೆದು, ಭಕ್ತಿಜ್ಞಾನಸಂಪನ್ನರಾದವರಲ್ಲಿ ಜಾತಿ ಕುಲ ಗೋತ್ರವನ್ನು ನೋಡಬಾರದೆಂದು ಬೋಧಿಸಿ, ನಮ್ಮ ಉದ್ಧಾರಕ್ಕೆ ಮಾಡಿದ ಅನುಗ್ರಹವನ್ನು ನಾವೆಂದಿಗೂ ಮರೆಯಲಾಗುವುದಿಲ್ಲ. ಹಾಗೆ ಅವರ ಅನುಗ್ರಹಕ್ಕೆ ಪಾತ್ರರಾದ ಶಿವನಾಗಯ್ಯ ಎಂಬ ಶರಣರ ವಿಷಯದಲ್ಲಿ ಅವರು ಗೌರವಕೊಟ್ಟು ನಡೆದುಕೊಳ್ಳುತ್ತಿರುವಲ್ಲಿ ಕಲ್ಯಾಣಪಟ್ಟಣದ ಬ್ರಾಹ್ಮಣರೇನುಮಾಡಿದರು ಬಲ್ಲಿರಾ? ಆಗಿನ ದೊರೆಯ ಬಳಿಗೆ ಹೋಗಿ, ಪ್ರಭುವೇ! ಬಸವಣ್ಣನಿಂದ ಕಲ್ಯಾಣಪಟ್ಟಣವೆಲ್ಲಾ ಹೊಲೆಗಲಸಿಹೋಯಿತು, ಚಾಂಡಾಲನ ನೆರಳು ಬಿದ್ದರೂ ಬ್ರಾಹ್ಮಣನು ಸಚೇಲಸ್ನಾನಮಾಡಬೇಕಾಗಿರುವುದು, ರಾಜ್ಯದಲ್ಲಿ ಅಧರ್ಮವು ಹೆಚ್ಚಿತು. ಈ ಪಾಪವು ದೊರೆಗೆತಟ್ಟುವುದು, ಮಳೆ ಬೆಳೆಗಳು ಹಾಳಾಗುವುವು" ಎಂದು ಚಾಡಿ ಹೇಳಿದರು. ದೊರೆಯು ಬಸವಣ್ಣನನ್ನು ಕರೆಸಿ, ಇದು ನಿಜವೇ? ಎಂದು ಕೇಳುವಲ್ಲಿ—ಭಕ್ತಿಜ್ಞಾನಗಳಿಂದ ಲೌಕಿಕಧರ್ಮವನ್ನಳಿದಿರುವ ಮಹನೀಯರಲ್ಲಿ ಕಲ್ಪಿತ ಜಾತಿದೋಷಗಳನ್ನರಸುವುದು ಅಧರ್ಮ; ಶಿವನಾಗಯ್ಯನು ಮಹಾಭಕ್ತನು; ಮಹಾನುಭಾವ ಎಂದು ಹೇಳಿ, ಅವನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ರಾಜಸಭೆಗೆ ಕರೆಸಿ, ಅವನು ಸಾಮಾನ್ಯಮನುಷ್ಯನಲ್ಲವೆಂಬುದನ್ನು ದೃಷ್ಟಾಂತಪಡಿಸುವುದಕ್ಕಾಗಿ ಅವನ ಕೈಯ ೫ ಬೆರಲುಗಳನ್ನೂ ಹಿಡಿದು ಹಿಂಡಲಾಗಿ ಹಾಲಿನ ಧಾರೆಯು ಸುರಿದಿತು. ಆಗ ದೊರೆಯು ಬೆರಗಾದನು. ಚಾಡಿಕೋರರ ಮುಖವೆಲ್ಲಾ ಸೀದು ಕಪ್ಪಗಾಯಿತು. ಹೀಗೆ ಆ ಶಿವಭಕ್ತರು ಹಿಂದೆಯೂ ನಮ್ಮಲ್ಲಿ ನಿವ್ಯಾಜವಾದ ಅಭಿಮಾನವುಳ್ಳವರಾಗಿದ್ದರು; ಈಗಲೂ ನಮ್ಮಲ್ಲಿ ವಿಶೇಷವಾಗಿ ಮಮತೆಯಿಟ್ಟಿರುವರು. ರೈತವರ್ಗದ ಜನರೆಲ್ಲಾ ಹಾಗೆಯೇ ಇರುವರು. ನಮ್ಮ ಮುಸಲ್ಮಾನ ಬಂಧುಗಳಂತೂ ನಮ್ಮ ಇತರ ಹಿಂದೂಗಳಿಗಿಂತಲೂ ಎಷ್ಟೋ ಮೇಲಾಗಿ ಪ್ರೀತಿಸುವರು. ಮುಸಲ್ಮಾನರ ಹೈದರಾಬಾದು ರಾಜ್ಯದಲ್ಲಿ ನಮಗೆ ಅಸ್ಪೃಶ್ಯ ದೋಷವೇ ಇಲ್ಲ. ಎಲ್ಲ ಸ್ಕೂಲುಗಳಲ್ಲೂ ಇತರರೊಡನೆ ಸೇರಿ ಓದುವುದಕ್ಕೆ ನಮಗೆ ಯಾವ ನಿರ್ಬಂಧವೂ ಇಲ್ಲ. ಬುದ್ಧಿವಂತರಾದವರು ಯಾವ ಸರ್ಕಾರಿ ನೌಕರಿಗಾದರೂ ಸೇರಬಹುದಾಗಿದೆ. ಇನ್ನು ನಮ್ಮ ಕ್ರೈಸ್ತ ಜನಗಳಂತು ಈಗಿನ ಕಾಲದಲ್ಲಿ ನಮ್ಮವರನ್ನು ಉದ್ಧರಿಸುವ ಕಾಮಧೇನು ಕಲ್ಪವೃಕ್ಷವೇ ಆಗಿ ಕೆಲಸಮಾಡಿದ್ದಾರೆ. ಜ್ಞಾನಿಗಳಾಗಿದ್ದ ನಮ್ಮಲ್ಲಿನ ಭಾಗವತರನ್ನು ಶ್ರೀ ವೈಷ್ಣವರ ಆಚಾರ್ಯರೂ ಕೂಡ ಆಳ್ವಾರರೆಂದು ಹಿಂದೆ ಪೂಜಿಸಿರುವರೆಂದು ಕೇಳುತ್ತಿದ್ದೇವೆ. ವಾಲ್ಮೀಕಿ, ಪರಾಶರ, ಮಾತಂಗಮಹಾಮುನಿ, ಶಬರಿ ಮೊದಲಾದ ಪೂರ್ವದ ಮಹರ್ಷಿಗಳನೇಕರು ನಮ್ಮ ಪಂಗಡಗಳಿಗೆ ಸೇರಿದವರಾಗಿದ್ದರು. ನಂದನಾರ್, ತಿರುವಳ್ಳುವರ್, ಚೋಕ್ಕಮೇಳ, ನಾಮದೇವ ಮೊದಲಾದನೇಕರು ನಮ್ಮ ಕಾಲಗಳಲ್ಲಿ ಉದ್ಭವಿಸಿದ ಮಹನೀಯರಾಗಿರುತ್ತಾರೆ. ಆದರೆ ಈಗಿನ ಹಿಂದೂ ಜನರಲ್ಲಿ ಇತರರು ನಮ್ಮನ್ನು ಆದರಿಸಿ ಅವಲಂಬನೆ ಕೊಡುವುದರಲ್ಲಿ ಶತಾಂಶವೂ ಅಗ್ರವರ್ಣದವರೆಂದು ಹೇಳಿಕೊಳ್ಳುವವರಿಂದ ನಮಗೆ ಆಗುತ್ತಲಿಲ್ಲ. ಹೀಗಿರುವಲ್ಲಿ ನಿಜವಾಗಿ ನಮ್ಮಲ್ಲಿ ಅಕೃತ್ರಿಮವಾದ ಅಭಿಮಾನವುಳ್ಳ ಇತರ ಜನರನ್ನು ನಾವು ಇನ್ನಾರ ಮಾಡುವವೆಂದರೆ ಬಾಯಿಗೆ ಬಟ್ಟೆಕಸರ ಮೂಡೀತು. ನಾವೂ ಸಮಗದ್ದುಗೆಗೆ ಬರುವಂತಾದಾಗ ನಮ್ಮಮೇಲಿರುವ ಬ್ರಾಹ್ಮಣರ ಅಭಿಮಾನದ ಪರೀಕ್ಷೆಯಾಗಬೇಕಾದೀತು. ಇಂತು

ಜಾತಿ ಪಂಚಮ, ಕುಳ್ಳ.

ಸ್ವಾಮಿ!

ಸಂಪದಭ್ಯುದಯದಲ್ಲಿ ಒಬ್ಬ ಒಡನ ಹೆಸರಿನಿಂದ "ವಿದ್ಯಾಭ್ಯಾಸವನ್ನು ಪರಾಪೇಕ್ಷೆಯಿಲ್ಲದೆ ಮಾಡಿಕೊಳ್ಳುವ ಶಕ್ತಿಯುಳ್ಳವರೆಲ್ಲರೂ ೧ ಲಕ್ಷ ರೂ ನ ವೇತನದ ಮೊಬಲಗಿನಲ್ಲಿ ವೇತನವನ್ನು ಹೊಂದುತ್ತಲಿರುವುದರಿಂದ ನಿಜವಾಗಿ ಹಿಂದುಳಿದವರಿಗೆ ಆಗುತ್ತಿರುವ ದ್ರೋಹವನ್ನು ಪಂಚಮರೇ ಮೊದಲಾದ ಅತ್ಯಂತ ಹೀನಸ್ಥಿತಿಯಲ್ಲಿರತಕ್ಕ ಜನಗಳು ಕ್ರಮೇಣ ತಿಳಿದುಕೊಳ್ಳುವರು. ಆಗ್ಗೆ ಈ ಏರ್ಪಾಟಿನ ಗುಣದೋಷಗಳು ಸ್ಟಾರ್ ಪತ್ರಿಕಾಕರ್ತರಿಗೂ ಗೊತ್ತಾಗುವುದು" ಎಂಬದಾಗಿ ಒಂದು ಲೇಖನವು ಬರೆಯಲ್ಪಟ್ಟಿದೆ. ಇದೇ ಸಂಪದಭ್ಯುದಯದಲ್ಲಿ ಮ|| ರಾಮಲಿಂಗರೆಡ್ಡಿಯವರ ಎಂಟ್ರೆನ್ಸ್‌ಮೆಂಟಿನಲ್ಲಿ ಅಧ್ಯಕ್ಷರಾಗಿದ್ದ ಮ|| ಕಾಂತರಾಜ ಅರಸಿನವರು "ಮ|| ರಾಮಲಿಂಗರೆಡ್ಡಿಯವರಲ್ಲಿ ಶ್ರೀಮನ್ಮಹಾರಾಜರಿಗೆ ನಂಬಿಕೆಯು ಅಸಾಧಾರಣವಾಗಿರುವುದೆಂಬುದಾಗಿಯೂ ಇವರ ಅಧಿಕಾರದಲ್ಲಿ ಹಿಂದುಳಿದವರ ಯೋಗಕ್ಷೇಮವು ಬಹಳ ಚೆನ್ನಾಗಿ ನೋಡಲ್ಪಡುವುದೆಂಬುದಾಗಿಯೂ ಅಪ್ಪಣೆ ಕೊಡಿಸಿದರು. ಅದಕ್ಕೆ ಅನುಸಾರವಾಗಿ ಮ|| ರೆಡ್ಡಿ ಸಾಹೇಬರು ತರದೂದುಗಳನ್ನು ಮಾಡುತ್ತಲಿದ್ದಾರೆ. ಬಾಲಿಕಾ ಪಾಠಶಾಲೆಗಳ ಕಮಿಟಿಗಳಲ್ಲೆಲ್ಲಾ ಸಕಲ ಪಂಗಡದ ಪ್ರತಿನಿಧಿಗಳಿರಬೇಕೆಂದು ಇವರು ಸಂಕಲ್ಪಮಾಡಿದ್ದಾರೆ. ಇದು ನಡೆದರೆ ಪಂಚಮರೇ ಮೊದಲಾದವರು ಕಮಿಟಿ ಮೆಂಬರುಗಳಾಗಿರಬಹುದು. ಅವರೂ ಅವರ ಪಂಗಡದ ಬಾಲೆಯರೂ ಕೂಡ ಬ್ರಾಹ್ಮಣರೇ ಮೊದಲಾದವರ ಜತೆಯಲ್ಲಿ ವ್ಯಾಸಂಗಮಾಡುವ ಸಂಭವವೂ ಬರಬಹುದು" ಎಂಬುದಾಗಿ ಮತ್ತೊಂದು ಲೇಖನವು ಒಬ್ಬ ಕ್ರೈಸ್ತನ ಹೆಸರಿನಿಂದ ಬರೆಯಲ್ಪಟ್ಟಿದೆ. ಪಂಚಮರು, ಕ್ರೈಸ್ತರು, ಮಹಮ್ಮದೀಯರು, ಒಕ್ಕಲಿಗರು, ಕುರುಬರು, ಮೊದಲಾದ ನೂರಾರು ಜನವರ್ಗಗಳವರೆಲ್ಲಾ ಹಿಂದುಳಿದ ಜನವರ್ಗಗಳವರೇ ಆಗಿದ್ದಾರೆ. ಇವರೆಲ್ಲರ ವಿದ್ಯಾಭಿವೃದ್ಧಿಗಾಗಿಯೇ ಸರ್ಕಾರದವರು ಒಂದು ಲಕ್ಷ ರೂ. ನ ವೇತನವನ್ನು ಅನುಗ್ರಹಿಸಿರುವರು. ಇಷ್ಟನ್ನು ಮಾಡಿದ ಸರ್ಕಾರದವರು ಅದರ ಸದ್ವಿನಿಯೋಗವು ಹೇಗಾಗಬೇಕೋ ಹಾಗೆ ಏರ್ಪಡಿಸಿಡಲಾರರೆ? ಈ ಹಿಂದುಳಿದ ಜನವರ್ಗಗಳವರಲ್ಲೇ ಪರಸ್ಪರ ಕಿತ್ತಾಟವನ್ನು ತಂದು ಹಾಕಬೇಕೆಂಬ ಮಹಾಕಾಪಟ್ಯದಿಂದ ಸಂಪದಭ್ಯುದಯವು ಪಡುತ್ತಿರುವ ಕೋಟಲೆಯನ್ನು ನೋಡಿದರೆ ಮರುಕವುಂಟಾಗುತ್ತದೆ. ತಂದಿಕ್ಕಿ ತಮಾಷೆ ನೋಡುವ ಇಂಥ ಜನರುಗಳ ಮಾತಿಗೆ ಹಿಂದುಳಿದ ಜನವರ್ಗದವರಾರೂ ಈಗ ಮರುಳಾಗುವಹಾಗಿಲ್ಲ. ಹಾಗೆ ಮರುಳಾದವರು ಭಸ್ಮಾಸುರನ ಬಲಿಚಕ್ರವರ್ತಿಯ ಅವಸ್ಥೆಗೆ ಗುರಿಯಾಗಬೇಕಾಗುವುದು. ಮ|| ರೆಡ್ಡಿ ಸಾಹೇಬರು ಶಾಲಾಕಮಿಟಿಗಳಲ್ಲಿ ಎಲ್ಲ ಪ್ರಭೇದದ ಮೆಂಬರುಗಳೂ ಇರುವಂತೆ ಏರ್ಪಡಿಸುವದಾದರೆ ಅದು ನಮ್ಮಂಥವರೆಲ್ಲರಿಗೂ ಸಂತೋಷವೇ ಅಲ್ಲವೆ? ಅದಕ್ಕೆ ಯಾವ ಪಂಚಮನೇ ಆಗಲೀ ಯಾವ ಕ್ರೈಸ್ತನೇ ಆಗಲೀ ಸಂತೋಷ ಪಡುವನೇ ಹೊರತು ಅಸಮಾಧಾನಪಡುವನೆ? ಅದಕ್ಕೆ ಹೊಟ್ಟೆಕಿಚ್ಚು ಪಡುವವರು ಸಂಪದಭ್ಯುದಯದ ಉಪಶ್ರುತಿಕಾರರಂಥವರೇ ಹೊರತು ಈ ದೇಶದ ಮಹಾತ್ಮ ಪ್ರಜೆಗಳೂ ಆಗಿರುವದಿಲ್ಲ. ಹೀಗಿರುವಾಗ ಆ ಅನಿಷ್ಟವನ್ನು ಕ್ರೈಸ್ತರೇ ಮೊದಲಾದ ಇತರರ ತಲೆ ಮೇಲೆ ಹೊಂಚುವುದಕ್ಕೆ ಸಂಪದಭ್ಯುದಯವು ಪ್ರವರ್ತಿಸಿರುವುದು ಕೋತಿಯು ಬುತ್ತಿಯನ್ನು ತಿಂದು ಮೇಕೆಯ ಬಾಯಿಗೆ ಒರಸಿದಂತಾಗಿರುವುದಲ್ಲವೇ? ಮ|| ರೆಡ್ಡಿ ಸಾಹೇಬರು ಹಾಗೆ ಪ್ರಯತ್ನಿಸಿರುವದು ನಿಜವಾಗಿ ಇದ್ದರೆ, ಅದು ಫಲಿಸುವದಾದರೆ, ಆಗ್ಗೆ ಸಂಪದಭ್ಯುದಯದ ಕುಲಗೋತ್ರದವರೆಲ್ಲಾ ಯಾವ ಗಲಾಟೆಯನ್ನೂ ಮಾಡದೆ ಇದ್ದರೆ, ಈ ಪತ್ರಿಕೆಯೂ ಇದರ ಹಿಂಬಾಲಕರೂ ಈಗ ಮಾತಿನಲ್ಲಿ ತೋರಿಸುತ್ತಿರುವ ಸಾನುಭೂತಿಯನ್ನು ನಿಜವಾದುದೆಂದು ಪಂಚಮರೇ ಮೊದಲಾದವರೆಲ್ಲರೂ ಆಗ್ಗೆ ತಿಳಿದುಕೊಂಡು ಕೃತಜ್ಞರಾಗಿರುವರು. ಹಾಗಲ್ಲದೆಹೋದರೆ ಇದೆಲ್ಲಾ ಪರವಂಚನೆಗಾಗಿ ಮಾಡುವ ಕಪಟೋಪಾಯವೆಂದು ಲೋಕಕ್ಕೇ ಡಂಗುರಿಸಿಹೋಗುವದಲ್ಲವೇ? ಈ ಪೂರಿನಲ್ಲಿ ನಮ್ಮ ಹಿಂದುಳಿದ ಜನವರ್ಗಗಳವರ ಸಾಲಿಗೆ ಸೇರಿದ ಪಂಚಮನೊಬ್ಬನು ಸಿಟಿ ಮ್ಯುನಿಸಿಪಲ್ ಕೌನ್ಸಿಲರಾಗುವುದಕ್ಕೆ ಕಳೆದ ಸಲ ತಾನು ಪ್ರಯತ್ನಿಸಿರಲು, ಯಾವ ಯಾವ ಕಾರಣವನ್ನೋ ತೋರಿಸಿ ಅದಕ್ಕೆ ಅಡ್ಡಿಮಾಡಿ ಕೆಡಿಸಿದರು. ಮುಂದೆ ಇಂಥ ಪ್ರಸಂಗವು ಮತ್ತೆ ಬರದೆ ಇರಲಾರದು. ಆಗ ಸಾನುಭೂತಿ ಪ್ರದರ್ಶನದ ಬಣ್ಣವು ಒರೆಗಲ್ಲಿನಮೇಲೆ ವ್ಯಕ್ತವಾಗುವುದಕ್ಕಿರುವದು. ನಿಜವಾದ ಸಾನುಭೂತಿಯನ್ನು ಕಾರ್ಯದಲ್ಲಿ ತೋರಿಸಿದರೆ ಲೋಕಕಲ್ಯಾಣವಾದೀತೇ ಹೊರತು ಅದನ್ನು ಬಿಟ್ಟು ಇಂಥ ಕಿತ್ತಾಟ ಹಚ್ಚುವದರಿಂದ ಆಗುವದೆ?

ಒಬ್ಬ ಹಿಂದುಳಿದವನು.

ಸ್ವಾಮಿ!

ಮೃಗಜಾತಿ (ಕಪಿವರ್ಗ) ಯಿಂದಲೇ ಮನುಷ್ಯಜಾತಿಯೇರ್ಪಟ್ಟಿತೆಂದು ಪ್ರಕೃತಿವೇತ್ತರಾದ ಪಾಶ್ಚಾತ್ಯ ಶಾಸ್ತ್ರಜ್ಞರು ಹೇಳುತ್ತಿರುವರು. "ಕೀಟೋಪಿ ಭ್ರಮರಾಯತೇ" ಎಂಬ ವೇದಾಂತವಚನದಿಂದಲೂ ಕೂಡ ಚಿರಾಧ್ಯವಸಾಯದಿಂದ ಪ್ರಾಣಿಜಾತಿಯಲ್ಲಿ ವಿಚಿತ್ರವೈಲಕ್ಷಣ್ಯವುಂಟಾಗುವುದು ಸಿದ್ಧವೆಂಬುದು ಗೊತ್ತಾಗುವುದು. ಸಸ್ಯವರ್ಗಗಳೂ ಕೂಡ ಕಸಿ ಕಟ್ಟುವುದೇ ಮೊದಲಾದ ದೋಹದ ಕ್ರಿಯೆಗಳಿಂದ ರೂಪಗುಣಾದಿ ಯೋಗ್ಯತೆಗಳಲ್ಲಿ ಅತ್ಯಂತ ವೈಲಕ್ಷಣ್ಯಗೊಳ್ಳುತ್ತಿರುವುದನ್ನು ಲೋಕವೇ ಬಲ್ಲುದು. ಹೀಗಿದ್ದರೂ ಸಾಧ್ವೀ-ಸಂಪದಭ್ಯುದಯ ಪತ್ರಿಕೆಗಳು ಈ ಪ್ರಕೃತಿಭಾವಕ್ಕೆ ವ್ಯತಿರಿಕ್ತವಾಗಿ ಅಗಸ ಅಗಸನಾಗಿಯೇ ಇರಬೇಕು, ಕುಂಬಾರ ಕುಂಬಾರನಾಗಿಯೇ ಇರಬೇಕು, ಕೆಲಸಿಗ ಕೆಲಸಿಗನಾಗಿಯೇ ಇರಬೇಕು, ಎಂದು ಹೇಳುತ್ತ ದುರ್ವಾದಮಾಡುತ್ತಿರುವುದನ್ನು ನೋಡಿದರೆ ನಗು ಬರುತ್ತಿದೆ. ಸ್ವಾರ್ಥಚ್ಯುತಿಯ ಭೀತಿಯಿಂದ ಅವುಗಳ ನ್ಯಾಯ ಧರ್ಮ ಯುಕ್ತಿಯುಕ್ತ ಬುದ್ಧಿಯೆಲ್ಲಾ ಮಸುಳಿಸಿಹೋಗಿರುವಂತೆ ಕಾಣುತ್ತದೆ. ಯಾವನೋ ಒಬ್ಬ ದೊರೆಯು ಯಾವನೋ ಒಬ್ಬ ಅಗಸನಿಗೆ ಮಂತ್ರಿತ್ವಕೊಟ್ಟಿರಲಾಗಿ, ಪರರಾಜರು ರಾಜ್ಯವನ್ನಾಕ್ರಮಿಸಲು ಬಂದಾಗ, ತಾನು ಬಟ್ಟೆಯೊಗೆಯುವ ಮನೆಗಳಲ್ಲಿ ನಿಮಗೆ ಸಮಾರ್ಥವನ್ನು ಹಂಚಿಕೊಡುತ್ತೇನೆ; ರಾಜ್ಯ ಹೋದರೆ ಚಿಂತೆಯೇಕೆ? ಎಂದು ಅಗಸನು ಸಮಾಧಾನ ಹೇಳಿದನಂತೆ. ಈ ಕಟ್ಟುಕಥೆಯನ್ನು ಪದೇ ಪದೇ ಹೇಳಿ, ಮರುಳುಮಾಡಲು ಸಾಹಸಪಡುತ್ತಿದೆ. ಹಾಗೆ ಅಗಸನು ಮಾಡಿದುದೂ ರಾಜನು ಮಾಡಿಸಿಕೊಂಡುದೂ ಯಾವ ಶಾಸ್ತ್ರದಲ್ಲಿ ಪುರಾಣದ ವೇದದಲ್ಲಿ ಲೋಕಚಾರಿತ್ರೆಯಲ್ಲಿ ಇದೆಯೋ ಕಾಣಲಿಲ್ಲ. ಆ ಕಲ್ಪಿತಕಥೆಯು ಹಾಗಿರಲಿ. ಜಗತ್ತನ್ನೆಲ್ಲಾ ವಂಚಿಸುವುದಕ್ಕೆ ಸಾವಿರಾರು ಕಟ್ಟುಕಥೆಗಳನ್ನೂ ಪುಗಸಟ್ಟೆ ಪುರಾಣಗಳನ್ನೂ ಬರೆದು ಸ್ವೋದರಂಭರಣ ಮಾಡಿಕೊಂಡ ಜನರು ಈ ಪುಟ್ಟಕಥೆಯೊಂದನ್ನು ಕಲ್ಪಿಸುವುದು ಆಶ್ಚರ್ಯವೆ? ಇಂಥ ತರಲೆಗಳ ಬೇಳೆಯು ಬೇಯುವ ಕಾಲವೆಲ್ಲಾ ಕಳೆದುಹೋಯಿತು. ೨೦ ನೆಯ ಶತಮಾನವು ಲೋಕಕ್ಕೇ ಜ್ಞಾನಾಂಜನವನ್ನು ಹಾಕಿರುತ್ತದೆ. ನಮ್ಮೂರಿನಲ್ಲಿ ಒಬ್ಬ ಅರಸರು ಅವರ ಹಿರಿಯರಿಂದಿರು ಸಂಪಾದಿಸಿದ ಹತ್ತಾರು ಗ್ರಾಮಗಳ ಒಡೆಯರಾಗಿದ್ದರು. ಸುಖಲೋಲುಪರಾದ ಇವರ ಜಡಾವಸ್ಥೆಯನ್ನು ನೋಡಿ ಚತುರರಾದ ಅವರ ಗ್ರಾಮಣಿಗಳು ಒಂದು ಕಥೆಯನ್ನು ಹುಟ್ಟಿಸಿದರು. ಏನೆಂದರೆ— "ನಿಮ್ಮ ಅಜ್ಜಂದಿರೊಬ್ಬರು ಒಂದುಸಲ ಈ ಇನಾಂ ಗ್ರಾಮಗಳಿಗೆ ಹಜ್ಜೆಯಿಡಲಾಗಿ ಅನಿವಾರಣೀಯವಾದ ರೋಗಕ್ಕೂ ಪಡಬಾರದ ಸಂಕಟಗಳಿಗೂ ಈಡಾಗಿ ಕಡೆಗೆ ದೇಹವನ್ನೇ ಬಿಟ್ಟರು. ಆದುಕಾರಣ ಅನ್ನದಾತ ಮಹಾ ಪ್ರಭುಗಳಾದ ತಮ್ಮ ಕ್ಷೇಮವನ್ನೇ ಕೋರುವ ನಾವು ಆ ವಿಷಯವನ್ನು ಸನ್ನಿಧಿಗೆ ಬಿನ್ನಯಿಸದೆ ಇದ್ದರೆ ದ್ರೋಹಮಾಡಿದವರಾಗುವೆವು" ಎಂದು ಹೇಳಿ ೩-೪ ಪಟ್ಟಗಳವರೆಗೆ ಗ್ರಾಮಸ್ವಾಮಿಗಳನ್ನು ಗ್ರಾಮಗಳಿಗೇ ಬರದಂತೆ ಮಾಡಿ, ಅವರಿಗೆ ಗ್ರಾಮಗಳ ನಿಜಸ್ಥಿತಿಯು ಗೋಚರಕ್ಕೇ ಬರದಂತೆ ಮಾಡಿ, ಸರ್ವಸಾರವನ್ನೂ ತಾವು ಹೀರುತ್ತಾ ಒಡೆಯರಿಗೆ ಸಿಪ್ಪೆಯನ್ನೊಪ್ಪಿಸುತ್ತಿದ್ದರು. ೨೦ ನೆ ಶತಮಾನದ ಮಕ್ಕಳು ಆ ಅರಸರ ಹೊಟ್ಟೆಯಲ್ಲಿ ಜನಿಸಿದುವು. ಪ್ರಾಪ್ತವಯಸ್ಕರಾದುವು. ತಮ್ಮ ಏಜಂಟರ ಪುಕ್ಕಟೆ ಪುರಾಣಗಳನ್ನೆಲ್ಲಾ ಕಿವಿಯಲ್ಲಿ ಕೇಳಿ ನಕ್ಕವು. ಕಾಲಸಂಘಟನೆಯಿಂದ ಪ್ಲೇಗಿನ ಹಾವಳಿಗೆ ಊರನ್ನು ಬಿಡುವ ಹೊತ್ತು ಬಂದಿತು. ಬೇರೆ ಕಡೆಗೆ ಹೋಗಿರುವುದೇಕೆ? ನಿಜಗ್ರಾಮಗಳಿಗೆ ಹೋಗಿ ವಾಸವಾಗಿರೋಣವೆಂದು ನಿರ್ಧರಿಸಿದರು. ಈ ಸುದ್ದಿಯನ್ನು ಕೇಳಿದಾಗಲೇ ಏಜಂಟರ ಎದೆಯು ಬಿರಿದಿತು. ಒಡೆಯರು ಗ್ರಾಮಗಳಿಗೆ ಬಂದುದನ್ನು ಕಂಡು ರೈತರೆಲ್ಲಾ ಪರಮಾನಂದದಿಂದ ನಜರುಗಳನ್ನೊಪ್ಪಿಸಿ, ಏಜಂಟರ ಚರಿತ್ರವನ್ನೆಲ್ಲಾ ನಿವೇದಿಸಿದರು. ಕಥೆಯ ಹೂರಣವೆಲ್ಲಾ ಬಯಲಾಯಿತು. ಕೃತಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಹೊಂದಿದ ಏಜಂಟರು ಬಲು ಬೇಗನೆ ಪರಲೋಕದ ಫಲಾನುಭವಕ್ಕೂ ತೆರಳಿದರು. ಈಗ ಅವೇ ಗ್ರಾಮಗಳು ೧ ಕ್ಕೆ ೪ ರಷ್ಟು ಫಲವನ್ನು ಸ್ವಾಮಿಗಳಿಗೆ ಕೊಡುತ್ತ ಗ್ರಾಮದ ರೈತರೂ ಒಡೆಯರೂ ಏಕಗೃಹಕೃತ್ಯದವರಂತೆ ಪರಸ್ಪರ ಪ್ರೀತಿ ಸೌಖ್ಯ ಲಾಭಗಳನ್ನನುಭವಿಸುತ್ತಲಿರುವುದನ್ನು ಅನೇಕರು ಕಣ್ಣಾರ ನೋಡುತ್ತಲಿದ್ದೇವೆ. ಹೀಗಿರುವಾಗ, ಸಂಪದಭ್ಯುದಯದ ಕಟ್ಟುಕತೆಗಳ ಬೇಳೆಯು ಇನ್ನು ಮುಂದೆ ಬೆಯ್ಯುವುದೆ? ಅಗಸ ಕುಂಬಾರ ಮೊದಲಾದವರು ಅವರವರ ಕಸಬನ್ನು ಬಿಟ್ಟು ಬೇರೆ ಕಸಬಿಗೆ ಹೋಗಲು ಅರ್ಹರಲ್ಲ, ಹಾಗೆ ಬೇರೆ ಕಸಬಿಗೆ ಹೋದರೆ ಲೋಕವೇ ತಲೆಕೆಳಗಾಗುವುದೆಂದು ಹೇಳುವ ಸಂಪದಭ್ಯುದಯವೇ, ಚಂಡಾಲಾದಿಗಳು ಮಾಡುವ ಶವಚ್ಛೇದನಾದಿಕರ್ಮವನ್ನು ತಮ್ಮ ಒಬ್ಬ ಶ್ರೋತ್ರಿಯನ ಮಗನು ಮಾಡುವವನಾಗಿದ್ದರೂ, ತಮ್ಮ ಒಬ್ಬ ಆಚಾರ್ಯನ ಮಗನು ದರ್ಜಿ ಕೆಲಸ ಮಾಡುವುದಕ್ಕೆ ಹೋದರೂ, ಒಬ್ಬ ಭಟ್ಟನಮಗನು ಹೆಂಡಮಾರುವ ಉದ್ಯೋಗಕ್ಕೆ ಹೋದರೂ ದೇಶವು ತಲೆಕೆಳಗಾಗುವುದೆಂಬ ಕಥೆಯನ್ನು ಹೇಳುವುದಕ್ಕೆ ಮಾತ್ರ ಉಜ್ಜುಗಿಸುವುದಿಲ್ಲ. ಇದಲ್ಲವೆ ಚಾತುರ್ಯ?

ಈಶ್ವರಸೃಷ್ಟಿಗೊಳಪಟ್ಟ ಮಾನವ ಜಾತಿಯಲ್ಲಿ ಸಂಸ್ಕಾರಬಲದ ಜತೆಗೆ ದೈವಾನುಗ್ರಹವೂ ಒದಗಿದರೆ ಎಂಥ ಮಹೋನ್ನತಸ್ಥಿತಿಯನ್ನಾದರೂ ಪಡೆಯಬಹುದೆಂಬ ವಿಷಯವನ್ನು ಜಗಚ್ಚರಿತ್ರದಿಂದ ಅರಿತುಕೊಳ್ಳುವುದು ಸರ್ವರಿಗೂ ಸುಲಭವಾಗಿರುವಾಗ ಸಂಪದಭ್ಯುದಯ ಕರ್ತರಂಥ ಸರ್ವಜ್ಞರಿಗೆ ಅದು ಗೊತ್ತಾಗದೆ ಇರುವುದುಂಟೆ? ಆದರೂ ಅವರು ಅಗಸನ ಕಥೆಯಂಥ ದೃಷ್ಟಾಂತವನ್ನು ಕೊಟ್ಟು ಕಣೇಹೇಳುವದು ಏತಕ್ಕೆಂದರೆ—ತಮ್ಮ ಹೊರತು ಇತರರಿಗೆ ಅಂಥ ವಿದ್ಯಾವೈದುಷ್ಯಾದಿ ಸಂಸ್ಕಾರಪೂದಗಲು ಅವಕಾಶ ಕೊಟ್ಟರೆ ತಮ್ಮ ನಿರುಪಾಧಿಕ ಸಾಮ್ರಾಜ್ಯಕ್ಕೆ ಇತರರು ಪಾಲಿಗೆ ಬರುವರೆಂಬ ಯೋಚನೆಯಿಂದ ಅದಕ್ಕೆ ಅದಿಯಲ್ಲೇ ತಡೆಹಾಕಿಬಿಡಬೇಕೆಂಬುದಕ್ಕಾಗಿಯೇ ಎಂಬುದಾಗಿ ನನಗೆ ತೋರುತ್ತದೆ.

ಈಗ್ಗೆ ೨೫ ವರ್ಷಗಳ ಕೆಳಗೆ ಸರ್ ಕೆ. ಶೇಷಾದ್ರಿ ಅಯ್ಯರ ದಿವಾನ್‌ಗಿರಿ ಕಾಲದಲ್ಲಿ ಇದೇ ನಮ್ಮ ಸಂಪದಭ್ಯುದಯದ ಹಿಮ್ಮೇಳದವರು ಮೈಸೂರು ಮೈಸೂರಿನವರಿಗೆ ಇರಬೇಕೆಂದು ಹೇಳಿಕೊಂಡು, ಕಣಿವೆಕೆಳಗಿನವರ ಮೇಲೆ ದ್ವೇಷಕೊಟ್ಟು, ಅವರುಗಳು ಅಧಿಕಾರ ನಿರ್ವಾಹದಲ್ಲಿ ಮಾಡಿದ ಒಳ್ಳೇ ಏರ್ಪಾಟುಗಳನ್ನು ಕೂಡ ದೋಷವಾಗಿ ಪ್ರಕಟಿಸುತ್ತ ಅವರ ನಿರ್ಮೂಲನಕ್ಕಾಗಿ ಅಸಮಸಾಹಸಗಳನ್ನು ಮಾಡಿದರು. ಈಗ ಅವರುಗಳ ಪ್ರಾಬಲ್ಯವೆಲ್ಲಾ ತಪ್ಪುತ್ತಾ ಬಂತು. ಮೈಸೂರಿನ ಉದ್ಧಾರಕರೆಂದು ಹೇಳಿಕೊಳ್ಳುತ್ತ ಆ ಹೊರಗಿನವರ ಪ್ರಾಬಲ್ಯವನ್ನು ಹಾಗೆ ಒತ್ತರಿಸಿದ ಬಳಿಕ ಈಗ ಸ್ವದೇಶೀಯರಾದ ಈ ಹಿಂದುಳಿದವರು ತಲೆಯೆತ್ತಿಕೊಳ್ಳುವ ಕಾಲವು ಬಂತಲ್ಲಾ ಎಂದು ಯೋಚಿಸಿ, ಈಗ ಅವರುಗಳ ಉಚ್ಚ್ರಾಯಕ್ಕೆ ತಡೆಯುದ್ದುವುದಕ್ಕೆ ಪ್ರಯತ್ನಿಸಿದ್ದಾರೆ. ಹೊರಗಿನವರ ಬಾಯಿಗೆ ಬಟ್ಟೆ ತುರುಕಿದಂತೆ ಮನೆಯೊಳಗಿನ ಇತರರ ಕೈಬಾಯಿಗಳನ್ನೂ ಕಟ್ಟಿ ತಮಗೆ ನಿರುಪಾಧಿಕ ಸಾಮ್ರಾಜ್ಯವನ್ನು ಮಾಡಿಕೊಳ್ಳಬೇಕೆಂಬುದೇ ಇವರ ಅಂತರಂಗ ಸಂಕಲ್ಪ. ಹೊರಗಿನವರನ್ನು ಅಟ್ಟೋಡಿಸಿದಂತೆ ಸ್ಥಳೀಯರನ್ನು ಓಡಿಸುವ ಪ್ರಯತ್ನವೂ ಸುಲಭಸಾಧ್ಯವೆಂದು ಇವರು ತಿಳಿದುಕೊಂಡಿದ್ದರೆ ಅದು ಬರೀ ಭ್ರಮೆ. ಏತಕ್ಕೆಂದರೆ ಮುಂದಾದವರಿಂದ ಒತ್ತಿ ತುಳಿಯಲ್ಪಟ್ಟಿದ್ದ ಲಕ್ಷೋಪಲಕ್ಷ ಜನರು ಈಗ ಜ್ಞಾನೋದಯಗೊಳ್ಳುತ್ತಿದ್ದಾರೆ.

ಹಿಂದುಳಿದವರು ವಿದ್ಯಾವಂತರಾಗುವುದೇ ಆಗಲಿ ಅಧಿಕಾರಕ್ಕೆ ಬರುವುದೇ ಆಗಲಿ ಸಂಪದಭ್ಯುದಯದ ಹಿಂಬಾಲಕರಿಗೆ ಸೈರಣೆಯಿಲ್ಲ. ವಿದ್ಯಾಭ್ಯಾಸ ಅಧಿಕಾರಪ್ರಾಪ್ತಿ ಮೊದಲಾದ ಪ್ರಯತ್ನಗಳಲ್ಲಿ ಅವರುಗಳಿಗೆಲ್ಲಾ ನಿರುತ್ಸಾಹಮಾಡಬೇಕೆನ್ನುವುದೇ ಇವರ ಕುತಂತ್ರವಾಗಿದೆ. ಆದಕಾರಣ ಈ ಪತ್ರಿಕೆಯ ಲೇಖಕರು ಅಗಸ ಮೊದಲಾದ ಕುಲಗಳವರಮೇಲೆ ಕೆಟ್ಟ ಕತೆಗಳನ್ನು ಹೇಳಿ ಪರಿಹಾಸಮಾಡುತ್ತಿದ್ದಾರೆ.

ಕೆಸರಿನಲ್ಲಿ ಹುಟ್ಟಿದ ತಾವರೆಯು ಈಶ್ವರನ ಶಿರಸ್ಸಿನಮೇಲೆ ಧರಿಸಲ್ಪಡುವ ಅರ್ಹತೆಯನ್ನೂ ಕೂಡ ಪಡೆದುಕೊಳ್ಳುವಂತೆ ಕ್ಷುದ್ರವೆಂದು ಎಣಿಸಲ್ಪಡುವ ಎಷ್ಟೋ ಜಾತಿಯ ಜನರುಗಳು ದೈವಾನುಗ್ರಹದಿಂದ ಶಾಶ್ವತ ಪರಮಪದವಿಯನ್ನು ಕೂಡ ಪಡೆದುಕೊಂಡಿರುವ ದೃಷ್ಟಾಂತಗಳಿರಲಾಗಿ, ನಮ್ಮ ಸಂಪದಭ್ಯುದಯ ಕರ್ತರಂಥ ಜನರುಗಳಿಂದ ಪರಿಹಾಸಗೊಳಿಸಲ್ಪಡುತ್ತಿರುವ ಅಗಸ ಮೊದಲಾದ ಕುಲವರ್ಗಗಳವರೆಲ್ಲರೂ ದೃಢಪ್ರಯತ್ನದಿಂದಲೂ ನಿರತಸಾಹಸದಿಂದಲೂ ದೀನದಯಾಳುವಿನ ಅನುಗ್ರಹದಿಂದಲೂ ವಿದ್ಯಾವಂತರಾಗುತ್ತ ಬಂದರೆ ನಶ್ವರವಾದ ಸರ್ಕಾರಿ ಉದ್ಯೋಗಗಳನ್ನು ಪಡೆದು ನಿರ್ವಹಿಸುವುದೇನಾಶ್ಚರ್ಯ? ನಮ್ಮ ಸಂಪದಭ್ಯುದಯ ಕರ್ತರಿಗೆ ಇನ್ನೂ ೫೦ ವರ್ಷದಾಯುಸ್ಸನ್ನು ಅನುಭವಿಸುವುದು ಸಾಧ್ಯವಾಗಿದ್ದರೆ ಅಂಥ ಸ್ಥಿತಿಯನ್ನು ಅವರೇ ನೋಡಿಯಾರು.

ಒಬ್ಬ ಅಗಸ.

ಒಳದೇಶದ ವೃತ್ತಾಂತಗಳು.

ರಾ|| ಬ|| ಎಂ. ಶ್ಯಾಮರಾಯರವರು ರಾಜಧಾನಿಗೆ ಬಂದು ಸಿವಿಲ್ ಕೋರ್ಟುಗಳ ಬಳಿಯಲ್ಲಿ ಕನ್ನೇಗೌಡನ ಕೊಪ್ಪಲಿನ ಮ|| ಲಿಂಗೇಗೌಡರಿಂದ ಕಟ್ಟಿಸಲ್ಪಡಲಿಕ್ಕಿರುವ ಪಾಠಶಾಲಾಭವನದ ಶಂಕುಸ್ಥಾಪನಮಹೋತ್ಸವನ್ನು ಈ ದಿವಸ ಜರುಗಿಸುವವರಾಗಿರುವರು.

ನಮ್ಮ ಶ್ರೀಮನ್ಮಹಾರಾಜರವರು ಈಗಣ ಯುದ್ಧದಲ್ಲಿ ತಮ್ಮ ದೇಶದ ಸೈನ್ಯವನ್ನೂ ವಿಶೇಷವಾದ ಧನಸಹಾಯವನ್ನೂ ಆಂಗ್ಲ ಸಾರ್ವಭೌಮರವರಿಗೆ ಅರ್ಪಿಸಿದುದರಿಂದ ಅವರು ಮೆಚ್ಚಿ, "ಜಿ. ಸಿ. ಎಸ್. ಐ." (ನೈಟ್‌ಗ್ರ್ಯಾಂಡ್‌ಕ್ರಾಸ್) ಎಂಬ ಘನತರವಾದ ಬಿರುದಾಂಕಿತವನ್ನು ದಯಪಾಲಿಸಿರುತ್ತಾರೆಂದು ತಿಳಿಯಲು ಸಂತೋಷಿಸುತ್ತೇವೆ.

ರಾಜಧಾನಿಯ ವರ್ತಕರುಗಳಲ್ಲಿ ಗಣ್ಯರಾಗಿರುವ ಸಾಹುಕಾರ್ ಬನುಮಯ್ಯನವರೂ ಸಾ|| ವಿ|| ಮಹಮ್ಮದ್‌ಸೇಟರವರೂ ಕೂಡ ಅವರ್‌ಡೇ ಫಂಡಿಗಾಗಿ ತಾ|| ೧೨ ನೆ ದಿನವೊಂದರಲ್ಲಿ ತಮಗೆ ವ್ಯಾಪಾರದ ಮೂಲಕ ಬಂದ ಲಾಭವನ್ನೆಲ್ಲಾ ಒಪ್ಪಿಸುವುದಾಗಿ ವಾಗ್ದಾನಮಾಡಿದರು. ಈ ಧರ್ಮಬುದ್ಧಿಯು ಸರ್ವರಿಗೂ ಅನುಸರಣೀಯವಾಗಿದೆ.

ಕೋಟೆಯಲ್ಲಿರುವ ದೇವಪಾರ್ಥಿವ ಬಹದ್ದೂರರ ಮನೆಯಲ್ಲಿ ಜೋಳದ ಕಡ್ಡಿಯ ಹತ್ತಿರ ಇಟ್ಟಿದ್ದ ದೀಪವು ಉರುಳಿಕೊಂಡು ಬೆಂಕಿಹೊತ್ತಿ, ತನ್ನೂಲಕ ಕಟ್ಟಡಕ್ಕೂ ಅಗ್ನಿಪ್ರವೇಶವಾಗಿ ಉರಿಯು ಕಾಣಿಸಿಕೊಳ್ಳಲು ನೆರೆಮನೆಯವರಾದ ಸರದಾರ್ ಗೋಪಾಲರಾಜ ಅರಸಿನವರು ಬಂದು ಸಾಹಸದಿಂದ ಆರಿಸಿಬಿಟ್ಟ ಕಾರಣ ವಿಶೇಷಾನರ್ಥಕ್ಕೆ ಅವಕಾಶವಿಲ್ಲದೆಹೋಯಿತೆಂದು ಕೇಳುತ್ತೇವೆ.

೮ ನೆ ವೀರಶೈವ ಮಹಾಸಭೆಯ ಸತ್ಕಾರಕ ಸಂಘದವರಿಂದ ಸಮಾಜಬಾಂಧವರುಗಳಕಡೆಗೆ ಆಹ್ವಾನಪತ್ರಗಳು ಕಳುಹಿಸಲ್ಪಡುತ್ತಿವೆ. ಆಯಾ ಸ್ಥಳದ ವೀರಶೈವ ಮಹಾಜನರು ತಂತಮ್ಮಲ್ಲಿ ಸಭೆಗಳನ್ನು ಮಾಡಿ ಪ್ರತಿನಿಧಿಗಳನ್ನಾರಿಸಿ ಕಳುಹಿಸಿಕೊಡುವ ಪ್ರಯತ್ನವನ್ನು ತ್ವರಿತವಾಗಿ ಕೈಕೊಳ್ಳುವರೆಂದು ಕೋರುತ್ತೇವೆ. ಸಭೆಯ ಕಾಲವು ಬಹಳ ಸಮೀಪಿಸಿತು.

ರಾಜಧಾನಿಯಲ್ಲಿ ನಡೆದ ಅವರ್‌ಡೇ ಉತ್ಸವದ ಕಾರ್ಯಗಳೆಲ್ಲಾ ಕಳೆದ ಗುರುವಾರ ರಾತ್ರಿಗೆ ಮುಗಿದುವು. ಈ ಏರ್ಪಾಟಿನಿಂದ ಬಹುಶಃ ೫ ಸಾವಿರ ರೂ. ಗಳವರೆಗೆ ಉತ್ಪನ್ನವಾಗಿರಬಹುದೆಂದು ಕೇಳುತ್ತೇವೆ. ಕೆಲ ಅಲ್ಪವಿಷಯದ ನ್ಯೂನತೆಯು ಹೊರತು ಕಮಿಟಿಯವರು ಮಾಡಿದ್ದ ಏರ್ಪಾಟುಗಳೆಲ್ಲಾ ಸಮರ್ಪಕವಾಗಿದ್ದುವು. ಕಮಿಟಿಯವರು ಪುರಜನಾಗಳ ವಂದನೆಗೆ ಪಾತ್ರರು.

ರಾಜಧಾನಿಯಲ್ಲಿ ನಡೆದ ಅವರ್‌ಡೇ ಉತ್ಸವದಲ್ಲಿ ನರ್ತನಕ್ಕೆ ಬಂದಿದ್ದವರಲ್ಲಿ ಒಬ್ಬಾಕೆಯು ಕಾಲಿಗೆ ಬೆಳ್ಳಿಯ ಗೆಜ್ಜೆಯನ್ನು ಕಟ್ಟಿ ಕುಣಿಯುತ್ತಿದ್ದುದು ಪ್ರೇಕ್ಷಕಿಯರಾಗಿದ್ದ ಅವರ ಸ್ವಜಾತೀಯರ ಗಮನಕ್ಕೆ ಬಂದು, ಅಕ್ರಮವಾದ ಆ ಪದ್ಧತಿಗಾಗಿ ಅವರುಗಳೆಲ್ಲಾ ಕೆರಳಿ ಕಲಕಲವನ್ನೆಬ್ಬಿಸಿದರು. ಕಮಿಟಿಯವರು ಪ್ರವೇಶಿಸಿ, ಆ ಗೆಜ್ಜೆಯನ್ನು ಬಿಚ್ಚಿಸಿ ಪದ್ಧತಿಯ ಗೆಜ್ಜೆಯನ್ನು ಕಟ್ಟಿಸಿದುದರಿಂದ ಗದ್ದಲವು ಅಲ್ಲಿಗೇ ಶಾಂತವಾಯಿತು.

ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರವರಿಗೆ ಸಾರ್ವಭೌಮರಿಂದ ದೊರೆದ ಸಿ. ಐ. ಇ., ಎಂಬ ಬಿರುದನ್ನೂ ತತ್ಸಯುಕ್ತವಾದ ಕೆಲ್ಲತ್ತನ್ನೂ ಸಹ ಮ|| ಶೆಟ್ಟರಿಗೆ ಒಪ್ಪಿಸುವ ಸಲುವಾಗಿ ಬೆಂಗಳೂರು ಕಂಟೋನ್ಮೆಂಟಿನಲ್ಲಿ ಬ್ರಿಟಿಷ್ ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಕಳೆದವಾರ ಕೂಡಿದ್ದಿತು. ಆ ಸಭೆಯಲ್ಲೇ ಇನ್ನು ಕೆಲ ದೊಡ್ಡಮನುಷ್ಯರಿಗೆ ಯುದ್ಧದ ಸಾಲದ ಸಂಬಂಧವಾಗಿ ತೋರಿಸಿದ ಮುತುವರ್ಜಿಗಾಗಿ ಶ್ಲಾಘನಪತ್ರಿಕೆಗಳು ಕೂಡ ರೆಸಿಡೆಂಟರಿಂದ ಕೊಡಲ್ಪಟ್ಟುವು.

ಗೆರುಸೊಪ್ಪಾ ಜಲಪಾತ ದರ್ಶನಕ್ಕೆ ದಯಮಾಡಿಸಿದ್ದ ಶ್ರೀಮನ್ ಬರೋಡಾ ಮಹಾರಾಜರೂ ನಮ್ಮ ಯುವರಾಜರೂ ಸಹ ಹಿಂದಿರುಗಿ ಬರುವಾಗ್ಗೆ ಕಳೆದ ತಾ|| ೧೨ ರಲ್ಲಿ ಶಿವಮೊಗ್ಗೆಯಲ್ಲಿ ನಿಂತಾಗ ಅಲ್ಲಿಯ ಪುರನಿವಾಸಿಗಳ ಪ್ರಾರ್ಥನೆಯಮೇರೆಗೆ ಗಾಯಕ್ವಾರ್ ಮಹಾರಾಜರು ಶ್ರೀ ಚಾಮರಾಜೇಂದ್ರ ಒಡೆಯರವರ ಹೆಸರಿನಮೇಲೆ ಪ್ರತಿಷ್ಠಿಸಲ್ಪಡಲಿಕ್ಕಿದ್ದ ಒಂದು ಕಾರಂಜಿಯ ಸ್ಥಾಪನಮಹೋತ್ಸವವನ್ನು ಜರುಗಿಸಿದರು. ಆ ಕಾಲದಲ್ಲಿ ಅಲ್ಲಿಯ ಪ್ರಜೆಗಳಿಂದಲೂ, ಶ್ರೀಮಂಡಲಿಯವರಿಂದಲೂ ಒಂದೊಂದು ವಿಜ್ಞಾಪನಪತ್ರಿಕೆಗಳು ಮಹಾರಾಜರವರಿಗೆ ಅರ್ಪಿಸಲ್ಪಟ್ಟುವು. ಮಹಾರಾಜರು ಅಲ್ಲಿಯ ಅವರ್‌ಡೇ ಫಂಡಿಗೆ ೧೫೦೦ ರೂ. ಗಳನ್ನು ದಯಪಾಲಿಸಿದರೆಂದು ಕೇಳುತ್ತೇವೆ.

ಘೋರವಿಪತ್ತು.

ಉತ್ತರ ಅಮೇರಿಕಾದಲ್ಲಿರುವ ಕೆನಡಾರಾಷ್ಟ್ರಕ್ಕೆ ಸೇರಿದ ಒಂದು ದ್ವೀಪದಲ್ಲಿರುವ ಹಾಲಿಫಾಕ್ಸ್ ಎಂಬ ತೀರಪಟ್ಟಣದಲ್ಲಿ ಯುದ್ಧರಂಗಕ್ಕಾಗಿ ಅಮೇರಿಕಾದವರಿಂದ ಕಳುಹಿಸಲ್ಪಡುತ್ತಿದ್ದ ಅಪಾರವಾದ ಮದ್ದುಗುಂಡುಗಳಿಂದ ತುಂಬಿದ ಒಂದು ದೊಡ್ಡ ಹಡಗೂ, ಬೆಲ್ಜಿಯಮ್ಮನವರಿಗೆ ಕಳುಹಿಸಿಕೊಡಬೇಕಾದ ಆಹಾರ್ಯವಸ್ತುಗಳಿಂದ ತುಂಬಿದ್ದ ಮತ್ತೊಂದು ಹಡಗೂ ಸಹ ನಿಂತಿದ್ದುವು. ದೊಡ್ಡ ಬಿರುಗಾಳಿಯಿಂದ ಎರಡೂ ಪರಸ್ಪರ ಡಿಕ್ಕಿಹೊಡೆದುದರಿಂದ ಮದ್ದಿನಹಡಗು ಮಹಾಭೀಕರಶಬ್ದವನ್ನು ಮಾಡುತ್ತ ಒಡೆದಿತು. ಇದರಿಂದ ಉಂಟಾದ ಮಹಾಪ್ರಳಯವು ಅತ್ಯಂತ ಭಯಂಕರವಾಗಿರುವುದು. ಅಲ್ಲಿಗು ೬೦ ಮೈಲಿಗಳ ದೂರದಲ್ಲಿರುವ ಪಟ್ಟಣಗಳೆಲ್ಲಾ ಅದುರಿಹೋದುವೆಂಬುದನ್ನು ಕೇಳುವಾಗ ಸಮೀಪದ ಊರುಗಳ ಅವಸ್ಥೆಯೇನಾಗಿರಬಹುದೋ ಅದನ್ನು ಊಹಿಸಿಕೊಳ್ಳಬಹುದು. ಹಾಲಿಫ್ಯಾಕ್ಸ್ ಊರಿನಲ್ಲಿ $\frac{1}{3}$ ಭಾಗವೆಲ್ಲಾ ನಿರ್ನಾಮವಾಗಿಹೋಯಿತು. ಎಷ್ಟೋ ಕೋಟ್ಯಂತರ ಸ್ವತ್ತುಗಳ ನಷ್ಟವಾಯಿತು. ೨ ಸಾವಿರ ಜನರು ಮಡಿದರು. ೫ ಸಾವಿರ ಜನರು ಗಾಯಗೊಂಡರು. ೨೦ ಸಾವಿರ ಜನರು ನಿರತಿಕರಾದರು. ವಿಪನ್ನರ ರಕ್ಷಣೆಗೆ ಅಮೇರಿಕಾದಲ್ಲಿ ದ್ರವ್ಯವು ಕೂಡಿಸಲ್ಪಡುತ್ತಿದೆ.

ಅಯ್ಯಾ! ಈ ಡಿಸೆಂಬರು 7 ನೇ ತಾರೀಖಿನ ಸಂಪದಭ್ಯುದಯದಲ್ಲಿ ಪತ್ರಕರ್ತರು ನನ್ನ ಹೆಸರನ್ನು ನಮೂದಿಸಿ ಒಂದು ವ್ಯಾಸವನ್ನು ಪ್ರಕಟಿಸಿರುವರು. ಇದಕ್ಕೆ ತಕ್ಕ ಉತ್ತರ ಕೊಡುವುದು ನನ್ನ ಕರ್ತವ್ಯವಾದ್ದರಿಂದ ಈ ವಿಷಯದಲ್ಲಿ ಕೆಲವು ಮಾತುಗಳನ್ನು ಇಲ್ಲಿ ತಿಳಿಸುವೆನು:—

ನಾನು ಮೊದಲಿನಿಂದಲೂ ಬ್ರಹ್ಮದ್ವೇಷಿಯಲ್ಲ. ಬಹು ಜನ ಬ್ರಾಹ್ಮಣರೇ ನನ್ನ ಮಿತ್ರರಾಗಿದ್ದಾರೆ. ಜಸ್ಟಿಸ್ ಮೊದಲಾದ ಪತ್ರಿಕೆಗಳು ಇವರನ್ನು ನಿಂದಿಸಿದಾಗ ನಾನು ಬರೆದ ಲೇಖನಗಳೇ ಇದನ್ನು ದೃಢಪಡಿಸುವುವು. ಈಚೆಗೆ ನವಂಬರು 2 ನೇ ತಾರೀಖಿನಲ್ಲಿ ಮೈಸೂರಿನಲ್ಲಿ ನಡೆದ ಮೀಟಿಂಗಿನಲ್ಲಿ ಕೋಮುವಾರು ಪ್ರತಿನಿಧಿಗಳು ಇರಬೇಕಾದದ್ದು ಅಗತ್ಯವೆಂದು ನಾನು ಆಡಿದ ಮಾತುಗಳು ಈ ಬ್ರಾಹ್ಮಣರಿಗೆ ತಿಗಟಾಗಿ ತೋರಿ, ನನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡೆನೆಂದು ಕರ್ಣಾಟಕ ಪತ್ರಿಕೆ ಆಕ್ಷೇಪಿಸಿದ್ದರ ಮೇಲೆ ಸಮಾಧಾನಕರವಾದ ಒಂದು ಲೇಖನವನ್ನು ಬರೆದೆನು. ಅದರಮೇಲೆ ಅಭ್ಯುದಯವು ಈ ರೀತಿ ಅಸಂಬದ್ಧಪ್ರಲಾಪಮಾಡತೊಡಗಿದ್ದು ವಿಷಾದಕರವಾಗಿದೆ.

ಈ ಪತ್ರಿಕೆಯು ಐದು ಜಾತಿಗಳನ್ನು ವಿಂಗಡಿಸಿ, ಚತುರ್ಥರೂ ಪಂಚಮರೂ ಕೃಷಿ, ಕೈಗಾರಿಕೆ ಮುಂತಾದುವುಗಳಿಗೆ ಸಹಾಯಮಾಡಬೇಕೆಂದು ವಿಧಿಸಿದೆ. ನಮ್ಮ ಹಿಂದೂ ಶಾಸ್ತ್ರ ಪುರಾಣಾದಿಗಳಲ್ಲಿ ಜಾತಿಗಳು ನಾಲ್ಕೆಂದು ಹೇಳಿದೆಯೇ ಹೊರತು ಐದು ಹೇಳಿರುವಂತೆ ಐದೆಂದು ಎಲ್ಲಿಯೂ ಹೇಳಿಲ್ಲ. ಭಗವದ್ಗೀತೆಯಲ್ಲಿ—"ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ" ಎಂದು ಹೇಳಿರುವುದರಿಂದ ಯುಗಾಂತರಗಳಲ್ಲಿ ಪಂಚಮರೆಂಬುದೊಂದು ಇರಲಿಲ್ಲವೆಂದು ಗೊತ್ತಾಗುತ್ತದೆ. ಆ ಜಾತಿಗಳೂ ಕೂಡ ಗುಣಕರ್ಮಾದಿಗಳಿಂದ ವಿಭಾಗಿಸಲ್ಪಟ್ಟಿದ್ದವೇ ಹೊರತು ಜನ್ಮದಿಂದಲ್ಲ. "ಜನ್ಮನಾಜಾಯತೇ ಶೂದ್ರಃ ಕರ್ಮಣಾಜಾಯತೇದ್ವಿಜಃ" ಎಂಬುದಕ್ಕೆ ಏನು ಅರ್ಥ ಕಲ್ಪನೆ ಮಾಡುವುದೋ ಕಾಣೆನು. ಇವರಂತೆ ಕರ್ಮದಿಂದ ದ್ವಿಜರೆಂದು ತಿಳಿಯಲ್ಪಟ್ಟವರು ಇವರಲ್ಲಿ ಹತ್ತು ಸಾವಿರಕ್ಕೆ ಒಬ್ಬನನ್ನಾದರೂ ತೋರಿಸಬಲ್ಲರೆ? ಕೃತ್ಯದಿಂದ ನೀಚರಾದವರನ್ನು ಊರಹೊರಗಿಟ್ಟು ಅವರಿಗೆ ಪಂಚಮರೆಂದು ನಾಮಕರಣಮಾಡಿದವರು ಈ ಮಹಾತ್ಮರೇ ಅಲ್ಲವೆ? ಇರಲಿ. ಚಿಂತೆಯಿಲ್ಲ. ಶೂದ್ರರೂ ಪಂಚಮರೂ ಎಂದು ಈ ಎರಡು ಜಾತಿಯವರನ್ನೂ ಜತೆಯಲ್ಲಿ ಸೇರಿಸಿದ್ದರಿಂದ ಈ ಜನಗಳಿಗೆ ಯಾವ ಅವಮಾನವೂ ಇಲ್ಲ. ಏಕೆಂದರೆ, ಪಂಚಮರನ್ನು ಬಿಟ್ಟುಬಿಟ್ಟರೆ ನಮ್ಮ ಕೆಲಸಗಳೊಂದೂ ನಡೆಯುವುದಿಲ್ಲ. ನಮ್ಮ ಜನರನ್ನು ಬಿಟ್ಟರೆ ಅವರ ಜೀವನೋಪಾಯವು ಜರುಗುವುದೇ ಇಲ್ಲ. ಆದುದರಿಂದ ನಾವು ನಾವು ಪರಸ್ಪರ ಮಿತ್ರರಂತೆ ಇದ್ದೇವೆ. ಆದರೆ ಇತರ ಜನರಂತೆ ಈ ಜನರೊಂದಿಗೆ ಉಂಡುಟ್ಟು ಕುಡಿಯುವಷ್ಟು ಸಮೀಪ ಸಂಬಂಧವನ್ನು ನಾವಿನ್ನೂ ಇಟ್ಟುಕೊಂಡಿಲ್ಲ. ಇದಕ್ಕೆ ದೃಷ್ಟಾಂತವನ್ನು ಅಪೇಕ್ಷಿಸುವವರು ಮದ್ರಾಸು ಸ್ಟೇಷನ್ (ಫ್ರೆಷ್‌ಮೆಂಟ್ ರೂಮಿನಲ್ಲಿಯೂ ಇತರ ಕ್ಲಬ್ಬುಗಳಲ್ಲಿಯೂ ನೋಡಿದರೆ ಸಂಶಯ ಪರಿಹಾರವಾದೀತು. ಸ್ತ್ರೀಯರ ವಿಚಾರವಾಗಿ ನೋಡೋಣ. ನಮ್ಮ ಭಾರತ ಮಹಿಳೆಯರು ಪತಿವ್ರತೆಯರಲ್ಲಿ ಅಗ್ರಗಣ್ಯರೆಂದು ಜಗತ್ಪ್ರಸಿದ್ಧರಾಗಿದ್ದಾರೆ. ನಮ್ಮ ಹೆಂಗಸರು ಪೂರ್ವದಲ್ಲಿದ್ದಂತೆಯೇ ಇದ್ದಾರೆ. ಇತರರು ವಿಧವಾಸಮಾಜ ಮುಂತಾದುವುಗಳನ್ನು ಮಾಡಿಕೊಂಡು ಟೆನ್ನಿಸ್ ಮುಂತಾದ ಕ್ರೀಡೆಗಳಲ್ಲಿ ಆಸಕ್ತರಾಗಿ ನವನಾಗರಿಕತೆಯನ್ನು ಹರಡಿ ಇತರರಿಗೆ ಮೇಲುಪಂಕ್ತಿಹಾಕಿ ಕೊಡುತ್ತಿದ್ದಾರೆ. ಈ ಪತ್ರಕರ್ತರು ಶೂದ್ರರೂ ಪಂಚಮರೂ ಎಂದು ಬರೆಯುವುದಕ್ಕೆ ಬದಲಾಗಿ ಉತ್ತಮರೂ ಪಂಚಮರೂ ಎಂದು ಬರೆದಿದ್ದರೆ ಒಪ್ಪುತ್ತಿತ್ತು. ಏಕೆಂದರೆ, ಅನುಲೋಮವಾಗಿ ಎಣಿಸಿದರೆ ಅವರು ೫ ರಲ್ಲಿಯೂ ವಿಲೋಮವಾಗಿ ಎಣಿಸಿದರೆ ಇವರು ೫ ರಲ್ಲಿಯೂ ಬರುತ್ತಾರಲ್ಲವೆ?

ಪೂರ್ವಕಾಲದಿಂದಲೂ ಇವರು ಪ್ರಬಲರಾಗಿ ಇತರರಿಗೆ ಕೊಟ್ಟ ತೊಂದರೆಗಳನ್ನು ಹುಡುಕಿ ಹೇಳಿದರೆ ದೊಡ್ಡ ಪುರಾಣವಾಗಬಹುದು. ಯುಗಾಂತರಗಳಲ್ಲಿ ಬ್ರಾಹ್ಮಣರು ತಮ್ಮ ನಿತ್ಯಕರ್ಮಗಳನ್ನು ಮಾಡಿಕೊಂಡು ಎಲ್ಲರನ್ನು ಸಮವಾಗಿ ಕಾಣುತ್ತಿದ್ದುದರಿಂದ ಎಲ್ಲರೂ ಇವರಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟುಕೊಂಡು ಪೂಜ್ಯತೆಯನ್ನು ಕೊಟ್ಟರು. ಕ್ಷತ್ರಿಯರು ಸ್ವಲ್ಪ ಬಲರಾಗುತ್ತಿರಲು ಅದನ್ನು ಕಂಡು ಸೈರಿಸದೆ ಪರಶುರಾಮನು ಇಪ್ಪತ್ತೊಂದುಸಾರಿ ಹುಡುಕಿ ಹುಡುಕಿ ಕ್ಷತ್ರಿಯರನ್ನೆಲ್ಲ ಕೊಂದುಹಾಕಿ ನಿಜವಾದ ಕ್ಷತ್ರಿಯರೇ ಇಲ್ಲವೆಂದು ಹೇಳಿ ಆ ಜಾತಿಗೇನೆ ಸೊನ್ನೆಸುತ್ತಿಬಿಟ್ಟನು. ವೈಶ್ಯರನ್ನು ನೋಡಿ, ನೀವು ವೈಶ್ಯರಲ್ಲ; ಅವರು ಬೇರೆ ಇದ್ದಾರೆಂದು ಹೇಳಿ ಜಗದ್ಗುರುಗಳೆಂಬುವವರು ತಿರಸ್ಕರಿಸಿಬಿಟ್ಟಿದ್ದರಿಂದ ಅವರು ಇವರ ಬಂಧನದಿಂದ ಸ್ವಲ್ಪಸ್ವಲ್ಪವಾಗಿ ಬಿಡಿಸಿಕೊಂಡು ತಮ್ಮ ತಾರಣೋಪಾಯವನ್ನು ಯೋಚಿಸುತ್ತಿರುವರು. ಇವರಲ್ಲಿ ಪ್ರಿಯರಾಗಿ ನಡೆದುಕೊಳ್ಳುತ್ತಿದ್ದ ವೀರಶೈವರನ್ನು ಹೀಗೆಯೇ ನಿಂದಿಸಿದ್ದರಿಂದ ಆ ಜನರು ಇವರನ್ನು ತಿರಸ್ಕರಿಸಿ ತಮ್ಮ ಪ್ರಕ್ಕೆ ತಾವು ಸ್ವತಂತ್ರರಾಗಿ ಏಳಿಗೆ ಬರುತ್ತಿದ್ದಾರೆ. ಉಳಿದವರು ಒಕ್ಕಲಿಗರು ಮುಂತಾದ ಕೆಲವು ಜಾತಿಯವರು ಮಾತ್ರವೇ. ಇವರು ಇದುವರೆಗೂ ಬ್ರಾಹ್ಮಣರಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟುಕೊಂಡು ವಿಧೇಯರಾಗಿಯೇ ಇದ್ದಾರೆ ಅವರನ್ನೂ ಅವಿಶ್ವಾಸದಿಂದ ಕಂಡು, ವಿರೋಧಿಸಿದರೆ ಅವರೇ ನಿರಂಕುಶವಾಗಿ ದೇಶವಲ್ಲೆಲ್ಲ ಮೆರೆಯಬಹುದು. ಹೆಚ್ಚಾಗಿ ಹೇಳಬೇಕಾದುದಿಲ್ಲ.

ಸರ್ವತ್ರ ಸಮದೃಷ್ಟಿಯುಳ್ಳ ನಮ್ಮ ಪ್ರಭುವಂದರವರು ಹಿಂದುಳಿದ ಜನರ ವಿದ್ಯಾಭಿವೃದ್ಧಿಗೆಂದು ಕಳೆದ ವರ್ಷ ಸ್ಕಾಲರ್ಷಿಪ್ಪಿಗಾಗಿ ೧ ಲಕ್ಷ ರೂ. ಗಳನ್ನು ಅನುಗ್ರಹಿಸಿದ್ದರಿಂದ ಅವರೆಲ್ಲಾ ವಿದ್ಯಾವಂತರಾಗಿ ತಮ್ಮ ಸಮಾನಕ್ಕೆ ಬರುವರೆಂಬ ಅಸೂಯೆಯಿಂದ ಈ ಜನರು ಮಾಡಿದ ಪ್ರಯತ್ನಗಳು ಬಹಳವಾಗಿದ್ದುವು. ಇನ್ನೂ ಬಿಡದೆ ಈ ಪತ್ರಿಕೆಯು ಸರ್ಕಾರವನ್ನು ನಿಂದಿಸುತ್ತಲೇ ಇದೆ. ನಮ್ಮ ದಿವಾನ್ ಸಾಹೇಬರವರು ನಿಷ್ಪಕ್ಷಪಾತಿಗಳಾಗಿ ನ್ಯಾಯಧುರಂಧರರಾದ್ದರಿಂದ ವಿರುದ್ಧರುಗಳಿಗೆ ಹೆದರದೆ ಸರಿಯಾಗಿ ಅದನ್ನು ವಿನಿಯೋಗಿಸಿದ್ದು ಶ್ಲಾಘನೀಯವು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ, ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನು, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ಶೀಘ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು, ಪಾಠಶಾಲಾ ಮಹಾಗಾಂವ್ ಜಿಲ್ಲೆ ಗುಲ್ಬರ್ಗ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಯೋಗ್ಯತಾಪತ್ರಗಳು.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೪—೦
ವ್ರತಪಂಚಕ	೦—೩—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೩—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲಿಗರಿಗೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರ ಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವಿಳಾಸ—ಎಂ. ಎಸ್. ಲಿಂಗಪ್ಪ ಎಡಿಟರ್, ಬೆಂಗಳೂರು ಸಿಟಿ.

ಹಣ ಸಂಪಾದಿಸುವ ಹಂಚಿಕೆ.

ಶ್ರೀ ಭಾರತ ವನೌಷಧಿ ಸಂಗ್ರಹಾಲಯ ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೭ ನೆಯ ಇಸವಿ ಡಿಶಂಬರ್ ತಾ|| ೧೬ ರಿಂದ ೧೯೧೭ ನೆಯ ಡಿಶಂಬರ್ ತಾ|| ೨೨ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾರ್ಗಶಿರ ಶು|| ಬಿದಿಗೆಯಿಂದ ಮಾರ್ಗಶಿರ ಶು|| ನವಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ಶೇದಿ
16	ಭಾನು	ಬಿದಿಗೆ	16-0	ಪೂಷಾ	22-44	2
17	ಸೋಮ	ತದಿಗೆ	11-58	ಉಷಾ	20-13	3
18	[1] ಮಂಗಳ	ಚೌತಿ	7-13	ಶ್ರವಣ	16-57	4
19	[2] ಬುಧ	ಪಂಚ	1-52	ಉಪರಿ	54-33	5
20	ಗುರು	ಸಪ್ತ	50-20	ಶತಭಿಷ	9-12	6
21	ಶುಕ್ರ	ಅಷ್ಟ	44-29	ಪೂಭಾ	4-39	7
22	ಶನಿ	ನವಮಿ	38-37	ಉಭಾ	0-58	8

(1) ನಾಗರಪಂಚಮಿ. (2) ಸುಬ್ರಹ್ಮಣ್ಯಸ್ವಾಮಿ ರಥಃ, ಚಂಪಾಷಷ್ಠಿ.

ಮೈಸೂರ್: ಕೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಎಂ. ಸುಬ್ಬಯ್ಯ, ಬಿ. ಎ., ಜನರಲ್ ಸೆಕ್ರೆಟರಿ, ಒಕ್ಕಲಿಗರ ಸಂಘ, ಬೆಂಗಳೂರು.

ಡಾ|| ಎಂ. ಪೀಟರ್ಸ್‌ಯವರ ಸಾಂಡೋ ಅಯಿಲ್.

ಕ್ರಯ ಶೀಸೆ 1 ಕ್ಕೆ 1-0-0.

ವಿಳಾಸ:—ಡಾ|| ಎಂ. ಪೀಟರ್ಸ್, 3 ಅರುಳಪ್ಪನ ಬೀದಿ, ಮದರಾಸು.

REGISTERED NO. M. 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಕ್ಷತ್ರನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೀಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಡಿಶಂಬರ್ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೫೧

REGISTERED NO. M. 124.

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿ ಜನರು ಹಣವುಳ್ಳವರಾಗಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ, ಹಾನಗಲ್, ಬಿಳೂರ, ಹಾವೇರಿ, ಹಾಳಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದನಕ್ಷೆಯಲ್ಲಿ ತೆಗೆದು ಇರುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದ ಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದು ಸಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂತಪ್ಪಬಾರದೆಂದು ನಾವು ಸಂತೋಷಪೂರ್ವಕವಾಗಿ ಸಿಫಾರಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೊ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝೆಂಡೆ ಹಚ್ಚಿದ ಅದ್ವಿತಿಯ ಶಂಭುವಿನ ಅವತಾರಿಯಾದ «ಶ್ರೀ ಕಲ್ಯಾಣ ಬಸವೇಶ್ವರದೇವರ» ಅರಿವು ಮೇಲೆ ತೆಗೆದಿದ್ದ ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೊ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅವಶ್ಯಕರ್ತವ್ಯ ...

ಗಂಗಪ್ಪಾ ಜಿರಗೇ ಮಾಲಿಕ, ಶ್ರೀ ಶಾರದಾ ಫೋಟೊ ಕಂಪನಿ, ಸೊಲ್ಲಾಪುರ ಸಿಟಿ.

೩೨ ಪುಟಗಳ ಪುಸ್ತಕವು.

ಅಂಚೆ ಹಾಸಲು ಸಹ ಕೊಡಬೇಕಾಗಿಲ್ಲ.

ಶಾಂತವೀರ. ಹುರುಕಿನ ಔಷಧ.

ವಿಳಾಸ:—ಕರ್ನಾಟಕ ಜಂಗೀ ವನೌಷಧಾಲಯ, ಕಿತ್ತೂರ. (ತಂತೀ ವಿಳಾಸ) 'ಶಾಂತವೀರ' ಕಿತ್ತೂರ | ಮಾಲಕರು—ಡಾಕ್ಟರ್, ಎಸ್. ಆರ್. ಕಿತ್ತೂರ, "ಪಹುಸಂಜೀವಿನೀ" ಶೋಧಕರು, ಪೋಸ್ಟ್ ಕಿತ್ತೂರ, ಜಿಲ್ಲಾ ಬೆಳಗಾಂವಿ.

ಮದರಾಸ್ ಮೇಲ್‌ವಾಚ್.

ವಿಳಾಸ:—ವಿ. ಬಿ. ಎಸ್. ವಾಣಿ, ಸಾಹುಕಾರ್ ಪೇಟೆ, ಮದರಾಸ್.

ಉತ್ತಮ ವೀರಶೈವ ಗ್ರಂಥಗಳು.

ಎಸ್. ಆರ್. ಶಂಭುಶಾಸ್ತ್ರಿ, ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಡಿಸೆಂಬರ್ ತಾ|| ೨೩ ನೆಯ ಭಾನುವಾರ.

೧ ಲಕ್ಷ ರೂ. ವೇತನ.

ವಿದ್ಯೆಯಲ್ಲಿ ಹಿಂದುಳಿದಿರುವವರ ವಿದ್ಯಾಪ್ರೋತ್ಸಾಹಕ್ಕಾಗಿ ದಯಾಳುಗಳಾದ ಶ್ರೀಮನ್ಮಹಾರಾಜರವರ ಸರ್ಕಾರದಿಂದ ೧ ಲಕ್ಷ ರೂ. ಗಳು ಕೊಡಲ್ಪಟ್ಟುದು ಯಾರಿಗೆ ಹೊಟ್ಟೇಕಿಚ್ಚನ್ನುಂಟುಮಾಡಿರುವುದೋ ಅವರು ನಡೆಯಿಸುತ್ತಿರುವ ತಂತ್ರವು ವಿಚಿತ್ರತರವಾಗಿದೆ. ಆ ಅಸೂಯೆಯನ್ನು ಇದ್ದಕ್ಕಿದ್ದಂತೆಯೇ ಅದಿ ತೋರಿಸಿದರೆ ಲೋಕವೇ ತಮ್ಮ ಮೇಲೆ ಕವಿದುಬೀಳುವುದೆಂದು ಬೆದರಿ ಅವರು ಐಂದ್ರಜಾಲಿಕ ವಿದ್ಯೆಯಿಂದ ಕಕ್ಕುತ್ತಿದ್ದಾರೆ. ಉಪಪನ್ನರಾದವರು ಈ ಹಣವನ್ನು ಹಂಚಿಕೊಂಡು ನಿರ್ಗತಿಕರಿಗೆ ದೊರೆಯದಂತೆ ಮಾಡುತ್ತಾರೆಂಬುದಾಗಿ ಆ ನಿರ್ಗತಿಕರ ಪಕ್ಷದ ಸುರಧೇನುಗಳಂತೆ ಇವರುಗಳು ವಿನ್ಯಾಸಮಾಡುತ್ತಿರುವರು. ಈ ವೇತನಗಳು ದುರ್ವಿನಿಯೋಗವಾಗುವಂತಾಗಿದ್ದರೆ ಆ ದೋಷಕ್ಕೆ ಯಾರು ಹೊಣೆಗಾರರು? ಸದುದ್ದೇಶದಿಂದ ದಾನಮಾಡಿದವರು ಸರ್ಕಾರದವರು. ನಿಜವಾದ ಪಾತ್ರತೆಯಿಂದ ಅದರ ಪರಿಗ್ರಹವನ್ನು ಮಾಡತಕ್ಕವರು ಹಿಂದುಳಿದ ಜನವರ್ಗಗಳವರು. ಇವರೀರ್ವರ ಮಧ್ಯದಲ್ಲಿ ನಿಂತು ಅದರ ವಿನಿಯೋಗಮಾಡಿಸಿದವರೇ ಅಲ್ಲವೆ ಇದರಲ್ಲುಂಟಾಗುವ ನ್ಯೂನತೆಗೂ ದ್ರೋಹಕ್ಕೂ ಭಾಗಿಗಳಾಗತಕ್ಕವರು?

ಇದರ ವಿನಿಯೋಗವನ್ನು ಸರಿಯಾಗಿ ಮಾಡಿಸುವುದಕ್ಕಾಗಿಯೇ ಸರ್ಕಾರದವರು ಬೇರೆಬೇರೆ ಕಮಿಟಿಗಳನ್ನೇರ್ಪಡಿಸಿರುವರು. ಅವರುಗಳು ಆಯಾ ಶಾಲಾಮುಖ್ಯೋಪಾಧ್ಯಾಯರುಗಳಿಂದ ವಿದ್ಯಾರ್ಥಿಗಳ ಅನುಪಪನ್ನತೆ ಮೊದಲಾದುವುಗಳ ವಿಷಯವನ್ನು ಅರಿತುಕೊಂಡು, ಆಯಾ ಡಿಸ್ಟ್ರಿಕ್ಟುಗಳಿಗೆ ಹಂಚಲ್ಪಟ್ಟಿರುವಷ್ಟು ವೇತನಗಳನ್ನು ಕೊಡಿಸುವುದಕ್ಕೆ ಉತ್ತರವಾದಿಗಳಾಗಿರುವರು. ವಿದ್ಯಾರ್ಥಿವೇತನವನ್ನು ಪಡೆಯಲಪೇಕ್ಷಿಸುವ ವಿದ್ಯಾರ್ಥಿಗಳಿಂದ ಅವರ ಪೋಷಕರ ವಾರ್ಷಿಕಾದಾಯ ಅವರು ಕೊಡುತ್ತಿರುವ ಕಂದಾಯ ಕೌಳಿಗೆಗಳ ವಿವರಣೆ ಮೊದಲಾದುವುಗಳನ್ನು ಬರಮಾಡಿಕೊಂಡು, ತನ್ಮೂಲಕ ಅವರ ಪಾತ್ರತಾಪಾತ್ರತೆಯನ್ನು ನಿರ್ಧರಿಸಿ, ನಿಜವಾಗಿ ಅನುಪಪನ್ನರಾದವರಿಗೇ ಈ ವೇತನಗಳು ಮೊದಲು ದೊರೆಯುವಂತೆ ಮಾಡುವುದು ಶಾಲಾಮುಖ್ಯೋಪಾಧ್ಯಾಯರುಗಳ ಕರ್ತವ್ಯವಲ್ಲವೆ? ಅಂಥ ಉತ್ತರವಾದಿತ್ವವುಳ್ಳ ಆ ಜನರೇ ಈ ಧನದ ವಿನಿಯೋಗದ ವಿಷಯದಲ್ಲಿ ತಮಗೆ ಸ್ಮರಣೆಯಿಲ್ಲದುದರಿಂದಲೋ, ಈ ಏರ್ಪಾಟು ದೋಷಭೂಯಿಷ್ಠವಾಗಿದೆಯೆಂದು ತಾವು ಆಡುತ್ತಿರುವ ಮಾತನ್ನು ಯಥಾರ್ಥಮಾಡಿ ತೋರಿಸಬೇಕೆಂಬ ಉದ್ದೇಶದಿಂದಲೋ, ತಮ್ಮಲ್ಲಿರುವ ಉಪಪನ್ನ ವಿದ್ಯಾರ್ಥಿಗಳಿಗೇ ಈ ವೇತನಗಳಲ್ಲಿ ಕೆಲಭಾಗ ವಿನಿಯೋಗವಾಗುವಂತೆ ಒಳಗೊಳಗೆ ಮಾಡಿ, ಹೊರಗೆ ಉಪಪನ್ನರೇ ಇದನ್ನು ಹಂಚಿಕೊಂಡರೆಂದು ಗಲಾಟೆಮಾಡುತ್ತಿದ್ದರೆ ಈ ದ್ರೋಹಕ್ಕೆ ಯಾರು ಭಾಜನರು? ಕುಡಿಯುವ ನೀರಿನ ಕೊಳದಲ್ಲಿ ಒಬ್ಬನು ಸೊಂಕಿನಬಟ್ಟೆಯನ್ನೊಗೆದು ಅಶುಚಿ ಮಾಡಿದರೆ ಅದಕ್ಕಾಗಿ ಸರೋವರ ನಿರ್ಮಾತೃವನ್ನೇ ಆಗಲೀ ನೀರನ್ನು ಮೊಗೆದುಕೊಂಡುಹೋಗುವ ಊರಿನವರನ್ನೇ ಆಗಲೀ ದ್ರೋಹ ಮಾಡಿದರೆಂದು ನಿಂದಿಸಬಹುದೆ? ವೇತನವಿನಿಯೋಗವಿಷಯದಲ್ಲಿ ದುರ್ವಿನಿಯೋಗವಾಗುತ್ತಿದ್ದರೆ, ನಿಯುಕ್ತರಾಗಿರುವ ಕಮಿಟಿಗಳವರು ಅದಕ್ಕೆ ಮುಖ್ಯರಾದ ಉತ್ತರವಾದಿಗಳಾಗಿರುತ್ತಾರೆ. ಮಸಲ ಒಂದು ಉದಾಹರಣೆಯನ್ನು ತೆಗೆದುಕೊಳ್ಳುವ. ಮೈಸೂರಿನೊಳಗೆ ಇದಕ್ಕಾಗಿ ನಿಯುಕ್ತವಾಗಿರುವ ಕಮಿಟಿಯಲ್ಲಿ ಮ|| ಗಳಾದ ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ಟರ್ ವೆಂಕಟಕೃಷ್ಣಯ್ಯನವರು, ಗೌ|| ಹೈಸ್ಕೂಲ್ ಹೆಡ್ಮಾಸ್ಟರ್ ಕೃಷ್ಣಂಯ್ಯಂಗಾರರು, ವೆ|| ಮಿಷನ್ ಹೈಸ್ಕೂಲ್ ಹೆಡ್ಮಾಸ್ಟರ್ ಸ್ಟೆಕ್ಸರ್‌ರವರೇ ಮೊದಲಾದ ವಿದ್ಯಾವಂತರುಗಳು ಸಭಿಕರಾಗಿರುತ್ತಾರೆ. ಇವರುಗಳು ಈ ಭಾಗದಲ್ಲಿ ಮುತುವರ್ಜಿ ವಹಿಸಿ, ಅನುಪಪನ್ನರಾದ ವಿದ್ಯಾರ್ಥಿಗಳಾರೆಂಬುದನ್ನು ಗೊತ್ತುಪಡಿಸಿ, ಅಂಥವರುಗಳಿಗೇ ವೇತನಗಳು ದೊರೆಯುವಂತೆ ಮಾಡಬಹುದಾಗಿದ್ದಿತಲ್ಲವೆ? ಇತರ ಡಿಸ್ಟ್ರಿಕ್ಟ್‌ಕಮಿಟಿಗಳ ವಿಷಯವೂ ಹೀಗೆಯೇ.

ಇದೇ ೧ ಲಕ್ಷ ರೂ. ಗಳ ವೇತನವನ್ನು ಮುಂಬರಿದಿರುವವರೇ ಹಂಚಿಕೊಳ್ಳುವಂತೆ ಏರ್ಪಾಟಾಗಿದ್ದರೆ ಆಗ ಹೊರಕ್ಕೆ ಸ್ವಲ್ಪವೂ ಸದ್ದುಕೊಡದಂತೆ ಆನಂದದಿಂದ ಹಂಚಿಕೊಳ್ಳಲು ಸಾಧ್ವೀ ಸಂಪದಭ್ಯುದಯ ಪತ್ರಿಕೆಗಳೂ, ಅವುಗಳ ಹಿಂಬಾಲಕರೂ ಬೇಕಾದಷ್ಟು ಮುತುವರ್ಜಿಯನ್ನು ಮಾಡುತ್ತಿದ್ದರಲ್ಲವೆ? ಈ ಲಕ್ಷ ರೂ. ವೇತನದ ವಿಷಯದಲ್ಲಿ ಹೊಟ್ಟೆಕಿಚ್ಚುಪಡುತ್ತಿರುವವರು ಎಷ್ಟು ಗಲಾಟೆಮಾಡಿ ಇತರರ ಅಭ್ಯುದಯಕ್ಕೆ ಅಡ್ಡಲಾಗುತ್ತಿರುವರೆಂಬುದನ್ನು ಇದರಿಂದೆಲ್ಲಾ ನಮ್ಮ ಪ್ರಭುಗಳೂ ಅವರ ಸರ್ಕಾರದವರೂ ಹಿಂದುಳಿದ ಜನವರ್ಗಗಳವರೂ ತಿಳಿದುಕೊಂಡರೆ ಇದರಿಂದ ಆ ಅಜ್ಞಪ್ರಜೆಗಳಿಗೆ ಹಿತವೇ ಆದೀತು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಮಹಿಳಾ ಸೇವಾಸಮಾಜದ ಭವನ ನಿರ್ಮಾಣಾರ್ಥವಾದ ಫಂಡಿಗೆ ನಮ್ಮ ಮಹಾಮಾತೃಶ್ರೀಯವರು ೧ ಸಾವಿರ ರೂ. ಗಳನ್ನು ಅನುಗ್ರಹಿಸಿರುತ್ತಾರೆ.

ಮೈಸೂರು ದೇಶದ ಇಂಪೀರಿಯಲ್ ಸೈನ್ಯದ ಯುದ್ಧನಿಧಿಗೆ ಕಳೆದ ನವಂಬರ್ ೨೦ಂಗಳ ಕೊನೆಯವರೆಗೆ ೬೧೧೯೦—೨—೫ ರೂ. ಗಳ ಸಹಾಯದ್ರವ್ಯವು ಕೂಡಿದೆ.

ಸಂಸ್ಥಾನದ ೧ ನೆ ಕೌನ್ಸಿಲರಾದ ರಾಜಸೇವಾಧುರಂಧರ ಸರ್ದಾರ್ ಎಂ. ಕಾಂತರಾಜ ಅರಸ್, ಬಿ.ಎ., ಸಿ.ಎಸ್.ಐ., ಯವರಿಗೆ ಬರುವ ಜನವರಿ ತಾ|| ೨ ರಿಂದ ೧ ತಿಂಗಳಮೇಲೆ ೧೨ ದಿನಗಳ ರಜಾವು ಕೊಡಲ್ಪಟ್ಟಿದೆ.

ಬಿಕನೀರ್ ಸಂಸ್ಥಾನಕ್ಕೆ ದಯಮಾಡಿಸಿದ ನಮ್ಮ ದಿವಾನರವರು ಅಲ್ಲಿಂದ ಮದ್ರಾಸಿಗೆ ಹೋಗಿ ಕಳೆದ ತಾ|| ೨೧ ರಲ್ಲಿ ಸ್ಟೇಟ್ ಸೆಕ್ರೆಟರಿಯವರನ್ನೂ ಮತ್ತೂ ವೈಸ್ರಾಯರನ್ನೂ ಕಂಡು ಸಂಭಾಷಿಸಿಕೊಂಡು ಬಂದರು.

ಮುಳಬಾಗಲ ಅಮಲ್ದಾರರಾದ ಮ|| ಬಿ. ಮುದ್ದುಕೃಷ್ಣಪ್ಪನವರು ಚಿಂತಾಮಣಿಗೂ, ಅಲ್ಲಿದ್ದ ಮ|| ಲಿಂಗೋಪಂತ್ ಬಾದಾಮಿಯವರು ಕೋಲಾರಕ್ಕೂ, ಅಲ್ಲಿದ್ದ ಮ|| ಎ. ಕೃಷ್ಣಸ್ವಾಮಿರಾಯರು ಮುಳಬಾಗಲಿಗೂ ವರ್ಗಮಾಡಲ್ಪಟ್ಟಿದ್ದಾರೆ.

ಕಡೂರು ಸಬ್‌ಡಿವಿಜನ್ ಆಫೀಸರಾದ ಮ|| ಬಿ. ರಾಮಸ್ವಾಮಯ್ಯನವರು ೬ ವಾರಗಳ ರಜವನ್ನು ಪಡೆದುಕೊಂಡಿರುವುದರಿಂದ ಅಲ್ಲಿಯ ಡಿಸ್ಟ್ರಿಕ್ಟ್‌ಟ್ರಿಜರಿ ಅಸಿಸ್ಟೆಂಟ್ ಕಮಿಷನರಾದ ಮ|| ಜಿ. ರುದ್ರಪ್ಪನವರೇ ಸಬ್‌ಡಿವಿಜನ್ ಆಫೀಸ್ ಛಾರ್ಜನ್ನೂ ವಹಿಸಿರಲು ಅಪ್ಪಣೆಯಾಗಿದೆ.

ರಾಜಧಾನಿಯಲ್ಲಿ ಕಳ್ಳತನಗಳು ಹೆಚ್ಚಾಗುತ್ತಿವೆ. ಕಳ್ಳರು ಮನೆಗಳನ್ನು ನುಗ್ಗುವುದು ಮಾತ್ರವೇ ಅಲ್ಲದೆ ದೇವಾಲಯಗಳಿಗೂ ಕೂಡ ನುಗ್ಗುವುದಕ್ಕುಪಕ್ರಮಿಸಿದ್ದಾರೆ. ಚತುರ್ಥಮಠದ ಬೀದಿಯಲ್ಲಿರುವ ಪಾಂಡುರಂಗ ದೇವಾಲಯದಲ್ಲಿ ದೇವರಿಗೆ ಇಟ್ಟಿದ್ದ ಬೆಳ್ಳಿಯ ಕಿರೀಟವನ್ನೂ, ಕಾಲೇಜು ಮಾರ್ಗದಲ್ಲಿರುವ ರಾಮದೇವರ ದೇವಸ್ಥಾನದಲ್ಲಿ ದೇವರ ಕೆಲವು ವಸ್ತ್ರಾಭರಣಗಳನ್ನೂ ಸಹ ಅಪಹರಿಸಿಕೊಂಡು ಹೋಗಿದ್ದಾರೆ.

ತುಮಕೂರಿನಲ್ಲಿ ನಾಲ್ಕಾರು ವರ್ಷಗಳಿಂದ ಬಳಪದ ಕಾರ್ಖಾನೆಯನ್ನಿಟ್ಟುಕೊಂಡು, ಕಳೆದ ವರ್ಷ ಜಪಾನಿಗೂ ಹೋಗಿದ್ದು ಅಲ್ಲಿಯ ಕೈಗಾರಿಕೆಗಳ ಕೌಶಲವನ್ನು ಅರಿತು ಬಂದಿರುವ ಮ|| ಚನ್ನವೀರಪ್ಪನವರು ತಮ್ಮ ಸ್ಥಳದಲ್ಲಿ ಗಾಜಿನ ಸಾಮಗ್ರಿಗಳನ್ನು ನಿರ್ಮಿಸುವ ಕಾರ್ಖಾನೆಯನ್ನೊಂದನ್ನು ಸ್ಥಾಪಿಸಲು ಉದ್ದೇಶಪಟ್ಟು ಕಳೆದ ತಾ|| ೧೨ ನೆಯ ದಿವಸ ಅಲ್ಲಿಯ ಡಿ|| ಕಮಿಷನರ್ ಮ|| ಎ. ಸುಬ್ರಹ್ಮಣ್ಯಯ್ಯರ್‌ರವರ ಹಸ್ತದಿಂದ ಆರಂಭಮಹೋತ್ಸವವನ್ನು ಮಾಡಿಸಿದರು. ಇವರ ಸಾಹಸವು ಸಫಲವಾಗಲೆಂದು ಕೋರುವೆವು.

ರಾಜಧಾನಿಯ ಅವರ್‌ಡೇ ಉತ್ಸವ ಸಂಬಂಧದಲ್ಲಿ ತಾ|| ೧೨ ನೆ ದಿನದಲ್ಲಿ ನಡೆದ ಏರ್ಪಾಟುಗಳೊಳಗೆ ಅರಮನೆಯ ಸಂಗೀತ ವಿದ್ವಾಂಸರಾದ ವೈಣಿಕಶಿಖಾಮಣಿಗಳು, ಗಾನವಿಶಾರದರು ಮೊದಲಾದವರೆಲ್ಲಾ ಸೇರಿ ೫ ವೀಣೆಗಳು, ೨ ಸಿತಾರುಗಳು, ಸೊರಬತ್ತು, ಹಾರ್ಮೋನಿಯಂ, ಪಿಟೀಲು, ಜಲತರಂಗು, ತಬಲಾ ಇವೆಲ್ಲ ವಾದ್ಯಗಳ ವಾದನದಜತೆಗೆ ಮಾಡಿದ ಗಾನವು ಸಭಿಕರಿಗೆಲ್ಲಾ ಬಹಳ ಶ್ರೋತ್ರಾನಂದಕರವಾಗಿದ್ದಿತು. ಅದುಕಾರಣ ಮತ್ತೊಂದು ದಿವಸವೂ ಟವನ್‌ಹಾಲಿನಲ್ಲಿ ಈ ಕಾನ್ಸರ್ಟಿನ ಶ್ರವಣವು ನಡೆಯುವಂತೆ ಶ್ರೀಮನ್ಮಹಾರಾಜರವರು ಅಪ್ಪಣೆಮಾಡಿದ್ದುದು ಶ್ರೋತೃಗಳಿಗೆ ಬಹಳ ಸಂತೋಷಪ್ರದವಾಯಿತು.

ಒಕ್ಕಲಿಗರ ಸಂಘದ ಸಂತೋಷಕೂಟವು ಆಚೆ ಭಾನುವಾರ ಬೆಂಗಳೂರು ಅರಳೆಪೇಟೆ ಪ್ರಾಥಮಿಕ ಪಾಠಶಾಲಾ ಮಂದಿರದಲ್ಲಿ ನೆರವೇರಿತು. ಮ|| ಸಿ. ರಾಮಲಿಂಗರೆಡ್ಡಿಯವರು ಸಭಾಧ್ಯಕ್ಷತೆಯನ್ನು ವಹಿಸಿ, ಕಾರ್ಯಾಂತರದಮೇಲೆ ಸ್ವಲ್ಪ ಕಾಲದೊಳಗೇ ತೆರಳಲಾಗಿ, ಮ|| ಎಂ. ಬಸವಯ್ಯನವರು ಸಭಾಧ್ಯಕ್ಷತೆಯನ್ನು ವಹಿಸಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ವಿದ್ಯಾರ್ಜನೆಯಲ್ಲಿ ಬದ್ಧದೀಕ್ಷರಾಗಿರಬೇಕಾದುದೊಂದೇ ಅಲ್ಲದೆ ತಂತಮ್ಮ ಜನವರ್ಗದ ಅಭ್ಯುನ್ನತಿಗಾಗಿ ಪಾಟುಪಡುತ್ತಿರುವುದರ ಆವಶ್ಯಕತೆ ಮೊದಲಾದುವುಗಳನ್ನು ಕುರಿತು ಭಾಷಣಮಾಡಿದರು. ಒಕ್ಕಲಿಗರ ಸಂಘದ ಜನರಲ್ ಸೆಕ್ರೆಟರಿಗಳಾದ ಮ|| ಎಂ. ಸುಬ್ಬಯ್ಯನವರೂ ಸಹ ವಿದ್ಯಾರ್ಥಿಗಳಿಗೆ ಹಿತೋಪದೇಶಪರವಾದ ಭಾಷಣವನ್ನು ಮಾಡಿದರು. ಇನ್ನೂ ಕೆಲವರ ಉಪನ್ಯಾಸಗಳು ನಡೆದುವು.

ರಾಜಭಕ್ತಿಪ್ರದರ್ಶನಾರ್ಥವಾಗಿ ಬೆಂಗಳೂರು ದೊಡ್ಡಪೇಟೆ ವರ್ತಕರು ಅವರ್‌ಡೇ ಮಹೋತ್ಸವದ ದಿವಸ ಬಡಬಗ್ಗರೂ ಕುಂಗಳರೂ ಆದ ೮-೧೦ ಸಹಸ್ರ ಜನರಿಗೆ ಅನ್ನದಾನ ಮಾಡುವುದಕ್ಕಾಗಿ ಸಿಟಿ ಮ್ಯುನಿಸಿಪಾಲಿಟಿಯ ಅಪ್ಪಣೆಯನ್ನು ಪಡೆದು ಎಲ್ಲಾ ಪ್ರಯತ್ನವನ್ನು ಮಾಡಿಕೊಂಡಿರಲು, ಪ್ರಸಿಡೆಂಟರು ಕಾಲರಾ ವ್ಯಾಪನೆಯ ಕಾರಣವನ್ನು ತೋರಿಸಿ, ತಡೆಯ ಅಪ್ಪಣೆಯನ್ನು ಮಾಡಿ ಧರ್ಮಕಾರ್ಯಕ್ಕೆ ಅಡ್ಡಿಮಾಡಿ ನಿರುತ್ಸಾಹಪಡಿಸಿದರೆಂಬ ವಿಷಾದದಿಂದ ಆ ಪೇಟೆ ವರ್ತಕರೆಲ್ಲರೂ ಒಂದು ದಿನ ತಮ್ಮ ಅಂಗಡಿ ಮುಂಗಟ್ಟುಗಳನ್ನೆಲ್ಲಾ ಮುಚ್ಚಿಬಿಟ್ಟಿದ್ದರೆಂದು ಕೇಳಿದೆವು. ಇತರ ಪೇಟೆಯವರೆಲ್ಲಾ ನಾಲ್ಕಾರು ದಿನಗಳವರೆಗೂ ಉದಾರವಾಗಿ ಅನ್ನಸಂತರ್ಪಣೆಯ ಕಾರ್ಯವನ್ನು ನಡೆಯಿಸುತ್ತಿದ್ದರೂ, ಅವಕ್ಕೆ ತಡೆಯಿಲ್ಲದೆ ಈ ಪೇಟೆಯ ಕಾರ್ಯಕ್ಕೆ ಮಾತ್ರ ಏಕೆ ವಿಘ್ನವಾಯಿತೋ ಗೊತ್ತಾಗಲಿಲ್ಲ.

ಭರತಖಂಡದ ವೃತ್ತಾಂತಗಳು.

ಬಾಬು ಸುರೇಂದ್ರನಾಥ ಬಾನರ್ಜಿಯವರು ಸಾಮ್ರಾಜ್ಯಶಾಸನ ಸಭೆಯ ಅಡಿಷನಲ್ ಸಭ್ಯರಾಗಿ ನಿಯಮಿಸಲ್ಪಟ್ಟರು.

ಸುಪ್ರಸಿದ್ಧ ಗಾಯಕಿಯೂ ನರ್ತಕಿಯೂ ಆದ ಗೋಹರ್ಜಾನಳು ಕಳೆದವಾರ ಕಲ್ಕತ್ತಾದಿಂದ ಮದ್ರಾಸಿಗೆ ಬಂದು ತನ್ನ ಗಾನ ನರ್ತನಗಳಿಂದ ಪುರನಿವಾಸಿಗಳನ್ನು ಬಹಳವಾಗಿ ಸಂತೋಷಪಡಿಸುತ್ತಿರುವಳು.

ಬೊಂಬಾಯಿ ಅಧಿಪತ್ಯದ ಮ್ಯುನಿಸಿಪಲ್ ಆಡಳಿತದಲ್ಲಿರುವ ಶಾಲೆಗಳಲ್ಲೆಲ್ಲಾ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸಬಹುದೆಂಬ ವಿಷಯವು ಅಲ್ಲಿಯ ನಿಯಮನಿರ್ಮಾಣ ಸಭೆಯಲ್ಲಿ ಅನುಮೋದಿತವಾಗಿ ಶಾಸನವಾಯಿತು.

ಈ ತಿಂಗಳ ಕೊನೆಯಲ್ಲಿ ಕಲ್ಕತ್ತಾದಲ್ಲಿ ಕೂಡುವ ಮಹಾಸಭೆಗಳೊಳಗೆ ಮದ್ಯಪಾನನಿರೋಧಕ ಮಹಾಸಭೆಗೆ ರಾ|| ಬ|| ಡಾಕ್ಟರ್ ಚಂದ್ರಲಾಲ್ ಘೋಸ್‌ರವರೂ, ಸಂಘಪರಿಷ್ಕಾರಕ ಮಹಾಸಭೆಗೆ ಶ್ರೀಯುತ ಎಂ. ಕೆ. ಗಂಧಿಯವರೂ ಅಧ್ಯಕ್ಷರಾಗುತ್ತಾರೆ.

ಸ್ಟೇಟ್ ಸೆಕ್ರೆಟರಿಯವರಿಗೆ ಸ್ತ್ರೀಮಂಡಲಿಯಿಂದ ಸಮರ್ಪಿಸಲ್ಪಟ್ಟ ವಿಜ್ಞಾಪನೆಯಲ್ಲಿದ್ದ ವಿಷಯಗಳೊಳಗೆ ಶಾಸಕ ಸಭಾಸಭ್ಯರನ್ನು ಆರಿಸುವಾಗ್ಗೆ ಮತ (ಓಟು) ಕೊಡುವ ಅಧಿಕಾರವು ಸ್ತ್ರೀಮಂಡಲಿಗೂ ಇರುವಂತೆ ಮಾಡಬೇಕೆಂಬ ಪ್ರಾರ್ಥನೆಯೂ ಒಂದಾಗಿದ್ದಿತು.

ಮದ್ರಾಸಿನಲ್ಲಿ ಸಂಘಗಳ ವಿಜ್ಞಾಪನೆಗಳನ್ನು ಸ್ವೀಕರಿಸುವ ಕಾರ್ಯವು ತಾ|| ೧೭ ರಿಂದ ಆರಂಭವಾಯಿತು. ಉಚ್ಚಾಸನಗಳಲ್ಲಿ ವೈಸ್ರಾಯರು, ಸ್ಟೇಟ್ ಸೆಕ್ರೆಟರಿಯವರು, ಲಾರ್ಡ್ ಡನ್‌ಮೋರ್‌ರವರು, ರಾಬರ್ಟ್ಸನ್‌ರವರು ಭೂಪೇಂದ್ರನಾಥ ಬಾಸುರವರು ಸಹ ಕುಳಿತಿದ್ದರು.

ರೆ|| ಕಮಿಷನರು ಮ|| ಪಿ. ರಾಘವೇಂದ್ರರಾಯರು ಕ್ರಿಸ್ತ್‌ಮಸ್ ರಜದ ಜತೆಗೆ ಜನವರಿ ತಾ|| ೨ ರಿಂದ ೨ ವಾರಗಳ ರಜವನ್ನೂ, ಅರ್ಥಶಾಖೆಯ ಸೆಕ್ರೆಟರಿ ಮ|| ಚಕ್ರವರ್ತಿಯವರು ಕ್ರಿಸ್ತ್‌ಮಸ್ ರಜದ ಜತೆಗೆ ಜನವರಿ ತಾ|| ೨ ರಿಂದ ೧ ತಿಂಗಳ ರಜವನ್ನೂ ಪಡೆದುಕೊಂಡಿರುವರು.

ಬೊಂಬಾಯಿ ಪಟ್ಟಣದಲ್ಲಿ ತಿರುಪೆಗಾರರ ಹಾವಳಿಯನ್ನು ತಪ್ಪಿಸುವ ವಿಷಯವಾಗಿ ಒಂದು ಶಾಸನವನ್ನೇರ್ಪಡಿಸಬೇಕೆಂಬ ವಿಷಯವು ಅಲ್ಲಿಯ ನಿಯಮನಿರ್ಮಾಣ ಸಭೆಯ ಚರ್ಚೆಗೆ ಬಂದು ಒಪ್ಪಿತವಾಗಿ, ಆ ವಿಧಿಯ ಮಸೂದೆಯನ್ನು ಏರ್ಪಡಿಸುವುದಕ್ಕೆ ಒಂದು ಸಂಘವು ಸ್ಥಾಪಿಸಲ್ಪಟ್ಟಿತು.

ಈಗ ಸ್ಪೆಷಲ್‌ಡ್ಯೂಟಿಯ ಮೇಲಿರುವ ಮ|| ಸಿ. ಆರ್. ರಾಮಲಿಂಗರೆಡ್ಡಿಯವರು ಬರುವ ಜನವರಿ ತಾ|| ೧ ರಿಂದ ರಾ|| ಪ್ರ|| ರಾ|| ಬ|| ಮ|| ಎಂ. ಶ್ಯಾಮರಾಯರು ರಜದಮೇಲಿರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರಾಗಿ ನಿಯಮಿಸಲ್ಪಟ್ಟಿರುವರು.

ಭರತಖಂಡದಲ್ಲಿ ಹೊರಗಣ ದೇಶದಿಂದ ಯಾರೂ ಕಾಫಿ ಬೀಜವನ್ನು ತರಿಸಕೂಡದೆಂದು ಇಂಡ್ಯಾ ಗೌರ್ನಮೆಂಟಿನವರು ಅಪ್ಪಣೆಮಾಡಿದ್ದಾರೆ. ಭರತಖಂಡದಲ್ಲಿ ಬೆಳೆಯುವ ಕಾಫಿಯು ಹೊರಕ್ಕೆ ಹೋಗುವುದಕ್ಕಿಲ್ಲವಾದ ಕಾರಣ ಬೆಲೆಯು ಬಹಳ ಇಳಿದುಹೋಗಿರುವುದರಿಂದ ಸರ್ಕಾರದವರು ಕಾಫಿ ವ್ಯವಸಾಯಗಾರರ ರಕ್ಷಣೆಗಾಗಿ ಇಂಥ ಏರ್ಪಾಟನ್ನು ಮಾಡಿರುವಂತೆ ಕಾಣುತ್ತದೆ.

ಸ್ಟೇಟ್ ಸೆಕ್ರೆಟರಿಯವರಿಗೆ ಬೊಂಬಾಯಿ ಕರ್ನಾಟಕ ವೀರಶೈವರ ಪಕ್ಷದಿಂದ ಒಪ್ಪಿಸಲ್ಪಡತಕ್ಕ ವಿಜ್ಞಾಪನಪತ್ರಿಕೆಯು ತಾ|| ೨೮ ರಲ್ಲಿ ಅಂಗೀಕರಿಸಲ್ಪಡತಕ್ಕುದಾಗಿದೆ. ಅದಕ್ಕಾಗಿ ರಾ|| ಬ|| ರುದ್ರಗೌಡರು, ಮ||ಗಳಾದ ಶಾಂತವೀರಪ್ಪ ಮೆಣಸಿನಕಾಯಿ, ಬಳೇಅಂಗಡಿ, ಕಂಬಳಿ, ಹಳಕಟ್ಟಿ ದೇವೀಹೊಸೂರು ಶೆಟ್ಟರೇ ಮೊದಲಾದ ೧೦ ಮಂದಿ ಪ್ರತಿನಿಧಿಗಳು ಬೊಂಬಾಯಿಗೆ ಹೋಗಿರುತ್ತಾರೆ.

ಕರಾಚಿ ಪಟ್ಟಣದಲ್ಲಿ ಶಿಥಿಲವಾಗಿದ್ದ ಮೂರಂತಸ್ತಿನ ಒಂದು ಮನೆಯು ಕುಸಿದುಬಿದ್ದು ಒಳಗೆ ಬಾಡಿಗೆಗಿದ್ದವರಲ್ಲಿ ೧೮ ಮಂದಿ ಸತ್ತರು; ೨೮ ಜನರಿಗೆ ಬಲವಾದ ಗಾಯಗಳಾದುವು. ಸಕಾಲದಲ್ಲಿ ಮನೆಯಜಮಾನನು ಜೀರ್ಣೋದ್ಧಾರಮಾಡಿಸದೆಹೋದಕಾರಣದಿಂದ ಇಂಥ ಅಪಾಯವುಂಟಾಯ್ತೆಂದು ಅವನಮೇಲೆ ಕೇಸು ಬಂದು ೨೦ ಸಾವಿರ ರೂ. ಗಳ ಹೊಣೆಯ ಮೇಲೆ ಬಿಡಲ್ಪಟ್ಟಿದ್ದಾನೆ.

ಕಳೆದ ಸೋಮವಾರ ವೈಸ್ರಾಯರೊಡನೆಯೂ ಸ್ಟೇಟ್ ಸೆಕ್ರೆಟರಿಯವರೊಡನೆಯೂ ಪ್ರತ್ಯಕ್ಷ ಸಂದರ್ಶಕ ಸಂಭಾಷಣೆಗಳನ್ನು ಪಡೆದುಕೊಂಡ ಆ|| ಫ್ರೇಜರ್‌ರವರು, ಸರ್ ಬರ್ನಾರ್ಡ್ ಹಂಜರ್‌ರವರು, ಮದ್ರಾಸ್ ಮೇಲ್ ಪತ್ರಿಕಾ ಸಂಪಾದಕರು, ಸರ್ ಪಿ. ಶಿವಸ್ವಾಮಯ್ಯರು ಮೊದಲಾದವರುಗಳೊಳಗೆ ನಮ್ಮ ಸಂಸ್ಥಾನದ ಮ|| ಎಚ್.ವಿ. ನಂಜುಂಡಯ್ಯನವರೂ, ಕೊಡಗಿನವರಲ್ಲಿ ರಾ|| ಬ|| ಮುತ್ತಣ್ಣನವರೂ ಆಗಿದ್ದರು.

ದೇಶೀಯ ಮಹಾಸಭಾ ಕಾರ್ಯಕ್ರಮಗಳು ಸಂಪೂರ್ಣವಾಗಿ ಉಗ್ರಮತವಾದಿಗಳ ಹಸ್ತವಾಗುತ್ತ ಬಂದಿರುವುದನ್ನೂ ಅದರ ಪರಿಣಾಮ ಕೃತ್ಯವನ್ನೂ ಯೋಚಿಸಿ, ಮಿತವಾದ ಧುರೀಣರಾದ ಕೆಲ ಕಾಂಗ್ರೆಸ್ ನಾಯಕರು ಪ್ರತ್ಯೇಕ ಯೋಚನೆಯಲ್ಲಿ ತೊಡಗಿದಂತೆ ಕಾಣುತ್ತದೆ. ಈ ಸಲದ ದೇಶೀಯ ಮಹಾಸಭಾ ಸ್ವಾಗತಸಂಘದ ಕಾರ್ಯದರ್ಶಿಗಳಾಗಿದ್ದ ಪೃಥ್ವೀಶ ಚಂದ್ರರಾಯ, ಪ್ರವಾಸಚಂದ್ರಮಿತ್ರ, ಡಾಕ್ಟರ್ ನೀಲರತ್ನ ಸರ್ಕಾರ್ ಈ ಮೂವರೂ ತಮ್ಮ ಉದ್ಯೋಗಗಳಿಗೆ ಪರಿತ್ಯಾಗಪತ್ರವನ್ನು ಕೊಟ್ಟು ದೂರಸ್ಥರಾದರು.

ಮದ್ರಾಸು ಅಧಿಪತ್ಯದ ಪಂಚಮರಲ್ಲಿ ಆಂಧ್ರಪಂಚಮರು, ಆದಿದ್ರಾವಿಡರು ಎಂಬ ಎರಡು ಪಕ್ಷಗಳಿವೆ. ತಂತಮ್ಮ ಅಭ್ಯುದಯಕ್ಕಾಗಿ ಈ ಎರಡು ಪಕ್ಷದವರೂ ಬೇರೆಬೇರೆ ಸಂಘಗಳನ್ನೂ ಸಭೆಗಳನ್ನೂ ಏರ್ಪಡಿಸಿಕೊಂಡು ಕಾರ್ಯಪ್ರವೃತ್ತರಾಗಿದ್ದಾರೆ. ಮದ್ರಾಸಿಗೆ ದಯಮಾಡಿಸಿರುವ ಸ್ಟೇಟ್ ಸೆಕ್ರೆಟರಿಯವರು ಆದಿದ್ರಾವಿಡ ಪಕ್ಷದವರ ವಿಜ್ಞಾಪನೆಯನ್ನು ಸ್ವೀಕರಿಸುವುದಕ್ಕೆ ಮಾತ್ರ ಅವಕಾಶವಿತ್ತು, ಆಂಧ್ರಪಂಚಮರ ವಿಜ್ಞಾಪನ ಸಮರ್ಪಣೆಗೆ ಅವಕಾಶ ಕೊಡದೆಹೋಗಿರುವುದರಿಂದ ಆ ಪಕ್ಷದ ದಿ|| ಬ|| ಕೇಶವಪಿಳ್ಳೆ, ಆ|| ವೆಂಕಟಪತಿರಾಜು ಮೊದಲಾದವರೆಲ್ಲಾ ಅಸಮಾಧಾನಪಟ್ಟುಕೊಂಡಿದ್ದಾರೆ.

ಕಳೆದ ಮಂಗಳವಾರ ಬೆಳಗ್ಗೆ ವೈಸ್ರಾಯರಿಗೂ ಸ್ಟೇಟ್ ಸೆಕ್ರೆಟರಿಯವರಿಗೂ ಮಹಿಳಾ ವಿಶ್ವವಿದ್ಯಾಲಯದ ಸೆನೇಟ್ ಪಕ್ಷದಿಂದ ವಿಜ್ಞಾಪನಪತ್ರವನ್ನೊಪ್ಪಿಸುವುದಕ್ಕೆ ಹೋಗಿದ ಶ್ರೀಮತಿ, ಸರೋಜಿನೀದೇವಿ, ಆನಿಬೆಸೆಂಟಮ್ಮ ಮೊದಲಾದವರುಗಳೊಳಗೆ ನಮ್ಮ ಮೈಸೂರಿನ ನಾರೀಮಣಿಯರಾದ ಶ್ರೀರಂಗಮ್ಮ, ಬಿ.ಎ., ಯವರೂ, ಶ್ರೀಮತಿ ಪಾರ್ವತಮ್ಮನವರೂ (ಜಸ್ಟಿಸ್ ಚಂದ್ರಶೇಖರಯ್ಯರ್‌ರವರ ಧರ್ಮಪತ್ನಿಯವರು) ಇವರಿಬ್ಬರಿದ್ದರು. ವೈಸ್ರಾಯರ ಮತ್ತೂ ಸ್ಟೇಟ್ ಸೆಕ್ರೆಟರಿಯವರ ಪ್ರತ್ಯಕ್ಷ ಸಂದರ್ಶನ ಸಂಭಾಷಣೆಗಳಿಗೆ ಶ್ರೀಮತಿಯರಾದ ಸರೋಜಿನೀದೇವಿ, ಜೋಷಿ, ಶ್ರೀರಂಗಮ್ಮ-ಈ ಮೂವರು ಹೋಗಿದ್ದರು.

ವೈಸ್ರಾಯರೂ ಸ್ಟೇಟ್ ಸೆಕ್ರೆಟರಿಯವರೂ ಸಹ ಕಳೆದ ತಾ|| ೧೪ ನೆ ಮಧ್ಯಾಹ್ನ ೧|| ಗಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ಮದ್ರಾಸಿಗೆ ಬಂದಿಳಿದರು. ನಿಲ್ದಾಣದಲ್ಲಿ ಮದ್ರಾಸ್ ಗೌರ್ನರಾದ ಲಾರ್ಡ್ ಪೆಂಟ್ಲಂಡ್‌ರವರು, ಅವರ ಮಿಲಿಟರಿ ಸೆಕ್ರೆಟರಿ, ಇಬ್ಬರು ಎಯಿಡ್‌ಕಾಂಗರು, ಮ್ಯುನಿಸಿಪಲ್ ಪ್ರೆಸಿಡೆಂಟರು, ಪೋಲೀಸ್ ಕಮಿಷನರು, ಮದ್ರಾಸು ಕಲೆಕ್ಟರು, ಪೋರ್ಟ್‌ಸೆಂಟ್‌ಜಾರ್ಜಿನ ಮುಖ್ಯಾಧಿಕಾರಿಗಳು- ಇಷ್ಟುಮಂದಿಗಳು ಕಾದಿದ್ದು ಇದಿರ್ಗೊಂಡರು. ನಿಲ್ದಾಣದ ತುಂಬಾ ಪೋಲೀಸ್ ಉದ್ಯೋಗಿಗಳು ತುಂಬಿದ್ದರು. ಬಂಡಿಯಿಂದ ಸ್ಟೇಟ್ ಸೆಕ್ರೆಟರಿಯವರೂ ವೈಸ್ರಾಯರೂ ಇಳಿದಕೂಡಲೇ ೩೧ ಗುಂಡುಗಳು ಹಾರಿಸಲ್ಪಟ್ಟುವು. ಮದ್ರಾಸ್ ಗೌರ್ನರು ತಮ್ಮೊಡನೆ ಬಂದಿದ್ದವರನ್ನೆಲ್ಲಾ ವೈಸ್ರಾಯರಿಗೂ ಮಾಂಟೆಗ್‌ರವರಿಗೂ ಪರಿಚಯ ಮಾಡಿಸಿದರು, ನಿಲ್ದಾಣದಿಂದ ಸರ್ವರೂ ಹೊರಕ್ಕೆ ಹೊರಟು ಸಿದ್ಧವಾಗಿದ್ದ ಮುಂದಣ ಬಂಡಿಯಲ್ಲಿ ವೈಸ್ರಾಯರೂ ಮದ್ರಾಸ್ ಗೌರ್ನರೂ ಕುಳಿತರು. ೨ ನೆ ಬಂಡಿಯಲ್ಲಿ ಸ್ಟೇಟ್ ಸೆಕ್ರೆಟರಿಯವರೂ, ಗೌರ್ನರ ಮಿಲಿಟರಿ ಸೆಕ್ರೆಟರಿಯೂ, ಸರ್ ವಿಲಿಯಂ ವಿನ್ಸೆಂಟ್‌ರವರೂ ಕುಳಿತರು. ಉಳಿದ ಪರಿವಾರದವರೆಲ್ಲಾ ಹಿಂದಣ ನಾಲ್ಕಾರು ಬಂಡಿಗಳಲ್ಲಿ ಕುಳಿತು ರಾಜವೀಧಿಯ ಎರಡು ಪಕ್ಕಗಳಲ್ಲೂ ಕಿಕ್ಕಿರಿಸಿ ನಿಂತಿದ್ದ ಪುರಜನರು ಸಂತೋಷದಿಂದ ಮಾಡುತ್ತಿದ್ದ ಕೈಚಪ್ಪಾಳೆಗಳನ್ನೂ ಕೋಲಾಹಲವನ್ನೂ ಸಂತೋಷದಿಂದ ಅಭಿನಂದಿಸಿ, ತಮ್ಮ ಟೊಪ್ಪಿಗೆಗಳನ್ನು ಮುಟ್ಟಿ ಪ್ರತಿವಂದನೆಗಳನ್ನು ಮಾಡುತ್ತ ಗೌರ್ನಮೆಂಟ್ ಹೌಸಿಗೆ ಸೇರಿದರು.

ಮದ್ರಾಸಿನಲ್ಲಿ ಸ್ಟೇಟ್ ಸೆಕ್ರೆಟರಿಯವರಿಗೆ ವಿಜ್ಞಾಪನಪತ್ರಗಳನ್ನರ್ಪಿಸಿದ ಈ ಕೆಳಗೆ ಕಂಡ ಸಂಘಗಳಲ್ಲಿ ಕಾಂಗ್ರೆಸ್ಸಿನವರ ವಿಧಾನಕ್ಕೆ ವಿರುದ್ಧಭಾವವನ್ನು ವ್ಯಕ್ತಪಡಿಸಿರುವುವುಗಳು ಯಾವುವೆಂದರೆ—೧. ದಕ್ಷಿಣ ಇಂಡ್ಯಾ ಯುನೈಟೆಡ್ ಪ್ಲಾಂಟರುಗಳ ಸಂಘ, ೨. ಮದ್ರಾಸು ವರ್ತಕಮಹಾಸಂಘ, ೩. ದಕ್ಷಿಣ ಇಂಡ್ಯಾ ಆಂಗ್ಲೋ ಇಂಡಿಯನ್ ಸಂಘ, ೪. ದಕ್ಷಿಣ ಇಂಡ್ಯಾದ ವಾಣಿಜ್ಯಮಹಾಸಂಘ, ೫. ಇಂಡಿಯನ್ ಕ್ರೈಸ್ತರ ಸಂಘ, ೬. ಮದ್ರಾಸು ಅಧಿಪತ್ಯದ ಜಮೀಂದಾರರುಗಳ ಸಂಘ, ೭. ನ್ಯೂಯಂಗ್ಮನ್ ಪ್ರಾಚೀನ ವಿದ್ಯಾರ್ಥಿಗಳ ಸಂಘ, ೮. ಕೇರಳಜನ್ಮಿಸಭೆ, ೯. ಕೊಡಗು ಭೂಸ್ವಾಮಿಗಳ ಸಂಘ, ೧೦. ಸೌತಿಂಡಿಯನ್ ಲಿಬರಲ್ ಫೆಡರೇಷನ್ ಎಂಬ ಸಂಘ, ೧೧. ಬ್ರಾಹ್ಮಣೇತರ ಸಂಘಗಳೆಂಬುವು, ೧೨. ಮದ್ರಾಸ್ ದ್ರವಿಡಿಯನ್ ಸಂಘ, ೧೩. ಮದ್ರಾಸು ಆದಿದ್ರಾವಿಡಜನಸಂಘ, ೧೪. ರಂಗೂನ್ ದ್ರವಿಡಮಹಾಜನಸಂಘ, ೧೫. ದಕ್ಷಿಣ ಇಂಡ್ಯಾದ ಇಸ್ಲಾಮಿಯಾಲೀಗು, ೧೬. ಮುತ್ಯಾಲಪೇಟೆಯ ಮುಸ್ಲಿಂಲೀಗು, ೧೭. ಮದ್ರಾಸು ಉಲೇಮಾಲು ಎಂಬ ಸಂಘ. ಇನ್ನು ಕಾಂಗ್ರೆಸ್ ವಿಧಾನಕ್ಕೆ

ಅನುಕೂಲಾಭಿಪ್ರಾಯವುಳ್ಳ ಸಂಘಗಳು ಯಾವುವೆಂದರೆ—೧. ಮದ್ರಾಸು ಪ್ರಾಂತದ ಕಾಂಗ್ರೆಸ್ ಕಮಿಟಿ, ೨. ಮದ್ರಾಸು ಮಹಾಜನಸಭೆ, ೩. ಮದ್ರಾಸ್ ಅಧಿಪತ್ಯದ ಮುಸ್ಲಿಂಲೀಗು, ೪. ಸ್ತ್ರೀ ಪ್ರತಿನಿಧಿಸಂಘ, ೫. ಮದ್ರಾಸು ರಾಜಧಾನೀ ಸಂಘ, ೬. ಆಂಧ್ರಮಹಾಸಭೆ. ವೈಶ್ಯರು, ನಾಟುಕೋಟಿ ಸೆಟ್ಟಿಗಳು, ವಿಶ್ವಕರ್ಮರು, ಮಾರ್ವಾಡಿಗಳು ಮೊದಲಾದ ೭-೮ ಸಂಘಗಳ ವಿಜ್ಞಾಪನಪತ್ರಗಳ ಸಮರ್ಪಣಕ್ಕೆ ಅವಕಾಶವು ದೊರೆಯದೆ ಹೋಯಿತು.

ವಿದೇಶದವೃತ್ತಾಂತಗಳು.

ಜರ್ಮನರೊಡನೆ ಸಂಧಿ ರಾಯಭಾರಕ್ಕೆ ಹೋಗಿದ್ದ ರಷ್ಯನ್ ರಾಯಭಾರಿಗಳೊಳಗೆ ಜನರಲ್ ಸ್ಕೀಲ್ಸ್ ಎಂಬುವನರು ಸಂಧಿ ನಡೆಯುವುದಕ್ಕೆ ಮುಂಚಿನ ದಿನವೇ ತುಪಾಕಿಗುಂಡಿನ ಹೊಡೆತದಿಂದ ಆತ್ಮಹತ್ಯ ಮಾಡಿಕೊಂಡರು.

ಇಂಗ್ಲೀಷರ ಯುದ್ಧವ್ಯಯವು ಕಳೆದ ನವಂಬರ್ ತಿಂಗಳ ಕಡೆಯವರೆಗೂ ದಿನ ೧ ಕ್ಕೆ ೯೭೪೮೦೦೦ ಪೌನುಗಳಾಗುತ್ತಿದ್ದುವು. ಈಗ ಆ ವೆಚ್ಚವು ದಿನಕ್ಕೆ ೭೦ ಲಕ್ಷ ಪೌನುಗಳು ಎಂದರೆ ೧೦|| ಕೋಟಿ ರೂ. ಗಳವರೆಗೆ ಆಗುತ್ತಿದೆ. ಇದೊಂದು ವರ್ಷದಲ್ಲಿ ಅವರು ಯುದ್ಧಕ್ಕಾಗಿ ಮಾಡಿರುವ ಸಾಲವು ೨೪೫ ಕೋಟಿ ಪೌನು ಎಂದರೆ ೩೬೭೫೦೦೦೦೦೦೦ ರೂ. ಗಳಾಗಿರುವುವು.

ಕಳೆದ ೧೦ ತಿಂಗಳ ಕಾಲದಲ್ಲಿ ಇಂಗ್ಲೀಷರ ಬಹುಶಃ ೧ ಸಾವಿರ ಹಡಗುಗಳು ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ. ಆದರೂ ಹೊಸ ಹಡಗುಗಳು ಅವುಗಳಿಗೆ ಭರ್ತಿಯಾಗುತ್ತಿರುವುದರಿಂದ ಅವರಿಗೆ ಆ ನಷ್ಟದಿಂದ ಯಾವ ವ್ಯವಹಾರವೂ ಕಟ್ಟಾಗದೆ ನಡೆಯುತ್ತಲೇ ಇದೆ. ದಿನ ದಿನಕ್ಕೆ ಹೊಸ ಹಡಗುಗಳ ನಿರ್ಮಾಣವು ಹೆಚ್ಚುತ್ತಲೇ ಇದೆ. ಅಮೇರಿಕಾದವರು ಕೂಡ ಹೊಸ ಹಡಗುಗಳನ್ನು ವಿಶೇಷವಾಗಿ ಕಲ್ಪಿಸುತ್ತಿರುವುದಲ್ಲದೆ ೧೦೦೦ ಹಡಗುಗಳನ್ನು ಮಿತ್ರಮಂಡಲಿಯವರ ಸಹಾಯಕ್ಕೆ ಕೊಟ್ಟಿರುವರು.

ಹಾಲಿಫಾಕ್ಸಿನಪಟ್ಟಣದ ಆದ ಅನಾಹುತದಿಂದ ೨ ಸಾವಿರ ಮಂದಿಗಳು ಮಾತ್ರ ಸತ್ತಿರುವರೆಂದು ಗೊತ್ತಾಗಿದ್ದಿತು. ಈಚೆಗೆ ನಡೆದ ಪರಿಶೋಧನೆಯಿಂದ ೧೦ ಸಾವಿರ ಮಂದಿಗೆ ಕಡಿಮೆಯಿಲ್ಲದೆ ಸತ್ತಿರುವರೆಂದೂ, ೨೦ ಸಾವಿರ ಮಂದಿಗಳು ಮನೆಮಠಗಳಿಲ್ಲದೆ ಅಲೆಯುತ್ತಿರುವರೆಂದೂ ಗೊತ್ತಾಗಿದೆ. ಈ ಅನಾಹುತ ನಡೆಯುವುದಕ್ಕೆ ಮದ್ದನ್ನು ತುಂಬಿದ ಅಮೇರಿಕಾ ಹಡಗಿಗೆ ಆಹಾರ್ಯವಸ್ತುಗಳಿಂದ ತುಂಬಿದ ಮತ್ತೊಂದು ಹಡಗು ಡಿಕ್ಕಿಹೊಡೆದುದೇ ಕಾರಣವಷ್ಟೆ. ಆಹಾರ್ಯವಸ್ತು ತುಂಬಿದ್ದ ಹಡಗಿನ ಚುಂಗಾಣಿಯನ್ನು ನಡೆಯಿಸುವ ಉದ್ಯೋಗದಲ್ಲಿದ್ದ ಜಾನ್‌ಜಾನ್ಸನ್ ಎಂಬುವವನು ಜರ್ಮನರ ಗೂಢಚಾರಿಯೆಂಬ ಅನುಮಾನದಮೇಲೆ ಹಿಡಿದು ಸೆರೆಯಲ್ಲಿಡಲ್ಪಟ್ಟಿದ್ದಾನೆ. ಇವನಿಗೆ ಆ ಮಹಾಪಾಯದಲ್ಲಿ ಗಾಯವೇನೂ ಆಗಿಲ್ಲ. ಆದರೂ ಏಟುಬಿದ್ದವನಂತೆ ನಟಿಸುತ್ತ ಆಸ್ಪತ್ರೆಯಲ್ಲಿಡಲ್ಪಟ್ಟಿದ್ದು, ಅಲ್ಲಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಉಜ್ಜುಗಿಸಿದ್ದು ಹಿಡಿಯಲ್ಪಟ್ಟಿದ್ದಾನೆ.

ಯುದ್ಧವಾರ್ತೆಯು.

ಪಶ್ಚಿಮರಂಗ—ತಾವು ಒಂದು ದೊಡ್ಡ ಯುದ್ಧವನ್ನು ಈ ರಂಗದಲ್ಲಿ ನಡೆಯಿಸುವವರಾಗಿರುತ್ತೇವೆಂದೂ ಅದರಲ್ಲಿ ಯುದ್ಧಪರ್ಯವಸಾನವು ನಿಶ್ಚಯಿಸಲ್ಪಡುವುದೆಂದೂ ಜರ್ಮನೀ ಪತ್ರಿಕೆಗಳು ಬರೆದುಕೊಳ್ಳುತ್ತಲಿವೆ. ಈಗ ಅವರ ಸೈನ್ಯಗಳು ಪೂರ್ವರಂಗದಲ್ಲಿ ೭೯ ಡಿವಿಜನ್ನುಗಳೂ ಪಶ್ಚಿಮರಂಗದಲ್ಲಿ ೧೫೦ ಡಿವಿಜನ್ನುಗಳೂ ಇರುತ್ತಿವೆ. ಪೂರ್ವರಂಗದಲ್ಲಿರುವ ಆ ಸೈನ್ಯಗಳಿಂದ ೬೦ ೧೯ ಕ್ಕೆ ಮೇಲ್ಪಟ್ಟು ೩೫ ವರ್ಷ ವಯಸ್ಸಿನೊಳಗಣ ತರುಣಸೈನಿಕರನ್ನೆಲ್ಲಾ ಪಶ್ಚಿಮರಂಗಕ್ಕೆ ಸಾಗಿಸಿಕೊಂಡು ಬಂದಿರುತ್ತಾರೆ. ಅವರು ಈ ಶೀತಕಾಲದಲ್ಲಿಯೋ ಅಥವಾ ಮುಂದಣ ಬೇಸಿಗೆಯಲ್ಲೋ ಈ ರಂಗದಲ್ಲಿ ಮಹಾ ಸಮರವನ್ನಾರಂಭಿಸುವರೆಂಬುದಕ್ಕೆ ಸಂಶಯವಿಲ್ಲ. ರಷ್ಯಾದ ಸ್ಥಿತಿಗತಿಯು ಅವರಿಗೆ ಅನುಕೂಲವಾಯಿತು. ಅದುಕಾರಣ ಅವರ ಉಬ್ಬಣವನ್ನು ತಡೆದು ಸೋಲಿಸುವುದಕ್ಕೆ ಮಿತ್ರಮಂಡಲಿಯವರೂ ಕೂಡ ಈಗಿನಿಂದಲೂ ಸಂಪೂರ್ಣ ಸನ್ನಾಹಕ್ಕೆ ಆರಂಭಿಸಿರುತ್ತಾರೆ. ಇಂಗ್ಲೀಷ್ ದೇಶದಲ್ಲಿ ಯುದ್ಧಕ್ಕೆ ಸೇರಲರ್ಹರಾಗತಕ್ಕ ಜನರ ವಯಸ್ಸನ್ನು ೪೫ ಕ್ಕೆ ಹೆಚ್ಚಿಸಿರುತ್ತಾರೆ. ಹೆಂಗುಸರಿಂದ ಸಾಧ್ಯವಾಗಬಹುದಾದ ಕೆಲಸಗಳಿಗೆಲ್ಲಾ ಅವರನ್ನೇ ಇಟ್ಟುಕೊಂಡು ಆ ಕೆಲಸಗಳಲ್ಲಿದ್ದ ೪೫ ವರ್ಷ ವಯಸ್ಸಿನೊಳಗಣ ಗಂಡುಸರನ್ನೆಲ್ಲಾ ಸೈನ್ಯಕ್ಕೆ ಸೇರಿಸಿಕೊಳ್ಳಲು ಸಂಕಲ್ಪಿಸಿರುತ್ತಾರೆ. ಅಮೇರಿಕಾದಲ್ಲೂ ಸೈನ್ಯದ ಜೋಡಣೆಯೂ ಯುದ್ಧಸಾಮಗ್ರಿ ನಿರ್ಮಾಣದ ಕಾರ್ಯಗಳೂ ಬಹಳ ವೇಗವಾಗಿ ನಡೆಯುತ್ತಿವೆ. ರಣರಂಗದಲ್ಲಿ ಯುದ್ಧಗಳು ಅಖಂಡವಾಗಿ ಸಾಗುತ್ತಿದ್ದರೂ ಜಯಾಪಜಯ ಸೂಚಕ ವಿಶೇಷ ವಾರ್ತೆಗಳೇನೂ ಇಲ್ಲ.

ಇಟಲಿರಂಗ—ಟ್ರೆಂಟಿನೋ ಪ್ರಾಂತದಲ್ಲಿ ಯುದ್ಧಾರಂಭವಾದಂದಿನಿಂದ ಅಲ್ಲಿ ಮೃತಪಟ್ಟಿರುವ ಜರ್ಮನರ ಮತ್ತೂ ಆಸ್ಟ್ರಿಯನ್ನರ ಸಂಖ್ಯೆಯು ೧|| ಲಕ್ಷಕ್ಕೆ ಮೀರಿರುವುದೆಂದು ತಿಳಿಯಬರುತ್ತದೆ. ಆದರೂ ಶತ್ರುಗಳು ಇನ್ನೂ ತಮ್ಮ ಪುರೋಗಮನಕ್ಕೆ ಸಾಹಸವನ್ನು ಮಾಡುತ್ತಲೇ ಇದ್ದಾರೆ. ಶೀತಕಾಲಪ್ರವೇಶವಾಗುವುದರೊಳಗಾಗಿ ಆಲ್ಪ್ಸ್ ಪರ್ವತಗಳನ್ನು ದಾಟಿ ಇಟಲಿಯೊಳಕ್ಕೆ ನುಗ್ಗಿಹೋಗಬೇಕೆಂಬ ಉದ್ದೇಶವು ಶತ್ರುಗಳಿಗಿದೆಯೆಂಬುದಾಗಿಯೂ, ಅದಕ್ಕಾಗಿ ಬ್ರೆಂಟಾ-ಪಿಯೇವೀಗಳ ಮಧ್ಯದಲ್ಲಿರುವ ೧೦ ಮೈಲಿಯಗಲದ ಪ್ರದೇಶದಲ್ಲಿ ಅವರು ೨೫೦೦ ಫಿರಂಗಿಗಳನ್ನು ಜೋಡಿಸಿ, ಯುದ್ಧಮಾಡುತ್ತಿರುವರೆಂಬುದಾಗಿಯೂ ತಿಳಿಯಬರುತ್ತದೆ. ಆ ಫಿರಂಗಿಗಳೆಲ್ಲವೂ ಒಟ್ಟಿಗೆ ಹಾರುತ್ತಿರುವಾಗ ಅವುಗಳ ಶಬ್ದದ ರಭಸದ ಅನುರುಣಿಕೆಯಿಂದ ೧೦-೨೦ ಮೈಲಿಗಳ ದೂರದಲ್ಲಿರುವ ಪಟ್ಟಣಗಳ ಮನೆಗಳೆಲ್ಲಾ ಕುಸಿದುಬಿದ್ದುಹೋಗುವಂತೆ ತೋಚುತ್ತಿರುವುವು. ಇದಿರಾಗಿರುವ ಆ ದೊಡ್ಡ ಪರ್ವತಗಳನ್ನು ವಶಪಡಿಸಿಕೊಂಡಲ್ಲದೆ ಅದರ ಮಗ್ಗುಲಲ್ಲಿರುವ ವಿಶಾಲವಾದ ಬಯಲ ಭೂಮಿಯನ್ನು ಆಕ್ರಮಿಸಿಕೊಳ್ಳುವುದಕ್ಕೆ ಶತ್ರುಗಳಿಗೆ ಸಾಧ್ಯವಲ್ಲ. ಇಟಲಿಯವರಿಗೆ ಸಹಾಯವಾಗಿ ನಮ್ಮ ಇಂಗ್ಲೀಷ್ ಸೈನಿಕರೂ ಫ್ರೆಂಚ್ ಸೈನಿಕರೂ ಸಹ ಸೇರಿರುವುದರಿಂದ ಇವರುಗಳ ಧೈರ್ಯ-ಸಾಹಸಗಳು ಹೆಚ್ಚಿ, ಶತ್ರುಗಳ ನುಗ್ಗಾಟವು ತಡೆದುಹೋಗಿದೆ. ಈ ಬಳಿಯಣ ಯುದ್ಧದಲ್ಲಿ ಉಭಯರಕಡೆಯೂ ಬಹಳ ನಷ್ಟವಾಗಿರುತ್ತದೆ. ಈ ಪ್ರಾಂತದಲ್ಲಿ ಕೋರ್ಡೆಲ್ಲಾ ಬೆರೆಟ್ಟಾವಿಗೆ ದಕ್ಷಿಣದಲ್ಲಿ ಶತ್ರುಗಳು ಅತಿ ಭಯಂಕರವಾಗಿ ಹೋರಾಡಿ, ಮಿತ್ರಮಂಡಲಿ ಸೈನಿಕರಿದ್ದ ಗುಡ್ಡದಮೇಲಕ್ಕೆ ಏರಿ ಬಂದರು. ಆದರೂ ನಮ್ಮವರು ಪ್ರತಿಯುದ್ಧವನ್ನು ಬಹಳ ಭಯಂಕರವಾಗಿ ಮಾಡಿ ಬಹಳ ನಷ್ಟಗೊಳಿಸಿ, ಸಂಪೂರ್ಣವಾಗಿ ಸೋಲಿಸಿ, ಹಿಂದಕ್ಕೋಡಿಸಿದರು. ಇಟಲಿಯ ಪ್ರಸಿದ್ಧ ನಗರವಾದ ವೆನ್ನಿಸ್ಸಿನ ಸಂರಕ್ಷಣೆಯನ್ನು ಈಗ ಇವರ ನೌಕಾದಳವೇ ಮಾಡುತ್ತಿದೆ. ಆಸ್ಟ್ರಿಯನ್ ಸೈನ್ಯವು ಮುಂದಕ್ಕೆ ನುಗ್ಗಿ ಬರದಂತೆ ಮಾಡುವುದಕ್ಕಾಗಿ ಏಯಾರ್ಟ್ರೊ-ಪ್ಲೇವ ನದಿಗಳ ಮಧ್ಯದ ಪ್ರದೇಶಕ್ಕೆಲ್ಲಾ ನೀರನ್ನು ತುಂಬಿಸಿಬಿಟ್ಟಿದ್ದಾರೆ. ಶತ್ರುಗಳು ಈ ಅಗಾಧ ಜಲವನ್ನು ದಾಂಟಲಾರರು. ಎತ್ತರದಲ್ಲಿರುವ ಕೆಲ ಮಾರ್ಗಗಳು, ಉನ್ನತಗಳಾದ ಕೆಲ ಭವನಗಳು ಹೊರತು ಉಳಿದ ವೆನ್ನಿಸ್ ಪಟ್ಟಣ ಭಾಗವೆಲ್ಲಾ ನೀರಿನಲ್ಲಿ ಮುಳುಗಿದೆ. ಯಾವಾಗ್ಗೂ ಈ ಪಟ್ಟಣವು ಜಲದಲ್ಲೇ ಇರುವುದು. ಬೀದಿಗಳೆಲ್ಲಾ ನೀರಿನ ಕಾಲ್ವೆಗಳೇ ಆಗಿರುತ್ತವೆ. ಹೀಗಿರುವಾಗ ಈಗ ಮತ್ತಷ್ಟು ಜಲಮಯವಾಗಿದ್ದರೆ ಕೇಳುವುದೇನು? ಇಟಲಿಯವರಿಗೆ ಈ ರಂಗದಲ್ಲಿ ಫಿರಂಗಿಯ ದಳವು ಬಹಳವಾಗಿದೆ. ಶತ್ರುಗಳಿಗಿಂತ ಈ ವಿಷಯದಲ್ಲಿ ಇವರ ಕೈಯೇ ಮೇಲಾಗಿದೆ. ನೀರಿನಮೇಲೆ ತೇಲುತ್ತ ಹಾರಿಸಬಹುದಾದ ಫಿರಂಗಿಗಳು ಇಟಲಿಯವರ ಬಳಿಯಲ್ಲಿವೆ. ಅದುಕಾರಣ ಈ ಪ್ರಾಂತದಲ್ಲಿ ಶತ್ರುಗಳು ನೀರಿನಮೇಲೆ ದೋಣಿಗಳ ಸೇತು ಮೊದಲಾದುವುಗಳನ್ನು ಕಟ್ಟಿಕೊಳ್ಳಲು ಅವಕಾಶವಿಲ್ಲದಂತೆ ಇಟಲಿಯವರ ನೀರಿನ ಫಿರಂಗಿಗಳು ಮಾಡುತ್ತಲಿವೆ. ವೆನ್ನಿಸ್ ಪಟ್ಟಣದಲ್ಲಿ ಯಾವಾಗ್ಗೂ ಇರುತ್ತಿದ್ದ ೧|| ಲಕ್ಷ ಪ್ರಜೆಗಳಲ್ಲಿ ಈಗ ೧ ಸಾವಿರ ಮಂದಿ ಮಾತ್ರವೇ ಇದ್ದಾರೆ. ಊರಿನಲ್ಲಿರುವ ಪುರಾತನವಾದ ಭವನಗಳ ಮೇಲೂ, ಸ್ಮಾರಕ ವಿಗ್ರಹಗಳಮೇಲೂ ಮರಳ ಚೀಲಗಳನ್ನೂ ಇಟ್ಟಿಗೆಗಳನ್ನೂ ಪೇರಿಸಿ, ಅವುಗಳಿಗೆ ಶತ್ರುಗಳ ಸಿಡಿಮದ್ದುಗಳಿಂದ ಅಪಾಯವಾಗದಂತೆ ಕಾಪಾಡುತ್ತಲಿದ್ದಾರೆ. ಅಂಗಡಿ ಮುಂಗಟ್ಟುಗಳೆಲ್ಲಾ ಮುಚ್ಚಲ್ಪಟ್ಟಿವೆ.

ರಷ್ಯಾ—ಈ ದೇಶದಲ್ಲೆಲ್ಲಾ ಅರಾಜಕತ್ವವು ಪ್ರಬಲವಾಗಿದೆ. ಒಂದು ಪಕ್ಷದವರು ಮತ್ತೊಂದು ಪಕ್ಷದವರಮೇಲೆ ಯುದ್ಧಮಾಡುತ್ತಿದ್ದಾರೆ. ಮ್ಯಾಕ್ಸಿಮಾಲಿಸ್ಟ್ ಪಕ್ಷದವರೇ ಪ್ರಬಲರಾಗಿದ್ದಾರೆ. ಈ ರಂಗದಲ್ಲೆಲ್ಲಾ ಯುದ್ಧವು ನಿಲ್ಲಿಸಲ್ಪಟ್ಟು ಸಂಧಿಚರ್ಚೆಯು ನಡೆಯುತ್ತಲಿದೆ.

ತುರ್ಕಿ—ಪಾಲೆಸ್ಟೈನಿನಲ್ಲಿ ಜರೂಸಲೇಮನ್ನು ದಾಟಿ ಮುಂದಕ್ಕೂ ನಮ್ಮ ಸೈನಿಕರು ಸಾಗಿಹೋಗುತ್ತಿದ್ದಾರೆ. ತುರ್ಕಿಯವರು ಹಿಂದೆಗೆದೋಡುತ್ತಿದ್ದಾರೆ. ಮಿತ್ರಮಂಡಲಿಯವರೊಡನೆ ಸಂಧಿಮಾಡಿಕೊಂಡುಬಿಡಬೇಕೆಂದು ತುರ್ಕಿಯವರಿಗೆ ಉಂಟಾಗಿರುವ ಸೂಚನೆಯು ಕಾಣುತ್ತದೆ.

ಜರೂಸಲೇಂ ಜಯ.

ಜರೂಸಲೇಂ ಪಟ್ಟಣವನ್ನು ನಮ್ಮವರು ಹಿಡಿದುಕೊಂಡುದನ್ನು ದೊಡ್ಡ ಜಯವೆಂದು ಜರ್ಮನರೂ ಒಪ್ಪಿಕೊಂಡಿದ್ದಾರೆ. ತುರ್ಕಿಯವರಂತೂ ಇದರಿಂದ ದಿಗಿಲುಬಿದ್ದುಹೋಗಿದ್ದಾರೆ. ಇದನ್ನು ಗೆಲ್ಲುವುದರಲ್ಲಿ ಇಂಗ್ಲೀಷರ ಕಡೆಯ ಇಂಗ್ಲಾಂಡ್, ಐರ್ಲಾಂಡ್, ಸ್ಕಾಟ್ಲಾಂಡ್, ವೇಲ್ಸ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಸೈನ್ಯಗಳೇ ಅಲ್ಲದೆ ಭರತಖಂಡದ ಸೈನ್ಯವೂ, ಫ್ರಾನ್ಸ್, ಇಟಲಿ ಸೈನ್ಯಗಳೂ ಕೂಡ ಕಲೆತು ಯುದ್ಧಮಾಡಿದುವು. ಈ ಯುದ್ಧದಲ್ಲಿ ಅಸಮಸಾಹಸವೆಂದರೆ ಅದರ ದಾರಿಯಲ್ಲಿದ್ದ ಸಿನೇಯಿ ಮರಳುಕಾಡನ್ನು ಹಿಡಿದುಕೊಂಡ ಕಾರ್ಯವಾಗಿರುತ್ತದೆ. ಇದಕ್ಕಾಗಿ ಅದ್ಭುತ ಕಾರ್ಯವನ್ನು ನಮ್ಮವರು ಮಾಡಿರುತ್ತಾರೆ. ಜೆರೂಸಲೇಮಿನ ಬಳಿಯಲ್ಲಿ ಯುದ್ಧಮಾಡುತ್ತಿದ್ದ ನಮ್ಮ ಸೈನಿಕರು ಈಜಿಪ್ಟಿನಿಂದ ಸಾಗಿಸಿಕೊಂಡು ಬಂದ ನೀರನ್ನು ಕುಡಿದು ಜೀವಿಸುತ್ತಿದ್ದರು. ೧೫೦ ಮೈಲಿಗಳ ವಿಸ್ತಾರವುಳ್ಳ ಮರಳುಕಾಡಿನ ಮಾರ್ಗವಾಗಿ ನಲ್ಲಿಗಳನ್ನು ಹಾಕಿಕೊಂಡು ಅವುಗಳ ಮೂಲಕವಾಗಿ ಈಜಿಪ್ಟಿನ ನೀರನ್ನು ರಣರಂಗಕ್ಕೆ ಸಾಗಿಸಿಕೊಳ್ಳುತ್ತಿದ್ದರು. ಈ ನಲ್ಲಿಗಳು ಇಂಗ್ಲೆಂಡಿನಿಂದಲೂ ಅಮೇರಿಕಾದಿಂದಲೂ ತರಿಸಲ್ಪಟ್ಟುವುಗಳು. ಅಲ್ಲದೆ ಇವರುಗಳು ರಣರಂಗದವರೆಗೆ ಲೋಹಮಾರ್ಗವನ್ನೂ ಕೂಡ ಹಾಕಿಕೊಂಡು ಅವುಗಳಮೂಲಕ ತಮಗೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಈಜಿಪ್ಟಿನಿಂದ ಸಾಗಿಸಿಕೊಳ್ಳುತ್ತಿದ್ದರು.

ಡಿಸೆಂಬರ್ ೧೧ ನೆಯ ತಾರೀಖು ಮಧ್ಯಾಹ್ನ ಪಾಲೆಸ್ಟೈನ್ ಆಂಗ್ಲಸೇನಾ ಮುಖ್ಯ ದಳಪತಿಯಾದ ಜನರಲ್ ಸರ್ ಎಡ್ಮಂಡ್ ಅಲನ್‌ಬಿಯವರು ಫ್ರಾನ್ಸ್, ಇಟಲಿ, ಅಮೇರಿಕಾಗಳ ಸೈನಿಕ ಪ್ರತಿನಿಧಿಗಳೊಡನೆ ಕೂಡಿ, ಫ್ರೆಂಚ್-ಇಟಲಿ ದಳಗಳನ್ನು ಹಿಂದೆ ಬಿಟ್ಟುಕೊಂಡು ಪಾದಚಾರಿಗಳಾಗಿಯೇ ಜೆರೂಸಲೇಂ ಪಟ್ಟಣವನ್ನು ಪ್ರವೇಶಿಸಿದರು. ಜಾಫಾ ದ್ವಾರದ ಹತ್ತಿರ ಗೌರವಾರ್ಥವಾಗಿ ನಿಂತಿದ್ದ ಇಂಗ್ಲಾಂಡ್, ಐರ್ಲಾಂಡ್, ಸ್ಕಾಟ್ಲಾಂಡ್, ವೇಲ್ಸ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಇಂಡ್ಯಾ, ಫ್ರಾನ್ಸ್, ಇಟಲಿ, ಸೈನಿಕರುಗಳೆಲ್ಲಾ ಸ್ವಾಗತಮಾಡಿ ಗೌರವಿಸಿದರು. ಪುರಜನರು ಆದರಪೂರ್ವಕವಾಗಿ ಬರಮಾಡಿಕೊಂಡರು.

ಈ ಪಟ್ಟಣವು ಸದ್ಯಃ ಇಂಗ್ಲೀಷರ ಮಿಲಟರಿ ಗೌರ್ನರ ಪಾಲನೆಯ ಕೆಳಗೆ ಇರುವುದು. (ಇವರೂ ಕೂಡ ಈಜಿಪ್ಟಿನಲ್ಲಿ ಪೋಸ್ಟ್ ಮ್ಯಾಸ್ಟರ್ ಜನರಲ್ಲಾಗಿದ್ದ ಒಬ್ಬ ಪಾಷಾರವರು) ಪಟ್ಟಣದಲ್ಲಿ ಮುಖ್ಯವಾಗಿ ಇಂಗ್ಲೀಷ್‌ಧ್ವಜಪತಾಕೆಯು ಸ್ಥಾಪಿಸಲ್ಪಟ್ಟಿರುವುದು. ಇಟಲಿ-ಫ್ರಾನ್ಸ್ ಅಧಿಕಾರಿಗಳಿರುವ ಕಡೆಯಲ್ಲಿ ಅವರವರ ಪತಾಕೆಗಳು ಸ್ಥಾಪಿಸಲ್ಪಟ್ಟಿರುವುವು. ಯುದ್ಧಮುಗಿದನಂತರ ಈ ಪಟ್ಟಣದ ಮುಂದಣ ಸ್ಥಿತಿಯು ನಿರ್ಣಯಿಸಲ್ಪಡುವುದು. ಆ ಪಟ್ಟಣದಲ್ಲಿರುವ ಪವಿತ್ರವಾದ ಗೋರಿಗಳ ಬಳಿಯಲ್ಲಿ ಮಹಮ್ಮದೀಯ ಸೈನಿಕರೇ ಕಾವಲಿಗೆ ಇರಿಸಲ್ಪಟ್ಟಿದ್ದಾರೆ. ಆ ಪುಣ್ಯಸ್ಥಳಗಳ ಯೋಗಕ್ಷೇಮ ವಿಚಾರಣೆಗಾಗಿಯೇ ಪ್ರತ್ಯೇಕವಾದ ಅಧಿಕಾರಿಯೊಬ್ಬನನ್ನು ನಿಯಮಿಸಿದ್ದಾರೆ. ಮುಖ್ಯವಾದ ಮಸೀದಿಗಳೆಲ್ಲಾ ಮಹಮ್ಮದೀಯರ ಅಧಿಕಾರಕ್ಕೇ ಒಪ್ಪಿಸಲ್ಪಟ್ಟಿವೆ. ಮಹಮ್ಮದೀಯರ ಹೊರತು ಇತರರಾರೂ ಅವುಗಳ ಎಲ್ಲೆಗೆ ಪ್ರವೇಶಿಸಲಾಗದೆಂದು ಕಟ್ಟುಮಾಡಲ್ಪಟ್ಟಿವೆ. ಇಂಗ್ಲೀಷ್ ಮುಖ್ಯದಳಪತಿ ಅಲನ್ಬಿಯವರು ಪುರಪ್ರವೇಶಮಾಡಿದಾಗ ಒಂದು ಪ್ರಕಟನವನ್ನು ಆ ಪುರನಿವಾಸಿಗಳಿಗಾಗಿ ಹಿಬ್ರೂ, ಇಂಗ್ಲೀಷು, ಫ್ರೆಂಚ್, ಇಟಲಿ, ಗ್ರೀಕು, ಅರಬಿ-ಇವಿಷ್ಟು ಭಾಷೆಗಳಲ್ಲಿ ಪ್ರಕಟಿಸಿ ಓದಿಸಿದರು. ಅದರಲ್ಲಿ—"ಪವಿತ್ರವಾದ ಜೆರೂಸಲೇಂ ಪಟ್ಟಣವನ್ನು ನಮ್ಮ ಸೈನಿಕರು ತುರ್ಕಿಯವರನ್ನು ಸೋಲಿಸಿ ವಶಪಡಿಸಿಕೊಂಡಿದ್ದಾರೆ. ಯುದ್ಧಕಾರ್ಯದ ಅವಶ್ಯಕತೆಗಾಗಿ ಸದ್ಯಃ ಇಲ್ಲಿ ಸೈನಿಕ ಶಾಸನವು ವ್ಯವಹರಣೆಯಲ್ಲಿರುವುದು. ಶತ್ರುಗಳ ಪರಿಪಾಲನಕ್ರಮದಿಂದ ನಿಮಗುಂಟಾಗುತ್ತಿದ್ದ ಬಿಕ್ಕಟ್ಟುಗಳ ಚಿಂತೆಯೊಂದೂ ಇಲ್ಲದೆ ನೀವುಗಳು ನಿಮ್ಮ ನಿಮ್ಮ ಧರ್ಮಗಳನ್ನೂ ವೃತ್ತಿಗಳನ್ನೂ ನಿರಾತಂಕವಾಗಿ ಸಾಗಿಸಿಕೊಂಡು ಹೋಗಬಹುದು. ಅನೇಕ ಶತಮಾನಗಳಿಂದಲೂ ಎಷ್ಟೋ ಮತಸ್ಥ ಯಾತ್ರಿಕರುಗಳು ಇಲ್ಲಿಗೆ ಬಂದು ದೈವಪ್ರಾರ್ಥನೆಯನ್ನು ಮಾಡುತ್ತಲಿರುವರು. ಈ ಭೂಮಿಯು ಅತ್ಯಂತ ಪವಿತ್ರವಾದುದು. ಅದುಕಾರಣ ಇಲ್ಲಿಯ ದೇವಾಲಯಗಳು, ಸ್ಮಾರಕಚಿಹ್ನೆಗಳು, ಪುಣ್ಯಸ್ಥಳಗಳು, ಪ್ರಾರ್ಥನಾಲಯಗಳು ಮೊದಲಾದ ಪವಿತ್ರಸ್ಥಳಗಳೆಲ್ಲಾ ಅವುಗಳ ಅನಾದಿಯಾದ ಮರ್ಯಾದೆಗೂ, ನಂಬುಗೆಗೂ ಅನುಗುಣವಾಗಿರುವಂತೆಯೇ ಮುಂದೆಯೂ ಸಂರಕ್ಷಿಸಲ್ಪಡುವುವು" ಎಂಬ ಅಭಿಪ್ರಾಯವಿದ್ದಿತು. ಇದನ್ನು ಕೇಳಿ ಪುರಜನರೆಲ್ಲಾ ಸಂತೋಷಧ್ವನಿಗಳನ್ನು ಮಾಡಿದರು. ಹೀಗೆ ತಾವು ಹಜ್ಜೆಯಿಟ್ಟೆಡೆಯಲ್ಲೆಲ್ಲಾ ಆಂಗ್ಲ ಮಹಾಜನರು ಆಯಾ ಸ್ಥಳೀಯ ಧರ್ಮಾಚಾರಗಳನ್ನು ಭ್ರಷ್ಟಗೊಳಿಸದಂತೆ ಕಾಪಾಡುತ್ತ ಬರುವುದರಿಂದಲೇ ಪ್ರಪಂಚದಮೇಲೆಲ್ಲಾ ಅತಿ ವಿಶಾಲವಾದ ರಾಜ್ಯಸಂಪತ್ತಿಯನ್ನು ಪಡೆದು ಜಗದ್ವಿಖ್ಯಾತರಾಗಿ ಮೆರೆಯುತ್ತಿರುವರಲ್ಲವೆ?

ಪತ್ರವ್ಯವಹಾರ.

ಗುಂಡ್ಲುಪೇಟೆ ತಾ|| ಕಲ್ಲಹಳ್ಳಿಯ ಪಟೇಲ್ ಮ|| ರಾ|| ಚಿಕ್ಕಮಲ್ಲಪ್ಪನವರ ತಂದೆಯವರಾದ ಮಲ್ಲಪ್ಪನವರು ಕಳೆದ ಆಶ್ವಯುಜಮಾಸದ ಬ|| ೫ ರಲ್ಲಿ ಶಿವಾಧೀನರಾದರು. ಇವರಿಗೆ ಅವಸಾನಕಾಲದಲ್ಲಿ ೧೦೬ ವರ್ಷ ವಯಸ್ಸಾಗಿದ್ದಿತು. ಆದರೂ ಅವರ ದಂತಪುಷ್ಟಿಯೂ ದೇಹದಾರ್ಢ್ಯವೂ ಬಹಳ ಚೆನ್ನಾಗಿದ್ದಿತು. ಇವರಿಗೆ ಮ||ಚಿಕ್ಕಮಲ್ಲಪ್ಪನವರೊಬ್ಬರೇ ಪುತ್ರರು. ಇವರ ಆರಾಧನೆಯನ್ನು ಮ|| ಪ|| ಚಿಕ್ಕಮಲ್ಲಪ್ಪನವರೇ ವಿಶೇಷ ಹಣವನ್ನು ವೆಚ್ಚಮಾಡಿ ೧೪ ದಿನಗಳವರೆಗೆ ಬಹಳ ವಿಜೃಂಭಣೆಯಿಂದ ನಡೆಯಿಸಿ, ಬಹುದೂರಪ್ರದೇಶಗಳಿಂದ ಬಂದಿದ್ದ ಮಠಪತಿಗಳಿಗೂ, ಜಂಗಮರಿಗೂ ಭೂರಿದಕ್ಷಿಣೆಯನ್ನು ಕೊಟ್ಟು, ಮೃಷ್ಟಾನ್ನದಿಂದ ತೃಪ್ತಿಗೊಳಿಸಿದರು. ಅಲ್ಲದೆ ಬೆಂಗಳೂರಲ್ಲಿರುವ ವೀರಶೈವ ವಿದ್ಯಾವರ್ಧಕ ಫಂಡಿಗೆ ೫ ರೂ. ಗಳನ್ನು ಕಾಣಿಕೆಯಾಗಿ ತೆಗೆದು ಕಳುಹಿಸಿಕೊಟ್ಟರೆಂದು ತಿಳಿಯಸಲು ಹರ್ಷವಾಗುತ್ತದೆ. ಸ್ಥಳಿಕ.

ಗುಂಡ್ಲುಪೇಟೆ ತಾ|| ಮಾದಾಪಟ್ಟಣಕ್ಕೆ ಉತ್ತರದೇಶದಿಂದ ಬಂದು ಅಲ್ಲಿ ವಾಸವಾಗಿದ್ದ ಸಿದ್ಧಪ್ಪಸ್ವಾಮಿಗಳವರು ಇದೇ ಗ್ರಾಮದಲ್ಲಿ ೩೦೦೦ ರೂ. ಗಳ ವ್ಯಯದಿಂದ ಒಂದು ಸ್ಕೂಲು ಮನೆಯನ್ನೂ, ಸಿಹಿನೀರಿನ ಬಾವಿಯನ್ನೂ ಮತ್ತೂ ಪರಸ್ಥಳದ ಜನರಿಳಿದುಕೊಳ್ಳಲು ಒಂದು ಸತ್ರವನ್ನೂ ಕಟ್ಟಿಸಲು ಸಂಕಲ್ಪಿಸಿ ಅರ್ಧಮಟ್ಟಿಗೆ ಕೆಲಸವನ್ನು ಮಾಡಿಸಿದ್ದರು. ಅವರೆ ಅಕಸ್ಮಾತ್ತಾಗಿ ರೋಗಗ್ರಸ್ತರಾಗಿ ಶಿವಾಧೀನರಾದುದರಿಂದ ಇದೇ ಗ್ರಾಮದ ಪಟೇಲ್ ಮ|| ರಾ|| ಬಸಪ್ಪನವರು ಅರ್ಧಾಂಗನಾಗಿದ್ದ ಈ ಕಟ್ಟಡಗಳ ಕೆಲಸವನ್ನು ಕೈಕೊಂಡು ಬಹಳ ಶ್ರಮವನ್ನೂ ಶ್ರದ್ಧೆಯನ್ನೂ ವಹಿಸಿ ಪೂರ್ಣಗೊಳಿಸಿ, ಇವುಗಳ ಆರಂಭೋತ್ಸವವನ್ನು ಕಳೆದ ನವಂಬರ್ ತಾ|| ೩೦ ರಲ್ಲಿ ತಾಲ್ಲೂಕು ಅಮಲ್ದಾರರ ಮೂಲಕ ಬಹಳ ವಿಜೃಂಭಣೆಯಿಂದ ನಡೆಯಿಸಿ ಸ್ವಾಮಿಗಳ ಸಂಕಲ್ಪವನ್ನು ಪೂರ್ತಿಗೊಳಿಸಿ ಕೀರ್ತಿವಂತರಾದರೆಂದು ತಿಳಿಸಲು ಬಹಳ ಹರ್ಷವಾಗುತ್ತದೆ. ಈ ಸಮಾರಂಭದಲ್ಲಿ ವೀರಶೈವ ವಿದ್ಯಾವರ್ಧಕ ಫಂಡಿಗೆ ೫ ರೂ. ಗಳನ್ನು ಕಳುಹಿಸಿರುವರು. ಪ್ರತ್ಯಕ್ಷದರ್ಶಿ.

ಕಾಶೀ ವಿಶ್ವವಿದ್ಯಾಲಯ.

ನಮ್ಮ ಭರತಖಂಡದಲ್ಲಿ ಆಂಗ್ಲ ಸಾರ್ವಭೌಮರ ಆಳಿಕೆಯಲ್ಲಿ ಯಾವತ್ತೂ ವಿದ್ಯೆಗಳು ಹಾಗೂ ಕಲಾಕೌಶಲ್ಯಾದಿಗಳು ಉನ್ನತಸ್ಥಿತಿಯನ್ನಡರುತ್ತಿರುವುವೆಂಬುದು ಯಾರಿಗೂ ಗೊತ್ತಿಲ್ಲದ ವಿಷಯವಲ್ಲ. ಈ ವಿದ್ಯಾವ್ಯಾಪನೆಗಾಗಿ ಸ್ಕೂಲು, ಹಾಯಸ್ಕೂಲು, ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟಿರುವುವು. ಆದಾಗ್ಯೂ ಕೆಲವು ಮಹತ್ವದ ಕಲಾಕೌಶಲ್ಯಾದಿಗಳನ್ನು ಕುರಿತು ದೊಡ್ಡ ಪರೀಕ್ಷೆಗಳನ್ನು ಕೊಡಲಿಕ್ಕೆ ನಮ್ಮ ಜನರು ಇಂಗ್ಲೆಂಡು, ಅಮೇರಿಕಾ, ಜಪಾನ್ ಮೊದಲಾದ ದೇಶಗಳಿಗೆ ಹೋಗಬೇಕಾಗುತ್ತಿತ್ತು. ಹೀಗಾಗೋಣವರಿಂದ ಎಷ್ಟೋ ಜನರು ಮತಭ್ರಷ್ಟರಾಗಿ ಮತಾಂತರವನ್ನು ಸೇರಿದರು. ಈ ವಿಷಯವನ್ನರಿತು ಧರ್ಮಜಾಗರೂಕರಾದ ಶ್ರೀ ದರಭಂಗಾ ಮಹಾರಾಜರು ಹಾಗೂ ಪಂಡಿತ ಮದನಮೋಹನ ಮಾಲವಿಯಾ ಇವರು ತಮ್ಮ ದೀರ್ಘಪ್ರಯತ್ನದಿಂದ ಕೋಟ್ಯಾವಧಿ ರೂ. ಗಳನ್ನು ಕೂಡಿಸಿ ನಮ್ಮ ಖಂಡದಲ್ಲಿಯೇ ಸಕಲ ವಿದ್ಯೆಗಳನ್ನು ಕಲಿಯುವಂತೆಯೂ ಆ ಮೂಲಕ ದೊಡ್ಡದೊಡ್ಡ ಪರೀಕ್ಷೆಗಳಾಗುವಂತೆಯೂ ಸರ್ಕಾರದಿಂದ ಅಪ್ಪಣೆಯನ್ನು ಪಡೆದುಕೊಂಡು ಶ್ರೀ ಕ್ಷೇತ್ರ ಕಾಶಿಯಲ್ಲಿ ಹಿಂದೂ ವಿಶ್ವವಿದ್ಯಾಲಯವನ್ನು ೧೯೧೬ ನೆಯ ಫೆಬ್ರವರಿ ೪ ನೆ ತಾರೀಖಿನ ದಿವಸ ಶ್ರೀಮನ್ ಹಾರ್ಡಿಂಜ್ ಪ್ರಭುಗಳಿಂದ ಸ್ಥಾಪನಗೊಳಿಸಿದರೆಂಬ ವಿಷಯವು ಸಮಸ್ತ ಭಾರತೀಯರಿಗೂ ಗೊತ್ತಿದ್ದುದೇ ಆಗಿದೆ. ಈಗ್ಗೆ ೧೩೪೩ ವರ್ಷಗಳ ಪೂರ್ವದಲ್ಲಿ ಕಾಶಿಯ ರಾಜನಾದ ಜಯನಂದದೇವನಿಂದ ಶ್ರೀ ವಿಶ್ವಾರಾಧ್ಯ ಜಗದ್ಗುರು ಧರ್ಮಪೀಠಕ್ಕೆ ಕಾಣಿಕೆಯಾಗಿ ಬಂದಿರುವ ಜಂಗಮಪುರವೆಂಬ ಗ್ರಾಮದ ಕೆಲವು ಜಮೀನುಗಳಲ್ಲಿ ಈ ಹಿಂದೂ ವಿಶ್ವವಿದ್ಯಾಲಯ ಸ್ಥಾಪನೆಯು ಆಗಿರುತ್ತದೆ. ಈ ವಿಶ್ವವಿದ್ಯಾಲಯದಲ್ಲಿ ಎಲ್ಲ ತರದ ವಿದ್ಯೆಗಳ ಪರೀಕ್ಷಾ ನಿಯಮಗಳು ಮಾಡಲ್ಪಟ್ಟಿರುವುವು. ಹಾಗೂ ಸಂಸ್ಕೃತ ಪರೀಕ್ಷೆಗಾಗಿ ವೇದ, ವೇದಾಂಗ, ಪುರಾಣ, ಧರ್ಮಶಾಸ್ತ್ರ, ನ್ಯಾಯ, ವೇದಾಂತಾದಿ ಸರ್ವಶಾಸ್ತ್ರಗಳ ನೇಮಣೂಕವೂ ಆಯಿತು. ಇದಲ್ಲದೆ ಜೈನ, ವೈಷ್ಣವ ಮೊದಲಾದ ಮತಗ್ರಂಥಗಳನ್ನು ಆ ಆ ಧರ್ಮಗುರುಗಳು ತಮ್ಮ ಸತತಪ್ರಯತ್ನದಿಂದ ಪರೀಕ್ಷೆಗಾಗಿ ಸೇರಿಸಿದರು. ಅದರಂತೆ ನಮ್ಮ ವೀರಶೈವ ಧರ್ಮಗುರುವರ್ಯರಾದ ಇಲ್ಲಿಯ ಶ್ರೀ ಜಗದ್ಗುರುಗಳು ಆಲೋಚನೆ ಮಾಡಿ ಪೂರ್ವದಲ್ಲಿ ಶ್ರೀ ಜಗದ್ಗುರು ಮಹಾಸಂಸ್ಥಾನದ ಪರಿಯಿಂದ ಎಚ್. ಎಚ್. ದರಭಂಗಾ ಮಹಾರಾಜರಿಗೂ ಹಾಗೂ ಪಂಡಿತ ಮದನಮೋಹನ ಮಾಲವಿಯಾ ಇವರಿಗೂ ವೀರಶೈವ ದರ್ಶನ ಗ್ರಂಥಗಳನ್ನು ಪರೀಕ್ಷೆಗಾಗಿ ಹಿಂದೂ ವಿಶ್ವವಿದ್ಯಾಲಯದಲ್ಲಿ ಸೇರಿಸಿಕೊಳ್ಳಬೇಕೆಂದು ಆಶೀರ್ವಾದ ಪತ್ರಗಳನ್ನು ಬರೆಸಿದರು. ಆ ಪತ್ರದ ಸಂಗಡ ಪರೀಕ್ಷೆಗಾಗಿ ಇಡತಕ್ಕ ವೀರಶೈವ ಮತಗ್ರಂಥಗಳ (ಶ್ರೀಕಂಠಭಾಷ್ಯ, ಶ್ರೀಕರಭಾಷ್ಯ, ದಶೋಪನಿಷಚ್ಛೈವಭಾಷ್ಯ, ಮಹಾನಾರಾಯಣೋಪನಿಷಚ್ಛೈವಭಾಷ್ಯ, ಪುರುಷಸೂಕ್ತಶೈವಭಾಷ್ಯ, ಕ್ರಿಯಾಸಾರ, ಶಿವಾದ್ವೈತಮಂಜರಿ, ಶಿವಸೂತ್ರವಿಮರ್ಶಿನಿ, ಲಿಂಗಧಾರಣ ಚಂದ್ರಿಕಾ, ಶಿವಾದ್ವೈತನಿರ್ಣಯ, ತತ್ವಪ್ರಕಾಶ, ಶತಸೂತ್ರರತ್ನ, ಅನುಭವಸೂತ್ರ, ವೇದಾಂತಸಾರ ವೀರಶೈವ ಚಿಂತಾಮಣಿ, ಸಿದ್ಧಾಂತಶಿಖಾಮಣಿ, ರತ್ನತ್ರಯಪರೀಕ್ಷಾ, ವಿಶೇಷಾರ್ಥಪ್ರಕಾಶಿಕಾ, ಮಾಚಿದೇವಮನೋವಿಲಾಸ, ಶೈವರತ್ನಾಕರ, ಶ್ರುತಿಸಾರಭಾಷ್ಯ, ಶಿವಜ್ಞಾನಬೋಧ, ಪಾಶುಪತತಂತ್ರ, ಸುಪ್ರಭೇದಾಗಮ, ವೀರಶೈವಾದರ್ಶ) ಪಟ್ಟಿಯನ್ನೂ ಕೂಡ ಕಳುಹಿಸಿತ್ತು. ಈ ವಿಷಯವನ್ನು ವಿಚಾರಮಾಡಿ ಹಿಂದೂ ವಿಶ್ವವಿದ್ಯಾಲಯದ ಮುಖ್ಯಾಧಿಕಾರಿಗಳು, ಇವನ್ನೂ ಪಠನಕ್ಕೆ ಇಡುವೆವೆಂಬ ಉತ್ತರದ ಪತ್ರಿಕೆಯನ್ನು ತಾ|| ೨೪-೧೧-೧೯೧೭ ನೆಯ ದಿವಸ ಶ್ರೀ ಜಗದ್ಗುರು ಮಹಾಸಂಸ್ಥಾನಕ್ಕೆ ಬರೆದುಕೊಂಡಿರುತ್ತಾರೆ. ಈ ವಿಷಯವನ್ನರಿತು ಯಾವ ಮತಾಭಿಮಾನಿಯು ಆನಂದವುಳ್ಳವನಾಗಲಿಕ್ಕಿಲ್ಲ? ಈ ಹಿಂದೂ ವಿಶ್ವವಿದ್ಯಾಲಯದಲ್ಲಿ ಸಕಲ ವಿದ್ಯೆಗಳನ್ನೂ ಕಲಿಯತಕ್ಕ ಸಮಸ್ತ ವೀರಶೈವ ವಿದ್ಯಾರ್ಥಿಗಳ ವಸತಿ ಮೊದಲಾದುವುಗಳ ಬಗ್ಗೆ ಇಲ್ಲಿಯ ಶ್ರೀ ಜಗದ್ಗುರು ಭಗವಚ್ಚರಣರಿಂದ ಜಗದ್ಗುರು ಪಂಚಾಚಾರ್ಯ ಸ್ಮಾರಕವಾಗಿ ಒಂದು ಘನತರವಾದ ಗುರುಕುಲವನ್ನು ಸ್ಥಾಪನಮಾಡುವ ಕಾರ್ಯವು ನಡೆಸಲ್ಪಟ್ಟಿರುವುದು. ಯಾವತ್ತು ವೀರಶೈವ ಮತೀಯ ವಿದ್ಯಾರ್ಥಿಗಳು ಆಚಾರಾದಿಗಳಿಂದ ಯುಕ್ತರಾಗಿ ಗುರುಕುಲದಲ್ಲಿದ್ದು ವಿದ್ಯೆಯನ್ನು ಸಂಪಾದನೆಮಾಡಿಕೊಳ್ಳಬೇಕೆನ್ನುವುದೇ ಇದರ ಮುಖ್ಯೋದ್ದೇಶವು. **ಈ ಗುರುಕುಲದಲ್ಲಿ ಯಾವತ್ತು ಅನ್ನಾದಿಗಳ ಬಗ್ಗೆ ವ್ಯವಸ್ಥೆಯು ಮಾಡಲ್ಪಡುವುದು. ಈ ತೆರದ ಮತಕಾರ್ಯಗಳನ್ನು ನೋಡಿ ವಿಚಾರಿಸಿದರೆ ಜಗತ್ಪಾಲಕರಾದ ಆ ಜಗದ್ಗುರು ಪಂಚಾಚಾರ್ಯರ ಕೃಪೆಯೇ ಮುಖ್ಯ ಕಾರಣವೆನ್ನಬೇಕಾಗುತ್ತದೆ.**

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ ಯೋಗಸಹಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ನಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
6 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ. 3

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ. ಬರ್ಮ, ಸಿಲೋನ್, ಮಲೆಯಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾಕುಮಾಕಿಗೂ ವೈದ್ಯರ ಸಮಯವನ್ನು ಕಾದು ನೋಡೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂಪ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ ಎಲ್. ವ್ಹಿ. ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಲ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ಕನ್ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ವಿಷಕಟ್ಟಿಲಿಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ. ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸದೌಷಧಗಳು ದೊರೆಯುತ್ತವೆ. ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕುಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ಸೀರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದುವಿನೊಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹವದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಾಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಸ್ವಾಸ, ಅದಗ್ಯೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇತ್ಸಿಜಡ್ಡು, ಗುದ್ದವ್ವನ ಬೇನೆ, ಹುರುಕು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊರಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇವರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರದಿರುತ್ತವೆ. ಈ ಆರೋಗ್ಯಬಿಂದು ತಯಾರಾಗಿ (೬) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ. ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವಿರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಬತ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕುಶಫಾ ಶೋಧಕ, ಹೆಡ್ ಆಫೀಸ
40 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲಿ ೩ ತೆಗೆದುಕೊಂಡರೆ ೧ ಬಾಟ್ಲಿ ಕಮಿಷನ್ ಕೊಡುತ್ತೆ.

ಡಾ|| ಎಂ. ಪೀಟರ್ಸ್‌ಯವರ

ಸಾಂಡೋ ಆಯಿಲ್.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯರ ದೂಷಿತವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ಮೈಥುನದಿಂದಲೂ, ಅತ್ಯಂತ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕುಳಿತುಕೊಂಡೇ ಇರುವುದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ ಶರೀರದ ಎಲ್ಲಾ ನಾಡಿಗಳೂ

ಬಲಹೀನವಾಗುವುವು. ಕೆಲವರು ಬಾಲ್ಯದಲ್ಲಿಯೇ ಇಂಥ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖದಲ್ಲಿ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಅಭಾಗ್ಯರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು 7 ದಿನಗಳು ಮೇಲೆ ಸವರುವುದರಿಂದ ಗುಣವಾಗಿ ಪುರುಷವು ಬಲಹೀನವಾಗಿದ್ದರೂ ಸರಿಪಡಿಸುವುದು. ಕ್ರಯ ಶೀಶೆ 1 ಕ್ಕೆ 1.0.0.

ವಿಳಾಸ:—ಡಾ|| ಎಂ. ಪೀಟರ್ಸ್,
2 ೪ ಇರುಳಪ್ಪನ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿಃ	೦—೮—೦
ಛಾರುಶೀಲೆಚರಿತ್ರೆ	೦—೫—೦
ಹರಿದಾಸಿ	೦—೫—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲಿ ದೊರೆಯುತ್ತವೆ.

ಕುರುಬರ ಕೈಪಿಡಿ.

ಕುರುಬರಿಗೂ ಒಕ್ಕಲಿಗರಿಗೂ ಜರಗಿದ ಮತಸಂಬಂಧ ವ್ಯಾಜ್ಯದಲ್ಲಿ ಶಾಸ್ತ್ರಸ್ಮೃತಿಗಳ ಪರಿಶೀಲನೆಯಿಂದ ಘನ ಮ್ಯಾಜಿಸ್ಟ್ರೇಟರವರು ತೀರ್ಮಾನಮಾಡಿರುವದು ಅಚ್ಚಾಗಿ ಸಿದ್ಧವಾಗಿದೆ. ಕ್ರಯ ೧೦ ಆಣೆ ಮಾತ್ರ!

ಆಚಾರಕಲಾನಿಧಿ.

ವೇದ,ಶಾಸ್ತ್ರ ಮತ್ತು ಚರಿತ್ರೆಗಳ ಆಧಾರದಿಂದ - ಕುರುಬರಜಾತಿ ನಡಾವಳಿ, ಆಚಾರಗಳ, ಇವರಲ್ಲಿ ರಾಜ್ಯಧರ್ಮ ಸ್ಥಾಪಕರಾದ ಪೂರ್ವೀಕರ ಸಂಗತಿಗಳ ೧೯೨ ಪುಟದ ದೊಡ್ಡ ಪುಸ್ತಕ ಅಚ್ಚಾಗುತ್ತಲಿದೆ. ಈ ಡಿಶಂಬರ್ ತಿಂಗಳೊಳಗಾಗಿ ಬರುವ ಆರ್ಡರುಗಳಿಗೆ ಮಾತ್ರ ೧೨ ಆಣೆ ! (ಹಾಸಲು ಬೇರೆ) ಮುಂದೆ ಹೆಚ್ಚಾಗುವದು.

12 ವಿಳಾಸ—ಎಂ. ಎಲ್. ಲಿಂಗಪ್ಪ ಎಡಿಟರ್,
ಬೆಂಗಳೂರು ಸಿಟಿ.

ಫುಕಟ] [ಫುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಫುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು !

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ.೧ಬೇ. ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ.೧ಬೇ. ೩ಪೈ. ೧೦೦ ಕ್ಕೆ ೧-೪-೦

೩. ಹೇನುತೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ.೧ಬೇ. ೩ಪೈ. ೧೦೦ಕ್ಕೆ ೧-೮-೦

೪. ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ—ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ ! ಚನ್ನಾಗಿ ಲಕ್ಷದಲ್ಲಿಡಿರಿ !!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
6 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೭ ನೆಯ ಇಸವಿ ಡಿಶಂಬರ್ ತಾ|| ೨೩ ರಿಂದ ೧೯೧೭ ನೆಯ ಡಿಶಂಬರ್ ತಾ|| ೨೯ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾರ್ಗಶಿರ ಶು|| ದಶಮಿಯಿಂದ ಮಾರ್ಗಶಿರ ಬ|| ಪಾಡ್ಯಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ತೇದಿ
23	ಭಾನು	ದಶಮಿ	33-27	ಅಶ್ವಿನಿ	53-30	9
24	[1] ಸೋಮ	ಏಕಾದಶಿ	28-51	ಭರಣಿ	50-46	10
25	ಮಂಗಳ	ದ್ವಾದಶಿ	25-6	ಕೃತ್ತಿಕೆ	48-53	11
26	[2] ಬುಧ	ತ್ರಯೋ	22-16	ರೋಹಿಣಿ	48-10	12
27	[3] ಗುರು	ಚತುರ್ದ	20-35	ಮೃಗಶಿರೆ	48-33	13
28	[4] ಶುಕ್ರ	ಪೌರ್ಣ	20-6	ಆರಿದ್ರೆ	50-1	14
29	ಶನಿ	ಪಾಡ್ಯ	21-2	ಪುನರ್ವಸು	52-53	15

(1) ಸರ್ವತ್ರ ಮುಕ್ಕೋಟಿ ಏಕಾದಶೀ, ಶ್ರೀರಂಗದಲ್ಲಿ ಕೊಡಾರೋತ್ಸವಾರಂಭಃ. (2) ಹನುಮಜ್ಜಯಂತೀ. (3) ದತ್ತಾತ್ರೇಯಜಯಂತೀ, ಮಾರ್ಗಶಿರ ಲಕ್ಷ್ಮೀವ್ರತಂ, ಅಂಧಕಾಸುರಸಂಹಾರ. (4) ಪೂರ್ಣಿಮಾತಿಥಿಃ, ಆರಿದ್ರೋತ್ಸವಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M 124.

ಮೈಸೂರು ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರೆಯಿಂಸದಾಪೂರಿಗೆ ಗೌರೀಶಾನುಕಂಪೋಜ್ಜ್ವಲಂ ||

[ವಾರ್ಷಿಕಚಂದಾ ೧-೦-೦] [ಅಂಚೆವೆಚ್ಚ ಸೇರಿ ೧-೧೪-೦]

ಸಂಪುಟ ೩೦) ಮೈಸೂರ್ ಸ್ಟಾರ್ ಸರ್ ೧೯೧೭ ನೆಯ ಇಸವಿ ಡಿಶಂಬರ್ ತಾರೀಖು ೩೦ ನೆಯ ಭಾನುವಾರ. (ಸಂಚಿಕೆ ೫೨

REGISTERED NO M. 124.

ಶ್ರೀ ಶಿವಯೋಗಿಗಳ ಸಂಘ

ಭಾಗ್ಯಶಾಲಿಜನರು ಹಣವು ... ಮಹಾ ಶಿವಯೋಗಿಗಳ ದರ್ಶನವನ್ನು ತಕ್ಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದ ಕಾರಣ ನಾವು ಪ್ರಸಿದ್ಧರಾದ ಶ್ರೀ ಜ|| ಗು|| ಚಿತ್ರದುರ್ಗ, ಕಾಶಿ, ಗದಗ, ಶ್ರೀ ಶಿವಯೋಗಿ ಅಥಣಿ. ಹಾನಗಲ್, ಬಿಳೂರ, ಹಾವೇರಿ, ಹಾಳಕೇರಿ, ಮುಳಗುಂದ, ಬಿದರಿ, ಅನಂತಪೂರ, ಮುಂತಾದ ೧೮ ಮಹಾಸ್ವಾಮಿಗಳ ಫೋಟೋಗಳು ಕೂಡಿಸಿ ಚಿತ್ತಾಕರ್ಷಕವಾದವಕ್ಸೆಯಲ್ಲಿ ತೆಗೆದು ಇಟ್ಟುತ್ತೇವೆ. ಇದರ ಬಗ್ಗೆ ಬಂದಿರುವ ನೂರಾರು ಅಭಿಪ್ರಾಯಗಳ ಪೈಕಿ ಒಂದು ಕೊಡುತ್ತೇವೆ.

ಧಾರ್ವಾಡ ಚಂದ್ರೋದಯ:—ಶ್ರೀ ವೀರಶೈವ ಶಿವಯೋಗಿ ಸಂಘ ಇದರಲ್ಲಿ ೧೮ ಜನ ಶಿವಯೋಗಿಗಳ ಸುಂದರ ಚಿತ್ರ ಇರುತಿದ್ದು ಇದು ಪ್ರತಿಯೊಬ್ಬ ವೀರಶೈವನ ಮನೆಯಲ್ಲಿರುವುದಕ್ಕೆ ಯೋಗ್ಯವಾಗಿರುತ್ತದೆ. ಪ್ರಾತಃಕಾಲಕ್ಕೆ ಎದ್ದುಕೂಡಲೇ ಈ ಎಲ್ಲ ಶಿವಯೋಗಿಗಳ ದರ್ಶನವು ಒಂದು ಸಲಕ್ಕೆ ಆಗುತ್ತಿರುವುದರಿಂದ ಈ ಸುಂದರ ಚಿತ್ರಪಟವನ್ನು ಸಂಗ್ರಹಿಸಲಿಕ್ಕೆ ಯಾವ ವೀರಶೈವನೂ ತಪ್ಪಬಾರದೆಂಬು ನಾವು ಸಂತೋಷಪೂರ್ವಕವಾಗಿ ಶಿಫಾರಸ್ಸು ಮಾಡುತ್ತೇವೆ. ಕ್ರಯ ೧ ಪ್ರತಿಗೆ ೮ ಆಣೆ ಟಪಾಲ್ ಖರ್ಚು ಬೇರೆ.

ಶ್ರೀ ಕಲ್ಯಾಣ ಬಸವೇಶ್ವರ ಖಾಸಫೋಟೋ.

ಯಾವ ಮಹಾತ್ಮರು ಜೈನ, ಚಾರ್ವಾಕ, ಮುಂತಾದ ಮತದ ಖಂಡನ ಮಾಡಿ ನಮ್ಮ ವೀರಶೈವ ಧರ್ಮ ಶ್ರೇಷ್ಠವೆಂದು ಸಿದ್ಧಮಾಡಿ, ವೀರಶೈವ ಧರ್ಮದ ಜೀರ್ಣೋದ್ಧಾರಮಾಡಿ ಝುಂಡೆ ಹಚ್ಚಿದ ಅದ್ವಿತೀಯ ಶಂಭುವಿನ ಅವತಾರಿಯಾದ "ಶ್ರೀ ಕಲ್ಯಾಣ ಬಸವೇಶ್ವರದೇವರ" ಅರಿವಿ ಮೇಲೆ ತೆಗೆದಿದ್ದ ಖಾಸ ಚಿತ್ರ ವೀರಶೈವರ ಸುದೈವದಿಂದೇ ಸಿಕ್ಕಿರುತ್ತದೆ. ಆದರೆ ಇಂಥ ಮಹಾತ್ಮರ ಫೋಟೋ ರೂಪದಿಂದೇ ನಿತ್ಯದರ್ಶನ ಮಾಡುವುದು ನಮ್ಮ ಅವ್ಯಕರ್ತವ್ಯ ಅದೆ ಫುಲ್‌ಸ್ಕೈ|| ೧ ಕ್ಕೆ ರೂ. ೧ ಕ್ಯಾ|| ಸ್ಕೈ|| ೧ ಕ್ಕೆ ೮ ಆಣೆ ಸೀಮೆಯಿಂದ ತಯಾರಿಸಿದ ಪ್ರತಿ ೧ ಕ್ಕೆ ೮ ಆಣೆ ಮೇಲೆ ಕೈ ಬಣ್ಣದ್ದು ರೂ. ೧ ಟಪಾಲ್ ಖರ್ಚು ಬೇರೆ.

ಶ್ರೀಪಂಚಮುಖ ಪರಮೇಶ್ವರ:—ಇದುವರೆಗೂ ಪ್ರಕಟ ಆಗದಂಥ ಮತ್ತು ಸಂಗ್ರಹಕ್ಕೆ ಯೋಗ್ಯವಾದ ಚಿತ್ತಾನಂದ ಆಗುವ ಫೋಟೋ ಇರುತ್ತದೆ ಫುಲ್‌ಸೈಜು ೧ ಕ್ಕೆ ರೂ. ೧ ಕ್ಯಾಬಿನೆಟ್‌ಸೈಜು ರೂ. ೦-೮-೦ ಮೇಲೆ ಕೈ ಬಣ್ಣದ್ದು ರೂ. ೦-೧೨-೦ ಟಪಾಲ್ ಖರ್ಚು ಬೇರೆ.

ಶ್ರೀ ವಿಷ್ಣುಸುದರ್ಶನಲಾಭ:—ಶ್ರೀ ವಿಷ್ಣುದೇವರು ಶಿವಾರ್ಚನೆ ಮಾಡಿ ತನ್ನ ನೇತ್ರ ಕಮಲವನ್ನು ವಹಿಸಿ ಶಿವಕೃಪಾಪಾತ್ರನಾಗಿ ಸುದರ್ಶನ ಚಕ್ರ ಪಡೆಕೊಂಡ ಫೋಟೋ. ಇದು ಯಾವತ್ತು ಶಿವಭಕ್ತರು ಸಂಗ್ರಹಿಸಲಿಕ್ಕೆ ಅತ್ಯಾವಶ್ಯಕ ಅದೇ ಫು|| ಸೈ|| ೧ ಕ್ಕೆ ರೂ. ೧ ಕ್ಯಾ|| ಸೈ|| ಆಣೆ ೮ ಮೇಲೆ ಕೈ ಬಣ್ಣದ್ದು ೧೨ ಆಣೆ ಟಪಾಲ್ ಖರ್ಚು ಬೇರೆ.

ಇವುಗಳ ಹೊರ್ತು ನಮ್ಮಲ್ಲಿ ೧ ಶ್ರೀ ಕಾಶೀಕ್ಷೇತ್ರದರ್ಶನ ೨ ಸೊಲ್ಲಾಪುರ ಸಿದ್ಧರಾಮೇಶ್ವರ ೩ ಕಲ್ಬುರ್ಗಿ ಶರಣಬಸವೇಶ್ವರ ಶ್ರೀ ಕಾಶೀವಿಶ್ವನಾಥದೇವರ ಖಾಸಾಫೋಟೋ ಮುಂತಾದ ದೇವರು ಮತ್ತು ಮಹಾಸ್ವಾಮಿಗಳು ಶಿವಯೋಗಿಸತ್ಪುರುಷರ ಫೋಟೋ ಬೇರೆ ಬೇರೆ ಸಿಕ್ಕುತ್ತವೆ.

ಪುರವುರಿಗೇ ಏಜಂಟರು ಬೇಕು ೦-೧-೦ ಸ್ಟಾಂಪು ಕಳುಹಿಸಿ ಖುಲಾಸಾ ತಿಳುಹಿಕೊಳ್ಳಿರಿ.

ಗಂಗಪ್ಪಾ ಜಿರಗೇ ಮಾಲಿಕ, ಶ್ರೀ ಶಾರದಾ ಫೋಟೋ ಕಂಪನಿ,
11 ಸೊಲ್ಲಾಪುರ ಸಿಟಿ.

ಫುಕಟ! ೨೨ ಪುಟಗಳ ಪುಸ್ತಕವು. ಫುಕಟ!!

2 ಅಂಚೇ ಹಾಸಲು ಸಹ ಕೊಡಬೇಕಾಗಿಲ್ಲ.

ಒಕ್ಕಲಿಗರ ಜೀವನ ಸರ್ವಸ್ವವಾಗಿರುವ ದನಕರುಗಳ ಪ್ರತಿಯೊಂದು ರೋಗದ ಕಾರಣ, ಲಕ್ಷಣ, ಪರೋಗೀ ದನಗಳ ಉಪಚಾರ ಇವುಗಳನ್ನು ವಿಶದವಾಗಿ ವಿವರಿಸಿದ "ಪಶುಸಂಜೀವನ" ವೆಂಬ ಸುಂದರವಾದ ಪುಸ್ತಕವನ್ನು ಏನೂ ಬೆಲೆಯಿಲ್ಲದೆ ಕಳುಹಿಸುವೆವು. ಪ್ರತಿಗಳು ಹೇರಳವಾಗಿವೆ. ತ್ವರೆಯಿಂದ ತರಿಸಿ ಓದಿರಿ.

ಸುಪ್ರಸಿದ್ಧ] ಶಾಂತವೀರ. [ಸುವಾಸಿಕ

ಹುರುಕಿನ ಔಷಧ.

ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ. ಖರ್ಚು ಬೇರೆ. ಒಮ್ಮೆಲೆ ೧೦೦ ಪೊಟ್ಟಣಗಳನ್ನು ತರಿಸಿಕೊಳ್ಳುವವರಿಗೆ ಅಂಚೇ ವೆಚ್ಚ ಸೇರಿ ೪—೮—೦.

ಕಣ್ಣುಬೇನೆಯ ಔಷಧ:—ಚೀಟು ೧ ಕ್ಕೆ ೩ ಪೈ. ೧೦೦ ಕ್ಕೆ ೧ ರೂಪಾಯಿ. ಟ. ಖರ್ಚು ೪೦೦ ಚೀಟುಗಳವರೆಗೆ ನಾಲ್ಕೇ ಆಣೆ.

ಹೇನು ವ ಶೀರು ನಾಶಕ ಚೂರ್ಣ:—ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೧—೮—೦. ಟ. ಖರ್ಚು ಬೇರೆ.

ಕ್ರಿಮಿನಾಶಕ ಚೂರ್ಣ (ಜಂತಿನ ಪುಡಿ):—ಚೀಟು ೧ ಕ್ಕೆ ೧ ಆಣೆ. ೨೫ ಕ್ಕೆ ೧—೨—೦. ಟ.ಖರ್ಚು ಬೇರೆ.

ಪ್ಲೇಗ್ ಪ್ರತಿಬಂಧಕ ಗುಳಿಗೆ:—೨೫ ಕ್ಕೆ ೧ ರೂಪಾಯಿ. ೧೦೦ ಕ್ಕೆ ೩ ರೂಪಾಯಿ. ಟ. ಖರ್ಚು ಬೇರೆ.

ಪಶುಸಂಜೀವಿನೀ (ದನಗಳ ಔಷಧ):—೧೦ ತೊಲೆಯ ಡಬ್ಬಿ ೧ ಕ್ಕೆ ೧ ರೂಪಾಯಿ. ಡಜನ್ನಿಗೆ ಟ. ಖರ್ಚು ಸಹ ೧೦—೦—೦.

ನಮ್ಮ ಔಷಧಾಲಯದಲ್ಲಿ ಎಲ್ಲಪ್ರಕಾರದ ಕಾಢೆ, ಚೂರ್ಣ, ಮಾತ್ರೆ, ಗುಗ್ಗುಲ, ಗುಟಿಕಾ ಮುಂತಾದ ಆಯುರ್ವೇದಿಕ ಔಷಧಗಳು ತಯಾರ ಅವೆ. ಯೋಗ್ಯ ಕ್ರಯಕ್ಕೆ ಕಳುಹಿಸುವೆವು.

ಸೂಚನೆ:—ನಮ್ಮೀ ಔಷಧಗಳನ್ನು ಕೊಂಡುಕೊಳ್ಳುವುದರಿಂದ ಪದೇ ಪದೇ ಹಣವನ್ನು ಕಳೆದುಕೊಳ್ಳುವುದು ತಪ್ಪುತ್ತದೆ. ಬೇಕಾದವರು ಬೇಕಾದಷ್ಟು ತರಿಸಿಕೊಳ್ಳಬಹುದು. ಅನೇಕ ಬೂಟಾಟಿಕೆಯ ಔಷಧಗಳನ್ನು ತರಿಸಿ ಮೋಸಹೋಗಬೇಡಿರಿ. ಆರ್ಯವೈದ್ಯಕ ತತ್ವಕ್ಕನುಸರಿಸಿ ನಡೆಯುವ ಕರ್ನಾಟಕ ಪ್ರಾಂತದೊಳಗಿನ ಒಂದೇ ಔಷಧಾಲಯವು.

(ತಂತೀ ವಿಳಾಸ) 'ಶಾಂತವೀರ' ಕಿತ್ತೂರ
ವಿಳಾಸ:—ಕರ್ನಾಟಕ ಜಂಗೀ ವನೌಷಧಾಲಯ, ಕಿತ್ತೂರ.
ಮಾಲಕರು—ಡಾಕ್ಟರ, ಎಸ್.ಆರ್. ಕಿತ್ತೂರ, "ಪಶುಸಂಜೀವಿನೀ" ಶೋಧಕರು,
ಪೋಸ್ಟ್ ಕಿತ್ತೂರ, ಜಿಲ್ಲಾ ಬೆಳಗಾಂವ.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4.0.0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವುದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು



ಮತ್ತು ಘಾಳಿ, ಧೂಳು, ನೀರದಂತೆ ಗ್ಲಾಸ್‌ಡೊಮು ಇರುವುದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕೆಳಗೆ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜರಾಕ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗೆಜ್ಜೆ ಅಡ್ಡಿಕೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 3, ಜರಾಕ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1 ಕ್ಕೆ ರೂ. 4.0.0.

ವಿಳಾಸ:—ವಿ. ಎ. ಎಸ್. ವಾಣಿ,
3 ಸಾಹುಕಾರ್‌ಪೇಟೆ, ಮದರಾಸ್.

ಉತ್ತಮ ವೀರಶೈವ ಗ್ರಂಥಗಳು.

ಸಿದ್ಧಾಂತ ಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವಸಿದ್ಧಾಂತಶಾಸ್ತ್ರ. ವೀರಶೈವ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೬ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜ ವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ವೃಷಭೇಂದ್ರವಿಜಯದಲ್ಲಿರುವ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.—ಬೆಲೆ ೧-೮-೦ ದ್ವಿತೀಯ ಮುದ್ರಣ ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶ ಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲಾಷ್ಟಾವರಣ, ಕರಣಹಸುಗೆ, ಪಂಚೀಕರಣ, ಕಾಲಜ್ಞಾನ, ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ ಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರ ಪುರಾಣಂ.—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ೬೩ ಶೀಲಗಳನ್ನೂ ನಿರೂಪಿಸುವ ದೊಡ್ಡ ಷಟ್ಪದಿ ಗ್ರಂಥ.

ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮ ಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣಕ್ಕೆ ೧-೩-೦.

ಸಂದರಪುರಾಣಂ-೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಯೋಗಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರತ್ನಾಕರ ೨ ಆಣೆ. ಶಂಕರಲಿಂಗಕಂದಂ ೧ ಆಣೆ.

ಎಲ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್.

೧೯೧೭ ನೆಯ ಇಸವಿ ಡಿಸೆಂಬರ್ ತಾ॥ ೩೦ ನೆಯ ಭಾನುವಾರ.

೮ ನೆಯ. ವೀರಶೈವ ಮಹಾಸಭೆ.

ದಾವಣಗೆರೆಯಲ್ಲಿ ನಡೆದ ಈ ಮಹಾಸಭೆಯ ನಡವಳಿಕೆಗಳೆಲ್ಲಾ ಈ ಸಂಚಿಕೆಯು ಬೇರೆ ಕಡೆಯಲ್ಲಿ ಪ್ರಕಟಿಸಿರುವ ವಿವರಣೆಯಿಂದ ವಾಚಕವರ್ಗಕ್ಕೆಲ್ಲಾ ವಿದಿತವಾಗದೆ ಇರಲಾರವು. ಅತ್ಯಲ್ಪಕಾಲಾವಕಾಶವಿದ್ದರೂ ದಾವಣಗೆರೆಯ ನಿವಾಸಿಗಳು ಮಹಾಸಭೆಯ ಕಾರ್ಯವನ್ನು ಸಲಕ್ಷಣವಾಗಿ ನಡೆಯಿಸುವುದಕ್ಕೆ ಅನುಕೂಲವಾದ ಏರ್ಪಾಟುಗಳನ್ನೆಲ್ಲಾ ಮಾಡಿದ್ದುದು ಅವರಿಗೆ ಭೂಷಣಪ್ರದವಾಗಿಯೂ, ಇತರ ಸ್ಥಳಗಳ ನಮ್ಮ ಸಮಾಜಬಾಂಧವರಿಗೆಲ್ಲಾ ಅನುಕರಣೀಯವಾಗಿಯೂ ಇರುತ್ತದೆ. ಶ್ರೀ ಮಜ್ಜಗದ್ಗುರುಗಳವರ ಪ್ರತ್ಯಕ್ಷಾಗಮನದಿಂದ ಸಭಾಚಾಲಕರಿಗೂ ಪ್ರವರ್ತಕರಿಗೂ ಸಹ ಅತಿಶಯವಾದ ಉತ್ತೇಜನವುಂಟಾಯಿತೆಂಬುದಕ್ಕೆ ಸಂಶಯವಿಲ್ಲ. ಈ ಸಲದ ಸಭೆಗೆ ವೀರಶೈವ ಸಮಾಜಪರತಕ್ಕ ಪ್ರತಿಯೊಂದು ಭಾಗಗಳಿಂದಲೂ ಪ್ರತಿನಿಧಿಗಳು ಸಮರ್ಪಕರಾಗಿ ಬಂದೇ ಇದ್ದರೆಂಬುದು ಸಂತೋಷಪ್ರದವಾಗಿದೆ. ಹೊರಗಣಿಂದ ಬಂದಿದ್ದ ಪ್ರತಿನಿಧಿಗಳ ಸಂಖ್ಯೆಯು ೬೦೦ ಕ್ಕೆ ಕಡಿಮೆಯಿರಲಿಲ್ಲವೆಂತಲೂ ಪ್ರೇಕ್ಷಕರ ಸಂಖ್ಯೆಯು ೩ ಸಾವಿರಕ್ಕೆ ಕಡಿಮೆಯಿಲ್ಲನೆಂತಲೂ ಗೊತ್ತಾಗುತ್ತದೆ. ಚಿರಕಾಲ ಪ್ರಕಟನಾವಕಾಶಾದಿಗಳಿಲ್ಲದಿದ್ದರೂ ಸಭಿಕರ ಸಂಖ್ಯೆಯು ಇಷ್ಟುಮಟ್ಟಿಗಿದ್ದುದು ಎಂದಿಗೂ ಅತೃಪ್ತಿ ಮಾಡತಕ್ಕುದಾಗಿಲ್ಲ. ಸಭಾಧ್ಯಕ್ಷರ ಭಾಷಣವು ಶ್ಲಾಘನೀಯ ವಿಚಾರಗಳಿಂದ ಪುಷ್ಕಳವಾಗಿ ಸಮಾಜದ ಗೌರವಾಭ್ಯುನ್ನತಿಗೆ ಉತ್ತಮಮಾರ್ಗಪ್ರದರ್ಶಕವಾಗಿರುವುದರಿಂದ ಅದು ವಿಶೇಷಾಭಿನಂದನೀಯವಾಗಿರುವುದು. ಈ ಸಂಚಿಕೆಯಲ್ಲಿ ಅದರ ಮುಖ್ಯಭಾಗಗಳನ್ನಾದರೂ ಪ್ರಕಟಿಸಲು ಸ್ಥಲಾವಕಾಶವು ದೊರೆಯದೆ ಹೋದುದರಿಂದ ಮುಂದಣ ಸಂಚಿಕೆಯಲ್ಲಿ ಸಾಧ್ಯವಾದಷ್ಟು ಭಾಗವನ್ನು ಪ್ರಕಟಿಸಿ, ನಮ್ಮ ವಾಚಕವರ್ಗವನ್ನು ಸಂತೋಷಪಡಿಸಬೇಕೆಂದಿದ್ದೇವೆ.

ಈ ವರ್ಷದ ಸಭೆಯಲ್ಲಿ ನಡೆದ ನಿರ್ಧಾರಗಳೊಳಗೆಲ್ಲಾ ನಮ್ಮ ಸಮಾಜಕ್ಕೆ ಸರ್ಕಾರದ ನಿಯಮನಿರ್ಮಾಣಸಭೆ ಮೊದಲಾದುವುಗಳಲ್ಲೂ ಮ್ಯುನಿಸಿಪಲ್ ಬೋರ್ಡ್ ಡಿಸ್ಟ್ರಿಕ್ಟ್ ಬೋರ್ಡ್ ಮೊದಲಾದುವುಗಳಲ್ಲೂ ಜನಸಂಖ್ಯಾನುಣವಾದ ಪ್ರಾತಿನಿಧ್ಯಸ್ಥಾನವನ್ನು ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ವಿಷಯವು ಪ್ರಮುಖವಾಗಿರುತ್ತದೆ. ನಮ್ಮ ಅಭ್ಯುನ್ನತಿಮಾರ್ಗಕ್ರಮಣಕ್ಕೆ ಅವಶ್ಯಕವಾದ ಸಾಧನಗಳೊಳಗೆ ಒಂದಾನೊಂದು ಪ್ರಮುಖಾಂಗವಾಗಿರುವ ಈ ಭಾಗದಲ್ಲಿ ಅಪ್ರತಿಹತವಾದ ಉತ್ಸಾಹವನ್ನು ತೋರಿಸಿ, ಏಕಮತ್ಯದಿಂದ ಇದನ್ನು ಸಭಾಪರಿಮುಖದಲ್ಲಿ ನಿರ್ಧಾರ ಮಾಡಿದುದಕ್ಕಾಗಿಯೂ ಸಭೆಯು ಶಾಶ್ವತತೆಗೆ ೧ ಫಂಡನ್ನು ಏರ್ಪಡಿಸಲು ಆರಂಭಿಸಿದುದಕ್ಕಾಗಿಯೂ ಸಭಾಧ್ಯಕ್ಷರನ್ನೂ ಸಕಲ ಸಭಿಕರನ್ನೂ ಅತಿಶಯವಾಗಿ ಅಭಿನಂದಿಸುತ್ತೇವಲ್ಲದೆ ಸಭಾಸಂಬಂಧವಾಗಿ ಉಳಿದ ನಮ್ಮ ಅಭಿಪ್ರಾಯಗಳನ್ನು ಮತ್ತೊಂದು ಸಲ ವಿಶದಪಡಿಸುವವರಾಗಿದ್ದೇವೆ. ಮಹಾಸಭೆಯನ್ನು ನೆರವೇರಿಸುವುದರಿಂದ ಎಂಥ ಮಹಾಫಲವನ್ನು ಕೊಡುವುದೆಂಬುದಕ್ಕೆ ಮಹಾಸಭೆಯ ಶಾಶ್ವತಸ್ಥಾಪನದ ಫಂಡಿಗಾಗಿ ಒಂದೇ ದಿನದೊಳಗಾಗಿ ೫೩ ಸಾವಿರ ರೂಗಳು ಕೂಡಿದ ಒಂದೇ ಒಂದು ಉದಾಹರಣವೇ ಸಾಕಾಗಿರುತ್ತದೆ. ಮಹಾಸಭೆಯ ಮೇಲಣ ಅಭಿಮಾನದಿಂದ ಇಂಥ ವಿಶೇಷೌದಾರ್ಯವನ್ನು ತೋರಿಸಿರುವ ಮಹನೀಯರುಗಳನ್ನೆಲ್ಲಾ ಈ ಮೂಲಕ ಅತಿಶಯವಾದ ವಂದನೆಗಳನ್ನು ಸಮರ್ಪಿಸುತ್ತೇವಲ್ಲದೆ ಶ್ರೀಮಜ್ಜಗದ್ಗುರು ಪಾದಸಂಸ್ಪರ್ಶನಾನುಗ್ರಹವು ಈ ೮ ನೆಯ ಮಹಾಸಭೆಗೆ ಪ್ರಾಪ್ತವಾದುದರಿಂದಲೇ ಇದಕ್ಕೆ ಅಭ್ಯುಕ್ತವಾದ ಸ್ಥಿತಿಯು ಲಭಿಸಲು ಅವಕಾಶವಾಯಿತೆಂದು ಹೇಳಲು ಲೇಶವೂ ಹಿಂದೆಗೆಯಲಾರೆವು. ಇಂಥ ಅನುಗ್ರಹವು ಶ್ರೀ ಜಗದ್ಗುರು ಸನ್ನಿಧಿಯಿಂದ ಪ್ರಾಪ್ತವಾದುದಕ್ಕಾಗಿ ಸಮಾಜದ ಪಕ್ಷದಿಂದ ನಾವು ಸಾಷ್ಟಾಂಗವಂದನೆಯನ್ನು ಸಮರ್ಪಿಸಲು ಪರಮಾನಂದಗೊಂಡಿರುತ್ತೇವೆ.

ದಾವಣಗೆರೆ.

ಶ್ರೀ ಜಗದ್ಗುರುಗಳ ಆಗಮನೋತ್ಸವ.

(ನಮ್ಮ ಸ್ವಕೀಯ ಲೇಖಕರಿಂದ)

೮ ನೆಯ ವೀರಶೈವ ಮಹಾಸಭೆಗಾಗಿ ಚಿತ್ರದುರ್ಗದಿಂದ ದಯಮಾಡಿಸಿರುವ ಶ್ರೀ ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಸ್ವಾರಿಯು ನಿನ್ನೆಯ ದಿನವೇ ಈ ಊರ ಹೊರಗಣ ಉರುವಕೊಂಡೆಯವರ ತೋಟದಲ್ಲಿಳಿದ್ದಿತು. ಈ ದಿನ ಬೆಳಿಗ್ಗೆ ಅವರ ಪುರಪ್ರವೇಶಮಹೋತ್ಸವ ಬಹು ಸಂಭ್ರಮದಿಂದ ಜರುಗಿತು. ಮಹಾಸಭೆಯನ್ನು ನೆರವೇರಿಸುವ ರೂಪವಾದ ಸಮಾಜಸೇವೆಯು ಮತ್ತು ಶ್ರೀಮಜ್ಜಗದ್ಗುರುಗಳ ಪಾದಸೇವೆಯ ರೂಪವಾದ ಎರಡು ಮಹಾಕಾರ್ಯಗಳೂ ಒಂದೇ ಕಾಲದಲ್ಲಿ ಕೂಡಿರುವುದರಿಂದ ಇಂಥ ಸುಯೋಗವು ದಾವಣಗೆರೆಯ ವೀರಶೈವ ಮಹಾಜನರ ಪಾಲಿಗೆ ಎಂದೂ ಲಭಿಸಿರಲಿಲ್ಲ. ಅದುಕಾರಣವೇ ಈ ಅಪೂರ್ವತರ ಸುಯೋಗವನ್ನು ತಮ್ಮ ಮತಾಭಿಮಾನ ಗುರುಭಕ್ತಿಗಳ ಮಹತ್ವಕ್ಕೆ ತಕ್ಕಂತೆ ಘನತರವಾಗಿಯೇ ನಡೆಯಿಸಲು ಸರ್ವವಿಧದ ಏರ್ಪಾಟುಗಳನ್ನೂ ವಿಚಕ್ಷಣೆಯಿಂದ ಮಾಡಿಟ್ಟಿರುವರು. ಪ್ರಥಮತಃ ಪುರಾಲಂಕರಣವು ಅತಿಶಯ ವರ್ಣನೀಯವಾಗಿರುವುದು. ನಮ್ಮ ಮೈಸೂರಿನಂಥ ರಾಜಧಾನಿಗಳಿಗೆ ಶೃಂಗೇರಿ ಸ್ವಾಮಿಗಳಂಥವರು ಬಂದರೂ ಕೂಡ ಅಭಿಮಾನಿಗಳಾದ ಸಿಟಿ ಮ್ಯುನಿಸಿಪಾಲಿಟಿಯವರು ಧ್ವಜಪತಾಕೆ ತೋರಣಾದಿಗಳನ್ನು ಕಟ್ಟಿಸಿ ಮರ್ಯಾದಿಸುತ್ತಿರುವುದನ್ನು ನಾವುಗಳು ನೋಡುತ್ತಿರುವೆವು. ಈ ದಾವಣಗೆರೆಯ ಪುರಾಲಂಕರಣವು ಹಾಗಲ್ಲ. ಈಗ ಬಟ್ಟೆಬರೆಗಳ ಮತ್ತು ಕಾಗದದ ಬೆಲೆಯು ಹೆಚ್ಚಿ ಕೊಂಡಿದ್ದರೂ ಶ್ರೀಗಳ ಆಗಮನಕ್ಕಾಗಿ ಪುರದ ಮುಖ್ಯ ವ್ಯಾಪಾರದ ಅಂಗಡಿಬೀದಿಗಳೆಲ್ಲಾ ಬಹುಶಃ ೧೦-೧೨ ದೊಡ್ಡ ದೊಡ್ಡ ವೀಧಿಗಳು ಚಿತ್ರವಿಚಿತ್ರತರವಾದ ನೂರಾರು ಚಪ್ಪರಗಳಿಂದಲೂ ಕಮಾನುಗಳಿಂದಲೂ, ತೋರಣಾದಿಗಳಿಂದಲೂ ಜಲಸೇಚನದಿಂದಲೂ ಬಹಳ ರಮ್ಯವಾಗಿ ಪ್ರಜೆಗಳಿಂದಲೇ ಮಾಡಲ್ಪಟ್ಟಿದ್ದುವು. ಪುರಬಹಿರ್ದ್ವಾರದಿಂದ ಶ್ರೀ ಸ್ವಾಮಿಗಳಿಳಿದ್ದ ತೋಟದವರೆಗೂ ದೊಡ್ಡ ದೊಡ್ಡ ಮಾವಿನ ಶಾಖೆಗಳನ್ನೇ ಸಾಲಾಗಿ ನೆಟ್ಟು ಸಾಲುಮಾವಿನಮರಗಳಂತೆ ಮಾಡಲ್ಪಟ್ಟಿದ್ದಿತು. ಪುರವೀಧಿಯಲ್ಲಿ ಉಭಯಪಾರ್ಶ್ವವೂ ಬಾಳೆಮರಗಳೇ ಸಾಲಾಗಿ ಮೂಡಿರುವಂತೆ ಮಂಗಳಕರವಾಗಿ ಮಾಡಿಟ್ಟಿದ್ದರು. ತೋರಣಗಳ ಸಂಖ್ಯೆಗಳಂತೂ ಲೆಕ್ಕವೇ ಇಲ್ಲ. ಒಂದೆರಡು ಕಡೆಯಲ್ಲಿ ಶ್ರೀಮಂತರ ಮನೆಗಳ ಮುಂದೆ ಸುವರ್ಣರತ್ನಾಭರಣಗಳನ್ನೇ ತೋರಣಗಳನ್ನಾಗಿ ಕಟ್ಟಿದ್ದರು. ಪಾತ್ರೆಗಾರರ ಅಂಗಡಿ ಬೀದಿಯಲ್ಲಿ ಪಾತ್ರೆಗಳನ್ನೇ ಪೇರಿಸಿ ಕಮಾನುಗಳಂತೆ ಮಾಡಿಟ್ಟಿದ್ದರು. ಶ್ರೀಮಂತರುಗಳ ಮನೆಗಳ ಮುಂಗಡೆಯಲೆಲ್ಲಾ ಅವರವರ ಮನೆಯ ಜನರೂ ಹೆಣ್ಣುಮಕ್ಕಳೂ ಸಹ ಫಲಪುಷ್ಪಹಾರ ಗುಚ್ಛಾದಿಗಳ ತಟ್ಟೆಗಳನ್ನೂ ಆರತಿಗಳನ್ನೂ ಹಿಡಿದು ಸಾಲಂಕೃತರಾಗಿ ಶ್ರೀಗುರುಪಾದಾಗಮನ ನಿರೀಕ್ಷಣೆಯಿಂದ ಸಜ್ಜಾಗಿ ನಿಂತಿರುತ್ತಿದ್ದರು. ಶ್ರೀಜಗದ್ಗುರುಗಳು ಆಂದೋಳಿಕಾರೂಢರಾಗಿ ೯ ಗಂಟೆಗೆ ಬಿಡಾರದಿಂದ ಪುರದಕಡೆಗೆ ಚಿತ್ತೈಸಲು ಮುಂಗಡೆಯಲ್ಲಿ ಚಾಮರವನ್ನು ಬೀಸುವ ಆನೆಗಳು, ಅಲಂಕೃತವಾದ ಕುದುರೆಗಳು, ಶ್ವೇತಛತ್ರ, ಹಗಲುದೀವಟಿಗೆ, ಮಕರತೋರಣ, ನೇಟಿಪಾವುಡ, ಮುಖವಾದ್ಯ, ನಂದಿಧ್ವಜ ಮೊದಲಾದ ಅನೇಕ ಬಿರುದಾವಳಿಗಳೂ, ವಿಧವಿಧವಾದ ವಾದ್ಯಾಡಂಬರಗಳೂ, ಪಟ್ಟದಚರಮೂರ್ತಿಗಳೂ ವೈದಿಕಮಂಡಲಿಯೂ ಭಕ್ತರ ತಿಂತಿಣಿಯೂ ನಡೆಯುತ್ತಿದ್ದರು. ಪೋಲೀಸುದ್ಯೋಗಿಗಳೂ, ಆಯುಧಧಾರಿಗಳಾದ ಪೋಲೀಸಾರುಗಳೂ ಮೇಲಿಚ್ಚರಿಕೆಯಿಂದ ಉತ್ಸವವನ್ನು ಸಾಗಿಸುತ್ತಿದ್ದರು. ತಾಲ್ಲೂಕು ಅಮಲ್ದಾರರಾದ ಮ॥ ನಾರಾಯಣಯ್ಯರ್‌ರವರು ಕಡೆಯವರೆಗೂ ಉತ್ಸವದ ಜತೆಯಲ್ಲೇ ಇದ್ದರು. ಶ್ರೀಗಳವರು ಬೀದಿಯುದ್ದಕ್ಕೂ ಕಿಕ್ಕಿರಿದು ನಿಂತಿದ್ದ ನಾಲ್ಕಾರು ಸಹಸ್ರ ಪ್ರಜೆಗಳ ಭಕ್ತಿಘೋಷವನ್ನು ಪ್ರಸನ್ನವದನದಿಂದ ಸ್ವೀಕರಿಸುತ್ತ, ಆಯಾ ಶ್ರೀಮಂತರ ಮನೆಗಳ ಮುಂಗಡೆಯಲ್ಲಿ ಸಮರ್ಪಿಸಲ್ಪಟ್ಟ ಫಲಪುಷ್ಪಹಾರಾದಿಗಳನ್ನಂಗೀಕರಿಸಿ ಆಶೀರ್ವದಿಸುತ್ತ, ವೈದಿಕರ ವೇದಘೋಷವೂ, ಸ್ತುತಿಪಾಠಕರ ಪಠಾಕಗಳೂ ಶ್ರಾವ್ಯವಾಗಿರುತ್ತಿರಲು ಅಲಂಕೃತವಾಗಿದ್ದ ಎಲ್ಲ ಬೀದಿಗಳಲ್ಲೂ ಉತ್ಸವಗೊಂಡು, ಮಹಮ್ಮದೀಯರ ಮಸೀತಿಯ ಮುಂದೆ ಅವರುಗಳು ಓದಿ ಅರ್ಪಿಸಿದ ವಿಜ್ಞಾಪನ ಪತ್ರವನ್ನು ಲಾಲಿಸಿ, ಅವರ ಮರ್ಯಾದೆಯನ್ನು ಸ್ವೀಕರಿಸಿ, ಶುಭವಚನವನ್ನಿತ್ತು, ಮಧ್ಯಾಹ್ನದ ೩ ಗಂಟೆಯ ಹೊತ್ತಿಗೆ ಬಿಡಾರವಾಗಿ ಏರ್ಪಡಿಸಲ್ಪಟ್ಟಿದ್ದ ಶ್ರೀ ವಿರಕ್ತಮಠವನ್ನಲಂಕರಿಸಿದರು.

ಅತಿಥಿಗಳಿಗಾಗಿ ಮಾಡಿರುವ ಏರ್ಪಾಟು.

ಸಭೆಗೆ ಬಂದ ಅತಿಥಿಗಳನ್ನು ನಿಲ್ದಾಣದಲ್ಲೇ ಕಂಡು ಅವರವರ ಬಿಡಾರಗಳಿಗೆ ಸೇರಿಸಿ ಸಕಲ ಸೌಕರ್ಯವನ್ನು ಒದಗಿಸುವಲ್ಲಿ ತತ್ಪರರಾಗಿ ಚಟುವಟಿಕೆಯುಳ್ಳ ಒಂದುನೂರುಮಂದಿ ಯುವಕರು ರೇಷ್ಮೆಯ ಪಟ್ಟಿಯ ಸ್ವಯಂಸೇವಕತ್ವಚಿಹ್ನೆಯನ್ನು ಧರಿಸಿದ ವಾಲಂಟಿಯರುಗಳು ಏರ್ಪಡಿಸಲ್ಪಟ್ಟಿರುವರು. ಪ್ರತ್ಯೇಕವಾಗಿ ಇಳಿದುಕೊಳ್ಳತಕ್ಕ ಆಯಾ ದೊಡ್ಡದೊಡ್ಡ ಸ್ಥಳಗಳ ಪ್ರತಿನಿಧಿಗಳ ಗುಂಪಿಗಾಗಿ ಬೇರೆಬೇರೆ ಕಡೆ ಬಹುಶಃ ೩೦ ವರೆಗೂ ಬಿಡಾರಗಳು ಮಾಡಲ್ಪಟ್ಟಿರುವುವು. ಒಂಟೊಂಟಿಯಾಗಿ ಬಂದಿರುವ ವೀರಶೈವರಿಗೆಲ್ಲಾ ಊರಿನಲ್ಲಿ ೫ ಕಡೆಯಲ್ಲಿ ಊಟಗಳಿಗೆ ಏರ್ಪಡಿಸಿಟ್ಟಿರುವರು. ಇಲ್ಲಿ ಪ್ಲೇಗಿನ ಸುದ್ದಿಯೇನೂ ಇಲ್ಲದಿರುವುದರಿಂದ ಆಗಲೇ ಸುತ್ತಮುತ್ತಣ ಜನರೂ ದೂರದವರೂ ಸೇರಿ ೨ ಸಹಸ್ರಕ್ಕೆ ಮೇಲ್ಪಟ್ಟ ಜನಸ್ತೋಮವು ಬಂದಿರುವುದು. ಈ ಜನಸ್ತೋಮವನ್ನೆಲ್ಲಾ ರಾತ್ರಿಯಕಾಲದಲ್ಲಿ ಆನಂದಪಡಿಸಲು ಸಿರಹಟ್ಟಿ ನಾಟಕಸಂಘದವರೂ, ಗುಬ್ಬಿ ಚೆನ್ನಬಸವೇಶ್ವರ ನಾಟಕಸಂಘದವರೂ ಬಂದಿಳಿದು ತಮ್ಮ ಪ್ರಯೋಗಗಳನ್ನು ಮಾಡುತ್ತಿರುವರು. ಪಟ್ಟಣವೆಲ್ಲಾ ದೊಡ್ಡ ಹಬ್ಬದ ದಿನದಂತೆ ಮಂಗಳಕರವಾಗಿರುತ್ತ ಅತಿಥಿಮಂಡಲವನ್ನೆಲ್ಲಾ ಸ್ವಾಗತಮಾಡುವುದಕ್ಕೆ ಪುರಲಕ್ಷ್ಮಿಯೇ ಸಾಲಂಕೃತಳಾಗಿ ನಿಂತಿರುವಂತೆ ತೋರುತ್ತಿರುವುದು.

ಸಭಾಧ್ಯಕ್ಷರ ಆಗಮನ.

ತಾ॥ ೨೭ ನೆ ಬೆಳಗ್ಗೆ ದಿ॥ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರೂ, ಬೆಂಗಳೂರು, ಮೈಸೂರು, ತುಮಕೂರು, ಚಿತ್ರದುರ್ಗ ಮೊದಲಾದ ಕಡೆಯ ಅನೇಕ ಪ್ರತಿನಿಧಿಗಳೂ ಸಹ ಕುಳಿತಿದ್ದ ಹೊಗೆಬಂಡಿಯು ನಿಲ್ದಾಣಕ್ಕೆ ಬಂದು ನಿಂತಕೂಡಲೇ ಸತ್ಕಾರಕಸಂಘದವರೂ, ಇತರ ಪುರಪ್ರಮುಖರೂ ಸಹ ವಾದ್ಯವೈಭವಸಮೇತರಾಗಿ ಕಾದಿದ್ದು ಪುಷ್ಪಹಾರಗುಚ್ಛಾದಿಗಳನ್ನು ದಿ॥ ಬಹದ್ದೂರರವರಿಗೆ ಅರ್ಪಿಸಿ, ಇದಿರ್ಗೊಂಡರು. ಬಳಿಕ ೨ ಕುದುರೆಗಳನ್ನು ಹೂಡಿದ್ದ ರಥದಲ್ಲಿ ಕುಳ್ಳಿರಿಸಿ, ಮುಂಗಡೆಯಲ್ಲಿ ಶ್ರೀ ಜಗದ್ಗುರು ಸಂಸ್ಥಾನದ ಆನೆಗಳು ನಡೆಯುತ್ತಿರಲು ಸಾವಿರಾರು ಮಂದಿ ಸಮಾಜಬಾಂಧವರು ರಥದ ಹಿಂದುಮುಂದೆಗಡೆಗಳಲ್ಲಿ ಸೇರಿ ಬಹು ಸಂತೋಷಸಂಭ್ರಮಗಳಿಂದ ಪುರದ ಮುಖ್ಯಮುಖ್ಯ ವೀಧಿಗಳಲ್ಲಿ ಉತ್ಸವವನ್ನು ಮಾಡಿಕೊಂಡು, ಶ್ರೀ ಜಗದ್ಗುರುಗಳವರ ಬಿಡಾರಕ್ಕೆ ಹೋಗಿ ದರ್ಶನವನ್ನು ತೆಗೆದುಕೊಂಡ ಬಳಿಕ ಬಿಡಾರಕ್ಕೆ ಹೋಗಿ ಇಳಿಸಿದರು.

ಮಹಾಸಭೆ.

ದಾವಣಗೆರೆ ಪಟ್ಟಣದ ಪೂರ್ವಭಾಗದಲ್ಲಿರುವ ಬಯಲಿನಲ್ಲಿ ಸ್ಥಾಪಿಸಲ್ಪಟ್ಟಿರುವ ಧನಲಕ್ಷ್ಮಿ ಥಿಯೇಟರ್ ಹಾಲು ಸಭೆಯು ಕೂಡುವುದಕ್ಕಾಗಿ ಏರ್ಪಡಿಸಲ್ಪಟ್ಟಿದ್ದಿತು. ಅದರ ಉಭಯ ಪಾರ್ಶ್ವವೂ ವಿಸ್ತರಿಸಲ್ಪಟ್ಟು ಗುಡಿತೋರಣ ಮೇಲುಕಟ್ಟು ಧ್ವಜಪತಾಕೆ ಮೊದಲಾದುವುಗಳಿಂದ ಅಲಂಕರಿಸಲ್ಪಟ್ಟು ಬಹುಶಃ ೪-೫ ಸಹಸ್ರ ಜನರು ಕುಳಿತುಕೊಳ್ಳಲು ತಕ್ಕಷ್ಟು ವೈಶಾಲ್ಯವುಳ್ಳುದಾಗಿದ್ದಿತು ಸಭಾಂಗಣದೊಳಗೆ ಉತ್ತರಭಾಗದಲ್ಲಿರುವ ಜಗತಿಯಮೇಲೆ ಶ್ರೀ ಜಗದ್ಗುರುಗಳವರಿಗಾಗಿ ಏರ್ಪಡಿಸಿದ್ದ ಉಪರಿ ಜಗತಿಯ ಮೇಲೆ ಸುವರ್ಣರಜತಮಯವಾದ ಸಿಂಹಪೀಠವು ಇಡಲ್ಪಟ್ಟಿದ್ದಿತು. ಅದರ ಮುಂಭಾಗದಲ್ಲಿ ಸಭಾಧ್ಯಕ್ಷರ ಪೀಠವು ಏರ್ಪಡಿಸಲ್ಪಟ್ಟಿತ್ತು. ಷಟ್ಸ್ಥಲ ಬ್ರಹ್ಮಿಗಳು, ಪಟ್ಟಚರಮೂರ್ತಿಗಳು, ವೈದಿಕಮಂಡಲಿಯವರು, ಸನ್ಮಾನನೀಯಸಭಾಸದರು, ಆಜೀವಸಭಾಸದರು, ಪ್ರತಿನಿಧಿಗಳು, ಪ್ರೇಕ್ಷಕರು ಮೊದಲಾದವರುಗಳಿಗೆಲ್ಲಾ ಬೇರೆಬೇರೆ ಸ್ಥಾನಗಳು ಏರ್ಪಡಿಸಲ್ಪಟ್ಟಿದ್ದುವು. ಸಭಾರಂಭವು ಮಧ್ಯಾಹ್ನೋತ್ತರ ೪ ಗಂಟೆಗೆ ಆದರೂ ಸಭಿಕರ ತಿಂತಿಣಿಯು ಮಧ್ಯಾಹ್ನದ ೨ ಗಂಟೆಯಿಂದಲೂ ಹೋಗಿ ಸೇರಲು ಆರಂಭವಾಯಿತು. ಸಭಾಧ್ಯಕ್ಷರು ರಥಾರೂಢರಾಗಿ ೪ ಗಂಟೆಗೆ ಸರಿಯಾಗಿ ಸಭಾಮಂಟಪದ ಬಳಿಗೆ ಬಂದಿಳಿದ ಕೂಡಲೇ ಸತ್ಕಾರಕಸಂಘದವರು ಇದಿರ್ಗೊಂಡು ಸಭಾಪ್ರವೇಶಮಾಡಿಸಿದರು. ಸಭಿಕರೆಲ್ಲರೂ ಪ್ರತ್ಯುತ್ಥಾನಮಾಡಿ ಸಂತೋಷಧ್ವನಿಯಿಂದ ಗೌರವಿಸಿದರು. ಬಳಿಕ ೧೦-೧೨ ನಿಮಿಷಗಳೊಳಗಾಗಿ ಶ್ರೀ ಜಗದ್ಗುರುಗಳ ಸ್ವಾರಿಯು ಮಂಟಪವನ್ನಲಂಕರಿಸಿ, ದಯಮಾಡಿಸಿತು. ಪ್ರಮುಖರನೇಕರು ಮಹಾದ್ವಾರದಲ್ಲಿ ಕಾದಿದ್ದು ಮಂಟಪದೊಳಕ್ಕೆ ಪ್ರವೇಶಿಸಿದ ಕೂಡಲೇ ಪ್ರತ್ಯಕ್ಷ ಪರಶಿವಮೂರ್ತಿಯಂತಿದ್ದ ಆ ಮಹಾ ಶ್ರೀ ಗುರುಚರಣವನ್ನು ಕಂಡು ಸಭಿಕರು ಪಟ್ಟ ಆನಂದವೂ ಮಾಡಿದ ಕರತಾಡನಧ್ವನಿಗಳೂ ವಾಚಾಮಗೋಚರವಾಗಿದ್ದುವು. ಸಕಲ ಸಭಿಕರ ನಮಃಪಾರ್ವತೀ ಹರಹರಮಹಾದೇವ ಧ್ವನಿವೈಭವವಾಗುತ್ತಿರಲು, ಶ್ರೀ॥ ಗಳವರು ತಮ್ಮ ಪೀಠವನ್ನಲಂಕರಿಸಿ, ಸಕಲ ಭಕ್ತಮಂಡಲಿಯನ್ನೂ ಪ್ರಸನ್ನಮುಖದಿಂದಲೂ ಕರುಣಾಕಟಾಕ್ಷದಿಂದಲೂ ಅನುಗ್ರಹಿಸಿದರು. ಶ್ರೀಗಳವರ ಉಭಯಪಾರ್ಶ್ವಪೀಠಗಳಲ್ಲಿ ಶ್ರೀಮತ್ಪೂಜ್ಯಪಾದರುಗಳಾದ ಬೀಳೂರು ಮಹಾಸ್ವಾಮಿಗಳು, ಅಥಣಿ ಮೋಟಗಿಮಠದ ಸ್ವಾಮಿಗಳು, ಹಾವೇರಿಮಠದ ಸ್ವಾಮಿಗಳು, ಕೆಳದಿಮಠದ ಸ್ವಾಮಿಗಳು, ಹೊಳೆಹೊನ್ನೂರುಮಠದ ಪಟ್ಟದಪ್ಪನವರು. ಗದಗಿನ ಪ್ರಭುದೇವರ ಮಠದ ಪಟ್ಟದಪ್ಪನವರು, ಮೊದಲಾದ ವಿರಕ್ತಮೂರ್ತಿಗಳೂ ಪಟ್ಟಾಧ್ಯಕ್ಷರುಗಳೂ, ಅವರ ಮುಂಗಡೆಯಲ್ಲಿ ವೇ॥ ಗಳಾದ ಸೊಲ್ಲಾಪುರದ ಜಗದೀಶಶಾಸ್ತ್ರಿಗಳು, ದಾವಣಗೆರೆ ಚಂದ್ರಶೇಖರ ಶಾಸ್ತ್ರಿಗಳು, ಮೈಸೂರು ಯರ್. ಆರ್. ಕರಿಬಸವಶಾಸ್ತ್ರಿಗಳು, ಸಂಪಗೆ ಸಿದ್ಧಲಿಂಗಶಾಸ್ತ್ರಿಗಳು, ನ್ಯಾಮತಿ ಹೊಳಿಬಸವಶಾಸ್ತ್ರಿಗಳು, ಹರಪನಹಳ್ಳಿ ನೀಲಕಂಠಶಾಸ್ತ್ರಿಗಳು, ಮೊದಲಾದವರುಗಳು ಕುಳಿತಿದ್ದರು. ಅವರ ಮುಂಗಡೆಯಲ್ಲಿ ಸಭಾಧ್ಯಕ್ಷರ ಉಭಯಪಾರ್ಶ್ವದ ಪೀಠಗಳಮೇಲೆ ಡಿ॥ ಕಮಿಷನರ್ ಜಹಿರುದ್ದಿನ್ ಮೆಕ್ಕಿಯವರು, ಸಬ್‌ಡಿವಿಜನ್ ಆಫೀಸರ್ ಮ॥ ರಾಮರಾಯರು, ಮ॥ ಅಮಲ್ದಾರ್ ನಾರಾಯಣಯ್ಯರ್‌ರವರು, ಮತ್ತು ವೀರಶೈವ ಮುಂದಾಳುಗಳಾದ ಮ॥ ಪಿ. ಮಹಾದೇವಯ್ಯ ಬಿ. ಎ. ಬಿ. ಎಲ್. ರವರು, ಅ॥ ಕಮಿಷನರು; ಹೆಚ್. ಕೆ. ವೀರಬಸವಯ್ಯ ಬಿ. ಎ. ಬಿ. ಎಲ್.ರವರು ಮುನ್ಸೀಫ್, ರಾವ್‌ಸಾಹೇಬ್ ಶಿವಮೂರ್ತಿಸ್ವಾಮಿ ಕಣಬುರ್ಗಿಮಠ, ಬೆಳಗಾಂ ಜೆ. ಶಾಂತವೀರಪ್ಪ ಬಿ. ಎ. ಯವರು, ಮತ್ತು ಕೆ. ಸಿದ್ಧರಾಮಪ್ಪ ಬಿ. ಎ. ಯವರುಗಳು, ಎಕನಾಮಿಕ್ ಸೂಪರಿಂಟೆಂಡೆಂಟರುಗಳು; ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು, ಸಿದ್ಧರಾಮಪ್ಪ ಪಾವಟೆ ಬಿ. ಎ. ಎಲ್. ಎಲ್. ಬಿ. ಯವರು, ಹುಬ್ಬಳ್ಳಿ ವೀರಪ್ಪ ಬಸವಪ್ಪ ಬೆಳಿಯಂಗಡಿ ಬಿ.ಎ. ಎಲ್.ಎಲ್.ಬಿ. ಯವರು, ಹುಬ್ಬಳ್ಳಿ ಸೊಲಬಪ್ಪ ಸಂಗನಬಸವಪ್ಪ ವಕೀಲ್, ಗದಿಗಯ್ಯ ಹುಚ್ಚಯ್ಯ ಹೊನ್ನಾಪುರಮಠ ವಕೀಲ್ (ಮತ್ತು ಚಂದ್ರೋದಯ ಸಂಪಾದಕರು) ಸಿದ್ಧಪ್ಪ ಮಾದಪ್ಪ ಮಾಳಿ ಬಿ.ಎ. ಎಲ್.ಎಲ್.ಬಿ. ಯವರು ಅಥಣಿ, ಕೊಟೂರು ಬಸವಪ್ಪ ಭಾವಕಟ್ಟಿಯವರು, ಮಾಮಲೇದಾರ್, ಮಲ್ಲಿಕಾರ್ಜುನಪ್ಪ ಅಪ್ಪಾರಾವ್ ಪಾಟೀಲ್‌ರವರು ಸೊಲ್ಲಾಪುರ; ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ, ಎಮ್. ಎ. ರವರು, ಬೆಳಗಾಂವಿ, ಜಿ. ಪರಶಿವಯ್ಯ ಬಿ. ಎ. ಎಲ್. ಎಲ್. ಬಿ. ಅಡ್ವೋಕೇಟ್ ಬೆಂಗಳೂರು, ಎಂ. ಪಿ. ಭೋಗಯ್ಯ ಬಿ. ಎ. ಬಿ. ಎಲ್. ರವರು ಮೈಸೂರು; ಸಿದ್ಧನಂಜಪ್ಪ ವಕೀಲ್‌ರವರು ಚಿತ್ರದುರ್ಗ; ಹುಚ್ಚಯ್ಯ ಫಕೀರಯ್ಯ ಕಟ್ಟಿಮನಿ ಬಿ. ಎ. ಯವರು, ಬೆಳಗಾಂ; ಸಿದ್ಧಪ್ಪ ಕಂಯಿಪ್ಪ ಹೊಸಮನಿ ಬಿ. ಎ. ಎಲ್. ಎಲ್. ಬಿ. ಯವರು, ಹಾವೇರಿ; ಚನ್ನಪ್ಪ ಬಸವಪ್ಪ ಹೂಲಿ ಎಲ್. ಎ. ಜಿ. ಕೋ ಆಪರೇಟೀವ್ ಆಡಿಟರ್ ಬೆಳಗಾಂ; ಮೊದಲಾದ ವಿದ್ವಜ್ಜನರುಗಳೂ, ಅವರುಗಳ ಪಕ್ಕಗಳಲ್ಲಿ ನಮ್ಮ ಧನಿಕಪ್ರಮುಖರುಗಳಾದ ಚಿತ್ರ ಚಂ. ವೀರಪ್ಪನವರು, ಹೊಂಗ್ಗರೆ ಅಡಿವಪ್ಪಶೆಟ್ಟರು, ಶಿವಮೊಗ್ಗಾ ಕಾಡಪ್ಪನವರು, ಹಾರ್ನಹಳ್ಳಿ ಚನ್ನಪ್ಪನವರು, ನೆಲ್ಕುದುರೆ ಸಂಗಪ್ಪನವರು, ಕಾಟನಹಳ್ಳಿ ಮುರುಗಪ್ಪನವರು, ತಿಪಟೂರು ಕೊಟ್ಟೂರಪ್ಪಯ್ಯನವರು, ಬೆಂಗಳೂರು ಪಿ. ಎಂ. ಬಸವಪ್ಪನವರು, ಎಸ್. ಶಿವಪ್ಪನವರು, ಜಿ. ಸಿದ್ಧಪ್ಪನವರು ಮೊದಲಾದ ಅನೇಕ ಜನರೂ ಸ್ಥಳದ ಪ್ರಮುಖರುಗಳೂ ಸಹ ಕುಳಿತಿದ್ದರು. ಸಭಾರಂಭದಲ್ಲಿ ಶ್ರೀ ಗುಬ್ಬಿ ಚೆನ್ನಬಸವೇಶ್ವರ ನಾಟಕಸಂಘದವರು ಈಶಸ್ತವನವನ್ನೂ ಗುರುಸ್ತೋತ್ರವನ್ನೂ ಸಹ ಸುಶ್ರಾವ್ಯವಾಗಿ ಮಾಡಿದ ಬಳಿಕ ಶ್ರೀ ಮಹಾಜಗದ್ಗುರುಗಳು ಸಭೆಯ ಸಂಭ್ರಮವನ್ನು ಪರಾಮರಿಸಿ, ಸಂತೋಷಪಟ್ಟು, ಸಮಾಜದವರ ಸತ್ಸಂಕಲ್ಪಗಳು ಸಭಾಪರಿಮುಖದಿಂದ ಸಾಂಗವಾಗಿ ನಡೆಯಲೆಂದು ಆಶೀರ್ವದಿಸಿ, ಸಭಾರಂಭಕ್ಕೆ ಅಪ್ಪಣೆಯನ್ನಿತ್ತರು.

ಬಳಿಕ ಸತ್ಕಾರಕ ಸಂಘಾಧ್ಯಕ್ಷರಾದ ತಿರುಕಪ್ಪನವರ ಮಠದ ಷಡಕ್ಷರಪ್ಪನವರು ತಮ್ಮ ಸ್ವಾಗತ ಭಾಷಣವನ್ನು ಮ॥ ಬಿ ಚೆನ್ನವೀರಪ್ಪನವರು ಓದುತ್ತಾರೆಂದು ತಿಳಿಯಿಸಿದಬಳಿಕ ಅವರು ಸುಶ್ರಾವ್ಯವಾಗಿ ಓದಿ ಮುಗಿಸಿದರು. ಅನಂತರ ಸಭಾಧ್ಯಕ್ಷರ ಆಸನವಿಕೆಯನ್ನು ಕುರಿತು ರಾವ್‌ಸಾಹೇಬ್ ಶಿವಮೂರ್ತಿಸ್ವಾಮಿ ಕಣಬುರ್ಗಿಮಠ ಇವರು ಸೂಚನೆಯನ್ನು ಕೊಡುವಾಗ್ಗೆ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರು ಮೈಸೂರು ಸರ್ಕಾರದಲ್ಲಿ ಕೌನ್ಸಿಲರ್ ಪದವಿಯವರೆಗೆ ಅಧಿಕಾರನಿರ್ವಹಣವನ್ನು ಮಾಡಿ ಇಂಡ್ಯಾ ಸಾರ್ವಭೌಮರಿಂದಲೂ, ಮೈಸೂರು ಶ್ರೀಮನ್ಮಹಾರಾಜರವರಿಂದಲೂ ಸಹ ದಿವಾನ್ ಬಹದ್ದೂರ್, ರಾಜಸಭಾಭೂಷಣ, ಸಿ.ಐ.ಇ., ಬಿರುದುಗಳನ್ನು ಪಡೆದಿರುವುದನ್ನೂ, ಅದರಿಂದ ಅವರಲ್ಲಿ ಸ್ಪಷ್ಟವಾಗಿರುವ ಕಾರ್ಯಧುರಂಧರತೆಯ ವಿಶಿಷ್ಟತೆಯನ್ನೂ, ಅವರಲ್ಲಿ ನಿರಂತರವಾಗಿರುವ ಪ್ರಜಾಹಿತಕಾರ್ಯತತ್ಪರತೆಯನ್ನೂ, ಈಗಲೂ ಅವರು ಬೆಂಗಳೂರು ಮ್ಯುನಿಸಿಪಾಲಿಟಿಯ ಆನರರಿ ಪ್ರೆಸಿಡೆಂಟ್ ಪದವಿ, ಮೈಸೂರು ಬ್ಯಾಂಕ್ ಅಧ್ಯಕ್ಷತ ಮೊದಲಾದುವುಗಳನ್ನು ನಿರ್ವಹಿಸುತ್ತ ಮಾಡುತ್ತಲಿರುವ ದೇಶಸೇವೆಯ ಮಹತ್ವವನ್ನೂ, ಸಮಾಜದ ವಿಷಯದಲ್ಲಿ ಅವರು ವಹಿಸಿರುವ ಅಭಿಮಾನಾತಿಶಯವನ್ನೂ ಸೊಲ್ಲಾಪುರದಲ್ಲಿ ನಡೆದ ವೀರಶೈವ ಮಹಾಸಭೆಯು ಮತ್ತು ಶೈವಸಿದ್ಧಾಂತ ಮಹಾಸಭೆಯ ಅಧ್ಯಕ್ಷತೆಗಳನ್ನು ವಹಿಸಿ ನಡೆಯಿಸಿದ ಕಾರ್ಯಗೌರವವನ್ನೂ ವರ್ಣಿಸಿ, ಇವುಗಳಿಂದಲ್ಲಾ ಅವರಲ್ಲಿ ವ್ಯಕ್ತವಾಗುವ ಸಾಮರ್ಥ್ಯವಿಶೇಷವನ್ನು ವಿಶದಪಡಿಸಿ, ಇಂಥವರು ಈ ೮ ನೆಯ ವೀರಶೈವ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವುದರಿಂದ ಸಭಾಕಾರ್ಯವು ಸಫಲದಾಯಕವಾಗಿ ನಡೆಯುವುದೆಂಬ ಕಾರಣದಿಂದ ಅವರನ್ನು ಅಧ್ಯಕ್ಷರನ್ನಾಗಿ ಆರಿಸುವ ವಿಷಯದಲ್ಲಿ ಸಭಿಕರೆಲ್ಲರೂ ಸಂಪೂರ್ಣ ಸಮ್ಮತಿಯಿಂದ ಅಂಗೀಕರಿಸಬೇಕೆಂದು ತಮ್ಮ ಸೂಚನೆಯನ್ನು ಮಾಡಿದರು. ಇದನ್ನು ಅನುಮೋದಿಸುವುದಕ್ಕೆ ಸೊಲ್ಲಾಪುರದ ಮ॥ ಮಲ್ಲಿಕಾರ್ಜುನಪ್ಪ ಅಪ್ಪಾರಾವ್ ಪಾಟೀಲರವರು ನಿಂತು ಮಹಾರಾಷ್ಟ್ರ ಭಾಷೆಯಲ್ಲಿ ಭಾಷಣಮಾಡುವಾಗ್ಗೆ ಸೊಲ್ಲಾಪುರದ ಸಭಾಧ್ಯಕ್ಷತೆಯಲ್ಲಿ ಅವರು ವ್ಯಕ್ತಪಡಿಸಿದ ವಿಚಕ್ಷಣತೆ ಮೊದಲಾದುವುಗಳನ್ನು ವಿವರಿಸಿ, ಪುಷ್ಟೀಕರಿಸಿದರು. ಮ॥ ಪಿ. ಮಹಾದೇವಯ್ಯ, ಬಿ.ಎ., ಬಿ.ಎಲ್., ರವರು ಅದನ್ನು ಅನುಮೋದಿಸುವಾಗ್ಗೆ ಆಂಗ್ಲಭಾಷೆಯಲ್ಲಿ ಮಾತನಾಡಿ ನಮ್ಮ ಸಮಾಜದ ಜನವರ್ಗದಲ್ಲಿ ಅವರು ಅದ್ವಿತೀಯರಾಗಿ ಪಡೆದುಕೊಂಡಿರುವ ಗೌರವಾತಿಶಯವನ್ನೂ ಗೌರವವನ್ನೂ ವಿಶದಪಡಿಸಿದರು. ಬಳಿಕ ಸಭಿಕರೆಲ್ಲರೂ ಕರತಾಡನದಿಂದ ತಮ್ಮ ಅನುಮೋದನವನ್ನು ವ್ಯಕ್ತಪಡಿಸುತ್ತಿರಲು, ದಿವಾನ್ ಬಹದ್ದೂರ್‌ರವರು ಅಧ್ಯಕ್ಷಪೀಠವನ್ನಲಂಕರಿಸಿ, ಆಂಗ್ಲಭಾಷೆಯಲ್ಲಿದ್ದ ತಮ್ಮ ಭಾಷಣವನ್ನು ಬಹಳ ಗಂಭೀರಧ್ವನಿಯಿಂದ ಓದಿ ಹೇಳಿದರು. ಅದರಲ್ಲಿ ವ್ಯಕ್ತವಾಗುತ್ತಿದ್ದ ಅಭಿಪ್ರಾಯಗಳನ್ನು ಕೇಳಿ ತಿಳಿದವರೆಲ್ಲಾ ಪದೇ ಪದೇ ಆನಂದಾಭಿನಂದನೆಗಳನ್ನು ಕರತಾಡನಗಳಿಂದ ವ್ಯಕ್ತಪಡಿಸುತ್ತಿದ್ದರು. ಅನಂತರ ಸಭೆಗೆ ಸಾನುಭೂತಿಪ್ರದರ್ಶನ ಮಾಡಿ ದಿವಾನ್ ಸರ್ ವಿಶ್ವೇಶ್ವರಯ್ಯನವರೇ ಮೊದಲಾದವರಿಂದ ಬಂದಿದ್ದ ತಂತ್ರೀವಾರ್ತೆಗಳೂ ಪತ್ರಗಳೂ ವಿವರಿಸಲ್ಪಟ್ಟುವು. ಬಳಿಕ ಅದರ ಕರ್ಣಾಟಕ ಭಾಷೆಯ ಪರಿವರ್ತನವನ್ನು ಅಧ್ಯಕ್ಷರ ಅಪ್ಪಣೆಯಮೇರೆಗೆ ಮ॥ ಹೆಚ್. ಕೆ. ಮಲ್ಲಪ್ಪನವರು ಓದಿ ಹೇಳಿದರು. ಕಡೆಗೆ ಮೈಸೂರು ವಿದ್ವಾನ್ ರಾಚಪ್ಪನವರ ಸಂಗೀತವು ಸುಶ್ರಾವ್ಯವಾಗಿ ನಡೆಯುತ್ತಿರಲು, ಸಭಿಕರಿಗೆ ಗಂಧಪುಷ್ಪಹಾರಾದಿಗಳು ಸಮರ್ಪಿಸಲ್ಪಟ್ಟುವು ಕಡೆಗೆ ವಿಷಯನಿರ್ಧಾರಕ ಸಂಘ (ಸಬ್ಜೆಕ್ಟ್ ಕಮಿಟಿಯು) ಏರ್ಪಡಿಸಲ್ಪಟ್ಟು ಅಂದಿನ ಕಾರ್ಯವು ಅಲ್ಲಿಗೆ ಮುಗಿದಿತು.

ಎರಡನೆಯ ದಿವಸದ ಕಾರ್ಯಗಳು.

ಈ ದಿನದ ಬೆಳಗಿನ ೮ ಗಂಟೆಗೆ ಸಭಾಮಂಟಪದಲ್ಲಿ ಸಬ್ಜೆಕ್ಟ್ ಕಮಿಟಿಯು ರಾವ್ ಸಾಹೇಬ್ ಶಿವಮೂರ್ತಿಸ್ವಾಮಿ ಕಣಬುರ್ಗಿಮಠ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಂಡು ಅದಿಸ ನಡೆಯಿತ್ತು ಅಭಿಪ್ರಾಯಗಳನ್ನೂ, ನಿರ್ಧಾರಗಳನ್ನೂ ಗೊತ್ತುಪಡಿಸಿದರು. ಮಧ್ಯಾಹ್ನ ೧ ಗಂಟೆಗೆ ಸಭಾಕಾರ್ಯಕ್ಕೆ ಆರಂಭವಾಯಿತು.

ಮೊಟ್ಟಮೊದಲು ಸಭಾಧ್ಯಕ್ಷರು ಮೊದಲನೇ ನಿರ್ಧಾರವನ್ನು ತಾವೇ ಸೂಚಿಸಿದರು. ಏನೆಂದರೆ—ಈಗಣ ಯುದ್ಧದಲ್ಲಿ ನಮ್ಮ ಸಾರ್ವಭೌಮರವರಿಗೆ ಧನಸಹಾಯ ಜನಸಹಾಯ ಮೊದಲಾದುವುಗಳಿಂದಲ್ಲಾ ಸಹಾಯಮಾಡಲು ನಮ್ಮ ಸಮಾಜವು ಸಂತೋಷದಿಂದ ಸನ್ನದ್ಧವಾಗಿರುತ್ತದೆ." ಎಂಬುದಾಗಿ. ಇದನ್ನು ಗೌರ್ನಮೆಂಟಿನವರಿಗೆ ತಂತ್ರೀವಾರ್ತೆಯ ಮೂಲಕ ಕಳುಹಿಸಿಕೊಡಲು ಸರ್ವಾನುಮೋದನೆಯಿಂದ ನಿರ್ಧರಿಸಲ್ಪಟ್ಟಿತು.

ಅನಂತರ ಮಹಾಸಭೆಯನ್ನು ತಪ್ಪದೆ ನಡೆಯಿಸುತ್ತಾ ಬರಬೇಕೆಂಬ ವಿಷಯದಲ್ಲಿ ಸೂಚನರೂಪವಾದ ಉಪನ್ಯಾಸವು ಮೊಟ್ಟಮೊದಲು ವೇ॥ ಬಿದರೆ ಗುರುಲಿಂಗಶಾಸ್ತ್ರಿಗಳಿಂದ ಮಾಡಲ್ಪಟ್ಟಿತು. ಏಕಮತ್ಯದಿಂದ ಇದನ್ನು ಸಾಧಿಸಬೇಕೆಂದು ಅದರಲ್ಲಿ ಪ್ರತಿಪಾದನೆಮಾಡಲ್ಪಟ್ಟಿದ್ದಿತು. ಬಳಿಕ ಇದೇ ವಿಷಯವನ್ನು ಪುಷ್ಟೀಕರಿಸಿ ಮ॥ ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿಯವರು ಭಾಷಣಮಾಡಿದರು.

ಅನಂತರ ಹೊಂಗ್ಗರೆ ಶ್ರೀಮಂತ ಅಡಿವೆಪ್ಪಶೆಟ್ಟರವರು ಈ ವಿಷಯವನ್ನು ಕುರಿತು ತಾವು ಮಾತನಾಡಲಾರಂಭಿಸಿ, ಪದೇಪದೇ ಈ ಮಹಾಸಭೆಯನ್ನು ಕೂಡಿಸುವುದು ಅವಶ್ಯಕವಾಗಿಯೇ ಇರುತ್ತದೆ. ಇದನ್ನು ನೆರವೇರಿಸಲು ಒಂದು ಫಂಡಿನ ಸಹಾಯವನ್ನು ಕಲ್ಪಿಸುವುದು ಉಚಿತವೆಂದು ನನಗೆ ತೋರುತ್ತದೆ. ಅಂಥ ಫಂಡು ಸ್ಥಾಪಿಸಲ್ಪಡುವುದಾದರೆ ಅದಕ್ಕೆ ನಾನು ೧ ಸಾವಿರ ರೂ.ಗಳನ್ನು ಕೊಡುತ್ತೇನೆಂದು ವಾಗ್ದಾನಮಾಡಿದುದನ್ನು ಕೇಳಿ ಸಭಿಕರೆಲ್ಲಾ ಪರಮಾನಂದದಿಂದ ಕರತಾಡನಮಾಡಿ ಅಭಿನಂದಿಸಿದರು.

ಬಳಿಕ ಮ॥ ಬಟಕ್ಟಪ್ಪ ಮುತ್ತೂರ್‌ರವರು ಇದೇ ವಿಷಯವನ್ನು ಕುರಿತು ಉಪನ್ಯಾಸಮಾಡಲಾರಂಭಿಸಿ, ಇದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿ ಶಾಶ್ವತ ಪ್ರಯತ್ನ ನಡೆಯಿಸಬೇಕೆಂದೂ, ಮಠಾಚಾರ್ಯರೆಲ್ಲರೂ ಈಗ ಜಗದ್ಗುರುಗಳು ಕೊಟ್ಟ ಅವಲಂಬನೆಯಂತೆ ಇದಕ್ಕೆ ಆಶ್ರಯ ಕೊಡಬೇಕೆಂದು ಪ್ರತಿಪಾದಿಸಿದರು. ಅನಂತರ ರಾ॥ಸಾ॥ ಕಣಬರ್ಗಿ ಮಠ ಇವರು ಸಹ ಯುಕ್ತಿಯುಕ್ತಭಾಷಣದಿಂದ ಪುಷ್ಟೀಕರಿಸುವಾಗ—ಪ್ರತಿಯೊಬ್ಬರೂ ಸಭೆಯ ನಿರ್ಧಾರಗಳನ್ನು ಆಚರಣೆಯಲ್ಲಿ ತರುವುದರಿಂದ ಅದರ ಸಾರ್ಥಕತೆಯನ್ನು ಸ್ಥಾಪಿಸಿ ಶಾಶ್ವತಗೊಳಿಸಿಕೊಳ್ಳಬೇಕೆಂದು ಪ್ರತಿಪಾದಿಸಿದರು. ಅಲ್ಲದೆ ಅದಕ್ಕಾಗಿ ಸ್ಥಾಪಿಸಬೇಕಾದ ಫಂಡಿಗೆ ಹಣವನ್ನು ಕೂಡಿಸಬೇಕಾದರೆ ಪ್ರತಿವರ್ಷ ಸಭೆಗೆ ಬರುವ ಪ್ರತಿನಿಧಿಗಳಿಂದಲೂ, ಪ್ರೇಕ್ಷಕರಿಂದಲೂ ತೆಗೆದುಕೊಳ್ಳುತ್ತಿರುವ ಟಿಕೇಟುಗಳ ಫೀ ಯನ್ನು ಇನ್ನೊಂದೊಂದು ರೂ. ಹೆಚ್ಚಿಸಿ, ಆ ಹೆಚ್ಚಿನ ದುಡ್ಡನ್ನು ೭-೮ ವರ್ಷಗಳ ವರೆಗೆ ಕೂಡಿಸಿದರೆ ೫೦ ಸಾವಿರ ರೂ. ಗಳ ಫಂಡು ಕೂಡಿಹೋಗುವುದೆಂದು ವಿವರಿಸಿದರು. ಮ॥ ಜಿ. ಕೆ. ರುದ್ರಾಪ್ಪರು ಅದನ್ನೇ ಅನುಮೋದಿಸಿ ಭಾಷಣ ಮಾಡಿದರು. ಕಡೆಗೆ ಈ ವಿಷಯದಲ್ಲಿ ನಿರ್ಧಾರವು—ಕಳೆದ ನಾಲ್ಕುವರ್ಷದಿಂದ ಮಹಾಸಭೆಯು ನಡೆಯದೆ ನಿಂತುಹೋದುದಕ್ಕಾಗಿ ವಿಷಾದವನ್ನು ಪ್ರದರ್ಶಿಸುವುದಲ್ಲದೆ ಮುಂದೆ ಪದೇ ಪದೇ ತಪ್ಪದೆ ನಡೆಯುವಂತೆ ಸಮಾಜಬಾಂಧವರೆಲ್ಲರೂ ಆಸ್ಥೆಯನ್ನು ತೋರಿಸತಕ್ಕುದು-ಎಂಬೀ ಸೂಚನೆಯನ್ನು ರಾ॥ಸಾ॥ ಕಣಬರ್ಗಿ ಮಠ ಇವರು ಮಾಡಲು, ಅದನ್ನು ಮ॥ ಗದಿಗಯ್ಯ ಹುಚ್ಚಯ್ಯ ಹೊನ್ನಾಪುರ ಮಠ ಇವರು ಅನುಮೋದಿಸಿ ಭಾಷಣಮಾಡಿದರು. ಆಗ್ಗೆ ಫಂಡಿನ ೫೦ ಸಾವಿರದಲ್ಲಿ ತಾವೂ ೧ ಸಾವಿರ ರೂ. ಗಳನ್ನು ಕೊಡುತ್ತೇವೆಂದೂ, ಶಿವಮೂರ್ತಿಸ್ವಾಮಿ ಕಣಬರಗಿಯವರೂ ೧ ಸಾವಿರ ರೂ. ಗಳನ್ನು ಕೊಡಲು ಸಿದ್ಧರಿರುವೆವೆಂದೂ ಆವೇಶದಾಯಕವಾದ ಭಾಷಣವನ್ನು ಮಾಡಿದರು. (ಅದರ ಸಭೆಯಲ್ಲಿ ವರ್ಗಣಿಯನ್ನೆತ್ತುವ ಕಾರ್ಯವು ನಡೆಯುವುದಿಲ್ಲವೆಂದು ಮೊದಲೇ ಸತ್ಕಾರಕ ಸಂಘದವರು ಪ್ರಕಟಿಸಿರುವಾಗ ಈಗ ಹೀಗೆ ವರ್ಗಣಿಯನ್ನೆತ್ತಬಹುದೆ? ಎಂಬ ವಿಚಾರವು ಹೊರಟು, ಅದರಮೇಲೆ ಇದು ಬಲಾತ್ಕಾರದ ವರ್ಗಣಿಯಲ್ಲ; ಸಂತೋಷಪೂರ್ವಕವಾದ ಪ್ರದಾನವಾದುದರಿಂದ ಅವರವರ ಉತ್ಸಾಹದಿಂದ ಏನನ್ನೂ ದಾನಮಾಡುವುದರಲ್ಲಿ ಅಡ್ಡಿಯಿಲ್ಲವೆಂದು ಮ॥ ವಕೀಲ್ ಸಿದ್ಧನಂಜಪ್ಪನವರೂ ಮ॥ ಪಿ. ಮಹಾದೇವಯ್ಯನವರೂ ಸಹ ಭಾಷಣಮಾಡಿ, ಫಂಡನ್ನು ಬೆಳೆಸುವಿಕೆಗೆ ಅಭಿಮಾನಶಾಲಿಗಳು ಸಹಾಯಮಾಡುವ ವಿಷಯದಲ್ಲಿ ಅವಕಾಶವನ್ನು ಕಲ್ಪಿಸಬಹುದೆಂದು ಸೂಚಿಸಿದರು. ಮತ್ತು ಹಾಗೆ ಇದಕ್ಕಾಗಿ ಒಂದು ಸಾವಿರಕ್ಕೆ ಕಡಿಮೆಯಿಲ್ಲದೆ ಕೊಡತಕ್ಕ ಮಹಾಶಯರಿಗೆ ಪ್ರತಿ ಸಭೆಯಲ್ಲೂ ಅಗ್ರಪೀಠಗಳನ್ನು ಕೊಡತಕ್ಕುದೆಂದು ನಿರ್ಧರಿಸಲೂ ಬಹುದೆಂದು ಸೂಚಿಸಿದರು.) ಅದರಮೇಲೆ ಮ॥ ಮಾನಾಪುರದ ಚನ್ನಬಸವಪ್ಪನವರು ಹೊಸಮನೆ ೧ ಸಾವಿರ. ಮ॥ ದೊಗ್ಗಳ್ಳಿ ಬಸವಣ್ಣಪ್ಪ ಶೆಟ್ಟರು ೧ ಸಾವಿರ. ಮ॥ ಚಿತ್ರ ಚಂ॥ ವೀರಪ್ಪನವರು ೩ ಸಾವಿರ. ಮ॥ ಬಟಕ್ಟಪ್ಪ ಮುತ್ತೂರು ಅಥಣಿಯವರು ೧ ಸಾವಿರ. ಮ॥ ಶಿವರುದ್ರಪ್ಪ ಮುರುಘಪ್ಪ ಚಿಗಟೇರಿಯವರು ೧ ಸಾವಿರ. ಮ॥ ಪಟೇಲ್ ವಿರೂಪಾಕ್ಷಪ್ಪನವರು ಅಲಗಿಲವಾಡ ಯವರು ೧ ಸಾವಿರ. ಮ॥ ರಾ॥ ದಾವಣಗೆರೆ ಮಾಗಾನಹಳ್ಳಿ ಷಡಕ್ಷರಪ್ಪನವರ ಮಕ್ಕಳು ಉಮಾಪತಿಯಪ್ಪನವರು ೧ ಸಾವಿರ. ಮ॥ ಹುಬ್ಬಳ್ಳಿ ಗುರುಸಿದ್ಧಪ್ಪ ಬಡಣಿಯವರು ೧ ಸಾವಿರ. ಮ॥ ತಿಗಟೂರು ಮ॥ಕೊಟ್ಟೂರಪ್ಪನವರು ೧ ಸಾವಿರ. ಮ॥ದಾವಣಗೆರೆ ತಿರುಕಪ್ಪನವರ ಮಠದ ಓಂಕಾರಪ್ಪನವರು ೧ ಸಾವಿರ. ಸಾಗರದ ಕೋಂ ಅಡಿವೆಪ್ಪಶೆಟ್ಟರು ೧ ಸಾವಿರ, ಸಭಾಧ್ಯಕ್ಷರಾದ ದಿ॥ಬ॥ಕೆ.ಪಿ. ಪುಟ್ಟಣ್ಣಶೆಟ್ಟಿಯವರು ೧ ಸಾವಿರ. ಮ॥ಬೆಂಗಳೂರು ಯಜಮಾನ್ ಚಿಕ್ಕವೀರಪ್ಪನವರು ೧ ಸಾವಿರ. ಮ॥ ಹಾಸನದ ಸಾಹುಕಾರ್ ಶ್ರೀಕಂಠಪ್ಪನವರು ೧ ಸಾವಿರ. ಮ॥ಹಾಸನದ ಕೆಣ (ಎಚ್. ಕೆ.) ಮಹಾದೇವಪ್ಪನವರು ೧ ಸಾವಿರ. ಮ॥ ಹುಬ್ಬಳ್ಳಿ ಗುರುಸಿದ್ಧಪ್ಪಣ್ಣ ನೀಲಯವರ ಮಕ್ಕಳು ಗುರಪ್ಪನವರು ೧ ಸಾವಿರ. ಮ॥ ಹಾಸನದ ತಾಲೂಕು ಆಲೂರಿನ ಸೀಳಿನ ನಂಜುಂಡಪ್ಪನವರು ೧ ಸಾವಿರ. ಮ॥ರಾ॥ ಅರಸೀಕೆರೆ ತಾ॥ ಹಲ್ಕೂರು ಸಾಹುಕಾರ್ ಮರುಳಸಿದ್ದಪ್ಪಶೆಟ್ಟರು ೧ ಸಾವಿರ. ಸಭೆಯ ಸ್ವಾಗತ ಸಂಘಾಧ್ಯಕ್ಷರಾದ ತಿರುಕಪ್ಪನವರ ಮಠದ ಷಡಾಕ್ಷರಪ್ಪನವರು ೧ ಸಾವಿರ. ದಾವಣಗೆರೆಯ ಮಹಾಸಭೆಯ ಉಪಾಧ್ಯಕ್ಷರಾದ ಮ॥ ಉರುವಕೊಂಡೆ ಚನ್ನಬಸವಪ್ಪನವರು ೧ ಸಾವಿರ. ರಾಣಿಬೆನ್ನೂರು ತಾ॥ ಮೇಡ್ಲೇರಿಯ ಮ॥ರಾ॥ ಮುಂಡಾಸದ ವೀರಪ್ಪನವರು ೨ ಸಾವಿರ. ಹರಿಹರದ ಮ॥ ತಿಪ್ಪಣ್ಣನವರ ಮುರಿಗಪ್ಪನವರು ೧ ಸಾವಿರ. ಧಾರವಾಡ ಜಿಲ್ಲಾ ಹಿರೆಕೆರೂರು ಕುಬಸದ ದೊಡ್ಡ ಅಡವಿಯಪ್ಪನವರು ೧ ಸಾವಿರ. ಂಬಳವಿಯ ಮ॥ರಾ॥ ಗಂಗಾಧರಪ್ಪ ಸಾಹುಕಾರಯವರು ೧ ಸಾವಿರ. ಕೋಲಾರದ ಕಂಟ್ರಾಕ್ಟರ್ ಮ॥ ರಾಚಪ್ಪನವರು ೧ ಸಾವಿರ. ದಾವಣಗೆರೆಯಲ್ಲಿರುವ ಅಜ್ಜಂಪುರದ ಮ॥ ರಾ॥ ಶೆಟ್ಟರ ಶಿವನಾಗಪ್ಪನವರು ೧ ಸಾವಿರ. ಶಿವಮೊಗ್ಗಾ ಆ॥ ನ್ಯಾಮತಿಯ ಜೇಂಗ ಮುರಿಗಪ್ಪನವರ ಮಕ್ಕಳು ವೀರಭದ್ರಪ್ಪನವರು ೧ ಸಾವಿರ. (ಶಿವಮೊಗ್ಗಾ ವಿದ್ಯಾಭಿವೃದ್ಧಿ ಫಂಡಿಗ ೧ ಸಾವಿರ). ಹೀಗೆ ಧನಸಹಾಯಮಾಡಿದವರನ್ನೆಲ್ಲಾ ಒಂದು ಕಡೆ ಕುಳ್ಳಿರಿಸಿ ಫೋಟೋ ತೆಗೆದು ಅದರಪ್ರತಿಯೊಂದೊಂದನ್ನು ಸಭಿಕರಿಗೆಲ್ಲಾ ಹಂಚಲು ತಾವು ಸಿದ್ಧರಿರುವೆವೆಂದು ದಾವಣಗೆರೆಯ ನಂಜುಂಡಸ್ವಾಮಿಯವರು ವಾಗ್ದಾನಮಾಡಿದರು. ಮಾಯಕೊಂಡ ಹಿರೇಹಳ್ಳಿ ಶಿವರುದ್ರಪ್ಪ ರುದ್ರಪ್ಪನವರು ೧ಸಾವಿರ. ಮ॥ ಪರಪ್ಪಣ್ಣ ಕಿತ್ತೂರು ಬೆಳಗಾಂವಿಯವರು ೧ ಸಾವಿರ. ಚೆನ್ನಗಿರಿ ತಾ॥ ತ್ಯಾವಣಗಿ ಸಾಹುಕಾರ್ ಬಟಕ್ಟಪ್ಪನವರು ೧ ಸಾವಿರ. (ಹೀಗೆ ವಾಗ್ದಾನ ಮಾಡಿದವರ ಫೋಟೋ ಕಾಪಿಗಳನ್ನು ಅಚ್ಚುಮಾಡಿ ಸ್ಟಾರ್ ಪತ್ರಿಕೆಯ ಜತೆನೆ ಹಂಚಲು ಸ್ಟಾರ್ ಪತ್ರಿಕಾಕರ್ತರಾದ ಮ॥ ವೈ. ವಿರೂಪಾಕ್ಷಯ್ಯನವರು ವಾಗ್ದಾನಮಾಡಿದರು.) ದಾವಣಗೆರೆಯ ಮ॥ ಗೌಡರ ಸಣ್ಣಮಹಾಲಿಂಗಪ್ಪನವರ ಗುರುಶಾಂತಪ್ಪನವರು ೧ ಸಾವಿರ. ಮ॥ ಸಿದ್ಧಪ್ಪ ಸುಗಂಧಿ ಅಥಣಿಯವರು ಅಥಣಿಯ ರೇವಪ್ಪ ಸುಗಂಧಿಯವರ ಮಕ್ಕಳು ಸಿದ್ಧಪ್ಪನವರು ಸಹ ೧ ಸಾವಿರ. ಧಾರವಾಡ ಜಿಲ್ಲಾ ಹಿರೆಕೆರೂರು ಸಣ್ಣಶಿವಲಿಂಗಪ್ಪನವರ ಮಕ್ಕಳು ಅಡವಿಯಪ್ಪನವರು ೧ ಸಾವಿರ. ಶ್ರೀಮಜ್ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಈ ಫಂಡಿಗಾಗಿಯೂ ಸಭೆಯನ್ನು ಆಶೀರ್ವದಿಸುವುದಕ್ಕಾಗಿಯೂ ಫಲಮಂತ್ರಾಕ್ಷತೆಪುರಸ್ಸರವಾಗಿ ಅಶೀರ್ವದಿಸಿದುದು ೫ ಸಾವಿರ. ದಾವಣಗೆರೆಯ ಆವಿಶೆಟ್ಟರ ಬಸವಲಿಂಗಪ್ಪನವರು ೩ ಸಾವಿರ. ಹರಿಹರದ ಮ॥ ಮೂರುಕಲ್ಲು ರಾಚೋಟಪ್ಪನವರು ೧ ಸಾವಿರ. ಬಳ್ಳಾರಿಯ ಮ॥ ವೀರಾಪುರದ ಬಸವಣ್ಣಪ್ಪನವರು ಬನ್ನಿಕಲ್ಲು ಇವರು ೧ ಸಾವಿರ. ಬೆಂಗಳೂರಿನ ಮ॥ ಶಂಕರಣ್ಣನವರ ಶಿವಪ್ಪನವರು ೧ ಸಾವಿರ. ಶಿವಮೊಗ್ಗಾದ ಸಾ॥ ಮ॥ ಕಾಡಪ್ಪನವರು ೧ ಸಾವಿರ. ಹರಪನಹಳ್ಳಿ ಮ॥ ನಲ್ಕುದುರೆ ದೊಡ್ಡ ಕೊಟ್ಟೂರಪ್ಪನವರು ೧ ಸಾವಿರ. ಬೆಳಗಾಂ ಜಿಲ್ಲಾ ಅಥಣಿಯ ರೇವಪ್ಪಣ್ಣ ಮಹಾಜನಯ ನವರು ೧೧೧೧ ರೂ. ಹೀಗೆ ಸಭಿಕರೆಲ್ಲಾ ಉದಾರಮತಿಗಳಾದ ಧನಿಕರು ತಾವಾಗಿ ಬಂದು ಅಧ್ಯಕ್ಷರ ಮುಂದೆ ನಿಂತು ಫಂಡಿಗೆ ಧನಸಹಾಯ ಮಾಡಲು ಸಿರುಪಮಾನ ಕುತೂಹಲಗೊಳ್ಳುವಂತೆ ಮಾಡುವಲ್ಲಿ ಮ॥ ಗದಿಗಯ್ಯ ಹುಚ್ಚಯ್ಯ ಹೊನ್ನಾಪುರಮಠ, ಮ॥ ಶಿವಮೂರ್ತಿಸ್ವಾಮಿ ಕಣಬುರಗಿಮಠ, ಮ॥ ಪಿ. ಮಹಾದೇವಯ್ಯ, ಬಿ.ಎ., ಬಿ.ಎಲ್., ಈ ಮೂವರ ಅನುಪಮವಾದ ವಚನಸುಧಾಸಾರವು ಮುಖ್ಯಕೈತನ್ಯವಾಗಿದ್ದುದನ್ನು ಕಂಡು ಸಭಿಕರೆಲ್ಲರೂ ಅವರಿಗೆ ಪದೇಪದೇ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದರು.

ಇಲ್ಲಿಗೆ ೨ ನೆ ದಿವಸ ಸಭಾಕಾರ್ಯಗಳು ಮುಗಿದುವು.

ಸ್ವಾಗತಸಂಘಾಧ್ಯಕ್ಷರ ಉಪನ್ಯಾಸ.

ಪರಮಪೂಜ್ಯರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಪಾದಕಮಲಸ್ಪರ್ಶದಿಂದ ಪವಿತ್ರವಾಗಿರುವ ಈ ಸಭಾಮಂಟಪವನ್ನಲಂಕರಿಸಿರುವ ಸಮಸ್ತ ವಿರಕ್ತ ಮಹಾಸ್ವಾಮಿಗಳಿಗೂ, ಪಟ್ಟಚರಮೂರ್ತಿಗಳಿಗೂ, ಸಂಸ್ಥಾನಿಕರಿಗೂ, ರಾಜಕೀಯಾಧಿಕಾರಿಗಳಿಗೂ, ಪಂಡಿತರಿಗೂ, ಪ್ರತಿನಿಧಿಗಳಿಗೂ, ಪ್ರೇಕ್ಷಕರಿಗೂ ದಾವಣಗೆರೆ ವೀರಶೈವರ ಪರವಾಗಿ ನನ್ನ ಪ್ರೇಮಪೂರ್ವಕವಾದ ಸ್ವಾಗತವನ್ನು ಮಾಡುತ್ತೇನೆ.

ವಂದನೀಯರಾದ ಮಹಾಸ್ವಾಮಿಗಳೇ, ಮಾನನೀಯರಾದ ಸಭಾಸದರೇ, ವೀರಶೈವಜನಾಂಗದೇಳಿಗೆಯ ಕಾರ್ಯವೇ ಮುಖ್ಯವೆಂದು ಭಾವಿಸಿ, ಸ್ವಜನಹಿತಾಪೇಕ್ಷೆಯಿಂದ ನನ್ನ ಆಮಂತ್ರಣವನ್ನು ಸ್ವೀಕರಿಸಿ, ಸ್ವಕೀಯವಾದ ಉದ್ಯೋಗವ್ಯವಹಾರಗಳನ್ನು ಬಿಟ್ಟು, ಮಾರ್ಗಾಯಾಸವನ್ನೂ ಧನವ್ಯಯವನ್ನೂ ಗಣನೆಗೆ ತಾರದೆ, ಸಮಾಜೋತ್ಕರ್ಷತೆಯ ಸಾಧನರೂಪವಾದ ಈ ಮಹಾಸಭೆಗೆ ಬಹುದೂರದ ಪ್ರದೇಶಗಳಿಂದ ಸಹ ತಾವು ದಯಮಾಡಿಸಿರುವುದನ್ನು ನೋಡಿದರೆ ಈ ಸಮಾಜೋನ್ನತಿಯಲ್ಲಿ ತಮ್ಮಗಳಿಗಿರುವ ಅನೋಘವಾದ ಕುತೂಹಲವು ವ್ಯಕ್ತವಾಗುವುದು. ಇಂತಹ ಮಹನೀಯರಾದ ತಾವು ಏಕತ್ರ ಸೇರಿ ದರ್ಶನವನ್ನು ಕೊಟ್ಟುದರಿಂದ ಆನಂದತುಂದಿಲಸ್ವಾಂತನಾಗಿರುವೆನು. ಮತ್ತು ಯಾವ ಪರಮಪೂಜ್ಯರ ಪಾದಪದ್ಮಸಂದರ್ಶನಾರ್ಥವಾಗಿ ಭಕ್ತಜನರು ಅವಿಶ್ರಾಂತಶ್ರಮವನ್ನಾದರೂ ವಹಿಸಿ ಭಕ್ತಿವಿಶ್ವಾಸಾದಿಗಳಿಂದ ತಾವಾಗಿಯೇ ಬರಲು ಹಾರೈಸುವರೋ ಅಂತಹ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿಯು ಬಿಜಯಂಗೆಯ್ದು, ಈ ಸಭಾಮಂಟಪದಲ್ಲಿ ವಿರಾಜಿಸುತ್ತಿರುವ ಸಿಂಹಪೀಠದಲ್ಲಿ ಮೂರ್ತಿಗೊಂಡಿರುವುದರಿಂದ ಅಪ್ರಯತ್ನಪೂರ್ವಕವಾಗಿ ಶ್ರೀಗಳವರ ಪಾದಪದ್ಮಸಂದರ್ಶನವು ಸರ್ವರಿಗೂ ಲಭ್ಯವಾದುದರಿಂದ ನನ್ನ ಆನಂದಕ್ಕೆ ಪಾರವೇ ಇಲ್ಲವಾಗಿದೆ. ಇದು ಈ ಮಹಾಸಭೆಯ ಪ್ರಾಶಸ್ತ್ಯವನ್ನು ಹೆಚ್ಚಿಸಿರುವುದು.

ವೀರಶೈವ ಮಹಾಸಭೆಯು 1904 ರಲ್ಲಿ ಪ್ರಥಮತಃ ಧಾರವಾಡದಲ್ಲಿ ಉದಯವಾಗಿ 1913 ವರೆಗೆ 7 ಸಭೆಗಳು ನಡೆದುವು. 1913 ರಲ್ಲಿ ಸಿದ್ಧಾಪುರದೊಳಗೆ ನಡೆದ ಸಭೆಯಿಂದೀಚೆಗೆ 4 ಸಂವತ್ಸರಗಳ ಪರ್ಯಂತ ಯಾವ ಪ್ರಾಂತದಲ್ಲಿಯೂ ಸಭೆ ನಡೆಯಲಿಲ್ಲ. ವೀರಶೈವ ಮಹಾಸಭೆಯೆಂಬ ಕಲ್ಪತರು, ವರ್ಷವರ್ಷ ಪೋಷಕರ ಆದರದಿಂದ ಅಭಿವೃದ್ಧಿಸ್ಥಿತಿಗೆ ಬರುತ್ತಾ ಇದ್ದು ಉತ್ಪನ್ನವಾದಂದಿನಿಂದ ಉತ್ತಮ ಫಲಗಳನ್ನೇ ಕೊಡುತ್ತಾ ಇದ್ದರೂ ಇದರ ಪೋಷಣೆಯಲ್ಲಿ ಅನಾದರವನ್ನು ತೋರಿಸುವುದು ಸಮಾಜೋನ್ನತಿಯಲ್ಲಿ ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಅಸಂತೋಷವನ್ನುಂಟುಮಾಡದೇ ಇರಲಾರದು. ಮುಂಬಯಿ ಪ್ರಾಂತ ಬಳ್ಳಾರಿ ಮೈಸೂರು ಪ್ರಾಂತಗಳಲ್ಲಿ ಮಾತ್ರ ಮಹಾಸಭೆಗಳು ನಡಿಸಲ್ಪಟ್ಟುವು. ವೀರಶೈವ ಪ್ರಜಾಸಂಖ್ಯೆ ಹೆಚ್ಚಾಗಿರುವ ಮದ್ರಾಸ್ ಪ್ರಾಂತ, ಹೈದರಾಬಾದ್ ಪ್ರಾಂತಗಳಲ್ಲಿ ಮಹಾಸಭೆಯು ನಡೆಯಬೇಕಾದುದು ಅತ್ಯಾವಶ್ಯಕವಾಗಿದ್ದರೂ ಆ ಕಡೆಗಳಲ್ಲಿ ಇದುವರೆಗೆ ಪ್ರಯತ್ನಗಳೇನೂ ನಡೆಯದೇ ಇರುವುದನ್ನು ಯೋಚಿಸಿದರೆ ಇನ್ನೂ ನಮ್ಮ ಸಮಾಜದ ದುರ್ಗತಿಯು ಮೂಲೋಚ್ಚಾಟನವಾಗಲಿಲ್ಲವೆಂದು ಎಣಿಸಬಹುದಾಗಿದೆ. ಈ ಮಹಾಸಭೆಯು ಅವಿಚ್ಛಿನ್ನವಾಗಿ ವರ್ಷಂಪ್ರತಿ ಯಾವುದಾದರೊಂದು ಮುಖ್ಯಮುಖ್ಯ ಸ್ಥಳದಲ್ಲಿ ನಡೆಯುವಂತೆ ಪೂರ್ವಭಾವಿಯಾಗಿಯೇ ನಿರ್ಧರಿಸಿ ಚಿರಸ್ಥಾಯಿಯಾಗುವಂತೆ ಮಾಡತಕ್ಕುದು ಮುಖ್ಯವಾದುದಾಗಿದೆ.

ಮಹಾಶಯರೇ, ವೀರಶೈವ ಸಮಾಜೋನ್ನತಿಯ ಕಾರ್ಯಗಳಲ್ಲಿಯೇ ತತ್ಪರರಾದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರು ಸಮಾಜದೇಳಿಗೆಗೆ ಮುಖ್ಯವಾದ ಮಹಾಸಭೆಯನ್ನು ದೀರ್ಘಕಾಲ ನಿಲ್ಲಿಸುವುದು ಯುಕ್ತವಲ್ಲವೆಂದು ಪರ್ಯಾಲೋಚಿಸಿ, ಈ ಸಂವತ್ಸರದಲ್ಲಿ ಮಹಾಸಭೆಯನ್ನು ದಾವಣಗೆರೆಯಲ್ಲಿ ನಡೆಯಿಸತಕ್ಕುದೆಂದು ಅಪ್ಪಣೆಯಪಾಲಿಸಿದರು. ಸಭಾಕಾರ್ಯಗಳ ಸಲಕರಣೆಗೆ ಸಾಕಾದಷ್ಟು ಕಾಲವ್ಯವಧಾನವಿಲ್ಲದೆ ಇದ್ದಾಗ್ಯೂ ಶ್ರೀ॥ ಗಳವರ ಆಶೀರ್ವಾದ ಕೃಪಾಕಟಾಕ್ಷದಿಂದ ಯಾವ ವಿಘ್ನವೂ ಒಟ್ಟಲಾರದೆಂಬ ದೃಢವಾದ ನಂಬಿಕೆಯಿಂದ ಮಹಾಸಭೆಯನ್ನು ನಡೆಯಿಸಲು ನಿರ್ಧರಿಸಿದ್ದಾಯಿತು.

ಈ ದಾವಣಗೆರೆಯು ಪೂರ್ವದಲ್ಲಿ ಚಿಕ್ಕ ಹಳ್ಳಿಯಾಗಿತ್ತೆಂದು ಹೇಳಲ್ಪಡುವುದಾದರೂ ಕ್ರಮೇಣ ಊರ್ಜಿತಸ್ಥಿತಿಗೆ ಬಂದು ಈಗ ಸಾಧಾರಣವಾಗಿ ಒಂದು ಚದರಮೈಲಿ ವಿಸ್ತಾರವುಳ್ಳದ್ದಾಗಿಯೂ 10 ಸಹಸ್ರಜನಸಂಖ್ಯೆಯಿಂದ ಕೂಡಿದ್ದಾಗಿಯೂ ಇದೆ. ಈ ಪಟ್ಟಣವು ನಮ್ಮ ಮೈಸೂರು ಸೀಮೆಯಲ್ಲಿ ಬೆಂಗಳೂರೊಂದನ್ನು ಬಿಟ್ಟರೆ ವ್ಯಾಪಾರ ವಿಷಯದಲ್ಲಿ ಮಾತ್ರ ಮೊದಲನೆಯದಾಗಿದೆ. ಇಲ್ಲಿ ಹತ್ತಿ ಅರಳೆಯ ವ್ಯಾಪಾರವೇ ಹೆಚ್ಚು. ಜಿನ್ನಿಂಗ್ ಫ್ಯಾಕ್ಟರಿಗಳು 9, ಅರಳೆ ಪ್ರೆಸ್ಸುಗಳು 4 ಇವೆ. ಈ ಸ್ಥಳದಲ್ಲಿ ಬಟ್ಟೆ ಮಿಲ್ಲು ಇಲ್ಲದೇ ಇರುವುದು ಒಂದು ಕೊರತೆಯಾಗಿತ್ತು. ಈಚೆಗೆ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರ ಉದಾರಾಶ್ರಯದಿಂದ ಒಂದು ಮಿಲ್ ಏರ್ಪಡಾಗತಕ್ಕುದಿದೆ. ಇದಾದರೆ ಈ ಸ್ಥಳದ ಪುರೋಭಿವೃದ್ಧಿಗೆ ತುಂಬಾ ಸಹಾಯವಾಗುತ್ತದೆ. ಅಘಟಿತ ಘಟನಾಸಾಮರ್ಥ್ಯವುಳ್ಳವರಾಗಿ ಮಹಿಮಾತಾಲಿಗಳೆನಿಸಿಕೊಂಡಿದ್ದು ಈಗ ಸುಮಾರು ನೂರಾರು ವರ್ಷಗಳ ಕೆಳಗೆ ನಿಜಸಮಾಧಿಯಲ್ಲಿ ಬೆರೆದ ಯತಿವರ್ಯರಾದ ಶ್ರೀ ಬಕ್ಕೇಶ್ವರಸ್ವಾಮಿಗಳ ಸಮಾಧಿ ಮಂಟಪವು ಇಲ್ಲಿ ಶುಭಪ್ರದವಾದ ಪ್ರೇಕ್ಷಣೀಯ ಸ್ಥಳವಾಗಿದೆ. ಇಲ್ಲಿ ಇಂಗ್ಲೀಷ್ ಹೈಸ್ಕೂಲ್ ಇಲ್ಲದೆ ಇರುವ ಪ್ರಯುಕ್ತ ಹೈಸ್ಕೂಲ್ ಏರ್ಪಾಡಾಗಲು ಸರ್ಕಾರದವರನ್ನು ಹಲವುಬಾರಿ ಪ್ರಾರ್ಥಿಸಿಕೊಂಡಾಗ್ಯೂ ಅದ್ಯಾಪಿ ನೆರವೇರದೇ ಇರುವುದರಿಂದ ಈ ಸ್ಥಲವು ವಿದ್ಯಾವಿಷಯದಲ್ಲಿ ಮಾತ್ರ ಅಷ್ಟು ಮುಂದಾಗಿಲ್ಲ. ಈ ಕೊರತೆಯು ಶೀಘ್ರದಲ್ಲಿಯೇ ನಿವಾರಣೆಯಾಗಬಹುದೆಂಬ ನಿರೀಕ್ಷಣೆ ಇದೆ. ಇಲ್ಲಿನ ಜನಸಂಖ್ಯೆಯಲ್ಲಿ ಹೆಚ್ಚು ಜನರು ವೀರಶೈವರಾಗಿದ್ದಾರೆ. ಶ್ರೀ ಜಗದ್ಗುರುಗಳವರ ಸನ್ನಿಧಿಯಿಂದ ಇಲ್ಲಿನ ವಿರಕ್ತಮಠಕ್ಕೆ ನಿಯಮಿಸಲ್ಪಟ್ಟಿರುವ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯಸ್ವಾಮಿಗಳವರು ಇಲ್ಲಿಗೆ ದಯಮಾಡಿಸಿದಮೇಲೆ ಇಲ್ಲಿನ ವೀರಶೈವರು ಮಾತ್ರವೇ ಅಲ್ಲದೆ ಈ ಪ್ರಾಂತದ ವೀರಶೈವರೆಲ್ಲರೂ ಧಾರ್ಮಿಕ ಸಾಮಾಜಿಕ ಮತ್ತು ವಿದ್ಯಾವಿಷಯಗಳಲ್ಲಿ ದಿನೇ ದಿನೇ ಅಭಿವೃದ್ಧಿಗೆ ಬರುತ್ತಿರುವರು. ಸಮಾಜದ ಅಭ್ಯುದಯಕ್ಕೆ ವಿದ್ಯೆಯೇ ಮೂಲವಾಗಿರುವುದರಿಂದ ಪೂಜ್ಯಪಾದರಾದ ಶ್ರೀ ಮೃತ್ಯುಂಜಯಸ್ವಾಮಿಗಳವರ ಪ್ರೋತ್ಸಾಹಬಲದಿಂದ ಇಲ್ಲಿನ ವೀರಶೈವ ಮಹಾಜನಗಳು 1907 ನೇ ಸಂವತ್ಸರದಲ್ಲಿ ವೀರಶೈವ ವಿದ್ಯಾಭಿವೃದ್ಧಿ ಫಂಡನ್ನು ಸ್ಥಾಪಿಸಿದರು. ಇದರಿಂದ ಮೈಸೂರು ಸೀಮೆಯ ಕಾಲೇಜು, ಹೈಸ್ಕೂಲುಗಳಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ಮಾಡುತ್ತಿರುವ 25 ಜನ ವಿದ್ಯಾರ್ಥಿಗಳಿಗೆ ಮಾಸಿಕವೇತನಗಳು ಕೊಡಲ್ಪಡುತ್ತಿರುವುವು. ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಾಗಿ ಇಲ್ಲಿ "ವೀರಶೈವ ಹಿತೋಪದೇಶಕ ಸಂಘ" ಎಂಬ ಒಂದು ಸಂಘವು 4 ವರ್ಷಗಳ ಕೆಳಗೆ ಸ್ಥಾಪಿತವಾಗಿ ಅನೇಕ ಕಡೆಗಳಲ್ಲಿ ಇದರ ಶಾಖಾಸಂಘಗಳು ಸ್ಥಾಪಿಸಲ್ಪಟ್ಟಿವೆ. ಮತ್ತು ಈ ಸಂಘದವರು ಉಪಯುಕ್ತವಾದ ಒಂದು ಪುಸ್ತಕ ಭಂಡಾರವನ್ನೂ ಒಂದು ಭಜನಾಸಂಘವನ್ನೂ ಇಲ್ಲಿ ಸ್ಥಾಪಿಸಿದ್ದಾರೆ.

ವೀರಶೈವ ಮಹಾಸಭೆಯುತ್ಪನ್ನವಾದೀಚೆಗೆ ನಮ್ಮ ಸಮಾಜದವರು ಧಾರ್ಮಿಕ, ಸಾಮಾಜಿಕ, ನೈತಿಕ, ವ್ಯಾವಹಾರಿಕ ವಿಷಯಗಳಲ್ಲಿ ಎಚ್ಚತ್ತು ಸಮಾಜದೇಳಿಗೆಯ ಕಾರ್ಯಗಳಲ್ಲಿ ಪ್ರವೇಶಿಸಿಯೂ ಪ್ರವೇಶಿಸುತ್ತಲೂ ಅಭಿವೃದ್ಧಿಗೆ ಬರುತ್ತಿದ್ದಾರೆ. ಆದರೆ ಜನಪರಿಮಾಣದಿಂದ ನೋಡಿದರೆ ಈ ಅಭಿವೃದ್ಧಿಯು ಶೇಕಡ 5 ರಂತೆ ಇದೆಯೆಂದು ಧಾರಾಳವಾಗಿ ಹೇಳುವಂತೆಯೂ ಇಲ್ಲ. ನಮ್ಮ ಸಮಾಜದ ಮುಖ್ಯ ವೃತ್ತಿಗಳೆಂದರೆ ವ್ಯವಸಾಯ, ವ್ಯಾಪಾರ ಈ ವೃತ್ತಿಗಳಲ್ಲಿ ಪೂರ್ವಪದ್ಧತಿಯ ಅವಲಂಬನವೇ ಇರುವುದು. ಮತ್ತು ನಮ್ಮವರ ಕುಶಲವಿದ್ಯೆಗಳಂತೂ ನಾಮಾವಶೇಷಗಳಾಗಿರುವುವು. ಇದರಿಂದ ವಿದೇಶೀಯರಂತೆ ನಾವು ಧನಿಕರಾಗುವುದಕ್ಕೆ ಎಂದಿಗೂ ಆಗಲಾರದು. ಲಾಭಕರಗಳಾದ ನವೀನಮಾರ್ಗಗಳನ್ನವಲಂಬಿಸಿದರೆ ಪಾಶ್ಚಾತ್ಯರಂತೆ ನಾವೂ ಸಹ ಅಭಿವೃದ್ಧಿಗೆ ಬರುವೆವು. ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಸಮರ್ಥಮಂತ್ರಿಗಳಾದ ಶ್ರೀಮಾನ್ ಸರ್ ಎಂ. ವಿಶ್ವೇಶ್ವರಯ್ಯ, ಕೆ. ಸಿ. ಐ. ಇ. ಯವರ ಮೂಲಕ ಮೈಸೂರು ದೇಶದ ಸಂಪದಭಿವೃದ್ಧಿಗಾಗಿ ಪ್ರಜಾವಾತ್ಸಲ್ಯದಿಂದ ಸಂಪದಭ್ಯುದಯ ಸಮಾಜವನ್ನೇರ್ಪಡಿಸಿ ವ್ಯವಸಾಯ, ವ್ಯಾಪಾರ, ಕೈಗಾರಿಕೆ ಇವುಗಳಲ್ಲಿ ಕುಶಲರಾದ ಅಧಿಕಾರಿಗಳನ್ನು ನಿಯಮಿಸಿ ಪ್ರಜೆಗಳಿಗೆ ತಕ್ಕ ತಿಳಿವಳಿಕೆಗಳನ್ನು ಕೊಡಿಸಿ ಪ್ರಜೆಗಳು ಸಂಪದ್ಯುಕ್ತರಾಗಲು ಹಲವು ಮಾರ್ಗಗಳನ್ನು ಏರ್ಪಡಿಸಿರುವರು. ಇದರಂತೆ ಇಂಡಿಯಾ ಸರ್ಕಾರದವರೂ ಏರ್ಪಡಿಸಿರುವರು. ಈ ಸುಸಮಯದಲ್ಲಿ ಇದರ ಪ್ರಯೋಜನವನ್ನು ನಮ್ಮ ಸಮಾಜದವರು ಹೊಂದಲು ಮೊದಲು ಪ್ರಯತ್ನಪಡತಕ್ಕುದಾಗಿದೆ. ವಿದ್ಯೆಯೇ ಮನುಷ್ಯನ ಸರ್ವಸುಖಕ್ಕೂ ಮೂಲಾಧಾರವಾದುದರಿಂದ ನಮ್ಮ ದಯಾಳು ಸರ್ಕಾರದವರು ಮೈಸೂರು ದೇಶದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಹೊಂದುವಂತೆ ಏರ್ಪಡಿಸಿರುವರು. ಮತ್ತು ವಿದ್ಯೆಯಲ್ಲಿ ಹಿಂದುಳಿದ ಜನಾಂಗದವರ ವಿದ್ಯಾಪ್ರೋತ್ಸಾಹಕ್ಕಾಗಿ ಈ ವರ್ಷದಲ್ಲಿ 1 ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿ ವಿದ್ಯಾರ್ಥಿ ವೇತನಗಳನ್ನು ಕೊಡುತ್ತಿರುವರು. ಈ ಶುಭಸಮಾಚಾರಗಳನ್ನು ಕೇಳಿ ದೇಶಹಿತೈಷಿಗಳಾದ ಯಾರುತಾನೇ ಸಂತೋಷಪಡದೆ ಇರುವರು? ಪ್ರಜಾವಾತ್ಸಲ್ಯವುಳ್ಳ ನಮ್ಮ ಘನವಾದ ಸರಕಾರಕ್ಕೆ ಕೃತಜ್ಞತೆಯಿಂದ ವಂದನೆಗಳನ್ನು ಅರ್ಪಿಸುತ್ತೇನೆ. ಮೈಸೂರು ದೇಶದಂತೆ ಪ್ರಾಥಮಿಕ ಶಿಕ್ಷಣವು ಬ್ರಿಟಿಷ್ ರಾಜ್ಯದಲ್ಲಿಯೂ ಉಚಿತವಾಗಿ ದೊರೆಯುವಂತೆ ಆಗತಕ್ಕುದು ಸಕಲರ ಏಳಿಗೆಗೆ ಆವಶ್ಯಕವಾಗಿರುತ್ತದೆ. ನಮ್ಮ ಸಮಾಜದೊಳಗೆ ವಿವಾಹಾದಿ ಶುಭಕಾರ್ಯಗಳಲ್ಲಿ ದುಂದುವೆಚ್ಚಮಾಡುವುದು, ಬಾಲ್ಯವಿವಾಹ, ವೃದ್ಧವಿವಾಹ ಇವು ಇನ್ನೂ ತಗ್ಗಲಿಲ್ಲ. ಉಪಯುಕ್ತವಾದ ಸ್ತ್ರೀವಿದ್ಯಾಭ್ಯಾಸಕ್ಕಂತೂ ನಮ್ಮ ಸಮಾಜದವರು ಹೆಚ್ಚುಗಮನ ಕೊಟ್ಟಿರುವುದಿಲ್ಲ. ನಮ್ಮ ಸಮಾಜದ ನಾರೀಮಣಿಗಳೆಲ್ಲರೂ ವಿದ್ಯಾವತಿಯರಾಗುವಂತೆ ಮಾಡುವುದಕ್ಕೆ ಒಮ್ಮನಸ್ಸಿನಿಂದ ಸರ್ವರೂ ಪ್ರಯತ್ನಪಡಬೇಕಾಗಿದೆ. ಇವೇ ಮೊದಲಾದ ಅನೇಕ ಮಹತ್ವದ ವಿಷಯಗಳನ್ನು ಚರ್ಚಿಸಿ, ನಿರ್ಧರಿಸುವ ಉದ್ದೇಶದಿಂದ ಈ ದಿನ ಮಹನೀಯರಾದ ತಾವೆಲ್ಲರೂ ಆಗಮಿಸಿ ಈ ಸಭೆಯನ್ನಲಂಕರಿಸಿರುತ್ತೀರಿ. ಈ ವಿನವೇ ಸುದಿನವೆಂದು ಭಾವಿಸಿರುವೆನು.

ಈಗ ಸೇರಿರುವ ಮಹಾ ಪರಿಷತ್ತು ಉದಾರರೂ, ನಿಷ್ಪಕ್ಷಪಾತಿಗಳೂ, ಸತ್ಯಸಂಧರೂ ಆದ ನಮ್ಮ ಸಾರ್ವಭೌಮ ಇಂಗ್ಲೀಷ್ ಚಕ್ರವರ್ತಿಗಳಾದ ಪಂಚಮ ಜಾರ್ಜ್ ಪ್ರಭುಗಳವರ ಸಾಮ್ರಾಜ್ಯಕ್ಕೆ ಆಶ್ರಿತಸಂಸ್ಥಾನವೆನಿಸಿಕೊಂಡಿರುವ ಶ್ರೀಮನ್ಮಹೀಶೂರ ಮಹಾ ಸಂಸ್ಥಾನದ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರು ದಯಪಾಲಿಸಿರುವ ಉದಾತ್ತ ಶಿಕ್ಷಣದ ಫಲರೂಪವಾಗಿದೆ. ಈಗ ಜರ್ಮನಿ ಮತ್ತು ಮಿತ್ರರಾಷ್ಟ್ರಗಳ ಮಧ್ಯೆ ನಡೆಯುತ್ತಿರುವ ಘೋರವಾದ ಕದನದಲ್ಲಿ ನಮ್ಮ ಇಂಗ್ಲೀಷರು ಜಯಶಾಲಿಗಳಾಗಿ ಶೀಘ್ರದಲ್ಲಿ ಯುದ್ಧವು ಮುಗಿದು ಭೂಮಂಡಲದಲ್ಲಿ ಶಾಂತತೆಯು ನೆಲೆಗೊಂಡು ಇಂಗ್ಲೀಷರ ಮತ್ತು ನಮ್ಮ ಮಹಾರಾಜರವರ ರಾಜ್ಯಪರಿಪಾಲನೆಯು ನಮ್ಮಮೇಲೆ ಚಿರಕಾಲವಿರುವಂತೆ ಅನುಗ್ರಹಿಸಲೆಂದು ನಾವೆಲ್ಲರೂ ಶ್ರೀ ಜಗದೀಶ್ವರನನ್ನು ಭಕ್ತಿಯಿಂದ ಪ್ರಾರ್ಥಿಸಬೇಕು.

ಪ್ರಿಯ ಬಾಂಧವರೇ, ಈ ಸಭಾಕಾರ್ಯವು ಪೂರೈಸಿದಮೇಲೆ ಸಭೆಯಲ್ಲಿ ನಿರ್ಧರಿಸಲ್ಪಡುವ ನಿಯಮಗಳು ವಾಗಾಡಂಬರದಲ್ಲಿ ಪರ್ಯವಸಾನವಾಗದೆ ಆಚರಣೆಯಲ್ಲಿ ತರುವಂತೆ ಡಿಸ್ಟ್ರಿಕ್ಟು, ತಾಲ್ಲೂಕು, ಗ್ರಾಮಸಂಘಗಳನ್ನು ಸ್ಥಾಪಿಸಿ ಯುಕ್ತವಾದ ನಿಯಮಗಳನ್ನೇರ್ಪಡಿಸಿ ಅವು ನಿರಾತಂಕವಾಗಿ ನಡೆಯುವಂತೆ ಮಾಡಿರುವರೆಂದು ನಂಬಿರುವೆನು.

ಈ ಮಹಾಸಭಾಕಾರ್ಯವನ್ನು ನಾವು ಕೈಕೊಂಡಾಗ ಅಲ್ಪಾವಧಿಯಿತ್ತು. ಮತ್ತು ಇಲ್ಲಿ ಸ್ವಲ್ಪ ಪ್ಲೇಗ್ ಸೋಂಕು ತಲೆದೋರಿದ ಪ್ರಯುಕ್ತ ಮಹಾಕಾರ್ಯಕ್ಕೆ ಎಲ್ಲಿ ವಿಘ್ನ ಬರುವುದೋ ಎಂಬ ಶಂಕೆಯಿಂದ ಸ್ವಲ್ಪ ದಿನಗಳ ವರೆಗೆ ನಿರೀಕ್ಷಣೆ ಮಾಡಬೇಕಾಗಿ ಬಂತು. ಶ್ರೀ ಜಗದ್ಗುರುಗಳವರ ಆಶೀರ್ವಾದ ಕೃಪಾಕಟಾಕ್ಷದಿಂದ ಈ ಸಂಶಯ ನಿವಾರಣೆಯಾದಮೇಲೆ ಈ ಮಾಹೆ ತಾರೀಖು 2 ರಲ್ಲಿ ಈ ಸಭಾಕಾರ್ಯಕ್ಕೆ ಪ್ರಾರಂಭಮಾಡಿದೆವು. ಈ ಅತ್ಯಲ್ಪ ಕಾಲದಲ್ಲಿ ಮಹಾಸಭೆಯ ಘನವಾದ ಕಾರ್ಯವನ್ನು ಸಂಪೂರ್ಣ ತೃಪ್ತಿಕರವಾಗಿ ಕೊನೆಗಾಣಿಸುವುದು ಅತ್ಯಂತ ದುಸ್ತರವೆಂಬ ವಿಷಯ ತಮ್ಮೆಲ್ಲರಿಗೂ ವೇದ್ಯವಾದ ಅಂಶವೇ ಆಗಿರುವುದು. ಈ ಕಾರಣದಿಂದ ತಾವೆಲ್ಲರೂ ನಮ್ಮ ವ್ಯವಸ್ಥೆಗಳಲ್ಲಿ ಕಂಡುಬರುವ ಯಾವುದಾದರೂ ಕುಂದುಕೊರತೆಗಳನ್ನು ಲಕ್ಷ್ಯಿಸದೆ ನಮ್ಮ ಅಲ್ಪಶಕ್ತಿಗನುಗುಣವಾಗಿ ಮಾಡುವ ಆದರೋಪಚಾರಗಳನ್ನು ಸ್ವೀಕರಿಸಿ ಈ ಮಹಾ ಕಾರ್ಯಕ್ಕೆ ತಮ್ಮೆಲ್ಲರ ಹಸ್ತಾವಲಂಬವನ್ನಿತ್ತು ಈ ಕಾರ್ಯವನ್ನು ಸಾಂಗಗೊಳಿಸಿ ಕೀರ್ತಿ ಭಾಜನರಾಗಬೇಕೆಂದು ಪ್ರಾರ್ಥಿಸಿ, ತಮ್ಮ ಸುಸ್ವಾಗತಮನಸ್ಕರಾ ಕೀರ್ತಿ ಪುನಃ ಅಭಿವಂದಿಸುತ್ತೇನೆ.

ಇನ್ನುಮೇಲೆ ಮಹಾಸಭೆಯ ಅಧ್ಯಕ್ಷರನ್ನು ಆರಿಸಿಕೊಂಡು ಮುಂದಿನ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ಬೇಡುವುದಲ್ಲದೆ ನಮ್ಮ ಕಾರ್ಯದಲ್ಲಿ ಯಶಸ್ಸು ಕೊಡಲೆಂದು ಶ್ರೀ ಜಗದೀಶ್ವರನಾದ ಪರಮೇಶನನ್ನು ಅನನ್ಯಭಾವದಿಂದ ಪ್ರಾರ್ಥಿಸಿ ತಮ್ಮೆಲ್ಲರ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ.

ತಿರುಕಪ್ಪನವರ ಮಠದ ಷಡಕ್ಷರಪ್ಪಯ್ಯ,
ಸ್ವಾಗತಸಂಘಾಧ್ಯಕ್ಷ.

ಪತ್ರವ್ಯವಹಾರ.

ಮೈಸೂರು ಅನಾಥಾಲಯ.

ಅಯ್ಯಾ! ನನಗೂ ಮತ್ತು ನನ್ನಂತೆ ಅನೇಕರಿಗೂ ಮೈಸೂರು ಅನಾಥಾಲಯದ ವಿಷಯವನ್ನು ತಿಳಿದುಕೊಳ್ಳುವುದರ ಉದ್ದೇಶವಿರುವುದರಿಂದ ತಾವಾಗಲೀ, ಆ ಆಲಯದ ಸೆಕ್ರೆಟರಿಗಳಾಗಲೀ, ಮೆಂಬರುಗಳಾಗಲೀ ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಜವಾಬು ಪ್ರಚುರಪಡಿಸುವುದರಮೂಲಕ ತಿಳುಹಿಸಬೇಕಾಗಿ ಕೋರಿಕೆ. ಇದರಿಂದ ಅನೇಕ ಅನಾಥ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತೆಂದು ನಂಬಲ್ಪಟ್ಟಿದೆ.

1. ಆಲಯವು ಎಲ್ಲಾ ಕೋಮಿನ ಅನಾಥ ವಿದ್ಯಾರ್ಥಿಗಳಿಗೋಸ್ಕರ ಸ್ಥಾಪಿಸಿರುತ್ತದೆಯೆ? ಹಾಗಾದರೆ ಹಾಲಿ ಯಾವಯಾವ ಕೋಮಿನ ವಿದ್ಯಾರ್ಥಿಗಳೆಷ್ಟುಮಂದಿ ಇರುತ್ತಾರೆ? 2. ಆಲಯಕ್ಕೆ ನಾನಾ ಕೋಮಿನವರು ದ್ರವ್ಯಸಹಾಯ ಮಾಡಿರುತ್ತಾರೆಯೆ? 3. ಆಲಯಕ್ಕೆ ಧರ್ಮದರ್ಶಿಗಳೇ ಮೊದಲಾದವರು ಬೇರೆಬೇರೆ ಕೋಮಿನವರಿರುತ್ತಾರೆಯೆ? 4. ಅನಾಥರೆಂದರೆ ತಾಯಿತಂದೆಗಳಿಲ್ಲದ ವಿದ್ಯಾರ್ಥಿಗಳೆ? ಅಥವಾ ಅತಿ ಬಡವರೆ? 5. ಆಲಯಕ್ಕೆ ವಾರ್ಷಿಯಾನ ವರಮಾನವೆಷ್ಟು? ಯಾವರೀತಿ ವರಮಾನ ಬರುತ್ತೆ? ಖರ್ಚು ಎಷ್ಟು?

ಆರ್ಯಧರ್ಮಸೇವಕ,
ಎಸ್. ವಿ. ಹನುಮಂತರಾಜು,
ಮ್ಯಾನೇಜರ್, ಆರ್ಯನ್ ಸ್ಟೂಡೆಂಟ್ಸ್ ಹೋಮ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ.

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯನಾದವರು ಮಾತ್ರವಲ್ಲ ಬರ್ಮ, ಸಿಲೋನ್, ಮಲೆಯುಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟಾಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗಾ ಒಂದೇವೊಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವೈತುವಾತಿಗೂ ವೈದ್ಯರ ಸಮಯವನ್ನು ಕಾಯಬೇಕಾಗುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕೆಟ್ಟಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

SRI SITHA RAGHAVA VAIDYA SALA MYSORE

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೨೬೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎಸ್ ವೈ ಇನ್‌ಸ್ಟಿಟ್ಯೂಟ್ ಆಫ್‌ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಐ. ಎಸ್. ಆಫ್ ಸ್ಯಾನಿಟರಿ ಇನ್‌ಸ್ಟಿಟ್ಯೂಟ್ ಲಂಡನ್ ಕನ್‌ಸಲ್ಟಿಂಗ ಕೆಮಿಸ್ಟು ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಸಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿರುತ್ತಾರೆ

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವೇ ಅಗ್ರಹದಮೇಲಿಂದ ಪ್ರಸಿದ್ಧಮಾಡಿದೇನೆ. ಈ ಆರೋಗ್ಯಬಿಂದುವನ್ನು ತಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ಯಾರು ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದು ಒಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹತದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣು ನೋವು, ದಮ್ಮು, ಕೆಮ್ಮು, ಸ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಷ್ಮೆ ಜಡ್ಡು, ಗುದ್ದವ್ವನ ಬೇನೆ, ಹುರುಳು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟಿದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊಂಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಟಿಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
41 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಡಾ|| ಎಂ. ಪೀಟರ್ಸ್‌ಯವರ

ಸಾಂಡೋ ಆಯಿಲ್.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯರ ದೂಷಿತವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ಮೈಥುನ

ದಿಂದಲೂ, ಅತ್ಯಂತ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕುಳಿತುಕೊಂಡೇ ಇರುವುದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ ಶರೀರದ ಎಲ್ಲಾ ನಾಡಿಗಳೂ ಬಲಹೀನವಾಗುವುವು. ಕೆಲವರು ಬಾಲ್ಯದಲ್ಲಿಯೇ ಇಂಥ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚುಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿಸುಖದಲ್ಲಿ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು 7 ದಿವಸ ಮೇಲೆ ಸವರುವುದರಿಂದ ಗುಣವಾಗಿ ಪುರುಷವು ಬಲಹೀನವಾಗಿದ್ದರೂ ಸರಿಪಡಿಸುವುದು. ಕ್ರಯ ಶೀಸೆ 1 ಕ್ಕೆ 1-0-0.

ವಿಳಾಸ:—ಡಾ|| ಎಂ. ಪೀಟರ್ಸ್,
3 8 ಇರುಳಪ್ಪನ ಬೀದಿ, ಮದರಾಸು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ, ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತೆಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
7 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ।	೦—೮—೦
ಚಾರುಶೀಲಚಂದ್ರ	೦—೫—೦
ಹರಿದಾಸಿ	೦—೫—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲಭ್ಯಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರ ತಿಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲಿಂದ. ೧೮-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲಿಂದ. ತಪ್ಪೆ. ೧೦೦ ಕ್ಕೆ ೧-೪-೦

೩. ಹೇನುಶೀರೂ ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ. ತಪ್ಪೆ. ೧೦೦ಕ್ಕೆ ೧-೮-೦

೪ ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧೮-೧೨೪.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
7 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟ್.

೧೯೧೭ ನೆಯ ಇಸವಿ ಡಿಶಂಬರ್ ತಾ|| ೩೦ ರಿಂದ ೧೯೧೮ ನೆಯ ಜನವರಿ ತಾ|| ೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೯ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾರ್ಗಶಿರ ಬ|| ಬಿದಿಗೆಯಿಂದ ಮಾರ್ಗಶಿರ ಬ|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ತೇದಿ
30	ಭಾನು	ಬಿದಿಗೆ	23-0	ಪುಷ್ಯ	56-47	16
31	ಸೋಮ	ತದಿಗೆ	26-16	ಅಶ್ಲೇಷ	60	17
1	ಮಂಗಳ	ಚೌತಿ	30-34	ಅಶ್ಲೇಷ	2-24	18
2	ಬುಧ	ಪಂಚ	55-38	ಮಘ	9-26	19
3	[1] ಗುರು	ಷಷ್ಠಿ	41-12	ಪುಬ	16-11	20
4	[2] ಶುಕ್ರ	ಸಪ್ತಮಿ	46-39	ಉಬ	21-21	21
5	ಶನಿ	ಅಷ್ಟಮಿ	51-38	ಹಸ್ತ	27-37	22

(1) ಮಾರ್ಗಶಿರ ಲಕ್ಷ್ಮೀವ್ರತಂ. (2) ಕೊಡಾರೋತ್ಸವಪ್ರಾರಂಭಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಇನ್ನು ಮೇಲೆ ಮಹಾಸಭೆಯ ಅಧ್ಯಕ್ಷರನ್ನು ಆರಿಸಿಕೊಂಡು ಮುಂದಿನ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ಬೇಡುವುದಲ್ಲದೆ ನಮ್ಮ ಕಾರ್ಯದಲ್ಲಿ ಯಶಸ್ಸು ಕೊಡಲೆಂದು ಶ್ರೀ ಜಗದೀಶ್ವರನಾದ ಪರಮೇಶನನ್ನು ಅನನ್ಯಭಾವದಿಂದ ಪ್ರಾರ್ಥಿಸಿ ತಮ್ಮೆಲ್ಲರ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ.

ತಿರುಕಪ್ಪನವರ ಮಠದ ಷಡಕ್ಷರಪ್ಪಯ್ಯ,
ಸ್ವಾಗತಸಂಘಾಧ್ಯಕ್ಷ.

ಪತ್ರವ್ಯವಹಾರ.

ಮೈಸೂರು ಅನಾಥಾಲಯ.

ಅಯ್ಯಾ! ನನಗೂ ಮತ್ತು ನನ್ನಂತೆ ಅನೇಕರಿಗೂ ಮೈಸೂರು ಅನಾಥಾಲಯದ ವಿಷಯವನ್ನು ತಿಳಿದುಕೊಳ್ಳುವುದರ ಉದ್ದೇಶವಿರುವುದರಿಂದ ತಾವಾಗಲೀ, ಆ ಆಲಯದ ಸೆಕ್ರೆಟರಿಗಳಾಗಲೀ, ಮೆಂಬರುಗಳಾಗಲೀ ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಜವಾಬು ಪ್ರಚುರಪಡಿಸುವುದರಮೂಲಕ ತಿಳುಹಿಸಬೇಕಾಗಿ ಕೋರಿಕೆ. ಇದರಿಂದ ಅನೇಕ ಅನಾಥ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತೆಂದು ನಂಬಲ್ಪಟ್ಟಿದೆ.

1. ಆಲಯವು ಎಲ್ಲಾ ಕೋಮಿನ ಅನಾಥ ವಿದ್ಯಾರ್ಥಿಗಳಿಗೋಸ್ಕರ ಸ್ಥಾಪಿಸಿರುತ್ತದೆಯೇ? ಹಾಗಾದರೆ ಹಾಲಿ ಯಾವಯಾವ ಕೋಮಿನ ವಿದ್ಯಾರ್ಥಿಗಳೆಷ್ಟು ಮಂದಿ ಇರುತ್ತಾರೆ? 2. ಆಲಯಕ್ಕೆ ನಾನಾ ಕೋಮಿನವರು ದ್ರವ್ಯಸಹಾಯ ಮಾಡಿರುತ್ತಾರೆಯೇ? 3. ಆಲಯಕ್ಕೆ ಧರ್ಮದರ್ಶಿಗಳೇ ಮೊದಲಾದವರು ಬೇರೆಬೇರೆ ಕೋಮಿನವರಿರುತ್ತಾರೆಯೇ? 4. ಅನಾಥರೆಂದರೆ ತಾಯಿತಂದೆಗಳಿಲ್ಲದ ವಿದ್ಯಾರ್ಥಿಗಳೆ? ಅಥವಾ ಅತಿ ಬಡವರೆ? 5. ಆಲಯಕ್ಕೆ ವಾರ್ಷಿಕವಾದ ವರಮಾನವೆಷ್ಟು? ಯಾವರೀತಿ ವರಮಾನ ಬರುತ್ತೆ? ಖರ್ಚು ಎಷ್ಟು?

ಆರ್ಯಧರ್ಮಸೇವಕ,
ಎಸ್. ವಿ. ಹನುಮಂತರಾಯ,
ಮ್ಯಾನೇಜರ್, ಆರ್ಯನ್ ಸ್ಟೂಡೆಂಟ್ಸ್ ಹೋಮ್.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ.

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮ, ಸಿಲೋನ್, ಮಲೆಯನ್ಸ್ಟೇಟ್, ಗೋವಾ, ಫಿಜೀ ಐಲೆಂಡ್, ಈಸ್ಟ್ ಆಫ್ರಿಕಾ, ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ. ಮಹಾಭಾಗ್ಯಾ ಒಂದೇಒಂದು ಲೋಕಾಮಯಹರ ಕಸ್ತೂರಿಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹತ್ವಾತಿಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಸಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೇಬೇನೆ, ಬಲಹೀನತೆ, ಕಟ್ಟಿಹಸ, ಮತ್ತು ಕೆಡುಕಾದ ನೀರಿನಿಂದುಂಟಾಗುವ ಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನು ಅನೇಕ ರೋಗಗಳನ್ನು ಈ ಸಿದ್ಧಾಮೃತವು ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯಮೇಲೂ ಇರುವುದನ್ನೇ ನೋಡಿ ತಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು, ೩೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆಮಾತ್ರ.

ಪ್ರತಿ ೬ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೧-೮-೦
ಪ್ರತಿ ೧೨ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೨-೧೨-೦
ಪ್ರತಿ ೨೫ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲುಖರ್ಚು ಸೇರಿ ೫-೦-೦

ಯೋಗ್ಯತಾಪತ್ರಗಳು.

ಮ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ ಗ್ರ್ಯಾಜುಯೇಟ್ ಎನ್ ವೈ ಇನ್ಸ್ಟಿಟ್ಯೂಟ್ ಆಫ್ ಸೈನ್ಸು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಎ. ಎನ್. ಆಫ್ ಸ್ಯಾನಿಟರಿ ಇನ್ಸ್ಟಿಟ್ಯೂಟ್ ಲಂಡನ್ ರನ್ಸಲ್ಪಿಂಗ ಕೆಮಿಸ್ಟ್ ಎಗಿಯರಿ ಲೇನ್ ನಂ ೨ ಬೊಂಬಾಯಿ ಇವರು ಬರೆದಿರುವುದು.

ತಮ್ಮ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಕ್ರಮವಾಗಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯನೋವು, ಹೊಟ್ಟೆನೋವು ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡಿರುತ್ತೇನೆ.

ಮ|| ರಾ|| ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮೈಸೂರ್ ಗೌರ್ನಮೆಂಟ್ ಇವರು ಬರೆದಿರುವುದು—ಮೈಸೂರಿನ ಶ್ರೀ ಸೀತಾರಾಘವ ವೈದ್ಯಶಾಲೆಯ ಪ್ರೊಪ್ರೈಟರವರಾದ ಪಾಳ್ಯದ ವೆಂಕಟಾಚಲಪಂಡಿತರವರಿಂದ ತಯಾರಿಸಲ್ಪಟ್ಟ ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ ಪಂಡಿತರಿಂದ ಪತ್ರಿಕೆಯಲ್ಲಿ ಪ್ರಸಿದ್ಧಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬದಾಗಿ ತಿಳಿಸಲು ನಾನು ತುಂಬಾ ಆನಂದಭರಿತನಾಗಿದ್ದೇನೆ ಈ ವೈದ್ಯಶಾಲೆಯಲ್ಲಿ ಅನೇಕತರಹ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರಿಸುತ್ತಿರುತ್ತಾರೆ.

ಸಮಸ್ತ ರೋಗಿಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ ಕ್ಯಾಟಲಾಗುಗಳನ್ನು ಬರೆದು ತರಿಸಿಕೊಳ್ಳಿರಿ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮಿತ್ರರೇ ಅವಶ್ಯವಾಗಿ ಈ ಜಾಹೀರಾತನ್ನು ಓದಿನೋಡಿರಿ.

ಸ್ವಲ್ಪ ಕ್ರಯ! ಬಹು ಲಾಭ!

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಂದರೆ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಎಷ್ಟೋ ರೋಗಗಳಮೇಲೆ ನಡೆಯುತ್ತಿದ್ದು ಇದನ್ನು ನಾನು ಬಹು ಪ್ರಯಾಸದಿಂದಲೂ ಶಾಸ್ತ್ರಾಧಾರದಿಂದಲೂ

ತಯಾರಿಸಿ ಎಷ್ಟೋ ಜನರಿಗೆ ಎಷ್ಟೋ ರೋಗಗಳ ಮೇಲೆ ದೊಡ್ಡವರಿಗೂ ಸಣ್ಣಹುಡುಗರಿಗೂ ಕೊಟ್ಟು ಖಾತ್ರಿಮಾಡಿಕೊಂಡು ಅವರ ಆಗ್ರಹದಮೇಲಿಂದ ಪ್ರಸಿದ್ಧ ಮಾಡಿದೇನೆ. ಈ ಆರೋಗ್ಯಬಿಂದುವನ್ನು ತೆಕ್ಕೊಳ್ಳುವವರಿಗೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಮನುಷ್ಯರಿಗೆ ಯಾವದೇ ಪ್ರಕಾರದ ರೋಗವು ಪ್ರಾಪ್ತವಾದ ಕೂಡಲೆ ಈ ಆರೋಗ್ಯಬಿಂದುವಿನಿಂದ ತತ್‌ಕ್ಷಣ ಗುಣಹೊಂದುವರು. ಇದು ಅಮೃತದಂಥ ರುಚಿಕರವಿದ್ದು ಇದರಲ್ಲಿ ಯಾವ ರಸಾಯನ ಮುಂತಾದ್ದು ಕೂಡಿರುವುದಿಲ್ಲ. ಇದು ಅರ್ಕವಿದ್ದು ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ವೈದ್ಯರು ಒಂದೊಂದು ರೋಗಕ್ಕೆ ಬೇರೆಬೇರೆ ಔಷಧಗಳ ಉಪಯೋಗಿಸುತ್ತಾರೆ. ನಮ್ಮ ಆರೋಗ್ಯಬಿಂದು ಒಂದರಿಂದಲೇ ಅನೇಕ ರೋಗಗಳು ಪರಿಹಾರವಾಗುತ್ತವೆ.

ಅವುಗಳ ನಾಮಗಳು.

ಕ್ಷಯರೋಗ, ಹೃದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋಣ ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರೇಶ್ಮೆಜಡ್ಡು, ಗುದ್ದವ್ವನ ಬೇನೆ, ಹುರುಳು ಕಜ್ಜಿ, ಗಜಕರ್ಣ, ದದ್ದು ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋಣ, ಮೈ ಹೊಂಬೀಳೋಣ, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರ್ತು ಇನ್ನು ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಮೇಲೆ ಬರೆದ ಎಷ್ಟೋ ರೋಗಗಳು ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಇನಾಮು ಸಹ ಸರ್ಟಿಫಿಕೇಟುಗಳು ದೊರೆದಿರುತ್ತವೆ. ಈ ಆರೋಗ್ಯಬಿಂದು ತಯಾರ್ಮಾಡಿ (೭) ವರ್ಷಗಳಾಗದಿದ್ದರೂ ೧೭೦೦೦ ಬಾಟ್ಲಿಗಳು ಖರ್ಚು ಆಗಿರುತ್ತವೆ ಅವಶ್ಯವಿದ್ದಲ್ಲಿ ಸಮಕ್ಷ ನೋಡಿದರೆ ಖಾತ್ರಿಯಾಗುವದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಕಾಲುತೊಲ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನ ಉದ್ದಿಷ್ಟ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟಾಣೆ ವಿ ಪಿ ಖರ್ಚು ಬೇರೆ ಬೀಳುವದು. ಒಂದು ಡಜನ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತದೆ. ಇದಕ್ಕೆ ವಿ ಪಿ. ಖರ್ಚು ಐದು ಆಣೆ ಬೀಳುತ್ತದೆ. ಒಂದರಿಂದ ಹನ್ನೊಂದು ಬಾಟ್ಲಿಯ ವರೆಗೆ ಕಮಿಶನ್ ಇಲ್ಲಾ, ವಿ ಪಿ ಖರ್ಚು ನಾಲ್ಕು ಆಣೆ ಬೀಳುತ್ತದೆ. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತೂ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು. ಅನುಪಾನ ಪತ್ರವು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತದೆ. ಪಸಂದರಿ ಪ್ರಕಾರಬಾಟ್ಲಿಯ ಸೋಟಕ ಸಿಗುವದು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಹುಶೇನ ಸಾಹೇಬ ಮೋದೀನ ಸಾಹೇಬ ಮುಲ್ಲಾ,
ಅರ್ಕಶಫಾ ಶೋಧಕ, ಹೆಡ್ ಆಫೀಸ
41 ಮುಕ್ಕಾಮ ಶಹಪೂರ, ಬೆಳಗಾಂವ.

ಒಂದುಕಾಲು ತೊಲ ಬಾಟ್ಲು ೩ ತೆಗೆದುಕೊಂಡರೆ ೧ ಬಾಟ್ಲು ಕಮಿಷನ್ ಕೊಡುತ್ತೆ.

ಡಾ|| ಎಂ. ಪೀಟರ್ಸ್‌ಯವರ

ಸಾಂಡೋ ಆಯಿಲ್.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವುದು. ಮನುಷ್ಯರ ದೂಷಿತವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ಮೈಥುನದಿಂದಲೂ, ಅತ್ಯಂತ ವ್ಯಾಯಾಮ (ಕಸರತ್) ದಿಂದಲೂ ಯಾವಾಗಲೂ ಕುಳಿತುಕೊಂಡೇ ಇರುವುದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ ಶರೀರದ ಎಲ್ಲಾ ನಾಡಿಗಳೂ



ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂಥ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ತಮಗಿರುವ ಕೊರತೆಯನ್ನು ಹೆಚ್ಚು ಮಾಡಿಕೊಂಡು ಪ್ರಾಯಸಮರ್ಥರಾದಾಗ ರತಿಸುಖದಲ್ಲಿ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು 7 ದಿನಗಳು ಮೇಲೆ ಸವರುವುದರಿಂದ ಗುಣವಾಗಿ ಪುರುಷತ್ವ ಬಲಹೀನವಾಗಿದ್ದರೂ ಸರಿಪಡಿಸುವುದು. ಕ್ರಯ ಶೀಸೆ 1 ಕ್ಕೆ 1-0-0.

ವಿಳಾಸ:—ಡಾ|| ಎಂ. ಪೀಟರ್ಸ್,
3 3 ಇರುಳಪ್ಪನ ಬೀದಿ, ಮದರಾಸು.

ಶ್ರೀ ಕಾಳಯುಕ್ತಿ ನಾಮಸಂವತ್ಸರದ ಅತ್ಯುತ್ತಮ ಪಂಚಾಂಗ

ಈ ಪಂಚಾಂಗದಲ್ಲಿ ಯಾವ ದಿವಸ ಮಳೆಯು ಪ್ರವೇಶಿಸುವದೋ ಅದರ ಮುಂದೆ ಪ್ರತಿಯೊಂದು ಮಳೆಗೂ ಪ್ರವೇಶಲಗ್ನವಾಹನ ಸ್ತ್ರೀಪುನ್ನಪುಂಸಕರ ವಿಚಂದ್ರ, ಯೋಗಪತಿತಸ್ಥಾನಗಳನ್ನು ಬರೆದು ಗ್ರಹಕುಂಡಲಿಯನ್ನು ಹಾಕಿ ಈ ಮಳೆಯು ಇಂತಿಷ್ಟೇ ಆಗುವದೆಂದು ನಿಷ್ಕರ್ಷಿಸಿ ಬರೆದಿರುವದರಿಂದ ಸ್ವಲ್ಪ ಓದುಬರಹಬಲ್ಲವರಿಗಾದರೂ ಸ್ಪಷ್ಟವಾಗಿ ಹೇಳಲಿಕ್ಕೆ ಬರುವಂತಿದೆ. ಇದಲ್ಲದೆ ಜನರಿಗೆ ನಿತ್ಯೋಪಯುಕ್ತವಾದ ಶತಾವಧಿ ಕೆಲಸಗಳಿಗೆ ಮುಹೂರ್ತಗಳನ್ನೂ, ಪ್ರಯಾಣೇತ್ಯಾದಿ ಅನೇಕ ಪ್ರಶ್ನಗಳನ್ನೂ, ವಧೂವರರ ಸಾಲಾವಳಿ ಮುಂತಾದ ಅನೇಕ ಕೋಷ್ಟಕಗಳನ್ನೂ ಹಾಕಿ ಮೇಷಾದಿದ್ವಾದಶರಾಶಿಯವರಿಗೆ ಜರಗುವ ಸುಖದುಃಖಗಳ ಫಲವಿಚಾರವನ್ನು ಅನುಭವ ಬರುವಂತೆ ಬರೆದಿರುತ್ತೇವೆ. ನಮ್ಮ ಪಂಚಾಂಗದಲ್ಲಿಯ ಸಕಲ ವಿಷಯಗಳನ್ನು ಇಲ್ಲಿ ತಿಳುಹಿಸಲು ಸಾಧ್ಯವಲ್ಲಾ. ಪಂಚಾಂಗಗಳನ್ನು ತರಿಸಿಕೊಂಡು ನೋಡುವದರಿಂದ ಅತ್ಯುತ್ತಮ ಪಂಚಾಂಗಗಳೆಂದು ಸಹಜವಾಗಿ ತಿಳಿಯುವದು.

ಈ ಸಾರೆ ಪಂಚಾಂಗವನ್ನು ಮಹತ್ಪ್ರಯಾಸದಿಂದ ತಯಾರಿಸಿದ್ದು ಗ್ರಾಹಕರಿಗೆ ಬೆಲೆ ಸುಲಭವಾಗಲೆಂದೇ ಪಂಚಾಂಗ (೮) ನ್ನು ಒಂದೇ ಸಾರಿ ತಗೆದುಕೊಂಡರೆ ಒಂದು ರೂಪಾಯಿಗೆ ಕೊಟ್ಟುಬಿಡುವೆವು. ಇಷ್ಟವುಳ್ಳವರು ತೀವ್ರ ಆರ್ಡರು ಕೊಡಿರಿ. ಚಿಲ್ಲರೆ ೧ಕ್ಕೆ ಕ್ರಯ ೩ ಆಣೆ.

ವಿಳಾಸ:—ಬ್ರಹ್ಮಶ್ರೀ ಸಿದ್ಧಾಂತಿ ರುದ್ರಪ್ಪಶಾಸ್ತ್ರಿಗಳು,
7 ಪಾಠಶಾಲಾ ಮಹಾಗಾಂವ್ ಜಿಲ್ಲ ಗುಲ್ಬರ್ಗ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಸಟೀಕ ವೀರಶೈವ ವಿವಾಹವಿಧಿ	೦—೮—೦
ಪರವಾದಿ ಗಜಾಂಕುಶತಾರಾಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚಂದ್ರ	೦—೫—೦
ಹರಿದಾಸಿ	೦—೫—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಗ್ರಂಥಪ್ರಸಾರಕಮಂಡಲಿಯ ಪುಸ್ತಕಗಳೆಲ್ಲವೂ ನಮ್ಮಲ್ಲೂ ದೊರೆಯುತ್ತವೆ

ಪುಕಟ] [ಪುಕಟ

ಹಣ ಸಂಪಾದಿಸುವ ಹಂಚಿಕೆ.

ಪ್ರಾಮಾಣಿಕತನದಿಂದ ಪರಿಶ್ರಮಪಟ್ಟು ಅಲ್ಪಲಾಭವನ್ನು ಮಾಡಿಕೊಳ್ಳಲಿಚ್ಛಿಸುವವರಿಗೆ ಮಾರ್ಗದರ್ಶಕವಾದ ಎರಡು ಬುಕ್ಕು ಕೇವಲ ಪತ್ರಾ ತಿಳಿಸಿದರೆ ಪುಕಟಿಯಾಗಿ ಕಳಿಸುವೆವು. ಪ್ರತಿಗಳು ನಿಯಮಿತವಾಗಿವೆ. ಗ್ರಾಹಕರು ತ್ವರೆಮಾಡಬೇಕು!

೧ ಸುವಾಸಿಕ ಹುರುಕಿನ ಔಷಧ—ಎಲ್ಲಾ ತರದ ತ್ವಚರೋಗಗಳಮೇಲೆ.೧ಬೇ. ೧೪-೨೫ ಕ್ಕೆ ೧-೪-೦

೨. ಕಣ್ಣುಬೇನೆಯ ಔಷಧ—ನೇತ್ರರೋಗದಮೇಲೆ.೧ಬೇ. ೩ಪೈ. ೧೦೦ ಕ್ಕೆ ೧-೪-೦

೩. ಹೇನುಶೀರು ನಾಶಕ ಚೂರ್ಣ—ಕೂದಲಿನಲ್ಲಾಗುವ ಕ್ರಿಮಿಗಳು ಒಂದೇ ದಿನದಲ್ಲಿ ಪೂರ್ಣ ನಾಶವಾಗುತ್ತವೆ.೧ಬೇ. ೩ಪೈ. ೧೦೦ಕ್ಕೆ ೧-೮-೦

೪ ಜಂತು ನಾಶಕ ಚೂರ್ಣ—ಹೊಟ್ಟೆಯಲ್ಲಾಗುವ ಎಲ್ಲ ತರದ ಜಂತುಗಳು ಒಂದೇ ಸಲಕ್ಕೆ ಬಿದ್ದು ಹೋಗುವವು. ೧೦ತೊಲೆಗೆ.೧ರೂ.

೫. ಪಶುಜೀವನ ಚೂರ್ಣ—ದನಗಳಿಗಾಗುವ ಯಲ್ಲಾರೋಗಗಳಿಗೆ ೧ಡ.೧೨ಆ.

ಇವುಗಳಲ್ಲದೆ ಆರ್ಯವೈದ್ಯಗ್ರಂಥಗಳಿಂದ ತಯಾರಿಸಿದ ಭಸ್ಮ ಗುಗ್ಗುಳ ಗುಟಿಕಾ ವಟಿಕಾ ಇವುಗಳು ಅತ್ಯಂತ ಸುಲಭ ಬೆಲೆಗೆ ದೊರಕುವವು.

ಸೂಚನಾ ಒಂದು ರೂಪಾಯಿಯೊಳಗಿನ ಬೇಡಿಕೆಯನ್ನು ಕಳಿಸಲಾಗದು. ಸಕಲ ಔಷಧಗಳನ್ನು ಕೊಂಡು ಮೋಸಹೋಗಬಾರದು. ಶಾಸ್ತ್ರೋಕ್ತ ಔಷಧಗಳು ದೊರಕುವ ಒಂದೇ ಸ್ಥಲ! ಚನ್ನಾಗಿ ಲಕ್ಷದಲ್ಲಿಡಿರಿ!!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ
7 ಕಿತ್ತೂರು, ಬೆಳಗಾಂ ಡಿಸ್ಟ್ರಿಕ್ಟು.

೧೯೧೭ ನೆಯ ಇಸವಿ ಡಿಸಂಬರ್ ತಾ|| ೩೦ ರಿಂದ ೧೯೧೮ ನೆಯ ಜನವರಿ ತಾ|| ೫ ರವರೆಗೆ ಸಲ್ಲುವ ಶಾಲಿವಾಹನಶಕ ೧೮೪೦ ನೆಯ ಶ್ರೀಮತ್ಪಿಂಗಳನಾಮಸಂವತ್ಸರದ ಮಾರ್ಗಶಿರ ಬ|| ಬಿದಿಗೆಯಿಂದ ಮಾರ್ಗಶಿರ ಬ|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನುಶೇಡಿ
30	ಭಾನು	ಬಿದಿಗೆ	23-0	ಪುಷ್ಯ	56-47	16
31	ಸೋಮ	ತದಿಗೆ	26-16	ಆಶ್ಲೇಷ	60	17
1	ಮಂಗಳ	ಚೌತಿ	30-34	ಆಶ್ಲೇಷ	2-24	18
2	ಬುಧ	ಪಂಚ	55-38	ಮಘ	9-26	19
3	[1] ಗುರು	ಷಷ್ಠಿ	41-12	ಪುಭ	16-11	20
4	[2] ಶುಕ್ರ	ಸಪ್ತಮಿ	46-39	ಉಭ	21-21	21
5	ಶನಿ	ಅಷ್ಟಮಿ	51-38	ಹಸ್ತ	27-37	22

(1) ಮಾರ್ಗಶಿರ ಲಕ್ಷ್ಮೀವ್ರತಂ. (2) ಕೊಡಾರೋಹ್ಣ ಮಹಾರಂಭಃ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

CONTINUED
IN
NEXT ROLL

CONTINUED
IN
NEXT ROLL

END

END

END